# ಶೇಣಿಭಾರತ

ಡಾ. ಗೋಪಾಲಕೃಷ್ಣ ಎಲ್. ಹೆಗಡೆ



ಶ್ರೇಣಿಭಾರತ
JNANA001689

ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

# ಶೇಣಿಭಾರತ

ಸಂಪಾದಕರು:

**ಡಾ. ಗೋಪಾಲಕೃಷ್ಣ ಎಲ್. ಹೆಗಡೆ**

**ಕರ್ನಾಟಕ ಯಕ್ಷಗಾನ ಅಕಾಡೆಮಿ**

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨.

SHENIBHARATA Edited by Dr. Gopalakrishna L. Hegde Published by Registrar, Karnataka Yakshagana Academy, Kannada Bhavana, J.C. Road, Bengaluru-560 002. Ph. 080 22113146

ಈ ಆವೃತ್ತಿಯ ಹಕ್ಕು : ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨.

ಮುದ್ರಿತ ವರ್ಷ : ೨೦೦೭, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಮರುಮುದ್ರಣ : ೨೦೧೮

ಪ್ರತಿಗಳು :9800

ಪುಟಗಳು : xxxii +424

ಬೆಲೆ : ds. 200/-

ಪ್ರಧಾನ ಸಂಪಾದಕರು:

**ಪ್ರೊ ಎಂ.ಎ. ಹೆಗಡೆ**

**ಅಧ್ಯಕ್ಷರು,** ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಸಂಪಾದಕರು:

**ಡಾ. ಗೋಪಾಲಕೃಷ್ಣ ಎಲ್. ಹೆಗಡೆ**

ಬೆಂಗಳೂರು.

ಪ್ರಕಾಶಕರು:

**ಎಸ್.ಹೆಚ್.ಶಿವರುದ್ರಪ್ಪ**

**ರಿಜಿಸ್ಟ್ರಾರ್,** ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಮುದ್ರಕರು :

**ಎಂ.ಎಸ್. ಗ್ರಾಫಿಕ್ಸ್**

ನಂ. ೪/೧, ೨ನೇ ಮುಖ್ಯರಸ್ತೆ, ಕಾವೇರಿಪುರ, ಕಾಮಾಕ್ಷಿಪಾಳ್ಯ

ಬೆಂಗಳೂರು-೫೬೦ ೦೭೯ ದೂ:೦೮೦-೨೩೫೮೦೨೭೧ ಮೊ. ೯೮೮೬೩೫೫೭೨೮

# ಅಧ್ಯಕ್ಷರ ಮಾತು

ಸಂಬಂಧಿಸಿದ ಕ್ಷೇತ್ರದ ತಿಳಿವನ್ನು ವಿಸ್ತರಿಸುವ ವಿದ್ವತ್ಪೂರ್ಣ ಹಾಗೂ ಸೃಜನಶೀಲ ಪ್ರತಿಭೆಯ ವಿಲಾಸವನ್ನು ತೋರುವ ಕೃತಿಗಳನ್ನು ಗುರುತಿಸಿ ಪ್ರಕಟಿಸುವುದು ಅಕಾಡೆಮಿಗಳ ಧ್ಯೇಯೋದ್ದೇಶಗಳಲ್ಲಿ ಸೇರಿದೆ. ತದನುಗುಣವಾಗಿ ಯಕ್ಷಗಾನ ಅಕಾಡೆಮಿಯೂ ಕಾರ್ಯಪ್ರವೃತ್ತವಾಗಿದೆ.

ಪ್ರಸ್ತುತ “ಶೇಣಿ ಭಾರತ"ವು ೨೦೦೭ರಲ್ಲಿ ಪ್ರಥಮವಾಗಿ ಮುದ್ರಣಗೊಂಡಿತ್ತು. ಪ್ರತಿಗಳೆಲ್ಲ ಮುಗಿದುಹೋಗಿ ಅನೇಕ ವರ್ಷಗಳು ಕಳೆದು ಹೋಗಿದ್ದರೂ ಕಾರಣಾಂತರಗಳಿಂದ ಪ್ರಕಟಿಸಲು ಸಾಧ್ಯವಾಗಿರಲಿಲ್ಲ. ಈಗ ಅದು ಮರು ಮುದ್ರಣಗೊಳ್ಳುತ್ತಿರುವುದು ಸಂತಸದ ವಿಷಯ.

ಈ ವರ್ಷ ಶೇಣಿ ಶತಮಾನೋತ್ಸವವನ್ನು ಕಾಸರಗೋಡಿನಲ್ಲಿ ಅರ್ಥಪೂರ್ಣವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಅಕಾಡೆಮಿಗಳ ಸಂಯುಕ್ತಾಶ್ರಯದಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಈ ಸಂದರ್ಭದಲ್ಲಿ ಈ ಪುಸ್ತಕದ ಮರುಮುದ್ರಣವನ್ನು ಹೊರತರುತ್ತಿರುವುದು ಸಂತಸಕರವಾಗಿದೆ.

ಈ ಗ್ರಂಥದ ಮರು ಮುದ್ರಣಕ್ಕೆ ಸಹಕರಿಸಿದ ಡಾ. ಗೋಪಾಲ ಕೃಷ್ಣ ಹೆಗಡೆಯವರಿಗೂ ಅಂದವಾಗಿ ಮುದ್ರಿಸಿಕೊಟ್ಟ ಎಂ. ಎಸ್. ಗ್ರಾಫಿಕ್ಸ್ ಅವರಿಗೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದವರೆಲ್ಲರಿಗೂ ಅಕಾಡೆಮಿಯ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

**ಎಂ.ಎ. ಹೆಗಡೆ**

ಅಧ್ಯಕ್ಷರು

ಕರ್ನಾಟಕ ಯಕ್ಷಗಾನ ಅಕಾಡೆಮಿ

ಬೆಂಗಳೂರು

ದಿನಾಂಕ: ೩೦.೦೯.೨೦೧೮

ಸ್ಥಳ : ಬೆಂಗಳೂರು

# ಹಿಂದಿನ ಅಧ್ಯಕ್ಷರ ಮಾತು

ಜಾನಪದ ಮತ್ತು ಯಕ್ಷಗಾನ ಕ್ಷೇತ್ರದಲ್ಲಿ ಮಹತ್ವರ ಸಾಧನೆ ಮಾಡಿದವರ ಕೃತಿಗಳನ್ನು ಅವರ ಮರಣದ ನಂತರ ಸಂಪಾದಿಸಿ, ಪ್ರಕಟಿಸುವ ಪರಂಪರೆ ಅಕಾಡೆಮಿಯಲ್ಲಿ ಹಿಂದಿನಿಂದಲೂ ಬಂದಿದೆ. ಇತ್ತೀಚಿನ ಅವಧಿಯಲ್ಲಿ ಕಣ್ಮರೆಯಾದ ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರ 'ಹೊನ್ನ ಹೊತ್ತಿಗೆ', ಡಾ. ಎಲ್. ಆರ್. ಹೆಗಡೆಯವರ 'ಕ್ಷೇತ್ರ ಕಾರ್ಯದ ನೆನಪುಗಳು' ಕೃತಿಗಳು ಈಗಾಗಲೇ ಮುದ್ರಣಗೊಂಡು ಬಿಡುಗಡೆಯಾಗಿವೆ. ಡಾ. ಎಸ್. ಕೆ. ಕರೀಂಖಾನ್ ಅವರ 'ಬೆಲ್ಲದಾದವೇ ಬೆಲ್ಲದಾದವೇ ಬೆಳಗೇನು' ಕೃತಿಗಳ ಸಂಪೂಟವೂ ಬಿಡುಗಡೆಯಾಗಲಿದೆ. ಈ ಪರಂಪರೆಯಲ್ಲಿ ಇದೀಗ ಡಾ. ಎಲ್. ಆರ್. ಹೆಗಡೆಯವರು ಸಂಪಾದಿಸಿದ "ಶೇಣಿ ಭಾರತ" ಮುದ್ರಣಗೊಂಡು ಬಿಡುಗಡೆಯಗುತ್ತಿರುವುದು ಸಂತೋಷದ ಸಂಗತಿ.

ಡಾ. ಶೇಣಿ ಗೋಪಾಲಕೃಷ್ಣ ಭಟ್ಟರು, ಯಕ್ಷಗಾನ ತಾಳ ಮದ್ದಳೆಯ ಅರ್ಥಧಾರಿಗಳಾಗಿ, ವೇಷಧಾರಿಗಳಾಗಿ, ಹರಿದಾಸರಾಗಿ, ಮಂಡಳಿಯ ಸಂಘಟಕರಾಗಿ ಜನಾನುರಾಗಿಗಳಾಗಿದ್ದವರು. ಯಕ್ಷಗಾನ ಮಾಧ್ಯಮದ ಅಂಗೋಪಾಂಗಗಳಲ್ಲಿ ವಾಚಿಕಾಭಿನಯವನ್ನು ಅದರ ಗರಿಷ್ಠ ಸಾಧ್ಯತೆಯಿಂದ ಬಳಸಿಕೊಂಡು ಪುರಾಣಪಾತ್ರಗಳನ್ನು ಕಡೆದು ನಿಲ್ಲಿಸಿದವರು. ಅವರು ಮರಣಿಸುವ ಕೆಲವೇ ತಿಂಗಳುಗಳ ಮೊದಲು ಅವರ ಊರಾದ ಕಾಸರಗೋಡಿನಲ್ಲಿ ಆಕಾಡೆಮಿ "ಮಾತು ಮುತ್ತು" ವಿಚಾರ ಸಂಕಿರಣ ಅವರನ್ನು ಕುರಿತೇ ಸಂಘಟಿಸಿದುದು ಇಲ್ಲಿ ಪ್ರಸ್ತಾಪಾರ್ಹ. ಆಗ ಅವರೇ ತನ್ನ ಬಗ್ಗೆ ಹೇಳಿಕೊಳ್ಳುತ್ತಾ, ವಾಚಿಕಾಭಿನಯ ಮಾತ್ರ ತನ್ನ ಅಭಿವ್ಯಕ್ತಿಯ ಸಶಕ್ತ ವಿಧಾನ ಎಂಬುದನ್ನು ಒಪ್ಪಿಕೊಂಡಿರುವುದು ಅವರ ಪ್ರಾಮಾಣಿಕತೆಗೆ ಸಾಕ್ಷಿ. ಶೇಣಿಯವರ ರಾಮಾಯಣವನ್ನು ಡಾ. ಹೆಗಡೆಯವರು ಈಗಾಗಲೇ ಸಂಪಾದಿಸಿದ್ದಾರೆ. ಇದೀಗ "ಶೇಣಿ ಭಾರತ" ಅಕಾಡೆಮಿಯಿಂದ ಬೆಳಕು ಕಾಣುತ್ತಿದೆ.

ಸೃಷ್ಟಿ ಪುನರ್‌ಕಥನ ಪರಂಪರೆ ಕನ್ನಡದಲ್ಲಿದೆ. ಶೇಣಿಯವರು ತನ್ನ ಅರ್ಥಗಾರಿಕೆಯ ಮೂಲಕ ಇಲ್ಲಿ ಶೇಣಿಭಾರತವನ್ನು ಪುನಃ ನಿರೂಪಿಸಿದ್ದಾರೆ. ಈ ನಿರೂಪಣೆಯಲ್ಲಿ ಅವರ

ವ್ಯಕ್ತಿ ವಿಶಿಷ್ಟ ಮುದ್ರೆ ಎದ್ದು ಕಾಣುತ್ತದೆ. ಆದರೆ ಇದು ಮೌಖಿಕ ಪರಂಪರೆಯದು. ಇವನ್ನೆಲ್ಲ ಅಕ್ಷರ ರೂಪಕ್ಕೆ ತಂದು ಒಂದು ವ್ಯವಸ್ಥೆಯಲ್ಲಿ ಜೋಡಿಸಿದ್ದು ಒಂದು ಸಾಹಸವೇ. ಆ ಕೆಲಸದ ಹೊಣೆಗಾರಿಕೆಯನ್ನು ನಿರ್ವಹಿಸಿದ ಡಾ. ಜಿ. ಎಲ್ ಹೆಗಡೆಯವರು ಅಭಿನಂದನಾರ್ಹರು. ಅವರಿಗೆ ಕೃತಜ್ಞತೆಗಳು.

ಈ ಕಾರ್ಯದಲ್ಲಿ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ. ಎನ್. ಪರಿಡ್ಡಿಯವರು ತುಂಬಾ ಶ್ರಮಿಸಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ನಮನಗಳು. ಸಿಬ್ಬಂದಿ ವರ್ಗವನ್ನು ನೆನೆಯಲೇಬೇಕು. ಏಕೆಂದರೆ ಅವರು ತಮ್ಮ ಎಂದಿನ ಕೆಲಸ ಕಾರ್ಯಗಳ ಜೊತೆಗೆ ಮುದ್ರಣ ಕಾರ್ಯಕ್ಕೆ ನೆರವಾಗಿದ್ದಾರೆ. ಅವರಿಗೆ ಹಾಗೂ ಈ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ರಾಜಾ ಪ್ರಿಂಟರ್ ಮಾಲೀಕರಾದ ಶ್ರೀ ಬಿ. ಎಂ. ಗಣಪತಿ ಅವರಗೂ ಹೃತ್ಪೂರ್ವಕ ವಂದನೆಗಳು,

ಅಕಾಡೆಮಿಯ ಎಲ್ಲ ಪ್ರಕಟಣೆಗಳನ್ನು ಬರಮಾಡಿಕೊಂಡು ಹಾಗೆಯೇ ಇದನ್ನು ಸಹೃದಯರು ಬರಮಾಡಿಕೊಳ್ಳುತ್ತೀರೆಂದು ನಂಬಿದ್ದೇನೆ.

**ಕೆರೆಮನೆ ಶಂಭು ಹೆಗಡೆ**

ಅಧ್ಯಕ್ಷರು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ದಿನಾಂಕ: ೧೬-೧-೨೦೦೮

ಸ್ಥಳ: ಬೆಂಗಳೂರು

# ಮುನ್ನುಡಿ

**೧. ಪ್ರಸಂಗದರ್ಶನ :**

ಜಾಗತಿಕ ಮಟ್ಟದಲ್ಲಿ ಹೆಸರೊತ್ತಿರುವ ಯಕ್ಷಗಾನದ ಮತ್ತೊಂದು ವಿಧದ ವೇದಿಕೆಯನ್ನು - ಪ್ರಸಂಗ ಎಂದು ನಾವು ಹೇಳುತ್ತಿದ್ದೇವೆ. ದಕ್ಷಿಣೋತ್ತರಕನ್ನಡ, ಶಿವಮೊಗ್ಗಾ, ಕೊಡಗು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದು ಜನಜನಿತ. ಹಾಡುಗಾರಿಕೆ ಹಾಗೂ ಅರ್ಥಗಾರಿಕೆಗಳನ್ನು ಪ್ರಧಾನವಾಗಿ ಒಳಗೊಂಡ ಕಲಾಪ್ರಕಾತ ಇದು. ಹರಿಕಥೆಯಲ್ಲೂ ನಾವು ಹಾಡು ಹಾಗೂ ಅರ್ಥಗಳನ್ನು ಗುರುತಿಸುವೆವಾದರೂ ಇದು ಹರಿಕಥೆಗಿಂತ ತೀರ ಭಿನ್ನ, ಹಾಡುವವರು ಬೇರೆ, ಮದ್ದಳೆ ಬಾರಿಸುವವರು ಬೇರೆ ಬೇರೆ ಬೇರೆ ಪಾತ್ರಗಳ ಪರವಾಗಿ ವಾದಿಸುವ ನಿವೇದಿಸುವ ಅರ್ಥವಾದಿಗಳು ಬೇರೆ. ಯಕ್ಷಗಾನ ಎಂಬ ಪದವು ಕೇವಲ ಗಾನಕ್ಕಷ್ಟೇ ಸೀಮಿತವಾದ ಒಂದು ಕಲಾಸಂಪ್ರದಾಯವಾಗಿರದೆ ವಿಶಿಷ್ಟ ನೃತ್ಯ, ವೇಷ, ಭಾಷೆ ಆವೇಶಾದಿಗಳನ್ನು ಸೇರಿನಿಂತ ಕೂಟಕಲೆ, ಅಂದಹಾಗೆ, 'ಪ್ರಸಂಗ' ಎಂಬುದು ಕೂಡಾ ವೇಷ ನೃತ್ಯಗಳನ್ನುಳಿದು ಯಕ್ಷಗಾನದ ಇತರ ಸಾಧ್ಯತೆಗಳೊಂದಿಗೆ ರೂಪುಗೊಳ್ಳುವ ಸಮಷ್ಟಿಕಲೆ, ಕೂಟ, ಬೈಟಕ್, ಜಾಗರ, ತಾಳುಮದ್ದಳೆ ಈ ಮುಂತಾದ ಹೆಸರುಗಳಲ್ಲಿ ಪ್ರಸಂಗಗಳು ನಡೆಯುತ್ತವೆ.

ಪ್ರಸಂಗವೆಂದರೆ ಕಾವ್ಯಪ್ರಯೋಗದ ರಂಗಶಿಬಿರ, ಅದು ಒಮ್ಮೊಮ್ಮೆ ವಿದ್ವದ್ಗೋಷ್ಠಿಯಾಗಿ ವಿಜೃಂಭಿಸುವ ಯೋಗಭೂಮಿಕೆ, ಅದೊಂದು ವಾದಭೂಮಿಕೆಯೂ ಹೌದು. ಅದು, "ವಾದೇ ವಾದೇ ಜಾಯತೇ ತತ್ತ್ವಬೋಧಃ' ಎಂಬುದನ್ನು ಮನಗಾಣಿಸುವ ಅನುಭವಮಂಟಪ. ಇಲ್ಲಿ, ಸಿದ್ಧಕಾವ್ಯಗಾಯನವು ಭಾಗವಂತಿಕೆಯೆನಿಸಿ, ಹೊಸ ಆಶುಕಾವ್ಯದ ನಿರ್ಮಿಸಿಯು ಅರ್ಥಗಾರಿಕೆಯೆನಿಸಿ, ಸಹೃದಯರ ಸಮ್ಮುಖದಲ್ಲೇ ಒಳಬಗೆಯ ಹಿಗ್ಗಿನ ಹಟ್ಟುಹಬ್ಬದ ಪ್ರಸಂಗವೊಂದು ಹುಟ್ಟುಗಟ್ಟುತ್ತದೆ.

ಹಿಮ್ಮೇಳದಲ್ಲಿನ ಭಾಗವತರ ಹಾಡಿಗೆ ಅನ್ವಯಿಸಿ ತಮ್ಮ ತಮ್ಮ ಪಾತ್ರಗಳನ್ನು ಕಲಾವಿದರು ವೈಖರೀ ರೂಪದ ಮಾತಿನಲ್ಲೇ ಕಟ್ಟಿನಿಲ್ಲಿಸಬೇಕಾಗುತ್ತದೆ. ವೀರ, ಕರುಣ, ಹಾಸ, ಶೃಂಗಾರಾದಿ ರಸಗಳು ಮಾತಿನಲ್ಲೇ ಮಾಡುಗಟ್ಟಬೇಕಾಗುತ್ತದೆ. ನಾಟಕಗಳಂತೆ ಪೂರ್ವತಯಾರಿಯೊಂದಿಗೆ

ಕಂಠಸ್ಥವಾದ ಸಂಭಾಷಣೆಗಳು ಇವಾಗಿರುವುದಿಲ್ಲ ಸಂದರ್ಭ, ಸನ್ನಿವೇಶ, ಕಥಾನಕ, ಇದಿರು ಅರ್ಥಧಾರಿ ಮುಂತಾದ ಪ್ರಾಸಂಗಿಕ ಪರಿಸರದೊಂದಿಗೆ ಇಲ್ಲಿನ ಸಂಭಾಷಣೆ ಮಹತ್ವಗೊಳ್ಳುತ್ತದೆ.

ನಿರ್ದಿಷ್ಟ ಕಥಾನಕವನ್ನುಳ್ಳ ವಿವಿಧ ರಾಗ-ತಾಳ-ಮುಟ್ಟುಗಳಲ್ಲಿ ರಚಿತವಾದ ಹಾಡಿನ ಗ್ರಂಥವೇ 'ಪ್ರಸಂಗ ಪಟ್ಟಿ'. ಒಂದು ಕಾಲದಲ್ಲಿ ಇದು ಕೂಡ ತೋಂಡೀ ಸ್ವರೂಪದಲ್ಲೇ ಇತ್ತು. ಇದನ್ನಾಧರಿಸಿ ಕಥೆ ಮೆಯೆಡದಂತೆ ಭಾಗವತ ಈ ಪದ್ಯಗಳನ್ನು ಒಂದೊಂದಾಗಿ ಹಾಡಬೇಕಾಗುತ್ತದೆ. ಆ ದಿನದ ಅಗತ್ಯಕ್ಕೆ ಯಾವ ಹಾಡು ಬೇಕು ಯಾವುದು ಬೇಡ ಎಂಬ ತೀರ್ಮಾನವೂ ಭಾಗವತರದೇ. ಒಂದು ಹಾಡಿನ ನಂತರ, ಸಂಬಂಧಪಟ್ಟ ಅರ್ಥಧಾರಿ ಆ ಪದ್ಯದ ಅರ್ಥ ಹೇಳಬೇಕಾಗುತ್ತದೆ. ಇಂದರೊಂದಿಗೆ ಸಂಭಾಷಣೆಯೂ ಸಾಂದರ್ಭಿಕ ಅಗತ್ಯವಾಗಿ ಮೈದಾಳುತ್ತದೆ. ಯಾವ ಪ್ರಸಂಗ? ಯಾರಿಗೆ ಯಾವ ಪಾತ್ರ? ಈ ಮುಂತಾದ ನಿರ್ಣಯಗಳನ್ನು ಹೊತ್ತಿಗೊದಗಿದ ಕಲಾವಿದರನ್ನು ಗಮನಿಸಿ ನಿರ್ಣಯಿಸುವುದು ತಾಳಮದ್ದಳೆಯ ಸಾಮಾನ್ಯ ಪರಿಪಾಠ, ಸಾಮಾನ್ಯವಾಗಿ ಪ್ರಸಂಗಗಳು ರಾತ್ರಿಯಿಡೀ ಅವ್ಯಾಹತವಾಗಿ ನಡೆದು ಜಾಗರಗಳೆನಿಸಿವೆ. ಈಗೀನ ಮೂರು ನಾಲ್ಕು ಘಂಟೆಗೂ ಅವು ಹ್ರಸ್ವಗೊಂಡಿವೆ. ಒಂದು ಗಂಟೆಯ ಧ್ವನಿಮುದ್ರಿಕೆಯಲೂ ಅಡಕಗೊಂಡಿವೆ. ಹೀಗೆ, ಸ್ಥಿತಿಸ್ಥಾಪಕತ್ವದೊಂದಿಗೆ ತನ್ನ ವಿಶಿಷ್ಟತೆಯನ್ನು ಅದು ಉಳಿಸಿಕೊಂಡಿದೆ. ಮಳೆಗಾಲದಲ್ಲಿ, ಹಬ್ಬ - ಹರಿದಿಗಳಲ್ಲಿ ಸಾಮಾನ್ಯ ಮತ್ತು ವಿಶೇಷ ಕಾರ್ಯಕ್ರಮವಾಗಿ ಪ್ರಸಂಗಗಳು ಜರುಗುತ್ತದೆ.

ತಾಳಮದ್ದಳೆಯ ಪ್ರಸಂಗಗಳೂ ಯಕ್ಷಗಾನ ಬಯಲಾಟಗಳಿಂದ ಮೂರ್ತಗೊಂಡ ಕಾಲವೇದಿಕೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದಕಾರಣ, ಪ್ರಸಂಗ ಸಾಹಿತ್ಯದ ಸಂವಿಧಾನಗಳನ್ನು ಗಮನಿಸಿ ತಾಳಮದ್ದಳೆಯ ಪ್ರಸಂಗಗಳೂ, ಪ್ರಸಂಗ ಸಾಹಿತ್ಯದಷ್ಟೇ ಹಳತು ಎಂದು ಹೇಳುವ ವಾದ ಹುರುಳಿಲ್ಲದ್ದು, ಸಿದ್ಧ ಸಾಹಿತ್ಯವೆನಿಸಿದ ಪ್ರಸಂಗ- ಪಠ್ಯಗಳು ಆಟವನ್ನೇ ಗಮನದಲ್ಲಿಟ್ಟುಕೊಂಡು ರಚಿತವಾದವುಗಳು. ರಂಗಜ್ಞಾನ ಇಲ್ಲದವರೂ ಪ್ರಸಂಗ ರಚಿಸಿರುವುದು ಬೇರೆ ಮಾತು. ಹಳೆಯ ಕಲಾವಿದರು ಸೇರಿದ ಹಿಂದಿನ ಕಾಲದ ತಾಳಮದ್ದಳೆಯ ಪ್ರಸಂಗಗಳು “ವೇಷ ಹಾಗೂ ಕುಣಿತಗಳಿಲ್ಲದ ಬಯಲಾಟದ ತತ್ಪತಿಯೇ ಆಗಿರುತ್ತಿತ್ತು”. ಅರ್ಥಗಾರಿಕೆಯ ಕೇವಲ ಪದ್ಯಗಳ ಸರಳಾನುವಾದವೇ ಆಗಿರುತ್ತಿತ್ತು. ಆದರೆ ಬದಲಾದ ಜೀವನಕ್ರಮಗಳೊಂದಿಗೆ ತನ್ನ ಹೊಸತನವನ್ನು ಅದು ಧರಿಸಿತು.

---

೧. ಯಕ್ಷಗಾನ ಮತ್ತು ನಾನು. ಶೇಣಿ ಗೋಪಾಕೃಷ್ಣ ಭಟ್ಟ, ೧೯೮೧, ಪಟ ೧೭,೧೮

ಅಂದರೆ ಪ್ರಸಂಗ ಕ್ರಿಯೆಯ ಆವೇಶ ಇಳಿದು ಆಲೋಚನೆಯೊಂದಿಗೆ ಮುಂಬರಿದು ಚಿಂತಕರು ಆಕರ್ಷಣೆಯ ಕೇಂದ್ರವಾಯಿತು.

ಪ್ರಸಂಗ -ಪಠ್ಯವನ್ನು ಆಧರಿಸಿ ಆನೇಕ ಪ್ರಾಸಂಗಿಕ ಅಗತ್ಯ ಅನಿವಾರ್ಯಗಳ ನಡುವೆ ಗದ್ಯಕಾವ್ಯವೊಂದು ಹಲವು ಮುಖಗಳಿಂದ ಆಶುರೂಪದಲ್ಲಿ ಮಡುಗಟ್ಟುವ ಪ್ರಸಂಗಕ್ರಿಯೆಯು ಒಂದು ಆಕಸ್ಮಿಕ ಸೃಷ್ಟಿ. ಇಲ್ಲಿ 'ಕುರಿತೋದದರೆಯುಂ ಕಾವ್ಯಪ್ರಯೋಗಪರಿಣಿತಮತಿಗಳ್' ಧಾರಾಳ ಸಿಗುತ್ತಾರೆ. ಕಾವ್ಯವೆಂದರೆ ಪ್ರಸಂಗಪದ್ಯಗಳು, ಈ ಪದ್ಯಗಳನ್ನು ಆಧರಿಸಿ ಹೊಸ ಹೊಸ ಪ್ರಯೋಗಕ್ಕೆ ಸಿದ್ಧನಾಗುವವನೇ ನಿಜವಾದ ಅರ್ಥಧಾರಿ. ಅರ್ಥಧಾರಿಗಳ ಕಾವ್ಯಪ್ರಯೋಗದ ಕೌಶಲ್ಯವನ್ನು ಆಧರಿಸಿ ಆ ದಿನದ ಪ್ರಸಂಗ-ಮೌಲ್ಯ ನಿರ್ಧಾರವಾಗುತ್ತದೆ. ಇದಕ್ಕೆ ಪೋಷಕವಾಗಿ ಕಾವ್ಯಗಾಯನವೂ ನಡೆಯಬೇಕಾಗುತ್ತದೆ. ಹೀಗೆ ಹಲವು ಕಲಾವಿದರ ಜವಾಬುದಾರಿಗಳ ಮಧ್ಯೆ ಸೃಷ್ಟಿಗೊಳ್ಳುವ ಈ ಕಾವ್ಯಪ್ರಕಾವರವು ವಿಶಿಷ್ಟ ಜಾನಪದವೆನಿಸಿದೆ. ಹಾಗೆ ನೋಡಿದರೆ ಇದನ್ನು ಶಿಷ್ಟ ಜಾನಪದ ಎಂದು ಹೇಳಬಹುದು. ಆಗಿಂದಾಗ್ಗೆ ಸಹೃದಯರ ಸಮ್ಮುಖದಲ್ಲೇ ಶಾಬ್ದಿಕಸೃಷ್ಟಿಗೆ ತೊಡಗಬೇಕಾದ ಪಂಥಾಹ್ವಾನ ಇದು. ಹಲಗೆ ಬಳಪವ ಪಿಡಿಯದೊಂದಗಳಿಗೆ, ಪದವಿಟ್ಟಳುಪದೊಂದಗ್ಗಳಿಕೆ, ಕಂಠಶಕ್ತಿಯ ಉಲುಹುಗೆಡದಗ್ಗಳಿಕೆ ಇಲ್ಲ ಅರ್ಥಧಾರಿಗೆ ಮುಖ್ಯ ಇಂತಹ ಅಗ್ಗಳಿಕೆಯನ್ನುಳ್ಳ ಮಾತಿನ ಲೋಕದ ಮಾಂತ್ರಿಕಕವಿಯೇ ಶೇಣಿ.

"ಹೊಸ ಹೊಸ ವಿಚಾರಗಳತ್ತ ತುಡಿಯುವ ಮಾತಿನ ಅಪಾರ ಸಾಧ್ಯತೆಗಳನ್ನು ಆವಿಷ್ಕರಿಸುವ, ಸಾಕ್ಷತ್ಕರಿಸುವ ವಿಸ್ಮಯ ಸೃಷ್ಟಿಶಕ್ತಿಯನ್ನು ಎಂದೂ ಕಳಕೊಳ್ಳದ ಅವರು ಹೇಳುವ ತಾಳಮದ್ದಳೆಯ ಒಂದೊಂದು ಅರ್ಥವೂ ಅಲಿಖಿತ ಕಾವ್ಯ, ಕಲಾ ಜಗತ್ತಿನಲ್ಲಿ ಎಂತೋ ಅಂತೆಯೇ ನಿಜದ ಜದುಕಿನಲ್ಲೂ ಅತ್ಯುನ್ನತಿಗೆ ಜೀವಂತ ಪ್ರತಿಮೆಯಾಗಿರುವ ಮೇಲ್ದರ್ಜೆಯ ಶುಚಿ-ರುಚಿಯ ಮುಗಳಗೆಯ ವಿನಯ ಸೌಜನ್ಯಗಳ ಅಪರೂಪದ ವ್ಯಕ್ತಿ ಶೇಣಿ".೧

**೧. ಶೇಣಿಯಾದದ್ದು ಹೇಗೆ?:**

ಒಪ್ಪೊತ್ತಿನ ಆಶನಕ್ಕೂ ಗತಿಯಿಲ್ಲದೆ, ಹುಲ್ಲುಹಾಸಿನ ಮನೆಯಲ್ಲಿ ಪತ್ರಬಯಕೆಯ ಕನಸು ಕಾಣುತ್ತಿದ್ದ-ಲಕ್ಷ್ಮೀನಾರಾಯಣ ದಂಪತಿಗಳ ಏಕಮಾತ್ರ ಸಂತಾನವಾಗಿ ೧೯೧೮ ಏಪ್ರಿಲ್ ೭ ರಂದು ಗೋಪಾಲಕೃಷ್ಣನ ಜನನವಾಯಿತು. ಹುಟ್ಟುವ ಮೊದಲೇ ಹೆಸರಿನ ಸಂಕಲ್ಪವಾಗಿತ್ತು. ಏಕೆಂದರೆ ಕಣಿಪುರದ ಗೋಪಾಲಕೃಷ್ಣದೇವರ ವರಪ್ರಸಾದ ಈ ಮಗು

---

೧. ತರಂಗ ವಾರ ಪತ್ರಿಕೆ- ಡಿ೮ ೧೯೯೦, ರಾಧಾಕೃಷ್ಣ ಕಲ್ಲಾರ್

ಎಂಬ ನಂಬಿಕೆಯಿತ್ತು. ಇವರು ಕಾಸರಗೋಡು ತಾಲೂಕಿನ ಕುಂಬಳೆ ಸೀಮೆಯ ಎಡನಾಡು ಗ್ರಾಮದ ಅಜ್ಜಕಾನಮನೆಯವರು. ಆದರೆ ಕಾಸರಗೋಡಿನ ಎಣ್ಮಕಜೆ ಪಂಚಾಯತಿಗೆ ಒಳಪೆಟ್ಟ ಮೈರೆ ಗ್ರಾಮದ 'ಶೇಣಿ' ಯಲ್ಲಿ ಇವರು ಕಾರಣಾಂತರಗಳಿಂದ ಒಕ್ಕಲಾದ ಮೇಲೆ ಗೋಪಾಲಕೃಷ್ಣ ಭಟ್ಟರ ಹೆಸರಿನ ಹಿಂದೆ ಶೇಣಿ ಸೇರಿಕೊಂಡಿತು. ಅಲ್ಲಿಂದ ಕಾಸರಗೋಡಿನ ಪಟ್ಟಣ ವಾಸಿಗಳಾದ ಮೇಲೂ ಇವರು ರೇಣಿಯಾಗೇ ಉಳಿದರು. ಯಕ್ಷಗಾನ ಹಾಗೂ ಹರಿಕಥಾ ಲೋಕದಲ್ಲಿ ಶೇಣಿ ಎಂಬ ಹೆಸರು ಬೆಳಗಿತು.

ತಂದೆಯ ಆಕಾಲ ಮರಣದ ಶೋಕ ತಾಯಿಯ ಶ್ರೀರಕ್ಷೆಯಿಂದ ಹಿಂದೆ ಸರಿಯಿತು. ಬೇಳಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಯಿತು. ನಾಟಕದ ನಟರಾಗಿ ಎರಡು ವರ್ಷ ಕಳೆದು ಮತ್ತೆ ಕುಂಬಳೆ ಎಲಿಮೆಂಟರಿ ಶಾಲೆಗೆ ಸೇರಿ ಎಂಟನೇ ತರಗತಿಯನ್ನು ಮುಗಿಸಿ,ನಾಯ್ಕಾಪು ಏಡೆಡ್ ಎಲಿಮೆಂಟರಿ ಶಾಲೆಯಲ್ಲಿ ಅಧ್ಯಾಪಕರಾಗಿ ಸೇರಿದರು. ಮತ್ತೂ ಓದಬೇಕೆಂಬ ಹಂಬಲದಿಂದ ಪೆರಡಾಲದ ಸಂಸ್ಕೃತಿ ಕಾಲೇಜಿಗೆ ಸೇರಿದರು. ಅವರೇ ಹೇಳುವಂತೆ "ಕಾಲೇಜ್ ವಿದ್ಯಾಭ್ಯಾಸದಿಂದ ಡಿಗ್ರಿ ಸರ್ಟಿಫಿಕೇಟನ್ನು ಪಡೆಯಲಾಗಲಿಲ್ಲವಾದರೂ ನನಗೆ ದೊರೆತ ತಿಳುವಳಿಕೆಯ ಅಳತೆ ಚಿಕ್ಕದಾಗಿಲಿಲ್ಲ. ಕನ್ನಡದೋಜ-ಪೆರಡಾಲ ಕೃಷ್ಣಯ್ಯನವರೂ ಸಂಸ್ಕೃತ ವಿದ್ವಾಂಸರಾದ ದರ್ಭೆ ನಾರಾಯಣ ಶಾಸ್ತ್ರಿ, ಚೌಂಗುಳಿ ಸುಬ್ರಾಯ ಶಾಸ್ತ್ರಿಗಳೇ ಮುಂತಾದ ಪಂಡಿತೋತ್ತಮರು ನನಗೆ ವಿಶೇಷ ಜ್ಞಾನದಾನ ಮಾಡಿದ್ದಾರೆ. ಅವರು ಕೊಟ್ಟದ್ದೆಲ್ಲ ನನ್ನಲ್ಲಿ ಇಂದಿಗೂ ಉಳಿದು ಬೆಳೆದು ಬಂದಿಲ್ಲವಾದರೂ ನನ್ನಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ ಯಾವ ಪ್ರಶ್ನೆಯನ್ನಾದರೂ ಎದುರಿಸಿ ನಿಲ್ಲುವ ಎದೆಗಾರಿಗೆಯನ್ನು ನನಗದು ಉಳಿಸಿಕೊಟ್ಟಿದೆ."

ಚಿತ್ರನಟನಾಗುವ ಹಂಬಲದಿಂದ ಶೇಣಿ ಮೈಸೂರಿಗೆ ಹೋದರು. ಚಿತ್ರ ಅರ್ಧದಲ್ಲಿಯೇ ನಿಂತು ಹೋಯಿತು. ಆದರೆ ಮೈಸೂರಿನ ಸಂಗೀತ ಹಾಗೂ ಸಾಹಿತ್ಯ ಕ್ಷೇತ್ರದ ವಿದ್ವನ್ಮಣಿಗಳ ಸಹವಾಸದಿಂದ ಶೇಣಿ ಬೆಳೆದರು. 'ಗೀತಾಪ್ರಸಾರಿಣಿ ಸಭೆಯ' ಶಂಕರಾನಂದ ಸ್ವಾಮೀಜಿಗಳ ಆಶ್ರಮದ ಅಂತೇವಾಸಿಗಳಾಗಿ, ಗೀತೆಯ ಒಳಹೊರಗನ್ನು ಅಧ್ಯಯನ ಮಾಡುವ ಸುಯೋಗ ದೊರೆಯಿತು. ಸಂಗೀತ, ಸಾಹಿತ್ಯ, ವೇದಾಂತಗಳ ಅಲುಗಾಡದ ತಳಪಾಯದೊಂದಿಗೆ ಶೇಣಿ ಬೆಳೆದರು.

೧೯೪೪ ರಲ್ಲಿ ಅವರು ಗೃಹಸ್ಥರಾದರು. ಸಹಧರ್ಮಿಣಿ ದೌಪದಿ-ನಾರಾಯಣ, ಶ್ಯಾಮ್, ಶ್ರೀರಾಮ, ಶಂಕರರ ತಾಯಿಯಾದರು. ಕುಟುಂಬ ಬೆಳೆಯಿತು. ತಾವು ಹೊರನಿಂತು

೩. ಯಕ್ಷಗಾನ ಮತ್ತು ನಾನು ಶೇಣಿ, ಪುಟ ೧೭

ದುಡಿದರು. ಹೆಂಡತಿ ಒಳಗೆ ನಿಂತು ಮಕ್ಕಳಿಗೆ ಗುರುವಾದರು, ಶೇಣಿ ಹೊರ ಸಂಚಾರದ ಯಕ್ಷಲೋಕದ ಆಚಾರ್ಯರಾದರು.

೧೯೬೯ ರಲ್ಲಿ ಶೇಣಿ ಕಾಸರಗೋಡಿನ ಆಶೋಕನಗರಕ್ಕೆ ಬಂದು ಸ್ವಂತ ಮನೆಯಲ್ಲಿ ಉಳಿದರು. ಆ ಮನೆಯೇ ದಾಸನಿವಾಸ, ದಾಸ್ಯವನ್ನೊಪ್ಪದ ಈ ಹರಿದಾಸ ಕೊನೆತನಕವೂ "ವಿನಾದೈತ್ಯೇನ ಜೀವನಂ' ಎಂಬುದನ್ನು ಬದುಕಿ ತೋರಿಸಿದರು. ಎಂಭತ್ತೈದರ ವಯಸ್ಸಿಗೂ ಜನಾಗ್ರಹದ ಬೇಡಿಕೆಯ ಕಲಾವಿದನಾಗಿ ಮನೆಯ ದಾರಿದ್ರವನ್ನೂ ಯಕ್ಷರಂಗದ ದಾರಿದ್ರವನ್ನೂ ನೀಗಿಸುವ ಅವಿರಥ ಹೋರಾಟವನ್ನು ನಡೆಸಿ ಶಕಪುರುಷರಾದರು.

೩. ಯಕ್ಷಗಾನ ಮತ್ತು ಶೇಣಿ:

'ಯಕ್ಷಗಾನವು ನಮ್ಮ ಸಂಸ್ಕಾರವನ್ನು ಶುದ್ದೀಕರಿಸುವ ಪಂಚಗವ್ಯ' ಎಂದು ಶೇಣಿ ಆಗಾಗ ಹೇಳುತ್ತಿದ್ದರು. ಈ ಮಾತು ಯಕ್ಷಗಾನದ ಒಂದು ವ್ಯಾಖ್ಯೆಯಷ್ಟೇ ಅಲ್ಲದೆ ಯಕ್ಷಗಾನದ ಉದ್ದೇಶವನ್ನೂ ಅದು ಸ್ಪಷ್ಟಪಡಿಸುತ್ತದೆ. ಯಕ್ಷಗಾನ ಕಲೆಯ ಸಾಮಾಜಿಕ ಬದ್ಧತೆಯನ್ನು ಅವರು ಗುರುತಿಸಿದ ಬಗೆ ಇದು. ವೈದಿಕ ರೀತ್ಯಾ ಪಂಚಗವ್ಯವು ದೇಹದ ಪಾಪವನ್ನೂ ತಾಪವನ್ನೂ ಸುಡುವ ಅಗ್ನಿ ಸ್ವರೂಪದ ಔಷಧಿ, ತಗಸ್ತಿಗತವಾದ ರೋಗ ನಿವಾರಕ ಸತ್ವವುಳ್ಳದ್ದು. ಇದಕ್ಕಿಂತಲೂ ಸೂಕ್ಷ್ಮಾತಿಸೂಕ್ಷ್ಮವಾದ ಮನೋಮಯಕೋಶದ ಸಂಸ್ಕಾರಕ್ಕೆ ಯಕ್ಷಗಾನದಲ್ಲಿ ಪಂಚವ್ಯದ ಶಕ್ತಿಯನ್ನು ಕಂಡವರು ಶೇಣಿ. ಪಂಚಗವ್ಯ ಹಳೆಯ ಪದವಿರಬಹುದು. ಶೇಣಿ ಅದನ್ನು ಹೊಸ ಅರ್ಥದಲ್ಲಿ ಮಿಂಚಿಸಿ ಬಿಟ್ಟಿದ್ದಾರೆ. ಹಳೆಯದರಲ್ಲಿ ಹೊಸದನ್ನು ಕಾಣುವ ವಿಶಿಷ್ಟ ಪ್ರತಿಭೆ ಅವರದು, ಹಾಲು, ಮೊಸರು, ತುಪ್ಪ, ಗೋಮಯ, ಗೋಮೂತ್ರಗಳ ಪ್ರಮಾಣಬದ್ಧ ಮೇಲನವೊಂದು ಸಿದೌಷಧವಾಗುವಂತೆ ವೇಷಭೂಷಣ, ಹಾಡುಗಾರಿಕೆ, ನೃತ್ಯ ಅಭಿನಯ, ಮಾತುಗಾರಿಕೆ ಎಂಬ ಸಮ್ಮೇಲನದ ಪಂಚಗವ್ಯವೇ ಯಕ್ಷಗಾನ- ಈ ಹಿನ್ನೆಲೆಯಲ್ಲಿ ಯಕ್ಷಗಾನದ ಮಹತ್ವವನ್ನೂ ಸ್ವರೂಪವನ್ನೂ ದರ್ಶಿಸಬೇಕು.

ತಮ್ಮ ಗುರು ಫಕೀರ ಮಾಸ್ತರರ 'ಅಂಶುಮತಿ ಕಲ್ಯಾಣ' ಎಂಬ ಪ್ರಸಂಗವನ್ನು ತಮ್ಮ ಸುಂದರ ಹಸ್ತಕ್ಷರದಿಂದ ಪ್ರತಿಮಾಡುವದರೊಂದಿಗೆ ಶೇಣಿಯವರ ಯಕ್ಷಗಾನಕಲಾಸೇವೆ ಆರಂಭವಾಯ್ತು. ಬಾಲ್ಯದಲ್ಲಿ ತಮ್ಮ ಚಿಕ್ಕಮ್ಮನ ಮನೆಯ ಸಮೀಪ ಸಡೆಯುತ್ತಿದ್ದ ಇಚ್ಲಂಪಾಡಿ ಮೇಳದ ಆಟದಿಂದ ಆಕರ್ಷಿತರಾದ ಶೇಣಿ, ಆಟ ನೋಡಿ ಅನುಭವಗಳಿಸಿದರು. "ವಿದ್ಯಾರ್ಥಿ, ಅಧ್ಯಾಪಕ, ನಟ ಎಂಬ ನೆಲೆಯಲ್ಲಿ ಕಳೆದುಹೋದ ಸುಮಾರು ಹದಿನೈದು ವರ್ಷಗಳ ಅವಧಿಯೊಳಗೂ ನನ್ನ ಯಕ್ಷಗಾನಾಸಕ್ತಿ ಕುಗ್ಗಿರಲಿಲ್ಲ. ನಾಲ್ಕಾರು ಮೈಲುಗಳೊಳಗೆ ಎಲ್ಲೆಂದರಲ್ಲಿ ಬಯಲಾಟವಿದೆಯೆಂದು ಗೊತ್ತಾದರೆ ನಾನು ಹೋಗುತ್ತಿದ್ದೆ. ನನಗೆ

ಬಯಲಾಟದ ದರ್ಶನ ಮೊದಲಿಗಾದುದು ಇಚ್ಲಂಪಾಡಿ ಮೇಳದ ಮೂಲಕವಾದರೂ, ಆಮೇಲೆ ಕೂಡ್ಲು, ಅಡೂರು, ಕೊರಕ್ಕೋಡು, ಹಂಪನಕಟ್ಟೆಯೇ ಮುಂತಾದ ಮೇಳಗಳ ಪ್ರದರ್ಶನಗಳನ್ನು ನೋಡುವ ಅವಕಾಶಗಳು ಧಾರಾಳ ದೊರೆತಿದ್ದವು". ಅಷ್ಟೇ ಅಲ್ಲ ಆ ಪ್ರಯೋಗಕ್ರಮಗಳ ಬದಲಾವಣೆಯನ್ನೂ ಹೊಸತನವನ್ನೂ ಅವರು ಗುರುತಿಸಿಕೊಂಡು ಬಂದಿರುವದು ಯಕ್ಷಗಾನಪಂಚಗವ್ಯದ ಕುರಿತು ಅವರಿಗಿದ್ದ ಕಾಳಜಿಯನ್ನು ಸ್ಪಷ್ಟಪಡಿಸುತ್ತದೆ.

ಒಂದು ಕಡೆಗೆ ಯಕ್ಷಗಾಣಆಟ, ಇನ್ನೊಂದೆಡೆ ತದ್ವತ್ತಾದ ಕುಣಿತ ಹಾಗೂ ವೇಷವಿಲ್ಲದ ಹಳೆಯ ಕಲಾವಿದರ ಯಕ್ಷಗಾನ ಕೂಟ ಇದನ್ನವರು ಕಂಡು ಸಂತೋಷಪಟ್ಟರು. ಕಿರಿಕ್ಕಾಡು ಮಾಸ್ತರರು, ಕಡೆಂತ್ತೋಡಿ ಕೇಕುಣ್ಣಾಯರೇ ಮುಂತಾದ ಪರಿಷ್ಕೃತ ಅರ್ಥಧಾರಿಗಳ ತಾಲಮದ್ದಳೆಯನ್ನು ಕಂಡು ಮೆಚ್ಚಿದರು. ಕಿರಿಕ್ಕಾಡು ಮಾಸ್ತರರ ಒತ್ತಾಯಕ್ಕೆ ಕಟ್ಟುಬಿದ್ದು ಮೊಟ್ಟಮೊದಲು ರತಿಕಲ್ಯಾಣ ಪ್ರಸಂಗದ ಅರ್ಜುನನ ಅರ್ಥ ಹೇಳಿ ಸೈ ಎನಿಸಿಕೊಂಡು ಅಷ್ಟೇ ಅಲ್ಲ ತಾಳಮದ್ದಳೆಯ ಕ್ಷೇತ್ರದ - ವಿಕ್ರಮಾರ್ಜುನನಾಗಿಯೇ ಕೊನೆ ತನಕವೂ ಮೆರೆದರು. ಶತಮಾನದ ಇದಿರಿಲ್ಲದ ಅರ್ಥಧಾರಿಯೆನಿಸಿ ಇತಿಹಾಸ ನಿರ್ಮಿಸಿದರು.

ಆರಂಭದಲ್ಲಿ ತಾಳಮದ್ದಳೆಯ ಅರ್ಥಧಾರಿಯಾಗಿ ಕಾಣಿಸಿಕೊಂಡ ಶೇಣಿ ಇದ್ದಕ್ಕಿದ್ದ ಹಾಗೆ ಒಂದು ದಿನ ಹರಿದಾಸರಾಗಿ ಬಿಟ್ಟರು! ಆ ಕ್ಷೇತ್ರವೂ ಅವರನ್ನು ಗಟ್ಟಿಯಾಗಿ ತಬ್ಬಿಕೊಂಡಿತು. ಜೀವನೋಪಾಯಕ್ಕೆ ಈ ದಾರಿಯೇ ಸರಿ ಎನಿಸಿರಬೇಕು ಅವರಿಗೆ, ಕಾಸರಗೋಡಿನಿಂದ ಕಲ್ಲಿಕೋಟೆಗೆ ಮಿತ್ರರನ್ನಾಶ್ರಯಿಸಿ ಹರಿಕಥೆ ಮಾಡುವದಕ್ಕಾಗಿ ಹೋದರು. ಕಲ್ಲಿಕೋಟೆಯ ಕನ್ನಡಿಗರಿಗೆ ಹರಿಕಥೆಯ ರುಚಿಯುಣಿಸಿದರು. ಮುಂದೆ ಮಲೆಯಾಳಿಗಳಿಗೂ ಅದನ್ನು ಉಣಬಡಿಸಿದರು. ಎರಡು ತಿಂಗಳುಗಳ ಕಾಲ ಮಲೆಯಾಳಭಾಷೆಯಲ್ಲಿ ಹರಿಕಥೆ ಮಾಡಿ, ನಿರ್ಗುಣೋಪಾಸನೆಯ ಪ್ರಕಾಂಡಪಂಡಿತರ ಮುಂದೆ ಸುಗುಣೋಪಾಸನೆಯ ಅನಿರ್ವಾರ್ಯತೆಯನ್ನು ಬಿಂಬಿಸಿ, ಸರ್ವದಾ ಅದನ್ನು ಸಮರ್ಥಿಸಿ, ಸಾರ್ವಜನಿಕರಿಂದ ಬಂಗಾರದ ಸಂಕಲೆಯ ಸನ್ಮಾನದೊಂದಿಗೆ ಊರಿಗೆ ಮರಳಿದರು.

ಮತ್ತೆ ಯಕ್ಷಗಾನದ ಅರ್ಥಗಾರಿಕೆ ಮುಂದುವರಿಯಿತು. ಮಧ್ಯೆ ಮಧ್ಯೆ ಹರಿಕಥೆಯೂ ಸಾಗಿಬಂತು. ಈಗಾಗಲೇ ಹರಿಕಥೆ, ತಾಳಮದ್ದಳೆ ಯಕ್ಷಗಾನಗಳಲ್ಲಿ ಅಗ್ರಮಾನ್ಯರೆನಿಸಿದ್ದ ದೊಡ್ಡ ಸಾಮಗರು ಕೂಡ್ಲು ಮೇಳದ ಅತಿಥಿಕಲಾವಿದರಾಗಿ ಕಲ್ಲಡ್ಕರ ಆಟಕ್ಕೆ ಬಂದಿದ್ದರು.

---

೪.ಯಕ್ಷಗಾನ ಮತ್ತು ನಾನು - ಶೇಣಿ, ಪುಟ ೧೭, ೨೦೦೬ ಕಲ್ಕೂರ ಪ್ರಕಾಶನ

ಆ ದಿನ ಅವರ ಸಂಧಾನದ ಕೌರವನ ಮುಂದೆ ಕೃಷ್ಣನಾಗಿ ಶೇಣಿ ಯಶಸ್ಸುಗಳಿಸಿದರು. ಅವರದಶಾವತಾರದ ಆಟದ ವೇಷಗಾರಿಕೆಗೆ ಇದು ನಾಂದಿಯಾಯಿತು.

"ಭಾಷಾವಾರುಪ್ರಾಂತ ರಚನೆಯಾಗುವಾಗ ಕರ್ನಾಟಕದಿಂದ ಕಳಚಿಹೋದ ಕಾಸರಗೋಡು ಕೇರಳಾಂತರ್ಗತವಾಗಿ ಭಾಷಾಪ್ರೇಗಳಿಗೆ ಹೇಗಾದರೂ ಕನ್ನಡದ ಭಾಷೆ, ಸಂಸ್ಕೃತಿಗಳನ್ನು ಉಳಿಸಬೇಕು ಎಂಬ ಛಲವು ಬಲಿಯಿತು. ಆ ಸಂದರ್ಭದಲ್ಲಿ ಕಾಸರಗೋಡು ತಾಲೂಕಿನ ಎರಡು ಶತಮಾನಗಳ ಇತಿಹಾಸವುಳ್ಳ ಏಕಮಾತ್ರ ಯಕ್ಷಗಾನ ಸಂಸ್ಥೆಯಾದ ಕೂಡ್ಲು ಮೇಳವನ್ನು ಬೆಳೆಸಿ ಕರ್ನಾಟಕದ ಮುಖ್ಯ ಭಾಗಗಳಲ್ಲಿ ಸಂಚರಿಸುವ ಮೂಲಕ ಕಾಸರಗೋಡಿನ ಕನ್ನಡಿಗರ ಕಣ್ಣೀರಿನ ಕಥೆಯನ್ನು ಈ ಕಲಾ ಮಾಧ್ಯಮವನ್ನೂ ಜನತೆಯ ಮುಂದೆ ಇರಿಸಬೇಕು" ಎಂಬ ವ್ಯವಸ್ಥೆಗೆ ಶೇಣಿ ಕಾರ್ಯದರ್ಶಿಗಳಾಗಿ ಆಯ್ಕೆಗೊಂಡರು. ಶೇಣಿಯ ಸಂಚಾಲಕತ್ವದಲ್ಲಿ ಮೇಳ ತಿರುಗಾಟಕ್ಕೆ ಹೊರಟಿತು.

ಸಂಚಾಲಕರು ಜನಾಭಿಪ್ರಾಯಕ್ಕೆ ಮಣಿದು ಪಾತ್ರಧಾರಿಗಳು ಆಗಿ ಮೆರೆದರು. ಮುಂದೆ ಸುರತ್ಕಲ್, ಕುಂಡಾವು, ಧರ್ಮಸ್ಥಳ ಮೇಳಗಳಲ್ಲಿ ಸಂರ್ಥ ವೇಷಧಾರಿಯಾಗಿ ಜನಮಾನ್ಯರಾದರು ರಾವಣ, ಕಂಸ, ಮಾಗಧ, ವಾಲಿ, ಹಿರಿಣ್ಯಕಶ್ಯಪು, ಚಂದಗೋಪ, ಬಪ್ಪಬ್ಯಾರಿ, ಕೈಲಾಸಶಾಸ್ತ್ರಿ, ತುಘಲಕ, ವಿಷ್ಣುವರ್ಧನ ಹೀಗೆ ಹತ್ತು ಹಲವು ಪಾತ್ರಗಳಿಗೆ ಶೇಣಿಯ ಮುದ್ರೆ ಒತ್ತಿದರು. "ಕನ್ನಡಭಾಷೆ ಸಂಸ್ಕೃತಿಗಳ ಜೊತೆಗೆ ಜೀವಂತಸ್ಮಾರಕ ಗಳಂತಿರುವ ಬೇಲೂರು ಹಳೇಬೀಡು ಮುಂತಾದೆಡೆ ಶಿಲ್ಪಗಳಿಗೆ ಸಂಬಂಧಿಸಿದ ಕಥೆಯನ್ನೂ, ಶ್ರವಣಬೆಳಗೊಳ ಕಾರ್ಕಳ ಮುಂತಾದ ಪ್ರಸಿದ್ಧಿಯಾರ್ಜಿಸಿದ ಗೊಮ್ಮಟ ವಿಗ್ರಹ ಸಂಬಂಧಿಯಾದ ಕಥೆಯನ್ನೂ, ಕನ್ನಡಿಗರು ಕೆಚ್ಚನ್ನು ಎತ್ತಿ ತೋರಿಸುವ ಕುಮಾರರಾಮನ ಕಥೆಗಳನ್ನೂ ರಂಗಕ್ಕೆ ತಂದು ಅಭಿನಯಿಸುವದರಲ್ಲಿ ಕನ್ನಡಪರ ಕಾಳಜಿಯನ್ನು ಕಾಣಬಹುದು. ಕಡುಗಲಿಕುಮಾರರಾಮ, ಅಮರಶಿಲ್ಪಿ ವೀರಶಂಭುಕಲ್ಕುಡ, ನಾಟ್ಯರಾಣಿಶಾಂತಲಾ ಮುಂತಾದ ಪ್ರಸಂಗಗಳು ಈ ಬಗೆಯ ಸಾಂಸ್ಕೃತಿಕ ಅಗತ್ಯಗಳಾಗಿ ಮೂಡಿಬಂದವು.

ಶೇಣಿ ಯಕ್ಷಗಾನದ ಅಂಗೋಪಾಂಗಗಳಲ್ಲೆಲ್ಲಾ ಕೈ ಆಡಿಸಿ ಸಿದ್ಧಹಸ್ತರಾದವರು. ೧ ಮೇಘನಾದ ವಿಜಯ, ೨ ಶ್ರೀಮತಿಪರಿಣಯ ೩ ಮಧ್ಯಮವ್ಯಾಯೋಗ ೪ ಶರವುಕ್ಷೇತ್ರಮಹಾತ್ಮ ೫ ಮಣಿಕಂಠ ವಿಜಯ ೬ ಕಣಿಪುರಕ್ಷೇತ್ರಮಹಾತ್ಮ, ೭ ಉದ್ದಾಲಕ

---

೫. ಯಕ್ಷಗಾನ ಮತ್ತು ನಾನು ಶೇಣಿ, ಪುಟ ೯೮, ೨೦೦೬ ಕಲ್ಕೂರ ಪ್ರಕಾಶನ

೬. ಯಕ್ಷಗಾನ ಮತ್ತು ನಾನು - ಶೇಣಿ, ಪುಟ ೧೨೩,೧೫೬,೨೦೦೬ ಕಲ್ಲೂರ ಪ್ರಾಕಾಶನ

೮ ಕವಿರತ್ನ ಕಾಳಿದಾಸ ೯ ಬ್ರಹ್ಮರ್ಷಿ ೧೦ ಶಂಕರವಿಜಯ ೧೧ ಶಂಬೂಕವಧೆ ೧೨ ಸತಿ ಅನುಸೂಯಾ ಇತ್ಯಾದಿ ಪ್ರಸಂಗಗಳನ್ನು ಅವರು ರಚಿಸಿದ್ದಾರೆ. ಅದೇಕೋ ಅವರ ಮಾತಿನ ಸರಳತೆಯನ್ನು ಅವರ ಹಾಡಿನಲ್ಲಿ ನಿರೀಕ್ಷಿಸಲಾರೆವು.

ರಾಗ ತಾಳಗಳ ನಿಖರತೆಯ ಪರಿಜ್ಞಾನವಿದ್ದ ಶೇಣಿ ಮದ್ದಳೆವಾದಕರಾಗಿ ಭಾಗವತರಾಗಿ ಈ ಕ್ಷೇತ್ರದಲ್ಲಿ ತಮ್ಮತನದ ಮುದ್ರೆ ಒತ್ತಿದ್ದಾರೆ. ಖ್ಯಾತ ಭಾಗವತ ಪದ್ಯಾಣ ಗಣಪತಿ ಭಟ್ಟರು ಹೇಳುವಂತೆ - "ಹಾಡುಗರಿಕೆಯ ಬಗ್ಗೆ ಶೇಣಿಯವರಿಗೆ ಒಂದು ನಿಶ್ಚಿತ ನಿಲುವಿದೆ. ಹಾಗೆಯೇ ಧೋರಣೆಯಿದೆ. ಹೊಸ ದೃಷ್ಟಿಕೋನವಿದೆ. ಆದರೆ ಸರಿಯಲ್ಲದ್ದನ್ನು ಅಬದ್ಧ ಎಂದು ತನ್ನದೇ ಆದ ಗತ್ತಿನಲ್ಲಿ ಗಟ್ಟಿತನದದಲ್ಲಿ ಖಂಡಿಸುವ ಸಾಮರ್ಥ್ಯ ಇದೆ". ಬಾಯಿತಾಳ ಹೇಳಿ ಮದ್ದಳೆಯನ್ನು ನುಡಿಸಿ ತೋರಿಸುವ ಅವರ ಪರಿಣತಿ ಬೆರಗು ಹುಟ್ಟಿಸುವ ಮತ್ತೊಂದು ಅಂಶ.

ಯಕ್ಷಗಾನದ ಪ್ರಮುಖ ಆಕರ್ಷಣೆಯಾದ ಬಣ್ಣಗಾರಿಕೆಯಲ್ಲಿ ಶೇಣಿಗೆ ತನ್ನದೆ ಆದ ಧೋರಣೆ ಇತ್ತು. ಮಾಗಧ, ದಾರಿಗಾಸುರ, ರಾವಣ ಇತ್ಯಾದಿ ಪಾತ್ರಗಳ ಮುಖವರ್ಣಿಕೆ ಪರಂಪರೆಯಿಂದ ಬೇರೆಯಾಗಿ ಕಂಡರೂ; ಕೌರವ, ಕರ್ಣ, ಭೀಷ್ಮ ಇತ್ಯಾದಿ ಪಾತ್ರಗಳಲ್ಲಿ ಪಾರಂಪರಿಕ ಮುಖವರ್ಣಿಕೆಯನ್ನು ಅವರು ಬಿಟ್ಟುಕೊಡಲಿಲ್ಲ. ಬಪ್ಪಬ್ಯಾರಿ, ತುಘಲಕ, ಮಾಧವ ಭಟ್ಟ ಮುಂತಾದ ಪಾತ್ರಗಳ ಮುಖವರ್ಣಿಕೆಗೆ ಅವರದ್ದೇ ಆದ ಕೊಡುಗೆಯಿದೆ ಎಂಬುದನ್ನು ಮರೆಯುವಂತಿಲ್ಲ. ಬಣ್ಣಗಾರಿಕೆಯಲ್ಲಿ ಅವರು ತೋರುವ ಶ್ರದ್ಧೆ ಮತ್ತು ಶಿಸ್ತು ಅನನ್ಯವಾದದ್ದು,

ಶೇಣಿಯವರಿಗೆ ಕುಣಿತಗೊತ್ತಿತ್ತು. ಆದರೆ ಕುಣಿಯದೆಯೇ ಅವರು ಬಲುದೊಡ್ಡ ಕಲಾವಿದನಾಗಿ ಬಿಟ್ಟರು! ಅವರ ವೇಷ, ಅಭಿನಯ ಮಾತುಗಾರಿಕೆಯ ಕೌಶಲ್ಯದಿಂದಾಗಿ ಅವರ ಕುಣಿತವನ್ನು ಜನ ಬಯಸಲಿಲ್ಲ. ಅವರ ಮಾತು ಅವರ ಕುಣಿತವನ್ನು ನುಂಗಿಹಾಕಿತು ಆದರೆ ಅವರ ಮಾತು ಪ್ರೇಕ್ಷರನ್ನು ಕುಣಿಸಿತು!

---

೭. ಶೇಣಿ ಕೃತಿಶ್ರೇಣಿ-ಸಹಸ್ಪಂದನ, ಯಕ್ಷಕೂಟ ಪುತ್ತೂರು, ೧೯೯೫

**೪. ಶೇಣಿ ಮತ್ತು ಅರ್ಥಗಾರಿಕೆ :**

ಯಕ್ಷಗಾನವೆಂದರೆ ಅರ್ಥವಲಯಗಳ ನಿಖರತೆಯ ದರ್ಶನಯೋಗ, ಸಂಕೇತ ಹಾಗೂ ಧ್ವನಿಸಂಕೇತಗಳ ಸಾಧನೆಯ ಭಾಷಿಕ ಸಿದ್ಧಿಯೇ ಇಲ್ಲಿ ಮುಖ್ಯ. ಯಕ್ಷಗಾನದ ಈ ಭಾಷಿಕ ಕ್ರೀಡೆಯನ್ನು ಹೀಗೆ ಸಮೀಕರಿಸಬಹುದು.

ಯಕ್ಷರಗಾನದ ಉಳಿದ ಭಾಷಿಕ ಅವರಾರಗಳಿಗಿಂತ ಧ್ವನಿಸಂಕೇತ ಭಾಷೆ ಪ್ರಬಲ. ಅದು ಉಚ್ಚರಿತಧ್ವನಿಸಂಕೇಗಳಿಂದ ಅಮೂರ್ತವಾದದ್ದಕ್ಕೆ ಮೂರ್ತರೂಪ ನೀಡುವಲ್ಲಿ ಹೆಚ್ಚು ಶಕ್ತವಾಗುತ್ತದೆ. ನೆನಪಾದ ಒಂದು ಉದಾಹರಣೆಯನ್ನು ಲಕ್ಷಿಸುವದಾದರೆ' - ದುಷ್ಟ ಎಂಬ ಪದವನ್ನು ಭಾಗವತ ಹಾಡಿನಲ್ಲಿ ಎಷ್ಟೇ ಅರ್ಥವತ್ತಾಗಿ ವ್ಯಕ್ತಪಡಿಸಲಿ, ಕುಣಿತಾಭಿನಯದಲ್ಲಿಯೂ ಬಾರಿ ಬಾರಿಗೆ ವ್ಯಕ್ತವಾಗಲಿ, ಆದರೆ ಅದರ ನಿಜವಾದ ಸೊಗಸು ದುಷ್ಟ ಎಂಬುದರ ಸಮರ್ಥ ವ್ಯಾಖ್ಯಾನದಲ್ಲಿ ಹೆಚ್ಚು ನಿಖರವಾಗುವುದು. ಯಕ್ಷಗಾನ ಪ್ರಯೋಗವೊಂದರಲ್ಲಿ ಅದರ ಪೂರ್ವತಯಾರಿಗೆ ಎಷ್ಟೇ ಖರ್ಚು ಮಾಡಿರಲಿ, ಪ್ರಯೋಗದ ಜೀವಕಲೆ ಮೈದಾಳುವುದು ಅರ್ಥಗಾರಿಕೆಯಲ್ಲೇ, ಅರ್ಥಗಾರಿಗೆಯ ಭಾಷೆ ಧ್ವನಿಸಂಕೇತವಾದ ಕಾರಣ, ಸಿದ್ಧಭಾಷೆಗೆ, ಕುಣಿತಾಭಿನಯಗಳ ಭಾಷೆಗೆ ಮಿಕ್ಕುಳಿದ ಸಾಧ್ಯತೆಯನ್ನು ಇಲ್ಲಿ ದುಡಿಸಿಕೊಳ್ಳಬಹುದು. ಹೀಗಾಗಿ ಯಕ್ಷಗಾನ ಮೂಕನೃತ್ಯವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲಾರದು. ಬರೇ ಮಾತುಗಾರಿಕೆಯಿಂದಲೂ ಅದು ಉಳಿಯಲಾರದು. ಹೀಗಿದ್ದರೂ ಮಾತುಗಾರಿಕೆಯೇ ಪ್ರಧಾನವಾದ ಪ್ರಸಂಗ ಅಥವಾ ತಾಳಮದ್ದಳೆಯು ಯಕ್ಷಗಾನ ತಾಳಮದ್ದಳೆಯಾಗಿಯೇ ಉಳಿದಿದೆ. ಆದರೆ ಬರೇ ಕುಣಿತ ಹಾಗೂ ಹಾಡುಗಾರಿಕೆಯ ಪ್ರತ್ಯೇಕ ವೇದಿಕೆಯನ್ನು ಉಳಿಸಿಕೊಳ್ಳಲು ಶಕ್ತವಾಗಿಲ್ಲ. ಈ ದೃಷ್ಟಿಯಿಂದ ಕೂಡಾ ಯಕ್ಷಗಾನದ ಜೀವಸೆಲೆಯನ್ನು ಮಾತುಗಾರಿಕೆಯಲ್ಲೇ ಹುಡುಕಬೇಕಾಗುತ್ತದೆ. ನಾಕ, ನರಕ, ಅಯೋಧ್ಯೆ, ದಂಡಕಾರಣ್ಯ, ಕಿಷ್ಕಂಧೆ, ಹಸ್ತಿನಾವತಿ, ದ್ವಾರಕೆ -ಹೀಗೆ ಒಂದೇ, ಎರಡೇ, ಎಲ್ಲವನ್ನೂ ಅರ್ಥಗಾರಿಕೆಯಲ್ಲೇ ಕಟ್ಟಿನಿಲ್ಲಿಸಬೇಕಾಗುತ್ತದೆ.

ಭಾಷಿಕ ದೃಷ್ಟಿಯಿಂದ ಯಕ್ಷಗಾನದ ಮಾತುಗಾರಿಕೆಗೇ ಒಂದು ವಿಶಿಷ್ಟತೆಯಿದೆ. ಅದರಲ್ಲಿ ನವ್ಯ ಆವಿಷ್ಕಾರವನ್ನು ತಂದ ಶೇಣಿಯವರ ಶೈಲಿ ವಿಶಿಷ್ಟವಾದದ್ದು. ಅರ್ಧವಾಕ್ಯ, ಅರ್ಧಪದಗಳನ್ನು ಅರ್ಥವತ್ತಾಗಿ ಬಳಸುವುದು, ಭಾವತೀವ್ರತೆಯ ಸನ್ನಿವೇಶದಲ್ಲಿ ಕೆಲವೊಮ್ಮೆ ಉದ್ದುದ್ದ ವಾಕ್ಯಗಳ ಜೋಡಣೆ, ಕೆಲವೊಮ್ಮೆ ಒಂದು ಪದವನ್ನೇ ಒಂದು ವಾಕ್ಯವನ್ನಾಗಿ ಬಳಸುವುದು, ಆಗ್ಯದೆ, ಹೋಗ್ಯದೆ ಇತ್ಯಾದಿ ವಿಶಿಷ್ಟ ಪದಬಳಕೆ, ಕೆಲವೊಮ್ಮೆ ಅನುನಾಸಿಕೋಚ್ಚಾರಣೆ ಹೂಂಕಾರಗಳು, ಮೌನಗಳು ಕೂಡಾ ಅರ್ಥವತ್ತಾಗಿ ಬಳಕೆಗೊಳ್ಳುವುದನ್ನು ನಾವು ಇಲ್ಲಿ ಗಮನಿಸಬೇಕಾಗುತ್ತದೆ. ಶೇಣಿಯವರ ಮಾತುಗಳನ್ನು ಬರಹಕ್ಕೆ ಇಳಿಸುವಾಗ ಲಿಪಿಯ ಸೋಲು ನಮಗೆ ಅರ್ಥವಾಗತ್ತದೆ. ಹಾಗಾಗಿ ಶೇಣಿಯವರ

ಮುಖದಿಂದ ಕೇಳುವುದಕ್ಕೂ ಅದನ್ನು ಬರೆದು ಓದುವುದಕ್ಕೂ ಬಹಳ ವ್ಯತ್ಯಾಸವಿದೆ. ಭಾಷೆಯ ಇಂಟೋನೇಶನ್ ಇಲ್ಲಿ ಬಹಳ ಮುಖ್ಯ ವೇದಮಂತ್ರಗಳಲ್ಲಿ ಸ್ವರಭಾರ ಎಷ್ಟು ಮುಖ್ಯವೋ ಶೇಣಿಯವರ ಅರ್ಥಗಾರಿಕೆಯನ್ನು ಅರ್ಥೈಸಿಕೊಳ್ಳುವವನಿಗೂ ಕನ್ನಡ ಭಾಷೆಯ ಕಾಕುವಿನ ಮಹತ್ವ ತಿಳಿದಿರಬೇಕು.

ಮಾತಿನ ಉದ್ದಕ್ಕೂ ಕುತೂಹಲವನ್ನು ಉಳಿಸುವುದು ನಾಟಕೀಯ ವ್ಯಂಗ್ಯ ಪುನರುಕ್ತಿಯನ್ನು ಕಾವ್ಯಗುಣವನ್ನಾಗಿ ಬಳಸುವುದು, ಒಂದು ಚಿಕ್ಕ ಪದ್ಯದ ಎಳೆಗೆ ಗಂಟೆಗಟ್ಟಲೆ ವ್ಯಾಖ್ಯಾನಿಸುವುದು, ಒಂದನ್ನು ಹತ್ತಕ್ಕೆ ಹಿಗ್ಗಿಸುವ ಹತ್ತನ್ನು ಒಂದಕ್ಕೆ ಕುಗ್ಗಿಸುವ ಮಾತಿನ ಸ್ಥಿತಿಸ್ಥಾಪಕ ಸಿದ್ಧಿ ಶೇಣಿಯವರ ಶೈಲಿಗೆ ಒದಗಿ ಬಂದಿದೆ. ಮುತ್ತಿನಹಾರದ ಅಚ್ಚುಕಟ್ಟುತನ, ಮಾಣಿಕ್ಯದ ಮಿಂಚು ಬೆಳಕು, ಸ್ಪಟಿಕಶಲಾಕೆಯ ಮೊನಚು, ಕುಳಿತು ಕೇಳುವ ಜಂಗಂ ಜನಾರ್ದನರನ್ನು ಮಂತ್ರಮುಗ್ಧರನ್ನಾಗಿಸಿ "ಶೇಣಿ ಹೇಳಿದ್ದು ಹೌದು ಹೌದು" ಎನಿಸುವ ಮಾಂತ್ರಿಕತೆ ಶೇಣಿಯವರ ಶೈಲಿಯ ವೈಶಿಷ್ಟ್ಯ.

ನುಡಿದರೆ ಮುತ್ತಿನ ಹಾರದಂತಿರಬೇಕು ! ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು ನುಡಿದರೆ ಸ್ಪಟಿಕದ ಶಲಾಕೆಯಂತಿರಬೇಕು! ನುಡಿದರೆ ಲಿಂಗಮೆಚ್ಚಿ ಅಹುದಹುದೆನ್ನಬೇಕು! ವಚನಕಾರರ ಈ ಬೇಕುಗಳೆಲ್ಲ ಶೇಣಿಯವರ ಮಾತುಗಾರಿಕೆಯಲ್ಲಿ ಜೀವದುಂಬಿ ನಿಂತಿರುವದನ್ನು ನಾವು ಕಾಣುತ್ತೇವೆ.

ಒಂದು ವಿಷಯವನ್ನು ಹತ್ತ ನಿಟ್ಟುಗಳಿಂದ ಶೇಣಿ ಸಮರ್ಥಿಸಬಲ್ಲರು, ಅವರದು ದೈವದತ್ತವಾದ ಕಂಠ, ಅದನ್ನು ಭಾಗವತರ ಯಾವ ಕೃತಿಗೂ ಹದಗೊಳಿಸಬಲ್ಲ, ಹಿಡಿತವನ್ನು ಅವರು ಸಾಧಿಸಿದ್ದಾರೆ. ಸೂಕ್ಷ್ಮ ಮಿಮರ್ಶೆ, ಸಮಯೋಚಿತ ರಸಪ್ರಜ್ಞೆ ಮೊನಚು ಮಾತು, ಕಟಕಿ ವ್ಯಂಗ್ಯ ಬೆರಗುಗೊಳಿಸುವ ವಾದ, ಪೌರಣಿಕಜ್ಞಾನದ ನಿಶಿತತೆ ಹಾಗೂ ಒಳಸೂಕ್ಷ್ಮಗಳ ಅರಿವು, ಕಾಕು, ದ್ರಾಕ್ಷಾಪಾಕದ ಶೈಲಿ -ಇವೆಲ್ಲವುಗಳ ಮುದ್ರೆಯೊಂದಿಗೆ ಅವರು ನಿರ್ವಹಿಸಿದ ಎಲ್ಲ ಪಾತ್ರಗಳಿಗೂ ಶೇಣಿತನ ಎದ್ದು ಕಾಣುತ್ತದೆ. ಕೆಲವೊಮ್ಮೆ ಪುರಾಣಗಳ, ಶಾಸ್ತ್ರ, ನಂಬಿಕೆಗಳ ಬುಡವನ್ನೇ ಅಲ್ಲಾಡಿಸಿ, ವಿಡಂಬಿಸಿ ಹೊಸತನ್ನು ಹುಡುಕಿ ಹೇಳುವ ಶೇಣಿಯವರ ಅರ್ಥಗಾರಿಕೆ ಎಂದರೆ ಅದು ಸರಸ್ವತಿಯ ತೀರ್ಥಾವತಾರ, ಕನ್ನಡಾಂಗೆಯ ವಿಜಯಯಾತ್ರೆಯ ಆಶುಕಥನದ ಅವಿನಾಶೀಧ್ವಜ, ಡಾ. ಬಿಳಿಮಲೆ ಪುರುಷೋತ್ತಮರು ಹೇಳುವಂತೆ - 'ಶೇಣಿಯವರ ಅರ್ಥಗಾರಿಕೆ ಎಂದರೆ ಅದರ ನಿಜವಾದ ಅರ್ಥದಲ್ಲಿ ಅದು ಸರಸ್ವತಿಯ ದಿಗ್ವಿಜಯಕಥನ, ಪ್ರಸಂಗವೊಂದರ ಪುಟ್ಟ ಎಳೆಯನ್ನು ಆಧರಿಸಿ ಅವರು ತಮ್ಮ ಅರ್ಥಲೋಕವನ್ನು ಕಟ್ಟುವ ರೀತಿ, ಕಲ್ಪನಾಲೋಕವನ್ನು ಅವರು ಸೂರೆಗೊಳ್ಳುವ ಬಗೆ, ತರ್ಕಶಕ್ತಿಯಿಂದ ಇದಿರಾಲಿಯನ್ನು ಇನ್ನಿಲ್ಲದಂತೆ ಮುಗಿಸಿಬಿಡುವ

ಜಾಣ್ಮೆ - ಇವೆಲ್ಲವೂ ಯಕ್ಷಲೋಕದ ಅದ್ಭುತಗಳಾಗಿವೆ. ಪುರಾಣಗಳಿಗೆ ಸಮಕಾಲೀನ ವ್ಯಾಖ್ಯಾನ ನೀಡುತ್ತಾ ಮಾತಿನ ಮೂಲಕವೋ, ಹೂಂಕಾರದ ಮೂಲಕವೋ ಅಥವಾ ಎಷ್ಟೋ ಬಾರಿ ಕೇವಲ ಮೌನದ ಮೂಲಕವೋ ಅವರು ಹೊಸ ಸೈದ್ಧಾಂತಿಕತೆಯನ್ನು ರಂಗದಲ್ಲಿ ಅನಾವರಣ ಮಾಡಿದ್ದುಂಟು. ನೋಡ ನೋಡುತ್ತಿರುವಂತೆ ಶೇಣಿಯವರು ನಮ್ಮ ಮಧ್ಯದ ದಂತಕಥೆಯಾಗಿ ಬಿಟ್ಟರು'. ಖ್ಯಾತ ವಿಮರ್ಶಕ ಕೆ. ಎಂ. ರಾಘವ ನಂಬಿಯಾರ್‌ರವರ ಗ್ರಹಿಕೆಯಂತೆ ಮಂದ್ರಕೊಳಲಿನ ನಾದದಂತೆ ಇಂಪಾದ ಗಂಡುಗೊರಳು, ದನಿಯ ಕಲಾತ್ಮಕ ಏರಿಳಿತಗಳೊಂದಿಗೆ ಚ್ಯುತಿಯಿಲ್ಲದ ಶ್ರವಣಸುಖ, ಚಾತುರಪೂರ್ಣ ವಕ್ರೋಕ್ತಿಗಳಿಂದ ಸದಾ ಕುತೂಹಲ ಕೆರಳಿಸುತ್ತಲೇ ಇರುವ ವಾಕ್‌ಸರಣಿ, ವಹಿಸಿದ ಪಾತ್ರಕ್ಕೆ ಸಹ್ಯಾದ್ರಿಯ ಎತ್ತರವನ್ನು ಸಮುದ್ರದ ಆಳ ಹರಹನ್ನೂ ನೀಡುವ ಆಲೋಚನಾಕ್ರಮ, ಅದೇ ಪಾತ್ರ ಪ್ರತಿಬಾರಿಯೂ ಬೇರೆಯೇ ಚಹರೆ ಪಡೆಯುವ ವೈವಿಧ್ಯ, ಮೊಗೆದು ಮುಗಿಯದ ನೂತನತೆ, ಹತ್ತರವನಿಗೂ ಅರ್ವತ್ತರವನಿಗೂ ಒಂದು ಮಾತಿನಿಂದಲೇ ಹತ್ತಿರವಾಗಬಲ್ಲ ಅಸಾಧಾರಣ ಸಂವಹನ ಶಕ್ತಿ, ಇನ್ನೂ ಹೇಳಿದರೆ ಶೇಣಿ ಗೋಪಾಲಕೃಷ್ಣ ಭಟ್ಟರ ಅರ್ಥಗಾರಿಕೆಯ ಚೆಲುವನ್ನು ಬಣ್ಣಿಸಿ ಮುಗಿದಂತಾಗದು.

ಪ್ರಸಂಗವೊಂದರಲ್ಲಿನ ಬೇರೆ ಬೇರೆ ಪಾತ್ರಗಳು ವಾದಿಸುವ, ನಿವೇದಿಸುವ ಮಾತುಗಾರಿಕೆ ಒಟ್ಟಂದದೊಂದಿಗೆ ಕಥೆಗೆ ಒಂದು ಅನುಸೂತ್ಯ ಸಂಬಂಧ ಏರ್ಪಡುತ್ತದೆ. ಆದರೆ ಶೇಣಿಯವರ ಒಂದು ಪ್ರಸಂಗದ ಒಂದು ಪಾತ್ರದ ಅರ್ಥ ಆ ಇಡೀ ಪ್ರಸಂಗದ ಕಥೆಯನ್ನು ಗರ್ಭೀಕರಿಸಿಕೊಂಡು ಮೇದಾಳುತ್ತದೆ. ಇಂದು ಯಾವುದೋ ವೇದಿಕೆಯಲ್ಲಿ ಹೇಳಿದ ಅರ್ಥಕ್ಕೂ ಮತ್ತೊಮ್ಮೆ ಮತ್ತೆಲ್ಲೋ ಹೇಳಿದ ಮತ್ತೊಂದು ಅರ್ಥಕ್ಕೂ ಒಂದು ಸಂಬಂಧ ಇದ್ದೇ ಇರುತ್ತದೆ. ಅಂದರೆ ಅವರ ಅರ್ಥಗಾರಿಕೆಗೆ ಒಂದು ಬೆಳವಣಿಗೆ ಇದೆ.

ಶೇಣಿ ಆಟದಲ್ಲಾಗಲಿ, ಕೂಟದಲ್ಲಾಗಲಿ, ಯಕ್ಷಗಾನ ಪದ್ಯಗಳ ಚೌಕಟ್ಟನ್ನು ವಿಸ್ತರಿಸುತ್ತಾರೆಯೇ ಹೊರತು ಮುರಿಯುವದಿಲ್ಲ. ತಮ್ಮ ಕಾಲದ ಜನಗಳಿಗೆ, ನೇರವಾಗಿ ಪುರಾಣ ಓದದ ಜನಕ್ಕೆ ಪರಂಪರೆಯಿಂದ ಕೇಳಿದ ಒಂದು ಕಥಾರೂಪಕಗೊತ್ತಿದೆ ಎಂಬುದನ್ನು ಅವರು ಚೆನ್ನಾಗಿ ಬಲ್ಲರು. ಆದ್ದರಿಂದ ರೂಢಿಯ ಕಥೆಯನ್ನು ಕೆಡಿಸುವದನ್ನು ಅವರು ಒಪ್ಪುವದಿಲ್ಲ. ಉದಾಹರಣೆಗೆ ಮತ್ಸ್ಯ ಪುರಾಣದಲ್ಲಿ ಬರುವ ಹಿರಣ್ಯಕಶ್ಯಪುವಿನ ಕಥೆಯಲ್ಲಿ ಆತ ಪ್ರಹ್ಲಾದನಿಗೆ ಹಿಂಸಿಸುವ ವಿಚಾರವೇ ಇಲ್ಲ. ಕಶ್ಯಪುವಿನ ದುರದುಂಬಿತನವನ್ನು ಸಹಿಸದೆ ನೃಸಿಂಹನ ಅವತಾರವಾಗಿರುತ್ತದೆ. ಇಂತಹ ಪುರಾಣ ಕಥೆಯನ್ನು ಓದಿಕೊಂಡು ಶೇಣಿ ಕಶ್ಯಪುವನ್ನು ಹಾಗೆ ಚಿತ್ರಿಸಿ ಹೊರಡುವದಿಲ್ಲ. ಯಕ್ಷಗಾನದ ರೂಢಿಯನ್ನೂ ಪ್ರಸಂಗ ಪದ್ಯಗಳಚೌಕಟ್ಟನ್ನೂ ಗಮನಿಸಿಯೇ ವರ್ತಿಸುತ್ತಾರೆ. ಶೇಣಿಯಷ್ಟೇ ಅಲ್ಲ ಯಾವ ಪ್ರಸಂಗದ ಅರ್ಥಧಾರಿಯೇ ಆಗಲಿ ಪಾತ್ರಧಾರಿಯೇ ಆಗಲಿ ತನಗೆ ಗೊತ್ತಿದ್ದ ಪುರಾಣ

ಕಥೆಯನ್ನು ಆಧರಿಸಿ ಆ ಪುರಾಣದಲ್ಲಿ ಕಥೆ ಹೀಗಿದೆ, ಈ ಪುರಾಣದಲ್ಲಿ ಹೀಗೆ ಇದೆ ಎಂದು ತಿದ್ದುಪಡಿ ತರುವುದು ರೂಢಿಯಲ್ಲ. ಆದರೆ ಪುರಾಣಗಳ ಕುರಿತು ರೂಢಿಯ ತಪ್ಪು ಮಾಹಿತಿಗಳನ್ನು ತಿದ್ದುವ ಹಟವನ್ನು ಶೇಣಿ ಮಾಡದಿರಲಾರರು. ಅವರು ರಾವಣನಾಗಿ ನಾನೇ ಜಯ ಕುಂಭಕರ್ಣನೇ ವಿಜಯ ಸನಕಾದಿಗಳಿಂದ ಶಪ್ತರಾದ ನಮಗೆ ಮೂರೇ ಜನ್ಮ ಏಳು ಎಂದು ಇತ್ತೀಚೆ ಕಥೆ ಹೇಳುತ್ತಾರಂತೆ ಎಂದು ತಪ್ಪು ರೂಢಿಗೆ ಕಾಯಕಲ್ಪ ಮಾಡುತ್ತಾರೆ. ಮತ್ತೆ ಕೆಲವೊಮ್ಮೆ ಸಂಧಾನದ ಕೌರವನಾಗಿ ದೂರ್ತರಾಜಕಾರಣಿಯಾಗಿ- ವಿದುರ ಶಾಪಗ್ರಸ್ಥನಾದ ಯಮ, ಕುಂತಿ ಯಮನಿಂದಲೇ ಧರ್ಮರಾಯನನ್ನು ಪಡೆದಳು. ಪಾಂಡವರು ಅರಣ್ಯಕ್ಕೆ ಹೋದ ಮೇಲೆ ಕುಂತಿ ವಿದುರನ ಮನೆಯಲ್ಲೇ ಇದ್ದಾಳೆ. ಮುಂದಿನದನ್ನು ನೇವೇ ಕಲ್ಪಿಸಿಕೊಳ್ಳಿ" ಎಂದು ಶೇಣಿ ಹೇಳುವಾಗ ಛೇ, ಪುರಾಣ ಕಥೆಗಳನ್ನು ಹೀಗೆಲ್ಲ ಬಳಸಬಹುದೇ ಎಂದು ಕೇಳಿಕೊಂಡು ಬಳಸಿದವ ಕೌರವ ಎಂಬ ಕಾರಣಕ್ಕೆ ತಲೆದೂಗುತ್ತೇವೆ.

ಶೇಣಿ ಮುಖ್ಯವಾಗಿ ಬೇರೆ ಬೇರೆ ದೃಷ್ಟಾಂತಗಳಾಗಿ ಪುರಾಣ ಕಥೆಯನ್ನು ಅರ್ಥಗಾರಿಕೆಯಲ್ಲಿ ಬಳಸುತ್ತಾರೆ. ಒಂದೇ ಘಟನೆಯನ್ನು ಬೇರೆ ಬೇರೆ ಪಾತ್ರಗಳ ನೆಲೆಯಲ್ಲಿ ಬೇರೆ ಬೇರೆಯಾಗಿ ನೋಡುತ್ತಾರೆ. ಉದಾಹರಣೆಗೆ ಹರಿವಂಶ, ಬ್ರಹ್ಮಪುರಾಣ ಭಾರತ ರಾಮಾಯಣಗಳಲ್ಲಿ ಬರುವ ಅಹಲ್ಯೆಯ ಕಥೆಯನ್ನು ವಿಶ್ವಾಮಿತ್ರರಾಗಿ ಕಾಣುವಾಗ - 'ದೊಡ್ಡವರಲ್ಲಿ ದೋಷಗಳೂ ಗುಣಗಳಾಗುತ್ತವೆ. ಇಂದ್ರನಿಗೆ ಗೌತಮ ಶಪಿಸಿದರೂ ಅವನಿಗೇನೂ ತೊಂದರೆಯಾಗಲಿಲ್ಲ. ಅಂತೆಯೇ ಸ್ವಭಾವತಃ ಚಂಚಲೆಯಾದ ಹೆಣ್ಣನ್ನು ಗಂಡ ಯಾವ ಕಾಲಕ್ಕೂ ಉಪೇಕ್ಷಿಸಬಾರದು' ಎಂದು ರಾಮನಿಗೆ ಉಪದೇಶಿಸಿದರೆ ಶೂರ್ಪನಖಿಯಾಗಿ-'ತಿಂಗಳಿಗೆ ಇಪ್ಪತ್ತು ದಿನ ಒಪ್ಪತ್ತು ಮಾಡಿ ವದ್ದೆ ಮಡಿಯಲ್ಲಿರುವ ಬ್ರಾಹ್ಮಣನಿಂದ ಅಹಲ್ಯೆಗೆ ಏನು ಸಿಕ್ಕೀತು. ಇಂದ್ರನೊಡನೆ ರಮಿಸಿದ್ದು ದೊಡ್ಡ ಅಪರಾಧವಲ್ಲ ಎಂದು ಅಹಲ್ಯೆಯನ್ನು ಸಮರ್ಥಿಸುವ ವಿಧಾನವನ್ನು ನಾವು ಅಲ್ಲಗಳೆಯುವಂತಿಲ್ಲ. ಇವುಗಳೆಲ್ಲ ಕೇವಲ ಪಾತ್ರಗಳ ವಕಾಲತ್ತಾಗದೆ, ಬೇರೆ ಬೇರೆ ದೃಷ್ಟಿಕೋನಗಳಿಂದ ಪುರಾಣಗಳನ್ನು ಗ್ರಹಿಸುವ ಅವರ ಸೂಕ್ಷ್ಮಮತುಯ ನಿದರ್ಶನವಾಗಿದೆ.

ಒಂದು ಘಟನೆಯನ್ನು ಹೀಗೆಲ್ಲ ಬಳಸಬಹುದು ಎಂಬುದನ್ನು ಶೇಣಿ ಅರ್ಥವಲಯಗಳ ದರ್ಶನದೊಂದಿಗೆ ಚಿತ್ರಿಸುತ್ತಾರೆ, ಹೀಗಾಗಿ ಶೇಣಿಯವರ ಅರ್ಥಗಾರಿಕೆಯಲ್ಲಿ ಪುರಾಣಗಳ ಬದ್ಧತೆ ಹೇಗೆಂದರೆ-ಪ್ರಸಂಗ ಪುರಾಣಗಳ, ಮಾರ್ಗದರ್ಶನ ಸೂತ್ರಗಳ ಸುತ್ತ ಪುರಾಣ ಕಥೆಗಳ ಘಟನೆಯನ್ನು ಸಂದರ್ಭೋಚಿತವಾಗಿ ವ್ಯಾಖ್ಯಾನಿಸಿ, ಪರ ವಿರೋಧಗಳ ತುಮುಲಕ್ಕೂ ಸಿಕ್ಕಿಸಿ ನ್ಯಾಯವನ್ನು ನಮಗೇ ಬಿಡುವ ಶೇಣಿಯವರು ಕಣ್ಣು ಮುಚ್ಚಿ ಪುರಾಣಗಳನ್ನು ಒಪ್ಪಿಕೊಂಡು ಕೈ ತೊಳೆದುಕೊಳ್ಳುವ ಪ್ರವೃತ್ತಿಯವರಲ್ಲ. ಹೀಗಾಗಿಯೇ

ಶೇಣಿಯವರು ಈವರೆಗೆ ತಾಳಮದ್ದಳೆಯ ಅರ್ಥಗಾರಿಕೆಯಲ್ಲಿ ಸೃಷ್ಟಿಸುತ್ತ ಬಂದ ಪುರಾಣದ ಪ್ರತಿಸೃಷ್ಟಿಯೂ ವಾದಗಳ ಮೂಲಕ ತತ್ತ್ವಬೋಧೆ ಮಾಡುವ ಕಾವ್ಯಾತ್ಮಕ ತಂತ್ರವಾಗಿದೆ. ಮುಖ್ಯವಾಗಿ ಒಬ್ಬ ದಾರ್ಶನಿಕ ಕವಿಯ ಪ್ರವೃತ್ತಿ ಅಲ್ಲಿದೆ. ಪುರಾಣಗಳನ್ನು ವೇದಾಂತದ ಒಳಗಣ್ಣಿನಿಂದ ದರ್ಶಿಸುವ ಶೇಣಿಯವರ ಪುರಾಣ ಪ್ರತಿಭೆಯು ವೇದಾಂತದರ್ಶನ ಪ್ರತಿಭೆಯಾಗಿ ನವನವೋನೇಷವಾಗಿ ವ್ಯಕ್ತಿಗೊಂಡಿದೆ. ಪುರಾಣೇತರ ಕೃತಿಗಳಲ್ಲಿ ಕೂಡಾ ನಾವು ಕಾಣುವದು ಇದನ್ನೇ.

ಶೇಣಿ ಅನ್ಯರ ಮುಖಭಂಗ ಮಾಡುತ್ತಾರೆ. ಇದಿರಾಳಿಯ ಬಾಯಿ ಮುಚ್ಚಿಸುತ್ತಾರೆ. ಅವರದು ಆಕ್ರಮಣಕಾರೀ ಪ್ರವೃತ್ತಿ, ಇದಿರು ಅರ್ಥಧಾರಿಯ ಮೇಲೆ ಸವಾರಿ ಮಾಡುತ್ತಾರೆ ಇತ್ಯಾದಿ ಇತ್ಯಾದಿ ಆಕ್ಷೇಪಗಳನ್ನು ಶೇಣಿ ಇದಿರಿಸಿದ್ದಾರೆ.

ಶೇಣಿ ಅಬದ್ಧ ಮಾತನ್ನು ಎಂದೂ ಸಹಿಸಲಿಲ್ಲ. ಅಬದ್ಧ ಮಾತಾಡಿದ ಇದಿರಾಳಿಯ ವಯಸ್ಸು, ಸಂಬಂಧ, ಸಾಮಾಜಿಕಯೋಗ್ಯತೆ, ಪ್ರಸಂಗ ನಡೆಯುತ್ತಿರುವ ಸ್ಥಾನ ಯಾವುದನ್ನೂ ಲೆಕ್ಕಿಸದೆ ಇದಿರಾಳಿಯ ಉಸಿರು ಕಟ್ಟಿಸುತ್ತಿದ್ದರು. ಅಷ್ಟೇ ಅಲ್ಲ ಅವರಲ್ಲಿಯೇ ಪರಿಹಾರವನ್ನು ಕೇಳಿದರೆ ಅದಕ್ಕೂ ಶಾಂತಚಿತ್ತರಾಗಿ ಉತ್ತರಿಸುತ್ತಿದ್ದರು. ಶೇಣಿಯವರ ಸಹಕಲಾವಿದರೇ ಆಗಿದ್ದ ರಮೇಶಾಚಾರ್ಯರು ತಮ್ಮ ಹಾಗೂ ಶೇಣಿಯ ಮುಖಾಮುಖಿಯ ಸಂದರ್ಭವೊಂದನ್ನು ಹೀಗೆ ತೆರೆದಿಟ್ಟಿದ್ದಾರೆ. ಯುದ್ಧಕ್ಕೆ ಹೊರಟ ವಾಲಿಯನ್ನು ತಾರೆ ತಡೆದಾಗ- “ನಾನು ಸತ್ತೆ ಎನ್ನುವ ಸುದ್ದಿಕೇಳಿ ಸೂತಿಕ ಕಳೆಯುವ ಮೊದಲೇ ಸುಗ್ರೀವನ ಮಂಚಕ್ಕೆ ಹೋದವಳು. ಈಗ ಶೋಭಾನೆ ಹಾಡಲು ಬಂದಿದ್ದೀಯಾ, ಏನು ಹೇಳಲು ಬಂದಿದ್ದೀಯೋ ಹೇಳಿ ಹೋಗು” -ಎಚೆದು ಮುಖತಿರುವಿ ಕುಳಿತರಂತೆ, ನೀತಿಯಲ್ಲ ಪೋಪುದಿಂದು ಎಂದು ತಾರೆ ಹೇಳಿದರೆ 'ಸುಗ್ರೀವನಿಗೇನಾದರೂ ಅಪಾಯವಾದಿತೆಂಬ ಭಯವೇ?' ಎಂದು ಪ್ರಶ್ನಿಸಿದರಂತೆ. ಉತ್ತರಿಸಲಾಗದೇ ರಮೇಶರು ಸಹಜವಾಗಿ ಕಣ್ಣೀರಿಟ್ಟರಂತೆ. ಆಗ ಅವರೇ ಸಾಂತ್ವನಪಡಿಸುತ್ತಾ 'ನಾವು ಸೇವಿಸಿದ ಆಹಾರದ ವಾಸನೆಯೇ ನಾವು ತೇಗುವಾಗ ಬರುವಂತೆ ಸುಪ್ತವಾಗಿ ಅಂತರಂಗದಲ್ಲಿ ನಿನ್ನ ಬಗ್ಗೆ ನನಗಿದ್ದ ನೋವು ಹೀಗೆ ಪ್ರಕಟಗೊಂಡಿತು. ಅತಿಹಿತವಂತರು ಸಣ್ಣ ತಪ್ಪು ಮಾಡಿದರೂ ಅಸಹನೀಯ ವೇದನೆ ಉಂಟಾಗುವುದು ಸಹಜ. ತಾರಾ, ನನ್ನ ಮಗನ ತಾಯಿ ನೀನು ಮುಂದುವರಿಸು' ಎಂದರಂತೆ.

ಚೌಕಿಗೆ ಬಂದ ರಮೇಶರು ನನ್ನ ಮೇಲೆ ನಿಮಗೇನು ಸಿಟ್ಟು' ಎಂದು ಕೇಳಿದರಂತೆ- 'ಸುಗ್ರೀವನಲ್ಲಿ ದೈಹಿಕ ಕಾಮನೆ ನನಗಿರಲಿಲ್ಲ. ನಾನೂ ಪಟ್ಟದರಾಣಿ ಎಂದು ಅವನೊಂದಿಗೆ

ಕುಳಿತರೆ ನಮ್ಮ ಕಂದ ಅಂಗದ ಅನಾಯಾಸವಾಗಿ ಉತ್ತರಾಧಿಕಾರಿಯಾಗುತ್ತಾನಲ್ಲ ಎಂಬ ನನ್ನ ತಾಯ್ತನ ಹೆಣ್ತನವನ್ನು ಒತ್ತೆ ಇಟ್ಟೆತು - ಎಚೆದು ಉತ್ತರಿಸಬೇಕಾಗಿತ್ತು ಎಂದರಂತೆ!

ಒಮ್ಮೆ ಜುಟ್ಟು ಜನಿವಾರ ಷಟ್ಟುಚ್ಚಗಳ ಬಹಳ ದೊಡ್ಡ ಕರ್ಮಕಾಂಡ ಪಂಡಿತರು, ಕೌರವನ ಅರ್ಥಕ್ಕೆ ತೊಡಗಿದ್ದರು. ಶೇಣಿ ಕೃಷ್ಣನಾಗಿ ಅವರ ಅನಗತ್ಯ ಭಾಷಣವನ್ನು ಮೊಟಕುಗೊಳಿಸಿದ್ದು ಹೀಗೆ- "ಅಯ್ಯಾ, ಶ್ರೀಮಂತನ ಮನೆಯಲ್ಲೂ ಶ್ರಾದ್ಧ ಇರ್ತದೆ ಬಡವನ ಮನೆಯಲ್ಲೂ ಶ್ರಾದ್ಧ ಮಾಡ್ತಾರೆ; ಆದರೆ ಪಿಂಡ ಇಡುವುದು ಮೂರೇ ಅಲ್ಲವೇ? ಶ್ರೀಮಂತನ ಮನೆಯಲ್ಲಿ ನೂರು ಚೆಳ ಅಕ್ಕಿ ಇದೆ ಅಂತ ನೂರು ಪಿಂಡಗಳನ್ನು ಇಡಬಾರದಷ್ಟೆ-ಅಗತ್ಯಕ್ಕೆ ಎಷ್ಟು ಬೇಕೋ ಅಷ್ಟೆ ಮಾತಾಡಬೇಕಲ್ಲವೇ?' ಎಂದು ಹೇಳಿದರಂತೆ.ಶ್ರಾದ್ಧದ ಊಟಕ್ಕೆ ಹೋಗುವ ಆ ಬ್ರಾಹ್ಮಣನಿಗೆ ಇಂಥ ಮಾತಿನಿಂದ ಉರಿಬೀಳದೇ ಇರಲು ಸಾಧ್ಯವೇ?

ಶೇಣಿಯವರ ಮೇಲೆ ಕೂಟಕ್ಕೆ ಕೂಟವೇ ಆಕ್ರಮಿಸಿದಾಗಲೂ ಏಕಾಂಗವೀರನಾಗಿ ಆ ಕೂಟದವರ ಹುಚ್ಚು ಬಿಡಿಸಿದ ಶ್ರೇಯಸ್ಸು ಶೇಣಿಯವರದು. ವೇದವೇತ್ತರೂ ಗೀರ್ವಾಣ ಭಾಷಾಕೋವಿದರೂ ಹಾಗೆಯೇ ಅರ್ಥಧಾರಿಗಳೂ ಆದ ಕೆಲವರೆಲ್ಲ ಸೇರಿ ಶೇಣಿಯವರ ಮುಖಭಂಗಕ್ಕಾಗಿ ಒಂದು ಕೂಟವನ್ನು ಏರ್ಪಡಿಸಿದ್ದರು. "ಗರಿ ಮುರಿಯದ ಅಂಗಿ, ಗಂ ಎನ್ನುವ ಗಂಧದೆಣ್ಣೆ, ತಿದ್ದಿ ತೀಡಿದ ಕೂದಲು ಈ ಬಗೆಯ ಶೇಣಿಗೆ ಸಂಸ್ಕೃತ ಗೊತ್ತಿರಲಾರದು, ಎಲ್ಲೋ ಕೆಲವು ಸಾಲು ಬಾಯಿಪಾಠ ಮಾಡಿದ್ದಾನೆ ಇತ್ಯಾದಿ ಇತ್ಯಾದಿಯಾಗಿ ಊಹಿಸಿದ ಆ ಪಂಡಿತೋತ್ತಮರು ಪಾತ್ರದ ಕುರಿತು ಮೊದಲೇ ಯಾವ ಸುಳುಹನ್ನೂ

ನೀಡದೆ ಭೀಷ್ಮಾರ್ಜುನ ಪ್ರಸಂಗದ ಕೃಷ್ಣನ ಪಾತ್ರವನ್ನು ನೀಡಿದ್ದರಂತೆ ಇವರಿಗೆಲ್ಲಿ ಭಗವದ್ಗೀತೆ ಗೊತ್ತಿದೆ? ಎಂಬ ಕಲ್ಪನೆ ಅವರದ್ದು.

ಆದರೆ, ಶೇಣಿ ಅವರನ್ನೆಲ್ಲಾ ಕೌರವರೆಂದೇ ಭಾವಿಸಿ ಅವರ ಕೂಟನೀತಿಯನ್ನು ಬಯಲಿಗೆಳೆದು ಒಂದುವರೆ ಗಂಟೆಯ ಕಾಲ ನಿರರ್ಗಳವಾಗಿ ಭಗವದ್ಗೀತೆಯ ಸಾಲು ಸಾಲನ್ನು ಉದ್ಧರಿಸಿ ಗೋಪಾಲಕೃಷ್ಣನ ವಿಶ್ವರೂಪವನ್ನು ತೋರಿಸಿದರು. ಈ ಸಂದರ್ಭವನ್ನು ಈ ಪುಸ್ತಕದ ಗೀತೋಪದೇಶದಲ್ಲಿ ನೋಡಬಹುದು.

---

೮. ಸಹಸ್ರ ಚಂದ್ರ - ಶೇಣಿ ಅಭಿನಂದನ ಗ್ರಂಥ, ಪುಟ ೪೩.

ಅನಂತರ ಆ ಪಂಡಿತರು ತಮ್ಮ ಪಾಮರತ್ವದ ಖೇದದಿಂದ ಶೇಣಿಯವರೊಂದಿಗೆ ಸ್ನೇಹ ಬೆಳೆಸಿರುವಲ್ಲಿ ಶೇಣಿಯವರ ವಾಕ್‌ಸಿದ್ಧಿಯನ್ನು ಕಾಣಬಹುದು. ಶೃಂಗೇರಿಯ ಶಾರದಾ ಪೀಠವು ಯಕ್ಷಗಾನಕಲಾನಿಧಿ ಎಂದು ಅವರನ್ನು ಸನ್ಮಾನಿಸಿದ್ದು ಸಾರ್ಥಕ ಎನಿಸಿವುದು ಇಂಥ ಸಂದರ್ಭದಲ್ಲಿಯೇ,

ಪ್ರಾಮಾಣಿಕರನ್ನು, ಮುಗ್ಧರನ್ನು ವಿನಯಶೀಲರನ್ನು ಹೊರತು ಪಡಿಸಿದರೆ ಅಹಂಭಾವಿಗಳನ್ನು ಉದಾಸೀನರನ್ನು ರಂಗದ ಬಗ್ಗೆ, ಪಾತ್ರದ ಬಗ್ಗೆ ಕಾಳಜಿ ಇಲ್ಲದವರನ್ನು ಎಂದಿಗೂ ಶ್ರೀ ಶೇಣಿಯವರು ಕ್ಷಮಿಸುತ್ತಿರಲಿಲ್ಲ" ಅಷ್ಟೇ ಅಲ್ಲ ವೈದಿಕ ಸಂಸ್ಕೃತಿಯನ್ನು, ರಾಮಾಯಣದ ಆದರ್ಶಗಳನ್ನು, ಉಪನಿಷತ್ತಿನ ವಿಚಾರವನ್ನು ಮುಂದಿಟ್ಟಾಗ ಅದನ್ನು ಖಂಡಿಸದೆ ತಮ್ಮದನ್ನು ಸೇರಿಸಿ ಅನುಮೋದಿಸುವ ಅವರ ಸಾಂಸ್ಕೃತಿಕ ಕಾಳಜಿಯನ್ನು ನಾವು ಮರೆಯಕೂಡದು.

ಶೇಣಿ ರಾಜಕೀಯವನ್ನು ಎಳೆದು ತರುತ್ತಾರೆ ಎಂಬ ಆಕ್ಷೇಪ ಕೆಲವರದಿತ್ತು. ಅದರೆ ಅದೊಂದು ಜನಾಕರ್ಷಣೆಯ ತಂತ್ರ ಎನ್ನುವುದರ ಜೊತೆಗೆ ಅನೇಕಸಾರಿ ವರ್ತಮಾನದ ರಾಜಕೀಯಕ್ಕೆ ಚಿಕಿತ್ಸೆಯಾಗಿ ಅದು ಹೊರ ಹೊಮ್ಮುತ್ತಿತ್ತು. ಸಾಲ್ವ ಶೃಂಗಾರದ ಈ ಮಾತನ್ನು ಗಮನಿಸಿ-ಭೀಷ್ಮನ ಕಾಲಕ್ಕೆ ಆದದ್ದು ಆಲುವವರಿಗೆ ಜಾತಿ ಇದ್ದಾರು ಅಂತ, ಯಾಕೆ? ಜಾತ್ಯಾತೀತ ಅಂತ ಅರಸರಿಗೆ ಎತ್ತಣದು ಜಾತಿ? ಇಲ್ಲ. ಅಷ್ಟು ದೊಡ್ಡ ಮನುಷ್ಯ ಭೀಷ! ಭೀಷ್ಮ ತನ್ನ ತಂದೆಗೆ ಎರಡನೆ ಮದುವೆ ಯಾವ ಜಾತಿಯಿಂದ ಮಾಡಿಸಿದ? ನಿಮ್ಮೆಲ್ಲ ಗೊತ್ತುಂಟಲ್ಲ! ಸದ್ಯ ಅವಳಲ್ಲೇ ಹುಟ್ಟಿದವನು ತಾನೇ ಚಕ್ರವರ್ತಿಯಾಗಿ ಸಂಹಾಸವದಲ್ಲಿರೊದು? ಕೇವಲ ಈ ದೊಡ್ಡವರು ಈ ಮುಖಂಡರೆಲ್ಲ ಜಾತ್ಯಾತೀತ ಅಂತ ಹೇಳೋಡು ನಮ್ಮನ್ನು ಮೋಸ ಮಾಡ್ಲಿಕ್ಕೆ", ಸತ್ಯವತಿ ಬೆಸ್ತರ ಹೆಂಗಸೆಂದು ಹೇಳುವ ಸಾಲ್ವನ ಈ ಮಾತು ನಮಗೆ ಹೌದು ಹೌದು ಎನಿಸುತ್ತದೆ. ಆದರೆ ಅವರು ಇನ್ನೊಮ್ಮೆ ಭೀಷ್ಮನಾಗಿ ಸತ್ಯವತಿ

ವ್ಯಾಸನನ್ನು ಹಡೆದ ಪುಣ್ಯಗರ್ಭೆ ಎಂದು ಮತ್ತೊಂದು ಹೊಳಹನ್ನು ಕೊಡುತ್ತಾರೆ. 'ಮುರಾರಿಗೆ ಮೂರನೆಯದಾರಿ' ಎಂದ ಹಾಗೆ ಇದಿರಾಳ ಏನೇ ಹೇಳಿದರೂ ಶೇಣಿಯವರದೊಂದು ಹೊಸಚಿಂತನೆಯ ರಾಜಮಾರ್ಗ ಪ್ರತ್ಯೇಕವೇ.

---

೯. ಸಹಸ್ರಚಂದ್ರ - ಒಡನಾಟದ ಸವಿನೆನಪು- ಎಂ. ಕೆ. ರಮೇಶ್ ಆಚಾರ್ಯ-ಪುಟ ೪೫

ಶೇನಿ ವಾಚಾಳಿ ಎಂಬ ಮಾತು ಸತ್ಯವಾದರೂ ಅದನ್ನ ಸುಳ್ಳು ಎಂದು ಮಾಡಿ ತೋರಿಸಿದ ಉದಾಹರಣೆಗಳೂ ಉಂಟು ಒಂದು ಗಂಟೆಯಲ್ಲಿ ಭಗವದ್ಗೀತೆಯನ್ನು ಹೃದ್ಯವಾಗಿ ನಮ್ಮ ಮುಂದಿಡಬಲ್ಲ ಶೇಣಿ, ರಾತ್ರಿ ಬೆಳಗಾಗುವರೆಗೂ ಅದನ್ನು ಮುಂದುವರಿಸಬಲ್ಲರು ಎಂಬಲ್ಲಿಗೆ, ಒಂದನ್ನು ಹನ್ನೊಂದಕ್ಕೆ ಹಿಗ್ಗಿಸುವ ಕುಮಾರವ್ಯಾಸನ ಪ್ರಜ್ಞೆ ಹನ್ನೊಂದನ್ನು ಒಂದಕ್ಕೆ ಕಿರಿದುಗೊಳಿಸುವ ಪಂಪನ ಸಂಪಾದಕೀಯ ಪ್ರಜ್ಞೆ ಎರಡನ್ನೂ ಶೇಣಿ ಕರಗತ ಮಾಡಿಕೊಂಡಿದ್ದರು ಎಂಬುದು ನಿರ್ವಿವಾದ.

**೫. ಶೇಣಿ ಮತ್ತು ನಾನು:**

ಮೂವತ್ತೈದು ವರ್ಷಗಳ ಹಿಂದೆ ನಾನು ಮೊಟ್ಟಮೊದಲು ಇಂತಹ ಶೇಣಿಯವರನ್ನು ಕಂಡೆ. ಹೇಗೆ ಕಂಡೆ? ಅದೂ ಒಂದು ಸ್ವಾರಸ್ಯದ ವಿಷಯವೇ.

ಒಮ್ಮೆ ಧಾರೇಶ್ವರ ತೇರು, ಜಾತ್ರೆಗೆ ನಾನೂ ಹೋಗಿದ್ದೆ. ಆಗ ನನ್ನ ಹತ್ತಿರ ಎಂಟಾಣೆ ಇತ್ತು. ಪೇಟೆ ಎಲ್ಲಾ ಸುತ್ತಿದೆ. ನೋಡಿದೆ. ಎಂಟಾಣೆ ಹಾಗೆಯೇ ಉಳಿಯಿತು. ಆದಿನ ಆಟವೂ ಇತ್ತು ಆಟ ನೋಡಲೇಬೇಕು ಎಂದೆನಿಸುತ್ತಿತ್ತು. ಟೆಂಟಿನ ಆಟ. ಎಂಟಾಣೆ ಸಾಲದು, ಏನು ಮಾಡೋಣ, ಯಾರಿಗೂ ಕಾಣದಂತೆ ಟೆಂಟಿನ ಆಡಿಯಿಂದ ನುಸುಳಿ ಟಿಕೆಟ್ ಪಡೆದವರ ಗತ್ತಿನಲ್ಲಿ ನೆಲಕ್ಕೆ ಕುಳಿತು ಆಟ ನೋಡತೊಡಗಿದೆ. ಆಟ- ಭಕ್ತ ಪ್ರಹ್ಲಾದ, ಹಿರಣ್ಯ ಕಶ್ಯಪುವಾಗಿ ರಂಗಸ್ಥಳ ಪ್ರವೇಶಿಸಿದ ಶೇಣಿಯವರನ್ನು ನಾನು ಮೊಟ್ಟಮೊದಲಬಾರಿಗೆ ನೋಡಿದೆ. ಅವರಿಗೆ ಆ ವೇಷ ಒಪ್ಪುತ್ತಿತ್ತು. ಸಣ್ಣ ಪ್ರಾಯದ ನನಗೂ ಅವರ ವೇಷ ಹಿಡಿಸಿತು. ಅವರು ಹೇಳಿದ್ದೆಲ್ಲ ನನಗೆ ಅರ್ಥವಾಗಲಿಲ್ಲ. ಆದರೆ ಅದನ್ನು ಅರ್ಥಮಾಡಿಕೊಳ್ಳಬೇಕೆಂದು ನನಗೆ ಅನ್ನಿಸಿತು. ನಾನೂ ಅರ್ಥ ಹೇಳಬೇಕು ಎಂಬ ತುಡಿತವನ್ನು ಶೇಣಿಯವರು ಹೆಚ್ಚಿಸಿದರು.

ವರ್ಷಕ್ಕೆ ಒಂದೆರಡು ಬಾರಿಯಾದರೂ ಅವರನ್ನೂ ನೋಡುವ ಅವಕಾಶವನ್ನು ನಾನು ತಪ್ಪಿಸಿಕೊಳ್ಳಲಿಲ್ಲ. ಮುಂದೆ ನನ್ನ ವಿದ್ಯಾಭ್ಯಾಸಕ್ಕಾಗಿ ನಾನು ಬೆಂಗಳೂರು ಸೇರಿದೆ. ನಮ್ಮ ರಾಮಚಂದ್ರಾಪುರಮಠದ ಶ್ರೀಗಳ ಚಾತುರ್ಮಾಸವ್ರತ ಗಿರಿನಗರದಲ್ಲಿ ನಡೆಯುತ್ತಿತ್ತು. ಕಡತೋಕರೆಂದೇ ಪ್ರಸಿದ್ಧರಾದ ಮಂಜುನಾಥ ಭಾಗವತರು ಅಲ್ಲಿಗೆ ಬಂದಿದ್ದರು. ಇದರ ವ್ಯವಸ್ಥೆಯನ್ನೆಲ್ಲ ಬಿ. ಕೃಷ್ಣ ಭಟ್ಟರು ಮಾಡಿದ್ದರು ಭಾಗವತರಿಗೆ ನನ್ನ ಮೇಲಿರುವ ಪ್ರೀತಿಯೇ ಕಾರಣವಾಗಿ ಆ ದಿನದ ತಾಲ ಮದ್ದಳೆಯಲ್ಲಿ ಒಂದು ಸಣ್ಣ ಅವಕಾಶ ದೊರೆಯಿತು. ಶೇಣಿಯವರ ಇದಿರು ಅರ್ಥಹೇಳುವುದೆಂದರೆ ಸಣ್ಣ ಸಂಗತಿಯೇ? ಆ ದಿನದ ಪ್ರಸಂಗ ರಾವಣ ವಧೆ, ಪ್ರಸಂಗ ಪ್ರಾರಂಭವಾಯಿತು. ನನ್ನ ಹೆಸರನ್ನೂ ಹೇಲಿದರು. ರಾವಣನಿಗೆ ಯುದ್ಧವಾರ್ತೆಯನ್ನು ಹೇಳುವ ದೂತನ ಪಾತ್ರ ನನ್ನದು. ಪಂಡಿತ ಪೆರ್ಲ ಕೃಷ್ಣ ಭಟ್ಟರದು

ರಾಮನ ಪಾತ್ರ ಶೇಣಿಯವರ ರಾಮಣ! ನಮ್ಮ ಹಿರಿಯ ಗುರು ಪೀಠದ ಸನ್ನಿಧಾನ!! ಮಿಂಚು ಗುಡುಗುಗಳ ಅಟ್ಟಹಾಸದಲ್ಲಿ ರಾವಣನ ಮಹೋನ್ನತ ಚಿತ್ರಣ ನಡೆದಿದೆ. ರಾವಣನ ಬ್ರಾಹ್ಮಣ್ಯದ ಸೂಕ್ಷ್ಮಾತಿಸೂಕ್ಷ್ಮಗಳನ್ನೂ ಶೇಣಿಯವರು ತೆರೆದಿಟ್ಟಿದ್ದಾರೆ. ನನ್ನ ಪ್ರವೇಶ ಪದ್ಯ ಬಂದೇ ಹೋಯಿತು. ಅಯ್ಯೋ ಏನು ಹೇಳಲಿ. ಹೌದು ನಿಜಕ್ಕೂ ಬೆಂಕಿಗೆ ಹಾರುವ ಅನುಭವವಾಯಿತು. ಬೇರೆ ವಿಧಿಯಿಲ್ಲ. ಎತ್ತರದ ದನಿಯಲ್ಲಿ ಭಳಿರೇ ರಕ್ಕಸಕುಲೋದ್ಧಾರಕ ಎಂದುಬಿಟ್ಟೆ, ಅಷ್ಟರಲ್ಲಿಯೇ ಅವರಿಂದ ಪ್ರಶ್ನೆಯ ಬಾಣ ಬಂದಿತು ಇದನ್ನು ನಿನಗೆ ಯಾಗು ಹೇಳಿಕೊಟ್ಟರು? ಆಗ ನಾನು-ಇಲ್ಲ, ಇದು ನನ್ನ ಸ್ವಂತ ಅನಿಸಿಕೆ, ನನಗೆ ತೋಚಿದ್ದನ್ನು ಹೇಳಿದ್ದೇನೆ ಎಂದೆ. ಅವರು ಕೂಡಲೇ- ಶಹಬ್ಬಾಸ್, ಮೆಚ್ಚಿದೆ ನಿನ್ನ ಪ್ರಾಮಾಣಿಕತೆಗೆ, ನೀನು ನಮಸ್ಕಾತ ಮಾಡದಿದ್ದರೂ ಚಿಂತೆಯಿಲ್ಲ ಎಂದರು, ಜನ ಚಪ್ಪಾಳೆ ತಟ್ಟಿದರು. ಪ್ರವೇಶದಲ್ಲಿ ರಾವಣನಿಗೆ ನಮಸ್ಕರಿಸಬೇಕು ಎಂಬ ಸಾಮಾನ್ಯ ಜ್ಞಾನ ನನಗಿತ್ತಾದರೂ ಆದು ನನಗೆ ಮರೆತೇ ಹೋಗಿತ್ತು. ನಾನು- ಸ್ವಾಮೀ ನಾನು ನಮಸ್ಕರಿಸದೆ ಇರುವುದಕ್ಕೆ ಕಾರಣವಿದೆ ಎಂದೆ. ಏನು ಕಾರಣ? ಎಂದರು. ನಾನು ರಾಮನನ್ನು ಕಂಡುಬಂದೆ. ಸಮಸ್ಕರಿಸಬೇಕಾದ ಸ್ಥಾನ ಅದೊಂದೇ ಅಂತ ಅನ್ನಿಸಿ ಸನ್ನಿಧಾನಕ್ಕೆ ವರದಿಮಾಡಲು ನಾನು ಬಂದಿದ್ದೇನೆ ಎಂದು ಹೇಳಿದೆ.-ಯೆಲಾ ಬಡತಾಯಿಮಗನೆ, ನೀನು ರಾಮನಲ್ಲಿ ಏನು ಕಂಡೆ? ಎಂದು ಆರ್ಭಟಿಸಿದರು. ಆಗ ಗೂಢಬ್ರಹ್ಮನಲ್ಲಿ ಮಾಡದಿರು ಕಲಹವನು ಈ ಪದ್ಯ ಕಡತೋಕರ ಕಂಚಿನಕಂಠದಿಂದ ಮಿಂಚಿತು. ನಾನು ಬದುಕಿದೆ. ಪರಬ್ರಹ್ಮನೇ ರಾಮನಾಗಿ ಅವತರಿಸಿದ್ದಾನೆ ಇತ್ಯಾದಿ ಇತ್ಯಾದಿ ಹೇಳಿದೆ. ಅವರು-ಅಯ್ಯೋ ಇಲ್ಲಿಗೂ ಬಂತೇ ನನ್ನ ಸ್ಥಿತಿ ಎಂದು ಮುಂದುವರಿಸಿದರು. ಬೆಳಿಗ್ಗೆ ಗುರುಗಳ ಆಶೀರ್ವಾದ ಸಿಕ್ಕಿತು. ಶೇಣಿಯವರು ನನ್ನ ಅರ್ಥದಿಂದ ಸಂತೋಷಗೊಂಡಿದ್ದರು. ಪೆರ್ಲದವರೂ ದನಗೂಡಿಸಿದ್ದರು. ಒಮ್ಮೆ ವಿರಾಟ ಪರ್ವದ ಉತ್ತರನ ದೂತನ ಅರ್ಥಹೇಳು ಎಂದರು. ನನಗೆ ಎಲ್ಲಿಲ್ಲದ ಸಂತೋಷವಾಯಿತು. ಈ ಅವಕಾಶಮಾಡಿಕೊಟ್ಟ ಕಡತೋಕರನ್ನು ನಾನು ಇಂದಿಗೂ ಸ್ಮರಿಸುತ್ತೇನೆ.

ಈ ಮಧ್ಯೆ ಪಲ್ಲವೀ ಪ್ರಕಾಶನ ಕುಮಟಾ- ಪ್ರಕಾಳಕ್ಕೆ ತಂದ ಎಂಟು ಹತ್ತು ಧ್ವನಿಮುದ್ರಿಕೆಗಳು ಅಪರೂಪದ ಕೊಡುಗೆಗಳಾಗಿ ಹೊರಬಂದವು. ಅದರಲ್ಲಿ ಹರಿಶ್ಚಂದ್ರವಿಜಯ ನಮ್ಮ ಮೊದಲ ಕೃತಿ, ಕಡತೋಕರು ಮತ್ತು ನೆಟ್ಟೂರುಭಾಗವತರು ಹಾಡಿದ್ದಾರೆ. ಶೇಣಿಯವರ ಹರಿಶ್ಚಂದ್ರ ನನ್ನ ಚಂದ್ರಮತಿ, ಮಹಾಬಲ ಹೆಗಡೆಯವರ ವಿಶ್ವಾಮಿತ್ರ ಪದ್ಯಗಳನ್ನು ಒಂದು ಘಂಟೆಗೆ ನಾನೇ ಸಂಪಾದಿಸಿದ್ದೆ. ಒಂದು ಘಂಟೆಯ ಕಿರಿಯ ವ್ಯಾಪ್ತಿಯಲ್ಲಿ ಅದು ರಾಘವಾಂಕನ ಕಾವ್ಯಕ್ಕಿಂತ ಒಂದು ಹೆಜ್ಜೆ ಮುಂದಿಟ್ಟು ಹೊರಬಂದಿದೆ. ರಾಜಕುಮಾರನ ಕೊಲೆಯ ಆಪಾದನೆ ಚಂದ್ರಮತಿಯ ಮೇಲೆ ಬಂದಿದೆ, ಅವಳ ಶಿರಚ್ಛೇದನಕ್ಕೆ ಹರಿಶ್ಚಂದ್ರ ಸಿದ್ಧನಾಗಿದ್ದಾನೆ. “ಚಂದ್ರಮತೀ ನಾನು ನಾನಾಗಿ ನಿನಗೆ ಕೇಳಲೇಬೇಕಾದ ಪ್ರಶ್ನೆಯಿದೆ”

ಎಂದರು ನನಗೆ ದಿಗಿಲಾಯಿತು-ಏನು ಕೇಳಿಬಿಡುತ್ತಾರೆಯೋ ಎಂದು. ಅತ್ಯಂತ ಭಾವುಕರಾಗಿ ಅವರು ಕೇಳಿದರು."ಚಂದ್ರಮತೀ, ಹಣದಾಸೆಗಾಗಿ ನೀನು ಕೊಲೆ ಮಾಡಿದೆಯೇನೆ?" ನಾನೆಂದೆ ಅದನ್ನು ಕಾಲವೇ ನಿರ್ಧರಿಸಲಿ, ನಿಮ್ಮ ಕರ್ತವ್ಯ ನೀವು ಮಾಡಿ. ಈ ಮಾತಿನಿಂದ ಅವರ ಅರ್ಥ ಉತ್ತುಂಗಕ್ಕೆ ಏರಿತು. ಅಂತಹ ಹರಿಶ್ಚಂದ್ರನನ್ನು ನಾನು ಕೇಳಲೇ ಇಲ್ಲ. ನನ್ನ ಅರ್ಥಗಾರಿಕೆಯಿಂದ ಅವರು ಸಂತೋಷಗೊಂಡಿದ್ದರು. ಅರ್ಥ ಹೇಲುವವರು ಹೀಗೆ ಹೇಆಳಬೇಕು, ಮಾತು ಧ್ವನಿಪೂರ್ಣವಾಗಿರಬೇಕು. ಎಂದು ಬೆನ್ನು ತಟ್ಟಿದ್ದರು.

ಅವರೊಂದಿಗೆ ನಾನು ಕೊನೆಯ ಅರ್ಥ ಹೇಳಿದ್ದು ಗೇರುಸೊಪ್ಪೆಯಲ್ಲಿ. ಬಂಗಾರಮಕ್ಕಿ ಅತಿರುದ್ರ ಮಹಾಯಾಗದ ಕಾರ್ಯಕ್ರಮಕ್ಕೆ ಅವರನ್ನು ಕರೆದುಕೊಂಡುಬರುವ ಜವಾಬ್ದಾರಿ ನನ್ನ ಮೇಲೆ ಬಿತ್ತು. ಧರ್ಮದರ್ಶಿಗಳಾದ ಶ್ರೀ ಮಾರುತಿ ಭಟ್ಟರು-ನಾನು ಹೋದರೆ ಶೇಣಿಯವರು ಖಂಡಿತಾ ಬರುತ್ತಾನೆ ಎಂಬ ನಂಬಿಕೆಯಿಂದ ಕಳುಹಿಸಿಕೊಟ್ಟಿದ್ದರು. ನಾನು ದಾಸನಿವಾಸಕ್ಕೆ ಹೋದೆ. ಮೊದಲೇ ? ಫೋನು ಮಾಡಿದ್ದೆ. ಹೋಗುತ್ತಿದ್ದಂತೆಯೇ "ನಾನು ಈಗೆಲ್ಲ ಅರ್ಥಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ದೇಹ ನನ್ನ ಮಾತನ್ನು ಕೇಳುವುದಿಲ್ಲ" ಎಂದು ಅವರಾಗಿಯೇ ಹೇಲಿ ಮುಗಿಸಿದರು. ಅದು ಸತ್ಯವೂ ಆಗಿತ್ತು. ಅದರ ಹಿಂದೆ ಇನ್ನಾವ ಕಾರಣವೂ ಇರಲಿಲ್ಲ. ಇವರು ಬರಲಾರರು ಎಂದು ನನಗೆ ಖಚಿತವಾಗಿತ್ತು. ಹಾಗೆಯೇ ಅದು ಇದು ಸುದ್ದಿ ಹೇಳಿ ಕೇಳಿ, ಊಟ ಮುಗಿಸಿದೆವು. ರಾತ್ರಿ ಹನ್ನೆರಡಾಯಿತು ಇನ್ನು ಮಲಗೋಣ ಎಂದರು. ನಾನು ನನ್ನ ಕಿಸೆಯಿಂದ ಬಂಗಾರಮಕ್ಕಿ ಹನುಮಂತನ ಪ್ರಸಾದವನ್ನು ತೆಗೆದು ಕೊಟ್ಟೆ ಅವರು ನಾಸ್ತಿಕರಲ್ಲದಿದ್ದರೂ ಹಾಗೆಲ್ಲ ಕಂಡ ಕಂಡ ದೇವರಿಗೆ ಅಡ್ಡಬೀಳುವವರಲ್ಲ ಆ ದಿನ ಏನೂ ಮಾತನಾಡದೇ ಪ್ರಸಾದವನ್ನು ಧರಿಸಿದರು.-ನೋಡೋಣ ನಿನ್ನ ಮಾರುತಿ ನನಗೆ ಶಕ್ತಿ ಕೊಟ್ಟರೆ ಬರುತ್ತೇನೆ, ಯಾವುದಕ್ಕೂ ಬೆಳಿಗ್ಗೆ ಹೇಳುತ್ತೇನೆ ಎಂದರು. ಬೆಳಿಗ್ಗೆ ಬರಲು ಒಪ್ಪಿದರು! ಸಕಾಲಕ್ಕೆ ಬಂದು ತಲುಪಿದರು.

ರಾಮನೇ ದಾಸನಾಗಿದ್ದಾನೆ ಎನ್ನುವ ಮೂಲಕ ಹನುಮ ರಾಮರ ಅದ್ವೈತವನ್ನು ಜನಮನಕ್ಕೆ ಬಿಂಬಿಸಿದರು. ನಂತರ ಚೂಡಾಮಣಿ ಪ್ರಸಂಗದಲ್ಲಿ ಹನೂಮಂತನ ಅರ್ಥ ಹೇಳಿದರು. ನಾನು ಸೀತೆಯ ಅರ್ಥ ಹೇಳಿದೆ. ವಿಶೇಷವೆಂದರೆ ಶೇಣಿಯವರೊಂದಿಗೆ ನಾನು ಹೇಳಿದ ಮೊದಲ ಅರ್ಥದ ಸಂದರ್ಭದಲ್ಲಿಯೂ ನಮ್ಮ ಗುರುಪೀಠದ ಆಶೀರ್ವಾದ ನಮಗಾಗಿತ್ತು ಹಾಗೆಯೇ ಆ ಕೊನೆಯ ದಿನವೂ ನಮ್ಮ ಆಚಾರ್ಯ ಪೀಠ ನಮ್ಮನ್ನು ಆಶೀರ್ವದಿಸಿತ್ತು. ಇದೊಂದು ಯೋಗಾಯೋಗವಲ್ಲದೆ ಮತ್ತಿನ್ನೇನು?!

೧೯೯೦ ರ ಸುಮಾರಿಗೆ ಒಮ್ಮೆ ಕೊಲ್ಲೂರು ಮೂಕಾಂಬಿಕೆಯನ್ನು ನನ್ನ ಕನಸಿನಲ್ಲಿ ಕಂಡೆ! ಯಾರೋ ಆರತಿ ಮಾಡುತ್ತಿದ್ದಾರೆ! ಅವರು ಆರತಿಯನ್ನು ತಂದು ನನ್ನ ಮುಂದೆ

ಹಿಡಿದರು. ಅವರು ಬೇರೆ ಯಾರೂ ಆಗಿರಲಿಲ್ಲ -ಶೇಣಿಯವರೇ ಆಗಿದ್ದರು!! ಎಚ್ಚರವಾದಾಗ ನನಗೆ ಆ ಕನಸು ವಿಚಿತ್ರವೆನಿಸಿತು. ಯಾರಲ್ಲಿಯೂ ಇದನ್ನು ನಾನು ಚರ್ಚಿಸುವ ಗೊಡವೆಗೆ ಹೋಗಲಿಲ್ಲ. ಶೇಣಿಯವರ ಕುರಿತು ಏನಾದರೂ ಕೆಲಸ ಮಾಡಬೇಕು ಎಂಬ ಸ್ಫೂರ್ತಿ ಈ ಕನಸಿನಿಂದ ನನಗೆ ಬಂದಿತು. ಒಂದುಯೋಜನೆ ಹೊಳೆಯಿತು. ಅದರ ಪ್ರಾರಂಭಿಕ ಬರವಣಿಗೆಯನ್ನು ಸಿದ್ಧಪಡಿಸಿಕೊಂಡು ಶೇಣಿಯವರನ್ನು ಕಾಣಲು ಮಂಗಳೂರಿಗೆ ನಡೆದೆ. ಆಗ ಅವರು ಗಣೇಶ ಪ್ರಸಾದ್ ಹೋಟಲಿನಲ್ಲಿ ತಂಗುತ್ತಿದ್ದರು. ಅವರಿಗಾಗಿಯೇ ಒಂದು ಕೋಣೆ ಸದಾ ಕಾದಿರುತ್ತಿತ್ತು. ಪಕ್ಕನೆ ಅವರಿಗೆ ನನ್ನ ಪರಿಚಯವಾಗಲಿಲ್ಲ. ನಾನು ನನ್ನ ಪರಿಚಯ ಮಾಡಿಕೊಂಡೆ. ಅವರಿಗೆ ಸಂತೋಷವಾಯಿತು. ನನ್ನನ್ನು ತಮ್ಮ ಅತಿಥಿ ಎಂಬುದನ್ನು ಅವರು ಮರೆಯಲಿಲ್ಲ. ನನ್ನ ಕನಸನ್ನೂ ಯೋಜನೆಯನ್ನೂ ತಿಳಿಸಿದೆ. ಅದಕ್ಕೆ ಬೇಕಾದ ಪರಿಕರಗಳನ್ನು ಸಂಗ್ರಹಿಸಲು ಅವರೇ ದಾರಿ ತೋರಿದರು ಶ್ರೀಮದ್ ಎಡನೀರು ಮಠಕ್ಕೂ ಕಳುಹಿಸಿಕೊಟ್ಟರು. ಮೊಟ್ಟಮೊದಲು ಅವರ ಮನೆಗೆ ನಾನು ಹೋದಾಗ ಯಾರದೋ ಮನಗೆ ನಾನು ಹೋಗಿದ್ದೇನೆ ಎಂತ ನನಗೆ ಅನ್ನಿಸಲೇ ಇಲ್ಲ. ಆ ಮನೆಯವರ ಪ್ರೀತಿ ವಿಶ್ವಾಸ ಇಂದಿಗೂ ಹಾಗೆಯೇ ಇದೆ.

ಪಂಸಂಗ ದರ್ಶನ - ಶೇಣಿರಾಮಾಯಣವನ್ನು ನಾನು ಸಿದ್ಧಪಡಿಸಿ ಪ್ರಕಟಿಸಿದೆ. ತನ್ನ ಶೈಲಿಯ ಪ್ರಾಮಾಣಿಕ ದಾಖಲೆ ಇದು ಎಂಬುದನ್ನು ಅವರು ಮನಗಂಡಿದ್ದರು. ನಿನ್ನದು ಅಪರೂಪದ ಸಾಧನೆ, ಮುಂದಿನವರಿಗೆ ಉಪಕಾರವಾದೀತು ಎಂದು ನನ್ನನ್ನು ಹರಸಿದರು.

ಈ ಉತ್ಸಾಹದಿಂದ ಶೇಣಿಸಾಹಿತ್ಯ ಸಂಗ್ರಹ ಎಂಬ ಯೋಜನೆಯೊಂದನ್ನು ಕನ್ನಡ ವಿಶ್ವವಿದ್ಯಾಲಯದ ಮುಂದಿರಿಸಿದೆ. ಒಪ್ಪಗೆ ದೊರೆಯಿತು. ಆ ಕಾರಣಕ್ಕಾಗಿ ಶೇಣಿಯವರ ಮನೆಯಲ್ಲೇ ವಾಸ್ತವ್ಯ ಹೂಡಿದೆ. ಅವರು ಹೇಳಿದೆ ಇದ್ದ ಪಾತ್ರ ಪ್ರಸಂಗಗಳನ್ನು ಧ್ವನಿಮುದ್ರಿಸಿಕೊಂಡು ಒಂದು ಕೃತಿಯನ್ನು ಸಿದ್ಧಪಡಿಸಿಕೊಟ್ಟೆ. ಇನ್ನೂರಕ್ಕೂ ಹೆಚ್ಚು ಧ್ವನಿಮುದ್ರಿಕೆಗಳನ್ನು ಸಲ್ಲಿಸಿದೆ. ಆದರೆ ಆ ಕೃತಿ ಪ್ರಕಟವಾಗಲಿಲ್ಲ. ಆದರ ಪ್ರತಿಯೂ ನನ್ನಲ್ಲಿ ಇರಲಿಲ್ಲ. ಇದು ನಮಗಿಬ್ಬರಿಗೂ ದುಃಖದ ಸಂಗತಿಯಾಗಿತ್ತು.

ಒಮ್ಮೆ ಶೇಣಿಯವರು ಧರಿಸುತ್ತಿದ್ದ ಅಪಾರ ಬೆಲೆಯ ಒಡವೆಗಳನ್ನು ಯಾರೋ ಅಪಹರಿಸಿದರು. ಕಳ್ಳ ಯಾರೆಂಬುದು ಅವರಿಗೆ ಗೊತ್ತು. ಆದರೂ ಅದಕ್ಕಾಗಿ ಅವರು ದುಃಖಿಸಲಿಲ್ಲ. ಪುನಃ ಅಷ್ಟನ್ನೂ ಮಾಡಿಸಿಕೊಂಡರು. ಪೋಲೀಸರಿಗೂ ದೂರು ಕೊಡಲಿಲ್ಲ. ಈ ನ್ಯಾಯದಂತೆ ನಾನು ಕನ್ನಡ ವಿಶ್ವವಿದ್ಯಾಲಯದಲ್ಲಿ ಕಳೆದುಹೋದ ಕೃತಿಗಾಗಿ ಮರುಗದೇ ಮತ್ತೆ ಶೇಣಿಸಾಹಿತ್ಯವನ್ನು ಸಂಗ್ರಹಿಸಲು ಉತ್ಸುಕನಾದೆ.

**೬. ಶೇಣಿಭಾರತ :**

ಶೇಣಿ ಭಾರತವೆಂದರೆ 'ಯಕ್ಷಗಾನ ಕಲಾನಿಧಿ'. ಹರಿದಾಸ, ಡಾ|| ಶೇಣಿ ಗೋಪಾಲಕೃಷ್ಣ ಭಟ್ಟರು. ಮಹಾಭಾರತ ಪ್ರಸಂಗಗಳಲ್ಲಿ ಅಲ್ಲಲ್ಲಿ ಹೇಳಿದ ಅರ್ಥವನ್ನು ಸಂಗ್ರಹಿಸಿ ನಿರ್ಮಿಸಿದ ಆಶುಕಾವ್ಯ.

ಮೊದಲನೆಯದಾಗಿ ಇದನ್ನು ಸಮಗ್ರಭಾರತ ಎಂದು ಯಾರೂ ತಿಳಿಯಕೂಡದು. ಮಹಾಭಾರತ ನೂರಾರು ಪ್ರಸಂಗಗಳಲ್ಲಿ ೧೬ ಪ್ರಸಂಗಗಳ ೧೯೨ ಪದ್ಯಗಳ ವ್ಯಾಖ್ಯಾನ ಮಾತ್ರ ಇಲ್ಲಿ ಲಭ್ಯ. ೩೩ ಅಧ್ಯಾಯಗಳಲ್ಲಿ ಮಹಾಭಾರತದ ೧೭ ಪಾತ್ರಗಳು ಇಲ್ಲ ಮಾತನಾಡುತ್ತಿವೆ. ಇದಿರಾಳಿಯ ಮಾತುಗಳನ್ನು ದಾಖಲಿಸಲು ಸಾಧ್ಯವಾಗಿಲ್ಲ. ದೊಡ್ಡ ಸಾಮಗರು, ರಾಮದಾಸ ಸಾಮಗರು, ಕುಂಬಳೆ ಸುಂದರ ರಾಯರು, ಪ್ರಭಾಕರ ಜೋಶಿ, ವಾಸುದೇವ ಸಾಮಗರು ನಮ್ಮ ಉತ್ತರಕನ್ನಡದ ಖ್ಯಾತನಾಮರಾದ ಬುಚ್ಚನ್ ಶಾಸ್ತ್ರಿಗಳು, ಕಟ್ಟೆ ಪರಮೇಶ್ವರ ಭಟ್ಟರು ಇವರೆಲ್ಲರ ಅರ್ಥವನ್ನು ಇದರೊಂದಿಗೆ ದಾಖಲಿಸಿದ್ದರೆ ಈ ಪುಸ್ತಕದ ಸ್ವರೂಪ ಇನ್ನೂ ಬೇರೆಯಾಗುತ್ತಿತ್ತು. ಅದು ಸಾಧ್ಯವಾಗಿಲ್ಲ ಎಂಬ ಕೊರಗು ನನಗಿದೆ.

ಆದರೆ ಹೊಸದಾಗಿ ಅರ್ಥಧಾರಿಗಳಾಗಲು ಹೊರಟವರಿಗೆ ಹೊಸ ಹೊಸದಾಗಿ ಅರ್ಥ ಹೇಳಬೇಕು ಎನ್ನುವವರಿಗೆ ಇದು ಒಂದು ಕೈದೀವಿಗೆ ವೇಷಧಾರಿಗಳಿಗೆ, ವ್ಯಾವಹಾರಿಕರಿಗೆ, ವೇದಾಂತಿಗಳಿಗೆ ಹಲವು ಬಗೆಯಿಂದ ಇದೊಂದು ಉಪಯುಕ್ತ ಗ್ರಂಥ. ಕನ್ನಡ ಭಾಷೆಯ ರಾಚನಿಕ ವೈವಿಧ್ಯಗಳನ್ನೂ ಅದರ ಆಶು ವೈಭವವನ್ನೂ ನೋಡಬಯಸುವವರಿಗೆ ಇದು ಸರಸ್ವತಿಯ ಕಂಠಾಭರಣ.

ಸಿಂಹಾಸನದ ಘನತೆಯನ್ನು ಮುಂದಿಟ್ಟುಕೊಂಡು ನನ್ನ ಮಹಾರಾಣಿಯಾಗಿ ಬಂದವಳೇ ಹೆತ್ತಮಕ್ಕಳನ್ನೆಲ್ಲಾ ನೀರಿಗೆ ಬೀಸಾಡ್ದಾಗ ವಿಚಾರಣೆ ಮಾಡುವ ಶಕ್ತಿಯೇ ನನಗಿಲ್ಲದೇ ಹೋಯ್ತು ಎಂದು ಆತ್ಮವಿಮರ್ಶೆಗೆ ತೊಡಗುವ ಹಾಗೂ ಮತ್ತೊಮ್ಮೆ ಚಕ್ರವರ್ತಿತ್ವದ ಅಧಿಕಾರದ ಅಪವ್ಯಯ ಮಾಡಬಾರದೆಂದು ಮದುವೆಯ ಹುಚ್ಚು ಬೇಡವಂದು, ತೀರ್ಮಾನಿಸಿ ಅರಮನೆಗೆ ಹಿಂದಿರುಗು ಶಂತನು. ಇಂತಹ ಸಾಮ್ರಾಟರ ಜಾತ್ಯಾತೀತ ತತ್ವದ ಡೋಂಗಿತನವನ್ನು ಜಾಲಾಡುತ್ತಾ ದಲಿತರ ಉದ್ಧಾರಕ್ಕಾಗಿ ಬೇಕಾದ ದಲಿತರ ತ್ಯಾಗವನ್ನು ಎಚ್ಚರಿಸುವ ಒಬ್ಬ ಸಾಲ್ವ!, ಒಬ್ಬ ಅತ್ಯುತ್ತಮ ನ್ಯಾಯವಾಗಿಯಾಗಿ ನ್ಯಾಯಧೀಶನನ್ನು ಮೆಚ್ಚಿಸುವ ಭೀಷ್ಮ, ಒಬ್ಬ ಬ್ರಾಹ್ಮಣನ ಜನಿವಾರದ ಪರಿಶುದ್ಧತೆಗೆ ಬೇಕಾಗಿ ಬ್ರಾಹ್ಮಣ್ಯವನ್ನು ರಕ್ಷಿಸುವ ಕ್ಷಾತ್ರವನ್ನು ದುರುಪಯೋಗ ಮಾಡಬಾರದೆಂಬ ಕವಿಮಾತನ್ನು ಹೇಳುವ ಪಾಂಚಾಲ ರಾಜಕಾರಣಿಯ ಸಮಯಸಾಧಕತನ, ನಾವೇ ಅನಾಥರು ಇನ್ನೊಬ್ಬಳನ್ನು ನಮ್ಮ

ಕುಟುಂಬದಲ್ಲಿ ಅನಾಥೆಯನ್ನಾಗಿ ಸೇರಿಸುವ ಮನಸ್ಸಿಲ್ಲವೆಂಗ ವಿವೇಕಿ ಭೀಮ, ಸ್ವಚ್ಛಂದ ಪ್ರವೃತ್ತಿಯನ್ನು ತೋರಿಸದ ನಮ್ಮನ್ನು ಗೋಪಾಲಕೃಷ್ಣಸ್ವಾಮಿ ಕೈ ಬಿಡಲಿಕ್ಕಿಲ್ಲವೆಂಬ ನಂಬಿಕೆಯ ಮೇಲೆ ರಾಜಸೂಯವನ್ನು ಸಂಕಲ್ಪಿಸುವ ಧರ್ಮಜ್ಞನಾದ ಧರ್ಮರಾಯ, ನಿಮ್ಮ ಹೆಣವನ್ನು ಕೂಡ ನಿಮ್ಮ ಕುಟುಂಬದವರಿಗೆ ಸಿಕ್ಕದ ಹಾಗೆ ಅಜ್ಞಾತವಾಗಿ ಸುಟ್ಟು ಬೂದಿ ಮಾಡುತ್ತೇನೆ ಎಂದು ಕೃಷ್ಣ ಭೀಮಾರ್ಜುನರನ್ನು ಗದರಿಸುವ ಹಣ್ಣು ತಲೆಯ ರಾಜಕಾರಣಿ ಮಾಗಧ, ಕಾಮುಕನ ಕಥೆಯಲ್ಲಿ ಆಸಕ್ತಯನ್ನಿಟ್ಟು ಹೊಗಳುವ ಭೀಷ್ಮನ ನೈಷ್ಠಿಕ ಬ್ರಹ್ಮಚರ್ಯವನ್ನು ಹೀಗಳೆಯುವ ಶಿಶುಪಾಲ, ಶಿವೋಹಂ ಎಂದು ಶಿವನನ್ನು ವಲಿಸುವ ಅರ್ಜುನ, ಪಾತ್ರಪಾತ್ರ ವಿಚಾರವನ್ನು ಬರೆದು ನೋಡಿ ಧರ್ಮಸಾಮ್ರಾಜ್ಯದ ಕೈಂಕರ್ಯಕ್ಕಾಗಿ ಪಾಶುಪತವನ್ನು ನೀಡುವ ಶಿವ, ಸ್ತ್ರೀಜಿತನಾದ ಒಬ್ಬ ವಿಕ್ರಮಾರ್ಜುನ, ಪ್ರಾಯೋಗಿಕ ಅಭ್ಯಾಸ ಮಾಡದೆ ಕೇವಲ ಸಿದ್ಧಾಂತಶಿಖಾಮಣಿಯಾದ ಭೂಮಿಂಜಯ, ಕೃಷ್ಣನನ್ನು ಬಳಗು ಮಾಡಲು ಬಂದ ಕೌರವ, ಕೌರವನನ್ನು ಹತ್ತಿರ ಮಾಡಿಕೊಳ್ಳುಬೇಕಾದರೆ ನಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ದೂರವಾಗಬಾರದಲ್ಲ ಎಂದು ಧರ್ಮರಾಯನ ನೀತಿಯನ್ನು ಖಂಡಿಸುವ ಕೌರವನನ್ನು ಸರಿದಾರಿಗೆ ತರಲಿಕ್ಕೆ ಸಾಧ್ಯವಿದ್ದರೆ ಪಟ್ಟ ಅವನಿಗೇ ಎನ್ನುವ ಶಾಂತಿದೂತ ಶ್ರೀಕೃಷ್ಣ, ಕೆಟ್ಟ ಮಕ್ಕಳಿರಬಹುದು ಕೆಟ್ಟ ತಾಯಂದಿರಿರುವದಿಲ್ಲವಂದೆ ತನ್ನಲ್ಲಿ ತಾಯ್ತನವನ್ನು ಆರೋಪಿಸಿಕೊಂಡು ಕೌರವನ ರಕ್ಷಣೆಗೆ ನಿಲ್ಲುವ ಭೀಷ್ಮ, ಅವತಾರ ರಹಸ್ಯವನ್ನು ಕೆದಕುವ ಭೀಷ್ಮನಿಗೆ ಉತ್ತರಿಸುವ ಕೃಷ್ಣ, ಧನುರ್ವೇದ ಬೇಟೆಯಾಡ್ಲಿಕ್ಕೆ ಇದ್ದುದಲ್ಲವೆನ್ನುವ ದ್ರೋಣ, ಈ ಪಕ್ಷ ನಾಶವಾಯ್ತಲ್ಲಿವರೆಗೂ ಇವ ಇಲ್ಲಿ ಸಕ್ರಿಯ ಸದಸ್ಯನಾಗಿದ್ದಾನೆ ಎನ್ನುವ ಶಲ್ಯ, ಏಳುಮಕ್ಕಳನ್ನು ನೀರಿಗೆ ಎಸೆದ ಮಹಾರಾಣಿಯೊಬ್ಬಳು ಇತಿಹಾಸದಲ್ಲಿ ಜೀವಂತ ವ್ಯಕ್ತಿಯಾಗಿ ಉಳಿದಂತಹ ಪರಂಪರೆಯಲ್ಲಿ ಈ ಒಂದು ಮಗುವನ್ನು ನೀರಿಗೆ ಬಿಟ್ಟವಳು ಯಾರು ಅಂತ ಕೇಳುವವರು ಯಾತು? ಎಂದು ಹೇಳುವ ಅಸಹಾಯಕ ಕರ್ಣ, ಒಂದ್ ಐದುಮಂದಿ ಪಾಂಡವರಿಗಾಗದವನಾದ ನಾನು ರಾಷ್ಟ್ರವನ್ನಾಳುವ ಚಕ್ರವರ್ತಿಯಾಗುವದಕ್ಕೆ ತಕ್ಕವನಲ್ಲ ಅಂತ ಆಗುವದಾದರೂ ಹೇಗೆ? ಎಂದು ವಾದಿಸಿ ತನ್ನ ಪೂರ್ಣ ವಿರಾಮ ಆಗುವಲ್ಲಿವರೆಗೆ ನನ್ನನ್ನು ವಿರೋಧಿಸುವವರಿಗೆ ಯುದ್ಧವಿರಾಮವಿಲ್ಲ ಎಂಬ ಛಲವಾಗಿ ಕೌರವ, ಅರ್ಜುನನ ಶಕ್ತಿಯನ್ನು ಸೆಳೆದುಕೊಂಡು ನಿಜರೂಪದಲ್ಲಿ ಐಕ್ಯವಾಗುವ ಕೃಷ್ಣ ಹೀಗೆ ಕೃಷ್ಣಪರಂಧಾಮದವರೆಗೆ ಸಾಗಿ ಬರುವ ಈ ಶೇಣಿಭಾರತ ಶೇಣಿಯವರ ಶೈಲಿಯಲ್ಲಿಯೇ ಇಲ್ಲಿ ದಾಖಲಾಗಿದೆ.

ಇಂತಹ ಮೌಖಿಕ ಸಾಹಿತ್ಯವನ್ನು ದಾಖಲಿಸುವ ಯತ್ನ ಇನ್ನೂ ನಡೆಯಬೇಕಾಗಿದೆ ಎಂಬ ಕೂಗು ಬಹಳ ಕಾಲದಿಂದ ಕೇಳುತ್ತಿದ್ದರೂ ಅದು ಕಾರ್ಯರೂಪಕ್ಕೆ ಇಳಿದಿಲ್ಲವೆಂಬುದೂ ಅಷ್ಟೇ ಸತ್ಯ. ಅಲ್ಲಿ ಇಲ್ಲಿ ಯಕ್ಷಗಾನ ಪ್ರಸಂಗಗಳ ಧ್ವನಿಮುದ್ರಿಕೆಗಳೇನೋ ಸಿಗುತ್ತವಾದರೂ ಅವು ಎಲ್ಲರಿಗೂ ನಿಲುಕುವ ವಿಷಯವಲ್ಲ. ಯಕ್ಷಗಾಣ ತಾಳಮದ್ದಳೆಗಳಿಂದ

ಬಹಳ ದೂರ ಇರುವ ಸಾಹಿತ್ಯಾಸಕ್ತರ ಒಂದು ದೊಡ್ಡ ಸಮೂಹವೇ ಇದೆ. ಅವರಿಗೂ ಈ ಅದ್ಭುತ ದರ್ಶನವನ್ನು ಯಥಾಸಾಧ್ಯ ಮಾಡಿಸಬೇಕು ಎಂಬ ಆಶಯದೊಂದಿಗೆ, ಯಕ್ಷಗಾನ ಪ್ರಸಂಗಗಳ ಮಾತುಗಾರಿಗೆಯ ಐತಿಹಾಸಿಕ ದಾಖಲೆಯೊಂದನ್ನು ಉಳಿಸುವ ಯತ್ನವನ್ನು ಇಲ್ಲಿ ಮಾಡಲಾಗಿದೆ. ಇಂತಹ ದಾಖಲೆಗೆ ಶೇಣಿಯವರನ್ನೇ ಆಯ್ಕೆ ಮಾಡಿಕೊಳ್ಳಲು ಕಾರಣ ಅವರು ಮಾರ್ಗಪ್ರವರ್ತಕರು. ಅಲ್ಲದೆ ಅವರ ಅರ್ಥಗಾರಿಕೆಗೆ ಒಂದು ವಿಶಿಷ್ಟತೆಯಿದೆ.

ರಾಮನ ಅರ್ಥ ಹೇಳಿದರೆ ರಾಮಣನನ್ನು ಉಳಿಸುವುದಿಲ್ಲ. ರಾವಣನ ಅರ್ಥ ಹೇಳಿದರೆ ರಾಮನನ್ನೇ ಉಳಿಸುವುದಿಲ್ಲ. ಕೃಷ್ಣನ ಅರ್ಥ ಹೇಳಿದರೆ ಕೌರವನನ್ನು ಉಳಿಸುವುದಿಲ್ಲ. ಕೌರನವ ಅರ್ಥ ಹೇಳಿದರೆ ಕೃಷ್ಣನನ್ನೇ ಉಳಿಸುವುದಿಲ್ಲ. ತಮ್ಮ ಪಾತ್ರದ ವಕಾಲತ್ತನ್ನು ಅಷ್ಟು ಚೆನ್ನಾಗಿ ನಿರ್ವಹಿಸುತ್ತಾರೆ, ಹಾಗಾಗಿ ಖಳಪಾತ್ರಗಳ ಪರವಾದ ವಾದದಿಂದ ನಮ್ಮ ಸಾಂಸ್ಕೃತಿಕ ಪರಂಪರೆಯ ನಂಬಿಕೆಗೇ ಕೂಡಲಿಯೇಟು ಎಂದು ಕೆಲವರು ನನ್ನಲ್ಲಿ ವಾದಿಸಿದ್ದುಂಟು. ಆದರೆ ಅದರ ಸತ್ಯಾಸತ್ಯತೆಯನ್ನು ಮನಗಾಣಬೇಕಾದರೆ ರಾಮನ ಅರ್ಥವನ್ನೂ, ರಾವಣನ ಅರ್ಥವನ್ನೂ, ಕೃಷ್ಣ ಕೌರವರ ಅರ್ಥವನ್ನು ಒಂದೆಡೆಗೆ ಕ್ರೋಢೀಕರಿಸಬೇಕಾಗುತ್ತದೆ. ಅವರೇ ಹೇಳಿದ ಖಳಪಾತ್ರಗಳ ಹಾಗೂ ನಾಯಕ ಪಾತ್ರಗಳ ಮುಖಾಮುಖಿ ಆಗಬೇಕು ಎಂಬ ಕಾರಣದಿಂದ ಈ ಸಂಶೋಧನೆ ಇಂದು ಈ ರೂಪ ಪಡೆದಿದೆ.

ಇಷ್ಟಾದರೂ " ಮತ್ತೊಬ್ಬರ ಪ್ರಮಾದವನ್ನೋ, ಅಜ್ಞಾನವನ್ನೋ ಉಪದೇಶವೆಂದಾಗಲಿ, ಪ್ರಮಾಣವೆಂದಾಗಲಿ ಒಪ್ಪದ ನಾನು ಪ್ರಮಾದವನ್ನೂ, ಅಜ್ಞಾನವನ್ನೂ ಜನರು ಉಪದೇಶವೆಂದು ಸ್ವೀಕರಿಸಬೇಕೆಂದು ಬಯಸುವ ಅಪರಾಧವನ್ನು ಮಾಡಲಾರೆ" ಎಂಬ ಶೇಣಿಯವರ ಮಾತನ್ನು ನೆನಪಿಸಿ ವಿರಮಿಸುತ್ತೇನೆ.

ಇತಿ ಶಂ.

**ಡಾ|| ಗೋಪಾಲಕೃಷ್ಣ ಹೆಗಡೆ**

ಮುಖ್ಯಸ್ಥರು, ಕನ್ನಡ ವಿಭಾಗ,

ಡಾ|| ಎ.ಬಿ. ಬಾಳಿಗಾ ಕಲೆ ಮತ್ತು ವಿಜ್ಞಾನ ಕಾಲೇಜು

ಕುಮಟಾ-೫೮೧ ೩೪೩, ಉತ್ತರ ಕನ್ನಡ.

ಮೊಬೈಲ್ ನಂ,: ೯೪೪೮೪೪೪೧೧೯೦

ಸರ್ವಜಿತು ಸಂವತ್ಸರ,

ನಿಜ ಜೇಷ್ಠ, ಪ್ರತಿಪದೆ

ದಿ: ೧೫-೦೬-೨೦೦೭

---

**ಯಕ್ಷಗಾನಕಲಾನಿಧಿಗೆ**

**ನಮನದೊಂದಿಗೆ**

**ಈ ಹೊತ್ತಿಗೆ ಅರ್ಪಿಸುವೆ**

# ಕೃತಜ್ಞತೆಗಳು

೨೦೦೬ರಲ್ಲಿ ಎರಡನೆಯ ಬಾರಿ ಪ್ರಕಟಗೊಂಡ ತಮ್ಮ ಆತ್ಮಚರಿತ್ರೆಯಲ್ಲಿ ಶೇಣಿಯವರು- "ಸಂಪೂರ್ಣ ರಾಮಾಯಣ ಅಪೂರ್ಣ ಭಾರತ" ಎಂಬ ಕೊರಗನ್ನು ವ್ಯಕ್ತಪಡಿಸಿ ಶೇಣಿಭಾರತ ಆದಷ್ಟು ಬೇಗನೆ ಮುದ್ರಣಗೊಳ್ಳುವಂತಾಗಲಿ ಎಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದರು. ಮತ್ತೊಮ್ಮೆ ಅವರ ಇಚ್ಛಾಶಕ್ತಿ ನನ್ನಲ್ಲಿ ಕ್ರಿಯಾಶಕ್ತಿಯಾಗಿ ಹರಿದು ಈ 'ಹೊತ್ತಿಗೆ' ಈ ರೂಪತಾಳಿತು. ಅವರು ದೈವಾಧೀನರಾಗಿ ವರ್ಷ ತುಂಗುವ ಮೊದಲಾದರೂ ಈ ಕೃತಿ ಬೆಳಕು ಕಾಣಬೇಕು ಎಂಬ ನನ್ನ ಮಹದಾಸೆಯ ಪೂರೈಕೆಗೆ ರಾಷ್ಟ್ರಪ್ರಶಸ್ತಿ ಪುರಸ್ಕೃತ, ಮಹಾನ್ ಕಲಾವಿದರಾದ ಕೆರೆಮನೆ ಶಂಭು ಹೆಗಡೆಯವರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಆಕಾಡೆಮಿಯ ಸ್ಥಾನಬಲದಿಂದ ಅಭಯ ನೀಡಿ ಶೇಣಿಭಾರತವನ್ನು ಪ್ರಕಟಿಸಿದರು.

ಕಾರಣ ಈ ಜ್ಞಾನಯಜ್ಞಕ್ಕೆ ಸಹಕರಿಸಿದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಆಕಾಡೆಮಿಯ ಅಧ್ಯಕ್ಷರಿಗೂ, ಸರ್ವ ಸದಸ್ಯರಿಗೂ, ಅಧಿಕಾರಿ ವರ್ಗಕ್ಕೂ ನಾನೂ ಕೃತಜ್ಞನಾಗಿದ್ದೇನೆ.

ಈ ಪುಸ್ತಕದ ಪ್ರತಿಯ ಪುನರ್ ನಿರ್ಮಾಣಕ್ಕೆ ಧ್ವನಿಮುದ್ರಿಕೆಗಳನ್ನು ಒದಗಿಸಿಕೊಟ್ಟು ಎಲ್ಲ ಸನ್ಮಿತ್ರರಿಗೂ, ಶೇಣಿಯವರ ಅಭಿಮಾನಿಗಳಿಗೂ ಕೃತಜ್ಞತೆಗಳು.

ಭಾವಚಿತ್ರಗಳನ್ನು ಒದಗಿಸಿಕೊಟ್ಟ ಶೇಣಿಯವರ ಮೊಮ್ಮಗ ಚಿ|| ಮುರಳಿಗೂ, ಕೆರೆಮನೆ ಶಿವಾನಂದ ಹೆಗಡೆಯವರಿಗೂ ಕೃತಜ್ಞತೆಗಳು.

ನನ್ನೊಡನೆ ಸಹೋದರವಾತ್ಸಲ್ಯದಿಂದ ಸಹಕರಿಸಿದ ಶೇಣಿ ಕುಟುಂಬದ ಎಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

**- ಡಾ|| ಗೋಪಾಲಕೃಷ್ಣ ಹೆಗಡೆ**

# ಪರಿವಿಡಿ


| ಕ್ರ.ಸಂ. | ಶೀರ್ಷಿಕೆ | ಪಾತ್ರ | ಪುಟಗಳು |
|---|---|---|---|
| ೧. | ಇಚ್ಛಾಮರಣ | ಶಂತನು ಚಕ್ರವರ್ತಿ | ೧–೨೨ |
| ೨. | ಸಾಲ್ವ ಶೃಂಗಾರ | ಸಾಲ್ವ | ೨೩-೩೭ |
| ೩. | ಭೀಷ್ಮವಿಜಯ | ಭೀಷ್ಮ | ೩೮-೬೨ |
| ೪. | ಪಾಂಚಾಲ ರಾಜಕಾರಣ | ದ್ರುಪದ | ೬೩-೬೫ |
| ೫. | ಹಿಡಿಂಬಾ ವಿವಾಹ | ಭೀಮ | ೬೬-೭೩ |
| ೬. | ರಾಜಸೂಯದ ಸಂಕಲ್ಪ | ಧರ್ಮರಾಯ | ೭೪-೮೬ |
| ೭. | ಮಾಗಧವಧೆ | ಜರಾಸಂಧ | ೮೭-೧೧೦ |
| ೮. | ಅಗ್ರಪೂಜಾ ವಿರೋಧ | ಶಿಶುಪಾಲ | ೧೧೧-೧೨೨ |
| ೯. | ಪಾಶುಪತ ಬಯಕೆ | ಅರ್ಜುನ | ೧೨೩-೧೩೦ |
| ೧೦. | ಶಿವಾನುಗ್ರಹ | ಶಿವ | ೧೩೧-೧೪೬ |
| ೧೧. | ಸತ್ವ ಪರೀಕ್ಷೆ | ಅರ್ಜುನ | ೧೪೭-೧೬೮ |
| ೧೨. | ಮಂಗಳಸೌಗಂಧಿಕ | ಭೀಮ | ೧೬೯-೧೭೭ |
| ೧೩ | ದೂರ್ವಾಸಾನುಗ್ರಹ | ದೂರ್ವಾಸ | ೧೭೮-೧೮೭ |
| ೧೪ | ಘೋಷಯಾತ್ರೆ | ಧರ್ಮರಾಯ | ೧೮೮-೧೯೦ |
| ೧೫ | ಅಜ್ಞಾತ | ಧರ್ಮರಾಯ | ೧೯೧-೧೯೭ |
| ೧೬ | ಭೂಮಿಂಜಯ | ಉತ್ತರಕುಮಾರ | ೧೯೮-೨೧೮ |
| ೧೭ | ಸಮರ ಸನ್ನಾಹ | ಕೌರವ | ೨೧೯-೨೨೪ |
| ೧೮ | ನೀತಿಯೇ ಕರುಣಾಳು | ಕೃಷ್ಣ | ೨೨೫-೨೩೧ |

| | | | |
|---|---|---|---|
| ೧೯. | ಗಾಳಿಯ ಮಗ | ಭೀಮ | ೧೩೨-೧೪೫ |
| | ಬೆಂಕಿಯ ಮಗಳು | | |
| ೧೦. | ಸಂಧಾನವೋ ಸಂಗ್ರಾಮವೋ ಕೃಷ್ಣ | | ೧೪೬-೧೪೮ |
| ೧೧ | ವಿದುರನರಮನೆಗೈದಿದಂ | ಕೃಷ್ಣ | ೧೪೯-೧೫೮ |
| | ಶ್ರೀಕೃಷ್ಣನು | | |
| ೧೨ | ಶ್ರೀಕೃಷ್ಣಸಂಧಾನ | ಕೌರವ | ೧೫೯-೧೭೬ |
| ೧೩ | ಭೀಷ್ಮೋಪದೇಶ | ಭೀಷ್ಮ | ೧೭೭-೧೯೪ |
| ೧೪ | ಗೀತೋಪದೇಶ | ಶ್ರೀಕೃಷ್ಣ | ೧೯೫-೨೧೦ |
| ೧೫ | ಅವತಾರ ರಹಸ್ಯ | ಭೀಷ್ಮ ಮತ್ತು ಕೃಷ್ಣ | ೨೧೧-೨೪೦ |
| ೧೬ | ಶರತಲ್ಪ | ಭೀಷ್ಮ | ೨೪೧-೨೪೩ |
| ೧೭ | ಮುಂದೇನು? | ಸುಯೋಧನ | ೨೪೪-೨೪೬ |
| ೧೮ | ಚಕ್ರವ್ಯೂಹ-ಚಿಂತನೆ | ದ್ರೋಣ | ೨೪೭-೨೫೯ |
| ೧೯ | ಅಭಿಮನ್ಯುವಿಗೆ ಅನುಜ್ಞೆ | ಧರ್ಮರಾಯ | ೨೬೦-೨೬೩ |
| ೨೦ | ಶಲ್ಯಸಾರಥ್ಯ | ಶಲ್ಯ | ೨೬೪-೨೭೮ |
| ೨೧ | ಕರ್ಣರಸಾಯನ | ಕರ್ಣ | ೨೭೯-೨೯೫ |
| ೨೨ | ಗದಾಯುದ್ಧ | ಕೌರವ | ೨೯೬-೪೧೩ |
| ೨೩ | ಶ್ರೀಕೃಷ್ಣಪರಂಧಾಮ | ಶ್ರೀಕೃಷ್ಣ | ೪೧೪-೪೨೨ |

# ೧ ಇಚ್ಛಾಮರಣ

ಶಂತನು ಚಕ್ರವರ್ತಿ

॥ ಭಾಮಿನಿ ॥

ದುರುಳನಂತಕ ಪುರಕೆ ತೆರಳಲು | ಹರುಷದಿಂ ಮುನಿವರರು ಪೊಗಳುತ ಧರಣಿಪಗೆ ಕೌಪೀನ ಕೃಷ್ಣಾಜಿನವು ಕಾವಿಗಳ | ವರಕಮಂಡಲ ದಂಡ ಮೌಂಜಿಯ | ಪರಸುತುಚಿತ ವನೀಯಲೊಂದಿಸಿ 1 ಹರುಷದಿಂದಪ್ಪಣೆಯ ಕೊಳ್ಳುತಲಡರಿ ತುರಗವನು ॥ ೧ ॥

ಅಖಂಡಭಾರತದ ಸಾರ್ವಭೌಮಾಧಿಕಾರ ಚಂದ್ರವಂಶೋತ್ಪನ್ನರಾದಂತಹ ಅರಸರಿಗೆ ಜ್ಯೇಷ್ಠನಾದಂಥ ಶಂತನು ನಾನು-ಸದ್ಯ ಚಕ್ರವರ್ತಿಯಾಗಿ ಮೆರಿತಾ ಇದ್ದೇನೆ. ಆದ್ರೇನುಮಾಡೋಣ, ಒಂದುಕಾಲದಲ್ಲಿ ವಸುಂಧರಾರಮಣಿಯ ಜೊತೆಯಲ್ಲಿ ಮಹಾರಾಣಿಯೆನಿಸಿದಂತಹ ಭಾಗೀರಥಿಯನ್ನು ಕೂಡಿಕೊಂಡು ಪರಸ್ಪರ ಅವರೊಳಗೆ ಸವತಿ ಮತ್ಸರ ಇಲ್ಲದೆ ಸಮನ್ವಯವನ್ನು ಸಾಧಿಸಿದಂತಹ ಪ್ರಭುಶಕ್ತಿ ಇದು. ರಾಜ್ಯವನ್ನಾಳಿ ಒಂದು ನಿಯಮಕ್ಕೊಳಪಟ್ಟು ಮೂರು ದಶಕಗಳನ್ನು ಮೀರಿದ ನಾನು ಗ್ರಹಸ್ಥನಾದ್ರೂ ಏಕಾಂಗಿಯಾಗಿದ್ದೇನೆ. ಯಾಕೆ? ನಮಗೆ ಪರಂಪರಾಗತವಾಗಿ ಬಂದಂಥ ಈ ವಸುಂಧರಾರಮಣಿ ಯಾವಾಗಲೂ ಮಹಿಷಿಯ ಸ್ಥಾನದಲ್ಲೇ ಇದ್ದಾಳೆ. ಹಾಗಾಗಿ ಭೂಪತಿತ್ವ ಉಳದೆ. ಆ ಅರ್ಥದಲ್ಲಿ ಗ್ರಹಸ್ಥಾಶ್ರಮವನ್ನು ಸಾಧಿಸಿದ್ದೇನೆ. ಸರಿ, ಮದುವೆಯಾದಂತಹ ಹೆಂಡತಿ ಬಿಟ್ಟು ಹೋಗಿ ಮೂರುದಶಕಗಳು ತೀರಿದರೂ ನಮಗೇನು ವಾನಪ್ರಸ್ಥಕ್ಕೋ, ಸನ್ಯಾಸಕ್ಕೋ ಹೋಗುವದಕ್ಕೆ ಅವಕಾಶವೇ ಇಲ್ಲ. ಆದರೆ ಸದ್ಯ ಆ ಅವಕಾಶ ಇದೆಯೇನೋ ಎಂಬುದರ ದ್ಯೋತಕ ಈ ಇದು ದಂಡ, ಕಮಂಡಲು ಇತ್ಯಾದಿ...!

ಆಸ್ಥಾನದಲ್ಲಿ ನಾನಿದ್ದಾವಾಗ ಗಾಲವರು ಮುಂದಾಳುತ್ವವನ್ನು ವಹಿಸಿಕೊಂಡು ಅದೆಷ್ಟೋ ಬ್ರಾಹ್ಮಣರನ್ನು, ವಟುಗಳನ್ನು ಕೂಡಿಸಿಕೊಂಡು ಬಂದು ದೂರಿದರು ಅವರ ಪುಣ್ಯಾಶ್ರಮದಲ್ಲಿ ದುಷ್ಟನಾದಂತಹ ತಮಾಲಕೇತನೆಂಬವನು ಬ್ರಾಹ್ಮಣ್ಯವನ್ನು ಕೆಡಿಸುತ್ತಾ, ಬ್ರಾಹ್ಮಣ್ಯವನ್ನು ಪೋಷಿಸುವದಕ್ಕಿದ್ದ ದ್ರವ್ಯಗಳನ್ನು ಹಾಳು ಗೆಡಹುತ್ತಾ ವಿಪರೀತವಾದಂತಹ, ಒಂದು ಬ್ರಾಹ್ಮಣ್ಯಕ್ಕೆ ಪಂಥಾಹ್ವಾನ ನೀಡಿದ ಅಂತೇಳ್ವಾಗ ರಾಜನಾದಂತಹ ನಾನೇ ಸೈನ್ಯಸಮೇತವಾಗಿ ಹೊರಟು ಬರಬೇಕಾಯ್ತು. ದುಷ್ಟರನ್ನು ವಧಿಸಿದ್ದಾಯ್ತು, ಸಂತಸಗೊಂಡಂತಹ ಈ ಗಾಲವಾದಿಗಳು ಯೇನು ಮಾಡಿದರು! ಅದನ್ನೇ ನಾನು ಹೇಳಿರುವುದು ಈ ಇದು! ಅರಸನಿಗೆ ಕಾಣಿಕೆಯಾಗಿ ಕೊಡ್ತಾರೆ!! ಹ ಹ... ಮೌಂಜಿ, ಕೌಪೀನ, ದಂಡ ಆಮೇಲೆ ಕಮಂಡಲು!! ಯೇನಿದು? ಬಹುಷ: ಹಿಗಿರಬಹುದೆ? - “ಇನ್ನು ಸಾಕು; ಮಗನಾದಂತಹ ದೇವವ್ರತನು ಪ್ರಾಪ್ತ ವಯಸ್ಕನಾಗಿದ್ದಾನೆ.... ಅವನಿಗೇ ಯೌವ್ವರಾಜ್ಯಾಭಿಷೇಕ ಮಾಡಿ ಆಡಳಿತವನ್ನು ಬಿಟ್ಟುಕೊಟ್ಟು ಮಹರಾಜಾ ನೀನಿನ್ನುಂದೆ ವಾನಪ್ರಸ್ಥಿಯಾಗು ಅಥವಾ ಸನ್ಯಾಸವನ್ನೇ

ಸ್ವೀಕರಿಸು" -ಇದೊಂದು ಥರದ ಸಾಂಕೇತಿಕವಾದ ಕೊಡುಗೆ ಇದ್ದರೂ ಇರಬಹುದೇ? ಇಲ್ಲದಿದ್ರೆ ವಿರೋಧಿಗಳನ್ನು ದಮನಿಸಿದ ರಾಜನಿಗೆ ಈ ಕಾಣಿಕೆ ಕೊಡತಕ್ಕದ್ದಲ್ಲ! ಅದು ಕೊಟ್ಟಿರುವವರು ತಿಳಿದವರು, ರಾಜಕೀಯ ಸಂಬಂಧವುಳ್ಳಂತಹ ಗಾಲವರು! ಒಳ್ಳೆಯದೇ ಆಯಿತು. ಯಾಕೆ ಅಂತಂದ್ರೆ ಪ್ರವೃತ್ತಿ ಪ್ರವೃತ್ತಿ ಪ್ರವೃತ್ತಿ... ಹೌದು ಅದನ್ನು ತಾನು ಕೈಗೊಳೇನೆ ಅಂತ ಹೇಳುವ ಸಂತಾನದ ಜ್ಯೋತಿ ಇಲ್ಲದೇ ಇದೆ? ಸರಿ, ಪ್ರವೃತ್ತಿ ಮಾಡುತ್ತಲೇ ನಾವು ಅಳಿಯಬೇಕು. ದೇವವ್ರತನಂತೂ ಪ್ರಬುದ್ಧನಾಗಿದ್ದಾನೆ. ಪರಶುರಾಮರಿಂದಲೇ ಧನುರ್ವೇದಗಳನ್ನು ಕಲ್ಲಿದ್ದಾನಂತೆ! ಆಮೇಲೆ ವಿವರಿಸಿ ವಿವರಿಸಿ ಕೇಳುವಾಗ ಭಗವಾನ್ ವಸಿಷ್ಠರಿಂದ, ಆಚಾರ್ಯ ಬೃಹಸ್ಪತಿಗಳಿಂದ ಬೇಕಾದ್ದನ್ನು ಸಂಗ್ರಹ ಮಾಡಿಕೊಂಡು ಬಂದಿದ್ದಾನಂತೆ! ಹೌದು. ಅಂದು ದಶರಥನು ಅವತ್ತುಸಾವಿರ ವರ್ಷ ರಾಜ್ಯಭಾರ ಮಾಡಿದ್ದಾವಾಗ ರಾಮಚಂದ್ರಾದಿಗಳು ಪ್ರಬುದ್ಧರಾಗಿದ್ದಾಗಲೂ ಕೂಡಾ ಪುತ್ರ ವಾತ್ಸಲ್ಯದಿಂದ; ಪಾಪ, ವೃದ್ಧ ದಶರಥ "ಹೇಗೂ ನಾಳೆಗೆ ಇದೆ, ಈಗಲೇ ಯಾಕೆ ಈ ಮುಳ್ಳಿನ ಮಂಚದಲ್ಲಿ ಮಗನನ್ನು ಮಲಗಿಸಬೇಕು, ನನಗೇಗೂ ಅಭ್ಯಾಸವಾಗಿ ಹೋಗಿದೆ. ಇದ್ದಷ್ಟು ದಿಟ್ಟ ಹಾಯಾಗಿ ಸತಿಪತಿಯರು ಒಂದಾಗಿ ಜೀವನದ ಜೇನನ್ನು ಸವಿದು ಬೆಳಿತಾ ಇಲ್ಲ"... ಪಿತೃವಿನ ಹೃದಯದಲ್ಲಿ ಮೂಡಿದ್ದದು, ಅಧಿಕಾರ ದಾಹ ಅಲ್ಲ. ಆದರೆ ಮಹಾಪ್ರಜೆಗಳೆಲ್ಲ ಗುಂಪು ಕೂಡಿಕೊಂಡು ಅಲ್ಲಲ್ಲಿ ಅಲ್ಲಲ್ಲಿ "ಇನ್ನೂ ಯಾಕೆ ರಾಮಭದ್ರನಿಗೆ ಪಟ್ಟಾಭಿಷೇಕ ಮಾಡ್ಲಿಲ್ಲ? ಇನ್ನೂ ಯಾಕೆ ಹೀಗೆ! ಅಂತ ಹೇಳಿದ್ರಂತೆ. ಇದನ್ನು ತಿಳಾವಾಗ ಚಕ್ರವರ್ತಿ ದಶರಥ ಜಾಗ್ರತನಾಗಿ ಅವಸರವಸರದಲ್ಲಿ ನಾಳೆ, ನಾಳೆ ಅಂತಂದ್ರೆ ನಾಳೆ ಅಥವಾ ನಾಡಿದ್ದು ರಾಮನಿಗೆ ಪಟ್ಟ ಕಟ್‌ಬೇಕು ಅಂತ ತೀರ್ಮಾನಿಸಿದನಂತೆ. ಹೌದು, ಅದು ಸರಿಯಾದ ಮಾರ್ಗ, ಈಗ ನನಗೆ ನಮ್ಮ ಪ್ರಜೆಗಳು ಯೇನ್ ಹೇಳ್ತಾರೆ ಎಂಬುದು ಗೊತ್ತಿಲ್ಲ. ಬಹುಶ: ದೇವವ್ರತನನ್ನು ಕಂಡು ಅವೂ ಭಾವೀ ಮಹಾರಾಜನನ್ನು ಗುರುತಿಸಬೇಕು ಎಂಬ ಲವಲವಿಕೆಯಲಿದ್ದಾರೋ ಯೇನೋ, ಅದೂ ನನಗೆ ಗೊತ್ತಿಲ್ಲ. ಆದ್ದರಿಂದ ಈ ಋಷಿ ಮುನಿಗಳು ಪರ್ಯಾಯದಿಂದ ಇದನ್ನು ನನಗೆ ಸೂಚಿಸಿದರೋ!! ಸೂಚಿಸಿದರೇನು? ತಪ್ಪೇನು? ಅಪರಾಧವೇನು? ಸರಿ, ಸರಿ, ಹಸ್ತಿನಾವತಿಗೆ ನಾನು ಸೇರಿದ ಮಾತ್ರಕ್ಕೆ ಈ ಹೊತ್ತು ಕತ್ತಲೆಗೆ ಮಂತ್ರಿ ಮುಂತಾದವರನ್ನು ವಿಚಾರಿಸಿ, ಒಂದು ಶುಭ ಮೂಹೂರ್ತದಲ್ಲಿ ದೇವವ್ರತನಿಗೆ ಪಟ್ಟಾಭೀಷೇಕವನ್ನು ಮಾಡಿ ಅರಮನೆಯೋ ಕಾಡೋ ಅಂತೂ ನಿವೃತ್ತನಾಗುವದಂತೂ ಖಂಡಿತ. ಆದ್ದರಿಂದಲೇ ಈ ಋಷಿ ಮುನಿಗಳು ಅರ್ಪಿಸಿದ ದಂಡ ಕಮಂಡಲುಗಳನ್ನು ನಾನು ಅನುಗ್ರಹರೂಪವಾಗಿ ಸ್ವೀಕರಿಸಿಕೊಂಡು ಮುಂದೆ ಸಾಗ್ತಾ ಇದ್ದೇನೆ.

ಕೇದಾರಗೌಳ - ಅಷ್ಟತಾಳ | ಪೊರಟು ಕಾಳಿಂದಿಯ ತೀರದಿ ಮೆರೆಯುವ | ತರುಲತೆಗಳ ನೋಡುತ | ಪುರದ ಮಾರ್ಗವ ಪಿಡಿದೈತರ ಘಮ ಘಮ | ಪರಿಮಳ ಬರಲು ಕಂಡೂ ೧ |

ನಗರವನ್ನು ಮುಟ್ಟಬೇಕಾದ್ರೆ ಸಾಗಬೇಕಾದಂತಹ ಹಾದಿಯೆಲ್ಲ ಕಾಡುಮೇಡುಗಳೇ ಆಗಿದ್ದಾವೆ. ಒಂದು ರೀತಿಯಿಂದ ಇದು ಒಳ್ಳೇದು. ಇಂತಹ ವನಾಂತರಗಳ ಶೋಭೆಯನ್ನೆಲ್ಲಾ ಕಾಣುತ್ತ ನನ್ನ ಮನಸ್ಸಿನ ಯಾವತ್ತೂ ಆಯಾಸಗಳನ್ನೆಲ್ಲಾ ಕಳೆಯುತ್ತಾ ಬಂದು ನೋಡುತ್ತಾ ಇದೇನೆ. ಇದೊಂದು ಮಹಾನದಿ! ಈ ಮಹಾನದಿ ಯಾವುದಿರಬಹುದು? ಓಹ್ ! ಕೇಳಿದ್ದೇನೆ ಇದು ಯಮುನಾ ನದಿಯಲ್ವೇ? ಯಮುನಾ ನದಿಯೇ ಸಂದೇಹವಿಲ್ಲ. ನಿಜ, ನಿಜ ಇದು ಹೋಗಿ ಸಂಗಮಿಸುವದು ಗಂಗೆಯಲ್ಲಿ, ಆ ಗಂಗೆಯಲ್ಲಿ ಸಂಧಿಸಿದ ಬಳಿಕ ಯಮುನೆ ಎಂಬ ಹೆಸರನ್ನು ಕಳಕೊಂಡು ಗಂಗೆಯೇ ಆಗಿ, ಸಮುದ್ರವನ್ನು ಸಂಗಮಿಸುವದು. ಯೆಲ್ಲಾ ಕಾವ್ಯಾತ್ಮಕವಾಗಿದ್ಯಲ್ಲ! ಹೇಗೆ? ಗಂಗೆಯನ್ನು ಯಮುನೆ ಸಂಗಮಿಸ್ತಾಳೆ, ಯಮುನಾ ಸಂಗಮ ಇಲ್ಲದಿದ್ರೆ ಭಾಗೀರಥಿ ಪೂರ್ಣಳಾಗೊದೂ ಇಲ್ಲ. ಹೋಗಲಿ ಬಿಡಿ, ಗಂಗೆ ಗಂಗೆ ಅಂತ ಎರಡುಸಲ ಹೇಳುವಾಗ ಬೇರೆನೋ ಚಿತ್ರ ಬಂದು ಕಣ್ಣಮುಂದೆ ನಿಲ್ತಾ ಇದೆ. ನನಗೂ ಗಂಗಾ ಸಂಗಮವಾಗಿದೆ. ಆದರೆ ಅದು ನದಿಯಾದ ಗಂಗೆಯಲ್ಲಿ ನದಿಯ ಅಭಿಮಾನೀ ದೇವತೆಯಾದಂತಹ ಸಾಕ್ಷಾತ್ ಗಂಗಾದೇವಿ. ಆ ಗಂಗಾದೇವಿ ಪುನ: ನದೀ ರೂಪಿಣಿಯಾಗಿ ನದೀದೇವತೆಯಾಗಿ ನಿರ್ಗಮಿಸಿದಾಗ ಯಮುನೆಯನ್ನು ಕಂಡಾವಾಗ ಯೇನೇನೋ ಯೇನೇನೋ ಭಾವನೆ ಕೆರಳ್ತಾ ಇದೆ! ಹೋಗಲಿ, ದೊಡ್ಡದಲ್ಲ ಅದೆಲ್ಲ ನಮ್ಮ ಅನುಭವವನ್ನೇ ನಾವು ಪ್ರಕೃತಿಯಲ್ಲಿ ಕಾಣೇವೆ ಕನಸದು. 'ಯದ್ ಭಾವಂ ತದ್ಭವತಿ' ಆದ್ದರಿಂದಲೇ ಬಹುಶ: ನನಗೆ ನಮ್ಮ ದೇವವ್ರತನ ತಾಯಿಯಾದಂತಹ ಗಂಗೆಯ ನೆನಪಾದದ್ದಾಗಿರಬೇಕು. ಈ ಯಮುನೆಯನ್ನು ಕಾಣುವಾಗ ಯಮುನೆಯೊ ಇಲ್ಲಿ ಜಡ ಜಲರೂಪಿ, ಅವಳು ಪ್ರವಹಿಸ್ತಾ ಇದ್ದಾಳೆ. ಪ್ರವಹಿಸ್ತಾ ಯಮುನೆ ಗಂಗೆಯಲ್ಲಿ ಸಂಗಮಿಸ್ತಾಳೆ ಅನ್ನುವಾಗ ನನಗೂ ಗಂಗೆಗೂ ಆದ ಸಂಗಮದ ಒಂದು ಸುಪ್ತವಾಸನೆ ನನ್ನ ಮನಸ್ಸಿನಲ್ಲಿ ಹೀಗೆ ವಿಕಾರವನ್ನು ಉಂಟುಮಾಡಿತೇ ಹೊರತು ಅನ್ಯಥಾ ಇಲ್ಲ. ಜಾಗ್ರತವಾಗಿದ್ದೇನೆ. ಇಂಥದ್ದಕ್ಕೆಲ್ಲ ಹುಚ್ಚು ಕಟ್‌ಬಾರ್ದು ಯಾಕೆ? ಋಷಿಗಳು ಕೊಟ್ಟಂತಹ ಯಾವ ಕಾಣಿಕೆ ಇದೆ ಅದರಿಂದ ಪ್ರಚೋದಿಸಲ್ಪಟ್ಟವ ನಾನು. ಆ ಉದ್ದೇಶದಿಂದ ಹಸ್ತಿನಾವತಿಗೆ ಮುಟ್ಟಿ ಮಾಡಬೇಕಾದಂತಹ ಮುಂದಿನ ಕಾರ್ಯವನ್ನು ಮಥನ ಮಾಡ ಬಂದವನು ನಾನು. ಇಲ್ಲಿ ಪುನ: ಯಾಕೆ?

ಯೆಲಾ! ಇದ್ಯೇನ್ ಗಂಧ! ನನ್ನ ಜೀವನದಲ್ಲಿ ಅದೆಷ್ಟು ಸುಗಂಧಗಳನ್ನು ನಾನು ಆಘ್ರಾಣಿಸಿಲ್ಲ! ಬಿರಿದ ಹೂವಿನದ್ದೆ? ಛೇ ಛೇ ಮಲ್ಲಿಗೆ, ಸಂಪಿಗೆ? ಊಹುಂ. ಮತ್ತೇನಿದು? ಓಹ್ಹೊ, ಹೀಗೆ... ಇಲ್ಲಿ ತುಂಬಾ ಗಂಧದ ವೃಕ್ಷಗಳು ಬೆಳೆದಿದ್ದಾವೆ. ಈ ಬೆಳೆದಂತಹ ಶ್ರೀಗಂಧದ ವೃಕ್ಷಗಳಿಂದ ಬೀಸುತ್ತಿರುವ ಗಾಳಿ ಅದೂ ಕೂಡ ಮಲಯಜ ಗಂಧವಾಗಿ ಆ ಗಂಧದ ಪರಿಮಳವನ್ನು ತಾನು ತುಂಬಿಕೊಂಡು ಹೀಗೆ ಬೀಸುತ್ತಿರಬಹುದೆ? ಅಂತಹ ಮಂದವಾದಂತಹ ಗಂಧ ಅಲ್ಲ ಇದು. ಈ ಗಂಧದಲ್ಲಿ ಮನುಷ್ಯರಿಗೆ ಯೇನಾದರೂ ಉನ್ಮಾದವನ್ನೋ ಉದ್ರೇಕವನ್ನೋ ಹುಟ್ಟಿಸುವಂತಹ ತೀಕ್ಷ್ಮವಾದಂತಹ ತತ್ತ್ವಗಳೇನಾದರೂ ಇದ್ದಾವೋ, ಯಾರಿಗೆ ಗೊತ್ತು? ನಾವು ಗಂಧವನ್ನೆಲ್ಲಾ ಯೆಷ್ಟು ಬೇಕು ಅಷ್ಟು

ಮೂಸಿಕೊಳ್ಳುವವರು, ಮೈಗೆ ಪೂಸಿಕೊಳ್ಳುವವರು. ಅಂತು ಈ ಗಂಧ ಅದ್ಭುತವಾಗಿದೆ. ಇದು ಮನುಷ್ಯನನ್ನು ಯೆಲ್ಲಿಂದ ಯೆಲ್ಲಿಗೋ ಒಯ್ಯುತ್ತ ಇದೆ. ನೋಡೇನೆ ನೋಡೇನೆ ಈ ನನ್ನ ಕುತೂಹಲಕ್ಕೆ ಕಾರಣವಾದ ವಸ್ತು ಅಥವಾ ವೃಕ್ಷ ಅಥವಾ ಇನ್ನೇನಾದ್ರೂ ಇಲ್ಲಿ ಇದ್ದೀತೆ?

ಕೇದಾರಗೌಳ-ಅಷ್ಟ ನಾರಿಯೋರ್ವಳು ನವಯೌವ್ವನ ಚದುರೆ | ಯಾರಿ ಮಿಂಚಿನ ತೆರದಿ ||

ಧಾರಿಣಿ ಪಾಲನ ಕಣ್ಣೆ ಗೋಚರಿಸಲು / ಸ್ಮರಹತಿಯೊಳು ಬಳಲಿ || ೩ ||

ಬರಬರುತ್ತಾ ಬರಬರುತ್ತಾ ಈ ಗಂಧ ಸುಗಂಧವಾಗಿದ್ದರೂ ಕೂಡಾ, ಜಿತೇಂದ್ರಿಯರಾದಂತಹ ಋಷಿಗಳಿಗೂ ಕೂಡಾ ಒಂದು ಥರವಾದಂತಹ ಉನ್ಮಾದವನ್ನು ಹುಟ್ಟಿಸುವಷ್ಟು ಸಶಕ್ತವಾಗಿದೆ! ಹಾ ಗಂಧವೇ ಚಿತ್ತವೃತ್ತಿಯನ್ನು ಕದಡ್ತಿದೆ ಅಂತಾದ್ರೆ, ಇನ್ನೀಗ ರಸ, ಆಮೇಲೆ ರೂಪ ಆಮೇಲೆ ಸ್ಪರ್ಶ ಬಳಿಕ ಶಬ್ದ ಹೀಗೆ ಪಂಚ ತನ್ಮಾತ್ರೆಗಳು ಆರೂಢಸ್ಥಿತಿಗೆ ಹೋದಾವಾಗ ಯೇನಾದೀತು? ಶಬ್ದದಿಂದ ಹುಚ್ಚು ಕಟ್ಬಹುದು. ಸ್ಪರ್ಶದಿಂದ ಮೈ ಮರೆಯಬಹುದು. ರೂಪ ಕಂಡು ಬೆರಗಾಗಬಹುದು. ಆಮೇಲೆ ರಸಸ್ವಾದನೆಯಿಂದ ಆನಂದಾನುಭೂತಿಯನ್ನು ಪಡೆಯಬಹುದು. ಗಂಧದಿಂದಲೇ ಇನ್ನೂ ಆಗ್ತದೆ ಅಂತಾದ್ರೆ, ಬಾಕಿ ಇದ್ದದ್ದು ಹೇಗಿದ್ದೀತು! ಅನಿರ್ವಚನೀಯ, ಅವರ್ಣನೀಯವಾಗಿದ್ದೀತು. ಕುತೂಹಲವಂತೂ ವಿಶೇಷವಾಗಿ ಉಂಟಾಗಿದೆ. ಮುಂದೆ.... ಯೆಲ್ಲಿ? ಯೆಲ್ಲಿ? ಯೆಲ್ಲಿಂದ ? ಯೆ.... ಯೆಲಾ ಯೆಲಾ ಯೆಲಾ.... ಇಲ್ಲಿಂದ ಇದು ! ಅಬ್ಬಾ ! ತನುಗಂಧವೇ ಇಷ್ಟು ಮಾದಕವಾಗಿದೆ ಅಂತಾದ್ರೆ ಯಾರಿವಳು ? ಅಲ್ಲ ಈ ಯಮುನೆಗೂ ಒಂದು ದಿವ್ಯ ಸ್ವರೂಪ ಇದೆ ಅಂತ ಕೇಳಿದ್ದೇನೆ. ಕಾಳಿಂದಿ ಅಂತ ಅವಳ ಹೆಸರಂತೆ- ಅಭಿಮಾನೀ ದೇವತೆ. ಒಪ್ಪದೇ ಉಪಾಯವೇ ಇಲ್ಲ, ನಾನು ಅನುಭವಿಸಿದವ. ನಾನಾ ರೂಪಿಣಿಯಾದಂತಹ ಗಂಗೆಯ ನಿಜವಾದಂತಹ ಸ್ವರೂಪವನ್ನು ಕಂಡು, ಶಬ್ದ ಸ್ಪರ್ಶ ರೂಪ ರಸ ಗಂಧಾದಿಗಳನ್ನು ಸವಿದ ಈ ದೇಹದಲ್ಲಿ ವಾಸನಾ ರೂಪವಾಗಿ ಮೈ ತುಂಬಾ ತುಂಬಿದೆ ಅದು. ಇಂಥವನಾದಂತಹ ನಾನು ನದಿಗೆ ಹೆಣ್ಣಿನ ರೂಪ ಇಲ್ಲ ಅಂತ ಅಲ್ಲಗಳೆಯುವದಕ್ಕೆ ಸಾಧ್ಯವಿಲ್ಲ. ಹಾಗಾದರೆ ಯಮುನೆಯೇ ಮೈವೊಡೆದು ನಿತ್ತಿದಾಳೆಯೇ? ಈ ನದಿಯೆಲ್ಲಾ ರೂಪದಿಂದ ಬಂದು ತೋರುತ್ತಿರುವುದು ಶಂತನುವಿಗೇಯೋ!! ನನ್ನ ಜಾತಕದಲ್ಲಿ ಹಾಗೆ ಉಂಟೋ! ಯೇನೇ ಆಗಲಿ, ಅಂದು ಗಂಗೆಗೆ ಅಕೃಷ್ಣನಾದ ಹಾಗೆ ಸರ್ವಸ್ವೀ ಮನಸಾ ನಾನಿವಳಿಂದ ಸೆಳೆಯಲ್ಪಟ್ಟಿದ್ದೇನೆ. ಆದಕಾರಣ, ಕುತೂಹಲ ಮೂಡ್ಯದೆ - ಯಾರಿವಳು? ವಿಚಾರಿಸಬೇಕಾಯ್ತು.

| ತುಜಾವಂತು-ಝಂಪೆ | ಕಲಕೀರ ವಾಣಿ ನೀನಾರಾತ್ಮಭವಳು | ಚಲುವೆನಿನ್ನೆಯ ಪೆಸರ

ವಂಚಿಸದೆ ಹೇಳು || ಮಲಯ ಗಂಧಿನಿ ಎನ್ನ ಸ್ಥರ ದಹಿಪ ಕೇಳು

ಒಲಿಸುವರೆ ಬಂದಿಹೆನು ವೇಗದಿಂದೇಳು || ೪ ||

ಆಹಾ! ನೀರೇ, ನಾರೀಮಣಿ, ಆಹಾ !! ಶೃತಿಗೂಡಿದ ತಂಬೂರಿ ಅಥವಾ ಶೃತಿಗೆ ಸೇರಿಸಲ್ಪಟ್ಟಂತಹ ವೀಣೆ ನಾಲ್ಕಾರು ತಂತಿಗಳನ್ನು ಒಟ್ಟಿಗೆ ಅಳವಡಿಸಿಕೊಂಡಿದ್ದೂ ಕೂಡಾ, ಅದರಿಂದ ದಿವ್ಯವೂ ಮಧುರವೂ ಹಾಗಂತ ಹೀಗೆಂದು ಹೆಸರಿಸಲು ಆಗದೇ ಇದ್ದಂತಹ ದಿವ್ಯವಾದಂತಹ ಓಂಕಾರದ ಪ್ರತಿಧ್ವನಿ ಎಂಬಂತೆ ಹೊರಡುವ ಒಂದು ಸ್ವರವುಂಟು. ಯಾವುದೇ ಒಂದು ತಂತಿಯನ್ನು ಮೀಟಿದಾಗ ಅದರಿಂದ ಹೊರಟ ಅಲೆ ಇನ್ನೊಂದು ತಂತಿಗೆ ತಾಗಿದಾವಾಗ ಇದರಲ್ಲಿಯೂ ಕಂಪನ ಉಂಟಾಗಿ ಸ್ವರ ಹೊರಡ್ತದೆ. ನಿನ್ನ ಕಂಡು ನಾನು ಈ ಸತ್ಯವನ್ನು ಮನವರಿಕೆ ಮಾಡಿಕೊಂಡದ್ದು. ಬರೇ ಒಂದು ಧ್ವನಿಯಿಂದ 'ಮಹಾನುಭಾವ' ಅಂತ ಹೇಳಿದೆಯಲ್ಲ ಇದರಿಂದ ಬರೇ ಒಂದು ಶಬ್ದಜ್ಞಾನ ಮಾತ್ರವಲ್ಲ, ಸಂಪೂರ್ಣವಾದಂತಹ ಸ್ವರೂಪಜ್ಞಾನ ಉಂಟಾಗಿದೆ ನನಗೆ. ಆದ್ದರಿಂದ ನಿನ್ನ ಕಲಕೀರವಾಣಿ ಇದೆಯಲ್ಲ ಅದು ಅದರದ್ದಾದಂತಹ ಬ್ರಹದಾಕೃತಿಯನ್ನು ತಾಳಿಕೊಂಡು ದೊಡ್ಡ ಸರೋವರಕ್ಕೆ ಮಧ್ಯೆ ಒಂದು ಕಲ್ಲಹರಳು ಬಿದ್ದೆ ಪ್ರಾರಂಭದಲ್ಲಿ ಉಂಟಾಗತಕ್ಕ ಅಲೆ ಬಹಳ ಸಣ್ಣದು ಆಮೇಲೆ ಆ ಅಲೆಯೇ ಪಸರಿ ಪಸರಿ ಪಸರಿ ದಡವನ್ನಪ್ಪಳಿಸುವಂತೆ ಹೆ.... ನಿನ್ನ ಧ್ವನಿಯಿಂದುಂಟಾದ ಆ ಸೌಂದರ್ಯಲಹರಿ, ಶೃಂಗಾರಲಹರಿ, ಆನಂದಲಹರಿ ಇದು ಒಬ್ಬ ರಸಿಕನಾದ ನನ್ನನ್ನು ಬಂದು ತಟ್ಟದೆ ಈಗ ಇಲ್ಲಿ ಅಪ್ಪಳಿಸ್ಯದೆ. ಅಪ್ಪಳಿಸುವಾಗ ಅದರ ಆಘಾತ ದೊಡ್ಡದಾಗ್ತದೆ. ಹುಟ್ಟುವಾಗ ಅತಿ ಸಣ್ಣದಾದರೂ ದಡಕ್ಕೆ ಅಪ್ಪಳಿಸುವಾಗ ಆ ಪೆಟ್ಟು ಬಹಳವಾಗಿ ಬೀಳದೆ. ಇದರಿಂದ ಅಲೆಯಾಗಿ ಬಂದಂತಹ ನೀರಿಗೆ ಯೇನೂ ನಷ್ಟವಾಗುವದಿಲ್ಲ. ಆದರೆ ನೀರು ಉತ್ಸಾಹವನ್ನು ತೋರಿಸ್ತದೋ ಎಂಬ ಹಾಗೆ ಜಲಾಶಯ ಉಬ್ಬೇರ್ತದೆ.

ಹಾಗೆ ಆಯ್ತಲ್ಲ ಕಥೆ !! ನಿನ್ನನ್ನು ಕಂಡೆನೋ? ಕಂಡದ್ದರಿಂದ ಆಕೃಷ್ಟನಾದೆ. ಕಾರಣಯೇನು? ಬಹುಶ: ನಿನಗೆ ಈ ಶ್ರೀಗಂಧದ ಬಗ್ಗೆ ಪರಿಚಯ ಇದೆಯೋ ಗೊತ್ತಿಲ್ಲ. ನಮ್ಮಲ್ಲಿ ಅದರ ಬಳಕೆ ಬಹಳ ಇದೆ. ಆ ಶ್ರೀಗಂಧ ತೇದರೆ ಉಂಟುಮಾಡತಕ್ಕ ಸುಗಂಧ ಇದೆಯಲ್ಲ? ಇದರ ನೂರು ಪಟ್ಟು ಸಾವಿರ ಪಟ್ಟು ಮೂಸುವಾಗ ಅತ್ಯಂತ ಕಠಿಣವಾದಂತಹ ಶಕ್ತಿಯಿಂದ ಕೂಡಿ ಪರಿಣಮಿಸುವದುಂಟು- ಅದಕ್ಕೆ ಗಂಧದ ಸತ್ಯ ಅಂತ ಹೇಳ್ತವೆ. ಅದನ್ನು ಭಟ್ಟಿ ಇಳಿಸಿ ಆ ಗಂಧದ ಸತ್ತ್ವವನ್ನು ಬಹಳ ಸೂಕ್ಷ್ಮವಾದಂತಹ ಪಾತ್ರೆಯಲ್ಲಿ ಹಾಕಿದರೆ ಒಂದು ಕಡ್ಡಿಯಲ್ಲಿ ತೆಗೆದು ಹೀಗೆ ಮೂಸಿದರೆ ಸಾಧಾರಣ ಒಂದು ಸೇರು ಗಂಧವನ್ನು ಮೈಗೆ ಬಳಿದರೆ ಎಷ್ಟು ಪರಿಣಾಮ ಆಗಬಹುದು ಅಷ್ಟು ಪರಿಣಾಮ ಅದರಿಂದುಂಟಾಗುತ್ತದೆ. ಈಗ ನೀನ್ ಹಾಗೆ, ಎಂತಹ ಗಂಧವೆ ಇದು! ಇದೀಗ ನಿಜವಾದ ಸತ್ಯ ಸ್ವರೂಪ ಮಲಯಜದ್ದು. ಓ ಮಲಯಜ ಗಂಧಿ, ಓ ಕೀರವಾಣಿ, ಇಂತಹ ವಸ್ತುವನ್ನು ಕಂಡಾವಾಗ ಪ್ರತಿಯೊಬ್ಬ ವಿವೇಕಿಯೂ ಯಾರು ಯೇನು? ಅಂತ ವಿಚಾರಿಸುವದು ಅಪರಾಧವಾಗೋದಿಲ್ಲ. ಹೆಣ್ಣಾಗಿ ನನ್ನ ಕಣ್ಣ ಮುಂದೆ ನಿತ್ತಿರುವ ನೀನು ಯೆಲ್ಲಿಯವಳಿರಬಹುದು ಅಂತಂದ್ರೆ ಒಂದ್ ದೇಶ ಕಾಲ್ -ಅಲ್ಲೊ ಅದರಿಂದ ನಮಗೇನೂ ಅರ್ಥವಾಗೋದಿಲ್ಲ. ಇದರಲ್ಲಿ ಕೌತುಕ ಯೇನು ಅಂತ ಗೊತ್ತೊ? ಇದು ಕಾಡಿನ ಬಹು

ಸುಗಂಧವನ್ನು ಬೀರುವ, ತುಂಬಿಯೂ ಕೂಡಾ ಇನ್ನೂ ಮೂಸಿ ನೋಡದೇ ಇದ್ದಂತಹ ಹೂವು. ಇದನ್ನೇ ಕವಿಗಳು ಹೇಳಬಹುದು "ಅನಾಘ್ರಾತಂ ಪುಷ್ಪಂ" ಅಂತ. ನೀ ಆ ಥರ ಇದ್ದೀಯಾ, ಯೇನು ನವರತ್ನಗಳ ಶೋಭೆಯೋ ಅಲ್ಲ ಹಾರ ಕೇಯೂರ ಇತ್ಯಾದಿ ಆಭರಣಗಳ ಶೋಭೆಯೋ, ಇನ್ನೊಂದು ವಸ್ತುವಿನಿಂದ ಪರಿಪೂರ್ಣತೆಯನ್ನು ಪಡೆಯಬೇಕಾದ ಅವಶ್ಯಕತೆಯಿಲ್ಲದ ಸ್ವಯಂಪೂರ್ಣವಾದಂತಹ ಪರಬ್ರಹ್ಮದಂತೆ ಆ ಪರಬ್ರಹ್ಮದೇ ಆದಂತಹ ಮಾಯೆಯಂತೆ... ಅಬ್ಬಬ್ಬಬ್ಬಬ್ಬಾ! ಈ ಆಕೃತಿಯಲ್ಲಿ ನನ್ನ ಕಣ್ಣಿಗೆ ಕಾಣಿಸ್ತಾ ಇದ್ದೆ, ಹ ಮಾಯೆ ಅಂತ ಹೇಳಿದೇನೋ ಇಲ್ಲೊ? ಮಾಯೆಗೆ ಆಕೃಷ್ಟರಾಗದೇ ಇದ್ದವರು ಯಾರು ಇಲ್ಲ. ಅದು ಪ್ರಕೃತಿ. ಪ್ರಕೃತಿಯಿಂದ ಸೆಳೆಯಲ್ಪಡದೇ ಇದ್ದವರು ಬಹುಶ: ಪ್ರಪಂಚದಲ್ಲಿ ಉಸಿರಾಡ್ತಾ ಇದ್ರೂ ಬದುಕಿಲ್ಲ. ಅವರು ಗಾಢ ನಿದ್ರೆಯಲ್ಲಿ ಇರಬಹುದು. ಈಗ ಜಾಗ್ರತ ಚಿತ್ತನಾದಂತಹ ನಾನು ಸತ್ಯಕ್ಕಾದ್ರೆ - ಯೆಲ್ಲಿ ಹುಟ್ಟಿದವಳು ಎಂಬುವದಕ್ಕಿಂತ ಹೆಚ್ಚಿಗೆ ನಿನ್ನ ತಂದೆಯಾರು ಅಂತ ಕೇಳುವ ಕುತೂಹಲ ನನಗೆ ಉಂಟಾಗಿದೆ. ಯಾಕೆ? ಅಮೂಲ್ಯವಾದಂತಹ ಒಂದು ವಸ್ತುವಿಗೆ ಹಾಗೇ ಕೈ ಹಾಕ್ಲಿಕ್ಕಾಗೊದಿಲ್ಲ ಅಲ್ಲವೇ? ಅವರ ದಾತಾರ ಯಾರು ಅಂತ ತಿಳ್ಕೊಳ್ಳೋದು ಒಳ್ಳೇದು. ಇದಾಗಿ ಸಿಕ್ಕಿದರೆ ಆಯ್ತಲ್ಲ. ಸಿಕ್ಕದಿದ್ರೆ ಅಂವ ಯಾರು ಅಂತ ಅವನನ್ನಾದ್ರೂ ನೋಡಬೇಕಾಗ್ತದೆ. ಎಂಬಾಗ, ನಾನು ಮಾತನಾಡಲಿಕ್ಕೆ ಹೊರಟ ಈ ಬಾಂಧವ್ಯ ಇದೆಯಲ್ಲ ನಿನ್ನ ನನ್ನ ಈ ಸಾಂಗತ್ಯ ಇದೆಯಲ್ಲ ಇದು ಅಷ್ಟು ಆಳವಾಗಿಯೂ ಇದೆ ಅಷ್ಟು ತೀವ್ರವಾಗಿಯೂ ಇದೆ ಅಂತ ಅರ್ಥ. ಅದಕ್ಕಾಗಿ ಕೇಳಿದ್ದು - ನಿನ್ನ ತಂದೆ ಯಾರು? ಈಗ ಒಂದೇ ರೀತಿ ಕೇಳುವ ರಾಗಗಳು ಅನೇಕರಿಗೆ ಅದು ಒಂದೇ ಜನಕರಾಗದಿಂದ ಹುಟ್ಟಿದ ಜನ್ಯ ಅಂತ ತೋರದೆ. ಆದರೆ ಶಾಸ್ತ್ರವೇತ್ತನಿಗೆ ಒಂದೇ ರೀತಿಯಾಗಿ ಕೇಳುವ ರಾಗ ಅದು ಬೇರೆ ಬೇರೆ ಜನಕ ಜನ್ಯಗಳು ಅಂತ ಸಂಗೀತ ಶಾಸ್ತ್ರ ಹೇಳ್ತದೆ. ಹಾಗೆಯೇ ನೀನು ಅಪರೂಪದ ಹೆಣ್ಣು . ಎಲ್ಲ ಹೇಳಿದೆನಲ್ಲ. ಇದು ನಾನು ಊಹಿಸಿದಂತೆ ಒಂದು ಜನಕಸ್ಥಾನದ ಜನ್ಯವೋ ಅಥವಾ ಇದಕ್ಕೆ ಜನಕಸ್ಥಾನ ಬೇರೆಯೋ ಅಂತ ವಿಮರ್ಶೆ ಮಾಡುವದಕ್ಕಾಗಿ ಈ ಪ್ರಶ್ನೆಯನ್ನೆಲ್ಲ ಕೇಳಿದ್ದೆ ನಾನು. ಇನ್ನು ಹೇಳಿದರೂ ನಿನಗೆ ಅರ್ಥವಾಗಲಿಲ್ಲ - ನಿನ್ನನ್ನು ನಾನು ಬಯಸುವಂತೆ ನಿನ್ನ ಸೃಷ್ಟಿಯಾಗಿದೆ! ನನ್ನಂಥವನು ಬಯಸುವಂತೆ ನಿನ್ನ ಸೃಷ್ಟಿಯಾಗಿದೆ. ಬಹುಶ: ನಿನಗೆ ನಿನ್ನತನದ ಅರಿವು ಸಂಪೂರ್ಣ ಆಗಲಿಲ್ಲವೊ ಯೇನೋ! ಅದೂ ಇದ್ದದ್ದೇ ಈ ಪ್ರಪಂಚದಲ್ಲಿ, ಋಷಿ ಮುನಿಗಳು ಹೇಳ್ತಾರೆ- ಲೋಕದ ಬಗ್ಗೆಯೆಲ್ಲ ಬೇಕಾದಷ್ಟು ವಿವೇಚನೆ ಮಾಡಬಲ್ಲರು ವಿಮರ್ಶಿಸಬಲ್ಲರು. ಇದಮಿಥಂ ಎಂಬ ತೀರ್ಮಾನಕ್ಕೂ ಬರಬಲ್ಲರು. ಆದರೆ ನಾನು ಯೇನು ಎಂಬುದನ್ನು ಯಾರೂ ತಿಳಿಯಲಾರರು, ಯಾಕೆ ತಿಳಿಯಲಾರರು? ನಾನು ಯೇನು ಎಂಬಂತಹ ತಿಳುವಳಿಕೆ ಬಂದಂಥವನಿಗೆ ಯಾವುದರ ಬಗ್ಗೆಯೂ ಭ್ರಮೆಯಿಲ್ಲ ಯಾಕೆ? ನಾನೇ ಯೆಲ್ಲವು. ಹಾಗೆ ಬಹುಶ: ನೀನು ಅಲ್ಲಿಗೆ ಮುಟ್ಟಿರಲಿಕ್ಕಿಲ್ಲ. ನಾನೂ ಅಲ್ಲಿಗೆ ಮುಟ್ಟಲಿಲ್ಲ, ಇನ್ನೂ ಇಲ್ಲ. ಆದರೆ ದೈಹಿಕವಾಗಿ ನಾನು ಯಾರು? ನಾನೇನು? ಎಂಬ ಪ್ರಜ್ಞೆನನಗಿದೆ. ನಿನಗೂ ಇದ್ರೆ ನನಗೊಂದು ಉಪಕಾರ ಆದೀತು. ಅಂತೂ ನಿನ್ನಿಂದ ನಾನು ಸೆಳೆಯಲ್ಪಟ್ಟವ. ಅದರಲ್ಲೇನ್

ತಪ್ಪಿಲ್ಲ. ಯಾಕಂದ್ರೆ ಯಾವ ವಸ್ತು ನಮ್ಮನ್ನು ಸೆಳೆತದೋ ಅದನ್ನು ಆಕ್ಷೇಪಿಸುವಂತಿಲ್ಲ. ಅಂತಹ ಒಂದು ಕಾಂತಾಶಕ್ತಿ ಇರದೆ ಕೆಲವು ವಸ್ತುಗಳಿಗೆ, ಒಂದೇ ನಾವು ಅದನ್ನು ಕಾಣದೇ ಇರಬೇಕು ಸಮೀಪ ಹೋಗದೇ ಇರಬೇಕು. ಹೋದರೆ ಅದು ಎಳೆದ್ರೆ...? ಅದರ ಪ್ರಾಬಲ್ಯವನ್ನು ನಾವು ಮನದಟ್ಟು ಮಾಡಿಕೊಂಡು ಅದರ ಮುಂದೆ ನಮ್ಮ ಲಘುತ್ವವನ್ನು ಸ್ವೀಕರಿಸುವ ಪ್ರಾಮಾಣಿಕತೆ ಬೇಕು. ಆದ್ದರಿಂದ ಇನ್ನೂ ಹೇಳುವದಿದ್ದರೆ ಕಾವ್ಯವಾಣಿಯಲ್ಲಿ - ಓ ಹೆಣ್ಣೆ ನಿನಗೆ ನಾನು ಸೋತೆ ಆದ್ದರಿಂದ ನನ್ನನ್ನು ವರಿಸುವೆಯಾ? ನನ್ನನ್ನು ವರಿಸಿ ಒಲಿಸುವೆಯಾ?

ಹಾಗಾದರೆ ಇಲ್ಲಿದ್ದಂತಹ ಯಾವ ಅಂಬಿಗರ ಸಮೂಹ ಅದರಲ್ಲಿ ನಾಯಕ ಅಂತಾಯ್ತು ನಿನ್ನ ತಂದೆ. ಯತಾರ್ಥ- ಯಾಕೆ ಅಂತಂದ್ರೆ ಯೆಷ್ಟೋ ದೂರದಲ್ಲಿದ್ದಂತಹ ನನಗೆ ಬಂದಂತಹ ಸುಗಂಧ, ಅದನ್ನೇ ನಾನು ಮೊದಲು ಹೇಳಿದ್ದಲ್ಲ ಹಾಗಾಗಿ ಅಂತಹ ಸುಗಂಧದ ರಾಶಿಯೇ ನೀನು! ಇದೊಂದು ವಿಚಿತ್ರ! ಪ್ರಪಂಚದಲ್ಲಿ ಹೇಳಿಕೇಳಿ ಯಾವ ಪರಿಸರದಲ್ಲಿ ಮನುಷ್ಯರು ಬದುಕ್ತಾರೆ ಆ ಪರಿಸರದ ಗಂಧವನ್ನು ಯಾವ ವಿಧದಿಂದಲೂ ಅಡಗಿಸಲಿಕ್ಕೆ ಸಾಧ್ಯವಾಗುವದಿಲ್ಲ. ಅಂಬಿಗರದ್ದೇ ಸಮಾಜ ! ಹಾಗಾದರೆ ಮೀಂಗುಲಿಗರು ಅಂತ ಅರ್ಥ. ಆ ಗಂಧವನ್ನು ಅಡಗಿಸುವಂತಹ ಒಂದು ಸುಗಂಧ ನಿನ್ನ ಶರೀರದಲ್ಲಿದೆ ಈ ಪ್ರದೇಶ ತಪ್ಪಿ ಬರೇ ಒಂದು ಶುದ್ಧವಾದಂತಹ ವಾತಾವರಣದಲ್ಲಿ ಈ ಗಂಧ ಎಷ್ಟು ಭವ್ಯವೂ ದಿವ್ಯವೂ ಆಗಿ, ಯೋಜನ ಅಲ್ಲ ಯೋಜನ ಯೋಜನ ಪರ್ಯಂತವಾಗಿ ವ್ಯಾಪಕವಾಗ್ಲಿಕ್ಕಿಲ್ಲ? ಅಂದರೆ... ನಾಡ ನುಡಿಯೊಂದುಂಟು, ಯಾವ ಇಂಗು ಅಂತ ಒಂದಿರದೆ ಇದರ ಭರಣಿಯಲ್ಲಿದ್ದ ಕಸ್ತೂರಿ ತನ್ನ ಗಂಧವನ್ನು ಬಿಟ್ಟುಕೊಡಲಿಲ್ಲ ಅಂತಾದ್ರೆ ಅದು ಪರಿಶುದ್ಧವಾದಂತಹ ಕಸ್ತೂರಿ ಅಂತ ಹೇಳ್ತಾರೆ. ಬೇರೆ ಕಡೆ ಕಸ್ತೂರಿಯ ಪರಿಮಳ ಬಂದ್ರೂ ಬೆರಕೆಯಿದ್ದರೂ ಇದ್ದೀತು. ಮೇಲಿಂದ ಮಾತ್ರ ಕಸ್ತೂರಿಯನ್ನು ಪೂಸಿ ಒಳಗೆ ಯೇನೂ ಇಲ್ಲ! ಕಟುವಾದಂತಹ ಇನ್ನೊಂದು ಗಂಧವನ್ನು ಬಹಳ ದೂರಕ್ಕೆ ಚಲ್ಲುವಂತಹ ಇಂಗನ್ನು ಹಾಕಿದ ಪಾತ್ರದಲ್ಲಿ ಕಸ್ತೂರಿ ಇದ್ದೂ ತನ್ನ ಸುಗಂಧವನ್ನು ಬಿಟ್ಟುಕೊಡಲಿಲ್ಲ ಎಂಬಂತೆ ಯೆಲ್ಲ ಬೇರೆ ಗಂಧವೇ ವ್ಯಾಪಕವಾಗಿ ಇದೆಯೋ... ಮತ್ಸ ಗಂಧವೇ...? ನಾನೆಣಿಸುವದು- ಮತ್ಸ ಗಂಧಿಯಾಗ ಬೇಕಾದವಳು ಇಂತಹ ಯೋಜನ ಗಂಧಿಯಾಗಬೇಕಾಗಿದ್ರೆ...! ಅಲ್ಲವೇ? ಇದೊಂದು ಅದ್ಭುತ ಸೃಷ್ಟಿ, ಬ್ರಹ್ಮನ ಸೃಷ್ಟಿಯಲ್ಲಿ ನೂತನವಾದ ಸೃಷ್ಟಿ, ಆದ್ದರಿಂದಲೇ ನನಗೆ ತೋರದೆ. ನನ್ನಂಥವರ ಮನಸ್ಸು ಅಂತಿಂತಹ ಅಪಾತ್ರದಲ್ಲಿ ಅಥವಾ ಸ್ವೀಕರಿಸಲಾಗದೇ ಇದ್ದಂತಹ ಒಂದು ವಸ್ತುವಿನಲ್ಲಿ ನೆಲೆ ಆಗಲಿಕ್ಕಿಲ್ಲಲ್ಲ? ಯಾಕೆ? ಮೇಲಿಂದ ಮೇಲಕ್ಕೆ ಯೆನೋ ಕೊಳಕಿದೆ ಅಂತ ತೋರಿದ್ರೂ ಅದೊಳಗೆ ಮಧುರವಾದಂತಹ ಜೇನಿದೆ ಅಂತಾದ್ರೆ ಜೇನು ನೋಣ ಆ ಹೊಲಸನ್ನು ಕೂಡಾ ಕಾಣದೆ. ಇದೆ ಅಂತಾದ್ರೂ ಆ ಮಧುರ ರಸವನ್ನು ಹೀರುವದಕ್ಕಾಗಿ ಕೆಲವು ಸಲ ಅದು ಮಲಸ್ಪರ್ಶಿಯಾಗುವದುಂಟು. ಇಲ್ಲಿದ್ದಂತಹ ಬರೇ ಮಣ್ಣಿನ ಮಗಳಲ್ಲಿ ಒಬ್ಬ ರಾಜಋಷಿಯ ಮನಸ್ಸು ನೆಲೆ ನಿತ್ತುಹೋಗ್ಯದೆ ಅಂತಂದ್ರೆ ಅರ್ಥಯೇನು? ಇಷ್ಟೇ ನೀನು ಹೇಳಿದ್ದೆ -

ಮತ್ಸ್ಯ ಗಂಧಿಯಾಗಬೇಕಾದವಳು ಯೋಜನ ಗಂಧಿಯಾದದ್ದೇ ನಮ್ಮಂಥವರ ಮನಸ್ಸನ್ನು ಸೆಳದದ್ದು. ಬಹಳ ಸಂತೋಷವಾಯ್ತು. ನಿನ್ನನ್ನು ಹಂಬಲಿಸಲಿಕ್ಕೆ ಕಾರಣ ಆ ಗಂಧ ನೀನಾಲೋಚನೆ ಮಾಡು ಹೇಗೆ ಅಂತಂದ್ರೆ ಇಂತಹ ಅಪರೂಪವಾದಂತಹ ಒಂದು ಗಂಧವನ್ನು ಆಘ್ರಾಣಿಸುವಂತಹ ಮೂಗುಳ್ಳ ಒಬ್ಬ ರಾಜ ಅದನ್ನೇ ಬೆಂಬತ್ತಿ ಬೆಂಬತ್ತಿ ಬೆಂಬತ್ತಿ ಬರುವಾಗ ಒಂಥರದ ಹಂಬಲಿಕೆಯಲ್ಲದೆ ಮತ್ತೇನು?

ಅದೇನು? ಪರಾಧೀನೆ ಹೌದು. ಈಗ ಹೆಣ್ಣು ಮಣ್ಣು ಹೊನ್ನು ಇದು ಯೆಲ್ಲರೂ ಬಯಸುವಂತಹ ಪದಾರ್ಥಗಳು. ಈ ಯೆಲ್ಲರೂ ಬಯಸುವ ಪದಾರ್ಥಗಳನ್ನು ಒಬ್ಬನಿಂದ ಮತ್ತೊಬ್ಬನು ಕೊಳ್ಳುವದೇ ಪ್ರಪಂಚದ ವ್ಯವಹಾರ.ಕೆಲವರು ಪ್ರಬಲರು ಬಯಸಿ, ಕೊಳ್ಳುವದಲ್ಲ ಸೆಳೆಯುವದು. ಪ್ರಪಂಚದಲ್ಲಿ ಈವರೆಗೆ ಹೆಣ್ಣು ಹೊನ್ನು ಮಣ್ಣು ಈ ಪದಾರ್ಥಗಳ ಕುರಿತಾಗಿ ಉಂಟಾದ ಸಂಘರ್ಷ- ಒಂದು ಸ್ನೇಹ ಸಂಘರ್ಷ, ಇನ್ನೊಂದು ದ್ವೇಷ ಸಂಘರ್ಷ, ಈ ಎರಡು ರಸದಿಂದ ಕೂಡಿಕೊಂಡಿದೆಯೇ ಹೊರತು ಬೇರೊಂದೇನಿದೆ? ಆದ್ದರಿಂದ ಹೆಣ್ಣು ನೀನು ಪರಾಧೀನೆ ? ಹ! ಹೆದರಿದೆ. ಪರಾಧೀನೆ ಅಂತನ್ನುವುದು...? ಹಾಗಾದರೆ ಬಹಳ ಸಂತೋಷ, ಈಗ ತಂದೆಯ ಅಧೀನ ಆಗಿದ್ದವಳು ಅವಳು ನಮ್ಮಂಥವರು ಬಯಸಬಾರದೇ ಇದ್ದಂಥವಳಲ್ಲ. ಪರಾಧೀನೆ ಅಂತೇಳುವಾಗ ಮತ್ತೊಬ್ಬನಿಗೆ... ಕೊಟ್ಟು ಹೋದದ್ದಲ್ಲ. ಹಾಗಿರುವಾಗ ಒಬ್ಬನ ಹೆಂಡತಿಯಲ್ಲ. ತಂದೆಯ ಅಧೀನ ಇದ್ದ ಹುಡುಗಿ ಅಂತೇಳಿದ್ರೆ ನಮ್ಮಂತಹ ಕುಲವಂತರಿಗೆ ಮತ್ತಷ್ಟು ಆಸಕ್ತಿ ಹೆಚ್ಚು. ಕಾರಣಯೇನು? ತಂದೆ ಹೇಳಿದಂತೆ ನಡೆಯುವವಳು, ನಾಳೆ ಗಂಡ ಹೇಳಿದಂತೆ ನಡೀತಾಳೆ ಅಂತ ಅರ್ಥ. ತನ್ನ ತಂದೆಯನ್ನೇ ತಿರಸ್ಕರಿಸಿದವಳು ಕೈ ಹಿಡಿದ ಗಂಡನನ್ನು ಪೂಜೆ ಮಾಡ್ತಾಳೆ ಅಂತ ವಿಶ್ವಾಸ ಇಲ್ಲ. ನಿನ್ನ ತಂದೆಯನ್ನೇ... ಕೇಳಬೇಕು. ಪರ್ಯಾಯದಿಂದ ಇನ್ನು ನಿನ್ನನ್ನು ಕೇಳಬೇಕಾಗಿಲ್ಲ ಅಂತಾಯ್ತು.

ತುಜಾವಂತು-ಝಂಪೆ | ಯೆಲ್ಲಿಹನು ತವಪಿತನು ಸಕಲಗುಣಶೀಲೆ | ಎಲ್ಲಸಂಪದ ನಿನ್ನಾಧೀನಗಳು

ಕೇಳೆ ಸಲ್ಲಿಸೆನ್ನಯಭೀಷ್ಟ ವೇಗದಿಂ ಬಾಲೆ |

ನಲ್ಲೆ ಎನ್ನೊಳು ಮನವ ಇಟ್ಟು ನೀ ಪೇಳೆ || ೫ |

ಯೋಜನಗಂಧೀ, ಕಾಮುಕನಾಗಿ ನಿನ್ನಲ್ಲಿ ನಾನು ಪ್ರಣಯಾರ್ಥಿಯಾಗಿ ಬಂದವ ಅಂತ ತಿಳಕೊಳ್ಳಬೇಡ. ನನಗೂ ಬಹಳ ಹಿಂದೆಯೇ ಮದುವೆಯಾಗಿತ್ತು. ಅವಳಿಂದ ನಾನು ಪಡೆದ ಧೀಮಂತನಾದ ಸೀಮಂತನಾದ ಏಕಮಾತ್ರ ಪುತ್ರನಿದ್ದಾನೆ.

ನಿನಗೆ ರಾಮಾಯಣ ಗೊತ್ತಿದ್ರೆ, ದಶರಥನು ಪಡೆದಂತಹ ನಾಲ್ಕು ಮಕ್ಕಳನ್ನು ಸಮನ್ವಯ ಮಾಡಿದ್ರೆ ಆ ನಾಲ್ಕರ ಪ್ರತೀಕವೋ ಎಂಬಂತೆ ನನ್ನ ಮಗ ದೇವವ್ರತನೆಂದು ಆತನಿಗೆ ಹೆಸ್ರು.

ಯತಾರ್ಥವಾಗಿ ಒಬ್ಬ ತಂದೆಯ ನೆಲೆಯಲ್ಲಿ ಚಿಂತಿಸಿದರೆ ನಾನವನಿಗೆ ಹೆಣ್ಣು ಕೇಳಬೇಕಾದ ಸ್ಥಾನದಲ್ಲಿದ್ದವನು ಯಾಕೋ ಯೇನೋ ಗೊತ್ತಿಲ್ಲ ನಾನು ಮದುವೆಯಾದಂತಹ ಯಾವತ್ತೂ ಹೆಣ್ಣಿಗೂ ಈ ಹೆಣ್ಣಿಗೂ ಒಂದು ಅವಿನಾಭಾವ ಸಂಬಂಧ ಇದೆ ನನ್ನ ಕಣ್ಣಿನಲ್ಲಿ. ಅವಳನ್ನು ನಾನು ಕಂಡು ಮೋಹಿಸಿದುದು ಗಂಗಾತೀರದಲ್ಲಿ, ನಿನ್ನನ್ನು ಕಂಡು ನಾನು ಸೆಳೆಯಲ್ಪಟ್ಟದ್ದು ಯಮುನಾ ತೀರದಲ್ಲಿ. ಆದಕಾರಣ ಯಲ್ಲಿಯ ಗಂಗೆ ಯೆಲ್ಲಿಯ ಯಮುನೆ ಅಂತ ನಾವು ಬೇರೆ ಬೇರೆ ತೀರದಲ್ಲಿ ನಿತ್ತು ನೋಡುವಾಗ ಮಾತ್ರ ದ್ವೈತವನ್ನು ಕಾಣೇವೆಯೋ ಹೊರತು ಗಂಗೆ ಮತ್ತು ಯಮುನೆಯ ಈ ಅದ್ವೈತ ಸಂಬಂಧವನ್ನು ತಿಳು ನಾವು ಯಾವ ಗಯಾ ಅಥವಾ ಪ್ರಯಾಗದಲ್ಲಿ ಮುಟ್ತೇವೆ ಆವಾಗ ಗಂಗೆಯೇ ಯಮುನೆ ಯಮುನೆಯೇ ಗಂಗೆ ಎಂಬ ಪ್ರತ್ಯಕ್ಷ ಅನುಭವ ಆಗುವಂತೆ ಕಾಳಿಂದೀತೀರದ ಹೆಣ್ಣಿನಿಂದ ನಾನು ಆಕೃಷ್ಟನಾದೆ ಅಂತ ನಾನು ಮನ:ಸಾಕ್ಷಿಯಲ್ಲಿ ತೀರ್ಮಾನಿಸಿದೆ. ನಿಜವಾಗಿ ನೋಡು - ನನಗೆ ಕಾಣಿಕೆಯಾಗಿ ಸಿಕ್ಕಿದ್ದೇನುಂಟು ಅಂತ ನೋಡು. ಇದು ಕೊಟ್ಟವರೂ ಮೂರ್ಖರಲ್ಲ. ಅಂದರೆ ನನ್ನ ಸದ್ಯದ ಪರಿಸ್ಥಿತಿಯಲ್ಲಿ ಇದನ್ನು ನಾನು ಗ್ರಹಣ ಮಾಡಬೇಕಾದವ. ನನ್ನ ಮಗನನ್ನು ಸಿಂಹಾಸನದಲ್ಲಿ ಅಭಿಷೇಕ ಮಾಡಬೇಕಾದವ. ಈ ನಿರ್ಣಯದಿಂದಲೇ ಹೊರಟು ಬಂದಾವಾಗ ಇದೊಂದು ಅಪೂರ್ವವಾದ ದರ್ಶನ! ನನ್ನ ಬದುಕಿಗೆ ಮತ್ತೊಮ್ಮೆ ತಿರುವನ್ನು ಕೊಟ್ಟಂತಹ ಒಂದು ಸನ್ನಿವೇಷ ಇದ್ದೂ ಇರಬೇಕು. ಯಾಕಂದ್ರೆ ಏಕಮಾತ್ರ ಪುತ್ರ ನಾಳೆ ನಾನು ವಾನಪ್ರಸ್ಥಿಯಾಗಿ ಹೋಗೇನೆ. ತಾಯಿಯಂತೂ ಇಲ್ಲ. ಬಹುಶ: ಈ ಸಿಂಹಾಸನದ ಮಹಾರಾಣಿಯಾಗಿ ಕುಳಿತು ನನ್ನ ಮಗನಿಗೆ ಮಾತೃಸ್ಥಾನದಲ್ಲಿಯೂ ಇದ್ದು ರಾಜಮಾತೆಯ ಸ್ಥಾನದಲ್ಲಿ ಇದ್ದು ಲಾಲನೆ ಪಾಲನೆ ಮಾಡುವ ಸಂಪೂರ್ಣ ಹೊಣೆಯನ್ನು ಹೊತ್ತ ಯಜಮಾನಿ ನೀನಾಗಬೇಕು ಅಂತ ನನ್ನ ಮಗನ ಜಾತಕದಲ್ಲಿ ಇದ್ದೆ, ಯಾಕೆ? ನಾವು ಕೌಟುಂಬಿಕರು -ಮಗನ ಜಾತಕ ತಂದೆಗೆ ತಂದೆಯ ಜಾತಕ ಮಗನಿಗೆ ಹೀಗೆಲ್ಲ ಪರಸ್ಪರ ಹೊಂದಿಕೆಯಾಗದೆ ಹೆಚ್ಚು ಕಡಿಮೆ ಆಗ್ತಿದೆ ಅಂತ ನಾವು ತಿಳದವು ಆಸ್ತಿಕರು. ಆದ್ದರಿಂದ ಈಗ ನಿನ್ನಲ್ಲಿ ಹೇಳ್ತೇನೆ - ನಾನಂತೂ ಮೆಚ್ಚಿದ್ದೇನೆ. ನನ್ನ ಮಗ ವಿದ್ಯೆಯಲ್ಲಿ ಬುದ್ಧಿಯಲ್ಲಿ ವಿಕ್ರಮದಲ್ಲಿ ನಾನು ಮೊದಲೇ ನಿನ್ನಲ್ಲಿ ಹೇಳಿದಂತೆ ದಾಶರಥಿಯಾಗಿಯೇ ಅಂದರೆ ಸಮಷ್ಟಿಯಿಂದ ಇದ್ದವನಿಗೆ ಮಾತೃಸ್ಥಾನವೊಂದಿಲ್ಲ. ಅವನಿಗೊಂದು ತಾಯಿಯನ್ನು ಒದಗಿಸಬೇಕಾಗಿದೆ. ನಿನ್ನಲ್ಲಿ ಹೇಳೋದಕ್ಕೇನು- ಅವನಿಗಿದ್ದ ಮಾತೃಸ್ಥಾನ ವಿಯೋಗವಾಗುವದಕ್ಕೆ ಗೃಹಸ್ಥಧರ್ಮದಲ್ಲಿ ನನ್ನ ನಡತೆಯೂ ಮಾರಕವಾಯ್ತು. ಹೇಗೆ ಯೇನು ಅಂತ ಕೇಳಬೇಡ. ಅವ ನನಗೆ ಬೇಕಿದ್ರೆ ನಾನು ದಾಂಪತ್ಯವಿಚ್ಛೇದ ಮಾಡಿಕೊಳ್ಳಬೇಕಾಯ್ತು ದಾಂಪತ್ಯವನ್ನು ಉಳಿಸಿಕೊಂಡು ಅವನನ್ನು ಉಳಿಸಿಕೊಳ್ಳುವ ಭಾಗ್ಯ, ಸಕಲಸೌಭಾಗ್ಯ, ನನ್ನ ಮನೆಯ ಸಕಲೈಶ್ವರ್ಯ ಕೈತಪ್ಪಿಹೋಯ್ತು. ಮನೆಯ ತಾಯಿಯ ಸ್ಥಾನ ನಿನಗೆ ಕೊಡೋಣ ಎಂಬಷ್ಟು ನನ್ನ ಆಶ್ವಾಸನೆ ಇದೆ. ಕೇವಲ ದೇಹಸುಖಕ್ಕೆ ಮಾತ್ರವಲ್ಲ, ಗೃಹಸುಖ; ಗೃಹಸುಖಕ್ಕೆ ಮಾತ್ರವಲ ಕೌಟುಂಬಿಕ ಸುಖಕ್ಕೆ ನನ್ನ ಮಗನಿಗೆ ತಾಯಿಯಾಗಿ ಬಾ. ನನ್ನ ಮಗನಿಗೆ ತಾಯಿಯಾಗಿ ಬರುವಾಗ ನನಗೆ ಹೆಂಡತಿಯಾಗಿ ಬಾ. ಹೆಂಡತಿಯಾಗಿರುವಾಗ ನಿನಗಿಂತ ಯೆಷ್ಟೋ

ವಯಸ್ಸು ಮೀರಿದ ವಾರ್ಧಕ್ಯಕ್ಕೆ ಹೆಜ್ಜೆಯಿಟ್ಟಿರುವ ನನಗೂ ಒಂದು ರೀತಿಯಲ್ಲಿ ಮಾತೃತ್ವವನ್ನು ಕೊಟ್ಟು... ಇದು ವೈದಿಕ ಸಂಸ್ಕೃತಿ, ಜವ್ವನದಲ್ಲಿರುವಾಗ ಹೆಂಡತಿ ಹಿಂಬಾಲಿಸ್ತಾಳೆ. ಇವನಿಗೆ ಪ್ರಾಯ ಹೋದಾವಾಗ ಯೇನಿಲ್ಲ ಅಂತಂದ್ರೂ ಅವಳು ಕಡಿಮೆ ವಯಸ್ಸಿನವಳಾಗಿದ್ದಾಳೆ. ಆವಾಗ ಅವಳು ಮುಂದೆ ಹೋಗಿ; ಜನಕರಾಜ ಸೀತೆಗೆ ಹೇಳಿದ್ದನಂತೆ "ಛಾಯಾನುವರ್ತಿಯಾಗು" ಅಂತ. ಈ ಛಾಯಾನುವರ್ತಿ ಅಂತಂದ್ರೆ ಅದೇ, ನಾವು ಸೂರ್ಯನಿಗೆ ಮುಖ ಮಾಡಿ ನಿತ್ತಾವಾಗ ನೆರಳು ಎಷ್ಟು ಉದ್ದವಾಗಿ ನಿಲ್ತದೆ ಪೂರ್ವಾಹ್ನದಲ್ಲಿ? ನಾವು ನಿತ್ತಲ್ಲೇ ನಿತ್ರೂ ಕೂಡಾ ಅಪರಾಹ್ನವಾಗ್ತಾ ಆಗ್ತಾ ಬರುವಾಗ ಯೇನಾಗ್ತಿದೆ? ಮಧ್ಯಾಹ್ನಕ್ಕಾಗುವಾಗ ಭಾವೈಕ್ಯವಾಗಿದೆ. ವಾರ್ಧಕ್ಯ ಬರುವಾಗ ಪುನ: ಉದ್ದ ಉದ್ದ ಆಗ್ತದೆ. ಆದರೆ ಒಂದುಂಟು -ಸೂರ್ಯನಿಗೆ ಬೆನ್ನು ಮಾಡಿ ನಾವು ನಿತ್ತಾವಾಗ ನೆರಳು ಮುಂದಿರದೆ. ಪ್ರಾರಂಭದ ಜೀವನದಲ್ಲಿ ನೆರಳಾದಂತಹ ಹೆಂಡತಿ ಹಿಂದೆಯಿದ್ದಾಳೆ. ಛಾಯಾನುವರ್ತಿತ್ವದಲ್ಲಿ ಪ್ರಾರಂಭದಲ್ಲಿ ಗಂಡನ ಹಿಂದೆ, ಯೌವ್ವನದಲ್ಲಿ ಅವಿನಾಭಾವ ನೆರಳೂ ದೇಹವೂ ಒಂದೇ ಅಪರಾಹ್ನದಲ್ಲಿ ನೆರಳು ಮುಂದೆ ಹೀಗೆ ಪ್ರಾರಂಭಕ್ಕೆ ಹಿಂಬಾಲಿಸಿ ಬಂದು, ಗೃಹಸ್ಥಾಶ್ರಮದಲ್ಲಿ ಯೌವ್ವನದಲ್ಲಿ ಒಂದಾಗಿ ನಿಂದು ವಾರ್ಧಕ್ಯ ಬಂದಾಗ ಪುನ: ಮುಂದೆ ಇನ್ನೂ ಹೀಗಿರಬಹುದು, ಕಾವ್ಯಾತ್ಮಕವಾದಂತಹ ಅರ್ಥ. ನಾನದನ್ನೇ ಹೇಳ್ತೇನೆ ನನ್ನ ಕೈ ಹಿಡ್ಡವಳು 'ಛಾಯಾನುವರ್ತಿ' ಆಗಲಿಲ್ಲ. ಅವಳು ಯಾವಾಗಲೂ ಮಧ್ಯಾಹ್ನದ ನೆರಳೇ ಆಗಿ ಬಿಟ್ಟು ಅವಳ ದೋಷ ಅಲ್ಲ, ನನ್ನ ಪ್ರಾಯದ ದೋಷ. ಈಗ ವಾರ್ಧಕ್ಯ ಬಂದಾವಾಗ ಮುಂದೆ ನೆರಳು ಒಂದು ಬೇಕಾಗಿದೆ, ಅವಳಿಗೂ ಮಾತೃಸ್ಥಾನ ಮಗನಿಗೂ ಮಾತೃಸ್ಥಾನ. ಈ ಮಾತೃಸ್ಥಾನ ಉಭಯರಿಗೂ - ತಂದೆಗೂ ಮಗನಿಗೂ ಬರುವಲ್ಲಿ ಇಲ್ಲಿ ದೈಹಿಕವಾದಂತಹ ಲೈಂಗಿಕ ಸಂಬಂಧ ಇಲ್ಲ. ವಯೋಮಾನದಿಂದ ನೋಡಿದರೆ ನನಗೆ ನೀನು ಅರ್ಧಾಂಗಿ ಆಗಲಿಕ್ಕೆ ಸಾಧ್ಯವಿಲ್ಲ ಯಾಕೆ? ನಾನು ವಯಸ್ಕ ನೀನು ಚಿಕ್ಕವಳು. ನನ್ನ ಮಗನಿಗಂತೂ ಯತಾರ್ಥ ಹೇಳ್ತೇನೆ. ನಿನಗಿಂತ ಹೆಚ್ಚು ಪ್ರಾಯ ಆಗದೆ, ಹಾಗಿರುವಾಗ ಅವನಿಗೂ ನಿನ್ನಲ್ಲಿ ಮಾತೃಭಾವವೇ ಹೊರತು, ಹೆತ್ತ ತಾಯಿಯಲ್ಲ. ಮುದುಕನಾದ ನನಗೂ ಅಷ್ಟೇ, ನೀನು ತಾಯಿಯಾಗಬಲ್ಲೆ ಹೊರತು ನನ್ನ ಶಾರೀರಿಕವಾದ ಭೋಗದ ಆಸರನ್ನು ತೃಪ್ತಿಪಡಿಸುವಂತವಳಾಗುವದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇಲ್ಲಿ ಶಿವಪಾರ್ವತಿಯರಿಗೆ ಮದುವೆ ಆದ ಹಾಗೆ, ಕಾಮನನ್ನು ಸುಟ್ಟ ಶಿವನಿಗೆ ಕಾಮಿನಿಯಾದವಳು ಶಿವೆ. ನಾನು ಕಾಮನನ್ನು ಸುಡದೇ ಇದ್ರೂ ಕಾಮನನ್ನು ಪರಿಶುದ್ಧಗೊಳಿಸಿ ಕೊಂಡವ. ಇಂದ್ರಿಯ ನಿಯಂತ್ರಣವುಳ್ಳವ, ಮತ್ತೊಂದು ಪಾರ್ವತೀ ಕಲ್ಯಾಣ ಆಗ್ಲಿ, ನಮ್ಮ ಚಂದ್ರವಂಶ ಬೆಳಗಲಿ. ನಿನ್ನ ತಂದೆಯಾದ ಯಾವ ದಾಶರಾಜ ಇದ್ದಾನಲ್ಲ ಅವನಿಗೂ ಕನ್ಯಾಪಿತೃತ್ವ ಫಲಹೇತುಕವಾಗಿ ಪರಿಣಮಿಸಲಿ, ಹುಟ್ಟಿದ ಕುಲ ಉದ್ಧಾರ ಆಗ್ತದೆ... ಯಾಕೆ? ಶ್ರೀಮಂತನಾದ ನನ್ನ ಕೈಹಿಡ್ದರೆ ನನಗೆ ಹೆಣ್ಣುಕೊಟ್ಟ ಮನೆತನ ದಾರಿದ್ರವನ್ನನುಭವಿಸುವದಿಲ್ಲ. ಹಾಗಾಗಿ ನನ್ನ ಭಾಗ್ಯಕ್ಕೆ ನೀನು ಭಾಗಿಯಾದೆ ಅಂತಾದ್ರೆ ನಿನ್ನ ತಂದೆಯೂ ಶ್ರೀಮಂತ ಧೀಮಂತನಾಗ್ತಾನೆ, ವಾರ್ಧಕ್ಯದಲ್ಲಿ ನೆಮ್ಮದಿಯಿಂದ ಬಾಳಿ ಬದುಕ್ತಾನೆ. ಇಷ್ಟು ವ್ಯಾಪಕವಾಗಿ ಚಿಂತಿಸಿದ ನನ್ನ ಕೊಡುಗೆಯನ್ನು ನಾನು ನಿನ್ನಲ್ಲಿ

ಹೇಳಿ ಉಪಯೋಗವಿಲ್ಲ ನಿನ್ನ ತಂದೆಯೆಲ್ಲಿ? ಯೇನಾಡ್ತಾ ಇದ್ದಾನೆ? ಹ ಹ, ಅರ್ಥವಾಯ್ತು. ಬಹುಶ: ಇಲ್ಲಿಂದ ಹಾದು ಹೋಗುವವರು ಆಚೆ ದಡದಿಂದ ಮುಂಬರಿಯಬೇಕು ಅಂತಾದ್ರೆ ದೋಣಿ ದಾಟಿಸುವ ಮುಖಂಡನೇ ನಿನ್ನ ಅಪ್ಪ ಇರಬೇಕು. ಒಳ್ಳೇದು, ಯಾಕೆ ಅಂತಂದ್ರೆ ಈ ಸಲ ಇನ್ನೊಂದರ್ಥದಲ್ಲಿ ಈ ದಡಕ್ಕೆ ಬಂದು ನಿತ್ತ ನನ್ನ ಬದುಕನ್ನು ಮುಂದೆಹಾಯಿಸುವದಕ್ಕೆ ತಡೆಯಾಗಿ ನಿತ್ತ ಈ ಹೊಳೆ ಇದನ್ನು ದಾಟಿಸುವದಕ್ಕೆ ಪಿತೃಸ್ಥಾನದಲ್ಲಿ ನಿತ್ತು ನಿಮ್ಮಪ್ಪ ಕನ್ಯಾದಾನ ಮಾಡಿದರೆ ಧಾರೆಯೆರೆಯುವದಕ್ಕೆ ಬಗ್ಗಿ. ಇದೂ ಒಂದು ದಾಟಿಸುವದು ತಾನೆ? ಯಾಕೆ ದಾಟಿಸುವದು? ನಾನೂ ಈಗ ಬಂದು ನಿತ್ತದ್ದು ಒಂದು ದಡದಲ್ಲಿ, ಈ ದಡದಿಂದ ಮುಂದೆ ಇದೆ ಯಾವುದು? ಆ ಅಲೆಯನ್ನು ವಿಸ್ತರಿಸಿಕೊಂಡು ನನ್ನ ಎದೆಯನ್ನೇ ಅಪ್ಪಳಿಸಿದಂತಹ ಈ ಒಂದು ಸಣ್ಣ ಅಲೆ ನೀನು ಮೊದಲು ಹೇಳಿದ್ದು ಇನ್ನೂ ಕೂಡಾ ವ್ಯಾಖ್ಯಾನ ರೂಪದಿಂದ ಮುಂದುವರಿಯುತ್ತಲೇ ಇದೆ. ಆದರೆ ಒಂದಿದೆ ಈ ಸಲ ನಿಮ್ಮ ತಂದೆ ಬಂದ್ರೆ ಆಚೆ ದಡಕ್ಕೆ ನಿನ್ನನ್ನು ಕೂಡಾ ನನ್ನ ಜೊತೆಕೂಡಿ ದಾಟಿಸಬೇಕು. ಯಾರಯ್ಯಾ ಅಲ್ಲಿ ! ಆ ದಾಶರಾಜ ಯಾರು ಅಂತ ವಿಚಾರಿಸಿ ಅವನಿಗೆ ಆದಷ್ಟುಬೇಗ ದೋಣಿಯನ್ನು ಈ ಕಡೆಗೆ ತರುವಂತೆ ಹೇಳಿ.

|ಸಾಂಗತ್ಯ ರೂಪಕ ಎನುತಲೆ ದಾಶರಾಜನು ನಾವೆಯನು ಕೊಂಡು | ಘನವೇಗ ಬಂದು

ಕಾಣತಲೆ | ಬನ್ನಿರಯ್ಯಾ ದೋಣಿಯನೇರಿ ಬೇಗದೊಳೆನೆ ಜನಪತಿ

ಪೇಳ ನಂಬಿಗಗೆ | ೬ |

ಅಯ್ಯಾ, ನಿನ್ನ ನಿತ್ಯವೃತ್ತಿ ಅದು ಅಂತ ನಮಗ್ಗೊತ್ತು ನೀನು ಈ ಕಡೆ ಬರಬೇಕು ಅಂತ ಕರೆಕೊಟ್ಟದ್ದೂ ಹೌದು. ನನ್ನೊಟ್ಟಿಗೆ ಇವರೆಲ್ಲ ಇದ್ದಾರೆ; ನಾನು ಯಾವಾಗಲೂ ಒಬ್ಬನೇ ತಿರುಗಾಡುವವನಲ್ಲ. ನನ್ನ ಆಕಾರ, ನನ್ನ ವೇಷಭೂಷಣ ನೋಡಿದರೆ ಬಹುಶ: ಈ ಪ್ರದೇಶದಲ್ಲಿರುವ ನಿನಗೆ ಊಹಿಸಲಿಕ್ಕೂ ಕಷ್ಟವಾದೀತು. ನಾನು ನಿನ್ನ ಮೂಲಕವಾಗಿ ಈ ಹೊಳೆಯನ್ನು ದಾಟುವದಕ್ಕೆ ಉದ್ದೇಶಿಸಿ ಬರಹೇಳಿದ್ದಲ್ಲ ನೀನು ನನ್ನನ್ನು ಬಹಳ ವಿಶಾಲವಾದ ಒಂದು ನದಿಯನ್ನು ದಾಟಿಸಬೇಕಾಗಿದೆ.

ಸಾಂಗತ್ಯ-ರೂಪಕ ಬರುವವರಲ್ಲ ನಿನ್ನೊಳು ಮಾತನಾಡ್ತರೆ / ತ್ವರೆಯಿಂದ

ಕಾದುಕೊಂಡಿಹೆನು | ಕರಿಪುರದರಸ ಶಂತನುವೆನ್ನ ಹೆಸರು

ಕೇಳ್ | ತರಳೆಯನೀಯ ಬೇಕೆನಗೆ || ೭ |

ಅಯ್ಯಾ ದಾಶರಾಜನೇ, ಜೀವನ ನದಿ ಅಂತೊಂದಿದೆ. ನಿನಗೂ ಇದೆ ನಮಗೂ ಇದೆ. ಅದೊಂದು ಮಹಾಪ್ರವಾಹ, ಈ ಹೊಳೆಯನ್ನೂ ನೀನು ದಾಟಿಸುವದಲ್ಲ, ನಮ್ಮ ಜೀವನ ನದಿಯನ್ನು ದಾಟಿಸಲುಬೇಕಾದಂತಹ ಒಂದು ಅಂಬಿಗ ವೃತ್ತಿ ನಿನ್ನ ಕೈಯ್ಯಲ್ಲಿದೆ. ನಾವು ಈ ಸಂಸಾರ ಸಾಗರ ದಾಟಬೇಕಿದ್ರೆ ಈ ಅಪರ ವಯಸ್ಸಿನಲ್ಲಿ ನಿನ್ನಿಂದ ಸೃಷ್ಟಿಸಲ್ಪಟ್ಟ

ಒಂದು ಸಣ್ಣ ನಾವೆ ನಮಗಾಗಿ ಸಿಕ್‌ಬೇಕು. ಸಾರ್ವಜನಿಕವಾದಂತಹ ನಾವೆ ಅಲ್ಲ. ಆ ನಾವೆ ನಿನ್ನಲ್ಲಿದೆ. ಆ ನಾವೆಯಲ್ಲಿ ನೀನು ನಮ್ಮನ್ನು ಕುಳ್ಳಿರಿಸಿ ಅಂದರೆ ಅದರ ಸಂಬಂಧ ಸ್ವಾಮ್ಯವನ್ನು ನಮಗೆ ಕೊಟ್ಟು, ಬಿಟ್ಟು ಬಿಟ್ರೆ ಮತ್ತೆ ನಮ್ಮಿಷ್ಟಕ್ಕೆ ನಾವೇ ನಾವೆಯನ್ನು ನಡಿಸ್ತೇವೆ. ಅಂದರೆ ಅದರರ್ಥ ನಿನಗೊಬ್ಬಳು ಮಗಳಿದ್ದಾಳೆ - ಹಾಗಾದರೆ ಸರಿಯಾಯ್ತಲ್ಲ? ನನ್ನ ಜೀವನದ ನದಿಯನ್ನು ದಾಟುವದಕ್ಕೆ ನಾವೆಯಂತೆ ಅಂದರೆ, ಹೆಂಡತಿಯಾಗಿ ಆ ನಿನ್ನ ಮಗಳು ಬೇಕಾಗಿದ್ದಾಳೆ. ಅವಳನ್ನು ನನ್ನ ಕೈಗೆ ಒಪ್ಪಿಸಿ ಈ ಜೀವ ನದಿಯನ್ನು ಪ್ರಾಣನಾವೆಯ ಸಾಂಗತ್ಯದಿಂದ ನಾನು ದಾಟಿ, ಜೀವನದ ದಡ ಮುಟ್ಟಬೇಕು ಎಂಬ ಅರ್ಥದಲ್ಲಿ ಸ್ವಲ್ಪ ಕಾವ್ಯಾತ್ಮಕವಾಗಿ ಹೇಳಲು ಪ್ರಯತ್ನಿಸಿದೆ.

"ಚಂದ್ರವಂಶ ಜಾತ, ಹಸ್ತಿನಾವತಿಯ ಪ್ರಭು, ಅಖಂಡಭಾರತದ ಚಕ್ರವರ್ತಿ ಶಂತನು ಅಥವಾ ಶಾಂತನು ನಾನು ನೋಡು, ಸುಮ್ಮನೆ ನನಗೆ ಶಾಂತನು ಶಂತನು ಅಂತ ಹೆಸರು ಬರಲಿಲ್ಲ - ನಾನು ರಾಜಋಷಿತವನ್ನು ಪರಿಪಾಲಿಸಿಕೊಂಡವ. ಆಹಾರ ನಿದ್ರಾ ಭಯ ಮೈಥುನಾದಿಗಳಲ್ಲಿ ಒಂದು ನಿಯಂತ್ರಣವನ್ನು ಪ್ರಾರಂಭದಿಂದಲೇ ಇಟ್ಟುಕೊಂಡವನು. ಈ ರೀತಿಯಾದಂತಹ ಪರಿಶುದ್ಧವಾದ ಜೀವನ, ಮನಸ್ಸು, ಕೈಯ್, ಬಾಯಿ ಶುಚಿಯಾಗಿಟ್ಟುಕೊಂಡದ್ದರಿಂದ ಯಾವನನ್ನೇ ಆಗಲಿ ಅಸುಖಿಯೋ ಅತೃಪ್ತನೋ ಅಶಾಂತನೋ ಅವನನ್ನು ನಾನು ಸ್ಪರ್ಶಿಸಿದ್ರೆ ಅವನಿಗೆ ಸಂತೋಷ ಸುಖ ಉಂಟಾಗ್ತದೆ. ಇದು ದೈವಾನುಗ್ರಹ ನನಗೆ. ಈ ವ್ಯಕ್ತಿಯ ಪರಿಶುದ್ಧತೆಗೆ ಇದಕ್ಕಿಂತ ದೊಡ್ಡ ದ್ಯೋತಕ ಅಥವಾ ಉದಾಹರಣೆ ಇನ್ನೊಂದ್ ಬೇಡ. ಈಗ ನಿನಗೇನೂ ತೊಂದರೆಯಿಲ್ಲ. ಯಾರಾದ್ರೂ ಇದ್ದೆ ನಿನ್ನ ಕೂಟದಲ್ಲಿ ಇದನ್ನು ನೀನು ಪರೀಕ್ಷಿಸಬಹುದು. ನಾನು ಮುಟ್ಟಿದ್ದರಿಂದ ಅವನ ಸಕಲ ದು:ಖ ನಿವೃತ್ತಿ ಆಗ್ತದೆ. ರೋಗ ನಿವೃತ್ತಿ ಆಗ್ತದೆ ಎಂಬುದನ್ನು ಮನಗಂಡಾಗ ವಿದ್ವಾಂಸನಾದರೆ ನಿನನ್ನೊತ್ತಾಗದೆ ಇವ ಕಾಮುಕನಲ್ಲ ಇಂದ್ರಿಯ ದಾಸನಲ್ಲ. ಇಂತಹ ಇಂದ್ರಿಯ ದಾಸನಾಗಿ ನಿನ್ನ ಮಗಳು ಚಂದ ಇದ್ದಾಳೆ ಅಂತ ಬಯಸಿದ್ದಲ್ಲ ಅಂತ ಗೊತ್ತಾಗ್ತಿದೆ.

ಆದರೆ ನನ್ನ ಉದ್ದೇಶ ನನ್ನ ಮನೆ ತುಂಬಬೇಕು, ಮನತುಂಬಬೇಕು. ನನಗೊಬ್ಬ ಮಗನಿದ್ದಾನೆ ನನಗೆ ಹೆಂಡತಿಯ ವಿಯೋಗ ಉಂಟಾದ್ದರಿಂದ, ಇನ್ನೇನು ಯೆಲ್ಲಾ ಯಜಮಾನಿಕೆ ಮಗನಿಗೆ ಒಪ್ಪಿಸಿ ನಾನು ನಿವೃತ್ತನಾಗಬೇಕು ಅಂತ ಬಯಸಿದರೂ, ಒಂದ್ ಕರ್ತವ್ಯ ಲೋಪ ಆಗಿ ಉಳಿತು. ನನ್ನ ಮಗನಿಗಿನ್ನೂ ಲಗ್ನವಾಗ್ಲಿಲ್ಲ. ನನ್ನ ಮಗನಿಗೊಂದು ಮದುವೆ ಆಗೋಕು ಮದುವೆ ಆಗ್ಬೇಕಿದ್ರೆ ನಾನು ಮದ್ದೆಯಾದ ಗೃಹಸ್ಥನಾಗ್ಬೇಕು. ಒಂಟಿಯಾಗಿದ್ದಂತಹ ತಂದೆಗೆ ಧಾರೆಯೆರಿಸಿಕೊಳ್ಳುವ ಹಕ್ಕು ನಮ್ಮ ವೈದಿಕ ಸಂಸ್ಕೃತಿಯಲ್ಲಿಲ್ಲ. ಹಾಗಾಗಿ ವೈದಿಕ ರಿತ್ಯಾ ಔಪಾಸನೆಯನ್ನು ಕಳಕೊಂಡಂತಹ ಒಬ್ಬ ನಿವೃತ್ತ ಗೃಹಸ್ಥ ಮತ್ತೊಂದೌಪಾಸನವನ್ನು ಮಾಡಿಕೊಳ್ಳದ ವಿನ: ಮಕ್ಕಳಿಗೆ ಮಾಡಬೇಕಾದ ಸಂಸ್ಕಾರಕ್ಕೆ ಬಾಹಿರನಾಗ್ತಾನೆ ಅಂತ ನಮ್ಮ ಪುರೋಹಿತರು ಹೇಳ್ತಾರೆ. ರಾಜರು ಇದನ್ನೆಲ್ಲಾ

ಗಮನಿಸಬೇಕಾದ ಅವಶ್ಯಕತೆ ಉಂಟೋ ಇಲ್ವೋ ನನಗೊತ್ತಿಲ್ಲ. ನನಗಂತೂ ಈ ಸಂದರ್ಭದಲ್ಲಿ ತೋರ್ತದೆ-ನಾನು ತಪ್ಪಿ ನಿವೃತ್ತನಾಬೇಕು ಅಂತ ಸಂಕಲ್ಪಿಸಿದ್ದು ಅಂತ. ನಿವೃತ್ತನಾಗಬೇಕು, ಆದರೆ ಇಷ್ಟು ಕೆಲಸ ಆಗ್ಬೇಕು. ಯೇನೀಗ ನಿನ್ನ ಮಗಳನ್ನು ಕೊಡುವದಕ್ಕೆ?

(ದಾಶರಾಜ; ನಿನಗೋ ನಿನ್ನ ಮಗನಿಗೋ ನೀನು ಹೆಣ್ಣು ಕೇಳುವದು?)

ಹೌದು ಹೌದು, ಯಾಕೆ ಅಂತಂದ್ರೆ ನನ್ನ ಸ್ಪಷ್ಟಿಕರಣ ಅದು ಧ್ವನಿಯುಕ್ತವಾಗಿ ಬಂದದ್ರಿಂದ ಅದೆಲ್ಲ ನಿನಗೆಲ್ಲಿ ಅರ್ಥ ಆಗೋಕು? ಮಗನಿಗಲ್ಲಯ್ಯ ಮಗನಿಗಲ್ಲ. ಯಾಕಲ್ಲ?

ಕೇದಾರಗೌಳ-ಝಂಪೆ ಯೆನಗೆ ಸತಿಯಿಲ್ಲ ಕೇಳು / ಸುತಗಲ್ಲ | ತನುಜೆಯಂ

ನೀನೀಗಳು | ಮನವಿಟ್ಟು ಕೊಡಲು ನಾನು ಶಶಿಮುಖಿಯ

ವಿನಯದಿಂ ಪಾಲಿಸುವೆನು|| ೮ |

ಪ್ರಾಯ ಬಂದ ಒಬ್ಬ ಮಗನಿದ್ದಾನೆ ನನಗೆ ಅಂತ ಒಬ್ಬ ಹೇಳಿದ್ರೆ - ಹೆಣ್ ಹೆತ್ತವ ಹೇಳುವುದು “ಮಗನಿಗೇ ಹೆಣ್ಣು ಕೇಳುವದಕ್ಕೆ ಬಂದಿದ್ದಾನೆ ಇವ” ನೀನ್ ಹೀಗೆ ಗ್ರಹಿಸಿಬಿಟ್ಟೆ ಅವಸರವಾಗಿ, ಅಯ್ಯಾ ಮೊದಲೇ ಹೇಳಿದ್ದೇನೆ, ಏಕಮಾತ್ರ ನನ್ನ ಮಗ, ಹಸ್ತಿನಾವತಿಯ ರತ್ನಸಿಂಹಾಸನದ ಉತ್ತರಾಧಿಕಾರಿಯಾದ ನನ್ನ ಮಗ ಯಾವನೋ ಅವನು ವರಿಸುವ ಹೆಣ್ಣಿನ ಬಗ್ಗೂ ಕೂಡಾ ಪ್ರಜೆಗಳದ್ದಾದಂತಹ ಮತದಾನ ಇದೆ- ಅವರ ಅಭಿಪ್ರಾಯ ಇದೆ. ಆದ್ದರಿಂದಲೇ ರಾಜನಾದವನು ವಿವೇಚನಾ ಸಾಮರ್ಥ್ಯವುಳವನಾದ್ರೆ ಗಾಂಧರ್ವ ಮದುವೆ ಮಾಡಿಕೊಳ್ಳಬಾರದು ಅಂತ ಶಾಸ್ತ್ರ, ಅದನ್ನು ಅನುಭವಿಸಿದವ. ಹಸ್ತಿನಾವತಿಯ ಚಕ್ರವರ್ತಿಯಾಗಬೇಕಾದವನು ಎಲ್ಲೋ ಹೋಗಿ ಯಾವಳೂ ಒಬ್ಬಳನ್ನು ಮೋಹಿಸಿಕರಕೊಂಡು ಬಂದರೆ ಆ ಒಂದು ಭಾಗ ಅದು ಸಾಮಾಜಿಕರಿಂದ ಅಂಗೀಕರಿಸಲ್ಪಡುವದಿಲ್ಲ. ಭಾವೀ ಮಹಾರಾಜ ಚಕ್ರವರ್ತಿ ಆಗಬೇಕಾದ ನನ್ನ ಮಗ ದೇವವ್ರತನಿಗೆ ಕೇವಲ ಎಲ್ಲಿಯೋ ಕಂಡ ಒಂದು ಹೆಣ್ಣನ್ನು ಮದುವೆ ಮಾಡಿಸಲಿಕ್ಕೆ ತಣ್ಣೀರಿನಲ್ಲಿ ನಾಲಿಗೆ ಸುಟ್ಟುಕೊಂಡಂತಹ ಈ ಅಪ್ಪ ಸಿದ್ಧನಾಗಲಿಕ್ಕೇ ಇಲ್ಲ. ಬೇರೆ ಮಕ್ಕಳಿದ್ದೆ ಆಗಿತ್ತು ಆದರೆ ಸೀಮಂತಪುತ್ರ ಸಿಂಹಾಸನಕ್ಕೆ ಅಧಿಕಾರಿ ಅವನಿಗೆ ನಾನು ಮದುವೆ ಮಾಡಬೇಕಾದ ಕಾಲದಲ್ಲಿ ಆ ಹೆಣ್ಣು, ಭಾವೀ ಸಾಮ್ರಾಟನನ್ನು ಹೆರುವಷ್ಟು ಅರ್ಹತೆ ಇದ್ದವಳಾಗಬೇಕು ಅಲ್ವೋ? ಕೇವಲ ನನ್ನ ಮಗನಿಗೆ ದೇಹ ಸುಖವನ್ನನುಭವಿಸುವದಕ್ಕೊಬ್ಬಳು ಹೆಣ್ಣುಮಗಳಿದ್ರೆ ಸಾಲದು. ಹಾಗಾಗಿ ಮಗನಿಗಲ್ಲ. ಚಕ್ರವರ್ತಿಯಾಗಿ ಕೂತುಕೊಂಡವನಿಗೆ. ಭಾವೀ ಚಕ್ರವರ್ತಿ ಹುಟ್ಟುವ ಕ್ಷೇತ್ರವಾಗಿ ಬರುವವಳು ಹಲವಾರು ಅಗ್ನಿಪರೀಕ್ಷೆಗೆ ತುತ್ತಾಗಬೇಕು. ಯಾವುದಾದರೂ ಗುರುಪೀಠಕ್ಕೆ, ಧರ್ಮಪೀಠಕ್ಕೆ ಅಲ್ಲಿದ್ದಂತಹ ಸದ್ಗುರು ಶಿಷ್ಯನನ್ನಾರಿಸಬೇಕಿದ್ರೆ ಹೆಚ್ಚು ಕಡಿಮೆ ಕೆಲವಾರು ಜಾತಕಗಳನ್ನು ನೋಡಿ ಆಮೇಲೆ ಅನೇಕ ಜಾತಕಗಳನ್ನು ಸಮನ್ವಯ ಮಾಡಿ ಕೊನೆಗೆ ತೀರ್ಮಾನಕ್ಕೆ

ಬರಬೇಕು. ಆದ್ದರಿಂದ ಭಾವೀ ಚಕ್ರವರ್ತಿಯಾದ ನನ್ನ ಮಗನಿಗೆ ಇಷ್ಟು ಸುಲಭದಲ್ಲಿ ನದೀತೀರದಲ್ಲಿಯೇ ಅಥವಾ ವನಾಂತರದಲ್ಲೂ ಹುಡುಕುವ ಜಾಯಮಾನವೇ ನನ್ನದಲ್ಲ. ನಾನ್ ಕೇಳಿರೋದು ನನಗೆ ನಿನ್ನ ಮಗಳನ್ನು ಕೊಟ್ರೆ ನನಗೇನವಳನ್ನು ಸುಖವಾಗಿ ಸಾಕಿ ಸಲುಹುವದಕ್ಕೆ ಇದ್ದಂತಹ ಅಧಿಕಾರ ನಷ್ಟ ಹೊಂದುವದಿಲ್ಲ. ನಾನು ಮಹಾರಾಜತ್ವವನ್ನು ಬಿಡುವದಕ್ಕೆ ಸಿದ್ಧನಿದ್ದೇನೆ. ಮತ್ತೆ ನಾಳೆ ಏನಾದೀತು ಗೊತ್ತೊ? ಈಗ ನಿನ್ನ ಮಗಳನ್ನು ಹಸ್ತಿನಾವತಿಯ ಉತ್ತರಾಧಿಕಾರಿಯನ್ನು ಹೆರುವ ಒಂದು ಬಲುದೊಡ್ಡ ಕ್ಷೇತ್ರವಾಗಿ ಅಂಗೀಕರಿಸಿದರೆ, ದೊಡ್ಡ ಗಂಡಾಂತರವೂ ಆದೀತು.

ಒಂದು ಕೆಲಸ ಮಾಡ್ವ ಈ ನಿನ್ನ ಮಗಳು ನನ್ನ ಹೆಂಡತಿಯಾದ್ರೆ, ನಿನ್ನ ಮಗಳು ನಾನು ಇದ್ದು ಅಲ್ಲೋ ನನ್ನ ಮಗನಿಗೆ ಮದುವೆ ಮಾಡಿಸುವದು? ಈಗ ಅದರಲ್ಲೇನು! ಸ್ಥಾನಕ್ಕೇನು ಚ್ಯುತಿ ಬರುವದಿಲ್ಲ. ಭಾವೀ ಮಹಾರಾಜನಿಗೆ ಭಾವೀ ಮಹಾರಾಣಿಯನ್ನು ಧಾರೆಯೆರೆಸಿಕೊಳ್ಳುವ ಪುಣ್ಯ, ದಾಶರಾಜನ ಮಗಳಿಗೆ ಶಂತನುವಿನ ಒಪ್ಪಿಗೆ ಇದ್ದಾಗ ಸಿಗ್ತದೆ ಅಂತಾದ್ರೆ, ಯೇನಿದು ಸಾಮಾನ್ಯ ಭಾಗ್ಯವೋ? ಭಾವೀ ಮಹಾರಾಣಿಗೆ ಇವಳು ಅತ್ತೆಯ ಸ್ಥಾನದಲ್ಲಿ ಯಜಮಾನಿಯಾಗ್ತಾಳೆ. ಇವಳು ಅಂದ್ರೆ ಏನು ಸಾಮಾನ್ಯವೋ!! ಹೀಗೆ ವಿಶಾಲ ದೃಷ್ಟಿಯಿಂದ ನೀನು ಆಲೋಚಿಸು, ದೊಡ್ಡ ಮನಸ್ಸು ಮಾಡು, ದೊಡ್ಡ ಮನಸ್ಸು ಮಾಡಿ ದೊಡ್ಡ ಮನೆತನಕ್ಕೆ ನಿನ್ನ  ಮಗಳನ್ನು ಕೊಡು ಯೇನೀಗ ಆಕ್ಷೇಪಣೆ?

ವಾರ್ಧಕ್ಯ ಕಂದರನ ನುಡಿಕೇಳಿ ಭೂಪಾಲ ದುಗುಡದಿಂ | ಕಂದನಹ ಗಾಂಗೇಯನನು

ಬಿಟ್ಟು ಧಾತ್ರಿಯಂ | ಮುಂದೋರ್ವಗೀಯ ಲೆನಗಂದವಲ್ಲವು ಜನರು

ನಿಂದಿಪರು ಮಗುಳೆನ್ನುತ | ಸಂದೇಹಗೊಳುತ ನೃಪ ನೀಚ ಸಹವಾಸದಿಂ

ಬಂದಿಹುದು ದುರ್ಭಿಕ್ಷೆ ಬೇಡ ಪೋಗುವೆನೆಂದು ಪಿಂದೆ ತಿರುಗುತ ಖಿನ್ನನಾಗಿ

ಭೂಪತಿ ಪುರಕೆ ಬಂದನತಿ ಜವದಿಂದಲಿ || ೬ ||

ಅಯ್ಯಾ, ಕನ್ಯಾಪಿತೃವಾದ ನಿನ್ನ ಬಯಕೆ ಇದು ಅಸ್ಥಾನದ್ದೂ ಅಲ್ಲ ಅಸಾಧುವಾದದ್ದೂ ಅಲ್ಲ. ಹಾಗಾಗುವದಕ್ಕೆ ಸಾಧ್ಯತೆ ಇಲ್ಲ ಅಂತ ಹೇಳಲಿಕ್ಕೆ ನನಗೆ ಮಾತಿಲ್ಲ. ಹೇಗಾಗಲಿಕ್ಕೆ? ನಾಳೆಗೆ ನಿನ್ನ ಮಗಳಲ್ಲಿ ನನ್ನಿಂದ ಸಂತಾನ ಉಂಟಾದ್ರೆ ಅವರಿಗೆ ಅನಾಥತ್ವ ಬರಿಕ್ಕಿಲ್ಲ ಅಂತ ನಾನೀಗಲೇ ಹೇಗೆ ಹೇಳುವದು? ನನ್ನ ಮಗನಾದ ದೇವವ್ರತನ ಮೇಲಿನ ವಿಶ್ವಾಸದಿಂದ ನಾನ್ ಹೇಳಬಹುದು. ನನಗೆ ಹುಟ್ಟಿದ ಎಲ್ಲ ಮಕ್ಕಳನ್ನು ಅವನು ಸೋದರರಂತೆ ಕಂಡಾನು. ಯಾವುದೇ ಜ್ಞಾತಿತ್ವ ಅಥವಾ ದಾಯಾದಿತ್ವ ಇದನ್ನು ಹುಟ್ಟುಹಾಕಿ ಬೆಳೆಸಲಾರನು - ನನ್ನ ಮಗನು. ನನಗೆ ಅದೇ ರಾಮನ ತಂದೆಯಾದ ದಶರಥನ ನೆನಪಾಗ್ತಾ ಉಂಟು ಈಗ. ದಶರಥನೂ ಕೂಡಾ ಸಣ್ಣಪ್ರಾಯದ ಕೈಕೆಯನ್ನು ವರಿಸುವಾಗ ಸಂಕಲ್ಪ ಮಾಡಿದ್ದನಂತೆ "ಮೊದಲಿನ ನನ್ನ ಹೆಂಡಂದಿರಿಗೆ ಸಂತಾನ ಸೌಭಾಗ್ಯ ಆಗ್ಲಿ ಆಗುವ ವಯಸ್ಸೂ ದಾಟ್ಯದೆ! ಏನಾದರೂ ದೈವಾನುಗತಿಯಿಂದ ಈಕೆಯಲ್ಲಾದ್ರೂ ನನಗೊಬ್ಬ ಗಂಡುಮಗ ಹುಟ್ಟಿದ್ರೆ

ಅವನಿಗೆ ರಾಜ್ಯಾಭಿಷೇಕ ಮಾಡಬೇಕು ಎಂಬ ಸತ್ ಸಂಕಲ್ಪ ತನ್ನದು. ಅದಕ್ಕೆ ಉತ್ತಮ ಕುಲದಲ್ಲಿ ಹುಟ್ಟಿದ ಕ್ಷತ್ರಿಯ ಕುಮಾರಿಯೇ ಆಗಬೇಕು ಎಂಬುದರಿಂದ ಕೇಕೆಯ ರಾಜನ ಮಗಳನ್ನು ನಾನು ಬಯಸಿದೆ. ದೈಹಿಕ ಸುಖಕ್ಕಲ್ಲ" ಅಂತ ಹೇಳಿ ಕೈಕೆಯನ್ನು ಪಾಣಿಗ್ರಹಣ ಮಾಡಿದನಂತೆ ದಶರಥ, ಮುಂದಿನ ಕಥೆ ಜನಜನಿತ. ಕೈಕೇಯಿಯ ಮಗನಿಗೆ ಸಿಂಹಾಸನ ಅಂತ ಯಾವುದೋ ಒಂದು ಸದುದ್ದೇಶದಿಂದ ಹೇಳಿದ ದಶರಥನ ಮಾತು ಕಾಲದೋಷದಿಂದಲೋ ಅಥವಾ ಕರ್ಮದೋಷದಿಂದಲೋ ಅಥವಾ ದೈವಾಯತ್ತದಿಂದಲೋ ಹೇಳಲಿಕ್ಕೆ ಬರೋದಿಲ್ಲ ಕೈಕೇಯಿಗೆ ರಾಮನ ಪಟ್ಟಾಭೀಷೇಕಕ್ಕಾಗುವಾಗ ವಿರೋಧವೂ ಬಂತಂತೆ. ಆವಾಗ ರಾಮನು ವನವಾಸಕ್ಕೆ ಹೋಗಬೇಕಾಯ್ತು, ರಾಮನು ಹೋದ.

ನನ್ನ ಮಗನೂ ಹಾಗೇನೆ ತಂದೆಯ ಸಂಕಲ್ಪದಂತೆ....

ಹ್ಞ, ಸರಿಯಪ್ಪ ಯೋಜನಗಂಧಿಯ ಹೊಟ್ಟೆಯಲ್ಲಿ ಹುಟ್ಟಿದವರಿಗೆ ಸಿಂಹಾಸನ ಅಂತಾದ್ರೆ ಕೊಟ್ಟು ಬಿಡೋಣ ಅಂತ ಹೇಳಬಹುದಾಗಿದ್ರೂ ರಾಮಾಯಣವನ್ನು ಓದಿದ ನಮಗೆ ಅದು ಹಾಗಾದದ್ದು ಒಳ್ಳೆಯದಲ್ಲ ಅಂತ ಈಗಲೂ ಮನಸಿನಲ್ಲುಂಟು. ರಾಮನ ಔದಾರ್ಯ ದೊಡ್ಡದು. ಭರತನ ಔದಾರ್ಯವೂ ದೊಡ್ಡದು. ಆದರೆ ಈ ಇವರೆಲ್ಲರ ಔದಾರ್ಯದಿಂದ ನಿಜವಾಗಿ ಪ್ರಾಣನಷ್ಟ ಹೊಂದಿದವ ದಶರಥ ಚಕ್ರವರ್ತಿ ಮಾತ್ರ ಬಾಕಿದ್ದವರಿಗೇನೂ ತೊಂದರೆ ಆಗಲಿಲ್ಲ. ಇದು ನನ್ನಂಥವರಿಗೆ ಯೇನು ಪಾಠ ಹೇಳ್ತದೆ ಅಂತಂದ್ರೆ "ನಂಬಿಕೊಂಡು ಎರಡನೇ ಹೆಂಡತಿಗೆ ನಿನ್ನ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳಿಗೆ ಯಜಮಾನಿಕೆ ಕೊಡ್ತೇನೆ ಅಂತ ಬಾಯಿತಪ್ಪಿಯಾದರೂ ಹೇಳಬೇಡ. ಹೇಳಿದರೆ ತನ್ನ ನಾಶವನ್ನು ತಾನೇ ಮಾಡಿಕೊಂಡ ಹಾಗೆ, ಈ ಮಹಾಕಾವ್ಯಗಳಿಂದ ಕಲಿಯಬೇಕಾದದ್ದು ಎಷ್ಟೋ ಇಲ್ಲೊ? ಉಂಟು. ಆ ಮಾತನ್ನು ನನಗೆ ಕೊಡಲಿಕ್ಕಾಗೋದಿಲ್ಲ. ಕಾರಣಯೇನು?

ಗಾಂಗೇಯ! ದೇವವ್ರತ! ಅವ ಸಮರ್ಥನಾಗಿದ್ದಾನೆ. ಈ ದೇಶಕ್ಕೆ ತಕ್ಕ ಪ್ರಭುವಾಗುವದಕ್ಕೆ ಅರ್ಹತೆಯನ್ನು ಪಡೆದಿದ್ದಾನೆ. ಕ್ಷತ್ರಿಯವಿರೋಧಿಯಾಗಿ, ಕ್ಷತ್ರಿಯಕುಲಾಂತಕ ತಾನು ಅಂತ ಕೊಡಲಿಬೀಸುತ್ತಿರುವಂತಹ ಮಹಾ ಗುರುವಿನಿಂದ ಪ್ರಿಯಶಿಷ್ಯನಾಗಿ "ಚಿರಂಜೀವಿಯಾಗು ಮಗನೆ" ಅಂತ ಮಂತ್ರಾಕ್ಷತೆ ಹಾಕಿಸಿಕೊಂಡು ಬಂದವ, ಯಾರು ಕ್ಷತ್ರಿಯರಿಗೆ ಶತ್ರುಸ್ಥಾನದಲ್ಲಿದ್ದರೋ, ಕ್ಷತ್ರಿಯ ಅಂತ ಕೇಳಿದರೆ ಕೊಡಲಿ ಬೀಸ್ತಾರೋ ಅಂಥ ಪರಶುರಾಮರ ಅನುಗ್ರಹಕ್ಕೂ ಕೂಡ ಪಾತ್ರನಾದವ. ವರ್ತಮಾನಕಾಲದಲ್ಲಿ ಪ್ರಪಂಚವನ್ನಾಳುವದಕ್ಕೆ ಬೇಕಾಗಿದ್ದವ. ರಾಮನ ಕಾಲಕ್ಕಾದ್ರು ಪರಶುರಾಮರಿಗೆ ಕ್ಷತ್ರಿಯರಲ್ಲಿ ವಿರೋಧ ಇತ್ತು ಅಂತ ಕೆಳ್ತವೆ. ಹೀಗೆ ಎಲ್ಲವೂ ಒಂದಾದಂತಹ ಒಂದು ಕಾಲಕ್ಕೆ ಕ್ಷಾತ್ರವೂ ಬ್ರಾಹ್ಮವೂ ಸಾಗಲಿಕ್ಕೆ ಇವನೇ ಅರ್ಹತೆಯನ್ನು ಪಡೆದಿರುವಾಗ, ನೀನು ನನ್ನ ಚಪಲತೆಗೆ ಬೇಕಾಗಿ ದೇಶಕ್ಕೆ ಬೇಕಾದಂತಹ ಭದ್ರತೆಯನ್ನು ಕಿತ್ತು ಹಾಕಿ ನಿನ್ನ ಮಗಳ

ಹೊಟ್ಟೆಯಲ್ಲಿ ಹುಟ್ಟುವವರಿಗೆ ಪಟ್ಟ ಅಂತ ಹೇಳಿದ್ರೆ ! ತಪ್ಪು ತಿಳಕೊಳ್ಳಬೇಡ, ಶಂತನುವಿನ ಕಾಮದ ಕೊಡುಗೆ ಆದೀತೆ ಹೊರತು ಶಂತನುವಿನ ವೈಚಾರಿಕ ಕೊಡುಗೆ ಆಗಲಿಕ್ಕಿಲ್ಲ ಅದು. ನಿನ್ನ ಮಗಳ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳು ನಿನಗೆ ಮೊಮ್ಮಕ್ಕಳೇ ನನಗೂ ಮಕ್ಕಳೇ. ಅರಸು ಮಕ್ಕಳೆಲ್ಲ ಚಕ್ರವರ್ತಿಗಳಾಗುವದಕ್ಕೆ ಶಕ್ಯವಿಲ್ಲ. ಅವರು ಪರ್ಯಾಪ್ತರೋ ಅಪರ್ಯಾಪ್ತರೋ ಅದನ್ನು ಬರುವ ಕಾಲವೇ ಗುರುತಿಸಬೇಕಲ್ಲದೆ ಈಗ ಹ್ಯಾಗೆ ಹೇಳೋದು? ಆದ್ದರಿಂದ, ನನ್ನದೊಂದು ಯಾವಾಗಲೂ ಎಚ್ಚರಿಕೆ; ಹಿರಿಯ ಮಗನಾದಂತಹ ಗಾಂಗೇಯ ಪರಿಪೂರ್ಣನಾಗಿ ಇದ್ದಾವಾಗ ನಾನು ಇನ್ನು ಮುಂದೆ ಹುಟ್ಟುವ ಮಕ್ಕಳಿಗೆ ಪಟ್ಟ ಕೊಡ್ತೇನೆ ಅಂತ ಸರ್ವಥಾ ಹೇಳಲಾರೆ, ಯಾಕೆ? ಅದರ ಮುಂದೆ ಇದೆಲ್ಲ ತ್ಯಾಜ್ಯ. ಈಗ ನಿನ್ನ ಮಗಳನ್ನು ನಾನು ಬಯಸಿದ್ದು ಹೌದು. ಈ ಮಗಳನ್ನು ಬಯಸಿ ನಾನು ನನ್ನಾಧೀನದಲ್ಲಿದ್ದಂತಹ ವಸುಂಧರಾರಮಣಿಗೆ ಅನಾಥತ್ವವನ್ನು ತಂದುಕೊಡಲಿಕ್ಕೆ ಸಿದ್ಧನಿಲ್ಲ . ನಾ ಕೇಳಿದ್ದೇನೆ ಅನ್ನುವದನ್ನು ಎಲ್ಲಿಯೂ ಹೇಳಬೇಡ. ನಿನಗರ್ಥವಾದೀತು ನನ್ನ ಸಜ್ಜನಿಕೆ, ನನ್ನ ಸ್ಥಾನದಲ್ಲಿ ಮತ್ತೊಬ್ಬ ಶ್ರೀಮಂತನೂ ಧೀಮಂತನೋ ರಾಜಪುತ್ರನೋ ಇದ್ದೆ ನಿನ್ನಂಥವರು ಅವರು ಕೇಳಿದ್ದು ಕೊಡಲಾರೆ, ಕೊಡುವುದಿಲ್ಲ ಅಂತ ಹೇಳಿ ದಕ್ಕಿಸಿಕೊಳ್ಳಲಾಪರೋ? “ನಿನ್ನನ್ನು ಕಟ್ಟಿಹಾಕಿ, ನಿನ್ನ ಊರನ್ನು ಸುಟ್ಟು ಹೆಣ್ಣನ್ನು ಕೊಂಡ್ ಹೋಗ್ತೇನೆ” ಅಂತ ಅಂದಾರು. ಕೇಳಿರುವದು ಹಸ್ತಿನಾವತಿಯ ಚಕ್ರವರ್ತಿ! ಆದರೆ ನಾನು ಚಕ್ರವರ್ತಿಯಾಗಿ ಕೇಳಿದ್ದಲ್ಲ. ನಾನೊಂದು ವ್ಯಕ್ತಿಯಾಗಿ ಜೀವನದ ಸುಭಗತನಕ್ಕೆ ಕೇಳಿದ್ದು, ವಯಕ್ತಿಕವಾಗಿ ಕೇಳಿದಂತಹ ಸೊತ್ತು ಸಿಕ್ಕಲಿಲ್ಲ ಎಂಬ ಕಾರಣಕ್ಕಾಗಿ ಚಕ್ರವರ್ತಿತ್ವದ ಅಧಿಕಾರದ ಅಪವ್ಯಯ, ದುರುಪಯೋಗ ನಾನ್ ಮಾಡುವದಿಲ್ಲ. ನಿನ್ನ ಮಾತು ನ್ಯಾಯ. ಆದ್ದರಿಂದ ನನ್ನ ಮಾತನ್ನು ನಾನು ಹಿಂದೆ ತೊಕ್ಕೊಂಡಿದ್ದೇನೆ. ನಾನು ಕೇಳಿದ ಸುದ್ದಿಯೂ ಬೇಡ ನೀನ್ ಹೇಳಿದ ಸುದ್ದಿಯೂ ಬೇಡ. ಇದು ಚಕ್ರವರ್ತಿಗೆ ಅಪಮಾನ ಅಂತ ನಾನು ತಿಳಿಯುವದಿಲ್ಲ, ಸಿಂಹಾಸನಕ್ಕೆ ಅಪಮಾನ ಅಂತ ತಿಳಿಯುವದಿಲ್ಲ. ನನಗೂ ಅಪಮಾನ ಅಂತ ತಿಳಿಯೂದಿಲ್ಲ. ಆದರೆ ಇಷ್ಟು ತಿಳಿತೇನೆ ಯೇನು? ತಪ್ಪು ತಿಳಕೊಳ್ಳಬೇಡ, ನಮಗಿಂತ ಸಣ್ಣವರ ಸಹವಾಸ ಮಾಡುವದು ಒಳ್ಳೆದಲ್ಲ, ನಮಗಿಂತ ಕೀಳುಮಟ್ಟದಲ್ಲಿದ್ದವರಿಂದ ಯಾವುದನ್ನೂ ಯಾಚಿಸಬಾರದು ಎಂಬ ಹೊಸಪಾಠ ನನಗೆ ಸಿಕ್ಕಿತು. ಸುಖವಾಗಿ ಹೋಗು! (ಶಂತನು ಹಸ್ತಿನಾವತಿಯ ಕಡೆಗೆ ತಿರುಗುತ್ತಾನೆ)

ಛೇ, ಕುಲದ ಅಭಿಮಾನ ಅಲ್ಲ ಯಾವುದೂ ಅಲ್ಲ ನಾನ್ ಅವನಲ್ಲೇ ಹೇಳಿದ್ದೇನೆ. ಆದರೆ ನಾನ್ ಯಾಕೆ ಈ ರೀತಿಯಾಗಿ ಹೆಣ್ಣಿನ ಪ್ರಕರಣದಲ್ಲಿ ಸಿಕ್ಕಿ ಬೀಳ್ತೇನೆ!! ಇದೀಗ ಮೂರನೇಯದಾದ ಅಭಿಪ್ರಾಯ ನನ್ನದು. ಆ ಹೊತ್ತು ಗಂಗೆಗೂ ಹಾಗೆ, ಕಂಡು ಆಕೃಷ್ಣನಾದಂತಹ ನಾನು, ಸರಿ ನಿನ್ನನ್ನು ಪ್ರಶ್ನಿಸುವದೇ ಇಲ್ಲ ನಾನು ನಿನ್ನ ಇಚ್ಛೆಗೆ ವಿರೋಧವಾಗಿ ನಡೆಯುವದಿಲ್ಲ ಅಂತ ಮಾತುಕೊಟ್ಟಿದ್ದೇನೆ. ಆದ್ದರಿಂದ ಏನಾಯ್ತು? ಶಾಸನಾತ್ಮಕವಾಯ್ತು. ಸಿಂಹಾಸನದ ಘನತೆಯನ್ನು ಮುಂದಿಡ್ಕೊಂಡು ನನ್ನ ಮಹಾರಾಣಿಯಾಗಿ ಬಂದವಳೇ ಹೆತ್ತ ಮಕ್ಕಳನ್ನೆಲ್ಲಾ ನೀರಿಗೆ ಬೀಸಾಡ್ವಾಗ ವಿಚಾರಣೆ

ಮಾಡುವ ಶಕ್ತಿಯೇ ನನಗೆ ಇಲ್ಲದೇ ಹೋಯ್ತು, ಅಲ್ಲಿ ನಾಲಿಗೆ ಇಲ್ಲದೇ ಹೋಯ್ತು. ಹೌದು ಅಲ್ಲಿಯೂ ಸಿಕ್ಕಿ ಬಿದ್ದೆ ! ಆದರೂ ಮಾತುಕೊಟ್ಟು ನನ್ನ ಹಟವನ್ನು ಸಾಧಿಸಿದೆ. ಎಂಟನೇ ಮಗನನ್ನು ಉಳಿಸುವದಕ್ಕಾಗಿ ಅವಳನ್ನು ಬೀಳ್ಕೊಟ್ಟೆ. ಈಗ ಇಲ್ಲಿಯೂ ಬಂದದ್ದು ಹಾಗೆ, ಈಕೆಯನ್ನು ಕಂಡಾವಾಗ ನಾನು ಬಾ, ವರಿಸು ಅಂತ ಹೇಳಿದರೆ ಅವಳಲ್ಲದಿದ್ರೂ ಅವಳ ತಂದೆಯದು ಶರ್ತ!

ಅದೂ ಅದೇ "ನಾನ್ ಹೇಳಿದ ಹಾಗೆ ನೀವು ಕೇಳಬೇಕು!!

ಇಲ್ಲಿ ಹಾಗಲ್ಲ ಅವಳ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ಪಟ್ಟ ಕೊಡಬೇಕು. ಛೆ, ಈ ಜನ್ಮದಲ್ಲಿನ್ನು ನನಗೆ ಮದುವೆ ಹುಚ್ಚು ಬೇಡ. ಕೆಲವು ಸಲ ದೊಡ್ಡವರು ದೊಡ್ಡವರು ಹೇಳಿಕೊಂಡು ಬಡವರು ಹೆಣ್ಣು ಕೊಟ್ರೆ, ಇವರು ಇದ್ದಷ್ಟೇ ದಿವ್ಸ  ಅವರನ್ನು ನೋಡಿಯಾರು, ಇವರು ಸತ್ತಮೇಲೆ ಬಾಕಿ ಮೊದಲೇ ಇದ್ದಂತ ಹಿರಿಯ ಮಕ್ಕಳು ಹಕ್ಕುದಾರರು ಯಾಕೆ ನೋಡಬೇಕು? ಸರಿ... ಆದರೂ ಈ ನೋವು... ಹೂಂ ಯಾರಿಗೂ ಹೇಳೋದಿಲ್ಲ. ಅರಮನೆಯನ್ನು ಪ್ರವೇಶಿಸಿದೆ. ಪ್ರವೇಶಿಸಿದಾಗ ಮಂತ್ರಿಯ ಹತ್ರ ಹೇಳಿಕಳುಹಿಸಿದೆ - ಬರೋದಿಲ್ಲ ಎರಡು ದಿನ ಆಸ್ಥಾನಕ್ಕೆ ಅಂತ. ಯಾಕೆ? ಒಮ್ಮೆ ಉಂಟಾದಂತಹ ಈ ಅಲ್ಲೋಲಕಲ್ಲೋಲಾವಸ್ಥೆ ಇದೆಯಲ್ಲ ಈ ತಳಮಳ ಇದೆಯಲ್ಲ, ಇದನ್ನು ವಿಚಾರದಿಂದ ನಿಯಂತ್ರಣಕ್ಕೂ ತರಲಿಕ್ಕಾಗ್ತದೆ. ವಿಚಾರದಿಂದ ನಿಯಂತ್ರಣಕ್ಕೆ ತಂದುಕೊಂಡೆ, ನನ್ನದೇ ಅಧಿಕಪ್ರಸಂಗ ಅದು ಅಂತ. ಆದರೆ ಭಾವವೊಂದುಂಟಲ್ಲ! ಆ ಭಾವಕ್ಕೆ ಹೇಗೆ ಅಂತಂದ್ರೆ - ಯಾವುದಾದರೂ ಒಂದು ನಾಟಿದ್ರೆ...? ಅಲ್ಲಿ ಹೋಗಿ ನಾವು ತಣಿಸ್ಬ ಅಂತ ವಿವೇಕದ ಮುದ್ರೆಯನ್ನು ಒತ್ತಿದರೆ ಭಾವ ಇನ್ನೊಂದು ಕಡೆಗೆ ಹೋಗ್ತಿದೆ - ನೀರಲ್ಲಿ ಬಿದ್ದ ಎಣ್ಣೆಯ ಹಾಗೆ. ಹಾಗಾಗಿ, ಅವಳಲ್ಲಿ ನನಗುಂಟಾದಂತಹ ಭಾವದ ಉದ್ವೇಗದ ವಿರಹಾನಲ ಇದು ತಣಿಯಬೇಕಾದ್ರೆ ಸ್ವಲ್ಪ ಸಮಯಬೇಕು. ಇದು ಸಾಮಾಜಿಕರಿಗೆ ಸಾರ್ವಜನಿಕರಿಗೆ ಗೊತ್ತಾಗಬಾರದು ಈಗ ವಿಶ್ರಾಂತಿ ಪಡೆಯುವದಕ್ಕೆ ಒಂದು ಕಾರಣವೂ ಉಂಟು. ಆ ದುಷ್ಟನಾದಂತಹ ತಮಾಲಕೇತನನ್ನು ಕೊಲ್‌ಲಿಕ್ಕೆ ಹೋದವ ನಾನು. ಯುದ್ಧ ಮಾಡಿ, ಅವನನ್ನು ನಾಶಪಡಿಸಿ ಅಲ್ಲಿಂದ ವನಾಂತರವನ್ನು ತಿರ್ಗತಾ ತಿರ್ಗತಾ ಹೀಗೊಂದು ಸಂಚಾರ ಮಾಡಿ ಬಂದವ; ವಿಶ್ರಾಂತಿ ಯಾಕೆ ಪಡೀತಾನೆ ಅಂತ ಬುದ್ಧಿಯೆಷ್ಟಿದ್ದ ಮಂತ್ರಿಯಾದ್ರೂ ಕೇಳೋದಿಲ್ಲ. ಊಹೆಗೆ ತರ್ಕಕ್ಕೆ ಇಲ್ಲಿ ಎಡೆಯಿಲ್ಲ. ಹಾಗಾಗಿ ಏಕಾಂತದಲ್ಲಿ ಚಿಂತಿಸಿದಾವಾಗ ಒಂದು ನೆಮ್ಮದಿಗೆ ಬಗ್ಲಿಕ್ಕೆ ನಮ್ಮಂಥವರಿಗೆ ಸಾಧ್ಯವಾಗ್ತಿದೆ. ಹಾಗಾಗಿ ಗೊಂದಲಮಯ ವಾತಾವರಣದಿಂದ ಹೊರಟು ಬಂದವನಿಗೆ ವಿಶ್ರಾಂತಿಯೇ ದೈಹಿಕವಾಗಿಯೂ ಹೌದು ಮಾನಸಿಕವಾಗಿಯೂ ಹೌದು, ಇದು ವೇದಾಂತಶಾಸ್ತ್ರವೂ ಹೌದು, ಯೋಗಶಾಸ್ತ್ರವೂ ಹೌದು ವೈದ್ಯಶಾಸ್ತ್ರವೂ ಹೌದು "ನೀವು ಸ್ವಲ್ಪ ವಿಶ್ರಾಂತಿ ತೆಕ್ಕೊಳ್ಳಿ" ಆದೀತು.

(ದೇವವ್ರತ ದೇವಲೋಕದಿಂದ ಬಂದು ತಂದೆಯನ್ನು ಕಂಡನಂತರ)

ಕುಮಾರಾ, ನಿನ್ನಂಥವ ಆಡಬೇಕಾದ ಮಾತೇ ಅದು. ನನ್ನ ಪ್ರಭುಶಕ್ತಿಗೆ ಈಗ ವಿಶೇಷ ಶಕ್ತಿ ಬಂದದೆ.

ಯಾಕೆ? ನನ್ನ ಪಕ್ವವಾದಂತಹ ಪ್ರಭುಶಕ್ತಿಗೆ ನಿನ್ನ ತಾರುಣ್ಯದ ಶಕ್ತಿಯೂ ಕೂಡಿದ್ದರಿಂದ ಹಳೆಯ ಮರಕ್ಕೆ ಹೊಸಬೇರು ಹುಟ್ಟಿದಂತೆ ಅಥವಾ ಹೊಸಚಿಗುರು ಹುಟ್ಟಿದಂತೆ ಅದು ವಿಸ್ತಾರವಾಗಿ ಬೆಳೆದೀತೆ ಹೊರತು ಅದು ಕುಂದಿ ಹೋಗುವದಕ್ಕೆ ಸಾಧ್ಯವಿಲ್ಲ. ಹಸ್ತಿನಾವತಿಯ ರತ್ನಸಿಂಹಾಸನಕ್ಕೆ ಸದ್ಯ ಪ್ರಶ್ನಿಸುವವರು ಯಾರಿದ್ದಾರೆ ಮಗನೆ? ನಿನ್ನಂಥಾ ವಿಕ್ರಮಿ... ಹ್ಹ, ಹ, ಯೆಲ್ಲಿಯೂ ಇಲ್ಲದ ಬೆಲೆಕಟ್ಟಲಾಗದ ಯಾವುದೋ ಒಂದು ವಿಶೇಷ ವಸ್ತು ಒಬ್ಬನಲ್ಲಿದ್ದಾಗ ಅವನಿಗೆ ಅದರ ಕುರಿತಾದಂತಹ ಚಿಂತೆ ಹೆಚ್ಚಾಗ್ತದೆ. ಅಥವಾ ಅಂಥದ್ದು ಇನ್ನೂ ಕೆಲವು ಇದೆ ಅಂತಾದ್ರೆ ಯಾವುದ ಬಗ್ಗೂ ವಿಶೇಷ ಚಿಂತೆಯಿಲ್ಲ -ಒಂದು ಕಳೆದು ಹೋದ್ರೆ ಮತ್ತೊಂದು ಇದೆಯಲ್ಲ !

ಇಲ್ಲೀಗ ಆದದ್ದಷ್ಟೆ. ನನ್ನ ಮಗನಾದಂತಹ ನೀನು ದೇವವ್ರತ – ಎಲ್ಲರಂತಲ್ಲ.

ಸಾರಂಗ-ಅಷ್ಟತಾಳ ತರಳನೋರ್ವನೆ ಎಂಬುವ / ಚಿಂತೆಯು ಕೇಳೋ |

ಪರಮಾಪ್ತ ಮಮ ಸಂಭವ | ನಿರತಪೂರ್ಣಾಯುವನಿತ್ತುಶ್ರೀಹರಿ

ನಿನ್ನ ಪೊರೆಯಲಿಯನುದಿನ ಪರಮಸಾಹಸಿಕೇಳು || ೧೦ ||

ಕುಮಾರಾ, ವೀರರಲ್ಲಿ ವೀರ, ವಿದ್ವಜ್ಜನರಲ್ಲಿ ವಿದ್ವಾಂಸ, ಶ್ರೀಮಂತರಲ್ಲಿ ಶ್ರೀಮಂತ ಹೀಗೇ ನಾವು ಹೇಳುತ್ತಾ ಹೋಗುವಾಗ ಒಂದೊಂದು ಗುಂಪಿನಲ್ಲಿ ಅದೊಂದು ಪ್ರತ್ಯೇಕವಾಗಿ ಎದ್ದು ಕಾಣುತ್ತಿರುವಂತಹ ವಸ್ತುವಿನ ಬಗ್ಗೆ ಯೆಲ್ಲರ ದೃಷ್ಟಿಯೂ ಬೀಳದೆ. ನೀನೊಬ್ಬನೇ ನನಗೆ ಮಗ, ವರ್ತಮಾನ ಕಾಲದಲ್ಲಿ ಒಬ್ಬ ಪುರುಷ ಯೆಷ್ಟು ಬೆಳಿಬೇಕು ಅಂತ ಯಾರಲ್ಲಿಯಾದರೂ ಕೇಳಿದರೆ “ಬೆಳೆದರೆ ದೇವವ್ರತನಷ್ಟು ಬೆಳಿಬೇಕು” ಅಂತ ಹೇಳ್ತಾರೆ. ಔನ್ನತ್ಯ ಅದು; ನನ್ನ ಹರಕೆ ಅದು. ಆವಾಗ್ಗ ಒಬ್ಬ ತಂದೆಯಾಗಿ ನಾನು ಚಿಂತಿಸುವದು ನನ್ನ ಮಗನಿಗೆ ಪ್ರತಿಸ್ಪರ್ಧಿಗಳು ಹೆಚ್ಚಾಗ್ತಾರೆ ಆ ಗುಂಪಿನಲ್ಲಿ ಅಮೂಲ್ಯವಾದದ್ದರ ಕಡೆಗೆ ಎಲ್ಲರ ದೃಷ್ಟಿ ಬೀಳದೆ ಅಂತ. ಆವಾಗ ಧ್ವನಿಯಲ್ಲಿ ನಾನು ಹೇಳಿದ್ದು ಹಾಗೆ. ಯೇನು ಮಾಡೋದು ದೇವವ್ರತ, ಮಗನೇ ಹೇಳು?

ನನಗೆ ಒಬ್ಬನೇ ಮಗನಾಗಿ ಬಿಟ್ಟ. ನಾ ಪಡ್ದದ್ದು ಒಂದಲ್ಲ ಆದರೆ ನನ್ನ ಕೈಗೆ ಸಿಕ್ಕಿದ್ದು ಒಂದೇ ಆಗಿ ಉಳಿತು. ಹಾಗಾಗಿ - ಸ್ವ ಜಾತಿಮತ್ಸರ, ಸ್ವ ವೃತ್ತಿಮತ್ಸರ ಎಲ್ಲಾ ಮತ್ಸರವಾಗಿ ಅದು ಸಂಘರ್ಷಕ್ಕೆ ಕಾರಣವಾಗಿ, ಮದಬಂದ ಮದ್ದಾನೆಯಾದರೂ ಕೂಡಾ

ಒಂದೊಂದಾಗಿದ್ದಾವಾಗ, ಬಿಡಿ ಹುಲ್ಲಾಗಿದ್ದೂ ಹುಲ್ಲೆಲ್ಲಾ ಒಂದಾಗಿ ಅದೆಲ್ಲ ಮುಪ್ಪರಿಗೊಂಡಾವಾಗ ಆನೆಯನ್ನೂ ಬಂಧಿಸುವದಕ್ಕೆ ಅದು ಪರ್ಯಾಪ್ತವಾಗ್ತದೆ. ಬಹುಕಾಲದ ನನ್ನ ಜೀವನದ ಅನುಭವದಲ್ಲಿ ಅದೊಂದು ಅಪಾಯವೂ ಆದೀತು. ಆದ್ದರಿಂದ ಅವನು ಏಕಾಂಗಿಯಾಗಿ ಯೆಲ್ಲೂ ಸಂಚರಿಸಲಾರ ಸಂಚರಿಸಬಾರದು. ಆದರೆ ನಿನ್ನನ್ನು ಇಲ್ಲಿ ಕಟ್ಟಿಹಾಕುವವರು ಯಾರು? ಒಬ್ಬನೇ ಹೊರಗೆ ಹೋಗಬೇಡ, ಆ ಕಡೆಗೆ ಹೋಗಬೇಡ ಈ ಕಡೆಗೆ ಹೋಗಬೇಡ.... ತಂದೆ ಇದ್ದಷ್ಟು ದಿಟ್ಟ ಅದು ನಡೆದೀತು. ನಾಳೆಗೆ? ಭೃತ್ಯರಿರಬಹುದು, ರಾಮನಿಗೆ ಲಕ್ಷ್ಮಣನಂತೆಯೋ ಭರತನಂತೆಯೋ ಅಥವಾ ಲಕ್ಷ್ಮಣನಿಗೆ ಶತ್ರುಘ್ನನಂತೆಯೋ ಈ ಅವಿನಾಭಾವದ ಪರಸ್ಪರ ಸಂಬಂಧದ ಒಂದು ಸಮಷ್ಠಿಯಾದಂತಹ ವ್ಯಕ್ತಿತ್ವ ನನ್ನ ಮಗನಾದಂತಹ ದೇವವ್ರತನಿಗೆ ದೇವರು ಒದಗಿಸಿಕೊಡಲಿಲ್ಲವಲ್ಲ ಅಂತ ನೋವು. ಆದರೆ ಅದರ ಜೊತೆಗೆ ನನಗೊಂದು ಸಂತೋಷವೂ ಉಂಟು- ಭಗವಂತ ಕೈ ಬಿಡ್ಲಿಕ್ಕಿಲ್ಲ, "ಯತೋ ಧರ್ಮ: ತಥೋ ಜಯ:" ಧರ್ಮೋ ರಕ್ಷತಿ ರಕ್ಷಿತ: ಹೋದಲ್ಲಿ ಬಂದಲ್ಲಿ ಶ್ರೀಹರಿಯ ಕರುಣೆ ನಿನ್ ಮೇಲೆ ಇಲ್ಲಿ. ಆದರೂ ತಂದೆಯಾಗಿ ಇರದೆ ಹಾಗೆ ಮಗ ಪ್ರಬುದ್ಧನೇ, ಯೆಲ್ಲಿಯೂ ಹೋಗಬಲ್ಲ ಈ ತಾಯ್ತನಕ್ಕೊಂದು ಲಕ್ಷಣ ಉಂಟು ಅವಳು ಮುದುಕಿ ಇರಬಹುದು ಅಥವಾ ತಂದೆಗೆ ಯೇಳ್‌ಲಿಕ್ಕೆ ಸಾಧ್ಯವಿಲ್ಲದೇ ಇರಬಹುದು ಸಶಕ್ತನಾದಂತಹ ಮಗನು ಹೋಗಿಬತ್ತೇನೆ ಅಂತ ಹೇಳ್ತಾಗ - 'ಜಾಗ್ರತೆ'. ಯಾರಿಗೆ ಜಾಗ್ರತೆ?

ಪಿತೃತ್ವ ಹಾಗೆ ಹೇಳ್ತದೆ - ಇತ್ಯಾದಿ ಕಾರಣದಿಂದ ನೀನು ನನ್ನ ಕಣ್ಣಿನಿಂದ ಆಚೆ ಹೋದ್ರೆ ಈಚೆ ಹೋದ್ರೆ ಎಷ್ಹೊತ್ತಿಗೆ ಬಂದಾನು, ಎಷ್ಹೊತ್ತಿಗೆ ಬಂದಾನು ಅಂತಾಗಿದೆ. ಹಾಗಾಗಿ ನಿನ್ನಂಥಹ ಪುತ್ರರತ್ನವನ್ನು ಪಡೆದ ತಂದೆಗೆ ಕೆಲವುಸಲ ಈ ರೀತಿಯಿಂದ ಆಘಾತವೂ ಬರುವದಕ್ಕುಂಟು. ಇದನ್ನೆಣಿಸಿ ನಿನ್ನನ್ನು ಕಾಣುವಾಗ ಕಣ್ಣೀರು ಬರದೇ ಹೊರತು, ಹೈ ಇವನಿಗೊಬ್ಬ ಸಂಗಾತಿ, ಸೋದರ ಇಲ್ಲದೇ ಹೋದನಲ್ಲ ಅಂತ. ಆದರೇನು ಮಾಡೋದು ಯೇನ್ಮಾಡೋದು? ವಿಷಯ ಇಷ್ಟೇ.

ಆದ್ದರಿಂದ ಅದನ್ನು ನೀನು ತಲೆಗೆ ಹಚ್ಚಿಕೊಂಡು ಆಗಬೇಕಾದ್ದಿಲ್ಲ. ಈ ಹೊತ್ತಲ್ಲ ನಾಳೆ ನಾನು ಎದ್ದೇನು, ಮುಂದೇನು ಮಾಡೋಕು ಎಂಬುದನ್ನು ನಾನು ಸಾಧಿಸೇನು. ಹೋಗಿ ಬಾ.

(ದೇವವ್ರತ ಮಂತ್ರಿಗಳಿಂದ ವಿಷಯ ತಿಳಿದು, ಪ್ರತಿಜ್ಞಾಬದ್ಧನಾಗಿ ಭೀಷ್ಮನೆನಿಸಿ, ಸತ್ಯವತಿಯನ್ನು ತಂದನಂತರ)

ಆನಂದಭೈರವಿ-ಆದಿ॥ ಭರತಾನ್ವಯದ ವೃಕ್ಷವು ಪುಷ್ಪಿತವಾಯ್ತು ಧರೆಗಾನಂದದ

ಫಲವು ॥ಪ॥ ಮೆರೆವುದು ಮುಂದಕೆ | ತರಳನ ದೆಸೆಯಿಂದ

ಸುನರರೊಳಗಿವನ | ಪೋಲ್ವ ಸದ್ಗುಣರುಂಟೆ ॥ ೧೧ |

ದೇವವ್ರತ, ಯಳವೆಯಲ್ಲಿ ನನಗಿದ್ದಂತಹ ದುಡುಕುತನ ನಿನಗೆ ಬಂದರೆ ಸ್ವಾಭಾವಿಕವೇ. ಇಲ್ಲಿಯೂ ನೀನು ಸ್ವಲ್ಪ ದುಡುಕಿದೆ ಅಂತ ನನಗೆ ತೋರ್‍ತದೆ. ಈ ಸಮಸ್ಯೆ ನನ್ನ ಮುಂದೆ ಬಂದದ್ದೇ. ದಾಶರಾಜ ಹೇಳಿದ್ದ ಅದಕ್ಕೆ ನಾನು ಸಮ್ಮತಿಸಲಿಲ್ಲ. ಯಾಕೆ? ನಿನಗೊತ್ತಿಲ್ಲ, ನಾವು ಯಾವ ಹೆಣ್ಣನ್ನು ನಮ್ಮ ಗೃಹಸ್ಥ ಜೀವನದಲ್ಲಿ ನಮ್ಮ ವಯಕ್ತಿಕ ಜೀವನಕ್ಕೆ ಸಮಪಾಲನ್ನು ಕೊಟ್ಟು ಅಂಗೀಕರಿಸುತ್ತೇವೆಯೋ, ಅದಕ್ಕಿಂತ ದೊಡ್ಡದಾದಂತಹ ವಸುಂಧರಾರಮಣಿ ಮೊದಲೇ ನಮ್ಮನ್ನು ಕೈಹಿಡಿದ್ದಾಳೆ. ಯಾವಾಗಲೂ ಚಕ್ರವರ್ತಿಗಳಿಗೆ ಜೇಷ್ಠ ಪತ್ನಿ ಅಂತಂದ್ರೆ ಪರ್ಯಾಯದಿಂದ ಧರಣಿಯೇ. ಅವಳ ಕೈ ಬಿಡುವದಕ್ಕೆ ನಾನು ಸಿದ್ಧನಾಗಲಿಲ್ಲ. ಅವಳ ಕೈ ಹಿಡಿಯುವದಕ್ಕೆ ಭಾವೀ ಅಧಿಕಾರಿಯೊಬ್ಬ ಮೊದಲೇ ಇಲ್ಲಿ ನನ್ನ ಕಣ್ಣಮುಂದೆ ಸಿದ್ಧನಾಗಿದ್ದಾನೆ. ಅವನನ್ನು ಸ್ವೀಕರಿಸುವದಕ್ಕೆ ಅವಳು ಹಾತೊರೆಯುತ್ತಲೂ ಇದ್ದಾಳೆ - ಅಂದರೆ ನಮ್ಮ ಸಾಮ್ರಾಜ್ಯ. ಸಾಮ್ರಾಜ್ಯವನ್ನಪೇಕ್ಷಿಸಿ ನೋಡ್ವಾಗ ವೈಯಕ್ತಿಕ ಜೀವನ ಯೇನು? ಯೇನೂ ಅಲ್ಲ. ಇಲ್ಲಿಯೂ ಶ್ರೀರಾಮನ ಆದರ್ಶ ನನಗೆ ನೆನಪಿಗೆ ಬರದೆ - “ರಾಜ್ಯದೊಡ್‌ದೋ ತಾನು ಕೈಹಿಡ್ಡ ಹೆಂಡತಿ ದೊಡ್‌ದೋ” ಎಂಬ ಸಮಸ್ಯೆ ಬಂದಾಗ ಆ ಸಾಮ್ರಾಜ್ಯದ ಭವ್ಯತೆಯನ್ನೂ, ಪರಿಶುದ್ಧತೆಯನ್ನೂ ಉಳಿಸುವದಕ್ಕಾಗಿ ಸಾರ್ವಜನಿಕರ ಸಮಕ್ಷಮದಲ್ಲಿ ಸಂದೇಹಾಸ್ಪದಳಾದಂತಹ ವಯಕ್ತಿಕವಾಗಿ ಪರಿಶುದ್ಧ ಪಾವನೆ ಅಂತ ಗೊತ್ತಿದ್ರೂ ತನ್ನ ಮನಃಸಾಕ್ಷಿಗೆ ವಿರುದ್ಧವಾಗಿ, ಮನ:ಸಾಕ್ಷಿಯನ್ನು ದೇಶಕ್ಕೆ ಒತ್ತೆಯಿಟ್ಟು, ಸೀತೆಯನ್ನು ತ್ಯಾಗ ಮಾಡಿದ ರಾಮನ ಆದರ್ಶ ನಮ್ಮ ಕಣ್ಣಮುಂದೆ ಇದೆ. ಆದ್ದರಿಂದ ನಿಜವಾಗಿ, ಯಾವ ವಸುಂಧರಾರಮಣಿಗೆ ನೀನು ಯಜಮಾನನಾಗಿ ಮಹಾರಾಜನಾಗಿ ಭೂಪತಿಯಾಗಿ ಮೆರೆಯಬೇಕೋ ಅದನ್ನು ಒಂದುಕ್ಷಣ ತಂದೆಗೆ ಮಗನಾಗಿ ಮರೆತು ಬಿಟ್ಟೆ ಅಷ್ಟೇ. ಅವಳ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೇ ರಾಜ್ಯಕೊಡ್ತೇನೆ ಅಂತ ನಾನು ಹೇಳಿದ್ರೆ ನೀನು ತಿರಸ್ಕರಿಸುವ ಮಗನಲ್ಲ ಅದು ನನಗೆ ಗೊತ್ತು. ಆದರೆ, ಹಾಗೆ ಕೊಡಲಾಗದು. ನಮ್ಮ ವಯ್ಯಕ್ತಿಕ ಜೀವನದ ತೂಕಕ್ಕಿಂತ ಎಷ್ಟೋಽಽ ತೂಕವಾದದ್ದು ನಮ್ಮ ಅರಸೊತ್ತಿಗೆ, ಮಗನೇ, ಒಂದು ಹೆಣ್ಣಿಗೆ ಬೇಕಾಗಿ ಅಥವಾ ಇನ್ನೊಂದು ದೊಡ್ಡ ಶ್ರೀಮಂತಿಕೆಯನ್ನು ಸಂಪಾದಿಸುವದಕ್ಕಾಗಿ ನಾವು ಸಿಂಹಾಸನವನ್ನೇ ಒತ್ತೆಯಿಡಕೂಡದು. ಅದೇನು ಒಬ್ಬ ಶಿಲ್ಪಿಯೋ ಬಡಗಿಯೋ ತಯಾರಿಸಿದಂತಹ ನಾಲ್ಕು ಕಾಲಿನ ಮಣೆ ಅಲ್ಲ; ಇದು ನಿನಗೆ ಗೊತ್ತು, ಹಾಗಾದರೆ ದುಡುಕಿದೆ ಅಂತ ನಾನ್ಯಾಕೆ ಹೇಳಿದೆ? ನಾನೂ ಕೂಡಾ, ನಿಮ್ಮ ಅಮ್ಮನನ್ನು ಕಂಡು ಸ್ವೀಕರಿಸಬೇಕಾದ ಕಾಲಕ್ಕೆ ಹಸ್ತಿನಾವತಿಯ ಸಿಂಹಾಸನದ ಮೌಲ್ಯವನ್ನು ಒಂದು ನಿಮಿಷ ಮರೆತಿದ್ದೆ. ಕಾರಣ ಅವಳ ಅಂಕೆಯಲ್ಲಿ ನಾನಿರಬೇಕಾಯ್ತು. ಅವಳ ಇಷ್ಟಾನಿಷ್ಟದಲ್ಲಿ ನಾನು ಕೈಹಾಕ್ಬಾರ್ದು ಈ ಶರ್ತಕ್ಕೆ ಒಪ್ಪಿದ್ದೆ ನಾನು. ನನ್ನ ಮಗನೇ, ನೀನು ತಪ್ಪಿದೆ ಅಂತ ಹೇಳುವದಲ್ಲ, ಅದು ಪರಂಪರಾಗತವಾಗಿ ಬಂತು. ಆದರೆ ನನಗಿದ್ದ ರಾಷ್ಟ್ರದ ಸ್ನೇಹ ಸಿಂಹಾಸನದ ಸ್ನೇಹ ಅದು ನಿನ್ನಲ್ಲಿಯೂ ಊರ್ಜಿತವಾಗಿ ಬೆಳೆದು ಬರಬೇಕಾಗ್ತದೆ. ರಾಷ್ಟ್ರಕ್ಕೆ ನೀನು ಬೇಕು, ಸಿಂಹಾಸನಕ್ಕೆ ನೀನು ಬೇಕು. ನಿನಗಿಂತ ಪ್ರಬುದ್ಧವಾದಂತಹ ಸಂತಾನ ಈ ಸತ್ಯವತಿಯಲ್ಲಿ ಆಗುವದಕ್ಕೆ ಸಾಧ್ಯವೇ ಇಲ್ಲ. ಯಾಕೆ?

ಗಂಗೆಯ ಗರ್ಭವೇನು ! ಸಾಮಾನ್ಯನಾದದಾಶರಾಜನ ಮಗಳಾದ ಈ ಸತ್ಯವತಿಯ ಗರ್ಭವೇನು? ಯೌವ್ವನ ಇದೆ, ಮುದುಕನ ಕೈಹಿಡ್ದಿದ್ದೇನೆ ಎಂಬ ದು:ಖ ಈ ಯುವತಿಯಾದಂತಹ ಇವಳಿಗೆ ಬಾರದಂತೆ ಅವಳ ಬೇಕು ಬೇಡಗಳನ್ನು ಈಗಲೂ ವೈಯಕ್ತಿಕವಾಗಿ ತೀರಿಸುವ ಸಾಮರ್ಥ್ಯ ನನಗಿದೆ ಆಮಟ್ಟಿಗಲ್ಲ. ಈಗ ನನಗೆ ತೋರದೆ ದಾಶರಾಜ ನನ್ನನ್ನು ಮುದುಕ ಅಂತ ಕಂಡುಕೊಂಡು "ಮುದುಕನಿಗೆ ಹೆಣ್ಣು ಕೊಡೋದಿಲ್ಲ" ಅಂತ ಹೇಳಿದ್ರೆ ಈ ರೀತಿ ಈ ಕಥಾನಕ ಪರ್ಯವಸಾನ ಆಗ್ತಿರಲಿಲ್ಲ. ನನಗೆ ಮದುವೆ ಇಲ್ಲದೇ ಹೋಗಿತ್ತು ಅಧಿಕಾರ ನಿನ್ನ ಕೈಯಲೇ ಉಳಿತಿತ್ತು. ನೀನು ಮಹಾ ತ್ಯಾಗ ಮಾಡಿದೆ. ಹೌದು - ದಶರಥ, ರಾಮನು ಅವಸರ ಮಾಡಿದ ಅಂತ ಮನಸಾ ಎಣಿಸಿದರೂ ರಾಮನ ತ್ಯಾಗವೇ ದೊಡ್ದಾಯ್ತು. ರಾಮನು ರಾಮನೇ, ಆದರೆ ದಶರಥ ರಾಮನಲ್ಲ. ರಾಮ ದಶರಥ ರಾಮ! ಇಷ್ಟು ಹೇಳಿದರೆ ನಿನಗರ್ಥವಾಗಿದೆ. ಬಹುಶ: ನೀನು ಹೀಗೆ ಚಿಂತಿಸಿರಬೇಕು "ನನ್ನ ಉಳಿವಿಗಾಗಿ, ನನ್ನ ಬೆಳವಣಿಗೆಗಾಗಿ ಬೇಕಾದ ಕಾಲದಲ್ಲಿ ತಾಯಿಯಾದಂತಹ ಗಂಗೆಯನ್ನು ವಿಚ್ಛೇದ ಮಾಡಿಕೊಂಡ ನಮ್ಮ ತಂದೆ... ಹಾಗಾಗಿ ಪ್ರಾಯದಲ್ಲಿ ಇಂದ್ರಿಯವನ್ನು ನಿಗ್ರಹಿಸಿಕೊಂಡು ಅಕಾಲದಲ್ಲಿ ಹೆಂಡತಿ ಇಲ್ಲದ ಒಬ್ಬ ಗಂಡಸಾಗಿ ಉಳಿದ. ನನಗಾಗಿ ಇಷ್ಟು ತ್ಯಾಗ ಮಾಡಿದ ತಂದೆಗಾಗಿ ನಾನ್ ಇದ್ದಷ್ಟು ದಿವ್ಯ ಮದುವೆಯಾಗೋದಿಲ್ಲ ಅಂತ ಹೇಳೋದು ದೊಡ್ಡ ತ್ಯಾಗ. ಆ ಮಟ್ಟಿಗೆ ತಂದೆ ಮಗ ಎಂಬ ಸಂಬಂಧದಿಂದ ಸತ್ಪುತ್ತನೇ ನೀನು. ನೀನಂತೂ ಮದುವೆಯಾಗೋದಿಲ್ಲ! ಸಿಂಹಾಸನ ಯೇರೋದಿಲ್ಲ! ಕೆಲವೊಮ್ಮೆ ಸಿಂಹಾಸನಕ್ಕೆ ನೀನು ಅಗತ್ಯ ಅಂತ ಒಂದು ಸಂದರ್ಭ ಬಂದಾಗ ತಂದೆಯಿದ್ದಾವಾಗ್ಲಿ ತಂದೆ ಅಳಿದಮೇಲಾಗ್ಲಿ ನೀನಿಲ್ಲದೇ ಆಗಬಾರದಲ್ಲ? ಸಂದರ್ಭೋಚಿತವಾಗಿ ಕರ್ತವ್ಯ ನಿನ್ನನ್ನು ಕೈಬೀಸಿ ಕರೆದರೆ ನೀನು ಈ ಸಿಂಹಾಸನಕ್ಕೆ ಈ ರಾಷ್ಟ್ರಕ್ಕೆ ಅಸ್ಪೃಶ್ಯನಾಗಿ ಉಳಿಬಾರದಲ್ಲ! ಅದಕ್ಕಾಗಿ ನನ್ನ ಸುಪ್ತ ಮನಸ್ಸಿನಲ್ಲಿ ಮೂಡಿದ ಭಾವನೆ; ಅದರಲ್ಲಿ ನನ್ನ ಪರಿಶುದ್ಧತೆಯೂ ಪ್ರಪಂಚಕ್ಕೆ ವ್ಯಕ್ತವಾಗ್ತದೆ ಮಗನೇ ಯಾವಾಗ ಈ ಸಿಂಹಾಸನ ನಿನಗೆ ಭದ್ರ ಅಂತ ತೋರದೆ ಆವಾಗ ಬೇಕಾದರೆ ವಿರಕ್ತನಾಗು ಅಥವಾ ವಿರಮಿಸು ಆ ಕಾಲನಿರ್ಣಯ ನನ್ನ ಕೈಯಲಿಲ್ಲ, ಅಥವಾ ಸತ್ಯವತಿಯ ಹೊಟ್ಟೆಯಲ್ಲಿ ಎಂಥ ಮಕ್ಕಳು ಹುಟ್ತಾರೆ ಎಂದೂ ಕಲ್ಪಿಸುವದಕ್ಕಾಗೋದಿಲ್ಲ - ಅವರು ಬಲಿಷ್ಠರೋ, ದುರ್ಬಲರೋ, ಪರ್ಯಾಪ್ತರೋ, ಅಪರ್ಯಾಪ್ತರೋ? ಯಾರಿಗೆ ಗೊತ್ತು! ನನ್ನ ಎಣಿಕೆ ಹೇಗೆ ಅಂದರೆ, ಇರಬೇಕಾದ ಕಾಲ ಬಂದರೆ ನನ್ನ ಮಗ ನೀನಿಲ್ಲದೇ ಆಗಬಾರದು. ಆದ್ದರಿಂದ ನೀನು ಕಾಲವನ್ನೇ ಜೈಸಬೇಕು ಮಗನೆ, ಕಾಲವನ್ನು ಜೈಸಬೇಕು ಅಂತಂದ್ರೆ ಹೇಗೆ? ಕಾಲವನ್ನು ನಿಯಂತ್ರಿಸುವಂತಹ ಒಂದು ತಪಃಶಕ್ತಿ ನಿನ್ನಲ್ಲಿ ಮೂಡಬೇಕು. ಅದು ಈ ತಂದೆಯ ಹರಕೆಯಲ್ಲಿದೆ. ಅದಕ್ಕಾಗಿ ನೀನು ಇಚ್ಛಾಮರಣಿಯಾಗು ಮಗನೇ ಇಚ್ಛಾಮರಣಿಯಾಗು.



## ೨ ಸಾಲ್ವ ಶೃಂಗಾರ

ಸಾಲ್ವ

(ಸಾಲ್ವನ ಒಡೋಲಗ)

ಬಲ್ಲಿರೇನಯ್ಯಾ? ಸೌಭಾಧಿಪತಿ ಯಾರು ಅಂತ ಕೇಳಿದ್ದೀರಿ?

ಸರಿ ಹೇಳಿದ್ದೀರಿ. ಹೌದು ಸಾಲ್ವ ಯಾರಿಗೂ ಸಾಲುವ, ಕಾರ್ಯ ಅಷ್ಟೇ ಇರೋದು. ನಾನ್ ಯಾಕ್ ಆ ಮಾತ್ ಹೇಳಿದೆ? ನಾನು ಸೌಭಾಧಿಪತಿ ಹೌದೋ ಅಲ್ವೋ? ಜನಯೇನ್ ಹೇಳ್ತಾರೆ?

ಆದ್ರೆ ನೀವು ಒಪ್ಪಿದ್ರೂ ಸಾಕಾಗ್‌ದು. ನಿಮಗೆಲ್ಲರಿಗೂ ನಮ್ಮ ಪರಿಸ್ಥಿತಿ ಅರ್ಥವಾಗ್ಯದೆ. ಹಸ್ತಿನಾವತಿಯ ರತ್ನಸಿಂಹಾಸನದಲ್ಲಿ ಇದ್ದವು ಇಡೀ ಭೂಮಂಡಲವನ್ನಾಳ್ತಾ ಇದ್ದಾರೆ. ಹೌದಲ್ಲ? ನಾನೀಗ ನಿಮ್ಮಲ್ಲಿ ಕೇಳೋದು ನಮಗವರು ಸಹಪಂಕ್ತಿಯನ್ನು ಕೊಡಲಿಕ್ಕೆ ತಯಾರಾಗಿದ್ದಾರೋ ಈಹೊತ್ತಿನವರೆಗೆ? ಆಗ್ಲಿಲ್ಲ. ಯೇನ್ ಮಾಡೋಣ? ಅಲ್ಲಿಸ್ಕೊಂಡು ಬಹುದೊಡ್ಡದಾದಂತಹ ಆದರ್ಶವನ್ನೆಲ್ಲ ಜಗತ್ತಿನ ಮುಂದೆ ಪ್ರಕಟ ಪಡಿಸಿ, ಹೋದಲ್ಲಿ ಬಂದಲ್ಲಿ ಅದನ್ನೇ ಉಪದೇಶಮಾಡ್ತಾರೆ. ಉಪನ್ಯಾಸ ಮಾಡ್ತಾರೆ!

ಒಳ್ಳೇ ಮನುಷ್ಯ ಅವನು. ಯಾರು?

ಸದ್ಯ ಅಲ್ಲಿದ್ದಾನಲ್ಲ, ಅಧಿಕಾರಿಯಾಗಲ್ಲ. ನೇತಾರ - ಭೀಷ್ಮ, ಒಳ್ಳೆ ಮನುಷ್ಯ.

ಆದ್ರೆ ಯೇನ್ ಮಾಡೋಣ ನಮ್ಮ ಬಗ್ಗೆ ... ಊಹುಂ!

**ಭೀಷ್ಮನ ಕಾಲಕ್ಕೆ ಆದದ್ದು. ಆಳುವವರಿಗೆ ಜಾತಿ ಇದ್ದಾರು ಅಂತ. ಯಾಕೆ? ಜಾತ್ಯಾತೀತ ಅಂತ ಅರಸರಿಗೆ ಎತ್ತಣದು ಜಾತಿ? ಇಲ್ಲ. ಅಷ್ಟು ದೊಡ್ಡ ಮನುಷ್ಯ ಭೀಷ್ಮ ತನ್ನ ತಂದೆಗೆ ಎರಡನೆಯ ಮದುವೆ ಯಾವ ಜಾತಿಯಿಂದ ಮಾಡಿಸಿದ?**

ನಿಮ್ಮೆಲ್ಲ ಗೊತ್ತುಂಟಲ್ಲ ! ಸದ್ಯ ಅವಳಲ್ಲಿ ಹುಟ್ಟಿದವನು ತಾನೆ ಚಕ್ರವರ್ತಿಯಾಗಿ ಸಿಂಹಾಸನದಲ್ಲಿರೋದು!

ಕೇವಲ ಈ ದೊಡ್ಡವರು ಈ ಮುಖಂಡರೆಲ್ಲ ಜ್ಯಾತಾತೀತ ಅಂತ ಹೇಳೋದು ನಮ್ಮನ್ನು ಮೋಸ ಮಾಡ್ಲಿಕ್ಕೆ.

ಅಲ್ಲಿ ಅವರು ಹೇಳ್ತಾರೆ ಒಂದು ಜಾತಿ ಒಂದು ಮತ ನಾವೆಲ್ಲ ಒಂದು. ಹಿಂದು ನಿಲ್ ಬಾರು. ಮುಂದ್ ಹೋಗ್ಲೀಕು. ನಮಗೆ ಜಾತಿ ಇಲ್ಲ ಅಂತ ಹೇಳಿ ಹೌದೋ?

ಸೌಭಾಧಿಪತಿಯಾದ ಸಾಲ್ವ ಒಡೋಲಗಕ್ಕೆ ಬಂದ; ವರದಿಯಾಗ್ತದೆ ಅವರಿಗೆ ಅಲ್ಲಿದ್ದಲ್ಲಿಂದಲೇ ನೋಡ್ತಾರೆ. ಒಡೋಲಗಕ್ಕೆ ಬಂದ ಖಳರಾಯ!

ನನ್ಗ್ ಆಗದೇ ಇರೋದು ಅದೊಂದು. ನಾವು ಮಾತ್ರ ರಾಯರಲ್ಲಿ ಕಳ್ಳರೋ ನಿಮ್ಮ ಕೈಬಾಯಿ ಶುದ್ಧವೋ? ಅಂತ ಹೇಳ್ಕ್ಕೆ ಅವರ ಕೈಬಾಯಿ ಎಷ್ಟು ಶುದ್ಧ ಅಂತ ಯಾರು ಸಂಶೋಧನೆ ಮಾಡೋದು? ಆದ್ರೆ ದೊಡ್ಡವರು ಹೆಳ್ವವಲ್ಲ ಕೇಳ್ವವರಿಲ್ಲ.

ಅಯ್ಯಾ ನನ್ನವರೇ, ಈಗ ನಾನೊಂದು ಹೊಸ ಉದ್ದೇಶದಿಂದ ಹೊದ್ದಿದ್ದೇನೆ. ಇದೆ ಯೇನು ಅಂತ ಹೆಸಿಸೋದು?

ಕ್ರಾಂತಿ ! ಅಲ್ಲ, 'ಸಂಘರ್ಷ!

ನಾವು ದಲಿತರು ಅಂತ ತಲೆ ಮೆಟ್ಟದೇ ಇದ್ರೂ ಅವು ಇದ್ದಲ್ಲಿಗೆ ಯೆರಡನೇ ಪಂಕ್ತಿಯಲ್ಲಿ ಎಲೆ ಕೊಡ್ತಾರಲ್ಲ! ಸೌಭಾಧಿಪತಿಯಾದ ಸಾಲ್ವ, ನಿಮಗೆ ಗೊತ್ತಿದ್ದ ಹಾಗೆ ನಾನೇನು ಮಿಶ್ರತಳಿಯೋ? ನನ್ನ ತಾಯಿ ತಂದೆ ಒಂದೇ ಜಾತಿಯವರು. ನನ್ನ ತಂದೆಗೇ ನಾನು ಹುಟ್ಟಿದವ ಅಂತ ನನಗೆ ಪಟ್ಟಾಭಿಷೇಕಮಾಡಿ ಅವು ಸತ್ ಹೊಗ್ತಾರೇ ನಿಮಗೆಲ್ಲ ಗೊತ್ತೆಂಟು. ಹಸ್ತಿನಾವತಿಯಲ್ಲಿ ಎಲ್ಲ ಹಾಗೇ ಉಂಟೋ?

ಎಲ್ಲಾದೊಡ್ಡವರ ಕಥೆ, ಹೇಳ್ವಾರು. ಈ ಭೀಷ್ಮನ ತಾಯಿ ಚಕ್ರವರ್ತಿಯಾದ ಶಂತನುವನ್ನು ವರಿಸಬೇಕಾದ್ರೆ, ಈ ಮಹಾ ಚರ್ಕವರ್ತಿ ಶರಣಾಗಿದ್ದಾನಂತೆ. ನನಗೆ ಮೊನ್ನೆ ಸಿಕ್ಕಿದ ಸುದ್ದಿ ಅದು, ಇಡೀ ಅಖಂಡ ಭೂಮಂಡಲವನ್ನಾಳುತ್ತಿರುವ ಚಕ್ರವರ್ತಿ, ಒಂದು ಹೆಣ್ಣಿಗೆ ಬೇಕಾಗಿ “ನೀನ್ ಹೇಳಹಾಗೇ ಕೇಳೇನೆ, ನಿನ್ನ ಇಷ್ಟಕ್ಕೆ ವಿರೋಧವಾಗಿ ನಡೆಯೋದಿಲ್ಲ” ಮಾತು ಕೊಟ್ಟು, ಅವಳನ್ನು ಮಹಾರಾಣಿ ಮಾಡಿದರೆ ಅವ ರಾಜನೋ ಅವ? ಯೇನೋ ದೊಡ್ಡವರ ಕಥೆ !!

ಅವ್ಳ್ ಯೇನ್ ಮಾಡಿದಳು, ಹೆತ್ತ ಹಾಗೆ ಮಕ್ಕನ್ನು ನೀರಿಗೆ ಬೀಸಾಡಿದಳು. ಈ ಚಕ್ರವರ್ತಿ ಬಾಯ್ ಮುಚ್ಚಿ ಕೂತ. ಯಾಕೆ? ಅಡ್ಡ ಮಾತಾಡಿದರೆ ಅವ್ ಬಿಟ್ ಹೋಗ್ತಾಳಲ್ಲ ಅಂತ, ಹೆಂಡ್ತಿಗೆ ಹೆದರಿ, ಕೊನೆಗೆ ಏಳೂ ಮಕ್ಕನ್ನೂ ಬೀಸಾಡಿದಳಂತೆ. ಹಾಗಂತ ಬಾಕಿಯಿದ್ದವರ ಮೇಲೆಲ್ಲ ಶಾಸನ ಮಾಡ್ತಾರೆ - ಹೆಚ್ಚು ಮಕ್ಕನ್ನು ಹಡೀಬೇಡಿ. ಹೆತ್ತರೆ ಮಕ್ಕನ್ನು ಹೊಳೆಗೆ ಬೀಸಾಡೋಡಿ, ಸ್ವಯಂ ಅವರೇ ಮಾಡ್ತಾ ಬಾಕಿಯಿದ್ದವರಿಗೆ ಹೇಳ್ತಾರೆ.

ಇದೆಲ್ಲ ಈಗ ಬಹಿರಂಗಗೊಳಿಸಲಿಕ್ಕೆ ಹೊತ್ತಾಗಿಲ್ಲ. ಯಾಕೆ ಅಂತಂದ್ರೆ ನಮ್ಮ ಮಾತಿನ ಶಕ್ತಿ ಇದೆ. ಆದ್ರೆ ಇದ್ರಿಸುವ ಶಕ್ತಿ ನಮಗೆ ಸಾಲದು. ನಾವೆಲ್ಲ ಹಿಂದುಳಿದವರು, ದಲಿತರು ಅಂತ ಅವರಿಂದ ತಳ್ಳಲ್ಪಟ್ಟವರಿದ್ದೇವಲ್ಲ, ನಾವು ಸುಸಂಘಟಿತರಾಗಿ ಒಂದಲ್ಲ ಒಂದು ದಿವಸ, ನಂದೊಂದು ಫಣ ಉಂಟು. ಜಾತಿ ಕ್ಷತ್ರಿಯರ ಹುಡುಗಿಯರನ್ನೇ ಮದುವೆಯಾಗ್ಬೇಕು ಅಂತ. ಯಾಕೆ?

ಭೀಷ್ಮ ಅಂಬಿಗರ ಕನ್ನಿಕೆಯನ್ನು ತಂದು, ಅವಳ ಹೊಟ್ಟೆಯಲ್ಲಿ ಚಕ್ರವರ್ತಿಯನ್ನು ಸೃಷ್ಟಿಮಾಡಿ ನೀನೇ ಚಕ್ರವರ್ತಿ ಅಂತ ಮಾಡಿದನೋ ಇಲ್ಲೊ? ಮೇಲ್ಜಾತಿಯವರಿಗೆ ಹೆಣ್ಣು ಯಾವ ಜಾತಿಯದ್ದೂ ಆದೀತು ಅಂತ ಅವರೇ ಬರಿಟ್ಟಿದ್ದು ಅದು. ಹೆಣ್ಣು ಯಾವಜಾತಿಯದ್ದೂ ಆದೀತು. ಅದ್ಯಾಕೆ? ನನ್ನ ಕಾಲಕ್ಕೊಂದು ಬದಲಾವಣೆ, ಕೀಳು ಜಾತಿಯಲ್ಲಿ ಹುಟ್ಟಿದವನಿಗೂ ಉಚ್ಚಕುಲದ ಹೆಣ್ಣನ್ನೇ ತದ್ದೇಕು. ಯೇನ್ ಹೇಳೀರಿ? ಹೌದಾದರೆ ಹೌದನ್ನಿ, ಅಲ್ಲವಾದರೆ ಅಲ್ಲವೆನ್ನಿ.

ಅಲ್ಲ ಅಂತ ಹೇಳ್ಳಿಕ್ಕೆ ನಿಮಗೆ ನಾನು ಯಾವಾಗಾದ್ರೂ ಕೊಡೋದಿಲ್ವೇ? ನೀವ್ ಹೇಳಿದರೆ ಸಾಲದು ಇದನ್ನು ಮಾಡಿ ತೋರಿಸ್ಬೇಕು. ಯೇನ್ ಮಾಡೋದು ನನ್ನೊಂದು, ದಿವಸ ಬಲ್ಲಿಲ್ವಲ್ಲ. ಅದಕ್ಕಾಗಿ ಕಾಯ್ತಾ ಇದ್ದೇನೆ. ಎಂದಿನಂತೆ ಇಂದೂ ಕೂಡ ನಾವು ಯಾವುದರಲ್ಲಿ ಕಡಿಮೆ? ನೀನ್ ಯಾವಲ್ಲಿ ಹೆಚ್ಚು? ಕೇಳಲಿಕ್ಕೇ ಬೇಕು. ಆದ್ರೆ ಭೀಷ್ಮನ ಹತ್ರ ಅಲ್ಲ! ಇದೆಲ್ಲ ಇಲ್ಲಿ ಹೇಳಹುದು. ಅವ ಬಹಳ ಜೋರು! ನಾನಿನ್ನೂ ನೋಡ್ಲಿಲ್ಲ ಭೀಷ್ಮನನ್ನು, ಕುರುಕುಲರಾಜಸಿಂಹ ಅಂತೆ! ನಿಮ್ಮ ಒಂದು ಮಾತ್ ಹೇಳೇನೆ, ಈ ಕೆಲವರಿದ್ದಾರೆ ಪ್ರಪಂಚದಲ್ಲಿ ಮಹಾ ಮೇಧಾವಿಗಳು. ಮಹಾನಾಯಕರಾಗ್ಲಿಕ್ಕೆ ಅರ್ಹತೆಯಿದ್ದವು ಅವರಿಗೆ ಬೇಡ, ಬಾಕಿಯಿದ್ದವರಿಗೆ ಬಿಡ. ಇಂಥವನ್ನು ಹುಡುಕಿ ತಲೆ ಕಡೀಬೇಕು.

ಭೀಷ್ಮನೇ ಕೂಳ್ತಾನೋ ಹಸ್ತಿನಾವತಿಯಲ್ಲಿ? ನಾಳೆಯಿಂದ ನಿಮ್ಮ ಉದ್ಯೋಗ ಇದಲ್ಲ. ಕಾಣಿಕೆ, ಕಪ್ಪ, ಹೊನ್ನು, ನೀವೆಲ್ಲ ಬಿಟ್ಟಮಂಡೆಯಲ್ಲಿ ಅಲ್ಲಿಗೆ ಹೊತ್ಕಂಡ್ ಹೋಗಿ ಕೊಟ್ಟೇಕು. ಸಾಲ್ವಭೂಪತಿ ಕಳುಹಿಸಿದ್ದು ಅಂತ, ಅವ ಕೂತ್ಕೊಳ್ಳೋದಿಲ್ಲ.ಯೇನವ್ವವ್ವನ…………!

ಅಲ್ಲ ನಾನ್ ಹೇಳಿದ್ದು, ಈ ದೊಡ್ಡವು ಮುಟ್ಟಿದ ಕೂಡ್ಲೆ ಈ ಕೀಳು ಜಾತಿಯವರಿಗೆಲ್ಲ ಜಾತಿ ಬರದೆ ಅಂತ ಯಾವ್ ಪುಸ್ತಕದಲ್ಲಿ ಉಂಟು? ಆದ್ದರಿಂದ ಜಾತ್ಯಾತೀತ ಅಂತ ಅವ್ರ ಹೇಳ್ತಾರೆ. ಯಾಕೆ? ಬಾಕಿಯಿದ್ದ ಮಠದವರೆಲ್ಲ ಹೋಗಿ "ಯೇನಯ್ಯಾ ನೀವ್ ಯಾವ ಜಾತಿ ಹೆಣ್ಣನ್ನು ಮದುವೆಯಾಗಿದ್ದೀರಿ ಅಂತ ಕೇಳಿದ್ರೆ ನಮ್ಮು ಜಾತ್ಯಾತೀತ ರಾಷ್ಟ್ರ ಪರಾಕೇ!" ಕೆಲವರಿದ್ದಾರೆ ಖುಷಿಗಳು. ಅದು ಸಮ ಅಂತ ಹೇಳ್ವವು ಆದ್ದರಿಂದ ಜಾತ್ಯಾತೀತ ಅಂತ ವೊಂದೋ ಅವ್ರ ಹೇಳುವುದನ್ನು ಬಿಟ್ಟೇಕು. ಇಲ್ಲದಿದ್ರೆ ನಮ್ಮನ್ನು ಜಾತಿಯಿಂದಗುರುತಿಸಿ

ಅವರಿಗೆ ಅಡ್ಡ ಪಂಕ್ತಿ ಅಂತ ಹೇಳೋದನ್ನಾದ್ರೂ ಬಿಟ್ಟೇಕು. ಇದ್ ಯೆರೆಡನ್ನೂ ಅವ್ ಬಿಡೋದಿಲ್ಲ, ನಾನು ಸದ್ಯ ಬಿಡುವ ಆಲೋಚನೆಯಲ್ಲಿಲ್ಲ. ಆದ್ದರಿಂದಲೇ ಇಷ್ಟು ಅಬ್ಬರದಲ್ಲಿ ಓಲಗ ಚಾವಡಿಯನ್ನು ಪ್ರವೇಶಿಸಿದ್ದು. ಯೇನು ವಿಶೇಷ ಈ ಹೊತ್ತು?

**(ಚಾರಕನ ಪ್ರವೇಶ)**

ಬಂದ್ಯೋ? ನೀನ್ಯಾರು ಅಂತ ನನಗೆ ವಿಳಾಸ ಹೇಳೋಕೇನೊ?

ಯೇನ್ ಮಾಡೋದು? ನಮಗಿಂತ ಉತ್ತಮ ಜಾತಿಯವರು ನಮ್ಮ ಮನೆ ವೊಳ್ ಬರೋದಿಲ್ಲ.

ಯಾಕೆ ಅಂದ್ರೆ ಯಾರಲ್ಲಿ ಅತ್ಯಂತ ವಿಶ್ವಾಸ ಇದೆಯೋ, ಅವರನ್ನು ಮನೆಯ ಹೊರಗಿನ ಕೆಲಸಕ್ಕೆ ಬಿಟ್ಟೇಕು. ಯಾಕೆ? ಕಾವಲು ಬೇಕಾದ್ದು ಹೊರಗೆ ಆ ರೀತಿ ನಾನಿದ್ದೇನೆ.

ಹೋ ಹೋ ನೀನೀಗ ಗುಪ್ತ ದಳದಲ್ಲಿ ಇದ್ದೀ ಅಲ್ವೇ? ಹಾಗಾಗಿ ನಾನು ಕೆಲವು ದಿವಸದಿಂದ ನಿನ್ನ ಮುಖ ನೋಡಿದ ನೆನಪು ಇಲ್ಲ. ಈಗ ಹ್ಯಾಗೆ ಬಹಳ ತಿರುಗಾಟ ಮಾಡ್ತೀಯೋ? ಅ... ಸರಿಯಾದ ಹಾದಿಯಲ್ಲೇ ತಿರ್‌ದ್ದೀಯಲ್ಲ? ಈಗ ಸರಿಯಾದ ಹಾದಿಯಲ್ಲಿ ತಿರುಗೀ ತಿರುಗೀ ಜನ ನೀನು ತಿರ್‌ಗ್ಲಿಲ್ಲಲ್ಲ?

ಯಾಕೆ ಅಂತ ಈಗೀಗ ಅದೂ ಉಂಟು ನಮ್ಮವರು ಅಂತ ಹೇಳಿ, ನಮ್ಮ ಗುಪ್ತಚರರಾಗಿ ಪಾತ್ರವಹಿಸಿಕೊಂಡು, ಒಳಗಿಂದಒಳಗೇ ಇಲ್ಲಿಯ ಗುಟ್ಟು ಅಲ್ಲಿಗೆ ಹೇಳವರೂ ಇದ್ದಾರೆ. ಹಾಗೇನೂ ಮಾಡ್ಲಿಲ್ಲಲ್ಲ.? ತಲೆ ತಿರ್‌ಗ್ಲಿಲ್ಲ, ಊರ್ ತಿದ್ದಿ! ನೀನ್ ಅಂಥ ಜನ ಅಲ್ಲಪ್ಪ, ಯಾಕೆ ಅಂತಂದ್ರೆ ನನ್ನ ನಿನ್ನ ಹಿರಿಯರಲ್ಲಿ ಗುತ್ತು... ಯತಾರ್ಥಕ್ಕೆ ನಿನಗೆ ಉದ್ಯೋಗ ಕೊಟ್ಟಿದ್ದು ನಿನ್ನ ಮುಖ ನೋಡಿ ಅಲ್ಲ.

ಹೂ.. ಊರೂರು ಸುತ್ತಿದೆ.

ಅಲ್ಲಿಗೆ ಮುಗಿಯಿತು ಪ್ರಕರಣ. ಯಾವ ತಿರುಗಾಟ ಯಾವ ಯಾತ್ರೆಯೂ ಕೊನೆಗೊಳ್ಳುವುದು ಕಾಶಿಯಲ್ಲೇ. ಅಲ್ಲೊ? ಯೇನು ಸತ್ತ ಪಿತೃಗಳಿಗೆಲ್ಲ ಪಿಂಡ ಹಾಕಿ ಬಂದ್ಯೋ ಹೇಗೆ?

ಈ, ಕಾಶಿಗೊಬ್ಬ ರಾಜ ಇದ್ದಾನಲ್ಲೋ? ನನಗೆ ದೊಡ್ಡವರು ಕಣ್ಣಿಗೆ ಬೀಳೋದಿಲ್ಲ.

ಸಣ್ಣವರನ್ನು ಎಣಿಕೆಗೆ ತಕೋಳೋದಕ್ಕಾಗೋದಿಲ್ಲ. ಇದು; ಕಾಶಿಗೊಬ್ಬ ರಾಜ ಇದ್ದಾನೆ. ಧರ್ಮಾಧಿಕಾರಿಯಿದ್ದೇಕು!

ಕೆಟ್ಟವಾರಕ್ಕೆ ಮಂಗಳವಾರ ಅಂತ ನಮ್ಮೂರಲ್ಲಿ ಹೆಸ್ರು, ಪ್ರತಾಪ ಇಲ್ಲದ್ದಿದ್ದಲ್ಲಿಗೆ ಪ್ರತಾಪಸೇನ ಅಂತ ಹೆಸ್ರು. ಹೆಸರಿನಿಂದಲಾದರೂ ಉದ್ಘಾಟನೆಯಾಗಿ ಅಂತ.

ಕಾಶಿಯಲ್ಲಿದ್ದವು ಮದುವೆಯಾಗೇ ಇದ್ದಾರೇನೊ?

ಕಾಶಿಯಿಂದ ಮತ್ತೆ ಅಲ್ಲಿಯೇ ನೀರಲ್ಲಿ ಮುಳುಗಿ ಬದರಿಕಾಶ್ರಮಕ್ಕೆ ಹೋಗ್ತಾರೋ? ನಿನ್ನೆ ಕಥೆ ಗೊತ್ತಿಲ್ಲ ಕಾಶಿಯಲ್ಲಿದ್ದವಷ್ಟು ಎಲ್ಲಾ ವಿಷಯಕ್ಕೂ ಗಂಟು ಬಿದ್ದವರು ಪರಊರಲ್ಲಿಲ್ಲ. ಅವಿಗದು ವ್ಯಾಪಾರೀ ಸಂಸ್ಥೆ. ಕಾಶೀ ಅಂತಂದ್ರೆ ಅಲ್ಲಿ ಇದ್ದ ಮಾಹಾರಾಜ ಮತ್ತೆ ಅವ ಯೇನು ಮದುವೆಯಾ? ಒಂದಾದ್ರೂ ಯೆರಡಾನ್ನೊ?

ಈಗ ನನ್ಗ  ಅರ್ಥ ಆಯ್ತು, ಕಾಶೀ ರಾಜನಿಗೆ ಮೂರು ಹುಡುಗಿಯರಿದ್ದಾರೆ, ಮದುವೆಯ ಪ್ರಾಯ ಆಗಿದೆ, ಅಂತ ಸುದ್ದಿ ಕೇಳಿ ಎಲ್ಲೆಲ್ಲಿಯೋ ಹೋಗಿ ಇಣಿಕಿದೆ ಅಲ್ವೇನೊ? ಹೆಸ್ರು... ಅಂಬೆ, ಅಂಬಿಕೆ, ಅಂಬಾಲಿಕೆಯರೆಂಬ ಬಾಲಿಕೆಯರು, ಮೂವರು! ಆಹಾ ಒಳ್ಳೆಯ ಹೆತ್ತು, ಇದೀಗ... ಅವನಲ್ಲಿ ನೆಂಟಸ್ತಿಕೆ ಮಾಡೇಕಿದ್ರೆ ಇವ ಊರ್ ಸುತ್ಬೇಕು ಮತ್ತೆ ಎಲ್ಲೆಲ್ಲಿ ಭೂಪಾಲಕರಿದ್ದಾರೆ... ಅಂತ. ಹೌದೋ ಅದು ಮೊದ್ಲು ಬ್ರಹ್ಮ ದೇವರು ಹೇಳಿದ್ರಂತೆ; ಮಗಳಾದ ಅಹಲ್ಯೆಯನ್ನು ಮದುವೆಯಾಗಬೇಕಾಗಿದ್ರೆ, ಯಾರಾದ್ರೂ ಅಡ್ಡಿಯಿಲ್ಲ, ಈ ಭೂಮಂಡಲವನ್ನು ಅದ್ ಯೇಷ್ಟೋಗಳಿಗೆವೊಳೆ ಸುತ್ತಿ ಬರ್ಬೇಕು ಅಂತ. ಯಾವಾನಾದರೊಬ್ಬ ನನ್ನ ಹಾಗಿದ್ದವ ಇಡೀ ಭೂಮಂಡಲ ಸುತ್ತಿಕ್ ಹೋದ್ರೆ, ಮತ್ತೆ ಅನ್ನಿಗೆ ಮದ್ದೆ ಬೇಕಾಗ್ಲಿಕ್ಕಿಲ್ಲ, ಹಲ್ಲೂ ಉದ್ರಿತು, ಗಡ್ಡವೂ ಬಿಳಿಯಾದೀತು. ಮತ್ತೆಂಥದ್ದು? ಭೂಮಂಡಲದಲ್ಲಿದ್ದ ಎಲ್ಲಾ ಅರಸು ಮಕ್ಕಳನ್ನೂ ಜಯಿಸಿ ಆಗ್ಬೇಕು. ಅವ ಜಯಿಸಿ ಬರುವಾಗ ಇವನ ಮಕ್ಕಳು ಮುದುಕಿಯರಾಗ್ಬೇಕು. ಮತ್ತೆ? ಮಹಾಬುದ್ಧಿವಂತ ಕಾಶೀರಾಜ ಯಾಕೆ?

ಎಷ್ಟೋ ಮಂದಿ ರಾಜರೆಲ್ಲ ಇದ್ದಾರೆ, ಬನ್ನಿ, ನಿಮ್ಮನಿಮ್ಮಲ್ಲಿ ಪ್ರತೀಕಾರ ಮಾಡಿ, ಆಮೇಲೆ ಸರದಿ ಪ್ರಕಾರ ಹತ್ತನೇ ಸುತ್ತಿಗೋ ಹನ್ನೊಂದನೇ ಸುತ್ತಿಗೋ ಬದುಕಿದವ ಬರ್ಲಿ. ಬಾಡಿಗೆ ಯಿಲ್ಲದೇ ಸ್ಥಳಕೊಟ್ಟು ಇಲ್ವೊ?

ಅವನ ಆಮಂತ್ರಣಕ್ಕೆ ಕಿವಿಗೊಟ್ಟ ಶತಮೂರ್ಖ ರಾಜರುಗಳೆಲ್ಲ ಇದ್ದಾರೋ ಅಲ್ಲಿ? ಇದು ಈ ಛಪ್ಪನ್ನ ದೇಶದ ಭೂಪಾಲಕರನ್ನು ಕರೀಲಿ. ಯಾಕೆ ಅಂದ್ರೆ ಅವ್ನಿಗ್ ಗೊತ್ತುಂಟ್ ಅದು, ಛಪ್ಪನ್ನ ಅಲ್ಲ, ಅದು ಉಪ್ಪಿಗೂ ಗತಿಯಿಲ್ಲದವರು, ಊಟಕ್ಕೆ, ಚಪ್ಪೆ ಅನ್ನ! ಅವ್ರೆಲ್ಲ

ಬಾರ್ತಾರೆ. ಬಾರ್ತಾ ಇದ್ದಾರೆ. ನೀನು ಕಂಡಿದ್ದೀ. ಹೌದಲ್ಲ?

ಭೈರವಿ-ಅಷ್ಟ॥ ದೂತನೆಂದುದ ಕೇಳುತ | ಸೌಭಾವನೀ | ನಾಥನು ಗರ್ಜಿಸುತ |

ಹೂತುರೆ ಸಕಲ ರಾಯರ ಕರೆಸುತ ಕಾಶೀ | ನಾಥನು ಮರೆತ ನೆನ್ನ || ೧೨ |

ದೂತಾ, ನೀನು ಹೇಳಿದಂತಹ ಮಾತುಗಳನ್ನು ಕೇಳಿ ಹ್ಞೆ....ತಪ್ಪು., ನಿನ್ನ ಮಾತನ್ನು ಕೇಳಿಯೋ ನಾನ್ ಯೇನಾದ್ರೂ ಮಾಡೋದು?

ಅಲ್ಲಲ್ಲ... ದೂತ ಹೆಳಿದ ಮಾತು ಕೇಳಿ ಅಂತ ಮುಂದ್ ಬಂದ್ ಬಿಟ್ಟದ್ ಅದು. ನಾನೇನೂ ದೂತರೆಲ್ಲ ಹೇಳಿದ ಹಾಗೆ ಕೇಳುವ ಜನವೊ? ನೀನು ನಮ್ಮ ಸನ್ನಿಧಾನದಲ್ಲಿ ತಂದು ಒಪ್ಪಿಸಿದ ವರದಿಯನ್ನಾಶ್ರಯಿಸಿ, ಅಂತ ಅರ್ಥ. ಶಹಭಾಸ್, ಹಸ್ತಿನಾವತಿಗೆ ಆಮಂತ್ರಣ ಹೋಗ್ಲಿಲ್ಲಲ್ಲೊ? ನಿನಗೆ ಖಂಡಿತ ಗೊತ್ತುಂಟಲ್ಲೊ? ಬಿಡು, ಈಗ ನನಗೆ ದಾರಿ ಸುಗಮ ಆಯ್ತು. ಯಾಕೆ ಅಂತಂದ್ರೆ ಹಸ್ತಿನಾವತಿಗೆಲ್ಲಿಯಾದ್ರೂ ಆಮಂತ್ರಣ ಹೋದ್ರೆ, ಆಚೆಯವನೇ ಇದ್‌ಬಿಟ್ರೆ....ಹೆಸ್ರು ಹೇಳೋದ್ ಬೇಡ. ದೊಡ್ಡ ಮನುಷ್ಯರ ಹೆಸ್ರು ಯಾಕೆ ಹೇಳೋದು? ಅವ ಬಂದ್ರೆ ನಮಗೆ ತೊಂದ್ರೆ ಅಲ್ಲ ನಾನು ಬಿಡೋಜನ ಅಲ್ಲ. ಆದ್ರೆ ನಾನು ಬಿಟ್ಟದ್ದಕ್ಕಿಂತ ಹೆಚ್ಚಿಗೆ ಅವ ಬಿಟ್ರೆ? ಭೀಷ್ಮ ಅಲ್ವೇನೊ !

ಇನ್ನೂ ಒಂದುಂಟು. ಅವ ಹೊಡೆದ್ರೂ ನನಗೆ ಹೋಗೂದಕ್ಕೇನೂ ಇಲ್ಲ. ಅಂದ್ರೆ ಮೊದಲೇ ಇಲ್ಲ ಅಂತರ್ಥ ಅಲ್ಲ, ಚಕ್ರವರ್ತಿಗಳ ಪ್ರತಿನಿಧಿಯಾಗಿ ಬಂದ, ಸಭೆಯಲ್ಲಿ ನನ್ನ ಎರ್ಡ್ ಏಟು ಬಿಗ್ದ , ಚಕ್ರವರ್ತಿಯಾದ್ದರಿಂದ ನಾನು ಕೈಯೆತ್ತದೆ ಸುಮ್ನೆ ಬಂದೆ ಅಂತ ಸುಧಾರಿಸಿಕೊಂಡೇನು. ನೀನು ದಾರಿ ತೋರಿಸಲ್ಲಿಕ್ಕೆ ಬೇಕು. ಕಾಶಿ ಇಲ್ಲಿಂದ ಯಾವದಿಕ್ಕಿಗುಂಟು ಅಂತ ಸತ್ಯಕ್ಕಾದ್ರೆ ನನ್ಗ ಗೊತ್ತಿಲ್ಲ. ಮತ್ತೆ ಇಂತಹ ಸಂದರ್ಭದಲ್ಲಿ ಯೆಲ್ಲಾ, ಎಲ್ಲಾಕಡೆಯಲ್ಲೂ ತಿರಾಟ ಮಾಡಿ, ಮಹಾಬೀದಿ ಮಾತ್ರ ಅಲ್ಲ. ಕೆಲವುಒಳಬೀದಿಗಳೆಲ್ಲ ಇದ್ದಾವಲ್ಲ? ಮತ್ತೆ ಅದ್ರಲ್ಲಿ ಎಷ್ಟನೇಮನೆ? ಯಾವ ಮನೆಗೆ ಎಷ್ಟು ಮಾಳಿಗೆ? ಕಾಶೀದೇಶದ ರಾಜಧಾನಿಯಲ್ಲಿ ಎಲ್ಲಿ ನಿತ್ತರೆ ಹುಡುಗಿಯರ ಮುಖ ಕಾಣಿಕ್ಕೆ ಆಗ್ತದೆ, ಇಂಥಾ ಅನುಭವಕ್ಕೆಲ್ಲ ನೀನ್ ಇರೋದ್ ವೊಳ್ಳೇದು. ಆದಕಾರಣ ನೀನ್ ಬೇಕು. ಈಗಲೇ ಹೊರಡೋಣವೋ? ಕಾಶೀದೇಶದರಾಜ ಮರದ್ದು ದೊಡ್ಡಲ್ಲ. ಯಾಕೆ ಅಂತ್ ಹೇಳಿದರೆ ನಮ್ಮನ್ ಅವೆಲ್ಲ ಜಾತಿ ಪಂಕ್ತಿಯಲ್ಲೇ ಸೆರಿಸಲಿಲ್ಲ. ನಾನೀಗ ನಿಮಗೆ ಒಂದು ಮಾತು ಹೇಳೇನೆ. ಈ ಸೂಕ್ಷ್ಮವನ್ನು ನೀವ ಗ್ರಹಿಸ್ಬೇಕು. ನಿಮ್ಮ ಬಡತನದ ನಿರ್ಮೂಲನ ಅಲ್ಲ ಮುಖ್ಯ ನಿಮಿರೋದಕ್ಕೆ ಮನೆ ಅಲ್ಲ ಮುಖ್ಯ ಕುಡೋದಕ್ಕೆ ನೀರಲ್ಲ ಮುಖ್ಯ. ನಾವೆಲ್ಲ ಹಿಂದುಳವು ಅಂತ ತಳ್ಳಲ್ಪಟ್ಟಿದ್ದೇವೆ. ನಿಮ್ಮ ಮಹಾನಾಯಕತ್ವ ನನಗೆ ಬಂದದೆ. ನಾವು ಹಿಂದುಳವೆಲ್ಲ, ನಾವು ಸಂಘರ್ಷಕ್ಕೆ ಎದ್ದಿದೇವೆ ಅಂತ ನನ್ನೊಟ್ಟಿಗೆ ಸಂಬಳ ತಕ್ಕೊಳ್ಳದೇ, ಜೀವ ಹೋದ್ರೆ ಹೋಗ್ಲಿ ಅಂತ ಹೋರಾಟಕ್ಕೆ ಸಿದ್ಧರಾದ್ದೇಕು. ಇದು ಸೂಕ್ಷ್ಮ ವಿಚಾರ, ಈ ಸಲ ನಮ್ದ್ ಯೇನಾದ್ರೂ ಉಳೀತು. ನಾಳೆ

ನಮ್ಮ ಮಕ್ಕಿಗೂ ಉಳಿಸಿದ ಹಾಗೆ; ಇದೊಂದ್ ಒಳ್ಳೆ ಸಂದರ್ಭ. ಹಿಂಬಾಲಿಸಿ, ಹೋಗೋಣ.

| ಭಾಮಿನಿ || ಇನಿತು ಬಹುಪರಿ ಮಾತನಾಡುವ ವನಿತೆಯರು ನಗುತಿರುವ ಕಾಲದಿ |

ಜನಪನಾತ್ಮಜೆ ಯೆಂದು ನಿಶ್ಚಸುತ್ತ ಖಳಪತಿಯು || ೧೩ |

ಇನ್ ಯೇನಾದ್ರೂ ಚಿಂತಿಲ್ಲ. ಆಹಾ... ಯಂತಹಾ ಪ್ರದೇಶಕ್ ಬಂದಿದ್ದೇನೆ. ನನ್ನ ಅವಸರ ಉಪಕಾರಕ್ಕೆ ಬಿತ್ತು. ಇಲ್ಲದಿದ್ರೆ ನಿಧಾನಗತಿಯಿಂದ ರಥವನ್ನು ಹರಿಯಿಸ್ತಿದ್ರೆ ನಾಳೆ ಮುಹೂರ್ತಕ್ಕೆ ಸರಿಯಾಗಿ ರಥ ಇಲ್ ನಿಲ್ತಿತ್ತು, ಹೊರಗೆ ಧಾರಾಳ ಸಮಯ ಉಂಟು. ಯೇನು! ಯೇನು! ಆಹಾ... ಗಿಳಿಗಳೇ ಮಾತಾಡಿದ್ದು ಅಂತ ನಾನ್ ಶಬ್ದವನ್ನಾಲ್ಲಿಸಿದ್ದು, ಇಷ್ಟವರೆಗೆ ಕೋಗಿಲೆಗಳೇ ಹಾಡ್ತಾನೆ ಅಂತ ಹೇಳಿದ್ದು. ಅಲ್ಲ ಕೋಕಿಲ ಕಂಠಯರು, ಶುಕವಾಣಿಯರು, ಯೇನ್ ಮಾತನಾಡಿದರು ಅಂತ ನನಗೆ ಕೇಳಿಸುವುದಿಲ್ಲ. ಇಲ್ಲೆ ಇದ್ದಾರೆ. ಓದ್ಗೋ ಕಾಶೀರಾಜನ ಹೆಣ್ಣುಮಕ್ಳು ಇವರೇ ಆಗಿರಬೇಕು ಒಂದು, ಯೆರಡು, ಮೂರು ಸುಮ್ನೆ ಅಲ್ಲ! ಎಲ್ಲಾ ಗಂಡಸರನ್ನೂ ಜಯಿಸಿದವನೇ ಆಗಬೇಕು ನನ್ನ ಹೆಣ್ಣು ಮಕ್ಕಳಿಗೆ, ಇದು ಸಾಧಾರಣ ಬಳ್ಳಿ ಅಲ್ಲ ಮೂರ್ ಬಳ್ಳಿ ಹಬ್ ಬೇಕಾದ್ರೆ ಯೆಂಥಾ ಮರ ಆಗೋಕು. ಅಲ್ವೊ? ಒಂದ್ ಬಳ್ಳಿ ಹಬ್ಬಿದರೇನೇ ಅದು ಹಲವಾರು ಟಿಸಿಲುಗಳನ್ನೊಡಿಸಿಕೊಂಡು ಆಮೇಲೆ ಹೂವಿನ ಗೊಂಚಲೆನಿಸಿದರೆ ಮಾವಿನ ಮರವೇ ಕಾಣೋದಿಲ್ಲ. ಇದು ಮೂರು...! ಇವರ ದರ್ಶನ ಪ್ರಪ್ರಥಮ ನನಗಾಯ್ತಲ್ಲ ! ಮಂಗಲಕರವಾದದ್ದು, ಅರಗುವರಿಯರ ದರ್ಶನ ನನಗಾಯ್ತು. ಮತ್ತೊಂದುಂಟು, ಮದುಮಗನಿಗೆ ಮೊತ್ತಮೊದಲು ಮದುವೆಗೆ ತಯಾರಿದ್ದ ಹುಡುಗಿಯ ಮುಖ ಕಾಣಸಿಕ್ಕು, ಮತ್ತೆ ಅವಳ ಮೈ ಕೈ ಮತ್ತೊಬ್ಬಿಗೆ ಸಿಕ್ಕೋದಿಲ್ಲ. ಇದೊಂದ್ ಒಳ್ಳೆ ಲಕ್ಷಣ. ಆದ್ರೆ ವೊಂದುಂಟು, ನಾ ಸ್ವಲ್ಪ ಜನ ವೊರಟು. ಇವರು ಕೋಮಲಾಂಗಿಯರು, ಯೇನು ನಾದ! ಅವರು ಮಾತಾಡುವಾಗಲೇ ಸಂಗೀತ ಬರದೆ. ಈಗ ಆ ಕೃತಿಯಲ್ಲಿ ಅಷ್ಟು ಇಂಪಾಗಿ ಹೇಳ್‌ಲಿಕ್ಕೆ ನನ್ನ ಬರೋದಿಲ್ಲ. ಆದ್ರೂ ಪ್ರಯತ್ನ ಮಾಡೇನೆ. ಯೇನೇ ಆಗಲಿ, ನಮ್ಮ ಬೇಹಿನ ಚರ ಇದ್ದಾನಲ್ಲ ಬಡತಾಯಿ ಮಗ! ಕೆಲವನ್ನು ಸತ್ಯವಾಗಿ ವರದಿ ಮಾಡ್ತಾನೆ. ಪರಮ ಸುಂದರಿಯರು ಅಂತ ಹೇಳಿದ್ದಾನೆ. ಅವ ಯಾವ ಅರ್ಥದಲ್ಲಿ ಹೇಳಿದ್ದೋ, ನಿಜವಾಗಿ ಹೌದು. ಮುಂದೆ ಒಬ್ಬಳು ಬಾಳಲ್ಲ? ಇವಳು ಜೇಷ್ಠೆಯಾಗಿರ್ಬೇಕು ಹಾಗೇ ಸಂಬೋಧಿಸೋಣ.

ಕೇದಾರಗೌಳ-ಅಷ್ಟೇ ಪರಮಸುಂದರಿ ಪೆಳ್ಳೀನ್ಯಾರೆ ನಿನ್ನನ್ನು ಪೆತ್ತ | ದೊರೆ ಯಾರು

ಪೇಳು ಪೇಳೇ || ವರಿಸೀಗ ಸೌಭದೇಶದ ದೊರೆಯಾದೆನ್ನ |

ಕರೆವರು ಸಾಲ್ವ ನೆಂದು || ೧೪ ||

ಸಾಲ್ವ ! ಯೆಲ್ಲಿಂದೆಲ್ಲಿಗೂ... ವೋ ಸುಂದರೀ ! ಸಾಲದು, ಸಾಲದು ಪರಮ ಸುಂದರಿ !!

ಬೇರೊಬ್ಬರನ್ನು ಕುರಿತು ಹೇಳುವ ನಾಲಿಗೆಯೋ ಇದು ? ನಿನಗಂತೂ ನೀನು ಪರಮಸುಂದರಿ ಅಂತ ಗೊತ್ತಾಗಿದೆ ತಾನೆ? ನಿನ್ನ ಭಾವಕ್ಕೆ, ನಿನ್ನ ತೀರ್ಮಾನಕ್ಕೆ ಒತ್ತು ಕೊಡುವ ಒಂದು ಪ್ರಭು ಶಕ್ತಿ ನಾನು. ನಿನ್ನ ಅಪ್ಪ ಯಾಕೆ? ಆದ್ರೆ ನನ್ಗ ಅವ ಯಾರಾದ್ರೇನು ಅದ್ ಅಲ್ಲ. ಇಲ್ಲಿ ಪ್ರಧಾನವಾದಂತಹ ವಸ್ತುವನ್ನು ನಾವು ಕಂಡುಕೊಳ್ಳುವುದು ಅದಕ್ಕೆ ಹಿನ್ನೆಲೆಯಾಗಿದ್ದಂತಹ ಪರಿಸರ, ಇದನ್ನೆಲ್ಲ ಊಹಿಸುವುದು ನಮ್ಮ ತರ್ಕ ಬುದ್ಧಿ, ನಾನ್ ಯಾರು ಅಂತ ಕೇಳುವ ಕುತೂಹಲ ಇಲ್ಲದಿದ್ರೂ ಬಾಕಿಯಿದ್ದವರು ಕೇಳದಿದ್ರೂ ನಮ್ಮನ್ನು ನಾವು ಉದ್ಘಾಟಿಸಿಕೊಳ್ಳುವುದು ಪದ್ಧತಿ.

ಸಾಲ್ವ ದೇಶ ಅಂತ ಕೇಳಿ ಬಲ್ಲೆಯಾ? ನೀನು ಬಿಡು. ನಮ್ಮ ಹತ್ತಿರದವರಿಗೂ ಗೊತ್ತಿಲ್ಲ ಹಾಗೊಂದು ದೇಶ ಉಂಟು ಅಂತ. ಸಾಲ್ವಾಧಿಪತಿ ನಾನು. ನನ್ನ ಹೆಸ್ರು ಬೇರೆ ಉಂಟು. ಆದ್ರೂ, ಇಡೀ ರಾಷ್ಟ್ರವೇ ಮೈವೊಡೆದು ಬಂದ ಕಾರಣ ದೇಶದ್ದೇ ನನ್ನ ಹೆಸ್ರು. ಯಾಕೆ ಅಂತಂದ್ರೆ ಇಡೀ ಭಾರತವನ್ನೇ ಆಳುವ ಪ್ರಾತಿನಿಧ್ಯ ಉಳ್ಳವರಿಗೂ ಭಾರತರು ಅಂತ ಹೆಸ್ರಂತೆ, ದೇಶ ಬೇರೆ ಅಲ್ಲ, ಅವರು ಬೇರೆ ಅಲ್ಲ. ನಾನೂ ಹಾಗೇ ನನ್ನಟ್ಟಿಗೆ ನನ್ನ ದೇಶ ಬೇರೆ ಅಲ್ಲ, ನಾನ್ ಬೇರೆ ಅಲ್ಲ. ಹಾಗಾಗಿ ಸಾಲ್ವಾಧಿಪತಿ ಸಾಲ್ವ ! ಸಾಲುವ ಅಂತಲೂ ವ್ಯಾಖ್ಯಾನ ಮಾಡಹುದು. ಸಾಲ್ವ ಅನ್ನುವುದು ಬೇರೆ. ಅದು ದೇಶವಾಚಿ ಶಬ್ದ. ನಿನ್ ಹೇಳ್ತನೆ, ಎಲ್ಲದಕ್ಕೂ ಸಾಲುವ ಜನ ನಾನು. ಹಾ, ಯೆಷ್ಟಕ್ಕೂ ಸಾಕು. ಸುರನರೋರಗಮುಖ್ಯರೂ ಕೂಡ ನನ್ನ ಹೆಸ್ರ ಕೇಳಿದರೆ ನಡ್ಗತಾರಂತೆ, ನಾನಿನ್ನೂ ಅವರನ್ನು ನೋಡ್ಲಿಲ್ಲ. ಯಾಕೆ ಅಂತಂದ್ರೆ ವರದಿಗಾರರು ಬಂದು ಹೇಳಿದರು- “ಸ್ವಾಮಿ ಪರಾಕೇ ನಿಮ್ಮ ಹೆಸ್ರ ಕೇಳಿದರೆ ಅವರು ನಡ್ಗ ತ್ತಾರೆ”. ಮತ್ತೆ ನನ್ನನ್ನು ನೋಡಿದರೆ ಜೀವ ಬಿಟ್ವಾರು. ಅದೆ ಬೇಕಾಗಿ ನಾನ್ ಅವನ್ನು ಹುಡುಕಿ ನೋಡ್ಲಿಲ್ಲ. ಹೀಗೆ ಮೂರು ಲೋಕದಲ್ಲಿಯೂ ಕೂಡ ನನ್ನ ಹೆಸ್ರು ಬಹಳ ಪ್ರಚಾರದಲ್ಲಿದೆ, ಪ್ರಸಾರದಲ್ಲಿದೆ. ಅದು ಜನ ನಾನ್ ಯೆಷ್ಟು? ಅದನ್ನು ಉದ್ಘಾಟಿಸಿಕೊಳ್ಳುವ ಸ್ವಭಾವ ನನ್ ಈ ವರೆಗೆ ಬರಲಿಲ್ಲ . ನಿನ್ನನ್ನು ಕಾಣುವಾಗ ಇದ್ದದ್ ಇದ್ದಹಾಗೆ ಹೇಳದೇ ಮನಸ್ ಕೇಳ್‌ಲಿಲ್ಲ. ಆದ್ದರಿಂದ ಇಕೋ, ಇಷ್ಟು ನಿನ್ನ ಮುಂದೆ ಬಿಚ್ಚಿದ್ದೇನೆ. ಬಾಕಿ ಯಿದ್ದದ್ದನ್ನು ಹೇಳೋದಕ್ಕೆ ನೀನ್ ಯೆಷ್ಟು ಸಿದ್ಧನಿದ್ದೀ ಅಂತ ಗೊತ್ತಾಗೋದಿಲ್ಲ.

ನಿನ್ನಂತವಳು ಸಿಕ್ಕಾಗ ಮಾತನ್ನು ಫಕ್ಕನೇ ಮುಗಿಸ್ಲಿಕ್ಕೆ ನನ್ನ ರಸಿಕತನ ಅಡ್ಡಬರ್ತದೆ. ಮಾತು ಬೆಳೆಸುವುದಕ್ಕೆ ಬೇಕಾಗಿ ನೀನ್ ಯೇನ್ ಹೇಳಿದರೂ ಚೆನ್ನಾಗಿರ್ತದೆ. ಅಂತರಂಗ ಬಹಿರಂಗ ಎರಡೂ ಒಂದೇ ಅಂತ ಸ್ಪಷ್ಟ ಆಯ್ತಲ್ಲ? ಯಾರ್ ನೀನು? ನೀನು, ನಾನ್ ಎಣಿಸಿದವೋಯೋ ಅಲ್ಲ ಬೇರೆಯೋ? ಯೇನು ! ಕಾಶೀರಾಜನ ಮಗಳು ಅಂಬೆ! ಮತ್ತೆ

ಆ ಹೆಸ್ರನಿಂದ ಕರೀಲಿಕ್ಕೆ ಆಗೋದಿಲ್ಲ. ಹೌದಯ್ಯ... ಯಾರಾದ್ರೂ ಕೈ ಹಿಡಿದ ಹೆಂಡತಿಯನ್ನು ಅಂಬೆ ಅಂಬೆ ಅಂತ ಕರೀತಾರೋ? ಯಾಕೆ ಅಂತಂದ್ರೆ, ಅಂಬೆ ಅಂತಂದ್ರೆ ತಾಯಿ ಅಂತ ಅರ್ಥ. ಮುದ್ವೆಯಾದ್ಮೇಲೆ ತಾಯಿ ಅಂತ ಕರಿಬಹ್ದೋ ಅವನ್ನು? ಆದಕಾರಣ ಮುಂದೆ ಕರೆಯೋದನ್ನೆಲ್ಲ ಸದ್ಯ ಕುಂಠಿತಗೊಳಿಸು. ಈಗಲೇ, ಯೇನದು ನಿನ್ನ ಹೆಸ್ರು? ಹ್ಞಾ... ಯೆನೆಂಬೆ? ಅಂಬೆ... ಅಂಬೆ. ಅಂಬೆ. ಪ್ರತ್ಯಕ್ಷ ರಂಭೆ, ಚಿನ್ನದಗೊಂಬೆ, ಯತಾರ್ಥ ಹೇಳೊದಿದ್ರೆ ಹ್ಹೆಹೆ ಹಣ್ಣಾದ ನಿಂಬೆ! ಯಾಕೆ ಹೇಳಿದೆ? ನಿಂಬೆಹಣ್ಣನ್ನು ಕಾಣುವಾಗಲೆ, ಆರೋಗ್ಯ ಇದ್ದವನಿಗಾದರೆ, ಜಠರಾಗ್ನಿ ಪ್ರಜ್ವಲಿಸುವವನಿಗಾದ್ರೆ, ನಾಲಿಗೆಯಲ್ಲಿ ನೀರ್ ಒಸ್ರತದೆ. ನಮ್ಮಲ್ಲಿ ಧನ್ವಂತರಿಗಳಿದ್ದಾರೆ. ಅಂದ್ರೆ ಅಭಿನವ ಧನ್ವಂತರಿಗಳು. ವೊಂದ್ ಮಾತು ಹೇಳಿದ್ದಾರೆ ಅವು. ನೀರುಳ್ಳಿಯನ್ನು ಕತ್ತರಿಸುವುದನ್ನು ನೋಡ್ವಾಗ ಯಾರ ಕಣ್ಣಿನಲ್ಲಿ ನೀರೊಸೋದಿಲ್ಲ ಅವನಕಣ್ಣಿಗೆ ಬೇಗ ಚಿಕಿತ್ಸೆ ಮಾಡಬೇಕು. ಆರೋಗ್ಯದ ಲಕ್ಷಣ ಅಂತೆ ಅದು. ಹಾಗೆ ಹಣ್ಣಾದಂಥ ನಿಂಬೆ ಹಣ್ಣನ್ನು ಕಾಣ್ವಾಗ, ಕತ್ತರಿಸ್ವಾಗ ಯಾರ ಬಾಯಲ್ಲಿ ನೀರೂರೂದಿಲ್ಲ ಅವರ ಕರುಳಿಗೆ ಎನೋ ಸಂಕಟ ಉಂಟು ಅಂತ ತೀರ್ಮಾನ ಮಾಡಬೇಕು. ಅಂದ್ರೆ ನನ್ಗ  ಯೇನಾಯ್ತು ಅಂತ ನಿನ್ಗ ಗೊತ್ತಾಯ್ತಲ್ಲ? ಮುಖ್ಯ ನಾನ್ ನಿನ್ನ ಅಪ್ಪನ ಆಸ್ಥಾನದವರೆಗೆ ಹೊರಟವ. ಅಲ್ಲಿಗೆ ಹೋಗದೇ ಇಲ್ಲಿಯೇ ಬಗೆಹರಿಸಿಕೊಂಡು, ನನಗೂ ಆಯಾಸ ಇಲ್ಲದೇ ನಿನಗೂ ಪ್ರಯಾಸ ಇಲ್ಲದೇ ಪ್ರಕರಣ ಮುಗಿಸುವನೋ ಅಂತ? ನಾನ್ ನಿನ್ನಲ್ಲಿ ವೊಂದ್ ಪ್ರಶ್ನೆ ಕೇಳ್ತನೆ. ನೀವೇನು ಬರೇ ಚಿತ್ರದ ಗೊಂಬೆಗಳೋ? ಪ್ರಾಯಪ್ರಬುದ್ಧೆಯರಾದ ಹೆಣ್ಣುಮಕ್ಕಳಿಗೂ ಕೆಲವು ಬೇಕುಗಳಿದ್ದಾವೆ ಅಂತ ಅಪ್ಪ ತಿಳಿಬೇಕೊ ಬೇಡೋ? ನಾ ದೂರೋದಲ್ಲ ನಿಮ್ಮ ತಂದೆಯನ್ನು; ಯೆಲ್ಲರನ್ನೂ ಗೆಲ್ಲುವವ ಯಾವನೋ ಅವ ನಿಮ್ಮ ಅಪ್ಪನಿಗೆ ಅಳಿಯನಾದಾನು. ಹೌದೇನೆ? ನಿಮಗೆ ಒಪ್ಪಿಗೆಯ ಗಂಡ ನಾದಾನೊ? ಅಲ್ಲಲ್ಲ, ನೀವೂ ರಾಜಕುಮಾರಿಯರಾಗಿ ಸ್ವಲ್ಪ ಸ್ವಾತಂತ್ರ್ಯವನ್ನು ಉಪಯೋಗಿಸದೆ ಯೇನದು ಗೆದ್ದವರಿಗೆ ಕೊಡೋದಕ್ಕೆ ಯೆಂಥದ್ದದು ಬಾಳೆ ಹಣ್ಣಿನ ಗೊನೆಯೊ? ನೀವು ಜಡ ಅಲ್ವಲ್ಲ? ನಿಮಗೊಂದು ಸ್ವಯಂವರೇಣ ಒಬ್ಬ ಪುರುಷನನ್ನು ವರಿಸುವ, ಅದು ಹೇಳಿದ ಹಾಗೆ ಶಾಸ್ತ್ರದಲ್ಲಿ ಉಂಟಪ್ಪ ನನ್ಗೆಲ್ಲ.. ಅಗತ್ಯಕ್ಕೆ ಅದೆಲ್ಲ ನೆನಪುಬರದೆ. ಕನ್ಯಾವರಯತೇ... ಮತ್ತೆಂಥದ್ದೋ.. ಗೊತ್ತಿಲ್ಲ ಮೊದಲು ಕನ್ಯೆಯಾದವಳು ವರಿಸಬೇಕು ಯೆನನ್ನು? ಗಂಡನ ರೂಪವನ್ನು! ಗೆದ್ದದ್ ವೊಬ್ಬ ಕುಂಟ, ಇಲ್ಲಾದ್ರೆ ಒಬ್ಬ ಕುರುಡ, ಇಲ್ಲಾವೊಬ್ಬ ರೋಗಿ, ಇಲ್ಲಾದೊಬ್ಬ ಮುದುಕ..! ನಿಮ್ಮ ಅಪ್ಪ ನಿಮ್ಮ ಹತ್ರ ಕೇಳದೇ ವೊಂದು ತೀರ್ಮಾನ ಕೈಗೊಳ್ಳಬಹುದಂತೆ, ನೀವೂ ಸ್ವತಂತ್ರರಾಗಿ ನಿಮ್ಮ ಒಂದು ತೀರ್ಮಾನ ಕೈಗೊಂಡ್ರೆ ತಪ್ಪೇನು? ಹೂ.. ಹಾಗಾದ್ರೆ ಹೀಗೆ ಮಾಡೂ ನಿಮ್ಮ ಅಪ್ಪನ ಮಾತೂ ಉಳೀಲಿ. ನೀನು ನನ್ನನ್ನು ವೊಪ್ಪಿದ್ರೆ ಬಾಕಿಯಿದ್ದವನ್ನು ನಾನ್ ನೋಡಿಕೊಳೇನೆ. ಬಂದವು ಇದ್ದಾರೋ... ಭೂಪಾಲಕರು. ಯತಾರ್ಥ ಹೇಳ್ಳೊ, ನಾನು ಗೆಲ್ಲುವುದಕ್ಕಂತ್ಲೇ ಬಂದದ್ದು. ಈ ಮಧ್ಯೆ ನಾನು ನಿನ್ನನ್ನು ನೋಡಿದೆನೋ? ನಿನಗೆ ನಾನು ಸೋತೆ. ಇಲ್ಲೇ ನಾನು ಸೋತು ಬಿಟ್ಟೆ. ನನ್ನನ್ನು ನೀನು ಗೆದ್ದುಕೊಂಡಿ. ಎಲ್ಲರನ್ನೂ ಗೆಲ್ಲತಕ್ಕ ಸಮರ್ಥನಾದ ಸಾಲ್ವನನ್ನು ನೀನು ಗೆದ್ದು ಕೊಂಡಿದ್ದೀ ಅಂತಾದ್ರೆ, ಇನ್ನು ಅವಿಗೆ ಸೊಲೋದೆ ಅಲ್ವೇ ಅಲ್ಲಿದ್ದವ್ರಿಗೆ? ಆದ್ದರಿಂದ

ನೀನು ಪ್ರಾಮಾಣಿಕವಾಗಿ ನನ್ನನ್ನು ವರಿಸುತ್ತೇನೆ ಅಂತ ವೊಪ್ಪಿದ್ರೆ, ಲೋಕಾಚಾರಕ್ಕೆ ಬೇಕಾದ್ರೆ ನಾನೊಂದು ಯುದ್ಧ ಮಾಡಿ, ಯಾರಿದ್ದೀರಿ? ಏಳಿ ಅಂತ ಹೇಳ್ತೇನೆ. ಆದೀತೊ?... ತಂದೆಯ ಮಾತೂ ಉಳೀತದೆ. ಶಹಭಾಸ್ ನೀನು ನನಗೆ ಹೆಂಡತಿಯಾಗ ತಕ್ಕವಳೇ. ಬುದ್ಧಿ ನಿನ್ಗೂ ಚುರುಂಟು. ಛೇ ನಾನೂ ನೀನು ಸೇರಿದರೆ ಮೊದಲೊಬ್ಬ ಹೇಳಿದ ಹಾಗೆ... ನನ್ನ ಸಾಮರ್ಥ್ಯ- ನಿನ್ನ ಬುದ್ಧಿ; ನನ್ನ ಆರೋಗ್ಯ- ನಿನ್ನ ಸೌದರ್ಯ, ಇದು ಬೆರಕೆಯಾಗಿ ಒಂದು ಉತ್ತಮ ಸಂತಾನ ಹುಟ್ಟಿಬಿಟ್ರೆ ಲೋಕದ ಭಾಗ್ಯ ! ಏನ್ ಹೇಳ್ತಿ?

ಮತ್ತೊಂದುಂಟು, ನಾವಿಲ್ಲಿ ಮಾತಾಡಿದ್ದೆಲ್ಲ ಅಲ್ಲಿ ಪ್ರಸ್ತಾಪ ಬೇಡ. ಇದು ನಿನ್ಗೂ... ನನ್ಗೂ ಗೊತ್ತು. ಮತ್ತೂ ಒಂದ್ ಹೇಳ್ತೇನೆ, ಈ ಕಾಲದಲ್ಲಿ ನಮ್ಮ ದೇಶದ ಯಾವ ಅರಸಿಗೂ, ಅರಸರ ಮಕ್ಕಿಗೂ ಒಂದಕ್ಕಿಂತ ಹೆಚ್ಚು ಮದ್ದೆಯಾಗುವ ಶಕ್ತಿಯೂ ಇಲ್ಲ, ಆರೋಗ್ಯವೂ ಇಲ್ಲ ತಿಳಿತೊ? ಮತ್ತೆ ನನ್ಗೂ ಅಷ್ಟೇನೇ, ನಿನ್ನಂಥವಳು ಹೆಂಡತಿಯಾಗಿ ಬರುವಾಗ ಪಾಲುಗಾರೆಲಿರೋದ್ ನನ್ಗೂ ಇಷ್ಟ ಇಲ್ಲ, ನಿನ್ಗೂ.ಒಳ್ಳೇದಲ್ಲ. ಹೆಣ್ಣು ಮಕ್ಕಳ ಮನಃಶಾಸ್ತ್ರ- ನಾನ್ ಯಾರೋ ಹೇಳೋದ್ ಕೇಳಿದ್ದೇನೆ. ತನ್ನ ಒಡಹುಟ್ಟಿದ ತಂಗಿಯನ್ನಾದ್ರೂ ಕೂಡ, ಮದುವೆಯಾದ ಈ ಅಕ್ಕ ಸವತಿಯರಂತೆಯೇ ಕಾಡ್ತಾಳಂತೆ, ಸೋದರಿಯರಂತೆ ಕಾಣೋದಿಲ್ಲಂತೆ. ಹೌದಾದ್ರೆ ಹೌದೆನ್ನು, ಅಲ್ಲವಾದ್ರೆ ಅಲ್ಲವೆನ್ನು. ಆದ್ದರಿಂದ ತಂಗಿಯರು ಗೆದ್ದವರಿಗಾಯ್ತು; ನೀನು ನನಗಾಯ್ತು. ಹಾಗಾದರೆ ಮಾತು ಬೇಡ, ಮಾತು ಬೇಡ, ಈಗ ನನ್ಗೆ ಶ್ರದ್ಧೆ ಹೆಚ್ಚಾಯ್ತು. ಆದಕಾರಣ ನಾನೂ ವೊಂದ್ ಗಂಗಾ ಸ್ನಾನ ಮಾಡ್ತೇನೆ. ಸುರುವಿಗೆ ಅಪರಷೋಡಷಯೆಲ್ಲ ಮುಗಿಸ್ತೇನೆ. ಮತ್ತೆ ಪೂರ್ವಷೋಡಷಕ್ಕೆ ಪ್ರಾರಂಭಿಸ್ತೇನೆ. ಬರ್ತೇನೆ. ಹೋಗು.

**( ಅಂಬೆಯ ನಿರ್ಗಮನ )**

ಹ್ಯಾಗೆ? ಇವೊತ್ತು ನನ್ಗೆ ವೊಳ್ಳೇದಿವ್ಸ . ನಾನ್ ಯೆದ್ದದ್ದು ಬಲಮಗ್ಗುಲಿನಿಂದ. ಬಹುಶಃ ಬೆಳಿಗ್ಗೆ ಯೆದ್ದಹಾಗೇ ಯಾರೋ ಒಳ್ಳೆಯವರ ಮುಖ ನೋಡಿದ್ದೇನೆ. ಅಲ್ಲಿ ಹೋಗಿ ಪೆಟ್ ಮಾಡ್ಬೇಕಾದ್ದುಂಟೊ?

ಬೆವರಿಳಿಸಬೇಕಾದ್ದುಂಟೆ? ಬಾಕಿದ್ದವರು ರಕ್ತ ಚೆಲ್ಲಬೇಕಾದ್ದುಂಟೆ? ಹುಡುಗಿ ಇಲ್ಲಿ... ಮರದಡಿಯಲ್ಲಿ, ಯಾಕೆ ಹೃದಯದಲ್ಲಿ ಒಪ್ಪಿಗೆಯಾದ್ರೆ ಮುಗೀತು. ಹೆಣ್ ಒಪ್ಪಿತೋ, ಅಪ್ಪ ಅಕೊ ಬೆಪ್ಪ.

(ಭೀಷ್ಮನಿಂದ ಪೆಟ್ಟು ತಿಂದು ಸೋತು,ಸಾಲ್ವ ಹಿಂದಿರುಗಿದ್ದಾನೆ. ಭೀಷ್ಮನ ರಥವೇರಿ ಹೋದ ಅಂಬೆ ಸಾಲ್ವನಲ್ಲಿಗೆ ಬ್ರಾಹ್ಮಣನೊಂದಿಗೆ ಬಂದಿದ್ದಾಳೆ)

ಹ್ಞಾ.. ವಿಷಯ ಗೊತ್ತಾಯ್ತು. ಆದ್ರೆ ಏನ್ ಮಾಡೋಣ? ಒಬ್ಬ ಮುದುಕ ಬ್ರಾಹ್ಮಣ ಬಂದಿದ್ದಾನಂತೆ. ನಮ್ಮ ಅವ್ರ ಬಗ್ಗೆ ಗೌರವ ಜಾಸ್ತಿ ಆಗ್ತದೆ. ಈಗಲಾದ್ರೂ ನಾನ್ ಇದ್ದಲ್ಲಿಗೆ ಒಬ್ಬ ಬ್ರಾಹ್ಮಣ ಬಂದನೋ ಇಲ್ವೊ?

ಇದ್ರ್‍ಗೊಂಡು ಕರೆತರೋಣ. ಸ್ವಾಮೀ !! ಅದಲ್ಲ, ನಾನೀಗ ಸಿಕ್ಕಿ ಬಿದ್ದಲ್ಲ. ನಿಮ್ಮನ್ನು ಕೂತುಗೊಳಿಸಬೇಕಾದ್ರೆ ಮೊದಲು ಕಾಲ್ ಹಿಡೀಬೇಕೋ ಕೈ ಹಿಡೀಬೇಕೊ? ಯೇನೇ ಆಗಲಿ... ಪ್ರಾರ್ಥನೆ, ಆಶೀರ್ವಾದ, ದಕ್ಷಿಣೆ ತಕ್ಕೋಳ್ಲೇ... ಸ್ವಾಮೀ ಬನ್ನಿ ಕೂತುಕೊಳ್ಳಿ. ಇದು... ನೀವ್ ಕೂತ್ಕೊಳ್ಳಿ. ಯೆರಡು ದಿನ ಕುಳಿತುಕೊಳ್ಳಿ... ಕಡಿಮೆ ಆದ್ರೆ ನಾಲ್ಕ ದಿನ ಕೂಳ್ಕೊಳ್ಳಿ. ಆದ್ರೆ ವೊಂದುಂಟು ನೋಡಿ, ವೊಂದ್ ಶಿಷ್ಟಾಚಾರ ಉಂಟು. ಈಗ ಕೆಲವರು ಬರುವಾಗ ಕೈಯಲ್ಲಿಯೂ ಕೆಲವನ್ನು ಹಿಡ್ಕೊಳ್‌ತಾರೆ.. ಕಾಲಿನಲ್ಲಿಯೂ ಹಾಕ್ಕೊಳ್ತಾರೆ. ಎಲ್ಲವನ್ನೂ ಒಳಗೆ ತರಾರು ನೊಡಿ! ಅದಕ್ಕಾಗಿಯೇ ನಾನ್ ಹೇಳಿದ್ದು ನೀವು ಕುಳಿತುಕೊಳ್ಳಿ ಅಂತ, ಯಾರವಳು?

***(ಬ್ರಾಹ್ಮಣ : : ಕಾಶಿಯ ಪ್ರತಾಪ ಸೇನನ ಮಗಳು)***

ಯೆಲ್ಲಿಯ ಪ್ರತಾಪ ಸೇನ; ಯೆಲ್ಲಿಯ ಕಾಶಿ! ಇಲ್ಲಿಗೆ... ಇಲ್ಲಿಗೇನು ಪಾದ ಬೆಳ್ಳಿದ್ದು? ಯೇನು? ಯೆಲ್ಲಿಯ ಪರಿಚಯ ಅದು?... ನನಗಂತೂ ನೆನಪಿಲ್ಲ. ನಿನಗೆ ನನ್ನ ಪರಿಚಯ ಉಂಟೇನೆ? ಯೇನೇನೋ ನಿನ್ನ ಅನುಭವದ ಮುಂದೆ ನನ್ನದು ಕಡಿಮೆಯೇ.

ಸಂವಾದ-ಅಷ್ಟತಾಳ ತರುಣಿ ಕೇಳೆ ನಿನ್ನ ಮನಗಳಿರಲಿ ಹೋಗಲಿನ್ನು | ಪರಮಸಹಸ

ಭೀಷ್ಮ ನಾಮ ಸ್ಮರಿಸಿ ಹೃದಯವಿನ್ನು | ಕೊರೆಯುತಿಹುದು ಬೇಡ

ಸೋಗು ತಿರುಗಿ ಬೇಗ ನೀನು | ಧರೆಯೊಳವನ ಷೋಲ್ವರುಂಟೆ

ಭೀತಿಗೊಂಬೆನಾನು || ೧೫ |

ಅಂಬೆ, ಭೀಷ್ಮನಂಥವರೇ ಹೇಳುವಂತೆ ನಾನು ಖಳನೋ, ಬರ್ಬರನೋ, ದಸ್ಯುವೋ, ಯೇನೇ ಆದ್ರೂ ನನಗೆ ಬೇಸರ ಇಲ್ಲ. ಆದರೆ ನನ್ನಲ್ಲಿ ವೊಂದ್ ಹೃದಯವಂತಿಕೆ ಉಂಟು. 'ಏರಿರಿ ಎನ್ನಯರಥವನು' ಅಂತ್ ಹೇಳುವಾಗ ನೀನು ಮೊದಲು ಏರಿದವಳು ನೆನಪಿದೆಯಲ್ಲ? ಭೀಷ್ಮನು ನಿನಗೆ ಯೇನೂ ನಿರ್ಬಂಧವನ್ನು ಉಂಟ್ ಮಾಡ್ಲಿಲ್ಲ. ನನ್ನ ಮೈಗೆ ನೋವಾದದ್ದಕ್ಕೆ ನನಗೆ ವ್ಯಸನವಿಲ್ಲ. ಅಸ್ಪೃಶ್ಯ ಅಂತ ನನ್ನನ್ನು ಕರೆದ್ರೂ ಭೀಷ್ಮನೇ ಮುಟ್ಟಿ ಹೊಡ್ದನೋ ಇಲ್ವೊ? ಪಂಚಗವ್ಯ ಅವನೇ ಹಾಕಿದನಲ್ಲ? ದೊಡ್ಡಲ್ಲ. ನನ್ನ ಹೃದಯಕ್ಕೆ ವೃಣವನ್ನು ಉಂಟುಮಾಡಿದವಳು ನೀನು. ನೀನು ನಿನ್ನ ಮನಸ್ಸನ್ನು ಸಮರ್ಪಿಸುತ್ತೀ ಅಥವಾ ಸಮರ್ಪಿಸಿದ್ದೀ- ಈ ಯೆರಡೂ ನಿರೀಕ್ಷೆ ಇತ್ತು ನನಗೆ. ಭೀಷ್ಮನಿಗೆ ಗೊತ್ತಿಲ್ಲ. ಅಂತೂ ನಿನ್ನನ್ನು ಎಲ್ಲರನ್ನೂ ಜಯಿಸಿ ಕೊಂಡೊಯ್ದನೋ ಇಲ್ವೊ? ಇದೀಗ

ಯೇನಾಯ್ತು ಅಂದ್ರೆ ಕಾಡಿನಲ್ಲಿ ಮೃಗರಾಜನೆನಿಸಿದ ಸಿಂಹದ ಬೇಟೆಯಾಗಿ ನೀನು ಪರಿಣಮಿಸಿದೆ. ನಾವ್ ಅಷ್ಟೊ ಅಧಿಕ ಪ್ರಸಂಗಿಗಳೇನೂ ಅಲ್ಲ. ಅಂಥಹ ದುಡುಕುಗಾರರೂ ಅಲ್ಲ. ಭೀಷ್ಮನಿಗೆ ಸಂದದ್ದು ಯಾವುದಿದೆಯೋ, ಅದು ಪ್ರಸಾದ ಅಂತ ನಾವು ಸ್ವೀಕರಿಸುವುದೂ ಇಲ್ಲ. ಅವನಿಗೆ ನಿವೇದಿಸಲ್ಪಟ್ಟಿದ್ದು, ಹಾಗೆಂತ ನಮ್ಮ ಹಸಿವಿನ ಬೇಟೆಗೆ ಭೀಷ್ಮನಂಥಹ ಸಿಂಹ ಬೇಟೆಯಾಡಿ ಕೊಡಬೇಕಾದ ಉಚ್ಚಿಷ್ಟದ ಅವಶ್ಯಕತೆಯೂ ನಮಗಿಲ್ಲ. ಪ್ರತ್ಯಕ್ಷ ನಾನು ಕಂಡಿದ್ದೇನೆ. ಭೀಷ್ಮನ ವಶವರ್ತಿನಿಯಾಗಿ ನೀನು ಹೋಗಿರುವೆ. ಈಗ ಹೇಳ್ತೀ, ನಿನ್ನನ್ನೇಕಾಮಿಸಿ ಪ್ರೇಮಿಸಿ ಬಂದಿದ್ದೇನೆ. ನೀನ್ ಹೇಳ್ಬಹುದು. ಪರ್ಯಾಯವಾಗಿ ಹೇಳ್ತೇನೆ, ನಿನ್ನನ್ನಂತೂ ನಾನಿನ್ ನಂಬುವದಿಲ್ಲ. ಭೀಷ್ಮನ ಬಗ್ಗೂ ನನ್ಗ  ಭರವಸೆಯಿಲ್ಲ. ಒಮ್ಮೆ ಹೊಡೆಸಿಕೊಂಡದ್ದೇ ಸಾಕು. ನೀನ್ ಯೇನೋ ಹೇಳೀ, ಭೀಷ್ಮ ನಿನ್ನನ್ನು ಕೊಂಡ್‌ಹೋದ್ಮೇಲೆ, ಅವನಲ್ಲಿ ನೀನು ಹೇಳದೇ ಬಂದ್ಯೋ? ಅಲ್ಲ, ತಪ್ಪಿಸಿ ಬಂದ್ಯೋ? ಅಥವಾ ಭೀಷ್ಮನಿಗೊಂದ್ ಅಭ್ಯಾಸ ಉಂಟು. ಕೊಂಡ್ ಹೋಗೋದ್ ಅವ ಕೊಡೋದ್ ಯಾರ್‍ಯಾರಿಗೋ. ಮಾರಿದನೋ? ದೊಡ್ಡವರ ಕಥೆ ನಮ್ಗದ್ ಯಾತಕ್‌ಬೇಕು ? ನನಗಂತೂ ನೀನು ಪರವಧು ಎನಿಸಿದ್ದಿಯ. ಆದಕಾರಣ ತಿರುಗಿ ಹೋಗು. ಯೆರಡರ್ಥದಲ್ಲಿ, ವೊಂದೋ ತಿರುಗಿ ಭೀಷ್ಮನಲ್ಲಿಗ್ ಹೋಗು. ಅಲ್ಲದಿದ್ರೆ ಊರಲ್ಲಿ ಯೆಲ್ಲಾದ್ರೂ ತಿರುಗೀ ತಿರುಗಿಯೇ ಹೋಗು. ಇಲ್ಲಿ ಮಾತ್ರ ಉಳಿದರೆ ಆಗದು. ಯಾಕೆ ಅಂತಂದ್ರೆ, ನಾವು ದೇವರಿಗೆ ಹೆದರೋದಕ್ಕಿಂತ ಹೆಚ್ಚೇ ಬ್ರಹ್ಮರಾಕ್ಷಸನಿಗೆ ಹೆದ್ರತೇವೆ. ಹಾಗಾಗಿ ಬ್ರಹ್ಮ ರಾಕ್ಷಸನಿಗೆ ಅಂತ ಯಾರಾದ್ರೂ ಯಾವದಾದರೂ ಒಂದು ಪ್ರಾಣಿಯನ್ನು ಬಿಟ್ ಬಿಟ್ರೆ, ಅದನ್ನು ನಾವು ಊಟಕ್ಕೂ ಉಪಯೋಗಿಸುವದಿಲ್ಲ. ಗೂಟಕ್ಕೂ ಕಟ್ಟಿ ಹಾಕೋದಿಲ್ಲ. ಪ್ರಪಂಚ ವಿಶಾಲವಾಗಿದೆ. ಕಾಲ ಅನಂತವಾಗಿದೆ. ಮತ್ತೆ ನಾನ್ ಯೇನ್ ಹೇಳ್ಳಿ? ಹೋಗ್ತಿಯೋ? ಇದು ಹೆಣ್ಣಾಗಿ ನೀನ್ ಅಬಲೆ ಎಂಬುವದಕ್ಕಾಗಿ ಹೇಳಿದ್ದು ಹೋಗ್ತಿಯೋ ಅಂತ. ಹೋಗುದಿಲ್ಲವಾದ್ರೆ ಗಂಡುಸಾಗಿ ಯೇನ್ ಮಾಡ್ಬೇಕು ಅಂತ ನನ್ಗಗೊತ್ತುಂಟು.

ನಿಮ್ಗೆ ಯೆಲ್ಲಿ ಗಂಟು ಬಿದ್ದಳು ಸ್ವಾಮಿ ಇವಳು ? ಹೌದು... ಛೇ ಛೇ ಛೇ, ಭೀಷ್ಮನ ನಡತೆಯ ಬಗ್ಗೆ ಆಕ್ಷೇಪಿಸುವ ಎದೆಗಾರಿಕೆಯೂ ನನಗಿಲ್ಲ. ಅಯ್ಯೋ, ನಿಮ್ಮ ಜೊತೆಯಲ್ಲಿ ಮೂರು ತಿಂಗಳು ನಿಮ್ಮ ಮನೆಯಲ್ಲೇ ಇಲ್ಲ. ನಿಮ್ಮ ಬಗ್ಗೆ ಆಕ್ಷೇಪಿಸುವವ ಅಲ್ಲ ನಾನು. ನಿಮ್ಮ ಪರವಾಗಿ ನಾನ್ ಯೆಲ್ಲಿಯಾದ್ರೂ ಸತ್ಯ ಸ್ಥಳದಲ್ಲಿ ಪ್ರಮಾಣ ಮಾಡ್ಯೇನು. ಹ್ಹೆ ಹ್ಹೆ ಹ್ಹೆ... ಸ್ವಾಮೀ ಆ ಬಗ್ಗೆ ಕ್ಷಮಿಸ್ಬೇಕು. ಇವಳು ಯೇನು ಯೆಷ್ಟು ಅಂತ ನನ್ಗ ಗೊತ್ತಾಗ್ಯದೆ. ಭೀಷ್ಮ ಪರಿಶುದ್ಧನೇ, ಆದ್ರೆ ಇವಳು ನನಗೆ ವಾಗ್ದಾನ ಮಾಡಿ... !! ನೀವ್ ಆಲೋಚನೆ ಮಾಡಿ, ನನ್ನಾಗೋದು ನಿಮ್ಗಾದ್ರೆ ನನಗಾದದ್ದು ನಿಮ್ಮ ಮಗ್ನಿಗಾದ್ರೆ ... ಹಾಗೆ ಗ್ರಹಿಸ್ಬೇಕು. ಆ ಸಂವೇದನೆ ಹಾಗರ್ಥ ಆಗ್ಬೇಕು. ಯೆಷ್ಟು ದೊಡ್ಡ ಜನ ಸ್ವಾಮಿ ನಾನು! ಯೇನೂ ಅಲ್ಲದೇ ಆಯ್ತೋ ಇಲ್ವೊ? ಭೀಷ್ಮ ಕೈಯಿಂದ ಹೊಡ್ಯೊದನ್ನು ಬಿಟ್ಟು, ಕೊನೆಗೆ ನಾನು ಬೆನ್ ಹಾಕಿರುವಾಗ ಕಾಲ್ನಿಂದ ವೊದ್‌ಬಿಟ್ಟ "ನಡೆ"... ಇದು ನನಗೆ ಸಿಕ್ಕಿದ ಇವಳ ಉಡುಗೊರೆ, ಮೈಗೆ ನೋವಾದ್ರೆ ಔಷಧಿ ಹಚ್ಚಬಹುದು. ಹೃದಯ ಛಿದ್ರ ಛಿದ್ರವಾದ್ರೆ?

ಯತಾರ್ಥ ನಾನ್ ಹೇಳ್ತೇನೆ ಸ್ವಾಮೀ, ಹೆಂಗಸ್ರ ಬಗ್ಗೆ ನನಗಿದ್ದ ಒಲವೇ ನಷ್ಟ ಆಗಿ ಹೋಗ್ಯದೆ, ಆದ್ದರಿಂದ ನೀವ್ ಯೇನ್ ಹೇಳೊದು ನಾನ್ ಇವ್ಳನ್ ಸ್ವೀಕರಿಸ್ಬೇಕು ಅಂತಲೋ? ಛೇ ಇವಳು! 'ಹೊಸಮನೆಗೆ ಬೇರೆ ಉಡ ಹೋಗೋದು ಬೇಡ, ಮಾಡಿನ ಮೇಲೆ ಹದ್ದು ಕೂಳ್ಕೊಳ್ಳೋದು ಬೇಡ.' ಯೇನೇ ಆಗ್ಲಿ ನಿಮ್ಮ ಜನಿವಾರಕ್ಕೂ ನನ್ನ ಗೌರವ ಮೊದಲೇ ಸಂದದೆ. ನಿಮ್ಮ ವಯಸ್ಸಿನಂತೆ ನಾನ್ ಮತ್ತಷ್ಟು ಮರ್ಯಾದೆಯನ್ನು ಕೊಡ್ತೀನೆ. ಯೆಷ್ಟು ನೀವು ಹೇಳಿದರೂ...

ಸೌ-ತ್ರಿವುಡೆ ಎಷ್ಟುಪೇಳಿದರೀಕೆಯನ್ನು ಮನ ಮುಟ್ಟಿಕೊಡುವನಲ್ಲ ವೆಂದಿಗು

ದಿಟ್ಟ ಭೀಷ್ಮನ ಬೆರೆದು ಬಂದಿಹ | ಳಿಷ್ಟು ಖರೆಯು || ೧೮ |

ವಿಪ್ರೋತ್ತಮರೇ...! ಯೆಷ್ಟೇ ಹೇಳಿ ನೀವು, ಆಗೋದಿಲ್ಲ. ಯಾಕ್ ಆಗೋದಿಲ್ಲ ಹೇಳಿ ? ಯೇನೇ ಆಗಲಿ ನನ್ನೆ ಯಾವ ಸಂಬಂಧ ಇಲ್ಲದಿದ್ ಮೇಲೆ ಇವಳ ವೊಳಿತನ್ನೂ ಹೇಳೋದ್ ಸರಿಯಾಗೋದಿಲ್ಲ. ಇವಳ ದೋಷವನ್ನೂ ಹೇಳೋದ್ ಸರಿಯಾಗೋದಿಲ್ಲ. ನೀವ್ ತಾರಾಬಲ ಚಂದ್ರಬಲ ಅಂತ ಹೇಳಿದ್ದಕ್ಕಾಗಿ ನಾನ್ ಹೇಳೋದು. ಸ್ವಾಮೀ ಇವಳು ಮಧುಕರೀ ವೃತ್ತಿಯವಳು. ಅಂದ್ರ್ ಅರ್ಥಾಯ್ತೋ ಇಲ್ವೋ? ಇದ್ರಿಗೆ ಯಾವ ಹೂವು ಅರಳಿದ್ದು ಕಂಡಿತು, ಅದರಲ್ಲಿ ಹೋಗಿ ಕುಳಿತುಕೊಳ್ಳುವುದು ಈ ತುಂಬಿಯ ಅಥವಾ ಜೇನು ನೊಣದ ಸ್ವಭಾವ. ಅದ್ಲಿದ್ದ ಜೇನನ್ನು ಸ್ವಲ್ಪ ಹೀರಿದರಾಯ್ತು, ಜೇನಿಲ್ಲದಿದ್ರೆ ಅಲ್ಲಿಂದ ಮತ್ತೆಲ್ಲಿ ಉಂಟು? ಅಂತ ಇಲ್ಲದಿದ್ರೆ ನನಗೆ ಪ್ರಾಮಾಣಿಕವಾಗಿ ವಾಗ್ದಾನ ಮಾಡಿದ ಈ ಹೆಣ್ಣು, ನನಗಿಂತ ವಿಕ್ರಮಿ ಭೀಷ್ಮ! ಹೌದು ನಿಜವಾಗಿಯೂ ಹೌದು. ಆ ಭೀಷ್ಮನ ಪ್ರವೇಶ ಆದದ್ದೇ ಆದದ್ದು, ಭೀಷ್ಮನ ದೊಡ್ಡಸ್ತಿಕೆ ಇರೋದೇ ಅಲ್ಲಿ. ಹೊಡದೂ ಬಡ್ದೂ ಬಾಕಿ ಇದ್ದವರನ್ನು ಬಗ್ಗಿಸುವವ ಯೆಷ್ಟೋ ಮಂದಿ ಇದ್ದಾರೆ. ಆ ಮಟ್ಟಿಗೆ ನಾನೇ ಬಲ. ಭೀಷ್ಮ ಹಾಗಲ್ಲ ಪ್ರವೇಶ ಮಾಡ್ವಾಗ್ಲೇ ಯೇನಾಯ್ತು? ಸಿಂಹ ಘರ್ಜನೆ ಕೇಳಿಸಿದಾವಾಗ ಮಿಕ್ಕ ಪ್ರಾಣಿಗಳೆಲ್ಲ ಧ್ವನಿಯನ್ನು ಅಡಗಿಸ್ತಾವಂತೆ, ಹೌದಲ್ಲ? ಹಾಗೆ, ಸುತ್ತಲೂ ನೋಡುತ ಗಂಗಾ ತನಯನು ಹ್ಞೇ.. ಈ ಪ್ರಥ್ವಿ ಪಾಲಕರೆಲ್ಲ ಕೆಲವರಿದ್ದಾರಲ್ಲ? ನಾನ್ ವಿನೋದಕ್ಕಾಗಿಯೇ ಕೆಲವು ಸಲ ಹೇಳೋದುಂಟು-'ಚಪ್ಪೆ ಅನ್ನದ ರಾಜರು' ಅಂತ ಹಾಗೇ ಆದದ್ದು. ಯತಾರ್ಥ ಹೇಳ್ತೇನೆ ನನ್ನೊಬ್ಬನಿಗೆ ಬೇಕೊ ಸ್ವಾಮೀ? ಭೀಷ್ಮನನ್ ಇದ್ರಿಸುವ ಉದ್ಯೋಗ? ಆದ್ರೂ ಇವಳೊಬ್ಬಳು ಹೇಳಿದ್ದಾಳಲ್ಲ ಗೆದ್ದವರಿಗೆ ಅಪ್ಪ ಯೆರಡು ಕೊಡ್ಲಿ, ಒಂದು ನಾನ್ ಯಾವಾಗೂ ನಿಮ್ಮೊಟ್ಟಿಗೆ' ಅಂತ. ನಂಬಿ ತಡ್ಡದ್ದು ನಾನು- ಭೀಷ್ಮನನ್ನು, ನನಗೆ ಬೇಕಿತ್ತೋ ಅದು? ಹಾಗಾದರೆ ಯೆಸ್ಟ್ ಆಯ್ತು? ಹೀಗೆ ಪ್ರಥಮ ದರ್ಶನದಲ್ಲಿಯೇ ಇವಳ ಮಾತ್ ಕೇಳಿದ್ದಕ್ಕೆ ನನಗೆ ಮುಖಭಂಗ, ಮಾನಭಂಗ... ಕಳ್ಕೊಂಡಿದ್ದನ್ನು ನಾನು ಸಂಪಾದಿಸಬೇಕಾದ್ರೆ ಯೆಷ್ಟೇ ಬೇಕು? ಆದಕಾರಣ ವೊಂದ್ ನಿಲುಮೆ ಬೇಕು ಹೆಣ್ಣಿಗೆ, ಯೇನ್ ಹೇಳ್ತೀರಿ? ಈಗ ನೀವು ಓದಿದವರು. ಹೌದಲ್ಲ? ಭಗವಂತನಲ್ಲೇ ಆಗಲಿ ಶೃದ್ದೆ ಹೇಗಿದ್ದೇಕು? ಏಕೀಭವಿಸಬೇಕು. ಇದಕ್ಕೆ ಅವ್ಯಭಿಚಾರಣೀಭಕ್ತಿ

ಅಂತ ಹೇಳ್ತವಲ್ಲ? ಈ ಚಂಚಲ ಮನೋವೃತ್ತಿಯವನ ಭಕ್ತಿಗೆ ಯೇನ್ ಹೆಸ್ರು? ವ್ಯಭಿಚಾರಿ ಭಕ್ತಿ, ಅದೇ ಇವಳು.

ಸೌರಾಷ್ಟ್ರ-ತ್ರಿವುಡೆ ತರುಣಿ ಕೇಳ್ ವ್ಯಭಿಚಾರಿ ಪರರೊಳ 1 ಗಿರಿಸಿ

ಮನವನ್ಯಾಯ ಸಹಸಕ | ಪರಮ ಧೈರ್ಯ ಸ್ಥೈರ್ಯ

ಶಪಥವ | ನೊರೆವುದೇನು || ೧೭ ||

ಎಲೆ ಹೆಣ್ಣೆ... ಹೆಣ್ಣಿಗೆ ದೃಷ್ಟಿಯಲ್ಲಿ ಚಂಚಲತೆ ಲಕ್ಷಣ, ಆಮೇಲೆ ಒನಪು ವಯ್ಯಾರದಲ್ಲಿ ಆ ಚಾಂಚಲ್ಯ ಪ್ರೇಕ್ಷಣೀಯ. ಆದರೆ ಅವಳ ಆಂತರಂಗಿಕವಾದಂಥ ನಿಲುಮೆ ಇದೆಯಲ್ಲ ? ಅದು ಮಾತ್ರ ಅಚಲವಾಗಿದ್ದೇಕು. ಹ್ಹ .. ನಿನಗೆ ನಿತ್ತಲ್ಲಿ ಮನಸು ನಿಲ್ಲಿಸಿಕ್ಕಾಗೋದಿಲ್ಲ. ಭೀಷ್ಮ ಬಂದ ಹ್ಹ ಹ್ಹ ಸಾಲ್ವ ಕಡೆಗಣಿಸಲ್ಪಟ್ಟ, ಬಹುಶಃ ಭೀಷ್ಮನಿಗಿಂತ ದೊಡ್ಡವ ನಿನಗೆ ಕಾಣ್ಣಿಕ್ಕೆ ಸಿಕ್ಕಿಲ್ಲ. ಸಿಕ್ಕಿದರೆ ನೀನ್ ಅಲ್ಲಿಯೂ ನಿಲ್ಲೋದಿಲ್ಲ ಇಲ್ಲಿಯಂತೂ ದೇವ್ರಾಣೆ ನಿಲ್ಲೋದಿಲ್ಲ. ಆಗದು, ಆದ್ದರಿಂದ ನಿನಗೆ ನಾನು ಹೆಸರಿಸುವುದು ಹ್ಯಾಗೆ ಅಂತಂದ್ರೆ, ನೀನು ಜಾರೆ ಅಂತಲ್ಲ. ಕಂಡವರಿಗೆ ಸರಗ್ ಹಾಸ್ಯವಳು ಅಂತಲ್ಲ, ಹೆಣ್ಣಾದ ನಿನಗೆ ಇರಬೇಕಾದಂತಹ ವೊಂದ್ ನಿಷ್ಠೆ ಇದೆಯಲ್ಲ? ತಾನು ಮೆಚ್ಚಿದವ ರೋಗಿಯಾಗಲಿ, ಕುರುಡನಾಗಲಿ, ವೃದ್ಧನಾಗಲಿ ಯೆಂಥವನೇ ಆಗಲಿ ಅವನು ತನ್ನ ಭಾಗದ ದೇವರು ಅಂತ ಪೂಜಿಸಬೇಕು ಅಂತ ನಿಮ್ಮ ಕಾಶೀ ವಿದ್ಯಾಪೀಠದಿಂದ ಪ್ರಾಪಂಚಿಕವಾಗಿ ಸಾರಲ್ಪಟ್ಟದ್ದು. ಬಹುಶಃ ಕಾಶಿಗೆ ಬಂದದ್ದು ಹಿಮಾಲಯದ ತುದಿಯಿಂದ ಅಂತ ಕಾಣ್ತದೆ. ನಾವೆಲ್ಲ ದಸ್ಯುಗಳು, ಬರ್ಬರರು. ಆದರೂ ನಮ್ಮಲ್ಲಿ ಒಂದು ನಿಲುಗಡೆ ಉಂಟು. ನಮ್ಮನು ಮೆಚ್ಚುವ ಹೆಣ್ಣು ಕೊನೇವರೆಗೂ ಇವನನ್ನೇ ಉಪಾಸನೆ ಮಾಡ್ಬೇಕು. ಇವ ಸತ್ತನೋ ಮತ್ತೆ ಬೇಕಾಗಿದ್ರೆ ಅವಳು ಮನಸ್ಸು ಬದಲಾಯಿಸಬಹುದು. ಆದ್ದರಿಂದ ನೀನು ಶುದ್ಧ ವ್ಯಭಿಚಾರಿ ಮನೋ ವೃತ್ತಿಯವಳು.

**( ಅಂಬೆ ಸಾಲ್ವನನ್ನು ವ್ಯಭಿಚಾರಿ ಎನ್ನುತ್ತಾಳೆ )**

ನೀನು ಎಲ್ಲವನ್ನೂ ಕಳ್ಕೊಂಡವಳು. ಯೇನೂ ಹೇಳಹುದು. ಇಡಿ ಮುಳುಗಿದವಳಿಗೆ ಚಳಿಯೇನು? ಮುಚ್ಚು ಬಾಯ್.

ಸೌ-ತ್ರಿವುಡೆ ಹೆಚ್ಚು ಮಾತುಗಳಾಡೆ ನಿನ್ನನು ಕೊಚ್ಚಿ ಕಡಿದೀಡಾಡಿ ಬಿಡುವೆನು!

ಹುಚ್ಚು ಮೂಳಿ ನಿವಾಳಿ ನಡೆ ತುಟಿ | ಬಿಚ್ಚದೀಗ || ೧೮ |

ಹೇಳಬಹುದೇ ನಾನು ವ್ಯಭಿಚಾರಿ ಅಂತ? ಎಷ್ಟು ಮಂದಿ ಹೆಣ್ಣು ಮಕ್ಕಳ ಶೀಲವನ್ನು ಕೆಡಿಸಿದ್ದೇನು ಅಂತ ನೀನು ಸಂದೇಹಿಸಬಹುದು. ಆದರೆ ಪ್ರತ್ಯಕ್ಷ ಜೀವಂತವಾಗಿ ನೀನೇ

ಇದ್ದಲ್ಲ? ಆ ಹೊತ್ತು ಕಾಣ ಸಿಕ್ಕಿದನಲ್ಲ? ಯೇನು ಆಕ್ರಮಣ ಮಾಡಿದೆನೋ? ನಿನ್ನ ಮೈ ಮುಟ್ಟಿದೆನೊ? ನಾನ್ ಹಾಗೇ ಆಗ್ತಿದ್ರೆ, ನೀನು ಹೀಗಾಗಿ ಉಳಿಯುತ್ತಿಲ್ಲಲ್ಲ. ಇಗಾಗ್ಲೆ ನಾಯಿ ಮುಟ್ಟಿದ ಗಡಿಗೆಯಾಗಿ ಹೊಗ್ತಿದ್ದೀ. ಆದಕಾರಣ ನಿನ್ನ ಈ ಮಾತ್ ಯಾಕೆ? ನಾನು ಬಯಸಿದ್ದು ನನ್ನ ಹೃದಯಶ್ರೀಯಾಗಿ ಬರ್ಲಿಕ್ಕೆ ಒಬ್ಬ ಸುಸಂಸ್ಕೃತೆಯಾದಂತಹ ರಾಜಕುಮಾರಿ ಬರ್ಬೇಕು ಅಂತ. ನನ್ನ ಆಶಾಗೋಪುರವನ್ನೇ ನುಚ್ಚುನೂರು ಮಾಡಿ ಹಾಕಿದೆ. ಇಕೋ, ಬೇಡ ನಿನ್ಗಗೊತ್ತಿಲ್ಲ ನನ್ನ ಮನಸ್ ಯೆಷ್ಟು ನೊಂದದೆ ಅಂತ. ಆದ್ರೂ ಸೈರಣೆ ತಂಡ್ಕೊಂಡಿದ್ದೇನೆ. ಯಾಕೆ? ಇಲ್ಲೊಂದು ಜನಿವಾರ, ಬಿಳಿಗಡ್ಡ ಉಂಟಲ್ಲ ಇದಕ್ಕೆ ಗೌರವ ಕೊಡ್ಬೇಕಲ್ಲ ಅಂತ. ಇಲ್ಲದಿದ್ರೆ ಆವಾಗ್ಲೆ ನಿನ್ನನ್ನು ಕೊಚ್ಚಿ ಹುಚ್ಚು ನಾಯಿಗಳಿಗೆ ಹಾಕಿಸ್ತಿದ್ದೆ ನಿನ್ನ ಮಾಂಸ, ಯೇನು ಹೋಗ್ತಿಯೋ ಹೊರಡಿಸಬೇಕೋ ಹೇಳು. ಸ್ವಾಮೀ ನೀವು ಬೇಕಿದ್ರೆ ನಾಲ್ಕು ದಿವಸ ಕೂತುಕೊಳ್ಳಿ ನನ್ನ ಆಕ್ಷೇಪ ಯೇನೂ ಇಲ್ಲ. ಆದ್ರೆ ವೊಂದುಂಟು. ಈಗ ವೊಂದು ಶರ್ತ ಹಾಕ್ತೇನೆ. ಈ ಕೆಲವರಿಗೆ ಕೆಲವು ಪ್ರಾಣಿಗಳನ್ನು ಸಾಕುವ ಚಟ ಉಂಟು; ಅವರಿಗೆ ಗೌರವ ಕೊಟ್ಟಷ್ಟೇ ಅವರ ಸಾಕು ಪ್ರಾಣಿಗೂ ಕೊಡ್ಬೇಕೋ ಬೇಡ್ವೋ ಹೇಳಿ, ಆದ್ರೆ ಕೊಡೋದಿಲ್ಲ ಅಂತ ಹೇಳ್ಲಿಕ್ಕೆ ನಮ್ಮ ದೊಡ್ಡಸ್ತಿಕೆ ಬಿಡೋದಿಲ್ಲ. ಅದೆ ನಾವು ನಮ್ಮಂಥವರು ಒಂದು ಶರ್ತ ಇದ್ದೇವೆ. ನಿಮ್ಮೊಟ್ಟಿಗೆ ನಿಮ್ಮ ಸಾಕು ಪ್ರಾಣಿಯೂ ಕುಳಿತುಕೊಳ್ಳಿಕ್ಕೆ ಅಡ್ಡಿಯಿಲ್ಲ, ನಿಮ್ಮ ಹಾಗೇ ಅದೂ ಕಾಲು ಕೆಳಗೆ ಹಾಕಿ ಕುತ್ಕೊಳ್ಳೊ ಬೇಕು ಅಂತ. ಕಾಲು ಕೆಳಗೆ ಹಾಕಿ ಕುತ್ಕೊಳ್ಳೊ ಜಾತಿ ಅಲ್ಲಲ್ಲ? ಆದಕಾರಣ ಮೆಟ್ಟಿ ಹೊರಗೆ ಹಾಕ್ತೇನೆ. ನೀವಿಲ್ಲಿರಿ. ಅಲ್ಲ ನೀವು ಹೋಗ್ತಿರೋ?

ಸ್ವಾಮೀ, ಹಿಗೋ ವಿಷಯ! ಇದೂ ತೊಡಗಿದ್ದೀರೋ ಪ್ರಾಯ ಹೋದ ಕಾಲಕ್ಕೆ ? ಹ್ಹ .... ಈ ರೀತಿ ದಲ್ಲಾಳಿಮಾಡಿದ ಹಣವನ್ನೇ ಮಠಕ್ಕೆ ಕೊಟ್ಬೇಕು. ಇವ್ಳ್ ಯೇನೋ ಕೊಡ್ತೇನೆ ಅಂತ ಹೇಳಿದ್ದಕ್ಕಲ್ಲೊ? ಈ ತಾರಾಬಲ ಚಂದ್ರಬಲ ಅಂತ್ ನೀವ್ ಹೇಳಿದ್ದು? ಸ್ವಾಮೀ, ನಿಮ್ಮಲ್ಲಿ ಕೈ ಜೋಡಿಸಿ ಬೇಡ್ತೇನೆ. ಸಧ್ಯ ನೀವ್ ಹೋಗೋಕಾಗಿದ್ರೆ ನಾನ್ ಯೆಷ್ಟ್ ಕೊಡ್ಬೇಕಾದೀತು ಹೇಳಿ, ಹ್ಹ.. ಹೌದು. ಈಗೇನು ಅವಳು ಕೊಡ್ತಾಳಂತ್ಯೊ? ಯೇನೇ ಆಗಲಿ ನಾನ್ ಕೊಟ್ರೆ ಹೋಗ್ತಿರೋ? ಅಂದ್ರೆ ಅರ್ಥ ಏನು? ನೀವಿಲ್ಲಿ ಬಂದದ್ರಿಂದ ನನಗಷ್ಟು ತಲೆ ಹಾಳಾಗಿದೆ. ಸರಿ, ಮತ್ತೊಮ್ಮೆ ನೀವು ವೊಬ್ರೆ ಆಗಿ ಬನ್ನಿ, ಈಗ, ಸುಖವಾಗಿ ಹೊರಟು ಹೋಗಿ, ಆದ್ರೆ ವೊಂದುಂಟು ಕರ್ಕೊಂಡ್ ಹೋಗಿ ಇವಳನ್ನು, ಇಲ್ಲಿ ಬಿಟ್ ಹೋಗ್ಬೇಡಿ.

ಇದೇ ಯಾರೂ ಕಟ್ಟಿ ಹಾಕಿ ಸಾಕುವ ಜಾತಿ ಅಲ್ಲ. ಹಗ್ಗ ತೆಗೆದು ಬಿಟ್ಟದ್ದೇ. ಆದ್ದರಿಂದ ಎಲ್ಲಿಂದ ತಂದ್ದೀರೋ ಅಲ್ಲಿಗೇ ಬಿಡಿ. ಇಲ್ಲಾದ್ರೆ ಯಾರ್ಯಾರ ದೊಡ್ಡಿಯಲ್ಲಿಯಾದ್ರೂ ಕಟ್ಟಿ. ಅದು ಒಬ್ಬೊಬ್ರಿಗೂ ಆಯ್ತು. ಆಯ್ತಾಯ್ತು, ಇನ್ನು ನನ್ನ ಕೆಲಸ ನನಗುಂಟು, ತಿಳೀತಲ್ಲ? ಸಭಾ ವಿಸರ್ಜನೆ ಮಾಡಿದ್ದೇನೆ.

**(ಅಂಬೆ, ಬ್ರಾಹ್ಮಣರ ನಿರ್ಗಮನ)**

## ೩ ಭೀಷ್ಮ ವಿಜಯ

### ಭೀಷ್ಮ

|ಸೌರಾಷ್ಟ್ರ-ತ್ರಿವುಡೆ॥ ಮಾತೆಯಂತ್ರಿಗೆ ನಮಿಸಿ ಧನು ಶರ ವಾತು ಕೊಳ್ಳುತ

ಸಾಧುವೆನುತಲಿ ಖ್ಯಾತ ಕಾಲ್ನಡೆಯಿಂದ ಗಂಗಾ ಜಾತ ಪೊರಟ || ೧೯ |

ಹೌದು, ಗುರುಗಳು ಧರ್ಮಕ್ಷೇತ್ರವಾದ ಕುರುಕ್ಷೇತ್ರದವರೆಗೆ ಬಂದಿದ್ದಾರೆ! ಬಂದದ್ದು ಯಾಕೆ ಅಂತಲೂ ಅಕೃತವ್ರಣನ ಮೂಲಕವಾಗಿ ನನಗೆ ತಿಳಿಯಪಡಿಸಿದ್ದಾರೆ. ಋಷಿಗಳನ್ನೂ ಕೂಡಿ, ಅಲ್ಲಿಯೇ ಇದ್ದಾರಂತೆ. ಹ್ಞೂ... ಆದರೆ ಪರಶುರಾಮ ದೇವರ ಆಜ್ಞೆಯೊಂದಿದೆ ಮೊದಲನೆಯದ್ದು - "ಮದುವೆಗೆ ಸನ್ನದ್ಧವಾಗಿ ಬಾಸಿಂಗ ಧರಿಸಿ ಬಾ, ಅಲ್ಲವಾದರೆ, ಧನುರ್ಧಾರಿಯಾಗಿ ಯುದ್ಧಕ್ಕೆ ಸಿದ್ಧನಾಗಿ ಬಾ"!

ಇದ್'ಯೆರಡೂ ಆಗದು. ಹಾಗಾದರೆ, ಆಗದೆ ಇದ್ದಂತಹ ಯಾವತ್ತೂ ಆದೇಶವನ್ನು, ಆಚಾರ್ಯರು ಶಿಷ್ಯನಿಗೆ ಮಾಡಬಹುದೇ? ಮಾಡ್ಯಾರೇ? ಕೆಲವುಸಲ ಮಾಡ್ಯಾರು ಆಚಾರ್ಯರು. ಯಾಕೆ? ಅವರ ತಲೆ ಕೆಡಿಸಿದ್ದೇಕು. ಆದ್ರೆ ನಮ್ಮ ಗುರುಗಳಂಥವರಲ್ಲ. ಇಲ್ಲದಿದ್ದರೆ ಉಂಟೆ? ಭೀಷ್ಮನು ಮದುವೆಯಾಗುವುದಿದ್ರೆ, ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿಯೋ? ನಾವು ತಿಳಿದ ಹಾಗೆ ಕುರುಕ್ಷೇತ್ರದಲ್ಲಿ ಯಾರಿಗೂ ಮದುವೆ ಆದದ್ದಿಲ್ಲ. ಇನ್ನು ಸದ್ಯ ಮದುವೆಯಾಗುವುದಕ್ಕೆ ಬೇಕಾದಂತಹ ಸನ್ನಾಹವೂ ಅಲ್ಲಿಲ್ಲ. ಯಾಕೆ, ದೇವಸ್ಥಾನವೋ, ಕಲ್ಯಾಣಮಂಟಪವೋ? ಯೇನೂ ಅಲ್ಲ. ಕುರುಕ್ಷೇತ್ರ ! ಧರ್ಮಕ್ಷೇತ್ರ ಶಮಂತಪಂಚಕ ಕ್ಷೇತ್ರ ಬೇರವು ಹೇಳಲಿ, ಅದು ನಮ್ಮ ಗುರುಗಳು ಕ್ಷತ್ರಿಯರ ರಕ್ತದಿಂದ ಪಿತೃಗಳಿಗೆ ತರ್ಪಣ ಬಿಟ್ಟ ಸ್ಥಳ. ಗೊತ್ತುಂಟು ನಮ್ಮ ಗುರುಗಳಿಗೆ ಹೇಗೆ? ಪಿತೃಶ್ರಾದ್ಧ ಮಾಡುವ ಸ್ಥಳ ಮದುವೆಗೆ ಹೇಳಿಸಿದ್ದಲ್ಲ. ಅಲ್ವೊ ? ಅದು ಅಪರಷೋಡಷ, ಇದು ಪೂರ್ವ ಷೋಡಷ ಸಂಸ್ಕಾರದಲ್ಲಿ ಸೇರಿದ್ದು. ಹಾಗದರೆ ತಿಳಿದೇ ನನ್ನ ಮುಂದೊಂದು ಪ್ರಶ್ನೆ ಇಟ್ಟದ್ದು; ನೋಡೋಣ; ಪಿತೃ ಸ್ಥಾನಕ್ಕೆ ದಿಬ್ಬಣ ತಕ್ಕೊಂಡು ಬರ್ತಾನೋ ನೋಡ್ವ ಅಂತ. ಅಲ್ವೊ?

ಹ್ಞ ... ಎರಡನೇಯದ್ದೇ ಸರಿ. ಧನುರ್ಧಾರಿಯಾಗಿ ಬರಬೇಕು ಅಂದರೆ ಬಹುಶ:, ನ್ಯಾಯದ ಇತ್ಯರ್ಥಕ್ಕೆ ಬೇಕಾದಂತಹ ಪ್ರಬಲ ಪುರಾವೆ ಆ ಪಕ್ಷದಲ್ಲಿಲ್ಲ. ಇದ್ದೆ ಅದೇ ಸಾಕಲ್ಲ ? ಇಂಥಿಂಥ ನಿಯಮದ ಪ್ರಕಾರ ನೀನು ತಪ್ಪಿದ್ದೀ. ಆದಕಾರಣ ಅಂಬೆಯನ್ನು ವರಿಸತಕ್ಕದ್ದು ಅಂತ ಹೇಳಬಹುದಿತ್ತಲ್ಲ? ಅನೇಕ ಸಲ ಎರಡು ಪಕ್ಷದ ಹೇಳಿಕೆಯನ್ನು ಕೇಳಿದ ಬಳಿಕ, ಇದಮಿಥಂ ಅಂತ ತೀರ್ಮಾನಿಸಲಿಕ್ಕೆ ಬಾರದೇ ಇದ್ದಂತಹ ಯಾವತ್ತೂ ನ್ಯಾಯಾಧೀಶನ ಮನ:ಸ್ಥಿತಿ, ಬುದ್ದಿವಂತಿಕೆ, ನಮ್ಮ ನಾಡಿನಲ್ಲಿ ಈವರೆಗೆ ಆಚಾರ ಇದ್ದ ಹಾಗೆ, ಕೊನೆಗೊಂದು ಮಾರ್ಗವನ್ನು ಕಾಣುವುದಿದೆ ಹೇಗೆ ? ಸತ್ಯಪ್ರಮಾಣ ಅಂತ ಅದೆ

ಹೆಸ್ರು, ಅಲ್ಲವೇ? ನ್ಯಾಯತೀರ್ಮಾನ ಬಗೆಹರಿಸಲಿಕ್ಕಾಗದೇ ಇದ್ರೆ, ಮತ್ತೇನ್ ಹೇಳೋದು? ಸತ್ಯ ಪ್ರಮಾಣ ಮಾಡೋದು. ವಾಡಿಕೆ ಭಾಷೆಯಲ್ಲಿ ಹೇಳೋದಿದ್ರೆ ಇಷ್ಟೇ. ಹೇಗೆ? “ಪ್ರಸಾದ ತೆಗೆದು ನೋಡೋದು”. ಯಾರಿಗೆ ಅನುಕೂಲ ಬರ್ತದೆ? ಹಾಗಾದರೆ ಇದು ದೈವನಿರ್ಣಯ ಅಂತಾಯ್ತು. ಮನುಷ್ಯ ನಿರ್ಣಯ ಅಲ್ಲ, ಹಾಗಾದರೆ ಯಾವ ವಿಚಾರವನ್ನು, ಯಾವ ನ್ಯಾಯವನ್ನು ದೈವವೇ ನಿರ್ಣಯ ಮಾಡಬೇಕಾಗಿ ಬರದೋ, ಅಲ್ಲಿ ನಮ್ಮಂಥಹ ಕ್ಷತ್ರಿಯರಿಗಿರೋದ್ ಯೇನು? ಹೋರಾಟ. ಅಂದ್ರೆ ಧರ್ಮಯುದ್ಧ ಅಂತ ಅದ್ರೆ ಹೆಸ್ರು ಈ ಧರ್ಮಯುದ್ಧದಲ್ಲಿ ಸೈನ್ಯವನ್ನು ಉಪಯೋಗಿಸುವ ಶ್ರಮ ಇಲ್ಲ. ಕೇವಲ ಇಬ್ಬರ ಧರ್ಮಯುದ್ಧ, 'ಯತೋ ಧರ್ಮ: ತತೋ ಜಯ: ಅಲ್ಲಿಗೆ ಮುಗಿಯಿತು.

ಬಹುಶ: ಗುರುಗಳು ಈ ನಿಲುಮೆಗೆ ಬಂದಿರಬೇಕು ಅಂತ ನನ್ನ ಅನಿಸಿಕೆ. ಹಾಗಾಗಿ ಏಕಪಕ್ಷೀಯವಾಗಿ ತೀರ್ಮಾನವನ್ನು ಅವರು ಕೈಗೊಂಡವರಲ್ಲ. ಆದುದರಿಂದಲೇ ಮೊದಲಿನ ವ್ಯಾಖ್ಯೆ ಸ್ಥಿರವಾದುದಲ್ಲ. ಗುರುಗಳು ಯೆರಡು ಮಾತನಾಡುವವರಲ್ಲ. ಅಲ್ಲವೇ? ತೀರ್ಮಾನವಾಗಿದ್ದರೆ ಒಂದೇ ಮಾತು - “ಭೀಷ್ಮ ದಿಬ್ಬಣ ತಕ್ಕೊಂಡು ಬಾ. ಅದಲ್ಲವಾದರೆ ಆಯುಧ ಹಿಡಕೊಂಡು ಬಾ”, ಅಂತ ಹೇಳಿದ್ರೆ? ಯಾವುದರಲ್ಲೂ ನಿಲುಗಡೆ ಇಲ್ಲ ಅಂತಾಯ್ತಲ್ಲ? ಇಲ್ಲಿ ನಮಗೆ ಮಾರ್ಗ ಸಿಕ್ಕೋದು. ಗುರುಗಳು ಅಲ್ಲಿಂದಲೇ ಅಪ್ಪಣೆ ಮಾಡ್ತಿದ್ರೆ ಸ್ವಲ್ಪ ನಾನು ಆಲೋಚಿಸಬೇಕಿತ್ತು. ಯೇನ್ ಮಾಡೋಣ ಅಂತ, ಅಲ್ವೆ? ತಪ್ಪೇ ಹೇಳಲಿ ಗುರುಗಳು ಗುರುಗಳೇ ಅಲ್ವೇ? ಒಂದ್ ಗಾದೆ ಮಾತುಂಟು - “ಅಮ್ಮನ ನಡತೆ ಸ್ವಲ್ಪಕೆಟ್ಟದ್ದೇ; ಮಗ ಹೇಳಬಹುದೊ? ಹೇಳಿದರೆ ಆ ಅಪವಾದ ಯಾರ ಮೇಲೆ ಬರದೆ? ಮಗನ ಮೇಲೆ ಬರ್ತದೆ. ಆದ್ರೂ ನಾನು ಆಲೋಚಿಸುವುದು, ಹೆಂಗಸರು ಸ್ವಲ್ಪ ದಾರಿ ಬಿಟ್ರೆ, ಅತ್ತಿಗೆ ಮತ್ತೆ ಉದ್ದಕ್ಕೆ ಮಾತ್ರ ದಾರಿ ಅಲ್ಲ, ಅಡ್ಡಕ್ಕೂ ದಾರಿ ಉಂಟು. ಇಲ್ಲದಿದ್ರೆ ಪರಶುರಾಮ ದೇವರಲ್ಲಿ ಹೋಗಿ ಅವರನ್ನು ಈ ರಂಗಕ್ಕೆ ಇಳಿಸಬೇಕಾಗಿದೆ, ಅಂಬೆ ಈ ಕಾಲಘಟ್ಟದ ಒಬ್ಬು ನಾಯಕಿ ಹೌದು, ಮಾತ್ರ ವಿಪರೀತ ಅಷ್ಟೇ. ಹೆಂಗಸರ ಛಲವೇ! ಚೆಂತಿಲ್ಲ. ಯನೇ ಆಗಲಿ ಇದು ಸ್ತ್ರೀ ಮೂಲವಾದಂತಹ ವಿಷಯ. ರಾಜಮಾತೆ ಯವರಿದ್ದಾರೆ. ನನ್ನ ತಾಯಿಯನ್ನೂ ನಾನ್ ಅವರಲ್ಲೇ ಕಂಡವನು ಈವರೆಗೆ ನನ್ನ ಪ್ರತಿಜ್ಞೆಯೂ ಹಾಗೇನೇ ಇನ್ನು ಮುಂದೆ ಎಲ್ಲಾಹೆಣ್ಣು ಮಕ್ಕಳು ನನಗೆ ಗಂಗಾಭವಾನಿಗೆ ಸಮಾನರು. ಆದ್ರೆ ಯೇನ್ ಮಾಡೋಣ? ಆ ಗಂಗಾ ತೀರದಲ್ಲೇ ಹುಟ್ಟಿದವಳು; ಅಲ್ಲ ಅಂತ ಮಾಡಿಬಿಟ್ಟಳು!! ಆದಕಾರಣ ನನ್ನತಾಯಿಯನ್ನು ಸತ್ಯವತಿದೇವಿಯವರಲ್ಲಿ ಕಂಡಿದ್ದೇನೆ. ಯಾವ ಕೆಲಸಕ್ಕೆ ನಾನು ಹೊರಡುವಾಗಲೂ ಅವರ ಆಶೀರ್ವಾದ ಪಡೆಯದೆ ಹೊರಟವನಲ್ಲ. ಪ್ರಾಯದಲ್ಲಿ ನನಗಿಂತ ಚಿಕ್ಕವರು ಅವರು, ಆದರೂ ಸ್ಥಾನದಲ್ಲಿ ಹಿರಿಯರು. ಹೋದೆ, ನಮಸ್ಕರಿಸಿದೆ. ಅವರಿಂದ ಶುಭಾಷಯವನ್ನೂ ಅಂಗೀಕರಿಸಿದೆ. ಇನ್ನೂ ವೊಂದಿದೆ, ನನ್ನ ಮನ:ಸಾಕ್ಷಿವೊಪ್ಪಬೇಕಿದ್ದೆ, ಇಲ್ಲಿ ರಾಜಮಾತೆಯ ಅಪ್ಪಣೆ, ವಿಚಿತ್ರವೀರ್ಯನ ಅಪ್ಪಣೆ ನನ್ಗೆ ಬೇಕ್ ಹೌದು. ನಾನ್ ಕೇಳಿದ್ರೆ ಅವ ಅಪ್ಪಣೆ ಮಾಡೊದಿಲ್ಲ. “ನಿನ್ಗೆ ತೋರಿದ ಹಾಗೆ ಮಾಡು” ಅಂತಾನೆ. ಆವಾಗ ನನಗೆ ಹೊಣೆ ಹೆಚ್ತದೆ. ಕೊನೆಗೂ ಬರುವುದು ಹೇಗೆ

ಅಂತಂದ್ರೆ ಭೀಷ್ಮನಿಗೆ ತೋರಿದ ಹಾಗ್ ಮಾಡಿದ. ರಾಜ ಮಾತೆಯವ್ರ ಹಾಗಲ್ಲ. ಸಾಮಾನ್ಯರ ದೃಷ್ಟಿಯಲ್ಲಿ ಅವ್ರ ಯಾರೇ ಇರ್ಲಿ. ಅವ್ರ ಯೇನು ಅಂತ ಅವ್ರ ಆಳ, ಅವ್ರ ಉದ್ದ, ಅವ್ರ ಅಗಲ, ನನ್ಗ್ ಗೊತ್ತಾಗ್ಯದೆ. ಪರಾಶರರಂತಹ ಮುನಿಗಳಿಗೆ, ಉತ್ತಮ ಸಂತಾನವನ್ನು ಪಡೆಯಲಿಕ್ಕೆ ಪ್ರಪಂಚದಲ್ಲಿ ಸಿಕ್ಕ ಏಕಮಾತ್ರ ಕ್ಷೇತ್ರ, ನಮ್ಮ ಈ ಅಮ್ಮ ! ವೇದವ್ಯಾಸರನ್ನಿವು ಮೊದ್ಲ ಹಡ್ದಿದ್ದಾರಂತೆ. ಈಗೇನೂ ಕೆಲವು ಜನರಿಗೆ ಗೊತ್ತಾಗಿದೆ. ಅದೇನು ಗುಟ್ಟಲ್ಲ. ಹಾಗಾದರೆ ವ್ಯಾಸನಂತವನನ್ನು ಪಡೆಯುವ ತಾಯಿ, ಪರಾಶರರಂಥವರನ್ನಾಕರ್ಷಿಸುವ ಈ ತಾಯಿಯ ಯೋಗ್ಯತೆ ಬಹಳ ದೊಡ್ಡು, ಹೌದಂತೆ ಅದು. ಉಪರಿಚರನೆಂಬ ಒಬ್ಬ ಸೂರ್ಯವಂಶದ ಚಕ್ರವರ್ತಿ, ಹ.. ಹ.. ಹಾ...ಅವನಿಂದಾದ ಸಂತಾನವಂತೆ ಇದು. ಅದೇನೋ ಮೀನಿನ ಹೊಟ್ಟೆಯಲ್ಲಿ ಸೇರಿ, ದಾಶರಾಜನಿಗೆ ಮೀನನ್ನು ಸೀಳು ಮಾಡಿದಾವಾಗ ಸಿಕ್ಕಿದ್ದು, ಇದನ್ನೆಲ್ಲಾ ನಮ್ಮ ಆರ್ಷ್ಯಪದ್ಧತಿ ಹೇಗೆ ಅಂಗೀಕರಿಸ್ತದೆ ಅಂತಂದ್ರೆ, ತಾಯಿಹೆತ್ತ ಮಕ್ಕಳ ಸಾಲಿಗೆ ಸೇರಿಸೋದಿಲ್ಲ. ಈ ಮಹಾಪುರುಷರೆಲ್ಲಾ ಹುಟ್ಟುವಾಗ್ಗ ಒಂದಲ್ಲಾ ಒಂದು ತರವಾದಂತ ಏನೋ ಪವಾಡವನ್ನು ಹಿನ್ನೆಲೆಯಾಗಿ ಇಟ್ಟುಕೊಂಡೇ ಹುಟ್ತಾರೆ ಅಲ್ಲವೇ?

ನರಸಿಂಹ ನಮ್ಮಲ್ಲಿ ಕಂಬದಲ್ಲಿ ಹುಟ್ಟಿದವ. ವೈಜ್ಞಾನಿಕವಾಗಿ ಪ್ರಶ್ನಿಸಿದರೆ ಅದ್ಕೆ ಉತ್ತರ ಸಿಕ್ಕೋದಿಲ್ಲ. ಈ ಪ್ರಪಂಚದಲ್ಲಿ ಯಾವತ್ತೂ ವೇದವನ್ನು ಉದ್ಧರಿಸಿದಂತಹ ಮತ್ಸ್ಯ, ಅದು ಮೀನೇ. ಇಡೀ ಬಹ್ಮಾಂಡದ ಭಾರವನ್ನು ಹೊತ್ತದ್ದು ಅದು ಕೂರ್ಮ. ಹಾಗಾದರೆ ಇದರಲ್ಲಿ ಯೇನಿದೆ ಅಂತದ್ರೆ, ಅಮಾನುಷವಾದಂತಹ ಒಂದು ಕಲ್ಪನೆ. ಕಲ್ಪನೆ ಈಗ ಸಿದ್ಧಾಂತವಾಗಿ ಬಂದದೆ. ಯಾಕೆ? ಎಷ್ಟೋ ಸಲ, ಶಾಸ್ತ್ರ ಹೇಳ್ತದೇ ಇದ್ದದ್ದನ್ನು ರೂಢಿ ಪ್ರಬಲವಾಗಿ ಬೆಳೆಸಿಕೊಂಡು ಬರುವುದುಂಟು. ನಾವು ರೂಢಿಯನ್ನಳವಡಿಸಿಕೊಂಡು ಬಾಳಿ ಬದುಕುವವರು. ಕೇವಲ ಶಾಸ್ತ್ರ ಹೇಳ್ತದೆ ಹೌದು ತಾಯಿ, ತಂದೆ, ಅಂದ್ರೇನು ? ಚರ್ಮ ಮಾಂಸ, ಎಲುಬು, ರಕ್ತ, ಹೌದಲ್ಲ? ಆದರೆ ನಮ್ಮ ರೂಡಿ ಏನ್ ಹೇಳ್ತದೆ? ತಾಯಿ ದೇವರು, ತಂದೆ ದೇವರು, ಗುರು ದೇವರು. ಬೌದ್ಧಿಕವಾಗಿ ಯಾವ ಸತ್ಯವು ನಮಗೆ ಗೋಚರವಾಗ್ತಿದೆಯೋ, ಅದು ಮಾನಸಿಕವಾಗಿಯೂ ಗೋಚರವಾಗುವಲ್ಲಿಯವರೆಗೆ, ಮನಸ್ಸಿಗೆ ಗೋಚರವಾಗುವಂತಹ ಭಾವವನ್ನಂಗೀಕರಿಸಿ ಭಾವುಕತೆಯಿಂದ ಚಿತ್ತಶುದ್ಧಿಯನ್ನು ತಂದುಕೊಂಡು, ಆವಾಗ ವಿವೇಕ ಸಾಮ್ರಾಜ್ಯದ ಸತ್ಪಜೆಗಳು ನಾವಾಗೇಕು ಅಂತ ನಮ್ಮ ವೇದಾಂತದ ಸಿದ್ಧಾಂತ. ಹಾಗಾಗಿ ಮತ್ಯದ ಹೊಟ್ಟೆಯಲ್ಲಿ ಉಪರಿಚರವಸುವಿನ ವೀರ್ಯದಿಂದ ಹುಟ್ಟಿದ ಒಂದು ಸಂತಾನ ಅಂತದ್ರೆ, ಏನೋ ಒಂದು ವಿಭೂತಿಮತ್ ಆದಂತಹ ವಿಷೇಶವಾದ ಶಕ್ತಿ ಅದರಲ್ಲಿದೆ, ಆದುದರಿಂದಲೇ ವ್ಯಾಸರ ತಾಯಿಯಾಗುವ ಭಾಗ್ಯ ಅವರಿಗೆ ಬಂದದೆ. ಭಗವಾನ್ ವೇದವ್ಯಾಸರಂತವರಿಗೆ ತಾಯಿಯಾದವರು ಭೀಷ್ಮನಿಗೆ ತಾಯಿ ಅಂತ ಹೊಗಳಿಸಿಕೊಳ್ಳಲಿಕ್ಕೆ ತಕ್ಕವರಲ್ಲವೇ? ನಾನೇನು ವ್ಯಾಸನಮಟ್ಟಕ್ಕೆ ಏರಿದವನೇ? ಅಲ್ಲ. ಆದಾಕಾರಣ ಅವರು ಸದಾ ವಂದ್ಯರು. ಅವರು ಆಶೀರ್ವಾದ ಮಾಡಿದ್ದಾರೆ ಮಾತ್ರವಲ್ಲ, ಬೇಕಾದ ಸವಲತ್ತು ಸೌಲಭ್ಯವನ್ನು ಹಸ್ತಿನಾವತಿಯ ಅರಮನೆಯಿಂದ ನೀನು

ಪಡಕೊಳ್ಳತಕ್ಕದ್ದು. ಅದು ಅವರಿಗೆ ಗೊತ್ತುಂಟು. ಕಾಶಿದೇಶಕ್ಕೆ ಹೊದುದಾಗಲಿ, ಅಂಬೆ ಅಂಬಾಲಿಕೆಯರನ್ನು ತಂದುದಾಗಲಿ, ಈ ಸಿಂಹಾಸನದ ಪ್ರತಿನಿಧಿಯಾಗಿ ವೈಯಕ್ತಿಕವಾಗಿ ಅಲ್ಲ. ಹಾಗಾದರೆ ಸಿಂಹಾಸನದ ಪ್ರತಿನಿಧಿಯಾಗಿ ನಾನು ಹೋಗಿ ಮಾಡಿದ ಕೆಲಸ ಇಷ್ಟು ಗಂಡಾಂತರವನ್ನು ತಂದದೆ ಅಂತಾದ್ರೆ ಅದು ನಮ್ಮ ಸಿಂಹಾಸನದ ಪ್ರಶ್ನೆಯೇ. ಅದು ನಮ್ಮ ದೇಶದ ಪ್ರಶ್ನೆಯೇ. ಒಬ್ಬ ಭೀಷ್ಮನ ವೈಯಕ್ತಿಕವಾದ ಪ್ರಶ್ನೆ ಅಲ್ಲ. ಆದುದರಿಂದಲೇ, ಕೇವಲ ಪರಶುರಾಮರ ಶಿಷ್ಯನಾಗಿ ಅವರು ಹೇಳಿದ್ದನ್ನು ಅನುಮೋದಿಸುವಂತಹ ವ್ಯಕ್ತಿತ್ವ ಅಲ್ಲ ಭೀಷ್ಮನದ್ದು. ಹಸ್ತಿನಾವತಿಯ ಸಿಂಹಾಸನದ ಅಭಿಮಾನ, ಚಂದ್ರವಂಶದ ಮನೆತನದ ಮಾಂಗಲ್ಯ, ನಮ್ಮ ಗೌರವ, ಇದು ಎಲ್ಲವನ್ನೂ ಅಳವಡಿಸಿಕೊಂಡು, ಈ ನಾಡಿನ ಶಕ್ತಿಯಾಗಿ, ಈ ಸಿಂಹಾಸನದ ಪ್ರತಿನಿಧಿಯಾಗಿಯೂ ನಾನು ಹೋಗಬೇಕು ಅಂತ ಅವರ ಸೂಚನೆ. ಅಂದ್ರೆ ಯುದ್ಧ ಮಾಡೇಕಿದ್ರೆ ಅಪ್ಪಣೆ ಬೇಕು. ಅಲ್ಲವೆ? ಬೇಕು.

ಗುರುಗಳಾದರೂ ಸರಿಯೇ, ಅನ್ಯಾಯವನ್ನು ಮಾಡಿದರೆ ದಂಡಿಸಬೇಕಾಗಿದ್ರೆ ಶಿಷ್ಯನಿಗೆ ಅಧಿಕಾರ ಇಲ್ಲ. ಸಿಂಹಾಸನದಲ್ಲಿ ದಂಡಧಾರಿಯಾಗಿ ಕುಳಿತವನಿಗೆ ಮಾತ್ರ ಅಧಿಕಾರ. ಆದ್ದರಿಂದ ಆ ಅಧಿಕಾರವನ್ನು ಈಗ ನನ್ನ ಭುಜದಲ್ಲಿ ನಿಕ್ಷೇಪಿಸಿದ್ದಾರೆ ನಮ್ಮ ಅಮ್ಮ. ಆದರೂ ಅಂತೊಂಡ್ ಮಾತುಂಟು. ಇದಿಷ್ಟಿರಲಿ ಭಂಡವಾಲ. ಆದರೆ ನಾನು ಹೋಗ್‌ಬೇಕಿದ್ರೆ ಹೇಗೆ? ಗುರುಗಳ ಬಳಿಗೆ ಹೊಗುವ ಸತ್ ಶಿಷ್ಯನ ಹಾಗೆ, ರಥ ಬೇಡ, ಅರಮನೆಯ ವೈಭವ ಬೇಡ. ಯಾರಲ್ಲಿ? ಬಂಗಾರದ ಪಲ್ಲಕ್ಕಿಯನ್ನು ಹೊಡ್ಕೊಳ್ಳಿ ಎಂಟ್ ಜನ. ಯಾಕೆ? ಅದು ಈ ಮನೆತನದ ಮರ್ಯಾದೆ. ನಾನು ಮೊದಲು ಸಿಂಹಾಸನದ ಪ್ರತಿನಿಧಿಯಾಗಿ ಅರಸನ ಕಡೆಯಿಂದ ಹೋಗಿ, ಪರಶುರಾಮರಂತಹ ಪೂಜ್ಯಗುರುಗಳನ್ನು ಸ್ವಾಗತಿಸಬೇಕಾಗಿದೆ. ಅವರು ಮನ ಮಾಡಿದರು, ಪಲ್ಲಕ್ಕಿಯಲ್ಲಿ ಅವರನ್ನು ಕೂತುಗೊಳಿಸಿ ಹಗಲು ದೀವಟಿಗೆಯಲ್ಲಿ ಅರಮನೆಗೆ ಕರೆಸಿ ಆಮೇಲೆ ನನ್ನ ತಮ್ಮನೋ, ನಾನೋ ಪಾದಪೂಜೆಮಾಡಿ ಗೌರವಿಸಬೇಕು. ಅದಕ್ಕೆ ಅವರು ಒಪ್ಪಿಲ್ಲ, ಪಲ್ಲಕ್ಕಿ ಹಾಗೇ ಇಲ್ಲ....ಇಲ್ಲಿ. ಹೌದಲ್ಲ? ಹೂ ... ನನ್ನ ಆಯುಧವನ್ನೂ ರಥದಲ್ಲಿಟ್ಟು, ನಾಲ್ಕು ಜನ ಸೈನಿಕರು ಬನ್ನಿ, ವೈದಿಕರು ಬನ್ನಿ, ಆಮೇಲೆ, ಆಮೆಲೆಯೇನು ಆಮೇಲೆ ನೋಡೋಣ. ಹೋಗ್ತ ಬನ್ನಿ.

ಭಾಮಿನಿ॥ ಪರಮ ಋಷಿಮಂಡಲದ ಮಧ್ಯದಿ / ಮೆರೆವ ಯಜ್ಞೇಶ್ವರನ ಪ್ರಭೆಯಲಿ |

ವರ ಜಟಾಮಂಡಲದಿ ಶೋಭಿಪ ಭಾರ್ಗವೇಶ್ವರನ |

ಪರಿಕಿಸುತ ಲಸಭಿನಮಿಸಿ ಭೀಷ್ಮನು / ಚರಣ ಪಕ್ಷಾಳನವ ಗೈಯುತ |

ಶಿರದಿ ತೀರ್ಥವ ಧರಿಸಿ ಮಧು ಪರ್ಕಾದಿಗಳನಿತ್ತು || ೨೦ ||

ಆಹ, ... ವಂದ್ಯರಾದಂತಹ ಪರಮಋಷಿಗಳ ಮಧ್ಯದಲ್ಲಿ, ಯಜ್ಞೇಶ್ವರನ ಯಾವತ್ತೂ ಪ್ರಭೆಯಲ್ಲಿ ಶೋಭಿಸುತ್ತಿರುವ ಅದೋ ಜಟಾಮಂಡಲದ ದಿವ್ಯಕಾಂತಿ! ದಿವ್ಯಪ್ರಭೆ! ಇದರ ಕೇಂದ್ರವೆನಿಸಿದ ಪರಶುರಾಮಾಚಾರ್ಯರನ್ನು ಕಾಡ್ತಾ ಇದ್ದೇನೆ. ನಮೋ ಎಂದು ಧೀರ್ಘದಂಡ

ನಮಸ್ಕಾರ ಮಾಡಿದೆ. ಪಾದಪ್ರಕ್ಷಾಳನವನ್ನೂ ಮಾಡಿ ಮುಗಿಸಿದೆ. ಇದು ಕೇವಲ ವೈಯಕ್ತಿಕವಾದ ನೆಲೆಯಿಂದಲ್ಲ. ನಮ್ಮ ಅರಮನೆಯ ಯಾವತ್ತೂ ಸ್ಥಾನದ ನೆಲೆಯಿಂದ. ಆದ್ರೆ ಇದು ಗುರುಗಳಿಗೆ ಗೊತ್ತಾಗಬೇಕಲ್ಲ? ಅದಕ್ಕಾಗಿ, ಇವರ ಮುಂದೆ, ಇದೋ ಅರಮನೆಯಿಂದ ಹೊತ್ತುತಂದಂತಹ ಯಾವತ್ತೂ ರತ್ನವಿಷ್ಟರ, ಇದನಿಟ್ಟು, ಇದರಲ್ಲಿ ಇವರನ್ನು ಕುಳ್ಳಿರಿಸಿ, ಆಮೇಲೆ ಮಾತನಾಡಿಸಬೇಕಲ್ವೆ?

ಗುರುವರ್ಯ ! ಈ ರತ್ನ ಪೀಠದಲ್ಲಿ ತಾವು ಮೂಹೂರ್ತರಾಗ್ಬೇಕು. ಇದು ನಮ್ಮ ಅರಮನೆಯ ಕೊಡುಗೆ. ಆಮೇಲೆ ಇದೋ, ಪಲ್ಲಕ್ಕಿ ಸಿದ್ಧವಾಗಿದೆ. ಇದೂ ಅರಮನೆಯ ಕೊಡುಗೆ, ಆದ ಕಾರಣ, ಹಸ್ತಿನಾವತಿಯ ಅರಮನೆಯಲ್ಲಿ ಹುಟ್ಟಿನಿಂದ ಹಿರಿಯನು ಎಂಬ ನೆಲೆಯಲ್ಲಿ ಇಡೀ ನಮ್ಮ ವಂಶದ, ನಮ್ಮ ಕುಟುಂಬದ, ಪ್ರತಿನಿಧಿಯಾಗಿ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. ಮನಸ್ಸು ಮಾಡಿದರೆ ತಮ್ಮನ್ನು ಕುಳ್ಳಿರಿಸಿ ಹಗಲು ದೀವಟಿಗೆಯಲ್ಲಿ ಅರಮನೆಗೆ ಕರಕೊಂಡ್ ಹೋಗುವ ಆಸೆಯಿದೆ. ಅಲ್ಲವಾದರೆ ಏನೆಂದು ಅಪ್ಪಣೆ ಆಗ್ಬೇಕಾಗಿದೆ.

(ಪರಶುರಾಮ: ಅಂಬೆಯನ್ನು ತಂದು ಅವಳನ್ನು ಈಗ ಬಿಟ್ಟಿದ್ದೀ ಅವಳನ್ನು ಈಗ ಯಾರು ವರಿಸುತ್ತಾರೆ?)

ಸ್ವಾಮೀ, ಅವಳ ಜೀವನ ಹಾಳಾಗಿ ಹೋಗ್ತಿದೆ ಹೌದು, ಗುರುಗಳೇ, ಹಾಳಾಗುವುದನ್ನು ಉಳಿಸುವುದಕ್ಕೆ ಮಾರ್ಗ ಇಲ್ಲದೇ ಹೋದರೆ, ಅದರ ಬಗ್ಗೆ ಔದಾಸೀನ್ಯ ತಾಳುವುದೇ ಒಳ್ಳೆಯದಲ್ವೇ?

ತಮ್ಮ ಅವಗಾಹನೆಗೆ ಎಷ್ಟು ವಿಷಯ ಅವಳು ನಿವೇದಿಸಿದ್ದಾಳೋ ನನಗೊತ್ತಿಲ್ಲ. ಆದರೆ ತಮ್ಮ ಅಂಬೋಣದಿಂದ ನನ್ನ ಅರ್ಥವಾದದ್ದು ಸಾಕಷ್ಟು ಬೇಕಷ್ಟು ಮಾಹಿತಿ ಅವಳು ನಿಮಗೆ ಕೊಡ್ಲಿಲ್ಲ. ಅವಳ ಅನುಕೂಲಕ್ಕೆ ಯೆಷ್ಟು ಬೇಕು? ಅಷ್ಟೇ ಹೇಳಿದ್ದಾಳೆ. ಆದ್ದರಿಂದ ಅದನ್ನೆ ಇನ್ನೊಮ್ಮೆ ಮಾಡೋಣವೆ? ಗುರುವರಾ,

ಸಾಂ-ರೂಪಕ ಗುರುವರ್ಯ ಕೇಳೀಕೆ ಸಾಲ್ವನನೊಪ್ಪಿದ ಪರಿಯನ್ನು ತಿಳಿಯದೆ ನಾನು

ಕರೆತಂದೆ ಸಕಲರ ಗೆಲಿದೆನ್ನ ತಮ್ಮಗೆ | ಪರಿಣಯವನು ಮಾಳ್ವ ನೆನುತ | ೧೦ |

ಗುರುವರೇಣ್ಯ, ನನ್ನ ಉದ್ದೇಶ ಪರಿಶುದ್ಧವಾದದ್ದು, ಕಾಶೀ ರಾಜನ ಕುಮಾರಿಯರಾದ ಅಂಬೆ, ಅಂಬಿಕೆ, ಅಂಬಾಲಿಕೆಯರು. ಇವರು ಯಾವ ವಿಧದಲ್ಲಿಯೂ ಕಣ್ಣೀರಲ್ಲಿ ಕೈತೊಳೆಯುವ ದುರಂತಕ್ಕೆ ಭಾಗಿಗಳಾಗಬಾರ್ದು ಎಂಬ ನನ್ನ ಭಾವನೆಯು ಶುದ್ಧವಾದದ್ದು, ಪ್ರಾಮಾಣಿಕವಾದದ್ದು. ನಾನು ಹೋಗಬೇಕಾದವನಲ್ಲ ಸ್ವಯಂವರ ಮಂಟಪಕ್ಕೆ, ಆದರೆ ಎಷ್ಟೋಸಲ ನಮ್ಮಂತವರಿಗೆ ಪರಿಸ್ಥಿತಿಯ ಒತ್ತಡ ಬೀಳುವುದು ಅಂತ ಬರದೆ. ಅದು ಸನ್ನಿಧಾನಕ್ಕೂ

ಗೊತ್ತಿದ್ದದ್ದೇ. ಸರ್ವಸಂಗ ಪರಿತ್ಯಾಗಿಗಳಾದವರಿಗೂ ಕೆಲವುಸಲ ಒತ್ತಡದಿಂದ, ಅವರು ಕಾಯೇನ ವಾಚಾ ಮನಸಾ ಮೆಚ್ಚದೇ ಇದ್ದ ಉದ್ಯೋಗವನ್ನು ಮಾಡಬೇಕಾಗಿ ಬರುತ್ತದೆ. ತಾವೇ ಧ್ವನಿಸಿದಿರಿ, ಬ್ರಾಹ್ಮಣನಾಗಿ ಹುಟ್ಟಿ ಕ್ಷತ್ರಿಯತ್ವದ ಕ್ಷೇತ್ರದಲ್ಲಿ ನಾನು ಬೆಳೆಮಾಡಬೇಕಾಯ್ತು ಅಂತ. ಅದು ತಾವು ಮನಸಾ ಮೆಚ್ಚಿ ಮಾಡಿದ್ದಲ್ಲ ಅಂತ ನನ್ನ ಗೊತ್ತುಂಟು. ಆದರೆ ಅಂದಿನ ಪರಿಸರ, ಅಂದಿನ ಪರಿಸ್ಥಿತಿ. ಎಲ್ಲಿಯವರೆಗೆ ನಾವು ಪ್ರಪಂಚಾವಲಂಬಿಗಳಾಗಿದ್ದೇವೆಯೋ, ಅಲ್ಲಿಯವರೆಗೆ ಪರಿಸ್ಥಿಯನ್ನು ಮೀರಿಬದುಕುತ್ತೇವೆ ಎಂಬ ಮಾತು ಸುಳ್ಳು. ಸುಳ್ಳು ಮಾತ್ರವಲ್ಲ ಅದೊಂದ್ ಥರದ ಅಭಾವ. ಅದು ಸ್ವಭಾವವಾಗುವುದಿಲ್ಲ. ಆದ್ದರಿಂದ, ನಾನಂತೂ ಪ್ರವೃತ್ತನೇ, ನಾನು ನಿವೃತ್ತನಲ್ಲ, ತಮಗೆ ಗೊತ್ತುಂಟು. ಹಾಗಾದರೆ ಪ್ರವೃತ್ತನಾದಂತಹ ನಾನು ಬ್ರಹ್ಮಚಾರಿಯಾಗಿ ಹೋಗಬಾರದು. ಹೋಗಿದ್ದೇನೆ. ಆದ್ದರಿಂದಲೇ ನನಗಾಗಿ ಅಲ್ಲ ಎಂಬುದು ಸ್ಪಷ್ಟ ಹಾಗಾದರೆ ಯಾರಿಗಾಗಿ?

ಯತಾರ್ಥಕ್ಕಾದರೆ ನನ್ನ ತಮ್ಮನಾದಂತಹ ವಿಚಿತ್ರವೀರ್ಯನಿಗೆ ಆ ಹೆಣ್ಣುಮಕ್ಕಳನ್ನು ತರಬೇಕು ಅಂತ ನನ್ನ ಬಯಕೆ. ನಾನೀಗ ತಮ್ಮಲಿ ನಿವೇದಿಸಿಕೊಡು ವಿಮರ್ಶಿಸುವುದು, ಉತ್ತಮಕುಲಪ್ರಸೂತೆಯರಾದಂತಹ ಹೆಣ್ಣುಮಕ್ಕಳನ್ನು ನಮ್ಮ ಮನೆಯಲ್ಲಿ ಪ್ರಬುದ್ಧರಾದಂತ ಗಂಡುಮಕ್ಕಳಿಗೆ ತರಬೇಕು. ಎಂಬ ಆಕಾಂಕ್ಷೆಯೋ, ಆಸಕ್ತಿಯೋ, ಮನೆಯಲ್ಲಿ ಹಿರಿಯನಾದವನಿಗೆ ಹುಟ್ಟಿದರೆ ಅದು ಅಪವಾದಕ್ಕೂ ಅಧೀನವಾಗುವುದಿಲ್ಲ. ಅಪರಾಧವಂತೂ ಅಲ್ಲವೇ ಅಲ್ಲ. ಹೌದಲ್ಲ?

ಸ್ವಾಮಿನ್, ನನ್ನ ತಮ್ಮನಿಗೂ ಆಮಂತ್ರಣವಿಲ್ಲ. ನನಗೂ ಯಾವ ಸೂಚನೆಯೂ ಇಲ್ಲ ಕಾಶಿರಾಜನದ್ದು ದೊಡ್ಡದಲ್ಲ. ಯಾಕೋ ಅವನಿಗೆ ಇಷ್ಟ ಇಲ್ಲ ಅಂತ ನಾನು ಸುಮ್ಮನಿರಬಹುದಾಗಿತ್ತು. ಇಷ್ಟರವರೆಗೆ ನಾನು ಬೇಹಿನ ಚರ ನನ್ನಲ್ಲಿ ಮಾಡಿದ ವರದಿಯ ಸಂಪೂರ್ಣ ಅಂಶವನ್ನು ಬಹಿರಂಗ ಪಡಿಸಲಿಲ್ಲ. ತಮ್ಮಲ್ಲಿ ಹೇಳ್ತೇನೆ - "ಕರಿಪುರದರಸ ಭೀಷ್ಮ ಅರಿಯದ ಹಾಗೆ ಇದು ನಡೀಬೇಕು" ಎಂಬುದು ಕಾಶೀರಾಜನ ಸಂಕಲ್ಪವಂತೆ !!ಏನಿದ್ದೀತು ಇದರ ಹಿನ್ನೆಲೆ? ನಮ್ಮ ಬೇಹಿನ ಚರನಿಗೆ ಅದು ಅರ್ಥ ಆಗ್ಲಿಲ್ಲ. ಕರಿಪುರದರಸ ಭೀಷ್ಮನರಿಯದ ಹಾಗೆ ಅಂತಲೆ ಅವ ವ್ಯಾಖ್ಯಾನಿಸಿದ ನನ್ನಲ್ಲಿ. ಯತಾರ್ಥಕ್ಕಾದರೆ ಹಾಗಲ್ಲ, ಕರಿಪುರದರಸ ಯಾರು? ಭೀಷ್ಮ ಅಲ್ಲ. ಕಾಶೀರಾಜನಿಗೆ ಅದು ಗೊತ್ತುಂಟು. ಹಾಗಾದರೆ ಇಲ್ಲಿ ಹೇಗೆ? ಕರಿಪುರದರಸ ಭೀಷ್ಮ ! ಹಾಗಾದರೆ ಅಲ್ಲಿ ಕರಿಪುರದರಸ ಭೀಷ್ಮರರಿಯದ ಹಾಗೆ ಅಂತ ಬೇಡವೆ? ಅದು ರಾಜಕೀಯದ ಒಕ್ಕಣೆ. ಯಾರಿಗಾದರೂ ಗೊತ್ತಾದ್ರೂಆಮೇಲೆ ಬದುಕಿಕೊಳ್ಳಲಿಕ್ಕೆ ವ್ಯಾಖ್ಯಾನ ಮಾಡುವಂತಹ ರಾಜಕಾರಣಿಗಳ ಹೊಸ ಭಾಷೆ ಅದು. ಅದನ್ನು ಹಾಗೂ ತಿರುಗಿಸಲಿಕ್ಕೆ ಬಂದೀತು ಹೀಗೂ ತಿರುಗಿಸಲಿಕ್ಕೆ ಬಂದೀತು.

ಹಾಗಾದರೆ ನಾನ್ ಯಾಕೆ ಹೀಗೆ ತರ್ಕಿಸ್ತೇನೆ? ಮಹಾ ಮುತ್ಸದ್ದಿ ಅವ ಮಹಾ ಧೂರ್ತ ಕಾಶೀರಾಜ! ಈಗ ಅವನ ಹೆಣ್ಣು ಮಕ್ಕಳನ್ನು ನನ್ನ ತಮ್ಮನಿಗೆ ತರಬೇಕು ಎಂಬ

ಆಸಕ್ತಿ ನನ್ಗಿದ್ರೆ, ಕೊಡಬಾರ್ದು ಎಂಬ ಅಭಿಪ್ರಾಯ ಅವನಿಗಿದ್ರೆ, ಹೀಗೆ ಮಾಡಬಾರದಿತ್ತು. ಎಲ್ಲಾ ಅರಸು ಮಕ್ಕಳನ್ನು ಒಪ್ಪಿಸುವುದು ಅಲ್ಲವೆ? ಇದು ಹಸ್ತಿನಾವತಿಯ ರತ್ನ ಸಿಂಹಾಸನದ ಸ್ವಾಸ್ಥ್ಯಕ್ಕೆ ಬಾಧಕ, ರಾಜಕಿಯದ ದೃಷ್ಟಿಯಿಂದ ಕಾಶೀರಾಜ ನಮಗೆ ಬಾಧಕವಾಗುವಂತಹದ್ದನ್ನು ಮಾಡಿದ್ದಾನೆ ಅಂತ ನಾನು ಹೇಳುವುದಿಲ್ಲ. ಆದರೆ ಅವನು ಮಾಡಿದ್ದು ನನಗೆ ಬಾಧಕ.

ನಮ್ಮ ಮಾಂಡಲೀಕರವೊಳಗೆ ಕತ್ತಿಯ ಕಾಳಗ ಆದರೆ, ಅವರಲ್ಲಿ ಅಭಿಪ್ರಾಯವ್ಯತ್ಯಾಸ ಉಂಟಾಗಿ, ಈ ಭಿನ್ನತೆಯಿಂದ ಅವರು ಒಳ ಜಗಳದಿಂದ ಸದಾ ಕುದಿಯುತ್ತಾ ಇದ್ದೆ, ತಾವು ಆಲೋಚಿಸಿ, ಸುತ್ತುಮುತ್ತಲೂ ಮನೆಗೆ ಬೆಂಕಿ ಹಿಡದೆ, ನಮ್ಮ ಮನೆಗೆ ಬೆಂಕಿ ಹಿಡಿಯುವುದಿಲ್ಲ... ಆದ್ರೂ ಆ ಶಾಖ ನಮಗೆ ತಟ್ಟದೋ ಇಲ್ವೊ?

ಮೊದಲಿನಿಂದ ಗೊತ್ತುಂಟು ನಿಮಗೆ, ನಮ್ಮ ಮನೆತನ ಮರ್ಯಾದೆಯಿಂದ, ಘನತೆಯಿಂದ ಬಾಳಿ ಬದುಕಿದ್ದು, ನಿಮ್ಮಲ್ಲಿ ಹೇಳುವುದಕ್ಕೇನು? ವಿಚಿತ್ರವೀರ್ಯ ಯತಾರ್ಥಕ್ಕಾದರೆ ಘನವಿಕ್ರಮಿ ಅಲ್ಲ. ಅವನಿಗೆ ವಯಸ್ಸು ಚಿಕ್ಕದು. ಹಾಗಿರುವಾಗ, ಕಾಶೀರಾಜನು ಮಾಡಿದಂತಹ ಈ ಫಣದಿಂದ, ಯಾವನೋ ಒಬ್ಬ ಅಂಗದೇಶದವನೋ, ವಂಗದೇಶದವನೋ ಹಾಳಾಗಿ ಹೋಗಲಿ, ಆ ಸೌಭಾ ಪಟ್ಟಣದವನು, ಏಕೈಕ ವೀರ ಅಂತ ಆದ್ರೆ, ಇದನ್ನು ನಾವು ಮೂಕಪ್ರೇಕ್ಷಕರಾಗಿ ನೊಡಿಕೊಂಡು ಸಹಿಸುವುದಕ್ಕೆ ಸಾದ್ಯವೋ; ನಿಮ್ಮ ಶಿಷ್ಯನಾದ ಭೀಷ್ಮನಂತಹ ಒಬ್ಬ ಪ್ರಬಲನ ರಕ್ಷಣೆ ಇಲ್ಲಿಗಿರುವಾಗ್ಗ? ನಾನಿಲ್ಲಿದ್ದು ಪ್ರಯೋಜನ ಯೇನು?

ಅರಸ ದುರ್ಬಲ ಅಂತಲೇ ಹೇಳ್‌ಲಿ ಜನ. ಅರಸನ ದೌರ್ಬಲ್ಯವೊ, ಪ್ರಾಬಲ್ಯವೋ, ಕೇವಲ ಅವನ ದೈಹಿಕವಾದಂತಹ ಶಕ್ತಿಯಿಂದಲೋ, ಅವನ ಬುದ್ಧಿಶಕ್ತಿಯಿಂದಲೋ ಅವನ ಪ್ರಾಬಲ್ಯ ಅಳೆಯುವುದಲ್ವಲ್ಲ? ಒಳ್ಳೇ ಆಡಳಿತಗಾರ ಅಂತಂದ್ರೆ ಅವನೇ ಮುತ್ಸದ್ಧಿ ಆಗಿರ್ಬೇಕು ಅಂತ ಇಲ್ಲ. ಬಹಳ ಚಾಕಚಕ್ಯತೆ ಉಳ್ಳಂತಹ ರಾಜತಂತ್ರ ಪ್ರವೀಣರಾದಂತಹ ಮಂತ್ರಿಗಳಿದ್ರೆ ಸಾಕು. ಅಲ್ಲವೆ? ರಾಜಾ ಅಂತಂದ್ರೆ ಒಂದು ಉತ್ಸವದ ಮೂರ್ತಿ, ಅಲ್ಲವೆ? ಸ್ವಯಂ ಅವ ಎಲ್ಲವೂ ಆದ್ರೆ ಬಹಳ ಒಳ್ಳೇದು. ಆದ್ರೆ ಆಗ್ಬೇಕು ಅಂತ ಯಾವ ಶಾಸ್ತ್ರದಲ್ಲಿಯೂ ಇಲ್ಲ. ಆದಕಾರಣ, ಮಂತ್ರಿ, ಪುರೋಹಿತ, ಸೇನಾಪತಿ, ಇಂತಹ ಯಾವತ್ತೂ ಸಪ್ತಾಂಗಗಳಿಂದ ಕೂಡಿ ಒಬ್ಬ ರಾಜ ಪ್ರಬಲನಾಗುವುದು. ರಾಜ ಏಕಾಂಗ ವೀರನಾಗಬೇಕು ಅಂತ ಇಲ್ಲ. ಅದು ಹಿರಣ್ಯ ಕಶಿಪುವಿನ ಆಡಳಿತ ಆದೀತು. ತಪ್ಪಿದರೆ ರಾವಣನ ಆಡಳಿತ ಆದೀತು. ಹಾಗಾದರೆ ಸಪ್ತಾಂಗಯುತ ನಾನಿದ್ದೇನಲ್ಲ? ಹೀಗೆ ಅಲ್ಲದೆ ನನಗೆ ಬೇರೆ ಏನು ಮಾರ್ಗ ಹೇಳಿ! ಅಲ್ಲಿ ಹೋಗಿ ಹಸ್ತಿನಾವತಿಯಲ್ಲಿ ಇನ್ನೂ ಗಂಡಸರಿದ್ದಾರೆ, ಹಸ್ತಿನಾವತಿಯಲ್ಲಿ ಇನ್ನೂ ವಿಕ್ರಮ ನಿಕ್ಷೇಪವಾಗಿ ಉಳದೆ. ಅದರ ಮುಂದೆ ಮತ್ತೊಬ್ಬ ತಾನು ವಿಕ್ರಮಿ ಅಂತ ಮೆರೆಸಬೇಕಾದ ಅಗತ್ಯ ಇಲ್ಲ ಹಾಗೆ ಯಾರಾದರೂ ಭೀಷ್ಮನಿಗೋ, ಕರಿಪುರದ ಅರಸನಾದಂತಹ ವಿಚಿತ್ರವೀರ್ಯನಿಗೋ ಗೊತ್ತಾಗದ ರೀತ್ಯಾ, ಯಾವುದೋ ಒಂದು ಪ್ರದೇಶದಲ್ಲಿ, ಅಥವಾ

ಬಾಕಿಯಿದ್ದವರಿಗೆ ಪ್ರವೇಶಿಸಲಿಕ್ಕೆ ಸಾಧ್ಯ ಇಲ್ಲದೇ ಇದ್ದಂತಹ ಒಂದು ಕತ್ತಲೆಯ ಪ್ರದೇಶದಲ್ಲಿ ಉದ್ಘಾಟಿಸುವುದು ಸರಿಯಲ್ಲ ಎಂಬುವುದಕ್ಕಾಗಿ, ನಾನು ರಾಜಮಾತೆಯರ ಅಪ್ಪಣೆಯನ್ನೂ, ಸಕಲ ಬಲವನ್ನೂ ನೆರೆಯಿಸಿಕೊಂಡು, ಸಂದರ್ಭ ಬಂದ್ರೆ ಅಂತ ಅಲ್ಲಿಗೆ ಹೋದದ್ ಹೌದು. ಆದರೆ ಈ ಅಂಬೆ ಇದ್ದಾಳಲ್ಲ? ಇವಳು ಸಾಲ್ವನಿಗೆ ಮೊದಲೇ ಹೃದಯವನ್ನು ಸಮರ್ಪಿಸಿದ್ದಾಳೆ ಅಂತ ನನಗೆ ಗೊತ್ತಿರಲಿಲ್ಲ. ಕಾಶೀರಾಜನಿಗೂ ಗೊತ್ತಿದ್ದಿಲ್ಲ. ಕಾಶೀರಾಜನಿಗೆ ಗೊತ್ತಿಲ್ಲಲ್ಲ ಅಂತ ನನಗೆ ಅಲ್ಲೇ ಗೊತ್ತಾಗ್ಯದೆ. ಯಾಕೆ? ಅಂಬೆ ಹೇಳಿದ ಮೇಲೆ ಗೋತ್ತಾದ್ ಅದು. ಕಾಶೀರಾಜ ನನ್ನಲ್ಲಿ ಏನು ಪ್ರಾರ್ಥಿಸಿದ್ದ ಓ ಹೋ, ನೀವೇ ಬಂದಿದ್ದೀರಲ್ಲ. ನನ್ನ ಕನ್ಯೆಯರನ್ನು ಕರಪಿಡಿದು... ಹಾಗಾದರೆ ಈ ಮೂರು ಅಂತಲೇ ಅಲ್ಲವೆ? ಅಂತೂ ನಾನಲ್ಲ ನನ್ನ ತಮ್ಮ. ಹೀಗೆ ರಥವನ್ನೇರಿಸಿ ಕಕ್ಕೊಂಡ್ ಬಂದಿದ್ದೇನೆ. ಅದು ಬಂದ್ ರೀತ್ಯಾ ರಾಕ್ಷಸ ವಿಧಿಯೇ ಹೌದು. ಆದರೆ ಕ್ಷತ್ರಿಯರು ಹಾಗೆ ಮಾಡಬಹುದು ಅಂತ ಇದೆ. ಇಂತಹ ವಿಪರೀತ ಪರಿಸ್ಥಿತಿಯನ್ನು ಇದಿರಿಸಬೇಕಾದ ಸಂದರ್ಭದಲ್ಲಿ, ಹೆಣ್ಣುಮಕ್ಕಳ ಬಗ್ಗೆ ನನಗೆ ಪೂಜ್ಯಭಾವನೆಯೂ ಇತ್ತು, ಅವರ ಸುಖದ ಕಡೆಗೆ ಲಕ್ಷ್ಯವೂ ಇತ್ತು ತಂದೆ. ತಮ್ಮನನ್ನು ತೋರಿಸಿದೆ ಇವರ ಅಭಿಪ್ರಾಯ ಯೇನು ಎಂಬುವುದನ್ನು ಚೆನ್ನಾಗಿ ಆಲೈಸಿದೆ. ಕೊನೆಗೆ ಅಂಬೆ ಹೇಳಿದಳು- ಸಾಲ್ವನ ಪ್ರಕರಣ; “ಸಾಲ್ವನಲ್ಲಿಗೆ ತನ್ನನ್ನು ಕಳುಹಿಸಿಕೊಟ್ರೆ ತನಗೆ ಬಹಳ ಸಂತೊಷ, ಕರುಣನಿಧಿ ಅವಧರಿಸು”... ಇತ್ಯಾದಿ ಇತ್ಯಾದಿ, ಕಳುಹಿಸಿಕೊಟ್ಟಿದ್ದೇನೆ ಸ್ವಾಮಿ ಮರ್ಯಾದೆ ಪ್ರಕಾರ, ಸಾಲ್ವ ತಿರಸ್ಕರಿಸಿದ್ದಾನೆ. ಇದಿಷ್ಟು ವಿಷಯ. ಇದರ ಮೇಲಿಂದ ಸನ್ನಿಧಾನ ಬಂದು ತೀರ್ಮಾನ ಕೈಗೊಂಡರೆ ನನಗೂ ತೃಪ್ತಿ. ಯಾಕೆ ಗೊತ್ತೆ? ಊರಿಡೀ ಅವಳು ಯೆನೇನೋ ಹೇಳ್ತಾ ತಿರಗ್ತಾಳೆ. ಭೀಷ್ಮ ತನಗೆ ಅನ್ಯಾಯ ಮಾಡಿದ ಅಂತ. ಆದರೆ ನನ್ನ ಬಗ್ಗೆ ಒಂದು ಶುದ್ಧರಾಯಸ ಅವಳ ಅಪಪ್ರಚಾರದಿಂದ ಆಗ್ಯದೆ. ಎಷ್ಟೋಸಲ ನಮ್ಮಂಥವರಿಗೆ ಈ ವಿರೋಧ ಪ್ರಚಾರವಾದ್ರೂ ಅನುಕೂಲ ಪ್ರಚಾರವೇ ಆಗ್ತದೆ. ಯಾಕೆ? ಅಂಬೆಯಂತಹ ಹೆಣ್ಣು ಸರ್ವ ಪ್ರಯತ್ನ ಮಾಡಿ ಭೀಷ್ಮನಂತಹ ಒಬ್ಬ ಪುರುಷನನ್ನು ಸೋಲಿಸಲಿಲ್ಲ. ಅಂದ್ರೆ ಅರ್ಥವಾಯ್ತಲ್ಲ? ಆವಾಗ ನನ್ನ ಮಡಿವಂತಿಕೆಗೆ ಒಂದು ಶುದ್ದರಾಯಸ ಹೌದೋ ಅಲ್ಲೊ ಅದು? ಆ ಮಟ್ಟಿಗೆ ನನಗೆ ಧನ್ಯತೆ ಬಂದಿದೆ. ಆದ್ರೂ ಎಲ್ಲವರೂ ಹೀಗೆ ತಿಳ್ಕೊಳ್ಳವರಿದ್ದಾರೋ ಪರಾಕೆ? “ಎಣ್ಣೆ ಭೀಷ್ಮ ಹೀಗೊಂದು ಮಾಡಿಬಿಟ್ನಲ್ಲ!” ಅಂತ ಉಂಟು. ಅಂತೂ ತಾವು ಬಂದದ್ದರಿಂದ ಇದು ತೊಳೆಯಲ್ಪಡಬೇಕು, ಮಾಲಿನ್ಯ ಉಳಿಯಕೂಡದು. ಇಷ್ಟು ವಿಷಯ.

ಆ ಮಟ್ಟಿಗೆ ತಾವೇ ಅಧಿಕಾರಿಗಳು. ಯಾಕೆ? ನನಗೆ ತಿಳಿಯದೇ ಇದ್ದದ್ದಕ್ಕಿಂತ ಹೆಚ್ಚಿಗೆ ಈಗ ಗೊತ್ತಿದ್ರೆ ನಿಮಗೊಬ್ರಿಗೆ, ಅಷ್ಟು ಮಾತ್ರವಲ್ಲ, ತಾವು ಏನಾದರು ಒಂದು ವಿಚಾರವನ್ನು ಹೇಳಿದ್ರೆ ಹಾಗಲ್ಲ ಅಂತ ಖಂಡಿಸ್ತಿಕ್ಕೆ ನನಗೆ ಪಾಂಡಿತ್ಯ ಕಡಿಮೆ ಅಲ್ಲ. ನೀವು ಯೇನ್ ಹೇಳಿದಿರಿ ಅಂತ ಅರ್ಥಮಾಡಿಕೊಳ್ಳುವಷ್ಟು ಬುದ್ದಿವಂತಿಕೆ ಉಂಟು. ಯೇನು?

ಸ್ವಾಮೀ, ಅಷ್ಟು ಸಣ್ಣ ಜನ ಯೇನು ಅಲ್ಲ ಅದು. ಯಾಕೆ ಅಂತಿದ್ರೆ, ಹಸ್ತಿನಾವತಿಯವರು ತಿಳಿಯದ ಹಾಗೆ ಇದು ನಡೀಬೇಕು ಅಂತಂದ್ರೆ, ತಿಳಿದರೆ ಏನಾದೀತು? ಎಂಬ ಪ್ರಶ್ನೆ ಹುಟ್ಟೋದಿಲ್ಲೊ? ತಿಳಿದರೆ, ಭೀಷ್ಮ ಇದ್ರೆ ........? ಯಾಕೆ ಅಡ್ಡ ಬರ್ತಾನೆ ? ಅಲ್ಲಲ್ಲ ಅಡ್ಡ ? ಯಾಕೆ ಬರ್ತಾನೆ? ಅದಕ್ಕೂ ಉತ್ತರ ಹಳೇಕಲ್ಲ ಕಾಶೀರಾಜ? ಏನ್ ಹೇಳ್ಯಾನು? ಭೀಷ್ಮ ಅಡ್ಡ ಬಂದರೆ ........ಯಾಕೆ ಬರ್ತಾನೆ?

ಏನೋ ಮೋಸ ಉಂಟದಲ್ಲಿ, ಭೀಷ್ಮನದ್ಕೆ ಅರ್ಥಮಾಡಿಯಾನು ನನ್ನ ಕಳ್ಳತನವೆಲ್ಲಾ ಹೊರಗ್ ಬಂದೀತು.ಇದೇ ಅಲ್ವೋ? ಮತ್ತೆ? ಅಲ್ಲಲ್ಲ, ಈಗ ಯಾವುದೇ ಒಂದು ವಿಚಾರದ ಮೇಲಿಂದ ನಮ್ಮ ತರ್ಕಬುದ್ಧಿಯನ್ನು ಕೆದಕಿ, ನಾವು ಹುಡುಕುವುದು ಹಾಗಲ್ಲೋ? ಈಗ ತಾವು, ನನ್ಗ ಪಾಠ ಮಾಡಿದ್ದೀರಿ. ಬ್ರಹ್ಮ ಅಂತ ಒಂದ್ ಉಂಟು ಮಗನೆ ಅಂತ, ಎಲ್ಲಿ ಕಾಣಿಕ್ಕೆ ಸಿಕ್ಕದೆ ಗುರುಗಳೆ? ಅಂತ ನಾ ಕೇಳ್ದಾವಾಗ ತಾವ್ ಹೇಳಿದ್ದೀರಿ “ಜಿಜ್ಞಾಸೆಯಿಂದ”. ಈ ಜಿಜ್ಞಾಸೆಗೆ ಅಧಿಷ್ಠಾನ ಯಾವುದು? ಅಂತ ಹೇಳುವಾಗ “ವ್ಯವಸಾಯಾತ್ಮಿಕವಾದ ಬುದ್ಧಿ”. ಈ ವ್ಯವಸಾಯಾತ್ಮಿಕವಾದ ಬುದ್ಧಿಯಿಂದ ಹೇಗೆ? ಅದು ತರ್ಕ. ಹಾಗಾಗಿ ಬ್ರಹ್ಮ ಉಂಟು ಎಂಬುದು ತರ್ಕ ಸಿದ್ಧಾಂತ. ಪ್ರತ್ಯಕ್ಷ ಅಲ್ಲ. ಹಾಗೆ ತಾವ್ ಆಲೋಚಿಸಿ, ಕಾಶೀರಾಜ 'ಕರಿಪುರದವರು ತಿಳಿಯದ ಹಾಗೆ' ಅಂತ ಹೇಳಿದರೆ; ಯಾಕೆ ತಿಳಿಯಬಾರದು? ತಿಳಿದರೆ ಏನಾದೀತು? ಎಂಬ ಪ್ರಶ್ನೆ ಅಲ್ಲಿ ಹುತ್ತದೋ? ತಿಳಿದ್ರೆ ಏನೊ ಆದೀತು ! ಯೇನೋ ಯೆಂಥದ್ದು ಆಗೋದು? ಭೀಷ್ಮ ಬಂದಾನು ಅಂತಲ್ಲೋ? ಅಲ್ಲ, ಈ ಮದುವೆ ತಡೆದು ಹಿಡಿದಾನು ಅಂತಲೋ? ಅಲ್ಲ ಈ ಮದುವೆ ಆಗ್ಲಿಕ್ಕೆ ಬಿಡ್ಲಿಕ್ಕಿಲ್ಲ ಅಂತಲೋ, ಯೇನಾದರೂ ಒಂದು ಇಲ್ಲೇಕಲ್ಲ? ಹಾಗೆ ಯೇನಾದರೂ ಒಂದನ್ನವ ಗ್ರಹಿಸಲಿಕ್ಕೆ, ಅಕ್ಕೆ ಹಿನ್ನೆಲೆ ಏನಾದರೂ ಮತ್ತೊಂದಿರೇಕಲ್ಲ? ಆ ಹಿನ್ನೆಲೆ ಏನು ಅಂತ ಕಾಶೀರಾಜ ಹೇಳೋದು?

ಅಂದ್ರೆ... ಇಷ್ಕ್ ನಾನು ಹೇಳಿದ್ದು ಯಾಕೆ ಅಂತ ಗೊತ್ತುಂಟೊ? ನನ್ಗೆ ಗೊತ್ತಾದ್ರೆ ನಾನ್ ಯೇನೋ ಮಾಡ್ಯೇನು ಅವನಿಗೆ ಅಂತ ಅವ ತಿಳ್ದ . ಯಾಕೆ ನಾನ್ ಯೇನೋ ಮಾಡೋದು? ಯತಾರ್ಥಕ್ಕಾದ್ರೆ ನಾನೊಂದು ಪತ್ರ ಅವನಿಗೆ ಬರ್ದಿದ್ದೆ. ರಾಜೋಚಿತವಾದ ಉಪಚಾರದಿಂದ ಇದನ್ನು ಕಳುಹಿಸಿಕೊಟ್ಟಿದ್ದೆ ಕಾಣಿಕೆ ಸಮೇತ, ಬೇರೇನೂ ಅಲ್ಲ 'ಚಕ್ರವರ್ತಿ ನನ್ನ ತಮ್ಮ, ನಿಮ್ಮ ಮೂವರು ಹುಡುಗಿಯರನ್ನು ಸುಮುಹೂರ್ತದಲ್ಲಿ ಕನ್ಯಾದಾನ ಮಾಡಿ ಕೊಡೋಕಾಗಿ ಹುಡುಗನ ಕಡೆಯಿಂದ ಕೇಳಿಕೊಳ್ಳೇನೆ ಅಂತ'. ಈ ನಿಮಿಷದವರೆಗೂ ಅದ್ರೆ ಉತ್ತರ ಬಗ್ಲಿಲ್ಲ. ಉತ್ತರ ಯಾಕ್ ಬರ್ಲಿಲ್ಲ? ಕೇಳ್‌ಲಿಕ್ ಹೋಗಿದ್ದೇನೋ ನಾನು? ಕೊಡುವುದಕ್ಕವನಿಗೆ ಇಷ್ಟಇಲ್ಲ. ಇಷ್ಟು ಸ್ಪಷ್ಟ ಅಲ್ಲವೇ? ಯಾವಾಗ ಅವರು ಉತ್ತರ ಕೊಡದೇ ಇದ್ದು ನಾನು ಸುಮ್ಮನೆ ಇದ್ದೇನೋ ನಮ್ಮೇಲೆ ಅದು ಮಿಥ್ಯಾಪವಾದ ಅಲ್ವೋ ಗುರುಗಳೇ? ಯಾಕೆ? “ಹೇಳಿದ್ದಾನೆ ಭೀಷ್ಮ ಆದಕಾರಣ ಇನ್ನು ಬಿಡ್ಲಿಕ್ಕಿಲ್ಲ”. ಯೇನು ನಾನು ರಾವಣನ ಸಂತಾನದವನು ಅಂತ ತಿಳ್ಕೊಂಡಿದ್ದಾನೊ ಅವ? ನಮ್ಮ ಮೇಲೆ

ವೃಥಾ ದೋಷಾರೋಪಣೆ ಮಾಡಿದನಲ್ಲ? ಬಹಿರಂಗ ಮಾಡಿದನಲ್ಲ? ಯಾಕೆ? ಈ ಗುಟ್ಟು ನಿಮ್ಮಲ್ಲಿ ಹೇಳೇನೆ. ನಮ್ಮ ಬಾಕಿ ಇದ್ದ ಮಾಂಡಲೀಕರಿಗೂ ಅವ ಹೇಳಿದ್ದಾನೆ. ಇಲ್ದಿದ್ರೆ ಮಾಂಡಲೀಕರಿಗೆ ಜೀವ ಇಲ್ವೋ? ಅಲ್ಲಿ ಕೇಳೋದಿಲ್ವ? 'ಯಾಕೆ ಹಸ್ತಿನಾವತಿಯವರು ಇಲ್ಲಿಲ್ಲ?' ಅಂತ.

ಇನ್ನೂ ಒಂದು, ಇವರು ಅಲ್ಲಿ ಹೋಗಿ ಕತ್ತಿಕಾಳಗ ಮಾಡ್ಬೇಕಾಗಿದೆ ಯೇನು ನಮ್ಮ ಅವಗಾಹನೆಗೆ ಬರಕೂಡದು ಅಥವಾ ನಮ್ಮ ಅಪ್ಪಣೆಯ ವಿನಃ ಒಂದು ದೇಶದವ ಮತ್ತೊಂದು ದೇಶದವನ ಮೇಲೆ ಕತ್ತಿಯನ್ನು ಮಸೆಯುತ್ತಾನೆ ಅಂತಂದ್ರೆ ಅರ್ಥಯೇನು? ಹಾಗಾದರೆ, ಕಾಶೀರಾಜನ ಈ ಧೂರ್ತತನದಿಂದ ನಮ್ಮ ಮಾಂಡಲೀಕರಲ್ಲಿಯೂ ನಮ್ಮ ಕುರಿತಾದಂತಹ ಗೌರವ ಕಡಿಮೆಯಾಗಿ, ಇದಕ್ಕೆಲ್ಲಾ ಭೀಷ್ಮನದ್ದೋ, ವಿಚಿತ್ರವೀರ್ಯನದ್ದೋ ಅಪ್ಪಣೆ ಯಾಕೆ? ಎಂಬಷ್ಟು ಸ್ವಚ್ಛಂದತೆಗೆ ತಯಾರಾಗಿದ್ದಾರೆ !! ಇಷ್ಟೇ ಆಳಕ್ಕುಂಟು ಸ್ವಾಮೀ. - ಇದು ಕಾರಣ. ಸ್ವರ್ಗಸ್ಥರಾದ ನಮ್ಮ ತಂದೆ ಸ್ವರ್ಗಸ್ಥರಾದ ಮೇಲೇನೆ ನಮ್ಮ ದೇಶದ ಆಡಳಿತ ಸ್ವಲ್ಪ ಅಲುಗಾಡಲಿಕ್ಕೆ ತೊಡಗದೆ. ಆದ್ರೆ ಯೇನ್ ಮಾಡೋದು? ಅದನ್ನು ಇದ್ದ ನೆಲೆಯಲ್ಲಿ ನಿಲ್ಲಿಸ್ಲಿಕ್ಕೆ ಸಂದರ್ಭ ಬರ್ಲಿಲ್ಲ. ಇಲ್ಲಿ ಹುಡುಗರು ಚಿಕ್ಕವು. ಸಂದರ್ಭಕ್ಕೆ ಕಾದಿದ್ದೆ ನಾನು. ವಿಚಿತ್ರವೀರ್ಯನಿಗೊಂದು ಪಟ್ಟಾಭಿಷೇಕ ಆಗ್ಲಿ, ವಿಚಿತ್ರವೀರ್ಯನಿಗೆ ಮದುವೆಯು ಆಗ್ಲಿ. ಮತ್ತೆ ನಾನಿವೆಲ್ಲಾ ಯೆಷ್ಟಕಿದ್ದಾರೆ ನೋಡ್ತೇನೆ ಅಂತ, ಅದಕ್ಕಿಂತ ಮೋದಲೇ ಬಂದ್‌ಹೋಯ್ತು ಗಂಡಾಂತರ, ಅದಕ್ಕೆ ನಾನೇನ್ ಮಾಡ್ಲಿ?

ನಾನ್ ಹೇಳಿದ್ದೂ ಅದೇ. ಅವಳಿಗೆ ಗೊತ್ತಿಲ್ಲ ಅದು. ಅವ್ಳ್ ಹೇಳಲಿ. ಅಷ್ಟಕ್ಕೆ ನಾನೂ ಯಾರಲ್ಲಿಯೂ ಹೇಳಿಲ್ಲ. ಯಾಕೆ? ನಾನ್ ಹೇಳಬೇಕಾದವರು ಈವರೆಗೆ ಅವಳ ಕಡೆಯಿಂದ ನನ್ನಿದ್ರಿಗೆ ಬರ್ಲಿಲ್ಲ.

ಅದಲ್ಲ ಗುರುಗಳೇ, ನನ್ ವಾದವೇ ಅದಲ್ಲ. ಭೀಷ್ಮ ಬಂದಾನು. ಬಲಾತ್ಕಾರವಾಗಿ ಅಂತ ಊಹಿಸ್ಲಿಕ್ಕೆ, ಅವನಿಗೆ ಯೇನು ಕುರುಹು ಸಿಕ್ಕದೆ? ಕಡೆಗಣಿಸಿದರೆ ನಾನ್ ಅವನ ಮೈಮೇಲೆ ಬಿದ್ದೇನು ಅಂತ ಅವ ಊಹಿಸಿದನೊ? ಹಾಗಾದರೆ ನಾನು ಮೈಮೇಲೆ ಬೀಳುವುದು ಸಹಜ, ಅವನೂ ಕುಡಾ ಒಪ್ಪಿದ ಹಾಗಾಯ್ತಲ್ಲ? ಗೊತ್ತಾದ್ರೆ ಭೀಷ್ಮ ಬಂದಾನು. ಬೆದರಿದ್ದಲ್ಲ. ಬೆದರಿದ್ದಲ್ಲ. ದುರ್ಬುದ್ಧಿ ! ದುರ್ಬುದ್ಧಿ !! ಛೇ ...... ಬೆದರಿದ್ದಲ್ಲ. ತಾವ್ ಆಲೋಚಿಸಿ ಸರಳವಾದ ಹಾದಿಯಲ್ಲಿ ವಿಮರ್ಶಿಸುವ. ಅಲ್ವೊ?

ಈಗ ಪತ್ರಕ್ಕೆ ಉತ್ರ ಕೊಡ್ಲಿಲ್ಲ. ಕೊಡದಿದ್ದ ಕಾರಣ ಭೀಷ್ಮನು ಇವತ್ತಲ್ಲಾ ನಾಳೆ ಮೈಮೇಲೆ ಬೀಳಲು ಬಂದಾನು. ನ್ಯಾಯ ತಪ್ಪಿ ಭೀಷ್ಮ ಬಂದಾನೋ? ಬರ್ಲಿಕ್ಕಿಲ್ಲ. ಹಾಗಾದರೆ ನನ್ನ ಮೈಮೇಲೆ ಭೀಷ್ಮನು ಬೀಳಲಿಕ್ಕೆ ಬಂದರೆ ಅದು ನ್ಯಾಯವೇ? ಅಂತಲೂ ಪರ್ಯಾಯದಿಂದ ಅವರ ಮನಸ್ಸಿನ ಅನಿಸಿಕೆ. ಹಾಗಾದರೆ? ನ್ಯಾಯದಿಂದ ಭೀಷ್ಮ

ಬಂದಾನು. ಅದೆ ನಾನೊಂದ್ ಅಡ್ಡ ಗೋಡೆ ಕಟ್ತೇನೆ, ಅಂತ ಧೂರ್ತತನ ಮಾಡಿದ್ದಲ್ವೇ ಕಾಶೀರಾಜ?

ಹಾಗಾದರೆ ಕನ್ಯಾಪಹರಣ ಅನ್ನುವುದು ಶಾಸ್ತ್ರಸಮ್ಮತ ಅಂತ ಕಾಶೀರಾಜನದ್ದು ಅಂಬೋಣವೋ? ಅಲ್ಲ ಅಸಮ್ಮತ ಅಂತಲೋ? ಹಾಗಲ್ಲದೆ ನನಗೆ ಮಾರ್ಗಯೇನು?

(ಪರಶುರಾಮ: ನಿನ್ನ ಮಾಂಡಲೀಕರನ್ನು ನೀನೇ ತಡೆಯಬಹುದಿತ್ತಲ್ಲ?)

ಯಾಕೆ ತಡೆಯಬೇಕು ನಮ್ಮ ಮಾಂಡಲಿಕರನ್ನು? ಅವರು ಹೋಗಿ ಆಗ್ಯದಲ್ಲ ಕಾಶಿಗೆ? ನನಗೆ ಸುದ್ದಿ ಬಂದದ್ ಯಾವಾಗ? ಒಬ್ಬನನ್ನು ಯಾವನೋ ಸೆರೆಹಿಡಿದ ಮೇಲೆ ಬೇಹಿನ ಚರ ಬಂದು ಹೇಳಿದ್ದು. ನಾನು ನನ್ನ ಮಾಂಡಲೀಕರನ್ನು ನಿಲ್ಲಿಸುವುದು ಅವರ ಊರಲ್ಲೇ ಮೊದಲು ಗೊತ್ತಿದ್ರೆ ಮೊದಲು ನಿಲ್ಲಿಸುವುದಿಲ್ಲೊ? 'ಯಾರೂ ಹೋಗಕೂಡದು ಕಾಶಿಗೆ' ಅಂತ.

ಯಾರು? ಯಾರ್ ಬಂದ್ಧಿದ್ದಾನೆ ನನ್ನನ್ನು ಎದುರಿಸಲಿಕ್ಕೆ ಅಲ್ಲಿ? ಆ ಸಾಲ್ವ ಬಂದಿದ್ದಾನೆ. "ಬಾ ಯೆದ್ರು" ಅಂತ ಹೇಳಿದ್ರೆ - ಊಟಕ್ಕೆ ಎಲ್ಲರೂ ಏಳಿ ಅಂತ ಹೇಳ್ವಾಗ ದೇಶಾವರಕ್ಕೆ ಬಂದವನೂ ಒಬ್ಬ ಏಳ್ತಾನೆ ಅಂತ ಹೇಳಿದ್ರೆ ಅವನಿಗೆ ಸ್ವಾಗತ ಕೊಟ್ಟ ಯಜಮಾನ ಅಂತ ಅರ್ಥವೊ? ತಾವು ಆಲೋಚನೆ ಮಾಡಿ, ಒಂದು ಸಭೆಯಲ್ಲಿ ಆಮಂತ್ರಿತನಲ್ಲದೇ ಇದ್ದ ಯಾವನೋ ಒಬ್ಬ ಪರದೇಶಿ ಭಿಕ್ಷುಕ ಬಂದು ಕೂತಿದ್ದಾನೆ. ಮನೆ ಯಜಮಾನ ಕೈಯಲ್ಲಿ ಗಿಂಡೀ ನೀರ್ ಹಿಡ್ಕೊಂಡು 'ಸಭಾಸದರು ಭೋಜನಕ್ಕೇಳೇಕು' ಅಂತ ಹೇಳ್ತಾನೆ. ಅವನು ಹಸ್ತೋದಕಕ್ಕೆ ಜನವೋ? ಈ ಸಾಲ್ವನಿಗೆ ಆಮಂತ್ರಣ ಇತ್ತೊ ಗುರುಗಳೇ? ಕಾಶೀರಾಜ ಸಾಲ್ವನಿಗೆ ಆಮಂತ್ರಣ ಕೊಡ್ಲಿಲ್ಲ. ಹಾಗಾದರೆ ಅವ ಯಾವ ಲೆಕ್ಕದಲ್ಲಿ ಅಲ್ಲಿರೋದು? ಅವ ಯೆದ್ದದ್ ಯಾಕೆ? ಹೇಳಿ.

ಯೆದ್ದದ್ ಯಾಕೆ? ಅಂಬೆ, ಅಂಬೆ! ಅವರೊಳಗೆ ಮಾತುಕತೆ ಆಗ್ಯದೆ. ಅವ ಯೆದ್ದದ್ ಅಷ್ಟಕ್ಕೇ. ಅಂಬೆಯ ಬಗ್ಗೆ ಅವನಿಗೆ ಆಸಕ್ತಿ. ಹೊರತು ಭೀಷ್ಮನನ್ ಇದ್ರಿಸಬೇಕು ಅಂತಲ್ಲ. ಭೀಷ್ಮನನ್ ಇದ್ರಿಸಲಿಕ್ಕೆ ಸಾಲ್ವನೋ ಸ್ವಾಮಿ?

(ಪರಶುರಾಮ: ಇದು ಕನ್ಯಾಪಹರಣ ಅಲ್ಲವೇ? ಅದು ಕ್ಷತ್ರಿಯರಿಗೆ ಶೋಭೆಯೇ?)

ಹೋ... ಕನ್ಯಾಪಹಾರ ಕ್ಷತ್ರಿಯರಿಗೆ ಭೂಷಣ. ಅದೇ ರಾಕ್ಷಸ ರೀತ್ಯಾ ಅಂದರೆ ರಾಕ್ಷಸ ಜಾತಿ ಅಲ್ಲ ವಿವಾಹ. ಅದಕ್ಕೊಂದು ಪ್ರಕರಣ. ಅದು ಹೇಗೆ ? ಸಮಗ್ರ ಕ್ಷತ್ರಿಯರ ಸಮಕ್ಷಮದಲ್ಲಿ ರಾತ್ರಿ ಅಲ್ಲಾ ಕತ್ತಲೆಯಲ್ಲಲ್ಲ, ನದೀತೀರದಲ್ಲಲ್ಲ, ಗುಟ್ಟಾದ ಜಾಗದಲ್ಲಲ್ಲ. ಮಾಡುವದಿದ್ರೆ ಮಾಡುವ ಅಂತಲೇ ಹೋದದ್ದು, ಯಾಕೆ?

ನನ್ನವರೆಲ್ಲಾ ಹೋಗಿದ್ದಾರಲ್ಲಾ, ಅಲ್ಲಿಗೆ? ಅವರಿಗೆ ಸ್ವಲ್ಪ ಬಿಸಿ ಹುಟ್ಟುವುದಿದ್ರೆ ಹುಟ್ಲಿ ಕಾಶೀರಾಜನ ಊರ್ನಲ್ಲಿ. ಇಲ್ಲದಿದ್ರೆ ನಾವು ಆಡಳಿತ ನಡೆಸುವುದು ಹ್ಯಾಗೆ ಗುರುಗಳೇ? ನನ್ನನ್ನು ಕಾಣುವಾಗ್ಲೆ ಅವರು ಮಾನಸಿಕವಾಗಿ ಸೋತಿದ್ದಾರೆ. ಆದ್ದರಿಂದಲೇ ನನಗೆ ಗೊತ್ತಾದ್ದು, ಇವರು ಬಂದದ್ದು ಕಳ್ಳತನದಿಂದಲೇ ಅಂತ ನನಗೆ ಗೋತ್ತಾಗದ ಹಾಗೆ ಹೋದದ್ದು ಅವು. ನಾನ್ ತಂದದ್ದೂ ಅಪರಾಧ ಅಲ್ಲ.

ನಾನ್ ಯಾಕೆ ಮದುವೆಯಾಗ ಬೇಕು? ನನ್ನ ತಮ್ಮನ್ನನ್ನು ವರಿಸಬೇಕು ಅಂತ ನಾನ್ ಕೇಳಿದ್ನಲ್ಲ ಗುರುಗಳೇ ಯೇನ್ ಆಕ್ಷೇಪ? ಹ್ಯಾಗೆ ? ಅದನ್ನು ಮೂಲಭಾಷೆಯಲ್ಲಿ ತಾವ್ ಹೇಳಿದ್ರೆ ನಾನ್ ಅರ್ಥ ಹೇಳ್ತೇನೆ. ಅಂದ್ರೆ...ಅದ್ ನನಗೆ ಗೊತ್ತುಂಟು. ಹಾಗಿಲ್ಲ. ಅಲ್ಲಿ ದಾನ "ಕನ್ಯಾದಾನ". ಇಲ್ಲಿ ಕನ್ಯಾಗ್ರಹಣ. ಗ್ರಹಣ ಎಂಬ ಶಬ್ದದಲ್ಲಿ ಪಾಣಿಗ್ರಹಣ ಎಂಬುದು ಸೇರುವುದಿಲ್ಲ. ಕನ್ಯಾಸಂಗ್ರಹ ಇದು.

ಅಲ್ಲಿ ಕನ್ಯಾಪಿತೃವು ವರನ ಕಾಲ್ತೊಳೆದು ಮಧು ಪರ್ಕಾದಿಗಳಿಂದ ಪೂಜಿಸಿ...ತಿಳಿತಲ್ಲ? "ದದಾಮಿ" ಅಂತ ಹೇಳೇಕು. ಅಲ್ಲೋ? ವೈದಿಕರು ಮಂತ್ರ ಹೇಳುವಾಗ ಕೇಳಿದ್ದೇನೆ. ನಾನ್ ಮಾತ್ರ ಮಂತ್ರ ಹೇಳೋದಿಲ್ಲ. ಯಾಕೆ? ಕ್ಷತ್ರಿಯ ಹೇಳ್ಬಾರ್ದು ಅಂತುಂಟು. ನನಗೆ ನಿತ್ಯಕರ್ಮಾನುಷ್ಠಾನಕ್ಕೆ ಮಾತ್ರ ಹಕ್ಕಿರೋದು. ಬ್ರಾಹ್ಮಣರು ಮರೆತರೆ ನಾವೇ ಹೇಳಿಕೋಡಬೇಕು ಅಂತುಂಟು. ಹಾಗಾಗಿ ಅದೆಲ್ಲಾ ನಮ್ಮಲ್ಲಿ ನಿಕ್ಷೇಪಿಸಲ್ಪಡದೆ. ಅಲ್ಲಿರೋದು ಇಂಥ ಗೋತ್ರ, ಇಂಥ ಸೂತ್ರ, ಇಂಥ ಪ್ರವರದ ಇಂಥವನ ಮಗಳು, ಇಂಥವನ ಮೊಮ್ಮಗಳು, ಇಂಥವನ ಮರಿ ಮಗಳು, ಇಂಥ ಹೆಸರಿನ ಕನ್ಯೆ ಇವಳನ್ನು ಅಂತ ನಿರ್ಮಿಸ್ತಾನೆ. ಆವಾಗ ಹುಡುಗನ ಕಡೆಯಿಂದ ಅದನ್ನೇ ಹೇಳ್ತಾನೆ. ಇಂಥವನು... ಇದ್ ಆರ್ಷವಿವಾಹ ಪದ್ಧತಿ. ಅಲ್ಲಿ ಕನ್ಯಾದಾನ ಮಾಡ್ವಾಗ ಕೊಡ್ತೇನೆ ಅಂತ ಹೇಳ್ವಾಗ 'ಗೃಷ್ಣಾಮಿ' ಹೌದಲ್ಲ? ಹಾಗಾಗಿ ಹುಡುಗಿಯ ಕೈ ಮೇಲಿಟ್ಟು, ಹುಡುಗನ ಕೈ ಕೆಳಗಿಟ್ಟು ಹೀಗೆ ಕೊಡೋದು. ಈ ನಾಲ್ಕು ವಿಧದ ವಿವಾಹದಲ್ಲಿ ಇದು ಬ್ರಾಹ್ಮಣರಿಗೆ ಹೇಳಿಸಿದ್ದಲ್ಲ. ಇದು ಕ್ಷತ್ರಿಯರಿಗೆ ಪ್ರಶಸ್ತ. ಕ್ಷತ್ರಿಯರಾದವರು ಸಂಗ್ರಹ ಮಾಡುವುದು ಹೆಣ್ಣನ್ನು, ಅದಕ್ಕೆ ಕನ್ಯಾ ಗ್ರಹಣ ಅಂತ ಹೆಸ್ರು ಸಂಪಾದಿಸುವುದು ಅಂತ ಅರ್ಥ. ಈ ಯಾವನು ಸಂಪಾದನೆಗೆ ಹೋಗ್ತಾನೆ ಅವನೇ ಅಧ್ಯೆ ಯಜಮಾನಾಡೋಕು ಎಂಬುವುದು ಸ್ಪಷ್ಟ ಅಲ್ಲ ಶಾಸ್ತ್ರದಲ್ಲಿ. ಆದರೆ ಹೆಚ್ಚಾಗಿ ಕನ್ಯಾರ್ಥಿಯಾದವನೆ ಹೋಗಿ ತಂದದ್ದು ರೂಢಿ. ಅವನ ಪರವಾಗಿ ಮತ್ತೊಬ್ಬ ಹೋಗಾರು ಅಂತ ಅಲ್ಲಿ ನಿಷೇಧ ಇಲ್ಲ. ಇದ್ದೆತಾವು ನೆನೆಪು ಮಾಡಿ ಹೇಳಿದರೆ ಅಲ್ಲ ಅಂತ ಅಲ್ಲಗಳೆಯುವ ಒಬ್ಬ ಮೊಂಡ ಭೀಷ್ಮ ಅಂತ ತಾವು ತಿಳ್ಕೊಳ್ಬಾರ್ದು.

ಹೌದು ಸಂಗ್ರಹ ಅದು. 'ಕೊಡಬಹುದೋ? ಕೊಡಬಹುದೋ ಅಂತಂದ್ರೆ ಗಾಂಧರ್ವ ವಿವಾಹ ಯಾವುದೋ ಒಂದು ಮರದ ಬುಡದಲ್ಲಿ ಇಬ್ಬರ ಹೊಣೆಯನ್ನೂ ಸಂಪೂರ್ಣ ಅವರೇ ಹೊತ್ತು, ಬಾಕಿ ಇದ್ದವರ ಜವಾಬ್ದಾರಿಯನ್ನು ಅವರೇ ಧರಿಸಿ,

ಮಾಡಿಕೊಡು ಆಮೇಲೆ, ... ಆಮೇಲೆ ಹತ್ತು ಜನ ಒಪ್ಪಿದ ಬಳಿಕವೇ... ನಮ್ಮ ಅರಮನೆಯಲ್ಲಿ ಶಕುಂತಲಾ ಪ್ರಕರಣ ನಡೆದ್ದು ಹಾಗೆ, ನಮ್ಮ ವಂಶದ ಮೂಲ ಪುರುಷ ಭರತನದ್ದೂ ಹಾಗೇ ಅಲ್ವೋ? ದುಷ್ಯಂತ ಮಹಾರಾಜರು ಹೋಗಿ ಗಾಂಧರ್ವ ವಿಧಿಯಿಂದ ಗಾಂಧರ್ವದಲ್ಲಾದ್ರೆ ಯಾವನು ಗಾಂಧರ್ವ ವಿಧಿಯಿಂದ ಹೆಣ್ಣನ್ನು ಸ್ವೀಕರಿಸುತ್ತಾನೆಯೋ ಅವನೇ ಅವಳ ಗಂಡ, ವಧು ಸಂಗ್ರಹ ಅಲ್ವೋ ಅದು?

ರಾಕ್ಷಸ ವಿವಾಹದಲ್ಲಿ ಏನಾಗ್ತಿದೆ?

ಬಲಾತ್ಕಾರ ಮಾಡಿ ಅಂದ್ರೆ ಹೆಣ್ಣನ್ನು ರಥದಲ್ಲಿ ಏರಿಸಿ ತಂದಾವಾಗ್ಗ ಅವನೇ ಆಗಬೇಕು! ಆದದ್ದುಂಟೋ ಮೊದಲು? ರಾಕ್ಷಸವಿಧಿಯಿಂದ ಯಾರಾದ್ರೂ ಹೆಣ್ಣನ್ನು ತಂದು ಅವನೇ ಮದುವೆಯಾದದ್ದಕ್ಕೂ ಆಧಾರ ಇಲ್ಲ.

ಹ್ಹ ...ಅಕೊಳ್ಳಿ, 'ವ್ರತ ಇದ್ದವ ಹೋಗಬಾರ್ದು' ಅಂತ ತಾವು ಹೇಳ್ತೀರಿ ಆದ್ರೆ ಅದನ್ನೂ ನಾನು ಮೊದಲೇ ಹೇಳಿದ್ದೇನೆ. ನಾನು ಅಡಿಗಟ್ಟು ಮಾಡಿಕೊಂಡೇ ತಮ್ಮಲ್ಲಿ ಚರ್ಚೆಗೆ ಇಳಿದಿದ್ದು, ಈಗ ಬ್ರಹ್ಮಚಾರಿಯಾದವ ಕ್ಷತ್ರಿಯ ಜಾತಿಯಲ್ಲಿ ಒಂದು ದೇಶದ ಸೇನಾಪತಿಯಾದ್ರೆ, ಆ ಸೇನಾಪತಿಯ ಹೊಣೆಯಲ್ಲಿ ಅವ ಹೋಗ್ತಾರು ಅಂತುಂಟೋ?

ಈಗ ಇಲ್ಲಿ ನನ್ನ ತಮ್ಮನನ್ನು" ಬೇಡ ಅಂದಳು. ಇಲ್ಲಿ ಬೇಡ ಅಂದದ್ರಿಂದ ಈ ದುರಂತ ಬಂತು. ಅಲ್ಲಿ ಬೇಡ ಅಂತ ಹೇಳಿದ್ರೆ ಯೇನಾಗಿತ್ತು ಅಂತ ಅಂಬೋಣ? ಅಲ್ಲಿ ಉಪಕಾರ ಯೇನು?

ಅದ್ರಲ್ಲಿ ನನ್ನ ದೃಷ್ಟಿ ಯೇನು? ಅವಳು ಸುಖಪಡಬೇಕು, ನನ್ನ ತಮ್ಮನಿಗೂ ಆತ್ಯಂತಿಕವಾದಂತಹ ಸುಖ ಸಿಗ್ಬೇಕು. ಇಷ್ಟೇ ಆ ಕೌಟುಂಬಿಕವಾದಂತಹ ಒಕ್ಕೂಟದ ದೃಷ್ಟಿ ನನ್ನದು. ಮತ್ತೆ ಇಲ್ಲದಿದ್ರೆ ಗೆದ್ದು ತಂದದ್ದು ಅಂತಾದ್ರೆ, ವರಿಸತಕ್ಕದ್ದು ಅಂತ ಕೈಕಾಲ್ ಕಟ್ಟಿ, ನಾನು ಅಂತಃಪುರಕ್ಕೆ ಕಳುಹಿಸುವುದಿಲ್ವೋ? ಆ ದೌರ್ಜನ್ಯವನ್ನು ನಾನು ತೋರಿಸದೇ ಇದ್ದುದರಿಂದಲೇ ಈ ರಾಕ್ಷಸ ರೀತಿ ಅಲ್ಲಿ ಮಾತ್ರ ನನ್ನ ಹೃದಯದಲ್ಲಿ ಔದಾರ್ಯದ ನೀತಿ ಉಂಟು ಎಂಬುದು ಅರ್ಥ. ಈ ಕೊಡುಗೆ ನನ್ನ ದೌರ್ಬಲ್ಯ ಅಂತಿರೊ ಗುರುಗಳೇ ನೀವು, ಅಲ್ಲ ದೊಡ್ಡಸ್ತಿಕೆ ಅಂತಿರೋ? ನೋಡ್ವ ನನ್ನ ಜಾಗದಲ್ಲಿ ತಾವಿದ್ರೆ ಯೇನ್ ಆಲೋಚನೆ ಮಾಡ್ತಿದ್ರಿ? ಈಗ ಯಾವನಾದರೂ ಒಂದು ಕೆಲಸ ಮಾಡಿದ್ರೆ “ಹಾಗಲ್ಲ” ಅಣ್ಣಕ್ಕೆ ಒಂದು ಸಾವಿರ ಜನ ಸಿಗ್ತಾರೆ. ಆದರೆ “ಹಾಗಲ್ಲ ಅದು ಹೀಗೆ” ಅಂತ ಹೇಳ್ಳಿಕ್ಕೆ ನಿಮ್ಮಂಥ ಕೆಲವರೇ ಸಿಕ್ಕೋದು. ಈಗ ಹಿಗಲ್ಲದಿದ್ರೆ ಮತ್ತೇ ಹೇಗೆ? ನೋಡ್ವ , ಈ ಪರಿಸ್ಥಿತಿಯನ್ನು ನಾನು ವಿವರಿಸಿದ್ನಲ್ಲ? ಈಗ ನಾನು ಹೋದದ್ದನ್ನು ಮರೆಯೋಣ. ಈ ಸಂದರ್ಭ ಬಂದ್ರೆ ನನ್ನ ಸ್ಥಾನದಲ್ಲಿ ನೀವಿದ್ದೆ ಯೇನ್ ಮಾಡ್ತಿದ್ರಿ?

ಬಹು ಸುಲಭದಲ್ಲಿ ಬಗೆಹರಿಸಲಿಕ್ಕಿದ್ದ ಪ್ರಶ್ನೆ ಕೇಳಿದ್ದೇನೆ. ಆ ತಮ್ಮನನ್ ಯಾಕೆ ಮುಂದಿಡೋದು? ಈಗ ಯೆಷ್ಟೊಂದು ವೈದಿಕವಾದಂತಹ ವಿವಾಹದ ಕ್ರಮಕ್ಕೆ ಮೀರಿ ಸ್ವಯಂ ಅಧಿಕಾರನ್ನು ಉಪಯೊಗಿಸುವ ಹಕ್ಕು ರಾಜರಿಗುಂಟೋ ಇಲ್ಲೋ? ಯೇನು? ತೊಂದರೆ ಇದಿರಿಸಿಲಿಕ್ಕೆ?

ನಮ್ಮ ಎದೆ ಗಟ್ಟಿ ಉಂಟು ಗುರುಗಳೇ. ಈಗ ಅದಲ್ಲ ಇಲ್ಲಿ ಪ್ರಶ್ನೆ ನ್ಯಾಯ ಅನ್ಯಾಯದ ವಿಮರ್ಶೆಗೆ ಬಂದದ್ ಇಲ್ಲಿ. ಈಗ ರಾಜರಾದವರು ನಾವು ಕೆಲವು ಸಲ ವಿಶೇಷ ಅಧಿಕಾರವನ್ನು ಉಪಯೋಗಿಸಿ ಕೆಲವು ಅತಿಕ್ರಮ ಮಾಡಬೇಕಾಗಿ ಬರದೆ. ಪರಿಸ್ಥಿತಿ ಪರಿಸರದ ಒತ್ತಡದಿಂದ ಹಾಗೆ ಬಂದ್ರೆ ಧೈರ್ಯವಾಗಿ ಇದಿರಿಸ್ಯೇವು ಅನ್ನೋ ಬಂಡವಾಳ ಇದ್ದೋ, ಹಾಗೆ ಮಾಡಿದರೆ ನ್ಯಾಯವನ್ನು ಅತಿಕ್ರಮಿಸಿದ ಅಂತ ಹೇಳ್ಳಿಕ್ಕೆ ಬರುವುದಿಲ್ಲ ಎಂಬುದಕ್ಕೆ ಯತಾರ್ಥಕ್ಕಾದ್ರೆ ಇಷ್ಟೊತ್ತು ನಿಮ್ಮಲ್ಲಿ ನಾನು ಇಷ್ಟು ಮಾತನಾಡಿದ್ದು, ನಿರ್ಧಾರಯೇನಿಲ್ಲ. ತಂದದ್ ಹೌದು. ತಮ್ಮನಿಗೆ ಮದ್ದೆ ಮಾಡಿಸಬೇಕು ಅಂತ ಉದ್ದೇಶಿಸಿದ್ ಹೌದು. ಆಮೇಲ್ ಅವ್ ಹೇಳಿದ್ದು - ಇದು ದ್ರಾವಿಡ ಪ್ರಾಣಾಯಾಮ ಆಗ್ತದೆ. ನನ್ನ ನಿಲುವು ಹೇಗಿತ್ತು ಗೊತ್ತುಂಟೋ? ಅವಳು ರಥ ಏರದೇ ಇರಿದ್ರೆ, ಈ ಸತ್ಯವನ್ನು ಇಲ್ಲಿ ಹೇಳದೇ ಅಲ್ಲಿಯೇ ಹೇಳಿದ್ದೆ, ಬೇಡ ನಾಲ್ಕು ಮಾರು ಈಚೆಗೆ ಬಂತಲ್ಲ ರಥ? ಆ ಸಾಲ್ವನನ್ನು ಒದ್ದು ನಾನು ಕಳುಹಿಸಿದೆನಲ್ಲ? ಅಲ್ಲಿಯಾದರೂ ಹೇಳಿದ್ದೆ ಈ ಪ್ರಕರಣ ಇಷ್ಟು ದೀರ್ಘವಾಗಿ ಬೆಳೆಯುತ್ತಿರಲಿಲ್ಲ. ಏನೇ ಆಗಲಿ ನೀವು ಬಂದ್ ಮೇಲೆ ಇತ್ಯರ್ಥ ಆಗದೇ ಹೋಯ್ತು ಅಂತ ಆಗಬಾರದು. ಆದ್ದರಿಂದ ನಿಮಗಾಗಿ ನಾನು ಯಾವ ತ್ಯಾಗಕ್ಕೂ ಸಿದ್ಧನಿದ್ದೇನೆ. ಈ ಪ್ರಕರಣ ಒಮ್ಮೆ ಮುಗಿಸಿ, ಹ್ಯಾಗೆ?

ಯಾವ ತ್ಯಾಗಕ್ಕೂ ಸಿದ್ಧನಿದ್ದೇನೆ. ಇದು ದೇವರ ಮುಂದ್ ಹೇಳೋ ಮಾತು. ಯಾವ ತ್ಯಾಗಕ್ಕೂ ಸಿದ್ಧನಿದ್ದೇನೆ. ಯೇನ್ ಅಪ್ಪಣೆ ಮಾಡ್ತೀರಿ ಹೇಳಿ, ಆದ್ದರಿಂದ ಈ ಶಿಷ್ಯನ ಉದ್ದಾರ ಆಗ್ತಿದೆ ಅಂತ ಹೇಳ್ವವರ್ಯಾರು?

**(**ಪರಶುರಾಮಃ ಹೆಣ್ಣಿನ ಕಣ್ಣೀರು ಲೋಕವನ್ನೇ ಸುಡ್ತದೆ. ಆದ್ದರಿಂದ ಇವಳನ್ನು ನೀನು ವರಿಸು.)

ಇದು ಹೇಳುವವರು ನನ್ನ ಪೂಜ್ಯ ಗುರುಪಾದರು ! 'ಹೆಂಗಸಿನ ಕಣ್ಣೀರು ಭೂಮಿಗೆ ಬಿದ್ದರೆ ಊರು ಸುಟ್ ಹೋಗ್ತದೆ, ಹೆಂಗಸಿನ ಕುತ್ತಿಗೆಯ ರಕ್ತ ಕೆಳಕ್ಕೆ ಬಿದ್ರೆ ಲೋಕ ಶಾಂತಿಯಾಗ್ತಿದೆ' !

ಅದೇ ಅದಕ್ಕೇ ನಾನ್ ಹೇಳಿದ ಉತ್ತರ ಸರಿಯಲ್ವೊ? ಹೆಂಗಸರ ಕತ್ತು ಕಡಿದು ರಕ್ತವನ್ನು ಭೂಮಿಗೆ ಚೆಲ್ಲಿದರೆ ಮೂರು ಬೆಳೆ ಬರುವಲ್ಲಿ ನಾಲ್ಕು ಬೆಳೆ ಬರದೆ.  ಆಗ್ತದಲ್ಲ?

ಯಾಕೆ?... ಅಲ್ಲಲ್ಲ...ಯಾಕೆ ಹೇಳಿದೆ. ಗುರುಗಳೇ ಅನ್ಯಥಾ ಭಾವಿಸ್ಬೇಡಿ. ನೀವು ಕಣ್ಣು ಕೂರ್ತಾ ಇದ್ದೀರಿ. ಕಣ್ಣು ಕೂರಿ ವಿಧ್ಯಾರ್ಥಿಗಳಿಗೆ ಕಂಠ ಪಾಠ ಹೇಳ್ತೀರಿ. ಶಿಷ್ಯನೆ ಎಂಟು ಎಂಟು ಹದಿನೆಂಟು, ಬರಕೊ. ಆದರೆ ಬುದ್ಧಿಯಿದ್ದ ಶಿಷ್ಯ ಗುರುಗಳನ್ನೆಚ್ಚರಿಸಬೇಕಾಗ್ತದೆ- “ಅಧ್ಯಾಪಕರೇ, ಗುರುಗಳೇ ಅಂತದ್ದು ಎಂಟು ಎಂಟು ಹದಿನೆಂಟು ಅಂತ ಹೇಳಿದಿರಿ?” ಕೇಳ್ಬೇಕಲ್ಲ? ನಾನ್ ಹಾಗೇ ತಮ್ಮನ್ನೀಗ ಪ್ರಶ್ನಿಸೋದು.

'ಗುರುವಚನಂ' ಅಂದ್ರೆ ಸನ್ನಿಧಾನದಿಂದ ಅಪ್ಪಣೆ ಆಸ್ಬೇಕು. ಗುರುವಚನ ಅಂತದ್ರೆ 'ಗುರು' ಎಂಬವನಿಂದ ವಚನವೋ ಅಲ್ಲ. 'ಗುರುವಚನಂ' ತೂಕದ ಮಾತು ಅಂತಲೋ ಎರಡೂ ಬೇಕಲ್ಲ? ಈಗ ಇಲ್ಲಿರೊದು ಕೇವಲ ವ್ಯಕ್ತಿ ನಿಷ್ಠವಾಗಿ ಗುರುವಚನ. ಆ ವಚನಕ್ಕೆ ಗುರುತ್ವ ಇಲ್ಲ.

ನಾನು, ಸನ್ನಿಧಾನದಲ್ಲಿ ಯೇನು ಅಂತ ಅರಿಕೆ ಮಾಡಿಕೊಂಡದ್ದು? ಗುರು ಅಪ್ಪಣೆ ಮಾಡಿದರೆ ಯಾವ ತ್ಯಾಗಕ್ಕೂ ಸಿದ್ಧನಿದ್ದೇನೆ ಅಂತ ಹೌದಲ್ವ?

ಶ್ರೀಮುಖದಿಂದಾದ ನ್ಯಾಯ ತೀರ್ಮಾನ ಹೇಗೆ, ಸುಲಭದಲ್ಲಿ ಬಗೆಹರಿಸಲಿಕ್ಕಿದ್ದದ್ದು?

ಅಂಬೆಗೆ ನಾನು ತಾಳಿ ಕಟ್ಟಿದರೆ ಪ್ರಕರಣ ಮುಗಿಯಿತು. ಇದು ಮೂರ್ಖರ ವಾದ. ಹುಚ್ಚರು ಹೇಳ್ಯಾರು. ರಾಮಾಯಣ ಇಷ್ಟು ಧೀರ್ಘವಾಗಿ ಬೆಳೀಬೇಕಿತ್ತೆ? ಇಷ್ಟೆಲ್ಲಾ ಪ್ರಕರಣ ಆದದ್ದು ಶೂರ್ಪನಖಿಯಿಂದ. ಅಲ್ಲಿಗೆ ಒಬ್ಬ ಗಂಡ ಬೇಕಾಗಿ ಅಲ್ಲೊ? ಹ್ಯಾಗೂ ಲಕ್ಷ್ಮಣನ ಮೂಲಕ ಕರ್ಣನಾಸಾಚ್ಛೇದನ ಆಯ್ಕೆ ಇಲ್ಲೊ? ಕೊನೆಗೂ ರಾಮನಿಗೊಬ್ಬ ಭಕ್ತ ಸಿಕ್ಲಿ ಒಬ್ಬ ಆಜನ್ಮ ಬ್ರಹ್ಮಚಾರಿ, ಆಂಜನೇಯ? ಆ ಆಂಜನೇಯನಿಗೂ, ಶೂರ್ಪನಖಿಗೂ ಒಂದ್ ಕೈ ಹಿಡಿಸ್ತಿದ್ರೆ ರಾಮಾಯಣ ಅಲ್ಲೇ ಮುಗಿತ್ತಿತ್ತಲ್ಲ. ಈಗಿನ ಹೊಸ ಬುದ್ಧಿವಂತರ ಆಲೋಚನೆ ಇದೆಲ್ಲ.

ತಾವು ಹಾಗೆಯೇ ಹೇಳಿದಿರಿ ಅಂತ ನಾನ್ ಹೇಳಲಾರೆ. ಹಾಗಂತ ಇದಕ್ಕಿಂತ ಬೇರೆ ಉದಾಹರಣೆ ಸಿಕ್ಕೋದಿಲ್ಲ. ಇದು ಈ ಥರದ ನ್ಯಾಯ ಆಯ್ತು ಗುರುಗಳೇ.

ಯಾಕೆ ಕೇಳಿ; ಹಾಗಾದರೆ ತಮ್ಮ ಅಂಬೋಣದಲ್ಲಿ ಅಂಬೆಯದು ಯೇನೂ ತಪ್ಪಿಲ್ಲ. ಅಂತ ವೊಂದು ಸಿದ್ಧ ಆದ ಹಾಗಾಯ್ತು. ಅಂಬೆ ಇಲ್ಲಿ ಅಪರಾಧಿನಿಯೇ ಅಲ್ಲ. ಅಡ್ಡಿಲ್ಲ. ಅವಳು ಅಪರಾಧಿನಿ ಆಗೇಕು ಅಂತ ನನಗೆ ಅಪೇಕ್ಷೆ ಇಲ್ಲ. ನನ್ನಿಂದ ಅಪರಾಧ ಆಗ್ಯದ ಅಂತ ಸ್ಥಾಪಿಸಲ್ಪಡದೆ ಅಲ್ಲಿ ನನ್ನ ಒಪ್ಪಿಗೆಯಿಲ್ಲ. ಈಗ ಅಂಬೆ ಅಪರಾಧಿನಿ ಎಂಬಲ್ಲಿ ನನ್ನ ಆಕ್ಷೇಪ ಇಲ್ಲ. ಆಕ್ಷೇಪ ಇಲ್ಲ ಅಂತದ್ರೆ ಒತ್ತೇನೆ ಅಂತ ಅಲ್ಲ. ನನಗದು ಮುಖ್ಯ ಅಲ್ಲ. ನಾನ್ ಅಪರಾಧಿ ಅಂತ ಹೇಳಿದರೆ ಅಪರಾಧಿ ಅಲ್ಲ ಅಂತ ಸಾಧಿಸುವ ಸ್ವಾತಂತ್ರ್ಯ ನನ್ನ

ಉಂಟು. ಅಪರಾಧಿ ಅಲ್ಲದೇ ಇದ್ದವನಿಗೆ ತಾವು ವಿಧಿಸಿದ ಈ ಶಿಕ್ಷೆ ಎಷ್ಟು ದೊಡ್ಡು? ತಂದೆಗೆ ಬೇಕಾಗಿ ಮರಣ ಪರ್ಯಂತರ ನಾನು ಬ್ರಹ್ಮಚರ್ಯವನ್ನು ಕೈಗೊಂಡವ. ಸಿಂಹಾಸನವನ್ನು ಏರುವುದಿಲ್ಲ ಅಂತ ಪ್ರತಿಜ್ಞೆ ಮಾಡಿದವ. ಇದರಿಂದ ನನಗೆ ಭೀಷ್ಮ ಅಂತ ಹೆಸರು ಬಂದ್ಯದೆ. ಆ ಹೆಸರನ್ನು ನಾನೀಗ ಹಿಂದಿರುಗಿಸಬೇಕಾಗ್ತದೆ. ತಾವು ಹೇಳಬಹುದು, ಗುರುವಿನ ಮಾತಿಗೆ ಬೇಕಾಗಿ, ಗುರುಗಳು ಹೇಳಿದರು "ಮಗನೇ ಈ ಪ್ರಶಸ್ತಿ ಬೇಡ. ಕೊಟ್ಟವರಿಗೆ ಹಿಂತಿರುಗಿಸು. ಪ್ರಶಸ್ತಿ ಬೆಂಕಿಗೆ ಬಿಳಲಿ" ! ಆದರೆ ನನ್ನ ತಂದೆ ನನಗೆ ಅನುಗ್ರಹ ಮಾಡಿದ್ದಾರೆ 'ಇಚ್ಛಾ ಮರಣಿಯಾಗು ಮಗನೆ' ಅಂತ. ಅದನ್ನು ನಾನೀಗ ಎಲ್ಲಿಗೆ ಹಿಂದಿರುಗಿಸಲಿ ಗುರುಗಳೇ? ಈಗ ಆ ತ್ಯಾಗ ಮಾಡಿದ್ದಕ್ಕೆ ಪ್ರತಿಫಲ ಪಡೆದಾಗ್ಯದೆ ಹೌದಲ್ಲ ? ಯಾರಿಂದ ಪಡೆದಿದ್ದೇನೋ ಅವರಿಗೆ ಅದನ್ನು ಹಿಂತಿರುಗಿಸುವುದು ಹ್ಯಾಗೆ? ನನ್ನ ತಂದೆ ಅವರೀಗ ಬದುಕಿ ಇಲ್ಲ. ಇನ್ನೂ ಒಂದು ಉಂಟು. ಅಂಬೆಗೆ ಇದು ಅನುಗ್ರಹವೇ ಆಗ್ತದೆ. ಯಾವು? ಸಾಲ್ವನೇ ಸಾಕು ಅಂತ ಹೇಳವಳು ಅವಳು. ಹೌದಲ್ಲ? ಈಗ ಭೀಷ್ಮನೇ ಅವಳಿಗೆ ಗಂಡನಾದ ಅಂತಾದ್ರೆ, ಯೇಷ್ಟು ದೊಡ್ಡ ಲಾಭ ಒದಗಿಸಿಕೊಟ್ಟ ಹಾಗಾಯ್ತು ತಮ್ಮ ತೀರ್ಮಾನದಿಂದ; ಆಲೋಚನೆ ಮಾಡಿ, ಅಲ್ವೋ? ಹಾಗಾದರೆ ಅವಳಿಗೆ ಮಹಾಲಾಭ, ಭೀಷ್ಮನಿಗೆ? ಬಲುದೊಡ್ಡ ಹಾನಿ. ಹೌದಲ್ಲ? ಆದ್ರೆ ಒಂದ್ ಮಾತ್ ಹೇಳಿದ್ದೇನೆ ತ್ಯಾಗ ಮಾಡೇನೆ ಅಂತ ಅಲ್ವೋ? ತಂದೆಗಾಗಿ ನಾನು ಯೇನನ್ನು ತ್ಯಾಗ ಮಾಡಿದ್ದೇನೆ? ಶರೀರ ಸುಖವನ್ನು, ದಾಂಪತ್ಯ ಸುಖವನ್ನು ತ್ಯಾಗ ಮಾಡಿದ್ದೇನೆ. ಅಧಿಕಾರವನ್ನೂ ತ್ಯಾಗ ಮಾಡಿದ್ದೇನೆ. ಇದು ತ್ಯಾಗ ಮಾಡಿ ಆದದ್ದು. ಈಗ ಅದು ನನ್ನ ಸ್ವಾಧೀನ ಉಂಟೊ?

ತಾವು ಬ್ರಾಹ್ಮಣರಾಗಿ ಹೇಳಿ, "ಬ್ರಹ್ಮಾರ್ಪಣಂ ಬ್ರಹ್ಮಹವಿರ್ ಬ್ರಹ್ಮಾಗ್ನೌ" ಅಂತ ಹೇಳ್ಕೊಂಡು "ಹಿರಣ್ಯಗರ್ಭ ಗರ್ಭಸ್ಥಂ" ಅಂತ ಹೇಳಿ ತುಳಸೀದಳದ ಮೇಲೆ ನೀರ್ ಬಿಟ್ಟದ್ದು ಕೊಟ್ ಹೋಯ್ತೊ? ಅದೆ ಅಲ್ವೇ ತ್ಯಾಗ ಅಂತಂದ್ರೆ? ತ್ಯಾಗ ಮಾಡಿದ್ದನ್ನು ಪುನಃ ತೆಕ್ಕೊಂಡು ಬೇರೊಬ್ಬ್ರಿಗ್ರೆ ಕೊಡ್ಲಿಕ್ ಬರ್ತದೊ ಅದು?

**(ಪರಶುರಾಮ: ಪರಿಸ್ಥಿತಿಗೆ ಹೊಂದಿಕೊಳ್ಳಬೇಕಲ್ಲ?)**

ಪರಿಸ್ಥಿತಿಗೆ ಒಳಪಟ್ಟು...?

ಇದು... ಗುರುಗಳೇ ಅದ್ ಆಗೋದಿಲ್ಲ. ಅದ್ ಆಗೋದಿಲ್ಲ. ನೀವ್ ಹಾಗೆಲ್ಲಾ ಮಾತನಾಡಿದರೆ ಒಪ್ಪುವವ ಸಣ್ಣ ಮಗುವೋ ನಾನು?

ಈ ಸಿಂಹಾಸನದ ಅಧಿಕಾರ ಈ ಹೊತ್ತು ಯಾರ್ದು? ವಿಚಿತ್ರವೀರ್ಯನದ್ದು.

ಆ ಅಧಿಕಾರಕ್ಕೆ ಬುನಾದಿ ಯಾವ್ದು? ನನ್ನ ಬ್ರಹ್ಮಚರ್ಯ. ಹೌದಲ್ಲ?

ಇದನ್ನು ಬಿಡು ಅಂತ ಹೇಳುವ ಅಧಿಕಾರ ಯಾರಿಗೆ ?

ಇದು ಸಿಂಹಾಸನಕ್ಕೆ ಸಂಬಂಧಿಸಿದ ನನ್ನ ತ್ಯಾಗ, ಅಧಿಕಾರಕ್ಕೆ ಸಂಬಂಧಿಸಿದ ತ್ಯಾಗ. ಹಾಗಾಗಿ ಇದನ್ನು ಬಿಡ್ಲಿಕ್ಕೆ ಸಿಂಹಾಸನವೇ ನನ್ನಲ್ಲಿ ಹೇಳ್ಬೇಕು. ನಿಮಗೆ ಬೇಕಾಗಿಯೋ ನಾನು ಬ್ರಹ್ಮಚರ್ಯ ಕೈಕೊಂಡದ್ದು? ವಿಚಿತ್ರವೀರ್ಯನಿಗೂ ಅವನ ಸಂತಾನಕ್ಕೂ ಪ್ರಭುತ್ವ ಸ್ಥಿರವಾಗಲಿ ಅಂತ. ರಾಜಮಾತೆಯರು ಬದುಕಿದ್ದಾರೆ. ಆದ ಕಾರಣ ಅವರಿಗಾಗಿ ನಾನು ಮಾಡಿದ ತ್ಯಾಗ. ಇದನ್ನು ಬಿಡಬೇಕಾಗಿದ್ರೆ ಬಿಡು ಅಂತ ಹೇಳುವ ಅಧಿಕಾರ ಅವ್ರಿಗೆ; ಸಧ್ಯ ನಿಮಗಲ್ಲ.

ನಿಮಗಾಗಿ ಏನನ್ ಬಿಡ್ಬೇಕು? ಈ ಬಿಟ್ಟದ್ದನ್ ಬಿಡ್ಲಿಕ್ ಇನ್ನೇನಿಲ್ಲ.

ಮೊದಲೊಬ್ಬ ಕೇಳಿದ್ದಾನಂತೆ, “ಸನ್ಯಾಸದಲ್ಲಿಯೂ ಸನ್ಯಾಸ ಉಂಟೋ ಮತ್ತೆ ಅಂತ”? ಸನ್ಯಾಸದ ನಂತರ ಸನ್ಯಾಸ ಯೆಂಥದ್ದು? ಪುನಃ ಮರಳಿ, ಗ್ರಹಸ್ಥಾಶ್ರಮ ಅಂತಲ್ವೊ? ಹಾಗಾದರೆ ಅವ ಸಂನ್ಯಾಸ ತೆಕೊಂಡದ್ ಯೆಷ್ಟು ಸತ್ಯ? ಬಿಟ್ಟದ್ ಯೆಷ ಸತ್ಯ?

ತಂದೆಗೆ ಬೇಕಾಗಿ ಇದನ್ ಬಿಟ್ಟಿದ್ದೇನೆ ಯಾವ್ದನ್ನು? ಸಂಸಾರ ಸುಖವನ್ನು, ಈಗ ಗುರುಗಳಿಗೆ ಬೇಕಾಗಿ ಅದನ್ನು ಹಿಡ್ಕೊಂಡಿದ್ದೇನೆ. ಅಂತ ಹೇಳಿದ್ರೆ ಇದು ಚೌತಿ ದಿವಸ ಬಡವರ ಮನೆಯಲ್ಲಿ ಒಂದೇ ತೆಂಗಿನಕಾಯಿಯನ್ನು ಎಲ್ಲಾ ದೇವರಿಗೂ ತೋರಿಸಿ ಕೊನೆಗೆ ಮೇಲೋಗರಕ್ಕೆ ಅದನ್ನೇ ಹೇಳ್ದ್ ಹಾಗಲ್ವೊ?

ಆದ್ದರಿಂದ ತಂದೆಗಾಗಿ ಬಿಟ್ಟಿದ್ದೇನೆ ಶರೀರ ಸುಖ ! ಅಧಿಕಾರ ! ನಿಮಗಾಗಿ ಯೇನ್ ಬಿಡ್ಬೇಕು ಹೇಳಿ, ಅಂದ್ರೆ ನನ್ನ ಗುರು ಭಕ್ತಿಯ ದ್ಯೋತಕ, ಅಂದ್ರೆ ಅರ್ಥ ಯೇನು? ನಿಮಗಾಗಿ ಉಳಿದದ್ದು ಒಂದೇ, ಭೀಷ್ಮನಲ್ಲಿ, ಬಿಟ್ರೆ ಅದನ್ ಬಿಟ್ಟೇನು “ಪ್ರಾಣ”.

ಮತ್ತೆ ಯೇನು ಸ್ವಾಮಿ? ನಿಮ್ಮ ಶಿಷ್ಯ ನಾನು, ಉಗುಳಿದ್ದನ್ನು ಪುನಃ ಗುರು ಹೆಕ್ಕಿ ಕೊಡ್ತಾನೆ ಅಂತ ಹೇಳ್ಕೊಂಡು ಪ್ರಸಾದ ತಕ್ಕೋಳಲಿಕ್ಕಿಲ್ಲ. ಯೇನು ಹುಟ್ಟು ಕುರುಡನೋ ನಾನು? ನಾನ್ ಹೇಳೋದು ಅದನ್ನು ಹೆಕ್ಕಿಕೊಟ್ಟ ಗುರುಗಳ ಕೈ ಅಶುದ್ಧಾಯ್ತು. ಕೈ ತೊಳ್ಕೊಂಡ್ ಬನ್ನಿ.ಆಮೇಲೆ ಮಂತ್ರಾಕ್ಷತೆ ಹಾಕಿ.

ಇಷ್ಟೇ ನನಗೆ ಸನ್ನಿಧಾನದಲ್ಲಿ ಹೇಳ್‌ಲಿಕ್ಕೆ ಇರೋದು. ನೀವು ಬಿಡಿ ಗುರುಗಳೇ, ಮತ್ತೊಮ್ಮೆ ನನ್ನ ಅಪ್ಪನೇ ಪ್ರತ್ಯಕ್ಷನಾಗಿ ಬಂದು ಇಲ್ಲಿ ಹೇಳ್ಲಿ, “ಮಗಾ ಚಿಂತಿಲ್ಲ,

ಮದುವೆ ಆಗು" ಅಂತ, ಆಗಲಾರೆ. ಭೀಷ್ಮ ನಾನು. ನನಗೂ ಒಂದು ನಿಲುಮೆ ಇದೆ. ನನಗೆ ನನ್ನದು ಮಾತ್ರ ಸೀಮಿತ, ಊರವೃದ್ಧಕ್ಕೆಲ್ಲ ನಾನ್ ಕೈ ಹಾಕ್ವವನಲ್ಲ.

ತಾಳಿ, ತಾವ್ ಗುಲ್ಲೆಬ್ಬಿಸಬೇಡಿ, ನನಗೆ ಸುಲಭದಲ್ಲಿ ಅರ್ಥಾಗ್ತದೆ. ಗುರಗಳೇ, ಹಾಗಾದರೆ ನೀವೂ ವಂಶವನ್ನು ಉಳಿಸಿಕೊಳ್ಳುವ, ವಂಶದ ವೃದ್ಧಿಯನ್ನು ಗುರುತಿಸಿ ತಾಯಿಯ ತಲೆಯನ್ನು ಕಡ್ಡದ್ದು. ಆ..ಅಲ್ಲಿ ಉಳಿದದ್ದು ಯಾವು ಜಮದಗ್ನಿ ಗೋತ್ರ ಮಾತ್ರ ಅಲ್ವೊ?

ನನ್ನ ಈ ಬ್ರಹ್ಮಚರ್ಯದಿಂದ ಉಳಿಯುವುದೂ ನಮ್ಮ ಈ ಚಂದ್ರವಂಶ. ನಾನೀಗ ಮದುವೆಯಾದೆ ಅಂತಾದ್ರೆ ಸತ್ಯವತೀ ದೇವಿಯವರೆಗೂ ಸಿಂಹಾಸನದ ಹಕ್ಕಿಲ್ಲ. ವಿಚಿತ್ರವೀರ್ಯನು ಈ ನಿಮಿಷಕ್ಕೆ ಇಳೀಬೇಕು ಹೌದಲ್ಲ?

ಆವಾಗ ಇಲ್ಲಿ ಯೇನಾಗ್ತದೆ? ನಮ್ಮ ವಂಶ ವಿಚ್ಛೇಧ ಆಗ್ತದೆ. ನನ್ನ ಬ್ರಹ್ಮಚರ್ಯ ಇರುವಲ್ಲಿವರೆಗೆ ಸತ್ಯವತೀ ದೇವಿಯವರೆಗೂ, ಅವರ ಉತ್ತರಾಧಿಕಾರಿಗಳಾದ ಸಂತಾನಕ್ಕೂ ಈ ಸಿಂಹಾಸನದ ಭದ್ರತೆ ಇರೋದು. ಒಂದ್ ಕಲ್ ಅಲುಗಾಡಿತೋ ಈಡೀ ಕಟ್ಟಡವೇ ಕುಸಿದು ಬಿತ್ತು. ನಿಮಗೆ ನಿಮ್ಮ ಮನೆತನವನ್ನು ಉಳಿಸುವುದಕ್ಕೆ ತಾಯಿಯ ತಲೆ ಕಡಿಯುವುದು ಧರ್ಮವಾದರೆ, ನನಗೆ ನನ್ನ ಕುಟುಂಬದ ಏಕ ಸೂತ್ರತೆಯನ್ನು ಉಳಿಸಿಕೊಳ್ಳುವುದ್ದಕ್ಕೆ ಬ್ರಹ್ಮಚರ್ಯ ಧರ್ಮ. ಒಂದ್ ಹೆಣ್ಣಿಗೆ ಕಣ್ಣೀರು ಬಂದರೆ ನಾನು ಹೊಣೆ ಅಲ್ಲ ಅಂತ ಹೇಳೋದ್ ಅಪರಾಧವೋ?

ಈಗ ನಿಮ್ಮ ಅಷ್ಟೇ ಹಟ ಯೇನು? ನಾನು ಅಂಬೆಯನ್ನು ವರಿಸಬೇಕು ಅದರಲ್ಲಿ ನ್ಯಾಯ ಯೇನು ಹೇಳಿ?

ಅವ್ಳ ಅಪರಾಧ ಮಾಡ್ಲಿಲ್ಲ ಅಂತ ಹೇಳ್ತಿರೊ? ಅವಳು ನಿರಪರಾಧಿಯೊ?

ಇಲ್ ಕೇಳಿ, ಅವಳು ತಪ್ಪಿದ್ದಕ್ಕೆ ಪ್ರಾಯಶ್ಚಿತ ಅವಳಿಗೂ ಆಗ್ಲಿ, ನ್ಯಾಯಾಧೀಶ ಇಬ್ರಿಗೂ ಶಿಕ್ಷೆ ಕೊಡ್ಲಿ. ನನ್ನ ಆಕ್ಷೇಪ ಇಲ್ಲ. ಆದರೆ ಅವಳಿಗೆ ಶ್ರೀರಕ್ಷೆ ಕೊಡ್ತೀರಿ ತಾವು.

ನೀವು ಶ್ರೀರಾಮ ದೇವರೇನೂ ಅಲ್ಲ. ಈಗ, ಆರ್ತರಿಗೆ ರಕ್ಷಣೆ ಕೊಡೋಕ್ ಹೌದು ಶ್ರೀಮಠದವರು. ಯಾರಿಗೆ? ಕಣ್ಣೀರ್ ಹಾಕ್ದವರಿಗೆಲ್ಲ ನಿಮ್ಮ ಮಠದಲ್ಲಿ ಸ್ಥಳ ಕೊಡ್ತೀರೊ?

ಇನ್ನು ನಿಮ್ಮಲ್ಲಿ ನನ್ನ ವಾದ ಇಲ್ಲ. ಆಗೋದಿಲ್ಲ ಆಗೋದಿಲ್ಲ ಆಗೋದಿಲ್ಲ. ಯೆಲ್ಲಿಯ ಗುರು? ನನ್ನ ವಿರೋಧಪಕ್ಷದ ನಾಯಕತ್ವ ಬಂದದೆ ನಿಮ್ಗಷ್ಟೆ.

ಕಲ್ಲಿನ ದೋಣಿಯಲ್ಲಿ ಕೂತಿದ್ದೀರಿ ಮುಳುಗಲಿಕ್ಕೆ ಬಹಳ ಹೊತ್ತಿಲ್ಲ.

ಗುರುಗಳೇ ಆತ್ಮವಿಶ್ವಾಸ. ನೀವು ಬಿಡಿ ಇವನಲ್ಲಿ ಪ್ರಾಮಾಣಿಕತೆ ಇದೆಯೋ, ದೇವರಲ್ಲಿಯಾದರೂ ಅಡ್ಡ ಸವಾಲು ಹಾಕುವವನೆ. ಯಮ ಬಂದ್ರೂ ಕೂಡಾ ಯೇನ್ ನಮ್ಮ ಊರಲ್ಲಿ ತಿರುಗೀ ಅಂತ ಕೇಳ್ವವನೇ ನಾನು.

ಯೆಳ್ಳಿನ ಯೇಳು ಭಾಗದಷ್ಟು ನಿಮ್ಮ ಶಿಷ್ಯನಾದಂತಹ ಭೀಷ್ಮನಲ್ಲಿ ಕಳಂಕ ಇರ್ತಿದ್ರೆ ಗುರುಗಳೇ, ನಿಮ್ಮ ಹೆಸ್ರು ಕೇಳ್ವಾಗ ನನ್ನ ಜ್ವರ ಬರ್ತಿತ್ತು. ಕೈಕಾಲ್ ನಡ್ಗತಿತ್ತು. ಯಾಕೆ? ಶ್ರೀರಾಮಚಂದ್ರಮ, ನೀವು ಬರ್ತಿರಿ ಅಂತಾಗ್ವಾಗ ಯಾಕೆ ಹಿಂದೇಟ್ ಹಾಕ್ಲಿಲ್ಲ ಹೇಳಿ. ದಶರಥ ಯಾಕೆ ಕಣ್ಮುಚ್ಚಿ ದೇವರ ಧ್ಯಾನ ಮಾಡಿದ?

ರಾಮನಲ್ಲಿ ಪ್ರಾಮಾಣಿಕತೆ ಇತ್ತು. ಎದೆಗಾರಿಕೆ ಅಲ್ಲ. ಪ್ರಾಮಾಣಿಕತೆ.

ಈ ಯಾವತ್ತೂ ಕಳ್ಳತನದ ಸ್ವತ್ತಿಡ್ಕೊಂಡವ, ಕಿವಿಗೆ ವಜ್ರದ ವಂಕಿ ಹಾಕಿದರೂ ಒಬ್ಬ ಬಡವನನ್ನು ಕಂಡರೆ ಹೆದ್ರ್ತಾನೆ. ನೀವ್ ಆಲೋಚಿಸಿ ಭೀಷ್ಮನೇನು ಮೊಂಡನೇ? ಮೂರ್ಖನೇ? ಶುಂಠನೇ?

ಎಳವೆಯಿಂದ ನಿಮಗೆ ನನ್ನ ರಕ್ತದ ಗುಣ ಗೊತ್ತುಂಟು, ನನ್ನ ಸ್ವಭಾವ ಗೊತ್ತುಂಟು ಹಾಗಾಗಿ ಇವತ್ತು ಪರಶುರಾಮಾಚಾರ್ಯರು ಬಂದರೂ ಇವ ಬಗ್ಗೋದಿಲ್ಲ, ಜಗ್ಗೋದಿಲ್ಲ. ಅಂದ್ರೇನೀಗ ನಾನು ಮದೋನ್ಮತ್ತನೊ? ನನಗೆ ಬುದ್ಧಿ ಬೆಳೀಲಿಲ್ಲೊ? ನಿಮ್ಮಲ್ಲಿ ನನಗೆ ವಿನಯ ಇಲ್ವೊ?

ಹಾಗಾದರೆ ವಿನಯ ಇದ್ದೂ ಈ ರೀತಿಯಾಗಿ ತೀವ್ರವಾಗಿ ನಾನ್ಯಾಕೆ ಖಂಡಿಸ್ತೇನೆ, ವಿರೊಧಿಸ್ತೇನೆ ಹೇಳಿ?

ನನ್ನ ಪಕ್ಷಕ್ಕಷ್ಟು ಬಲ ಇದೆ. ಆದಕಾರಣ ಬಲ ಇದ್ದ ಪಕ್ಷ ದುರ್ಬಲ ಪಕ್ಷದ ನಾಯಕನನ್ನು ನಾಯಕ ಅಂತ ಯಾಕ್ ಅಂಗೀಕರಿಸ್ಬೇಕು. ನೀವು ಪಲ್ಲಕ್ಕಿಯಲ್ಲಿ ಕೂತ್ಕೊಳ್ಳಿ, ನೀವು ಅರಮನೆಗೆ ಬನ್ನಿ ನಾನ್ ಪಾದ ಪೂಜೆ ಮಾಡ್ತೇನೆ. ನಿಮ್ಮೆ ಬೇಡ್ದೇ ಇದ್ದದ್ದು ಇದು.

ನೀವು ನಮ್ಮ ದೇಶದ ಆಡಳಿತವನ್ನೇ ಅಲ್ಲೋಲ ಕಲ್ಲೋಲ ಮಾಡ್ಲಿಕ್ಕೆ ಹೋರಟಿದ್ದೀರೋ ಮಹಾಶಯರು? ನನಗೆ ಮದುವೆ ಮಾಡಿಸಿದರೆ ಮತ್ತೆ ವಿಚಿತ್ರವೀರ್ಯನಿಗೆ ಹೊಡ್ತ  ಇಲ್ವೊ?

ಆ.. ಹಾಗೆಲ್ಲಾ ಆಗ್ಲಿಕ್ಕೆ ನಾನಿದ್ದೇನಲ್ಲ ಬದುಕಿ, ಕೇವಲ ಬ್ರಾಹ್ಮಣರ ಕೈಯಲ್ಲಿ ಆಡಳಿತದ ಸೂತ್ರ ಇದ್ದಾವಾಗ ಹಾಗೆಲ್ಲ ಮಾಡಿದ್ ಉಂಟು. ಈಗ ಇಲ್ಲೊಬ್ಬ ಕ್ಷತ್ರಿಯ ಬದುಕಿದ್ದಾನೆ.

ನಾನು ಇಚ್ಛಾಮರಣಿ, ಹಾಗಾದರೆ ಮರಣದ ಪ್ರಶ್ನೆ ಇಲ್ಲ. ಇಲ್ಲಿ ಯಾರು ಸೋತರು ಧನ್ಯೋಸ್ಮಿ

ಯಾಕೆ ಹೇಳ್ತೇನೆ? ಕಾಶಿಯಲ್ಲಿ ಇದು ಇತ್ಯರ್ಥ ಆಗ್ಲಿಲ್ಲ ಯಾರ್ ಬಲವಂತ ಅಂತ ಅಲ್ವೋ? ಇಲ್ಲೇ ಆಗಲಿ.

ಎಲ್ಲರನ್ನೂ ಗೆಲಿದವ ಭೀಷ್ಮ! ಹಾಗಾದರೆ ಇದರ ಬೀಜವೇ ಅಲ್ಲಿ, ಬೇಹಿನಚರ ಬಂದು ನನ್ನಲ್ಲಿ ಹೇಳ್ವಾಗ ನನ್ನ ಮಂತ್ರಿಯನ್ನು ಕರೆದು ಹೇಳಿದ್ದೆ ನಾನು.

ಸುರರ ಸಭೆಯೊಳು ಹಿಂದೆ ವರ್ತಮಾನದ ಕಾಲದಲ್ಲಿ ಕ್ಷತ್ರಿಯರಲ್ಲಿ ಯಾರು ವಿಕ್ರಮಿ? ಅಂತ ಹೇಳ್ವಾಗ ದೇವ ಋಷಿ ನಾರದರು ನನ್ನ ಹೆಸರು ಹೇಳಿದ್ದರಂತೆ. ನನಗೂ ಇದ್ದ ಪ್ರಶಸ್ತಿ ಅದೇ. ಅದಲ್ವೇ ಎಂಬ ಸಂದೇಹ ಕಾಶೀರಾಜನಿಗೂ ನಮ್ಮ ಮಾಂಡಲೀಕರಿಗೂ ಬಂತು. ಈಗ ಅದು ಹಾಗಾಗ್ಲಿಕ್ ತೊಡಗ್ಯದೆ.. ನಿಮ್ಮನ್ನು ನಾನು ಜಯಿಸಿದೆ ಅಂತಾದ್ರೆ ಮಾಂಡಲೀಕರು ಸುಮ್ಮನೇ ಇರ್ತಾರೆ. ಸಾಲ್ವನೂ ಹಲ್ಬೋದಿಲ್ಲ. ಅಂಬೆಯಂತೂ ನನ್ನ ಹೆಸ್ರ ಹೇಳೋದಿಲ್ಲ. ನಮ್ಮ ರಾಷ್ಟ್ರ ಭದ್ರವಾಗ್ತದೆ. ನಾ ಗೆದ್ದೆ,

ಅದೆಲ್ಲಾ ಊರವ್ರ ಮಾಡೋದು .

ಕಾಣಿಕೆ ಹಾಕೋದು ಗುರುವಿಗೋ ಶಿಷ್ಯನಿಗೋ ಅಂತಂದ್ರೆ ಒಳ್ಳೆ ನಡತೆಯ ಶಿಷ್ಯ ಆದ್ರೆ ಹೇಳಿಯಾನು... ತಿಳೀತಲ್ವ? ಆವಾಗ ಸಾರ್ವಜನಿಕರ ಮುಂದೆ ಇದನ್ನ ಹೇಳ್ತಾನೆ. “ನಾನು ಗುರುವನ್ನು ಸಣ್ಣದು ಮಾಡಿದವನಲ್ಲ. ನನ್ನ ನಡತೆಯಿಂದ ಗುರುಗಳಿಗೆ ಯೇನಾದ್ರೂ ಕೋಪ ತಾಪ ಬಂದದ್ದಿದ್ರೆ ಈ ಸಭೆಯಲ್ಲಿ ಕ್ಷಮಾಯಾಚನೆ ಮಾಡ್ತೇನೆ ಅಂತ ಕಾಲ್ಮುಟ್ಟಿ ನಮಸ್ಕಾರ ಮಾಡ್ತಾನವ. ಅದು ಅಭಿವೃದ್ಧಿಯ ಲಕ್ಷಣ. ಹೌದಲ್ಲ? “ನಮ್ಮಗುರುಗಳು ತಪ್ತಾರಯ್ಯ, ಸಮ ನಾನು” ಅಂತ ಹೇಳ್ವವ, ಅವ ಹೆಚ್ಚುದಿವೃಕ್ಕೆ ಬಾಳೋದಿಲ್ಲ. ಗುರುಗಳಲ್ಲಿ ಹಾರ್ದಿಕವಾದಂತಹ ಶ್ರದ್ಧೆ ಇಷ್ವೇಕು. ಊರವರು ಕಾಣಿಕೆ ಹಾಕ್ಲಿಕ್ಕೆ ಅವ ಗುರುವಿಗೆ ಶಿಷ್ಯ. ಆದ್ದರಿಂದ, ಓ ಗುರುಗಳೇ ನಿಜವಾಗಿ ತಮ್ಮಲ್ಲಿ ಗೌರವ ಉಂಟು. ಆದಕಾರಣ ಇಕೊಳ್ಳಿ ಈ ಚಾಡಿ ಮಾತೆಲ್ಲಾ ತಾವ್ ಕೇಳ್ಬಾರ್ದು.

ಇದು ಸತ್ಯಕ್ಕಾದ್ರೆ ಏನು ಗೊತ್ತುಂಟೆ? ಇದು ಕೆಲವರಿಗೆ ಸೂರ್ಯೋದಯಕ್ಕೆ ಸರಿಯಾಗಿ ಒಂದು ತಲೆನೋವು ಉಂಟಾಗ್ತದೆ. ಅದಕ್ಕೆ ಯಾವ ಔಷಧಿಯೂ ಇಲ್ಲ. ಈಗ

ನನ್ಗ ಆದದ್ ಅದೇ. ಇದೊಂದ್ ದೊಡ್ಡ ತಲೆನೋವಾಗ್ಯದೆ ಈ ಅಂಬೆ. ಹಾಗಾಗಿ ಯೇನ್ ಮಾಡ್ಲಿ ಹೇಳಿ ತಾವು ಅಪ್ಪಣೆ ಮಾಡಿದರೆ ...

ನಿವ್ ಹೇಳಿದ್ ವೊಳ್ಳೇದಾಯ್ತು. ನನ್ನಲ್ಲಿ ಸತ್ಯಧರ್ಮ ಇದ್ರೆ ಇಷ್ಟು ಜನವೂ ಇದ್ದಲ್ಲಿಂದ ಪರಶುರಾಮ ದೇವರು ಸೋಲಲಿ. ಸೋಲಲಿ, ಸೋಲಲಿ, ಅಂತ ಹೇಳ್ಯಾರಲ್ಲ?

ನಿಮಗೆ ಭೂಮಿಯೇ ರಥವೋ? ವೇದಗಳೇ ಕುದುರೆಗಳೊ? ಅಕೊಳ್ಳಿ... ನನಗೀಗ ರಥ ಬಂದದ್ದು ನೊಡಿದಿರೊ? ಎಲ್ಲಿಂದ ಇದು? ಮತ್ತೆ ನನ್ನ ಅಮ್ಮನ ಸುದ್ದಿ ನಿಮ್ಮ ಯಾಕೆ? ಹಾಗಾದರೆ ಪರಮಪಾವನೆಯಾದಂತಹ ಗಂಗೆ, ಸಕಲ ಜನರ ಪಾಪಕ್ಕೆ ಅವಳು ಸಾಕ್ಷಿ ಭೂತಳು. ಹೌದೊ? ಅಲ್ವೊ?

ಪಾಪಿಗಳೂ ಹೋಗಿ ಗಂಗೆಯಲ್ಲಿ ಮುಳುಗಿ ಬಂದರೆ ಪುನೀತರಾಗ್ತಾರಂತೆ, ನನ್ನನ್ನೇ ಹುಡುಕಿ ಆ ಗಂಗಾ ಮಾತೆ ನನ್ನ ರಥದಲ್ಲಿ ಕುಳಿತರೆ ಇನ್ನೂ ನಾನು ಪಾಪಿ ಅಂತ್ ಹೇಳೋ ಧೈರ್ಯ ನಿಮ್ಗುಂಟೊ?

ಯಾರಿಗೆ?

ಹ್ಹೆ ಮೊಲೆ ಕೊಡ್ಬೇಕಾದ ಕಾಲ್ದಲ್ಲಿ ಕೊಡ್ಲಿಲ್ಲ ಅವು. ಮಗನ ಬಗ್ಗೆ ವಾತ್ಸಲ್ಯ ಬಂತು ಈಗ ಬಂದದ್ ಅದ್ಕೊ?

ನಿಮ್ಮ ಪಾದದಲ್ಲಿ ಹುಟ್ಟಿರುವ ಗಂಗೆ ನೀವು ತ್ರಿವಿಕ್ರಮನಾಗಿರುವಾಗ್ಗ , ನಿಮ್ಮ ಮಗಳು! ಅಂಥವಳು ಅಂತ ಹೇಳುವ ಅಪ್ಪನೀವಾದ್ರೊ? ನನ್ನ ತಾಯಿಯ ಬಗ್ಗೆ ನಿಮ್ಮಿಲ್ಲದ್ದಿದ್ದಂತಹ ಪ್ರೇಮ, ವಿಶ್ವಾಸ, ವಾತ್ಸಲ್ಯ.. ಈ ಗಂಗಾ ತಟದಲ್ಲಿ ಹುಟ್ಟಿದ ಈ ಹೊಮ್ಮಾಲಿ ಹುಡುಗಿಯ ಬಗ್ಗೆ ಬಂತಲ್ಲ ಅಂತ ನನಗೆ ಪಶ್ಚಾತ್ತಾಪ. ಆದ್ದರಿಂದ ಚಿಂತಿಲ್ಲ. ಈಗ ನನ್ನ ತಾಯಿಯ ಅನುಗ್ರಹ ನನ್ನ ಉಂಟು. ದೇವತೆಗಳ ಅನುಗ್ರಹ ನನ್ನುಂಟು. ಯಾಕೆ?

ಅವರು ಕೊಟ್ಟ ಬಿರುದನ್ನು ನಾನು ಉಳಿಸಿದ್ದೇನೆ ಅಂತ ಅವರಿಗೊಂದು ಹೆಮ್ಮೆ. ಭೀಷ್ಮ ಎಂಬುದನ್ನು ಉಳಿಸಿದ್ದೇನೆ ಅಂತ. ಕೆಲವರು ಸಿಕ್ಕಿದ ಪ್ರಶಸ್ತಿಯನ್ನು ಎಲ್ಲಿಯೋ ಕಸದ ಬುಟ್ಟಿಯಲ್ಲಿ ಬೀಸಾಡ್ತಾರೆ. ಕೊಡುವವರು ಅಯೋಗ್ಯರು. ನನ್ಗೆ ಕೊಟ್ಟವರು ಯೋಗ್ಯರು. ಯೋಗ್ಯರಾದ ದೇವತೆಗಳು ಅದನ್ನು ಕೊಟ್ಟ ಬಳಿಕ, ಯೋಗ್ಯತೆ ಇದ್ದವನಲ್ಲಿ ಅದು ನಿಕ್ಷೇಪಿಸಲ್ಪಟ್ಟಿರುವಾಗ, ಅದನ್ ಬಿಸಾಡ್ಯೇನೋ ನಾನು? ಆದಕಾರಣ, ಗುರುಗಳೇ, ನನಗೂ ಸಕಲ ಸಂಪತ್ತು ಬಂತು. ಇದು ಭೌತಿಕವಾದದ್ದಲ್ಲ. ಅಲೌಕಿಕವಾದಂತಹ ಸಂಪತ್ತು. ಹಾಗಾದರೆ ಹೋರಾಟ ಮಾಡೋಣವೊ? ಮಾಡೋಣವೊ?

ಯೇನು?! ಇಪ್ಪತ್ತೊಂದು ಬಾರಿ ಕ್ಷತ್ರಿಯರನ್ನು ಕೊಂದೆ ತಾನು ಅಂತಲೋ ? ತಾವು ಮಾಡೋಕಾಗಿ ಬಂದದ್ದು ಗುರುಗಳೇ ಅದು. ಯಾಕೆ? ಆವಾಗ ಇವ ಹುಟ್ಟಿರ್ಲಿಲ್ಲ.

*//ಶಂಕರಾಭರಣ-ಮಧ್ಯೆ ಜನಿಸಲಿಲ್ಲ ಭೀಷ್ಮನಾಗ / ಇನಿತು ಶೌರ್ಯ ವಿರಲು ಎಣೆಯೆ |*

*ಘನ ಬಲಾಢ್ಯ ತೇಜ ಸುಭಟ । ರೆನಗೆ ಯಿರುವರೆ | ೨೨ |*

ನನ್ನಂತಹ ಕ್ಷತ್ರಿಯ ಆ ಕಾಲಕ್ಕೆ ಹುಟ್ಟಿಲ್ಲಲ್ಲ. ಅಂದ್ರೆ ನಿಷ್ಠಾವಂತ, ನಾನ್ ಹೇಳಿದ್ದು, ಆ ಅಂತಹ ಒಬ್ಬ ಕ್ಷತ್ರಿಯ ಇರ್ತಿದ್ರೆ, ಬ್ರಾಹ್ಮಣರಾದ ತಾವು ಈ ರಾಜಕೀಯಕ್ಕೆ ಪ್ರವೇಶಿಸಿ ಆ ಕಡೆಯಿಂದ ಜನಿವಾರವನ್ನೂ ಅಶುದ್ಧ ಮಾಡಿಕೊಂಡು, ಕೈಯನ್ನೂ ಅಶುದ್ಧ ಮಾಡಿಕೊಂಡು ಪೇಚಾಡ ಬೇಕಾದ ಅವಶ್ಯಕತೆ ಇತ್ತೋ ಹೇಳಿ.

ನಾನ್ ಹೇಳಿದ್ದು ಅದಲ್ಲ. ನನ್ನಂತಹ ಒಬ್ಬ ನ್ಯಾಯ ಪಕ್ಷಪಾತಿಯಾದಂತಹ ಕ್ಷತ್ರಿಯ ಇರುತ್ತಿದ್ರೆ ನಿಮಗೆ ಬೇಕಿತ್ತೋ ಆ ಕಷ್ಟ? ಹ್ಯಾ ... ಈಗ ನಾನಿದ್ದೇನಲ್ಲಾ? ಮತ್ತೆ ನಿಮ್ಗ  ಯಾಕೆ ಈ ಉದ್ಯೋಗ?

ಅಲ್ಲಲ್ಲ ಈಗ ಯಾವನಾದರೊಬ್ಬ ದುಷ್ಟಕ್ಷತ್ರಿಯನಿದ್ರೆ, ಆ ದುಷ್ಟಕ್ಷತ್ರಿಯನನ್ನು ದಮನಗೊಳಿಸಿ, ರಾಷ್ಟ್ರದ ಭದ್ರತೆಯನ್ನು ಉಳಿಸುವ ಭೀಷ್ಮ ಇರುವಾಗ ನಿಮಗೀ ಉದ್ಯೋಗ ಯಾಕೆ? ಆದ್ದರಿಂದ ಭೀಷ್ಮನಂಥವ ಹುಟ್ಟಿದಾಗ ನಿವ್ ಆಯುಧ ಕೆಳ್ಗಿಟ್ಟಿದ್ದೀರಿ. ರಾಮರಾಜ್ಯದ ಕಾಲದಲ್ಲಿ ನಿಮ್ಮ ಪ್ರವೇಶವೇ ಇಲ್ಲ. ಅಲ್ಲ, ಈಗ ಭೀಷ್ಮ ಹುಟ್ಟಿದ ಕಾಲಕ್ಕೆ ನೀವು ಬೇಡದ್ದಾಗಿ ಹಿಡ್ದದ್ ಅದು. ಅದನ್ನು ಕೆಳ ಇಳಿಸ ಬೇಕಾದದ್ದು ನನ್ನ ಕೆಲಸ. ಯಾಕೆ? ನೀವು ಕೆಳಗೆ ಇಡ್ಲಿಲ್ಲ ಅಂತಾದ್ರೆ ನಾನೊಬ್ಬ ದುರ್ಬಲ ಕ್ಷತ್ರಿಯ ಅಂತಾಗ್ತೇನೆ. ದೇಶದ ಆಡಳಿತಕ್ಕೂ ದೌರ್ಬಲ್ಯ ಬಂದದೆ ಅಂತ ಒಪ್ಪಿದ ಹಾಗ್ ಆಗ್ತದೆ. ಹಾಗ್ ಒಪ್ಪಿದರೆ ಇಷ್ಟರ ವರಗೆ ನಾನು ಮಾತಾಡಿದ್ದಷ್ಟೂ ಕೇವಲ ಬೂಟಾಟಿಕೆಯಾಗಿ ವರದಿಯಾಗ್ಲಿಕ್ಕಿದ್ದ ವಿಷಯವಾಗ್ತದೆ. ಹಾಗಾಗ್ಲಿಕ್ಕೆ ನಾನ್ ಬಿಡ್ಲಿಕ್ಕಿಲ್ಲ. ನಿಮ್ಮ ಕೈಯಲ್ಲಿ ಆಯುಧ ಕಂಡ್ರೆ ನಾನ್ ಸಹಿಸ್ಲಿಕ್ಕಿಲ್ಲ. ನಿಮ್ಮ ಕೈಯಲ್ಲಿ ನಾನು ಕಾಣಬೇಕಾದದ್ದು ದರ್ಭೆ, ಮಂತ್ರಾಕ್ಷತೆ ಮಾತ್ರ. ಈ ಕೊಳೆ ಇಲ್ಲಿ ಕೂಡದು. ಅದನ್ನು ನೀವಾಗಿ ಕೆಳಕ್ಕೆ ಹಾಕೋದಿಲ್ಲ ಅಂತಾದ್ರೆ ಹಾಕಿಸ್ಬೇಕಾದ್ದು ನನ್ನ ಕೆಲಸ. ಹೇಗೆ? ದೊಡ್ಡಲ್ಲ, ಇದ್ ಅಗತ್ಯ ಇಲ್ಲ ಭೀಷ್ಮನ ಮುಂದೆ ಅಂತ ನಿಮಗೂ ಅನ್ನಿಸುವುದು, ತೋರಿಸುವುದು ಪೆಟ್ಟಿನಿಂದಲೇ.

ಸಾಧ್ಯ ಆದೀತೋ ಅಂತ ಕೇಳ್ಬೇಡಿ. ಆಮಟ್ಟಿಗೆ, ಯಾವ್ ಮಟ್ಟಿಗೆ? ಆ ಪೆಟ್ಟಿನ ಮಟ್ಟಿಗೆ, ನಿಮಗಿಂತ ಹೆಚ್ಚಿನ ಗುಟ್ಟು ನನ್ಗ್ ಗೊತ್ತುಂಟು. ಹಾಗಾಗಿಯೇ ನನ್ನ ಹೆಸ್ರು ಕೇಳ್ವಾಗಲೇ ಅವರೆಲ್ಲಾ ಆಯುಧ ಕೆಳ್ಗ ಹಾಕೋದು. ಆದ್ದರಿಂದ ಭೀಷ್ಮನ ಮುಂದೆ ನಿಂತ ಕ್ಷತ್ರಿಯನಿಲ್ಲ. ನೀವ್ ಅಷ್ಟೆಲ್ಲಾ ಯಾಕ್ ಮಾತಾಡ್ತೀರಿ? ಕ್ಷತ್ರಿಯರು ನಾವು. ನಾವು

ಬುಸುಗುಟ್ಟುವ ಜಾತಿ, ಸರ್ಪದ ಜಾತಿ, ನೋವಾದರೆ ಕಚ್ಚುವ ಜಾತಿ. ಆದ್ದರಿಂದ ನಿಮ್ಮಲ್ಲಿ ನನ್ನದು ಕ್ಷತ್ರಿಯೋಚಿತವಾದ ಸವಾಲು. ನೋಡೋಣವೋ? ಅಲ್ಲಲ್ಲ ಅದಲ್ಲ. ನೀವ್ ಇಪ್ಪತ್ತೊಂದ್ ಸಲ ಪ್ರದಕ್ಷಿಣೆ ಮಾಡಿ ಯೇನ್ ಮಾಡಿದ್ದೀರಿ. ನಾನ್ ಒಂದ್ ಬೆಟ್ ಮಾಡಿ ಒಬ್ಬ ನಮ್ಮ ಜಾತಿಯ ಹುಡುಗನನ್ನು ತೋರಿಸಲೊ? ಕ್ಷತ್ರಿಯ ಹುಡುಗನನ್ನು? ನನ್ನ ಸಮಕ್ಷಮದಲ್ಲಿ ನೊಡ್ವ  ನೀವ್ ಅವನಿಗೊಮ್ಮೆ ಹೊಡಿರಿ.

ಯೇನು, ಕ್ಷತ್ರಿಯರೆಲ್ಲ ನಿರ್ವೀರರಾಗಿದ್ದಾರೆ? ನಿಮ್ಮ ಸಂಬಂಧಿಯಾದಂತಹ ನಿಮ್ಮ ಒಬ್ಬ ಅಜ್ಜ ಕ್ಷತ್ರಿಯರ ಮರ್ಯಾದೆ ತೆಗಿದ್ದಾರೆ "ದಿಗ್‌ಬಲಂ, ಕ್ಷತ್ರಿಯಬಲಂ, ಬ್ರಹ್ಮತೇಜೋಬಲಂಬಲಂ "ಆ ವಿಶ್ವಾಮಿತ್ರ ಗೋತ್ರದ ಯಾವತ್ತೂ ಮಾತನ್ನು ನೀವು ಜಮದಗ್ನಿ ಗೋತ್ರದವರು ಬಾಯ್ ಪಾಟ ಮಾಡಿಕೊಂಡಿದ್ದೀರಿ. ಕ್ಷತ್ರಿಯ ಬಲ ದಿಗ್‌ಬಲವೊ? ಅದು ದುರ್ಬಲವೊ? ಅದು ದುರ್ಬಲವಾದರೆ "ಬ್ರಹ್ಮತೇಜೋಬಲಂಬಲಂ" ಬೆಳೆದೀತೋ ಅದು? ಬ್ರಾಹ್ಮಣರ ಜನೀವಾರದ ಮಡಿ ಉಳ್ದದ್ದೇ ಕ್ಷತ್ರಿಯರ ಬಾಹು ಬಲದಿಂದ. ಹಾಗಿರುವಾಗ ಬ್ರಾಹ್ಮಣರಾದವರು ಕ್ಷತ್ರಿಯರು ದುರ್ಬಲರು ಅಂತಂದ್ರೆ ಅರ್ಥ ಯೇನು? ನಮ್ಮ ಮನೆಯ ಬಾಗಿಲೇ ದುರ್ಬಲವಾಗಿದೆ ಅಂತ ಹೇಳಿದ ಹಾಗೆ, ಹಾಗಾದರೆ ಕಳ್ಳ ಒಳಗೆ ಬತ್ತಾನೆ ಅಂತಲೇ ಅರ್ಥ. ನಿಮ್ಮ ಬ್ರಾಹ್ಮಣ್ಯದ ರಕ್ಷಣೆ ನಮ್ಮ ಕ್ಷಾತ್ರವರ್ಚಸ್ಸಿನಿಂದಲೇ ಆಗದೆ ಹೊರತು ನಿಮ್ಮ ಬ್ರಾಹ್ಮಣ್ಯದಿಂದ ನನ್ನ ಕ್ಷಾತ್ರವರ್ಚಸ್ಸು ರಕ್ಷಿಸಲ್ಪಡೋದಿಲ್ಲ. ಇದು ನನ್ನ ಸ್ವಾಭಿಮಾನ. ಈ ಸ್ವಾಭಿಮಾನವನ್ನು ನೀವು ಕೆದಕಿದರೆ ಇದಕ್ಕೆ ಪೆಟ್ಟಲ್ಲದೇ ಯೋಚನೆಯಿಲ್ಲ. ಮೊದಲು ಮಾಧ್ವ ಯುದ್ಧ.

***(೨೮ ದಿವಸಗಳ ಕಾಲ ಯುದ್ಧ ನಡೆಯುತ್ತದೆ. ಭೀಷ್ಮ ಸೋಲುವವನಲ್ಲ ಎಂದು ಅಶರೀರವಾಣಿ ಆಗುತ್ತದೆ.)***

ಅದ್ ಯೇಂಥದ್ದದ್ದು? ಕಿಣಿ ಕಿಣಿ ಅಂತ ಹಿಂದಿನಿಂದ ಶಬ್ದ ಕೇಳಿದ್ದು!! ಅದ್ ಯಾರದು ಹೇಳಿದ್ದು? ಈ ಇಡೀ ಪ್ರಕರಣಕ್ಕೆ ಸೂತ್ರಧಾರಿಯಾಗಿ ನಿತ್ತವರು ಹ್ಞ , ದೇವತೆಗಳು. ಧರ್ಮದೇವತೆಗಳು,

ಹ್ಞ.. ಅಕೊಳ್ಳಿ... ಅಕೊಳ್ಳಿ, ನೀವು ಸೋತದ್ದಲ್ಲ ಗುರುಗಳೇ, ನಾನ್ ಆವಾಗ ಹೇಳಿದ್ದೆ. ನೀವ್ ಕೂತದ್ದು ತೂತಾದ ದೋಣಿಯಲ್ಲಿ; ಮತ್ತೆ ಪಾರಾಗೋದ್ ಹ್ಯಾಗೆ?

ನಿಮ್ಮ ಪಕ್ಷ ಸೋತದ್ದು. ನಿಮಗೆ ಬಂದ ನಾಯಕತ್ವ ಆಕಸ್ಮಿಕ ಆಗಂತುಕ. ಇದು ಮೂರು ಮುಕ್ಕಾಲ್ ಘಳಿಗೆ ನಾಯಕತ್ವ ಅಲ್ವೊ? ಅಲ್ಲ ನೀವೆಲ್ಲಿ ಸೋಡ್ತೀರಿ? ನನ್ನ ಗುರುಗಳು ಸೋತರೆ ಶಿಷ್ಯ ನಾನ್ ಜಯಿಸ್ತೇನೋ? ಪರ್ಯಾಯದಿಂದ ಈ ಸೋಲ್ ಯಾರದ್ದು ಹೇಳಿ, ಅವಳದ್ದು. ಮಹಾ ಸೋಲಿನ ವ್ಯಕ್ತಿ ಅವಳು.

ಅವಳು ಹುಟ್ಟಿ ಅವಳ ಅಪ್ಪ ಸೋತ. ಅವಳನ್ನು ನಂಬಿ ಸಾಲ್ವ ಸೋತ. ತಂದು ನಾನಿಷ್ಟು ಸೋತೆ. ಕೊನೆಗೆ ನೀವು ಸೋತಿರಿ. ಏಕಲವ್ಯ ಅವನೂ ಸೋತ ಅಲ್ವೊ?

ನೋಡಿ, ಹಾಗಾದರೆ ಈ ಸೋಲಿದ್ದವಳನ್ನು ನಂಬಿ ಯಾರ್ ಯಾರ್ ಬಾರೆ, ಅದಿಷ್ಟೇ-ಈ ಕಬ್ಬಿಣದೊಟ್ಟಿಗೆ ಕೂಡಿದ ಬೆಂಕಿ ಉಂಟಲ್ಲ? ನಿಜವಾಗಿ ಆದ್ರೆ ಬೆಂಕಿ ಪೆಟ್ಟ್ ತಿನ್ವಂಥಾದ್ದೋ ? ಆದರೆ ಅದಕ್ಕೆ ತಿನ್ನುವ ಯೋಗ ಬಂದದ್ ಯೇಲ್ಲಿಂದ? ಕಬ್ಬಿಣದ ಸಹವಾಸ ಮಾಡಿದ್ದರಿಂದ. ಅಲ್ವೊ? ಅಷ್ಟೇ ತಿಳ್ಕೊಳ್ಳಿ, ನೀವು ನನಗೆ ಸೋತೆ ಅಂದ್ರೆ ಅರ್ಥಯೇನು? ಭೀಷ್ಮನಲ್ಲಿ ಈ ವಿಚಾರದಲ್ಲಿ ಸತ್ಯ ಸಂಧತೆ ಇದೆ, ಧರ್ಮ ಇದೆ. ಹಾಗಾದರೆ ಆ ಸತ್ಯ ಧರ್ಮ ಜಯಿಸಿತು. 'ಯತೋ ಧರ್ಮಃ, ತತೋ ಜಯ'. ಇದೇ ಅವದ್ದೊಬ್ಬದ್ದೇ ತಪ್ಪಲ್ಲ ಗುರುಗಳೇ, ಅವ್ಳ್ ಅಪ್ಪನೂ ಹಾಗೆ ಕಾಶೀರಾಜ. ಅಲ್ವೊ?

ಈ ಹಿರಿಯರು ಮಾಡಿದ ಪಾಪ ಬೆಳ್‌ದೂ, ಬೆಳ್‌ದೂ, ಬೆಳ್‌ದೂ, ಮತ್ತೆ ಸಂತಾನದಲ್ಲಿ ಅದು ತಲೆಯೆತ್ತಿ ಕಾಣದೆ. ಅಯ್ಯೋ ಪಾಪ ಅಂತ ನನ್ಗ್ ಈಗಲೂ ಅನ್ನಿಸ್ತದೆ. ಆದ್ರೆ ಯೇನ್ ಮಾಡೋಣ ಹೇಳಿ? ನಮ್ಮ ರಾಜನೀತಿಯ ಪ್ರಕಾರ ಪತಿವ್ರತೆಯಾದ ಹೆಂಡತಿಯೊಬ್ಬಳು ಕಳ್ಳನಿಗಿದ್ರೆ.. ಕಳ್ಳನಿಗೆ... ಪತಿವ್ರತೆಯಾದ ಹೆಂಡತಿಯಿದ್ದಾಳೆ. ಆದ್ರೆ ಯೇನ್ ಮಾಡೋಣ ಆಕಳ್ಳ, ವಧಾರ್ಹ ಅಂತ ನ್ಯಾಯಾಂಗದಲ್ಲಿ ತೀರ್ಮಾನ ಆದರೆ ಪತಿವ್ರತೆಯ ಗಂಡನಲ್ಲಾ ಎಂಬುದರಿಂದ ಅವಳಿಗೆ ವೈಧವ್ಯ ಬರ್ತದೆ ಅಂತ ಇವ್ನನ್ನು ಬಿಟ್ ಬಿಡ್ಲಿಕ್ ಆಗ್ತದೋ? ಹಾಗಾಗಿ ಊರ್ನಲ್ಲೊಂದು ಗಾದೆ ಉಂಟು. “ಕಳ್ಳನ ಹೆಂಡತಿ ವಿಧವೆ” ಹಾಗಾದರೆ ಅವಳಿಗೆ ವೈಧವ್ಯ ಯಾಕ್ ಬಂತು? ಅವಳ ಪ್ರಾರಬ್ಧ,

ಒಳ್ಳೆಯವ ಗಂಡ ಸಿಗ್ತಿದ್ದಿಲ್ವೊ? ಕಳ್ಳ ಗಂಡನೇ ಯಾಕೆ ಸಿಗ್ಬೇಕು?

ಆದ್ದರಿಂದ ಕಾಶೀರಾಜನ ಪುತ್ರಿಯಾಗಿ ಈ ಅಂಬೆಯ ಪ್ರಾರಬ್ದದ ಹಿನ್ನೆಲೆಯನ್ನು ಅವಲೋಕಿಸಿ ಇವಳಿಗೆ ಹೀಗ್ ಆಸ್ಬೇಕಾದದ್ದು ವಿಧಿ. ಅದಕ್ಕೆ ನಾವ್ ಪಶ್ಚಾತ್ತಾಪ ಪಟ್ಟು ಯೇನೂ ಪ್ರಯೋಜನ ಇಲ್ಲ. ಆದಕಾರಣ ಮುಕ್ತಾಯ ಆಯ್ತು. ಅಂಬೆ ಅಗ್ನಿ ಪ್ರವೇಶ ಮಾಡಿ, ಶಿಖಂಡಿಯಾಗಿಯಾದ್ರೂ ನಿನ್ನನ್ನು ಎದುರಿಸುತ್ತೇನೆ ಎನ್ನುತ್ತಾಳೆ.

ಹ್ಞ.. ಹೋಗ್ಲಿ, ಒಳ್ಳೇದಾಯ್ತು. ನೋಡ್ವ  ಅಂತ ಹೇಳಿದ್ದು ತಮ್ಮ ದೊಡ್ಡಸ್ತಿಕೆ. ಅದ್ ಬಿಡಿ. ಇಂಥದ್ದೆಲ್ಲಾ ಒಂದು ಸಾವಿರ ಜನ ಯೆಲ್ಲಾ ಶಪಥ ಮಾಡಿದ್ದಾರೆ. ಈಗ ತಾವ್ ಯೇನ್ ಹೇಳ್ತೀರಿ? ನಾನೊಬ್ಬ ಹೀಗಿರುವುದಕ್ಕೆ ಮನೆವೊಳಗೇ ಕೂತ್ಕೊಂಡು ಯೆಷ್ಟ್‌ಜನ ಶಾಪ ಕೊಡ್ತಾರೋ ಗೊತ್ತಿಲ್ಲ.

ಹ್ಞ.. ಅದೂ ನನ್ಗ್ ಒಳ್ಳೆದು. ಅವ್ಳ್ ಹೇಳಿದ್ ಯೇನಂತ?

“ನಿನ್ನನ್ನು ಇದಿರಿಸಿ ಜಯಿಸುವ ಗಂಡಸು ಮೂರು ಲೋಕದಲ್ಲಿಲ್ಲ . ಹೆಣ್ಣಿಗಂತೂ ನೀನು ಸೋಲೋದಿಲ್ಲ. ಇದ್ ಯೆರಡೂ ಅಲ್ಲದೆ ಆಲೋಚನೆ ಮಾಡ್ತೇನೆ” ಅಂತ. ಅಂಥದ್ ಬಂದ್ರೆ ನಾನ್ ಆಯುಧವನ್ನೇ ಹಿಡಿಯೋದಿಲ್ಲ. ಮುಗೀತಲ್ಲ? ಯಾಕೆ ಹೇಳಿದ್ದು? ಅವ್ಕ್ ಹಾಗಾಗೂದ್ ಬೇಡ ಅಂತ.

ಇಷ್ಟರವರೆಗೆ ಮಾಡಿದ ವ್ಯಾಪಾರ ಸಾಕು. ಇನ್ನು ಮತ್ತೊಮ್ಮೆ ಹುಟ್ಟಿ ಹಾಗೆಲ್ಲಾ ಆಗೋದ್ ಬೇಡ. ಅದ್ರೆ ಈ ರೀತಿಯಾದ ಪ್ರತಿಜ್ಞೆ ಮತ್ತು ಹಠ ಮಾಡಿ ಹುಟ್ತಾಳೆ ಅಂತಾದ್ರೆ ಗುರುಗಳೇ ನನಗೂ ಇಚ್ಛಾಮರಣಿಯಾದ್ರೂ, ಹೋಗ್ಲಿಕ್ ವೊಂದ್ ಕಾರಣ ಬೇಡ್ವೋ?

ನಿಮ್ಮಲ್ಲಿ ಈಗ ಯಥಾರ್ಥ ಹೇಳ್ತೇನೆ. ಇದೀಗ ನಾನು ಬೇಕಾಗಿ ಹಿಡಿಯೋದಲ್ಲ. ನಾನೀಗ ಯೆಂತದ್ದೆಲ್ಲ ಹಿಡ್ಕೊಂಡಿದ್ನಲ್ಲ? ಇದ್ ನನ್ಗ್ ಬೇಕಾಗಿ ಅಲ್ಲ. ಯಾಕೆ? ನನ್ಗ್ ಬೇಕಾದ್ದು ನನ್ಗ್ ಸಿಕ್ಕಿಲ್ಲ. ನಾನು ಬೇಡ ಅಂತ ಹೇಳಿದ್ದು ನನ್ನನ್ನು ಬಿಟ್ಟು ಹೋಗ್ಲಿಲ್ಲ. ಬೇಕೂ ಬೇಡ ಯೇರಡೂ ಅಲ್ಲದೇ ಪಾತ್ರಕ್ಕೆ ಬಂದದ್ದು ಪಂಚಾಮೃತ ಅಂತ ನಾನಿಲ್ಲಿರೋದು.

ಎಷ್ಟು ಕಾಲ ನಾನು ಈ ರಾಜದಂಡವನ್ನೂ ಆಯುಧವನ್ನೂ ಹಿಡ್ಕೊಂಡು ಸಿಂಹಾಸನ ರಕ್ಷಣೆ ಮಾಡಿ ಇರೋದ್ ಹೇಳಿ? ಹಾಗಾದರೆ ಆ ಸಂದರ್ಭಕ್ಕೆ ಇದೊಂದ್ ಮಾರ್ಗ ಹೌದೋ ಅಲ್ವೋ? ಆದ್ದರಿಂದ ಒಳ್ಳೆಯದನ್ನು ಮಾಡಿದವನಿಗೆ ಮುಂದೆ ಫಲವೂ ಒಳ್ಳೇದಾಗದೆ. ಅದು ಶಾಪವೋ, ಕೋಪವೋ, ತಾಪವೋ ಅಲ್ಲವೇ? ದಶರಥನಿಗೆ ಬಂದ ಶಾಪ, ಅದು ಶಾಪವೋ? ಅವನ ಸಂತಾನಾಭಿವೃದ್ಧಿಗಿದ್ದ ಬೀಜ ಅಲ್ವೋ ಅದು? ಹಾಗೆ ಒಳ್ಳೆಯವರಿಗೆ ಮತ್ತೊಬ್ಬರು ಮಾಡುವ ದ್ರೋಹವೂ ಕೂಡ ಉಪಕಾರವೇ ಆಗ್ತದೆ. ಆರೋಗ್ಯ ಇದ್ದವನಿಗೆ ಏಕಾದಶಿ ಮಾಡಿದರೆ ಆರೋಗ್ಯ ವೃದ್ಧಿಯಾಗೋದಿಲ್ಲೊ?

ಅ.. ನೀವು ಭಾರ್ಗವ ವಿಜಯ ಮತ್ತೊಮ್ಮೆ ಮಾಡ್ವ ಅಂತ ಬಂದಿರಿ... ಇದು ನಮ್ಗ್ ಇಬ್ಬರಿಗೂ ಸಂತೋಷ. ಅಂಬಾವಿಜಯ ಆಗ್ಲಿಲ್ಲಲ್ಲ?



## ೪ ಪಾಂಚಾಲ ರಾಜಕಾರಣ

ದ್ರುಪದ

(ದ್ರೋಣರ ನೇತ್ರತ್ವದಲ್ಲಿ - ದ್ರುವನ ಮೇಲೆ ಧಾಳಿ ನಡೆದಿದೆ)

|*ಸೌರಾಷ್ಟ್ರ-ತ್ರಿವುಡೆ*| *ಭಲರೆ ಬಂದೀಗೆನ್ನ ಪುರವನು / ನೆರವಿ ಮುತ್ತಿಹುದೇಕೆ ಪೇಳ್ವೆ* |

*ತಲೆಯ ಕಾಯ್ದುನದಾರು ಪೇಳ್ವೆ* | *ತೆರಳು ಬೇಗ* || *೨೩* |

ಅಕಸ್ಮಿಕ ಇದು. ನೀವೆಲ್ಲ ಮೀಸೆ ಮೂಡದೇ ಇದ್ದಂತಹ ಎಳೆಯವರು. ಕ್ಷತ್ರಿಯರಾದರೆ ಒಬ್ಬ ಕ್ಷತ್ರಿಯ ರಾಜನ ಮೇಲೆ ದಂಡೆತ್ತಿ ಬರುವುದು ಅಪರಾಧವೂ ಅಲ್ಲ; ಅಪಚಾರವೂ ಅಲ್ಲ. ಇನ್ನೂ ನಿಮ್ಮ ಕಾಲ್‌ನಲ್ಲಿ ನೀವು ನಿಲ್ಲದೇ ಇದ್ದಂತಹ ಸ್ಥಿತಿಯಲ್ಲಿ, ಒಬ್ಬ ಮಹಾರಾಜನನ್ನು ಯುದ್ಧಕ್ಕೆ ಆಹ್ವಾನ ಮಾಡೋದು ಅಂತಂದ್ರೆಯೇನು? ಬಂದ ಕಾಲದ ದೋಷವೋ ಅಲ್ಲ ನೀವು ಹುಟ್ಟಿದ ನೆಲದ ದೋಷವೋ? ಯೇನು? ಯಾರು ಇದಕ್ಕೆ ನಿಮ್ಮ ಹಿನ್ನೆಲೆಯಾಗಿ ಇದ್ದವರು? ಯೆಲ್ಲಿಂದ ನಿಮಗೆ ಪರವಾನಿಗೆ?

ಏನು? ನೀನೆ! ದೇವರು ಆಯುಷ್ಯ ಕೊಟ್ರೆ, ಸದ್ಬುದ್ಧಿ ಬಂದ್ರೆ, ಹಸ್ತಿನಾವತಿಯ ಉತ್ತರಾಧಿಕಾರಿ ನೀನು.

ಓಹೋ! ಇದೀಗ ಗುರುಕುಲದಲ್ಲಿ ನಿಮ್ಮ ಆಚಾರ್ಯನ ಆಜ್ಞೆಯಂತೆ ನೀವು ದಂಡೆತ್ತಿ ಬಂದದ್ದು ...?

ಚೆಂತಿಲ್ಲ, ಶಿಷ್ಯರಿಗೆ ಕೇವಲ ವಿದ್ಯೋಪದೇಶ ಮಾಡಿದ್ದು ಮಾತ್ರ ಅಲ್ಲ, ಶಿಷ್ಯರನ್ನು ವೊಂದು ಉದ್ದೇಶಕ್ಕಾಗಿ ತಯಾರು ಮಾಡಿ, ಅಲ್ಲವೆ? ಅಂತೂ ದ್ರೋಣನಿಗೆ ನೀವು ನಿಮ್ಮ ವ್ಯಕ್ತಿತ್ವವನ್ನು ವಿಕ್ರಯಿಸಿಕೊಂಡಿದ್ದೀರಿ. ಹೋಗ್ಲಿ ಬಿಡಿ. ಹಾಗಾದರೆ ಅಲ್ಲಿದ್ದ ಆಚಾರ್ಯ ಭೀಷ್ಮರ ಅಪ್ಪಣೆಯಿಲ್ಲ ಇದಕ್ಕೆ ಹಸ್ತಿನಾವತಿಯ ಸಿಂಹಾಸನಕ್ಕೆ ಈಗ ಯಾರು ಅಧಿಕೃತ ಅಧಿಕಾರಿಗಳೂ ಅವರಿಗೂ ಗೊತ್ತುಂಟೊ ಇಲ್ವೊ ಯೇನೇ ಆಗಲಿ, ಒಬ್ಬ ಬ್ರಾಹ್ಮಣ ಇಷ್ಟು ರಾಜಕಾರಣ ಮಾಡಿದನಲ್ಲ...? ಆದ್ರೆ ವೊಂದುಂಟು ಯೇನಿಲ್ಲ ನಿಮ್ಮಲ್ಲೆಲ್ಲ ಹೇಳೋದ್‌ಯೇನು? ಅಂತೂ ನನಗೆ ಪಶ್ಚಾತ್ತಾಪ ಅಲ್ಲ, ವೊಬ್ಬ ಬ್ರಾಹ್ಮಣ ಕೆಟ್ಟೆ ಇಷ್ಟು ಕೆಡ್ತಾನಲ್ಲ ಅಂತ! ಬ್ರಾಹ್ಮಣ ಏರಿದರೆ ಎಷ್ಟ ಏರ್ತಾನೆ? ಅದನ್ನೂ ಕಂಡಿದ್ದೇನೆ. ಅಯ್ಯೋ ಮಕ್ಕಳೇ, ಗುರುವಿನ ಹೃದಯವನ್ನು ಅರ್ಥ ಮಾಡಿಕೊಳ್ಳಲಿಲ್ಲ. ಕಾರಣ ನಿಮ್ಮ ವಿತ್ತಾಪಹಾರಕ್ಕೆ ಬಂದ ಆಚಾರ್ಯ ಅವ! ನಿಮ್ಮ ಚಿತ್ತಾಪಹಾರ ಅವ ಮಾಡಲಿಲ್ಲ. ಅವನಿಗೆ ಅಂತಹದೊಂದು ಚಿತ್ತವೂ ಇಲ್ಲ ಅಂತೂ ದ್ರೋಣ ನಿಮ್ಮನ್ನು ನನ್ನ ಮೈಮೇಲೆ ಛೂಬಿಟ್ಟನೊ? ಬಿಟ್ಟನೊ? ಕೂಡೀತೋ...?

ಎದುರಾಗಿ ನೋಡೋಣ. ನಿನ್ನ ಗುರುವಿನ ಹೃದಯ ವೈಶಾಲ್ಯವೂ ನನ್ನೆ ಗೊತ್ತು ಅವನ ಜಾತಕವೂ ಗೊತ್ತು.

|ಮಾರವಿ-ಏಕತಾಳ॥ ನರನಿನ್ನೆಯ ಗುಣವರಿದು | ಹುಲುಗಣವರಿಯದೆ ನೀ ನಿಂದು |

ತರಳನು ನೀನಯ್ ಧುರದಿ | ತಲೆಗಳನರಿವೆನು ಭರದಿ || ೧೪ ||

ಅರ್ಜುನಾ... ದೊಡ್ಡವರದ್ದಾದಂತಹ ಯಾವ ಮನ:ಕಷಾಯ ಇದೆಯೋ ಅದನ್ನು ಜಿಜ್ಞಾಸೆ ಮಾಡಲಿಕ್ಕೆ ನಿನಗಿನ್ನೂ ಪ್ರಾಯ ಬರಲಿಲ್ಲ. ದ್ರೋಣಾಚಾರ್ಯನ ಹೃದಯ ವೈಶಾಲ್ಯಕ್ಕೆ ನಾವು ಕಿಂವದಂತಿಯಿಂದ ಇಟ್ಟುಕೊಂಡ ವೊಂದೇ ವಾರ್ತೆ ಸಾಕು. ಶೃದ್ಧೆಯುಳ್ಳಂತಹ ವಿದ್ಯಾರ್ಥಿ ಅವನಿಗೆ ಬೇಡ. ಅವ ವಿದ್ಯಾರ್ಥಿಯನ್ನು ತಯಾರು ಮಾಡೋದ್ ಹ್ಯಾಗೆ ಅಂತಂದ್ರೆ ತನ್ನ ಕೈ ಆಯುಧವಾಗಿ! ದ್ರುಪದನಲ್ಲಿ ವಿರೋಧವೊಂದು. ಆ ವಿರೋಧವನ್ನು ಸಾಧಿಸುವದಕ್ಕೆ ಬೇಕಾಗಿ ಚಕ್ರವರ್ತಿ ಮಕ್ಕಳಾದ ನಿಮ್ಮನ್ನು ಸಂಧಿಸಿ.... ಅಷ್ಟಕ್ಕೇ ಅವ ವಿದ್ಯಾದಾನ ಮಾಡಿದ್ದು. ವೊಂದ ಮಾತ್ ಎಚ್ಚರಿಸ್ತೇನೆ - ಹಸ್ತಿನಾವತಿಗೆ ವೊಂದು ವಿಷಬೀಜವನ್ನು ಬಿತ್ತಿದ ಅವ. ವೊಬ್ಬ ಬ್ರಾಹ್ಮಣನ ಜನಿವಾರದ ಪರಿಶುದ್ಧತೆಗೆ ಬೇಕಾಗಿ, ಬ್ರಾಹ್ಮಣ್ಯವನ್ನು ರಕ್ಷಿಸುವ ಕ್ಷಾತ್ರವನ್ನು ಅವ ದುರುಪಯೋಗ ಪಡಿಸಲಾಗದು. ಆದಕಾರಣ, ಅರ್ಜುನಾ ನೀನು ಅಸ್ತ್ರವಿದ್ಯಾ ನಿಪುಣನಿರಬಹುದು. ಆದ್ರೆ ಇದರಿಂದ ಲಾಭ ನಿನಗೇನಾದೀತು? ನಿನ್ನ ಸ್ವಜಾತಿಯವನೊಬ್ಬನನ್ನು ಅಪಮಾನಗೊಳಿಸಿದ ಹಾಗಾಗ್ತದೆ. ಸ್ವಜಾತಿಯವನನ್ನು ಅಪಮಾನಗೊಳಿಸಿ ಈ ಬ್ರಾಹ್ಮಣನ ಜನಿವಾರವನ್ನು ತಿದ್ದುವ ಕೆಲಸ ನಿನ್ಗ್ ಯಾಕೆ? ಗುರು ಹೌದು. ಅವ ಗುರುವಾಗಿ ನಿಮ್ಮ ಉಪದೇಶ ಮಾಡಿದ್ದಾನೊ? ಅಲ್ಲ, ವೊಳಗೆ ನನ್ನಲ್ಲಿ ದ್ವೇಷ ಸಾಧಿಸುವುದಕ್ಕೆ ಬೇಕಾಗಿ, ನಿನ್ನನ್ನು ಹರಿತವಾದಂತಹವೊಂದು ಆಯುಧವನ್ನಾಗಿ ಮಾಡಿಸಿದ್ದಾನೊ? ಇದನ್ನು ನೀನು ಆಲೋಚಿಸುವಷ್ಟು ಪ್ರಾಯ ಬಂದವನಲ್ಲ. ಯೇನ್ ಕಲ್ಲಿದ್ದೀ, ಅವ ನಿನ್ಗ್ ಯೇನ್ ಕೊಟ್ಟಿದ್ದಾನೆ ಆದಷ್ಟು ದ್ರುಪದನ ಸೋಲಿಗಾಗಿ ಅಂತಾದ್ರೆ ವೊಮ್ಮೆ ಅದರ ಮೌಲ್ಯ ನಿರ್ಣಯ ನಾನೂ ಮಾಡ್ತೇನೆ ಬಿಡು ಬಾಣ. (ಯುದ್ಧ)

ಯೇನು! ಯೇನು ನಾನು ಸೆರೆಸಿಕ್ಕಿದ್ದು ನಮ್ಮ ಜಾತಿಯ ಮಗನಿಗೇ...

*(ದ್ರೋಣರಿಗೆ ದ್ರುಪದನನ್ನು ಅರ್ಜುನ ಒಪ್ಪಿಸಿದ ಮೇಲೆ)*

ಚಿಂತಿಲ್ಲ ಈಗ ಅವನಿಗಾದರೂ ಧನ್ಯತೆ ಬಂತಲ್ಲ; ಬ್ರಾಹ್ಮಣನಿಗೆ? ಆದ್ರೆ ವೊಂದು ಬೇಸರ ನನಗೆ, ರಾಜ್ಯ ಅರ್ಧ ತಕೊಂಡ, ಆಳೊದಿಲ್ಲ. ಹಾಗಾದರೆ ಉತ್ತಮ ಕ್ಷತ್ರಿಯನೂ ಆಗ್ಲಿಲ್ಲ. ಬ್ರಾಹ್ಮಣ್ಯ ಯಾವಾಗಲೋ ಮಾರಾಟ ಮಾಡಿದ್ದಾನೆ. ಈಗ ಇಲ್ಲಿ ಏನಾದ ಹಾಗಾಯ್ತು? ಅವನ ಶಿಷ್ಯರಿಂದ ಯೇನೆ ಆಗಲಿ, ಅರಸು ಮಕ್ಕಳದ್ದಾದಂತಹ ಋಣ

ಮುಗಿತೊ ಇಲ್ವೊ? ಅವರು ಸಲ್ಲಿಸಬೇಕಾದ್ದನ್ನು ಸಲ್ಲಿಸಿದರೋ ಇಲ್ವೊ? ದಕ್ಷಿಣೆ! ಇನ್ನು ಅವರಲ್ಲಿ ಸಂಬಂಧ ಇಲ್ಲಲ್ಲ? ನೋಡೋಣ ಆ ಅರಸು ಮಕ್ಕಳನ್ನು ಯೇನನ್ನು ಕೊಟ್ಟಾದ್ರೂ ಕ್ರಯಕ್ಕೆ ತಕೊಳ್ಳೋದಕ್ಕೆ ನಮಗೆ ಕೂಡದೋ ಅಂತ ನಾವೂ ನೋಡೋಣ ಅಲ್ಲವೆ?

ಅಂತೂ ಧೂಮಕೇತು ಹುಟ್ಟಿದ ಹಾಗೆ ಹುಟ್ಟಿ ಬಿಟ್ಟ! ಕುರುಪಾಂಚಾಲರಿಗೆ ಮೊದಲೇ ಮನ:ಕಷಾಯ ಇತ್ತು. ಇದಕ್ಕೊಂದು ಹೊಸ ಚೇತನವನ್ನು ಕೊಟ್ಟ ಈ ದ್ರೋಣ. ಬ್ರಾಹ್ಮಣನಿಗೆ ಹಠ ಇಷ್ಟು ಉಂಟು ಅಂತಾದ್ರೆ ಹುಟ್ಟಿನಿಂದ ಕ್ಷತ್ರಿಯರಾದ ನಾವು ಸಾಯುವಲ್ಲಿಯವರೆಗೆ ಹಠ ಬಿಟ್ಟೇವೊ? ನೋಡ್ವ  ಇವನ ಗುರುದಕ್ಷಿಣೆ ಕೊಟ್ಟದ್ರಿಂದ ಅರ್ಜುನ ಯೇನು ಉದ್ದಾರ ಮಾಡ್ತಾನೆ ಚಂದ್ರವಂಶವನ್ನು ಅಂತ ನಾನೂ ನೋಡ್ತೇನೆ. ಯೆಲಾ ಬ್ರಾಹ್ಮಣ, ಹಳೇ ಹುಣ್ಣನ್ನು ಕೆದಕಿದ ಹಾಗೆ ಮತ್ತೂ ಕೆದಕಿದನಲ್ಲ! ಬ್ರಾಹ್ಮಣರ ನಾಶಕ್ಕೆ ಬ್ರಾಹ್ಮಣರನ್ನೇ ಮೊದಲು ನಾನು ಕ್ರಯಕ್ಕೆ ತಕ್ಕೊಳೇನೆ ನೋಡ್ವ ಹೆಚ್ಚು ಕೊಡ್ತೇನೆ ಅಂತ ಹೇಳಿದ್ರೆ ಯಾಕೆ ಮಹಾಯಾಗವನ್ನು ಮಾಡ್ಲಿಕ್ಕಿಲ್ಲ ಬ್ರಾಹ್ಮಣು? ಅದೇ ನನ್ನ ಜಾತಿಯ ಮಕ್ಕಳಿಂದ ನನಗೆ ಚುಚ್ಚಿಸಿದನಲ್ಲ? ಇನ್ನು ಇವನ ಜಾತಿಯವರಿಂದಲೇ ಇವನ ಸಂತಾನ ಮುಚ್ಚಿಸಿಕೆ ನಾನೂ ಯಜ್ಞ ಮಾಡದೇ ಬಿಡ್ತೀನೋ ನೋಡಿ, ಗುರುದಕ್ಷಿಣೆ ಸಂದಿತಲ್ಲ? ಪ್ರಕರಣ ಅಲ್ಲಿಗೆ ಮುಗಿಯಲಿ ಹೊಸ ಪ್ರಕರಣನಾನು ತೋಡ್ಗತೇನೆ ನಾಳೆಯಿಂದ.



**೫ ಹಿಡಿಂಬಾ ವಿವಾಹ**

ಭೀಮ

*ಭೈರವಿ-ಜಂಪೆ॥ ಇತ್ತ ಬಿಲಮುಖದಿಂದ ಪೊರಮಟ್ಟು ಪಾಂಡವರು ಹೆತ್ತವ್ವ ಸಹಿತ*

*ನಡೆದರು ಸೂಟೆಯಿಂದ || ಕತ್ತಲೆಯೊಳ್ಳೆದೆ ತಡವರಿಸಿ ಕಾಲೊಡೆದ್ದರಿವ*

*ನೆತ್ತರಿಂದಲೆ ನಡೆವ ಬಟ್ಟೆ ಕೆಸರಾಯ್ತು || ೨೫ |*

ಯಾವ ಜೀವಾತ್ಮನಾದರೂ ಒಂದು ಪ್ರಾರಬ್ದದ ನೆರಳನ್ನುಳ್ಳವನಾಗಿರುತ್ತಾನೆ ಅಂತ ಹಿರಿಯರು ಹೇಳಿದ್ದನ್ನು ಕೇಳಿದ್ದೇನೆ. ನನ್ನ ಈವರೆಗಿನ ಜೀವನದ ಅನುಭವದಲ್ಲಿ ಅದು ಯತಾರ್ಥ ಅಂತ ಒಪ್ಪಿಕೊಂಡಿದ್ದೇನೆ. ಪ್ರಾರಬ್ಧ ಅಂತಾದಮೇಲೆ ಮತ್ತೆ ಕೇಳೋದು ಬೇಡ, ನೆರಳು ತಾನೇ! ವ್ಯಕ್ತಿ ಪ್ರಕಾಶದಲ್ಲಿ ಬೆಳ್ಳಗಿರಬಹುದು, ನೀಲಮೇಘಶ್ಯಾಮಲವರ್ಣದವನಿರಬಹುದು. ಅದು ವ್ಯಕ್ತವಾದ ಪ್ರಪಂಚದಲ್ಲಿ; ಹಿನ್ನಲೆಯ ನೆರಳು ಎಲ್ಲದ್ದರದ್ದೂ ಒಂದೇ, ಕಪ್ಪು ಬಣ್ಣವೇ. ಹಾಗೇ ಪ್ರಾರಬ್ಧ ಅಂತ ಹೇಳಿದರೆ ಒಂದಲ್ಲ ಒಂದು ವಿಧವಾದಂತಹ ಪಾಪದ ಬಂಧನವೇ. ಇಲ್ಲದಿದ್ದರೆ ಮಕ್ಕಳನ್ನು ಬಯಸಿ, ಹರಕೆ ಹೊತ್ತು ನಮ್ಮ ಅಮ್ಮ ನಮ್ಮ ತಂದೆಯವರು ಒಳ್ಳೆ ಸಂತಾನವನ್ನೇ ಪಡೆದರು. ಆದರೆ ನನಗೆ ತೋರದೆ ಈ ಐದೂ ಒಂದಾಗಿ ಹುಟ್ಟಿದ್ದೆ ಪ್ರಪಂಚವನ್ನೇ ಆಳಬಹುದಾಗಿತ್ತು. ಹಾಗೆ ಆಗಲಿಲ್ಲ. ಒಬ್ಬೊಬ್ಬರಲ್ಲಿ ಒಂದೊಂದು ಗುಣ. ಅಲ್ಲ, ಪಂಚಭೂತಗಳೂ ಹಾಗೇ ಸ್ವಧರ್ಮದಲ್ಲಿ ಭಿನ್ನ ಭಿನ್ನವಾಗಿದ್ರೂ ಕೂಡ ಅವು ಸಮತೋಲ ಸ್ಥಿತಿಯಲ್ಲಿದ್ದಾಗ ಪ್ರಪಂಚ ಎನಿಸ್ತದೆ ಸ್ವಶಕ್ತವಾಗ್ತವೆ. ಇದನ್ನು ತಿಳಿದಿದ್ದರಿಂದಲೇ ವಿಭಿನ್ನ ಪ್ರಕೃತಿಯವರಾದರೂ ಕೂಡ ನಾವು ಏಕಮತದಿಂದ ಏಕಾಭಿಪ್ರಾಯದಿಂದ, ಪಂಚಪ್ರಾಣಗಳೂ ದೇಹದಲ್ಲಿ ಸಂಚಾರ ಮಾಡಿ ದೇಹವನ್ನು ಜೀವವನ್ನು ರಕ್ಷಿಸುವ ಹಾಗೆ ಈವರೆಗೆ ರಕ್ಷಿಸಿಕೊಂಡು ಬಂದಿದ್ದೇವೆ. ಏನು ಮಾಡೋಣ? ಪ್ರಾರಬ್ಧ ನಮ್ಮನ್ನು ಹಸ್ತಿನಾವತಿಗೆ ಎಳೆಯಿತು. ಸಂತೋಷ ಇತ್ತು ಆದರೆ ಈಗ ಯಾರನ್ನು ದೂರೋಣ? ನಮ್ಮ ದೊಡ್ಡ ತಂದೆಯವರೇ- 'ವಾರಣಾವತ ನಿಮಗೆ ರಾಜಧಾನಿ' ಅಂತ ಹೇಳಿ ಬಹಳ ಉತ್ಸಾಹದಿಂದ ಉತ್ಸವ ಪೂರ್ವಕವಾಗಿ ನಮ್ಮನ್ನು ಇಲ್ಲಿ ಈ ಹೊಸ ಅರಮನೆಯಲ್ಲಿ ಒಕ್ಕಲಾಗಿರಿಸಿದರು. ಯಾರಿಗೆ ಗೊತ್ತು ! ಏನೋ ಸೂಚನೆ ಸಿಕ್ಕಿತಂತೆ, ನಮ್ಮಣ್ಣನಿಗೆ ಇದು ನಮ್ಮನ್ನು ಜೀವಂತ ದಹನ ಮಾಡುವದಕ್ಕಿದ್ದಂತಹ ಕೃತಕವಾದ ಲಾಕ್ಷಾಗೃಹವಂತೆ. ಕೊನೆಗೆ ಅಣ್ಣ ಹೇಳಿದ ಇಲ್ಲಿಂದ ಪಾರಾಗಲಿಕ್ಕೆ ದಾರಿ ಮಾಡು". ಸರಿ, ಈ ಕಡೆಯಿಂದ ಯಾರೋ ಅಗೆಯುತ್ತಾ ಬಂದರಂತೆ. ನಾನು ಈ ಕಡೆಯಿಂದಲೂ ದಾರಿ ಮಾಡುತ್ತಾ ಈ ತಿಥಿ, ಈ ವಾರ ಎಲ್ಲರನ್ನು ಕೈಹಿಡಿದು, ಸಾಗಿಸಿ-ಸಾಗಿಸಿ-ಸಾಗಿಸಿ ಈ ಬಿಲದ ದ್ವಾರಕ್ಕೆ ಬಂದು, ಪ್ರಪಂಚಕ್ಕೆ ಮುಟ್ಟಿದ್ದೇನೆ. ದೇವರೇ ನಾವೆಲ್ಲ ಒಮ್ಮೊಮ್ಮೆ ಹುಟ್ಟಿದರೆ ಸಾಕಾಗೋದಿಲ್ಲ; ತಾಯಿಯ ಗರ್ಭದಿಂದ. ಇದು ಒಂದು ಬಿಲದ್ವಾರ, ಹಾಗಾದರೆ ನಮ್ಮ ಜನ್ಮದ ಗರ್ಭಪಾತ ಅದು ಪರಿಶುದ್ಧವಾಗಿತ್ತು.

ಶೋಭಾಯಮಾನವಾಗಿತ್ತು. ಸಂಪತ್ತಿನಿಂದ ಕೂಡಿತ್ತು. ಇದೀಗ ಎರಡನೇ ಹುಟ್ಟು ಹಾಗಿದ್ದದ್ದಲ್ಲ. ಮೋಸದ ವಂಚನೆಯ ಉರಿಮನೆಯಲ್ಲಿ ನಾವು ಕೆಲವು ಕಾಲ ವಾಸವಾಗಿದ್ದು, ಅಲ್ಲಿಂದ ಹೊರಗೆ ಬರಬೇಕಾಗಿದ್ದರೆ ಇದೊಂದು ತರಹದ ದ್ವಿಜನ್ಮವೇ. ಎರಡನೇ ಜನ್ಮ ತಾಯಿಯ ಹೊಟ್ಟೆಯಿಂದ ಬಹುಶ: ನೇರವಾಗಿ ನಾನು ಎಲ್ಲ ಮಕ್ಕಳಂತೆ ಹುಟ್ಟಿಕೊಂಡಿರಲಿಲ್ಲವಂತೆ. ತಾಯಿಯ ಗರ್ಭದಿಂದ ನಾನು ಕೆಳಗೆ ಬಿದ್ದವನಂತೆ. 'ಬಿದ್ದಾಗ ಬಂಡೆಕಲ್ಲು ಪುಡಿಪುಡಿಯಾಯಿತು.' ಅಂತ ನಮ್ಮಮ್ಮ ಯಾವಾಗ್ಲ ಹೇಳೋದುಂಟು! ಹೌದು, ಆವಾಗ ಬಂಡೆಕಲ್ಲು ಪುಡಿ-ಪುಡಿಯಾಯಿತು. ಈಗಲೂ ಮೈ ಏನೂ ಪುಡಿಪುಡಿಯಾಗಲಿಲ್ಲ. ಆದರೆ ನನ್ನ ಹೃದಯ? ಹೃದಯ ಚೂರು ಚೂರಾಗ್ತಾ ಇದೆ. ಎಂತವರಿಗೆ ಎಂತಹ ಗತಿ! ಸರಿ, ಏನು ಮಾಡೋಣ? ಎಲ್ಲವರಿಗೂ ಆಯಾಸ ಆಗಿದೆ. ಮೆಲ್ಲಗೆ ಕೈಹಿಡಿದು ಕೆಲವರನ್ನು ಆಧರಿಸಿಕೊಂಡು ಆಮೇಲೆ ನಮ್ಮಮ್ಮ ಹೇಗೆ ಹೆಜ್ಜೆ ಇಡುತ್ತಾಳೆ ಅಂತ ನೋಡುತ್ತಾ, ನೋಡುತ್ತಾ ಸಾಗಿ ಬಂದಾಯ್ತು. ಇದೊಂದು ಅರಣ್ಯಪ್ರದೇಶ ಇಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆಯೋಣ ಅಂತಲೇ ಮೊದಲಿಗೆ ನಾನೇ ಕೂತದ್ದು.

*(ಉರಿಯ ಮನೆಯಿಂದ ತಂದು ಕೊರಳ ಕೊಯ್ದನು ಭೀಮ ಎಂದಳಾ ಕುಂತಿ)*

ಏನನ್ನು ಕೇಳುತ್ತಿದ್ದೇನೆ!! ನನ್ನ ಅಮ್ಮ, 'ಈ ಭೀಮ, ಈ ವೃತ್ತಿಯನ್ನು ಕೈಗೊಳ್ಳದೇ ಇರುತ್ತಿದ್ದರೆ ಸುಖವಾಗಿ ಅಲ್ಲಿ ಆದರೂ ಸತ್ತು ಹೋಗಬಹುದಿತ್ತು. ಭೀಮನಿಂದ ಈ ಸಂಕಷ್ಟ ಬಂತು'. ಇದು ಬುದ್ಧಿಪೂರ್ವಕವಾಗಿ ಹೇಳಿದಳೇ ತಾಯಿ? ಛೇ ಛೇ ನನ್ನಮ್ಮ ಹಾಗೆ ಹೇಳುವವಳಲ್ಲ. ಎಷ್ಟು ಬೇಯಿಸಿದರೂ ಅರ್ಧಾಂಶ ಭೀಮನಿಗೆ ಮೀಸಲಾಗಿಸುವವಳು. ಹಾಗಾದರೆ ಅಷ್ಟು ನೊಂದಿರಲೇಬೇಕು ಈ ಅಮ್ಮ, ನೋವು ಮಾತ್ರವಲ್ಲ, ಉತ್ತಮ ಕ್ಷತ್ರಿಯಾಣಿ ಆದ ಆಕೆಗೆ ನಿರಾಸೆ ಬಂದಿರಬೇಕು; ಹಸ್ತಿನಾವತಿಯ ಈ ದುಷ್ಟರಾಜಕೀಯ ಖಾರಸ್ಥಾನವನ್ನೆಣಿಸಿ! ಹಾಗಿರುವಾಗ ಅಮ್ಮನನ್ನು ನಾನು ಮೂದಲಿಸುವುದಿಲ್ಲ. ಅಮ್ಮನಿಗಾದ ಆ ಹೃದಯದ ವೃಣಕ್ಕೆ ನಾನು ಔಷಧಿ ಉಪಚಾರವನ್ನು ಮಾಡಬೇಕು. ಅಮ್ಮಾ, ತಾಯಿ...

ಸೌರಾಷ್ಟ್ರ-ತ್ರಿವುಡೆ ಸಾಕು ಸಾಕಾನಿಹೆನು ಹೆಕ್ಕಳವೇಕೆ ಹೋ ಹೋ ।

ಮಾಣಿರೆಂದೆನು ತೌಕಿಹೋತ್ಸನು ಭೀಮನವರನನೇಕಮುಖದಿ | ೨೭ ||

ಮಕ್ಕಳ ಭಾಗ್ಯ ಬೇಕು ಅಂತ ಹರಕೆ ಹೊತ್ತವಳಮ್ಮ ನೀನು. ಹರಕೆ ಹೊತ್ತು ಪಡೆದದ್ದು ನಮ್ಮನ್ನು ತಾಯಿ, ನಿನ್ನ ಕಣ್ಣೀರು ಕಂಡಾಗ, ನಿನ್ನ ಎದೆ ಹಾಲನ್ನು ಕುಡಿದ ನಮ್ಮ ನರನಾಡಿಗಳಲ್ಲಿ ಪ್ರವಹಿಸುತ್ತಿರುವಂತಹ ರಕ್ತ, ಅದು ಬರಿ ನೀರು ಅಂತ ತೊರತ್ತಾ ಇದೆ ನನಗೆ, ತಾಯಿ, ಕಾಯೇನ ವಾಚಾ ಮನಸಾ ನಿನಗೆ ದು:ಖವನ್ನುಂಟು ಮಾಡಬೇಕೆಂತ ಸ್ವಪ್ನದಲ್ಲೂ ಎಣಿಸುವಂತಹ ಮಕ್ಕಳಲ್ಲ ನಾವು. ನಿನಗೆ ಸಂಕಟ ಆಗದೆ. ಆದರೆ ತಾಯಿ, ಸತ್ತರೆ ಸಾಕು ಅಂತ ನೀನು ಹೇಳಿದೆಯಲ್ಲ ! ನೀನು ಸತ್ತರೆ ಮತ್ತೆ ನಮಗೇನು? ನಾವು

ಅನಾಥರಲ್ಲವೇ ತಾಯಿ, ತಂದೆ ಅಳಿದ ಮೇಲೆ ತಂದೆಯ ಸ್ಥಾನದಲ್ಲಿ ನೀನೇ ನಿತ್ತು ನಮಗೆ ಸರಿಯಾದಂತಹ ಮಾರ್ಗವನ್ನು ತೋರಿಸಿ ಕೊಟ್ಟವಳು. ಹೋಗಲಿ ಬಿಡು ನಾವಂತೂ ನೀನು ಹೆತ್ತ ಮಕ್ಕಳು. ಆ ನಕುಲಸಹದೇವರನ್ನು ಆ ಮಹಾತಾಯಿ ಮಾದ್ರಿ, ನಿನ್ನ ಉಡಿಯಲ್ಲಿ ಹಾಕಿ ಅವರ ಹೊಣೆಗಾರಿಕೆಯನ್ನು ನೀನು ಸ್ವೀಕರಿಸಿದ ಬಳಿಕ ಹೀಗೆ ನಿರಾಶಾವಾದಿ ಆಗಬಹುದೆ ಅಮ್ಮಾ? ಕೆಟ್ಟಕಾಲ ಬರ್ತದೆ, ಸಂಕಟ ಬರದೆ, ಹಗಲು ಕತ್ತಲೆಗಳಂತೆ, ಪ್ರಪಂಚದ ವ್ಯವಹಾರ ಕಂಡ ಅನುಭವಸ್ಥೆ ನೀನು, ಸಾಮಾನ್ಯ ಮಕ್ಕಳ ತಾಯಿ ಅಲ್ಲ ನೀನು. ನೀನು ಮಹಾತಾಯಿ! ತಾಯಿ ಸೈರಿಸು, ಸೈರಿಸು ನಾನಿದ್ದೇನೆ, ನಾನಿದ್ದೇನೆ. ನನಗೆ ಏನೂ ಕಷ್ಟ ಬರಲಿ. ನಾನು ಯಾವಾಗಲೂ ದೇವರಲ್ಲಿ ಪ್ರಾರ್ಥಿಸುವದಿದೆ. ನನ್ನ ಅಮ್ಮನ ಗತಪ್ರಾಣವಾದಂತಹ ದೇಹವನ್ನು ಹೊರುವ ಧುರ್ದ್ಯೋಗ ತಂದು ಕೊಡಬೇಡ ದೇವರೇ, ಅವಳು ಬದುಕಿದ್ದಾಗಲೇ ಹೊತ್ತು ಅವಳ ಮಾತೃ ಋಣ ತೀರಿಸಬೇಕೆಂದು ಪ್ರಾರ್ಥಿಸುವವ. ನೀನು ಚಿರಂಜೀವಿ. ನೀನು ಮೃತ್ಯುವನ್ನು ಜಯಿಸಿದವಳು. ಮಹಾತಾಯಿ, ಕುಂತಿದೇವಿ. ಅಮ್ಮಾ ಇದೋ ನಿನ್ನ ವ್ಯವಹಾರಕ್ಕೆ ಮಾತ್ರವಲ್ಲ. ನಿನ್ನ ಪ್ರವಾಸಕ್ಕೆ ಮಾತ್ರವಲ್ಲ. ನಿನ್ನ ಸಕಲ ಸೌಕರ್ಯಗಳಿಗೆ ಭೀಮನದಾದ ಈ ಭುಜ ಮೀಸಲು ಅಂತ ತಿಳಿಕೊ. ಏರಿಕೋ ಅಮ್ಮ ಹೊತ್ತುಕೊಂಡು ಹೋಗೇನೆ ಸಾಗ್ತೇನೆ ಸಾಗ್ತೇನೆ

ಆ! ಎಲ್ಲವರೂ ಕಣ್ಣು ಕೂರುತ್ತಾ ಇದ್ದಾರೆ.

|*ವಾರ್ಧಿಕ್ಯ ಇಳುಹಿ ಕಾಲ್ಗಳನೊತ್ತಿ ಮಲಗಿಸುತನವರ್ಗಳಂ* | *ಹಲವು*

*ಪರಿಯಿಂದ ಮನದೊಳಗೆಣಿಸಿ ಮರುಗಿದಂ* | *ಕಲಿಭೀಮ ಅಕಟಕಟ*

*ಇನಿತಾಗಬಹುದೆ / ಎಂದೆನುತ ದುಮ್ಮಾನದಿಂದ* || *೨೭* |

ಸೋದರವರ್ಗದವರೂ ನಿದ್ರೆಯಿಂದ ತಲೆದೂಗ್ತಾ ಇದ್ದಾರೆ. ಅಲ್ಲಲ್ಲಿ ವಿಶ್ರಾಂತಿ ಪಡೆಯಲಿಕ್ಕೆ ಮಲಗಿದ್ದಾರೆ. ಅಮ್ಮ ಬಹುಶ: ನನ್ನ ಈ ಭುಜದಂಡದಲ್ಲಿಯೇ ಗಾಢ ನಿದ್ರೆಯನ್ನು ಅನುಭವಿಸುತ್ತಾ ಇದ್ದಾಳೆ ಅಂತ ತೋರ್ತದೆ. ಮೆಲ್ಲಗೆ ಇಳಿಸಿದೆ. ಅಹುದು ಸುಶುಪ್ತಿಯಲ್ಲಿದ್ದಾಳೆ. ಈ ಹುಲ್ಲಿನ ಮೇಲೆ, ಈ ಮಹತಾಯಿಯನ್ನು ಮಲಗಿಸಿದೆ. ಏನು ಮಾಡೋಣ? ಇವರ ಸಮಕ್ಷಮದಲ್ಲಿ ನಾನು ಕಣ್ಣೀರು ಹಾಕಿದೆ, ನನ್ನಲ್ಲಿದಂತಹ ದು:ಖವನ್ನು ಹೊರಗೆಡಹಿದೆ; ಬಾಕಿ ಇದ್ದವರೆಲ್ಲಾ ಕೈಕಾಲು ಬಿಡ್ತಾರೆ. ಅದಕ್ಕೋಸ್ಕರ ಒಮ್ಮೆ ಒಳಗಿನ ಉರಿ, ಆ ಜ್ವಾಲೆ, ಆ ಜ್ವಾಲೆಯನ್ನು ತಣಿಸುವದಕ್ಕೆ ಒಂದಿಷ್ಟು ನೀರಿನ ಸಿಂಚನ, ಅರ್ಥಾತ್ ಒಳಗಿದ್ದಂತಹ ಈ ದುಗುಡ, ಕಣ್ಣಿನ ಮೂಲಕ ಧಾರಾರೂಪದಿಂದ ಇಳಿಸಬೇಕು ಅಂತ ಬಯಸಿದ್ದೆ. ದೇವರು, ನನಗೆ ಆ ಸೌಕರ್ಯವನ್ನು ಒದಗಿಸಿ ಕೊಟ್ಟ ಈಗ, ಈಗ ನಾನು ಅತ್ತೆ, ನಾನೀಗ ಗೋಳಾಡಿದ್ರೆ ಇವರಿಗ್ಯಾರಿಗೂ ಗೊತ್ತಾಗೊದಿಲ್ಲ. ಆದ್ದರಿಂದ ಲಾವಾರಸ ಕುದಿತಾ ಇದ್ದಾವಾಗ ಅದು ಜ್ವಾಲಾಮುಖಿಯಾಗಿ ಹೊರಕ್ಕೆ ಹೊಮ್ಮುವದಕ್ಕೆ ಒಂದು ಸಣ್ಣ ದ್ವಾರಸಿಕ್ಕಿದ್ರೆ ಸಾಕಾಗ್ತದೆ. ಒಮ್ಮೆ ಅದು ಸಂಪೂರ್ಣ ಹೊರಕ್ಕೆ ಬಂದಾವಾಗ ಭೂಗರ್ಭ

ತನ್ನ ಅಲುಗಾಟ, ತನ್ನ ಉರಿ, ತನ್ನ ವೇದನೆಯನ್ನೆಲ್ಲ ತಡಕೊಳ್ತದೆ, ಅಂತ ಕೇಳಿದ್ದೇನೆ. ಹಾಗೆ, ಅಯ್ಯೋ, ಅಯ್ಯೋ

*ಕೇದಾರಗೌಳ-ಅಷ್ಟೇ! ಇಂತಾಗಬಹುದೆ ಪೇಳ್ | ತಾಯೀ ಹಾ ನಿನಗೆ | ನಮ್ಮಂಥ*

*ಮಕ್ಕಳ ಪಡೆದು | ಕಾಂತಾರ ಮಧ್ಯದಿ | ಮರದಡಿ*

ಪವಡಿಸು | ವಂತೇಕೆ ಘಟಿಸಿದುದು || ೨೮ ||

ನನ್ನಣ್ಣ ಯುಧಿಷ್ಠಿರ, ತಮ್ಮಂದಿರು, ಅರ್ಜುನ, ನಕುಲ ಸಹದೇವರು ಅವರ ಬಗ್ಗೆ ನಮ್ಮಂತವರು ಕಣ್ಣೀರಿಳಿಸುವದಕ್ಕೆ ಇನ್ನೂ ಹೊತ್ತು ಪಕ್ವವಾಗಿಲ್ಲ. ಎಲ್ಲಾ ಎಳೆಯರು ನಾವು. ಕಾಲ ಅನಂತವಾಗಿದೆ. ಪ್ರಪಂಚ ವಿಶಾಲವಾಗಿದೆ. ಮರ್ಯಾದೆಯಿಂದ ಬದುಕುವದಕ್ಕೆ ಬೇಕಾದ ಬಂಡವಾಳವು ನಮಗೆಲ್ಲರಿಗೂ ಇದೆ. ಅದು ನಮ್ಮ ತಾಯಿಯ ಬಲುದೊಡ್ಡ ಕೊಡುಗೆ, ಯಮಾಂಶ, ವಾಯುದೇವರ ಅಂಶ, ಇಂದ್ರಾಂಶ! ಏನು ಸಣ್ಣದೆ? ಎಲ್ಲವೂ ಘನವಾದದ್ದು. ಆದರೆ ಕುಂತೀದೇವಿ ಭೋಜರಾಜನಿಗೆ ಹ್ವ ! ದತ್ತುಪುತ್ರಿಯಾಗಿ ಬಂದು ಎಳವೆಯಲ್ಲಿಯೇ ಅರಮನೆಯ ಆ ಭೋಗ ಭಾಗ್ಯದ ಮಧ್ಯೆ ಬೆಳೆದು ಬೆಳೆದು ಪುಣ್ಯ ಪ್ರಭಾವದಿಂದ, ಚಕ್ರವರ್ತಿಯಾದ, ಪಾಂಡುವಿಗೆ ಅರಸಿಯಾಗಿ, ಚಂದ್ರವಂಶದ ರತ್ನಸಿಂಹಾಸನದಲ್ಲಿ ಪಟ್ಟಾಭಿಷೇಚನಗೊಳ್ಳುವಾಗ, ತನ್ನ ಸಿರಿಮುಡಿಯನ್ನು ನೆನೆಯಿಸಿಕೊಂಡ ನಮ್ಮ ತಾಯಿ! ದೈವವೇ!! ನಾವು ಹುಟ್ಟುವ ಕಾಲಕ್ಕೆ ಆಕೆ ಮಹಾರಾಣಿಯಾಗಿ ಇಲ್ಲದೆ ಇದ್ರೂ ಕೂಡ, ಮಹಾರಾಣಿ ಎಂಬ ಗೌರವ ಅವಳ ಅಂತರಂಗದಲ್ಲಿ ಸ್ಥಾಯಿಯಾಗಿತ್ತು. ಆದ್ದರಿಂದಲೇ ಅವಳು ಪುತ್ರವತಿಯಾಗುವದಕ್ಕೆ ಬಯಸಿದ್ದು. ನಾವು ಹುಟ್ಟಿದ್ದೇ ಹುಟ್ಟಿದ್ದು, ನಮ್ಮ ದೌರ್ಭಾಗ್ಯ ನಮ್ಮ ತಾಯಿಗೆ ಎಂತಹ ಅಧ:ಪತನ!! ಹೇಳಿದ್ದು ಕೇಳಿದ್ದೇನೆ. “ಬಡತನದ ಕಷ್ಟ ಕಾರ್ಪಣ್ಯದಲ್ಲಿ ಹುಟ್ಟಿ ಬೆಳೆದವರು, ಶ್ರೀಮಂತಿಕೆ ಬಂತು ಅಂತ ಬೆಳೆಯುವದೂ ಇಲ್ಲಂತೆ. ಪುಣ್ಯಾತ್ಮರಾದ್ರೆ ಕೊನೆ ಗಳಿಗೆಯಲ್ಲಿ ಭೋಗಭಾಗ್ಯವೆಲ್ಲ ಕೈಸೇರಬೇಕಂತೆ. ನಮ್ಮದು ದೊಡ್ಡದಲ್ಲ, ಬಡತನ ಏನು ಅಂತ ಮತ್ತೊಬ್ರು ತಿಳಿಯ ಹೇಳಬೇಕಾಗಿಲ್ಲ. ನಾವದನ್ನು ಕಾವ್ಯದಿಂದ ಅನುಭವಿಸಬೇಕಾದ್ದಲ್ಲ. ಚಕ್ರವರ್ತಿ ಮಕ್ಕಳಾಗಿ ಹುಟ್ಟಿದ್ರೂ, ನಮ್ಮ ನಿಲ್ದಾಣ ಅದು - ಕಾಡು, ಬಡತನ, ದಾರಿದ್ರ, ನಮ್ಮಮ್ಮ ಹಾಗೋ? ಶ್ರೀಮಂತಿಕೆಯ ವೈಭವದಿಂದ ಬಾಳಿ ಬದುಕಿದವಳು. ಅವಳಿಗೆ ಈ ವಾರ್ಧಕ್ಯದಲ್ಲಿ ದಾರಿದ್ರ ಬಂತು. ಬಡತನ ಬಂತು. ಇನ್ನೂ ಏನು! ಶರೀರ ಶಿಥಿಲವಾಗಿದೆ, ಪ್ರಾಯ ನಿಲ್ಲುವದಿಲ್ಲ. ಈ ತಾಯಿ ಇವತ್ತು ಅದೋ ಅದೋ ನಮ್ಮಂತಹ ಮಕ್ಕಳ ತಾಯಿಯಾಗಿ... ಕಲ್ಲು ಕಲ್ಲು ಅಯ್ಯೋ! ಎಲ್ಲಿ ಮಲಗಿದ್ದಾಳೆ. ಎಲ್ಲಾ ವೈಭವ, ಅಹಂಕಾರ ಮದ ನಿಮಿಷಾರ್ಧದಲ್ಲಿ ನಾಮಾವಶೇಷವಾಗುವದಕ್ಕೆ ಸಾಕು ನಮ್ಮ ತಾಯಿಯ ಈ ದಾರಿದ್ರದ ಈ ಕಷ್ಟದ ಈ ಕಾರ್ಪಣ್ಯದ ಈ ಶಯನ, ಯಾಕೆ ಬರೆದೆನೊ ಬ್ರಹ್ಮ ನನ್ನ ತಲೆಯಲ್ಲಿ - ಇದನ್ನು ಕಂಡು ಸಾಯಿ ಭೀಮ ಅಂತ. ಪ್ರಾರಬ್ಧವೇ... ಪ್ರಾರಬ್ಧವೇ..... ಪ್ರಾರಬ್ಧವೇ !!

(ಆಹಾರ ಹುಡುಕುತ್ತ ಬಂದ ಹಿಡಿಂಬೆ ಭೀಮನನ್ನು ಕಂಡು ಮಾಯಾರೂಪ ಧರಿಸಿ ಮಾತಾಡಿಸಿದ ಮೇಲೆ)

ಭೈರವಿ-ಅಷ್ಟ! ಎನೆ ಖಾತಿಯೊಳು ಭೀಮನು ಪೇಳ್ವನು ಕೂಡೆ ಧನುಜಕನ್ನಿಕೆಯೆ ನೀನು॥

ಮನಬಂದ ತೆರದಿಂದ ಪೇಳುವೆ ನಿನ್ನನೀಕ್ಷಣ ಕೊಲ್ವೆನೆನುತೆಂದನು || ೨೯ ||

ಯೆಲಾ ಯೆಲಾ ಪ್ರಾರಬ್ಧವೇ? ಯೇ ಹೆಣ್ಣೆ...

ನಿನ್ನ ಯಜಮಾನನ ಮನೆ ಹಾಳಾಯ್ತು. ಏನೇ ಇದು? ಹೇ ರಮಣಾ! ಅಲ್ಲ ಮರಣ.

ನೀನು ಎಲ್ಲಿಯವರೆಗೆ ನನ್ನನ್ನು ಈ ವಿಲಾಸಕ್ಕೆ ಆಮಂತ್ರಿಸುತ್ತಿಯೋ, ಎಲ್ಲಿಯವರೆಗೆ ನೀನು ರಮಣಾ ರಮಣಾ, ಅಂತ ಈ ಪರಪುರುಷನನ್ನು ಸಂಬೋಧಿಸುತ್ತಿಯೋ, ಅದು ನಿನಗೆ, ಅಕ್ಷರದ ಸ್ಥಾನವ್ಯತ್ಯಾಸದಿಂದ ಪರಿಣಾಮದಲ್ಲಿ ಮರಣಾ-ಮರಣಾ-ಮರಣಾ ಹತ್ತಿರ ಬರ್‍ತದೆ ಅಂತ ತಿಳಿಕೋ.

ಹೌದೇನೆ? ಏಯ್, ಈ ಪ್ರಪಂಚ ಎನ್ನುವದು ಹುಚ್ಚರ ಸಂತೆ ಎಂಬುದಕ್ಕೆ ಜೀವಂತ ಪ್ರತೀಕವಾಗಿಬಿಟ್ಟೆಯಲ್ಲ ನೀನು !

ಇದು ಮೊದಲೊಬ್ಬ ಹೇಳಿದ್ದನಂತೆ. ಹೊಸದಾಗಿ ಕಟ್ಟಿದ ಮನೆಗೆ ಬೆಂಕಿ ಹಿಡಿದು ಉರಿತಾ ಇದೆ. ಆವಾಗ ಪಕ್ಕದ ಮನೆಯವ ಬಂದು ಹೇಳ್ತಾನಂತೆ “ಪಕ್ಕ, ನಂದಿಸಬೇಡಿ, ಹೇಗೂ ಉರಿತದಲ್ಲಾ, ನಾನು ಸ್ವಲ್ಪ ಚಳಿಬಿಡಿಸಿಕೊಳ್ತೇನೆ” ಅಂತ. ನಿನ್ನ ನಿನ್ನ ಚಳಿ ಬಿಡಿಸ್ತೇನೆ.

ಇಗೋ, ಮೊದಲು ಬದುಕಲಿಕ್ಕೆ ಕಲಿಬೇಕು. ಆಮೇಲೆ ಬದುಕಿಗೆ ಏನೇನು ಏನೇನು ಭೋಗಗಳು ಬೇಕು, ಭಾಗ್ಯಗಳು ಬೇಕು. ಇದನ್ನು ಸಂಪಾದಿಸಲಿಕ್ಕೆ ಹೊರಡಬೇಕು. ನೀನು ಅಸ್ತಿಭಾರವನ್ನು ಹಾಕದೆ ಮಾಳಿಗೆಯ ಉಪ್ಪರಿಗೆಯನ್ನು ಕಟ್ಟಿಕೊಳ್ಳುವದಕ್ಕೆ ಹೊರಟಿದ್ದಿ.

ಏನು ಮಾಡೋಣ ಹೇಳು, ನಿನಗೊಂದು ಮಾತನಾಡುವ ಚಟ, ನೀನು ಸೋತು ಬಂದಿದ್ದಿ. ಆದರೆ ನಿನಗಿಂತ ಹೆಚ್ಚು ಸೋತವ ನಾನು. ಇಕೋ ಇವರಿಗೆ ನಿದ್ರಾಭಂಗವಾಗಿದೆ. ನಾನು ಸ್ವರ ಏರಿಸಿದ್ರೆ ನಿನ್ನ ಕುಟುಂಬದವರೆಲ್ಲರ ನೆನಪಾಗಬೇಕು. ನೀನು ಹರಟೆ ಮಾಡಬೇಡ, ಹೇಳುವದಕ್ಕೂ, ಕೇಳುವದಕ್ಕೂ ಇದು ಸಮಯವಲ್ಲ. ನೀನು ಹೋಗ್ತಿಯೋ? ಅಲ್ಲಾ ರಾಮಾಯಣದ ಪುನರಾವರ್ತನೆ ಮಾಡಬೇಕೋ?

(ಅಷ್ಟರಲ್ಲಿ ಹಿಡಿಂಬಾಸುರ ಕೂಗುತ್ತಾ ಬರುತ್ತಾನೆ).

ಎಲಾ !! ಗ್ರಾಚಾರವೇ, ಗ್ರಾಚಾರವೇss

*ಭಾಮಿನಿ ಕೂಗಬೇಡೆಲೊ ಕುನ್ನಿ ನಿದ್ರೆಯೋ | ಳೀಗ ಮಲಗಿರುವರು ಕಣ ಮುದಿ |*

ಗೂಗೆಯಂತೆಚ್ಚರದ ತೆರದಲಿ ಮೆಲ್ಲನೈತಂದು ತಾಗಿದರೆ ಬಳಿಕರಿಯ ಬಹುದಿ!

ಕೈಗುಣವನೆಂದೆನುತ ಭೀಮನ ಮೋಘವಿಕ್ರಮದಿಂದ ನಿಂದಿಗೆ ಕಾಣುತಿಂತೆಂದ || ೩೦ |

ಏ! ನೀನು ಇಷ್ಟು ಆರ್ಭಟಿಸದೆ, ಬಾಯಿ ಮುಚ್ಚಲಿಕ್ಕೆ ನಿನಗೆ ಒಟ್ಟು ಎಷ್ಟು ಕೊಡಬೇಕು?

ಎಲಾ ! ಎಲಾ !! ಎಲಾ !! ಹಾಳಾಗಿ ಹೋದವರೇ? ಈ ಪ್ರಪಂಚದಲ್ಲಿದ್ದ ದಯೆ, ದಾಕ್ಷಿಣ್ಯ, ಪ್ರೀತಿ, ವಿಶ್ವಾಸ ಸಂಪೂರ್ಣ ನಾಮಾವಶೇಷವಾಗಿ, ಆಮೇಲೆ ಅದು ಪ್ರೇತ ಸ್ವರೂಪವಾಗಿ, ಎಲ್ಲಾ ನಿಮ್ಮ ಮನೆಯಲ್ಲೇ ಹುಟ್ಟಿಕೊಳ್ಳೋದು.

ಇದು ನಾನು ಹೇಳ್ತನೆ. ಏನು ಬೇಕಾದ್ರು ಮಾಡು ನೀನು, ಮಾಡು. ಕೃತಿಗೆ ನಾನೂ ಮುಂದಾಳೇ. ಆದರೆ ಇಕೋ ಪಾಪ ! ಆಯಾಸಪಟ್ಟು. ಈಗ ಮಲಗಿದ್ದಲ್ಲಿ ಎಂಬ ಪ್ರಜ್ಞೆಯಿಲ್ಲದೆ ಒಂದು ಥರದ ಗಾಢ ನಿದ್ರೆಯಲ್ಲಿದ್ದಾರೆ. ಅಯ್ಯಾ, ನಿನಗೂ ನಿದ್ರೆಯ ಸುಖದ ಅನುಭವ ಇದೆಯಲ್ಲ?

ಉಂಟಲ್ಲ! ವ್ಯವಹಾರದಲ್ಲಿ ಎಷ್ಟೇ ದು:ಖ ಇರಲಿ, ಎಷ್ಟೇ ಕ್ಲೇಶ ಇರಲಿ, ಸಾವಿರ ದ್ವಂದ್ವಗಳಿರಲಿ, ಒಂದು ಗಾಢನಿದ್ರೆ ಒಂದು ಪ್ರಾಣಿಗೆ ಬಂತು ಅಂತಾದ್ರೆ, ಒಂದು ಸಲ ಪೂರ್ಣ ಒಂದು ಹೊಸ ಚಿಗುರು ಒಡೆದ ಹಾಗೆ, ಹಾಗಾಗಿ ಸಕಲ ಜೀವಿಗಳೂ ಕೂಡ ಆ ನಿದ್ರೆಯನ್ನು ಬಯಸ್ತಾವೆ. ನೀನು ಯಾವ ಕೆಟ್ಟ ರಾಕ್ಷಸನೊ ? ಬಹುಶ: ನಿಮಗೆ ನಿದ್ರೆಯ ಅನುಭವ ಇಲ್ವೇನೊ?

ಬಾಯ್ಮುಚ್ಚು, ಬಾಯ್ಮುಚ್ಚು ಇಷ್ಟೇ ಹತ್ತಿರ ನಾನಿದ್ದೇನೆ, ನನಗೇನು ಕಿವುಡೋ? ನೀನು ಬೊಬ್ಬೆ ಹಾಕ್ತಿ. ಅಂತಾದ್ರೆ, ನಾನು ಬೊಬ್ಬೆ ಹೊಡೆಯುವದಿಲ್ಲ, ಬೊಬ್ಬೆಯನ್ನು ನಿಲ್ಲಿಸುವದು. ಬದುಕಬೇಕು ಅಂತ ಆಸೆ ಉಂಟೋ? ಬಾಯಿ ಮುಚ್ಚಿ ಕುತ್ತೊ, ಅದಲ್ಲಾ, ಮೈಮೇಲೆ ಏರಿಬರ್ತಿಯೊ? ಏರಿ ಬರ್ತಿಯೋ... ಬಾ

*(ಯುದ್ಧ. ಹಿಡಿಂಬಾಸುರ ಸತ್ತ ನಂತರ)*

ಇವುಗಳದ್ದೆಲ್ಲಾ ಕಥೆ ಅಷ್ಟೇ. ಹುಟ್ಟುವಾಗ ಎರಡು ಆರ್ಭಟ, ಸಾಯುವಾಗ ಒಂದು ಆರ್ಭಟ. ನಿನ್ನಣ್ಣ ಸತ್ತ !! ಅದೇ ಗತಿ ಮಾಡಬೇಕೊ? ನೀನು ಬಿಡೋದಿಲ್ಲಾಂತಾದ್ರೆ, ನಾನು ಹಿಡಕೊಳ್ಳಬೇಕೋ ಬೇಡ್ವೊ? ಅವರಿಗೆ ಎಚ್ಚರವಾಗ್ತಾ ಉಂಟು, ಒಂದು ಕೆಲಸ ಮಾಡು

ಹಾ | ಎಚ್ಚರಾಗಲಿ, ಎಚ್ಚರಾದ ಮೇಲೆ ಏನು ನಿನಗೊಂದು ಗತಿ ಮಾಡಬೇಕು. ಅಂತ ನಾವು ಈ ಸಮಸ್ಯೆಯನ್ನು ಒಟ್ಟು ಕುಟುಂಬದವರು ಆಲೋಚಿಸುತ್ತೇವೆ.

(ಎಚ್ಚರಗೊಂಡ ಕುಂತಿ ಏನಿದು ಅಂತ ಕೇಳಿದಾಗ)

ತಾಯೀ, ಏನಿಲ್ಲಮ್ಮಾ -

ಅವ ಯಾರು ಅಂತ ನಾನು ಕೇಳಲಿಲ್ಲ. ಯಾಕೆ ಕೇಳಲಿಲ್ಲ? ವ್ಯವಧಾನವಿರಲಿಲ್ಲ. ಬಂದವನೇ ತಾರಕಕ್ಕೆ ಸ್ವರ ಏರಿಸಿದ. ಬೇಡ - ಬೇಡ ನಾ ಹೇಳಿದೆ. ಸ್ವಲ್ಪ ಜೀವಕಾರುಣ್ಯ ಇರಲಿ, ನೀನು ಏನ್ ಹೇಳಿ, ಅದನ್ನು ಮೆಲ್ಲಗೆ ಹೇಳು, ಪುಣ್ಯಾತ್ಮರು ನಿದ್ದೆ ಮಾಡಿದ್ದಾರೆ. ಎಲ್ಲರಿಗೂ ನಿದ್ರಾಭಂಗ ಮಾಡಬೇಡ. ನಿನಗೆ ನಿದ್ರೆ ಬರೋದಿಲ್ಲಾಂತಾದ್ರೆ ಆಗ ಸಮುದ್ರದ ಬಳಿ ಹೋಗು, ಆರ್ಭಟ ಬೇಡ ಅಂದೆ, ಕೇಳಲಿಲ್ಲ. ಒಂದೇ ಪೆಟ್ಟಿಗೆ ಮಣ್ಣು ಮುಕ್ಕಿದ !!

ತಾಯಿ, ಅಂದ ಹಾಗೆ, ಅದು ತಾಯ್ತನ. ಆದರೆ ಅಮ್ಮಾ ಪೂರ್ವಭಾವಿಯಾಗಿ ನಾನೊಂದು ಮಾತು ಹೇಳಿದ್ದೆ. ಹೌದೋ? ನೀವೆಲ್ಲ ನೆಮ್ಮದಿಯಿಂದ ಇರಿ. ನಾನೇನು ಅಂತ ಹೇಳಲಿಲ್ಲೊ ಅಮ್ಮಾ? ನಾನದನ್ನು ಮಾಡಿ ತೋರಿಸಿದೆ. ಸಂತೋಷಪಡು.

ಏ ! ಅಮ್ಮಾ ಇವಳಿಗೆ ಮದುವೆಯ ಹುಚ್ಚು, ಅಣ್ಣ ಸತ್ತ ದು:ಖವಿಲ್ಲ ಇವಳಿಗೆ!!

ತಾಯಿ ನೀನೊಂದು ಹ್ಞಂ ಅಂತ ಹೇಳಿದ್ರೆ ಸಾಕು. ನನಗೆ ಈಗ ಪಂಚವಟಿಯ ಪ್ರಕರಣ ನೆನಪಾಗ್ತಿದೆ ರಾಮಾಯಣದ್ದು. ಇಂತವರಿಗೆ ಏನು ಮಾಡ್ಬೇಕು ಅಂತ ರಾಮದೇವರೇ ಹೇಳಿದ್ದುಂಟು. ಅಷ್ಟು ಮಾಡಿಬಿಡ್ತೇನೆ ನೀನು ಕಣ್ಣು ಮುಚ್ಚಿ ಕೂತ್ಕೊ.

ತಾಯಿ, ಇದು ನೀನು ಅಂತ ಏನಮ್ಮ? ಮಕ್ಕಳನ್ನು ಹೆತ್ತಂತಹ ತಾಯಂದಿರು, ಹೆಣ್ಣಾಗಲಿ, ಗಂಡಾಗಲಿ, ಪ್ರಾಪ್ತ ವಯಸ್ಸು ಸನ್ನಿಹಿತವಾದಾಗ ಮದುವೆಯ ಕನಸು ಕಂಡೇ ಕಾಡ್ತಾರೆ. ನೀನು ಕ್ಷಮಿಸಬೇಕು, ತಾಯಿ ಕ್ಷಮಿಸಬೇಕು. ಏನು? ನಮಗೊಂದು ನೆಲೆಯಿಲ್ಲ, ನೆಲವಿಲ್ಲ. ನಾವು ಎತ್ತ ಹೋಗ್ತವೆ ಅಂತ ನಮಗೇ ಗೊತ್ತಿಲ್ಲ, ಗೊತ್ತಿಲ್ಲ ಗುರಿ ಇಲ್ಲ. ಅದಕ್ಕಿಂತ ಮೊದಲು ತಾವು ಆ ಮಾತೃಹೃದಯದಿಂದ ಈ ಹೆಣ್ಣಿನ ಬಗ್ಗೆ ಇದ್ದಂತಹ

ಸ್ತ್ರೀತ್ವದ ಅನುಕಂಪದಿಂದ “ಮಗನೇ ನೀನು ಮದುವೆಯಾಗು” ಅಂತ ಹೇಳಿ ! ನಾವೇ ಅನಾಥರು, ಇನ್ನೊಬ್ಬಳನ್ನು ನಮ್ಮ ಕುಟುಂಬದಲ್ಲಿ ಅನಾಥೆಯನ್ನಾಗಿ ಸೇರಿಸುವ ಮನಸ್ಸಿಲ್ಲ.

ತಾಯೀಽಽ ನೀನು ಏನೇ ಹೇಳಮ್ಮ, ಕ್ಷಮಿಸಬೇಕು. ಇದೊಂದು ಭೀಮನಿಗೆ ಆಗೋದಿಲ್ಲ.

*(ಆ ಸಮಯಕಲ್ಲಿಗೆ ಪಾರಾಶರಮುನೀಂದ್ರ ಬಂದು ಹಿಡಿಂಬೆಯನ್ನು ಮದುವೆಯಾಗಲು ಭೀಮನಿಗೆ ಉಪದೇಶಿಸುತ್ತಾರೆ.)*

ಹಾ! ಯಾರು? ಯಾರು! ಭಗವನ್ ವ್ಯಾಸರು !!

ನಾವೆಲ್ಲರೂ ಸಾಷ್ಟಾಂಗ ಪ್ರಣಾಮ ಮಾಡಿದ್ದೇವೆ. ಗುರುವರ್ಯ ಏನಿದೆಲ್ಲ ವಿಪನ್ಯಾಸ!

ಇದು ಒಳ್ಳೆಯದೋ!! ಏನು ದೈವ ಸಂಕಲ್ಪ? ತಾವು ಹೀಗೆ ಅಪ್ಪಣೆ ಕೊಡಿಸಿದ ಮೇಲೆ ನಮ್ಮದು ಮರುಮಾತಿಲ್ಲ.

ಹಿರಿಯಣ್ಣನಿಗಿಂತ ಮೊದಲು ನನಗೆ ಮದುವೆಯೋ!

ಶುಭವಾಗ್ತದೆ ತಾನೆ? ಹಾಗಾದರೆ ಮುಂದೆ ಮಂಗಲಪ್ರದವಾದಂತಹ ಫಳಿಗೆ ನಮ್ಮ ಜೀವನದಲ್ಲಿ ಬರದೆ ಅಂತಾದ್ರೆ ಇವಳ ವಿವಾಹ ಏಕೆ? ತಾವು ಏನ್ ಹೇಳಿದ್ರೂ ಕೂಡ ಅಭಿವೃದ್ಧಿಗೆ ಬೇಕಾಗಿ ನಾನಿವತ್ತು ತ್ಯಾಗಕ್ಕೆ ಸಿದ್ಧ.

ಭೀಮ ಹಿಡಿಂಬೆಯರ ವಿವಾಹ ವಿಷ್ಣುರೂಪಿಗಳಾದ ವ್ಯಾಸರ ಸಂಕಲ್ಪವಾದರೆ ಅಲ್ಲಗಳೆಯುವುದಕ್ಕೋ, ಧರ್ಮಶಾಸ್ತ್ರವನ್ನು ಪ್ರಶ್ನಿಸುವುದಕ್ಕೋ ನಾನೆಷ್ಟರವನು? ತಮ್ಮ ಸಂಕಲ್ಪದಂತೆ ಆಗಲಿ !



## ೬ ರಾಜಸೂಯದ ಸಂಕಲ್ಪ

*ಧರ್ಮರಾಯ*

॥ಭಾಮಿನಿ॥ ಬಳಿಕ ಧೃತರಾಷ್ಟ್ರಾವನಿಪತಿತ ಇಳೆಯ ಸಕಲೈಶ್ವರ್ಯಗಳತ / ನ್ನೊಳು ವಿಭಾಗವ

ಮಾಡಿಕೊಟ್ಟನು ಧರ್ಮಜನ ಕರೆದು | ನಿಲಿಸಲಿಂದ್ರಪ್ರಸ್ಥಪುರವರ ದೊಳಗಮಲ

ಸಾಮ್ರಾಜ್ಯಲಕ್ಷ್ಮಿಯ | ಬೆಳವಿಗೆಯೊಳಿವರಿರ್ದರನುಪಮ ರಾಜತೇಜದಲಿ ॥ ೩೧ |

ತಮ್ಮಂದಿರೇ, ಕಳೆದು ಹೋದಂತಹ ಎಲ್ಲಾ ವಿಷಯಗಳನ್ನು ನಾವು ನಿತ್ಯ ಮನನ ಮಾಡಿಕೊಳ್ಳಬೇಕಾದದ್ದು ಈಗ ಅನಿವಾರ್ಯ. ಭವಿಷ್ಯವನ್ನು ರೂಪಿಸಬೇಕಾಗಿದೆ, ಕೇವಲ ನಮ್ಮ ಅನುಭವಕ್ಕೆ ಈಗ ಬರುತ್ತಿರುವ ವರ್ತಮಾನದ ಪರಿಸರವನ್ನು ತಿಳಕೊಂಡ್ರೆ ಸಾಕಾಗೋದಿಲ್ಲ. ನಮ್ಮ ಪರಂಪರೆಯೇ ಹಾಗೆ, ಈವರೆಗೆ ಏನು ನಡೆಯಿತು, ಈಗ ಏನು ನಡೆಯುತ್ತಾ ಇದೆ, ಇದನ್ನಾಧರಿಸಬೇಕು; ಮುಂದೇನಾಗಬೇಕು ಅಂತ ತೀರ್ಮಾನಿಸುವದಕ್ಕೆ

ಅದಕ್ಕಾಗಿಯೇ ನಿಮ್ಮನ್ನು ನಾನು ಈ ಹೊತ್ತು ಕರೆದದ್ದು. ಅದು ಮಾತ್ರವಲ್ಲ, ಯಾವ ಸಂದರ್ಭದಲ್ಲೇ ಆಗಲಿ, ನೀವು ನನ್ನ ಜೊತೆಯಾಗಿಯೇ ಇರಬೇಕು ಅಂತ ನನಗೆ ಅನ್ನಿಸ್ತದೆ. ಬಹುಶ: ನಿಮಗೂ ಹಾಗೆ. ಇದೊಂದು ಅಭೂತಪೂರ್ವವಾದಂತಹ ಸಾಹೋದರ್ಯ ನಮ್ಮದು. ಸಾಹೋದರ್ಯಕ್ಕೆ ಲೋಕಾಭಿರಾಮನಾದಂತಹ ಶ್ರೀರಾಮನನ್ನೋ, ಲಕ್ಷ್ಮಣನನ್ನೋ, ಭರತನನ್ನೂ ಇತಿಹಾಸವು ಉಲ್ಲೇಖಿಸುತ್ತದೆ. ಅದು ಒಂದು ವಿಧವಾದಂತಹ ಪಕ್ವವಾದ ಸಾಹೋದರ್ಯ. ನಮ್ಮ ಬದುಕು ಕೂಡಾ ಮತ್ತೊಬ್ಬರಿಗೆ ಮೇಲು ಪಂಕ್ತಿಯಾಗಿದೆ. ನನ್ನ ದೃಷ್ಟಿಯಲ್ಲಿ ಯಾವ ವ್ಯಕ್ತಿಯಾದರೂ ಬೇರೊಬ್ಬನಿಗೆ ಆದರ್ಶವಾಗಬೇಕು ಅಂತ ಇಲ್ಲ. ಆದ್ದರಿಂದ ಪಾಂಡವರದ್ದಾದಂತಹ ಬದುಕು, ಇದು ನಮ್ಮ ವಿರೋಧಪಕ್ಷದವರಿಗೆ ಆಕ್ಷೇಪಿಸುವದಕ್ಕೊಂದು ಒಳ್ಳೆಯ ಅಹಾರವನ್ನು ಒದಗಿಸ್ತದೆ, ಅಂದಿಗೂ ಇಂದಿಗೂ ಬಹುಶ: ಎಂದಿಗೂ.

ಆದರೆ ತಮ್ಮಂದಿರೇ, ಈ ಜಗತ್ತಿನಲ್ಲಿ ಯಾರೂ ಸರಿಯಿಲ್ಲಾ ಅಂತಾ ನನಗೆ ತೋರ್ತದೆ. ಒಬ್ಬೊಬ್ಬರಲ್ಲಿ ಒಂದೊಂದು ದೋಷ ಉಂಟೇ ಉಂಟು. ಆದಕಾರಣ ನಾವು ಸರಿಯೋ? ಅಂತ ಕೇಳಿದರೆ ನಮ್ಮ ಮನಃಸಾಕ್ಷಿಗೆ ನಾವು ಸರಿಯಾಗಿ ನಡೆಯುತ್ತವೋ ಅಂತ ಮಾತ್ರ ತರ್ಕಿಸಿದರೆ ಸಾಕು. ಒಬ್ಬನ ಮನಃಸಾಕ್ಷಿಗೆ ಯಾವುದು ಸರಿ ಎಂತ ತೋರ್ತದೆ ಅದು ಮತ್ತೊಬ್ಬನಿಗೆ ಸರಿಯಾಗಬೇಕಾದದ್ದು ಪ್ರಪಂಚದ ನಿಯಮವಲ್ಲ. ವೈಜ್ಞಾನಿಕವಾದಂತಹ ದೃಷ್ಟಿಯನ್ನುಳ್ಳವರು ಕೂಡ ಹೇಳ್ತಾರೆ. ಒಂದೇ ತಾಯಿ-ತಂದೆಗೆ ಹುಟ್ಟಿದ ಮಕ್ಕಳಾದರೂ ಕೂಡ ಒಂದು ದೇಹಕ್ಕಾದದ್ದು, ಮತ್ತೊಂದು ದೇಹಕ್ಕಾಗೋದಿಲ್ಲಾ. ಅಣ್ಣನಿಗೆ ಯಾವ ಯಾವುದು ಅಪ್ಯಾಯಮಾನವಾಗ್ತದೆ; ಅದೇ ತಮ್ಮನಿಗಾಗ್ತದೆ ಎಂಬ ನಿರ್ಣಯ ಇಲ್ಲಾ.

ಹೀಗೆ, ಒಂದೊಂದು ದೇಹ ರಚನೆಯೂ ವೈಜ್ಞಾನಿಕವಾಗಿ ನೋಡುವಾಗ, ಶಬ್ದ ಸ್ಪರ್ಶ ರೂಪ-ರಸಗಂಧಾತ್ಮಕವಾದಂತಹ ಪಂಚಭೂತಗಳ ಸಮನ್ವಯ, ಸಮುಚ್ಚಯವೇ ಅಂತ ಒಪ್ಪಿದರೂ, ಒಂದೊಂದು ಶರೀರದ ಪ್ರಕೃತಿ ಒಂದೊಂದು ಹೌದಲ್ಲಾ?. ಇದನ್ನು ಮನಗಂಡಂತಹ ನಾನು ನನಗೆ ಸರಿಯೆನಿಸಿದ್ದು, ಇನ್ನೊಬ್ಬರಿಗೆ ಸರಿಯೆನಿಸಬೇಕು ಎಂಬ ಹಠವುಳ್ಳವನಲ್ಲ. ಹಾಗಾಗಿ ಕೆಲವೊಮ್ಮೆ ನಾನು ಕೈಗೊಂಡಂತಹ ನಿರ್ಧಾರವನ್ನು ನೀವು ಕೂಡ ಪ್ರಾಮಾಣಿಕವಾಗಿ ಆಕ್ಷೇಪಿಸಿದರೆ, ಮತ್ತೊಮ್ಮೆ ಅದರ ಬಗ್ಗೆ ಚರ್ಚಿಸುವದಕ್ಕೆ ಸಿದ್ಧನಾಗಿ ಬಂದಂತಹ ಹಿರಿಯನೇ ಹೊರತು; ನನ್ನದ್ದಾದ ಸ್ವಚ್ಛಂದ ಪ್ರವೃತ್ತಿಯನ್ನು ನಾನು ತೋರಿಸಿದವನಲ್ಲ. ಇದು ನಿಮಗೆ ನಾನು ಅಣ್ಣನಾದುದಕ್ಕೆ ನನ್ನ ಅಣ್ಣತನದ ಉಳಿವಿಗೆ, ನಾನು ಪ್ರಯತ್ನಪಟ್ಟದ್ದು, ನೀವು ಕೂಡ ಹಾಗೆ. ನಾನು ಹೇಳಿದ್ದು, ಎಷ್ಟೋ ಸಲ ಭೀಮಸೇನನಿಗೆ ಅಥವಾ ಅರ್ಜುನನಿಗೆ ಅಥವಾ ನಕುಲ-ಸಹದೇವರಿಗೆ ಹಿತವಾಗಿ ಕಂಡ್ಯದೆ ಅಥವಾ ಕಾಣಬೇಕು ಅಂತ ನಾನು ಹೇಳಲಿಲ್ಲ. ಏನೇ ಆಗಲಿ ಈ ಜಗತ್ತಿನಲ್ಲಿ ಒಂದು ಕೌಟುಂಬಿಕ ಜೀವನವನ್ನು ನಡೆಸಲಿಕ್ಕೆ ಬದ್ಧ ಕಂಕಣರಾದಂತಹ ನಾವು, ಒಂದು ಮನೆತನದ ಮರ್ಯಾದೆಯನ್ನು ಉಳಿಸಬೇಕು ಅಂತ ತಿಳಿದಂತಹ ನಾವು, ಕೊಟ್ಟು ಕೊಳ್ಳುವ ವ್ಯವಹಾರದಿಂದಲೇ ಈವರೆಗೆ ಸಾಗಿ ಬಂದಿದ್ದೇವೆ. ಆದರೆ ಏನು ಮಾಡೋಣ? ನನ್ನ ದೊಡ್ಡಪ್ಪನ ಮಗನಾದಂತಹ ದುರ್ಯೋಧನ ತನ್ನ ತಮ್ಮಂದಿರನ್ನು ಕೂಡ ತನ್ನದ್ದಾದಂತಹ ಇಚ್ಛೆಗೆ ಅಳವಡಿಸಿಕೊಂಡು ಸಂಖ್ಯೆಯ ಬಲದಿಂದ ಅವರು ನೂರು ಮಂದಿಯಾಗಿ ರಾಜ್ಯದ ಹಕ್ಕನ್ನು ಸ್ಥಾಪಿಸುವದಕ್ಕೊ ಅಥವಾ ಅಧಿಕಾರವನ್ನು ದಕ್ಕಿಸಿಕೊಳ್ಳುವದಕ್ಕೋ ಯತ್ನಿಸುವ ಈ ಲೌಕಿಕವಾದಂತಹ ಅಧಿಕಾರಕ್ಕೆ ಬೇಕಾಗಿಯೇ ರಾಜಕೀಯದ ಅಪವ್ಯಯವನ್ನು ಮಾಡುತ್ತಾ ಬಂದದ್ದರಿಂದ, ದೊಡ್ಡ ತಂದೆಯವರಿರುತ್ತಲೇ ಅಥವಾ ಭೀಷ್ಮಜ್ಜ ಇದ್ದ ಹಾಗೆ, ಮಹಾಪ್ರಾಜ್ಞನಾದಂತಹ ವಿದುರನು ತಿಳಿದ ಹಾಗೆ, ಹಲವಾರು ವಿಧದಿಂದ ನಮ್ಮ ನಾಶಕ್ಕೆ ಪ್ರಯತ್ನಪಟ್ಟನು. ಏನೇನು ಅವರು ಪ್ರಯತ್ನಿಸಿದರೂ ಇದು ಗೊತ್ತಾದಮೇಲೂ ಕೂಡ ಇದೊಂದು ಬಹಿರಂಗವಾಗಿ ಎಲ್ಲರಿಗೂ ಗೊತ್ತಾಗಬೇಕು ಅಂತ ಸದ್ದು ಹೊಡೆದು ನಾವು ಪ್ರತಿಸ್ಪರ್ಧಿಸಲಿಲ್ಲ. ಭೀಮಸೇನ, ನಿನಗೆ ಅವನು ವಿಷವಿಕ್ಕಿದ ಎಂಬುದು ನಮಗೆ ಗೊತ್ತಾದರೂ, ಹಿರಿಯರ ಮುಂದೆ ನಾವು ಇದನ್ನು ಮಂಡಿಸಿ, ಇದಕ್ಕೊಂದು ಸರಿಯಾದಂತಹ ವಿಚಾರಣೆಯನ್ನು ಮಾಡಿ, ಯಾರು ಸರಿ? ಯಾರು ತಪ್ಪು? ಹೇಳಿ ಅಂತ ನಾವು ಹೇಳಲಿಲ್ಲ. ಅರಗಿನಾಲಯ-ದುರ್ಯೋಧನನು ಈ ಕೃತ್ರಿಮೋಪಾಯವನ್ನು ಮಾಡಿ, ದೊಡ್ಡಪ್ಪನಿಂದಲೂ ಅನುಮತಿಯನ್ನು ಪಡೆದು, ನಮ್ಮನ್ನಲ್ಲಿ ಸುಟ್ಟು ಬಿಡಬೇಕೆಂತ ಪ್ರಯತ್ನಿಸಿದ ಎಂಬುದು ನಮಗೆ ತಿಂಗಳ ಮೊದಲೇ ಗೊತ್ತಾಗಿತ್ತು. ಆದರೆ ವಿದುರ ಈ ಸೂಕ್ಷ್ಮವನ್ನು ನಮಗೆ ಕೊಟ್ಟಿದ್ದರಿಂದ ನಾವು ಅಲ್ಲಿಂದ ತಲೆ ಮರೆಸಿಕೊಂಡು ಛದ್ಮವೇಶದಿಂದ ಏಕಚಕ್ರ ನಗರದಲ್ಲಿ ಯಾರದ್ದೋ ಮನೆಯಲ್ಲಿ ದಿನ ಕಳೆದೆವು. ಕೇಳಬಹುದಾಗಿತ್ತು, ಹಸ್ತಿನಾವತಿಗೆ ಹೋಗಿ ದೊಡ್ಡಪ್ಪನ ಸನ್ನಿಧಾನದಲ್ಲೇ ಹೇಳಿಕೊಳ್ಳಬಹುದಾಗಿತ್ತು. ಏನಿದು? ನಮ್ಮ ಉಳಿವು ನಿಮಗೆ ಇಷ್ಟ ಇಲ್ಲಾಂತಾದರೆ ನಾವು ಬೇಕಾದ್ರೆ, ಈಗಿಂದೀಗ ಎಲ್ಲಾದರೂ ದೇಶಾಂತರ ಹೋಗತೇವೆ. ಹೀಗೆ ಮಾಡುವದು ಸರಿಯೆ? ಅಂತ ಕೇಳಲಿಲ್ಲ. ಕೆಲವರು ಹೇಳ್ಯಾರು,

ವಿಚಾರವಾದಿಗಳು ದೇಶವನ್ನಾಳುವದಕ್ಕೋ ಅಥವಾ ರಾಜಕೀಯವನ್ನು ಮಾತಾಡುವದಕ್ಕೋ ಅಥವಾ ರಾಜಕಾರಣದಲ್ಲಿ ಸಕ್ರೀಯವಾಗಿ ದುಡಿಯುವದಕ್ಕೊ ಯುಧಿಷ್ಠಿರ ಹೇಳಿ ಮಾಡಿಸಿದ ಜನ ಅಲ್ಲ. ಬರೇ ಮುಗ್ಧ ಅವ, ಹೆಡ್ಡ ಅಂತ ಹೇಳ್ಯಾರು. ಬಹುಶಃ ನಿಮ್ಮಂತಹ ವೀರರಿಗೆ ನಿಮ್ಮ ಸುಪ್ತಮನಸ್ಸಿನಲ್ಲಿ, ಇವನು ಹಿರಿಯನಾಗಿ ಹುಟ್ಟಿದ್ದರಿಂದ ತಾವು ಕೆಟ್ಟೆವಲ್ಲ ಎಂಬ ನೋವು ಬಂದರೆ ಬರಬಹುದು. ಆದರೆ ತಮ್ಮಾ, ನಾನು ನಂಬಿದಂತಹ ಒಂದು ಧರ್ಮ, ಅದು ಪ್ರಧಾನವಾಗಿ ಯಾವುದು ಅಂತಂದ್ರೆ ಮಾನವೀಯತೆ, ಅಧಿಕಾರವೇನು? ಬರಬಹುದು, ಹೋಗಬಹುದು, ಐಶ್ಯರ್ವವೇನು? ಬರಬಹುದು, ಹೋಗಬಹುದು. ಯಾವನಿಗೆ ಆತ್ಮವಿಶ್ವಾಸ ಉಂಟು ಅವನಿಗೆ ಬೇಕಾದದ್ದನ್ನು ದೊರಕಿಸಿಕೊಂಡೇನು ಎಂಬ ಆ ಒಂದು ದೃಢತೆ ಇದೆಯಲ್ಲ, ಇದಿದ್ರೆ ಸಾಕು ಅಂತ ಹೇಳುವವ ನಾನು.

ಏನು ತಮ್ಮಾ, ನಾವು ಪ್ರಪಂಚದಲ್ಲಿ ಸಾಯಲಿಕ್ಕೆ ಉಪಾಯ ಇಲ್ಲದೆ ಬದುಕುವವರೇನು ಅಲ್ವಲ್ಲ? ಬದುಕಬೇಕು ಅಂತ ಹೇಳುದಿದ್ರೆ, ಯಾವ ಸನ್ನಿವೇಶದಲ್ಲೇ ಆಗಲಿ ನಮ್ಮ ಬದುಕಿಗೆ ಏನಾದರೂ ಭಂಗ ಬಂದಿದೆಯೆ? ಈ ನಿಮಿಷದವರೆಗೆ ಏನು ಉಣ್ಣಲಿ, ಏನು ಮಾಡಲಿ ಎಂಬುದು ನಮ್ಮ ಜೀವನದಲ್ಲಿ ನಮಗೆ ಪ್ರಶ್ನೆಯಾಗಿ ಎಲ್ಲಿಯಾದರೂ ತಲೆ ಎತ್ತಿದ್ದುಂಟೆ ಭೀಮಸೇನಾ? ಇಲ್ಲಾ. ಮನುಷ್ಯ ಎಷ್ಟು ಕಾಲ ಬದುಕಿದಾ? ಬದುಕಿ ಎಷ್ಟು ಸಂಪಾದಿಸಿದಾ? ಎನ್ನುವದಕ್ಕಿಂತಲೂ ಮನುಷ್ಯ ಮನುಷ್ಯನಾಗಿ ಎಷ್ಟು ವರ್ಷ ಬದುಕಿದ? ಇದು ಮುಖ್ಯ. ಆದುದರಿಂದಲೇ, ಏನೇ ಆಗಲಿ, ಲಾಕ್ಷಾಗೃಹದಿಂದ ನಾವು ಪಾರಾಗಿದ್ದೇವೆ. ಪಾಂಚಾಲ ನಗರದಲ್ಲಿ ನಾವು ಗೆದ್ದಿದ್ದೇವೆ ಹೌದಲ್ಲ? ದ್ರೌಪದಿಯ ಪಾಣಿಗ್ರಹಣದ ಯೋಗ ನಮಗೆ ಬಂದ್ಯದೆ. ಆ ಬಳಿಕ ನಮ್ಮ ದೊಡ್ಡಪ್ಪ ಧೃತರಾಷ್ಟ್ರ ನಮ್ಮನ್ನು ಕರೆಯಿಸಿ, ಭೀಷ್ಮರು ಇದ್ದ ಹಾಗೇನೇ ಎದುರಾದಿಗಳೂ ಸಾಕ್ಷಿಯಾಗಿದ್ದ ಹಾಗೇನೇ ಹ್ಞಾ! 'ಖಾಂಡವಪ್ರಸ್ಥದಲ್ಲಿ ಇರಿ ಮಕ್ಕಳೇ' ಅಂತ ಅವರೇ ಹೇಳಿದರು. ನಾವೇನು ಪ್ರಾರ್ಥಿಸಿದ್ದಲ್ಲ. ಪಾತ್ರಕ್ಕೆ ಬಂದದ್ದು ಪಂಚಾಮೃತ ಅಂತ ನಾವು ಅಂಗೀಕರಿಸಿದ್ದೇವೆ. ಯಾಕೆ ಅಂಗೀಕರಿಸಿದ್ದೇವೆ ಎಂತ ಹೇಳಿದ್ರೆ, ನಾವು ನಮ್ಮ ಹಕ್ಕನ್ನು ಸ್ಥಾಪಿಸುವದಕ್ಕೆ ಬೇಕಾಗಿ, ಬೇಕಾದಷ್ಟು ನೈತಿಕವಾದಂತಹ ಬೆಂಬಲ ನಮಗಿದ್ರೂ ಶಾಸ್ತ್ರದ ಅಥವಾ ರಾಜನೀತಿಯ ಪುರಾವೆ ನಮ್ಮಲ್ಲಿ ಇದೂಕೂಡ, ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ನಮ್ಮ ದೊಡ್ಡಪ್ಪನ ಮಕ್ಕಳಾದಂತಹ ಕೌರವಾದಿಗಳು ಬಾಕಿದ್ದವರಿಂದ ಹೊಡೆಸಿಕೊಳ್ಳದೆ, ನೆಮ್ಮದಿಯಿಂದ ಬದುಕಬೇಕು; ಅಂತ ಇದ್ರೆ ಅವರಿಗೆ ಅಧಿಕಾರ ಬೇಕು. ಕೌರವಾದಿಗಳಿಗೆ ಅಧಿಕಾರ ಇಲ್ಲಾ ಅಂತಾದ್ರೆ ಪ್ರಪಂಚದಲ್ಲಿ ಬೇರೆ ಯಾವ ಸ್ಥಾನವೂ ಇಲ್ಲಾ. ಏನೇ ಆಗಲಿ, ನಮ್ಮ ದಾಯಾದಿಗಳಲ್ಲವೇ? ಚಂದ್ರವಂಶದಲ್ಲಿ ಹುಟ್ಟಿದವರಲ್ಲಿ ಅವರು ಕೂಡ? ಸಾರ್ವಜನಿಕರ ಮುಂದೆ ಎತ್ತರದ ಪೀಠದಲ್ಲಿ ಕೂತು, ಪೀಠದ ಅಳತೆಯಿಂದ ಅವರು ದೊಡ್ಡವರಾಗಿ, ನೆಮ್ಮದಿಯಿಂದ ಬದುಕುವದಿದ್ರೆ, ನಮಗೆ ಮರದ ಬುಡದಲ್ಲಿಯೂ ಮರ್ಯಾದೆಯಿಂದ ಬದುಕುವದಕ್ಕೆ ಸಾಧ್ಯ ಇದೆ, ಯಾಕೆ ಬೇಕು ಈ ಹೊಡೆದಾಟ? ಹಾಗಾಗಿ ಸಿಕ್ಕಿದ್ದರಲ್ಲಿ ತೃಪ್ತರಾಗಿ, ನಾವಿಲ್ಲಿ ಖಾಂಡವಪ್ರಸ್ಥಕ್ಕೆ ಬಂದಿದ್ದೇವೆ. ಹಿರಿಯರ ಮಾತನ್ನು ಗೌರವಿಸಿದ್ದೇವೆ. ನನಗೆ ತೋರದೆ. ಮನುಷ್ಯ-

ಕಾಮ, ಕಾಂಚನ, ಕೀರ್ತಿ ಇದಕ್ಕಾಗಿಯೇ ತನ್ನ ಬದುಕನ್ನು ಮೀಸಲಿಡಿಸುತ್ತಾನೆ ಅಂತಾದ್ರೆ ಕೀರ್ತಿಯ ಜೊತೆಯಲ್ಲಿ ಅಪಕೀರ್ತಿಯೆಂಬ ನೆರಳಿರುತ್ತದೆ. ಸಂಪತ್ತು ಎಂಬುದರ ಜೊತೆಯಲ್ಲಿ ಆಪತ್ತು ಎಂಬುದರ ನೆರಳಿರುತ್ತದೆ. ಯಾವುದೇ ಒಂದು ವಸ್ತು ಅಸ್ತಿತ್ವದಲ್ಲಿದೆ, ಅದು ಬೆಳಕಿನ ಮುಂದೆಯೂ ಕೂಡ, ಹಿಂದೆ ತನ್ನ ನೆರಳನ್ನು ಸೃಷ್ಟಿಸ್ತದೆ- ನಾವು ನೋಡ್ತವೆ, ಪ್ರಪಂಚದಲ್ಲಿ ಹೌದಲ್ಲ!. ಹಾಗಾದ್ರೆ ಆ ಕಾಮ, ಕಾಂಚನ, ಕೀರ್ತಿ ಎಂಬ ಅಧಿಷ್ಠಾನಕ್ಕೆ ನಾವು ಕಟ್ಟುಬಿದ್ರೆ, ಕಾಮದ ಜೊತೆಯಲ್ಲಿ ಕ್ರೋಧ ಇರದೆ, ಕಾಮ ಅಂದ್ರೆ ಬಯಕೆ. ಬಯಕೆ ಇಗ್ಲಿಲ್ಲ ಅಂತಂದ್ರೆ ದ್ವೇಷ, ಆದಕಾರಣ ನನ್ನ ದೃಷ್ಟಿಯಲ್ಲಿ ಕಾಮ, ಕಾಂಚನ, ಕೀರ್ತಿಗೆ ಬೇಕಾಗಿ ನಾವು ದುಡಿಯುವದಲ್ಲ. ಮನುಷ್ಯರಾಗಿ ಹುಟ್ಟಿದವರು, ಮನುಷ್ಯತ್ವವನ್ನು ಉಳಿಸಿಕೊಳ್ಳುವದಕ್ಕೆ ಬೇಕಾಗಿ, ರಾತ್ರಿ ಹಗಲು ಚಿಂತನಾಶೀಲರಾಗಿ, ಯಾಕೆ? ನಾವು ಮನುಷ್ಯರು, ಮನೀಷಿಗಳು, ಮನೀಷತ್ವ ನಮ್ಮಲ್ಲಿ ಇಲ್ಲಾಂತಾದ್ರೆ ಮನುಷ್ಯ ಶಬ್ದದ ಅರ್ಥ ನಮಗೆ ಗೊತ್ತಿಲ್ಲಾ ಅಂತಾಯಿತು. ಮನೀಷ ಅಂತಂದ್ರೆ ಸದಾ ಚಿಂತಕ ಅಂತರ್ಥ. ಆದ ಕಾರಣವೇ ನಾನು ಪ್ರಾರಂಭಕ್ಕೆ ಮುನ್ನುಡಿಯಾಗಿ, ಕಳೆದ ನಿನ್ನೆ ಪ್ರತ್ಯಕ್ಷವಾದ ಇಂದು, ಇದನ್ನು ಆಧರಿಸಿಕೊಳ್ಳುತ್ತಾ ಬರುವ ನಾಳೆಯನ್ನು ನಾವು ನಿರೀಕ್ಷಿಸಬೇಕು ಎಂತ ಹೇಳಿದ್ದಕ್ಕಿದ್ದಂತಹ ಕಾರಣ.

ತಮ್ಮಂದಿರೇ, ಏನಾದ್ರೂ ಬದುಕಿನಲ್ಲಿ ನಾವು ಸೋತೆವು. ಅಂತ ನಿಮಗೆ ಅನ್ನಿಸ್ತದೆಯೇ? ಇಲ್ವಲ್ಲ! ಈಗ ನಾವೇನಾದರೂ ಕೊಟ್ಟು, ನಮ್ಮನ್ನು ಹೊಗಳಿಲಿಕ್ಕೆ ನಾಲ್ಕು ಜನರನ್ನು ಸಂಗ್ರಹಿಸಿದ್ದೇನು ಅಲ್ವಲ್ಲ? ಎಷ್ಟೋ ಮಂದಿ ಸಾಧುಗಳು, ಸಂತರು, ಋಷಿಮುನಿಗಳು ಬರ್ತಾರೆ. ನಮ್ಮನ್ನು ಕಂಡು ಸುಖದ ಸಲ್ಲಾಪವನ್ನು ಮಾಡ್ತಾರೆ, ನಮ್ಮ ಆತಿಥ್ಯವನ್ನು ಸ್ವೀಕರಿಸ್ತಾರೆ. ಮಾತ್ರವಲ್ಲ. ಅವರು ನಮಗೆ ಆಮಂತ್ರಣವನ್ನು ಕೊಡ್ತಾ ಇದ್ದಾರೆ. ಹೌದಲ್ಲಾ? ಈ ವಿಶ್ವಾಸ ಬೆಳದದೆ ಸಜ್ಜನರಲ್ಲಿ ನಮ್ಮದು. ಆದುದರಿಂದಲೇ 'ಕೌಂತೇಯರಿಹಪರಿಯ' ಅಲ್ವೊ? ಏನು ಅಂತ ಹೇಳೋದು? ಇದೊಂದು ಕೌತುಕವೂ ಕೂಡ, ಯಾಕೆ? ಇವರು ಯಾಕೆ ಮೆರೀತಾರೆ? ಬಂಡಾಗಾರ ಅಲ್ಲಿ ಉಂಟು, ಸೈನ್ಯ ಅಲ್ಲಿ ಉಂಟು, ದೊಡ್ಡ ದೊಡ್ಡವರು ಅಲ್ಲಿದ್ದಾರೆ. ಚಕ್ರವರ್ತಿಯ ಕಿರೀಟ ಹಸ್ತಿನಾವತಿಯಲ್ಲಿ, ಶ್ವೇತ:ಛತ್ರ ಹಸ್ತಿನಾವತಿಯಲ್ಲಿ, ಖಾಂಡವಪ್ರಸ್ಥವೆಂಬಂತಹ ಈ ಕಾಡಿನಲ್ಲಿ ಇವರಾಗಿಯೇ ಕೆಲವು... ಅಲ್ವೊ?

ಈಗ ಏನ್ ನಮ್ಮ ಅರಮನೆ ದೊಡ್ಡ ಅರಮನೆಯೋ ಇದು? ಏನೂ ಅಲ್ಲ. ಐದುಮಂದಿ ಸಮಷ್ಟಿಯಾಗಿ ಬಾಳಿ ಬದುಕಬೇಕು ಎಂಬುದಕ್ಕೆ ಐದು ಕೋಣೆ ಮುಖ್ಯ ಅಂತ ಮಾಡಿಕೊಂಡಿದ್ದೇವಷ್ಟೆ, ಹೊರತು ನಿಜವಾಗಿ ನೋಡಿದರೆ, ನಾಡನುಡಿಯಲ್ಲಿ ಇದೊಂದು ತರದ ಬಿಡಾರ, ಹೌದಲ್ಲ? ಇನ್ನೂ ಅಗ್ಗವಾಗಿ ಎಲ್ಲರಿಗೂ ಅರ್ಥವಾಗುವ ಶಬ್ದ ಹೇಳಬಹುದು ಅಂತ ಇದ್ರೆ, ಬಹುಶ: ಕೌರವನ ಭಾಷೆಯಲ್ಲಿ ನಾವು ಹಸ್ತಿನಾವತಿಯವರಾದ್ರೂ ಕೂಡ, ಯಾರೂ ಪ್ರವೇಶ ಮಾಡದೇ ಇದ್ದಂತಹ ಈ ಒಂದು ರುದ್ರಭೂಮಿ ಸದೃಶವಾದಂತಹ ಖಾಂಡವಪ್ರಸ್ಥದಲ್ಲಿ ನಾವು ಒಕ್ಕಲಾಗಿದ್ದೇವೆ ಅಂತ ಅರ್ಥ,

ಅವರೇನೂ ಹೇಳ್‌ಲಿ; ಎಲ್ಲಿ ನಾವಿದ್ರೂ ಕೂಡ ನಮ್ಮ ವೈಯಕ್ತಿಕವಾದಂತಹ ಸ್ವಾತಂತ್ರ್ಯಕ್ಕೆ ಈವರೆಗೆ ಧಕ್ಕೆ ಬರಲಿಲ್ಲ. ಬಂದದೊ? ನಮಗೆ ಬರಲಿಲ್ಲ.

ಸ್ವತಂತ್ರ ಎಂಬ ಶಬ್ದದ ಅರ್ಥ ನಿಮಗೆಲ್ಲ ಗೊತ್ತಾದದ್ದು ಬಹಳ ಸಂತೋಷ ನನಗೆ. ಹೇಗೆ? ಸ್ವತಂತ್ರ ಅಂತಂದ್ರೆ ಏನು? ಅದಕ್ಕೊಂದು ಒಳ್ಳೆ ಉದಾಹರಣೆ ಕೊಡಬಹುದು. ನಾವು ಯಾವುದೇ ಬಟ್ಟೆ ಬರೆ ಧರಿಸುವಾಗ ನಮ್ಮ ಮೈಯಳತೆಗೆ ಸರಿಯಾಗಿ ಧರಿಸುವದಕ್ಕೆ ಸ್ವಾತಂತ್ರ್ಯ ಅಂತ ಹೆಸರು. ಬಟ್ಟೆಯಳತೆಗೆ ಮೈ ಬೆಳೆಸಲಿಕ್ಕೂ ಆಗುದಿಲ್ಲಾ, ಮೈ ಕತ್ತರಿಸಲಿಕ್ಕೂ ಆಗೋದಿಲ್ಲಾ. ಆದ್ದರಿಂದ ನಮ್ಮ ಹೆಜ್ಜೆಯಲ್ಲೇ ನಾವು ಭದ್ರವಾಗಿ, ಎಲ್ಲಿ ನಿಂತೂ ಕೂಡ ನಾವು ಸುಭದ್ರವಾಗಿ ಇರ್ತೇವೆ. ಹ್ಞಾ, ಸುಭದ್ರರಾಗಿ ಇರ್ತೇವೆ ಅಂತ ಹೇಳುವಾಗ ನನಗದು ನೆನಪಾದದ್ದು.

*ಭೈರವಿ-ಝಂಪೆ॥ ಪಾರ್ಥನೊಂದಿನವಖಿಳ ತೀರ್ಥಯಾತ್ರೆಗೆ ನಡೆದು ದೈತ್ಯಾರಿಯನುಜೆಯೊಡ*

*ನುತ್ಸವದಿ ಬರಲು ॥ ಆ ಸುಭದ್ರೆಯೊಳಾಗುಣ | ರಾಶಿಯೆನಿಪಭಿಮನ್ಯು*

ತೋಷದಿಂದುದಿಸಿಪರಿ | ತೋಷಗೊಳಿಸುತಿರೆ || ೩೧ ||

ಅಲ್ವೇನೊ ಅರ್ಜುನ? ಹೌದದು, ಸಮಷ್ಟಿಯಿಂದ ಬಾಳಿ ಬದುಕುವುದು ಹೇಗೆ? ನಾವ್ ಆವಾಗ್ಲೆ ಹೇಳಿದ ಹಾಗೆ, ಇನ್ನು ಇದಕ್ಕಿಂತ ಹೆಚ್ಚಿನ ಅವಿಭಕ್ತ ಕುಟುಂಬ ಪದ್ಧತಿ ಪ್ರಪಂಚದಲ್ಲಿ ಮೊದಲು ಇತ್ತೊ ಇಲ್ವೊ? ಗೊತ್ತಿಲ್ಲ. ಮುಂದಿನವರಲ್ಲಿಯಂತೂ ಇರೋದಿಲ್ಲ. ಎಲ್ಲಿಯವರೆಗೆ ಹಂಚೋಣ ನಮ್ಮಲ್ಲಿ? ಬಹುಶ: ಅದು ನಮ್ಮ ತಾಯಿ ಮಾಡಿದಂತಹ ರಾಜಕೀಯವೊ! ಹೇಳಲಿಕ್ಕೆ ಬರೋದಿಲ್ಲಾ, ಯಾಕೆ ಅಂತಂದ್ರೆ, ಕುಂತಿ ಮಾತೆಯ ಬಗ್ಗೆ 'ಇದಂ ಮಿತ್ಥಂ' ಅಂತ ತೀರ್ಮಾನಕ್ಕೆ ಬರುವುದೇ ಕಷ್ಟವಾಗ್ತದೆ. ನಾನಂತೂ ಒಂದು ಸಿದ್ಧಾಂತಕ್ಕೆ ಬಂದಿದ್ದೇನೆ. ಯಾವ ವಿಚಾರದಲ್ಲಿಯೂ ಕೂಡಾ ನಮ್ಮ ಅಮ್ಮನ ಮಟ್ಟಕ್ಕೆ ನಾವು ಮುಟ್ಟುವದಕ್ಕೆ ಸಾಧ್ಯವಿಲ್ಲಾ. ಯಾಕೆ ಅಮ್ಮನ ಮಟ್ಟಕ್ಕೆ ಮುಟ್ಟುವದಕ್ಕೆ ಸಾಧ್ಯವಿಲ್ಲ? ಅದೊಂದು ಹೆಚ್ಚುಗಾರಿಕೆ, ನಮ್ಮ ವಂಶದ್ದು ನಮ್ಮ ಮನೆತನದ್ದು. ನಮ್ಮ ಮನೆತನಕ್ಕೆ ಬಂದಂತಹ ಹೆಂಗಸರು ಎಲ್ಲವರೂ ನಮ್ಮ ಮನೆತನದ ಗಂಡಸರಿಗಿಂತ ಬುದ್ಧಿವಂತರೆ. ಸತ್ಯವತೀದೇವಿಯವರಾಗಲಿ, ನಮ್ಮ ತಾಯಿಯವರೇ ಆಗಲಿ... ಹೌದಲ್ಲ! ಏನು? ಹಾಗಾದರೆ ಸತ್ಯವತಿ ದೇವಿಯವರು ಆ ಕಾಲದಲ್ಲಿ ಅಂತ:ಪುರದಲ್ಲಿ ರಾಜಮಾತೆಯಾಗಿ ಇಲ್ಲದೆ ಇರುತ್ತಿದ್ದರೆ, ಬಹುಶ: ನನಗೆ ತೋರದೆ, ನಮ್ಮ ಭೀಷಜ್ಜ, ನಮ್ಮ ಮನೆತನದ ಮರ್ಯಾದೆ ಉಳಿಸುವದಕ್ಕೆ ಬೇಕಾಗಿ, ಅಂತಹ ಪ್ರಕರಣಕ್ಕೆ ಕೈ ಹಾಕಿರಲಿಲ್ಲ ಅವ. ಸತ್ಯವತೀ ದೇವಿಯವರ ಪ್ರಚೋದನೆ, ಹೌದಲ್ಲ! ಈಗ ನಮ್ಮ ಅಮ್ಮನೂ ಹಾಗೆ, ಸರಿಯಪ್ಪ, ನೀನು ಹೇಳಿದಿ - "ತಾಯಿ, ಈ ಹೊತ್ತು ಒಳ್ಳೆ ಭಿಕ್ಷೆಯನ್ನು ಪಡೆದು ಬಂದಿದ್ದೇನೆ" ಅಂತ, ಹೌದೊ? ಆವಾಗ್ಲೆ ನಮ್ಮ ಅಮ್ಮ ಏನು ಹೇಳಿದ್ಲು? "ಒಳ್ಳೆದಾಯ್ತು ಮಗನೇ" ಈ ಮೊದಲಿನಂತೆ, ಈ ಹೊತ್ತು ಎಲ್ಲವರೂ ಸಮನಾಗಿ ಹಂಚಿಕೊಳ್ಳಿ ಅಂತ! ಅಷ್ಟು

ಮುಗ್ಧೆಯೇನೂ ಅಲ್ಲ ನಮ್ಮ ತಾಯಿ. ನಾವೆಲ್ಲರೂ ದ್ರುಪದರಾಜನ ಸ್ವಯಂವರ ಮಂಟಪಕ್ಕೆ ಹೋಗಿದ್ದೇವೆ ಅಂತ ನಮ್ಮ ಅಮ್ಮನಿಗೆ ಗೊತ್ತು, ಗೊತ್ತು ಮಾತ್ರ ಅಲ್ಲ, ಏಕಚಕ್ರಪುರದಿಂದ ನಮ್ಮನ್ನು ಪ್ರಚೋದಿಸಿ ದ್ರುಪದನ ಅರಮನೆವರೆಗೆ ಕೊಂಡೊಯ್ದುವಳೇ ನಮ್ಮ ತಾಯಿ. ಬಹುಶ: ನಮ್ಮ ತಾಯಿಯ ಉದ್ದೇಶ ಹೀಗಿದ್ದಿರಬೇಕು, “ನನ್ನ ಮಕ್ಕಳಿಗೆ ಒಂದು ದೊಡ್ಡ ಶ್ರೀಮಂತಿಕೆಯುಳ್ಳಂತಹ ಮನೆತನದ ನೆಂಟಸ್ತಿಕೆಯನ್ನು ಮಾಡಬೇಕು. ಇಲ್ಲದಿದ್ದರೆ ಕೌರವರ ಮುಂದೆ ಹೋಗುವದಕ್ಕೆ ಕಷ್ಟ ಬೇರೆ ಯಾವ ಬಲವೂ ಇಲ್ಲಾ. ನೀನು ಅನ್ಯತಾ ಭಾವಿಸಬೇಡ, ತಮ್ಮಾ, ಚಕ್ರವರ್ತಿಯಾದ ತಂದೆಯವರ ಜೊತೆಯಲ್ಲಿ ಮಹಾರಾಣಿಯಾಗಿ ಮೆರೆದವಳು ನಮ್ಮಮ್ಮ ಹೌದಲ್ಲ! ಆದರೆ ನಮ್ಮ ಅಮ್ಮನ ಉದ್ದೇಶ ಏನಿತ್ತೋ ಗೊತ್ತಿಲ್ಲ. ನಮಗಂತೂ ಮನಸ್ಸಿಗೆ ತೃಪ್ತಿ ಇತ್ತು, ಏನು? ಆ ಮತ್ಸಲಾಂಛನವನ್ನು ಬೇಧಿಸಿ ದ್ರುಪದನಂದನೆಯನ್ನು ವರಿಸುವದಕ್ಕೆ ಪರ್ಯಾಪ್ತನಾದಂತಹ ಒಬ್ಬ ವ್ಯಕ್ತಿ ನೀನೇ ಅಂತ ಭೀಮನಿಗಾಗ್ಲಿ, ನನಗಾಗ್ಲಿ, ನಕುಲ-ಸಹದೇವರಿಗಾಗಿ, ಅದು ತೃಪ್ತಿಯನ್ನು ತರುತ್ತಿತ್ತು. ಯಾಕೆ? ನೀನೇನು? ನಾವೇನು? ಹೌದಲ್ಲ! ಹಾಗಾಗಿ ದ್ರೌಪದಿ ನಿನಗಾಗ್ಲಿ, ಧ್ರುಪದನ ನೆಂಟಸ್ತಿಕೆ ನಮಗೆ ಸಮಷ್ಟಿಯಲ್ಲಾಗಿ, ಆದರೆ ಅಲ್ಲಿ ಮತ್ಸಲಾಂಛನವನ್ನು ನೀನು ಭೇದಿಸಿದಾಗ, ಮಿಕ್ಕ ಕ್ಷತ್ರಿಯರೆಲ್ಲಾ, ಅದಕ್ಕೆ ಹೇಳ್ತಾರೆ ಅವರಿಗೆ ಅಭಿಮಾನಕ್ಕೆ ಪೆಟ್ಟಾಯ್ತು ಅಂತ. ನನ್ನ ಭಾಷೆಯಲ್ಲಿ ಅದಭಿಮಾನವಲ್ಲ ಅದು. ಮರ್ಯಾದೆ ಮೊದಲೇ ಹೋಗ್ಯದೆ ಅವರದು, ಮತ್ಸಲಾಂಛನ ಭೇದಿಸುವದಕ್ಕಾಗದೆ, ಕಡೆಗಾಲಕ್ಕೆ ಅಭಿಮಾನವೊ ಅದು, ಕ್ಷತ್ರಿಯರದ್ದು? ಅಲ್ಲಾ, ಅಸೂಯೆ, ಹೊಟ್ಟೆಕಿಚ್ಚು. ಆವಾಗ ನಿನ್ನನ್ನು ಇದಿರಿಸುವದಕ್ಕೆ ಬೇಕಾಗಿ ತಾತ್ವಿಕಭಿನ್ನತೆ ಇದ್ರೂ ಮೊದಲು ಅವರವರಲ್ಲಿ ಸ್ಪರ್ಧೆ ಇದ್ರೂ ಕೊನೆಗೊಂದು ಗುಂಪಾಗಿ ನಿನ್ನ ಮೈಮೇಲೆ ಬೀಳಲಿಕ್ಕೆ ಬಂದ್ರು ನೋಡು. ನಮ್ಮ ಕಾಲದಲ್ಲಿ ಆಗುವ ರಾಜಕೀಯದ ಒಂದೊಂದು ಸ್ವರೂಪ ಅದು. ಹೇಗೆ? ಮೊದಲು ಅವರಾಗಿ ಸ್ಪರ್ಧಿಸಿದ್ರೂ ಏನೂ ಆಗಲಿಲ್ಲಾ. ಕೊನೆಗೆ ನೀನು ಜಯಿಸಿದೆ. ಜಯಿಸುವಾಗ ಎಲ್ಲಾ ಒಟ್ಟಾದು, ಆವಾಗ ನಾನು ಕಣ್ ಸನ್ನೆ ಮಾಡಿದೆ ಭೀಮನಿಗೆ, ನಕುಲ-ಸಹದೇವರನ್ನು ಕರಕೊಂಡು ಮೊದಲೇ ಬಂದಿದ್ದೆ. ಹೌದಲ್ಲ ! “ಏನು ಮಗನೇ, ನೀನು ಮೊದಲೇ ಬಂದಿದ್ದಿ? ಅಂತ ತಾಯಿ ಕೇಳಿದ್ದು ಆವಾಗ “ಹೀಗೆ ನಮಗಲ್ಲೇನು ಕೆಲಸ ಇಲ್ಲಾ ಅಮ್ಮಾ” ಅಷ್ಟೇ ಹೇಳಿದ್ದೆ. ಭೀಮನು ಉಳಿದಿದ್ದ. ಕೊನೆಗೆ ಎಲ್ಲರನ್ನು ಸೋಲಿಸಿ ಭೀಮನೂ ನೀನೂ ಬಂದಾಗ ನಮ್ಮ ತಾಯಿಗೆ ನಿದ್ದೆ ಬಂದಿತ್ತು ಹೌದು. ನಟನೆಯೇನೂ ಅಲ್ಲ ಅದು. ನೀನು ಬಂದು ನಮಸ್ಕಾರವನ್ನು ಮಾಡಿ ಅಮ್ಮಾ ಒಳ್ಳೆಯ ಭಿಕ್ಷೆಯನ್ನು ತಂದಿದ್ದೇನೆ ಅಂತ ಹೇಳುವಾಗ ನಿದ್ರೆ ಕಣ್ಣಿನಲ್ಲಾದ್ರೂ ತಾಯಿ ಹೇಳಿದ್ದೇಗೆ? ಸಮವಾಗಿ ಹಂಚಿಕೊಳ್ಳಿ ಅಂತ. ನಾವು ಅದನ್ನೇ ವೇದವಾಕ್ಯ ಅಂತ ಅಂಗೀಕರಿಸಿದೆವು. ಆದರೆ ನನ್ನ ಅಂತ:ಕರಣದಲ್ಲಿ ಹಾಗಲ್ಲ ಅದು ಅಂತ ತೋರ್ಯದೆ. ಅದೇನು ಅನ್ಯಾಯ ಅಲ್ಲ. ನಿರ್ಗತಿಕರಾದಂತಹ ನಾವು ಕೊನೆವರೆಗೂ 'ಅವಿಭಕ್ತ ಕುಟುಂಬ ಹೇಗಿರಬೇಕು? ಅಂತ ತೋರಿಸುವದಕ್ಕೆ 'ರಾಜ್ಯ ಸಲ್ಲದು,' ರಾಜ್ಯ ಬಂದ್ರೂ ವಿಭಜಿಸಲ್ಪಟ್ಟಿತು. ಇದೀಗ ಈ ದಾಂಪತ್ಯ ಅನ್ನುವದು ಇದೊಂದು ಏಕಸೂತ್ರ ಅಲ್ವೊ? ಯಾವ ಕಾಲಕ್ಕೂ ನಮಗೆ ಬೇರೆ ಬೇರೆ ಇರುವದಕ್ಕೆ ಸಾಧ್ಯವೇ ಇಲ್ಲ. ಅವಳು ಗೃಹಿಣಿ. ಇದು ನನಗೆ ಪ್ರತ್ಯಕ್ಷವಾಗಿ ಮನವರಿಕೆಯಾದದ್ದು

ಯಾವಾಗ? ಅಂತಂದ್ರೆ ದೇವರ್ಷಿ ನಾರದರು ಬಂದು ಹೇಳಿದಮೇಲೆ, ನಾರದರು ಏನ್ ಹೇಳಿದ್ರು, ಒಬ್ಬೊಬ್ಬನೂ ಒಂದೊಂದು ವರ್ಷ ದ್ರೌಪದಿಯನ್ನು ಪತ್ನಿಯನ್ನಾಗಿ ಅಂಗೀಕರಿಸಬೇಕು, ಪರ್ಯಾಯ ಕ್ರಮದಿಂದ; ಆ ಕಾಲದಲ್ಲಿ ಬಾಕಿದ್ದವರು ಅವಳಲ್ಲಿ ಸಂಬಂಧವನ್ನು ಬೇರೆ-ಬೇರೆ ಮಾಡಿಕೊಳ್ಳಬೇಕು. ಉದಾಹರಣೆಗೆ ಹಿರಿಯನಾದ ನನಗೆ ದ್ರೌಪದಿ ನನ್ನ ಪರ್ಯಾಯದಲ್ಲಿ ಹೆಂಡತಿಯಾಗಿದ್ದಾವಾಗ, ನಿಮಗೆಲ್ಲಾ ಅತ್ತಿಗೆ ಹೌದೊ? ಭೀಮನಿಗೊ, ಅರ್ಜುನನಿಗೊ, ನಕುಲ-ಸಹದೇವಾದಿಗಳಿಗೆ ಅವಳು ಪತ್ನಿಯ ಸ್ಥಾನದಲ್ಲಿದ್ದಾಗ ನನಗವಳು ಮೈದುನಿ, ಬಹಳ-ಬಹಳ-ಬಹಳ ಕಷ್ಟ ಅದು ಹೌದೊ ಅಲ್ವೊ? ಯಾಕೆಂದ್ರೆ ಒಂದು ವರ್ಷ ಹೆಂಡತಿಯಾಗಿರೋದು, ಮತ್ತೊಂದು ವರ್ಷದಲ್ಲಿ ಅವಳು ಮೈದುನಿಯಾಗಿರೋದು ಅಂದ್ರೆ ಮಗಳ ಸಮಾನವಾಗಿರುವದು. ಆದ್ರೂ ನನ್ನ ಮಟ್ಟಿಗೆ ಆದೀತು. ಸಹದೇವನ ಮಟ್ಟಿಗೂ ಆದೀತು. ಯಾಕೆ? ನಾವಿಬ್ರೂ ದ್ರೌಪದಿಯಲ್ಲಿ ಎರಡು ಸಂಬಂಧವನ್ನು ಇರಿಸಿಕೊಂಡರೆ ಸಾಕು. ತಮ್ಮಂದಿರೇ, ನಿಮ್ಮದು ಮಾತ್ರ ಬಹಳ ಕಷ್ಟ ನೀವು ಮೂರು ಮೂರು ಸಂಬಂಧವನ್ನು ಇರಿಸಿಕೊಳ್ಳಬೇಕಾಗ್ತದೆ. ಇದು ವಿನೋದದ ಮಾತಲ್ಲ ! ನಮ್ಮ ಆ ಮನೋ ನಿಗ್ರಹ, ನಮ್ಮ ಇಂದ್ರಿಯ ನಿಗ್ರಹದ ಅರ್ಹತೆ, ಒಂದು ಸತ್ವಪರೀಕ್ಷೆ. ನಾರದರು ಅದಕ್ಕೆ ಬೇಕಾಗಿಯೇ ಹೇಳಿದರು. ಒಬ್ಬನ ಸ್ವಾಧೀನ ದ್ರೌಪದಿ ಇದ್ದಾಗ, ಬಾಕಿದ್ದವರು ಆ ಶಯ್ಯಾಗಾರವನ್ನು, ನಿದ್ರಾಲಯವನ್ನು ಅಪ್ಪಣೆ ವಿನ: ಪ್ರವೇಶಿಸಲಾಗದು. ಪ್ರವೇಶಿಸಿದ್ರೆ, ತೀರ್ಥಯಾತ್ರೆ ಮಾಡಬೇಕು. ನಾರದರು ಹನ್ನೆರಡು ವರ್ಷ ಅಂತಾ ಹೇಳಿದ್ದಾರೆ. ಮತ್ತೆ ನಮ್ಮ ಪುರೋಹಿತರು ಹೇಳಿದ್ರು, "ಅಗತ್ಯ ಬಿದ್ರೆ ಹನ್ನೆರಡು ವರ್ಷವನ್ನು ಹನ್ನೆರಡು ತಿಂಗಳು ಮಾಡಬಹುದು" ಅಂತ. ಹಾಗಾಗಿ ಇವತ್ತಿಗೂ ಪ್ರಚಾರದಲ್ಲಿ ಉಂಟು ಅದು. ಹನ್ನೆರಡು ವರ್ಷ ತೀರ್ಥ ಯಾತ್ರೆಯೋ? ಅಲ್ಲಾ, ಹನ್ನೆರಡು ತಿಂಗಳೋ? ಅಂತ. ಹೌದಲ್ಲ! ಆದರೆ ನಾನು ತಿಳಿದಂತೆ ನೀನು ಹನ್ನೆರಡು ತಿಂಗಳಿನಲ್ಲೇ ಪೂರೈಸಿದ್ದು, ಈಗ ನಾವು ಕೌರವಾದಿಗಳನ್ನು ದೂರ್ತೇವೆ. ಅವರು ಹಾಗೆ ಮಾಡದೆ ಇರುತ್ತಿದೆ, ದ್ರುಪದನ ನೆಂಟಸ್ತಿಕೆಗೆ ನೀನಾದ್ರೂ ತಯಾರಾಗ್ತಿದ್ಯೋ, ತಮ್ಮಾ? ಯಾಕೆ ಅಂತಂದ್ರೆ ದ್ರುಪದನಿಗೆ ನೀನು ಕೊಟ್ಟ ಪೆಟ್ಟೆ ಅವನಿಗೊಬ್ಬು ಮಗಳು ಹುಟ್ಟಬೇಕು ಅಂತ ಪ್ರಚೋದನೆ ಕೊಟ್ಟದ್ದು. ಆವೊತ್ತು ಗುರುದಕ್ಷಿಣೆಗೆ ಅವನನ್ನು ಅಪಮಾನ ಪಡಿಸಿದ್ದು ಹೌದಲ್ಲ! ನಿನ್ನ ಕೈಯಿಂದ ಪೆಟ್ಟು ತಿಂದು, ಒಂದು ತರದ ವಿರೋಧ ಭಾವವನ್ನು ಇಟ್ಟುಕೊಂಡು, ಆ ವಿರೋಧವನ್ನು ಆ ದ್ರುಪದ ಮಾವ ಈ ಹೊತ್ತಿಗೂ ಆ ಬಡ ಬ್ರಾಹ್ಮಣನಲ್ಲಿ ತೋರಿಸುತ್ತಾ ಇದ್ದಾನೆ. ಅದನ್ನು ಬೆಳೆಸುತ್ತಾ ಇದ್ದಾನೆ ಅಂತ ನಮಗೆ ಗೊತ್ತಿರುವಾಗ ದ್ರೋಣರ ಪ್ರಿಯಶಿಷ್ಯನಾದಂತಹ ನೀನು, ದ್ರೋಣನಿಗೆ ಬೇಕಾಗಿ ಮಾಟ ಮಾಡುತ್ತಿರುವಂತಹ ದ್ರುಪದನ ಮಗಳನ್ನು ಮದುವೆ ಆಗ್ಲಿಕ್ಕೆ ತಯಾರಾಗ್ತಿದ್ಯೋ? ಅಲ್ಲಲ್ಲಾ, ಕೇಳಿದ್ದು ನಾನು...

ದೈವಘಟನೆ, ಕೌರವನ ದುರ್ಬುದ್ಧಿ, ನಮಗೆ ಹೀಗೊಂದು ಅನುಕೂಲತೆಯನ್ನು ಒದಗಿಸಿಕೊಟ್ಟಿತು. ಹೀಗೆ ದ್ರುಪದ ರಾಜನ ನೆಂಟಸ್ತಿಕೆಯಿಂದ ನಮಗಾದಂತಹ

ಅನುಕೂಲತೆಯಿಂದ ನಮ್ಮ ಆ ಕೌಟುಂಬಿಕ ಜೀವನ ಭದ್ರವೂ ಆಯಿತು. ತಾಯಿಯಿಂದ ಆಮೇಲೆ ಪಾಂಡವರಾದ್ರೂ, ಸರಿಯಾದಂತಹ ನ್ಯಾಯಾಂಗದಲ್ಲಿ ಕ್ಷಮೆ ಇದ್ರೂ, ನಾರದರ ಮಾತಿನಲ್ಲಿ ಪ್ರಮಾಣ ಬದ್ಧರಾದ್ದರಿಂದ ಉಲ್ಲಂಘನೆ ಮಾಡ್ಲಿಲ್ಲ. ನಾನು ಬೇಡಾ ಅಂತ ಹೇಳಿದ್ರೂ ನೀನು ಆಚರಿಸಿ ತೋರಿಸಿದೆ ಅಲ್ವಾ? ಇದರಿಂದ ಏನಾಯ್ತು? ನಿನ್ನ ತೀರ್ಥಯಾತ್ರಾ ವ್ಯಾಜ್ಯದಿಂದ ನಿನಗೊಬ್ಬನಿಗೆ ಲಾಭ ಆದದ್ದಲ್ಲ. ಅದು ಪಾಂಡವರು ಹೀಗಿದ್ದಾರೆ ಅಂತ ನೀನು ಹೋದಲ್ಲಿ ಹೋದಲ್ಲಿ ಪ್ರಚಾರ ಆಯ್ಕೆ ಇಲ್ವೊ? ಹಾ ಎಷ್ಟು ತೀರ್ಥ ಮಿಂದಿದ್ದಿ! ಎಷ್ಟು ಕ್ಷೇತ್ರದರ್ಶನ ಮಾಡಿದ್ದಿ! ದೊಡ್ಡ ಲಾಭ ಅದು. ಯಾಕೆಂದ್ರೆ ತೀರ್ಥಸ್ನಾನಕ್ಕೆ ಹೋದಲ್ಲಿ ಕ್ಷೇತ್ರದವರು ಸಿಕ್ಕಿದ್ರೆ... ಒಬ್ಬಿಬ್ರು ಸಿಕ್ಕಿದ್ರೆ ಸಾಕು, ಪ್ರಚಾರಕ್ಕೆ ಅವರಷ್ಟು ಒಳ್ಳೆಯ ಮಾಧ್ಯಮ ಜಗತ್ತಿನಲ್ಲಿ ಬೇರೊಂದಿಲ್ಲ. ಯಾಕೆ? ಅವರು ಹೇಳ್ತಾರೆ, ಈ ಒಳ್ಳೆಯವರು ಅವರಲ್ಲಿ ಹೋಗಿ ಒಂದು ಗಳಿಗೆ ತಂಗಿದ್ರೆ, “ಏನಯ್ಯಾ, ನಮ್ಮಲ್ಲಿ ಅರ್ಜುನ ಬಂದಿದ್ದ.! ಆದರೆ ಅಷ್ಟಕ್ಕೆ ದೊಡ್ಡಸ್ತಿಕೆಯೇನೂ ಬರಲಿಲ್ಲ. ತೀರ್ಥಯಾತ್ರೆಯ ಕೊನೆಗೆ ನೀನು ಹೋದದ್ದೆಲ್ಲಿಗೆ? ದ್ವಾರಾವತಿಗೆ

ಇನ್ನು ಪಾಂಡವರಿಗೇನು ಪ್ರಚಾರ ಬೇಕಾಗಿಲ್ಲ. ದ್ರೌಪದಿಸ್ವಯಂವರದ ಕಾಲದಲ್ಲಿ ರಾತ್ರಿ ನಮಗೆ ಬಲರಾಮ ಕೃಷ್ಣರ ಸಹವಾಸ ಸಿಕ್ಕಿತು. ಹೇಳಿ-ಕೇಳಿ ನಾವು ರಕ್ತ ಸಂಬಂಧಿಗಳು ಹೌದು. ಆದರೆ ರಾಮಕೃಷ್ಣರು ಅವೊತ್ತು ರಾತ್ರಿ ಏನ್ ಹೇಳಿದ್ರು ನಮ್ಮಮ್ಮನಲ್ಲಿ? “ಏನ್ ಮಾಡೋದು ನಮ್ಮ ಗೊಂದಲವೇ ತಲೆ ತುಂಬಾ ಇದೆ, ಮೊದಲಿನದ್ದು ಕಂಸಕಾರಣೀ ಭೂತನಾಗಿ, ಅವ ಸತ್ತೂ ಕೂಡ ಅವನದ್ದಾದಂತಹ ಪ್ರೇತಬಾಧೆ ಬಹಳಷ್ಟು ಉಂಟು ಹಾಗಾಗಿ ದ್ವಾರಾವತಿಯ ರಕ್ಷಣೆಗೆ ಬೇಕಾಗಿಯೇ ನಾವು ರಾತ್ರಿ-ಹಗಲು ಕಣ್ಣಿಗೆ ಎಣ್ಣೆ ಹಾಕಿ ಕಾಯುತ್ತಾ ಇರುವ ಪ್ರಮೇಯ. ಮತ್ತೆ? 'ಅತ್ತೆ' ಅಂತ ನಮ್ಮಮ್ಮನಲ್ಲಿ ಹಾಗಾಗಿ ನಿಮ್ಮ ಬಗ್ಗೆ ಕೇಳಿ, ಸುದ್ದಿ ಸಂಗ್ರಹ ಮಾಡಿ ಅಯ್ಯೋ ಈ ಕಾಲಕ್ಕೆ ಪಾಂಡವರಿಗೆ ಸಹಾಯ ಮಾಡುವದಕ್ಕೆ ಆಗೋದಿಲ್ವಲ್ಲ? ಎಂಬ ಒಂದು ತರದ ಸಹಾನುಭೂತಿಯುಳ್ಳ ಸಂತಾಪವನ್ನನುಭವಿಸುವದನ್ನು ಬಿಟ್ರೆ, ಸಕ್ರೀಯವಾಗಿ ನಿಮ್ಮ ಜೀವನದಲ್ಲಿ ಹಸ್ತಕ್ಷೇಪ ಮಾಡುವದಕ್ಕೆ ಕಷ್ಟಸಾಧ್ಯವಾಗಿದೆ ನಮಗೆ. ಆದರೂ ನಮ್ಮ ಬಗ್ಗೆ ಒಲವು, ನಮ್ಮ ಪ್ರಥಮ ಸಂದರ್ಭದಲ್ಲಿ ನಮಗುಂಟಾದಂತಹ ಗೆಲವು, ದೂರದಲ್ಲಾದರೂ ರಾಮಕೃಷ್ಣರ ಅನುಗ್ರಹದ ದೃಷ್ಟಿ ನಮ್ಮ ಬಗ್ಗೆ ಉಂಟಲ್ಲ, ಅದು ದೊಡ್ಡ ಲಾಭ ಹೌದೊ ಅಲ್ವೊ? ದ್ರುಪದನ ನೆಂಟಸ್ತಿಕೆ ಸಾಧಾರಣ ಲಾಭ, ಅದಕ್ಕಿಂತ ದೊಡ್ಡ ಲಾಭ ಶ್ರೀಕೃಷ್ಣ ಬಲರಾಮರ ಸ್ನೇಹ. ಈಗ ಎಲ್ಲಿಗೆ ಮುಟ್ಟಿತು ನೋಡು, ನಿನ್ನ ತೀರ್ಥಯಾತ್ರೆಯಿಂದ? ಆದ್ದರಿಂದ ನನಗೆ ತೋರ್ತದೆ, ನಿನ್ನ ತೀರ್ಥಯಾತ್ರೆಗೆ ನಿಮಿತ್ತರಾದ, ಆ ಕಳ್ಳರು ಸತ್ತಿದ್ರೂ ಕೂಡ, ಅವರ ಕುರಿತಾದಂತಹ ಕೃತಜ್ಞತೆ ಸಮರ್ಪಣೆ. ಇಲ್ಲದಿದ್ರೆ ಬ್ರಾಹ್ಮಣರ ಅಗ್ರಹಾರದಲ್ಲಿ ಈ ಕಳ್ಳರು ಪ್ರವೇಶ ಮಾಡಿ, ಅಲ್ವೊ? ಏನಿದ್ದೀತು? ಈ ಬ್ರಾಹ್ಮಣರ ಅಗ್ರಹಾರದಲ್ಲಿ ಏನೋ ಇದ್ದೀತು. ಇದರಿಂದ ಒಂದ್ ಹೊಸ ಪಾಠವೂ ಸಿಕ್ಕಿತು, ಬ್ರಾಹ್ಮಣರಿಗೆ, ಬ್ರಾಹ್ಮಣರು ಬ್ರಾಹ್ಮಣ್ಯ ಬಿಟ್ಟು, ಅರ್ಥ ಸಂಗ್ರಹ ಮಾಡಿ, ಮನೆಯಲ್ಲಿ ಪೆಟ್ಟಿಗೆಗೆ ಎರಡು ಬೀಗ ಹಾಕಿದ್ರೆ, ಕಳ್ಳರು ಅಲ್ಲಿಗೂ

ಬಾರ್ತಾರೆ ಅಂತ. ಈ ಇಂದ್ರಪ್ರಸ್ಥದ ಈ ಹೊಸ ರಾಷ್ಟ್ರದಲ್ಲಿ ಬ್ರಾಹ್ಮಣರು ಬಂದು, ಬ್ರಾಹ್ಮಣರಾಗಿದ್ರೂ ಕೂಡ ಬ್ರಾಹ್ಮಣರ ಜೊತೆಯಲ್ಲಿ ವೈಶ್ಯವೃತ್ತಿಯನ್ನು ಅವಲಂಬಿಸಿದ್ರಿಂದ ಅಲ್ವೊ ? ಬ್ರಾಹ್ಮಣರ ಮನೆಗೆ ಕಳ್ಳರು ಹೋದದ್ದು? ಶಾಪಕೊಟ್ಟು, ಕೊಲ್ಲುವ ಶಕ್ತಿ ಇಲ್ಲದೇ ಹೋಯಿತು, ಬ್ರಾಹ್ಮಣರಿಗೆ, ಯಾಕೆ? 'ಅರ್ಥಸ್ಯ ದಾಸ:' ಹಾಗೆ, ಒಂದು ಲೆಕ್ಕಕ್ಕೆ ಒಳ್ಳೆದು, ತಮ್ಮಾ. ನಾವು ಹಿಂದೆ, ಸಣ್ಣರಿರುವಾಗ ಕಥೆ ಕೇಳಿದೆವಲ್ಲಾ! ಪ್ರತಿಯೊಂದು ಕಥೆಯಲ್ಲಿಯೂ ಕೂಡ ಒಂದಾನೊಂದು ಊರು, ಅಲ್ಲೊಬ್ಬ ಬಡಬ್ರಾಹ್ಮಣ ಇದ್ದ ಅಂತ, ನಮಗೆ ಗುರುಗಳು ಪಾಠ ಹೇಳಿದ್ದು, ಈಗ ನನಗೆ ಗೊತ್ತಾಗಿದೆ. ಬ್ರಾಹ್ಮಣನಿಗೆ ಬಡತನವೇ ಬ್ರಾಹ್ಮಣ್ಯದ ರಕ್ಷಣೆಗೆ ಒಳ್ಳೇದು. ಶ್ರೀಮಂತನಾದ ಬ್ರಾಹ್ಮಣ ಇದ್ದಾನಂತಾದ್ರೆ ಕಳ್ಳರು ಮೊದಲು ಅಲ್ಲಿಗೆ ಹೋಗ್ತಾರೆ ಎಂಬುದಕ್ಕೆ ಈ ಹೊಸ ಪುರಾವೆ ನಮ್ಮ ಆಡಳಿತದಲ್ಲಿ ಬಂದದ್ದು. ಹಾಗಾಗಿ ಬ್ರಾಹ್ಮಣರಿಗೂ ಒಂದು ಒಳ್ಳೆ ಪಾಠ ಆಯ್ತು, ಬ್ರಾಹ್ಮಣರು ಆವತ್ತಿನದಾವತ್ತನ್ನು, ರಾತ್ರಿ ಮಲಗುದಕ್ಕಿಂತ ಮೊದಲು ಎಲ್ಲಾ ತೊಳೆದು, ಸ್ವಚ್ಛ ಮಾಡಿ ಪಾತ್ರೆ ಕಮುಚ್ಚಿಡಬೇಕು. ಆದ್ದರಿಂದಲೇ ಬ್ರಾಹ್ಮಣರು ಮುಸುರೆ ಉಣೋದಿಲ್ಲಾ, ತಿನ್ನೋದಿಲ್ಲಾ ಅಂತ ಬಂದದ್ದಿರಬೇಕು. ಆದರೆ ನಮ್ಮಲ್ಲಿದ್ದ ಬ್ರಾಹ್ಮಣರೇನು ಮಾಡಿದ್ರೂ, ಮುಸುರೆ ಎಂದರೆ ಬೇಯಿಸಿದ ವಸ್ತು ಮಾತ್ರ ಅಂತ ಮಾಡಿದ್ರೂ, ಸಂಗ್ರಹ ಕೂಡದು, ಅದರಿಂದ ಈಗ ನಮಗೆ ಎಂತಹ ಬ್ರಾಹ್ಮಣರ ಸಹವಾಸ ಸಿಕ್ಕದೆ, ಇಂದ್ರಪ್ರಸ್ಥದಲ್ಲಿ? ಒಬಲ್ಲಾದ್ರೂ ಸಂಗ್ರಹ ಏನೂ ಇಲ್ಲ. ಆದ್ದರಿಂದ ನಮಗೆ ತೊಂದರೆಯೂ ಇಲ್ಲ. ಮತ್ತೆ ಆಳುವವರಿಗೆ ದಾರಿದ್ರ ಇದೆ, ಬ್ರಾಹ್ಮಣರು ಧಾರಾಳ ಸಂಗ್ರಹ ಮಾಡ್ಲಿ, ಅಂತ ಅವರು ಹೇಳ್ತಾರೆ. ಯಾಕೆ? ಕಷ್ಟಕಾಲಕ್ಕೆ ಅವರಿಗೆ ಅಲ್ಲಿಂದ ತಕ್ಕೊಳ್ಳಬಹುದಲ್ಲ! ಎಲ್ಲವೂ ಒಳ್ಳೆಯದಕ್ಕಾಯಿತು, ಅಂತ ನಾನು ಈಗ ತೀರ್ಮಾನಕ್ಕೆ ಬಂದದ್ದು ಯಾಕೆ? ಕಳ್ಳರಿಗೆ ಧನ್ಯವಾದ, ಹಣ ಸಂಪಾದನೆ ಮಾಡಿ ಕಳಕೊಂಡ ಬ್ರಾಹ್ಮಣರಿಗೂ ಧನ್ಯವಾದ. ಅದಕ್ಕಿಂತ ಹೆಚ್ಚಿಗೆ ನಮ್ಮ ಹೊಗೆಯನ್ನು ಕಾಣಲಿಕ್ಕೆ ಬಯಸುತ್ತಿರುವ ಕೌರವರಿಗೂ ಧನ್ಯವಾದ. ಶ್ರೀಕೃಷ್ಣನ ಸಹೋದರಿಯಾದಂತಹ ಸುಭದ್ರೆಯೇ ನಿನಗೆ ಅರ್ಧಾಂಗಿಯಾಗಿ ಸಿಕ್ಕಿದಳೋ ಇಲ್ವೊ? ಶ್ರೀಕೃಷ್ಣದೇವ, ಈಗ ಅಷ್ಟೆ ಸಾಕೊ? ಅಂತಹ ಲೋಕವನ್ನು ಕಾವದೇವ ನಮಗೆ ಹೆಣ್ಣನ್ನು ಕೊಟ್ಟವ. ಅವ ಹೆಣ್ಣಿನ ಕಡೆಯವ, ನಾವು ಗಂಡಿನ ಕಡೆಯವರಾದೆವು ಕೌಟುಂಬಿಕವಾಗಿ ಹೌದೋ ಅಲ್ವೊ? ದ್ರುಪದನಂತೂ ನಮಗೆ ಕಷ್ಟಕಾಲದಲ್ಲಿ ನೆರವು ನೀಡಿಯಾನು, ಯಾದವರಿಗೆ ನೆರವು ನೀಡದೆ ಉಪಾಯ ಇಲ್ಲ, ಯಾಕೆ? ಅವರ ಹೆಣ್ಣು ನಮ್ಮಲ್ಲಿರುವದು. ಅದು ಬರೇ ಹೆಣ್ಣಾಗಿ ಇಲ್ಲಿ ಉಳಿದ್ರೆ ನೆರವು ಬರದೋ ಇಲ್ವೊ? ಈ ನೆಂಟಸ್ತಿಕೆ ಹೇಗೆ ಅಂದ್ರೆ, ಹೆಣ್ಣು ಕೊಟ್ಟವರು ಆಲೋಚನೆ ಮಾಡ್ತಾರೆ, ಮುಂದೇನಾದ್ರೂ ಅಲ್ಲಿ ಆಯೋ ಅಂತ. ಏನೂ ಆಗದಿದ್ರೆ ಎಂತದ್ದು? ಕೊಟ್ಟ ಹೆಣ್ಣು ಕುಲದ ಹೊರಗೆ; ಅಲ್ಲಿಗೂ ನಮಗೆ ದೈವಾನುಕೂಲವೇ ಆಗದೆ. ಹುಟ್ಟಿದ್ದಾನಲ್ಲಾ! ಅಲ್ವೊ? ಈಗ ಯಾದವರು, ಬಲರಾಮ ಕೃಷ್ಣರು ನನಗಾಗಿ ಅಲ್ಲ, ನಿನಗಾಗಿ ಅಲ್ಲ, ಸುಭದ್ರೆಗಾಗಿ ಅಲ್ಲ, ಆ ಅಳಿಯನಿಗಾಗಿ ಆದ್ರೂ ಕೂಡ, ನಮ್ಮಲ್ಲಿ ಪದ್ಧತಿಯೇ ಉಂಟು. ನಮ್ಮ ಹೆಣ್ಣನ್ನು ಮತ್ತೊಂದು ಮನೆತನಕ್ಕೆ ಕೊಟ್ರೆ, ಆ ಪ್ರಾರಂಭಕ್ಕೆ ಹುಟ್ಟಿದ ಯಾವತ್ತೂ ಮಗುವಿಗೆ, ಎಲ್ಲಾ ಅಲ್ಲಿ ಅಜ್ಜನ ಮನೆಯಿಂದಲೇ ಮಾಡಬೇಕು, ಮಾಡಿದ್ದಾರೆ-ಮಾಡಿದ್ದಾರೆ.

ಸಂತೋಷ ಯಾಕೆ ಅಂದ್ರೆ ಯಾದವರು, ಭಗವಾನ್ ಶ್ರೀಕೃಷ್ಣ ಬಲರಾಮಸ್ವಾಮಿ, ಅಭಿಮನ್ಯು ಹುಟ್ಟಿದ ಮೇಲೆ, ರಾತ್ರಿ ಹಗಲು ಎಂಬಂತೆ ನಮ್ಮಲ್ಲಿ ಸಂಬಂಧವನ್ನು ಬೆಳೆಸಿದ್ದಾರೆ. ಇದಕ್ಕಿಂತ ದೊಡ್ಡ ಭಾಗ್ಯ ಏನ್ ಬೇಕು ನಮಗೆ? ಆದ್ರೆ ಒಂದು, ಇಷ್ಟೆಲ್ಲಾ ನೆಂಟಸ್ತಿಕೆ ಆಗಿ, ಇಷ್ಟೆಲ್ಲಾ ಸಂತೋಷ ತುಂಬಿದಾವಾಗ ಮಕ್ಕಳು ಎಲ್ಲಾ ಆಗುವಾಗ, ಸದ್ಯ ಕಟ್ಟಿದ ಅರಮನೆ, ಸಾಕಾಗೋದಿಲ್ಲೋ ಅಂತ? ಇದೊಂದು ಉಂಟು. ಇದನ್ನು ಸ್ವಲ್ಪ ವಿಸ್ತರಿಸಿದ್ರೆ ಆದೀತು ಅಂತ ಆದೀತು, ಇಷ್ಟರವರೆಗೆ ಆಗಬೇಕು ಅಂತ ಆದದ್ದಲ್ಲಲ್ಲ. ಆದದ್ದು!! ಇನ್ನು ಗೋಪಾಲಕೃಷ್ಣ ಸ್ವಾಮಿ, ನಮ್ಮ ಕೈಬಿಡಲಿಕಿಲ್ಲ. ಆ ನಿರೀಕ್ಷೆಯಲ್ಲಿ ಇರೋಣ ಆಗದೊ?

|*ಸೌರಾಷ್ಟ್ರ-ತ್ರಿವುಡೆ ಮುರಹರನು ಬರುತಿರಲು ಧರಣಿ ವರಸಿದಿರ್ಗೊಂಡನುಜ ಸಂಕುಲ*

*ವೆರಸಿ ಬಂದಚ್ಯುತನ ಚರಣದೊಳೆರಗೆ ಕಂಡು* || ೩೩ |

ತಮ್ಮಂದಿರೇ, ಹಹ್ಹಾ! ದ್ವಾರಕಾನಾಥನಾದಂತಹ ಶ್ರೀಕೃಷ್ಣನು ಚಿತ್ತೈಸಿದಾ ಅಂತ ಸುದ್ದಿ ಸಿಕ್ಕಿತಲ್ಲಾ. ಅವನನ್ನು ನಮಗೋಸ್ಕರ ಉಪಯೋಗಿಸಿಕೊಳ್ಳಬೇಕು ಎಂಬ ಲಕ್ಷ್ಯದಿಂದಲೇ ನಾವು ಬರಮಾಡಿ ಕೊಂಡದ್ದಾದ್ರೂ ನಮ್ಮ ಆಂತರಂಗಿಕವಾದ ಭಾವನೆಯಲ್ಲಿ ಅವನ ಕುರಿತಾಗಿ ಏನಿದೆ? ಭಕ್ತಿ, ಅದು ಆಂತರಂಗಿಕವಾಗಿ, ಆದಕಾರಣ ಪ್ರಪ್ರಥಮ ಸ್ವಾಗತ ಮಾಡುವಾಗ ಭಗವಾನ್ ಶ್ರೀಕೃಷ್ಣಽಽ ನಾವೈವರೂ ಪಾದ ಮೂಲದಲ್ಲಿ ಮಣಿದಿದ್ದೇವೆ.

ಅದು, ಕಾರಣ ಹೀಗೆ ನೀನು ಕನ್ಯಾರ್ಥಿಯಾಗಿ ಬರುವಂತಹ ವರನೇನೂ ಅಲ್ಲ. ತತ್ತ್ವತ: ನಮ್ಮ ದೃಷ್ಟಿಯಲ್ಲಿ ನೀನು ಭೂವರ, ಶ್ರೀವರ, ನಮ್ಮ ಭಾವನೆಯಲ್ಲಿ. ಆದಕಾರಣ ನಿನ್ನನ್ನು ನಾವು ನಮ್ಮ ಮನೆ ಒಳಗೆ ಕರೆಯುವದು ಈ ಭಾವದಿಂದ, ಮನೆ ಒಳಗೆ ಕರೆದ ಮೇಲೆ ನಮ್ಮ ಭಾವ ಬೇರೆ. ನೀನು ನಮ್ಮ ಭಾವ ಅಂತ ಇರಲಿಕ್ಕಿಲ್ಲ.

ಆಹಾ! ಯಾಕೆ ಅಂತ ಹೇಳಿದ್ರೆ, ನಿನ್ನಲ್ಲಿ ಪ್ರಾಮಾಣಿಕವಾಗಿ ಹೇಳ್ತೇನೆ. ಮತ್ತೊಬ್ಬು ನಮಸ್ಕಾರ ಮಾಡಿದ್ರಿಂದ ನಾನೇನು ಒಳ್ಳೇದಾಗ್ತೇನೆಂತ ನನ್ನ ಸಂಕಲ್ಪ ಇಲ್ಲ. ಆದರೆ ನಿನಗೆ ನಮಸ್ಕಾರ ಮಾಡಿದ್ರೆ, ನಾವು ಇನ್ನೂ ಉತ್ಕರ್ಷ ಸಾಧಿಸ್ತೇವೆ ಎಂದು ನಮ್ಮ ಆಂತರಿಕವಾದಂತಹ ಸದ್ಭಾವನೆ. ಆದ್ದರಿಂದ ಸ್ವಾಮೀನ್, ನಿನ್ನನ್ನು ವಿರೋಧಿಸುವವರು ಬಹಳ ಇದ್ದಾರೆ. ಅವರು ತಿಳಿಯುವದಕ್ಕಾಗಿಯೇ ನಾನು ನಿನ್ನನ್ನು ಕಂಡಾಗ ಸಾಷ್ಟಾಂಗ ಪ್ರಣಾಮ ಮಾಡೋದು.

ಹ್ಞೆ! ಅವರನ್ನು ಖಂಡಿಸುವದಕ್ಕಾಗಿ ಮತ್ತೆ ನಿನಗೀಗ ಹೊಸ್ತು, ನಮಸ್ಕಾರ ಮಾಡಿ, ನಮಗೇನಾದ್ರು ಮಾಡಬೇಕೆಂಬ ಸ್ವಾರ್ಥ ಏನೂ ಇಲ್ಲಾ. ನನ್ನಂತವ ಒಬ್ಬ ಕೃಷ್ಣನನ್ನು ಕಂಡಾಗ ಸಾಷ್ಟಾಂಗ ಪ್ರಣಾಮ ಮಾಡ್ತಾನೆ ಅಂತ ಸುದ್ದಿ ಆದ್ರೆ ಸ್ವಲ್ಪಾದ್ರೂ ಅವರಿಗೆ ಬುದ್ಧಿ ಬಂದೀತಲ್ಲಾ.

ಪರ್ಯಾಯದಿಂದ ನಿನ್ನ ದೇವತ್ವವನ್ನು ಆಕ್ಷೇಪಿಸುವವರಿಗೆ ನನ್ನದ್ದಾದಂತಹ ಮೂಕ ಆಕ್ಷೇಪ ಅದು. ಇಲ್ಲದಿದ್ರೆ ನೀನು ಹೇಳಿದೆಯಲ್ಲ, ತನಗಿಂತ ಶ್ರೇಷ್ಠ ಅಂತ ಅಂತರಂಗದಲ್ಲಿ ಈಗೂ ಉಂಟು ಅದು. ಅದೇನು ಅಲುಗಾಡಲಿಲ್ಲ. ಅಂತರಂಗದಲ್ಲಿ ನೀನು ಶ್ರೇಷ್ಠ ದೇವ-ದೇವೋತ್ತಮ, 'ಕೃಷ್ಣಸ್ತು ಭಗವಾನ್ ಸ್ವಯಂ' ಈ ನಿರ್ಧಾರ ಉಂಟು. ಅದಕ್ಕೆ ನಮಸ್ಕಾರ, ಆ ಒಂದೇ ಉದ್ದೇಶ ಅಂತಾದ್ರೆ ಇಲ್ಲಿಂದ ನಮಸ್ಕಾರ ಮಾಡಿದ್ರೂ ಸಾಕಾಗೋದಿಲ್ಲೊ !

ಬರಬೇಕು, ಬರಬೇಕು, ಒಳಗೆ ಬರಬೇಕು ಕೃಷ್ಣಾ|

ಆ ಪ್ರಶ್ನೆಯನ್ನೇ ನಾನು ನಿರೀಕ್ಷಿಸಿದ್ದೆ. ಶ್ರೀಕೃಷ್ಣಾ ನನ್ನಂತವನಿಗೆ ಏನಾದ್ರೂ ಕಷ್ಟ, ದು:ಖ ಬಂದ್ರೆ, ನಾನು ಹೊರಗೆ ಯಾರಲ್ಲಿ ಹೇಳಲಿ ಹೇಳು; ಹೇಳುದಿದ್ರೆ ಯಾರಲ್ಲಿ? ನಿನ್ನಲ್ಲಿ ಸಂಕೋಚವೇ ನನಗೆ ನಿನ್ನಲ್ಲಿ? ಅಂತರಂಗ ಏನು ಅಂತ ಹೇಳಬೇಕಂತ ಕರೆಕಳುಹಿಸಿದವನೇ ನಾನು. ವಂಚನೆಬೇಡ, ಅಂತ ಹೇಳಿದ್ದೇಲೆ ನನಗೆ ಧೈರ್ಯ ಬಂತು. ಬಹಳ ಸೂಕ್ಷ್ಮವಾಗಿ ಹೇಳಿದರೆ ಸಾಕು ಅಂತ ತೋರದೆ, ಈಗ,

ಕೇದಾರ-ಝಂಪೆ॥ ಧನುಜರೊಳು ಕೌರವರೊಳು ಭಯವೆನಿ। ಮನುನಯದ ಕರುಣವಿರಲು

ಜನಕಗಮರೇಂದ್ರ ಸಭೆಯು! ಇಲ್ಲೆಂದು ಮುನಿಯೆನ್ನೊಳೆಂದ ನುಡಿಯು || ೩೪ |

ಓ ಭಾವಾ, ಪ್ರಾಪಂಚಿಕವಾದ ಯಾವ ಥರದ ವಿಘ್ನ ವಿಡ್ಡೂ ರಗಳು ಇದಿರಾಗಲಿ, ಅದನ್ನು ವೈಯಕ್ತಿಕವಾಗಿ ಇದಿರಿಸುವಂತಹ ಹೃದಯ ದಾರ್ಢ್ಯತೆ ಇದ್ದವ ಇವನು. ಆದ್ದರಿಂದಲೇ ಯುಧಿಷ್ಠಿರನಲ್ಲವೇ? ಯುಧಿಷ್ಠಿರ ಎಂಬ ಹೆಸರನ್ನು ಅಕ್ಷರಾರ್ಥದಿಂದ ಅನುಷ್ಠಾನಕ್ಕೆ ತರುವದಕ್ಕೆ ಈ ನಿಮಿಷದವರೆಗೂ ನಾನು ಯತ್ನಿಸಿದವ, ನಿನಗೆ ಗೊತ್ತುಂಟು. ಆದ್ದರಿಂದ ಕೌರವರೋ, ದಾನವರೋ ಪ್ರತ್ಯಕ್ಷರಾದ ಎಲ್ಲಾ ವಿರೋಧವನ್ನು ನಾನು ಎದೆಯೊಡ್ಡಿ ಅಂಗೀಕರಿಸುತ್ತೇನೆ. ಹಾಗಾಗಿ ಲೌಕಿಕವಾದಂತಹ ಭೋಗಕ್ಕಾಗಲಿ, ಭಾಗ್ಯಕ್ಕಾಗಲಿ, ದೈಹಿಕವಾದಂತಹ ಸುಖ-ಸಂಪತ್ತಿಗಾಗಲಿ, ಕೃಷ್ಣಾSS ನಿನ್ನಲ್ಲಿನಾನು ಪ್ರಾರ್ಥಿಸುವ ಜನ ಅಲ್ಲ.

"ವಿನಾದೈತ್ಯೇನ ಜೀವನಂ". ನಾನು ಪುರುಷ, ಪುರುಷನಾದಂತಹ ನನ್ನ ಕ್ರಿಯೆಯ ವ್ಯಾಪ್ತಿ ನನಗೆ ಗೊತ್ತುಂಟು ಆ ವ್ಯಾಪ್ತಿಯಲ್ಲಿ ನಾನು ಮೇಯುತ್ತಾ ಇದ್ರೆ ಭಗವಂತನಾದಂತಹ ನಿಜಸ್ವರೂಪದಿಂದ ಸಾಕ್ಷಾತ ವಾಸುದೇವನಾದಂತಹ ನಿನ್ನ ತತ್ತ್ವಕ್ಕೆ ಅನುಸಾರವಾಗಿಯೇ ಜೀವಿಸುವವನು ನಾನು. ಗೋಪಾಲಕ ನೀನು. ಭಗವಂತನಾದ ನೀನು ಗೋಪಾಲಕನೂ ಹೌದು. ಗೋಪಾಲಕ ಅಂತಂದ್ರೆ ಏನು ಅರ್ಥ ಅಂತ ನಾನು ಹೀಗೆ ತಿಳಕೊಂಡಿದ್ದೇನೆ. ಗೊಲ್ಲನೊಬ್ಬ ದೊಡ್ಡ ಹೊಲಕ್ಕೆ ತನ್ನ ಗೋವುಗಳನ್ನೆಲ್ಲ ಅಟ್ಟಿಕೊಂಡು ಹೋಗ್ತಾನೆ.

ಅವುಗಳನ್ನು ಮೇಯಿಸುವ ಕಾಲಕ್ಕೆ ಉತ್ತಮ ಗೋಪಾಲಕನಾದವನೊಬ್ಬ ಒಂದೊಂದಕ್ಕೆ ಒಂದೊಂದು ಗೂಟ, ಒಂದೊಂದು ಹಗ್ಗದ ಸಂಬಂಧವನ್ನು ಕಲ್ಪಿಸಿ, ಗೂಟಕ್ಕೆ ಬಂಧಿಸುತ್ತಾನೆ. ಆ ಹಗ್ಗದ ಅಳತೆ ಎಷ್ಟಿದೆ? ಆ ಪ್ರಮಾಣಕ್ಕನುಸರಿಸಿಕೊಂಡು ಮೇಯುವುದು, ಆ ಮೇಲೆ ಮೆಲುಕಾಡುವದು. ಇತ್ಯಾದಿ - ಇತ್ಯಾದಿ. ಅದು ಗೋವಿನ ಸ್ವಾತಂತ್ರ್ಯದ ಪರಿಧಿಯೊಳಗೆ ಬರದೆ. ನೀನು ಸಾಕ್ಷಿಯಾಗಿ ದೂರ ಕೂತಿರಿ. ಆದ್ದರಿಂದ ನೀನು ಗೋಪಾಲಕ, ಹಾಗೇ ದೇವ ನೀನು, ಜೀವರಾದ ನಮ್ಮನ್ನು ಯಾವುದೋ ಒಂದು ಸತ್ಯದ ಕರ್ಮದ ಸೂತ್ರಕ್ಕೆ ಕಟ್ಟಿಹಾಕಿದ್ದಿ ಅಂತ ತಿಳಕೊಂಡವ ನಾನು. ಆದಕಾರಣ ಜೀವದ ಸ್ಥಾನದಲ್ಲಿ 'ಅಹಂಕರಿಷ್ಯ' ಎಂಬ ಅಹಂಕಾರಿಗಳೇ ನಾವೆಲ್ಲ. ದೇವರು ಮಾಡ್ತಾನೆಂತ ತಿಳಕೊಂಡವರಲ್ಲ. ಹೊಲ ಕೊಟ್ಟಿದ್ದಿ, ನೇಗಿಲು ಕೊಟ್ಟಿದ್ದೆ. ನಿನ್ನ ಅಣ್ಣನಾದಂತಹ ಬಲಭದ್ರಸ್ವಾಮಿ ಆ ಲಾಂಛನವನ್ನೇ ಧರಿಸಿದ್ದಾನೆ. ಆದಕಾರಣ ಹೊಲ ಇದೆ, ನೇಗಿಲು ಇದೆ. ಕ್ಷೇತ್ರ ಇದೆ, ಬೀಜ ಇದೆ. ನಾವು ಊಳುತ್ತೇವೆ, ಬಿತ್ತುತ್ತೇವೆ. ಬೆಳೀತೇವೆ. ಉಣ್ಣುತ್ತೇವೆ. ದೇವರು ಕೊಟ್ಟದ್ದು ಅಂತ ಹೇಳೋದು ಯಾವುದನ್ನು? ಈ ಎಲ್ಲವನ್ನು ದೇವರು ಕೊಟ್ಟದ್ದು ಅಂತ ಹೇಳಿದ್ರೂ ಕೂಡ, ಇದಕ್ಕೆ ಮೂಲ ದ್ರವ್ಯ ದೇವರು ಕೊಟ್ಟದ್ದು. ಈ ಭಾವನೆಯಿಂದ ಬಾಳಿ ಬದುವವ ಈ ಯುಧಿಷ್ಠಿರ. ನೀನಿತ್ತ ಸೌಭಾಗ್ಯ ಅಖಿಲವಾಗಿರುವ ಜನಕೆ "ಏನಬೇಡಲಿ ನಿನ್ನ ಬಳಿಗೆ ಬಂದು" ಆದಕಾರಣ ಸಾಯುವಲ್ಲಿವರೆಗೆ ಕೃಷ್ಣಾsss ಅಶನವನ್ನೇ, ವಸನವನ್ನೇ ಬೇಡುವ ದೈನ್ಯಭಾವ ನನ್ನಲ್ಲಿಲ್ಲ. ಇಲ್ಲಿ ಏನಾಗ್ಯದೆ? ನಿನ್ನ ಅನುಪಮವಾದಂತಹ ಕರುಣೆ ನಮ್ಮ ಮೇಲೆ ಇದ್ದದ್ದರಿಂದ, ಇಷ್ಟು ಧೈರ್ಯ ನನಗೆ ಬಂತು ಅಂತ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಕರುಣೆ ಬರಲಿಕ್ಕೆ ಕಾರಣವೇನು? ನೀನು ಹೇಳಿದಂತೆ ನಾವು ಬಾಳಿ ಬದುಕಿದ್ದರಿಂದ.

ಗಾಳಿಗೆ ನನ್ನ ಮೇಲೆ ಕರುಣೆ ಬಂತು, ಈ ಉಷ್ಣಕಾಲದಲ್ಲಿ ಅಂತ ಒಬ್ಬ ಹೇಳೊದಿದ್ರೆ, ಅವ ಗವಾಕ್ಷಗಳನ್ನು ತೆರೆದಿಟ್ಟೆ ಒಳಗೆ ಕೂತಿದ್ದ ಅಂತ ಅರ್ಥತಾನೆ? ಇಲ್ಲಾಂತಂದ್ರೆ ಬೀಸುವ ಗಾಳಿಗೆ ಪಕ್ಷ ಪ್ರತಿಪಕ್ಷ ಅಂತ ಉಂಟೊ? ಭಗವತ್ ಸ್ವರೂಪನಾದಂತಹ ನಿನಗೆ ಒಬ್ಬನಲ್ಲಿ ಕರುಣೆ, ಮತ್ತೊಬ್ಬನಲ್ಲಿ ದ್ವೇಷ ಅಂತ ಉಂಟೆ? ನಾವು ಪ್ರಾರ್ಥಿಸಿಕೊಳ್ಳಬೇಕು. ನಿನ್ನ ಕರುಣೆಗೆ ನಾವು ಪ್ರಾಪ್ತರಾಗಿದ್ದೇವೆ ಎಂಬುದು ನಮ್ಮ ಜೀವನದ ಅನುಭವ ನಮಗೆ ಪಾಠ ಹೇಳದೆ. ವಿರೋಧಿ ವಿಷ ಕೊಟ್ರೂ ಅದು ನಮಗೆ ಅಮೃತವೇ ಆಗಿದೆ. ವಿರೋಧಿ ಬೆಂಕಿ ಕೊಟ್ರೂ ನಮಗದು ತಂಪು ಆಗಿದೆ. ಆವಾಗ ನಾನು ಹೇಳೋದು ನಿನ್ನ ಅನುಪಮದ ಕರುಣೆ, ನಿನ್ನ ದಿವ್ಯ ಸ್ವರೂಪದ ಕರುಣೆ ನಮ್ಮ ಮೇಲೆ ಇದ್ದಾಗ ಅವೆಲ್ಲಾ ನಮಗೇನ್ ದೊಡ್ಡ ವಿಷಯವಲ್ಲ. ಆ ಕರುಣೆಗೆ ನಾವು ಪಾತ್ರರಾಗಿದ್ದೇವೆ. ನೀನು ಇಟ್ಟದ್ದು ಅಂತ ಅರ್ಥ ಅಲ್ಲ ಅದು, ಇವತ್ತಿಗೂ ನಾವು ಪಾತ್ರರಾಗಿದ್ದೇವೆ. ಆದರೆ ಕೃಷ್ಣಾsss ಈಗ ಇಲ್ಲಿ ಏನಾಗ್ಯದೆ? ಅಂತ ಹೇಳಿದ್ರೆ ನಿನ್ನ ಪುರುಷಾಯತ್ತವಾದಂತಹ ಸಾಮರ್ಥ್ಯದಿಂದಲೇ ಆಗಬೇಕಾದಂತಹ ಕಾರ್ಯ ಇದೆ. ಆದರೆ ಬಂಧು-ಸ್ನೇಹಿತರು ಅಥವಾ ಇತರ ಇತರ ಸಭ್ಯರು ಎಲ್ಲ ನೆರವು ನೀಡಬೇಕಾದಂತಹ ಒಂದು ಮಹಾಕಾರ್ಯ, ನಮ್ಮಿಂದ ಆಗಬೇಕಾಗಿ ಬಂದಿದೆ.

ಹೌದು, ನಾರದರು ಆಗಾಗ ಬಾರ್ತಾರೆ, ನಮ್ಮ ಅಗತ್ಯಕ್ಕೆ ಅಂತಲ್ಲ, ಉತ್ಕರ್ಷಕ್ಕೆ. ಆ ಹೊತ್ತೊಮ್ಮೆ ಬಂದಿದ್ರಲ್ಲ ಪಾಂಚಾಲಿಯ ಮದುವೆ ಆದ ಮೇಲೆ ಆ ಬಳಿಕ ಅವರು ಬಂದದ್ದು ಈಗ ನಿನ್ನೆ ಬಂದು ಹೇಳಿದ್ರು ನಮ್ಮ ತಂದೆಯಾದ ಪಾಂಡುವಿನ ಆತ್ಮಕ್ಕೆ ಶಾಂತಿ ಸಿಗಬೇಕಾಗಿದೆಯಂತೆ. ಅದಕ್ಕಾಗಿ...

*ಕೇದಾರ-ಝಂಪೆ ಅದಕೆ ರಾಜಾಧ್ವರದೊಳು| ಪಿತಗೆ ಸುರ ಪದವಿ ಯಹುದೆಂದ ಕೇಳು*

*ಇದನೆಸಗದಿರಲು ಸುತರು | ನಾವಿದ್ದು ಬದುಕಿ ಫಲವೇನಯ್ಯರು || ೩೫ ||*

ಕೃಷ್ಣಾ, ಒಂದರ್ಥದಲ್ಲಿ, ಹೌದು ಇದು ಪಿತೃಋಣವೇ. ಮಕ್ಕಳಾದ ನಮ್ಮ ಕ್ರಿಯಾಲೋಪದಿಂದಲೋ, ಇನ್ನಾವ ಕಾರಣದಿಂದಲೋ ನಮ್ಮ ತಂದೆಯವರಿಗೆ ಇನ್ನೂ ಸಿಗಬೇಕಾದ ಸ್ಥಾನ, ಸ್ವರ್ಗದಲ್ಲಿ ಸಿಗಲಿಲ್ಲವಂತೆ. ನಾವೈವರು ಮಕ್ಕಳಿದ್ದು ಇದಾಗಲಿಲ್ಲ ಅಂತಾದ್ರೆ ಮತ್ತೆ ನಮ್ಮ ಪುತ್ರಸ್ಥಾನದ ಗೌರವವೂ ಉಳಿಯಲಿಕ್ಕಿಲ್ಲ. ಹಾಗಾಗಿ ನಾರದರ ಮಾತಿನಂತೆ ರಾಜಸೂಯದ ಸಂಕಲ್ಪ ಮಾಡಿದ್ದೇನೆ ಕೃಷ್ಣಾ. ನಾರದರಿಗೂ ಮಾತುಕೊಟ್ಟಾಗಿದೆ ಈ ವಿಚಾರದಲ್ಲಿ ಮೂರು ಮುಕ್ಕಾಲು ಘಳಿಗೆಯಲ್ಲಿ ಮೂರು ಲೋಕಕ್ಕೂ ಈ ವಿಷಯ ಪ್ರಚಾರವಾಗದೇ ಉಳಿಯಲಾರದು. ನಾರದರು ಪ್ರಚಾರ ಕೊಡದೇ ಇದ್ದಾರೋ? ಇದನ್ನು ಪೂರೈಸದಿದ್ದರೆ ನಮ್ಮ ಮರ್ಯಾದೆಯೂ ಇರಲಿಕ್ಕಿಲ್ಲ. ತಂದೆಗೆ ಸದ್ಗತಿಯೂ ಸಿಗಲಿಕ್ಕಿಲ್ಲ. ಹಾಗಾಗಿ ವಾಸುದೇವಾ,

ಭಾಮಿನಿ ಯಾಗವನು ಪೂರೈಸುತೀಭವ | ಸಾಗರವ ನೀ ದಾಂಟಿಸೆನುತಲಿ | ರಾಗದಲಿ

ಪೊಡಮಟ್ಟ ಭೂಪನನೆತ್ತಿ ನಸುನಗುತ || ೩೬ ||

ಈ ಯಾಗವನ್ನು ನೀನು ಪೂರೈಸಿಕೊಡಬೇಕು. ಹೌದು, ಮಗಧ, ಶಿಶುಪಾಲಾದಿ ದುಷ್ಟರಿದ್ದಾರೆ ಇದಕ್ಕೆ ಕಂಟಕವಾಗಿ ನಿಜ. ಆದರೆ ನಿನ್ನ ಕರುಣಾ ಬಲದಿಂದ ನನ್ನನುಜರ ಸಾಹಸದಿಂದ ಇದು ಕೈಗೂಡೀತು ಕೃಷ್ಣಾ.



ಇದೋ, ನಿನ್ನ ಕೈಯ್ಯಾಯುಧಗಳಾಗಿದ್ದ ಈ ಭೀಮಾರ್ಜುನರ ಉತ್ಸಾಹವನ್ನು ನೋಡು. ಇದೋ ನಿನ್ನನುಜ್ಞೆಯಂತೆ, ನಿನ್ನ ಅಪೇಕ್ಷೆಯಂತೆ ಇವರ ಮನೋಗತವನ್ನು ತೆರೆದು ನಿನಗಿವರನ್ನು ಒಪ್ಪಿಸಿದ್ದೇನೆ. ಈ ರಾಜಸೂಯಕ್ಕೆ ಬರಬಹುದಾದ ಕಂಟಕಗಳನ್ನೆಲ್ಲ ಕತ್ತರಿಸಿ, ಈ ಯಾಗವನ್ನು ಪೂರೈಸಿ ನಮ್ಮನ್ನು ಭವಸಾಗರದಿಂದ ಎತ್ತರಿಸಿ ಉದ್ಧರಿಸು ಕೃಷ್ಣಾ, ಉದ್ಧರಿಸು.

*(ಕೃಷ್ಣ:- ತಥಾಸ್ತು)*

## ೭ ಮಾಗಧವಧೆ

### ಜರಾಸಂಧ

*ಕಾಂಬೋದಿ-ಝಂಪೆ ಆ ಶಬ್ದಕಿಳೆಯದುರಲಿತ್ತ ನಡುವಿರುಳುಮ | ಗಣೇಶ*

*ಕೈಗೊಂಡುಯಾಗದಲಿ || ಭೂಸುರಾರ್ಚನೆಗಳಲಿ ದಾನಗಳ*

*ಕೊಡುವೆಡೆಯೊಳೀಶಬ್ದ ಕೇಳಿ ಬೆರಗಿನಲಿ || ೩೭ ||*

ಹಾ! ಏನು ಶಬ್ದವದು? ಶಿವಾನುಗ್ರಹದಿಂದ ನಾನು ಸಂಪಾದಿಸಿದಂತಹ ಭೇರಿತ್ರಯಗಳನ್ನು ಯಾರೋ ಹೊಡೆದದ್ದು ಮಾತ್ರವಲ್ಲ, ಅದರ ನಾಶದ ಆಘಾತವನ್ನೇ ಉಂಟು ಮಾಡಿದ್ರು! ಹೌದು, ಹಲವಾರು ದಿವಸಗಳಿಂದ ಧುರ್ನಿಮಿತ್ತಗಳನ್ನೇ ಕಾಣುತ್ತಿದ್ದೇನೆ. ಪ್ರಾಯಶ್ಚಿತವನ್ನು ಮಾಡಬೇಕು ಅಂತ ನನ್ನ ಗುರುಗಳು ಉಪದೇಶಿಸಿದ್ರಿಂದ ವ್ರತೋಪದೇಶಗಳನ್ನೆಲ್ಲಾ ಮಾಡುತ್ತಾ ಈ ಹೊತ್ತು ತಂಡುಲಪ್ರಸ್ಥವೆಂಬಂತಹ ಈ ಯಜ್ಞಭೂಮಿಯಲ್ಲಿ ನಾನಾವಿಧವಾದಂತಹ ಹೋಮ ಹವನಾದಿಗಳನ್ನು ಮಾಡಿದ್ದಾಯ್ತು. ಇನ್ನೇನು ಮುಗಿಯುತ್ತಾ ಬರುತ್ತಿದೆ ಎನ್ನುವಾಗ ಏಳಿ, ಏಳಿ – ಬ್ರಾಹ್ಮಣರು, ದಕ್ಷಿಣೆಯನ್ನು ಕೈಗೊಳ್ಳಿ, ಮಂತ್ರಾಕ್ಷತೆಯನ್ನು ನನ್ನ ತಲೆಯ ಮೇಲೆ ಹಾಕಿ ಅಂತ ಪ್ರಾರ್ಥಿಸುವದಕ್ಕೆ ಎದ್ದು ನಿಂತ ಕಾಲಕ್ಕೆ .... ಭೇರಿಯನಾದ! ಹಾઽઽ ಏನು ಮಾಡೋಣ, ಆಗಬೇಕಾದದ್ದು ಆಗೇ ತೀರುತ್ತದೆ. ಆದರೆ ನಾನು ದೀಕ್ಷಿತನಾಗಿ ಕುಳಿತುಕೊಂಡಂತಹ ಯಜ್ಞ ಪೂರ್ತಿಯಾಗದ ವಿನು, ನನ್ನ ಆಸನಬಿಟ್ಟು ನಾನು ಅದೇನಂತ ಚಿಂತಿಸುವದು ಕೂಡ ಶೃದ್ಧಾವಿಹೀನತೆಯ ಲಕ್ಷಣವಾಗಿದೆ.

ಈವರೆಗೆ ನಾನು ಉಪಾಸನೆ ಮಾಡಿದಂತಹ ಉಗ್ರಭೈರವನ ಅನುಗ್ರಹಕ್ಕೆ ನಾನು ಪಾತ್ರೀಭವಿಸಿದ್ದೇನೆ. ಮಾತ್ರವಲ್ಲ, ದೈನಂದಿನ ಉತ್ಕರ್ಷವನ್ನು ಅನುಭವಿಸಿದ್ದೇನೆ. ಹಾಗಿರುವಾಗ, ಅದೇ ಭೈರವಉಪಾಸನೆಗೆ ಪವಿತ್ರಧಾರಿಯಾಗಿ ಕೂತ ನಾನು ಅದೇನೋ ರಾಜಕಾರಣ ಅಂತ ತಲೆಕೆಡಿಸಿಕೊಳ್ಳುವದಕ್ಕಿಂತ ಈ ಕಾರ್ಯವನ್ನು ಯಥಾಸಾಂಗವಾಗಿ ವಿಧ್ಯುಕ್ತವಾಗಿ ನೆರವೇರಿಸುವದೇ ಮುಖ್ಯ ಎಂದು ತೀರ್ಮಾನಕ್ಕೆ ಬಂದಿದ್ದೇನೆ.

ಹಾಽ, ಹೂಂ... ಪುರೋಹಿತರು, ನೀವ್ಹೇಳುವ ಮಂತ್ರಗಳನ್ನು ಹೇಳಿ, ಆಗುವದಾಗ್ತದೆ. ನಾನಿದ್ದೇನೆ ನೋಡಿಕೊಳ್ತೇನೆ.

*ಭಾಮಿನಿ ಕೌಶಿಕರ ಕಂಡೆದ್ದು ಮಗಧನೃ | ಪಾಲ ಮಧುಪರ್ಕಾದಿ ಪೂಜೆಯ |*

ಮೇಳವಿಸಿ ಸಭೆಸಹಿತಯೆವೆಯಿಕ್ಕದೆ ನಿರೀಕ್ಷಿಸುತ || ೩೮ |

ಗೃಹಸ್ಥರೆಲ್ಲ ಸ್ವಲ್ಪ ತಾಳಿ, ಯಾರೋ ಸ್ನಾತಕರು ಬಂದಿದ್ದಾರೆ. ಬನ್ನಿ, ಬನ್ನಿ ಬನ್ನಿ ಮೂವರೂ ಬಂದಿದ್ದೀರಿ, ಬಹಳ ಸಂತೋಷವಾಯ್ತು. ಗೃಹಸ್ಥನಾದಂತಹ ನಾನು ಮೊದಲಿಗೆ ನಿಮಗೆ ಮಧುಪರ್ಕಾದಿ ಉಪಚಾರಗಳನ್ನು ಸಮರ್ಪಿಸುವ ದ್ವಾರ, ಪೀಠವನ್ನಿಟ್ಟಿದ್ದೇನೆ.

ಹಾs! ಏನಾದೀತು? ಯಾರಿಗೊತ್ತು? ಯಾರಿವರು? ಸ್ನಾತಕರಂತಿದ್ದಾರೆ ತಾಂಬೂಲ ಚರ್ವಣದಿಂದ ತುಟಿ ಕೆಂಪಾಗಿದೆ. ಮಾತ್ರವಲ್ಲ, ಉತ್ತರೀಯದ ಎಡೆಯಲ್ಲಿ ಗೋಚರಿಸುವಂತಹ ಯಜ್ನ್ಯೋಪವೀತ ಜೊತೆಯಾಗಿದೆ. ಹಾಗಾದರೆ ಇವರು ವೇಶಧಾರಿಗಳು!! ಎಲ್ಲಿಂದ ಬಂದ್ರು? ಯಾಕೆ? ಕೇಳೋಣ.

*ಭಾಮಿನಿ॥ ಪೇಳಿರೈ ನಿಮಗಾವ ದೇಶವಿ | ಶಾಲಗೋತ್ರವದಾವುದೆನುತ ವಿ |*

ಲೋಲಮತಿ ಚಿಂತಿಸಿದನಿವದಿರು ವಿಪ್ರರಲ್ಲೆಂದು || ೩೯ |

ಸಂಶಯ ನಿವೃತ್ತಿಗಾಗಿ, ಜಿಜ್ಞಾಸುವಾಗಿ, ನಾನು ಪ್ರಶ್ನಿಸುತ್ತಾ ಇರುವದು. ಅನ್ಯಥಾ ಭಾವಿಸಬಾರದು, ಸ್ನಾತಕರಂತಿದ್ದೀರಿ; ಆದರೆ ಆ ವ್ರತಕ್ಕೆ ಶಾಸ್ತ್ರೀಯವಾಗಿ ಯಾವುದೆಲ್ಲಾ ನಿಷಿದ್ಧವೋ ಅದೆಲ್ಲಾ ನಿಮ್ಮಲ್ಲಿ ಪ್ರಸಿದ್ಧವಾಗಿಯೂ ವ್ಯಕ್ತವಾಗಿಯೂ ಕಾಣಿಸ್ತಾ ಇದೆ! ಈ ಗಂಧ! ಈ ಮಾಲೆ, ಆ ಮೇಲೆ ತಾಂಬೂಲ ಚರ್ವಣ, ಜೊತೆ ಜನಿವಾರ ದೇಶಾಚಾರ ಇದ್ದರೂ ಇರಬಹುದೆ? ಹಾಗಾದರೆ ಯಾವ ದೇಶದ ಬ್ರಾಹ್ಮಣರು ನೀವು? ಅಥವಾ ದೇಶ ಅಲ್ಲ, ಕೆಲವು ಸಲ ಗೊತ್ರ, ಸೂತ್ರ, ಪ್ರವರ ಈ ಭಿನ್ನತೆಯಿಂದಾಗಿ ಈ ಆಚಾರ ಸಂಹಿತೆಯಲ್ಲಿಯೂ ಭಿನ್ನತೆಯಿದೆ ಎಂತ ಹೇಳುವದು ಕೇಳಿದ್ದೇನೆ. ಯಾವ ಗೋತ್ರದವರು? ಹೇಳಿ ಹೇಳಿ, ಯಾಕೆ ಹೀಗೆ! ಈ ವಿಪರ್ಯಾಸ? ನಾನು... ಹ ಪಕ್ಕನೆ, ಶ್ರದ್ಧೆಯನ್ನೇ ಮುಂದಿಟ್ಟು, ವಿವೇಕವನ್ನು ಹಿಂದಿಟ್ಟು ವ್ಯವಹರಿಸಿದ ಹಾಗಾಯ್ತು, ಕೇಳಿದ್ದು ಕೊಡ್ತೇನೆ ಎಂಬ ಆಶ್ವಾಸನೆ ಕೊಟ್ಟಾಯ್ತು. ಆದರೆ ಅಲ್ಲಾದ ಭೇರಿಯ ನಾದ, ಇಲ್ಲಾದ ಮೂವರ ಪ್ರವೇಶ ಛೇ ಇದು ತಾಪತ್ರಯ ಸ್ವರೂಪವೆ? ಅಥವಾ ವ್ಯಾಧಿ ಸ್ವರೂಪರೇ ಇವರು? ಇಷ್ಟು ಧೈರ್ಯದಲ್ಲಿ ಬರೇ ಮೈಯ್ಯಿಂದ ವೇಷಧಾರಿಗಳಾಗಿ ಬಂದ ಇವರು ಯಾರಿರಬಹುದು?

*|ಕಾಂಭೋಜ-ಝಂಪೆ| ಯಾರಿವದಿರೆಂದೆಂಬುದರಿಯದಾಯ್ತುಯೆನಗೆ ಕಾರಣೀಕರುಯೆಂದು*

*ತೋರುತಿದೆ ಮನಕೆ ॥ ಪ | ಸತ್ವಭುಜಬಲಯುತರು ಶಸ್ತ್ರವಿದ್ಯರು*

*ಕಪಟ ಋತ್ವಿಜರು ತನಗಿವರು! ಶತ್ರುವೆನಿಸಿಹರು* || ೪೦ ||

ಯಾರಿವರು?!! ಛೇ, ನನ್ನ ತಲೆಯನ್ನೇ ಕೆಡಿಸಿಬಿಟ್ಟರಲ್ಲ ಇವರು. ಹಾಗಂತ ಕೇಳಿದರೆ ನೇರ ಉತ್ತರಿಸುವದೂ ಇಲ್ಲ. ಯಾವಾಗ ಛದ್ಮವೇಷವನ್ನು ಧರಿಸಿ ಬಂದವರು ಅಂತ ನಾನು ಊಹಿಸಿಯಾಯ್ತು, ವೇಷ ಧರಿಸಿ ಬಂದವರು ಸತ್ಯ ಹೇಳ್ತಾರೆ ಅಂತ

ನಿರೀಕ್ಷಿಸುವದೂ ಕೂಡಾ ಮೂರ್ಖತನವೇ ಆಗಿದೆ. ಅಂದ್ರೆ ಹೊಡೆದು, ಬಡಿದು ಬಾಯಿ ಬಿಡಿಸಬೇಕು. ಒಂದುವೇಳೆ ನಾನೇ ಪೂರ್ವಾಗ್ರಹದೂಷಿತನಾಗಿ ಇವರನ್ನು ಅಪರಾಧಿಗಳು ಅಂತ ಹೇಳಿದರೆ ಅದು ಇನ್ನೊಂದು ಅಪರಾಧವಾಗಿದೆ; ಮಾತ್ರವಲ್ಲ; ಯಜ್ಞಭೂಮಿಯಲ್ಲಿ ಶಾಸ್ತ್ರಾಪಚಾರವಾಗ್ತಿದೆ. ಏನು? ಯಾರು? ಹಾ ಹಾ, ಜರಾಸಂಧನದ್ದಾದ ಧೀಶಕ್ತಿಯನ್ನೋ, ಆತ್ಮಶಕ್ತಿಯನ್ನೋ ಅಥವಾ ಶ್ರದ್ಧಾ ಭಾವವನ್ನೋ ಪರೀಕ್ಷಿಸುವದಕ್ಕೊಂದು ಈ ಯಜ್ಞ ವೇದಿಕೆಗೆ ಬಂದಂತಹ ಇಂದ್ರ...?

ಹ್ಞೇ... ಇಂದ್ರ ಯಾಕೆ ಬರ್ತಾನೆ? ಹಾಗಾದರೆ ಇಂದ್ರ ಅಲ್ಲ, ಸಮಸ್ತ ದೇವತೆಗಳಲ್ಲಿ ಇವರು ಯಾರೂ ಅಲ್ಲ, ಮತ್ತ್ಯಾರು? ಮತ್ತ್ಯಾರು? ನನ್ನ ಜಾತಿಯವರೇ? ಹೌದು, ಅದರಲ್ಲಿ ಅನುಮಾನವಿಲ್ಲ, ಆ ಯಜ್ಞೋಪವತವನ್ನೇ ಹತ್ತಿರದಿಂದ ನೋಡಿದ್ದೀಗ, ಸ್ವಲ್ಪ ಕಪ್ಪಾಗಿ ಕಂಡಿತ್ತಾವಾಗಲೇ, ಬಹುದೂರದಿಂದ ನಡೆದು ಬಂದಂತಹ ಬ್ರಾಹ್ಮಣರ ಮೈಯ ಬೆವರು ತಾಗಿ ಸ್ವಲ್ಪ ವರ್ಣ ವಿವರ್ಣವಾಗಿದೆಯೋ ಅಂತ ಯೋಚಿಸಿದೆ. ಈಗ ನೋಡಿದರೆ ಹಾಗಲ್ಲ, ಈ ದ್ವಿಜತ್ವ ಮೂರು ವರ್ಣದವರಿಗೆ ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಅದರಲ್ಲಿ ವಿಪ್ರರಿಗಾದ್ರೆ ಹತ್ತಿಯ ಜನಿವಾರ, ಕ್ಷತ್ರಿಯರಿಗೆ ಸೆಣಬಿನದ್ದು, ವೈಶ್ಯರಿಗೆ ಉಣ್ಣೆಯದಾರ ಅಂತ ಹೇಳಲ್ಪಟ್ಟರೆ ಇದು ಸೆಣಬಿನದ್ದೇ ಯಜ್ಞಪವಿತ ಹೊರತು ಮೈಯ ಕೊಳಕುತಾಗಿ ಹತ್ತಿಯ ಜನಿವಾರ ಮಣ್ಣಿನ ಬಣ್ಣಕ್ಕೆ ತಿರುಗಿದ್ದಲ್ಲ. ಕ್ಷತ್ರಿಯರೇ! ಎಲಾ! ಕ್ಷತ್ರಿಯರು ಹೌದು... ಹೌದು ಹೌದು. ಇವರ ಭುಜಗಳನ್ನು ನಾನು ನೋಡಿದೆ ದೂರದಿಂದ. ಶಿವದೇವನ ವಾಹನವಾದ ನಂದಿಯ ಭುಜ ಉಬ್ಬಿದ ಹಾಗಿದೆ. ಗರಡಿ ಮನೆಯಲ್ಲಿ ಚೆನ್ನಾಗಿ ಅಂಗಸಾಧನೆ ಮಾಡಿದವರಿಗೆ ಮಾತ್ರ ಈ ಮಾಂಸಖಂಡಗಳು ಹೀಗೆ ಕುಣಿದಾವಷ್ಟೇ. ಅದಲ್ಲ, ಮಂಡಿಯೂರಿ ಗುರಿಸಾಧನೆಗೆ ಶರಸಂಧಾನ ಮಾಡಿದಂತಹ ಕುರುಹು, ಒಂದೇ ಮಂಡಿಯಲ್ಲಿ ಚರ್ಮದಜಿಡ್ಡು, ಅದು ಮಾತ್ರವಲ್ಲ, ಬಲಗೈಯ ಎಡೆಯಲ್ಲಿ ಚರ್ಮದಜಿಡ್ಡು ಹಾಗಾದರೆ ಇವರು ಅಸ್ತ್ರವಿದ್ಯಾ ನಿಪುಣರೂ ಹೌದು! ನನಗೆ ಶತ್ರುಗಳೂ ಹೌದು, ನನ್ನ ಜಾತಿಯವರಾದಂತಹ ಕ್ಷತ್ರಿಯರೂ ಹೌದು !! ಯೆಲಾ ಯೆಲಾ ಯೆಲಾ! ಕ್ಷತ್ರಿಯರಲ್ಲಿ ಯಾರಯ್ಯಾ ಅಂಥವ?

ಈ ಭರತವರ್ಷದಲ್ಲಿದ್ದ ಕ್ಷತ್ರಿಯ ವಂಶಜರು ಯಾರ್‍ಯಾರು ದುರ್ಬಲರೊ ಅವರೆಲ್ಲ ನನ್ನ ಹೆಸರು ಕೇಳಿ, ನನಗೆ ಒತ್ತೆ ಸೆರೆಯಾಗಿ ಅವರ ಸಂಬಂಧಿಕರನ್ನು ಒಪ್ಪಿಸಿ ಆಗ್ಯದೆ ಈ ಮೊದಲೇ, ಅವರ ಪ್ರಾಣ ನನ್ನ ಕೈಯಲ್ಲಿದೆ. ನಾನು ಬಿಟ್ರುಂಟು. ಪ್ರಬಲರು ಕೆಲವರು ಹೌದು, ಶಿಶುಪಾಲ, ದಂತವಸ್ತ್ರ, ಭಗದತ್ತ ಇವರೇ ಮುಂತಾದವರು. ಅವರೆಲ್ಲಾ ನನ್ನ ಕೂಟಕ್ಕೆ ಸೇರಿದವರು. ಒಂದೊಂದು ದೇಶದ ಅಧಿಪತಿಗಳಾದರೂ ಕೂಡ ಛೇದೀಶನಾದ ಶಿಶುಪಾಲನನ್ನೇ, ನನ್ನ ಸರ್ವಸೇನಾಧ್ಯಕ್ಷ ಅಂತ ಸಾರಿ ಆಗಿ ಹೋಗ್ಯದೆ. ಮಿಕ್ಕವರಿಗೂ ಒಂದೊಂದು ಗೌರವದ ಸ್ಥಾನವನ್ನು ಕೊಟ್ಟಿದ್ದೇನೆ. ಇನ್ಯಾರು ಕ್ಷತ್ರಿಯರು ನನ್ನ ಗುಂಪಿಗೆ ಸೇರದೇ ಇದ್ದವರು?

ಹಾsss ಚಕ್ರವರ್ತಿ ಮನೆತನದವರು ಅಂತ ಹೇಳಿಕೊಳ್ತಾರೆ ಚಂದ್ರವಂಶದ ಅರಗುವರರು, ಹಸ್ತಿನಾವತಿಯಲ್ಲಿದ್ದವರು. ಆದರೆ ಅವರಿಗೆ ಈ ವಿರೋಧೀ ದಮನ ಅಥವಾ ಹೊಸ ರಾಜ್ಯ ಕಟ್ಟೋಣ ಇದಕ್ಕೆಲ್ಲ ವ್ಯವಧಾನವಾದರೂ ಎಲ್ಲಿ? ದ್ರೌಪದಿಯ ಸ್ವಯಂವರದ ನಂತರ, ರಾಜ್ಯ ಯಾರದು; ಯಾರು ಆಳಬೇಕು? ಯಾರು ಆಳಬಾರದು? ಈ ಗೊಂದಲದಲ್ಲಿ ಸಿಕಿಬಿದ್ದ ಹಸ್ತಿನಾವತಿಯವರು ಈ ಕಡೆಗೆ ಬಂದಾರು ಅಂತ ನಿರೀಕ್ಷಿಸುವದೇ ಒಬ್ಬ ಮುತ್ಸದ್ದಿಗೆ ಯೋಗ್ಯ ವಾದದ್ದಲ್ಲ. ಇನ್ನು ಕೌರವಾದಿಗಳೇ ಪ್ರತ್ಯೇಕ ಬಂದಾರು ಅಂತ ಎಣಿಸಿದರೆ...? ಅವರಲ್ಲಿ ಗುಪ್ತವಾಗಿ ಮೈತ್ರಿಯ ಸಂಧಾನ ಆಗಿ ಹೋಗ್ಯದೆ, ನನಗೂ ಅವರಿಗೂ, ಅವರ ಕಷ್ಟಕ್ಕೆ ನಾನು ಇದ್ದೇನೆ ಅಂತ ಹೇಳಿದ್ದೇನೆ.

ಇನ್ನು ಯಾರೂ ಇಲ್ಲಾ, ಯಾರೂ ಇಲ್ಲದಿದ್ರೆ, ಈ ಬಂದವರ್‍ಯಾರು? ಇವರ್ಮೂವರಂತು ಹೌದು, ಹಸ್ತಿನಾವತಿಯವರಂತೂ ಅಲ್ಲದಿದ್ದರೆ ಪಾಂಡವರ... ಪಾಂಡವರ ಸುದ್ದಿ ಬಿಡೋಣ. ಅವರದ್ದನ್ನೇ ಅವರಿಗೆ ವಶಪಡಿಸಿಕೊಳ್ಳುವದಕ್ಕೆ ಮೀನ ಮೇಷ ಎಣಿಕೆ ಮಾಡುತ್ತಿರುವ ದುರ್ಧರಪ್ರಸಂಗ ಬಂದಿದೆ. ಎಲ್ಲೋ ಖಾಂಡವ ಪ್ರಸ್ಥದಲ್ಲಿದ್ದಾರೆ ಅಂತ ಕೇಳಿದ್ದೇನೆ. ಅದು ಕಾಡೋ ನಾಡೋ!

ಹಾ, ಹಾ, ಹಾ, ಹಾ ಹಾಗೊಂದುಂಟೀಗ, ಒಂದ್ ಐದಾರು ವರ್ಗದವರು ಒಕ್ಕೂಟಕ್ಕೆ ಬಂದು, ಒಂದು ಗುಂಪು ನಿರ್ಣಯ ಮಾಡಿಕೊಂಡಿದ್ದಾರೆ- ಯಾದವರದ್ದು. ಯಾದವ ಹೌದು, ಹೌದು.

ಅವನೇ ಸಂದೇಹವಿಲ್ಲ. ಆ ಮುಖ ನೋಡಿದ್ರೆ ಗೊತ್ತಾಗದೆ ನನಗೆ. ಅವನ ಕಣ್ಣು ಒಂದು ನಿಮಿಷಕ್ಕೆ ಹದಿನಾರು ಸಾವಿರದ ನೂರೆಂಟು ಸುತ್ತು ತಿರುಗದೆ !!

ಏನು ಮಾಡಿಯಾನು? ಏನೂ ಮಾಡಿಯಾನೂ ಏನೇನು ಮಾಡಿಯಾನು ಏನಕ್ಕೆನೂ ಕೇಳಿಯಾನು. ಅವನೇ! ಸಂದೇಹ ಏನೂ ಇಲ್ಲ. ಯಾವಾಗ ಸಂದೇಹ ನಿವೃತ್ತಿಯಾಯ್ತು, ಇನ್ನು ಪ್ರತ್ಯಕ್ಷ ಅನುಭವಕ್ಕೆ ಬರುವದು ತಾನೆ! ವಿಚಾರಿಸೋಣ ವಿಚಾರಿಸೋಣ...

*ಯರಕಲಕಾಂಬೋಜ-ಝುಂಪೆ ಆ ದಂತಿಪುರದವರು | ಆಪ್ತಜನ ಪಾಂಡವರು |*

*ಕಾದಲಯ್ತುಹರಲ್ಲ ಕಾಣೆಮಿಕ್ಕವರು ಯಾದವರೊಳಿಲ್ಲ ತುರು*

ಗಾದ ರಣ ಹೇಡಿಯಹ ಮಾಧವನದಂತಿರಲಿ

ಮಾತನಾಡಿಸುವೆ ||೪

ಈ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಬ್ರಾಹ್ಮಣರೇ ಆದರೂ, ಈ ಪ್ರದೇಶವನ್ನು ಪ್ರವೇಶಿಸಬೇಕಾದ್ರೆ ಮಾರ್ಗದರ್ಶನ ಮಾಡುವವರು ಬೇರೆ ಬೇಕಾಗ್ತದೆ. ಹೇಳಿ ಕೇಳಿ

ಮಧ್ಯರಾತ್ರಿ, ಹೌದಲ್ಲ? ನಾಳೆ ಅಮಾವಾಸ್ಯೆ. ಈ ಮಧ್ಯರಾತ್ರಿಯ ಹೊತ್ತಿಗೆ ಎಲ್ಲಿಂದಲೋ ಬಿಟ್ಟ ಬಾಣ ಗುರಿ ಮುಟ್ಟುವಂತೆ ಹೊರಟ ನೀವು ಇಲ್ಲಿಗೆ ಬಂದಿದ್ದೀರಿ. ಅದೂ ಅಪರರಾತ್ರಿಯಲ್ಲಿ, ಅಪರದ್ವಾರದಲ್ಲಿ ಬಂದಿದ್ದೀರಿ. ಯಾರೋ ಹೇಳಿದ ಸುದ್ದಿಯನ್ನಾಧರಿಸಿ - ಈಗ ನಾನು ಹೇಳ್ತಾ ಇರೋದು. ಎಡಗಾಲನ್ನೇ ಮುಂದಿಟ್ಟುಕೊಂಡು ಮೂವರು ಪ್ರವೇಶಿಸಿದ್ದೀರಂತೆ! ಯಾವುದೇ ಶುಭ ಕಾರ್ಯಕ್ಕೆ, ಒಂದು ಮನೆಯಿಂದ ಮೂರು ಮಂದಿ ಒಟ್ಟಿಗೆ ಹೊರಡೋದಿಲ್ಲ, ಯಾವ ಗೃಹಪ್ರವೇಶ ಮಾಡ್ತಾರೋ ಮೂರು ಮಂದಿ ಅದರ ನಾಶವನ್ನು ಬಯಸುತ್ತಾರೆ ಅಂತ ತಿಳಿದವರು ಹೇಳ್ತಾರೆ. ನೀವು ತಿಳಿದು, ಬುದ್ಧಿ ಪೂರ್ವಕ ಹೀಗೆ ಮಾಡಿದಿರೋ? ಅಲ್ಲಾ ಪ್ರಮಾದವೂ ? ಏನೇ ಆಗಲಿ, ಇಲ್ಲಿ ನಿಮ್ಮ ಕುರಿತಾಗಿ ನನಗೆ ಸಂದೇಹ ಬಂದ್ಯದೆ, ಇಲ್ಲಿ ಕೇವಲ ಯಜ್ಞ ದೀಕ್ಷಿತನಾಗಿ ಕುಳಿತಂತಹ ಒಬ್ಬ ಯಜಮಾನ ಪ್ರಶ್ನಿಸ್ತಾನೆ ಅಂತ ತಿಳಕೊಳ್ಳಕೂಡದು; ಈ ನಾಡಿನ ಪ್ರಭುವಾಗಿ ಸಿಂಹಾಸನದಿಂದ ಈ ರೀತಿ ವಿಚಾರಣೆಗೆ ಗುರಿಪಡಿಸಿದ್ದಾನೆ ಅಂತ ತಿಳಕೊಳ್ಳತಕ್ಕದ್ದು. ಸತ್ಯ ಹೇಳಿ ಸತ್ಯ ಹೇಳಿ ನಿಮ್ಮ ನಿರಪರಾಧಿತ್ವವನ್ನು ನಮ್ಮ ಅವಗಾಹನೆಗೆ ತನ್ನಿರಿ. ಆವಾಗ ಮುಂದೇನು ಮಾಡಬೇಕು; ಅಂತ ಆಲೋಚಿಸಲಾಗ್ತದೆ.

(ಕೃಷ್ಣ : ಶತ್ರುಗಳಿಗೆ ತಮ್ಮ ನಿಜದ | ಸತ್ಯವಚನ ಮಾರ್ಗಗಳನು | ಬಿತ್ತರಿಸಲರಿದು ವೇದ |

ಶಾಸ್ತ್ರವು ಮಗಧ ||)

ಈಗ ಸತ್ಯವನ್ನೇ ಹೇಳಿದ್ದೀರಿ ಅಂತ ನಾನು ತಿಳಕೊಳ್ಳುತ್ತೇನೆ. ಶತ್ರುಗಳು! ಅಯ್ಯಾ, ಈ ಶತ್ರು- ಮಿತ್ರ ಉದಾಸೀನ ಈ ರೀತಿಯಾದದ್ದು, ನಮ್ಮ ರಾಜಕೀಯ ಕ್ಷೇತ್ರದಲ್ಲಿ ಆಗಂತುಕವೇ ಹೊರತೂ ಸ್ಥಾಯಿಯೇನು ಅಲ್ವಲ್ಲ? ಕಾರಣ ಇಲ್ಲದೆ ಶತ್ರು - ಮಿತ್ರ -ಉದಾಸೀನ ಎಂಬ ಮೂರು ವರ್ಗ ಸೃಷ್ಟಿ ಆಗೋದಿಲ್ಲ ಕಾರಣಬೇಕು.

*ಕೇದಾರಗೌಳ-ಅಷ್ಟ ಇತ್ತಲೀಗಪರರಾತ್ರಿಯೊಳೇನು ಕಾರ್ಯನಿ / ಮಿತ್ತದಿ ಬಂದಿರಯ್ಯಾ*

*ಕೃತ್ತಿಮರೋ ಸಹಜರೋ ನೀವು ಬೆದರದೆ | ಬಿತ್ತರಿಸುವದೆನಲು || |*

*ವೈರಿಗಳ್ ನಾವು ನಿಮಗೆ ವೈರತ್ವಕ್ಕೆ | ಕಾರಣವೇನುಸುರಿ |*

*ತೋರುತಲಿದೆ ಕಪಟಾಕೃತಿ ಮಿಗೆ ನಿಮ್ಮಾ ಕಾರವು ಹೋಗದಲೇ // ೪೨ |*

ಕ್ಷತ್ರಿಯರು ವಿರೋಧಿಗಳಾಗಿದ್ದರೆ, ಸರಿಯಪ್ಪಾ, ರಾಜನೀತಿಯ ಪ್ರಕಾರ ಕೆಲವೊಮ್ಮೆ ಛದ್ಮವೇಷವನ್ನು ಧರಿಸಬೇಕಾಗ್ತದೆ. ಈ ಕಪಟಾಕೃತಿಯಿಂದ ವ್ಯವಹಾರವನ್ನು ಕೂಡ ಕೆಲವುಸಲ ಕಪಟದಿಂದಲೇ ಪ್ರಕಟಪಡಿಸಬೇಕಾಗ್ತದೆ. ಅಷ್ಟನ್ನು ನಾನು ತಿಳಕೊಂಡಿದ್ದೇನೆ. ಆದರೆ ಒಂದು "ನಾವು ಶತ್ರುಗಳು" ಅಂತ ನೀವು ಹೇಳ್ತೀರಿ. ಆದರೆ ಶತ್ರುಗಳಂತಾದ್ರೆ ನೀವು ಇಷ್ಟೆ ಸಾಲದು. ಹಾ, ಯಾಕೆ ಅಂತಂದ್ರೆ ನಿಮ್ಮ ಕೈಯ್ಯಲ್ಲಿ ಆಯುಧಗಳಿಲ್ಲ. ಮೈಯಲ್ಲಿ ರಕ್ಷಣೆಗೆ ಕವಚಾದಿಗಳಿಲ್ಲ. ಬರೇ ಸ್ನಾತಕಬ್ರಾಹ್ಮಣರ ವೇಷವನ್ನು ಧರಿಸಿಕೊಂಡು ಶತ್ರುವಾದಂತಹ

ಜರಾಸಂಧನ ಮುಂದೆ ಈಗ ಪ್ರತ್ಯಕ್ಷರಾಗಿದ್ದೀರಿ. ಇದೊಂದು ಥರದ ವಿಪರ್ಯಾಸ, ಇದೊಂದು ಥರದ ವಿಪರೀತ, ಯಾಕೆ? ಶತ್ರು ದಮನಕ್ಕೆ ಕೇವಲ ಮನಸ್ಸಿನ ಧೈರ್ಯ ಮಾತ್ರ ಸಾಕಾಗೋದಿಲ್ಲ. ಆದ್ದರಿಂದ ನಾನೀಗ ನಿಮ್ಮಲ್ಲಿ ಇನ್ನು ಸಂದೇಹ ತಾಳಿ ಕೇಳೋದು.

ಶತ್ರುತ್ವ !! ಶತ್ರುತ್ವ ನಿಮಗೆ ನನ್ನಲ್ಲಿ! ಏನು ಕಾರಣ? ಏನು ಕಾರಣ?

ಹ, ಆದೀತು, ಅದಕ್ಕಲ್ಲ  ನನಗಿಂತ ಪ್ರಬಲನು ನೀನಾದರೆ ಆ ಸ್ಥಾನದಲ್ಲೇ ಇದ್ದುಕೊಂಡು ಆಜ್ಞೆ ಮಾಡಬಹುದು ಬಿಡು. ಈ ವೇಷವನ್ನು ಧರಿಸಿದ್ದೀರಿ ಮೂವರು. ಅದು ಕೂಡ ಹೇಗೆ? ಕೇಳಿದ್ದನ್ನು ಪಡೆಯುವ ಸ್ನಾತಕ ವ್ರತದ ಸ್ವರೂಪ. ಈ ವೇಷಧಾರಣೆ ಮಾಡಿದ್ದೇಲೆ ಮೊದಲಿಗೆ ನನ್ನಿಂದ ವಾಗ್ದಾನವನ್ನು ಪಡೆದು, ನನ್ನ ಮಾತಿನ ಹಿಡಿತದಿಂದ ಹೇಳಿದ ಮಾತು ಉಂಟೋ ಇಲ್ವೊ? 'ಬಿಡು' ಅಂತ ಹೇಳುವ ಕುಯುಕ್ತಿಯೋ, ಕಾರಸ್ಥಾನವೋ, ಈ ನಿಮ್ಮ ಈ ವೇಷಧಾರಣೆಯಲ್ಲಿ ಇಲ್ಲ ಅಂತ ನಾನು ತಿಳಿಯುವದಾದರೂ ಹೇಗೆ? ಉಂಟು, ಅಂತ ನಾನು ತರ್ಕಿಸಿದರೆ ಅಂತಹ ಅಳ್ಳೆದೆಯವರಾದರೆ ಈ ನನ್ನ ಮುಂದೆ ನಿಂತು 'ಸೆರೆ ಬಿಡು' ಅಂತ ಹೇಳುವದಾದರೂ ಹೇಗೆ? ಅಂತೂ ಈ ದ್ವಂದ್ವದಲ್ಲಿ ನಾನು ಸಿಕ್ಕಿದ್ದೇನೆ. ಆದ ಕಾರಣ ನನಗೆ ವಿವರಣೆ ಬೇಕು.

ಕ್ಷತ್ರಿಯ ಹೌದು ಅಂತ ಗೊತ್ತಾಯ್ತು, ಶತ್ರುತ್ವದ ಕಾರಣವೂ ಗೊತ್ತಾಯ್ತು. ಈಗ ಸೆರೆಹಿಡಿದು ತಂದಂತಹ ಅರಸು ಮಕ್ಕಳನ್ನು ತಲೆಕಡಿದು ನರಮೇಧ ಮಾಡುತ್ತೇನೆ ಎಂಬುದೂ ಸತ್ಯವೇ. ಇವತ್ತಲ್ಲ ನಾಳೆ, ಒಂದು ದಿವಸವಿದೆ ಅಮಾವಾಸ್ಯೆ. ಅದು ಕಳೆದ ಮೇಲೆ ಆಲೋಚಿಸಬೇಕಾದದ್ದು. ಇಡೀ ದೇಶವನ್ನೇ ನಾನಾಳಬೇಕು, ಸಾಮ್ರಾಟನಾಗಬೇಕು ಎಂಬ ದಾಹವೂ ಕ್ಷತ್ರಿಯತ್ವಕ್ಕೆ ಭೂಷಣ ಅಂತಲೇ ತಿಳಿದವ ನಾನು.

ಉಂಟು, ಉಂಟು ಏನು ಮಾಡೋದು? ಈ ಅಮವಾಸ್ಯೆ ಕಳೆದು ಆಮೇಲೆ ದಿಗ್ವಿಜಯಕ್ಕೆ ಹೊರಡಬೇಕು. ಹೊರಡುವದರ ಮುನ್ನ ಈ ವಿಶೇಷವಾದಂತಹ ಶಕ್ತಿಯನ್ನು ಸಂಪಾದಿಸಬೇಕು ಅಂತ ಉಗ್ರಭೈರವೋಪಾಸನೆಯನ್ನು ಮಾಡಿ, ನರಮೇಧ ಮಾಡಬೇಕು ಅಂತ ನನ್ನ ಆಚಾರ್ಯಪ್ರೋಕ್ತವಾದಂತಹ ಸಿದ್ಧಾಂತವನ್ನು ಪ್ರಾಮಾಣಿಕವಾಗಿ ನಂಬಿ, ಹಾಃ ಅದಕ್ಕೆ ಸಂಬಂಧಿಸಿದಂತಹ ಉಪಹೋಮ, ಅಮೇಲೆ ಪ್ರಾಯಶ್ಚಿತಾದಿಗಳನ್ನೆಲ್ಲಾ ನಡೆಸುತ್ತ ನಾನಿಲ್ಲಿ ಇರೋದು.

ಇಂತಹ ಹೊತ್ತಿನಲ್ಲಿ ನನ್ನ ರೀತಿ ಸರಿಯಾದದ್ದಲ್ಲ? ಇದು ಉತ್ತಮ ಕ್ಷತ್ರಿಯನಿಗೆ ಹೇಳಿಸಿದ್ದಲ್ಲ ಅಂತ ಯಾವುದಾದರೊಬ್ಬ ಶಾಸ್ತ್ರವೇತ್ತ ಬಂದು ಆಕ್ಷೇಪಿಸಿದರೆ, ಒಂದೂ, ಉತ್ತರಿಸಿಯೇನು ಅಥವಾ ಉತ್ತರಿಸಲಿಕ್ಕೆ ಸಾಧ್ಯ ಇಲ್ಲ; ಯುದ್ಧದಲ್ಲಿ ಇದುರಿಸಿಯೇನು. ಆದರೆ ನೀನು ಧರಿಸಿದ ವೇಷ ಇದರ ಹಿನ್ನೆಲೆ ಈಗ ನೀನಾಡುತ್ತಿರುವ ಮಾತು ಕೇಳುವಾಗ,

ನನಗೊಂದು ಸಂದೇಹ. ಏನು ಮಾಡಿಯಾದರೂ ಈ ಸೆರೆಯಲ್ಲಿದ್ದವರನ್ನು ಬಿಡಿಸಬೇಕಾಗಿದೆ-ಇದು ನಿನ್ನ ಮೂಲ ಉದ್ದೇಶ ಅಂತಾದರೆ, ನೋಡಯ್ಯ ಇದೆಲ್ಲಾ ಬೇಡ ಈ ನಾಟಕ, ಈ ಅಬ್ಬರ, ಈ ಭಾಷಣ, ನೀನು ಒಂದು ಕೆಲಸ ಮಾಡು. ಕಾರಾಗೃಹದಲ್ಲಿ ಅವರಿದ್ದಾರೆ, ಈಗಾಗಲೇ ಕೆಲವರನ್ನು ಯೂಪಸ್ತಂಭದಲ್ಲಿ ಬಂಧಿಸಿದ್ದೇನೆ. ನಾನು ಸೇವಕರನ್ನು ಕೊಡ್ತೇನೆ. ನೀನು ಬೆಟ್ಟು ಮಾಡಿ ಪರಿಚಯ ಹೇಳಬೇಕು. "ಓ ಇವನನ್ನು ಬಿಡಬೇಕು", ಓ ಈತನನ್ನು ಬಿಡಬೇಕು ಯಾಕೆ ಗೊತ್ತೋ?

ಕೇದಾರಗೌಳ-ಅಷ್ಟೇ ನೀನಾ ನೃಪರಿಗೆ ತಮ್ಮನೊ ಮೊಮ್ಮನೊ ಸೂನುವೊ ಬಾಂಧವನೋ॥

ಏನೆಂಬೆನ್ನೈಸೆರೆ ಬಿಡುಗಡೆಗೀಪರಿ | ನೀನೆನೆದದುಭುತವ || ೪೩ ||

ಇದರೊಳಗ್ಯಾರಾದರೂ ರಕ್ತ ಸಂಬಂಧಿಗಳು ಯಾಕಿರಬಾರದು ಕ್ಷತ್ರಿಯರು ಅಂತ ಆದಮೇಲೆ? ಕ್ಷತ್ರಿಯರ ಉತ್ಪತ್ತಿ ಹೇಗಾಯಿತು ಅಂತ ಕೇಳುವಾಗ, ಒಂದೇ ಮೂಲದಿಂದ, ಎಲ್ಲಾ ಕ್ಷತ್ರಿಯರೂ ವರ್ತಮಾನ ಕಾಲದಲ್ಲಿ ತುಂಬಿಕೊಂಡಿದ್ದಾರೆ ಪ್ರಪಂಚದಲ್ಲಿ ಅಂತ ಹೇಳ್ತಾರೆ ತಿಳಿದವರು. ಚಂದ್ರವಂಶ ಕವಲೊಡೆದು ಒಂದುಕಡೆ ಯಾದವರು, ಇನ್ನೊಂದು ಕಡೆ, ನಮ್ಮ ಹಾಗೆ ಇದ್ದವರು, ದೂರ ದೂರ ಇದ್ದವರು, ನಾವೆಲ್ಲಾ ಚಂದ್ರವಂಶೀಯರೆ. ಈಗ ಕೆಲವಾರು ತಲೆಮಾರಿನಿಂದ ನಾವು ಸಗೋತ್ರಜರು ಅಂತ ಕೂಡ ಹೇಳಿ ಕೊಳ್ತಾಇಲ್ಲ. ಹೆಣ್ಣು ಕೊಟ್ಟು ತಂದದ್ದೆಲ್ಲಾ ಉಂಟು. ಆದುದರಿಂದ ಕ್ಷತ್ರಿಯರಲ್ಲಿ ನಿನಗೂ ಕೂಡ ಬಹಳ ದೇಹ ಸಂಬಂಧಿಗಳಿರಬಹುದು. ಹೇಳು, "ಓ ಇಂಥವನು ನನ್ನ ತಮ್ಮ ಇವನು ಆ ತಮ್ಮನ ತಂದೆ, ಈಚೆಯವನು ನನಗೆ ಹೆಣ್ಣು ಕೊಟ್ಟ ಮಾವ ಅಥವಾ ಮತ್ತೊಬ್ಬ ನನ್ನ ತಮ್ಮನ ಸಂಬಂಧಿ" ಹೀಗೆ ಈ ಸಂಬಂಧ ಹೇಳ್ತಾ ಹೋಗುವಾಗ ನಿನ್ನವರು ಕೆಲವರಾದರೂ ಇಲ್ಲಿರಬಹುದು. ಹೇಳಿದ್ದೆನಲ್ಲಾ ಬೇಕಾದ್ದು ಕೇಳಿ - ಕೊಡೆನೆ ಅಂತ. ಯುದ್ಧಮಾಡಿ ಬಿಡಿಸುವದಕ್ಕೆ ಸಾಮರ್ಥ್ಯ ಇಲ್ಲಾ; ಮತ್ತೇನು ಮಾಡುವದು? ಅವರ ಮನೆಮಂದಿಯ ಕಣ್ಣೀರನ್ನಾದರೂ ಒರೆಸುವ ಮಹಾಪುರುಷನಾಗಬೇಕು ಅಂತ ಬಯಸಿದ್ದಿ ಅಂತಾದರೆ, ಬಹಳ ಅಗ್ಗದಲ್ಲಿ ಜನನಾಯಕತ್ವ ನಿನಗೆ ಬರಬೇಕು ಅಂತ ನೀನು ಬಯಸುವದಿದ್ದರೆ ನನ್ನಲ್ಲಿ ಹೇಳು ಇಷ್ಟು ಮಂದಿ ನಿನ್ನ ಸಂಬಂಧಿಕರು, ಇವರು ಕೆಲವರು ನನ್ನ ತಾಯಿ ಕಡೆಯವರು, ಕೆಲವರು ತಂದೆ ಕಡೆಯವರು ಅಂತ ಹೇಳು ಬಡವಾ.

ಆವಾಗ ನಾನು ಬಿಡಬೇಕೋ ಬೇಡವೊ? ಆಲೋಚಿಸಿಯೇನು? ವ್ಯರ್ಥ ಆಲಾಪ, ಬೇಡದಿದ್ದಲ್ಲೆಲ್ಲಾ ರಾಜಕೀಯ ಸಂಬಂಧವನ್ನು ಕಲ್ಪಿಸಿಕೊಂಡು, ನಮ್ಮ ಆಡಳಿತದಲ್ಲಿ ತಲೆ ತುರುಕಿಸಲಿಕ್ಕೆ ಬಂದು 'ಬಿಡು' ಅಂತ ಆಜ್ಞೆ ಮಾಡ್ತಿಯಲ್ಲ, ಏಯ್ ಬಿಡಬೇಕಾದರೆ ನನಗೆ ಭಯಬೇಕು, ಬಿಡು ಅಂತ ಬೇಡ್ತಿಯಂತಾದರೆ, ನಿನ್ನ ವೇಷಕ್ಕೆ ತಕ್ಕಂತೆ ದಕ್ಷಿಣೆಯಂತೆ ಒಂದು ನಾಲ್ಕು ಮಂದಿಯನ್ನು ಬಿಟ್ಟೇನು, ಬಿಡದೇ ಇದ್ದಲ್ಲಿ ಎಲ್ಲಾ ನಿನ್ನ ಬುದ್ಧಿವಂತಿಕೆಯನ್ನು ಪ್ರಯೋಗಿಸಿದೆ ಅಂತಾದರೆ, ಏನಾದೀತು ಗೊತ್ತೆ? ಈಗ ಹೇಳೊದಿಲ್ಲ.

ಆದಕಾರಣ, ಆದಕಾರಣ ಸಂಬಂಧವಿಲ್ಲದೆ ಇದ್ದಲ್ಲೆಲ್ಲಾ ಯಾಕೆ ಪ್ರವೇಶಿಸುತ್ತಿ ಹೇಳು.

ಎಲಾ ಎಲಾ ಕೇಳಿದ್ದು ಕೊಡ್ತೇನೆ ಎಂಬ ಆಶ್ವಾಸನೆ ನನ್ನಿಂದ ಸಿಕ್ಕಿದಾಗ ಇಷ್ಟು ಎತ್ತರಕ್ಕೆ ಬೆಳೆದಿದ್ದಿ ನೀನು. ಎಲಾ, ಏನು ! ಧರೆಯ ಧರ್ಮಾದಿಗಳ ಸಲಹಿ ಕಳರ ತಲೆಯ ಕೊಂಬ ಇಳೆಯ ಶಿಕ್ಷೆ ರಕ್ಷೆ ನಿಮಗೊ..?

ಹಾಗಾದರೆ ನಾವೆಲ್ಲ ಧರೆ ಹಾರಿ ಬಂದು ಸಿಂಹಾಸನದ ಮೇಲೆ ಕೂತದ್ದು; ರಾಜರು ಅಂತ ಹೇಳಿ ಕುಳಿತವರೋ? ಇಗೋ ನಮ್ಮ ರಾಜಕೀಯದಲ್ಲಿ ನೀನು ಹಸ್ತಕ್ಷೇಪ ಮಾಡಬೇಡ.

ಕೇದಾರಗೌಳ-ಅಷ್ಟತಾಳ ಬಾಯಿಗೆ ಬಂದಂತೀಪರಿ ಬಗುಳದೆ | ಸಾಯದಿರಧಮರಿರ ನಾಯಕರೈಸೆಲೆ ನಿಜವಿದು ನಿಮ್ಮಭಿ | ಪ್ರಾಯವ ಹೇಳೆನಲು || ೪೪ ||

ಅಯ್ಯಾ, ಯಾರನ್ನು ಶಿಕ್ಷಿಸಬೇಕು, ಯಾರನ್ನು ರಕ್ಷಿಸಬೇಕು, ಅನ್ನೋದು ರಾಜರಾದ ನಮಗ್ ಒಂದು ಮಿತಿಯಲ್ಲಿ ಗೊತ್ತಿರ್ತದೆ. ಜರಾಸಂಧನು ಆಳುತ್ತಿರುವ ಈ ರಾಜ್ಯದಲ್ಲಿ ಧರ್ಮ ಎಲ್ಲಿಯಾದರೂ ನಷ್ಟ ಹೊಂದಿದೆ ಅಂತ ಬೇರೆ ಯಾರಾದರೂ ಹೇಳಿದರೆ ಅದನ್ನು ನಮ್ಮ ಅವಗಾಹನೆಗೆ ತಂದರೆ; ಅದರಲ್ಲಿ ಸತ್ಯಾಂಶ ಎಷ್ಟು ಅಂತ ನೋಡಿಕೊಂಡು ಪರಿಹರಿಸಬಹುದು ಎಂಬ ಮನೋವೃತ್ತಿಯವರು ನಾವು. ಬರ್ತಾ ಕಂಡಿದ್ಯಲ್ಲ ನೀನು, ನಮ್ಮ ದೇಶದಲ್ಲಿ ಯಾವುದೇ ಕೋಭೆ ನೀನು ಕಂಡಿದ್ದೀಯೊ? ಇಲ್ಲಾ. ಜನರಿಗೆ ಚಿತ್ತಕೋಭೆ ಇಲ್ಲ ಮಾತ್ರವಲ್ಲ, ಕಳ್ಳ ಕಾಕರ ಭಯವಿಲ್ಲ. ಸಕಾಲದಲ್ಲಿ ಮಳೆಯಾಗ್ತದೆ, ಬೆಳೆ ವೃದ್ಧಿಯಾಗ್ತದೆ, ಹೀಗೆ ಒಂದು ರೀತಿಯ ತೃಪ್ತಿಯ ಜೀವನವನ್ನು ನಡೆಸುತ್ತಾ ಇದ್ದಂತಹ ನನ್ನ ಪ್ರಜೆಗಳು ನಾನೊಬ್ಬ ಅಧರ್ಮಿ ಅಂತ ನಿನಗೆ ಸುದ್ದಿ ಕೊಡುವದಕ್ಕೆ ಸಾಧ್ಯವಿಲ್ಲ. ಪ್ರಜಾರಂಜಕನಾದವ ರಾಜ. ಹೀಗೆ ರಾಜಧರ್ಮದಲ್ಲಿಯೂ ನಾನು ಎಲ್ಲಿಯೂ ತಪ್ಪಿಬಿದ್ದ ಹಾಗಿಲ್ಲ. ನಿನ್ನ ಬಲುದೊಡ್ಡ ಆಪಾದನೆ ಏನು? "ಕ್ಷತ್ರಿಯರನ್ನೆಲ್ಲ  ಕೊಂಡು ಬಂದು, ಕಾರಾಗೃಹದಲ್ಲಿ ಇಟ್ಟಿದ್ದಿ, ಕೊನೆಗೆ ಭೈರವೋಪಾಸನೆಗೆ ಬೇಕಾಗಿ ನರಮೇಧ ಮಾಡ್ತಿ". ಅಲ್ಲಿ ನೀನು ಒಂದು ಶಾಸ್ತ್ರದ ಪಾಠವನ್ನು ಹೇಳಿದೆ. ಆದರೆ ಅದೇ ಶಾಸ್ತ್ರವಾಗಿರುವದಕ್ಕೆ ಸಾಧ್ಯ ಇಲ್ಲಾ. ಸಿದ್ಧಾಂತ ಒಂದಾದ್ರು ಮತಗಳು ಹಲವಾರು. ನೀನು ಹೇಳಿದಂತಹ ಈ ಆಭಿಚಾರಾದಿ ಕರ್ಮಗಳಲ್ಲಿ ದೋಷವಿದೆ ಅಂತ ಹೇಳಬೇಕಾದ್ರೆ ನಾನು ಹುಟ್ಟಿನಿಂದ ಈ ಹೊತ್ತಿನವರೆಗೆ ಏನಾದರೂ ಅಭಿವೃದ್ಧಿಯನ್ನು ಪಡೆದಿದ್ದೇನೆ ಅಂತಾದರೆ, ನೀನು ತೀರಾ ಆಕ್ಷೇಪಿಸುತ್ತಿರುವಂತಹ ಈ ಮಾರ್ಗದಿಂದ, ನನ್ನ ತೀರ್ಮಾನ ಇಷ್ಟು, ದೇವತೋಪಾಸನೆಯಾಗಲಿ ಅಥವಾ ಅದಾಗಲಿ, ಇದಾಗಲಿ ಇನ್ನೊಂದಾಗಲಿ, ಎಲ್ಲವೂ ತನ್ನ ಉತ್ಕರ್ಷಕ್ಕೆ ಬೇಕಾಗಿ ತನ್ನ ಸಂಪತ್ತಿನ ಸಿದ್ಧಿಗಾಗಿ; ಅಹೇತುಕವಾಗಿ ಯಾರೂ ಯಾವ ದೇವರ ಉಪಾಸನೆಯನ್ನು ಮಾಡೋದಿಲ್ಲ. ಅಂತಹ

ಸನ್ಯಾಸವೊ, ಅಂತಹ ನಿರ್ವಿಕಲ್ಪಮಾರ್ಗವೋ ನಮಗೆ ಹೇಳಿಸಿದ್ದಲ್ಲ. ನಾನಂತೂ ಪ್ರವೃತ್ತ, ಪ್ರವೃತ್ತನಾಗಿ ನಾನು ಸಂಪಾದಿಸಬೇಕಾದದ್ದು. ಇಂತಹ ಯಜ್ಞ ಯಾಗಾದಿಗಳಿಂದ ಧಾರಾಳ ಸಂಪಾದಿಸಿದ್ದೇನೆ. ಮಾತ್ರವಲ್ಲ, ಕೆಲವು ವಿಧವಾದ ಸಿದ್ಧಿಯೂ ನನಗೆ ಸಿದ್ಧಿಸಿದೆ. ನೀನು ಕೇಳಿರಬಹುದು, ಯಾರಾದರೂ ಹೇಳಿದ್ದು ಯಾವುದೇ ಆಯುಧಗಳಿಂದ ಘಾಸಿಗೊಳ್ಳದೇ ಇದ್ದಂತಹ ದೇಹ ನನ್ನದು, ವಜ್ರದೇಹ, ಹಾಗಿರುವಾಗ ಸಾಧಾರಣ ಬೆಂಕಿಯಲ್ಲಿ ಸುಡದ, ನೀರಿನಿಂದ ನೆನೆಯದ ವಿಶೇಷವಾದ ಸಿದ್ಧಿ ಸಂಪಾದಿಸಿದ್ದೆನೆ. ನಾಳೆಗೆ ಅಮವಾಸ್ಯೆ ಕಳೆಯಲಿ ನರಮೇಧ ಮಾಡ್ತೇನೆ. ನರಮೇಧ ಮಾಡಿ ವಿಶ್ವಜಿತ್ ಯಾಗದ ಫಲರೂಪವಾಗಿ ಮೂ ಲೋಕವನ್ನೇ ಸ್ವಾಧೀನಪಡಿಸ್ತೇನೆ ಎಂಬ ಸತ್ಯ ನನ್ನದು. ಅಲ್ಲಿ ನೀನು ಪ್ರವೇಶಿಸಿ ನಿನ್ನದ್ದಾದಂತಹ ಶಾಸ್ತ್ರವನ್ನು ಮಾತ್ರ ಪ್ರಮಾಣವಾಗಿ ಇಟ್ಟುಕೊಂಡು "ಸೆರೆ ಬಿಡು, ಜಾತಿ ಮಕ್ಕಳ ತಲೆ ಕಡಿಯಬಾರದು", ಕ್ಷತ್ರಿಯರನ್ನು ಕ್ಷತ್ರಿಯ ತಲೆ ಕಡಿಬಾರದು. ರಾಜ್ಯದ ದಿಗ್ವಿಜಯಕ್ಕೆ ಹೋದರೆ ತಲೆ ಕಡಿಬಹುದು. ಇತ್ಯಾದಿ ಇತ್ಯಾದಿ ಹೇಳಿದರೆ ನಾನು ನಂಬಿದಂತಹ ಶ್ರದ್ಧೆ, ನನಗೆ ಬಂದಂತಹ ಫಲಾನುಭವ ಇದನ್ನು ಮುಂದಿಟ್ಟು ನೋಡುವಾಗ, ನಿನ್ನದು ಅಧಿಕ ಪ್ರಸಂಗವೇ, ಅಸ್ಥಾನದಲ್ಲಿ ನಿನ್ನದ್ದಾದಂತಹ ಶಾಸ್ತ್ರದ ಪ್ರಯೋಗಕ್ಕೆ ಹೊರಬಿದ್ದಿ. ಧರೆಯ ಶಿಕ್ಷೆರಕ್ಷೆ, ನಿನಗೆ ಯಾರು ಕೊಟ್ಟಿದ್ದಾರೋ ನಾನು ಪ್ರಶ್ನಿಸುವದಿಲ್ಲ. ಇಲ್ಲಿಯದ್ದು ಮಾತ್ರ ಸರ್ವಾಧಿಕಾರ ನನ್ನದು. ಇಲ್ಲಿ ಏನಾದರೂ ಮಾತಾಡಿದರೆ ಮತ್ತೆ ನಾನು ಏನು ಮಾಡಬೇಕೆಂತ ನನ್ನ ಖಡ್ಗದ ಕಡೆಗೆ ನೋಡಬೇಕಾಗುತ್ತದೆ. ಕುತ್ತಿಗೆ ಹೋದೀತು, ಮಾತ್ರವಲ್ಲ, ನಿಮ್ಮ ಹೆಣವನ್ನು ಕೂಡ ನಿಮ್ಮ ಕುಟುಂಬದವರಿಗೆ ಸಿಕ್ಕದ ಹಾಗೆ ಅಜ್ಞಾತವಾಗಿ ಸುಟ್ಟು ಬೂದಿ ಮಾಡಬೇಕಾಗಿ ಬಂದೀತು. ಮರಣದಂಡನೆಗೆ ಗುರಿಯಾಗ್ತಿರೋ? ಇಲ್ಲಾ ಬಾಯಿಮುಚ್ಚಿ ಸುಮ್ಮನೆ ಹೋಗ್ತಿರೋ? ಅಥವಾ ಇಷ್ಟೆಲ್ಲಾ ಹೇಳಿದ ಈ ಮೂವರಲ್ಲಿ ಯಾರದು, ಧರೆಯ ಶಿಕ್ಷೆ – ರಕ್ಷೆಗೆ ಬಂದವರು? ಅದು ಹೊಸಬು? ಅದು ಹೋದ ಮಳೆಗಾಲದಲ್ಲಿ ಹುಟ್ಟಿದ್ದೆ, ಈ ಬೇಸಿಗೆಯಲ್ಲಿ ಹುಟ್ಟಿದೊ? ಯಾರದು?

ನನ್ನ ಊಹೆ ಸತ್ಯವಾಯ್ತು ಈಗ, ಆವಾಗ ತರ್ಕದಲ್ಲಿ ಕಂಡಿದ್ದೆ. ಈಗ ಪ್ರತ್ಯಕ್ಷ ಕಂಡೆ.

ಇನ್ನು ಒರೆಗಲ್ಲಿಗೆ ಹಚ್ಚಿ ನೋಡಲಿಲ್ವಲ್ಲ, ಎಷ್ಟು ಬಣ್ಣ ಅಂತ? ಏನು ಬಂದಿದ್ದೀರಿ ಮೂವರು?

ಹ್ಹ ಹ್ಹ ಹ್ಹ ಇವ ಭೀಮ, ಅವನು ಅರ್ಜುನ, ನೀನು ಕೃಷ್ಣ ಯುದ್ಧದೀಕ್ಷೆ ಯಾರಿಗೆ ಕೊಡಬೇಕು?

ನಿನಗೂ! ಹ್ಹ ನಿನಗೂ ನಿ... ಹ್ಹ ಹ್ಹ ಹ್ಹ !!

ನೀಲಾಂಬರಿ-ರೂಪಕ ತಿಳಿಯದಾದಿರೇ ನಮ್ಮ ಕಂಸಗೆ ಅಳಿಯನೀತನು ನಮಗೆ ಮೊಮ್ಮನು॥

ಲಲನೆ ದೇವಕಿ ಯಣುಗಚೋರರ ಕುಲಶಿರೋಮಣಿ ಯೆಂಬರೀತನ ॥ ೪೫ |

ಹಾ - ಇನ್ನೇನೆಲ್ಲಾ ಕೇಳುವದಕ್ಕುಂಟೋ ಮಗನೇ, ನೀವೆಲ್ಲಾ ಬೆಕ್ಕಸಬೆರಗಾಗಿದ್ದೀರಿ "ಕಾಳಗವ ಕೊಡು" ಯಾರಲ್ಲಿ ? ನನ್ನಲ್ಲಿಯೂ ಅಂತ ಹೇಳ್ತಾನೆ ಹ್ಹ ಹ್ಹ ಹ್ಹ ಹ್ಹ

ಹಾಂ ಕಾರಣ ಉಂಟು, ಇವ ಜನ ಯಾರು ಅಂತ ಗೊತ್ತಾಯ್ತೊ ಮೊದಲ್ಲೇಳಿ? ಹಾ, ಆ ನಿಮಗೆಲ್ಲ ಇವನ ಕುರಿತಾದ ಅದ್ಭುತ ರಮ್ಯವಾದಂತಹ ಪ್ರಚಾರದ ಕಥೆಯನ್ನು ಕೇಳಿ, ಏನೇನೋ ಎನೇನೋ ವಿಕಲ್ಪ ಮೂಡಿರಬಹುದು ಮನಸ್ಸಿನಲ್ಲಿ. ಇವನ ಕುರಿತಾಗಿ ಹೇಳುವವರೇ, "ಇವನೊಬ್ಬ ಕಾದುವ ಅಗ್ಗಳರ ಕೂಟದ ಕಲಿ" ಅಂತ ಹೇಳಲೇ ಇಲ್ಲ. ಮಹಾಕಪಟ್ಟಿ ಮಾಹಾಕಪಟಿ, ಅಷ್ಟೇ ಹೇಳಿ ತೃಪ್ತಿ ಇಲ್ಲದಿದ್ರೆ "ಕಪಟನಾಟಕಿ". ಇನ್ನೂ ಕೆಲವರಿಗೆ ಅಲ್ಲಿಯೂ ತೃಪ್ತಿ ಆಗುವದಿಲ್ಲ, "ಕಪಟನಾಟಕ ಸೂತ್ರಧಾರಿ" ! ಅಂದ್ರೇನರ್ಥ? ಕಪಟ ಅಂದ್ರೆ ಬೇರೆ ಏನಾದ್ರು ಅರ್ಥ ಇದ್ದೆ ನೀವೇ ಹೇಳಿ, ನನ್ನಲ್ಲಿ ಕೇಳಿದ್ರೆ ಕಳ್ಳತನವೇ, ಕಳ್ಳತನದ ಪರಾಕಾಷ್ಟೆ ಯಾಕೆ? ಇವ ನಮಗೆ ಹೊರಗಿನವಲ್ಲ. ಹಾಗೆಂತ ಒಳಗಿನವನಂತ ಸಂಪೂರ್ಣ ಒಳಗೆ ಕರಕೊಳ್ಳಲಿಕ್ಕೂ ತಕ್ಕವನಲ್ಲ, ಸ್ವಭಾವದೋಷ, ನನ್ನ ಅಳಿಯ ಕಂಸ, ಆ ಕಂಸನ ತಂಗಿ ದೇವಕಿ, ಆ ದೇವಕಿಯ ಎಂಟನೆಯ ಗರ್ಭದಲ್ಲಿ ಹುಟ್ಟಿದವ ಇವ. ಅಷ್ಟಮ ಪುತ್ರ.

ಹೇಳಿ ಕೇಳಿ ಉಪಯೋಗವಿಲ್ಲ. ಕೆಟ್ಟ ಮಕ್ಕಳು ಹುಟ್ಟಿದ ಮೇಲೆ ಅವರು ಹುಟ್ಟಿದ ತಿಥಿ, ವಾರ, ನಕ್ಷತ್ರ ದೋಷದಿಂದ ಅವರ ತಂದೆ-ತಾಯಿಯರಿಗೆ ದೋಷ ಬರುವುದುಂಟಂತೆ, ಜ್ಯೋತಿಶಾಸ್ತ್ರ ಪ್ರಕಾರ. ಈ ಮಗ ಹಾಗಲ್ಲ; ಹುಟ್ಟುತ್ತಾನೆ ಅಂತ ಸಂಕಲ್ಪ ಆದದ್ದು ಎಲ್ಲಿಯೋ? ಅದು ಅಶರೀರವಾಗಿ ಕೇಳಿಸಿದ್ದು ಶಬ್ದ ಮಾತ್ರ ಕಂಸನಿಗೆ, ಕಂಸ ಏನ್ ಮಾಡಬೇಕು ಹೇಳಿ? ಒಳ್ಳೆಯವ, ಅವ ನನ್ನ ಅಳಿಯ. ತಂಗಿ ಅಂತ ವಾತ್ಸಲ್ಯ ಇಟ್ಟು ಬಿಡಬೇಕೊ ಅಲ್ಲ, ವಿರೋಧಿ ಹುಟ್ಟುವಂತಹ ಕ್ಷೇತ್ರ ಅಂತ ಆವಾಗ್ಲೆ ಸುಟ್ಟು ಬೂದಿ ಮಾಡಬೇಕೋ? ಆದ್ರೂ ತಾಳ್ಮೆ ಉಳ್ಳಂತಹ ಅವ, ಇವನ ಜನ್ಮದಾತನ ಸ್ಥಾನದಲ್ಲಿದ್ದ ವಸುದೇವನ ಮಾತನ್ನು ನಂಬಿ, ಹುಟ್ಟಿದ ಮಕ್ಕಳನ್ನೆಲ್ಲ ತಂದುಕೊಡುವ ಶರ್ತದ ಮೆಲೆ ದಾಂಪತ್ಯವನ್ನು ಸುಖವಾಗಿ ಅನುಭವಿಸಿ ಅಂತ ಬಿಟ್ಟ. ಆ ವಸುದೇವ ಎಂತಹ ದ್ರೋಹಿ! ಆ ದೇವಕಿ ಎಂತಹ ಘಾತಕಿ !! ಏಳು ಮಕ್ಕಳು ಆಗಲಿ, ನಮ್ಮ ಅಳಿಯನದ್ದು ಔದಾರ್ಯ! "ಏಳು ಪರ್ಯಂತರವು ಎನಗೆ ಗೋಚರವಿಲ್ಲ" – ಅದು ದೊಡ್ಡಸ್ತಿಕೆ, ಘನಸ್ಥಿಕೆ ಅದೆಲ್ಲ ನಮ್ಮ ಮನೆತನದ ದೊಡ್ಡಸ್ತಿಕೆ ಅದು. ಆ ಮೇಲೆ "ನಿನಗುದಿಸಿದರೆ ಬಾಲಕನ ತಂದು" ಉದಿಸಿದರೆ.

ಬುದ್ಧಿವಂತ ನನ್ನ ಅಳಿಯ, ಅಂದ್ರೆನು? ಮತ್ತೂ ಎಂಟನೆಯದನ್ನು ಅವರು ಪಡೆಯುತ್ತಾರಂತಾದ್ರೆ ಕಂಸನನ್ನು ಕೊಲ್ಲಬೇಕು ಅಂತಲೇ ಈ ಏಳರ ಮಹಾತ್ಯಾಗಕ್ಕೆ ತಯಾರಾದ ಜೀವಗಳ್ಳರು ಅಂತ ಸ್ಪಷ್ಟ ಹೌದಲ್ಲ? ಎಂಟನೆಯದು ಹುಟ್ಟಿದ್ದು ಗೊತ್ತೇ ಆಗಲಿಲ್ಲ! ಅಲ್ಲಿ ಏನೋ ನಡೀತಂತೆ- ಕಾವಲುಗಾರರು ಕಾವಲು ಇದ್ದಾರೆ. ಬಾಗಿಲು ಹಾಕಿದ್ದು ಹಾಕಿದ್ದ ಹಾಗೆ – ಈ ಕಳ್ಳ ಯಾವ ಮೂಹೂರ್ತದಲ್ಲಿ, ಎಲ್ಲಿಂದ ಹೊರಬಿದ್ದ ಅಂತ ಅವನಿಗೊಬ್ಬನಿಗೆ ಹೊರತು ಯಾರಿಗೂ ಗೊತ್ತಾಗಲಿಲ್ಲ. ಶ್ರಾವಣ ಮಾಸ, ಅಷ್ಟಮಿ ತಿಥಿ, ಕಳ್ಳರೂ ಕೂಡ ವಿಶ್ರಾಂತಿ ಪಡೆಯುವ ತಿಂಗಳಿನಲ್ಲಿ ಕೃಷ್ಣಪಕ್ಷದ ಅಷ್ಟಮಿಯ ದಿನ - ಈ ಕಳ್ಳ ಕಾರಾಗೃಹದಲ್ಲೇ ಹೊರಬಿದ್ದ, ಯಾವ ಮಾಯದಲ್ಲಿ ಹೊರಗೆ ಹೋದನೋ ಗೊತ್ತಿಲ್ಲ. ಅಂತು ಇಂತು ಹೀಗೆ ಹುಟ್ಟಿದ ಕಳ್ಳರ ಕುಲಗುರು ಎನಿಸಿದವ, ಎಲ್ಲಿಯೂ ಇವ ಪೆಟ್ಟಿಗೆ ಸಿಕ್ಕಿದ್ದಿಲ್ಲ. ಪೆಟ್ಟಿಗೆ ಹೋದದ್ದುಂಟು.

ಹೇ, ಇಂತವ ಈಗ ಎಷ್ಟು ದೊಡ್ಡಸ್ತಿಕೆ ಮಾತನಾಡ್ತಾನೆ ನೋಡಿ! ಬಹುಶ: ಈ ಭೀಮಾರ್ಜುನರ ಧೈರ್ಯ ಇರಬೇಕು. ಅಥವಾ ಹೀಗಿರಬೇಕು, ಇವರ ಮನೆಯಲ್ಲಿ ಇವನಿಗೆ ಎತ್ತರದ ಮನ್ನಣೆಯ ಮಣೆಯುಂಟು, ಪಾದಪೂಜೆಯುಂಟು, ಎಲ್ಲಾ ಇರಬೇಕು. ಆ ಮನೆಯಲ್ಲಿ ದೊಡ್ಡಸ್ತಿಕೆಯನ್ನು ಈ ಮನೆಯಲ್ಲಿ ಬಂದು ಕಳಕೊಳ್ಳಬಾರದಲ್ಲ ಅಂತ ಹೇಳಿ ಕೇವಲ ದೊಡ್ಡಸ್ತಿಕೆಯಿಂದ ಹೇಳಿದ್ದವ - “ಕೊಡು ಯುದ್ಧ” !!

ಅದಕ್ಕೆ ನಾನು ಕೇಳಿದ್ದು - ನೀನು !! ನೀ... ನು?

ಯಾಕೆ ಕೇಳಿದ್ರೆ, ಅಯ್ಯೋ ಇವನ ಯುದ್ಧದ ಕಥೆ ಏನು ಹೇಳುವಾ..

ನೀಲಾಂಬರಿ-ರೂಪಕ॥ ಆಡಲೇನದ ಹಿಂದೆ ನಮ್ಮೊಳು ಮಾಡಿಕಲಹದಿ ಮರಳಿ ಯುದ್ಧವ

ಓಡಿ ಬದುಕಿದ ಭಂಡನಿವನೆನು! ಲೌಡಿ ಕೃಷ್ಣನ ನೋಡುತೆಂದನು || ೪೭ |

ಯುದ್ಧವಾಗಿತ್ತು ನಮ್ಮಲ್ಲಿ; ಇದೇನು ಹೊಸತಲ್ಲ. ಯುದ್ಧಭಿಕ್ಷೆಯನ್ನು ಈ ಕೃಷ್ಣ ಬಂದು ನನ್ನ ಇದಿರು ನಿಂತು ಕೇಳ್ಳೋದು ಮಾತ್ರ ವಿಶೇಷ. ಮೊದಲು ಹಾಗಲ್ಲ, ನನ್ನ ಅಳಿಯನಾದಂತಹ ಕಂಸನನ್ನು ಈ ಕೃಷ್ಣ ಮತ್ತು ಇವನಣ್ಣ ಬಲರಾಮ ಕೊಲೆ ಮಾಡಿದ್ರು ಅಂತ ಕೇಳಿದ ನಾನು, ದಂಡೆತ್ತಿಕೊಂಡು ಹೋಗಿದ್ದೆ, ಮಥುರಾ ನಗರವನ್ನು ಮುತ್ತಿಗೆ ಹಾಕಿದ್ದೆ. ಯುದ್ಧ ಆಯ್ತು ಆಯ್ತು ಆಯ್ತು..

ನಿರ್ಣಯ ಆಗಲೇ ಇಲ್ಲ ! ನಿರ್ಣಯ ಆಗಲಿಲ್ಲ ಸರಿ, ಈ ಸಲ ತಪ್ಪಿದರೇನು? ಮುಂದೆ ನೋಡೋಣ, ಹೀಗೆ ಒಮ್ಮೆಯೊ? ಎರಡು ಸಲವೊ? ಮೂರು ಸಲವೊ? ಯಾರದನ್ನೆಲ್ಲಾ ಇಂತಿಷ್ಟು ಕಾಲ, ಇಂತಿಷ್ಟು ಆವರ್ತನ ಅಂತ ಲೆಕ್ಕ ಇಟ್ಟಿದ್ದಾರೆ ಹೇಳಿ,

ಹದಿನಾರು ಹದಿನೇಳುಸಲ ನಮ್ಮೊಳಗೆ ಯುದ್ಧ ಆಯ್ತು. ಮತ್ತೂ ಈ ಜರಾಸಂಧ ಬಿಡೋದಿಲ್ಲಾ ಅಂತ ಗೊತ್ತಾಗುವಾಗ್ಗ, ಅವರ ಮುಖಂಡನಾದಂತಹ ಇವನೇ ಒಂದು ಗುಪ್ತ ಕಾರಸ್ಥಾನ ಮಾಡಿದ. ಏನು ಕಾರಸ್ಥಾನ? ಇಲ್ಲಿದ್ದರಲ್ಲವೋ ಮಾಗಧ ಬರೋದು?

ಮಥುರೆಯನ್ನು ಬಿಟ್ಟು ಸಮುದ್ರದ ಮಧ್ಯದಲ್ಲಿ ಒಂದು ನಗರವನ್ನು ಕಟ್ಟಿ, ಹೇಗೆ? ಈಗ ಮೇರೀತಾ ಇದ್ದಾನೆ?

ಅದೂ ಅಲ್ಲಿ ಆ ದ್ವಾರಕಾ ನಿರ್ಮಾಣ ಮಾಡಿ, ಅಲ್ಲಿ ಅರಸೊತ್ತಿಗೆ ಎಲ್ಲಾ ನಡೆಸ್ತಾರೆ ಅಂತ ಗೊತ್ತಾದ್ದೇ ರುಕ್ಮಿಣೀ ಹರಣ ಪ್ರಕರಣದಿಂದ. ಹೋಗಲಿ, ಒಂದು ರಾಜ್ಯವನ್ನು ಕಟ್ಟಿಯಾಯ್ಕೆ ಇಲ್ಲೊ: ಶ್ರೀಮಂತಿಕೆ ಬಂತೋ ಇಲ್ಲೊ ಮತ್ತು ಹುಟ್ಟುಗುಣ ಬಿಡೋದಿಲ್ಲ. ಅಕೊಳ್ಳಿ, ರುಕ್ಮಿಣಿಯನ್ನೂ ಅಪಹರಿಸಿದ್ದೆ. ಅದು ಹುಟ್ಟಿನಿಂದ ಬಂದಿದ್ದು.

ಹೀಗೆ, ನನ್ನ ಕೈಯಿಂದ ತಪ್ಪಿಸಿಕೊಂಡು, ರಕ್ಷಣೆಗೆ ಬೇಕಾಗಿ ದ್ವಾರಾವತಿಯಲ್ಲಿ ನೆಲೆಯೂರಿ, ಈಗ ಪುನ: ಅಲ್ಲಿ ಇಲ್ಲಿ ಎಲ್ಲ ಕೈ, ಕಾಲು, ತಲೆ ತೂರಿಸಲಿಕ್ಕೆ ಹೊರಟಿದ್ದಾನೆ. ಆ ಹಸ್ತಿನಾವತಿಯ ಆಡಳಿತವೇ ಭದ್ರವಾಗಿಲ್ಲ. ಅದು ಅಲುಗಾಡ್ತಾ ಉಂಟು, ಈ ಹೊತ್ತಿನಲ್ಲಿ ಏನಾಯ್ತು ಇವನಿಗೆ? ಬೇರೆ ಎಲ್ಲಿಯಾದರೂ ಏನಾದರೂ ಮಾಡುವದಕ್ಕಾಗ್ತದೆ ಅಂತ ಈ ರೀತಿ ಆಲೋಚನೆ ಮಾಡ್ತಾ ಇದ್ದ. ಈಗೊಂದು ಒಳ್ಳೆ ಹೊತ್ತು ಸಿಕ್ತು. ಆ ಹಸ್ತಿನಾವತಿಯ ಆಸೆ ಹುಟ್ಟಿಸಿರಬೇಕು ಈ ಪಾಂಡುವಿನ ಮಕ್ಕಳಿಗೆ, ಭೀಮಾರ್ಜುನರಿಗೆ, ಹಾಗೆ ಇವರ ಕಿವಿ ಊದಿ, ಇಲ್ಲಿಗೆ ಕರ್ಕೊಂಡು ಬಂದು, ಅದೇ ಸೈನ್ಯವನ್ನೆಲ್ಲಾ ಎಲ್ಲೋ ಅಡಗಿಸಿಟ್ಟಿದ್ದಾರೆ. ಗೊತ್ತುಂಟು ಅವರಿಗೆ, ಇಲ್ಲಿ ತುಮುಲ ಯುದ್ಧವಾದರೆ ಏನು? ಗತಿ - ಗೋತ್ರ ನಿರ್ಣಯ ಮಾಡೋದಕ್ಕೆ ಆಗೋದಿಲ್ಲಾ. ಜರಾಸಂಧನನ್ನು ಆಯುಧದಿಂದ ಸಾಯಿಸುವದಕ್ಕೂ ಸಾಧ್ಯವಿಲ್ಲ. ಇತ್ಯಾದಿ ಆದದ್ದನ್ನು ತಿಳಕೊಂಡಂತಹ ಈ ಕಳ್ಳ, ಒಂದು ಉಪಾಯದಿಂದ ಈ ಅರಸು ಮಕ್ಕಳನ್ನು ಹುರಿದುಂಬಿಸಿ ಕರ್ಕೊಂಡುಬಂದು ಅವರ ಮುಂದೆ ತಾನು ಒಬ್ಬ ಮಹಾ ಪ್ರಬಲ ಅಂತ ಪ್ರಕಟಿಸುವದಕ್ಕೆ ಹೀಗೆ ಹೇಳ್ತಾ ಇದ್ದಾನೆ. ನನ್ನ ದೃಷ್ಟಿಯಲ್ಲಿ, ಯುದ್ಧಭೂಮಿಯಲ್ಲಿ ಯಾವ ಕಾರಣಕ್ಕೇ ಆಗಲಿ, ಒಬ್ಬ ಬೆನ್ನು ತೋರಿಸಿ ಕಾಲು ತೆಗೆದ; ದೇಶಭ್ರಷ್ಟನಾಗಿ ಸಮುದ್ರಮಧ್ಯದಲ್ಲಿ ಮನೆ ಮಾಡಿದ ಅಂತಾದ್ರೆ ನಾವು ಅವರನ್ನು ಮತ್ತೊಮ್ಮೆ ವೀಳ್ಯ ಕೊಟ್ಟು ಅಂಗೀಕರಿಸುವದಿಲ್ಲ. ಇದು ನಮ್ಮ ಮಡಿವಂತಿಕೆ. ಆದ್ದರಿಂದ ಓಡಿ ಬದುಕಿದ ಅಂದರೆ, ಬರೇ ಭಂಡಾಚಾರ ಮಾಡೋದು ಅಂತಂದ್ರೆ, ಅವನಿಗೆ ಲೀಲಾ ಜಾಲ.

ಕಳ್ಳತನ ಮಾಡೊದು ಅಂತಂದ್ರೆ ಅವನಿಗೆ ಅದು ವ್ಯಕ್ತಿತ್ವ ಆದರೆ ಒಂದು ಧನ್ಯವಾದ ಸಮರ್ಪಿಸಬೇಕು ಇವನಿಗೆ. ನಮ್ಮಂತಹ ಆಡಳಿತಗಾರರೆಲ್ಲ ಊರಿನಲ್ಲಿ ಈಗ ಕಳ್ಳರಿಲ್ಲ ಕಳ್ಳತನ ಯಾರೂ ಮಾಡೋದಿಲ್ಲ. ಯಾಕೆ ಮಾಡೋದಿಲ್ಲ? ಅವರನ್ನೇ ವಿಚಾರಿಸಿದರೆ,

ಅವರು ಹೇಳ್ತಾರೆ "ನಾವು ಕಳುವು ಮಾಡುವ ಯತ್ನ ಮಾತ್ರ ಮಾಡೋದು, ನಾವು ಕದ್ದದ್ದನ್ನೆಲ್ಲ ಒಂದು ಕಡೆಯಲ್ಲಿ ರಾಶಿ ಹಾಕಿದರೆ ನಿಮ್ಮ ಮೊಮ್ಮಗನಾದಂತ ಈ ಶ್ರೀಕೃಷ್ಣ ಅಲ್ಲಿಂದಲ್ಲಿಗೆ ಅಪಹರಿಸಿಬಿಡ್ತಾನೆ" ಅಂತ. ಹೀಗೆ ಚೋರರ ಕುಲಗುರುವಾದ ಇವ...

ಏಯ್, ಏನದು ಯುದ್ಧ ಅಂತದ್ರೆ?

ಏನೋ? ಬಲುದೊಡ್ಡ ಭಟನೋ ನೀನು? ಎಂಥೆಂಥವರನ್ನೆಲ್ಲಾ ಕೊಂದಿದ್ದಿ?

ನೀಲಾಂಬರಿ-ರೂಪಕ ಹಂಸಡಿಬಿಕರ ಕಂಸ ಬಲಗಳ ಹಿಂಸೆಗೆಯ್ದುದ ತೋರ ಬಂದೆಯ

ಧ್ವಂಸಮಾಳ್ಪೆನು! ಹುಲಿಗೆ ಪಶುಗಳ ವಂಶ ಸಿಕ್ಕಿದ ತೆರೆದಿ ಕೆಟ್ಟೆಲ || ೪೭ |

ಕೆಲವರನ್ನೆಲ್ಲಾ ನೀನು ಕೊಲೆಗೈದಿದ್ದಿಯಂತ ನಮಗೆ ಗೊತ್ತುಂಟು. ಆದರೆ ಅದರ ಹಿನ್ನೆಲೆ ಏನು ಎಂಬುದನ್ನು ವಿವೇಕಿಗಳಾದಂತಹನಾವು ವಿಮರ್ಶಿಸಿಕೊಂಡಿದ್ದೇವೆ. ಹೈ ಒಬ್ಬ ನಿನ್ನ ಹಾಗೆ ಆಗಬೇಕು ಅಂತ ಹೇಳಿಕೊಂಡು, ವೇಷ ಹಾಕಿದ್ದಾನಂತೆ. ನೀನು ಕೆಲವು ಸಲ ಗರುಡನನ್ನು ಏರಿಕೊಂಡು ಎಲ್ಲೆಲ್ಲೋ ಸಂಚಾರ ಮಾಡಿದ್ದೀಯಂತೆ. ಯಾರು ಕಂಡವರೋ ಗೋತ್ತಿಲ್ಲಾ. ಅದಕ್ಕೆ ಅವನೂ ಒಂದು ಚಿನ್ನದ ಗರುಡನನ್ನು ಮಾಡಿಕೊಂಡು, ನೀನು ಕೆಲವು ಸಲ ಎರಡು ಕೈಯಿದ್ದು, ನಾಲ್ಕು ಕೈಯಿದ್ದ ಹಾಗೆ ಪ್ರಕಟಿಸಿದ್ದೀಯಂತೆ. ಅದನ್ನು ಅವ ಸ್ವಪ್ನದಲ್ಲಿ ಕಂಡೋ, ಎಚ್ಚರದಲ್ಲಿ ಕಂಡೋ, ನನಗೊತ್ತಿಲ್ಲ. ಅವನು ಎರಡು ಹೊಸ ಕೈಯನ್ನೆಲ್ಲ ಕಟ್ಟಿಕೊಂಡು ಬಂದನಂತೆ. ಯಾರವ? ತಾನು ವಾಸುದೇವ ಅಂತ ಹೇಳಿಕೊಂಡು, ನಿನ್ನ ಅಪ್ಪನಿಗೆ ಹುಟ್ಟಿದವೋ ಅಲ್ಲ, ನಿನ್ನ ಹೆಸರಿಟ್ಟುಕೊಂಡವೊ ಗೊತ್ತಿಲ್ಲ. ಅವನನ್ನು ಕೊಂದಿದ್ದಿ, ಆಮೇಲೆ ಅವನ ಬೆಂಬಲಿಗರಾಗಿ ಅವನ ಹೇಳಿಕೆಯಲ್ಲಿದ್ದಂತಹ ಇಬ್ಬರು ಹಂಸ ಮತ್ತು ಡಿಂಬಕ ಅವರಿಗೂ ಬುದ್ಧಿ ಕಡಿಮೆ? ಬ್ರಹ್ಮನ ಕುರಿತಾಗಿ ತಪಸ್ಸು ಮಾಡಿದರಂತೆ. ತಪ್ಪಸ್ಸು ಮಾಡಿ ಮರಣ ಬರುವದಿದ್ರೆ ಹೇಗೆ? ಹ್ಞ ಅವಸತ್ರೆ ತಾನೂ ಸಾಯೋದು... ಹೇಗೆ

ಇವನ ಜೀವ ಅವನ ಪ್ರಾಣದಲ್ಲಿ, ಅವನ ಪ್ರಾಣ ಇವನ ಜೀವದಲ್ಲಿ. ಹೀಗೆ ಬುದ್ಧಿಯಿಲ್ಲದಿದ್ದ ವರ ಕೇಳಿದ್ದಾರೆ ಅಂತ ಗೊತ್ತಾಯ್ತು ನನಗೆ ಗೊತ್ತಾಗಿ, ಹಂಸ ಡಿಂಬಕರನ್ನು ಬೆನ್ನಟ್ಟಿ ಹೋಗಿ, ಒಂದು ಕಡೆಯಲ್ಲಿ ಹಂಸ ನೀರಿಗೆ ಹಾರಿದಾವಗ, ನಿನ್ನ ಕೈಯಿಂದ ತಪ್ಪಿಸಿಕೊಳ್ಳಲಿಕ್ಕೂ, ಆಗಲಿಲ್ಲ, ನಿನ್ನನ್ನು ನೀರಿನಲ್ಲಿ ಹಾಕಿ, ಮುಳುಗಿಸಲಿಕ್ಕೂ ಗೊತ್ತಿಲ್ಲ.

"ಅದೋSSS ನೀರಿನಲ್ಲಿ ಮುಳುಗಿ ಸತ್ತ ಅಂತ ಹೇಳಿದೆ. ಇದನ್ನು ನಂಬಿದ ಡಿಂಬಕ ತಲೆ ಒಡೆದು ಸತ್ತ.

ಅವರು ಹೇಳ್ತಾರೆ "ನಾವು ಕಳುವು ಮಾಡುವ ಯತ್ನ ಮಾತ್ರ ಮಾಡೋದು, ನಾವು ಕದ್ದದ್ದನ್ನೆಲ್ಲ ಒಂದು ಕಡೆಯಲ್ಲಿ ರಾಶಿ ಹಾಕಿದರೆ ನಿಮ್ಮ ಮೊಮ್ಮಗನಾದಂತ ಈ ಶ್ರೀಕೃಷ್ಣ ಅಲ್ಲಿಂದಲ್ಲಿಗೆ ಅಪಹರಿಸಿಬಿಡ್ತಾನೆ" ಅಂತ. ಹೀಗೆ ಚೋರರ ಕುಲಗುರುವಾದ ಇವ...

ಏಯ್, ಏನದು ಯುದ್ಧ ಅಂತದ್ರೆ?

ಏನೋ? ಬಲುದೊಡ್ಡ ಭಟನೋ ನೀನು? ಎಂಥೆಂಥವರನ್ನೆಲ್ಲಾ ಕೊಂದಿದ್ದಿ?

ನೀಲಾಂಬರಿ-ರೂಪಕ ಹಂಸಡಿಬಿಕರ ಕಂಸ ಬಲಗಳ ಹಿಂಸೆಗೆಯ್ದುದ ತೋರ ಬಂದೆಯ

ಧ್ವಂಸಮಾಳ್ಪೆನು! ಹುಲಿಗೆ ಪಶುಗಳ ವಂಶ ಸಿಕ್ಕಿದ ತೆರೆದಿ ಕೆಟ್ಟೆಲ || ೪೭ |

ಕೆಲವರನ್ನೆಲ್ಲಾ ನೀನು ಕೊಲೆಗೈದಿದ್ದಿಯಂತ ನಮಗೆ ಗೊತ್ತುಂಟು. ಆದರೆ ಅದರ ಹಿನ್ನೆಲೆ ಏನು ಎಂಬುದನ್ನು ವಿವೇಕಿಗಳಾದಂತಹನಾವು ವಿಮರ್ಶಿಸಿಕೊಂಡಿದ್ದೇವೆ. ಹ್ಞೆ ಒಬ್ಬ ನಿನ್ನ ಹಾಗೆ ಆಗಬೇಕು ಅಂತ ಹೇಳಿಕೊಂಡು, ವೇಷ ಹಾಕಿದ್ದಾನಂತೆ. ನೀನು ಕೆಲವು ಸಲ ಗರುಡನನ್ನು ಏರಿಕೊಂಡು ಎಲ್ಲೆಲ್ಲೋ ಸಂಚಾರ ಮಾಡಿದ್ದೀಯಂತೆ. ಯಾರು ಕಂಡವರೋ ಗೋತ್ತಿಲ್ಲಾ. ಅದಕ್ಕೆ ಅವನೂ ಒಂದು ಚಿನ್ನದ ಗರುಡನನ್ನು ಮಾಡಿಕೊಂಡು, ನೀನು ಕೆಲವು ಸಲ ಎರಡು ಕೈಯಿದ್ದು, ನಾಲ್ಕು ಕೈಯಿದ್ದ ಹಾಗೆ ಪ್ರಕಟಿಸಿದ್ದೀಯಂತೆ. ಅದನ್ನು ಅವ ಸ್ವಪ್ನದಲ್ಲಿ ಕಂಡೋ, ಎಚ್ಚರದಲ್ಲಿ ಕಂಡೋ, ನನಗೊತ್ತಿಲ್ಲ. ಅವನು ಎರಡು ಹೊಸ ಕೈಯನ್ನೆಲ್ಲ ಕಟ್ಟಿಕೊಂಡು ಬಂದನಂತೆ. ಯಾರವ? ತಾನು ವಾಸುದೇವ ಅಂತ ಹೇಳಿಕೊಂಡು, ನಿನ್ನ ಅಪ್ಪನಿಗೆ ಹುಟ್ಟಿದವೋ ಅಲ್ಲ, ನಿನ್ನ ಹೆಸರಿಟ್ಟುಕೊಂಡವೊ ಗೊತ್ತಿಲ್ಲ. ಅವನನ್ನು ಕೊಂದಿದ್ದಿ, ಆಮೇಲೆ ಅವನ ಬೆಂಬಲಿಗರಾಗಿ ಅವನ ಹೇಳಿಕೆಯಲ್ಲಿದ್ದಂತಹ ಇಬ್ಬರು ಹಂಸ ಮತ್ತು ಡಿಂಬಕ ಅವರಿಗೂ ಬುದ್ಧಿ ಕಡಿಮೆ? ಬ್ರಹ್ಮನ ಕುರಿತಾಗಿ ತಪಸ್ಸು ಮಾಡಿದರಂತೆ. ತಪ್ಪಸ್ಸು ಮಾಡಿ ಮರಣ ಬರುವದಿದ್ರೆ ಹೇಗೆ? ಹ ಅವಸತ್ರೆ ತಾನೂ ಸಾಯೋದು... ಹೇಗೆ

ಇವನ ಜೀವ ಅವನ ಪ್ರಾಣದಲ್ಲಿ, ಅವನ ಪ್ರಾಣ ಇವನ ಜೀವದಲ್ಲಿ. ಹೀಗೆ ಬುದ್ಧಿಯಿಲ್ಲದಿದ್ದ ವರ ಕೇಳಿದ್ದಾರೆ ಅಂತ ಗೊತ್ತಾಯ್ತು ನನಗೆ ಗೊತ್ತಾಗಿ, ಹಂಸ ಡಿಂಬಕರನ್ನು ಬೆನ್ನಟ್ಟಿ ಹೋಗಿ, ಒಂದು ಕಡೆಯಲ್ಲಿ ಹಂಸ ನೀರಿಗೆ ಹಾರಿದಾವಗ, ನಿನ್ನ ಕೈಯಿಂದ ತಪ್ಪಿಸಿಕೊಳ್ಳಲಿಕ್ಕೂ, ಆಗಲಿಲ್ಲ, ನಿನ್ನನ್ನು ನೀರಿನಲ್ಲಿ ಹಾಕಿ, ಮುಳುಗಿಸಲಿಕ್ಕೂ ಗೊತ್ತಿಲ್ಲ.

"ಅದೋsss ನೀರಿನಲ್ಲಿ ಮುಳುಗಿ ಸತ್ತ ಅಂತ ಹೇಳಿದೆ. ಇದನ್ನು ನಂಬಿದ ಡಿಂಬಕ ತಲೆ ಒಡೆದು ಸತ್ತ.

ಆಮೇಲೆ ಅವನ ಹೆಣ ತೋರಿಸಿ ನೀರಿನಿಂದ ಮೇಲೆ ಬಂದ ಇವನಿಗೆ... ಹಾಗೆಲ್ಲಾ ಉಪಾಯ ಮಾಡಿದೆ. ಕಂಸನ ಚಾಣೂರ ಮುಷ್ಟಿಕರು ದೇಹದಲ್ಲಿ ಮಾತ್ರ ಭಾರ ಇದ್ದವರು, ಒಳಗೆ ತಿರುಳೆನೂ ಇರಲಿಲ್ಲಾ. ಅಂಥವರನ್ನು ಗುದ್ದಿ ಗುದ್ದಿ ಕೊಂದು ಕೊನೆಗೆ ಕಂಸನ ಆಜ್ಞೆಯನ್ನೇ ಎಲ್ಲಾ ಸೈನಿಕರು ಎಲ್ಲಾ ಪ್ರಜೆಗಳು ತಿರಸ್ಕರಿಸುವಂತಹ ಒಂದು ಕಾಲಘಟ್ಟವನ್ನು ನೀನು ನಿರ್ಮಿಸಿ, “ಕೊಲ್ಲಿರೋ” ಎಂಬ ಅವನ ಆಜ್ಞೆಯನ್ನು ಯಾರು ಕೊಲ್ಲುವರು, ಅಂತ ಕೈತೋರಿಸಿ ನಿಲ್ಲಿಸಿ, ಪ್ರಜೆಗಳು ಅವನೇ ತಿರುಗಿ ನಿಲ್ಲುವಂತೆ ಮಾಡಿ, ಸೈನಿಕರೇ ಆಯುಧವನ್ನು ಕೆಳಗೆ ಹಾಕುವಂತೆ ಮಾಡಿ, ಬಲರಾಮಕೃಷ್ಣರು ನೀವು ನನ್ನ ಅಳಿಯನಾದಂತಹ ಕಂಸನನ್ನು ಗುದ್ದಿ ಗುದ್ದಿ ಗುದ್ದಿ... ಯೇ ಕೊಲೆಪಾತಕಿ!!

ಈ ದೊಡ್ಡಸ್ತಿಕೆಯನ್ನೆಲ್ಲಾ ತೋರಿಸಲಿಕ್ಕೆ ನನ್ನ ಬಳಿ ಬಂದಿದ್ಯೋ? ಒಳ್ಳೆದಾಯ್ತು, ಒಳ್ಳೆಯದಾಯ್ತು. ನನ್ನ ಹೆಣ್ಣು ಮಕ್ಕಳ ವೈಧವ್ಯದು:ಖದಿಂದ ನಾನು ಕೂಡ ನೊಂದವನೇ. ನಿನಗಾಗಿ ಕಾದಿದ್ದೆ, ಹಸಿದ ಹೆಬ್ಬುಲಿಯ ಗವಿಗೆ ತಾನಾಗಿ ಆಕಳು ಬಂದಹಾಗೆ ಸಿಕ್ಕಿದಿಯಾ ಗೋಪಾಲಾ...!

ಹೇಯ್, ನನ್ನಲ್ಲಿ ಯುದ್ಧ ಎಲಾಽ ಹಾಲು ಮಾರುವವನ ಮಗನೇ

ಸೌರಾಷ್ಟ್ರ-ತ್ರಿವುಡೆ| ಎಲವೊ ಗೋಪಕುಮಾರ ಕಂಸನ | ಲಲನೆಯರ ವೈಧವ್ಯದು:ಖಾ |

ನಲನ ನಂದಿಸಲಾಯ್ತು ನಿನ್ನಯ | ತಲೆಯರುಧಿರ || ೪೮ |

ಹೋರಾಡುವ ಭಟನೆಂದು ನಿನ್ನನ್ನು ನಾನು ಅಂಗೀಕರಿಸುವ ಸ್ಥಿತಿಯಲ್ಲೇ ಇಲ್ಲ. ಹೇಳಿದ್ದೇನೆ ನನ್ನ ಹೆಣ್ಣು ಮಕ್ಕಳಿಗೆ ವೈಧವ್ಯ ದು:ಖವನ್ನು ತಂದಕೊಟ್ಟಂತಹ ನೀನು ಬಂದದ್ದು ಒಳ್ಳೆದಾಯ್ತು. ಯಾಕೆ? ಕೊಲೆಪಾತಕಿ ನೀನು, ನಿನಗೆ ಮರಣ ದಂಡನೆ ವಿಧಿಸಬೇಕಾಗಿದೆ. ಇಂತಹ ಅಪರಾಧಿಯ ಸ್ಥಾನದಲ್ಲಿ ಗೋಪಕುಮಾರನಾಗಿ ನಿನ್ನನ್ನು ಕಂಡುಕೊಂಡಂತಹ ನಾನು ವೀಳ್ಯವನ್ನು ಕೊಟ್ಟು, ಬಾ ಯುದ್ಧಕ್ಕೆ ಅಂತ ಕರೆದರೆ,

ಹ್ಹೆ ಹೆ ನಿನಗೆ ನಾನೊಂದು ಸ್ವಾಗತಕೊಟ್ಟು ನಿನಗೊಂದು ಸ್ಥಾನಕೊಟ್ಟು... ಹಾಗೆ ಆಗ್ತದೆ. ಆದಕಾರಣ ನಿನಗೇನಾಗಬೇಕೆಂಬುದನ್ನು ನಾನು ಬಲ್ಲೆ. ನಿನ್ನ ಕುತ್ತಿಗೆಯನ್ನು ಕತ್ತರಿಸಿ, ಆ ರಕ್ತದಿಂದ ನನ್ನ ಹೆಣ್ಣುಮಕ್ಕಳ ಹಣೆಗೆ ತಿಲಕವನ್ನಿಡಬೇಕು. ಆ ರಕ್ತವನ್ನು ತರ್ಪಣ ಕೊಟ್ಟು ಸತ್ತ ಕಂಸನ ಆತ್ಮಕ್ಕೆ ತೃಪ್ತಿಪಡಿಸಬೇಕು. ನಿನ್ನನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸಿದ್ದೇನೆ ಇರು.

ಅರಸು ಮಕ್ಕಳೇ,

*ಸೌರಾಷ್ಟ್ರ-ತ್ರಿವುಡ| ಗೋವಳರು ನಿರ್ಲಜ್ಜರಿದರೊಳು | ನೀವು ಗರುವರು ರಾಜಪುತ್ರರು |*

ಸಾವ ಬಯಸುವನೊಡನೆ ಬಂದಿರಿ | ರೀವಿ ಲೇಸು ||೪|

ಭೀಮಾರ್ಜುನರೇ, ನಿಮ್ಮ ತಂದೆ ಪಾಂಡು, ಚಕ್ರವರ್ತಿಯಾಗಿ ಅಭಿಷೇಕಗೊಳ್ಳದಿದ್ದರೂ ಕೂಡ ಅನೇಕ ಮಂದಿ ಕ್ಷತ್ರಿಯರಿಂದ ಚಕ್ರವರ್ತಿ ಎಂಬ ಹೊಗಳಿಕೆಯ ಮಾತನ್ನು ಕೇಳಿ ಸತ್ತವ. ಅವ ಏನೇ ಆಗಲಿ, ಪಾಂಡು ಎಂತವ! ನಿಮ್ಮ ಉತ್ಪತ್ತಿ ಸ್ಥಾನವೆನಿಸಿದಂತಹ ಪೃಥೆ – ಕುಂತಿ!

ಅವಳ ಗರ್ಭದ ಪಾವಿತ್ರ್ಯತೆ ಎಷ್ಟು! ಇಂತಹ ಉತ್ತಮ ಕ್ಷತ್ರಿಯಾಣಿಯಲ್ಲಿ ಶ್ರೇಷ್ಠ ಕ್ಷತ್ರಿಯನಾದಂಥ ಪಾಂಡುವಿಗೆ ಹುಟ್ಟಿದ ನೀವು ಅರ್ಹತೆಯುಳ್ಳವರು, ಗೌರವಾನ್ವಿತರು, ಶಾಸ್ತ್ರ ವರ್ಚಸ್ಸನ್ನುಳ್ಳವರು, ಆದರೆ ಏನಾಯ್ತು! ಕ್ಷತ್ರಿಯರಾದಂತಹ ನಮಗೆ ಬಂಧು, ಮಿತ್ರ, ಉದಾಸೀನ ಎಲ್ಲಾ ಆಕಸ್ಮಿಕ ಆದದ್ದು ಹೊರತು, ಅರಸನಿಗೆ ಎತ್ತಣದೊ ಜಾತಿ, ಎತ್ತಣದೊ ಸಂಬಂಧ?

ದಿಗ್ವಿಜಯ ಮಾಡಬೇಕು ಅಂತ ನಿಮಗೆ ಆಸೆ ಇದ್ದರೆ ನೀವಾಗಿ ಬರುವದಷ್ಟೆ ? “ಕೊಡು ಧನ” ಅಂತ ಕೇಳಿದರೆ ಹಿಮ್ಮೆಟ್ಟುವಂತಹ ಒಬ್ಬ ಕ್ಷತ್ರಿಯ- ಜರಾಸಂಧ ಅಂತ ನಿಮಗೆ ಯಾರು ಹೇಳಿದರು? ಹೋರಾಟಕ್ಕೆ ಅಂತಲೇ ಹುಟ್ಟಿಕೊಂಡವ ನಾನು. ನಿಮಗೂ ಕೂಡ ಹಾಗೆ, ನಿಮ್ಮ ಬದುಕಿನಲ್ಲಿ ಹೋರಾಟವೇ ಸ್ಥಾಯಿಯದ್ದಾಗಿ ಕಾಣಿಸುತ್ತದೆ. ನಿಮ್ಮ ಕೃತಿಯಿಂದಲೂ ಕಾಣೇವೆ ನಾವು. ನೀವು ಬರುವುದುಬಿಟ್ಟು, ಯುದ್ಧಾತುರರಾಗಿ ನನಗೆ ರಣವೀಳ್ಯವನ್ನು ಕೊಡುವದುಬಿಟ್ಟು ಇವನೊಟ್ಟಿಗೆ ಈ ಗೋವಳ ಅವನಿಗೆ ಮಾನ ಇಲ್ಲ; ಮರ್ಯಾದೆ ಇಲ್ಲಾ ಯಾರೆಲ್ಲಾ ಅಂತ ಕೇಳಿದ್ರೆ ಅದಕ್ಕೆ ಅಳತೆ ಎಷ್ಟು ಅಂತ ಕೇಳ್ತಾನೆ; ಅವ ಮರ್ಯಾದೆ ಅಂತದ್ರೆ, ಕಪ್ಪೆ, ಬೆಳ್ಳಗೊ? ಹೀಗೆ ಏನು ಅಲ್ಲದ, ಹಾಗೆಂತ ಎಲ್ಲವೂ ಆಗಿರುವ ಇವನೊಟ್ಟಿಗೆ ಈ ಒಂದು ಮಹಾಶೂನ್ಯಾಧಿಪತಿಯ ಒಟ್ಟಿಗೆ ನೀವು ಸಿಂಹಾಸನಾಧಿಪತ್ಯಕ್ಕಾಗಿ ಹುಟ್ಟಿಕೊಂಡ ಮಕ್ಕಳು ಬಂದಿದ್ದೀರಲ್ಲ!

ನಿಮಗ್ಯಾರೂ ಹೇಳುವವರು ಕೇಳುವವರು ಇಲ್ಲವೊ ಮಕ್ಕಳೇ? ಯಾರೂ ಉಪದೇಶ ಮಾಡುವವರೂ ಇಲ್ವೊ? ಆದಕಾರಣ ಇವನ ನೇತೃತ್ವದಲ್ಲಿ, ಇವನ ಹಿಂದೆ, ಅದು ಕೂಡ ಅಯ್ಯೋ, ಈ ಕೊಳಕು ವೇಷ ಕಟ್ಟಿಕೊಂಡು; ಎಲ್ಲೆಲ್ಲಿ ಧರೆಹಾರಿ; ಇವ ಹೇಳಿದ ಹಾಗೆ ಮಾಡಿಕೊಂಡು ಬಂದು, ನಾಳೆ ಪ್ರಪಂಚದ ಮುಂದೆ ಮುಖ ತೋರಿಸಬೇಡೋ? ನಿಮಗೆ ದೇವರು ಅಯುಶ್ಯ ಕೊಟ್ಟಿದ್ರೆ, ಇನ್ನು ಬ್ರಹ್ಮ ನಿಮ್ಮ ತಲೆಯಲ್ಲಿ ಚೆನ್ನಾಗಿ ಬರೆದಿದ್ದೆ ನೀವೂ ಒಂದು ಕಾಲದಲ್ಲಿ ಒಂದು ಸಿಂಹಾಸನಾರೂಢರಾಗಿ ಆ ಮನೆತನದ ಹೆಸರನ್ನು

ಉಳಿಸಬೇಕೋ ಬೇಡೊ? ಅಯ್ಯೋ! ನಿಮ್ಮ ಬಾಳ್ವೆ ಹೀಗೆ ಕೆಟ್ಟು ಹೋಯ್ತಲ್ಲಾ, ನಿಮ್ಮ ಮುಖ ಹೀಗೆ ಸುಟ್ಟು ಹೋಯ್ತಲ್ಲ! ಗಂಡುತನವನ್ನು ತೋರಿಸಲಿಕ್ಕೆ ಬಂದಿದ್ದೀರಿ ಇವನ ಸಂಗಡ!!

ಏನು, "ಈ ನಮ್ಮಲ್ಲಿ" ಅಂತದ್ರೆ, ಬೇರೆ ಬೇರೆಯೋ? ಅದು ಸರಿ, ನಾನು ಅವನನ್ನು ಮಾತ್ರ ಆಕ್ಷೇಪಿಸಿದ್ದು, ಈಗ ನಿನ್ನನ್ನು ಆಕ್ಷೇಪಿಸಲಿಲ್ಲ, ಮತ್ತೊಬ್ಬನನ್ನು ಆಕ್ಷೇಪಿಸಲಿಲ್ಲ. ಇವ ನನ್ನ ಎಣೆಯೊ? ಹಾಗೆ ನಾನು ತಿರಸ್ಕರಿಸಿದ್ದು, ನೀನು ಹೇಳೋದು ಏನು ಅಂತ ಅವ?

ಭೀಮಾರ್ಜುನರೆ, ಇಷ್ಟು ಚೆನ್ನಾಗಿ ಹ್ದೆ ! ನಿಮ್ಮ ತಲೆಯನ್ನು ಇವ ತೊಳೆದಿದ್ದಾನೆ ಅಂತ ಗೊತ್ತಾದ್ದೀಗ. ಯಾರಿವನು? "ಶ್ರೀಹರಿ" ಅಲ್ಲ ಹರಿಸ್ತೀ.

ನಿಮಗೆ ಯಾರು ಹೇಳಿದ್ದಾರೋ ಅವರಿಗೆ ಇವ ಏನೊ ಹೆಚ್ಚು ಕೊಟ್ಟಿರಬೇಕು. ಯಾಕೆ? ಶ್ರೀಹರಿ ಅಂತ ನೀವು ಹೇಳಬೇಕಿದ್ದರೆ ಯಾವ ಅರ್ಥದಲ್ಲಿ ಹೇಳೀರಿ ಅಂತ ನನಗೆ ಗೊತ್ತಾಗುದಿಲ್ಲ. ಇವ ವಸುದೇವ-ದೇವಕಿಯರಿಗೆ ಎಂಟನೇ ಸಂತಾನವಾಗಿ ಹುಟ್ಟಿದವ ಅನ್ನೋದು ಇತಿಹಾಸ ಪ್ರಸಿದ್ಧ. ಇನ್ನು ಇವನನ್ನು ವಾಸುದೇವ ಎಂಬ ಮೂಲಮಂತ್ರಕ್ಕೆ ಅನ್ವಯಗೊಳಿಸಿ "ಓಂ ನಮೋ ಭಗವತೇ ವಾಸುದೇವಾಯ" ಎಂಬ ಮಂತ್ರಕ್ಕೆ ಮೂರ್ತಿ ಮಾಡಿದವರು ಯಾಕೆ ಮಾಡಿದರೂ ನನಗೆ ಹೇಳಲಿಕ್ಕೆ ಬರೋದಿಲ್ಲಾ. ನಾನು ತಿಳಿದಂತೆ ಹರಿ ಅಂತ ಒಬ್ಬ ಇದ್ದರೆ, ಅವ ಈ ಪ್ರಪಂಚದಲ್ಲಿ ಮೊದಲೇ ಇದ್ದ. ಅವನನ್ನೇ ಇನ್ನೊಂದು ವಿಭಾಗದವರು ಹರ ಅಂತ ಹೇಳ್ತಾರೆ. ಹೀಗೆ ನಾವು ತಿಳಿದ ಶಾಸ್ತ್ರದ ಪ್ರಕಾರ ಹರನನ್ನಾಗಲಿ, ಹರಿಯನ್ನಾಗಲಿ, ಪ್ರಾಪಂಚಿಕವಾದ ಯಾವುದೇ ಒಂದು ವ್ಯವಹಾರಕ್ಕೆ ಸಂಬಂಧಿಸುವದಿದ್ದರೆ, ಅದು ಅವರವರ ಅಭಿಪ್ರಾಯವನ್ನು ಮಾತ್ರ ಮುಂದಿಟ್ಟು, ಮತೀಯವಾದಂತಹ ಸ್ವಾತಂತ್ರ್ಯದ ಒಳಗೆ ಮತೀಯವಾದಂತಹ ಒಂದು ಬೇಲಿಯ ಒಳಗೆ ತಂದು ಮೂರ್ತಿ ಪ್ರತಿಷ್ಠಾಪನೆ ಮಾಡಿ ಪೂಜೆ ಮಾಡಬಹುದಷ್ಟೆ? ಇಲ್ಲಿ ನಮ್ಮಂಥವರ ತಲೆ ತಿನ್ನುತ್ತಿರುವ ಪ್ರಶ್ನೆಗೆ ಹೇಗೆ ಅಂತದ್ರೆ,

ಕೃಷ್ಣ ಎನ್ನುವವ ಭಗವಂತನೊ? ಅಲ್ಲಾ ಕೃಷ್ಣ ಎನ್ನುವವ ವಸುದೇವನ ಮಗನೊ? ಮಗನಾದರೆ ದೇವರಲ್ಲ, ದೇವರು ಹೌದಾಗಿದ್ದರೆ ಮಗನಲ್ಲ. ಯಾಕೆ?

ಯಾವವನು ಇತಿಹಾಸಕ್ಕೆ ಸೇರಿ ಹೋಗ್ತಾನೋ, ಅವನು ದೇವರಾಗೋದಕ್ಕೆ ಸಾಧ್ಯವಿಲ್ಲ. ಇತಿಹಾಸಕ್ಕೆ ಅತೀತನಾಗಿರಬೇಕು. ಇತಿಹಾಸಕ್ಕೆ ಸೇರಿದವನು ಅಂತಾದ್ರೆ ಮಾತ್ರ ಅವ ಇಂಥಾ ಕಡೆಯಲ್ಲಿ ಹುಟ್ಟಿದ, ಮಥುರೆಯಲ್ಲಿ ಹುಟ್ಟಿ ನಂದಗೋಕುಲದಲ್ಲಿ ಬೆಳೆದ; ಈಗ ದ್ವಾರಾವತಿಯಲ್ಲಿದ್ದಾನೆ ಅಂತ ಹೇಳಬಹುದಾಗಿದೆ.

ಭಗವಂತ ಅಂತಂದ್ರೆ, ದ್ವಾರಾವತಿಯಲ್ಲಿ ಅಂಥ ಹೇಳಲಿಕ್ಕೂ ಆಗುವದಿಲ್ಲ. ಮಥುರೆಯಲ್ಲಿ ಹುಟ್ಟಿದ ಅಂತ ಹೇಳಲಿಕ್ಕೂ ಆಗೋದಿಲ್ಲ. ಯಾವ ಮತೀಯವಾದಂತಹ ಭಾವನೆಯಲ್ಲಿ ಮನುಷ್ಯ ಭ್ರಾಂತನಾಗಿ ತಾನು ನಂಬಿದ್ದೇ ಸತ್ಯ ಅಂತ ಹೇಳ್ತಾನೆ ಹೊರತು ಇದು ವಿಶಾಲವಾದಂತಹ, ನಾವು ನಂಬಿಕೊಂಡು ಬಂದಂತಹ, ವೈದಿಕಸಂಸ್ಕಾರ ಎಂಬ ಮತದ ಕತ್ತಲೆಯಲ್ಲಿ ಕುರುಡನಾಗಿ ನಾವು ಸಾಗ್ತ ಇರೋದು ಅಂತಾ ನಮಗೆ ವಿದ್ವಾಂಸರು ಹೇಳಿದ್ದಾರೆ. ಹೋಗಲಿ "ಯದ್ ಭಾವಂ ತದ್ ಭವತಿ" . ಇವನು ಶ್ರೀಹರಿ ನಿಮ್ಮ ದೇವರು.

ಈ ಹರಿ ಸಹಿತ...

|ಭೈರವಿ-ಏಕತಾಳ॥ ಹರಿಸಹಿತಲಿ ಕಾದುವಡೆ | ಪಡೆ | ವೆರಸಿಬಹುದು ಸಾಲದಡೆ |

ತರಿಸಿಕೊಡುವೆನ್ನಾಯುಧವ ಮೂ ವರೊಳೊದಗುವೆ ನಾ ರಣವ || ೫೦ |

ವಿವೇಕದಲ್ಲಿ ಮೂಡುತ್ತಿರುವ ದೇವರು ಯಾರೊ ಗೊತ್ತಿಲ್ಲಾ ಆದರೆ ಭಾವನೆ, ಈ ಭಾವನೆ ಅಂತಂದ್ರೆ ಕನಸಿನ ಲೋಕ, ಈ ಕನಸಿನ ಲೋಕದಲ್ಲಿ ನಿನಗೆ ಕಂಡದ್ದೇ ಈ ನಿನ್ನ ಹತ್ತಿರ ಮಲಗಿದವನಿಗೆ ಕಾಣದೆ ಅಂತ ಇಲ್ಲಾ. ಪ್ರಪಂಚದಲ್ಲಿ ಸತ್ಯ ಅಂತ ನಾವು ಒಪ್ಪುವದಿದ್ರೆ ಒಂದು ಪ್ರತ್ಯಕ್ಷವಾಗಿ ಕಾಣೋದು, ಅದಕ್ಕೆ ಇತಿ ಇರಬಹುದು, ಮಿತಿ ಇರಬಹುದು.

ಇನ್ನೊಂದು ಕೆಲವರ ವಿವೇಕದಲ್ಲಿ ಜ್ಞಾನದಲ್ಲಿ ಕಾಣುವಂತದ್ದು ಸತ್ಯ. ಈ ಭ್ರಾಮಕವಾದಂತಹ ಭೂಮಿಕೆಯಲ್ಲಿ ಏನನ್ನು ನಾವು ಕಾಣೇವೊ, ಅದು ಕೇವಲ ಮತೀಯ. ನಿಮ್ಮ ಮತದಂತೆ ಯಾರೊ ಹೇಳಿಬಿಟ್ಟಿದ್ದಾರೆ- "ಕೃಷ್ಣಸ್ತು ಭಗವಾನ್ ಸ್ವಯಂ"! ಆದೀತು, ನಿಮ್ಮ ದೇವರು ನಿಮಗೆ ನಿಮ್ಮ ದೇವರ ಯಾವುದೇ ಅನುಗ್ರಹಕ್ಕೆ ನಾನು ಹಣ್ಣುಕಾಯಿ ಇಟ್ಟು ನನಗೆ ಜಯವಾಗಲಿ ಅಂತ ಪ್ರಾರ್ಥಿಸುವವನಲ್ಲ. ನಾನು ನಂಬಿದಂತಹ ಒಂದು ಸಿದ್ಧಾಂತ ಉಂಟು. ನಾನು ಉಗ್ರಭೈರವದೇವರ ಉಪಾಸನೆ ಮಾಡಿದ್ದೇನೆ. ನನ್ನ ಫಲವನ್ನು ನಾನು ಪಡೆದಿದ್ದೇನೆ. ಆದ್ದರಿಂದ ನೀವು ಪೂಜೆ ಮಾಡುವ ಈ ಹರಿ ಎನ್ನುವವ ನಿಮ್ಮ ಕಡೆಗೆ, ನಿಮ್ಮ ಅನುಗ್ರಹಕಾರನಾಗಿ ಇರಲಿ. ಅವನನ್ನು ನಾನು ಯುದ್ಧಕ್ಕೆ ಅಂಗೀಕರಿಸುವದಿಲ್ಲ.

ಆದರೆ ಒಂದುಂಟು, ಯುದ್ಧಕ್ಕೆ ಹೆದರುವವ ನಾನು ಅಂತ ತಿಳಕೊಂಡಿದ್ದೀರೊ? ನಿಮ್ಮ ಸೈನ್ಯವನ್ನು ನೀವು ಅಲ್ಲಿಂದ ಕರಕೊಂಡು ಬಂದಿದ್ದರೆ, ಆ ಸೈನಿಕರನ್ನು ಇಲ್ಲಿಗೆ ಕರೆಸಿಕೊಳ್ಳತಕ್ಕದ್ದು ಇನ್ನೂ ಸಾಲದು ಅಂತಾದ್ರೆ ಆಯುಧಗಳ ಸಂಗ್ರಹ ಕಡಿಮೆ ಉಂಟು ಅಂತಾದ್ರೆ, ನನ್ನ ಆಯುಧ ಶಾಲೆಯನ್ನು ನಾನು ನಿಮಗೆ ಬಾಗಿಲು ತೆರೆದು ತೋರಿಸ್ತೇನೆ. ನಿಮಗೆ ಬೇಕಾದ ಆಯುಧಗಳನ್ನೂ ನೀವು ಸಂಗ್ರಹಿಸಿಕೊಳ್ಳತಕ್ಕದ್ದು.

ಒಟ್ಟೂ ಮತಿತಾರ್ಥ ಏನು ಅಂತಂದ್ರೆ, ಹ್ಹ , ಒಬ್ಬ ಭೀಮನಿಗೂ, ಒಬ್ಬ ಅರ್ಜುನನಿಗೊ ಒಬ್ಬ ಕೃಷ್ಣನಿಗೊ ಅಂತ ಈ ಪ್ರಪಂಚದಲ್ಲಿ; ನಿಮ್ಮ ಹಸ್ತಿನಾವತಿಯ ಮುದುಕ ಭೀಷ್ಮ ಒಬ್ಬನನ್ನು ಬಿಟ್ಟರೆ ಇಡೀ ಹಸ್ತಿನಾವತಿಯವರು ಬಂದು, ಈ ಮಗಧ ದೇಶವನ್ನು ಮುತ್ತಿದರೆ, ಈತ ಈ ಸ್ಥಾನದಿಂದ ಅಲುಗಾಡದೆ ಕೇವಲ ಆಜ್ಞಾಶಕ್ತಿಯಿಂದ; ಆಜ್ಞಾಶಕ್ತಿಯಿಂದ ಪೂರೈಸವದಕ್ಕಾಗೋದಿಲ್ಲ ಅಂತಾದ್ರೆ ಎದ್ದು ಕ್ರಿಯಾಶಕ್ತಿಯಿಂದ ಸಂಪೂರ್ಣ ನಾಮಾವಶೇಷ ಮಾಡಿ ಮಾಗಧ ಅಂತ ಈ ಹಣ್ಣಾದ ಮೀಸೆಗೆ ತುಪ್ಪತಾಗಿಸಿಯೇನು! ಅನುಮಾನ ಉಂಟೊ? ಎಲ್ಲರೂ ತಯಾರಾಗಿ ಬನ್ನಿ.

ಹ್ಹ ಹ್ಹ ಏನು? ನಿನ್ನ ಹಾಗೆ ನನ್ನನ್ನು ನೀನು ಅರ್ಥೈಸಿಕೊಂಡಿದ್ಯೋ ಹೇಗೆ? "ಮರಣ ಸಿದ್ಧ" ಅಂತ ಹೇಳಿದರೆ ಮುಂದುವರಿಸ್ಯಾನು ಅಂತ? ಅದು ನಿನ್ನ ಹುಟ್ಟು ಗುಣ. ಎಲ್ಲಿ ಸೋಲು ಬರದೆ ಎಲ್ಲಿ ಪೆಟ್ಟು ಬೀಳದೆ, ಅಲ್ಲಿ ತಪ್ಪಿಸಿಕೊಳ್ಳೋದು. ಅದಕ್ಕೆ ಹೇಳಿದ್ದು ನಾನು ಓಡಿ ಬದುಕಿದ ಖೋಡಿ ಬಂದಿದ್ದಾನಲ್ಲ! ಈಗ ನೀನು ಬರುವಿ? ಇವನಿಗೆ ಮಾನವೂ ಇಲ್ಲಾ- ಮರ್ಯಾದೆಯೂ ಇಲ್ಲಾ ಅಂತ, ನಾವೆಲ್ಲಾ ಓಡಿದರೆ ಮತ್ತೆ ಬರೋದಿಲ್ಲಾ. ಸತ್ತರೆ ಮತ್ತೆ ಹುಟ್ಟಿಕೊಳ್ಳುವದೂ ಇಲ್ಲಾ, ತಿಳಿತೋ ಇಲ್ಲೋ? ಸತ್ತರೆ ಮತ್ತೆ ಹುಟ್ಟಿಕೊಳ್ಳದಿದ್ರೆ ಮತ್ತೆ ಹೇಗೆ? ಏನೂ ಆಗುದಾಗದೆ ಸತ್ತ ಮೇಲೇನಾಗ್ತದೆ?

ಜರಾಸಂಧನಂಥವರೆಲ್ಲಾ ಹುಟ್ಟಿಕೊಳ್ಳುವದು ಒಮ್ಮೆ, ಒಮ್ಮೆ ಸಾಯುವದು. ಇನ್ನು ನಿನ್ನ ಹಾಗೆ ಈಗ ಇವರೆಲ್ಲಾ ಹೇಳಿದ್ದಾರಲ್ಲಾ ಭಾವುಕರು ಎಷ್ಟೋ ಸಲ ಹುಟ್ಟುತ್ತಾನೆ; ಎಷ್ಟೋ ಸಲ ಅವತಾರ ಬಿಡ್ತಾನೆ; ಹೋಗ್ತಾನೆ, ಬತ್ತಾನೆ ಅಂತ ಆ ಆವರ್ತನಕ್ಕೆ ಆ ಪರ್ಯಾಯಕ್ಕೆ ಇದ್ದವರಲ್ಲ; ನಾವು.

ಗಂಡುಸಾಗಿ ಹುಟ್ಟಿದವ, ಗಂಡಸಾಗಿ ಬೆಳೆದವ. ಯಾರ ದೇಣಿಗೆಯೂ ಇಲ್ಲಾ ನನ್ನ ಬದುಕಿನ ಉತ್ಕರ್ಷದಲ್ಲಿ. ನನ್ನದ್ದಾದ ಸಾಧನೆ ನನಗೆ ಕೊಟ್ಟ ಉಪದೇಶ ನನ್ನ ಪುರೋಹಿತರದ್ದು ಚಂಡಕೌಶಿಕರದ್ದು. ಇದರೊಟ್ಟಿಗೆ ಬೇರೇನುಂಟು? ಯೇನ್ ಯುದ್ಧಕ್ಕೆ ನಾನು ಹಿಂದೆ ನಿಲ್ಲುವವನೊ? ಆದ್ದರಿಂದಲೇ ಹೇಳಿದ್ದು, ಸೈನ್ಯ ಬೇಕಾದರೆ ತರಿಸಿಕೊಳ್ಳಿ, ಆಯುಧವನ್ನು ಬೇಕಾದರೆ ಕೊಟ್ಟೇನು ಅಂತ ಹೇಳಿದರೆ ನನ್ನ ದೊಡ್ಡಸ್ತಿಕೆ ಅಲ್ಲಾ ಅದು; ನನ್ನ ಎದೆಗಾರಿಕೆ, ನಾನೇನು ನೀವು ಬಂದಿದ್ದೀರಿ, ಇಷ್ಟೆಲ್ಲಾ ಮಾತನಾಡಿದ್ದೀರಿ ಅಂತ ತಿಳಿದ ಕೂಡಲೇ ಬೆವರಿದೆ ಅಥವಾ ಬೆದರಿದೆ ಅಂತ ಸ್ಥಾಪಿಸಲಿಕ್ಕೆ ನೀನು ನನ್ನ ಹತ್ರ ಸಾಹಸ ಮಾಡಬೇಡ. ಈಗ ನಿನ್ನನ್ನು ಕೂಡ ನಾನು ಆರಿಸಿಕೊಳ್ಳಬೇಕು ಅಲ್ಲವೊ? ನಾನು ತೀರ್ಮಾನಿಸಿ ಆಗ್ಯದೆ.

ಭೈರವಿ-ಅಷ್ಟಗಿ ಪ್ರಕಟವಾಗಿದೆನಿನ್ನಯ | ಪೌರುಷಯದು| ನಿಕರಕಂಜಿರ್ಪೆ ನಯ್ಯ || ಸಕಲ

ಸಂಗರ ಪಲಾಯನ ಪಂಡಿತನು ನೀನೆಂ। ಬ್ಯುಕುತಿ ನಿನ್ನೊಳು ಸೇರದು\di

ನನ್ನ ತೀರ್ಮಾನಕ್ಕೆ ಬದಲು ಆಡುವವನಲ್ಲ, ಇತ್ತೀಚೆಗೆ ನೀನು ಘನವಿಕ್ರಮಿ ಆಗಿದ್ದ್ಯೋ ಏನೊ ನನಗೆ ಗೊತ್ತಿಲ್ಲ. ನನ್ನ ಅನುಭವಕ್ಕೆ ಸಿಕ್ಕಿದ್ದನ್ನು ಮುಂದಿಟ್ಟುನೋಡಿದರೆ ಮತ್ತೂ ಮತ್ತೂ ಮತ್ತೂ ಯುದ್ಧಮಾಡಿ ಇತ್ಯರ್ಥ ಆಗ್ತದೆ. ಹ್ಞ, ಸಮಯ ಮುಂದುವರಿಸುವದೊ, ದಿನ ಮುಂದುವರಿಸುವುದೊ ನನಗೆ ಹೇಳಿದ್ದಲ್ಲ. ಉದಾಸೀನ ಹಿಡಿದು ಹೋಗಿದೆ ಯುದ್ಧ ಮಾಡಿ ನನಗೆ ಕೊನೆಗೆ ನಾನು ಬಾರದೆ ಇದ್ದ ಸ್ಥಳದಲ್ಲಿ ನೀನು ಹೋಗಿ ಕೂತಿದ್ದಿ, ಈಗ ಹೊಸ ತಯಾರಿಯಿಂದ ಬಂದದ್ದು ಇದ್ದೂ ಇರಬಹುದು. ಅಯ್ಯಾ ನಮಗೆಲ್ಲಾ ಆಯುಷ್ಯಕ್ಕೊಂದು ಮಿತಿಯುಂಟು. ಈಗ ನಾನು ವಾರ್ಧಕ್ಯವನ್ನು ಅನುಭವಿಸುತ್ತಾ ಇದ್ದೇನೆ. ಇನ್ನು ಈ ಸಲ, ಆದರೆ. ಇಲ್ಲದಿದ್ರೆ ಮತ್ತೊಮ್ಮೆ ನೋಡೋಣ! ಎಂಬ ನಿರೀಕ್ಷೆಯಲ್ಲಿ ಕೃಷ್ಣನನ್ನು ಬಿಟ್ಟು ಬಿಡುವದಕ್ಕೆ ನನಗೆ ಸಾಧ್ಯವಿಲ್ಲ. ಹಿಡಿದರೆ ಒಂದು ಇತ್ಯರ್ಥ ಮಾಡಬೇಕು. ಹಿಡಿಯಲಿಕ್ಕೆ ನೀನು ಸಿಕ್ಕಿದರೆ ತಾನೆ? ಎಷ್ಟು ಹೊತ್ತಿಗೆ ಪಲಾಯನ ಮಾಡಬೇಕು; ಅಂತ ನಿನಗೆ ಗೊತ್ತಿರದೆ.

ಹ್ಞೆ, ನಾವು ಪಲಾಯನವಾದಿಗಳಲ್ಲ. ನನ್ನ ಸ್ವಭಾವ ನಿನಗೆ ಗೊತ್ತುಂಟು. ನಾನು ಏನು ನಂಬಿದ್ದೇನೆ, ಅದನ್ನು ನಾನು ಬಿಡುವವನಲ್ಲ. ನಾನು ಏನು ತೀರ್ಮಾನಕ್ಕೆ ಬಂದಿದ್ದೇನೆ ಅದನ್ನು ಮತ್ತೊಮ್ಮೆ ಬದಲಾಯಿಸುವವನಲ್ಲ. ಜಗಜಟ್ಟಿ ನಾನು; ಜಟ್ಟಿಕಾಳಗದಲ್ಲಿ ಗಟ್ಟಿಗ ಅಂತ ಗೊತ್ತುಂಟು ನಿನಗೆ. ಸೈನ್ಯ ಬೇಡದಿದ್ರೆ ಬೇಡ. ನಿನ್ನ ಯುಕ್ತಿ ನನಗೆ ಅರ್ಥ ಆಗ್ತದೆ. ಯಾಕಂತದ್ರೆ, ಈ ಸಲ ನೀನು ಹೇಳಿದ್ಯಲ್ಲ, “ಮುದುಕಾ ನಿನ್ನ ಮುಗಿಸಲಿಕ್ಕೇ ಬಂದಿದ್ದೇವೆ” ಅಂತ? ಆದೀತು, ರಕ್ತಪಾತ ಆಗಬೇಕು ಅಂತ ನನಗೇನಿಲ್ಲ ಯಾಕೆ? ಸೈನ್ಯ ನಿಮ್ಮದಿರಲಿ, ಯಾಕೆ ನಮ್ಮ ಸೈನ್ಯವೂ ಸಾಯಬೇಕು ನನಗೆ ಬೇಕಾಗಿ? ಆದಕಾರಣ “ಮೂವರಲ್ಲಿ ಒಬ್ಬರನ್ನು ಆರಿಸು” ಎಂಬ ಮಾತಿನ ಧ್ವನಿಯನ್ನು ಗ್ರಹಿಸಿ, ನಾನೀಗ ಮಲ್ಲಯುದ್ಧಕ್ಕೆ ಸಿದ್ಧನಾಗಬೇಕು, ಅಂತ ಅರ್ಥೈಸಿಕೊಳ್ತೇನೆ. ಹಾಗಾದರೆ ಆಯುಧ ಗ್ರಹಣಮಾಡಿ ಯುದ್ಧ ಮಾಡೋದಲ್ಲ ಅಂತಾದ್ರೆ, ನೀನು ಆಗದು ಅಂತಾದರೆ ಮತ್ತೆ ಯಾದವರಲ್ಲಿ ನಾನು ಯಾರನ್ನು ಆರಿಸುವದು? ಒಂದು ವೇಳೆ ಆಗುವದಿದ್ದರೆ ನೀನು. ನೀನು ಆಗುವದಿಲ್ಲ ಅಂತ ನಿನಗೆ ಭ್ರಷ್ಟತ್ವ ಕಲ್ಪಿಸಿ ಆಗಿ ಹೋಗ್ಯದೆ. ಮತ್ತೆ ನಿಮ್ಮಣ್ಣ ಒಬ್ಬ ಬಲರಾಮ; ಆವ ಎಲ್ಲಿದ್ದಾನೊ ಈಗ ಯಾರಿಗೊತ್ತು!

ಸದ್ಯ ಇಲ್ಲಾ, ಅವನಾದೀತು. ಅವ ಈ ಹೊತ್ತು ಇಲ್ಲ. ಯದುಗಳ ಸುದ್ದಿ ನನ್ನ ಹತ್ರ ಹೇಳ್ಬೇಡ ಯಾಕೆ ಅಂತಂದ್ರೆ ಕೊನೆಗೆ ತೀರ್ಮಾನಕ್ಕೆ ಬಂದಿದ್ದೇನೆ. ಈ ಜಾತಿಯನ್ನು ಹೊಡೆದರೆ, ಇನ್ನು ಕೈತೊಳಿಲಿಕ್ಕೆ ಊರಿನಲ್ಲಿ ನೀರು ಸಾಕಾಗೋದಿಲ್ಲ ಅಂತ.

ಆದ್ದರಿಂದ ಮಹಾಕಳ್ಳರು, ರುಕ್ಮಿಣಿಯ ಸ್ವಯಂವರದಲ್ಲಿ ನೋಡಿದ್ದೇನೆ; ಒಬ್ಬೊಬ್ಬರು ಒಂದೊಂದು ತರದ ವೇಷ ಹಾಕ್ಕೊಂಡು ಬಂದು ವ್ಯಾಪಾರ ಮಾಡ್ತಾ, ಬಳೆ ಮಾರ್ತಾ, ಆಮೇಲೆ ಹೆಂಗಸರಿಗೆ ಬೇಕಾದಂತ ಕುಂಕುಮದ ಕರಡಿಗೆಯನ್ನು ಮಾಡ್ತಾ, ಅರಸಿನವನ್ನೆಲ್ಲ

ಮಾರ್ರಾ, ಎಲ್ಲಾ ಇದ್ದುಕೊಂಡು ಕೊನೆಗೆ ಕಳ್ಳತನ ಆಯ್ತು ಅಂತ, ನಾವೆಲ್ಲಾ ಎದ್ದು ನಿಲ್ಲುವಾಗ ಇವರೆಲ್ಲ ವೇಷ ಬದಲಾಯಿಸಿ, ಒಬ್ಬೊಬ್ಬ ಒಂದು ಕಡೆಯಿಂದ ಕೈಗೆ ಸಿಕ್ಕಿದ್ದರಿಂದ ಹೊಡೆಯುವ ಜಾತಿ, ನಿಮ್ಮ ಆ ಗುಂಪುಯುದ್ಧ ಉಂಟಲ್ಲ; ಅದು ರಾಮಾಯಣ ಕಾಲದ ಕಿಷ್ಕಿಂದೆಯವರ ಯುದ್ಧ ಅಂತಾ ನಾನು ತೀರ್ಮಾನಕ್ಕೆ ಬಂದಿದ್ದೇನೆ. ಆದ್ದರಿಂದ ನಿನ್ನ ಜಾತಿಯವರಿಗೆ ನಮಸ್ಕಾರ, ನಿನ್ನ ಜಾತಿಯವರಿಗೆ ನಮಸ್ಕಾರ, ಅಲ್ಲ; ನೀನಿದ್ದ ಊರಿಗೇ ನಮಸ್ಕಾರ, ನಿನ್ನನ್ನು ನಿವಾಳಿಸಿ ಇಟ್ಟಿದ್ದೇನೆ. ಅಳುಕುವಭಟ ಅಂತ ತಿಳಕೊಳ್ಳಬೇಡ. ಮತ್ತೆ ನೀನು ಅರ್ಜುನನ್ನು ಹೇಳಿದ್ಯಲ್ಲ?

ಭೈರವಿ-ಅಷ್ಟತಾಳ || ಪಾರ್ಥ ಸಲ್ಲನು ತನಗೆ | ಸಂಗರದಿ ಸ / ಮರ್ಥನಾಗಿಹ ಭೀಮಗೆ

ಇತ್ತೆನಾಹವವಿದು ವ್ಯರ್ಥವಾಗಲು ಕಡೆ | ಗಿತ್ಯರ್ಥ ನಿಮಗೆಂದನು || ೫೨ |

'ಅರ್ಜುನ ಪರಾಕ್ರಮಿ' ಅಂತ ನೀನು ಹೇಳ್ತಿ. ಆದರೆ ನಾನು ತಿಳಿದ ಹಾಗೆ ಅವ ಧನುರ್ವಿದ್ಯೆಯಲ್ಲಿ ನಿಪುಣ. ಜಟ್ಟಿಕಾಳಗ ಮಾಡಿಯಾನು; ಆದರೆ ಅದರಲ್ಲಿ ಪ್ರಬುದ್ಧನಲ್ಲ, ನೀನೇ ಹೇಳಿದ ಹಾಗೆ, ಭೀಮ ಯಾರು?

ಹಾಗಾದರೆ ಅವನು ಯಾರು? ಯಾರು ಮಲ್ಲ ವಿದ್ಯೆಯಲ್ಲಿ ಪರಿಣಿತರೋ ಅದರಲ್ಲಿ ಎದೆಯೊಡ್ಡಿ ನಿಂತು, 'ನೀನೋ- ನಾನೋ' ಅಂತ ಆಹ್ವಾನ ಕೊಡುವವ ಅಂಥ ಅಲ್ವೊ?

ಈಗ ಹೇಳಯ್ಯ, ಜರಾಸಂಧ ಎಂತಹ ಮುದುಕ ಅಂತ ಈಗ ಹೇಳು.

ಏನಾದರೂ ಮಾಡಿ, ಸದ್ಯ ಜಯಿಸಿದರೆ ಸಾಕು, ಎಂಬ ಧೂರ್ತತನದ ರಾಜಕೀಯ ಬುದ್ಧಿ ನನ್ನದಾದರೆ ನಾನು ಭೀಮನನ್ನೇ ಒಪ್ಪಿಸು ಅಂತ ನಿನ್ನಲ್ಲಿ ಹೇಳಿಯೇನೋ, ಭೀಮ ಆಗಬಹುದು ಆಗಬಹುದು, ಅಂತ ಏನು? ಈಗ ಒಂದು ಪೆಟ್ಟು ಕೊಟ್ರೆ, ಆ ಪೆಟ್ಟನ್ನು ತಡೆದುಕೊಳ್ಳುವವ ಆಗ್ಬೇಕು. ನೀನು ಹೇಳಿದ ಹಾಗೆ ಈ ವಿದ್ಯೆ ಉಂಟಲ್ಲ ಇದು ಕೇವಲ ಯುದ್ಧಕ್ಕಾಗಿ ನಾನು ಕಲಿತದ್ದೇ ಅಲ್ಲ.

ಇದೊಂದು ಕ್ರೀಡಾತ್ಮಕವಾಗಿ, ಕಲಾತ್ಮಕವಾಗಿ ಪ್ರದರ್ಶನಕ್ಕೆ ಅಂತ ಕಲಿತದ್ದು. ಆದ್ರೆ ಅದೇ ಮುಂದೆ ಯುದ್ಧ ನೀತಿಯಲ್ಲಿ ಪ್ರಬುದ್ಧವಾದದ್ದು ಅಂತ ಪ್ರಪಂಚ ಒಪ್ಪಿ ಆಗಿ ಹೋಗ್ಯದೆ. ಮಲ್ಲಯುದ್ಧದಲ್ಲಿ ನಮ್ಮದೇ ಆದ ಕೆಲ ಹೊಸ ಪದ್ಧತಿ ಉಂಟು. ಅದು ಮಾತ್ರವಲ್ಲ, ಇನ್ನು ಕೆಲವು ನಿರ್ಣಯಗಳನ್ನು ನಾನು ಮಾಡಿದ್ದುಂಟು. ಈ ಹೊತ್ತಿಗೂ ನನ್ನ ಊರಿನಲ್ಲಿ ಜರಾಸಂಧಿ ಅಥವಾ ಮಾಗಧಿ ಅಂತ ಇದನ್ನು ಅಂಗೀಕರಿಸುತ್ತಾರೆ ಅಂತ ನೀನೇ ಹೇಳಿದ್ದಲ್ಲ . ಆದ ಕಾರಣ, ಅಷ್ಟು ವಿದ್ಯೆ ಅಲ್ಲದಿದ್ರೂ ಈ ವಿದ್ಯೆಯ ಇನ್ನೊಂದು ಮುಖದಲ್ಲಿ ಚೆನ್ನಾಗಿ ಪರಿಣಿತ ಭೀಮ ಅಂತ ಕೇಳಿದ್ದೇನೆ.

ಕ್ಷತ್ರಿಯ ನಾನು; ಅವನೂ ಕ್ಷತ್ರಿಯ. ನನಗೆ ತಿಳಿದಂತೆ ಅವ ಎಲ್ಲಿಯೂ ಬೆನ್ನು ತೋರಿಸಿ ಹೋದದ್ದಿಲ್ಲ, ಯುದ್ಧದಲ್ಲಿ. ಹಾಗಾಗಿ ನೀನು ಯಾಕಾಗಿಯೋ ಗೊತ್ತಿಲ್ಲ. ನಿನಗೆ ಎರಡೂ ಗೊತ್ತಿದ್ದುದರಿಂದ ಭೀಮನೇ ಆದೀತು. ಅರ್ಜುನನು ಸಲ್ಲನು. ಯಾಕೆ? ಈಗ ಸೋಲಿಸುವದು ಅಂತಾದ್ರೆ ನನ್ನ ವ್ಯಕ್ತಿತ್ವಕ್ಕೆ ಅದು ಭೂಷಣವೊ ಹೇಳು? ನಾನು ಸ್ಪರ್ಧೆ ಕೊಡುವದಿದ್ದರೆ ಯಾರಲ್ಲಿ ಕೊಡಬೇಕು? ನಿನ್ನಂಥವನಲ್ಲಿ ಅಲ್ಲ. ಆದ ಕಾರಣ ಭೀಮನನ್ನು ಒಪ್ಪಿಸು. ಯುದ್ಧ ನಿರ್ಣಯ ನಾನು ಮಾಡ್ತೇನೆ.

ಇಗೋ ರಣವೀಳ್ಯವನ್ನು ಕೊಡೇನೆ. ಮೂವರಿಗೂ ಕೊಡೇನೆ. ಆದರೆ ಯುದ್ಧ ಮಾತ್ರ ಭೀಮನಲ್ಲಿ.

ಈ ಹೊತ್ತು ವಿಶ್ರಾಂತಿ ಪಡೆಯುವಾ ಯಾಕೆ? ಇದು ಕಲಾಪ್ರದರ್ಶನ, ಸಭ್ಯವಾದ ಗಾರ್ಹಸ್ಥ

ಆದ್ದರಿಂದ ಎಲ್ಲರೂ ನನ್ನ ಅತಿಥ್ಯವನ್ನು ಸ್ವೀಕರಿಸಿ ಆಮೇಲೆ ಇದೋ ಉಪಚಾರಕ್ಕೆ ಗಂಧ, ಆಮೇಲೆ ಚಂದನ, ಆಮೇಲೆ ಏನೇನೊ ಏನೇನೋ ಪರಿಮಳದ್ರವ್ಯ, ಆಮೇಲೆ ಕಿಂಚಿತ್ ಕಾಣಿಕೆ. ಇಷ್ಟನ್ನು ನಿಮಗೆ ಸಮರ್ಪಿಸುತ್ತೇನೆ. ನಾಳೆ ಅಮಾವಾಸ್ಯೆ ಒಂದು

ದಾಟಲಿ.

ಭಾಮಿನಿ॥ ಎರಡು ಬಲ ಮೋಹರಿಸಿ ನಿಂದುದು / ಪುರದ ಹೊರಬಾಹೆಯಲಿ ಕೃತಸಂ

ಚರಣ ಕಾರ್ತಿಕ ಶುದ್ಧ ಪಾಡ್ಯದೊಳಾಹವಾರಂಭ || ೩

ಭೀಮಕೃಷ್ಣಾರ್ಜುನರೇ, ಕಾರ್ತಿಕ ಶುದ್ಧ ಪಾಡ್ಯ ಇವತ್ತು. ಯಾಗಮಂಟಪದಿಂದ ಮೊನ್ನೆ ಬಂದಿದ್ದೇವೆ. ನಾವು ವಿಶ್ರಾಂತಿಯನ್ನು ಪಡೆದದ್ದಾಯ್ತು. ನಮ್ಮ ಸೈನಿಕರನ್ನು ಬರಿಸಿಕೊಂಡಿದ್ದೇವೆ.

ಆಗೋ, ಎರಡು ಬಲ! ನನ್ನವರು ನಿಮ್ಮವರು !!

ಶಿಸ್ತು ಬದ್ಧವಾದಂತಹ ಜಟ್ಟಿಕಾಳ್ಗ ಅಂತಾದ್ರೆ ಹೀಗೆ. ಆದ್ದರಿಂದ ನೋಟಕರಾಗಿ ಅವರು ನಿಲ್ಲಲಿ; ಈ ಹೊತ್ತು ಯುದ್ಧ ಪ್ರಾರಂಭವಾಗಲಿ, ಇದರ ಕೊನೆ ಯಾವಾಗಲೋ ಗೊತ್ತಿಲ್ಲ. ಒಂದೋ ಭೀಮ ಇಲ್ಲದಿದ್ರೆ ಜರಾಸಂಧ! ಆದರೆ ಕೃಷ್ಣಾ, ಇದು ಕೇವಲ ಹುಡುಗಾಟಿಕೆಯ ಡೊಂಬರಾಟ ಆಗಕೂಡದು.

ನೀನೂ ಇದರ ಮರ್ಮವನ್ನು ತಿಳಿದವನು, ಗೊತ್ತು ನನಗೆ ಎಳವೆಯಲ್ಲಿಯೇ ಅಂಗಸಾಧನೆ ಮಾಡಿದವ. ಬಲರಾಮ ಕೃಷ್ಣರನ್ನು ಎದುರಿಸುವ ಜಟ್ಟಿಗಳಿಲ್ಲ. ನನಗೂ ಒಂದು ಆ ಬಕ, ಧೇನುಕ, ಆ ಪ್ರಲಂಬ, ಆ ಚಾಣೂರ ಮುಷ್ಟಿಕ, ಅದಕ್ಕಿಂತ ಹೆಚ್ಚಿಗೆ ಆ ಕುವಲಯಾಪೀಡವೆಂಬಂತಹ ಆನೆ; ಅದನ್ನೆಲ್ಲ ಎಷ್ಟು ಸಣ್ಣ ಪ್ರಾಯದ ಹುಡುಗ ಈ ಕೃಷ್ಣ, ಜೊತೆಗೆ ಬಲರಾಮ, ಹೇಗೆ ಗುದ್ದಿಕೊಂದರು? ನನ್ನ ತಲೆಗೊದ್ದು ಹೀಗೆ- ಅದೇನೋ ಒಂದು ಕುತಂತ್ರ ನಿನಗೆ ಗೊತ್ತು ಪ್ರದರ್ಶನದಲ್ಲಿ ಮೋಸವನ್ನೇ ಮಾಡುತ್ತಿಯೋ ಎಂಬುದು ಸಂದೇಹ, ಆದರೆ ಗೊತ್ತುಂಟಲ್ಲ ಅದರ ಮರ್ಮ!

ಹೇಗೆ ಹಿಡಿದರೆ ಸರಿ, ಹೇಗೆ ಹಿಡಿದರೆ ಸರಿಯಲ್ಲ? ಹೇಗೆ ಹೊಡೆಯುವದು ಸರಿ ಹೇಗೆ ಹೊಡೆದರೆ ಸರಿಯಲ್ಲ? ಮನಸ್ಸು ಮಾಡಿದರೆ ತೀರ್ಮಾನ ಕೊಡಬಲ್ಲ ಆಚಾರ್ಯ ಸ್ಥಾನ ನಿನಗೆ ಕೊಡಬಹುದು. ನಾವು ಕೇಳಿದ್ದೇವೆ. ಅರ್ವತ್ನಾಲ್ಕು ದಿವಸ ಪೂರ್ತಿ ಬೇಕಾಗಿಲ್ವಂತೆ ಗುರುಕುಲದಲ್ಲಿದ್ದುದನ್ನು ಪೂರ್ತಿ ಸಂಪಾದಿಸಲಿಕ್ಕೆ. ಮತ್ತೆ ಅಲ್ಲಿ ಏನೂ ಉಳಿದಿಲ್ಲ ಅಂತ ಕೇಳಿದ್ದೇವೆ. ಪ್ರಾಮಾಣಿಕವಾಗಿ ತೀರ್ಮಾನ ಕೊಡಲಿಕ್ಕೆ ನಿನಗೆ ದೇವರು ಒಳ್ಳೆ ಬುದ್ಧಿ ಕೊಟ್ರೆ, ನೀನು ಸರಿಯಾಗಿ ತೀರ್ಮಾನ ಕೊಡಬಲ್ಲ ನ್ಯಾಯಾಧೀಶ.

ಆದ್ದರಿಂದ ಭೀಮ-ಜರಾಸಂಧರಿಗಾಗತಕ್ಕ ಈ ಯುದ್ಧದಲ್ಲಿ, ನೀನೇ ತೀರ್ಮಾನ ಹೇಳುವ ಒಬ್ಬ ತಕ್ಕಮಧ್ಯಸ್ಥನಾಗಬೇಕು. 'ಮನೆ ಬೀಗದ ಕೈ ಕಳ್ಳನಲ್ಲೇ ಕೊಡಬೇಕು' ಅನ್ನೋದು ಒಂದು ನಾಣ್ಣುಡಿ ಉಂಟು.

ಪ್ರಾಮಾಣಿಕ ನನ್ನ ನಂಬುಗೆ, ತಪ್ಪಿದೆಯಂತಾದರೆ, ಅರ್ಜುನ ನೀನು ಕೂಡ ಉತ್ಸಾಹಿ ತಾನೆ? ಹಾ, ನೀನು ರಂಗದಲ್ಲಿ ಸ್ವಲ್ಪ ನಮಗೆ ತೊಂದರೆ ಆಗದೆ ನಿಂತು ನೋಡಬಹುದು. ಹಾಗಾದರೆ ತೊಡಗೋಣವೊ?

ಪಂಚಾಗತಿ-ಮಟ್ಟೆ॥ ಎಲವೊ ಭೀಮ ಗಜಸಹಸ್ರ / ಬಲನೆನುತ್ತ ಜಗದಿಪೇಳ್ವ |

ನೆಲೆಯು ಪುಸಿಯೋ ದಿಟವೊಯೆಂದು | ತಿಳಿಯಬೇಹುದು || ೫೪ ||

ಭೀಮಸೇನಾ, ನಿನ್ನನ್ನು ಸಣ್ಣದಾಗಿ ಕಂಡು, ನಿನ್ನನ್ನು ಅರಿಸಿದ್ದಲ್ಲ ನಾನು.

ಈ ಮೊದಲೇ ನಿನಗೆ ಅರ್ಥವಾಗ್ಯದೆ, ನನ್ನ ಅದಟು ಎಂತಹದ್ದು ಅಂತ. ನಾನು ಅದನ್ನು ಪ್ರೀತಿಸುವವ, ನನಗೆ ಒಂದು ಹೆದರಿಕೆಯಿತ್ತು. ಈ ಮಲ್ಲಯುದ್ಧ - ಇದರದ್ದಾದ ಧರ್ಮ, ಮರ್ಮ ತಂತ್ರ ನನ್ನ ಅಳಿವಿನಲ್ಲೇ ಅಳಿದು ಹೊದೀತೆ? ಮುಂದೆಲ್ಲಾ ಆಯುಧ ಪ್ರಯೋಗದಿಂದಲೇ ಕೊಲ್ಲೋದೊ? ಆಯುಧ ಪ್ರಯೋಗದಿಂದ ಶತ್ರು ದಮನ ಮಾಡಬಹುದು, ಅದಕ್ಕೂ ಬೇಟೆಗೂ ಏನು ವ್ಯತ್ಯಾಸ? ನನ್ನದ್ದೇಗೆ? ಗಂಡುತನ, ಆಯುಧ

ಪ್ರಯೋಗ ಅಲ್ಲ. ನಮ್ಮ ಮೈಯಬಲ ಅದಕ್ಕಿಂತ ಹೆಚ್ಚಿಗೆ ನಮ್ಮ ಮನೋಬಲ ಬುದ್ಧಿಯ ಬಲ, ದೇಹ- ಮನಸ್ಸು ಬುದ್ಧಿ, ಅರ್ಥಾತ್ ಇಚ್ಛಾ, ಕ್ರಿಯಾ, ಜ್ಞಾನ ಈ ಮೂರು ಶಕ್ತಿಯ ಸಮಾವೇಶ ಇದ್ದರೆ ಮಾತ್ರ ಈ ಮಲ್ಲಯುದ್ಧದಲ್ಲಿ ಎಷ್ಟು ಆನೆಯ ಶಕ್ತಿ ಇದ್ದವನನ್ನಾದರೂ ಸೋಲಿಸಲಿಕ್ಕಾಗದೆ, ನಿನಗೆ ಗೊತ್ತುಂಟು. ಆದ್ದರಿಂದ ಎಂತೆಂತಹ ಶಕ್ತಿವಂತರು ಪರ್ವತಾಕೃತಿಯವರೆಲ್ಲ ಬಂದು ನಿನಗೆ ತಾಗಿ ಈ ಮೊದಲು ಮಣ್ಣು ತಿಂದು ಹೋಗಲಿಲ್ವೊ?

ಜರಾಸಂಧನಿಗೆ ಈ ಮಲ್ಲಯುದ್ಧ ಪ್ರದರ್ಶಿಸಲಿಕ್ಕೆ ಒಂದೇ ಒಂದು ಸಂದರ್ಭ ಸಿಗಲಿಲ್ಲ. ನನಗೆಲ್ಲಾ ಸಿಕ್ಕಿದ್ದೂ ಹೇಗಿದ್ದವರು? ಈ ಕೀಟಲೆ ಮಾಡುವವರು ಯಾದವರು, ಮತ್ತೆ ಅದೇ ಈ ಕೃಷ್ಣನ ಹಾಗಿದ್ದವರು. ಕೃಷ್ಣನು ನೇರ ನನ್ನಲ್ಲಿ ಯುದ್ಧ ಮಾಡಲಿಲ್ಲ. ಇವನಣ್ಣ ಬಲರಾಮ ಅವ ಬಂದ ಹೇಗೆ? ಯುದ್ಧ ಮಾಡಿದ್ದಲ್ಲ, ನನ್ನ ರಥವನ್ನು ಎತ್ತಿ ಬೀಸಾಡಿದ್ದ – ನೇರಕ್ರಮದಿಂದ, ನಾನು ಇಷ್ಟು ಅಭ್ಯಾಸ ಮಾಡಿದ್ದಕ್ಕೆ ಪ್ರಯೋಗದಲ್ಲಿ ಆಗತಕ್ಕ ಸುಖಾನುಭವ ಏನು ಎಂಬುದನ್ನು ಅನುಭವಿಸಬೇಕೋ ಬೇಡ್ವೊ? ಯಾವುದೇ ಒಬ್ಬ ಕಲಾವಿದನಿಗೆ, ತನ್ನ ಕಲೆಯಲ್ಲಿ ಒಂದು ಸ್ವಾನುಭವದಿಂದ ಉಂಟಾಗುವ ಆತ್ಮಾನುಭೂತಿ ಅಂತ ಒಂದುಂಟು. ಅದಕ್ಕೆ ನಾನು ನಿನ್ನನ್ನು ಆರಿಸಿದ್ದು, ಗಜಸಹಸ್ರಬಲವುಳ್ಳವ ಭೀಮ ಅಂತ. ಕೃಷ್ಣನೂ ಹೇಳ, ಊರಿನಲ್ಲೂ ಸುದ್ದಿ ಉಂಟು. ಆದರೆ ನಾನು ನಿನಗೆ ಕೇಳೋದು ಹೌದೋ, ಅಲ್ಲೊ ಎಂದು ಇತ್ಯರ್ಥ ಮಾಡುವವರು ಯಾರಾದರೂ ಸಿಕಿದ್ದಾರೋ? ಹೌದು, ಅಲ್ಲ ಅಂತ ತೀರ್ಮಾನ ಆಗಬೇಕಿದ್ದರೆ?

ಇದೊ, ಘನ ವಿಕ್ರಮಿಯೂ, ಬಲುದೊಡ್ಡ ವಿದ್ವಾಂಸನೂ ವಿದ್ಯೆಯಲ್ಲಿ ಈ ಜರಾಸಂಧನಿಗೆ ತಾಗಿ, ನೀನು ಉಳಿದರೂ ಆ ಪ್ರಶಸ್ತಿ ಉಳಿತದೆ, ಅಳಿದರೂ ಆ ಪ್ರಶಸ್ತಿ ಉಳಿತದೆ. ಈಗಾಗಲೇ ಸಾವಿರ ಆನೆಯ ಬಲವುಳ್ಳವ ಜರಾಸಂಧ; ಅಂತ ಸ್ಥಾಪಿಸಲ್ಪಟ್ಟಿದೆ. ಆದ್ದರಿಂದ ಪರೀಕ್ಷೆ ಕೊಡ್ತಿಯೊ? ಶಾಹಭಾಸ್ ಸಂತೋಷದಿಂದ ಸ್ವೀಕರಿಸಿದ್ದೇನೆ. ಯಾಕೆ ಅಂತದ್ರೆ ಗದಾಯುದ್ಧ ಪ್ರಯೋಜನ ಇಲ್ಲ ಗೊತ್ತುಂಟು - ನಿಮ್ಮನ್ನು ಕರಕೊಂಡ ಬಂದ ಅವನಿಗೆ, ಆಯುಧದಿಂದ ಘಾಸಿಯಾಗೋದಿಲ್ಲ ಅಂತ ಗೊತ್ತಿದ್ದೇ ನಿಮ್ಮನ್ನು ಕರಕೊಂಡು ಬಂದದ್ದು ಎಂದು ನಾನು ನನ್ನ ವಿವೇಕದಿಂದ ತರ್ಕಿಸಿಯೇ ಗಂಡುತನವನ್ನು ಉಳಿಸಬೇಕು ಎಂಬ ಹಠದಿಂದ ಈ ಮಲ್ಲಯುದ್ಧಕ್ಕೆ ವೀಳ್ಯವನ್ನು ಕೊಟ್ಟದ್ದು ಎಂಬುದನ್ನು ನೀನು ಮರೀಬಾರದು. ಆದ್ದರಿಂದ ಸಿದ್ಧನಾಗಿದ್ದೀಯಲ್ಲಾ? ಸರಿ ತೊಡಗೋಣ

(ಭೀಮ-ಜರಾಸಂಧರ ಯುದ್ಧ, ಕೃಷ್ಣ ಕೈ ಬದಲಿಸಿ ತೋರಿಸುತ್ತಾನೆ. ಭೀಮ ಮಗಧನನ್ನು ಸೀಳಿ ಅವನ ದೇಹದ ಭಾಗವನ್ನು ಅದಲು ಬದಲು ಮಾಡಿ ಎಸೆಯುತ್ತಾನೆ.)

**ಕೊನೆಗೂ ಕಳ್ಳತನವೇ ಸತ್ಯತನ ಅಂತ ಮಾಡಿ ತೋರಿಸಿಬಿಟ್ಟನಲ್ಲ ಇವ! ಹಾss ಕೃಷ್ಣಾss.**



## ೮ ಅಗ್ರಪೂಜಾ ವಿರೋಧ

*ಶಿಶುಪಾಲ*

*ಭಾಮಿನಿ ಕೆಲರು ಪಾಂಡವಮೈತ್ರಿಯಲಿ ಕೆಲ | ಕೆಲರು ಕೃಷ್ಣನ ಬಲುಹಿನಲಿ ಕೆಲ |*

*ಕೆಲರು ಹರಿಪಕ್ಷದಲ್ಲಿ ಕೆಲರನುಚಿತದ ಭೀತಿಯಲಿ ಕೆಲರಿದೇಕೆಮಗೆಂದು*

*ಧರಣೀ | ವಲಯದವನಿಪರಿದ್ದುದದರೊಳು | ಖಳಶಿರೋಮಣಿ ಮಸಗಿದನು*

*ಶಿಶುಪಾಲನಡಿಗಡಿಗೆ || ೫೫ |*

ಯೇನಿದೂ? ಇಲ್ಲಿದ್ದ ಕ್ಷತ್ರಿಯೋಽಽತ್ತಮರೆಲ್ಲ ಕೇವಲ ಭಾವುಕರೇ? ಭಾವುಕತೆ ಅರಸೊತ್ತಿಗೆಗೆ ಪ್ರಧಾನವಾದಂತಹ ಬುನಾದಿಯೇ? ನೋಡಿದೆ, ಸಾಲು ಸಾಲಾಗಿದ್ದಂತಹ ರಾಜರ ಮುಖವನ್ನು ನೋಡಿದೆ. ನನ್ನ ಸಜ್ಜನಿಕೆ ಅದು. ಯಾರೂ ಉಸಿರಾಡೋದಿಲ್ಲ!

ನನಗಂತೂ ಸಂದೇಹ ಬರ್ತದೆ - ಚಕ್ರವರ್ತಿಯಾದಂತಹ ಪಾಂಡುವಿಗೆ ಸದ್ಗತಿಯನ್ನುಂಟು ಮಾಡುವದಕ್ಕೋಸ್ಕರ ಈ ರಾಜಸೂಯ ಪ್ರಕರಣ ಅಲ್ಲವೇ? ಯಾಕೆ? ಏನಾದರೂ ರಾಜಕೀಯದ ಅಂತರಂಗ ಇದ್ದೀತೆ? ಕಾರಣ ಉಂಟು, ಚಂದ್ರವಂಶದಲ್ಲೇ ಕವಲೊಡೆದದ್ದು ಯದುಗಳದ್ದೂ ಕೂಡಾ ವಂಶ ಅಥವಾ ಮನೆತನ. ಈ ಒಂದು ನೆಪವನ್ನು ಹೂಡಿ ಸಿಂಹಾಸನಾಧಿಕಾರ ಇಲ್ಲದೇ ಇದ್ದಂತಹ ಯದುಗಳಿಗೆ ಈ ಪಾಂಡವರ ಮೂಲಕವಾಗಿ ಒಂದ್ ಅರಸೊತ್ತಿಗೆಯನ್ನು ಸ್ಥಾಪಿಸುವ ಉದ್ದೇಶ ಇದ್ದೀತೆ ಇದರಲ್ಲಿ? ಇದ್ರೂ ಇದ್ದೀತೇನೊ! ಅಲ್ಲ ಹೀಗೂ ಇದ್ದೀತೋ, ನಮ್ಮ ಪಾಂಡವರಿಗೆ ಹಕ್ಕುಸ್ಥಾಪನೆಗಾಗಿ ಚಕ್ರವರ್ತಿಯ ಮಕ್ಕಳು ತಾವೇ ಅಂತ ಸ್ಥಾಪಿಸಲಿಕ್ಕೊ?

ಅಲ್ಲದಿದ್ದರೆ ಈ ಪ್ರಪಂಚ ವ್ಯಾಪ್ತಿ ಅರಸು ಮಕ್ಕು ನಾವಿದ್ದೇವೆ, ಜನ್ಮನಾ ಭೂಭುಜತ್ವವುಳ್ಳವರು. ನಮ್ಮನ್ನೆಲ್ಲಾ ತೇಜೋವಧೆ ಮಾಡುವದಕ್ಕಾಗಿ ಇದು ನಡೆದದ್ದೇ? ಯೇನಾದರೂ ಇದೊಂದು ಕೃಷ್ಣಕಾರಸ್ಥಾನ. ಅಂದರೆ ಕತ್ತಲೆಯೊಳಗೆ ನಡೆದದ್ದು. ಈಗ ವ್ಯಕ್ತವಾದದ್ದು ಈ ಕೃಷ್ಣನ ಪೀಠಾರೋಹಣ, ಯೇಲೂ ಸುಮ್ಮನಾಗಿದ್ದಾರೆ ಆದರೆ ಮುಖಭಾವವನ್ನು ನೋಡಿ ಅವರ ಹೃದ್ಗತವನ್ನು ನಾನು ಊಹಿಸಬಲ್ಲೆ! ಕೆಲವರಿಗೆ ಪಾಂಡವರಲ್ಲಿ ಏನೋ ಒಂದು ಥರದ ಸಖ್ಯ. ಅವರಿಗೆ ಸಖ್ಯ, ಯತಾರ್ಥವಾಗಿ ಚಿಂತಿಸಿದರೆ ನಮಗೆ ಬಾಂಧವ್ಯ.

ಅಕ್ಕ ತಂಗಿಯರ ಮಕ್ಕಳು ನಾವು!! ಚೇದೀ ದೇಶದ ರಾಜ ನಾನು, ಶಿಶುಪಾಲ ನಾನು. ನನ್ನ ಅಮ್ಮನ ಅಕ್ಕನ ಮಕ್ಕಳು- ಕುಂತಿಯ ಮಕ್ಕಳು, ಧರ್ಮಜ ಭೀಮಾರ್ಜುನಾದಿಗಳು. ಬಂಧುವಾದ ನನಗೆ ಕಿಚ್ಚು ಉರಿತಾ ಇದೆ ಒಳಗೆ, ಈ

ಸ್ನೇಹಿತರಿಗೇನು? ಸ್ನೇಹ ಪಾಶ ಅದಕ್ಕಿಂತ ದೊಡ್ಡದೊ? ಮಿತ್ರತ್ವಕ್ಕೆ ಬೇಕಾಗಿ ನಮ್ಮದಾದ ವ್ಯಕ್ತಿತ್ವವನ್ನು ವಿಕ್ರಯಿಸಬಹುದೆ? ತಾನು ನಷ್ಟವಾಗಿ ನನ್ನದು ಉಳಿತದ್ಯೆ?

`ಯಾಕೋ.., ಕೆಲವರು ಹಾಗಲ್ಲ ಗರ್ಭದಲ್ಲಿ ಇವರಿಗೆ ಕೂತದೆ ಭಯ ಕೃಷ್ಣನ ಹೆಸರು ಹೇಳ್ವಾಗ.

ಒಬ್ಬ ಕೃಷ್ಣನಿಗೆ ಹೆದರಿ ಇವರು ಸಿಂಹಾಸನದಲ್ಲಿ ಕೂತರೆ ಹೇಗಾದೀತು? ರಾಜರು ನಾವಾದರೂ ರಾಜರನ್ನು ಮಾಡುವವ ಕೃಷ್ಣನು ಅಂತ ಇವರು ಮೂಕ ಪ್ರೇಕ್ಷಕರಾಗಿ ಬಾಕಿದ್ದವರಿಗೆ ಉಪದೇಶ ಮಾಡ್ತಾರೋ? ಅಲ್ಲ...ಹೀಗಿದ್ದೀತೋ? ದೊಡ್ಡ ದೊಡ್ಡವ್ರೇ ಮಾತಾಡೋದಿಲ್ಲ ನಮಗ್ಯಾಕೆ ...?

ಆದರೆ ಇವರು ಅರ್ಥಮಾಡಿದ್ದಾರೋ? ಇದು ನಮಗೇಕೆ ಅಂತ ಹೇಳುವಾಗ ನಮಗಿನ್ನು ಅರಸೊತ್ತಿಗೆಯೇಕೆ ಎಂಬ ಪ್ರಶ್ನೆ ಹುಟ್ಟಲಿಲ್ಲವೆ ಈ ಅರಸು ಮಕ್ಕಳಿಗೆ? ನಾನು ನನ್ನ ಮನಃಸಾಕ್ಷಿಯನ್ನು ಅಡಗಿಸಿಡಲಾರೆ. ಪಾಂಡವರಲ್ಲಿ ನನಗಿದ್ದಂತಹ ಸಾಹೋದರ್ಯವನ್ನು ಮುಂದಿಡ್ಕೊಂಡು, ಅವರಿಗೆ ಈ ಕೆಲಸದಿಂದ ಒಳಿತಾಗಬೇಕು ಎಂಬ ಶುಭಾಕಾಂಕ್ಷೆಯನ್ನು ಇಟ್ಟುಕೊಂಡು ತಪ್ಪಿ ಬಿದ್ದಿದ್ದೀರಿ ಅಂತ ಯೆಚ್ಚರಿಸುವದು ನನ್ನ ಕರ್ತವ್ಯ. ಧರ್ಮರಾಯನನ್ನೇ ಕರೆದು ಕೇಳಿದ್ದೆ ಆದರೆ ನನಗಿಂತ ವಯಸ್ಸಿನಲ್ಲಿ ಹಿರಿಯವ ಅವ. ಈಗ ಕೃಷ್ಣನನ್ನು ಪೀಠಾರೋಹಣ ಮಾಡಿಸಿ ಪಾದಪೂಜೆ ಮಾಡಿದವನು ಸಹದೇವನಲ್ಲೇ. ಅವನು ನನಗಿಂತ ಚಿಕ್ಕವನು. ಅವನನ್ನು ಕೇಳುವದರ ಮೂಲಕ ದೊಡ್ಡವರ ಪ್ರಜ್ಞೆ ಕೆದರಿದರೆ ಶುಭಾಂತವಾದೀತು. ಇಲ್ಲದಿದ್ರೆ, ಯೇನು ಮಾಡಿ ಯೇನಕ್ಕೇನೊ ಮಾಡಿದ್ರು ಅಂತಾದೀತು, ಸಹದೇವನನ್ನೇ ಕೇಳ್ತೇನೆ.

|ಸೌರಾಷ್ಟ್ರ-ತ್ರಿವುಡೆ॥ ಏನೆಲವೊ ಸಹದೇವ ವಸುಧೆಯ ಮಾನನಿಧಿಗಳ ಮುಂದೆ ಗೋಪರ

ಸೂನುವಿಗೆ ಪೂಜಾಗ್ರ ಪೀಠಗ | ಳೇನದುಸಿರೂ || ೫೭ ||

ಯೆಲವೋ ಸಹದೇವ ಯೇನೊ ಇದು? ಯೇನೆಲವೊ ಸಹದೇವಾ! ಇಲ್ಲಿ ಸೇರಿದವರು ಯಾರು! ಮಾನನಿಧಿಗಳು, ಕಿರೀಟಪತಿಗಳು. ಈ ಕಿರೀಟಪತಿಗಳಾದಂತಹ ಮರ್ಯಾದಸ್ತರ ಮುಂದೆ ಅಷ್ಟಿಲ್ಲದೇ ಇದ್ದ ನಂದಗೋಪನ ಮಗನಿಗೆ... ಬೇಡ, ವಸುದೇವನ ಮಗನಿಗೆ ಸಾಲದಿದ್ರೆ ನಂದಗೋಪನ ಸೂನುವೂ ಹೌದು ನಂದಗೋಪನ ಮಗನೂ ಹೌದು, ಇದೊಂದು ಒಗಟು, ಯಾಕೆ? ಒಂದೋ ಎಲ್ಲರಂತಲ್ಲ; ಒಬ್ಬನಿಗೆ ಯೆರಡು ಮಂದಿ ತಂದೆಯಂದಿರು. ಒಬ್ಬ ಪಡೆದವ ಇರಬಹುದು ಒಬ್ಬ ಸಾಕಿದವ ಇರಬಹುದು, ಪಡೆದವ ಸಾಲದೇ ಅಲ್ಲವೇ ಸಾಕುವವ ಬೇಕಾಗಿರುವದು? ಈ ರೀತಿ ಅದೋ ಇದೋ ಅಂತ ಇತ್ಯರ್ಥಕ್ಕೆ ಸಿಕ್ಕದೇ ಇದ್ದಂತಹ, ಇತ್ಯರ್ಥ ಆಗುವವರೆಗೆ ಮೀಸಲಿರಿಸಬೇಕಿದ್ದ ಈ

ಕೃಷ್ಣನಿಗೇನೋ ನಮ್ಮ ಮುಂದೆ ಪೂಜೆ? ಹೇಳಿ ಪ್ರಯೋಜನವೇನು; ನೀನು ತಿಳಿದವನಲ್ಲ. ಸ್ವಲ್ಪ ಯೋಚಿಸಿದೇನೋ ನೀನು?

ಯಜ್ಞದೀಕ್ಷಿತ ಯಾರು? ಇಲ್ಲಿಯ ಯಜಮಾನಿಕೆಗೆ ತಾನು ಅಂತ ಹೇಳುವವ ಯಾರು?

ಅವನ್ಯಾಕಿಳಿಲಿಲ್ಲ ಕೃಷ್ಣನ ಕೈಹಿಡೇರಿಸಲಿಕ್ಕೆ? ಕಾರಣಯೇನು? ನಿನ್ನನೇ ಮುಂದೆ ತಳ್ಳಿದ್ದಾನೆ. ಯಾಕೆ ತಳ್ಳಿದ? ಬಹುಶ: ಹೀಗಿದ್ದಿತೋ?

ಈ ಕಾರಣದಿಂದ - ತಂದೆಯ ಸದ್ಗತಿಯ ಹೆಸರಿನಿಂದ ಅವನಿಗೆ ಸದ್ಗತಿಯಾಗುವಾಗ ಜ್ಞಾತಿಗಳಾದ ನಿಮ್ಮ ಅವನತಿ ಆಗ್ಲಿ ಅಂತ ನಿಮ್ಮ ಅಣ್ಣಂದಿರೆಣಿಸಿರಬಹುದೋ ಹೇಗೆ?

ತಾಯಿ ಇಲ್ಲದಿದ್ದ ಮಕ್ಕಳು; ಅಲ್ಲದಿದ್ರೆ ಏನೋ ಇದು! ತಿಳಿಯದೇ ಇದ್ದ ನಿನ್ನನ್ನು ತಳ್ಳಿದ್ರು, ನೀನು ಹಿಂದೆ ಮುಂದೆ ಯೋಚಿಸಲಿಲ್ಲ. ತಿಳಿದವರು ಯಾಕೆ ಹೀಗೆ ಮಾಡಿದರು? ಆದಕಾರಣ ನನಗೆ ತೋರ್ತದೆ.. ನಿಮ್ಮ ತಂದೆಯ ಸದ್ಗತಿಯೋ ದುರ್ಗತಿಯೋ! ಮಾಡಿಕೋ. ಮಾಡಿ ನಿಮ್ಮ ತಂದೆ ದುರ್ಗತಿಗೆ ಹೋಗ್ಲಿ ಸದ್ಗತಿಗೆ ಹೋಗ್ಲಿ, ಇಷ್ಟು ಮಂದಿ ಅರಸರಿಗೆ ಅಧೋಗತಿ ಕೊಡಬಹುದೇನೊ? ಮತ್ತೊಬ್ಬರಿಗೆ ಗೌರವ ಕೊಡದೇ ಇದ್ರೆ ನಿಮ್ಮಲ್ಲಿ ಗೌರವ ಉಳಿದೀತೋ? ಕೆಡಿಸಿದಿರಿ... ಯಾಗ ಕೆಟ್ಟು ಹೋಯ್ತು, ಯಾಕೆ? ನನ್ನ ಆಕ್ಷೇಪ ಬೇರೆ ಯಾರನ್ನು ಈ ಪೀಠದಲ್ಲಿ ಏರಿಸಿದರೂ ಬಗ್ತಿರಲಿಲ್ಲ. ಇವನೇನು? ಇವನೇನು? ಒಂದು ವ್ಯಕ್ತಿತ್ವ ಬರಬೇಕಾಗಿದ್ರೆ ಮೊದಲು ನಾವು ಗುರುತಿಸಬೇಕಾದದ್ದು ವೃತ್ತಿಯಿಂದ ವೃತ್ತಿ ಮುಖ್ಯ ಕರ್ಮ ಮುಖ್ಯ. ಅಂದಿನಿಂದ ಇಂದಿನವರೆಗೆ ಇವನು ಕೈಗೊಂಡ ವೃತ್ತಿಯೇನು? ಹೇಳಿಕೇಳಿ ಇವನು ಗೋವಳ, ಆದುದರಿಂದಲೇ ಇವನಿಗೆ ಗೋಪಾಲ ಅನ್ನುವದೇ ಪ್ರತೀತಿ. ಕೃಷ್ಣಾ ಅನ್ನುದು ಕೆಲವೇ ವ್ಯಾಪ್ತಿಯಲ್ಲಿ ಇವನಿಗಿದ್ದ ನಾಮ. ಹೌದಲ್ಲ? ಗೋಪಾಲಕೃಷ್ಣ ಅದ್ಯಾಕ್ ಬೇರೆ ಕೃಷ್ಣರಿದ್ದಾರೆ? ಹಾಗಾದರೆ ವೃತ್ತಿ ಧರ್ಮವೇ ಸ್ಥಾಯಿಯಾಗಿ ಜನರ ಚಿತ್ತಭಿತ್ತಿಯಲ್ಲಿ ಮೂಡ್ಯದೆ. ಇದಕ್ಕನುಮೋದನೆಯನ್ನಿವ ಕೊಟ್ಟಿದ್ದಾನೆ.

ಅದು ಹೌದಾದ್ರೆ ಯೇಲ್ಲಿಯ ಭೂಪಾಲತ್ವ ಯಲ್ಲಿಯ ಗೋಪಾಲತ್ವ ಆವಾಗ ನೀನು ಹೇಳಬಹುದು "ನನ್ನಲ್ಲಿ ಯಾಕೆ ಕೇಳಿ ಹೇಳಿದವರು ಯಾರು?" ಭೀಷ್ಮ !

ಸೌರಾಷ್ಟ್ರ-ತ್ರಿವುಡೆ| ಮುದಿಬರಡ ಪಡ ಭೀಷ್ಮ ನೀನೆಂ ತಿದಕೆ ಪಶುಕಾವವನ ಯೋಗ್ಯತೆ

ಗೊದಗಿಸಿದೆಲಾ ನೀನ್ನ ಹಲುಗಳ | ನೊದೆವೆನಿದಕೊ | ೫೭ |

ಹಯ್ಯೋsss... ಆ ಮುದಿಬರಡ ಭೀಷ್ಮನು ನಿಮ್ಮ ಹಿತೈಷಿ ಅಂತಲೇ ತೀರ್ಮಾನಿಸಿದೆಯೇನೋ? ಯೇಲ್ಲಾ ಹೇಳೋದಿಲ್ಲ ಹಾಳಾಗಿ ಹೋಗ್ಲಿ ಬಿಡು.

ಇಲ್ಲಿ ಒಂದು ಯಜಮಾನಿಕೆ ಅವನಿಗೆ ಬೇಕಾಗಿತ್ತು. ನನಗೇನು, ಹೇಳಲಿಕ್ಕೆ ಹೊರಟರೆ ದಾಕ್ಷಿಣ್ಯ ಏನೂ ಇಲ್ಲ. ಇವನಿಗೆ ಅಧಿಕಾರ ಬೇಡ ಸಂಸಾರ ಬೇಡ ಕಾಣುವವರ ಕಣ್ಣಿಗೆ ಮಣ್ ಹಾಕಲಿಕ್ಕೆ; ನೇತೃತ್ವ ಬೇಕು ಎಲ್ಲದರಲ್ಲಿ. ನಿಮ್ಮ ದಾಯಾದಿಗಳಿಂದ ನಿಮಗೆ ಯೇನೇನೋ ಆಘಾತ ವಡ್ದದೆ. ಆವಾಗ ಈ ಭೀಷ್ಮ ನಿಮಗೆ ಸಲಹೆಗಾರನಾಗ್ಲಿಲ್ಲ. ಈ ರಾಜಸೂಯಕ್ಕಾಗುವಾಗ ಸಲಹೆಗಾರನಾಗಿದ್ದಾನೆ. ಒಳಗಿಂದ ಕೌರವನ ಮೇಲೆಯನ್ನು ಎಷ್ಟು ಬಯಸ್ತಾನೋ ಯೇನೋ ಈ ಮುದ್ಕ

ಕೆಲವು ಹಳೇ ಮುದ್ಕರಿದ್ದಾರೆ ಕೆಟ್ಟ ಮಕ್ಕಳಲ್ಲಿ, ಮೊಮ್ಮಕ್ಕಳಲ್ಲಿಯೇ ಅವರಿಗೆ ವ್ಯಾಮೋಹ. ಅಂದರೆ ಈ ಭೀಷ್ಮನ ಕಣ್ಣೆದಿರಿನಲ್ಲಿ ಹುಟ್ಟಿ ಬೆಳೆದ ಮಕ್ಕಳು. ಹಾಗಾಗಿ, ನೀವು ರಾಜಸೂಯಯೆಲ್ಲಿಯಾದರೂ ಮಾಡಿದರೆ ನಿಮಗೂ ಹೆಸರು ಬಂದ್ರೆ ನಿಮ್ಮಪ್ಪ ಸ್ವರ್ಗಕ್ಕೂಯೇರಿದ್ರೆ ಕೌರವನಿಗೆ ಸ್ಥಾನಚ್ಯುತಿ ಆಗ್ತದೆ ಅಂತ ತಿಳಿದನೋ ಯೇನೋ ಈ ಭೀಷ್ಮ! ನನಗೆ ತೋರದೆ ಹಾಗೆ.

ಸದ್ಭಾವನೆ ಇದ್ರೆ ಈ ರಾಜಸೂಯದ ಸಭೆಯಲ್ಲಿ ಇಂತಹ ಒಂದು ಉತ್‌ಕ್ರಾಂತಿ ಇದು ಕೊನೆಗೆ ಯೆಲ್ಲಿಗೆ ಮುಟ್ಟಿತು ಅಂತ ಗೊತ್ತಿದ್ದೂ ಕೂಡಾ ಬೇಡದಿದ್ದ ಉಪದೇಶ ಕೊಟ್ಟಿದ್ದಾನೆ.

ಭಾಮಿನಿ॥ ಭೂತಳಾಧಿಪರಿಪರಿಮಿತವದೆ ಈತಗಳು ಬಹುಯೋಗ್ಯರದೆವಿ ಖ್ಯಾತ

ವೇದವ್ಯಾಸಗುರುಕೃಪರವರ ನೀನುಳಿದು || ಈತನೇ ಪ್ರಿಯನೆಂದು ಕೃಷ್ಣಂ |

ಗೋತು ಕೊಡುವರೆ ಬೇರೆ ಕೊಡುವದು | ಭೂತಳೇಶರ ಮುಂದೆ ಮನ್ನಿ

ಪುದುಚಿತವಲ್ಲೆಂದ || ೫೮ |

ಬೇಡ... ನಿನ್ನಲ್ಲಿ ನಾನು ಕೇಳೋದು, ಈ ಕೃಷ್ಣ ತುರುಗಾವವನು ಅಲ್ಲ ಅಂತ ಬಿಡ್ವೊ, ರಾಜಸೂಯಕ್ಕೊಂದು ಮರ್ಯಾದೆ ಇಲ್ವೇನೊ? ಒಂದು ಸಭೆಯಲ್ಲಿ ಒಬ್ಬನನ್ನು ಆರಿಸಬೇಕಾಗಿದ್ರೆ, ವೃತ್ತಿಧರ್ಮ ಇಲ್ಲ, ಆಮೇಲೆ ಕ್ಷೇತ್ರೋನ್ನತಿ ಉಂಟೋ? ಇಲ್ಲ. ವಿದ್ಯೋನ್ನತಿ ಉಂಟೋ? ಇಲ್ಲ. ಬಲೋನ್ನತಿ ಉಂಟೋ? ಇಲ್ಲ. ಯಾಕಿಲ್ಲ? ಕೇಳು ಇವನೇನು ಜನಪನೇನು? ಯಾವಾಗ ಅಭಿಷೇಕ ಆದದ್ದು ಇವನಿಗೆ? ಒಂದುವೇಳೆ ಇವ ಜನಪನಾದ್ರೆ, ಇವನಿಗಿಂತ ಹಿರಿಯವ ಬಲಭದ್ರ? ಅವಯೇನು ಯುವರಾಜನೇ? ಅಲ್ಲ! ವಯಸ್ಸಿನಲ್ಲಿ ಹಿರಿಯನೋ ಹ್ಯಾಗಾಗೋದದು? ಇವನಪ್ಪ ಇದ್ದಾನೆ. ಇವನಜ್ಜ ಉಗ್ರಸೇನ ಇದ್ದಾನೆ. ಅವನ ಮುಂದೆ ಇವ ಹಿರಿಯನು ಹೇಗೆ? ಅಲ್ಲ, ವಿದ್ವಾಂಸನೋ? ಯೇನು ವ್ಯಾಸ

ದೌಮ್ಯಾದಿಗಳು ಅಲ್ಲ ಅಂತಲೋ ಅಭಿಪ್ರಾಯ? ವಿಕ್ರಮವೋ...! ಆಹಾ...ಅಲ್ವೊ ...ಪೆಟ್ಟು ತಪ್ಪಿಸಿಕೊಂಡವ ವಿಕ್ರಮಿ ಅಂತಲೋ, ಅಲ್ಲ ಪೆಟ್ಟುಕೊಟ್ಟು ಓಡಿಸಿದವ ವಿಕ್ರಮಿ ಅಂತಲೋ? ಯಾವ ದೃಷ್ಟಿಯಿಂದ ನೋಡಿದರೂ ಇವನಿಗೆ ಯೋಗ್ಯತೆ ಇದೆ ಅಂತ ನನಗೆ ಹೇಳಲಿಕ್ಕೆ ಬರೋದಿಲ್ಲ.

ಹೌದೇನೋ... ನೀನು ತ್ರಿಕಾಲಜ್ಞಾನಿಯಂತೆ. ಯಾವ ಕುರುಡ ನಿನ್ನನ್ನು ಜ್ಞಾನಿಯಂತ ಹೇಳಿದ್ದು? ಯಾಕೆ? ಇದು ಯಜ್ಞ ಹೌದಲ್ಲ? ಇಂದ್ರಾದಿ ದೇವತೆಗಳ ಪ್ರೀತ್ಯರ್ಥವಾಗಿ ಮಾಡೋದು. ಕರ್ಮದಲ್ಲಿಯಾದರೂ ಶ್ರದ್ಧೆ ಇದ್ದವನೋ ಇವ? ಇವನ ಕಥೆ ನಾವು ಕೇಳಲಿಲ್ಲವೋ ನೀನು ಕೇಳಲಿಲ್ಲವೊ? ಇಂದ್ರಯಾಗ ಮಾಡುವದು ಇವರ ಕುಲ ಪದ್ಧತಿ. ಪರಂಪರಾಗತವಾಗಿ ನಡೆದು ಬಂದದ್ದು. ಇವ ತಡೆಹಿಡ್ದನಂತಲ್ಲ!

ಹಾಗಾದರೆ ದೇವೆಂದ್ರನನ್ನು ಯಜ್ಞದಲ್ಲಿ ಮೆಚ್ಚಿಸಬೇಡಿ ಅಂತ ಹೇಳಿ, ಜಡವಾದ ಗೋವರ್ಧನಗಿರಿಗೆ ಪ್ರದಕ್ಷಿಣೆ ಬನ್ನಿ. ನಮ್ಮ ತಾಯಿ ದನ "ಗಾವೋಮೇ ಮಾತರ: ಸಂತು ಪಿತರ: ಸಂತು ಗೋವೃಷ:" ಅಂತ ಹೇಳಿ ಇವನೂ ಒಪ್ಪದೆ ಇವ ಗೋಪಾಲಕನಾಗಿ ಬಾಕಿದ್ದ ಗೊಲ್ಲರನ್ನೂ ಗಾವಿಲರನ್ನೂ ನಮ್ಮ ತಾಯಿ-ದನ ನಮ್ಮ ತಂದೆ ಎತ್ತು ಅಂತ ಇವರನ್ನೆಲ್ಲ ಹಟ್ಟಿಯಲ್ಲಿ ಹುಟ್ಟಿದವರು ಅಂತ ಹೇಳಿದನೋ ಇಲ್ವೊ? ಇಂತಹ ನಾಸ್ತಿಕ ಇಂತಹ ಕರ್ಮವನ್ನು ತಿರಸ್ಕರಿಸುವವ ಯಾವ ರೀತಿ... ನಿನ್ನಲ್ಲಿ ಮಾತಾಡೋದ್ಯಾಕೆ? ನೀನು ಕೂತುಕೊಳ್ಳಿಸಿದಿ, ಆ ಮುದುಕ ಹೇಳಿದ. ನಾನು ಕೃಷ್ಣನಲ್ಲೇ ಕೇಳ್ತೇನೆ-

ಭೈರವಿ-ಏಕತಾಳ ತುರುಗಾವನೆ ಕೇಳ್ ಪರಿಯ | ತಾ | ನರಿಯದೆ ಮುದಿ ಗಾಂಗೇಯ

ಕರೆದಡೆಯಿಸ್ಥಾನದೊಳು | ಬಂ | ದಿರಲಾರೆ ನೀ ಪೇಳು || ೫೯ |

ಅವರು ಕೂತುಕೊಳಿಸಿದರು ಅಂತ ನಿನಗಾದರೂ ಸ್ವಲ್ಪ ಕಲ್ಪನೆ ಬೇಡವೇನೂ ಕೃಷ್ಣಾ? ನಿನ್ನಲ್ಲಿಯೂ ಅಷ್ಟೇನೆ, ಯೇನು? ಹೌದು ನನ್ನ ಮಾವನ ಮಗ ನೀನು. ಅಷ್ಟಕ್ಕಾಗಿ ಮಾತ್ರ ಕೇಳೋದು ಇಲ್ಲದೆ ಇದ್ರೆ ಕೈಹಿಡ್ದು ಕೆಳಕ್ಕೆ ಎಳೆದು ಹಾಕಿದ್ದೆ. ಭಾವ ಎಂಬ ಭಾವವುಂಟು ಸುಪ್ತವಾಗಿ, ಆದ್ದರಿಂದ ನಾನು ನಿನ್ನಲ್ಲಿ ಹೇಳುವದು ನಿನ್ನನ್ನು ಯೇರಿಸುವವರಿಗೆ ಹಿಂದು ಮುಂದಿನ ವಿಚಾರ ಇಲ್ಲ. ಅಥವಾ ನಿನ್ನಿಂದ ಅವರು ಬಹಳಷ್ಟು ಉಪಕೃತರೋ ಏನೋ! ಅವರಿಗಾಗಿ ಬಹಳ ದುಡದಿದ್ದಿ, ಭೀಮಾರ್ಜುನರ ಜೊತೆಯಲ್ಲಿ ಹೋಗಿದ್ದಿ ಕೇಳಿದ್ದೇನೆ. ನೀನು ದುಡ್ದದ್ದಕ್ಕೋ ಇದು. ಪ್ರತಿಫಲವೋ? ಬೇರೆಯೆಲ್ಲೂ ನಿನಗೆ ಪೂಜೆ ನಡೋದಿಲ್ಲ ಅರಮನೆಯಲ್ಲಿ, ಇಲ್ಲಿಯಾದರೂ ದಕ್ಕಲಿ ಅಂತ...?

ಕೊಡುವವನಿಗೆ ಗತಿ ಇಲ್ಲದಿದ್ರೆ ತೆಕ್ಕೊಳ್ಳುವವನಿಗೆ ಮತಿಯೂ ಇಲ್ಲ ಅಂತಾಗಬಾರದು. ಯಾಕೆ?

ಕೊಟ್ಟವನೂ ಉಳೀಬೇಕು ತೆಕ್ಕೊಂಡವನೂ ಉಳಿಬೇಕು. ಇದ್ಯೇನ್ ವಿರೋಧಭಾಸ! ಅಯ್ಯಾ, ಯೇನು ಸ್ವಭಾವ ಅಂತ? ಕೇವಲ ವೇದಿಕೆಯಲ್ಲಿ ಹಾಗೆ ಮಾಡಿ, ಹೀಗೆ ಮಾಡಿ ಅಂತ ಉಪನ್ಯಾಸ ಮಾಡಿದರೆ ಸಾಲದು ಇದು ತನಗೂ ಬಾಧಕ ಅಂತ ಅಂಗೀಕರಿಸಬೇಕು. ಇನ್ನೊಬ್ಬರಿಂದ ಒಳ್ಳೆಯದನ್ನೇ ಬಯಸುವವನು, ಬಾಕಿದ್ದವರಿಗೆ ಒಳ್ಳೆಯದನ್ನೇ ಮಾಡಬೇಕು. ಹಾಗಿರುವಾಗ..., ಛೇ, ಕುಲದ ಬಲ ಇಲ್ಲ, ವಿದ್ಯೆಯ ಔನ್ನತ್ಯ ಇಲ್ಲ ಯೆನೂ ಇಲ್ಲ. ನಾನ್ ಹೇಳುವದಲ್ಲ, ನಿನ್ನ ಕುರಿತಾಗಿ 'ಕೃಷ್ಣ ದೊಡ್ಡವ' ಅಂತ ಹೇಳುವವರು ಕೂಡಾ ನಿನ್ನ ದೊಡ್ಡಸ್ತಿಕೆಯನ್ನು ಬಣ್ಣಿಸುವಾಗ ನಿನ್ನ ಚೋರತನ ನಿನ್ನ ಜಾರತನ ಇದನ್ನು ಯೆತ್ತಿ ಯೆತ್ತಿ ಯೆತ್ತಿ ಹೇಳಿದ್ದಾರೆ!!

ನಿಮ್ಮ ಕೃಷ್ಣ ಜಾರನೋ... ಚೋರನೋ? ಅಲ್ಲ ಹೌದು! ಆದರೂ ಅವನಿಗೆ ಜಾರತ್ವದ ಭಾಧೆಯಿಲ್ಲ ಹಾಗಾದರೆ ಅವನನು ಜಾರ ಅಂತ ಕರೆಯುವದ್ಯಾಕೆ?

“ನಾವು ಜ್ಞಾತ ಅಜ್ಞಾತ ಯೆಲ್ಲಿಯಾದರೂ ಜಾರತ್ವವನ್ನು ಮಾಡಿದರೆ, ಜಾರತ್ವದ ಪಾಪ ಜಾರಲಿಕ್ಕೆ ಗೋಪೀಜಾರ ಅಂತ ಹೇಳ್ತೇವೆ"! ಒಳ್ಳೆ ಹುಚ್ಚರನ್ನೆಲ್ಲಾ ಒಂದು ಗುಂಪು ಕಟ್ಟಿ, ನಿನ್ನದ್ದಾದಂತಹ ಕೃತಿಗೆಲ್ಲ ಒಂದು ವಿಶಿಷ್ಟವಾದಂತಹ ಅರ್ಥಕಟ್ಟಿ ಜನರನ್ನು ಹುಚ್ಚು ಕಟ್ಟಿಸುವದಕ್ಕೆ ಅವರನ್ನು ತಯಾರು ಮಾಡಿದ್ದೋ? ಚೋರ! ಹೇಳಿಕೇಳಿ ಶಾಸ್ತ್ರ ಪ್ರಕಾರ ಸ್ವರ್ಣಸ್ತೇಯ ಧೃತಸ್ತೇಯ, ಕ್ಷೀರಸ್ತೇಯ... ಹಾಳಾಗಿ ಹೋಗ್ಲಿ ನಿನಗೆ ಯಾಕೆ ಹೇಳಬೇಕು... ನಾನೆಷ್ಟು ಕಲ್ತಿದ್ದೇನೆ ಅಂತ ಪ್ರದರ್ಶನ... ಇದರಲ್ಲಿ ಒಂದೊಂದೂ ಮಹಾಪರಾಧ !

ಸಣ್ಣದಿರುವಾಗ ಮಾಡು, ದೊಡ್ಡದಿರುವಾಗ ಬಿಟ್ರೆ ಮತ್ತೆ ಹೇಳು. ಹಾಗಿರುವಾಗ, ಯೇನು, ಯೇನು ಅಂತ ತಿಳದಿದ್ದೀ? ಇಲ್ಲಿ ಯೇನು ಮಾಡಿದರೂ ಸಹಿಸ್ತಾರೆ, ಅಂತ ತಿಳಕೊಂಡಿದ್ಯೋ? ಬಹುಶಃ ನಿನ್ನ ತಲೆಯಲ್ಲಿ ಹೀಗಿರಬೇಕು - ಹೇಗೆ? ಕೃಷ್ಣನ ನೇತೃತ್ವದಲ್ಲಿ, ಕೃಷ್ಣನ ಬೆಂಬಲದಲ್ಲಿ ಭೀಮಾರ್ಜುನರು ಹೋದಾವಾಗ ಊರಿನ ಎಲ್ಲಾ ರಾಜರು ಒಲಿದು ಕಪ್ಪವನ್ನು ಕೊಟ್ರು ಅಂತ. ಅಯ್ಯೋ ಮರುಳೇ,

ಭೀಮನ ಹೆದರಿಕೆಗಾಗ್ಲಿ, ಅರ್ಜುನನ ಭಯಕ್ಕಾಗಿ ನಾವೆಲ್ಲ ಕಪ್ಪಕಾಣಿಕೆಯನ್ನು ಕೊಟ್ಟದ್ದೋ? ಅಲ್ಲ.

ನಮಗ್ಗೊತ್ತುಂಟು - ರಾಜಸೂಯವನ್ನು ಬದುಕಿದ್ದವ ತನಗೋಸ್ಕರವಾಗಿ ಮಾಡ್ತಾನೆ ಅಂತಾದ್ರೆ ಅವನೇ ಚಕ್ರವರ್ತಿಯಾಗ್ತಾನೆ ಅಂತ. ಇಲ್ಲಿ ಅದಿಲ್ಲ. ಕಣ್ಣಿಗೆ ಕಾಣದ, ಅಳಿದು ಹೋದಂತಹ ಪ್ರೇತ ಅಲ್ಲ, ಆತ್ಮ ಈ ಆತ್ಮನ ಉದ್ಧಾರಕ್ಕೆ ಬೇಕಾಗಿ ಒಂದು ಥರದ ಪಿತೃಶ್ರಾದ್ಧವಾಗಿ ನಾರದೋಪದಿಷ್ಟವಾಗಿ ನೀವಿದನ್ನು ಮಾಡ್ತೀರಿ.

ಪಾಂಡು ಚಿಕ್ಕಪ್ಪನ ಬಗ್ಗೆ ಅಥವಾ ದೊಡ್ಡಪ್ಪನ ಬಗ್ಗೆ ನಮಗೂ ಒಂದು ಥರದ ಕೃತಜ್ಞತೆ ಇದೆ. ಬಹುಕಾಲ ಮಕ್ಕಳಿರಲಿಲ್ಲ ಪಾಪ. ಕೊನೆಗೆ ಮಕ್ಕಳನ್ನು ಪಡೆಯುವ ಪುಣ್ಯ ಅವನಿಗೆ ಬಂತು ಹೇಗೆ! ಯೇನು ಅಂತ ನಾವು ಕೇಳೋದಿಲ್ಲ. ಹಾಗಿರುವಾಗ ಪಾಂಡು ಮಕ್ಕಳನ್ನು ಪಡೆದದ್ದಕ್ಕೆ, ಮಕ್ಕಳಿಂದ ಈ ಕೃತಾರ್ಥತೆಯನ್ನು ತಾನು ಉಂಟು ಮಾಡಿಕೊಳ್ಳಬೇಕು ಎಂಬ ಸಂಕಷ್ಟವನ್ನು ನಾರದರ ಮೂಲಕ ನಿಮಗೆ ತಿಳಿಸಿದ್ದಕ್ಕೆ, ಈ ಧರ್ಮರಾಯ ಸಜ್ಜನವಾದ್ದರಿಂದ ಆ ಉದ್ದೇಶದಿಂದಲೇ ಮಾಡ್ತಾನೆ, ಇದು ಇಹಲೋಕ ಸಾಮ್ರಾಜ್ಯದ ಸ್ಥಾಪನೆಗಲ್ಲ, ಪರಲೋಕದಲ್ಲಿ ಪಾಂಡುವಿಗೆ ಮೀಸಲಾದ ಸ್ಥಾನವನ್ನು ಕೊಡಬೇಕು ಎಂಬ ಸದುದ್ದೇಶ ಅಂತ ನಾವೂ ಕೂಡಾ ನಮ್ಮ ದೇಣಿಗೆಯನ್ನು ಕೊಟ್ಟಿದ್ದೇವೆ. ಯಾರು ನಮ್ಮವರು. ದಂತವಕ್ರ, ಸೋಮದತ್ತ, ಭಗದತ್ತ ಇಲ್ಲಿ ನಾನು ನಿಮ್ಮ ಅಭಿಪ್ರಾಯವನ್ನು ಕೇಳ್ತಾ ಇದ್ದೇನೆ. ನಾನು ತಪ್ಪಿದರೆ ನೀವು ಹೇಳಿ, ಅಲ್ಲ ಬಾಕಿದ್ದವರು ಹೇಳಲಿ ಇಲ್ಲದಿದ್ರೆ ಇದು ಸರಿ ಎಂಬುದಕ್ಕೆ ವಿಧಾನ ಹೇಳಲಿ.

ಅಲ್ಲವೇ? ಕ್ಷತ್ರಿಯರು ಮಾಡುತ್ತಿರುವ ಈ ಯಾಗದಲ್ಲಿ, ಉತ್ತಮ ಪ್ರೋತೀಯನಿಗೆ ಕೊಡಿ ಅಗ್ರಪೀಠ; ನನ್ನ ಆಕ್ಷೇಪ ಇಲ್ಲ. ಪ್ರಾಮಾಣಿಕವಾಗಿ ಹೇಳ್ತೆನೆ ನಿಮಗೆಲ್ಲರಿಗೂ ಗೊತ್ತು ನನ್ನ ಮನೋಧರ್ಮ- ನಾನೇನು ಉತ್ಸಾಹಿಯಲ್ಲ, ನಾನೇನು ಈ ಅಧ್ಯಕ್ಷ ಪೀಠವನ್ನು ಬಯಸುವದೂ ಇಲ್ಲ.

ಇನ್ನೊಬ್ಬ ಕೊಟ್ಟರೆ ಒಲ್ಲೆ ಅಂತ ಹೇಳುವದು ನಮ್ಮ ಸಜ್ಜನಿಕೆ ಯೇನ್ ಹೇಳ್ತೀರಿ? ಹೌದಾದ್ರೆ ಹೌದು ಅಂತ್ಹೇಳಿ ಹೌದಲ್ಲ. ಯಾಕೆ? ನಮ್ಮ ವಯಸ್ಸೇನು? ನಮ್ಮದ್ದಾದಂತಹ ಅಸ್ತಿತ್ವವೇನು? ನಮಗಿಂತ ಹಿರಿಯರು ನಮ್ಮ ಕಣ್ಮುಂದೆ ಇದ್ದಾರೆ. ಹಾಗಿರುವಾಗ ದುರ್ವಿನೀತನೋ ನಾನು? ಅಂಹಕಾರಿಯೋ ನಾನು? ಇವನಿಗೆ ಕೊಡುವಾಗ ನಮಗೆ ಅದಕ್ಕಿಂತ ಇಮ್ಮಡಿ ಸಿಕ್ಕಬೇಕು ಅನ್ನುವವ, ಆದ್ದರಿಂದ, ನಮ್ಮ ತಾಳ್ಮೆಗೂ ಒಂದು ಅಳತೆಯಿದೆ. ಯೇಳಿ ಯೇಳಿ ಕೃಷ್ಣನನ್ನೇ ಹಿಡಿದೆಳೆಯುವ.

(ಭೀಷ್ಮ ಧರ್ಮರಾಯನಿಗೆ ಧೈರ್ಯವನ್ನು ಹೇಳುತ್ತಾ ಕೃಷ್ಣನನ್ನು ಕೀರ್ತಿಸುತ್ತಾನೆ.)

|ಕಾಂಭೋಜ-ಝಂಪೆ|| ಎಲೆ ಭೀಷ್ಮ ಭಂಡ ಮುದಿಬರಡ ಫಡ ನಿನ್ನ ಗೋ| ಕುಲದವನ

ಗುಣವ ಬೇಸರದೆ | ಗಳಹುತಿಹೆ ಜಾರೆಯರ ಮಿಂಡನೀತನ

ಕಥೆಯ | ಕಲಿಸಿದವರಾರಕಟ ನಿನಗೆ || ೬೦ |

ಭೀಷ್ಮಾ, ಇದು ನೀನು ಕೃತಿಯಿಂದ ಮತ್ತು ಉಪನ್ಯಾಸದಿಂದ ನಿನಗಿಂತ ಎಷ್ಟೋ ಸಣ್ಣವನಾದ ನನ್ನ ಬಾಯಿಂದ ಕೇಳಿಸಿಕೊಂಡ, ನಿನ್ನ ಕುರಿತಾಗಿ ನಾವಿಟ್ಟ ಗೌರವವನ್ನು ಈ ರೀತಿ ಅಪಹಾಸ್ಯ ಮಾಡುವದರ ಜೊತೆಯಲ್ಲಿ ಆ ಗೌರವವನ್ನೇ ಅಸ್ತ್ರವನ್ನಾಗಿ ಹಿಡ್ಕೊಂಡು ನೀನು ನಮ್ಮನ್ನು ಹೊಡಿತಾ ಇದ್ಯಲ್ಲ!

ಯೆಲಾ ಭೀಷ್ಮ, ನಿನ್ನ ಹಣೆ ಬರಹ ಗೊತ್ತಿಲ್ವೇನೋ!

ಭೀಷ್ಮಾಚಾರ್ಯ ನಿನ್ನ ನೈಷ್ಠಿಕ ಬ್ರಹ್ಮಚರ್ಯದ ಹಿನ್ನೆಲೆ ಈಗ ಸ್ಪಷ್ಟವಾಗ್ತದೆ. ನಿನಗ್ಯಾಕೋ ಈ ಮಹಾಕಾಮುಕನ ಕಥೆಯಲ್ಲಿ ಇಷ್ಟು ಆಸಕ್ತಿ?

ಅಬ್ಬಬ್ಬಾ ಇದನ್ನು ಹೇಳುವಾಗ ನಿನಗಾಗುವ ರೋಮಾಂಚನವೇ!! ಮುಪ್ಪಿನ ಮುತ್ತಾತ! ಇವನ ಜಾರತನದ ವೃತ್ತಾಂತವನ್ನು ಹೇಳುವಾಗ ನಿನಗೆ ಬಾಯಿನೀರು ಸುರಿತದೆ ಅಲ್ವೇನೋ?

ಯೇನು? ಬೆಕ್ಕು ಹಾಲು ಕುಡಿದ ಹಾಗೆ ಬ್ರಹ್ಮಚರ್ಯವನ್ನು ಸ್ಥಾಪಿಸುವದಕ್ಕೆ ಹೊರಟಿದ್ಯೋ?

ರಾಮನನ್ನು ಹೊಗಳು – ನನ್ನ ಆಕ್ಷೇಪವಿಲ್ಲ. ಅವ ಮರ್ಯಾದಾ ಪುರುಷೋತ್ತಮನೇ. ಅವನನ್ನೇ ಇವ ಅಂತ ಹೇಳಿಕೊಂಡು ಅಜಗಜಾಂತರವನ್ನು ಅದ್ವೈತ ಮಾಡ್ಲಿಕ್ಕೆ ಹೊರಟಿದ್ಯಲ್ಲ!

ಈ ಕೃಷ್ಣ... ಹಯ್ಯೋ...! ಇವನ ಲೀಲೆ... ಯೆಂತವ? ಮಹಾನುಭಾವ!!

ಇದೇನಾದ್ರು ನಿನ್ನ ಕುಯುಕ್ತಿಯೋ ರಾಜಕೀಯದ್ದು?

ನಾವೂ ಮಾತಾಡೊದ್ಬೇಡ ಯೆಲ್ಲ ಕೃಷ್ಣ ನೋಡಿಕೊಳ್ತಾನೆ ಅಂತ ಹೇಳ್ತಿಯಲ್ಲ! ಕುಳಿತ ಕೃಷ್ಣನನ್ನು ನೀನು ಪ್ರಚೋದಿಸುವದೋ ಹೇಗೆ? ಕೃಷ್ಣನಿಗೆ ನೀನು ಸೂಚನೆ ಕೊಡುವುದೋ ಹೇಗೆ? ಕೃಷ್ಣಾ ನೀನೇ ನೋಡಿಕೋ" ಅಂತ? ಯೇ ಮುದುಕಾ, ನಿನ್ನ ಬುದ್ಧಿವಂತಿಕೆಯೇ! ತಪ್ಪಲ್ಲ ತಪ್ಪಲ್ಲ ಈಗ ನನಗದು ಅರ್ಥವಾಗದೆ - ನಿನ್ನ ತಂದೆ ಶಾಂತನು ಚಕ್ರವರ್ತಿ ಮಹಾ ಕಾಮುಕ ಹೌದೋ? ನಿನ್ನ ಹಡೆದ ತಾಯಿ ಅವಳೂ ಮಹಾ ಕಾಮುಕಿ. ಇಬ್ಬರಿಗೂ, ಹುಟ್ಟಿದ ಮಕ್ಕಳು ಬೇಡ; ಹಾಗೆಂತ ವರ್ಷ ವರ್ಷ ಬಾಣಂತನ ಬೇಕು!

ಯೇನ್ಮಾಡೋದು ನಿನ್ನ ಹಣೆಬರಹ ನನ್ನ ಬಾಯಿಂದ ಈ ಮಾತನ್ನು ಹೇಳಿಸ್ತಾ ಇರೋದು.

ಆಲೋಚನೆ ಮಾಡೋಣ, ಗಂಗೆ ತಾನ್ಹಡೆದ ಮಕ್ಕಳನ್ನೆಲ್ಲ ನೀರಿಗೆ ಎಸೆದಿದ್ದು! ಚಕ್ರವರ್ತಿ ಶಾಸನ ಮಾಡುವವ ಆದರೆ ನಿನ್ನಪ್ಪ ಸ್ತ್ರೀಜಿತನಾಗಿ, ಮಹಾರಾಣಿಯಾಗಿ ಶರೀರ ಸುಖವನ್ನು ಕೇಳಿದಾವಾಗ ಕೊಡತಾಳೆ ತನ್ನ ಹೆಂಡತಿ ಅಂತ ಬಾಯ್ಮುಚ್ಚಿ ಕೂತ. ಅಂತಹ ಆ ಕಾಮದ ಪಿಂಡವೇ ಯೆರಡು ಒಂದಾಗಿ ಹುಟ್ಟಿದವ ನೀನು. ನಿನ್ನಲ್ಲಿ ಆ

ಕಾಮದವಾಸನೆ ಹೇಗೆ ನಷ್ಟವಾದೀತು? ಆಮೇಲೆ ನೀನೇ ಇಷ್ಟು ಉತ್ಪಾತ ಮಾಡಿದವ. ಸಮಾಜವೇ ಮನಸಾ ನಿನ್ನನ್ನು ವಿರೋಧಿಸಿತು. ಸತ್ಯವತೀ ದೇವಿಯಲ್ಲ ನಿನ್ನ ತಂದೆ ಕಾಮುಕನಲ್ಲದಿದ್ರೆ ಹ್ಞ . ಯೆಪ್ಪತ್ತರ ಗಡಿದಾಟಿದವನಿಗೆ ಆ ಸಣ್ಣ ಪ್ರಾಯದ ಹುಡುಗಿಯಲ್ಲಿ ಆಸಕ್ತಿಯೇನು? ಬೇಕಾಯ್ತು ಅವನಿಗೆ. ಆಮೇಲೆ ನಿನ್ನಲ್ಲಿ ಹೇಳಿದ ಹ್ಞ ... ಕಾಮ ಅಲ್ಲ ಮಗನೆ, 'ಒಬ್ಬ ಮಗ ಮಗನಲ್ಲ' ಅಂತ ನಿನ್ನನ್ನು ಹುರಿದುಂಬಿಸಿ, ನೀನು ಹೋಗಿ ದಾಶರಾಜನ ಮುಂದೆ ದೊಡ್ಡ ಪ್ರತಿಜ್ಞೆ ಮಾಡಿದಿ, ಮುದಿ ಭೀಷ್ಮ... .

ಆಗಲಿ, ಅಧಿಕಾರ ತ್ಯಾಗ! ಕುಲದ ಗೌರವವನ್ನು ಉಳಿಸಿದೆ. ಪ್ರಾಮಾಣಿಕವಾಗಿ ಹೇಳು ಅಧಿಕಾರ ತ್ಯಾಗ ಮಾಡಿದ್ದೆ ಆದರೆ ಅಧಿಕಾರಯೆಲ್ಲ ನೀನೇ ಇಟ್ಕೊಂಡಿದ್ದೀ! ಹಸ್ತಿನಾವತಿಯಲ್ಲಿ ಅಧಿಕಾರ ಯಾರು ಮಾಡ್ತಾರೆ ಅಂತ ಕೇಳಿದರೆ ನಿನ್ನ ಲಾಭಕ್ಕಾಗುವಾಗ ನೀನೆ. ಅಪವಾದಕ್ಕಾಗುವಾಗ ನಾನಲ್ಲ; ನನ್ನ ತಮ್ಮಂದಿರು. ಯೇ ಮುದ್ಕಾ ನೀನು ಕಲ್ತದ್ದಕ್ಕೆ ಕಣ್ಣಿಲ್ಲಲ್ಲ !!

ಕಾಶೀರಾಜನ ಪುತ್ರಿಯರ ಮದುವೆಯಲ್ಲೂ ಇದನ್ನು ಪ್ರಕಟಪಡಿಸಿದೆ. ಹಸ್ತಿನಾವತಿಗೆ ಹೆಣ್ಣು ಕೊಡಕೂಡದು ಅಂತ ಅವನ ಅಭಿಪ್ರಾಯ. ಇದಕ್ಕವನು ಮೊದಲೇ ಅಲ್ವೊ "ಭೀಷ್ಮಗರಿಯದ ತೆರದಿ" -ಅಂತ ಹೇಳಿದ್ದು? ದೇಶದೇಶದ ರಾಜರೆಲ್ಲ ಅಲ್ಲಿ ಸೇರಿದ್ರೂ ಒಬ್ಬರಾದ್ರೂ ಪ್ರಶ್ನಿಸಿದ್ರೆ ಹಸ್ತಿನಾವತಿಯವರು ಯಾಕೆ ಬರಲಿಲ್ಲ ಅಂತ?

ಹಾಗಾದರೆ ಮನಸ್ಸಿನಲ್ಲಿ ಯೆಲ್ಲರೂ ಹಸ್ತಿನಾವತಿಯವರಿಗೆ ಅಡ್ಡಪಂಕ್ತಿ ಹಾಕಿದ್ದಾರೆ. ಧರ್ಮ ಶಾಸ್ತ್ರದಲ್ಲಿರುವದು ಹಾಗೆ, ಜಾತಿ ಕ್ಷೇತ್ರದಿಂದ ನಿರ್ಣಯ ಹೊರತೂ ಬೀಜದಿಂದಲ್ಲ. ಸತ್ಯವತೀ ದೇವಿಯವರ ಕ್ಷೇತ್ರದಲ್ಲಿ ಹುಟ್ಟಿದವರಿಗೆ ಕ್ಷತ್ರಿಯತ್ವಯೆಲ್ಲಿಂದ ಬಂತು?

ನೀನು ಮನಸ್ಸಿದ್ದರೆ ಕೆಲವರಿಗೆ ಶುದ್ಧರಾಯಸ ಮಾಡ್ತಿ ಅಲ್ಲವೇನೋ? ನಿನ್ನ ವಯಸ್ಸಿನ ಲಾಭದಿಂದ ನನ್ನ ಅಂತಸ್ತಿನ ಲಾಭದಿಂದ ಮಾಡಿದರೆ ಅಲ್ಲ ಅನ್ನುವವರು ಯಾರು? ನೀನು ಅನ್ಯಾಯ ಮಾಡಿದಿ ಅಂತ ನಿನ್ನ ಗುರು ಪರಶುರಾಮನೇ ಹೋರಾಟಕ್ಕೆ ಬಂದ ಅಂತ ಕೇಳಿದ್ದೇನೆ.

ಯೇನ್ಮಾಡೋದು, ನಿನಗಿಂತ ಮುದುಕ ಅವ. ಆದ್ದರಿಂದ ಸೋತಿರಬೇಕು.

ಅದಲ್ಲದಿದ್ರೆ ಗುರುಶಿಷ್ಯರು ಒಂದಾಗಿ ಲೋಕದ ಕಣ್ಣಿಗೆ ಮಣ್ ಹಾಕಲಿಕ್ಕೆ ಅಂಬೆಯನ್ನು ವಂಚಿಸಲಿಕ್ಕೆ ಮಾಡಿರಬೇಕು. ನಿನಗೇ... ಈ ಇವನ ಈ ಕಾಮುಕತನದ ಕಥೆ ಹೇಳುವದರಲ್ಲಿ ಪರಮಾನಂದ ಅಲ್ವೊ? ಹೌದದು ಹಾಗೆ ನನಗ್ಗೊತ್ತುಂಟು. ಬ್ರಹ್ಮಚರ್ಯವನ್ನು ತೋರಿಸುತ್ತಾ ಇದ್ದ ಅತೃಪ್ತಕಾಮಿ ನೀನು. ಮನಸ್ಸಿನಲ್ಲಿಯೇ ನೀನು ಮಂಡಿಗೆ ಮೇಲ್ತಾ ಇದ್ದೀ

ಹೀಗೆ ಮನಸ್ಸಿನಲ್ಲಾದರೂ ಕೂಡಾ ಈ ರಸವನ್ನು ಸವಿದು... ಕೆಲವರಿಗೆ ಇರದೆ ಹಾಗೆ, ಬಾಕಿ ಇದ್ದದ್ದನ್ನು ನಾನು ಹೇಳೋದಿಲ್ಲ. ಮಾಡುವದಕ್ಕೆ ತಡೆ ಉಂಟು. ನೋಡುವದಕ್ಕೆ ತಡೆಯುಂಟು ಮನಸ್ಸಿನಲ್ಲೇ ಲಗ್ನವಾಗುವದಕ್ಕೆ ತಡೆ ಇಲ್ಲಲ್ಲ! ಯೇ ಮುದ್ರ ನಿನಗೆ ಗಡ್ಡ ಹಣ್ಣಾದದ್ದು ಮಾತ್ರ, ನಿನ್ನ ಬುದ್ಧಿಗೆ ಪಕ್ವತೆ ಬರಲಿಲ್ಲ.

ಆದ್ದರಿಂದ ನಿನಗೆ ಹೊಗಳಲಿಕ್ಕೆ ಸಿಕ್ಕಿದ್ದು ಇವನು! ಇವನಪ್ಪನನ್ನು ಹೊಗಳು. ಬೇಕಾದ್ರೆ ಬೇಡ... ಸ್ವಲ್ಪ ಬೊಳೆ ಸ್ವಭಾವದವ ಆ ಬಲರಾಮನನ್ನು ದೊಡ್ಡವ ಅಂತ ಹೇಳು.

ಇವನಿಗೆ ತನ್ನವರು ಅಂತಿಲ್ಲ, ಹಿರಿಯರು ಅಂತಿಲ್ಲ ಯೆಲ್ಲವರ ಮಾನ ಮರ್ಯಾದೆಯನ್ನು ತೆಗೆದು ನಿನ್ನಂಥವರಿಂದ ಅನುಮೋದನೆ ಪಡೆದು... ಯೇನು ಮಾಡೋಣ ಹೇಳು ನಿನ್ನನ್ನು ಗಂಗೆಯಲ್ಲಿ ಮುಳುಗಿಸದೆ ನಿನ್ನ ತಾಯಿ ಲೋಕಕ್ಕೆ ದ್ರೋಹವನ್ನು ಮಾಡಿದ್ದು ಆವಾಗ ಅಪ್ಪನಿಗೆ ಬೇಕಾಗಿ ಸರಿ ಅವಳು ಬಿಟ್ಟು ಹೋದ್ಲು ಅಲ್ಲವೇನೋ?

ಈಗ ಇವಯೇನು? ಇವ ದೇವರೋ ಇವ ! ಇವನನ್ನು ಪ್ರಚೋದಿಸ್ತಿಯೋ? ನಾವೆಲ್ಲ ಮೂರ್ಖರೋ?

ಕೃಷ್ಣ ಯೇನು ಅಂತ ಇದಕ್ಕೆ ವಿಧಾನ ಕಂಡಿದ್ದಾನೋ? ನೀನು ಹೇಳಲಿಕ್ಕಾಗಬೇಕು ಧರ್ಮರಾಯ ಬಾಯಿ ಮುಚ್ಚಲಿಕ್ಕಾಗಬೇಕು. ನಿನ್ನ ಹಳೆಯ ದಂತ ಕಥೆಯಲ್ಲಿ ತೆಗೆದೆಯಂತಾದ್ರೆ ಇದ್ದದ್ದೆಷ್ಟು ದಂತ ನಿನ್ನ ಮುಖದಲ್ಲಿ, ಮೊದಲು ಲೆಕ್ಕಮಾಡು ಮತ್ತೆಷ್ಟು ಉಳಿದೀತು ಅಂತ ಆಲೋಚಿಸು.

ಮುಚ್ಚುಬಾಯಿ.

ಆಹಾ! ಹ, ಹ... ಕತ್ತೆಯ ಕಿರುಚಾಟವನ್ನು ಕೇಳಿಕೊಂಡು ಒಂಟೆ ಹೇಳ್ಯದಂತೆ ಅಹೋಧ್ವನಿ! ಆವಾಗ ಒಂಟೆಯ ಮುಸುಡು ನೋಡಿ ಕತ್ತೆ ಹೇಳ್ಯದಂತೇ ಅಹೋ ರೂಪಂ! ಈ ಮುದ್ದ ಒಂದ್ ಕತೆ ಹೇಳಿದ ಎಷ್ಟು ಚಂದವಾಗಿ! ಇದರಲ್ಲಿದ್ದದ್ದೇನು ಹಿನ್ನೆಲೆ? ಮಿಕ್ಕವರು ಎಲ್ಲರೂ ಸೇರಿದರೂ ಈ ಶಿಶುಪಾಲನ ಕೂದಲು ಕೊಂಕಿಸುವದಕ್ಕೆ ಆಗುವದಿಲ್ಲ. ಸುಮ್ಮನೆ ಅವನ ಮೈಗೆ ಬಿದ್ದು ಪೆಟ್ಟು ಮಾಡಿಕೊಳ್ಳುವುದು ಬೇಡ. ಸಾಧ್ಯ ಇದ್ದರೆ ಕೃಷ್ಣನಿಗೆ...

ಅದನ್ನು ಎಷ್ಟು ಚಂದ ಹೇಳಿದ- “ಕೃಷ್ಣನೇ ಇವನನ್ನು ಕೊಲ್ಲುವವನು! ನಾವಲ್ಲ” . ಅಂತಂದ್ರೆ ನಮ್ಮಿಂದಾಗ್ಲಿಕ್ಕಿಲ್ಲ ಅಂತಲ್ವೊ? ಅಗ್ಲಿಕ್ಕಿಲ್ಲ ಅಂತ ತಿಳದಲ್ವೊ ಈ ಮುದ್ಕ ಹಿಂದೆ ಜಾರಿದ್ದು, ಬಾಕಿದ್ದವರನ್ನೆಲ್ಲ ತಡೆಹಿಡ್ದದ್ದು?

ಆದರೆ ಇವ ಕೂತಿದ್ದಾನಲ್ಲ ಇಲ್ಲಿ ಗುಮ್ಮನ ಹಾಗೆ; ಅಹುದು ಅನ್ನೋದಿಲ್ಲ ಅಲ್ಲ ಅನ್ನೋದಿಲ್ಲ!

ಆದರೆ ಇಲ್ಲಿದ್ದಾರೆ ಕೆಲವರು ಬ್ರಾಹ್ಮಣರು ಅವ್ರಷ್ಟಕ್ಕೆ ನಗಾಡ್ತಾರೆ ಮುಖ ಮುಖ ನೋಡಿ. ಯಾಕೆ?

ಊಟಕ್ಕೆ ಬಂದವರಿಗೆ ಜೀರ್ಣ ಆಗಬೇಕಲ್ಲ, ಇನ್ನೀಗ ದಕ್ಷಿಣೆಗೆ ಬಂದವರಿಗೆ ಹೆಚ್ಚಿಗೆ ಸಿಗಬೇಕಲ್ಲ. ನಾನ್ ಕೊಡುವವ ಅಲ್ಲಲ್ಲ ಇಲ್ಲಿ, ಹಾಗಾಗಿ ಯಜಮಾನ ಪ್ರೀತ್ಯರ್ಥಂ! ಯೇ ದೇವೊ ನಿಮ್ಮ ಬ್ರಾಹ್ಮಣ್ಯವೇ!

ಕೃಷ್ಣನಲ್ಲೇ ಕೇಳೊ ಯೇನೆಲಾ?

‖ಶಂಕರಾಭರಣ–ಮಟ್ಟೆ‖ ಏನೆಲವೊ ಕೃಷ್ಣ ಕೊಲುವ ಭಟನು ನೀನೆಲಾಗಿ ನಾನು ನಿನ್ನೊಳಳಿವ

ಭಟನೆ ಮರುಳೆ ಪೇಳೆಲಾ | ಈ ನೆಗಳ ಮಾತು ದಿಟವೊ ಪುಸಿಯೊ

ಎಂಬುದ | ಕಾಣಬೇಕು ನಿಲ್ಲು ಧುರಕೆ ನೋಡಬಹುದಿದ || ೬೧ ||

ನಿನ್ನ ಮೈಮೇಲೆ ಕೈಮಾಡುವದಕ್ಕೆ ಮೊದಲು ಈ ಭೀಷ್ಮ ಹೇಳಿದ್ದು ಎಷ್ಟು ಸತ್ಯ ಎಷ್ಟು ಸುಳ್ಳು ಅಂತ ನೀನ್ ಹೆಳ್ಬೇಕು. ಭೀಷ್ಮನು ಹೇಳ್ತಾನೆ "ನನ್ನನ್ನು ಕೊಲ್ಲುವ ಮೃತ್ಯು ಸ್ವರೂಪ ಕೃಷ್ಣ" ಅಂತ ನಾನು ಆಯುಧ ಗ್ರಹಣ ಮಾಡಿ ನಿನ್ನ ಮೈಮೇಲೆ ಹಲ್ಲೆ ಮಾಡಿದರೆ ಅಪರಾಧಿಯಾದೇನು. ಕೃಷ್ಣಾ ಹೌದೇನೋ ಇದು?

ಹೇಽಽ ಹ್ಹ ಮಾತಾಡೋದೇ ಇಲ್ಲ ಕಳ್ಳ ಕಳ್ಳರ ಕುಲಗುರು !!

ಯಾಕೆ? ಅರಿಯೆನೆಂದರೆ ಅರ್ವತ್ತು ಗುಣ. ಮತ್ತೆ ಕೆಲವರಿಗೆ ಹೇಳುವದುಂಟು- "ಯೇನಪ್ಪಾ ದೇವರ ಹಾಗೆ ಕೂತಿದ್ದಿ! ಶಬ್ದ ಇಲ್ಲ ಸ್ಪರ್ಶ ರೂಪ ರಸಗಂಧ ಏನೂ ಇಲ್ಲ. ಬಹುಶ: ಹೀಗೇ ಕೂತ್ರೆ ಇನ್ನು ನೈವೇದ್ಯ ಬಂದೀತು ಅಂತ ತಿಳಕೊಂಡಿದ್ದಾನೋ ಯೇನೋ! ಯೇ ಕೃಷ್ಣಾ, ಕಳ್ಳ ಅನ್ನುವದಕ್ಕೆ ಒಂದು ಸಾವಿರ ಪುರಾವೆ ಉಂಟು. ಹುಟ್ಟಿದ್ದೇ ಕಾರಾಗೃಹದಲ್ಲಿ; ಬೆಳದದ್ದು ಕಾರಾಗೃಹದಲ್ಲಿ ಬಾಗಿಲು ಒಡೆದು ಹೊರ ಹೋಗಿ ಹೆಸರು ಬದಲಾಯಿಸಿ... ಬೇಡ ಬೇಡ ಅದೆಲ್ಲ ಹೇಳಿದರೆ ನಮಗೇ ಕೊಳಕಾಗ್ತದೆ.

ಬೇರೆ ಯೇನಿಲ್ಲದಿದ್ರೂ ಮಾತೃಸ್ಥಾನದಿಂದ. ಹೌದಲ್ಲ. ಹೌದಲ್ಲ? ನಾವು ರಕ್ತ ಸಂಬಂಧಿಗಳು...

ಈಗ ನನ್ನಮ್ಮನ ಕೋರಿಕೆ ನನ್ನ ಕೋರಿಕೆಯಲ್ಲ. ಹೆಂಗುಸಾಗಿ ಪಾಪ, ಯಾರೋ ಹೇಳಿದ್ದರಿಂದ ನನ್ನ ಮೂರು ಕಣ್ಣೊ, ನಾಲ್ಕಕ್ಕೆ ಇತ್ತೋ ಇಲ್ವೊ ನನಗೂತ್ತಿಲ್ಲ. ನನಗೆ ಬುದ್ಧಿ ತಿಳಿವಾಗ ನಾನ್ ಹೀಗೇ ಇದ್ದೇನೆ. ಇದು ಹೌದಾಗಿದ್ರೆ ಈಗ ನನ್ನಮ್ಮ ಇಲ್ ಇಲ್ಲ. ನಾನದನ್ನು ಪ್ರತಿಭಟಿಸ್ತೇನೆ. ಅಮ್ಮನ ಮಾತನ್ನು ಹಿಂದೆ ತೆಕ್ಕೊಳತಕ್ಕದ್ದು ಆವಾಗ ನಾನ್ ಅಪ್ರಾಯಸ್ಥ ಈಗ ಪ್ರಾಯಸ್ಥನಾದಂತಹ ಮಗ, ನನ್ನ ಅಮ್ಮನಿಗೆ ನೀನು ಯೇನು ದೇಣಿಗೆ ಕೊಟ್ಟಿದ್ಯೋ ಅದನ್ನು ನಿನಗೆ ಹಿಂತಿರುಗಿಸಲಾಗ್ಯದೆ. ನನ್ನಮ್ಮ ನಿನ್ನಿಂದ ತೆಗೆದ ಸಾಲ ನಾ ತೀರಿಸಿದ್ದೇನೆ. ನೀನೋ ಕೊಲ್‌ವವ... ಕಳ್ಳ ! ನೀನು ಕೊಲ್‌ವ ಆಗ್ತಿದ್ರೆ ಆ ಹೊತ್ತೇನ್ ಮಾಡ್ತಿದ್ಯೋ?

ವಿದರ್ಭದ ರಾಜ ಭೀಷ್ಮಕ, ನನಗೆ ಅವ ಮಗಳನ್ನು ಕೊಡುವದಕ್ಕೆ ನಿಶ್ಚಯಿಸಿ, ಆಮಂತ್ರಣ ಕೊಟ್ಟಂತೆ ನಾನು ದಿಬ್ಬಣ ಸಮೇತ ಬಂದವ, ಮದುಮಗಳನ್ನು ಹೊತ್ತಿಗೆ ಸರಿಯಾಗಿ ತಪ್ಪಿಸಿದೆ ನೀನು. ಯೆಲಾ, ನೀನೋರ್ವ ವೀರನಾದರೆ ಆ ಹೊತ್ತಿನ ಮದುಮಗ ನಿನ್ನ ಕ್ರೋಧಕ್ಕೆ ಬಲಿಯಾದಂತಹ ಬಲಿಯ ಆಡ್ ಹೌದಾಗಿದ್ರೆ ... ಕದ್ ಕೊಂಡು ಯಾಕೆ ಹೋದ್ಯೋ? ನಾನ್ ಬಯಸಿದ ಹೆಣ್ಣು ನನಗೆ ಬೇಕು. “ಶಿಶುಪಾಲ, ಮುಂಡಾಸು ಬಾಸಿಂಗ ನಿನ್ನ ತಲೆ ಮೇಲೆ ಹೆಣ್ಣು ನನ್ನ ಮನೆಯಲ್ಲಿ” ಹೇಳಿದ್ಯೋನೋ ಗಂಡು? ಯೆಲ್ಲಿಯೋ ನಿತ್ತು ಒಳಸಂಚು ನಡೆಸಿ ನನಗೆ ನಿರ್ಣಯವಾದಂತಹ ಹೆಣ್ಣನ್ನು ಒಯ್ದಿದ್ದೀ. ಅಲ್ಲಿಯೂ ಕಳ್ಳ!! ಸುಮ್ಮನೆ ಹೇಳ್ತಾರೋ ಕೆಲವು ಪಾಮರರು, ನಮ್ಮೂರವರು ಕೆಲವರಿದ್ದಾರೆ ಛೇದೀ ದೇಶದವರೂ ಚೈದ್ಯರು- “ಹೆಣ್ಣುಕಳ್ಳ ಬೆಣ್ಣೆಕಳ್ಳ” ಅಂತ ನಿನ್ನನ್ನು ಹೇಳ್ತಾರೆ. ನೀನೇನೋ ಕೊಲ್‌ವವ? ಹಾಗಾದ್ರೆ ನಾನೀಗ ಪರೀಕ್ಷೆ ಮಾಡಬೇಕು ಯಾಕೆ? ಸುಮ್ಮನೆ ಇವನ ಚಾಟೂಕ್ತಿ ಅಥವಾ ದಂತ ಕಥೆಯನ್ನು ಒಪ್ಪಿಕೊಳ್ಳುವದಲ್ಲ. ಯಾವಾಗ ನಾನು ಆಕ್ಷೇಪಿಸಿದ್ದೇನೋ ಆವಾಗ, ಒಂದೋ ನಾನೋ ಇಲ್ಲ ನೀನು ಇತ್ಯರ್ಥ ಆಗೋಕು. ಹಿಂದಿನ ನೆನಪುಂಟು. ಅದನ್ನು ನಾನು ಸಭೆಯಲ್ಲಿ ಯಾಕೆ ಹೇಳಲಿಲ್ಲ ಅಂತಂದ್ರೆ ಅಷ್ಟೂ ಬೇಡ ನಿನಗೆ ಮಂಗಳಾರಿ ಮಾಡೋದು ಅಂತ, ಇಳಿಯೋ ಕೆಳಗೆ.



**(ಕೃಷ್ಣ ಮರುಮಾತಿಲ್ಲದೆ ಶಿಶುಪಾಲನ ಕತ್ತಿಗೆ ಚಕ್ರ ಎಸೆಯುತ್ತಾನೆ)**

ಆ, ಯೇನಿದು ಹಾ ಹಾ*s* ಅಯ್ಯೋ ಸತ್ತೆ!

## ೯ ಪಾಶುಪತ ಬಯಕೆ

## ಅರ್ಜುನ

ಭಾಮಿನಿ ಅರಸನನು ಬೀಳ್ಕೊಂಡು ವಿಪರ | ಹರಕೆಗೊಂಡಾ ಪಾರ್ಥನಿರದು | ತ್ತರಕೆ

ನಡೆದನು ಹಲವು ಗಿರಿ ಕಾನನವನುರೆ ಕಳೆದು|| ಪರಮ ಪಾವನ ಇಂದ್ರಕೀಲದ

ವರವನಕೆ ಬರಲಂದು ಕೇಳೊ ನರನೆ ಪುಣ್ಯಕ್ಷೇತ್ರವಿದೆಯೆಂದುದು ನಭೋವಚನ ॥ ೬೧ |

ನಮ್ಮ ವಂಶಕ್ಕೆ ಸತ್ಯವತೀ ದೇವಿಯನ್ನು ನಮ್ಮಜ್ಜ, - ಸದ್ಯದ ಭೀಷ್ಮಾಚಾರ್ಯರು ಆ ಕಾಲದ ದೇವವ್ರತರು ತರುವಕಾಲಕ್ಕೆ ಕೇಳಿದ್ದು ನಾವು, ಆ ನಮ್ಮ ಅಜ್ಜನ ತಂದೆಯವರು ರಾಜಋಷಿ ಶಂತನು ಹೇಳಿದರಂತೆ- “ಮಗನೇ ದುಡುಕಿದೆಯೋ?”

ಈಗ ಅದು ಹೌದು ಅಂತ ನಮ್ಮ ಅನುಭವಕ್ಕೆ ಬರದೆ ಇತ್ತೀಚಿನ ಪೀಳಿಗೆಯವರಿಗೆ

ಯೇನಾಯ್ತು? ಮತ್ತೂ ಭೀಷ್ಮಜ್ಜ ಉಳಿಬೇಕಾಯ್ತು ಇನ್ನೂ ಕೂಡಾ ಬಹುಶ: ಬಹಳ ದೂರದರ್ಶಿತ್ವದಿಂದಲೇ “ಮಗನೇ ಇಚ್ಛಾಮರಣಿಯಾಗು” ಅಂತ ಹೇಳಿರಬೇಕು. ಈಗ ಹಸ್ತಿನಾವತಿಯ ಸಿಂಹಾಸನದ ಅಧಿಕಾರ ಅಲುಗಾಡ್ತಾ ಇದೆ. ಹಾಗೆಂತ ಇಚ್ಛಾಮರಣಿಯಾದ ನಮ್ಮಜ್ಜ ಭೀಷ್ಮರ ವರ್ಚಸ್ಸಿನಿಂದ ಮೂರನೇ ಗುಂಪಿನ ದಾಳಿ ಆಗಲಿಲ್ಲ. ಆದರೆ ಇದ್ದ ಒಂದು ಗುಂಪಿನಲ್ಲಿಯೇ ಇಬ್ಬಣವಾಗಿ ಸಿಂಹಾಸನಕ್ಕಾಗಿ ಸಂಘರ್ಷ ನಡೆಯಬೇಕಾದ ದುಃಸ್ಥಿತಿಗೆ ಬಂದ್ಯದೆ! ಆದರೆ ಒಂದು ಪುಣ್ಯ, ಸತ್ಯವತೀ ದೇವಿಯರ ವಿವಾಹದ ಮೊದಲಿನ ಕಾಲದಲ್ಲಿ ಪರಾಶರರಿಂದ ಭಗವನ್ ವೇದವ್ಯಾಸರು ಹುಟ್ಟಿಕೊಂಡರಂತೆ! ಬಹುಶ: ನಮಜ್ಜ ಸತ್ಯವತಿ ದೇವಿಯರನ್ನು ಈ ಅರಮನೆಗೆ ರಾಜಮಾತೆಯಾಗಿ ಸ್ವೀಕರಿಸಿ ಕರಕೊಂಡು ಬರುವಾಗ ಈ ಕಥೆ ಗೊತ್ತಿರಲಿಲ್ಲ- ನಮ್ಮಜ್ಜನಿಗೆ ಅಲ್ಲ, ಗೊತ್ತಿದ್ದರೆ ಅಪಚಾರವೇನೂ ಅಲ್ಲ. ಆನಂತರ ಈಗ ನಮಗೆ ಗೊತ್ತಾಯ್ತು ಆಕೆ ದಿವ್ಯಗರ್ಭೇ, ಪುಣ್ಯಗರ್ಭೇ ಆಕೆ. ವ್ಯಾಸರು ಹುಟ್ಟಿದಂತಹ ಆ ಗರ್ಭದಲ್ಲಿ ಚಂದ್ರವಂಶದ ಯೇನೋ ಒಂದು ದುರಂತ ಇರಬೇಕು. ರಾಜ್ಯವನ್ನಾಳುವ ಪ್ರಬುದ್ಧತೆ ಇಲ್ಲದೇ ಇದ್ದಂತಹ ಕೃಶರಾದಂತಹ ಮಕ್ಕಳು ಹುಟ್ಟಿದ್ದು - ಬಹುಶ: ತಾಯಿಯ ಗರ್ಭದಲ್ಲಿದ್ದ ಶಕ್ತಿ ಸಂಪೂರ್ಣ ಭಗವನ್ ವೇದವ್ಯಾಸರಾಗಿ ಮೊದಲೇ ಹೊರಹೊಮ್ಮಿದ್ದರಿಂದ ನಮ್ಮರದ್ದು ಹೀಗೆ ಶಿಥಿಲ ವೀರ್ಯವುಳ್ಳದ್ದಾಯ್ತಿ ಯೇನೋ!! ಆದರೇನು? ಆ ತಾಯಿ ನಮ್ಮ ಅರಮನೆಗೆ ಕಾಲಿಟ್ಟ ಸೌಭಾಗ್ಯದಿಂದಾಗಿ ಕೊನೆಗೆ ನಮ್ಮ ವಂಶ ಆ ವ್ಯಾಸರಿಂದಲೇ ಬೆಳಗಿಬರಬೇಕಾಯ್ತು. ಸರಿ, ನಮ್ಮ ತಂದೆಯ, ದೊಡ್ಡ ತಂದೆಯ ಹುಟ್ಟಿಗೆ ವ್ಯಾಸರದ್ದೇ ಪ್ರಸಾದವಾಯ್ತು. ಅದರಿಂದ ಏನಾಯ್ತು?

ಭಗವಾನ್ ವೇದವ್ಯಾಸರು ವಿಶ್ವಗುರು ಜಗದ್ಗುರು ಆಗಿ ಸಂಚರಿಸುತ್ತಿದ್ದರೂ ಜಗತ್ತಿಗೆ ವರ್ತಮಾನ ಕಾಲದ ಪರಮಾಚಾರ್ಯರಾಗಿದ್ದರೂ ವೈಯಕ್ತಿಕವಾಗಿ ನಮಗೆ ರಕ್ತಸಂಬಂಧಿಗಳಾಗಿಯೇ ಉಳಿದರು. ರಕ್ತ ಸಂಬಂಧಿಗಳಾಗಿ ಉಳದಿಂದ ನಮ್ಮೊಳಗೆ ಯೇನು ಜಗಳ ಬಂದ್ರೂ ಕರುಳಿನ ಸಂಬಂಧದಿಂದ ಪುಣ್ಯಾತ್ಮರಾದ ಅವರಿಗೆ ನಮ್ಮನ್ನು ಬಿಟ್ಟು ಬಿಡುವದಕ್ಕೆ ಸಾಧ್ಯವಾಗೋದಿಲ್ಲ. ಹುಟ್ಟಿಕೊಂಡೆವು. ಸ್ವಲ್ಪ ಕಾಲಮೆರೆದೆವು. ರಾಜಸೂಯಾಧ್ವರವನ್ನು ಮಾಡಿದೆವು !! ಕೊನೆಗೆ ವೇದವ್ಯಾಸರು ಒಂದು ಮಾತ್ ಹೇಳಿದರು "ಸರಿ ರಾಜಸೂಯವೇನೋ ಚೆನ್ನಾಗಿ ನಡೀತು. ಧರ್ಮರಾಯ, ನೀನು ಚಕ್ರವರ್ತಿಗೆ ಅರ್ಹನಾಗಿದ್ದೆ. ಆದರೆ ಬಂದಿದೆ ಅವನತಿ, ದೂರದಲ್ಲಿ ಒಂದು ಮಹಾಸಂಗ್ರಾಮವನ್ನು ಬಯಸ್ತದೆ ಈ ರಾಷ್ಟ್ರ - ರಕ್ತದಾಹ! ಇದು ನಿಮಗೆಲ್ಲ ನೆನಪಿರ್ಲಿ" ! ಈಗ ಅದು ಸತ್ಯವಾಗ್ತಾ ಬಂದದೆ. ದ್ಯೂತದಲ್ಲಿ ಸರ್ವಸ್ವ ಕಳಕೊಂಡ ನಾವು, ಹನ್ನೆರ್ಡು ವರ್ಷ ವನವಾಸ ಒಂದು ವರ್ಷ ಅಜ್ಞಾತದ ಅವಧಿಗೆ ಸಿಕ್ಕಿ ಈಗ ವನವಾಸವನ್ನನುಭವಿಸ್ತಾ ಇದ್ದೇವೆ.

ನಿನ್ನೆ ನಿನ್ನೆ ಬಂದು ಪುನ: ವೇದವ್ಯಾಸರು! ನಮ್ಮಣ್ಣನಿಗೆ ಉಪದೇಶ ಮಾಡಿದ್ರಂತೆ - ಹೇಗೆ?

"ಮಹಾಸಂಗ್ರಾಮವನ್ನು ಇದುರಿಸುವದಕ್ಕಿದೆ ನೀನು. ಪಾಂಡವರಾದ ನಿಮಗೆ ವೈಷ್ಣವ ಶಕ್ತಿಯಿದೆ. ಸಾಕ್ಷಾತ್ ವಿಷ್ಣುವಾದಂತಹ ಭಗವಂತ ವರ್ತಮಾನ ಕಾಲದಲ್ಲಿ ವಾಸುದೇವನಾಗಿಯೇ ಹುಟ್ಟಿಕೊಂಡು ನಿಮ್ಮೊಟ್ಟಿಗೆ ಇದ್ದಾನೆ. ಆದರೆ ಹಸ್ತಿನಾವತಿಯ ಸಿಂಹಾಸನದ ರಕ್ಷಣೆಗೆ ಕೇವಲ ವೈಷ್ಣವೀಯ ಭಕ್ತಿ, ಕೇವಲ ವಾಸುದೇವನ ಪ್ರಸಾದ ಸಾಕಾಗೋದಿಲ್ಲ. ಅದಕ್ಕೆ ಮೃತ್ಯುಂಜಯ ಶಕ್ತಿಯೂ ಬೇಕಾಗ್ತದೆ. ಇದಕ್ಕೆ ಉದಾಹರಣೆಯೇನು? ಭೀಷ್ಮರದ್ದೇ. ಭೀಷ್ಮರಲ್ಲಿ ಇಚ್ಛಾಮರಣೆಯ ಮೃತ್ಯುಂಜಯ ಶಕ್ತಿ ಮತ್ತೆ ಭಾಗವತೋತ್ತಮ ಎಂಬ ಭಕ್ತಿಯ ಶಕ್ತಿ, ಭೀಷ್ಮರಿಗೆ ವಿರಾಮ ಕೊಡಬೇಕಾಗ್ತದೆ ನೀವು. ಉತ್ತರಾಧಿಕಾರಿಗಳಾಗಬೇಕಾಗ್ತದೆ ನೀವು ಚಂದ್ರವಂಶದ ಅರಸುಮಕ್ಕಳು. ವರ್ತಮಾನ ಕಾಲದಲ್ಲಿ ನಾನು ಕಂಡಂತೆ ಆ ಶಕ್ತಿಯನ್ನು ಸಂಪಾದಿಸುವದಕ್ಕೆ ನಿನ್ನ ತಮ್ಮನಾದ ಅರ್ಜುನನೇ ಸರಿ ಅಂತ ಹೇಳಿದರಂತೆ ವೇದವ್ಯಾಸರು !!

ಯತಾರ್ಥಕ್ಕಾದರೆ, ಕೇವಲ ವೈಷ್ಣವೀ ಶಕ್ತಿಯಿಂದ ಕ್ಷಾತ್ರವರ್ಚಸ್ಸನ್ನು ಬೆಳಗಿಸಬಹುದು. ಆದರೆ ಆ ಸಾಮ್ರಾಟ ಶಕ್ತಿಗೆ ಆ ಶಿವಶಕ್ತಿ ಆ ಮಹಾದೇವಶಕ್ತಿ ಮಾತ್ರವಲ್ಲ ಪರಾಶಕ್ತಿಗೆ ಪತಿಯಾದಂತಹ ಶಿವಶಕ್ತಿ ಇದು ಬೇಕು. ಅಂದರೆ ಪಾಶುಪತಶಕ್ತಿ ಬೇಕು.

ಅರ್ಜುನನೇ ಸಿದ್ಧಿಸಿಕೊಂಡು ಬರಬೇಕು ಅಂತ ಹೇಳಿದ್ರಿಂದ.. ಸರಿ... ವ್ಯಾಸಾನುಗ್ರಹವೂ ಉಂಟು. ನಮ್ಮಣ್ಣನಲ್ಲಿ ನಾವು ಪಿತೃತ್ವವನ್ನು ಕಾಡ್ತವೆ. ಆಚಾರ್ಯತ್ವವನ್ನು ಕಾಣೇವೆ.

ಮತ್ತೊಂದು ಮಂತ್ರ ಗ್ರಹಿಸುವದಕ್ಕೆ ಮಾತ್ರವಲ್ಲ ಮಂತ್ರ ಉಪದೇಶಕ್ಕೂ ಅವನಿಗೆ ಅರ್ಹತೆ ಉಂಟು ನಮ್ಮಣ್ಣನಿಗೆ. ನಮಗೆಲ್ಲ ಮಂತ್ರ ಸ್ವೀಕರಿಸುವ ಹಕ್ಕು ಮಾತ್ರ ಉಪದೇಶ ಮಾಡುವ ಹಕ್ಕಿಲ್ಲ. ಹಾಗಾಗಿ ಯಾವನಲ್ಲಿ ಬ್ರಾಹ್ಮೀ ಶಕ್ತಿ ಸಾತ್ವಿಕ ಶಕ್ತಿ ನೆಲೆಯಾಗಿ ಮನೆಯೂರಿ ಉಂಟೋ, ಅಂತಹ ನಮ್ಮಣ್ಣನಿಗೆ ಮೈಯಿಂದ ಮಾತ್ರ ಕ್ಷಾತ್ರವೃತ್ತಿ ಇರುವದರಿಂದ ಉಪದೇಶ ಮಾಡಬಲ್ಲ ಆತ. ಗಾಯತ್ರಿಯನ್ನು ಉಪದೇಶ ಮಾಡಿದ್ದು ಹಾಗೆ ಹೊರಗಿಂದ ಕ್ಷತ್ರಿಯನಾಗಿ ಮೈವೊಡೆದಿದ್ರೂ ಒಳಗಿಂದ ಬ್ರಾಹ್ಮೀ ಶಕ್ತಿಯನ್ನು ಅರ್ಜಿಸಿಕೊಂಡಂತಹ ವಿಶ್ವಾಮಿತ್ರ ಸದೃಶನೇ ಆದಂತಹ ನಮ್ಮಣ್ಣ ಮಂತ್ರೋಪದೇಶ ಮಾಡಿದನೋ ಆಗ ನಾನು ಸತ್ಪುತ್ರನೇ ಅಂತ ತೀರ್ಮಾನಿಸಿದೆ. ಸೂರ್ಯೋದಯಕ್ಕೆ ಯೆದ್ದು ಶುಚಿರ್ಭೂತನಾಗಿ ಶಿವನ ಕುರಿತಾದಂತಹ ತಪಸ್ಸಿಗೆ ಹೊರಡುವ ಸಂಕಲ್ಪ ಮಾಡುವಾಗ ಶಿಷ್ಟಾಚಾರದಂತೆ ಭೀಮಣ್ಣನಿಗೆ, ಹಿರಿಯಣ್ಣನಿಗೆ ವಂದಿಸಿ ನಕುಲ ಸಹದೇವರನ್ನು ಬಿಗಿದಪ್ಪಿ ಅವರಿಂದ ಬಿಡುಗಡೆಗೊಂಡಂತಹ ನಾನು ಅದೋ - ಯಾಜ್ಞಸೇನಿ, ಬೆಂಕಿಯಿಂದಲೇ ಹುಟ್ಟಿದವಳು! ಶ್ರೀಕೃಷ್ಣನ ಸಹೋದರಿಯ ಸ್ಥಾನದಲ್ಲಿದ್ದವಳು ಹಾಗಿರುವಾಗ ವಿಷ್ಣುಶಕ್ತಿ ಸ್ವರೂಪಿಣಿಯಾದಂತಹ ಪಾಂಚಾಲಿ ಬಂದು ಯೇನ್ ಹೇಳಿದ್ದು? “ಶಿವನನ್ನು ವಲಿಸಿ ಅಸ್ತ್ರವನ್ನು ಪಡಕೊಂಡು ಬರಬೇಕು. ಹಾದಿ ಸುಗಮವಾಗಲಿ ತಪಸ್ಸು ಫಲಕಾರಿಯಾಗಲಿ. ಆದರೆ ನೀನು ಸಂಪೂರ್ಣ ವಿರಕ್ತನಾಗಿ ಸಂಪೂರ್ಣ ನಿವೃತ್ತನಾಗಿ ಶಿವನನ್ನು ಪ್ರಾಪ್ತಿಸುವ ತಪಸ್ಸಿಗೆ ಸಿದ್ಧನಾಗಕೂಡದು. ಶಿವನನ್ನು ಪ್ರಾಪ್ತಿಸುವ ತಪಸ್ಸು ಬೇರೆ. ಯಮ ನಿಯಮ ಆಸನ ಪ್ರಾಣಾಯಾಮ ಇತ್ಯಾದಿಯಾಗಿ 'ಶಿವೋಹಂ' ಈ ಅದ್ವೈತವನ್ನು ಸರ್ವದಾ ಹಿಡ್ಕೊಳಬೇಡ. ಪಾಶುಪತ ಶಕ್ತಿಯನ್ನು ಪಡೆಯುವ ಸತ್ಪಾತ್ರವಾಗಿ ಪರಿಣಮಿಸು. ಹೇಗೆ? ಶಿವಧ್ಯಾನದ ಜೊತೆಯಲ್ಲಿಯೂ ನಿನ್ನ ಸುಪ್ತವಾದಂತಹ ಮನಸ್ಸಿನಲ್ಲಿ ನೆನೆ ವಿರೋಧಿಯ ಬಲವ! ನಮಗೆ ವಿರೋಧಿಯಾದ ಸುಯೋಧನನ ಶಕ್ತಿಯನ್ನು ನೆನೆಸಿಕೊಳ್ಳಬೇಕು. ಭೀಷ್ಮ, ದ್ರೋಣ, ಕೃಪೆ ಅಶ್ವಥಾಮರೆಲ್ಲ  ಇದ್ದಾರೆ ಅಲ್ಲಿ. ನಾಳೆ ಯುದ್ಧವನ್ನಿದಿರಿಸಿ ಜಯಿಸಬೇಕಾಗಿದ್ರೆ ಇದನ್ನು ತೀರ ಮರೆತು ಬಿಡಬೇಡ. ಇದರ ಸಂಪರ್ಕವನ್ನೇ ಬಿಟ್ಟುಕೊಂಡು, ನಿರ್ವಿಕಲ್ಪ ಸಮಾಧಿಗೆ ಹೋಗಬೇಡ. ವಿರೋಧಿಯ ಬಲವನ್ನು ಅವನ ಐಶ್ವರ್ಯವನ್ನು ನೆನೆದುಕೋ. ನಮ್ಮ ಪರಿಭವವನ್ನು ನೆನೆಸಿಕೊ. ಇದು ನಿನಗೆ ಸ್ಫೂರ್ತಿಯಾಗಲಿ, ಅದು ನಿನಗೆ ಲಕ್ಷವಾಗಲಿ, ಇದನ್ನು ಸ್ಥಾಯಿಯಾಗಿ ಮನಸ್ಸಿನಲ್ಲಿ ಇಟ್ಟುಕೊಂಡು ಸುಖವಾಗಿ ಹೋಗಿ ಬಾ”  !! ಛೇ ಎಂಥಾ ಮಾತು!

ಹಾಗಿರುವಾಗ ಅರ್ಜುನನದ್ದಾದಂತಹ ತಪಸ್ಸಿಗೆ ಇನ್ನೊಂದು ಸ್ವರೂಪವನ್ನು ನಾನು ಕಲ್ಪಿಸಬೇಕಾಗ್ತದೆ. ನನ್ನ ಆಯುಧಗಳನ್ನು ನಾನು ಸಂಗ್ರಹಿಸಿಕೊಂಡು ನನ್ನ ಕ್ಷಾತ್ರವೃತ್ತಿಗೆ ದ್ಯೋತಕವಾದಂತಹ ಯಾವತ್ತೂ ಹೋರಾಟದ ಹುಮ್ಮಸನ್ನು ಮೈಗೂಡಿಸಿಕೊಂಡೇ ಶಿವಧ್ಯಾನಕ್ಕೆ ಹೋಗಬೇಕಾಗ್ತದೆ. ಹೌದ್ ಹೌದು... ಇದು ಶ್ರೀರಾಮಚಂದ್ರಮನ ಆದರ್ಶ. ಶ್ರೀರಾಮಚಂದ್ರಮ ನಾರುಡೆಯನ್ನುಟ್ಟು ಜಟಾವಲ್ಕಲಗಳನ್ನು ಧರಿಸಿ ಪಿತೃವಾಕ್ಯಪರಿಪಾಲನೆಗಾಗಿ ವನವಾಸಕ್ಕೆ ಹೋದ. ಆದ್ರೂ ಸನ್ಯಾಸಿಯಾಗಲಿಲ್ಲ! ಅವನ ಕೈಯಲ್ಲಿ ಯಾವಾಗಲೂ ಇತ್ತು ಕೋದಂಡ, ಯಾವಾಗಲೂ ಇತ್ತು ತುಂಬಿದ ಬತ್ತಳಿಕೆ. ಯಾಕೆ? “ಪಿತೃವಾಕ್ಯ

ಪರಿಪಾಲನಾರ್ಥವಾಗಿ ವನಕ್ಕೆ ಬಂದರೂ, ನಿಮ್ಮಂತಹ ಸಜ್ಜನರಾದಂತಹ ಋಷಿಮುನಿಗಳ ರಕ್ಷಣೆ ನನ್ನ ಹೊಣೆ" ಅಂತ ಶ್ರೀರಾಮಚಂದ್ರ ಹೇಳಿದನಂತೆ. ಇದು ನಮಗೆ ಆದರ್ಶ. ಕ್ಷತ್ರಿಯೋಚಿತವಾದಂತಹ ನನ್ನ ಆಯುಧಗಳನ್ನು ಬಿಟ್ಟು ನಾನು ಹೋಗುವದಿಲ್ಲ. ಹಾಗೆಂತ ತಪಸ್ಸಿಗೆ ಈ ಕಿರೀಟ ಇದೆಲ್ಲ ಯಾತಕ್ಕೆ? ರಾಜೋಚಿತವಾದಂತಹ ಉಡುಗೆ ಬೇಡ. ಹಾಗೆಂತ ಬೇಕಿದ್ದರೆ ನಮ್ಮಲ್ಲಿ ಇಲ್ಲದೆಯೂ ಇಲ್ಲ. ನಾವೇನು ಕಾನನ ವಾಸಿಗಳಾದದ್ದು ಬರೇ ನಾರುಡೆಯುಟ್ಟೇನೂ ಅಲ್ಲ. ಸರಿ, ಸರಿಯಾದ, ಭೂಮಿಕೆ ಸಿದ್ಧವಾಯ್ತು. ಆದ್ದರಿಂದ, ತಪಸ್ಸಿನಲ್ಲಿಯೇ ಉದ್ದೇಶವನ್ನಿಟ್ಟುಕೊಡು ಸುಪ್ತವಾಗಿ ದ್ರೌಪದಿ ಹೇಳಿದ ಈ ಎರಡು ವಿಷಯಗಳನ್ನು ಅಳವಡಿಸಿಕೊಂಡು ಮುಂದೆ ಸಾಗ್ತೇನೆ... ಎಲ್ಲಿಗೆ?

ತಪಸ್ಸಿಗೆ ಯೆಲ್ಲಿಗೆ ಹೋಗೋದು? ಈ ಕಾಮ್ಯಕಾವನದಿಂದ ಉತ್ತರಕ್ಕೆ ನಮ್ಮ ಉತ್ತರೋತ್ತರಕ್ಕೆ ಇದೇ ಸರಿ. ನಮ್ಮ ಅಭಿವೃದ್ಧಿಗಾಗಿ ಹೋಗುವ ನಾವು, ನಮ್ಮ ಮನೆಯಿಂದ ಉತ್ತರಾಭಿಮುಖವಾಗಿ ಹೋಗಬೇಕು ಎಂಬ ಲಕ್ಷಣಶಾಸ್ತ್ರವೂ ಇರುತ್ತಾ, ಇನ್ನು ಶಿವನ ಕುರಿತು ಹುಡುಕುತ್ತ ಹೋಗುವಾಗ ಉತ್ತರವೂ ಅತ್ಯಂತ ಎತ್ತರವೂ ಆದಂತಹ ಯಾವ ಕೈಲಾಸ ಪ್ರದೇಶ ಇದೆ ಅದನ್ನೇ ಲಕ್ಷವಾಗಿ ಇಟ್ಟುಕೊಂಡಿರಬೇಕು. ನಿರಾಕಾರ ನಿರ್ಗುಣನಾದಂತಹ ಪರಬ್ರಹ್ಮ ಸ್ವರೂಪಿಯಾದ ಈಶನನ್ನು ಒಲಿಸಬೇಕಿದ್ರೆ, ಕ್ಷೇತ್ರ ಬೇಡ, ದಿಕ್ಕೂ ಬೇಡ. ಆದರೆ ನಾವು ಸಗುಣೋಪಾಸಕರಾಗಿ ದೇವರ ಮಹಾಪ್ರಸಾದ ಸ್ವೀಕರಿಸುವದಕ್ಕೆ ಹೋಗುವ ಭಕ್ತರಾದ್ದರಿಂದ, ನಮಗೊಂದು ಕ್ಷೇತ್ರ ಲಕ್ಷವಾಗಿರಬೇಕು. ವ್ಯಾಪಕನಾದಂತಹ ದೇವನನ್ನು ಒಂದು ಕ್ಷೇತ್ರದಲ್ಲಿ ಒಂದು ಪ್ರತ್ಯೇಕ ಪ್ರದೇಶದಲ್ಲಿ ಪ್ರತಿಷ್ಠೆ ಮಾಡಿಕೊಳ್ಳಲೇಬೇಕು. ಇಲ್ಲದಿದ್ರೆ ಲಕ್ಷ್ಯ ಸಾಧಿಸಲಿಕ್ಕಾಗೋದಿಲ್ಲ.

ಕೆಲವೊಮ್ಮೆ ಕೆಲವರು ಹೇಳಿಯಾರು "ದೇವರಿಗೆ ರೂಪ ಇಲ್ಲ, ನಾಮ ಇಲ್ಲ, ಹಾಗಾಗಿ ವಿಗ್ರಹ ಸ್ಥಾಪನೆಯಿಲ್ಲಪ್ಪ, ಅರ್ಥವಿಲ್ಲ ಅಂತ" , ಆದೀತಪ್ಪ ಯಾವುದಾದರೂ ಒಂದು ಲಕ್ಷ್ಯ ಬೇಕೇ ಬೇಕಾಗ್ತದೆ ದೇವರಲ್ಲಿ ಜೀವ ಅನುಸಂಧಾನ ಆಗುವಾಗ, ಯೇನೂ ಇಲ್ಲದಿದ್ರೆ ದೂರದಲ್ಲಿದ್ದ ಒಂದು ಬೆಟ್ಟವಾದರೂ ಬೇಕು; ಇಲ್ಲದಿದ್ರೆ ದೂರದಲಿದ್ದ ಒಂದು ಬಂಡೆ ಕಲ್ಲಾದ್ರೂ, ಬೇಕು. ದೇವರ ಪ್ರಾರ್ಥನೆಗೆ ಒಂದು ದಿಕ್ಕು ಅಂತ ನಿರ್ಣಯಿಸಿಕೊಳ್ಳಬೇಕು ಲಕ್ಷಕ್ಕೆ ಹಾಗಾಗಿ ಆಸ್ತಿಕಮತ ಏನೇನಿದ್ದೀತು ಪ್ರಪಂಚದಲ್ಲಿ ಅವರೆಲ್ಲ ಒಂದಲ್ಲ ಒಂದು ಥರದ ಸಗುಣೋಪಾಸನೆಯನ್ನು ಮಾಡುವಾಗ ಒಂದು ವಿಗ್ರಹವನ್ನು ಸ್ಥಾಪಿಸಿಯೇ ಸ್ಥಾಪಿಸ್ತಾರೆ. ನಾವು ಆಕೃತಿಯನ್ನು ಕಲ್ಪಿಸ್ತೇವೆ. ಕೆಲವರು ಆಕೃತಿಯನ್ನು ಕಲ್ಪಿಸೋದಿಲ್ಲ. ಆದರೂ ಒಂದು ಲಕ್ಷ ಸ್ಥಾನ ಉಂಟು. ಇದು ಪ್ರಪಂಚದಲ್ಲಿ ಆಸ್ತಿಕ ಮತದಲ್ಲಿದ್ದ ರಹಸ್ಯ ಅಂತ ನಾನು ಕೇಳಿದ್ದೇನೆ ತಿಳಿದವರಿಂದ, ನಮ್ಮ ದೃಷ್ಟಿಯಲ್ಲಿ ಕೈಲಾಸ ಎಲ್ಲಿದೆ?

ಹಿಮವತ್‌ಪರ್ವತದ ತುತ್ತತುದಿಯಲ್ಲಿ ಗೌರೀಶಂಕರ ಶಿಖರದಲ್ಲಿದೆ. ಅದು ಕೈಲಾಸ. ಇನ್ನೂ ಒಂದು ವೇದಾಂತದಲ್ಲಿ ಮಾತುಂಟು - "ಮಾನಸ ಸರೋವರದ ತಪ್ಪಲಲ್ಲಿಯೇ

ಗೌರೀಶಂಕರ ಅಂತ” ಅದು ನಮ್ಮ ಮಾನಸ. ನಮ್ಮ ಮನಸ್ಸೇ ಮಾನಸ ಎಂಬಂತಹ ವಿಶಾಲವಾದ ಸರೋವರ, ಸಾಗರೋಪಮವಾದಂತಹ ಮಹಾ ಸರೋವರ, ಅದರ ತುದಿಯಲ್ಲೇ ಕೈಲಾಸವಾಸಿಯಾದ ಶಂಕರನ ಆವಾಸ ಇದೆ ಎಂಬ ನಮ್ಮ ಪೌರಾಣಿಕ ಕಲ್ಪನೆ, ಹೀಗೆ ಧ್ವನಿಪೂರ್ಣವಾಗಿಯೂ ಅಕ್ಷರಾರ್ಥವಾಗಿಯೂ, ಸಗುಣ ನಿರ್ಗುಣ ಎಂಬ ಪ್ರಭೇದದಿಂದ ವರ್ಣಿಸಲ್ಪಟ್ಟಿರುವದರಿಂದ ಶಿವನನ್ನು ವಲಿಸಲಿಕ್ಕೆ ಯೆಲ್ಲರೂ ಹಿಮಾಲಯವನ್ನು ಏರಿದರು ಎಂತಲೇ ಗತಕಾಲದ ಇತಿಹಾಸದ ವರದಿಯನ್ನು ನಾವು ಕೇಳ್ತೇವೆ. ಅದಕ್ಕಾಗಿ ಹೋಗ್ತೇನೆ ಹೋಗ್ತೇನೆ....

ಆದರೆ? ಹಿಮಾಲಯ ಪರ್ವತ ಹೌದು! ಆದರೆ ಅಷ್ಟು ಯೆತ್ತರಕ್ಕೆ ಯೇರಲಿಕ್ಕೆ ನನಗೆ ಕಷ್ಟಸಾಧ್ಯ ಅಂತ ತೋರ್ತದೆ. ಇಲ್ಲಿಗೆ ಬಂದು ಮುಟ್ಟುವಾಗ ಇದು ಕೈಲಾಸದ ತಪ್ಪಲು ಪ್ರದೇಶ. ಈ ತಪ್ಪಲು ಪ್ರದೇಶದಲ್ಲಿ ಉಪಾಸನೆ ಮಾಡಬಹುದೆ? ಅದೇನು? ಅಶರೀರವಾಣಿ!! “ಹೌದು ಹೌದು ಇದೇ ಸುಸ್ಥಳ. ಇಲ್ಲಿಂದ ಸ್ವಲ್ಪ ಮುಂದೆ ಸಾಗು, ದಕ್ಷಿಣಕ್ಕೆ ನೋಡು ಹಾಗೆ ನೋಡುವಾಗ ಎಲ್ಲಿ ಮಹಾನದಿಯಾದ ಬ್ರಹ್ಮಪುತ್ರಾ ಚೆನ್ನಾಗಿ ಗೋಚರಿಸುತ್ತದೆ. ಆ ಬ್ರಹ್ಮಪುತ್ರಾ ನದಿಯ ಉತ್ತರಕ್ಕೆ ಎತ್ತರಕ್ಕೆ ಇದ್ದದ್ದು - ಅದಕ್ಕೆ ಇಂದ್ರಕೀಲ ಅಂತ ಹೆಸರು.

ಆ ಕ್ಷೇತ್ರವನ್ನೇ ಸ್ವೀಕರಿಸಿಕೊ, ಅಲ್ಲಿ ನಿತ್ತು ಉಪಾಸನೆ ಮಾಡು” ಅಂತ ಅಪ್ಪಣೆಯಾಯ್ತಲ್ಲ...!

ಆದ್ದರಿಂದ ಅದು ಎಲ್ಲಿದೆ ಇಂದ್ರಕೀಲ? ನೋಡ್ತೇನೆ.

|*ಸೌರಾಷ್ಟ್ರ-ತ್ರಿವುಡೆ*|| *ದಿವಸ ಮೂರಕ್ಕೊಮ್ಮೆ ಫಲವನು/ ಸವಿಯುತಿರ್ದನು ಮೊದಲು ತದುಪರಿ*

*ದಿವಸ ವಾರಕೆ ಫಲವ ಕೊಳ್ಳುತ* | *ಶಿವನ ಭಜಿಸೆ* || ೬ |

ಹೌದು ! ಬಂದೆ, ದೇಹ, ಬುದ್ಧಿ, ಚಿತ್ತ, ಬುದ್ಧಿಗೆ ಬೇಕಾದ ಕ್ರಿಯಾಂಗಗಳನ್ನು ಪೂರೈಸಿದೆ. ಈಗ ಒಂದು ಆಸನ ಬೇಕು... ಯಾವ ಥರದ ಆಸನವನ್ನು ನಾನೀಗ ಅಂಗೀಕರಿಸಲಿ? ನಮಗೆ ಯೋಗಶಾಸ್ತ್ರದಲ್ಲಿ ಪಾಠ ಸ್ವಲ್ಪ ಆಗ್ಯದೇ ಹೊರತು ಯೋಗಾಭ್ಯಾಸದ ಪಾಠಯೇನೂ ಆಗಲಿಲ್ಲ. ಹೌದು ಹೌದು ನನ್ನ ಈ ತಪಸ್ಸಿಗೆ ಒಂದು ಅವಧಿಯ ನಿರ್ಣಯವೂ ಇದೆ. ವೇದವ್ಯಾಸರು ಹೇಳಿದ್ದಾರಂತೆ “ಹನ್ನೆರಡು ತಿಂಗಳಲ್ಲಿ ಇದನ್ನು ಸಾಧಿಸಿಕೊಂಡು ಬರಬೇಕು”.

ಶಿವ ಪ್ರತ್ಯಕ್ಷನಾಗುವವರೆಗೆ ನಾನು ತಪಸ್ಸು ಮಾಡ್ತಾ ಕೂತ್ರೆ ಈ ಇತಿಹಾಸ ಎಷ್ಟು ಶತಮಾನಗಳನ್ನು ದಾಟಿ ಬಂದೀತೋ ಯಾರಿಗೆ ಗೊತ್ತು! ಇದು ಹೇಗೆ ಅಂತಂದ್ರೆ, ಸಮಸ್ಯೆ ಸದ್ಯೋಜಾತವಾದದ್ದು. ಕೌರವರಿಗೂ ಪಾಂಡವರಿಗೂ ಇದಕ್ಕೊಂದು

ಪರಿಮಾರ್ಜನೆಯನ್ನು ಕಾಣುವದೂ ಸದ್ಯದಲ್ಲೇ. ವನವಾಸದಲ್ಲಿಯೇ ಕೆಲವು ವರ್ಷಗಳು ಸಂದು ಹೋದವು! ಇನ್ನು ಉಳಿದ ವರ್ಷದ ಕೊನೆಗೆ ಯುದ್ಧ ಆರಂಭವಾಗಿಯೇ ಆಗ್ತದೆ. ಅಷ್ಟು ಹೊತ್ತಿಗೆ ಈ ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡಕೊಂಡು ಬರಬೇಕು. ಅತ್ಯಂತ ಶೀಘ್ರಗಾಮಿಯಾದ ತಪಸ್ಸಾಗಬೇಕಿದ್ರೆ... ಹೌದು... ಶಾಸ್ತ್ರ ಒಪ್‌ತದೋ ಇಲ್‌ವೋ ಗೊತ್ತಿಲ್ಲ ಆದರೆ ಹಟಯೋಗ ಅನ್ನುವದು ಅದು ಯಾವ ಅವಧಿ ಎಂಬ ತೀರ್ಮಾನದಲ್ಲಲ್ಲ. ಮೂರು ದಿನಗಳಲ್ಲಿ ದೇವರು ಒಲಿಯಬಹುದು. ಮೂರು ತಿಂಗಳಲ್ಲಿಯೂ ದೇವರು ಒಲಿಯಬಹುದು. ಇದೊಂಥರದ ರಜೋಮಾರ್ಗ, ನಾವು ಕೇಳಿದ್ದೇವೆ - ಧ್ರುವಕುಮಾರ ಆತನಿಗೇನು ಮಂತ್ರೋಪದೇಶ? ಅವನಿಗೇನು ತಪಸ್ಸು? ಯೇನು ಅಭ್ಯಾಸ? ಯೇನೂ ಇಲ್ಲ. ಶೃದ್ಧೆ "ಓಂ ನಮೋ ಭಗವತೇ ವಾಸುದೇವಾಯ" -ನಾರದರಿಂದ ಉಪದಿಷ್ಟವಾದದ್ದು. ಆ ಉಪದೇಶ ಪಡೆವಾಗ ಶಾಸೊಕ್ತವಾಗಿ ಒಬ್ಬ ಶಿಷ್ಯನು ಎಷ್ಟು ತಯಾರಾಗೇಕು ಎಂಬ ಕಟ್ಟಪ್ಪಣೆ ಇಲ್ಲ. ನನಗೂ ಹಾಗೇ ಶಿವಮಂತ್ರದ ಉಪದೇಶ. ನಾನೇನು ಬ್ರಹ್ಮಚರ್ಯ, ಇನ್ನೊಂದು ಮತ್ತೊಂದು ಅದೆಲ್ಲ ಅನುಷ್ಠಾನಯೇನೂ ಮಾಡಿದವನಲ್ಲ. ದೇಹಧರ್ಮವನ್ನು ಮೀರಿ ನಿತ್ತವನೂ ಅಲ್ಲ. ರಾಜೋಚಿತವಾದ ಭೋಗವನ್ನು ಐಶ್ವರ್ಯ ಇದ್ದಾವಾಗ ನಾನು ಚೆನ್ನಾಗಿ ಉಂಡವನು.

ಪಾಂಚಾಲಿ ಮಾತ್ರವೋ? ಸುಭದ್ರೆ ಮತ್ತೆ ನಮ್ಮ ತೀರ್ಥಯಾತ್ರೆಯಲ್ಲಿ ಅಲ್ಲಲ್ಲಿ... ಯೆಲ್ಲವೂ ಹೌದು, ಹಾಗಿದ್ದರೆ ನನಗೆ ಮಂತ್ರೋಪದೇಶವಾಗಿದೆ ಧ್ರುವನಿಗಾದ ಹಾಗೆ. ಧ್ರುವನಿಗೆ ಕೇವಲ ಆರು ತಿಂಗಳಲ್ಲಿ ಭಗವಂತ ವಲಿದ ಅಂತ ಕೇಳಿದ ನೆನಪು. ನನಗೆ ಅದು ಹಟಯೋಗ. ಇನ್ನು ರಾಕ್ಷಸರದ್ದೆಲ್ಲಾ ಯೋಗ ತಪಸ್ಸುಂಟು ಅದಕ್ಕೆ ಹಟಯೋಗ ಅಂತ ಹೇಳೋದಿಲ್ಲ ಮತ್ತೆ? ಅದು ತಮೋಗುಣದ ಆಸುರೀ ಸ್ವಭಾವದ ತಾಂತ್ರಿಕವಾದಂತಹ ತಪಸ್ಸು. ಅದು ನಮಗೆ ನಿಷೇಧ, ತಲೆಕಡೀತೇನೆ, ಕೈಕಡೀತೇನೆ, ರಕ್ತ ಸುರಿಸ್ತೇನೆ. ನಾವು ನಮ್ಮ ಹೃದಯವನ್ನು ಸಮರ್ಪಿಸುವದು ಭಗವಂತನಿಗೆ, ಈ ಮಾಧ್ಯಮದಲ್ಲಿ ಒಂದು ವರ್ಷದೊಳಗೆ ನಾನೀಗ ಸಾಧಿಸಬೇಕು. ಅದಕ್ಕೆ ಬೇಕಾಗಿ ಇತರ ಶಾಸ್ತ್ರೀಯ ನಿಯಮ ಅಲ್ಲ. ನಾನು ಯಾವಾಗಲೂ ಎಚ್ಚರತಪ್‌ಬಾರದು. ಮನಸ್ಸಿನಲ್ಲಾಗಲಿ ದೇಹದಲ್ಲಾಗಲಿ ಜಡತ್ವವನ್ನು ಆಲಸ್ಯವನ್ನು ನಿದ್ರೆಯನ್ನು ನಿಯಂತ್ರಿಸಿ ಕೊಳ್ಳಬೇಕು. ನಿದ್ರೆಯನ್ನು ನಿಯಂತ್ರಿಸುವದಕ್ಕಿದ್ದ ಆಸನ ಸಾರ್ವತ್ರಿಕವಾಗಿ ನಮ್ಮಲ್ಲಿ ನಿತ್ತುಕೊಂಡೇ ಇರುವುದು. ನನ್ನಂಥವನಿಗೆ ನಿದ್ರೆಯನ್ನು ಜಯಿಸಲಿಕ್ಕೆ ಇದೊಳ್ಳೆ ಆಸನ. ಮತ್ತೆ ಕೆಲವರು ಹೇಳಿಯಾರು ಒಂದುಕಾಲಿನಲ್ಲಿ ನಿಲ್ಲಬೇಕು ಇತ್ಯಾದಿ ಇತ್ಯಾದಿ - ಅದು ನೋಡೋಣ. ಅದು ಒಂದೇನೂ ಅಭ್ಯಾಸಕ್ಕೆ ಬರೋದಿಲ್ಲ. ಸದ್ಯ ಸ್ಥಿರ ಹೆಜ್ಜೆಯಲ್ಲಿ ನಿತ್ತೆ, ಅಂದರೆ ಇಲ್ಲಿಂದ ಹಿಂದೆ, ಶಿವ ಬಾರದ ವಿನ: ಹೋಗೋದಿಲ್ಲ, ನನ್ನ ಗಡಿ ಇದು. ಇಲ್ಲಿಯವರೇಗೆ ಶಿವ ಇಳಿದು ಬರಬೇಕು.

ಆದರೆ ಒಂದು.... ದೇಹಕ್ಕೆ ಅನ್ನದಿಂದ ಆಲಸ್ಯ ಉಂಟಾಗ್ತದೆ. ಹಾಗಾಗಿ ಆದಷ್ಟು, ದೇಹ ಉಳಿಯುವದಕ್ಕೆ ಬೇಕಾಗಿ ಅನ್ನ ಸತ್ವವುಳ್ಳದ್ದನ್ನು ನಾವು ತಕ್ಕೊಂಡ್ರಾಯ್ತು. ನಮ್ಮ

ಋಷಿಮುನಿಗಳು ಹೇಳಿದ್ರು ಅನ್ನಸತ್ವವುಳ್ಳದ್ದು ಹೆಚ್ಚಿಗೆ ವನಸ್ಪತಿಗಳಲ್ಲಿ, ಕೆಲವು ವಿಶಿಷ್ಟವಾದ ಎಲೆಗಳಲ್ಲಿ, ರಾಜೋಚಿತವಾದದ್ದರಲ್ಲಿ ಸತ್ವ ಉಂಟು ಆದರೆ ರುಚಿಯೂ ಉಂಟು! ಷಡ್ರಸ ಉಂಟು ಅದು ನಾಲಿಗೆಯನ್ನು ದಾಸ್ಯಕ್ಕೆ ತಳ್ತದೆ. ವನವಾಸಿಗಳಾದ ನಮಗೂ ಕೆಲವೊಮ್ಮೆ ಹಾಗೆ ಆಗಿದೆ. ಎಷ್ಟೋಸಲ ಗೆಡ್ಡೆ ಗೆಣಸು, ಕೆಲವು ಚಿಗುರೆಲೆಗಳು, ನೋಡೋಣ ಇಂದ್ರಿಯವನ್ನು ಉದ್ರೇಕಿಸದ, ಶರೀರವನ್ನು ಬೆಳೆಸದ ಮೇಧಸ್ಸನ್ನು ತುಂಬಿಸದ, ಶರೀರವನ್ನು ಆದಷ್ಟು ಶೋಷಿಸುವ ಸತ್ವವುಳ್ಳ ಎಲೆಗಳನ್ನು ತಿನ್ನುವದಕ್ಕೆ ಅಭ್ಯಾಸ ಮಾಡಿದೆ. ಪ್ರಾರಂಭಕ್ಕೆ ದಿನಕ್ಕೊಂದು ಮೂರು ಎಲೆಯಂತೆ ಮತ್ತೊಂದು ವಾರ ಬಂದಾವಾಗ ಒಂದೆಲೆಯಂತೆ. ಹಾ ಅದೊಳೆದಾಯ್ತು ಈ ಒಂದೆಲೆ ಅಮೃತ ತುಲ್ಯವಾದದ್ದಂತೆ.

ಈಗ ಮೂರು ದಿವಸಕ್ಕೆ ಒಮ್ಮೊಮ್ಮೆ ಒಂದೆಲೆ.

ಅದೂ ಸಾಕಾಗೋದಿಲ್ಲ ಅಂತಾದ್ರೆ ಆರು ದಿವಸಕ್ಕೊಮ್ಮೆ, ಒಂದು ತ್ಯಾಗದ ರಹಸ್ಯ ಅದು, ಜಿತೇಂದ್ರಿಯದ ರಹಸ್ಯ ಅದು. ಉಗುರು ಬೆಳೆದು ಬಂದಾವಾಗ ಕತ್ತರಿಸಬೇಕು. ಆ ಬೆಳೆದ ಭಾಗ ಎಷ್ಟು ಅಷ್ಟು ಕತ್ತರಿಸಬೇಕೇ ವಿನ: ಉಗುರು ಬುಡದಿಂದ ಕತ್ತರಿಸಿದರೆ! ಹಾಗಾಗಿಯೇ ನಮ್ಮಲ್ಲಿ ಕೆಲವರು ಯೋಗಾಭ್ಯಾಸ ಅಂತ ಹೇಳಿ, ಬರೇ ಗಾಳಿ ತುಂಬಿಸಿಕೊಳ್ತಾ ಒಳಗೆ ಇದದ್ದನ್ನು ಕಳಕೊಂಡು ಆಗಬೇಕಾದಲ್ಲಿಗೂ ಮುಟ್ಟದೆ ಕೆಲವರು ತಲೆಕೆಟ್ಟು ಹುಚ್ಚರೂ ಆಗಿದ್ದಾರೆ...! ಆಲೋಚಿಸುತ್ತಾ ಆಲೋಚಿಸುತ್ತಾ ಈ ರೀತಿ ನಾನು ಬೆಳೆದು ಬಂದಾವಾಗ ತಿಂಗಳು ಮೂರು ದಾಟಿದ್ದು ಗೊತ್ತಾಗಲಿಲ್ಲ! ಇನ್ನೇನು ಮಾಡೋಣ?

| ಸೌರಾಷ್ಟ್ರ- ತ್ರಿವುಡೆ | ಮತ್ತೆ ತರಗೆಲೆಯಿಂದ ದಿನಗಳ | ನುತ್ತರಿಸುತಿರುತಿರ್ದು ಬಳಿಕಾ | ಚಿತ್ತ

ಶುದ್ಧಿಯೊಳಿರ್ದ ಶ್ವಾಸಮ | ರುತ್ತನಾಗಿ || ೭೪ ||

ಜಗಧೀಶ್ವರಿಯಾದಂತಹ ಪಾರ್ವತಿ ಶಿವನನ್ನು ಪಡೆಯುವದಕ್ಕೆ ಬೇಕಾಗಿ ಹೀಗೇ ಮಾಡಿದ್ದಂತೆ. ಆಕೆ ಕೇವಲ ಒಣಮರದಿಂದ ಬಿದ್ದ ಎಲೆಯನ್ನು ಅದೂ ಕೂಡಾ ತನ್ನ ಪಾದ ಮೂಲಕ್ಕೆ ಬಿದ್ದದ್ದನ್ನು ಸೇವಿಸಿದಳಂತೆ! ಕೊನೆಗೆ ಅದನ್ನೂ ಬಿಟ್ಟಳಂತೆ !! ಹಾಗಾಗಿ "ಅಪರ್ಣಾ" ಅಂತ ಅವಳಿಗೆ ಹೆಸರಾಯ್ತು! ಶುದ್ಧ ವೃತ್ತಿಯಿಂದ ಅದನ್ನು ಪಡೆಯಬೇಕು ಅಂತ ಹೊರಟವನಿಗೆ ಆವಾಗಲೇ ತೊಡಗ್ತದೆ ದೈವಾನುಗ್ರಹ.

ಈಗ ಇನ್ನದೇ ಅಭ್ಯಾಸ, ನಾನೂ ಅಪರ್ಣಾವಸ್ಥೆಗೆ ಮುಟ್ಟಬೇಕು. ಕೇವಲ ವಾತಾಶನಶಕ್ತಿ ಬರದೆ.

ಸುಮ್ಮನೆಯೋ ನಮ್ಮ ಋಷಿಮುನಿಗಳು ಮೂಗು ಹಿಡ್ದು ಬರೇ ಪರ್ಣಾಶನರಾಗಿ ಸಾವಿರಾರು ವರ್ಷ ಬದುಕಿದ್ದು? ಎಲ್ಲವೂ ಸತ್ಯ, ಪ್ರಯೋಗ ಮಾಡಿ ಯಾರೂ ನೋಡೋದಿಲ್ಲ.

ಕೆಲವರು ನಂಬಿದರೆ ಗ್ರಂಥವನ್ನು ನಂಬಿ ಬಿಡೋದು ಕೆಲವರು ನಂಬದಿದ್ರೆ "ನಾನು ನಂಬುವದಿಲ್ಲ ನನ್ನ ಅನುಭವಕ್ಕೆ ಬರಲಿಲ್ಲ" ಅಂತ ಹೇಳುವದು. ಹೌದು ಭಾರತೀಯ ಸಿದ್ಧಾಂತ ಬಹಳದೊಡ್ಡು. ಇಲ್ಲದಿದ್ರೆ ಹೇಳಿಯಾರೋ ನಮ್ಮ ಹಿರಿಯರು - "ಶತಮಾನಂ ಭವತಿ ಶತಾಯುಃ" ! ದೀರ್ಘಕಾಲ ಬದುಕಲಿಕ್ಕೆ ಅವರಿಗೆ ಗೊತ್ತಿತ್ತು. ಈಗ ಪ್ರಕೃತಿಯನ್ನು ನೋಡ್ತೇನೆ! ಆ ಹೊತ್ತು ನಾನು ಇಲ್ಲಿ ಬಂದು ಸೇರಿದಾಗ ಹೇಗಿತ್ತೋ ಹಾಗೇ ಹೊಸತನ...!

ಮಧ್ಯದಲ್ಲಿ ಕೆಲವು ಎಲೆಗಳು ಒಣಗಿತ್ತು ಬಿದ್ದಿತ್ತು. ಪುನ: ನಾನು ಬರುವಾಗ ಇಲ್ಲಿ ಹೇಗಿತ್ತೋ ಹಾಗೆ ಇರಬೇಕಿದ್ರೆ.. ಹೆಚ್ಚು ಕಡಿಮೆ ಒಂದು ವರ್ಷಕ್ಕೆ ಹತ್ತಿರ ಹತ್ತಿರ ಆಯ್ತೋ? ಮತ್ತೊಮ್ಮೆ ಅದೇ ಋತು ಬಂತೋ ಈ ಪ್ರದೇಶಕ್ಕೆ? ಬಹುಶ: ಇನ್ನು ಬಹಳದೂರ ಇರಲಿಕ್ಕಿಲ್ಲ ಕೈಲಾಸ ಯಾಕೇ? ಕೈಲಾಸ ವೈಕುಂಠ ಎಲ್ಲ ದೂರಾಗೋದು ನಾವದರಿಂದ ಎಷ್ಟು ದೂರ ಇದ್ದೇವೆ ಎಂಬುದರಿಂದಲೇ ಹೊರತು ನಮಗಿಂತ ಅದು ದೂರ ಅಲ್ಲ.

ಇನ್ನು ಮೂರೇ ಮಂತ್ರ "ಓಂ ನಮ:ಶಿವಾಯ' ಅವರಕೃಪೆಗೆ ಮುಟ್ಟಿದ ಮೇಲೆ ಇದಕ್ಕೇ ಹೇಳೋದು...ಸಮಾಧಿ.

ಸೌರಾಷ್ಟ್ರ-ತ್ರಿವುಡೆ॥ ವರಸಮಾಧಿಯೊಳ್ಳದೆ ದೃಷ್ಟಿಯನಿರಿಸಿ ನಾಸಾಗ್ರದಲ್ಲಿ ಮೇಲ್ಮಗ |

ವಿರಿಸಿ ಭರ್ಗನ ಭಜಿಸುತಿರ್ದನು | ಮರೆದು ತನುವ || ೬೫ ||



ಅಂದರೆ ಸಮಾಧಿ ಸ್ಥಿತಿಯಲ್ಲಿ ಅನ್ನಮಯ ಪ್ರಾಣಮಯ ಮನೋಮಯ ವಿಜ್ಞಾನಮಯ ಆನಂದಮಯ ಈ ಎಲ್ಲಾ ಕೋಶಗಳೂ ಎಚ್ಚರವಾಗಿರೋದು ಜಾಗ್ರತವಾಗಿರೋದಲ್ಲ. ಜಾಗೃತವಾದರೆ ಅದದು ಅದರಲ್ಲಿ ವ್ಯವಹರಿಸ್ತದೆ ಎಚ್ಚರವಾಗಿದ್ರೆ ಕೇವಲ ಆತ್ಮಪ್ರತ್ಯಯವಾಗಿಯೇ ಉಳಿತದೆ. ಈಗ ನನ್ನ ಅನುಭವಕ್ಕೆ ಬಾ ಇದೆ. ನಾನೇನು ನಾನೇನು? ದೇಹ ಅಲ್ಲ ಮನಸ್ಸು ಅಲ್ಲ, ಬುದ್ಧಿ ಅಲ್ಲ, ಚಿತ್ತ ಅಲ್ಲ ಮತ್ತೇನು?

**ಶೀವೋಹಂ ಶಿವೋಹಂ ಶಿವೋಹಂ !!**

## ೧೦ "ಶಿವಾನುಗ್ರಹ"

ಶಿವ

(ಋಷಿಗಳು ಅರ್ಜುನನ ತಪದ ಉರಿತಾಳಲಾರದೆಶಿವನಲ್ಲಿಗೆ ಬಂದು ದೂರಿದರು)

ಸಾಂಗತ್ಯ-ರೂಪಕ॥ ಕಾಲಿಗೆರಗುತಲೆಮ್ಮ ಪಾಲಿಸೆಂದೆನೆ ಮೌನಿ ಜಾಲವ ಕಂಡುಶಂಕರನು

ಏಳಿರೈ ಸಾಕಿನ್ನು ಗೋಳು ಗುಟ್ಟುವುದೇಕೆ | ಪೇಳಿ ಬಂದೆಡರನೆಂದೆನಲು || ೬ |

ಛೇ ಛೇ, | ಸದಾ ನನ್ನ ಧ್ಯಾನನಿರತರಾದ ಋಷಿಮುನಿಗಳು ನೀವು ನನ್ನ ಕಾಲಿಗೆ ಬಿದ್ದಿದ್ದೀರಿ! ಶಿವನಾದ ನನಗೆ ಕಾಲಿಗೆ ಬೀಳಿ ಅಂತ್ಹೇಳುವ ಅಭ್ಯಾಸವೇ ಇಲ್ಲ. ಯೇಳಿ, ಯೇಳಿ ಯೇಳಿಗೆಯ ಕಡೆಗೆ ಮತ್ತಷ್ಟು ಯೇರಿ ಇಂತಹ ಒಂದು ಶುಭಾಕಾಂಕ್ಷೆ. ಊರಿನಲ್ಲಿ ಸ್ಪರ್ಧೆ ಉಂಟಾದಾವಾಗ ಯಾರನ್ನೂ ಹೇಳಿ ಅಂತ ಹೇಳುವ ಮಾತಿರಲಿಕ್ಕಿಲ್ಲ, ಬೀಳಿ ಅಂತಲೇ. ಪ್ರಾಪಂಚಿಕರು ಬೀಳಿಸುವದು ಪ್ರಪಂಚಾತೀತವಾದ ಶಿವಶಕ್ತಿ ದೇವಸನ್ನಿಧಾನ ನಮ್ಮ ಮಹಾಸನ್ನಿಧಾನ ಹೇಳುವದು ಎಲ್ಲರೂ ಯೇಳಿ ಹಾಗಲ್ಲವೇ ಉಪನಿಷದ್ ವಾಕ್ಯ? ಉತ್ತಿಷ್ಠತ - ಏಳೀ ಜಾಗ್ರತ – ಎಚ್ಚರಗೊಳ್ಳಿ ಆಮೇಲೆ "ಪ್ರಾಪ್ಯವರಾನ್ ನಿಬೋಧತ" - ಆ ಮಾತೇ ಇಲ್ಲಿ ಬಂದೀತಷ್ಟೇ, ಯೆದ್ದಿರೋ? ಆsssಮೇಲೆ ಹೇಳಿ, ಯಲ್ಲಿಂದ ಬಂದಿರಿ! ಯಾಕೆ ಬಂದಿರಿ? ಯೇನಾಯ್ತು ನಿಮಗೆ? ಕೇಳೋಣ. ಆದರೆ ಅ ವ್ಯಕ್ತಿತ್ವದಿಂದ ನಿಮಗಾದ ಪರಿಣಾಮಯೇನು? ಅಲ್ಲಿ ಕುಳಿತವನು ಅವನೋ, ಅವಳೋ, ಅದೋ ಎಂಬುದಲ್ಲ; ನೀವೇನು ಅಂತ ನಿಮಗೆ ಪ್ರಜ್ಞೆ ಇದೆ ತಾನೇ? ನಿಮಗೆ ಅವನು ಇರುತ್ತಾ ಆದ ಸಂವೇದನೆಯೇನು?

"ಉರಿ" ನಿಮಗೆ? ಹಾಗಾದರೆ ರೂಢಿಯಲ್ಲಿ ಹೇಳುವ ಹಾಗೆ ತಪೋಜ್ವಾಲೆ, ಅದು ಬಾಕಿದ್ದವರಿಗೆ ಉರಿ ಉಂಟು ಮಾಡ್ತದೆ. ಬಾಕಿದ್ದವರಿಗೆ ಅಂದರೆ ಊರಿನವರಿಗಲ್ಲ. ಯಾವನಾದರೊಬ್ಬ ತಪಸ್ವಿ ಸಿದ್ಧನಾಗುವ ಹೊತ್ತಿನಲ್ಲಿ ಅವನ ಮೈಯಿಂದ ಹೊರಡುತ್ತಿರುವ ಯಾವುದೋ ಒಂದು ಪ್ರಭಾವಳಿ ಅದು ಬಾಕಿದ್ದ ಪ್ರಕೃತಿಯನ್ನು ಸುಡುವದಿಲ್ಲವಲ್ಲ! ಈಗ ನೀವು ವಾಸ ಮಾಡಿದ ವನದಲ್ಲಿ ಯೆಲೆ ಸುಡ್ಡಿಲ್ಲ; ಮರ ಸುಡ್ಡಿಲ್ಲ, ಹುಲ್ಲು ಸುಡ್ಡಿಲ್ಲ ಮೃಗ ಪಕ್ಷಿ ಕ್ರಿಮಿ ಕಿಟಾದಿಗಳು ಸುಡಲಿಲ್ಲ. ಇನ್ನು ಅದೇ ಕಾಡಿನಲ್ಲಿದ್ದ ಎಷ್ಟೋ ಕಾಡಿನ ಮನುಷ್ಯರಿಗೂ ಸುಡುವದಿಲ್ಲ. ನಿಮ್ಮಂಥ ಋಷಿ ಮುನಿಗಳಿಗೆ ಅದು ಸುಡ್ತದೆ ಎಂಬುದರಿಂದ ನೀವೂ ಕೂಡಾ ಸಜಾತೀಯರಾಗಿದ್ದೀರಿ ಅಂತ ಅರ್ಥ. ಅಂದರೆ ಅಲ್ಲಿ ಯಾವನು ಕುಳಿತು ತಪ:ಸಿದ್ಧನಾಗಿದ್ದಾನೋ ಅವನ ಮಾರ್ಗದಲ್ಲಿಯೇ ನೀವು ಸಜಾತೀಯವಾದಂತಹ ಚಿತ್ತವೃತ್ತಿಉಳ್ಳವರಾಗಿ ನಿಮ್ಮ ಜೀವನವನ್ನು ನೀವು ರೂಪಿಸಿಕೊಂಡಿದ್ದೀರಿ ಅಂತ ಅರ್ಥ. ಆದ ಕಾರಣ ನಿಮ್ಮಲ್ಲಿ ಕೃತಾರ್ಥತೆಯೇ ಉಂಟು; ಅದು ಸ್ವಲ್ಪ ಹೆಚ್ಚಾಗದೆ ಅಂತ ಅರ್ಥ.

ಈ ಕಣ್ಣಿದ್ದವನಿಗೆ ಮಾತ್ರ ಸೂರ್ಯದರ್ಶನವಾಗ್ತದೆ. ಆದರೆ ಕಣ್ಣಿನ ಅಭ್ಯಾಸದ ಬಲದ ಏರುಪೇರುಗಳು ಉಂಟಾದರೆ ಕೆಲವರಿಗೆ ಬಹಳ ದೂರದಿಂದಲೇ ಸೂರ್ಯದರ್ಶನ ಮಾಡಲಿಕ್ಕೆ ಸಾಮರ್ಥ್ಯ ಇರೋದು. ಸೂರ್ಯನನ್ನು ಬಹಳ ಹತ್ತಿರದಿಂದ ಕಾಣುವವರಿಗೆ ಮಾತ್ರವೇ ಸೂರ್ಯನ ಪ್ರಖರ ಕಿರಣ ಯೇನು ಅಂತ ಇಂದ್ರಿಯಕ್ಕೆ ಅನುಭವವಾಗ್ತದೆ. ಹಾಗೆ, ತಪಸ್ಸಿನಿಂದ ಉಂಟಾಗತಕ್ಕ ಯಾವ ಜ್ವಾಲೆ ಇದೆ ಅದು ಆ ತಪೋಜ್ವಾಲೆಯ ಹತ್ತಿರ ಹೋದವರಿಗೆ ಮಾತ್ರ ಹೆಚ್ಚೆಚ್ಚು ಹೆಚ್ಚೆಚ್ಚು ಬಿಸಿಯಾಗೋದು; ಬಾಕಿದ್ದವರೆಲ್ಲ ತಣ್ಣಗೇ ಇದ್ದಾರೆ. ನಿಮಗಿಂತ ಹೆಚ್ಚು ಪ್ರಬುದ್ಧ ಸಿದ್ಧ ಅವನು ಅಂತ ಗೊತ್ತಾಯ್ತು. ಮತ್ತೆ ಇನ್ನೂ ಒಂದು ಉಂಟು - ಈ ತಪಸ್ಸಿನ ಉದ್ದೇಶ ವ್ಯತ್ಯಾಸ ಆಗೋದು; ಇದಾಗುವಾಗ ಸಾಮವೇದಿಯೊಬ್ಬ ಸಾಮವೇದವನ್ನು ಉಚ್ಚರಿಸುವಾಗ ಯಜುರ್ವೇದ ಮಾತ್ರ ಕಲ್ಲವನಿಗೆ ಅದು ಕಿರಿಕಿರಿ ಉಂಟು ಮಾಡ್ತದೆ. ಇವರಿಬ್ಬರೂ ಯಜುರ್ವೇದಿಯೂ ಸಾಮವೇದಿಯೂ ಅವರವರ ವೇದವನ್ನು ಅವರವರ ಸಂಪ್ರದಾಯದಲ್ಲಿ ಉಚ್ಚರಿಸುವಾಗ ಋಗೇದಿಗೆ ತಲೆಕೆಡ್ತಿದೆ. ಆದರೆ ಘನಪಾಠಿ ಅಂತ ಒಬ್ಬ  ಇದ್ದಾನೆ - ಸಿದ್ಧ. ಅವ ಋಗ್ವದವನ್ನೂ ಬಲ್ಲ ಯಜುರ್ವೇದವನ್ನೂ ಬಲ್ಲ ಸಾಮವೇದವನ್ನೂ ಬಲ್ಲ; ಮೂವರೂ ಅವರವರ ವೇದವನ್ನು ಉಚ್ಚರಿಸುವಾಗ ಇವನಿಗೆ ಉಪದ್ರ ಆಗುವದಿಲ್ಲ. ಇದೊಂದು ಉದಾಹರಣೆ. ಹಾಗೇ ಈ ತಪಸ್ವಿಗಳಲ್ಲಿಯೂ ಕೂಡಾ ವಿಭಿನ್ನತಾ ಮನೋವೃತ್ತಿಯವರಿದ್ರೆ ಮತ್ತೊಬ್ಬನಿದ್ದು ಇವನಿಗೆ ಉಪದ್ರ ಆಗ್ತದೆ. ಹಿಂಸೆಯೂ ಆಗ್ತದೆ. ಇರಲಿ, ಅವ ಪಕ್ವಾವಸ್ಥೆಗೆ ಮುಟ್ಟಿದವ. ನೀವು ಅದೇ ಪ್ರದೇಶದಲ್ಲಿದ್ದು ನೀವು ಮಾಡುವ ಯಜನವೋ, ಯಾಜನವೋ, ತಪಸ್ಸೇ ಅದು ಆ ತಪಸ್ವಿಗೆ ಬಾಧಕ ಆಗಲಿಲ್ಲ. ಅವನು ತಿರುಗಾಡೋದಿಲ್ಲ! ನೀವು ಅಲ್ಲಿ ಹೋಗಿ ಮಾತನಾಡಿಸಿದರೂ ಅವ ಮಾತನಾಡೋದಿಲ್ಲ ಅಂದರೆ ಅದರ ಅರ್ಥಯೇನೂ ಅಂತಂದ್ರೆ ಅವ ಪೂರ್ಣತೆಯನ್ನು ಪ್ರಾಪ್ತಿಸಿದ್ದಾನೆ. ನೀವು ಪೂರ್ಣತೆಯ ಹಾದಿಯಲ್ಲಿದ್ದೀರಿ. ಅಲ್ಲಿ ಗುರು ಲಘು ಹೀಗೆ ನಾನು ಗುರುತಿಸಿಕೊಳ್ಳುತ್ತೇನೆ. ಆದ್ದರಿಂದ ಸದ್ಯ ನೀವು ಆ ಮಟ್ಟಕ್ಕೆ ಯೇರದ ವಿನಾ ಅದನ್ನು ಸಹಿಸಿಕೊಳ್ಳುವ ಸಾಮರ್ಥ್ಯವನ್ನು ಪಡಕೊಳ್ಳುದಿಲ್ಲ. ಅದು ಶ್ರೀಘ್ರ ನಿಮಗೆ ಸಿದ್ಧಿಯಾಗುವಂತಹದ್ದೂ ಅಲ್ಲ. ಆವಾಗ ನಿಮ್ಮ ಉಳಿವಿಗಾಗಿಯೂ ಅವನ ತೃಪ್ತಿಗಾಗಿಯೂ ನಾವೇ ಯೇನಾದ್ರೂ ಆಲೋಚಿಸಬೇಕಾಗ್ತದೆ. ಆಲೋಚಿಸ್ತೇನೆ.

ಕಂದಪದ್ಯ|| ಹರನಾಲಿ ಸುತಂತರ್ಯದೊ ಳರಿದೆಮ್ಮವನಾತ ನಂಜದಿರಿ ನೀವವನ |

ತ್ವರಿತದೊಳಲ್ಲಿಂದೆಬ್ಬಿಸಿ | ಯಿರಿಸುವೆ ತವ್ವನದಿ ನಿಮ್ಮನೆಂದೆನೆ ಮಣಿದರ್ ॥ ೬೭ ||

ಋಷಿಗಳೇ, ಅವನು ಯಾರು, ಯಾಕಾಗಿ ತಪಸ್ವಿ ಎಂಬುದನ್ನು ಅಂತರಂಗದಿಂದ ನಾವು ಬಲ್ಲೆವು. ಆದಕಾರಣ ಅವನದ್ದು ಶಿವದರ್ಶನಕ್ಕಿದ್ದಂತಹ ಮಾರ್ಗ ಅದು ವಿಹಂಗಮ ಮಾರ್ಗ. ಅಂದ್ರೆ ಹಕ್ಕಿಯ ಮಾರ್ಗ ಅದರಲ್ಲಿ ಏರುಪೇರಿಲ್ಲ ಅಡ್ಡಾದಿಡ್ಡಿಯಿಲ್ಲ. ನಿಮ್ಮದು ಹಾಗಲ್ಲ. ನಿಮ್ಮದು ಕ್ರಮಾಗತವಾದಂತಹ ಯಾವತ್ತೂ ಮಾರ್ಗ, ಅದು ಸಾಧಾರಣ ರಾಜಮಾರ್ಗದಲ್ಲಿ ಹೋಗುವದು. ಅಲ್ಲಿ ಕೆಲವು ಎತ್ತರ ಇದ್ದೀತು, ಕೆಲವು ತಗ್ಗಿದ್ದೀತು,

ಕೆಲವು ಎಡಕ್ಕೆ ತಿರುಗಬೇಕಾದೀತು, ಕೆಲವು ಬಲಕ್ಕೆ ತಿರುಗಬೇಕಾದೀತು ಲಕ್ಷ್ಯ ಒಂದೇ.

ಈ ವಿಹಂಗಮ ಮಾರ್ಗದವರಿಗೂ, ಈ ಮಾರ್ಗದವರಿಗೂ ನಿರ್ವಾಣವನ್ನು ಮುಟ್ಟುವಲ್ಲಿ ಕಾಲದ ಹೆಚ್ಚು ಕಡಿಮೆ ಉಂಟು. ನಿಮ್ಮದರಲ್ಲಿ ಭಯ ಇಲ್ಲ ಅಪಾಯ ಇಲ್ಲ. ರಾಮಾಯಣದಲ್ಲಿ ನಮಗೆ ಇದು ಉದಾಹರಣೆ ಸಿಕ್ತದೆ. ಆಂಜನೇಯನಿಗೆ ಲಂಕೆಗೆ ಹೋಗಲಿಕ್ಕೆ ಸೇತುವೆ ಬೇಡ, ಶ್ರೀರಾಮಚಂದ್ರಮ ಯೇನ್ ಹೇಳಿದ - 'ಸಾರ್ವತ್ರಿಕವಾದಮಾರ್ಗ ಅಲ್ಲ ಅದು ಅದೊಂದು ವಿಶೇಷ ಮಾರ್ಗ, ಸಾರ್ವತ್ರಿಕವಾದಂತಹ ಹದವಾದ ಋಜುವಾದ ಮಾರ್ಗ - ಸೇತು ಬಂಧನ ಮಾಡೋಣ. ಅದರ ಮೇಲೆ ನಡೆದು ಹೋಗೋಣ' ಆಂಜನೇಯ ರಾತ್ರಿ ಬೆಳಗಾಗುವದರೊಳಗೆ ಲಂಕೆಗೆ ಹೋಗಿ, ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಿ, ಶ್ರೀರಾಮನಲ್ಲಿಗೆ ಬಂದು ಮುಟ್ಟಿದ್ದಾನೆ. ಯಾಕೆಂದರೆ ತಿಂಗಳದ ಅವಧಿಯ ದಿವಸ ಅದು. ರಾಮ ಸೇತುಬಂಧನಮಾಡಿ ಲಂಕೆಗೆ ಮುಟ್ಟಬೇಕಿದ್ರೆ ದಿನ ನಾಲ್ಕಾರು ಸಂದ್ಯದೆ. ಹಾಗೇ ನಿಮ್ಮದು ಆ ರಾಮನ ಸೇತುಬಂಧನದ ಮಾರ್ಗ ಈಗ ಯಾರು ವಿಹಂಗಮ ಮಾರ್ಗದಲ್ಲಿ ಹಾರಿದ್ದಾನೆ ಅವನಿಗೆ ಬೇಗ ಪ್ರತಿಫಲ ಸಿಕ್‌ಬೇಕಾಗ್ತದೆ.

ಅವನು ಯಾವನೇ ಇರಲಿ ಅವನನ್ನು ಅಲ್ಲಿಂದ ನಾನ್ ಎಬ್ಬಿಸ್ತೇನೆ. ಈಗ ಇಲ್ಲಿ ನಾನ್ ಯೇಳಿ ಅಂತ ಹೇಳಿದನಲ್ಲ? ಯೆಲ್ಲಿ ಹೋದ್ರೂ ಯಾರನ್ನು ಕಂಡ್ರೂ ನಮ್ಮ ಶಬ್ದ ಅದೇ. ಅವನನ್ನು ತಪಸ್ಸಿನಿಂದ ಯೆಬ್ಬಿಸಿ ಅವ ಯೆಲ್ಲಿಗೆ ಹೋಗಬೇಕೋ ನಾವ್ ಅಲ್ಲಿಗೇ ಕಳುಹಿಸಿಕೊಡಬೇಕಾದ ಕರ್ತವ್ಯ ಇದ್ದಾಗ ಪರ್ಯಾಯದಿಂದ ನಿಮಗೂ ಲಾಭ ಆಯೋ ಇಲ್ಲೊ? ಆದರೆ ಇನ್ನೊಂದು ಪ್ರಶ್ನೆ ಉಂಟು- ಈಗ ನಿಮ್ಮಂಥವರೆಲ್ಲ ಬಂದೇ ಈ ವರದಿಯನ್ನು ಕೊಟ್ಟು ನಿಮ್ಮ ಕೇಳಿಕೆಯನ್ನು ಮನ್ನಿಸಿ, ಹೋಗಿ, ನಮ್ಮ ಭಕ್ತರನ್ನು ಉದ್ಧರಿಸಬೇಕೋ? ಈಗ ಧ್ರುವನ ಕಥೆಯಲ್ಲೂ ಇದೇ ಪಾಠವನ್ನು ನಾವ್ ಕೇಳ್ತವೆ. ನಾರಾಯಣ ಒಲಿಯಬಹುದು. ಆದರೆ ಆ ಸಂದರ್ಭದಲ್ಲಿಯೂ ಕೂಡ ಎಷ್ಟೋ ಮುನಿಗಳೆಲ್ಲ ಹೋಗಿ ಶ್ರೀಮನ್ನಾರಾಯಣನಿಗೆ ದೂರಿದರಂತೆ "ತಪೋಜ್ವಾಲೆಯಿಂದ ಉರಿವುದು, ಬೇಗ ಅವನನ್ನು ಯೆಬ್ಬಿಸಬೇಕು" ಆವಾಗ ನಾರಾಯಣ ಹೇಳಿದನಂತೆ "ಇಲ್ಲದಿದ್ರೆ ನನ್ನ ಬಗ್ಗೆ ನೀವೇ ನಾಳೆ ಆಕ್ಷೇಪ ಹೇಳಿದರೂ ಹೇಳಿದಿರಿ ನೂರಾರು ವರ್ಷ ನಾವು ತಪಸ್ಸು ಮಾಡ್ತಾ ಇದ್ದೇವೆ ನಮಗೆ ನಾರಾಯಣ ಬಂದ್ ಅನುಗ್ರಹ ಮಾಡಲಿಲ್ಲ. ಇನ್ನೂ ಐದು ವರ್ಷದ ಹಸುಳೆ ಆರು ತಿಂಗಳಲ್ಲಿ ಅವನಿಗೆ ದೇವರು ಪ್ರತ್ಯಕ್ಷನಾದ. ದೇವರು ಪಕ್ಷಪಾತ ತೋರಿದ ಅಂತ ನೀವೇ ಆಕ್ಷೇಪಿಸುವಿರಿ. ಅಂದರೆ ಶಾಸ್ತ್ರದಲ್ಲಿ ಅನುಮಾನ ಬಂದೀತು ಜನರಿಗೆ, ಅದಕ್ಕಾಗಿ ನಿಮ್ಮ ಪ್ರಾರ್ಥನೆ ಆದ ನಂತರವೇ...

ನಿಮ್ಮ ಪ್ರಾರ್ಥನೆಯಿಂದ ಏನಾಗ್ತಿದೆ? ನಿಮಗಿಂತ ಅವ ಪಕ್ವಾವಸ್ಥೆಗೆ ಮುಟ್ಟಿದ್ದಾನೆ. ಅವನ ಹತ್ತಿರ ನಿಮಗೆ ಹೋಗಲಿಕ್ಕಾಗೋದಿಲ್ಲ ಅಂತಂದ್ರೆ ಅವ ಬೆಂಕಿಯ ಕೆಂಡವಾಗಿದ್ದಾನೆ ಅಂತರ್ಥ ಹೌದಲ್ಲ? ಅವನ ಹಿರಿತನವನ್ನು ನೀವು ತಪಸ್ಸಿನಿಂದ ಗುರುತಿಸಿದ್ದೀರಿ. ಹಾಗಾದ್ರೆ ಅವನಿಗೆ ನಾನು ಅನುಗ್ರಹ ಮಾಡೋದು ನೀವೆಲ್ಲಾ ಒಪ್ಪಿ, ಅಂದರೆ ಅವನ ಅರ್ಹತೆಯನ್ನು

ನೀವು ಸಾರ್ವತ್ರಿಕವಾಗಿ ಒಪ್ಪಿದ್ದರಿಂದ ನಿಮ್ಮ ಬೆಂಬಲವೂ ಬೇಕಾಗ್ತದೆ" ಅಂತ ಶ್ರೀಮನ್ನಾರಾಯಣ ಹೇಳಿದ್ದನಂತೆ. ನಾರಾಯಣನ ವೈಖರಿಯೇ ಬೇರೆ, ಅವನ ನಾಟಕವೇ ಬೇರೆ. ಆದರೆ ನಾವು ಅದೇ ಮಾರ್ಗದವರು ತತ್ತ್ವತ: ನಮ್ಮೊಳಗೆ ಅಭೇದ. ಆದ್ರೂ ಕೂಡಾ ಪಾತ್ರದಲ್ಲಿ ಭೇದ ಇದ್ದದ್ದರಿಂದ ನಾವೂ ಆ ಮಾರ್ಗವನ್ನೇ ಅವಲಂಬಿಸುವದು. ನೀವು ಬಂದದ್ದು ಒಳ್ಳೆದಾಯ್ತು. ಯಾಕೆ?

ಅವನಿಗೆ ನಿಮ್ಮದ್ದಾದ ಅನುಮೋದನೆಯೂ ಇದೆ ಅಂತಾಯ್ತು -ಶಿವ ವೊಲಿಯಬೇಕು ಅಂತ. ಇದು ನಿಮ್ಮ ಗೌರವ. ನಿಮ್ಮ ವೊಪ್ಪಿಗೆ, ನಿಮ್ಮ ಪ್ರೋತ್ಸಾಹ ಬಂದಾವಾಗ್ಲೆ ನಾನು ಹೋಗಿದ್ದೇನೆ. ಒಂದು ವರ್ಷದೊಳಗೆ ಅವನಿಗೆ ಅನುಗ್ರಹ ಮಾಡ್ಲಿಕ್ಕೆ ಅಂತ ಹೇಳುವದರಿಂದ ನಿಜವಾದಂತಹ ಶಿವ ತತ್ತ್ವವನ್ನು, ತಪಸ್ಸಿನ ತತ್ತ್ವವನ್ನು ಲೋಕಕ್ಕೆ ತೋರಿಸಿದ ಹಾಗಾಗ್ತದೆ. ನಿಜವಾಗಿ ನಡುವೆ ತಾರತಮ್ಯ ಇಲ್ಲ. ಆದರೆ ಅವಧಿ ನಿರ್ಣಯ ಮಾಡಬೇಕು. ಆದ್ದರಿಂದ ಸರಿ-ಮುಂದಿನ ಕಾರ್ಯಕ್ರಮ ನಮಗೆ. ಆದರೆ ಹೇಗೆ ಅನುಗ್ರಹಿಸ್ತೇವೆ ಅಥವಾ ನಮ್ಮ ಒಂದು ಕಲ್ಲಿನಲ್ಲಿ ಒಂದೇ ಹಣ್ಣು ಬೀಳುವದೋ ಅಲ್ಲ ಮತ್ತೆರಡು ಹಣ್ಣು ಉದುರೀತೋ - ಕಾದು ನೋಡಿ.

ಮಾರವಿ-ಏಕತಾಳ|| `ಲಾಲಿಸು ಧರಣೀ | ಪಾಲಚಿದಾತ್ಮನ | ಲೀಲೆಯನಾ ಶಬ | ರಾಳಿ

ಸಹಿತ ನರ | ನಾಳುತನವ ನೋ | ಜ್ವಾಲೋಚನೆಯನು | ತಾಳುತ

ವರ ಇಂದ್ರ | ಕೀಲ ಪರ್ವತಕ್ಕೆ | ಬಂದರಂದು | ೬೮ ||

ಋಷಿಗಳಿಗೆ ಆಶ್ವಾಸನೆಯನ್ನು ಕೊಟ್ಟಿದ್ದೇನೆ. ಯಾಕೆ? ಸತ್ ಚಿತ್ ಆದಂತಹ ಪರಮಾತ್ಮನ ಆನಂದ ರೂಪ ಅಂತ ಗುರುತಿಸಬೇಕಿದ್ರೆ ಈ ಋಷಿಮುನಿಗಳೇ ಬೇಕಾಗ್ತದೆ. ಇಂತಹ ಸಾಕ್ಷಿ ಕೊಡುವವರು ನಮಗೆ ಇಲ್ಲ ಅಂತಾದ್ರೆ ನಾವೂ ಕೂಡಾ ಮನುಷ್ಯರ ಹಾಗೇ ವ್ಯವಹಾರ ಮಾಡೇವೆ. ನಮಗೂ ಕೂಡಾ ರಾಗದ್ವೇಷಾದಿಗಳು ಉಂಟು ಅಂತ ನಾಳೆ ಪ್ರಚಾರವಾದೀತು! ಮಿಕ್ಕವರು ಮಾಡುವಾಗ ಬುದ್ಧಿಪೂರ್ವಕವಾಗಿ ಪ್ರಕೃತಿ ಸಹಜವಾಗಿ ಈ ಗೊಂದಲದಲ್ಲಿ ಸಿಕ್ಕಿ ತೊಳಲಾಡ್ತಾ ಇದ್ದಾರೆ, ದಾಟುವದಕ್ಕೆ ಸಾಧ್ಯವಿಲ್ಲದೆ. ನಾವು ಮಾಡಿದಾವಾಗ ಅದು ಲೀಲೆ ಆಗಿರ್‍ತದೆ. ಅದು ಬಂಧನವಾಗಿರೋದಿಲ್ಲ. ಯಾವ ಪಾತ್ರವನ್ನು ನಾವು ಧರಿಸಿದ್ದೇವೆ ಎಂಬ ಪ್ರಜ್ಞೆಯಿಂದಲೇ ನಾವು ನಾವಾಗಿದ್ದೇವೆ. ಹಾಗಾಗಿ ನಮ್ಮ ಲೀಲೆಯಲ್ಲಿ, ನಮ್ಮ ಲೌಕಿಕವಾದ ವ್ಯವಹಾರದಲ್ಲಿ, ಪಾತ್ರ ನಿರ್ವಹಣೆಯಲ್ಲಿ ನಮ್ಮತನ ಧಾರಳವಾಗಿ ಇದೆ. ಜ್ಞಾನಿಗಳಿಗೆ - ಅದೇ ನಿಜ. ಈ ಜೀವರು ಹಾಗಲ್ಲ- ಅವರು ವಹಿಸಿದ ಪಾತ್ರವೇ ಅವರಾಗಿ ಬಿಟ್ಟು ತಮ್ಮತನವನ್ನು ಮತ್ತು ಪಾತ್ರ ಆಳುವಲ್ಲಿ ವ್ಯಕ್ತಿಯೇ ಅಳುವುದುಂಟು. ಇಷ್ಟೇ ಅಭಿನಯಕ್ಕೂ ಸಹಜತೆಗೂ ಇದ್ದಂತಹ ವ್ಯತ್ಯಾಸ. ಇದನ್ನು ನಾಳೆ ಗುರುತಿಸಿ ಹೇಳಬೇಕಿದ್ರೆ - ಎಲ್ಲರ ಹಾಗಲ್ಲ ಶಿವನದ್ದಾದಂತಹ ನಾಟಕ. ಅದಕ್ಕೆ ಹೇಳಿದ್ದು ನೋಡ್ತಾ ಇರಿ ದೂರದಿಂದ ಅಂತ. ನಾಳೆ ಯಾರಾದರೂ ಏನಾದರೂ ಅಬದ್ಧ ವಿಮರ್ಶೆ ಮಾಡಿದರೆ

“ಹಾಗಲ್ಲ' ಅಂತ ಹೇಳಲಿಕ್ಕೆ ನೀವಿರಬೇಕು. ಕಾರಣ? ನಮ್ಮ ವ್ಯಕ್ತಿತ್ವ ನಿಮಗೆ ಗೊತ್ತುಂಟು ಋಷಿಗಳಿಗೆ, ನಾವು ಯಾವುದಕ್ಕೂ ಪ್ರತಿಕ್ರಿಯೆಯನ್ನು ಆಶಿಸುವವರೇ ಅಲ್ಲ. ಆ ಪ್ರತಿಕ್ರಿಯೆಗೆ ಅರ್ಥವೇ ಇಲ್ಲ ಅಂತಾದ್ರೆ ನಿಶಬ್ದವೇ ಅದಕ್ಕೆ ಉತ್ತರ. ಮತ್ತೆ ಅವರು ಏನಾದರೂ ಪ್ರತಿಕ್ರಿಯೆಯಲ್ಲಿ ಅರ್ಥ ಉಂಟಾದ್ದು ಹೇಳಿದರೆ ನಾವೆಲ್ಲಿ ತಪ್ಪಿದ್ದೇವೆ ಅಂತ ಆತ್ಮಶೋಧನೆ ಮಾಡುವವರು ಚಿದಾತ್ಮರು.

ಎಲ್ಲ ನನ್ನವರಿಗೆ ಆಜ್ಞೆ ಮಾಡಿದ್ದೇನೆ - ಪಾತ್ರಧಾರಣೆಯಲ್ಲಿ ದೇಶ ಕಾಲ ಇದು ಮುಖ್ಯವಾದದ್ದು. ದೇಶ ಮತ್ತು ಕಾಲ ಪ್ರತಿಯೊಂದು ಕಲೆಯಲ್ಲಿಯೂ ಸೂಕ್ಷ್ಮವಾಗಿ ತನ್ನ ಕೈವಾಡವನ್ನು ಚಿತ್ರಿಸ್ತದೆ. ಹಾಗಾಗಿ ಒಂದು ಆವರಣ ಇಲ್ಲದ ವಿನಾ ಯಾವ ರಂಗವೂ ತಯಾರಾಗುವದಿಲ್ಲ. ಆ ರಾಗದಲ್ಲಿ ನಡೆಸಲ್ಪಡತಕ್ಕ ನಾಟಕ ಪ್ರಾದೇಶಿಕವಾಗಿಯೂ ಇರಬೇಕು. ಆ ಕಾಲಕ್ಕೆ ಅದು ಒಪ್ಪಬೇಕು. ಅರ್ಜುನ ಕೂತಿರುವುದು ಇಂದ್ರಕೀಲದಲ್ಲಿ, ವನಪ್ರದೇಶದಲ್ಲಿ. ಆವಾಗ ನಾವು ಶಿವರೂಪದಿಂದಲೋ ಅಥವಾ ಇನ್ನೊಂದು ರೂಪದಿಂದಲೋ ಹೋದ್ರೆ ಆಗಲಿಕ್ಕಿಲ್ಲ. ಹೋದ್ರೆ, ಬಾಕಿದ್ದವರು “ಇವನೊಬ್ಬ ಪರಕೀಯ ಎಲ್ಲಿಂದ ಬಂದ? ಇವರು ಯಾವ ಊರವು?” ಅಂತ ಕೇಳಹುದು. ನಿಜವಾಗಿ ಅಲ್ಲಿದ್ದಂತಹ ಪ್ರಜೆಗಳಿಗೆ ಸ್ವಕೀಯವಾದ ಶಿವನೇ ಬಂದಿದ್ದಾನೆ. ಶಿವನೇ, ನಮ್ಮವನೇ ಎಂಬ ಭಾವನೆ ಮೂಡಬೇಕು. ಹಾಗಿರುವಾಗ ಇಂದ್ರಕೀಲ ಪರ್ವತದ ಆ ಪ್ರದೇಶದಲ್ಲಿ ಅದೆಷ್ಟೋ ವರ್ಗದವರಿರಬಹುದು. ಅವರ ಕಣ್ಣಿಗೆಲ್ಲ ಶಿವ ಹೇಗೆ ಕಾಣಬೇಕು? ಅವರ ಹಾಗೇ ಕಾಣಬೇಕು. ವೇದಾಂತವೂ ಅಷ್ಟೇ. ಹೇಗೆ? ಶಿವನಿಗೊಂದಾಕ್ರತಿಯಿದೆ, ಪ್ರತಿಯೊಂದು ಭಾವುಕನ ಭಾವದ ಸ್ವರೂಪ ಅದು. ಶಿವನ ಸ್ವಭಾವ ಅಲ್ಲ. ಅದು ಶಿವನಿಗೆ ಸ್ವಭಾವ ಉಂಟಾಗುವದು ಶಿವನನ್ನು ಕಾಣುವ ಕಣ್ಣಿನ ಸ್ವಭಾವಕ್ಕನುಸರಿಸಿಕೊಂಡು,

ಸರಿ ಹಾಗಾದರೆ, ಇದೇ ಬಹಳ ಚೆನ್ನಾಗಿದೆ ಕಿರಾತರೂಪ! ಇದನ್ನು ಕಂಡ್ರೆ ಆ ಪ್ರದೇಶದ ಮೂಲ ನಿವಾಸಿಗಳಿಗೆ ನಮ್ಮವನೇ ಬಂದ ಅಂತ ಗೊತ್ತಾಗ್ತಿದೆ. ಜ್ಞಾನಿಗಳಿಗಂತೂ ಶಿವ ಬಂದ ಅಂತ ಗೊತ್ತಾಗ್ತಿದೆ. ಈ ನಮ್ಮ ಅಭಿನಯದಲ್ಲಿ ಬಹಳ ಕಷ್ಟಾಗೋದು ಅದು - ಸಾರ್ವತ್ರಿಕವಾದ ದಾರ್ಶನಿಕರನ್ನು ನೋಡಿಕೊಂಡು ಎಲ್ಲವರಿಗೂ ತೃಪ್ತಿಯಾಗುವಂತೆ ಅಭಿನಯಿಸಬೇಕು -ಇದಲ್ಲೊ? ಕಿರಾತ ರೂಪವನ್ನು ನಾನು ಧರಿಸಿದೆ. ನಾನು ಧರಿಸುವಾಗ ಹೇಳದೇನೇ, ನೋಡಿ ನನ್ನ ಅರ್ಧಶರೀರೆಯಾದ ಶಕ್ತಿರೂಪಿಣಿಯಾದ ಶಿವೆ, ಅವಳು ತನ್ನಷ್ಟಕ್ಕೇ ಶಬರಿಯಾಗಿದ್ದಾಳೆ. ಕಾರಣ ಇಷ್ಟೆ - ಬಲದ ಮೈ ಹೋದಲ್ಲೇ ಎಡದ ಮೈ ಹೋಗೋದಿಲ್ಲೊ? ಹಾಗಾಗಿ ಶಿವೆ - ಶಿವ ಅವಿನಾಭೇದ, ಕಾಣುವವರ ಕಣ್ಣಿಗೆ ಎಡಭಾಗದಲ್ಲಿ ನೋಡಿದರೆ ಶಿವ ಶಿವೆಯಾಗಿ ಕಾಣಿಸ್ತಾನೆ. ಬಲಭಾಗಕ್ಕೆ ಹೋಗಿ ಶಿವೆಯನ್ನು ನೋಡಿದರೆ ಶಿವನಾಗಿ ಕಾಣಿಸ್ತಾನೆ. ಇದು ಅರ್ಧನಾರೀಶ್ವರನ ಅರಿವು.

ನೋಡಿ – ನಮ್ಮ ಮಕ್ಕಳು ತಯಾರಾದ್ರು! ಷಣ್ಮುಖ, ಗಣಪತಿ ಇದೆಲ್ಲ ಕಿರಾತರದ್ದೇ ಒಂದು ಕುಟುಂಬ ಆಯ್ತು. ನಮ್ಮ ಗಣಗಳಿಗಂತೂ ವೇಷ ತಿರುಗಿಸಲಿಕ್ಕೆ ಕಷ್ಟವೇ ಇಲ್ಲ. ಬಣ್ಣ ಹಾಕದೇ ಯಾವ ರೂಪವನ್ನು ಬೇಕಾದರೂ ತಾಳಿಕೊಳ್ತಾರೆ! ಹೀಗೆ ಕೈಲಾಸ ಪರ್ವತದಿಂದ ಕಿರಾತ ರೂಪವನ್ನು ತಾಳಿಕೊಂಡು, ಮೆಲ್ಲಮೆಲ್ಲನೆ ಹೆಜ್ಜೆ ಹಾಕ್ತಾ... ಯಾಕೆ? ಇಲ್ಲಿಂದ್ದೇ ನಾವು ಕಿರಾತರ ಆರ್ಭಟ ಕೊಟ್ರೆ - ಕೈಲಾಸದಿಂದಲೇ ಕಿರಾತರು ಇಳಿದರು ಅಂತ ಗೊತ್ತಾಗ್ತದೆ. ಅಂತೂ ಯಾರಿಗೂ ಗೊತ್ತಾಗದೆ ಆ ಪ್ರದೇಶದಲ್ಲಿ ಮಾತ್ರ  ಕಿರಾತಶಿವ ಹಾಂ, ಇದೀಗ ನಾನು ಪ್ರದೇಶಕ್ಕೆ ಬಂದ ಹಾಗಾಯ್ತು ಯಾರಾಪ್ಪಾ ನನ್ನವರು?

ಹೋ ಹೋ ಹೋ ಅಲಲಲಲ... ಹೊಡೀ, ಬಡೀ ಕಡಿ

ಕಿರಾತರೇ ಬೇಟೆ ಚೆನ್ನಾಗಿ ಸಾಗ್ಯದೆ ಆದರೆ ಗುಟ್ಟಿನಲ್ಲಿ ನಿಮಗೊಂದ್ ಹೇಳ್ತೇನೆ - ನಮ ನೇಪಥ್ಯದ ಸತ್ಯ ಉಂಟಲ್ಲ? ನೀವೇ ವೇಷ ಕಟ್ಟಿಕೊಂಡು ಇಷ್ಟೆಲ್ಲ ಗುಲ್ಲೆಬ್ಬಿಸಿಕೊಂಡು ಬಂದದ್ದ್ಯಾಕೆ? ಅದು ಆ ವೇಷದ ಮರ್ಯಾದೆ. ಆದರೆ ನಮ್ಮ ನಿಜವಾದ ಮರ್ಯಾದೆಯೇನು? ಅರ್ಜುನನನ್ನು ಕಾಣಿಸಿಕೊಳ್ಳಬೇಕು. ಅದಕ್ಕಿಂತ ಹೆಚ್ಚಿಗೆ ಅದೋ ಅದೋ ಒಂದ್ ಹಂದಿ ಓಡ್ತಾ ಇದ್ಯಲ್ಲ? ಆ ಹಂದಿ ಯಾವುದು ಗೊತ್ತೇ?

'ಮೂಕಾಸುರ'ಎಂಬವ.ಅವ ಅಥರ್ವಣವೇದೋಕ್ತವಾದಂತಹ ಸಾಧನೆಯನ್ನು ಮಾಡಿ ರಾಕ್ಷಸರಿಂದ ಪ್ರಚೋದಿಸಲ್ಪಟ್ಟವನಾಗಿ ಅರ್ಜುನನ್ನೇ ನಾಶ ಮಾಡ್ಲಿಕ್ಕೆ ಬಂದವ! ಬಹುಶ: ಈ ಕೌರವನ ಕಡೆಯಲ್ಲಿ ಆಸುರೀ ಸಂಪತ್ತಿನಿಂದ ಕೆಲವು ತಾಂತ್ರಿಕ ಮಾಂತ್ರಿಕ ಕಾರ್ಯಕ್ರಮಗಳು ನಡೀತಿರಬೇಕು ಅಂತೇನು... ಕಾಮ್ಯಕವನದಲ್ಲಿ ಪಾಂಡವರಿದ್ದಾಗ, ಯಾರೋ ಒಬ್ಬ, ಮಾಟವೋ ಮಾರಣವೋ ಮಾಡಿಕೊಂಡು ಆ ಮಂತ್ರ ದೇವತೆಯನ್ನು ಜಿಂಕೆಯ ಆಕೃತಿಯಲ್ಲಿ ಪರಿವರ್ತನೆಗೊಳಿಸಿ, ಋಷಿಮುನಿಗಳ ಆಶ್ರಮದಿಂದ ಋಷಿಮುನಿಗಳಿಗೆ ಬೇಕಾದಂತಹ ಸದ್ ವಸ್ತುಗಳ ಚೇಲವನ್ನೇ ಕೋಡಿನಲ್ಲಿ ಹೊತ್‌ಕೊಂಡು ಯೇನೋ ಉತ್ಪಾತ ಎಬ್ಬಿಸಿದ್ದಾನೆ ಅಲ್ಲಿ. ಹೌದಲ್ಲ? ಆಮೇಲೆ ಬಾಯಾರಿದಂತಹ ಪಾಂಡವರು ನೀರು ಕುಡಿಯಲಿಕ್ಕೆ ಹೋಗ್ತಾ ಹೋಗ್ತಾ ಒಬ್ಬೊಬ್ಬರಾಗಿ ಸತ್ತರು ಎಂತಲೂ, ಆಮೇಲೆ ಧರ್ಮರಾಯ ಅದೇನೋ ಧರ್ಮ ಪ್ರಜ್ಞೆಯಲ್ಲಿ ಉತ್ತರಿಸಿದ ಮೇಲೆ ಸತ್ತವರು ಎದ್ದರು ಅಂತಲೂ, ಮತ್ತು ಈ ಪ್ರೇತ ಭೂತ ಉಪದ್ರ ಮಾಡ್ತಾ ಇರುವಾಗ ಭಗವಂತನ ಚಕ್ರವಿಶೇಷದಿಂದ, ಯಮನು ಆ ಮಂತ್ರದೇವತೆಯನ್ನು, ಯಾರು ಜಿಂಕೆಯ ರೂಪದಲ್ಲಿ ಆವಾಹಿಸಿ ಕಳುಹಿಸಿದ್ದನೋ ಅವನಲ್ಲಿಗೆ ಆ ಮಂತ್ರ ದೇವತೆಯನ್ನು ತಿರುಗಿಸಿದನಂತೆ. ಯಾರವ ಆ ಮಂತ್ರವಾದ ಮಾಡಿದಾವ... ಕನಕ... ಅವನ ಸಂತಾನ ಮುತ್ತಿ ಹೋಯ್ತು ಅಂತ ನಾವು ಬಲ್ಲೆವು. ಆದ್ದರಿಂದ ಇದು ಮತ್ತೊಂದು, ಮೂಕಾಸುರನಿಗೆ ಮತ್ತೊಂದು ಆ ಸುರೀ ಶಕ್ತಿಯ ಪ್ರಚೋದನೆ. ಯಾವನೋ ಮಂತ್ರವಾದಿ, ಯಾವನೋ ರಾಕ್ಷಸ ಅರ್ಜುನನನ್ನು ಕೊಂದುಬಿಟ್ರೆ ಕೌರವನಿಗೆ ತಪ್ಪಿಯಾಯ್ಯೋ ಇಲ್ವೋ? ಈ ಪಾಂಡವರ ನಾಶಕ್ಕೆ ಬೇಕಾಗಿ, ಶಕುನಿ ತಂತ್ರದಿಂದ

ಯೇನೆಲ್ಲ ಮಾಡ್ತಿದ್ದಾನೆ ಅಂತ ನಮಗೆ ಗೊತ್ತುಂಟು. ಹಾಗಿರುವಾಗ ನಮ್ಮ ಭಕ್ತನಾದ ಅರ್ಜುನನಿಗೆ ಬರತಕ್ಕ ಅತ್ಯಂತ ಕೊನೆಯದ್ದಾದ ಈ ಆಪತ್ತನ್ನು ಮೊತ್ತಮೊದಲು ಸಂಹಾರ ಮಾಡಬೇಕು. ಆಮೇಲೆ ಅರ್ಜುನನಿಗೆ ಅನುಗ್ರಹ ಮಾಡಬೇಕು. ಆದ್ದರಿಂದ ಇದೋ ನೋಡ್ತಾ ಇರಿ, ಹಂದಿಯಾಗಿ ಓಡ್ತಾ ಇದ್ದಾನಲ್ಲ? ಬಹುಶ: ನಮ್ಮ ಆಗಮನದಿಂದ ಇನ್ನು ಉಳಿಗಾಲ ಇಲ್ಲ ಅಂತ ತೋರಿರಬೇಕು. ಆದಕಾರಣ ಬಹಳ ಪ್ರಯತ್ನ ಮಾಡ್ತಾ ಇದ್ದಾನೆ. ಹ್ಯಾಗೆ? ಜಾಗ್ರತ ಚಿತ್ತನಾಗಿ ಇದ್ದು ಆಲಸ್ಯವನ್ನು ಜಯಿಸಿ ಒಂಥರದ ಎಚ್ಚರದಲ್ಲೇ ಇದ್ದಂತಹ ಅರ್ಜುನನ ಕಾಲ ಸಂದಿಗೆ ಹೋಗಿ, ಅಂದರೆ ಅವನನ್ನು ಕೊಲ್ಲುವ ಉದ್ದೇಶದಿಂದ, ನೋಡ್ತಾ ಇರಿ, ಯೆಸೀತೇನೆ ಬಾಣ,

ಭಾಮಿನಿ ಧರಣಿಗುರುಳಿದ ಸೂಕರನ ಶಂ | ಕರನು ಕಂಡರ್ಜುನನ ಧೈರ್ಯವ |

ಪರಿಕಿಸುವ ಬಗೆಯಿಂದ ಬಂದಮ್ಮಾಯುಧದ ಮೊನೆಗೆ ‖ ೬೯ |

ಹೇಗೆ? ಸರಿಯಾದಂತಹ ಒಂದು ವೇದಿಕೆ ನಿರ್ಮಾಣ ಆಯ್ಕೆ ಇಲ್ವೊ? ಪಾರ್ಥನ ಪಾದಮೂಲದಲ್ಲಿ ಸತ್ತು ಬಿದ್ದದೆ ಹಂದಿ, ನನ್ನ ಬಾಣ, ಅವನ ಬಾಣ ಏಕಕಾಲಕ್ಕೆ ಹಂದಿಗೆ ನಾಟ್ಯದೆ! ಇನ್ನೀಗ ಅರ್ಜುನನನ್ನು ಮಾತಾಡಿಸಬೇಕು. ಅರ್ಜುನನನ್ನು ಮಾತಾಡಿಸುವಾಗ ಆದಷ್ಟು ಆ ಕಿರಾತತ್ವದ, ಪಾಮರತ್ವದ ಪ್ರದರ್ಶನವೇ ಆಗಬೇಕು. ಶಿವಾರಾಧನೆಯ ಬಿಸಿಯಲ್ಲಿದ್ದ ಇವನಿಗೆ ಶಿವನೇ ಬಂದ ಅಂತ ಎಚ್ಚರಾಗಕೂಡದು. ಮಾತನಾಡಿಸ್ತೇನೆ...

ಯೇ, ಅಪ್ಪಾ, ಯಾರಪ್ಪಾ? ನಿನೊಬ್ಬ ಹಾರುವವ ಹೌದ? ನಾ ಯೆನು ಅಂತ್ ಗೊತ್ತಾಯ್ತು ನಿನಗೆ? ನಾನು ಇದಕಪ್ಪ, ಇದಕ್ಕೆ ಅಪ್ಪ. ಅಂದರೆ ಈ ಹಂದಿ ನನ್ನದು. ಈ ಹಂದಿಯನ್ನು ಕೊಲೆ ಮಾಡಿದ್ದು ನಾನು. ನಾನು ಈ ಹಂದಿಯ ಮಾಂಸ ತಿನ್ನುವವ. ನಾನೊಬ್ಬ ಕಿರಾತ ಹೌದೋ?

ಹಂದಿ ತಿನ್ನು, ಬೇಟೆ ಆಡು, ಹೊಡ್ಡದ್ದು ನಾನು ಅಂತ ಮತ್ತೊಬ್ಬ ಹೇಳಿದರೆ ಹಂದಿಗೆ ಹೊಡೆದದ್ದರ ಮೇಲೆ ಮತ್ತೊಬ್ಬನಿಗೆ ಹೊಡೆಯುವ ಜನ, ಅಲ್ಲ, ನನ್ನ ಸ್ವಭಾವ ಮೊದಲೇ ಹೇಳಿಬಿಟ್ಟೆ. ಈಗ ನೋಡಪ್ಪಾ... ಯೇನು? ಹಂದಿಯನ್ನು ಕಾಲ ಬುಡದಾಗೆ... ಅದು ಸತ್ತು ಬಿದ್ದದ್ದು; ಬಿದ್ದು ಸತ್ತದ್ದು. ಸಾಯಬೇಕಿದ್ರೆ ಯಾರಾದ್ರೂ ಕೊಲ್ ಬೇಡವೋ? ಯಾರ್ ಕೊಂದ್ರು ಅಂತ ಒಬ್ಬ ಕೇಳ್ತಾನೆ ಅಂತಂದ್ರೆ ಅವನಿಗೆ ಅದರ ಕೊಲೆಯ ಬಗ್ಗೆ ಸಂಶಯ ಉಂಟು ಅಂತ ಅರ್ಥ. ಯಾರು ಕೊಂದ್ರು?

ಆಂ, ಅಲ್ಲಿಯೇ ಉಂಟು ನನಗೆ ನಿನಗೆ ತಕರಾರು ಈಗ ನಾ ಕೊಂದ ಹಂದಿಯನ್ನು ತೆಕ್ಕೊಂಡ ಹೋಗಬೇಕಿದ್ರೆ ಮತ್ತೊಬ್ಬನದು ಪರವಾನಿಗೆಯೇನೂ ಬೇಡ. ಆದರೆ ಈ ಬ್ರಾಹ್ಮಣನ ಹತ್ರ ನಾವು ಬರುವ ಹಾಗಿಲ್ಲ. ನಮಗೆ ಬ್ರಾಹ್ಮಣರ ಹಾಗೆ ಸಪ್ಪೆ ಜೀವನ

ಗೊತ್ತಿಲ್ಲ. ನಾವು ಒಂಥರದ ಮಣ್ಣಿನ ಮಕ್ಕಳು, ಈ ಮಣೇ ನಮಗೆ ಎಲ್ಲ ಒದಗಿಸಿಕೊಡ್ತದೆ. ನಮ್ಮ ದೇವಸ್ಥಾನವೂ ಇಲ್ಲೇ, ನಮ್ಮ ಭೂತಸ್ಥಾನವೂ ಇಲ್ಲೇ, ನಮ್ಮ ವಾಸಸ್ಥಳವೂ ಇಲ್ಲಿಯೇ, ನಿನ್ನನ್ನ ನಾನು ಮುಟ್ಟಿದ್ರೆ, ನಿನಗೆ ನಷ್ಟ.

ಈ ಕಾಡಿನಲ್ಲಿ ಯೇಷ್ಟೋ ಮಂದಿ ತಪಸ್ವಿಗಳನ್ನು ಕಂಡವ ನಾನು. ಅವರ ತಂಟೆಗೆ ನಾವು ಹೋಗುವವರಲ್ಲ ನಮ್ಮ ತಂಟೆಗೆ ಅವ್ರು ಬರುವವರಲ್ಲ. ಆ ಬ್ರಾಹ್ಮಣರು ನಮ್ಮನ್ನು ಮುಟ್ಟಿದ್ರೆ ಆ ಬ್ರಾಹ್ಮಣ ಸ್ನಾನ ಮಾಡಬೇಕು ಜನಿವಾರ ಬದಲಿಸಬೇಕು. ನಾವು ಹೊಡೆದು ಬಿಟ್ಟೆವು ಅಂತಾದ್ರೆ ಬ್ರಾಹ್ಮಣ್ಯವೇ ನಷ್ಟ ಆಗ್ತದೆ. ಯಾವ ವಿಧದಿಂದ ನೋಡಿದ್ರೂ, ನೀವು ನಮ್ಮ ಮೈಮೇಲೆ ಬಿದ್ರೆ, ನಿಮಗೆ ಭ್ರಷ್ಟತ್ವ, ನಾವು ನಿಮ್ಮ ಮೈಮೇಲೆ ಬಿದ್ರೆ ನಮ್ಮ ಜಾತಿ ಮರ್ಯಾದೆಗೆ ನಮ್ಮ ಯಾವತ್ತೂ ಕುಟುಂಬಕ್ಕೆ ಒಳ್ಳೆಯದಾಗೋದಿಲ್ಲ ಅಂತ ಒಂದು ವಿಶ್ವಾಸ, ಹಾಗಾಗಿಯೇ ಕೆಲವು ಸಲ ಅನಿವಾರ್ಯ ಅಂತ ಬಂದು ಬಿಟ್ರೆ ನಾವು ಬಾಂಬ್ರ ಹತ್ರ ಹೋಗಿ ತೀರ್ಥ... ಇದೆಲ್ಲ ತೆಕ್ಕೊಳ್ಳೋ ಜನ. ಈ ಭಾವನೆ ಕಿರಾತನಾದ ನನಗೆ ಇದ್ದದ್ದರಿಂದ, ಓ ಹಾರುವಯ್ಯ ನಾ ಮುಟ್ಟೋದಕ್ಕೆ ಹೆದತ್ತೇನೆ. ಹಾಗಾಗಿ ನೀ ಸ್ವಲ್ಪ ಹಿಂದೆ ಹೋಗು ನಾ ಹೊಡೆದ ಹಂದಿ ಇದೆಯಲ್ಲ ಅದನ್ನು ನನಗೆ ಬಿಟ್ಟುಬಿಡು.

ಯೆಲಾ ಯೆಲಾ ತಪಸಿ! ನೀನು ಯಾವ ಮಾತು ಮುಂದೆ ಬಂದ್ರೂ ತಪ್ಪಿಸಿಕೊಳ್ತಾ ಇದ್ದಲ್ಲ! ಅಯ್ಯಾ, ನೀ ಮೊದಲು ಹಂದಿ ಹೊಡದಿದ್ದೂ ? ಎಲ್ಲಿ? ಯಾವಾಗ? ಯಾಕೆ? ನಿನ್ನ ಆಹಾರಕ್ಕೆ? ನೀ ಯೆಂಥಾ ಹಾಳಾದ ಬ್ರಾಹ್ಮಣ ಮಾರಾಯ!! ಆದರೆ ಒಂದು, ನೀನು ಹೊಟ್ಟೆ ಹಸಿವಾದಾಗ ಯೆಲ್ಲಿಯಾದರೂ ಹಂದಿಯಾದರೆ ಹಂದಿ, ಜಿಂಕೆಯಾದರೆ ಜಿಂಕೆ ಅಂತ ಬಾಣ ಬಿಟ್ಟಿರಬಹುದು ಅಲ್ಲೊ? ಆದರೆ ಆ ವೃತ್ತಿ ನಿನ್ನಂಥವರಿಗೆ ಆಗಂತುಕ, ನೀನು ಹೇಳುತ್ತಿರುವದು ಯಾರಲ್ಲಿ “ತಾನು ಹೊಡೆದ ಹಂದಿ ಅಂತ?” ನಾನ್ ಯೆಂಥವ!

॥ಶಂಕರಾಭರಣ-ಮಟ್ಟೆ ಲಾಲಿಸಿನ್ನು ತಪಸಿ ತಪಸಿ | ನೂಳಿಗವನು ಬಿಟ್ಟು ನಮ್ಮ್ |

ಳಾಳು ತನಕೆ ಬರುವೆಯೇನೊ | ಖೂಳರಂದದಿ | ಕೇಳು ನಿನಗೆ

ಶಸ್ತ್ರ ಚಯದ / ಮೇಳವೇಕೆ ಬಿಡೆವು ನಮ್ಮ | ಕೋಲಲಳಿದ

ಕಿಟಿಯನೆಂದ | ಫಾಲನೇತ್ರನು || ೭೦ |

ನೋಡಪ್ಪಾ, ನಿನ್ನ ಕೈಯ್ಯಲ್ಲಿದ್ದ ಬಿಲ್ಲಿಗೂ, ನಿನ್ನ ಬತ್ತಳಿಕೆಯಲ್ಲಿದ್ದ ಬಾಣಕ್ಕೂ ಅಕೃತಿಯಿಂದ ನಮ್ಮ ಬಿಲ್ಲು ಬಾಣದ ಸಾದೃಶ್ಯ ಇರಬಹುದು ಆದರೆ, ನಮ್ಮಿದು ಮೂಲ ಕಸುಬು -ಬಿಲ್ಲು ಬಾಣ, ಕಲ್ಲು ಕವಣೆ. ಹಾಗಿರುವಾಗ ನನಗೀಗ ನೀನು ದೊಡ್ಡ ಅಪಮಾನವನ್ನೇ ಮಾಡಿದೆಯಲ್ಲ!

ಈಗ, ಹಂದಿಯನ್ನು ಬೇಕಾದರೆ ನೀನೇ ಹೊಡಿ, ನೀನು ಹೊಡೆದರೂ ನನ್ನ ಪ್ರದೇಶದಲ್ಲಿ ಆಕ್ರಮವಾಗ್ತದೆ. ಆ ಹಂದಿಯನ್ನು ಯೆಬ್ಬಿಸಿದವ ನಾನು. ಅದನ್ನೇ ಹಿಂಬಾಲಿಸಿಕೊಂಡು ಬಂದಾವಾಗ ಅದು ನಿನ್ನ ಪಾದಮೂಲಕ್ಕೆ ಬಂತು. ಆವಾಗ ನಾನೊಂದು ಬಾಣ ಎಸೆದೆ. ನನ್ನ ಗುರಿ ತಪ್‌ತದೋ? ಎಷ್ಟು ಕಾಲದಿಂದ ಬೇಟೆ ಮಾಡ್ತಿದ್ದೇನೆ..!

ಅವೆಲ್ಲ ಹೇಳೊದುಂಟು "ನಮ್ಮ ಯಜಮಾನರು ಗುರಿ ತಪ್ಪೋದಿಲ್ಲ ಮರಕ್ಕೆ ತಾಗ್ತದೆ" ಅಂತ. ನನಗೂ ಅಭ್ಯಾಸವುಂಟು ಇಲ್ಲದಿದ್ರೆ ಎರಡೂ ಬಾಣ ಹಂದಿಗೆ ಒಂದೇ ಬದಿಗೆ ತಾಗುವುದು ಹೇಗೆ? ಸ್ವಲ್ಪ ಮನುಷ್ಯರ ಹಾಗೆ ರಾಜಿಪಂಚಾತಿಗೆ ಮಾಡುವ ತಮ್ಮ ಬೇರೆ ಕಡೆಯಲೆಲ್ಲಾ ನಿಮ್ಮದೇ ಪ್ರತಾಪ ಕೈಯಲ್ಲಿ ಬಿಲ್ಲು ಬಾಣ ಹಿಡ್ಡವದು. ನಾವು ಮೂಲ ನಿವಾಸಿಗಳು, ನಮ್ಮ ಆಯುಧವೇ ಅದು. ಹಾಗಾಗಿಯೇ ನಿನ್ನಲ್ಲಿದ್ದದ್ದು ಬಿಲ್ಲು ಬಾಣ ಅಂತ ನಾನು ಗುರುತಿಸಿದ್ದು, ನಿಮ್ಮ ಬಿಲ್ಲು ಬಾಣದ ಉಪಯೋಗ ಬೇರೆ, ನಮ್ಮದು ಇದು ಮೃಗಬೇಟೆ. ಹಾಗಾಗಿ ಸ್ವಲ್ಪ ಸಮಾಧಾನದಿಂದ ಹೇಳು. ಕಿರಾತ ನಾನು, ಬಿಟ್ಟ ಬಾಣದಿಂದ ಹಂದಿ ಸಾಯಲಿಲ್ಲ ಅಂತ ಹೇಳಿದ್ರೆ ನಾನಿನ್ನು ಜೀವಂತ ಬದುಕಬೇಕೊ?

ನೀನು ಅಗತ್ಯಕ್ಕೆ ಬೇಕಾಗಿ ಗುರಿ ಸಾಧಿಸುವವ. ನಿತ್ಯ ಕಸಬುದಾರರಿಗೂ ಹವ್ಯಾಸಿ ಕಸಬುದಾರರಿಗೂ ವ್ಯತ್ಯಾಸ ಉಂಟು. ಹವ್ಯಾಸಿಗಾದ್ರೂ ಹೆಜ್ಜೆ ತಪ್ಪಿತು. ಕಸಬುದಾರಿ ನಿದ್ರೆಯಲ್ಲಿದ್ರೂ ಹೆಜ್ಜೆ ತಪ್ಪುವದಿಲ್ಲ. ನೀನು ಹಾಗೆ ಬಾಣ ಬಿಟ್ಟಿದ್ದೇ ತಪ್ಪು, ನಾ ಬಿಟ್ಟ ಮೇಲೆ ಮತ್ತೊಬ್ಬ ಬಾಣ ಬಿಡಬೇಕಾದದ್ದೇ ಇಲ್ಲ. ಆಯ್ತು.. ಅದು ಸತ್ತ ಮೇಲೆ ತನ್ನ ಬಾಣದಿಂದ ಸತ್ತದ್ದು ಅಂತ ಹೇಳಿದ್ರೆ, ನಾನು ನನ್ನನು ಕೊಂದಹಾಗಾಯ್ಕೆ ಇಲ್ವೊ? ನನ್ನ ಜಾತಿ ಮರ್ಯಾದೆ ಎಲ್ಲಿ ಹೋಯ್ತು? ನೀನು ತಪಿಸಿ ತಪಿಸಿ ನಿನ್ನ ತಲೆಗೆ ಬಿಸಿ ಏರ್ಯದೆ. ನೀನು ಎಷ್ಟೋ ದಿನ ಆಯ್ತು ಅನ್ನ ತಿನ್ನದೆ. ಎಲುಬಿನ ಹಂದರ ಕಾಣಿಸ್ತಾ ಇದೆ! ಕಣ್ಣೆಲ್ಲ ಪಾತಳಕ್ಕೆ ಹೋಗಿದೆ! ಅದು ಬೇಡ, ಯಾರಾದ್ರೂ ಬೇಟೆಗಾರರ ಮುಖಂಡ ಇದ್ರೆ ಕರೆವ ಅಥವಾ ನಿಮ್ಮ ಜಾತಿಯಲ್ಲಿ ಯಾರಾದ್ರೂ, ಬಿಲ್ಲು ಬಾಣ ಎಸುಗೆಯ ಗೃಹಸ್ಥರಿದ್ರೆ ಕರಿವ; ಕಣ್ಣಿದ್ದವ ಯೇನು ಹೇಳಿಯಾನು? ಹ್ಯಾಗಿದ್ದೇನೆ ನೋಡು ನಾನು. ನೀನು ಜೋರ್ ಗಾಳಿ ಬಂದ್ರೆ ಹಾರಿ ಹೋಗುವ ಹಾಗಿದ್ದೆ. ಅದು ನನ್ನ ಬಾಣಕ್ಕೆ ಸತ್ತದ್ದು, ರಾಜಿಗೆ ಬಾ.

ನಮ್ಮ ಕಸುಬಿನ ಮರ್ಯಾದೆಯಲ್ಲಿ ಇದನ್ನು ಬಿಟ್ಟು ಕೊಡುವವನಲ್ಲ. ಇದೀಗ ಯೇನಾಯ್ತು ಅಂದ್ರೆ ನಿನ್ನ ಕಸುಬಿಗೆ ನನ್ನನ್ನು ಸೇರಿಸಿಕೊಂಡ ಹಾಗಾಯ್ತು. ನೀನು ಹೇಳಿದೆ ಅಂತಾಗುವಾಗ ನನಗೆ ಉಪಾಯವೂ ಇಲ್ಲ. ಹಂದಿಯನ್ನು ಹೊಡೆದವ ನಾನೇ ಅಂತಾಗುವಾಗ ನಾನು ನಿನಗೆ ಹೊಡಿಬೇಕು.

ನಿನಗೆ ಹೊಡೆದ್ರೆ ಹಂದಿಯ ಹಾಗೆ ನಿನಗಾದ್ರೆ? ಬಿದ್ದಮೇಲೆ ನಾನೇ ಹೊಡೆದದ್ದು ಅಂತ ಹೇಳಲಿಕ್ಕೆ ನೀನು ಉಳಿಳ್ಳೋ ತಮ್ಮ? ಈ ಹೊತ್ತು, ನಾನು ಹೊಡೆದ ಹಂದಿಗೆ ಅಷ್ಟು ಮೌಲ್ಯ ಕೊಡಬೇಕೊ? ಇದು ನಿತ್ಯ ಪರಿಪಾಠ ನನಗೆ, ಅಯ್ಯೋ ನಾನು ಹಾಗೆ ಮಾಡಬೇಕೊ? ಹಾಗೇ ಮಾಡುವದಕ್ಕೆ ಹೊರಟೆ; ನನಗೆ ಈಗ ಇದ್ದ ಎರಡು ಕಣ್ಣಲ್ಲ ಅದರ ಮೇಲೆ ಮತ್ತು ಮತ್ತು ಕಣ್ಣು ಮೂಡ್ತಾ ಬಂದೀತು. ನನಗಿದ್ದ ಒಂದು ಮುಖ ಅಲ್ಲ ಹಲವಾರು ಮೂತಿ ಬಂದೀತು. ಅಂದರೆ, ಮತ್ತೆ ನನಗೆ ಒಟ್ಟೂ ಕತ್ತಲೆಯೇ. ಹೊಡೆಯಲಿಕ್ಕೆ ಹೊರಟ್ರೆ ನನ್ಗೊಂದು ಧರ್ಮ ಮರ್ಯಾದೆ ಯೇನೂ ಇಲ್ಲ. ನಾನ್ ಯೇನು!!

|ಶಂಕರಾಭರಣಾ-ಮಟ್ಟೆ|| ಬಡವನಾಗು ಭಟನೆಯಾಗುವ್ಯರ್ಥವೀ ನುಡಿ / ಕೊಡುವೆಯೇ

ತಕೆಮಗೆ ಶಿರವ ಪಿಂತೆ ಸಾರ್ ನಡಿ / ತೊಡುವ ಕರಕೆ ಕರುಣವಿಲ್ಲ

ನೋಡೆನುತ್ತಲಿ |ಮೃಡನು ನರನ ಮುಸುಕೆ ಶಸ್ತ್ರಗಡಣದಿಂದಲಿ || ೭೧ ||

ನನಗೆ ನಿನ್ನನ್ನು ಹೊಡೆಯಲಿಕ್ಕೆ ಮನಸ್ಸು ಬರೋದಿಲ್ಲ. ಕೊಂದಪಾಪ ತಿಂದು ಪರಿಹಾರ ಮಾಡಿಕೊಳ್ಳುವವರು ನಾವು. ಹಾಗಾಗಿ ನಾವು ಎಷ್ಟು ಪ್ರಾಣಿಗಳನ್ನು ಕೊಲ್ಲುತ್ತೇವೆ? ನಮಗೆ ತಿನ್ನಬಹುದಾದುದನ್ನು ಮಾತ್ರ ನಮ್ಮ ಅನ್ನ ಅದು. ಇಗೊ ನಿನ್ನನ್ನು ಕೊಂದ್ರೆ ತಿನ್ನಲಿಕ್ಕಾಗದೋ ಹೇಳು? ಆಗೋದಿಲ್ಲ. ಮನುಷ್ಯ ಸತ್ತ ಅಂತ ತಿಳಕೊಳ್‌ದೋ ಸತ್ತ ಮನುಷ್ಯನ ಹೆಣ ಯಾವುದದರೂ ಪ್ರಾಣಿ ತಿಂದ್ರೆ ಅದಕ್ಕೆ ಸದ್ಯಕ್ಕೆ ಹೊಟ್ಟೆ ತುಂಬಬಹುದು; ನಮಗೆಲ್ಲ ಗೊತ್ತುಂಟು ಈ ಹಳ್ಳಿಗಾಡಿನವರಿಗೆ, ಸತ್ತ ಮನುಷ್ಯನನ್ನು ತಿಂದ ಪ್ರಾಣಿಗೆ ಹುಚ್ಚು ಹಿಡಿತದೆ, ನಾಯಿ ತಿಂದ್ರೆ ನಾಯಿಗೆ, ನರಿ ತಿಂದ್ರೆ ನರಿಗೆ ಹುಚ್ಚು ಹಿಡಿತದೆ, ನಾ ಸಾಕಿದ ಕೆಲವು ನಾಯಿಗಳು ಹಾಗೆ ಕೆಲವು ಹುಚ್ಚು ಹಿಡಿದು ಸತ್ತು ಹೋದವು!! ಹೀಗೆಲ್ಲ ಉಂಟಪ್ಪ ನಮ್ಮ ಅನುಭವ. ಹಾಗಾಗಿ ನಿನ್ನನ್ನು ಕೊಂದ್ರೆ ಮತ್ತೆ ನಾನೇನು ಮಾಡೋದು? ನಮ್ಮ ಪ್ರಯೋಗ ಹೇಗೆ? ಸಾಕ್ಷಾತ್ ಶಿವನೇ ನನ್ನಿಧಿಗೆ ಬಂದ್ರೆ… "ನೋಡಪ್ಪಾ ಶಿವನೇ, ಯೇ ಬೂದಿ ಬೈರಾಗಿಯೇ, ಯೇ ಕೈಲಾಸ ವಾಸಿಯೇ ಇನ್ನುಂದೇ ನೀನು ಶಿವನೋ ಅಲ್ಲ ನಾನು ಶಿವನೋ?? ಅಂತ ಸವಾಲು ಹೂಡೇನು. ನೀನು ಹೇಳುವ ಶಿವ ಇಲ್ಲ ಅಂತ ಮಾಡಿಯೇನು ಶಿವನನ್ನು ನನ್ನಲ್ಲಿ ತೋರಿಸಿಯೇನು! ಯಾವ ಶಿವನನ್ನು? ಅದೇನೋ ಹೇಳ್ತಾರಲ್ಲ- "ಪ್ರಳಯಕಾಲದ ರುದ್ರನಂದದಿ" , ಅವನ ಅಟ್ಟಹಾಸಯೇನು ಎಂಬುದನ್ನು ಕೊಟ್ಟೇನು. ಈ ನಾವೆಲ್ಲ ಈ ಮಣ್ಣಿನ ಮಕ್ಕಳಿದ್ದೇವಲ್ಲ. ಆ ರುದ್ರನ ಉಪಾಸಕರು ಯೆಂಥಾ ರುದ್ರ? ಪ್ರಳಯಕಾಲದ ರುದ್ರ – ಉಗ್ರ ಭೈರವ!! ಅವ ನಮ್ಮ ಕುಲದೇವರು. ಕೆಲವು ಸಲ ನನಗೇ ಆ ಭೈರವನ ಆವೇಶವಾಗುವುದುಂಟು. ನಮ್ಮಲ್ಲಿ ಕೆಲವರು ದೋಷ- ಗೀಶ ಕೇಳಲಿಕ್ಕೆ ಬಂದಾವಾಗ ನಾನು ಶಿವನಾಗಿಯೇ ಅವರಲ್ಲಿ ಮಾತಾಡಿದ್ದುಂಟು. ಇಷ್ಟು ನನ್ನ ಸ್ವಾನುಭವ ಇರುವಾಗ, ರುದ್ರನೇ ನಮಗೆ ಲೆಕ್ಕ ಅಲ್ಲ ಅಂದ್ರೆ ರುದ್ರನನ್ನೇ ನಾವು ಕರೆದರೆ ನಮ್ಮ ಮೈಮೇಲೆ ಬರಿಸಿಕೊಳ್ಳತ್ತೇವೆ ಅಂದ್ರೆ…

ಅಯ್ಯೋ, ದೊಡ್ಡ ಮನುಷ್ಯನೇ, ನೀನು ಯಾಕೋ ಕಾಡಿಗೆ ಬಂದಿದ್ದಿ? ನೀನು ಕಾಡಿನಲ್ಲಿ ಹುಟ್ಟಿದ ಜೀವವೇ ಅಲ್ಲ... ನಿನ್ನ ಮೈ ಬಣ್ಣ, ಮುಖಕಾಂತಿ, ಎಲ್ಲ, ನೋಡಿದರೆ ಯಾವುದೋ ಶುದ್ಧ ರಕ್ತದ ಬ್ಯಾರೆಯೇ... ನಮ್ಮ ಜನಾಂಗವೇ ಅಲ್ಲ. ಹಾಗಾಗಿ ನಾವು ಗಿರಿಜನಗಳು, ನಾವು ಕಿರಾತರು ತಿಳಿತೋ ಇಲ್ವೊ? ನೀವೆಲ್ಲ ಬಹಳ ಮುಂದೆ ಹೋದವರು. ನಿಮ್ಮ ದೃಷ್ಟಿಯಿಂದ ಹಿಂದೆ ಇದ್ದಂತಹ ನಾವು ಸಂಘರ್ಷಕ್ಕೆ ಇಟ್ಟು ನಿಮ್ಮನ್ನು ಹಿಂದೆ ಹಾಕಿ ನಾವು ಮುಂದೆ ಹೋದೇವು ಅದೂ ನಾನಿರುವಾಗ, ನೀವು ಮುಂದೇ ಹೋಗಿ, ನೀವು ಮೊದಲು ನಿತ್ತ ಜಾಗ ನಮಗೆ ಕೊಡಿ ನಾವು ಅಲ್ಲಿಗೆ ಬಂದಾವಾಗ ನಾವೂ ಮುಂದೆ ಬಂದ್ಹಾಗಾಗ್ತದೆ. ಅನ್ಯಥಾ ಏನಾದರೂ ಅಬದ್ಧ ಮಾತಾಡಿದರೆ ಮಾತಿನಲ್ಲಿ ಜಯಿಸುವ ಸಾಮರ್ಥ್ಯ ನಮಗಿಲ್ಲ. ಅದೆಲ್ಲ ನಿಮಗೆ ಮೀಸಲು. ಏಕೆಂದರೆ ಒಂದೇ ಶಬ್ದದಲ್ಲಿ ಒಂದು ದಿವಸ ಒಂದು ಅರ್ಥ ಜನಕ್ಕೆ ಕೊಟ್ರೆ, ಮರುದಿವಸ "ಆ ಅರ್ಥದಲ್ಲಿ ಹೇಳಿದ್ದಲ್ಲ" ಅಂತ ತಿರುಗಿಸುವವರು. ನಮ್ಮದೆಲ್ಲ ಟ ಠ ಡ ಢ ಣ. ಹಾಗಾಗಿ ನಾವು, ಈ ಸಾಕು ಪ್ರಾಣಿಗಳನ್ನು ಯೇನೇನೂ ಅಂಜಿಕೆಯಿಲ್ಲದೆ ನಾಯಿಗಳು ಅಂತಲೇ ಕರೀತೇವೆ. ನಿಮ್ಮ ಮಡಿವಂತರಿಗೆ ಅದು ಹಾಗಾಗೋದಿಲ್ಲ – ಶ್ವಾನ, ಮತ್ತೆ ಎಂಥದ್ದೂ... ನಮ್ಮ ದೃಷ್ಟಿಯಲ್ಲಿ ಬ್ರಾಹ್ಮಣರ ಶ್ವಾನವೂ ನಮ್ಮ ನಾಯಿಯೂ ಒಂದೇ.

ಇಷ್ಟಾದ್ರೂ ಮರ್ಯಾದೆಯಲ್ಲಿ ಮಾತನಾಡಿದ್ದು ಈ ಹೊತ್ತು ನಾನು. ಯಾಕೆಂದ್ರೆ, ಬೈಗಳು, ಹೊಗಳಿಕೆ ಅನ್ನುವದು ಆ ಸ್ವರದ ಹೆಚ್ಚು ಕಡಿಮೆಯಿಂದ ಬರುವಂತಹದ್ದು. ನಾವು ಮಕ್ಕಳನ್ನೇ ಕರೀತೇವೆ ಕೆಲವುಸಲ "ಯೇ ನಾಯಿ" ಅದು ಹೊಗಳಿಕೆ! ನಮ್ಮಲ್ಲಿ ಸಿಟ್ಟಿನಿಂದ ಮತ್ತೊಬ್ಬನನ್ನು "ಥ ನಾಯಿ" ಅದು ತೆಗಳಿಕೆ, ಇಷ್ಟೇ ಹೇಳಿದ್ದಾಕೆ? ಯೇನೋ ನೀನು ನಮ್ಮವನೋ, ನಮ್ಮ ಕಸಬು ತಿಳಿದವನೋ ಎಂಬ ಒಂದು ಪ್ರೀತಿಯಿಂದ. ಇಲ್ಲದಿದ್ರೆ... ಮತ್ತೊಮ್ಮೆ ಹೇಳೇನೆ, ಮುಕ್ಕಣ್ಣ ಶಿವ ತಾ ನಿತ್ತೂ ಬಿಡಲಿಕ್ಕಿಲ್ಲ. ಒಂದು ಹಂದಿಗೆ ಬೇಕಾಗಿ ಕೈಲಾಸವನ್ನು ಖರೀದಿಮಾಡೇನು? ಯೆಲಾ ಯೆಲಾ, ನೀನು ಈ ಹಂದಿಗಾಗಿ ಕೈಲಾಸಕ್ಕೆ ಬೇಕಾದರೂ ಹೋಗಿ ಅಲ್ಲವೇ? ನೀನು ಹೋಗುವ ಕೈಲಾಸವನ್ನು ನಾನು ಬೆಲೆಗೆ ತಕ್ಕೊಂಡೇನು. ಈಗಲೂ ಅರ್ಥ ಆಗೋದಿಲ್ಲ? ಹಾಗಾದರೆ ನೋಡ್ಕ ನೀನೆಷ್ಟು ಕಲ್ತಿದ್ದೀ?

(ಶಬರಾರ್ಜುನರ ಯುದ್ಧ)

ಹ್ಹ ... ಪಾರ್ವತೀ ನೋಡಿದೆಯಾ, ಈ ಬಡಕಲು ಶರೀರ, ಈ ವಣಕಲು ಶರೀರ! ಇವನೊಳಗ್ಯೇನಿದೆ ಅದು ವರ್ಚಸ್ಸು ಕ್ಷಾತ್ರ ತೇಜಸ್ಸು; ಮೈಯ್ಯಿಂದಲ್ಲ! ಅಂದರೆ ಮೈಯಿಂದ ಎಷ್ಟು ಕೃಷ್ಟಪುಷ್ಟವಾದರೂ ಅದು ಅನ್ನಮಯ ಕೋಶ. ಒಳಗಿನದ್ದಾದಂತಹ ಆತ್ಮವರ್ಚಸ್ಸು! ಅಬ್ಬಬ್ಬಬ್ಬಬ್ಬಾ!! ಇದು ಮರ ಎಷ್ಟು ತೋರ ಉಂಟು ಅಂತಲ್ಲ; ಇದು ತಿರುಳೇ ಇದ್ದದ್ದು. ಇದಿಷ್ಟು ನಾನು ಯಾಕೆ ಮಾಡಿದ್ದು ಗೊತ್ತೊ? ಅವ ಯೇನೋ ನಮ್ಮಿಂದ ದೊಡ್ಡ

ಶಕ್ತಿಯನ್ನು ಬಯಸ್ತಾನೆ. ಅದನ್ನು ಧರಿಸಿಕೊಳ್ಳಲಿಕ್ಕೆ ಅವನಿಗೆ ಶಕ್ತಿ ಉಂಟೋ? ಇನ್ನೂ ಸ್ವಲ್ಪ ನೋಡ್ತಾ ಇರು. ಈಗ ಇದು ಬಿಲ್ಲು ಬಾಣಗಳ ಯುದ್ಧ ಆಯ್ತಲ್ಲ? ಇವನ ಬಿಲ್ಲು ಬಾಣಗಳು ಉಪಯೋಗ ಇಲ್ಲ ಅಂತ ಈಗ ಮಾಡಿ ತೋರಿಸ್ತೇನೆ. ನಾ ಪ್ರತಿಅಸ್ತ್ರ ಯೇಸೆಯೋದಿಲ್ಲ. ಅಂವ ನಮಗೆ ಯೇನ್ ಬಿಟ್ಟ ಅದೆಲ್ಲ ಅರ್ಚನೆ ಪುಷ್ಪಾಂಜಲಿ ಅಂತಲೇ ಧರಿಸುವದು. ಅವನ ಕಣ್ಣಿಗೆ ಮಾತ್ರ ಭ್ರಮೆ ಹುಟ್ಟಿಸುವದು ಪ್ರತ್ಯಸ್ತ್ರ ಬಿಟ್ಟ ಹಾಗೆ, ಕೈ ಎತ್ತುವದಷ್ಟೇ, ಪೆಟ್ಟು ಮೆಲ್ಲಗೆ, ಪೆಟ್ಟು ಬಲವಾಗಿ ಬಿದ್ರೆ ನಾವೇ ಔಷಧಿ ಮಾಡಬೇಕು. ಅವ ಬಯಸಿದ್ದು ದೊಡ್ಡದು. ದೊಡ್ಡದನ್ನು ಒಳಹೊಗಿಸಲು ಬಾಗಿಲು ದೊಡ್ಡದು ಬೇಡವೋ? ಹೀಗಾಗಿ ಸತ್ಯಪರೀಕ್ಷೆ.

ಯೇ, ನಾನು ಸ್ವಲ್ಪ ಹೊತ್ತು ಹೆಣ್ಣಿಯ ಮುಖ ನೋಡಿದ್ರೆ ನೀನು ಬಾಯಿ ಚಪ್ಪರಿಸ್ತಾ ಇದ್ದಿಯಲ್ಲ! ನಾ ಅವಳ ಹತ್ತಿರ ಹೇಳಿದಂಥದ್ದು? ಹೆದರ ಬೇಡ ನೀ ಕಂಗಾಲಾಗೋಡ ನಾನೇ ಸಾಕು ಅಂತ. ಈಗ ಯೇನುಂಟು? ನಾಲ್ಕು ಕಡೆಯಿಂದ ಅಸ್ತ್ರಗಳ ಮಳೆಯನ್ನೇ ಕರೀತೆನೆ ನೋಡು.

ಭೈರವಿ-ಏಕತಾಳ ಕಿರುನಗೆಯಲಿ ಶಂಕರನು | ಬಹ | ಶರಗಳ ತರಿದೊಟ್ಟಿದನು ||

ನರನದ ಕಾಣುತಲೆಂದ ಮನ | ಮರುಗುತ ಪೇಳಿದನೊಂದ || ೭೨ ||

ಆಯ್ತಲ್ಲ! ನೀ ಕಲ್ಲದ್ದೆಲ್ಲ ಪ್ರಯೋಗಿಸಿ ಮುಗೀತಲ್ಲ? ನೀ ಒಂದು ತೆಗೆದರೆ ತೊಡುವಾಗ ಹತ್ತಾಗದೆ! ಬಿಡುವಾಗ ನೂರು! ವಿರೋಧಿಗಳಲ್ಲಿ ಸರಿವಾಗ ಸಾವಿರವಾಗ್ತದೆ!! ಬಿಲ್‌ವಿದ್ಯೆಯಲ್ಲಿ ಮಹಾ ಸಮರ್ಥ! ನಮ್ಮಲ್ಲಿ ನಡೀತೋ? ನಡೀಲಿಲ್ಲ. ಅಸ್ತ್ರಗಳೆಲ್ಲ ಬರಿದಾಯ್ತಲ್ಲ? ಇನ್ನು ಈ ಬಿಲ್ಲು ಯಾಕೆ? ಯೇಲಾ ಹೋಡೀಲಿಕ್ಕೆ ಬಾ ಇದ್ದೀಯೋ? ಯೇಡಗಯ್ಯಂದ ಎಳೆದು ತೆಗೆದಿದ್ದೇನೆ ನೋಡು. ಕೈ ಕಾಲಿಯಾಯ್ತ? ಇನ್ನೇನುಂಟು? ಯೇ ತಮ್ಮಾ ಹಾಗೆ ತಟ್ಟ ಬೇಡ ಭುಜಕ್ಕೆ ಪಾರ್ವತಿ ನೋಡಿದೆಯೋ, ಏಳಲಿಕ್ಕೆ ಕೂಡೋದಿಲ್ಲ ಮಗನಿಗೆ ಭುಜ ತಟ್‌ತಾನೆ ಮಲ್ಲಯುದ್ದಕ್ಕೆ. ಕೀಳರಿಮೆಯೇ ಇಲ್ಲ ಅವನಿಗೆ !! ಆನೆ ಬಡವಾದರೂ ಹಟ್ಟಿಯಲ್ಲಿ ಕಟ್ಟಲಿಕ್ಕೆ ಬಂದೀತೋ? ಇದು ಇವನ ಮಾನಸಿಕ ಶಕ್ತಿ, ಮಾನಸಿಕ ಶಕ್ತಿ ಯಾರಿಗುಂಟು ಅವನಿಗೆ ಹಿಡ್ಡದ್ದೇ ಬಡಿಗೆ. ಮಲ್ಲಯುದ್ಧ ಮಾಡ್ತಾನಂತೆ ಅಲ್ವೊ!

ಮಾಡ್ವೊ ಮಾಡ್ವೊ ಮಲ್ಲಯುದ್ಧ. ನೋಡಪ್ಪ, ನಾ ಕೈ ಎತ್ತಿದೆ. ಹೊಡಿಲಿಲ್ಲ. ಇವಳು ಕೈ ಹಿಡಕೊಂಡ್ಲು ಅದಕ್ಕೇ ಹೇಳೋದು ಹೆಂಗಸು ಅಂದ್ರೆ ಹಾಗೆ - ಯಾರು ನೋಯ್ತಾರೆ ಅಂಥವರಲ್ಲಿ ಆ ತಾಯ್ತನ ಕೆದರಿ ಬಿಡೋದು. ಇವಳು ಹಿಡ್ದದ್ದಕ್ಕಾಯ್ತು ನನ್ನ ಕೈ ಯೆಲ್ಲಿಯಾದರೂ... ನಾನ್ ಗುದ್ದಿದ್ದೆ... ಆವಾಗ ಹೇಳಿದ ಹಾಗೆ, ಹಂದಿಯೊಟ್ಟಿಗೆ ನಿನ್ನದೂ... ಇನ್ನಾದರೂ... ನೋಡು ಹಂದಿ ಬಿಟ್ಟು ಹಿಂದೆ ಹೋಗು. ಯೇಳೋದಿಲ್ಲ?! ಹಾಗಾದರೆ ನಿನಗೆ ಈ ಹೊತ್ತು ಶುಭ ದಿವಸ ಅಲ್ಲ. ನಿನನ್ನು ಇಲ್ಲಿಂದ ಯೇಳಿಸ್ತೇನೆ.

ಹಿಂದೆ ಸಾಗಿಸುವಷ್ಟು ಪಂಥ ಉಂಟು ನನ್ನದು. ಬೇಕಾದಷ್ಟು ವಿರಾಮ ಕೊಟ್ಟಿದ್ದೇನೆ ಹಂದಿ ಅಲ್ಲಿರ್ಲಿ, ಇಕೋ ಬೇಗ ಮುಗಿಬೇಕು; ಯಾಕೆ? ಹಂದಿ ಅದು ಉಬ್ಬತದೆ ಸತ್ತಪ್ರಾಣಿ ಮತ್ತೆ ಅದರ ಮಾಂಸ ನಮಗೆ ರುಚಿ ಆಗೋದಿಲ್ಲ. ಅದರ ಮೈ ಬಿಸಿ ಆರುವದರೊಳಗೆ, ಗಾಯದಲ್ಲಿ ರಕ್ತ ಸೋರಿ ಹೋಗುವದರೊಳಗೆ ನಮಗೆ ಸಿಕ್ಕಬೇಕು. ಹಂದಿ ಕೊಳ್ಳೋಗುವ ವರೆಗೆ ಅವಕಾಶ ಇಲ್ಲ. ಯೇನೇಕಾದರೂ ಮಾಡು.

(ಅರ್ಜುನ ಮಳಲಿಂಗವನ್ನು ಮಾಡಿ ಹೂ ಹಾಕಲು, ಅದು ಕಿರಾತನ ತಲೆಯೇರಿತು. ವಿಸ್ಮಿತನಾದ ಅರ್ಜುನ ನಿಜತಿಳಿದು ಶರಣಾದ)

ಹ್ಹ ಹ್ಹ... ಪಾರ್ವತೀ, ಈಗ ಹದವಾದ ಹೊತ್ತು ಬಂತು ನೋಡು; ಇವನನ್ನು ನಾನು ನಾನೇ ಆಗಿ ಮಾತಾಡಿಸ್ತೇನೆ. ಅಯ್ಯೋ ವತ್ಸಾ, ನೊಂದೆಯಾ! ನೋಯಲಿಲ್ಲ ಆದರೆ ಬಹಳ ಬೆಂದೆ. ಒಂದು ವರ್ಷದಲ್ಲಿ ನೀನು ಸಾಧಿಸಿದ ಸಾಧನೆಯಿದೆಯಲ್ಲ, ನೀನಿಷ್ಟಕ್ಕೇ ಅಲ್ಲ, ಒಬ್ಬ ಸಚ್ಛಿಶ್ಯನಾಗಲಿಕ್ಕೆ ಸಂಪೂರ್ಣವಾದ ಅರ್ಹತೆಯನ್ನು ಸಂಪಾದಿಸಿದ್ದಿ, ಯಾವುದೇ ವಿಷಯವನ್ನು ಗ್ರಹಿಸಲಿಕ್ಕೆ ಎಚ್ಚರಿಕೆ ಮುಖ್ಯ. ಈ ಹೊತ್ತು ನೀನು- ನಿದ್ರೆ, ಅಲಸ್ಯ ಇದನ್ನು ಜಯಿಸುವ ಅದಟನ್ನು ತೋರಿದ್ದಿ, ಹೌದಪ್ಪ - ಗುಡಾಕೇಶ ಗುಡಾಕ ಈಶ:

ಆಲಸ್ಯ ಇಲ್ಲ, ಹಾಗಾಗಿ ಇನ್ನೊಂದು ಕಡೆಯಿಂದ ಬ್ರಹ್ಮೋಪದೇಶವನ್ನು ಪಡೆಯುವದಕ್ಕೂ ಅರ್ಹತೆಯನ್ನು ನೀನು ಪಡೆದೆ. ಈವರೆಗೂ ಬ್ರಹ್ಮೋಪಾಸನೆ ಆಗಲಿಲ್ಲ, ಉಪಾಸನೆಯ ಮಾರ್ಗವೂ ಆಗಲಿಲ್ಲ, ಆದರೆ ನಿನ್ನದ್ದಾದಂತಹ ಆ ಎಚ್ಚರಿಕೆ ಆಲಸ್ಯವನ್ನು ದೂರಕ್ಕೆ ಒಯ್ದದ್ದು. ಆದ್ದರಿಂದ ಬ್ರಹ್ಮಜ್ಞಾನಕ್ಕೂ ಅರ್ಹತೆಯನ್ನು ಪಡೆದಿದ್ದೀ ಈ ಒಂದು ತಪಸ್ಸಿನಿಂದ ನೋಡಪ್ಪಾ, ನಿನ್ನ ಸತ್ವಪರೀಕ್ಷೆಗಾಗಿ ನಾನು ಆ ಕಿರಾತರೂಪವನ್ನು ತಾಳಿಕೊಂಡು ಬಂದದ್ದು. ಇವಳೇ ನನ್ನ ಅರ್ಧಶರೀರೆ. ಅವಳ ಸಂಪರ್ಕ ಇಲ್ಲದ ವಿನಾ ನನಗೆ ಸಂಚಾರ ಇಲ್ಲ. ಅದು ಪ್ರಕೃತಿ, ನಂದು ಪುರುಷ ಶಕ್ತಿ, ಈ ಪ್ರಕೃತಿ ನನ್ನ ಜೊತೆಯಲ್ಲಿದೆ ಮಾತ್ರ ಆಯಸ್ಕಾಂತದ ಸನ್ನಿಧಾನದಲ್ಲಿ ಜಡವಾದ ಕಬ್ಬಿಣವೂ ಆಯಸ್ಕಾಂತ ಚಲಿಸಿದಂತೆ ಚಲಿಸುವಂತೆ - ಅಂದರೆ ನನ್ನ ಮಾಯೆ ನನ್ನೊಟ್ಟಿಗೆ ಸೇರಿದಾವಾಗ ಮಾತ್ರ ನನಗೆ ವಿಚಿತ್ರತರವಾದಂತಹ ಲೀಲಾನಾಟಕದ ರಂಗಸ್ಥಳದಲ್ಲಿ ಬೇರೆ ಬೇರೆ ಪಾತ್ರವನ್ನು ಅಭಿನಯಿಸುವದಕ್ಕಾಗಿದೆ.

ನನ್ನ ಭಕ್ತರನ್ನು ನಾನು ಪರೀಕ್ಷಿಸುವ ರೀತಿ ಇದು. 'ಏಕಂ ಸತ್' – ಸತ್ಯ ಒಂದೇ.

ಆದರೆ ಕೆಲವರಿಗೆ ಏನಾಗ್ತದೆ ಅಂದ್ರೆ - ನಾನು ನಂಬಿದ ದೇವರೇ ಸತ್ಯ, ಇನ್ನೊಬ್ಬ ನಂಬಿದ ದೇವರು ಅಸತ್ಯ ಹೀಗಾಗಿ ನನ್ನ ದೇವರು ನನ್ನ ದೇವರು ಅಂತಾಗ್ಯದೆ. ಆದರೆ ನಿಜವಾದಂತಹ ಭಕ್ತ, ದೇವರು ನಾನಾ ರೂಪವನ್ನು ತಾಳಿಕೊಂಡು ಬತ್ತಾನೆ ಇದು ದೇವರ ಬೇರೆ ಬೇರೆ ರೂಪ ಅಂತ ಗುರುತಿಸ್ತಾನೆ.

ಆಗ ಕಿರಾತನಾಗಿ ನಾನು ಒಂದು ಶಬ್ದವನ್ನು ಉದ್ಘಾಟಿಸಿದ್ದೆ ಶ್ವಾನ - ನಾಯಿ ಅಂತ. ಈಗ ಅದನ್ನೆ ಮತ್ತೊಮ್ಮೆ ಉದಾಹರಿಸ್ತೇನೆ. ನೋಡಪ್ಪಾ, ತನ್ನ ಸ್ವಾಮಿಯನ್ನು ಆ ಬರೇ ಶುನಕ ಅವ ಯಾವ ರೂಪ ಯಾವ ವೇಷವನ್ನು ಧರಿಸಿಕೊಂಡು ಬಂದರೂ ಕೂಡಾ ಅದು ಹೋಗಿ ಅವನನ್ನು ಮೂಸ್ತದೆ, ಪಾದ ನೆಕ್ತದೆ ಅಲ್ಲೊ? ಅದಕ್ಕೆ ಗೊತ್ತಾಗದೆ ನನ್ನ ಸ್ವಾಮಿಯದೇ ಇದು ಬೇರೆ ಬೇರೆ ವೇಷ ಅಂತ. ಹಾಗಿರುವಾಗ ಸ್ವಾಮಿಭಕ್ತರಿಗೆ ಆ ಸ್ವಾಮಿಯ ಬೇರೆ ಬೇರೆ ವೇಷವು ಅಭೇದವಾಗಿ ಅಭಿನಯವಾಗಿ ಕಾಣಬೇಕೋ ಬೇಡವೊ? ಯಾರಿಗೆ ಕಾಣುವದಿಲ್ಲವೋ ಅವ ಅಷ್ಟೂ ಅಲ್ಲ ಅಂತಾಗೋದಿಲ್ಲೋ? ಇದರಿಂದ ಪ್ರಪಂಚದಲ್ಲಿ ದೇವರನ್ನು ಒಬ್ಬನೇ ಅಂತ ಹೇಳ್ತಾರೆ ಅದು ಅವರು ನಂಬುವ ದೇವರು ಒಬ್ಬನೇ. ನಿಜವಾಗಿ ದೇವರು ಒಬ್ಬನೇ ಅಂತಂದ್ರೇನು - ಅಖಂಡ ಅಂತರ್ಥ. ಯಾವ ಯಾವ ವಸ್ತುವನ್ನು ಕಾಣ್ತೇವೆ ಅದು ಭಗವಂತನ ರೂಪ, ಭಗವಂತನ ಲೀಲೆ ಅಂತರ್ಥ ಇದನ್ನು ಈ ಸಂದರ್ಭದಲ್ಲಿ ಪ್ರಪಂಚಕ್ಕೆ ಉಪದೇಶಿಸುವದಕ್ಕೆ ಬೇಕಾಗಿ ಕಿರಾತ ರೂಪದಿಂದ ಬಂದ್ರೂ ಶಿವನನ್ನು ಗುರುತಿಸ್ತಾನೋ ಈ ಭಕ್ತ ಅಂತ ನಾನು ನೋಡಿದ್ದು, ಭಕ್ತಿಯ ಪರಾಕಾಷ್ಠೆಗೆ ಮುಟ್ಟಿ ಅರ್ಚನೆ ಮಾಡುವಾಗ ನಿನ್ನ ಈ ಮೃತ್ತಿಕಾ ಲಿಂಗ ಅಥವಾ ಪುಳಿನಲಿಂಗ ಅದೇ ಕಿರಾತ ಆ ಕಿರಾತನೇ ಶಿವ!

ಎಲ್ಲವೂ ಶಿವನೊಬ್ಬನೇ ಎಲ್ಲವೂ ಹರಿಯೊಬ್ಬನೇ ಹರಿಯೇ ಹರ ಹರನೇ ಹರಿ, ದೇವರಲ್ಲಿ ಭೇದವನ್ನು ಮಾಡುವ ಭೇದವಾದಿಗಳು ಪ್ರಪಂಚದಲ್ಲಿಯೂ ಭೇದವಾದಿಗಳೇ. ದೇವರಲ್ಲಿ ಕಾಣುತ್ತಿರುವ ಯಾವ ಅಖಂಡ ಲಕ್ಷ್ಯ ಉಂಟು ಇದನ್ನು ಕಂಡವ ಪ್ರಪಂಚದಲ್ಲಿ ಕೂಡಾ ಅವಿನಾಭಾವದಿಂದಲೇ ಬದುಕ್ತಾನೆ; ಸಹಬಾಳ್ವೆ ಮಾಡ್ತಾನೆ. ಈ ತತ್ತ್ವವನ್ನು ನೀನೀಗ ತಿಳ್ಕೊಂಡೆ. ನಿನ್ನ ಸತ್ವ ಪರೀಕ್ಷೆಗಾಗಿ ಯುದ್ಧ ಬೇಕಾಯ್ತು. ಯಾಕೆ? ನೋಡಪ್ಪಾ, ಇಷ್ಟುದೂರ ನೀನು ಬಂದಿದ್ದಿ ಹಾಗಾಗಿ ನಿನ್ನ ಕೋರಿಕೆ ಅಲ್ಪದ್ದಾಗಿರಲಿಕ್ಕಿಲ್ಲ. ಪಾಂಡುಪುತ್ರನಾಗಿ, ಶ್ರೀಕೃಷ್ಣನ ಭಾವನಾಗಿ, ಶ್ರೀಕೃಷ್ಣನ ಭಾವದ ಭಕ್ತನಾಗಿ, ಧರ್ಮರಾಯನ ತಮ್ಮನಾಗಿ, ಭೀಮನ ಭೀಮ ಬಲದ ತಮ್ಮನಾಗಿ, ನಾವು ಕೇಳಿದ್ದೇವೆ. ಧನಂಜಯನಂತೆ ನೀನು, ರಾಜಸೂಯಕ್ಕೆ ಬೇಕಾಗಿ ಎಲ್ಲ ರಾಜರನ್ನು ಇದುರಿಸಿ ಜಗತ್ತಿನ ಸಂಪತ್ತನ್ನು ಒಂದು ಕಡೆ ಕ್ರೋಢೀಕರಿಸಿ ರಾಜಸೂಯಕ್ಕೆ ನೆರವಾದವನು ಅಂತ ಕೇಳಿದ್ದೆನೆ. ಇಂತಹ ನಿನಗೆ ದಾರಿದ್ರ ಇದ್ರೆ ಅದಕ್ಕಿಂತ ಮಿಕ್ಕಿನ ಯಾವುದೋ ವಿಷಯದಲ್ಲಾಗಿರಬೇಕು ಅಂತ ನಾವು... ಅಂತಹ ಮಹತ್ತಾದದ್ದನ್ನು ಸಾಧಿಸಲಿಕ್ಕೆ ಅಂತ ಹೊರಟ ನೀನು ಒಂದು ವೇಳೆ ನಮ್ಮಲ್ಲಿದ್ದರೆ ನೀನು ಅದನ್ನು ಕೇಳಿದರೆ ಅದನ್ನು ತುಂಬಿಸುವ ಪಾತ್ರದ ಅಳತೆಯೇಷ್ಟು ಅಂತ ನಮಗೆ ಗೊತ್ತಾಗಬೇಡವೋ? ಈಗ ಮಗು ಯೇನೇನನ್ನೋ ಬೇಡದೆ, ತಿಳಿದ ತಾಯಿ ಮಗು ಬೇಡಿದ್ದನ್ನೆಲ್ಲಾ ಕೊಡ್ತಾಳೋ? ಒಂದು ಮಗು ಕೇಳಬಹುದು "ಹರಿತವಾದ ಚೂರಿ ಕೊಡಮ್ಮ ಅಂತ" ಚೂರಿ ಕೊಡಲಿಕ್ಕಿಲ್ಲ ಚೂರಿಯ ಹಾಗೆ ಕಾಣುವಂತದ್ದು ಅಂದರೆ ಯಾರಿಗೂ ಗಾಯ ಆಗದ್ದು – ಕೃತಕ ಕೊಟ್ಟಾಳು.

ಆದರೆ ಶಿವನಲ್ಲಿ ಅರ್ಜುನ ಬೇಡಿದ್ದು ಕೃತಕವಾಗಿರಲಿಕ್ಕಿಲ್ಲ. ನೀನೇ ಹೇಳು ಯಾವ ಉದ್ದೇಶದಿಂದ ನೀನು ಈ ತಪಸ್ಸನ್ನು ಇಲ್ಲಿಯವರೆಗೆ ಸಾಧಿಸಿದೆ? ಯೇನು ಬೇಕು ? 'ಪಾಶುಪತ! ಕುಮಾರಾ, ಅದು ಸಂಹಾರ ಶಕ್ತಿ!! ಆ ಸಂಹಾರ ಶಕ್ತಿಯಲ್ಲೇ ಉತ್ಪತ್ತಿಯ ಬೀಜವೂ ಉಂಟು. ಹಾಗಾಗಿಯೇ ತ್ರಿಮೂರ್ತಿಗಳ ಕಲ್ಪನೆಯನ್ನು ಮಾಡುವಾಗ ಸೃಷ್ಟಿಕಾರ್ಯ ಒಬ್ಬನದು, ರಕ್ಷಿಸುವ ಕಾರ್ಯ ಒಬ್ಬನದು, ಸಂಹಾರ ಕಾರ್ಯ ಮತ್ತೊಬ್ಬನದ್ದು ಅಂತ ವಿಭಜಿಸ್ತಾರೆ. ಇದನ್ನು ಸ್ಥೂಲವಾಗಿ ತೆಕ್ಕೊಂಡೇ ಹೇಳೋಣ; ಬ್ರಹ್ಮ ಸಂಹಾರ ಕರ್ತ ಅಲ್ಲ, ಪಾಲನಾ ಕರ್ತ್ರ್ಯವೂ ಅಲ್ಲ ವಿಷ್ಣು ಸಂಹಾರ ಕರ್ತ್ರ್ಯ ಅಲ್ಲ ಪಾಲನಾ ಕರ್ತ್ರ್ಯ. ಯಾವನಲ್ಲಿ ಪಾಲನಾ ಗುಣ ಹೆಚ್ಚಿರದೋ ಅವನಲ್ಲಿ ಸಂಹಾರ ಗುಣ ಸುಪ್ತವಾಗಿರದೆ. ಶಿವ ಅಂತಂದ್ರೆ ಹಾಗಲ್ಲ ಮತ್ತೆ? ಆ ಪಾಲನಾ ಭಾವ-ಕರುಣೆಯೂ ಇದೆ ಹಾಗೇ ಸಂಹಾರ ಶಕ್ತಿಯೂ ಇದೆ. ಮೃತ್ಯುವನ್ನು ಕೊಲ್ಲುವಂತಹ ಶಕ್ತಿ ಈ ಪಾಶುಪತಕ್ಕಿದೆ. ನೀ ಕೇಳಿ, ಹೌದು ಕುಮಾರಾ, ಕೊಡುವ ನಾನು ಸ್ವಲ್ಪ ವಿಮರ್ಶಿಸಬೇಕೋ ಬೇಡವೋ ಹೇಳು? ಈ ಕೆಲವು ಮಾರಾಕಾಸ್ತ್ರಗಳನ್ನು ಧರಿಸುವದಕ್ಕೆ ಪಾತ್ರ ನಿರ್ಣಯ ಮಾಡೇ ನೀವು ಆಯುಧಗಳನ್ನು ಹಂಚತೀರೋ? ಕಂಡ ಕಂಡವರಿಗೆ ಕೇಳಿದ ಆಯುಧಗಳನ್ನೆಲ್ಲ ಕೊಡ್ತಿರೋ? ಕೊಡೋದಿಲ್ಲ. ಯಾವನಿಗೆ ತಾಳ್ಮೆ ಸ್ಥಿತಪ್ರಜ್ಞೆ ಸಂಹಾರ ಶಕ್ತಿಯನ್ನು ತಡೆಹಿಡಿಯುವ ತಾಳ್ಮೆ ಅಂದರೆ ದಯೆ! 'ಹೂವಿನಷ್ಟು ಕೋಮಲ ವಜ್ರದಷ್ಟು ಕಠಿಣ' - ಇವೆರಡನ್ನು ಸಿದ್ಧಿಸಿಕೊಂಡವ, ಇವೆರಡರ ಮೇಲೂ ತನ್ನ ನಿಯಂತ್ರಣವನ್ನು ಇಟ್ಟುಕೊಂಡವ ಅವ ಮಾತ್ರವೇ ಈ ಸಂಹಾರ ಶಕ್ತಿಯಾದ ಪಾಶುಪತವನ್ನು ಧರಿಸಿಕೊಂಡಾನಷ್ಟೇ? ಮುರ್ಖನೋ, ಅವಿವೇಕಿಯೋ, ಮದ್ಯಪಾಯಿಯೋ, ಮೈಮರೆಯುವವನೋ ಅವನ ಕೈಯಲ್ಲಿ ನಾವು ಕೊಲ್ಲುವಂತಹ ಆಯುಧವನ್ನು ಕೊಟ್ರೆ ಅವನಿಗೆ ಮೂಗಿನಮೇಲೆ ಸಿಟ್ಟು ಬಂದಾವಾಗ ಇದಿರಿಗೆ ಬಂದವರ ಮೇಲೆ ಆಯುಧ ಪ್ರಯೋಗ ಮಾಡಿಯಾನು. ಹಾಗಾಗಿ ಇಂತಹ ಆಯುಧಗಳನ್ನು ಕೊಡುವಾಗ ಆ ವ್ಯಕ್ತಿಯನ್ನು ಮೂರು ಮೂರು ಸಲ ಪರೀಕ್ಷಿಸಬೇಕಾಗ್ತದೆ. ಇಂದ್ರ ನಂದನ ಇದನ್ನು ನಿನಗಲ್ಲದೆ ಬೇರೆಯಾರಿಗೆ ಕೋಡೋಣ? ನಿನಗೆ ಕೊಟ್ರೆ ನಾನು ಕಳಕೊಳ್ತೇನೆ ಅಂತ ಅರ್ಥವಲ್ಲ; ಪಾಶುಪತ ಶಕ್ತಿ ನಿನಗೆ ಕೊಟ್ರೆ ನಾವು ಮಾಡಬೇಕಾದ ಕೆಲವು ಕ್ರಿಯೆ ಇದೆಯಲ್ಲ – ಸಂಹಾರಕ್ರಿಯೆ, ಅದಕ್ಕೆ ನಿನ್ನನ್ನು ನೇಮಕ ಮಾಡಿ ಅಪ್ಪಣೆ ಕೊಟ್ಟಹಾಗಾಗ್ತದೆ. ಹಾಗಾಗಿ ಇದನ್ನು ನೀನು ನಿಯಂತ್ರಿಸಿಕೊಳ್ಳಬೇಕು. ಆಯುಧದ ಮೇಲೆ ನಿಯಂತ್ರಣ ಇಲ್ಲದಿದ್ರೆ ಶತ್ರು ಮಾತ್ರ ನಾಶವಾಗುವದಿಲ್ಲ. ಉಪಯೋಗಿಸಿದವನೂ ನಾಶವಾಗ್ತಾನೆ. ಉಪಯೋಗಿಸಬೇಕಾದ್ರೆ ಸಂದರ್ಭ ಅಂಥದ್ದು ಬಂದರೆ ಮಾತ್ರ ಇಲ್ಲದಿದ್ರೆ ಉಪಯೋಗಿಸಬೇಕಾದ್ದಲ್ಲ. ಇನ್ನೂ ಒಂದು ಉಂಟು, ಸಾಧಾರಣ ಶಕ್ತಿಯಿಂದಲೇ ದಮನ ಮಾಡುವದಕ್ಕಾಗದೆ ಅಂತಾದ್ರೆ ಇಂತಹ ಮಹಾಶಕ್ತಿಯ ಉಪಯೋಗ ಬೇಡ, ಕೊನೆಗೂ ಇಂತಹ ಮಹಾಶಕ್ತಿಯನ್ನೇ ಉಪಯೋಗಿಸಿ ಅವ ಜಯಿಸಿದ ಅಂತಾದ್ರೆ ಅವನೇ ಜಯಿಸಿದ ಅಂತಲೂ ಆಗೋದಿಲ್ಲ. ಪಾಂಡವರ ಕೀರ್ತಿಗೆ ನಿನ್ನ ಯಶಸ್ಸಿಗೆ ಸರಿಯಲ್ಲ. ಆದರೆ ಇದು ಯಾಕಿರಬೇಕು? ಅನಿವಾರ್ಯ ಪ್ರಸಂಗದಲ್ಲಿ ಉಪಯೋಗಿಸುವದಕ್ಕೆ ಎಂಬುದಕ್ಕಿಂತಲೂ ವಿರೋಧಿಗಳಿಗೆ ಭಯ ಹುಟ್ಟಲಿಕ್ಕೆ ಇಷ್ಟು ಯೆಚ್ಚರಿಕೆಯ ಮಾತನ್ನು ಹೇಳಿ, ಈ ಪರೀಕ್ಷೆಗೆ

ಈವರೆಗೆ ಬಂದಂತಹ ಈ ಶಿವನ ಪ್ರಸಂಗ ಇದೆಯಲ್ಲ - 'ಕಿರಾತಾರ್ಜುನ' - ಇದು ಈ ಉದ್ದೇಶದಿಂದ ಹೀಗೊಂದು ಕಾವ್ಯಾತ್ಮಕವಾದಂತಹ ಸುಂದರವಾದ ಆವರಣದೊಳಗೆ ಅಭಿನಯಿಸಿ ತೋರಿಸಿದ್ದು, ಇಷ್ಟು ನೀನು ತಿಳಕೊಂಡ್ರೆ, ಸುಖವಾಗಿ ಮತ್ತೊಂದು ನಮ್ಮ ಆಶೀರ್ವಾದ ಉಂಟು, ಹೇಗೆ? ಸುಖವಾಗಿ ಬರಬೇಕಾದ ಸಂದರ್ಭದಲ್ಲಿ ಶುಭಾಗಮನ ನಿನಗೆ ನೋಡು ನಾನಿಷ್ಟು ಹೇಳಬೇಕಾಗಿದ್ರೆ ಶಿವ ಮಾತ್ರ ಕೊಟ್ಟರೆ ಸಾಲದು ಅಂತ, ಶಿವ ಅವಳೇನೋ ಒಂದು ಕೊಟ್ಟಲ್ಲ ಇದಕ್ಕೆ ಪೂರಕವಾಗಿ? ಅಂಜಳಿಕ ಪ್ರಾಂಜಳಿಕ ! ಶಿವರಾಧನೆಯಿಂದ ಸಿಕ್ಕೋದು ಅದು. ಹೇಗೆ ಶಿವ ಯೇನನ್ನು ಕೊಡ್ತಾನೆ. ಅದಕ್ಕೆ ಬಳುವಳಿಯಾದದ್ದನ್ನೇ ಶಿವ ಕೊಡ್ತಾಳೆ ಈ ಕೈಲಾಸದ ಮಹತ್ವ ಅದು. ನೋಡು ನನ್ನ ಮಕ್ಕಳು - ಕುಮಾರಸ್ವಾಮಿ, ಗಣಪತಿ – ಒಂದೊಂದು ಮಂತ್ರಾಸ್ತ್ರವನ್ನು ನಿನಗೆ ಕೊಟ್ಟಿದ್ದಾರೆ . ಅದೇ ಸಾಕಾಗಬಹುದು. ಇದು ಯಾವಾಗಲೂ ಇರಲಿ ನಿನ್ನ ಕೈಯ್ಯಲ್ಲಿ ಹೋಗಿ ಬಾ ಅಪ್ಪಾ.

ಧರ್ಮ ಸಾಮ್ರಾಜ್ಯ ಸ್ಥಾಪನೆಗೆ ನೀನೇ ಕಾರಣನಾಗು. ಕೃಷ್ಣನ ಜೊತೆಯಲ್ಲಿ ಈ ಶಿವನೂ ಇದ್ದಾನೆ ಅಂತ ತಿಳ್ಕೊಂಡು, ಕೃಷ್ಣ - ಶಿವರ ಈ ಅವಿನಾದ್ವೈತ ಸಿದ್ಧಾಂತದಲ್ಲಿ ಧರ್ಮ ಸಾಮ್ರಾಜ್ಯ ಸ್ಥಾಪನೆಗೆ ಕೈಂಕರ್ಯ ನಿನ್ನಿಂದಾಗಲಿ, ಪಟ್ಟಾಭಿಷೇಕ ಧರ್ಮಪ್ರಭುವಾದ ಯುಧಿಷ್ಠಿರನಿಗೇ ಆಗಿ ಮಹಾಭಾರತದ ಇತಿಹಾಸ ಮತ್ತೊಂದು ಹೊಸಜನ್ಮವನ್ನು ಪಡೆದು, ರಾಮರಾಜ್ಯದ ನೆರಳಾಗಿ ರಂಜಿಸಲಿ.

ಲೋಕಕ್ಕೆ ಶಾಂತಿಯಾಗಲಿ.



## ೧೧ ಸತ್ವ ಪರೀಕ್ಷೆ

ಅರ್ಜುನ

ಭಾಮಿನಿ ಮಾನನಿಧಿ ಪರಿಮಳವಿದೆತ್ತಣ | ದೇನಿದೇನಚ್ಚರಿಯೆನುತಲವ |

ಳಾನನವ ಈಕ್ಷಿಸುತಲಿಳಿದನು ಮಂಚದಿಂದಿಳೆಗೆ || ೭೩ |

ಸತ್ವಪೂರ್ಣವಾದಂತಹ ಕಲೆಯ ಪ್ರದರ್ಶನವೂ, ನೋಟಕನ ದರ್ಶನವೂ ಅದು ವಿಮರ್ಶಾತ್ಮಕವಾಗಿ ಮನನ ಮಾಡುವಾಗ ಹೀಗಾಗ್ತದೆ ಅಂತ ತೋರ್ತದೆ. ಶಿವಾನುಗ್ರಹದ ಮಹಾಭಾಗ್ಯವಿಶೇಷವನ್ನು ಪಡೆದಂತಹ ನಾನು, ಇಂದ್ರನಿಂದ ಆಹ್ವಾನಿತನಾಗಿ, ಅವನು ಕುಳಿತುಕೊಳ್ಳುವ ರಥದಲ್ಲಿಯೇ, ಅವನ ಸಾರಥಿಯಾದಂತಹ ಮಾಥಲಿಯ ಸಾರಥ್ಯದಲ್ಲಿ, ಕಾಮ್ಯಕಾವನದಿಂದ ನೇರ ಏರಿದ್ದು ಈ ನಾಕಕ್ಕೆ. ಒಂದು ರೀತಿಯಿಂದ ಪಿತೃಸ್ಥಾನ ಇದೂ ಹೌದು ನನಗೆ ಏನು ಸತ್ಕಾರ! ಏನು ಪುರಸ್ಕಾರ! ದೇವೇಂದ್ರನ ಪುರಸ್ಕಾರ!! ಮಗನ ಉತ್ಕರ್ಷದಲ್ಲಿ ತಂದೆ ಹಿಗ್ಗುವುದು ಸ್ವಾಭಾವಿಕ. ಚಂದ್ರೋದಯವಾದಾವಾಗ ಸಾಗರ ಹಿಗ್ಗುತ್ತದೆ. ನಮ್ಮ ಪೌರಾಣಿಕ ಪ್ರಕ್ರೀಯೆಯಂತೆ ಸಾಗರದಲ್ಲಿ ಹುಟ್ಟಿದವನು ಚಂದ್ರನು. ಅಮೃತ ಮಂಥನದ ಕಾಲದಲ್ಲಿ ಈ ಪಿತೃ-ಪುತ್ರ ಸಂಬಂಧವನ್ನು ಮುಂದಿಟ್ಟು ನೋಡುವಾಗ, ಪೂರ್ಣಚಂದ್ರ ಉದಯವಾಗುವಾಗ ಎಲ್ಲೆ ಸಾಕಾಗುವುದಿಲ್ಲ. ಅದೇ ಚಂದ್ರನು ಕುಂದಿದ್ರೆ ಸಮುದ್ರವೂ ಕುಂದುತ್ತದೆ. ರಾಹುಗ್ರಸ್ಥ ಚಂದ್ರನಾದ್ರೆ? ಸಮುದ್ರ ಅಲುಗಾಡುವುದೇ ಇಲ್ಲ. ಇದು ಒಂದು ಪಾಠ ನಮಗೆ ಪ್ರಕೃತಿಯಿಂದ. ಈ ಮಕ್ಕಳೇನಾದ್ರೂ ಅವನತಿ ಹೊಂದುತ್ತಾ ಹೋದ್ರೆ ಕಷ್ಟ ಕಾರ್ಪಣ್ಯಕ್ಕೆ ಅಧೀನರಾದ್ರೆ 'ಪಿತೃಸ್ಥಾನ' ಅದು ಅನುಕಂಪವನ್ನು ಸೂಚಿಸುತ್ತದೆ. ಎಷ್ಟು ಸತ್ಯ! ದೇವೇಂದ್ರ ಮಹಾಶಯ ಈಗ ನನ್ನನ್ನು ಮಗ ಅಂತಲೇ ಹೇಳ್ತಾನೆ! ಚಂದ್ರವಂಶದ ಮಗನಾಗಿ ಹುಟ್ಟಿ ಸಾರ್ಥಕತೆಯನ್ನು ಸಂಪಾದಿಸಿದ್ದೇನೆ. ನನ್ನ ತಂದೆಯೆನಿಸಿದ ಪಾಂಡುವಿಗೆ ಈ ಸ್ವರ್ಗಲೋಕದಲ್ಲಿ ವಿಶಿಷ್ಟವಾದಂತಹ ಒಂದು ಪೀಠ ಸಿಕ್ಕಲಿಕ್ಕೋಸ್ಕರ ರಾಜಸೂಯಯಾಗವನ್ನು ಮಾಡುವಾಗ ಅದಕ್ಕಾಗಿ ಧನಂಜಯನಾಗಿ ದುಡಿದಿದ್ದೇನೆ. ಅದಕ್ಕೇ ಇರಬೇಕು ಈ ಸ್ವರ್ಗ ಲೋಕದಲ್ಲಿ ನನಗೆ ನಿನ್ನೆ ಮೊಟ್ಟ ಮೊದಲು ನಮ್ಮ ತಂದೆಯ ದರ್ಶನವಾಗಿದೆ - ಪಾಂಡುಚಕ್ರವರ್ತಿಯದು. ಆದರೆ “ಪಿತೃವಾದ ದೇವೇಂದ್ರನ” ದರ್ಶನವಾದದ್ದು; ಅದನ್ನೀಗ ನಾನು ಮೆಲುಕು ಹಾಕುತ್ತಿರುವದು. ತನ್ನ ಅರ್ಧಾಸನದಲ್ಲಿ ನನ್ನನ್ನು ಕುಳ್ಳಿರಿಸಿ, ತನ್ನಿಂದಲೇ ಸೃಜಿಸಲ್ಪಟ್ಟ ವಿಚಿತ್ರವಾದಂತಹ ಒಂದು ಕೀರೀಟವನ್ನು ಆ ಮಹಾಸಭೆಯಲ್ಲಿ ನನ್ನ ತಲೆಯ ಮೇಲಿಟ್ಟು “ಕಿರೀಟಿ” ಅಂತ ಹರಸಿದ!!

ಅದಲ್ಲದೇ ಗೌರವ ಅತಿಥಿಗೆ ಆನಂದವನ್ನು ಒದಗಿಸಬೇಕು; ಎಂಬ ಪ್ರತ್ಯೇಕವಾದ ಉತ್ಸಾಹದಿಂದ, ನಡೆದ ಕಲಾ ಪ್ರದರ್ಶನವನ್ನು ನಾನು ಪ್ರಾರಂಭಕ್ಕೀಗ ಎಣಿಸಿಕೊಂಡು ಕುಳೀತಿದ್ದೇನೆ. ಆ ವಿಶಿಷ್ಟವಾದಂತಹ ಕಲೆಯು ಪೂರ್ಣಪ್ರಕಾರದಿಂದ ಪ್ರದರ್ಶಿಸಲ್ಪಟ್ರೆ,

ಸರಿಯಾದಂತಹ ದರ್ಶಕನಿಗೆ ಇಂದ್ರಿಯಗಳು ನಿಷ್ಕ್ರಿಯವಾಗಿ, ಯೋಗಿಗಳಿಗೆ ಯೋಗಾರೂಢಾವಸ್ಥೆಯಲ್ಲಿ ಸಿದ್ಧಿಸುವ, ಕೇವಲವಾದ, ಅನಿರ್ವಚನೀಯವಾದ, ಮೂಕಾಸ್ವಾದನವಾದಂತಹ ಒಂದು ಆನಂದ ಆನಂದ! ರಸೋದ್ರೇಕವಾಗಿಬಿಟ್ರೆ, ಅದು ಇಂದ್ರಿಯವನ್ನು ಕೆದಕೀತು; ಅರ್ಥ ಅದರಲ್ಲಿ ಕೃತಕತೆ ಇದೆ ಧಾಂಭಿಕತೆ ಇದೆ.

ಛೇ! ಆ ಸಭೆಯಲ್ಲೊಬ್ಬಳು ಕುಣಿದ್ಲು, ಊರ್ವಶಿ ಅಂತ. ಏನು! ಏನು! ಅವಳು ಕಲೆಯನ್ನು ಅಭಿವ್ಯಕ್ತಿಸಿದ್ದಲ್ಲ. ಕಲೆಯೇ ತನ್ನ ಸ್ವರೂಪವನ್ನು ಊರ್ವಶಿಯೆಂಬ ಮಾಧ್ಯಮದ ಮೂಲಕವಾಗಿ ನನ್ನ ಮುಂದೆ ಪ್ರದರ್ಶಿಸಿತು. ಏನು ನಾದ... ಏನು ಕಿರು ಹೆಜ್ಜೆ, ಆ ಕಿರು ಹೆಜ್ಜೆಗನುಸರಿಸಿದ ಕಿರು ಗೆಜ್ಜೆಯ ನಾದವೋ? ಅಲ್ಲ ಅವಳ ಕಂಠದಿಂದ ಉಲಿಯಲ್ಪಡುತ್ತಿರುವ, ಆ ನಾದಬ್ರಹ್ಮದ ವಿಶ್ವರೂಪವೆನಿಸಿದಂತಹ ಗಾನ ಮಾಧುರ್ಯವೊ? ಅದು ಮಾತ್ರವಲ್ಲ, ಅದೇನು ಅಪೂರ್ವವಾದಂತಹ ಗಂಧವಾಹದ ಸಂಸ್ಕೃತಿಯೊ? ಏನು ಪರಿಮಳ! ಏನು ಸೌಂದರ್ಯ! ಏನು ಗಾಂಭೀರ್ಯ ! ಏನು ಅಚ್ಚುಕಟ್ಟು! ಹೇ ಏನು ಹೇಳಿದ್ರೂ ಶಬ್ದಕ್ಕೆ ಶಕ್ತಿ ಸಾಕಾಗುದಿಲ್ಲ. ಅಂತೂ ಪೂರ್ಣಾನಂದ, ಅದನ್ನೇ ಕನಸು ಕಾಡ್ತಾ ಇದ್ದೇನೆ.

ಹ್ಹ, ಏನಿದು! ಅದೇ ಗಂಧ, ಅದೇ ನಾದ... ಅದೇ ಕಿರು ಗೆಜ್ಜೆಯ ಉಲಿಯುವಿಕೆ. ಬಹುಶಃ ಕುಳಿತಲ್ಲೇ ಶಿಲೆಯಾಗಿ ಆ ಹೊತ್ತು, ಧ್ಯಾನಿಸಿ - ಧ್ಯಾನಿಸಿ, ನಾನಿದ್ದಲ್ಲಿಗೆ ಶಿವನು ಪ್ರತ್ಯಕ್ಷನಾಗಿ ಇಳಿದು ಬರುವಂತೆ ಮಾಡಿದಹಾಗೆ, ನನ್ನ ಮನಸ್ಸಿನಲ್ಲಿ ಊರ್ವಶಿಯನ್ನು ಕುರಿತಾದ ತಪಸ್ಯೆಯೋ, ಶಿವನೇ? ತಪಸ್ಸಲ್ಲ. ಹಾಗಾದರೆ ಊರ್ವಶಿ ಯಾಕೆ ಪ್ರತ್ಯಕ್ಷಳಾಗಬೇಕು ನನಗೆ? ತಪಸ್ಸಲ್ಲ. ಹಾಗಂತ ಅವಳೇ ಬಂದಳು, ಅವಳೇ ಬಂದಳು, ನಾನಿದ್ದಲ್ಲಿಗೆ, ಹೌದಲ್ಲ!

ಕಾಂಬೋಜ-ಝಂಪೆ ಶಿವ ಶಿವನೆ ತರುಣಿವಾಸವ ಸಭೆಯ ಸೂರೆಗೊಂ | ಡವಳಿವಳು

ಇಂದ್ರಗನುಕೊಲೆ ಇವಳಿಗೆರೆಗಲು ಬಹುದೆನ್ನುತ ಲತಿ ಭಕ್ತಿಯೊಳ

ಗವನೆಂದನಾ ತರುಣಿ ಯೊಡನೆ || ೭೪ ||

ಅಹುದು, ಅಹುದು. ಅದೇ ಊರ್ವಶಿ!!

ಹ್ಹಾ ! ಅವಳೀಗ ಆಡುತ್ತಾ ಇಲ್ಲ. ಆದ್ರೂ ಆ ಹೆಜ್ಜೆಯನ್ನು ನೋಡುವಾಗ ಹ್ಹ! ಅಭಿಜಾತ ಕಲಾವಿದೆ ಹೌದು ಇವಳು. ಗೆಜ್ಜೆ ಕಟ್ಟಿದಾಗ ಕುಣಿಯುವುದಕ್ಕೆ ಎಂಬ ಸಂಕಲ್ಪ ಇದ್ದುದರಿಂದ ಕುಣಿತಾರೆ ಕೆಲವರು. ಅಭಿಜಾತ ಕಲಾವಿದೆ ಆದರೆ? ಅವಳು ಹೆಜ್ಜೆ ಇಡುವದು ಕೂಡ ನಾಟ್ಯ ಶಾಸ್ತ್ರವೇ ಆಗಿರ್ತದೆ. ಅದಕ್ಕೆ ಕಾರಣ ಹೀಗೆ, ಕೆಲವರು ಸಂಗೀತದ ಆರಾಧಕರು, ಕೆಲವರು ಕಲೆಯ ಆಸಕ್ತರು, ಕೆಲರು ಅಭ್ಯಾಸಿಗಳು ಆದರೆ ಕಲೆಯೇ ಆದವರು? ಅವರು - ನೋಡಿದ್ರೂ ಕಲೆ, ಕೇಳಿದ್ರೂ ಕಲೆ. ಎಲ್ಲೋ ಒಂದು ಕಡೆಯಲ್ಲಿ

ನನಗೆ ನೆನಪು ಬರ್ತದೆ, ಕೇಳಿದ ಹಾಗೆ-ರಾಮನನ್ನು ವಶೀಕರಿಸುವದಕ್ಕಾಗಿ ಆ ರಾವಣನ ತಂಗಿ ಏನೇನೋ, ಏನೇನೋ, ಅಲಂಕಾರವನ್ನೆಲ್ಲ ಮಾಡಿಕೊಂಡ್ರೂ ಕೂಡ ಪೂರ್ಣವ್ಯಕ್ತಿತ್ವವುಳ್ಳ ರಾಮನಿಂದ ತಾನು ಆಕರ್ಷಿಸಲ್ಪಡಲಿಕ್ಕಿಲ್ಲವೆಂಬ ಸಂದೇಹದಿಂದ ಕೊನೆಗೆ ಅವಳು ಶೃಂಗಾರವಾಗಿ ಮತ್ತವಳು ಶೃಂಗಾರವೇ ಆಗಿ! ಕವಿವಾಣಿ ಇರಬಹುದು, ಆದ್ರೆ ಆ ಶಬ್ದಕ್ಕೆ ಎಷ್ಟು ತೂಕ, ಎಷ್ಟು ಅರ್ಥ. ಈಗ ಇವಳನ್ನು ನೋಡುವಾಗ ನನಗೆ ಹಾಗನ್ನಿಸುತ್ತದೆ. ಕಲೆಯೇ ಆಗಿ, ಕಲಾವತಿಯೇ ಆಗಿ, ಎಲ್ಲಿ ಮೆಟ್ಟಿದರೂ ಅದು ನಾಟ್ಯರಂಗ ಮಾಡುವವಳು. ರಾಮನು ಮೆಟ್ಟಿದ್ದಲ್ಲೆಲ್ಲಾ ಅಯೋಧ್ಯೆಯ ಕ್ಷೇತ್ರ ಮಾಡುತ್ತಿದ್ದನಂತೆ. ಈಕೆ ಎಲ್ಲೆಲ್ಲಿ ಮೆತ್ತಾಳೆ ಅದೆಲ್ಲ ನಾಟ್ಯ ರಂಗವಾಗಿ ಪರಿಣಮಿಸ್ತದೆ. ಬಂದ್ಲು... ಅವಳು ನನ್ನ ಈ ಮಂಚದ ಬಳಿಗೆ ಬರುವುದಕ್ಕಿಂತ ಮೊದಲೇ ನಾನು ಎದ್ದು ಒಮ್ಮೆ ಅವಳ ಪಾದ ಮುಟ್ಟಿ ನಮಸ್ಕರಿಸಬೇಕು. ಕಾರಣ ಏನು? ಕಲಾ ಸರಸ್ವತಿಯೇ ಅವಳು. ನನಗೆ ಆನಂದಾನುಭೂತಿಯನ್ನು ಒದಗಿಸಿ ಕೊಟ್ಟಿದ್ದಾಳೆ. ರಸಾನುಭೂತಿಯಲ್ಲಿ ಸ್ವರ್ಗವೇ ಇವಳಿಂದ ಸೂರೆಗೊಳ್ಳಲ್ಪಟ್ಟಿದೆ.

ಎಲ್ಲಾ ದೇವತೆಗಳೆಲ್ಲ ಪ್ರಸಿದ್ಧರೇ. ಅದೇ ನನ್ನನ್ನಂತೂ ಮಂತ್ರಮುಗ್ಧನನ್ನಾಗಿಸಿದ ಈ ಊರ್ವಶಿಗೆ, ನಾನು ಅಲ್ಲೇ ಹೇಳಬೇಕು ಅಂತ ಯೋಚಿಸಿದ್ದೆ. ಅಮ್ಮಾ, ಸಕಲಕಲಾಕೋವಿದೆಯಲ್ಲ ನೀನು, ಕಲಾದೇವಿಯೇ, ಇದೋ ನಿನಗೆ ಅಭಿನಂದಿಸ್ತೇನೆ ಅಂತ ಹೇಳುಬೇಕಂತ ತೋರಿತು. ಆದರೆ ಅನ್ಯಪದೇಶ, ಇದ್ದವರೆಲ್ಲ ನನಗಿಂತ ದೊಡ್ಡವರು. ಅವರ ಮುಂದೆ ನಾನು ಪಡೆದಂತಹ ಗೌರವ ಬಹಳ ಎತ್ತರದ್ದು. ಆವಾಗ ನಾನು ನೇರ ಹೋಗಿ ಊರ್ವಶಿಯನ್ನು ಅಮ್ಮ ಧನ್ಯನಾದೆ ಅಂತ ಹೇಳಿಕೊಳ್ಳಲು ಮನಸ್ಸಿದ್ದರೂ ನನ್ನ ಸಂಸ್ಕಾರ ತಡೆಯಿತು. ಈಗ ನನ್ನಲ್ಲಿ ಯಾವ ಲವಲವಿಕೆ ಇದೆ, ಯಾವ ಉತ್ಸುಕತೆ ಇದೆ? ಅದೊಂದು ತರದ ತಪಸ್ಸೇ ಆಗಿ, ಈ ದೇವಿಯನ್ನು ಇಲ್ಲಿಗೆ ಬರ ಮಾಡಿದ್ದು. ಶಿವನನ್ನು ಕಂಡಾವಾಗ ಪಾದ ಮುಟ್ಟಿ ನಮಸ್ಕರಿಸಿದ್ದೇನೆ. ಇವಳಿಗೂ ಅದೇ.

ಹಾ, ಅಮ್ಮಾ, ಹೆತ್ತವಳನ್ನು ಮಾತ್ರ 'ಅಮ್ಮಾ' ಅಂತ ಕರೆಯುವುದಲ್ಲ. ನಮಗೆ ಹುಟ್ಟಿದವಳನ್ನೂ 'ಅಮ್ಮಾ' ಅಂತ ಕರೆತೇವೆ. ಮಗಳನ್ನೂ 'ಅಮ್ಮಾ', ಮೊಮ್ಮಗಳನ್ನೂ “ಅಮ್ಮಾ', ಹೆತ್ತವಳನ್ನೂ “ಅಮ್ಮಾ'...

ಹಾಗಂತ ಗೃಹಸ್ಥಾಶ್ರಮದಲ್ಲಿ ಅವಳನ್ನೂ ಹಾಗೇ ಕರಿತೀರೊ ಅಂತ ಕೇಳಿದ್ರೆ, ಅವಳನ್ನೂ ಕರೀತೇವೆ, ಒಂದು ವಿಶೇಷಣವನ್ನು ಕೂಡಿಸಿ 'ಮಕ್ಕಳ ಅಮ್ಮಾ' ಆದಕಾರಣ ನಮ್ಮಲ್ಲಿ 'ಜಾಯಾ' ಅಂತ ಅವಳಿಗೆ ಹೇಳ್ತಾರೆ. ನೀನ್ಯಾಕೆ ಬೆಚ್ಚಿ ಬೀಳ್ತಿ? ದೇವಿ, ನನಗುಂಟಾದಂತಹ ಕೃತಜ್ಞತೆ ಅದು ಏನ್ ತಪ್ಪು?

ಏನು, ನನಗೆ ಭ್ರಮೆಯೋ! ನಾನು ಎಣಿಸಿದ ವ್ಯಕ್ತಿ ಅಲ್ಲವೇ? ನೀನು ಊರ್ವಶಿ! ಹಾಗಾದ್ರೆ ಇಲ್ಲಿ ಭ್ರಮೆಯಿಲ್ಲ. ಕ್ರಿಯಾ ಲೋಪವನ್ನುಂಟು ಮಾಡಿದೆನೆ ನಾನು? ದೇವಿ, ನಿಮ್ಮ ಈ ದೇವಲೋಕದ ಭಾಷೆಗೂ, ನಮ್ಮ ಮಾನವ ಲೋಕದ ಭಾಷೆಗೂ, ಭಾಷಾ ವ್ಯತ್ಯಾಸ ಇದ್ರೂ ಆ ಭಾಷೆಯ ಒಳಗಿದ್ದಂತಹ ಭಾವ ವ್ಯತ್ಯಾಸ ಇಲ್ಲಕ್ಕಿಲ್ಲ ಅಂತ ನನ್ನ ತರ್ಕ. ಯಾಕೆ ಹೇಳ್ತೇನೆ? ಊರ್ವಶಿಗೆ... ಕಾಮ! ಅಲ್ಲವೇ? ಅವನೀಗ ಸುಡುವುದಕ್ಕೆ ತೊಡಗಿದ್ದಾನೆ. ಯಾಕೆ? ದೇವೇಂದ್ರನ ಆಜ್ಞೆಯಂತೆ ನೀನು, ನನ್ನ ಸೇವೆಗೆ ಅಂತ ನಿಯೋಜಿಸಲ್ಪಟ್ಟವಳು. ಮಹನೀಯನಾದಂತಹ ದೇವೇಂದ್ರನಿಗೆ, ಈ ಅರ್ಜುನನಿಗೆ ಹೋದಲ್ಲಿ - ಬಂದಲ್ಲಿ ಹೀಗಿದ್ದವರು ಬೇಕು ಅಂತ ಕಲ್ಪನೆ ಏನು ಬಂತೊ!!

ಶಿವನೇ, ನಾನು ವನವಾಸಿ, ಆಮೇಲೆ ಶಿವನ ತಪಸ್ಸಿಗೆ ಹೊರಟವ. ಇನ್ನೂ ಹೊರಟಲ್ಲಿಗೆ ಮುಟ್ಟಲ್ಲಿಲ್ಲ. ಅಂದ್ರೆ ಸುತ್ತುತ್ತಾ ಇದ್ದೇನೆ. ನಾವು ಪ್ರವಾಸಿಗಳಾಗಿ ಹೊರಟಾವಾಗ ಸ್ವಯಂ ಸೇವಕರೇ, ಅಂದ್ರೆ ನಮಗೆ ನಾವು ಸೇವಕರು, ಅದರ ಗುಟ್ಟೇನು ಅಂದ್ರೆ, ಇನ್ನೊಬ್ಬರಿಗೆ ನಾವು ಸೇವಕರಾಗುವವರಲ್ಲ. ಮತ್ತೊಬ್ಬರಿಗೆ ನಾವು ಸೇವಕರಾಗಬಾರದು, ಎಂಬ ನಿಷ್ಠೆ ಇದ್ದಾಗ ಬೇರೊಬ್ಬರನ್ನು ಸೇವಕರನ್ನಾಗಿ ನೇಮಿಸಲೂ ಬಾರದು.

ನೀನ್ಹೇಳ್ತಿ, ದೇವೇಂದ್ರ- 'ಹೋಗು ಅರ್ಜುನನ ಸೇವೆಗೆ ಅಂತ ಹೇಳಿದ್ದಾನೆ. ಸೇವೆಗೆ ಅಂತ ಹೊರಟ ನಿನಗೆ ಕಾಮ ಸುಡುವುದಕ್ಕೆ ಹೊರಟಿದ್ದಾನೆ! ಹೇಗಿದ್ದೀತೊ? ನಾನು ಕಾಮನನ್ನು ಸುಟ್ಟವನ ಪ್ರಸಾದವನ್ನು ತಲೆಯಲ್ಲಿ ಹೊತ್ತುಕೊಂಡು ಬಂದವ ಇಲ್ಲಿಗೆ ಬಹುಶಃ ಆ ಕಾಮ, ಮೊದಲೊಮ್ಮೆ ಸುಡಲ್ಪಟ್ಟ ಕಾಮ. ಈಗ ನನ್ನ ಮುಂದೆ ಬಂದು ನಿನ್ನನ್ನು ಯಾವುದೋ ಒಂದು ದೊಡ್ಡ ಗಂಡಾಂತರಕ್ಕೆ ದೂಡುವುದಕ್ಕಾಗಿ ನಿನ್ನಲ್ಲಿ ಅಭಿಮಾನವುಳ್ಳ ನನ್ನ ಸಮ್ಮುಖದಲ್ಲಿ ಸುಟ್ಟಹಗೆ ತೀರಿಸಿ ಕೊಳ್ಳುತ್ತಾನೊ? ಶಿವನಲ್ಲಿದ್ದ ಹಗೆಯನ್ನು ಶಿವಭಕ್ತನಾಗಿ ಬಂದವನ ಮುಂದೆ ಈ ಭಕ್ತನು ಮೆಚ್ಚುವ, ಆರಾಧಿಸುವ ನಿನ್ನಂತಹ ಕಲಾ ದೇವತೆಗೆ ಉರಿಯನ್ನುಂಟು ಮಾಡಿ, ಈ ರೀತಿಯಾದಂತಹ ರಾಜಕಾರಣಗಳೆಲ್ಲ ಉಂಟು, ನಾನು ಹುಟ್ಟಿ ಬೆಳೆದ ನಾಡಿನಲ್ಲಿ ನೇರ ಇದಿರಿಸಲಿಕ್ಕಾಗುವದಿಲ್ಲ; ಅವನಿಂದ ಅನುಗ್ರಹಿಸಲ್ಪಟ್ಟವನನ್ನು, ಪ್ರತ್ಯಕ್ಷವಾಗಿ ನೋಯಿಸಲಿಕ್ಕಾಗುವದಿಲ್ಲ; ಹಾಗಾದ್ರೆ ಅವನಿಗೆ ಅತ್ಯಂತ ಪ್ರಿಯರಾದವರು ಯಾರಿದ್ದಾರೆ, ಅವಿಗಾದ್ರೂ ನೋಯಿಸಿ ಬಿಡೋಣ ಅಂತ. ಇದೊಂದು ನನ್ನ ತರ್ಕ-ಯುಕ್ತಿ, ಯಾಕೆ ಹೇಳೇನೆ?

ದೇವಲೋಕದ ಊರ್ವಶಿಯ ಕಥೆ ಬಿಡೋಣ. ದೇವಲೋಕದ ಇತರ ಅಪ್ಸರ ಸ್ತ್ರೀಯರಾದ್ರೂ, ತಾವಾಗಿ ಮತ್ತೊಬ್ಬನನ್ನು ಕಾಮಿಸಿ, ಹೋಗುವಂತ ಪದ್ಧತಿಯನ್ನು ನಾನು ಈ ವರೆಗೆ ಅರಿತಿಲ್ಲ. ಅವರನ್ನು ಕೆಲವರು ಕಾಮಿಸಿರಬಹುದು, ಇಷ್ಟವನ್ನು ಪೂರೈಸಿ ಕೊಳ್ಳಬಹುದು. ಅಥವಾ... ಅಥವಾ ತಮ್ಮ ಪತನಕ್ಕೆ ತಾವೇ ಕಾರಣರಾಗಿಯೂ ಉಳಿಯಬಹುದು. ಊರ್ವಶಿ ಇದು ಪರೀಕ್ಷೆ ಅಲ್ವಲ್ಲ. ಪರೀಕ್ಷೆ ಅಲ್ವಲ್ಲ. ಹಾಗಾದ್ರೆ ಇದು

**ಯಥಾರ್ಥ ಅಂತಾದ್ರೆ ತಾಯಿ,**

||ಸೌರಾಷ್ಟ್ರ-ತ್ರಿವುಡೆ| ಹರಹರೀ ಮಾತೇತಕೆಂಬಿರಿ / ದೊರೆ ಪುರೂರವನರಸಿ ಪೂರ್ವದಿ

ತರುಣಿ ನೀ ಮುರುರಾಯರಾಯನಿ ಗಿರದೆ ನಹುಷ | ೭೫ |

ತಾಯಿ,.. ನಾನು ಎಷ್ಟು ಎತ್ತರಕ್ಕೆ ಏರಲಿ, ಎಷ್ಟು ಅಗಲಕ್ಕೇ ಬೆಳೆಯಲಿ, ಹಾ... ಕೇವಲ ಪರಿಸ್ಥಿತಿ ಎತ್ತಿ ಆಡುವ ಕೈಗೂಸಲ್ಲ, ಪಾರ್ಥ. ಛಲ ತೊಟ್ಟೆ ಅಂತಾದ್ರೆ, ಆಹಾರ ನಿದ್ರಾದಿಗಳನ್ನು ಬಿಟ್ಟು ನಿತ್ತೇ ಭಗವಂತನನ್ನು ಆರಾಧಿಸಬಲ್ಲ ಎಂಬುದು ಪಾಶುಪತಾಸ್ತ್ರವನ್ನು ನಾನೂ ಪಡಕೊಳ್ಳುವ ಮೂಲಕ ಪ್ರಪಂಚಕ್ಕೆ ಬಿತ್ತರಿಸಿದವ, ಆದ್ದರಿಂದ "ಓ, ದೇವೇಂದ್ರನ ಅರ್ಧಾಸನ ಇವನಿಗೆ ಸಿಕ್ಕದೆ, ದೇವೇಂದ್ರನ ಕೈಯಿಂದ ಹೊಸ ಮುಕುಟ ಧಾರಣೆ ಇವನಿಗೆ ಆಗದೆ, ಇಗ ಇವನು ಲೋಕವನ್ನೆ ಮರೆತಿದ್ದಾನೆ, ತಾನೇ ಇಂದ್ರನಾಗಿದ್ದೇನೆ, ಚಂದ್ರನಾಗಿದ್ದೇನೆ ಎಂಬ ಅಹಂಕಾರವನ್ನೂ ತುಂಬಿಸಿಕೊಂಡಿದ್ದಾನೆ" ಅಂತ ನೀನು ಭ್ರಮೆಗೊಂಡಿಹೆಯೋ ಹೇಗೆ? 'ಭ್ರಾಂತಿಯೊ' ಅಂತ ನೀನು ಪ್ರಶ್ನಿಸಿದೆಯಲ್ಲ, ಇದನ್ನಾಧರಿಸಿಕೊಂಡು ನಾನು ಉನ್ಮತ್ತನಾಗಲಿಲ್ಲ. ಯಾವ ರೀತಿಯಿಂದಲೂ ನನಗೆ ಉನ್ಮಾದ ಉಂಟಾಗಲಿಲ್ಲ. ನಿನ್ನ ಕುರಿತಾಗಿ ಗೌರವ ಭಾವ, ಸನಾತನ ಧರ್ಮ ಪ್ರೇರಣೆಯದು- ನನಗೆ ಆ ಸಂಸ್ಕೃತಿಯ ಯಾವತ್ತೂ ಒತ್ತಡ, ದೇವಿ. ಕಲಾವಿದೆ ಎಂಬುದಕ್ಕಾಗಿ ನಿನ್ನಲ್ಲಿ ತುಂಬಿದ ಕಲೆಯ ರೂಪವಾದಂತಹ ಊರ್ವಶಿ ಆ ವಿಗ್ರಹದ ಮೂಲಕವೇ ಆರಾಧಿಸಲ್ಪಡಬೇಕಾಗಿತ್ತು. ಅದಕ್ಕಾಗಿಯೇ ಮೊದಲು ನಮಸ್ಕರಿಸಿದೆ. ಇನ್ನು ವೈಯಕ್ತಿಕವಾಗಿ ಚಿಂತಿಸುವಾಗ ಅಮ್ಮ ನೀನು. ಪುರೂರವನ ಅರಸಿಯಾಗಿದ್ದವಳು. ನಮಗೆ ನಮ್ಮ ವಂಶದ ಬಗ್ಗೆ ಚೆನ್ನಾಗಿ ಅರಿವಿದೆ. ಯಾಕೆ? ಕುಲದ ಬಗ್ಗೆ ಯಾವಾಗಲೂ ನೆನಪಿರಬೇಕು. ಕುಲೋನ್ನತಿ ಅಮೇಲೆ ಮತ್ತೇನಾದ್ರೂ ಔನ್ನತ್ಯ ಸಾಧಿಸಬೇಕು. ನಮ್ಮ ಎಲ್ಲಾ ಶಾಸ್ತ್ರಗಳು ಆಧ್ಯಾತ್ಮದ ಬುಡದಿಂದಲೇ ಬೆಳೆದು ಶಾಖೋಪಶಾಖೆಗಳಾಗಿ ವಿಸ್ತಾರಗೊಂಡವುಗಳು. ಹಾಗಾಗಿ ನಮ್ಮಲ್ಲಿ ಯಾವುದೇ ಅಭಿವೃದ್ಧಿಗೆ, ಯಾವುದೇ ಕೃಷಿಗೆ ಮೂಲಭೂತವಾದದ್ದು ಯಾವುದು? ಪರಂಪರಾ, ಹಾಗಿರುವಾಗ ನಮ್ಮ ಪರಂಪರೆಯನ್ನು ನಾವು ಯಾವಾಗಲೂ ನೆನಪಿಸ್ತೇವೆ. ಆ ಪುರೂರವನ ಅರಸಿಯಾಗಿ ನೀನು ಹಡೆದ ಮಗ ನಹುಷನಲ್ಲವೇ? ಪುರೂರವನ ಪುತ್ರ ನಹುಷ. ಆ ನಹುಷನ ಸಂತತಿಯವನು ಅರ್ಥಾತ್ ಮಗನು ಯಯಾತಿ, ತಾನೆ? ಯಯಾತಿಯಿಂದ ಕವಲೊಡೆದದ್ದಲ್ವೆ ಕನಿಷ್ಠ ಪುತ್ರನಾದಂತಹ ಪುರುವಿನಿಂದ? ಪೌರವೇಯರು ನಾವು! ಈ ದೃಷ್ಟಿಯಿಂದ ನೋಡೋಣ. ನೀನು ನಮಗೆ, ನಮಗೆ ಇಡೀ, ನನಗೊಬ್ಬನಿಗಲ್ಲ, ಆ ಪುರೂರವನನ್ನು ಸಂಬಂಧಿಸಿ ಮಾತನಾಡುವಾಗ ನಮ್ಮ ಕುಲದೇವತೆ. ಕುಲದೇವಿ ಮಾತ್ರವಲ್ಲ, ನಮ್ಮ ಕುಲಕ್ಕೆ ನೀನು ಮಹಾತಾಯಿ. ಈ ಮರದಲ್ಲಿ ಅನೇಕ ಬೇರುಗಳಿದ್ರೂ ತಾಯಿ ಬೇರು ಅಂತ ಒಂದು ಉಂಟಲ್ಲ. ಮರಕ್ಕೆ ತಾಯಿ ಬೇರು ಇದ್ದ ಹಾಗೆ, ನಮ್ಮ ಈ ವಂಶಕ್ಕೆ ನೀನು ತಾಯಿ, ತಾಯಿ ಬೇರು, ಏನಮ್ಮಾ, ತಾಯಿಯ ಮುಂದೆ ಮಗ ಹೇಗೆ ನಡಕೊಳ್ಳಬೇಕು ಎಂಬ ಸಂಸ್ಕೃತಿ ನನಗಿದೆ. ಸ್ವರ್ಗಕ್ಕೆಬಂದ್ರೂ, ವೈಕುಂಠಕ್ಹೋದ್ರೂ,

ಕೈಲಾಸಕ್ಕೋದ್ರೂ ನನ್ನ ಮೂಲ -ಮೂಲ ಇದೆಯಲ್ಲ; ಸಂಸ್ಕೃತಿ. ಆ ಸಂಸ್ಕೃತಿ ಎಂಬುದು ಆ ಪ್ರದೇಶದ ನೀರು, ಗಾಳಿ, ಅಲ್ಲಿದ್ದ ಜೀವಧಾತುಗಳನ್ನು ಹೀರಿ ಬೆಳೆದದ್ದು ತಾನೆ? ಹಾಗಾಗಿ ಅಮ್ಮ ನನ್ನ ನಮಸ್ಕಾರ. ಬಹುಶಃ ನಿನಗದು ಮರವೆಯಾಗ್ಯದೋ ಹೇಗೆ? ಇದು ಒಂದು ಇನ್ನೂ ಒಂದು ಇದೆ.

ಆ ಹಳೆಯ ಸಂಬಂಧವೂ ಹೊಸ ಸಂಬಂಧವಾಗಿದ್ದು, ವಸಿಷ್ಠರು ಯಾವುದೋ ಕಾರಣಕ್ಕಾಗಿ ನಿನ್ನ ಗರ್ಭದಿಂದ ಭೂಮಿಗೆ ಇಳಿದವರಂತೆ. ಹಾಗಾದ್ರೆ ವಸಿಷ್ಠರೂ ನಿನಗೆ ಮಗನಾದ ಹಾಗಾಯ್ತು. ವಸಿಷ್ಠರ ಮಗನ ಮಗ ಪರಾಶರ. ಆ ಪರಾಶರ ಪುತ್ರ ವೇದವ್ಯಾಸ ವ್ಯಾಸಾನುಗ್ರಹದಿಂದ ಹುಟ್ಟಿದವರು ನನ್ನ ಹಿರಿಯರು. ಯಾರು? ನನ್ನ ದೊಡ್ಡಪ್ಪ, ನನ್ನ ಪಿತೃಮಹಾಶಯರಾದಂತಹ ಪಾಂಡು ಚಕ್ರವರ್ತಿ; ಇದು ಹತ್ತಿರದ ಸಂಬಂಧ. ಹೀಗೆ ಈ ರೀತಿಯಿಂದಲೂ ನಿನಗೆ ತಾಯಿಯ ಸ್ಥಾನ. ವಸಿಷ್ಠರ ಆ ಹಳೆಯ ಇತಿಹಾಸವನ್ನಾಧರಿಸಿದರೂ ಅಲ್ಲಿಯೂ ನಿನಗೆ ಮಾತೃ ಸ್ಥಾನ.

ಬೇಡಮ್ಮ ಇನ್ನೊಂದು ಕಥೆ ಕೇಳಿದ್ದೇನೆ ನಾನು. ಈ ಸುರಲೋಕದ ಸುಂದರಿಯರು ಎಂತೆಂಥವರನ್ನೂ ವಶೀಕರಿಸುವವರು. ಅಂತಹ ಅಪ್ಸರಸ್ತ್ರೀಯರು ಸನ್ನಿಹಿತರಾದಾಗ ನಮ್ಮಲ್ಲಿದ್ದಂತಹ ನಾರಾಯಣ ಋಷಿಗಳು, ನರನಾರಾಯಣ ಋಷಿಗಳು. ಅದಕ್ಕೆ ಪ್ರತಿವಿಧಿಯಾಗಿ ಕೇವಲ ಸಂಕಲ್ಪ ಮಾತ್ರದಿಂದ ತೊಡೆತಿಕ್ಕಿ ನಿನ್ನನ್ನು ಪುತ್ರಿಯನ್ನಾಗಿ ಪಡೆದವರಂತೆ!

"ತೊಡೆ" - ನಮ್ಮ ಸಂಸ್ಕಾರದ ಪ್ರಕಾರ ತೊಡೆ ಇರುವದು ಮಗಳಿಗೆ, ಅದಲ್ಲದಿದ್ರೆ ತೊಡೆ ಮಗಳ ತಾಯಿಯದ್ದು. ಅದರಲ್ಲಿ ಎಡ- ಬಲ ಅಂತ ಇದೆ. ನಾರಾಯಣ ಋಷಿಗಳು "ನಿನ್ನ ಹುಟ್ಟಿಗೆ ಎಡ ತೊಡೆಯನ್ನು ತಿಕ್ಕಿದ್ರು' ಅಂತ ಕೇಳಲಿಲ್ಲ ನಾನು. 'ಬಲ ತೊಡೆಯನ್ನು ತಿಕ್ಕಿದ್ರು. ಬಲ ತೊಡೆ ಯಾವಾಗಲೂ ಮಗಳಿಗೆ. ಇದಕ್ಕೆ ನಮ್ಮ ವಂಶದಲ್ಲಿ ಪುರಾವೆ ಉಂಟು. ಗಂಗಾದೇವಿ, ಈ ಭೂಲೋಕದಲ್ಲಿ ನಮ್ಮ ವಂಶದ ಪುರುಷನನ್ನು ಕೈಹಿಡಿದು, ಉದ್ಧೃತಳಾಗಬೇಕಾದ ಹಿನ್ನೆಲೆಯಲ್ಲಿ, ಪ್ರತೀಪಮಹಾರಾಜರನ್ನು ಕಂಡು, ಇವನೇ ತಕ್ಕವರ ಅಂತ ತಿಳಿದು ನೇರ ಹೋಗಿ, ಅವರ ಬಲತೊಡೆಯಲ್ಲಿ ಕುಳಿತಳಂತೆ ಆವಾಗ ಪ್ರತೀಪ ಮಹಾರಾಜರು ಹೇಳಿದರಂತೆ, "ನನ್ನ ಬಲತೊಡೆ ಏರಿದ್ದರಿಂದ, ನಿನಗೆ ನಾನು ಪತಿಯಾಗುವುದಕ್ಕೆ ಸಾಧ್ಯವಿಲ್ಲ. ನಿನ್ನನ್ನು ಮಗಳಾಗಿ ಸ್ವೀಕರಿಸುತ್ತೇನೆ. ನನಗೆ ಹುಟ್ಟಿದ ಮಗನಿಗೆ, ನಿನ್ನನ್ನು ತಂದುಕೊಳ್ಳುತ್ತೇನೆ" . ಹಾಗೆ ಪ್ರತೀಪಮಹಾರಾಜರ ಮಗನಾದ ಶಂತನುವಿಗೆ ಆ ಗಂಗೆ ಹೆಂಡತಿಯಾಗಿ ಬಂದಂತೆ.

ಕಾಮದಿಂದ ಹುಟ್ಟಿದ, ಯಾವತ್ತೂ ಕಾಮಿನಿಯರಾದಂತಹ ಅಪ್ಸರ ಸ್ತ್ರೀಯರಿಗೆ, ನೀನು ಪ್ರತ್ಯಸ್ತವಾಗಿ ಹುಟ್ಟಿದಳು. ಕಾಮ ಇಲ್ಲದೇ ಇದ್ದಂತಹ, ಕಾಮದಿಂದ ವಿಕಾರಗೊಳ್ಳದೇ

ಇದ್ದಂತಹ ನರನಾರಾಯಣ ಋಷಿಗಳ ಸನ್ನಿಧಾನದಲ್ಲಿ, ತ್ಯಾಗ ರೂಪವಾದ, ನಿಯಂತ್ರಣ ರೂಪವಾದಂತಹ, ಇಂದ್ರಿಯ ನಿಗ್ರಹ ರೂಪವಾದಂತಹ, ನಾರಾಯಣ ಋಷಿಗಳ ಬಲ ತೊಡೆಯಿಂದ ಹುಟ್ಟಿದಂತಹ ನೀನು ಈಗ 'ಕಾಮದ ಉರಿಗೆ ಅಧಿನನಾಗಿದ್ದೇನೆ' ಅಂತ ಹೇಳಿದ್ರೆ ಬಹುಶಃ ವ್ಯಕ್ತಿತ್ವದಿಂದ, ಈ ದೇವಲೋಕದ ಸಹವಾಸದಿಂದ ನಿನಗುಂಟಾದಂತಹ ಒಂದು ಪರಿಸರದ ದುರ್ಗಂಧ ಅಂತ ನಾನು ತರ್ಕಿಸಿಕೊಂಡು ನಾನು ವಿಮರ್ಶಿಸಲಿಕ್ಕೆ ಹೋಗುವುದಿಲ್ಲ. ನನಗಂತೂ ನೀನು ಯಾವಾಗಲೂ ಪೂಜ್ಯಳೇ, ಯಾವಾಗಲೂ ವಂದನಾರ್ಹಳೇ.

ಆದರೆ ಒಂದಿದೆ, ನಮ್ಮ ದೇಶದಲ್ಲಿ ಆಚಾರ- 'ಒಲಿದು ಬಂದ ಹೆಣ್ಣನ್ನು ಸ್ವೀಕರಿಸುವುದು ಕ್ಷತ್ರಿಯನಾದಂತಹ ಒಬ್ಬ ಆರೋಗ್ಯವಂತನ ಕರ್ತವ್ಯ'. ನಮ್ಮ ಲೋಕದಲ್ಲಿ ಸಂದರ್ಭ ಬಂದಾಗ ಇಂತಹ ಒಂದೆರಡು ಪ್ರಕರಣದಲ್ಲಿ, ನಾನು ನನ್ನದ್ದಾದ ಕೊಡುಗೆಯನ್ನು ಕೊಟ್ಟದ್ದೂ ಉಂಟು.

ಇಲ್ಲಿ ಬರುವಂತಹ ಕಾಮಿನಿ ಯಾಕೆ ಬಾರ್ತಾಳೆ? ಹಾಗೆ ಬರುವುದಿಲ್ಲ. ಅಲ್ಲಿ ಪುತ್ರಿಕಾ ಧರ್ಮದಿಂದ ಅಲ್ಲಿ ಹೆಣ್ಣು ಹೆತ್ತವರ ಹಿರಿಯರು, ಇವನ್ನನ್ನು ಸಂತಾನೋತ್ಪತ್ತಿ ಮಾಡೋದಕ್ಕಾಗೇ ಸ್ವಾಗತಿಸಿದರು. ಅದು ವಿವಾಹದ ಧರ್ಮ, ಮರ್ಮ. ಅಲ್ಲಿ ಹೇಗೆಂದರೆ - “ಪ್ರಜಾಸಿದ್ಧ್ಯರ್ಥಂ ಇಮಾಂ ಕನ್ಯಾ ವೃಣೀಮಹೇ”

ಈಗ ಊರ್ವಶಿಯಾದಂತಹ ನೀನಿಲ್ಲಿಗೆ ಬಂದದ್ದು, ಪುತ್ರಕಾಮಿಯಾಗಿ ಅಲ್ಲ, ದೇವಲೋಕದ ಹೆಂಗಸು ನಮ್ಮೂರಿಗೆ ಬಂದು ಕೇವಲ ದೇಹ ಸುಖವನ್ನು ಪಡೆದು ನಮ್ಮ ದೇಶದ ಮರ್ಯಾದೆಯ ಪ್ರಕಾರ ಮಕ್ಕಳನ್ನು ಹಡೆದು, ತಿರಸ್ಕರಿಸಿ ಬಂದದ್ದು ಕಥೆ. ಅವನು ನಮ್ಮ ಒಬ್ಬ ಮಹಾಪುರುಷ-ಭರತ. ಆ ಭರತನ ತಾಯಿ ಶಕುಂತಲೆ. ಆ ಶಕುಂತಲೆ ಮೇನಕೆಯ ಮಗಳು. ಅಲ್ಲವೇ?

ದೇವತಾಸ್ತ್ರೀಯರು ಸಂತಾನಾರ್ಥಿಯಾಗಿ ಯಾವ ಪುರುಷನನ್ನೂ ಸಮೀಪಿಸುವುದಿಲ್ಲ. ಇಷ್ಟು ಕಾರಣ ಸಾಲದೋ? ಆದ್ದರಿಂದ ಸರ್ವಾತ್ಮನಾ ಸರ್ವ ದೃಷ್ಟಿಯಿಂದ ಅವಲೋಕಿಸಿದಾಗ ತಾಯಿಯೆಂದು ಪೂಜಾರ್ಹಳಾಗಿ ನೀನು ಉಳಿಯುವುದಿದ್ದರೆ ಇದು ಒಂದು ಘಳಿಗೆಯಲ್ಲ, ಇಡೀ ರಾತ್ರಿಯಲ್ಲ... ನಾಳೆಯೂ ಇರಬಹುದು. ಪುತ್ರ ನಾನು ನಿನ್ನನ್ನು ಸೇವಿಸ್ತೇನೆ, ಅದಲ್ಲ. ನೀನು ಕಾಮಾರ್ಥಿಯಾಗಿ ಬಂದು ಕೇಳಿದರೆ ಆಗದದು. ಆಗದು, ನಾವು ಧರ್ಮನಿಷ್ಠರು. ನಿನಗೆ ಸಂಪೂರ್ಣ ಪರವಾನಿಗೆ ಇರಬಹುದು. ಆದರೆ ಆ ಪರವಾನಿಗೆ ನೀವು ಬಾಳಿಬದುಕಿತ್ತಿರುವ ದೇಶದ ವ್ಯಾಪ್ತಿ ಮಾತ್ರ. ಅದರ ಹೊರಗಿಲ್ಲ.

ನಾನು ಇಲ್ಲಿಯ ಪ್ರಜೆಯಲ್ಲ. ಇಲ್ಲಿಯ ಅತಿಥಿ. ಅಮ್ಮಾ ಅತಿಥಿಯಾಗಿ ಬಂದವರಿಗೆ ಅಲ್ಲಿದ್ದಂತಹ ಮೂಲ ಪ್ರಜೆಗಳಿಗಿದ್ದ ಸ್ವಾತಂತ್ರ್ಯವನ್ನು ಯಾವ ರಾಷ್ಟ್ರವೂ ಕೊಡೋದಿಲ್ಲ. ಅತಿಥಿ ಯಾದವನಿಗೆ ಒಂದು ಸೀಮಿತವಾದ ಅಧಿಕಾರ ಇದೆ. ಆ ಸೀಮಿತವಾದ ಅಧಿಕಾರ, ಅವನ ಸ್ವಂತಿಕೆಯ ಆಧಾರದಲ್ಲಿದೆ. ತಾಯಿ ನಿನ್ನ ಬರೋಣ, ನನ್ನ ದೃಷ್ಟಿಯಲ್ಲಿ ಅಪರಾಧ. ಅಪರಾಧ ಅಂತ ಆಕ್ಷೇಪ ಅಲ್ಲ. ನಾನೀಗ ನಿನ್ನ ಬೇಡಿಕೆ ಹೌದಲ್ಲ?

'ನಾವು ಗಣಿಕೆಯರು' -ನನ್ನ ಸಹಮತ ಇದೆ. ಇರಬಹುದು, ನಮ್ಮ ಊರಿನಲ್ಲಿಯೂ ಇದ್ದಾರೆ- 'ಗಣಿಕೆಯರು' ಅವರು ಪುರುಷರ ಸುಖಕ್ಕಾಗಿಯೇ ಇದ್ದವರು. ಮಾತ್ರವಲ್ಲ, ಅವರ ಜೀವನ ತಪಸ್ಸದು; ನಮ್ಮಲ್ಲಿ ಹಿರಿಯರು, ಹೇಳಿದ್ದನ್ನು ಕೇಳಿದ್ದೇನೆ ಗಣಿಕೆಯಾದರೇನು? ಆ ಗಣಿಕೆಗೂ ಒಂದು ಧರ್ಮ ಇದೆ. ಅಂದರೆ ನಿತ್ಯ ಪತಿವೃತೆಯರು, ಆ ದಿನ ಯಾವವನನ್ನು ಅವಳು ವರನಾಗಿ ಸ್ವೀಕರಿಸುತ್ತಾಳೋ, ಆದಿನ ಅವನು ಬರಲಿ, ಬಾರದೇ ಹೋಗಲಿ, ಮಹಾರಾಜನೇ ಬರಲಿ, ದೇವನೇ ಒಲಿದು ಬರಲಿ ಅವಳು ಬಾಗಿಲು ತೆರೆಯುವುದಿಲ್ಲ. ಹಾಗಾಗಿ ಯಾವಳೋ ಒಬ್ಬಳು ದೇವದಾಸಿಯ ಕಥೆಯಲ್ಲಿ ನಾನು ಎಂದೋ, ಎಲ್ಲೋ ಹಾಗೊಬ್ಬಳು, ಗಣಿಕೆ ಗಂಡಕಿ ಅಂತ ಇದ್ದಂತೆ. ಅವಳ ಧರ್ಮಕ್ಕೆ ಒಲಿದು ನಾರಾಯಣನೇ ಅವಳಲ್ಲಿ ಹುಟ್ಟಿ ಬಂದಂತೆ. ನಮ್ಮಲ್ಲಿ ಅಪೂರ್ವವಾದಂತಹ ವಾಸುದೇವಸಾಲಿಗ್ರಾಮಗಳು ಅಂತ ಸಿಗ್ತವೆ. ಆ ಸಾಲಿಗ್ರಾಮದ ಉತ್ಪತ್ತಿ, ಗಂಡಕೀನದಿಯ ರೂಪದಲ್ಲಿ ಪ್ರವಹಿಸುವಾಗ ಹುಟ್ಟಿದಂತಹ ಪುತ್ರಸಂತಾನ 'ವಾಸುದೇವ' ಅಂತ. ಕೇವಲ ಭ್ರಮೆ ಅಲ್ಲ ಅದೆಲ್ಲ. ನೀನು ಗಣಿಕೆಯಾಗು, ನಿನ್ನನ್ನು ಮೆಚ್ಚಿ ಬಂದವರಿಗೆ ನೀನು ಸೆರಗು ಹಾಸು ಹೊರತು ತಾಯಿ... ನೀನು ವಿಟನನ್ನು ಹುಡುಕುತ್ತಾ ಹೋಗಕೂಡದು. ನಮ್ಮ ದೇಶದಲ್ಲಿ ಸಣ್ಣ ಭಾಷೆಯಲ್ಲಿ ಹೇಳೋದುಂಟು, ಗಣಿಕೆ ಹೌದು, ಆದರೆ ಬೀದಿ ಗಣಿಕೆಯಾಗಕೂಡದು. ರಾಮ ದೇವರ ಆದರ್ಶ ಅದು, ಶೂರ್ಪನಖಿಯಲ್ಲಿ ಅದೇ, ಪ್ರಣಯ ಅಪರಾಧ ಅಲ್ಲ, ಅಥವಾ ಅವಳಿಗೆ ಒಬ್ಬ ಸುಂದರನಾದಂತಹ ಪುರುಷ ಬೇಕು ಅಂತ ಅವಳು ಭಿಕ್ಷೆಯನ್ನು ಬೇಡುವುದು ತಪ್ಪಲ್ಲ. ಪುರುಷಾತಿಕ್ರಮಣ ತಪ್ಪು. ಇದು ನಮ್ಮ ಲೋಕದ ನೀತಿ. ನಿಮ್ಮಲ್ಲಿ ಸಂಪೂರ್ಣ ಸ್ವಾತಂತ್ರ್ಯ ಇರಬಹುದು, ಯಾಕೆ? ಸ್ವರ್ಗ, ಅರ್ಥ ಸ್ವಾತಂತ್ರ್ಯ, ಕಾಮ ಸ್ವಾತಂತ್ರ್ಯ, ಧರ್ಮ ಸ್ವಾತಂತ್ರ್ಯ ಯಾಕೆಂದರೆ ಒಂದೊಂದು ವ್ಯಕ್ತಿಯೇ ಒಂದೊಂದು ರಾಷ್ಟ್ರ.

(ಊರ್ವಶಿ: ಪುಣ್ಯ ಮಾಡಿ ಸ್ವರ್ಗಕ್ಕೆ ಬಂದ ಮನುಷ್ಯರು ನಮ್ಮನ್ನು ಅನುಭವಿಸುತ್ತಾರಲ್ಲ?)

ಇಲ್ಲಿ ಈಗ ನಿಮ್ಮನ್ನು ಭೂಲೋಕದವರು ಅನುಭವಿಸುವವರು ಇದ್ದಾರೆ ಅಂತ ನಾನು ಬಲ್ಲೆ. ಆದರೆ ಸದೇಹಿಗಳಾಗಿಯೋ? ಅಲ್ಲ. ನಮ್ಮ ಮರ್ತ್ಯ ಲೋಕದ ದೇಹ, ಆ ದೇಹಕ್ಕೆ ಸಂಬಂಧಿಸಿದಂತಹ ಯಾವತ್ತೂ ಕೆಲವು ಲೋಪಗಳು, ದೋಷಗಳು ಹಾಗಂತ

ಒಳ್ಳೆಯದೂ ಉಂಟು. ಈ ಕಾರಾಣದಿಂದಲೇ ರಜೋಗುಣವನ್ನು ಉಳ್ಳವರು ದೇವತೆಗಳು, ಸತ್ವಗುಣಾನ್ವಿತರು, ಹಾಗೆ ಕಥೆ ಉಂಟು.

ಸದೇಹಿಯಾಗಿ ಯಾವನೋ ಸೂರ್ಯ ವಂಶದವನೊಬ್ಬ ಸತ್ಯವ್ರತನೋ, ತ್ರಿಶಂಕುವೋ, ಸ್ವರ್ಗಲೋಕವನ್ನು ಏರಬೇಕು ಅಂತ ಹೇಳಿದಾವಾಗ, ಭಗವಾನ್ ವಸಿಷ್ಠರೇ ಆಕ್ಷೇಪಿಸಿದ್ದಾರೆ. ಲೋಕದ ನಿಯಮವನ್ನು ಉಲ್ಲಂಘಿಸಬಾರದು, ಶಾಸನವನ್ನು ಉಲ್ಲಂಘಿಸಬಾರದು, ಮಾಡು ಅಶ್ವಮೇಧ, ಮಾಡು, ಬೇರೆ ಬೇರೆ ಯಾಗ, "ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ" ಅಂತ ಉಂಟು. ಆದ್ದರಿಂದ ಉಂಟಾದಂತಹ ದಿವ್ಯದೇಹ, ಆ ಆಕಾಶಗಮನ, ನಮ್ಮಿ ಸ್ಥೂಲದೇಹ ಬಂದಾಗ ಈ ತಿರೆಯಲ್ಲಿ ಸಾಗ್ತಾ ಇರೋದು. ಅಂತಹ ದಿವ್ಯ ದೇಹ ಬಂದಾಗ ಆ ದೇಹ ಗಾಳಿಯಿಂದ ಒಣಗುವದಿಲ್ಲ. ನೀರಿನಿಂದ ನೆನೆಯುದಿಲ್ಲ. ಅಂದರೆ ಪಂಚಭೂತವನ್ನು ಮೀರಿ ಇರುವದರಿಂದ, ಆಗಬಹುದು ಸ್ವರ್ಗಕ್ಕೆ. ಆವಾಗ ನಿನ್ನ ಭೋಗಕ್ಕೆ ಅವು ಒದಗ್ತಾರೆ. ಈ ಮೃತ್ಯು ಶರೀರದಿಂದ ಹೋದರೆ ಅವು ನಿನಗೆ ಒದಗುವುದಿಲ್ಲಾ. ಒಂದುವೇಳೆ ಒದಗಿದರೆ ಅಲ್ಲಿಯ ವಾತಾವರಣ ನಿನಗೆ ಮಾಲಿನ್ಯವನ್ನುಂಟುಮಾಡಿ ನಿನ್ನನ್ನು ಕ್ಷಯಗೊಳಿಸುತ್ತದೆ. ನಮ್ಮ ಭೂಲೋಕದಲ್ಲಿಯೂ ಇದೇ ಪ್ರಾದೇಶಿಕತೆ, ಹಾಗಂತ, ಎಲ್ಲಾ ಪ್ರದೇಶದಲ್ಲಿಯೂ ಕೂಡ ತಾನು ಹುಟ್ಟಿ ಬೆಳೆದಂತಹ ಪ್ರದೇಶದ ಚರ್ಯೆಗಳನ್ನೆಲ್ಲಾ ನೆನೆಸಲಾಗದು. ಕೆಲವು ಕಡೆಯಲ್ಲಿ ಹೋದಾವಾಗ, ಇದನ್ನು ನಿರ್ಭಂಧಿಸಬೇಕಾಗ್ತದೆ. ಇದೆಲ್ಲಾ ಮಕ್ಕಳಿಗೂ ಅರ್ಥವಾಗುವಂತಹ ನ್ಯಾಯ. ಆದಕಾರಣ ನಾನೊಲ್ಲೆ, ನಾನೊಲ್ಲೆ,

ಕಾಂಬೋಜ-ಏಕತಾಳ, ಇಂಥಾ ಮಾತೇಕೆಂಬಿರವ್ವ | ಪಂಥವೇಕೆನ್ನೋಡನೆ | ಅಂತರಂಗ

ಶುದ್ಧವಾಗಿ / ಇಂತೆಂಬೆ ನಾ ನಿಮ್ಮೊಡನೆ ॥ ಪ || ಮನುಜ ದೇಹವಿದು

ಸದ್ಧರ್ಮದಿ | ನಡೆವುದೆಮಗೆ ನೀತಿ | ತನು ನಿಲ್ಲುವ ತನಕವಾದರೆ |

ಸುಮನಸರುಗಳ ಪ್ರೀತಿ | ಅನಿಮಿಷ ಲೋಕ ಸಾರ್ದ | ವರ ಮಾರ್ಗ

ಬೇರೆ | ಘನವೇ ದೇಹಕೆ ವಿಷಯವಿದನು! ಸುಡುಯೆಂದಳಾ ನೀರೆ || ೭೮ ||

ಆದುದರಿಂದ ದೇವಿ, ನಿನ್ನ ಛಲವನ್ನು ಅರ್ಜುನನ ಮುಂದಿಡಬೇಡ, ಛಲವನ್ನು ಅನುಭವಿಸುವುದಕ್ಕೆ ಅಥವಾ ಛಲವನ್ನು ಶಮನಗೊಳಿಸುವದಕ್ಕಿದ್ದ ಯಾವ ಬಲವೂ ಇವನಲ್ಲಿಲ್ಲ. ನಾವು ಜೀವರೇ ಹೊರತು, ದೇವರಲ್ಲ. ಕೇಳಿದ್ದೇನೆ - ದೇವಲೋಕದಲ್ಲಿದ್ದವರಿಗೆ ಕಾಲ ಭಾದಿಸುವದಿಲ್ಲಾ ದೇಹಕ್ಕೆ, ಆದಕಾರಣ ಅವರು ಯಾವಾಗಲೂ ತ್ರಿದಶ - ಮೂರನೆಯ ದೆಶೆಯಲ್ಲೇ ಇರ್ತಾರೆ, ಚಿರ ಯೌವನ ಇತ್ಯಾದಿ, ಇತ್ಯಾದಿ.

ನನಗೆ ದೇವಲೋಕಕ್ಕೆ ಬಂದಮೇಲೆ ಈಗ ಕಾಲ ಸಂದಿದೆಯೋ ಇಲ್ಲವೋ ಗೊತ್ತಿಲ್ಲ. ನನ್ನ ಆಯುಷ್ಯದಲ್ಲಿ ಸೇರಿಸಲ್ಪಡುತ್ತದೆಯೋ ಇಲ್ವೊ? ಗೊತ್ತಿಲ್ಲ. ಆದರೆ ಮೂಲತಃ ನಮ್ಮ ಊರಿನಲ್ಲಿ ಇಷ್ಟು ಹೊತ್ತು ಮಾತಾಡಿದೆ ಅಂತಾದ್ರೆ ನನ್ನ ಆಯುಷ್ಯದ ಮಾರ್ಗದಲ್ಲಿ,

ಬಹಳಷ್ಟು ದೂರ ನಾನು ಮುಂದುವರಿದ ಹಾಗಾಗ್ತದೆ. ಒಂದು ನಿಮಿಷ ಅಂತಂದ್ರೆ ಹಾಗೆ. ಆದ್ದರಿಂದಲೇ ನಮ್ಮ ಈ ರೆಪ್ಪೆ ಇದೆಯಲ್ಲ ಇದಕ್ಕೆ ನಿಮೇಷ ಅಥವಾ ನಿಮಿಷ ಅಂತ ಹೇಳ್ತವೆ. ನೀವು ರೆಪ್ಪೆ ಮುಚ್ಚುವುದೇ ಇಲ್ಲ. ಆದಕಾರಣ ನೀವು ಅನಿಮೇಷರು. ದೇಹಧರ್ಮ, ಮನೋಧರ್ಮ ಎಲ್ಲರದ್ದೂ ಒಂದೇ ಇರಬಹುದು. ದಯೆ, ಕಾರ್ಪಣ್ಯ ಇತ್ಯಾದಿ ಇತ್ಯಾದಿ. ಆದರೆ ಆ ದಯೆ, ಕಾರ್ಪಣ್ಯಾದಿಗಳನ್ನು ದೇವಲೋಕದವರು ತೋರಿಸುವುದು ಕೇವಲ ಅನುಗ್ರಹ ರೂಪವಾದಂತಹ ಆಶೀರ್ವಚನದ ಮೂಲಕ. ನಮ್ಮಂಥವರು ಯಾರಲ್ಲಿ ಆದರೂ ಅನುಗ್ರಹವನ್ನು ತೋರಿಸುವುದು ಕೇವಲ ಮನಸ್ಸಿನಿಂದಲ್ಲ, ಕ್ರೀಯಾತ್ಮಕವಾಗಿ ದೇಹದಿಂದ. ಇನ್ನೇಷ್ಟು ನನ್ನ ವಾದವನ್ನು ವಿಸ್ತರಿಸಲಿ? ಹೇಳು. ತಾಯಿ, ನಿನಗೆ ಎಲ್ಲವೂ ಪಥ್ಯವಿರಬಹುದು. ಅಮೃತವನ್ನು ಕುಡಿದವರಿಗೆ ಮತ್ತೆ ಕುಡಿದುದ್ದೆಲ್ಲಾ ಅಮೃತವೇ ಆಗಿದ್ದೀತು. ಅದು ವಿಷವಾಗಲಿಕ್ಕಿಲ್ಲ. ನಮಗೆ ಅಮೃತವೂ ಸಿಕ್ಕಲಿಲ್ಲ. ಹಾಗಂತ ವಿಷವನ್ನೂ ದಕ್ಕಿಸಿಕೊಳ್ಳುವ ಸಾಮರ್ಥ್ಯವೂ ಸಿಕ್ಕಲಿಲ್ಲ. ಹಾಗಾಗಿ ಪೂರ್ಣವಿಷವೂ ಅಲ್ಲ, ಪೂರ್ಣ ಅಮೃತವೂ ಅಲ್ಲದೇ ಇದ್ದಂತಹ ಒಂದು ಮಿಶ್ರಣದಲ್ಲಿ ನಾವು ಧರ್ಮದ ಗೂಟವನ್ನು ಗಟ್ಟಿಯಾಗಿ ಹಿಡಕೊಂಡು, ಆ ಧರ್ಮಕ್ಕೆ ಅನುಸರಿಸಿ, ನಡೆಯುವುದು. ನಮ್ಮಲ್ಲಿ ಧರ್ಮ ಅನ್ನೋದು, ಕೇವಲ ಮನೋ ಧರ್ಮ ಅಲ್ಲ. ಕೇವಲ ವೈಯಕ್ತಿಕವಾದಂತಹ ಸ್ವಭಾವವಲ್ಲ. ನಮ್ಮಲ್ಲಿ ಧರ್ಮ ಅನ್ನೋದೊಂದು ಕಟ್ಟುಪಾಡು. ಜೀವನಕ್ಕಿದ್ದಂತಹ ಒಂದು ದಾರಿ, ಒಂದು ಶಾಸನ.

ಹಾಗಿರುವಾಗ ಆಗೋದಿಲ್ಲ! ಪಾಮರರಾದಂತಹ ನಾವು ಈ ವರೆಗೋ ಉಸಿರಾಡುತ್ತಿದ್ದೇವೆ ಪ್ರಪಂಚದಲ್ಲಿ ಅಂತಾದರೆ, ಆ ಧರ್ಮನ್ನು ನಾವು ಅನುಸರಿಸಿದ್ದೇವೆ. ಹಾಗಾಗಿ ನಮ್ಮ ಇಂದ್ರಿಯ ವ್ಯಾಪಾರಕ್ಕೂ ಒಂದು ಇತಿ-ಮಿತಿ, ಅರ್ಥಾತ್ ಮರ್ಯಾದಾ. ಈ ಮರ್ಯಾದೆಯೊಳಗಿದ್ದೇವಮ್ಮ.

ನಾವೆಲ್ಲಿ ದಾರಿ ಬಿಟ್ಟಿದ್ದೇವೆ? ನಾವೆಲ್ಲಿ ಸನಾತನ ಧರ್ಮ ಬಿಟ್ಟಿದ್ದೇವೆ?

(ಊರ್ವಶಿ: ಒಬ್ಬಳನ್ನು ಐದು ಜನ ಭೋಗಿಸುತ್ತಿದ್ದೀರಲ್ಲ?)

ಈ ಸ್ವರ್ಗಲೋಕದಲ್ಲಿಯೂ ಪ್ರಚಾರಕ್ಕೆ ಬಂತೋ? ಹ! ಬಂದರೆ ಸರಿಯೋ? ಅಥವಾ ನೀನೊಬ್ಬಳೇ ತರ್ಕ ಬುದ್ಧಿಯಿಂದ ನನ್ನ ಧರ್ಮ ಪ್ರಜ್ಞೆಯನ್ನು ಕೆದಕುವುದಕ್ಕೊಂದು ಸೂಜಿ ಹಾಕಿದ್ದಲ್ವಲ್ಲ? ಯಾಕೆ? ನಿನಗೂ ಗೊತ್ತಿರಬಹುದಲ್ಲ ಅದು ಧರ್ಮ ಅಂತ. ನಾವು ಐದು ಮಂದಿ ಒಬ್ಬಳನ್ನು ವರಿಸಿದ್ದು ಯಾಕೆ? ಎಂಬುದು ಸ್ಪಷ್ಟವಾದ ಕಥೆ. ನೆನಪಿಸ್ತೇನೆ ನಿನಗೆ.

ಕಾಂಬೋಜ-ಏಕತಾಳ ಜನನಿಯೆಂದ ನುಡಿಯಮೀರ | ಲರಿಯದೊರ್ವಳನ್ನು |

ವನಿತೆಯೆಂದು ನಡೆವೆವಲ್ಲದೆ | ಮರೆವರೆ ನೀತಿಯನು || ೭೭ ||

ಅದರ ಹಿನ್ನೆಲೆಯನ್ನು ಬಹಳ ಸ್ಥೂಲವಾಗಿ ಹೇಳಿಬಿಡ್ತೇನೆ. ಆ ಕಾಲದಲ್ಲಿ ನಮ್ಮ ಐವರ ವೃತ್ತಿ, ಭಿಕ್ಷೆ ಎತ್ತುವದಾಗಿತ್ತು. ದ್ರುಪದನ ಅರಮನೆಯಲ್ಲಿ, ದ್ರುಪದ ಪುತ್ರಿಯ ಸ್ವಯಂವರ ಏರ್ಪಾಡಾಗಿತ್ತು. ಸ್ವಯಂವರಕ್ಕೆ ಒಂದು ಫಣ ಇರಿಸಲಾಗಿತ್ತು. ನಾವು ತಾಯಿಯನ್ನು ಒಂದು ಬಡವನ ಮನೆಯಲ್ಲಿ ಕುಳ್ಳಿರಿಸಿ ಈ ಮದುವೆ ಮಂಟಪಕ್ಕೆ ಬಂದವರು. ಬಂದಾವಾಗ ನಮ್ಮ ಉದ್ದೇಶ ಬೇರೆ ಆಗಿದ್ದದ್ದು ಸತ್ಯ. ಆದರೆ ತಾಯಿಯ ಸನ್ನಿಧಿಯಿಂದ ಭಿಕ್ಷೆಗೆ ಹೋಗ್ತಿವೆ ಅಂತ ಹೊರಟು, ನಮ್ಮ ಅಂತರಂಗವನ್ನು ಅಲ್ಲಿ ಹೇಳದೇ, ಅಲ್ಲಿ ಏನಾಯ್ತು ಅಂತಂದ್ರೆ 'ಮತ್ಸಲಾಂಛನ'ವನ್ನು ನಾನೇ ಭೇದಿಸಿದೆ. ದ್ರುಪದನಂದನೆ ನನಗೆ ಸತಿಯಾಗ ಬೇಕಾದವಳು. ಆದರೆ ಲಾಂಛನವನ್ನು ಭೇದಿಸಿದ ಕೂಡ್ಲೆ, ಕನ್ಯಾಗ್ರಹಣವಾಯಿತೇ ಹೊರತು, ನಮಗೆ ವಿವಾಹ ಆಗಲಿಲ್ಲ. ಹೆಣ್ಣು ನನಗೆ, ಹಾಗಾಗಿ ಅವಳನ್ನು ಜೊತೆಗೂಡಿ ಕರಕೊಂಡು ಬಾ ಅಂದ ಯುಧಿಷ್ಠಿರ, ಅವ ಅಲ್ಲಿ ಮುಂದಾಳಾಗಿ, ಮಲಗಿದಂತಹ ತಾಯಿಯನ್ನು ಎಬ್ಬಿಸಿ, ಒಂದು ಮಾತು ಹೇಳಿದ “ತಾಯೀ, ಇವತ್ತಿನ ಭಿಕ್ಷೆ ಸಂಪಾದಿಸಲಿಕ್ಕೆ, ಇಷ್ಟು ತಡವಾಯಿತು. ಬಹಳ ಶ್ರಮ ಆಯಿತು. ಆದಕಾರಣ ಅರ್ಜುನ, ದೊಡ್ಡ ಭಿಕ್ಷೆಯನ್ನು ಪಡಕೊಂಡು ಇಲ್ಲಿಗೆ ಬಂದಿದ್ದಾನಮ್ಮ ನೋಡು” . ನಮ್ಮ ಅಮ್ಮ ಎಂದಿನ ಹಾಗೆ “ಐವರು ಹಂಚಿಕೊಳ್ಳಿ” ಅಂತ ಹೇಳಿದ್ದು, ಈ ಮಾತೇನಾಯಿತು? ಅಂತ ಹೇಳಿದರೆ, ಈ ಋಷಿಗಳು ಮೈಮರೆತು ಬುದ್ಧಿಯನ್ನು ಬಿಟ್ಟು, ಮಂತ್ರದೃಷ್ಟಾರರಾಗಿ ಹೇಳಿದಮಂತ್ರದಂತಾಯ್ತು. ನಮ್ಮ ತಾಯಿ ಪ್ರಮಾದದಿಂದ ಹೇಳಿದ್ದಲ್ಲ, ಹುಚ್ಚಿನಿಂದ ಹೇಳಿದ್ದಲ್ಲ. ಯಾವುದೋ ಒಂದು ಆವೇಶ ಅದು, ನಮ್ಮಣ್ಣ ಧರ್ಮರಾಯನಿಗೆ ಸಂಕಟಕ್ಕೆ ಕಾರಣವಾಯಿತು, ಈಗ ನೀನು ಆಲೋಚಿಸು. ಆದರೂ ನಾವು ಅಷ್ಟಕ್ಕೆ ತೀರ್ಮಾನಿಸಲಿಲ್ಲ. ಇವರ ಸಾಧುತ್ವ ಎಷ್ಟು? ಎಂಬಲ್ಲಿ, ಪುನಃ ದ್ರುಪದ ರಾಜನ ಅರಮನೆಯಲ್ಲಿ, ಬಲುದೊಡ್ಡ ವಿಚಾರ ವಿನಿಮಯ ನಡೆದದ್ದು. ಆವಾಗ ಭಗವಾನ್ ವೇದವ್ಯಾಸರು, ಅದಕ್ಕೆ “ಪಾಂಡವರು ಹಾಗೆ ಹಂಚಿಕೊಳ್ಳತಕ್ಕದ್ದು, ಇದರಲ್ಲಿ ತಪ್ಪೇನಿಲ್ಲ.” ಅಂತ ಹೇಳಿದರು. ಇದು ಸ್ಥೂಲವಾಗಿ ನಾವು ಒಬ್ಬಳಿಗೆ ಐದು ಜನ ಗಂಡಂದಿರಾದ ಕಥೆ. ಈಗ ನೀನು ದೇವಲೋಕದ ಸ್ತ್ರೀತಾನೆ? ಸ್ತ್ರೀ ಆದವಳು ಏಕಕಾಲದಲ್ಲಿ ಅನೇಕ ಪುರುಷರಿಗೆ ಸತಿಯಾಗಿರಲುಅರ್ಹಳೋ?

ಇನ್ನು ಇದಕ್ಕೆ ವಿಶ್ಲೇಷಣೆ ಬೇಡಲ್ಲ. ಇಗ ಗಣಿಕೆಯರು ಅಂತ ನೀನು ಹೇಳ್ತಿ, ಒಬ್ಬಾಕೆ ಗಣಿಕೆ ನೂರುಮಂದಿ ಕಾಯ್ತಾ ಇದ್ದರೂ, ಅವಳ ದರ್ಶನವನ್ನೊ, ಸ್ಪರ್ಶವನ್ನೂ ಏಕಕಾಲದಲ್ಲಿ ಅವಳು ಅನೇಕರಿಗೆ ಏನನ್ನೂ ಹಂಚುವುದಕ್ಕೆ ಸಾಧ್ಯ ಇಲ್ವಲ್ಲ? ಹಾಗಾದರೆ ದೌಪತಿಯಾದವಳಿಗೆ, ಪತಿಯಾಗಿ ಅಂಗೀಕರಿಸ್ಪಡುವಾಗ ಐವರಲ್ಲಿ ಯಾವನೋ ಒಬ್ಬನಲ್ಲೋ? ಐವರೂ ಅಲ್ವಲ್ಲ? ಒಬ್ಬನು ಪತಿಯಾಗಿದ್ದಾವರ ಮತ್ತೊಬ್ಬ ಪತಿ ಅಲ್ವಲ್ಲ? ಹಾಗಾದರೆ ಮತ್ತೇನು ಅಂತ ಅಲ್ವೊ? ನಮ್ಮಲ್ಲಿ ಅದಕ್ಕೊಂದು ವಿಭಜನೆ ಉಂಟು. ಭೀಮಣ್ಣನಿಗೆ ಆಕೆ ಹೆಂಡತಿಯಾಗಿದ್ದಾಗ, ನನಗೆ ಅತ್ತಿಗೆ ನಕುಲ ಸಹದೇವರಿಗೂ ಹಾಗೆ ಅವಳು ಅತ್ತಿಗೆ, ಭೀಮನಿಗೆ ದ್ರೌಪತಿ ಸತಿಯಾಗಿದ್ದಾಗ, ನಮ್ಮ ಹಿರಿಯಣ್ಣನಿಗೆ ಆಕೆ ಮೈದುನಿ, ಹೆಂಡತಿಅಲ್ಲ. ಹೀಗೆ ಪರ್ಯಾಯ ಕ್ರಮದಿಂದ ಬಹಳ ಬುದ್ಧಿವಂತಿಕೆಯಿಂದ ಲೆಕ್ಕಹಾಕಿ ನೋಡಿದರೆ, ದ್ರೌಪವಿಗೆ “ತ್ರಿತಯಂ

ತ್ರಿತಯಂ ತ್ರಿಶುಹು"  ಮೂವರಲ್ಲಿ ಮೂರು ಮೂರು ಸಂಬಂಧ. ಹಿರಿಯವನಲ್ಲಿ ಎರಡು ಸಂಬಂಧ ಕಿರಿಯವನಲ್ಲಿ ಎರಡು ಸಂಬಂಧ. ಮೂರು, ಮೂರು-ಒಂಭತ್ತು. ಎರಡು, ಎರಡು- ನಾಲ್ಕು ಹೀಗೆ ಹದಿಮೂರು ಸಂಬಂಧದ ಬದುಕು. ಇದನ್ನು ಸ್ಪಷ್ಟವಾಗಿ ಬಿಡಿಸ್ತೇನೆ. ಹೀಗೆ, ನಮಗೆ ಪರ್ಯಾಯ ಕ್ರಮದಲ್ಲಿ ನಾಲ್ಕು ವರ್ಷ ಸಂದು, ಐದನೇ ವರ್ಷದಲ್ಲಿ ಅವಳು ಸಹಧರ್ಮಚಾರಿಣಿ. ಬಾಕಿ ನಾಲ್ಕು ವರ್ಷ? ನಾವು ಗೃಹಸ್ಥರು. ಹಾಗಾಗಿ ನಮಗೆ ನಿಜವಾಗಿ ನೋಡಿದರೆ ಪೂರ್ಣ ದಾಂಪತ್ಯ ಇರೋದು, ನಾವು ಪ್ರತ್ಯೇಕವಾಗಿ ಮದುವೆಯಾದ ಒಂದೊಂದು ಹೆಣ್ಣಿನ ಮೂಲಕ. ನಾವು ಗೃಹಸ್ಥರೆನಿಸಿದ್ದು, ಆ ಗೃಹಿಣಿಯ ಸನ್ನಿಧಿಯಲ್ಲಿ, ಪಾಂಚಾಲಿ ಇರುವುದರಿಂದ ನಾವು ಪತಿಯರೂ ಆಗಲಿಲ್ಲ, ಭಾವಂದಿರೂ ಆಗಲಿಲ್ಲ. ಮೈದುನರೂ ಆಗಲಿಲ್ಲ. ಇದೊಂದು ಪ್ರಪಂಚದಲ್ಲಿ ವಿಚಿತ್ರವಾದಂತಹ ದೈವೀಮಾಯೆಯ ಸಂಬಂಧ. ಹಾಗಿರುವಾಗ ಒಬ್ಬಳಿಗೆ ಐವರು ಪತಿಅಲ್ಲೋ? ಅಂತ ಹೇಳೋದು, ಅವಳನ್ನು ಸಂಬಂಧಿಸಿ. ಅವಳಿಗೆ ಐವರು ಪತಿಯಂದಿರು. ನಮಗೆ ಸತಿ ಒಬ್ಬಳೇ. ಪತಿಯಾಗುವ ಕಾಲಕ್ಕೆ ನನಗೆ ಸತಿ ಯಾರು? ದ್ರೌಪತಿ ಯಾರು? ಹಾಗಾಗಿ ಆ ದಾಂಪತ್ಯ ಪರ್ಯಾಯ ಕ್ರಮದಲ್ಲಿ ತಿರಗ್ತಾ ಬಾಇರದೆ. ನಾಲ್ಕು ವರ್ಷಕ್ಕೊಮ್ಮೆ ಸದಾ ದಾಂಪತ್ಯ. ನಿತ್ಯ ಸತಿ-ಪತಿ ಅಂತ ಹೇಳೋದು. ಹಾಗಾಗಿ ನಾವು ಸ್ವಂತಕ್ಕೆ ಬೇರೆ ಬೇರೆ ಹೆಂಡತಿಯನ್ನು ಮಾಡಿಕೊಂಡಿದ್ದೇವೆ. ಅದು ಮಾತ್ರವಲ್ಲ, ಆ ಹೆಂಡತಿಯರಲ್ಲಿ ಪ್ರತ್ಯೇಕ * ಸಂತಾನವನ್ನು ಪಡೆದಿದ್ದೇವೆ. ನಾಳೆಗೆ ಪಿಂಡೋದಕ ಹಾಕೋದಕ್ಕೆ ಪಾಂಚಾಲಿಯಲ್ಲಿಯೂ ನಾವು ಮಕ್ಕಳನ್ನು ಪಡೆದಿದ್ದೇವೆ. ಆದರೆ ಪಾಂಚಾಲಿಯಲ್ಲಿ ಹುಟ್ಟಿದ ಈ ಐದು ಮಕ್ಕಳಲ್ಲಿ, ಒಬ್ಬ ನೇರ ಧರ್ಮರಾಯನ ಮಗ, ಮತ್ತೊಬ್ಬ ನೇರ ಭೀಮಸೇನನ ಮಗ. ಇನ್ನೊಬ್ಬನು ಅರ್ಜುನನ ಮಗ, ತಾಯಿ ಒಬ್ಬಳೇ. ಈ ಐದು ಮಕ್ಕಳು ಐದು ಜನ ಪುರುಷರದ್ದು. ಇದನ್ನೆಲ್ಲಾ ಆಚಾರಕ್ಕೆ ತೆಕ್ಕೊಳ್ಳಿಕ್ಕೆ ಹೋದರೆ ಇದು ಅಪರೂಪವಾದಂತಹ ಯಾವುದೋ ಒಂದು ಅಪೂರ್ವ ಸಂವಿಧಾನ. ಆದಕಾರಣ, ದೌಪದಿಯ ಬಗ್ಗೂ ನೀನು ಆಕ್ಷೇಪ ಹೇಳಬಾರದು. ಅವಳಿಗೆ ಐದು ಜನ ಗಂಡಂದಿರು. ನಾವೂ ಹಾಗೆ. ಐದು ಜನ ಗಂಡಂದಿರಲ್ಲ, ಗಂಡಂದಿರು ಒಂದು ವರ್ಷ. ಸ್ಪಷ್ಟ ಆಯ್ತಲ್ಲಾ? ಹಾಗಾಗಿ ನಾರದರು ಬಂದು ಮಾಡಿದ ಕಟ್ಟಪ್ಪಣೆಯ ಆ ಹೊಸಸೂತ್ರಕ್ಕನುಸರಿಸಿ, ಬ್ರೌಪದಿಗೂ ನಮಗೂ ಸಂಬಂಧ ಹೇಳಿದ್ದಾರೆ. "ತಿಲಮಾತ್ರ ಇದರಲ್ಲಿ ವ್ಯತಿರಿಕ್ತ ಬಂದಲ್ಲಿ ಒಬ್ಬರ ಸತಿಯಾಗಿ, ಅವಳಿದ್ದಾವಾಗ ರಾತ್ರಿಯಾಗಲಿ, ಹಗಲಾಗಲಿ, ಆಕೆಯ ಅಥವಾ ಆಕೆಯ ಗಂಡನನ್ನು ಕಾಣುವಾಗ ನೀವು ಆ ಮನೆಯ ಮಂದಿಯಾಗಿ ವ್ಯವಹರಿಸಕೂಡದು. ಅಪ್ಪಣೆವಿನಾ ಒಳಗೆ ಹೋಗಕೂಡದು. ಹಾಗೆ ಯಾವನು ಹೋಗ್ತಾನೆ? ಅವನು ಪ್ರಾಯಶ್ಚಿತಕ್ಕೆ ಬೇಕಾಗಿ ಹನ್ನೆರಡು ವರ್ಷ ತೀರ್ಥಯಾತ್ರೆ ಮಾಡಬೇಕು. ಹನ್ನೆರಡು ವರ್ಷ ಅವ ತೀರ್ಥಯಾತ್ರೆ ಮಾಡುವಾಗ, ಅವನಿಗೆ ಇಲ್ಲಿ ಎಷ್ಟು ಪರ್ಯಾಯ ತಪ್ಪಿ ಹೋಗ್ತದೆ? ಹಾಗಾದರೆ ಅಷ್ಟು ದೂರ ಹೋಗದೆ, ಅವನಿಗೆ ದೌಪದಿಯನ್ನು ಭೋಗಿಸುವ ಹಕ್ಕು. ಇಷ್ಟು ವಿಸ್ತಾರವಾಗಿ ನಮ್ಮಲ್ಲಿ ಈ ಕಟ್ಟುಪಾಡುಗಳಿವೆ.

ಸುದ್ದಿ ಕೆಲವು ಸಲ ಹಾಗಾಗದೆ “ಪಾಂಡವರು ಐದು ಜನರು ಒಬ್ಬಳನ್ನು ಮದುವೆಯಾಗಿದ್ದಾರೆ". ಆವಾಗ ವಿಕಲ್ಪಕ್ಕೆ ಕಾರಣ ಆಗ್ತದೆ, ಅದು ಏನು? ನಮ್ಮೂರಿನಲ್ಲಿದ್ದವರಿಗೆ ಇಂಥ ಸುದ್ದಿಯಲ್ಲೆಲ್ಲಾ ವಿಕಲ್ಪ ಆಗೋದಿಲ್ಲ, ಯಾಕೆ? ಆಕ್ಷೇಪಕ್ಕೆ ಅಲ್ಲಿ ಉತ್ತರ ಸಿಕ್ಕಿದೆ. ಇಲ್ಲದಿದ್ದರೆ ದೇವಿ, ನಮ್ಮ ಒಳ್ಳೆ ನಡತೆಯಲ್ಲಿಯೂ ಕೂಡ ಕೆಟ್ಟದ್ದನ್ನೆ ಕಾಣುವ ಒಬ್ಬ ನಮ್ಮ ಕುಟುಂಬದಲ್ಲಿ ಇದ್ದಾನೆ. ನಿಮ್ಮ ದೇವಲೋಕದಲ್ಲಿದ್ದವರಿಗೆ ಗೊತ್ತುಂಟೊ, ಇಲ್ವೊ? ಅವ ಇಂತಾದ್ದನ್ನೇ ಹಿಡಕೊಂಡು ನಮ್ಮ ಸಂತಾನ ತಲೆ ಎತ್ತದ ಹಾಗೆ ಇದ್ದಂತಹ ತಂತ್ರಗಳನ್ನೆಲ್ಲಾ ರೂಪಿಸಿದ್ದ. ಆದರೆ ಪ್ರಪಂಚ ಅವನನ್ನು ನಂಬುವದಿಲ್ಲಾ. ಅವ ಈಗಾಗಲೇ ಬಲು ದೊಡ್ಡ ಸುಳ್ಳಗಾರ, ಅಪಾದಿತ ಅಂತ ಆಗಿದೆ. ಅವ ನಮ್ಮಂಥವರ ಮೇಲೆ ಏನಾದರಷ್ಟು, ಕೆಸರು ಚೆಲ್ಲಿದರೆ ಜನ ನಂಬೋದಿಲ್ಲ. ಯಾಕೆ? ಅವ ಕೆಸರಿನಲ್ಲಿ ಮುಳುಗಿದ್ದಾನೆ. ಆದರೂ ಕೆಲವರಿದ್ದಾರೆ, ಅದನ್ನೇ ನಂಬಿ ನಮ್ಮನ್ನು ಆಕ್ಷೇಪಿಸುವವರು. ಇದು ನಮ್ಮ ಪ್ರಪಂಚ. ಇದು ನಮ್ಮ ದ್ರೌಪದಿ - ಪಾಂಡವರ ಸಂಬಂಧ.

(ಊರ್ವಶಿ: ಅಲ್ಲಿ ನಿಮಗೆ ತಾಯಿ-ಕುಂತಿಯ ಮಾತು ಮುಖ್ಯವಾಯಿತು. ಇಲ್ಲಿ ಈಗ ದೇವೆಂದ್ರನದು ಪಿತೃವಚನ ಅಲ್ಲವೆ?)

ಅಲ್ಲಿ ಬಂದದ್ದು 'ಮಾತೃವಚನ, ಮಾತೃವಚನ !! “ಮಾತೃದೇವೋಭವ” - ಹಾಗೆ. ನೀನು ಹೇಳಿದ ಹಾಗೆ ಪಿತೃವಚನವೂ ಮಹತ್ವವಾದದ್ದು.

ಓಹ್ಹೊ... ಪಿತೃವಾದ ಇಂದ್ರನ ಮಾತಿನಂತೆ ನೀನು ಬಂದವಳಿರಬಹುದು. ಆದರೆ ಅದನ್ನು ನಡೆಸಲಾದೀತೆ?

ಮಾತೇನೋ ಸರಿ. ಯಾಕೆ? ಮಾತೃ-ಪಿತೃ ಇದೆರಡನ್ನೂ ಒಟ್ಟಿನಲ್ಲಿ ಕೇಳುವುದು 'ಪಿತರೌ', ತಾಯಿಯು ವಿಶೇಷ, ತಂದೆಯೂ ವಿಶೇಷ. ಆದರೆ ಊರ್ವಶೀ ದೇವಿ, ಇಲ್ಲಿ ಒಂದು ಸಮಸ್ಯೆ ಉಂಟು. ನನ್ನ ಪಿತೃ ಅಂದರೆ, ನಮ್ಮ ಭೂಲೋಕದಲ್ಲಿ ನನ್ನ ತಂದೆ. ಅವನಿಗೆ ನೀನು ಸೊಸೆಯಾಗಲಾಖೆಯೊ? ಒಂದು ಪ್ರಶ್ನೆ.

ಇಲ್ಲಿ ನನ್ನ ಪಿತೃಸ್ಥಾನಲ್ಲಿದ್ದಂತಹ ಇಂದ್ರ, ಈ ಇಂದ್ರನಿಗೆ ನಾಳೆಯಿಂದ ನೀ ಸೊಸೆಯಾಗುವೆಯೊ? ಇದೆರಡೂ ಆಗದು. ಯಾವಾಗ ನನ್ನ ತಂದೆಗೆ ನೀನು ಸೊಸೆಯಾಗುವದಿಲ್ಲ. ಆ ತಂದೆ ಪೂರ್ತಿ ಪಿತೃ ಸ್ಥಾನದಲ್ಲಿದ್ದುಕೊಂಡು 'ಪಿತೃವಚನ' ಎಂಬ ಆ ಎತ್ತರದ ಅಧಿಕಾರ, ಆ ಅಧಿಕಾರದ ಶಬ್ದ, ಅದಕ್ಕೆ ಅವ ಅರ್ಹ ಅಲ್ಲ. ದೇವೇಂದ್ರನ ಮಾತು ನನಗೆ ಪಿತೃವಚನವಲ್ಲ, ದೇವೇಂದ್ರನ ಮಾತು ನನಗೆ ನಿರ್ದೇಶನ. ಈಗ ಪಿತೃ-ಪತ್ರ ಸಂಬಂಧ ಇಲ್ಲಾ ಅಂತ ಅಲ್ಲಾ. ಮೊದಲನೆಯದಾಗಿ ನಾನು ಈ ಇಲ್ಲಿ, ದೇವೇಂದ್ರನ ಮಗ ಉತ್ತರಾಧಿಕಾರಿ, ಅಂತ ಹೇಳಿದರೆ ದೇವೇಂದ್ರ ಅಂಗಿಕರಿಸಿಯಾನೊ?

ದೇವತೆಗಳು ಅಂಗೀಕರಿಸಿಯಾರೊ? ದೇವಲೋಕದ ಯುವರಾಜ ನಾನಾಗಲಿಕ್ಕಿಲ್ಲ. ಅದು ಅವನೇ; ಜಯಂತ. ಹೀಗೆಲ್ಲಾ ನೋಡುವಾಗ ದೇಹ ಸಂಬಂಧ ಅಂತ ಹೇಳಿದರೆ, ಆ ಶರೀರ ಸಂಬಂಧಕ್ಕೆ ಸನಾತನೀಯವಾದಂತಹ ಧಾರ್ಮಿಕ ಹಿನ್ನೆಲೆ ಬೇಡವೆ? ಎಂಬುದಕ್ಕಾಗಿ, ನಮ್ಮ ಮರ್ತ್ಯ ಲೋಕದಲ್ಲಿ ದ್ರೌಪದಿಯನ್ನು ನಾವು ಅಂಗೀಕರಿಸಿದ್ದಕ್ಕೆ, ಮಾತೃವಚನ ಪ್ರಧಾನ. ಇಂದ್ರ ಯಾವಾಗಲೂ ಪಾಂಡವರಿಗೊ ಅಥವಾ ಅರ್ಜುನನಿಗೋ ಸಂಪೂರ್ಣ ಪಿತೃಸ್ಥಾನದಲ್ಲಿರುವವನಲ್ಲ. ಅಲ್ಲಾ ಎಂಬುದು ನಮಗೆ ಎಷ್ಟೋಸಲ ಗೊತ್ತಾಗ್ಯದೆ. ದೇವಲೋಕದಿಂದ ನಾವು ಏನಾದ್ರೂ ಪಡೆಯಬೇಕಾದ್ರೆ ಆ ವೈದಿಕ ಮಾರ್ಗವನ್ನೇ ಅವಲಂಬಿಸಿಕೊಂಡು, ಇಂದ್ರಪ್ರಸಾದವನ್ನು ಪಡೀಬೇಕಾಗಿದೆ. ಆದ್ದರಿಂದ ನೀನು ಯಾವ ಯುಕ್ತಿಯನ್ನೇ ಹೇಳಿದರೂ, ದೇವೇಂದ್ರನಿಗೆ ನೀನು ಸೊಸೆಯಾಗುವುದಿಲ್ಲ. ಯಾಕೆ ಸೊಸೆಯಾಗುವುದಿಲ್ಲ ಅಂತ ಹೇಳಿದ್ರೆ, ನಿನ್ನ ದೇಹದ ಸುಖವನ್ನು ದೇವೇಂದ್ರ ಅನುಭವಿಸದ್ದಿದ್ರೂ ಇರಬಹುದು. ಅದು ಮರ್ತ್ಯರಾದಂತಹ ನಮ್ಮ ಜನಗಳ ಯಾವತ್ತೂ ಸುಖ-ಸಮಾಗಮದ ಹಾಗೆ ಆಗಿರಲಿಕ್ಕೂ ಇಲ್ಲ. ನೀವು ಸಂತಾನ ಪಡೆಯುವುದೂ ಇಲ್ಲ. ಹಾಗಾಗಿ ಅಂದೂ ಮೂವತ್ತೂರು ಕೋಟಿ, ಇಂದೂ ಮೂವತ್ತೂರು ಕೋಟಿ, ಮುಂದೆಯೂ ಮೂವತ್ತೂರು ಕೋಟಿ.

ಹಾಗಾದ್ರಿಂದ ನಮ್ಮ ಊರಿನ ಸಂಬಂಧಕ್ಕೂ, ನಿಮ್ಮ ಊರಿನ ಸಂಬಂಧಕ್ಕೂ ಏನು? ನೀನು ದೇವೇಂದ್ರನ ಅಣತಿಯಂತೆ ನಿನ್ನನ್ನು ನೀನು ಬೇರೊಬ್ಬರಿಗೂ ಸರ್ಮಪಿಸಿಕೊಳ್ಳಬಲ್ಲೆ. ಒಟ್ಟೂ ಇದರ ಅರ್ಥ ಏನು? 'ಸ್ವಂತಿಕೆ ಇಲ್ಲದವರು' ಅಂತ ಅರ್ಥ. "ಹೋಗಿ ಭೂಲೋಕಕ್ಕೆ, ಯಾವನೋ ಒಬ್ಬ ಕೂತಿದ್ದಾನೆ ತಪ್ಪಸ್ಸಿಗೆ; ಐದು ವರ್ಷದ ಹುಡುಗ. ಅವನ ತಪ್ಪಸ್ಸನ್ನು ಕೆಡಿಸಿ ಬನ್ನಿ" ಅಂತ, ದೇವೇಂದ್ರ ಹೇಳಿದರೂ, ನೀವು ಹೆಂಗಸರಾಗಿ ಐದು ವರ್ಷದ ಹುಡುಗನ ಮುಂದೆ ನಿಮ್ಮ ಸ್ತ್ರೀತ್ವ ಪ್ರದರ್ಶನಕ್ಕೆ ಏನೂ ಉಪಯೋಗ ಇಲ್ಲ ಅಂತ ಗೊತ್ತಿದ್ರೂ, ನಾನು ಕೇಳಿದ್ದೇನೆ 'ಧ್ರುವನ ತಪಸ್ಸಿಗೋ, ಅಲ್ಲಿಗೋ-ಇಲ್ಲಿಗೋ-ಎಲ್ಲ... ನೀನಲ್ಲ....ಇಂದ್ರನ ಆಜ್ಞಾನುವರ್ತಿನಿಯಾಗಿದ್ದವರು-ದೇವೇಂದ್ರನ ಆಯುಧಗಳು ಅಂತ ಅರ್ಥ, ದೇವೇಂದ್ರನನ್ನು ಪೂಜಿಸುವ ನಮಗೆ ಅವನ ಆಯುಧವೂ ಪೂಜ್ಯವಸ್ತುವೆ. ನೀನು ಎಷ್ಟು ಮಾತಾಡು, ಈ ವ್ಯವಹಾರ ಇದೆಯಲ್ಲ, ಈ ಕಾಮವ್ಯವಹಾರ. ಇದರಲ್ಲಿ ಅರ್ಜುನನ್ನು ನೀನು ದೇವರಾಣೆ ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲ.

ನಾನು ಗೆ ಕಾಲ್ಹಿಡಿತೇನೆ.

ಕಾಂಬೋಜಿ-ಝಂಪೆ| ಕಾಡಬೇಡ ತಾಯೆ ಮುಂದಿ | ಸ್ನಾಡಲ್ಲೊಮ್ಮೆ ನಾನು / ನೋಡದೊಂದೇ

ಮನದೊಳಿರಲು| ಮನ್ಮಥ ಮಾಳ್ಪುದೇನು ಬೇಡಿಕೊಂಬೆ ಪಾದಕೆರಗಿ

ತಾಯಿ ತನುಜರನ್ನು | ನೋಡಲ್ ಬಂದ ಕೊರತೆ ಯುಂಟೆ |

ಬಿಜಯಂಗೆಯ್ಯರಿನ್ನು || ೭೮ |

ನೀನು ಏನೂ ಹೇಳು. ಬಹಳ ಮೊದಲಿಂದ ನನ್ನ ಹೃದಯಲ್ಲಿ ಮೂಡಿದ ಭಾವ, ಅದು ಅಲುಗಾಡುವುದೇ ಇಲ್ಲ. ಬಹುಶಃ ಮನಶಾಸ್ತ್ರದಲ್ಲಿಯೂ ಹಾಗೆಯೇ ಇದೆ. ನಮ್ಮ ಊರಿನಲ್ಲಿ ಯಾವ ಹೆಣ್ಣು, ಯಾವ ಗಂಡು, ಬೇರೆ - ಬೇರೆ ವ್ಯವಹಾರದಲ್ಲಿ ಆ ಹೆಣ್ಣು ಇವನಿಗೆ ಹೆಂಡತಿಯಾಗಬಹುದಾದವಳು, ಗೋತ್ರವೋಂದಲ್ಲ ಯಾವುದೂ ಒಂದಲ್ಲ. ಆದರೆ ವಿವಾಹಕ್ಕೆ ಅನುಕೂಲವಾದದ್ದು ಹಿರಿಯರನೋಟದಲ್ಲಿ, ಕೆಲವೊಮ್ಮೆ ಏನು ದೋಷ ಆಗ್ತಿದೆ ಅಂತಂದ್ರೆ ಆ ಹೆಣ್ಣು, ಈ ಗಂಡು ಒಟ್ಟಿಗೇ ಎಳವೆಯಿಂದಲೇ ಅಡಿ, ಆಡಿ ಕೂಡಿ ಬೆಳೆದು ಬಂದಾವಾಗ ಅವರಲ್ಲಿ ಆ ದಿವ್ಯವಾದಂತಹ ಯಾವುದೋ ಒಂದು ಭಾಂಧವ್ಯದ ಸ್ನೇಹ ಊರ್ಜಿತವಾಗಿ ಉಳಿದಿತೇ ಹೊರತು, ಕ್ಷಣಿಕವಾದಂತಹ ಈ ದೇಹ ಸಂಬಂಧ ಉಳಿಯುವುದಿಲ್ಲ. ಹಾಗಾಗಿ ಎಷ್ಟೋ ದಾಂಪತ್ಯ, ಗಂಡ ಹೆಂಡತಿ ಅಂತ ಪ್ರಪಂಚದಲ್ಲಿ ಕಂಡರೂ ಅವರು ಅಣ್ಣ-ತಂಗಿಯರಾಗಿ ಬದುಕುವುದುಂಟು. ಅಪರೂಪಕ್ಕೆ ದೊಡ್ಡ ಸಂಸ್ಕೃತಿ ಅದು, ನಾವು ಪ್ರೇಮಿಸೋಣ, ಅಂತ ಹೇಳಿದರೆ- ಒಬ್ಬ ಪ್ರೇಮಿಸೋಣ ಅಂತ ಹೇಳಿದರೂ, ಮತ್ತೊಬ್ಬಳು ಹೇಳ್ತಾಳೆ "ಪ್ರೇಮಿಸೋಣ, ನೀನು ನನ್ನ ಅಣ್ಣ- ನಾನು ನಿನ್ನ ತಂಗಿ" . ಹೀಗೆ ಇದು ಅಭೂತಪೂರ್ವವಾದಂತಹ ಸೂಕ್ಷ್ಮವಾದಂತ ಸಂವೇದನೆ. ಅದು ಇಲ್ಲದಿದ್ದವರಿಗೆ, ನಿನ್ನೆಯ ನೆನಪು ಇವತ್ತಿಲ್ಲದಿದ್ದವರಿಗೆ ಏನೂ ಆಗ್ತದೆ. ಅವರಿಗೆ ಪ್ರಾಕೃತರು ಅಂತ ಹೇಳ್ತವೆ. ಊರ್ವಶಿ-ಎಂಬ ಹೆಸರು ಕೇಳಿದಾವಾಗಲೇ, ಕಂಡಾವಗಲೆಲ್ಲ ನನಗೆ ಆ ಭಾವ ಮೂಡಿತು! ನಮ್ಮ ವಂಶಕ್ಕೆ ಮೂಲ ತಾಯಿಯಾದವಳು, ಹೋ! ಎಷ್ಟು ದೊಡ್ಡವಳು!! ಅಂತ. ನಾಟ್ಯರಂಗಸ್ಥಳದಲ್ಲಿ ನಿನ್ನ ನಟನೆಯನ್ನು ಕಂಡಾವಾಗ, ಆಹಾ! ಕಲಾ ಮಾತೆ, ಕಲಾ ರೂಪಿಣೀ, ಕಲಾ ಸರಸ್ವತೀ ಎಂಬ ಭಕ್ತಿ ಭಾವ ಮೂಡ್ಯದೆ. ಅದು ಆನಂದವನ್ನು ಕೊಟ್ಟದೆ. ಅದು ನನ್ನ ವಿಕಾರವನ್ನು ಕೆರಳಿಸಲಿಲ್ಲ. ಹಾಗಿರುವಾಗ ಸ್ಥಾಯಿಯಾದದ್ದು ಇಷ್ಟು ಧೀರ್ಘವಾಗಿ ಏರಿ ಬಂದಾವಾಗ ಥಕ್ಕನೆ ಅದು ಹೇಗೆ ಲೈಂಗಿಕ ವಿಷಯಕ್ಕೆ ಪರಿವರ್ತನೆ ಹೊಂದೀತು? ನನ್ನ ಮನಸ್ಸು ಹಾಗೆಲ್ಲಾ ಪರಿವರ್ತನೆ ಹೊಂದಲಿಕ್ಕಿಲ್ಲ. ಆ ಭಾವಾವೇ ಹುಟ್ಟುವುದಿಲ್ಲ. ಹಾಗಾಗಿ ಇದು ನನಗೆ, ನೀನು ಕಾಡುವುದು ಅಂತ ನೋವನ್ನುಂಟು ಮಾಡುತ್ತದೆ. ಕಾಡಬೇಡ, ನನಗೆ ನೋವುಂಟಾದರೆ ನನ್ನ ಪ್ರತಿಕ್ರಿಯೆ ಏನಾದೀತು?

ದೇವಲೋಕ, ಹಲ್ಲೆ ಮಾಡಲಾರೆ, ಕೈ ಮಾಡಲಾರೆ. ಆದರೆ ಸ್ವರ್ಗಲೋಕದಲ್ಲಿ ಉಳಿದಷ್ಟು ದಿವಸ ನನಗೆ ಉಂಟಾದಂತಹ ಎಲ್ಲಾ ಸುಖಾನುಭವವನ್ನು ಈ ಒಂದು ಕಹಿ, ಮುಚ್ಚಿ ಹಾಕಿಬಿಟ್ಟಿದೆ. ಈ ಕಹಿ ಮುಚ್ಚಿ ಹಾಕಿಬಿಟ್ಟರೆ, ಸ್ವರ್ಗ ಲೋಕದ ಬಗ್ಗೆ ನನಗಿದ್ದ ಗೌರವ ಅಥವಾ ನೀನ್ ಹೇಳಿ, "ದೇವೇಂದ್ರ ಹೇಳಿ ಕಳಿಸದ್ದು" ಅಂತ, ಆ ದೇವೇಂದ್ರನಲ್ಲಿದ್ದಂತಹ ಪೂಜ್ಯಭಾವ, ಇದು ತನ್ನಷ್ಟಕ್ಕೆ ತಾನೇ ಮಾಯವಾಗಿ, ನಾನು ಉಭಯ ಭ್ರಷ್ಟನಾದೇನು. ಹೇಗೆ? ಸ್ವರ್ಗ, ಇಂದ್ರ ಇವರ ಕುರಿತಾದಂತಹ ಭಾವನೆಯೂ ಕೂಡ, ಛೇ... ನಾಕವೂ ನಾಕವಲ್ಲ. ಅಲ್ಲಿಯೂ ಇದೆಲ್ಲ ಇದೆ. ಅಂತಾದ್ರೆ ಏನಾದೀತು? ನಾನು ನಂಬಿದಂತಹ ವೈದಿಕ ಕರ್ಮಕಾಂಡದ ಮಾರ್ಗ ಅದು ಅಲುಗಾಡೀತು. ನಡೆಯುವ

ಮಾರ್ಗ ಅಲುಗಾಡಿದರೆ, ನಡೆಯುವವನು ಎಷ್ಟು ಆರೋಗ್ಯವಂತನಾದರೂ ಪತನ ಹೊಂದಿಯಾನು. ಹೀಗೆ ಏನೇನೋ, ಏನೇನೋ, ಏನೇನೋ, ಆಗಿ ಹೋದೀತು ನನ್ನ ನಡತೆಯಲ್ಲಿ. ಆದ್ದರಿಂದ, ನಾನು ನಿನ್ನ ಹತ್ತಿರ ನನ್ನ ತಾಯಿ ಅಂತ ಹೇಳ್ತೇನೆ.

ಬೇಡ, ನೀನು ನನ್ನನ್ನು ಕಾಮಿಸಿ ಬಂದವಳು. ಈ ಅರ್ಜುನನ ಜೀವನದ ಕುರಿತಾದಂತಹ ಕಾರುಣ್ಯಭಾವ ನಿನಗೆ ಇದೆ ಎಲ್ಲಾದರೂ ಒಳ್ಳೆಯದಾಗಲಿ ಎಂಬ ಭಾವನೆ ಯಾದರೂ ಬಂದು ನನ್ನನ್ನು ಬಿಟ್ಟು ಕೊಡಮ್ಮ. ನನಗಾಗಲಿಕ್ಕಿಲ್ಲ. ಇದು ನನಗಾಗಲಿಕ್ಕಿಲ್ಲ ಇದು.

("ಒಲಿದು ಬಂದ ನನ್ನನ್ನು ತಿರಸ್ಕರಿಸುವ ನೀನು ಷಂಡ" ಎಂದು ಊರ್ವಶಿ ಹೇಳುತ್ತಾಳೆ.)

ನಿಲ್ಲು, ಯಾಕೆ ಅಂತಂದ್ರೆ, ಒಂದು ತೀರ್ಮಾನಕ್ಕೆ ಬರಬೇಕಿದ್ರೆ ಅದಕ್ಕೆ ಮರುವಿಚಾರಣೆ ಆಗಬೇಕು. ಇನ್ನೊಂದು ಮರು ವಿಮರ್ಶೆ ಆಗಬೇಕು. ನನ್ನನ್ನು ಏನೆಂದೆ ನೀನು? ಗಂಡಸು ಷಂಡ ಅಂತ ಹೆಣ್ಣು ತೀರ್ಮಾನಿಸುವುದಕ್ಕೆ ಅಧಿಕಾರಿಣಿಯಾಗಬೇಕಿದ್ರೆ, ಅವಳ ಇಷ್ಟಾನು ವರ್ತಿಯಾಗಿ ಇವ ವ್ಯವಹರಿಸಿದ ಮೇಲೆ. ಇದಕ್ಕಿಂತ ಹೆಚ್ಚು ಬಿಚ್ಚಿ ಹೇಳಲಾರೆ. ನಾನು ಷಂಡ ಎಂಬುವುದನ್ನು ನೀನು ಮನ ಗೊಂಡದ್ದು? ಹಗ್ಗ, ಬಹುಶಃ ಇಂತಹ ವಿಕಲ್ಪವೇ ಕೆಲವು ಹೆಣ್ಣುಗಳನ್ನು ಹಾಳು ಮಾಡಲಿಕ್ಕೆ ಕಾರಣ. ಹೇಗೆ? ಅಮ್ಮಾ ನಿನ್ನಲ್ಲಿ ಒಂದು ನಾನು ಕೇಳೋದು; ಹೆಣ್ಣಿನ ಹಿಂದೆ ಹೋಗುವವ ಪುರುಷನೋ ಅಲ್ಲ, ಹೆಣ್ಣು ಹಿಂಬಾಲಿಸುವಂತೆ ಮಾಡುವವ ಪುರುಷನೊ? ಯಾಕೆ ಕೇಳಿದೆ ಗೊತ್ತೆ? ನಿಮ್ಮಂಥ ಕೆಲವರು ಹೇಳ್ತಾರೆ "ಎಲ್ಲಾ ಗಂಡಸರು ನನ್ನ ಬೆನ್ನ ಹತ್ತತಾರೆ" , ಯಾಕೆ? ಅವರು ಗಂಡಸರು. ಕೆಲವರಿದ್ದಾರೆ. ಹೆಣ್ಣು ಹೋಗುವಾಗ ನೋಡೋದೇ ಇಲ್ಲ. ಬಹುಶಃ ಪೂರ್ತಿ ಪುರುಷನಲ್ಲೊ? ಯಾವತ್ತೂ ಅವ ಎಂಥವ ಅಂತ ಅಳೆಯುವುದಕ್ಕೆ ಮಾನ ದಂಡ ಅದಲ್ಲ. ನೀನು ಪ್ರಪಂಚದಲ್ಲಿ ನೋಡಿದ್ದೀಯೊ? ಹಿಂದೆ ಹೋಗುವುದು ದಾಸ್ಯಭಾವದಿಂದ. ಮುಂದೆ ಹೋಗುವವ ಸೇವಕನಾಗಿದ್ದಾನೆ. ಹೌದೊ? ದೊಡ್ಡದು ಮುಂದೆ ಹೋಗ್ತದೆ, ಚಿಕ್ಕದು ಅದನ್ನು ಹಿಂಬಾಲಿಸಿ ಹೋಗ್ತಿದೆ. ಜೀವರಿಗೂ, ಆತ್ಮನಿಗೂ ಇದ್ದ ವ್ಯತ್ಯಾಸವನ್ನು ಕೃಪಾಚಾರ್ಯರು ನಮಗೆ ಎಳವೆಯಲ್ಲಿ ಪಾಠ ಹೇಳಿದ್ದು ಈಗ ನೆನೆಪಾಗ್ತದೆ. ಭಗವಂತನೂ ಮೈವೊಡೆದು ಬತ್ತಾನೆ. ಜೀವರೂ ಮೈವೊಡೆದು ಬತ್ತಾರೆ, ಇದರಲ್ಲಿ ವ್ಯತ್ಯಾಸ ಉಂಟೊ? ಹೇಗೆ ಭಗವಂತನೂ ತನ್ನ ಮಾಯೆ, ತನ್ನನ್ನೂ ಅನುಸರಿಸಬೇಕು ಅಂತ ಅಪ್ಪಣೆ ಮಾಡಿ, ಅವಳನ್ನು ಹಿಂದೆ ನಿಲ್ಲಿಸಿಕೊಂಡು, ತಾನು ಮುಂದೆ ಹೋಗ್ತಾನೆ. ಮಾಯೆಗೆ ಅಧೀನನಾಗುವದಿಲ್ಲ. ಅವನಿಗೆ ಅಧೀನವಾಗಿ ಮಾಯೆ ಬರದೆ. ಆವಾಗ ಅವ ಸಗುಣನೂ ಪಾಕೃತನೂ ಆಗಿ ಅಭಿನಯಿಸ್ತಾನೆ. ಜೀವರು ಹಾಗಲ್ಲ, ಮತ್ತೆ ಮಾಯೆ ಮುಂದೆ ಹೋಗ್ತಾಳೆ. ಅದರ ಹಿಂದೆ ಇವ ಹೋಗ್ತಾನೆ. ವಿನೋದಕ್ಕೆ ನಮ್ಮಲ್ಲಿ ಹೇಳೋದುಂಟು- "ಯಾರು ಯಜಮಾನ, ಯಾರು ಯಜಮಾನಿ?" ಗೃಹಸ್ಥರಲ್ಲಿ ಗುರುತಿಸುವುದು ಹೇಗೆ ಹೇಗೆ?

ಯಾವಳ ಕೈಯ್ಯಲ್ಲಿ ಹಣದ ಚೀಲ ಉಂಟು, ಅವಳು ಯಜಮಾನಿ. ಅವಳ ಹಿಂದೆ ಅವಳ ಕಾವಲಿಗೆ ಯಾವನು ಹೋಗ್ತಾನೆ? ಅವನು ಯಜಮಾನ ಅಂತ ಕೆಲವರು ಇರಬಹುದು ಹಾಗೆ, ಅವಳೊಟ್ಟಿಗೆ ಹಿಂದಿನಿಂದ ಹೋಗುವವ ಇವ- ಯಜಮಾನ ಹಾಗಲ್ಲ! ಅವ ಜೀವ ಭಾವದವ. ನಿಜವಾದ ಯಜಮಾನ ಹೇಗೆ? ತನ್ನ ಹಣದ ಚೀಲವನ್ನು, ಅವಳ ಕೈಯಲ್ಲಿ ಕೊಟ್ಟು, "ಅದನ್ನು ಹೊತ್ತುಕೊಂಡು, ಹಿಂದೆ ಬಾ ಕೈಬೀಸಿ ಹೋಗ್ತೇನೆ" ಎನ್ನುವವ. ಇದು ವೇದಾಂತಕ್ಕಿದ್ದ ಉದಾಹರಣೆ. ಆದ್ದರಿಂದ ಯಾವನು ಗಂಡು, ಯಾವನು ಪೂರ್ತಿ ಗಂಡಲ್ಲದ ಷಂಡ ದಾಸ, ಅವನನ್ನು ನೀವು ಪುರುಷ ಅಂತ ಅಂಗೀಕರಿಸ್ತೀರೊ ಏನೊ! ಗಂಡುಸಾದವ ಹೆಂಗಸಿನ ಹಿಂದೆ ಹೋಗೋದಿಲ್ಲ. ಶ್ರೀಮಂತನಾದವ ಮತ್ತೊಬ್ಬ ಶ್ರೀಮಂತನ ಹಿಂದೆ ಹೋಗೋದಿಲ್ಲ, ಪೂರ್ಣನಾದವ... ಹೂ, ಮತ್ತೊಂದು ಪೂರ್ಣವನ್ನು ಹುಡುಕಿಕೊಂಡು ಹೋಗೋದಿಲ್ಲ. ಹಾಗಾಗಿ ಪೂರ್ಣ ಗಂಡಸು ಅವನ ಯೋಗ್ಯತೆ ಏನು? ಅವನನ್ನು ಹುಡುಕಿ ಹೆಂಗಸರು ಬರಬೇಕು. "ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರಮ, ವಿರೋಧವಾದಂತಹ ಯಾವತ್ತೂ, ಗುಪಿಂನಿಂದಲಾದರೂ ರಾಮನ ಬಗ್ಗೆ ಜನ್ಮನಾ ವಿರೋಧವುಳ್ಳಂತಹ ಕುಟುಂಬದಿಂದ ಹುಟ್ಟಿದರೂ, ಹೆಣ್ಣಾದವಳು, ರಾಮನಿಂದ ಆಕೃಷ್ಟಳಾದಳೇ ಹೊರತು ರಾಮನನ್ನು ಈ ಪ್ರಪಂಚದಲ್ಲಿ ಯಾವ ಹೆಣ್ಣೂ ಆಕರ್ಷಿಸಲಿಲ್ಲ. ಈ ತತ್ತ್ವ ನಮ್ಮದು. ನಾನು ನಿಜವಾದ ಗಂಡಸು, ಆದ್ದರಿಂದಲೇ ಹೆಣ್ಣಿಗೆ ಇಚ್ಚಿಸಲಿಲ್ಲ. ಹೆಣ್ಣಿನ ಮುಂದೆ ಬಾಯಿ ನೀರು ಸುರಿಸಲಿಲ್ಲ. ಹೆಣ್ಣನ್ನು ಅನುಭವಿಸುವವನು ವಿಟ. ಅವ ಕಾಮುಕ. ನಾನು ವಿಟನೂ ಅಲ್ಲ, ಕಾಮುಕನೂ ಅಲ್ಲ. ನಾನು ಮನುಷ್ಯ, ಆದಕಾರಣ ನಾನು ನರನಾರಾಯಣನಲ್ಲ. ನಮ್ಮಲ್ಲಿ ನರ ಅಂತಂದ್ರೆ ಮನುಷ್ಯರೆಲ್ಲಾ ನರರೇ. ಆದರೆ ರೂಢಿಯಲ್ಲಿ ಒಂದು ಮಾತುಂಟು. ನಮ್ಮಲ್ಲಿ ದೇವರಿಗೆ ಹಣ್ಣು-ಕಾಯಿ ಕೊಡೋದು ಅಂತ ಉಂಟು. ಹಣ್ಣು-ಕಾಯಿ ಕೊಡೋದು ಅಂತ ಹೇಳುವಾಗ ಅಲ್ಲಿ ಪ್ರಧಾನವಾದ ರೂಢಾರ್ಥವೇನು? ಬಾಳೆಹಣ್ಣು-ತೆಂಗಿನಕಾಯಿ ಅಂತ. ಹಾಗಾದರೆ ಹಾಗಲಕಾಯಿ ಕಾಯಿಯಲ್ಲೂ ಅಂತ ಆ ತರ್ಕ ಇಲ್ಲ ಅಲ್ಲಿ. ಯಾವುದು ರೂಢಿವಡೆದ ಕೆಲವು ಶಬ್ದಗಳುಂಟೆ ಹಾಗೆ, ಮನುಷ್ಯರು ಎಲ್ಲರೂ ನರರೇ. ಆದರೆ ನರರ ಕೂಟದಲ್ಲಿ ನಿಜವಾದಂತಹ ನರ' ಇವ ಅಂತ ಈ ವಯಸ್ಸಿನಲ್ಲಿ ದೊಡ್ಡವರಿಂದ ಹೇಳಿಸಿಕೊಂಡಿದ್ದೇನೆ. ನೀನು ಇಷ್ಟರಿಂದಲೂ ತೃಪ್ತಳಾಗದೇ ಇದ್ದರೆ, ನಾನೇನು ಮಾಡೋದು? ನನಗೆ ಹೋಗಿಬಿಡಲಿಕ್ಕೆ, ಉಪಾಯ ಇಲ್ಲ, 'ಇಲ್ಲಿರು' ಅಂತ ಹೇಳಿದವ ಇಲ್ಲಿಯ ಪ್ರಭುವಾದಂತಹ ದೇವೇಂದ್ರ, ಹಾಗಾಗಿ "ನೀನು ಹೋಗು" ಅಂತ ನಾನು ಹೇಳೋದು.

("ಷಂಡನಾಗಿ ಹೋಗು" ಎಂದು ಊರ್ವಶಿ ಶಪಿಸಿದ ಮೇಲೆ)

ಹೋದಳು, ಶಿವನೇ ಏನೆಲ್ಲಾ ಹೇಳಿದಳು! ಮೂರುಲೋಕದ ಗಂಡನಾದಂತಹ ಅರ್ಜುನನನ್ನು ಷಂಡ ಅಂತ ಹೇಳ್ತಾಳೆ. ಎರಡನೇ ಹೇಳ್ತಾಳೆ, ನರಗುರಿಯೇ. ಹೇ! ನರಗುರಿಯೋ ನಾನು? ನಾನೇನಾದರು ಬಲಿಯಾಗಿದ್ದೇನೊ? ಅಲ್ಲ, ನನ್ನನ್ನು ಇವಳಿಗೆ

ಬಲಿ ಒಪ್ಪಿಸಲಿಕ್ಕೆ ಈ ಪ್ರಪಂಚದಲ್ಲಿ ಯಾವುದಾದ್ರೂ ಶಕ್ತಿಗೆ ಸಾಧ್ಯಾವಾದೀತೆ? ಎಲ್ಲಾ ಅಬದ್ಧ... ಬಹುಶಃ ಹೀಗಿರಬೇಕು. ಏನೋ ಒಂದು ಜನ್ಮಾಂತರದ ಕರ್ಮ, ಪಾಂಡವರಾದ ನಮಗೆ ಬೇರೆ ಬೇರೆ ವಿಧದಲ್ಲಿ ಕಾಡ್ತಾ ಬಂದದೆ. ನಾವು ಪ್ರಾರಬ್ದದ ಬಗ್ಗೆ ಒಪ್ಪಿಕೊಳ್ಳೋದು, ಪ್ರಾರಬ್ದದ ಬಗ್ಗೆ ಒಪ್ಪಿಕೊಳ್ಳದಿದ್ರೆ, ಕರ್ಮಕ್ಕೆ ಅರ್ಥ ಬರೋದಿಲ್ಲ.

"ಮಮೋಪಾತ್ ದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ" !

ಯಾರ ಪ್ರಾರಬ್ಧವೋ!! ಸ್ವರ್ಗ ಲೋಕಕ್ಕೆ ಬಂದೆ, ಮಹೇಂದ್ರನಿಂದ ಸತ್ಕರಿಸಲ್ಪಟ್ಟೆ! ಈ ಊರ್ವಶಿಯಿಂದ ಶಪಿಸಲ್ಪಟ್ಟೆ !! ಒಂದು ವರ್ಷ ನಾನು ಷಂಡನಾಗಿರಬೇಕಂತೆ!! ಕೃಷ್ಣಾ...

ಷಂಡನಾಗಿ... ನಾನು ಎಲ್ಲಿ? ಇಲ್ಲಿಯೋ? ಇಲ್ಲಲ್ಲ, ಭೂಲೋಕದಲ್ಲಿ, ಒಂದು ವರುಷ ಅಲ್ಲ, ಒಂದು ದಿವಸವಾದರೂ ಷಂಡನಾಗಿ, ನಾನು ನನ್ನ ಅಣ್ಣಂದಿರ ಮುಂದೆ, ನನ್ನ ತಮ್ಮಂದಿರ ಮುಂದೆ, ದ್ರೌಪತಿಯ ಮುಂದೆ, ಸುಭದ್ರೆಯ ಮುಂದೆ ಹೇಗೆ ನಿಲ್ಲಲಿ? ಮತ್ತೆ ನಾನು ಬದುಕಬೇಕೆ? ಯಾಕೆ ಹೀಗೆ; ಏನೋ! ಏನು ದೈವೀಮಾಯೆಯೋ ನನಗೆ ಅರ್ಥವಾಗೋದಿಲ್ಲ. ಭೂಲೋಕಕ್ಕೆ ಹೋಗದೆ ಇಲ್ಲೇ ಉಳಿಯಲೇ? ಯಾಕೆ? ನನಗೆ ಸ್ವಸ್ಥಾನವೊ ಇದು? ದೇವೇಂದ್ರ "ಎಲ್ಲಿಯವರೆಗೆ ಇರು" ಅಂತ ಅವನ ಒಂದು ರಕ್ಷಾಕವಚ ನನಗೆ ಇದೆಯೋ ಅಲ್ಲಿಯವರೆಗೆ ಇಲ್ಲಿಯ ವಾತಾವರಣವನ್ನು ನನ್ನ ದೇಹ ಸಹಿಸ್ತದೆ. ಅವನ ಅನುಮತಿ ತಿರಸ್ಕರಿಸಲ್ಪಟ್ರೆ, ನನ್ನ ಮನುಷ್ಯ ದೇಹ ಇಲ್ಲಿ ಒಂದು ನಿಮಿಷವೂ ಬದುಕಲಾರದು. ಯಾಕೆ? ನೀರಲ್ಲಿ ಹುಟ್ಟಿದ ಮೀನು ಬದುಕಬೇಕಾಗಿದೆ ನೀರನ್ನೇ ಆಶ್ರಯಿಸಬೇಕು. ಯಾರಾದರು ಅದರ ಬಗ್ಗೆ ಅನುಗ್ರಹ ಬುದ್ಧಿಯನ್ನಿಟ್ಟು, "ನೀರು ಬೇಡಪ್ಪ, ಹಾಲಿನಲ್ಲಿರು, ಹಾಲು ಉತ್ತಮವಾದದ್ದು ಅಂದರೆ ನೀರಿನ ಮೀನಿಗೆ ಹಾಲು ವಿಷ. ಅದು ಹೆಚ್ಚುಕಾಲ ಬದುಕಲಿಕ್ಕಿಲ್ಲ. ಮರ್ತ್ಯರಾದ ನಾವು, ಅಮರ್ತ್ಯಲೋಕದಲ್ಲಿ ಉಸಿರಾಡುವದಿದ್ರೆ ಅದು ಇದ್ದವರ ಪರವಾನಿಗೆ, ಕೊಡುಗೆ. ಹಾಗಾಗಿಯೇ ನಾನು ಹೇಳಿರುವುದು, ನಾನಿಲ್ಲಿಗೆ ಅತಿಥಿ. ಪ್ರವಾಸ ರೂಪದಿಂದ ನಾನಿಲಿಗೆ ಬರಮಾಡಿಕೊಂಡಿದ್ದು ದೇವೇಂದ್ರನ ಅನುಗ್ರಹದಿಂದ, ಹಾಗಾದ್ರೆ ಇಲ್ಲಿ ಉಳಿಯುವ ಹಾಗೂ ಇಲ್ಲ, ಮರ್ತ್ಯಲೋಕಕ್ಕೆ ಹೋಗುವ ಹಾಗೂ ಇಲ್ಲ. ಹಾಗಾಗಿ ಸ್ವರ್ಗ ನನಗೆ ಪೂರ್ತಿ ಅಲ್ಲ. ಮರ್ತ್ಯ ನನಗೆ ಪೂರ್ತಿ ಆಗದು. ಅಭಿನವ ತ್ರಿಶಂಕುವಾದೆನಲ್ಲ! ನಾನು ಯಾಕೀ ತ್ರಿಶಂಕು ಸ್ವರ್ಗದಲ್ಲಿ ಸಿಕ್ಕಿಬಿದ್ದೆ? ತಿಳಿಯುವುದಿಲ್ಲ. ಇದು ಪ್ರಕಾಶಲೋಕ, ದೇವಲೋಕ. ಈ ಪ್ರಕಾಶ ನನ್ನ ಜೀವನದ ಕತ್ತಲೆಗೆ ಪ್ರಕಾಶಕೊಡದಾಯ್ತಲ್ಲ? ಹಾಗಾದ್ರೆ ಅರ್ಜುನನ ಪಾಪವನ್ನು ತಿದ್ದುವದಕ್ಕೆ, ಸ್ವರ್ಗಲೋಕದ ಪುಣ್ಯವೂ ಪರ್ಯಾಪ್ತವಲ್ಲ ಅಂತಾರೆ... ದೇವರೇ ಗತಿ.

(ದುಃಖಿತನಾದ ಮಗನನ್ನು ಇಂದ್ರ ಬಂದು ಕಂಡಾಗ)

ಮಹನೀಯಾ, ನನಗೆ ಊರ್ಧ್ವಲೋಕದಲ್ಲಿಯೂ ಕೂಡ ಪತನಯೋಗವೇ, ಕೊನೆಗೆ ಗತಿಸಿದಾವಾಗ ಎಲ್ಲಿಯವರೆಗೆ ಇಳಿಯೋಣ ಅಂತ ತಿಳಿಬೇಕಿದ್ರೆ ಕೆಳಗೆ ನೋಡಬೇಕೋ ಬೇಡ್ವೋ? ಏನಾಗ್ಲಿಲ್ಲ ನನಗೆ ಏನಾಗ್ಬೇ ಕು? ನೀನರಿಯದ್ದುಂಟೆ? ಊರ್ವಶಿಯಿಂದ ಶಾಪ!! "ಭೂಲೋಕದಲ್ಲಿ ಒಂದು ವರ್ಷ ಷಂಡನಾಗಿ ಹೋಗು" ನನ್ನಂಥಹ ಗಂಡಸಿಗೆ ಅವಧಿ ಮುಖ್ಯ ಅಲ್ಲ. ಒಂದು ವರ್ಷಅಲ್ಲ ಒಂದು ದಿನವಾದರೂ ಷಂಡನೇ ಆದೆನೊ ಇಲ್ಲೊ? ಒಂದು ದಿನವಾದ್ರೂ ಸ್ವಾಮೀ ನಿನ್ನ ಕರಕಮಲ ಸಂಜಾತ, ನಿನ್ನ ಅನುಗ್ರಹದ ಸಂಜಾತ, ನಿನ್ನ ಮಗ ಅಲ್ಲ, ಇತ್ತೀಚೆಗೆ ನಿನ್ನ ಸಿಂಹಾಸನದಲ್ಲಿ ಅರ್ಧಾಸನವನ್ನು ನೀನು ನನಗೆ ಕೊಟ್ಟಿದ್ದೀ, ದೇವಲೋಕದ ಕಿರೀಟವನ್ನು ತಲೆಯಲ್ಲಿ ಇಟ್ಟಿದ್ದೀ. ಈ ಹೊಸ ಅರ್ಹತೆಯ ಜೊತೆಯಲ್ಲಿ ಒಂದು ನಿಮಿಷವಾದರೂ, ನನಗೆ ಷಂಡತ್ವ ಬಂದರೆ ಮತ್ತೆ ನಾನು ಬದುಕಬೇಕೊ? ಅದರಿಂದ ದಾಟಿ, ಪುನಃ ನಾನು ಪುರುಷ ಅಂತ ಸ್ಥಾಪಿಸಿಕೆ, ಎಲ್ಲಿಗೆ ಬರಬೇಕು ನಾನು? ಈ ಒಂದು ನಿಮಿಷ ನನಗೆ ಶಾಪ ನಿಮಿತ್ತವಾಗಿ ಉಂಟಾದಂತಹ ಷಂಡತ್ವಕ್ಕೆ ನಾನು ನಮ್ಮ ಭೂಲೋಕದಲ್ಲಿ, ಪುನಃ ಪುಂಸತ್ವವನ್ನು ಉಂಟು ಮಾಡುವುದಕ್ಕೆ, ಯಾವ ಧನ್ವಂತರಿಯನ್ನು ಹುಡುಕಲಿ? ಇದು ನನಗೆ ಅಧೋಗತಿ! ಇದು ತ್ರಿಶಂಕು ಸ್ವರ್ಗ!

ಅದರಲ್ಲಿ ಇನ್ನೊಂದು ಹೇಳ್ತೇನೆ. ದೇವಲೋಕದ ಮಾನಿನಿಯರು ಶಾಪವನ್ನು ಕೊಡಬಲ್ಲರು. ಅವರಿಗೆ ಆ ಶಕ್ತಿ ಇದೆ. ಶಕ್ತಿ ಇದೆ. ಶಾಪ ಕೊಟ್ಟಾರೆ ಹೊರತು, ಅದನ್ನು ಪರಿಮಾರ್ಜನೆ ಮಾಡಲಿಕ್ಕೆ ಅವರಿಗೆ ಆಗೋದಿಲ್ಲ, ನಮ್ಮ ಭೂಲೋಕದಲ್ಲಿ ನನಗೆ ಗೊತ್ತಿದ್ದದ್ದೇ, ನಮಗೆ ಪರಮಾಚಾರರು ಒಬ್ಬರಿದ್ದಾರೆ. ರಾಯಕಟಕಾಚಾರ್ಯರು, ಧನುರ್ವೇದದ ಪ್ರತಿರೂಪ ಆ ದ್ರೋಣಾಚಾರ್ಯರು. ಅವರಿಗೇನಾಗಿದೆ? ಎಂಬುದನ್ನು ನಾನು ಬಹಳ ದೂರದಿಂದ ಕಾಡ್ತಾ ಇದ್ದೇನೆ. 'ಶಾಪಾದಪಿ ಶರಾದಪಿ! ಈಗ ಕೇವಲ ಅದು ಗತಕಾಲದ ಕೀರ್ತನೆಯಾಗಿದೆ. ಶಾಪಕೊಟ್ರು ಕೊಲ್ಲಬಲ್ಲರೋ? ಬ್ರಾಹ್ಮಣ್ಯ ಇಳಿತಾ ಬಂದಿದೆ. 'ಶರಾದಪಿ' ಅಂತ ಹೇಳೊ? ಧನುರ್ವೇದ ಉಂಟು, ಶಾಸ್ತ್ರ ಇಳಿತಾ ಇಳಿತಾ ಬಂದದೆ. ಹಾಗಾಗಿ ಅವರ ಬದುಕನ್ನು ನಾನು ಬಹಳ ದೂರದಿಂದ ಕಾಣುವಾಗ ಆಚಾರರು, ನಮ್ಮ ಪರಮಾಚಾರ್ಯರು, ಆ ಕಡೆಗೆ ಬ್ರಾಹ್ಮಣನಾಗಿ ಶಾಪದಿಂದಲೂ ನಿಗ್ರಹಿಸಲಾರರು. ಈ ಕಡೆಯಿಂದ ಕ್ಷಾತ್ರವೃತ್ತಿಯಿಂದಲೂ ವಿರೋಧಿಯನ್ನು ನಿಗ್ರಹಿಸಲಾರರು. ಹೌದೋ ಅಲ್ಲೊ?

ಇದೆಲ್ಲಾ ಒಂದು ತರದ ದುರ್ವಿಧಿ, ಪತನವೇ ಅಲ್ಲವೇ? ಹಾಗೆ ಇಲ್ಲಿದ್ದ ಇತರರು ಶಪಿಸಬಲ್ಲರು. ಅದಕ್ಕೆ ಪರಿಮಾರ್ಜನೆ, ಅದಕ್ಕೆ ನಿನ್ನಂತವರಾಗಬೇಕು. ಹಾಗಾಗಿ ನಮ್ಮಲ್ಲಿ "ಸ್ವಸ್ತಿನ ಇಂದ್ರೋ ವೃದ್ಧಶವಾ ಸ್ವಸ್ತಿನ ಪೂಶಾ ವಿಶ್ವವೇದಾ:"... ಹೀಗೆಲ್ಲಾ ನಿಮ್ಮಂಥವರನ್ನೇ ಸ್ತುತಿಸುವದು. ರಂಭೆಗೆ ನಮಸ್ಕಾರ, ಊರ್ವಶಿಗೆ ನಮಸ್ಕಾರ, ಅಂತ ಹೇಳೋದಿಲ್ಲಾ. ಹೇಳ್ತವೆ - ನಿಮ್ಮಂಥಹ ಮುಖ್ಯ ದೇವತೆಗಳಿಗೆ ನಮಸ್ಕಾರ ಮಾಡಿ, ಸಂದ ದೇವತೆಗಳಿಗೆ, ಪರಿವಾರ ದೇವತೆಗಳಿಗೆ ನಮಸ್ಕಾರ. ಹೀಗೆ ಆಗ್ಯದಸ್ವಾಮಿ.

ನಿನ್ನಂಥವನಿಂದ ಶಪಿಸಲ್ಪಟ್ಟರೆ ಅದಕ್ಕೆ ಅರ್ಥ ಇರ್ತಿತ್ತು. ಅಗ್ನಿಯಿಂದ ಶಪಿಸಲ್ಪಟ್ಟರೆ ಅದಕ್ಕೆ ಅರ್ಥ ಇತ್ತು. ಬರೇ ಒಂದು ಊರ್ವಶಿಯ ಶಾಪಕ್ಕೆ ನಾನು ಬಲಿಯಾಗೋದು ಅಂತಾದರೆ ಅಲ್ವೊ? ಯಾವ ಕ್ಷೇತ್ರ, ಭೋಗಕ್ಕಾಗಿಯೇ ಮೀಸಲೋ, ಅಲ್ಲಿ ಭೂಗ ಅನ್ಯಾಯವೂ ಅಲ್ಲ, ಅಪಚಾರವೂ ಅಲ್ಲ. ಆ ಭೋಗಭೂಮಿಯಲ್ಲಿ ಆ ಪರಿಸರದಲ್ಲಿ, ಇವ ತ್ಯಾಗ ಭೂಮಿಕೆಯನ್ನು ಮಾಡಿದ್ದಾನೆ ಅಂತಾದ್ರೆ...

ಆದರೆ ಅವಳು ಇದನ್ನು ತಿಳಿಯಲಿಲ್ಲ, ಅವಳು ಶಾಪವನ್ನು ಕೊಟ್ಟಳು.

ಸ್ವಾಮೀ ಇದೆಂಥ ಪರೀಕ್ಷೆ ! ಭೂಲೋಕದಲ್ಲಿ ನನಗೇನು ಪ್ರಯೋಜನ 'ಷಂಡತ್ವ?

ನನ್ನಲ್ಲಿ ಷಂಡತ್ವ ಇಲ್ಲ... ಇಲ್ಲದಿದ್ರೂ ನೀ ಷಂಡನಾಗಿ ಹೋಗು. ಈ ಸ್ವರ್ಗದಲ್ಲಿ ನಾನಿದ್ದಷ್ಟು ದಿವಸ ಒಂದು ಮೂರು ದಿವಸ, ನನಗೇನಿಲ್ಲ ಏಕೆಂದರೆ ನಾನು ಮೊದಲೇ ಬ್ರಹ್ಮಚಾರಿ ಆಗಿದ್ದೇನೆ ಇಲ್ಲಿ. ಬ್ರಹ್ಮಚಾರಿಗೆ ಷಂಡತ್ವದ ಅಗತ್ಯ ಇಲ್ಲ ಹಾಗಂತ ಷಂಡತ್ವ ಇದ್ದರೆ ಬ್ರಹ್ಮಚಾರಿಯೂ ಆಗುವುದಿಲ್ಲ ಪೂರ್ತಿ. ಅವುಗಳಿಗೆ ಬ್ರಹ್ಮಚರ್ಯ ಅನುಷ್ಟಿಸಲಿಕ್ಕೆ ಸಾಧ್ಯವೂ ಆಗೋದಿಲ್ಲ. ಹಾಗಾಗಿ ನನಗೇನು ಪ್ರಯೋಜನವೋ ಇವಳ ಶಾಪದಿಂದ

ಹೌದು ಶಿಖಂಡಿ ಆಗು ಅಂತ ಹೇಳಲಿಲ್ಲ. ಷಂಡನಾಗು ಅಂತ ಹೇಳಿದ್ದಾಳೆ. ಶಿಖಂಡಿ ಅಂತಂದ್ರೆ ಎರಡೂ ಅಲ್ಲದ್ದು. ಹಾಗಾದರೆ ಈ ಶಾಪ ನಮಗೆ ವ್ಯಾವಹಾರಿಕವಾಗಿ ಉಪಯೋಗವೇ!!

ಉರಿಯುವ ದೀಪವನ್ನು ಯಾವ ಕೋಣೆಯಲ್ಲಿ ಇಡೋದು? ಸೂರ್ಯನನ್ನು ಯಾವ ಕತ್ತಲ ಕೋಣೆಗೆ ಹಾಕೋದು? ಹಾಗಾಗಿ ನನಗೆ ಅಜ್ಞಾತವಾಗಿರೋದಕ್ಕೆ ಇದು ಉಪಾಧಿ. ನಮ್ಮ ರಾಜ್ಯ ಬಿಟ್ರೆ ಬೇರೆ ಲೋಕದಲ್ಲಿ ನಾನು ಅಜ್ಞಾತನೇ ಅಲ್ಲ. ಯಾವ ರೂಪದಿಂದ ನಾನು ಬಂದರೂ ನೀವು ಗುರಿತಿಸಬಲ್ಲರಿ. ನಾಗ ಲೋಕದವರು ಗುರುತಿಸಬಲ್ಲರು. ಹಾಗಾದರೆ ಭೂಲೋಕದಲ್ಲಿ ಕಣ್ಣೆದುರಲ್ಲೇ ಅಜ್ಞಾತನಾಗಿ ಈ ಅರ್ಜುನನು ಉಳೀಬೇಕಿದ್ರೆ... ಹಂ, ಹಾಗಾದರೆ ನನ್ನ ನಪುಂಸಕತ್ವದಲ್ಲಿ ಶರೀರಕ್ಕೂ ಕೂಡ ಒಂದು ಬದಲಾವಣೆ ಬರ್ತದೆ. ಹಾಗಾದರೆ ಪುರುಷವೇಷದಲ್ಲಿ, ಆದಕಾರಣ ಅರ್ಜುನನಿಗೆ ಬಂದಂತಹ ಷಂಡತ್ವ ಅನ್ನೋದು ಅದು ಒಂದು ಕಾಯ ಕಲ್ಪಕ್ಕೆ ಸಂಬಂಧಪಟ್ಟಂತಹ ಔಷಧಿಯಾದದ್ದರಿಂದ ಊರ್ವಶಿಯ ಶಾಪ, ಶಾಪವಲ್ಲದೇ, ಅದು ಅನುಗ್ರಹವಾಗಿದೆ. ಅಲ್ವೊ? ಹಾಗಾಗಿ ಅಜ್ಞಾತದಲ್ಲಿ ನಾನು ಹೊರಗೆ ಹೋಗಕೂಡದು. ಇನ್ನೊಬ್ಬರಿಂದ ಎಳೆಯಲ್ಪಡಬಾರದು. ಒಂದು ವೇಳೆ ನಾನು ಎಳೆಯಲ್ಪಟ್ಟಲ್ಲಿ ನನಗೆ ಉತ್ಸಾಹ ಬಂದಲ್ಲಿಗೆ ಈ ಅವಧಿ ಮುಗೀತು. ಆವಾಗ ನನಗೆ ಶಾಪವಿಮುಕ್ತಿ ಆಯಿತು ಅಂತ ಹೇಳುವಾಗ, ಯಾವಾಗ ಈ ಷಂಡತ್ವ ಬಂತೊ ಅಲ್ಲಿಂದ ನಾನೇ ತಿಥಿ-ವಾರ -ನಕ್ಷತ್ರ ಎಣಿಸಿಕೊಂಡ್ರೆ ಸಾಕು? ಆವಾಗ ಒಂದು

ವರ್ಷ ಆಯ್ತಲ್ಲ? ಈ ಗಣಿತದ ಮುಂದೆ ಯಾವ ಗಣಿತವೂ ಸರಿಯಲ್ಲ. ಪಾಂಡವರ ಒಂದು ವರ್ಷದ ಅಜ್ಞಾತ ಮುಗಿದದೋ? ಮುಗಿಯಲಿ ಎಂಬುವದಕ್ಕೆ ದೇವಲೋಕದ ಯಾವ ಜ್ಯೋತಿಶಾಸ್ತ್ರವನ್ನು ಆಧರಿಸಿಕೊಂಡು, ನಮ್ಮ ಊರಿನಲ್ಲಿ ಹೇಳುವ ಹಾಗೆ ಆ ಪಂಚಾಂಗ ದೇವಲೋಕದ್ದು. ಹಾ ಹಾ.. ಆಗಲಿ ಇದನ್ನು ಹೀಗೆ ತಿಳಕೊಳ್ಳುವ, ಅರ್ಜುನನಂತಹ ಒಬ್ಬ ವ್ಯಕ್ತಿಗೆ ಭಗವಂತ, ಇಂದ್ರಾದಿ ದೇವತೆಗಳು ಎಲ್ಲಾ ಕವಚವಾಗಿಯೂ, ಆಯುಧವಾಗಿಯೂ, ಶಿರಸ್ತ್ರಾಣವಾಗಿಯೂ, ಎಲ್ಲಾ ರಕ್ಷೆ ಸಿಕ್ತದೆ. ಹೀಗೆ ಪಂಜರದ ಗಿಳಿಗೆ ಹೇಗೆ ಹೊರಗಿನ ಬೆಕ್ಕಿನ ಭಯ ಇಲ್ಲೊ ಹಾಗೆ ಸಕಲ ದೇವತಾ ಕೃಪಾಪೋಷಿತನಾದ ಇಂದ್ರನಂದನನು...

'ಧನ್ಯೋಸ್ಮಿ, ಧನ್ಯೋಸ್ಮಿ !' ಆದರೆ ಒಂದು ಮಾತುಂಟು, ಸ್ವಾಮಿ ಊರ್ವಶಿಯ ಮನಸ್ಸಿನ ಶಾಪಕ್ಕೂ-ಕೋಪಕ್ಕೂ ನಾನು ಗುರಿಯಾದೆ. ಆದರೆ ಮೊದಲಿಂದಲೂ ನಾನು ಅವಳನ್ನು ತಾಯಿ ಅಂತ ಅಂಗೀಕರಿಸಿದ್ದೇನೆ. ಅವಳ ಮನಸ್ಸನ್ನು ಪ್ರಸನ್ನಗೊಳಿಸಬೇಕು ಯಾರು? ಮಹನೀಯನಾದ ನೀನೇ, ಅದು ಮಾತ್ರ ಅಲ್ಲ, ಅವಳ ನಾಟ್ಯದಿಂದ ನಾನು ಸೂರೆಹೋಗಿದ್ದೇನೆ. ನನ್ನಷ್ಟಕ್ಕೆ ಹೇಳಿಕೊಂಡಿದ್ದೇನೆ. ಸ್ವರ್ಗಲೋಕದ ಭೋಗ ನನ್ನ ಚಿತ್ತ ಫಲಕದಲ್ಲಿ ಚಿತ್ರಿಸ್ತಾ ಇದ್ದದ್ದು, ಇವಳೊಬ್ಬಳು. ನಾಟ್ಯದಿಂದ ಸರ್ವಸ್ವವನ್ನೂ ಸೂರೆಗೊಂಡಿದ್ದಾಳೆ ಅಂತ. ನನಗೆ ಅವಳಿಂದ ನಾನು ಇಲ್ಲಿ ಇರಬೇಕಾದ ಅವಧಿಯಲ್ಲಿ ಸ್ವಲ್ಪ ನಾಟ್ಯ ಹೇಳಿಸಿಕೊಳ್ಳಲಿಕ್ಕೆ... 'ತಾಯಿ' ಅಂತ ಹೇಳಿದ್ದೇನೆ. ಅವಳು ಗುರುವೂ ಹೌದು, ಸ್ವಲ್ಪ ಅಭ್ಯಾಸ ಮಾಡಲಿಕ್ಕೆ ಸನ್ನಿಧಾನದಿಂದ ಅಪ್ಪಣೆಯಾಗಬೇಕು. ಪ್ಲಾ ! ಹಾಗೆ, ಹಾಗೆ ನಾಟ್ಯವನ್ನು ನಾನೊಂದು ವ್ಯಾಪಾರಿ ವೃತ್ತಿಯಾಗಿ ಅಂಗೀಕರಿಸಿ, ಅದರಿಂದ ಬದುಕುವದಕ್ಕೆ ಹೊರಟವನಲ್ಲ. ಅಜ್ಞಾತದಲ್ಲಿ ಪ್ರಯೋಜನಕ್ಕೆ ಬಂದಿತೋ? ಹಾಗಾದರೆ ಅದು ಒಳ್ಳೇದು. ಮತ್ತೆ ಇದೊಂದುಂಟು. ಆ ಕಾಲದಲ್ಲಿ ನಾಟ್ಯ ಆಡಲಿಕ್ಕೆ ಒಳ್ಳೇದು, ಇಲ್ಲದಿದ್ದರೆ ಅರ್ಜುನನಂಥವರು, ಘನಗಂಭೀರ ವ್ಯಕ್ತಿಗಳು ಈ ಲಾಲಿತ್ಯ ಇದನ್ನು ತೋರಿಸಿದರೂ ಕೂಡ ಆಭಾಸ ಆಗ್ತದೆ. ಅಲ್ಲೊ? ಹಾಗಾದರೆ ಒಳ್ಳೆಯದು. ಪುರುಷತ್ವ ಹೊದಂತಹ ಷಂಡತ್ವದಲ್ಲಿ ಅವರಿಗೆ ಅಂತದ್ದು ಬಹಳ ಹಿಡೀತದೆ. ಮುಖಕ್ಕೂ ಲಾಲಿತ್ಯ ಬಂದೀತು! ಮತ್ತೆ ಇನ್ನೊಂದು, ಯಾವ ದೊಡ್ಡವರ ಮನೆ ಹೊಕ್ಕರೂ ಅಂಥವರು, ಅಂತಃಪುರಕ್ಕೆ ಹೋಗುವಾಗ ಹೆಂಗಸರಿಗೆ ಹತ್ತಿರಾಗ್ತಾರೆ. ಗಂಡಸರ ಶಯ್ಯಾಗಾರಕ್ಕೆ ಹೋಗುವಾಗ ಅವರು ಗಂಡಸರೇ, ಹಾಗಾದರೆ ನನ್ನ ಅಜ್ಞಾತದಲ್ಲಿ, ಯಾವ ದೊಡ್ಡ ಶ್ರೀಮಂತನ ಮನೆಯಲ್ಲಿ ವಿಧಿ-ನಿಷೇಧವಿಲ್ಲದೇ ಸರ್ವತ್ರ ಸಂಬಂಧವನ್ನು ಇಟ್ಟು ಕೊಳ್ಳುವುದಕ್ಕೆ ತೊಂದರೆ ಬರಲಿಕ್ಕಿಲ್ಲ . ಆದೀತು, ನನಗದು ಗೊತ್ತುಂಟು- ಅಮೃತ ವಿರೋಧದಿಂದ ಬಿದ್ದರೂ ಕೂಡ ನಾವು ಅಮರರೇ ಆಗ್ತವೆ. ವಿಷ ಸ್ನೇಹದಿಂದ ನಮ್ಮ ಹೊಟ್ಟೆಗೆ ಹೋದರೂ ನಾವು ಸಾಯ್ತವೆ. ಹಾಗಾಗಿ ದೇವತೆಗಳೂ ಮಾಡೋದೆಲ್ಲಾ ಒಳ್ಳೆಯದಕ್ಕೇ. ಹಾಗಾದರೆ ನಾನು ಊರ್ವಶೀ ದೇವಿಯನ್ನು ಸಮೀಪಿಸಿ, 'ಶಿಷ್ಯಸ್ಥೆಹಂ' ಅಂತ ಹೇಳಿಕೊಂಡು ಆ ಮಾತೃಶ್ರೀಯನ್ನು ನಾಟ್ಯದ ಗುರುವನ್ನಾಗಿ ಅಂಗೀಕರಿಸಿ, ನನಗೆ ಅವಳಲ್ಲಿದ್ದಂತಹ ಗುರು ಭಾವವನ್ನೇ

ಮತ್ತೊಮ್ಮೆ ಇಲ್ಲಿ ಬೆಳೆಸಿ, ಧನ್ಯನಾಗಿ ಹೋಗೋದಕ್ಕೆ ಸಧ್ಯ ನಾನು ವಿಶ್ರಾಂತಿಯನ್ನು ಬೇಡ್ತೇನೆ.



## ೧೨ ಮಂಗಳಸೌಗಂಧಿಕ

### ಭೀಮ

"ಷಾಡ್ಗುಣ್ಯಯುಕ್ತಾ ಕುಲಧರ್ಮಪತ್ನಿ" ಯೇನೋ ಹಳೆಯ ಶ್ಲೋಕ ಅಂತ ತಿಳದಿದ್ದೆ ನಾನು. ಅಲ್ಲ ಪ್ರತ್ಯಕ್ಷ ಅನುಭವಿಸ್ತಾ ಇದ್ದೇವಲ್ಲ. ಈಗ ಪಾಂಚಾಲಿಯ ಬಗ್ಗೆ ಕೀಳರಿಮೆಯನ್ನುಳ್ಳಂತಹ ವ್ಯಕ್ತಿಗಳು ಸಾವಿರ ಆಪಾದನೆಯನ್ನು ಮಾಡಲಿ; ಧರ್ಮಪತ್ನಿ ಅಂದರೆಯೇನು? "ಗೃಹಿಣೀ ಗೃಹಮುಚ್ಯತೇ" ಅಂದರೇನು ಎಂಬುದಕ್ಕೆ ಒಂದು ಜೀವಂತ ನಿದರ್ಶನ. ನಾವು ನಿಜವಾಗಿ ಭಾಗ್ಯವಂತರು. ಲಕ್ಷ್ಮೀ ರೂಪಿಣಿಯಾಗಿ, ಶಾರದಾ ರೂಪಿಣಿಯಾಗಿ ಶಕ್ತಿರೂಪಿಣಿಯಾಗಿ, ಪುರುಷನ ಇಚ್ಛಾ ಕ್ರಿಯಾ ಜ್ಞಾನ ಶಕ್ತಿಯ ಪ್ರಚೋದಕಳಾಗಿ ಇರಬೇಕಂತೆ ಕುಲವಧು. ಈ ರೂಪವನ್ನು ನಮ್ಮ ದ್ರೌಪದಿಯನ್ನು ಬಿಟ್ರೆ ಬೇರೆಲ್ಲಿಯೂ ನಮಗೆ ಕಾಣಲಿಕ್ಕೆ ಸಾಧ್ಯವಿಲ್ಲ. ಅಕ್ಷಯಪಾತ್ರೆಯ ಸಿದ್ಧಿ ಅವಳಿಗೆ! ತಾಯಿ ಮಕ್ಕಳನ್ನು ಹೇಗೆ ಉಣಬಡಿಸಿ ಪೋಷಿಸಬೇಕು? ದ್ರೌಪದಿ ನಿತ್ಯ ಮಾಡ್ತಾ ಇದ್ದಾಳೆ. ಯೆಲ್ಲರಿಗೂ ಊಟವಾಯ್ತು. ಯಾರಲ್ಲಾದರೂ ಮಾತನಾಡೋಣ ಅಂತಂದ್ರೆ ನಮ್ಮ ಅರ್ಜುನನೂ ಊರಲಿಲ್ಲ. ನಕುಲ ಸಹದೇವರು ಕರೆದರಲ್ಲದೆ ಬರುವದಿಲ್ಲ. ಅಣ್ಣನ ಬಳಿಗೆ ಹೋಗುವದು ನನಗೆ ಅಷ್ಟು ಇಷ್ಟ ಆಗೋದಿಲ್ಲ. ಪಾಂಚಾಲಿ ಉಂಡಿರಬಹುದೇ? ಅಥವಾ ಸುಖವಾಗಿ ವಿಶ್ರಾಂತಿ ಪಡೆಯುತ್ತಾ ಇರಬಹುದೇ? ಯೇನೇ ಆಗಲಿ, ನಮಗಾಗಿ ಅವಳು ಮಾಡಿದ ತ್ಯಾಗ ಮರೆಯುವಂತಹದ್ದಲ್ಲ. ದಿನಕೊಮ್ಮೆಯಾದರೂ ಹೋಗಿ, ದೌಪದೀ ಹೇಗಿದ್ದಿ? ಅಂತ ಕೇಳದಿದ್ರೆ ಹೇಗೆ? ಸದ್ಯ ನಾನೇ, ಅರ್ಜುನ ಇದ್ರೆ ಅರ್ಜುನ ಮಾತಾಡಿಸ್ತಾ ಇದ್ದ. ಅಣ್ಣ ಅಂತೂ... ಹೇಳಿ ಉಪಯೋಗ ಇಲ್ಲ.... ಅವ ದೇವತಾ ಮನುಷ್ಯ ನೋಡೇನೆ... ಪಾಂಚಾಲಿ, ಆ, ಊಟ... ಆ ಯೇನಿದೂ! ಅಕ್ಷಯ ಪಾತ್ರದಲ್ಲಿ ಇನ್ನೂ ಬಾಕಿ ಇದೆ ಭೋಜನ! ಹಾಗೇ ಮಲಗಿ ಬಿಟ್ಟಿದ್ದಾಳೆ!

ಯಾಕೆ ಹೀಗೆ? ಪಾಂಚಾಲೀ ದು:ಖವೇನೇ ನಿನಗೆ? ಕಣ್ಣೀರು!! ವಿರೋಧಿಗಳ ಬಗ್ಗೆ ಸುರಿಸು, ನಾವು ಬದುಕಿದ್ದಾವಾಗ ಇಲ್ಲಿ ನೀನು ಚಿಂತಿಸುವದು ಯಾಕೆ? ಪಾಂಚಾಲೀ ದೂತದ ಸಭೆಯಲ್ಲಿ ನಿನ್ನ ಕಣ್ಣೀರನ್ನು ಕಂಡು ಪ್ರತೀಕಾರಕ್ಕೆ ಯೆದ್ದವ ನಾನು. ಪರಿಸ್ಥಿತಿ ನಿನಗೂ ಗೊತ್ತು. ಆಮೇಲೆ ವನವಾಸದ ಈ ಅವಧಿಯಲ್ಲಿ ಅದೆಷ್ಟೋ ಸಲ ನಿನ್ನ ಕಣ್ಣೀರು ಕಂಡಾವಾಗ ದೂರದಿಂದ್ದೆ ಹನ್ನೆರಡು ವರ್ಷ, ಒಂದು ವರ್ಷ ಅಜ್ಞಾತ! ಇಲ್ಲ ಹದಿಮೂರು ದಿವ್ಸ ಕಳೆಯಿತು. ಹದಿಮೂರು ತಿಂಗಳು ಕಳೆಯಿತು ಈಗ ಹೋಗ್ತೇನೆ ಅಂತ ಮುಂದಾದವ ನಾನು.

ಪಾಂಚಾಲಿ ಮತ್ತೂ ಕಣ್ಣೀರು! ಇದು ಹೊಸ ಕಣ್ಣೀರು! ಯಾಕೆ ಅಂದ್ರೆ ನಮಗೆಲ್ಲ ಇಕ್ಕುವಾಗ ಸಂತೋಷದಿಂದ ಇನ್ನು ಸ್ವಲ್ಪ ಇನ್ನೂ ಸ್ವಲ್ಪ ಹಾಕಿಕೊಳ್ಳಿ, ನಿಮಗೆ ಜೀರ್ಣ ಶಕ್ತಿ

ಇದೆ. ಆರೋಗ್ಯ ಇದೆ ಅಂತ ನಮ್ಮನ್ನು ಹುರಿದುಂಬಿಸಿದವಳು - ಉಪವಾಸವಿದ್ದು ಹೀಗೆ ಕಣ್ಣೀರಿಳಿಸ್ತಾ ಇದ್ದಿ ಅಂತಾದ್ರೆ ಕಾರಣ ಬೇರಿರಬೇಕು. ಯೇನೇ ಆಗಲಿ ನಾನಿದ್ದೇನೆ. ನಿನ್ನ ಕಣ್ಣೀರನ್ನು ತೊಡೆಯುವದಕ್ಕೆ ಸಾಧ್ಯವಾಗದೇ ಇದ್ರೆ ನಿನ್ನನ್ನು ಸತಿ ಅಂತ ನಾವು ಮನ ಒಪ್ಪುವದು ಹೇಗೆ? ಆದಕಾರಣ ಯೇನಾಗಬೇಕು ಹೇಳು. ಅಣ್ಣನ ವಿರೋಧ ಇಲ್ಲದ, ಅಣ್ಣನಿಗೆ ವಿರೋಧವಲ್ಲದ ಯಾವ ಕೆಲಸವನ್ನಾದರೂ ನಿನಗೋಸ್ಕರ ಮಾಡುವದಕ್ಕೆ ನಾನು ಪ್ರಮಾಣಬದ್ಧನಿದ್ದೇನೆ.

ಇಕೊ... ನಿನ್ನ ಕಣ್ಣೀರು ವರೆಸಿದ್ದೇನೆ.

ಯೇನೂ? ನನ್ನ ತಂದೆಯವರಾದ ವಾಯುದೇವರ ಸೊಸೆಯಾದ ನಿನಗಾಗಿ ಈ ಹೊಸಗಂಧವನ್ನು ಹೊತ್ತು ತಂದರೇ! ಹಂ, ನಿನ್ನದು ಕಾವ್ಯವಾಣಿ,

ಹೌದು ಅದು ಸೌಗಂಧಿಕ, ಹಾಗೆ ಹೆಸರಿಸೋಣ. ಜಡೆ ಹೆಣೆದ ಮೇಲಲ್ವೇನೆ ಅದನ್ನು ಮುಡಿದುಕೊಳ್ಳುವದು?

ಯೇನು, ಈಗಲೇ ಹೋಗಲೇ ಹಸ್ತಿನಾವತಿಗೆ?

ಒಹ್ಹೊ... ಈಗ ಮುಡಿ ಕಟ್ಟದೇ ಇದ್ರೂ... ಹ್ಹ ಹ್ಹ - ಪಾಂಚಾಲೀ ಮಾತು ಕೇಳಿ ಆಪ್ಯಾಯಮಾನವಾಯ್ತು.

ಯಾಕೆ? ಮಕ್ಕಳನ್ನು ಹೆತ್ತ ತಾಯಿಯಾದರೂ, ಬಿಚ್ಚಿದ ಕಬರಿಯನ್ನು ಬಂಧಿಸಲಿಲ್ಲವಾದರೂ ಮತ್ತೊಮ್ಮೆ ಯೆಳೇ ಮದುಮಗಳಂತೆ ಹೂ ಕುಂಕುಮ ಅರಿಷಿಣ ಇದೆಲ್ಲ- ಕೈಹಿಡಿದ ಪತಿಯಲ್ಲಿ ಹೇಳುವ ಹೆಂಡತಿಯಿದ್ದಾಗ ನಾನು ಕೆಲವು ವರ್ಷ ಹಿಂದೆ ಸರಿದೆ.

ಆದರೆ... ಇದೆಂಥಾ ಹುಚ್ಚೆ! ಸೌಗಂಧಿಕಾ ಪುಷ್ಪ? ಪಾಂಚಾಲೀ ಹ್ಹ ಹ್ಹ ಹ್ಹ

ವನವಾಸಿಗಳು ನಾವು. ನೀನು ನಮ್ಮ ಮುಂದಿಟ್ಟ ಈ ಬಯಕೆ ನನಗೆ ಶ್ರೀರಾಮನ ವನವಾಸದ ಕಾಲದ ನೆನಪನ್ನು ತಂದಿತು. ಪತಿವ್ರತೆಯಾದ ಸೀತೆಯಂತೆ ಸರ್ವಾಭರಣ, ಸರ್ವಾಲಂಕಾರ ಇದಕ್ಕಿಂತ ಹೆಚ್ಚಿನ ಅಲಂಕಾರ ನನ್ನ ಕೈಹಿಡಿದ ಭಾಗ್ಯದೇವತೆ ನನ್ನ ಪತಿ ಅಂತ ನೆರಳಿನಂತೆ ಬಂದ ಸೀತೆಗೆ...? ಬಾಕಿ ಇದ್ದದ್ದನ್ನು ನೀನು ಊಹಿಸಿಕೋ, ಬಂಗಾರದ ಮೈಬಣ್ಣದ ಒಂದು ಜಿಂಕೆಯನ್ನು ಕಂಡಾವಾಗ ಬೇಕು ಅಂತ ತೋರಿತು! ರಾಮ ಆಕ್ಷೇಪಿಸಿದ. ಆದರೂ ರಾಮ, ಛೇ ಇಷ್ಟು ತ್ಯಾಗ ಮಾಡಿದ ಸೀತೆ ಒಂದು ಕ್ಷುದ್ರವಾದ

ವಿಷಯವನ್ನು ಮುಂದಿಟ್ರು ಈಡೇರಿಸಬೇಕಾದದ್ದು ಮಾನವೀಯತೆ ಅಂತ ತಿಳ್ದು, ಹೋದ. ಮುಂದೆ ಏನೇನೋ ಆಯ್ತು. ಈಗ ಇದೇ ಅದು ಅಂತಲ್ಲ.

ಅಲ್ಲ... ನಿನಗೂ ಈ ಹೊತ್ತಿಗೆ ಒಂದು ಅಪರೂಪವಾದಂತಹ ಸುಗಂಧವನ್ನು ಆಘ್ರಾಣಿಸಿದಾವಾಗ ಅದೆಲ್ಲಿದೆ ಅಂತ ಗೊತ್ತಿಲ್ಲದಿದ್ರೂ ಬೇಕು ಅಂತ ತೋರಿತು! ಯೇನೇ ಇರಲಿ 'ನಾರೀ ಚಿತ್ತಂ ನಪಶ್ಯತಿ' ಅಂತ ಹೇಳಿದವ ಅಜ್ಞಾನಿಯಲ್ಲ ಮೂಢನೂ ಅಲ್ಲ. ಅದೆಲ್ಲ ಋಷಿಗಳ ಮಾತು ಈ ಹೆಂಗಸರ ಮನೋಧರ್ಮ ಹೇಗೋ! ಆದರೆ ಒಂದುಂಟು - ಕಣ್ಣಿಗೆ ಕಾಣಿಸುವದಿಲ್ಲ ಕೇವಲ ಉಂಟು ಎಂಬುದರ ದ್ಯೋತಕವಾಗಿ ಈ ಕಡೆಗೆ ನನ್ನ ತಂದೆಯ ಸಹವಾಸ ಮಾಡಿ ನಿನ್ನ ಮೂಗಿಗೂ ನನ್ನ ಮೂಗಿಗೂ ಸಂದೇಶವನ್ನು ಮುಟ್ಟಿಸ್ತದೆ ಅದು. ನೋಡು... ಕೆಲವು ಕಥಾನಕಗಳಿಂದ ನಾವು ಜಾಗ್ರತರಾಗಬೇಕಾದಂತಹ ಅವಶ್ಯಕತೆ ಉಂಟು. ಈ ಗತಕಾಲದ ಇತಿಹಾಸ ಶಾಸ್ತ್ರಗ್ರಂಥಗಳನ್ನೆಲ್ಲಾ ನಾವು ಓದುವದು ಬರೇ ಪಾರಾಯಣಕ್ಕಲ್ಲವಲ್ಲ? ತಿಳಕೊಳ್ಳುವದಕ್ಕೂ ಕೂಡಾ ಯೆಲ್ಲಿಯ ಹೂವೋ! ...ಯೇ ನೋ! ...ಯೆಂತೋ !

ನನ್ನ ಅನುಭವದಲ್ಲಿ ಅಥವಾ ಈಗ ನಿನ್ನ ಅನುಭವದಲ್ಲಿ ಕೂಡಾ, ಈ ರೀತಿಯ ಸುಗಂಧವನ್ನು ಬೀರುವ ಒಂದು ಅದ್ಭುತ ರಮ್ಯವಾದ ಕೇವಲ ನಮ್ಮ ತರ್ಕಕ್ಕೆ ಮಾತ್ರ ವಿಷಯವಾದ ಒಂದು ಪುಷ್ಪ ಪ್ರಕೃತಿಜನ್ಯವಾಗಿ ಇದ್ದೀತೋ? ಅದು ಮಣ್ಣಿನಲ್ಲಿ ಹುಟ್ಟಿದ್ದಲ್ಲ. ಭೂಲೋಕದಲ್ಲಿ ಯೆಲ್ಲೂ ಇರುವಂತಹದ್ದಲ್ಲ, ಅಥವಾ ಇದು, ಗಂಧವನ್ನೇ ಆಘ್ರಾಣಿಸಿಕೊಂಡು ನಾನು ಯೇಷ್ಟು ದೂರಕ್ಕೆ ನಾನು ಹೋಗಬೇಕಾಗ್ತದೆಯೋ... ಅದನ್ನೆಲ್ಲ ಆಲೋಚಿಸುತ್ತಾ, ಬರೇ ನಿನ್ನದ್ದಾದಂತಹ ಈ ಆಸಕ್ತಿ... ಬೇಡ ಅಂತ ನನಗೆ ತೋರ್ತದೆ ಯಾಕೆ ಅಂತಹೇಳಿದರೆ, ಅದು ದೇವಲೋಕದ್ದೋ... ಅದು ಮಾತ್ರವಲ್ಲ ನನ್ನಂತಹ ಮಾನವನಿಗೆ ಯೆಟುಕಲಾರದ್ದು ಅಂತಾದ್ರೆ ವೃಥಾ ಶ್ರಮ ಆಗ್ತದೆ. ಇನ್ನು, ಹೋದಲ್ಲಿ ನನಗೆ ಸಿಕ್ಕಿಲ್ಲ ಅಂತಾದ್ರೆ ಆಶಾಭಂಗ ನಿನಗೆ. ಆದಕಾರಣ ಪ್ರೌಢಾವಸ್ಥೆಗೆ ಬಂದು ನಾವು ಇಂಥಾ ಚಪಲತೆಗೆ ಅಧೀನರಾಗದೆ ಸುಮ್ಮನೆ ಇರುವುದು ಒಳ್ಳೆಯದು. ನಾನಿದ್ದೇನೆ... ನನ್ನನ್ನು ನೀನು ನೋಡು ನಿನ್ನನ್ನು ನಾನು ನೋಡ್ತೀನೆ. ಅಳುಕಲ್ಲ, ಜಾಗ್ರತೆ.

(ದ್ರೌಪದಿ: ಹೀಗೆಲ್ಲ ಮಾತನಾಡಿ ನನ್ನ ಆಸೆಯನ್ನು ಈಡೇರಿಸದಿದ್ದರೆ ನೀವು ಹೋಗುವುದು ಬೇಡ ನಾನೇ ಮೇಲೆ ಹೋಗ್ತಿದ್ದೇನೆ.)

ಹೆ !...ನೋಡು ನೋಡು ನೋಡು ನೋಡು, ನೀನು ಸಾಯ್ತೇನೆ ಅಂತ ಹೇಳಿ ನನ್ನನ್ನು ಚುಚ್ಚಬೇಡ. ಬಿಡು ದುಗುಡ, ಯೇನೊ ಆಗ್ಲಿ ಪಾಂಚಾಲಿ, ಕೃತಘ್ನನಲ್ಲ ಭೀಮ. ನನ್ನ ಹೃದಯದಲ್ಲಿ ಯೇನೆಲ್ಲ ಭಾವನೆ ಇದೆ ಅದನ್ನು ನಾನು ಮಾತಿನ ಮೂಲಕ ಪ್ರಕಟಿಸುವವನಲ್ಲ. ಯಾವ ವಿಘ್ನವಿತ್ತೂರಗಳೇ ಬಲ್ಲಿ ಅದನ್ನು ವಿರೋಧಿಸಿ ನಿರೋಧಿಸಿ

ಸರ್ವ ಪ್ರಯತ್ನದಿಂದ ಆ ಹೂವನ್ನು ತಂದು ನಿನಗೆ ಕೊಡೇನೆ. ಆದರೆ ಇದನ್ನು ಬಹಿರಂಗಗೊಳಿಸಬೇಡ, ಯೆಲ್ಲಿಯಾದ್ರೂ ಅಣ್ಣನ ಸನ್ನಿಧಾನಕ್ಕೆ ಈ ಸುದ್ದಿ ಮುಟ್ಟಿದ್ರೆ...ಹೇಳಬೇಡ.

ಪಾಂಚಾಲಿಗೆ ಧೈರ್ಯವನ್ನು ಹೇಳಿದ್ದೇನೆ. ಅದು. ಮಾತ್ರ ಅಲ್ಲ. ಈ ಭೀಮಯೇನು ಅಂತ ಪ್ರಚಾರ ಆಗುವದಕ್ಕೂ ಸ್ವಲ್ಪ ಎಡೆಯಾಗ್ತದೆ. ಕೆಲವು ಕಾಲದಿಂದ ಭೀಮ ಇದ್ದಾನೋ ಇಲ್ಲೋ ಅಂತ ಗೊತ್ತಿಲ್ಲ. ಆದ ಕಾರಣ ಸುದ್ದಿ ಮುಟ್ಟಿದ್ರೂ ಮುಟ್ಟಿ ಹಸ್ತಿನಾವತಿಗೆ ಒಳ್ಳೆಯದಕ್ಕೇ. ಸಾಗೇನೆ ಮುಂದೆ. ನನ್ನ ತಂದೆಯಾದ ವಾಯುದೇವರೂ ಕೂಡಾ ನನಗೆ ಅನುಕೂಲರೇ ಎಂಬಂತೆ ಹಿಂದಿನಿಂದ ಒತ್ತಡವನ್ನು ಕೊಡ್ತಾ ಬೀಸ್ತಾ ಇದ್ದಾರೆ. ವಾಯುಕುಮಾರನಾದ ನಾನು ತೀವ್ರಗತಿಯಿಂದ ಮುಂದೆ ಸಾಗ್ತಾ ಇದ್ದಾವಾಗ... ಯೆಲಾ! ವಾಯುವನ್ನು ವಿರೋಧಿಸುವ ಹಾಗೆ, ಇವ ಯಾರು? ಒಬ್ಬ ಮುದ್ರ, ಕಪಿ ಹೈ... ಇಂಥ ಕಪಿಗಳೆಲ್ಲ ಹೋದ ಕಾಲದಲ್ಲಿ ಇದ್ರು ಅಂತ ನಾನು ಕೇಳಿದ್ದೇನೆ. ಬರೇ ಮರದಿಂದ ಮರಕ್ಕೆ ಹಾರುವ ಕಪಿವರ್ಗ ಅಲ್ಲ. ಯಾರಿವನು? ಮಾರ್ಗನಿರೋಧ ಆಯ್ತಲ್ಲ. ನಾನ್ ದಾರಿ ಬಿಟ್ಟು ಬೇರೆಲ್ಲಿಯಾದರು ಹೋಗಬಹುದಿತ್ತು. ಈಗ ಬಂದಾಯ್ತು ಬಂದ ಮೇಲೆ ಹಿಂದೆ ಹೋಗುವವನಲ್ಲ ಭೀಮಸೇನ. ಮುಂದೆ ಸಾಗಬೇಕಾಗಿ ಮಾತನಾಡಿಸ್ತೇನೆ ಏಯ್...

ಅಯ್ಯಾ, ವೃದ್ಧ ಕಪಿಯೇ, ಕಪಿ ವೃದ್ಧನೇ ಯೆರಡೂ ಒಂದೇ. ಒಮ್ಮೆ ಕಣ್ ಬಿಟ್ಟು ನೋಡು, ನಾನು ಮುಂದೆ ಹೊಗಬೇಕಾಗಿದೆ. ನೀನಿಲ್ಲಿ ಮಲಗಿದ್ದಿ ಅಂತ ಗೊತ್ತಿದ್ದು ಬಂದವನಲ್ಲ ನಾನು. ಆದರೆ ನನ್ನ ಕಣ್ಣಿಗೆ ನೀನೀಗ ಬಿದ್ದಿದ್ದಿ. ಮಾರ್ಗಕ್ಕೆ ಅಡ್ಡವಾಗಿದ್ದೆ. ಮಾರ್ಗ ಬದಲಾಯಿಸುವವರಲ್ಲ ನಾವು. ನಮಗೆ ಒಂದೇ ಗುರಿ ಒಂದೇ ದಾರಿ. ಸ್ವಲ್ಪ ದಯವಿಟ್ಟು ಯೆದ್ದು ಆಚೆ ಕೂತೊ, ಮಲಗಿಕೋ ಯೇನ್ ಬೇಕಾದರೂ ಮಾಡು. ದಾರಿ ಬಿಡು. ಯಾವುದೇ ಜೀವಿಯನ್ನು ಅಡ್ಡ ಹಾಯಲಾಗದು. ಅದು ನಮ್ಮ ಸಂಸ್ಕಾರ, ಶಿಷ್ಟಾಚಾರ... ನಮ್ಮಣ್ಣ ಬಹಳ ದೊಡ್ಡವ ಅವ ಹೇಳಿದ್ದಾನೆ.

ಯೇನು? ನಿನ್ನಬಾಲವನ್ನು ಎತ್ತಿ ಇಡಬೇಕೇ? ಬಾಲ ಎತ್ತಿ ಇಡೋಣ. ಅಲ್ಲಿ ನನ್ನ ಔದ್ಧತ್ಯ ಎಲ್ಲಾ ಇಲ್ಲ. ಒಂದನೆಯದಾಗಿ ವಾರ್ಧಕ್ಯಕ್ಕೆ ಗೌರವ ಕೊಡುವವರು ನಾವು. ಯಾಕೆ? ನಾವದನ್ನು ಗೌರವಿಸುತ್ತೇವೆ. ಯಾಕೆ ಗೌರವಿಸ್ತೇವೆ? ಅದನ್ನನ್ನುಭವಿಸಬೇಕು ಎಂಬ ಆಸೆ ಇದ್ದುದ್ದರಿಂದ ನಮ್ಮಂಥವರು ವೃದ್ಧರನ್ನು ಹಿಯಾಳಿಸಕೂಡದು. ಅಯ್ಯೋ ಪಾಪ, ಒಂದು ರೀತಿಯಿಂದ ಒಳ್ಳೆಯದಾಯ್ತು ನೀನು ಸಾಧ್ಯ ಇಲ್ಲದೆ ಹೀಗೆ ಇಲ್ಲಿದ್ದೀ ನಿನಗೂ ಬಾಲವನ್ನು ಉದ್ದಕ್ಕೆ ಬಿಟ್ಟು ಯಾರ್ಯಾರ ಮಾರ್ಗವನ್ನು ನಿರೋಧಮಾಡಬೇಕು ಎಂಬ ದುರ್ಬುದ್ಧಿ ಇಲ್ಲ. ನಿನಗೊಂದು ಉಪಕಾರ ಮಾಡಿದ ಹಾಗೂ ಆಯ್ತು, ನನಗೂ ದಾರಿ ಸುಗಮವಾಯ್ತು. ನಾವೇನು ದಾರಿ ಮಾಡಿಕೊಂಡು ಹೋಗುವ ದುರ್ಮದರಲ್ಲ. ದಾರಿಯಲ್ಲೇ ಸಾಗೋಣ. ಆದರೆ ಒಂದು, ತಪ್ಪು ತಿಳಕೊಳ್ಬೇಡ ನಮಗೆ ಕೆಲವು ವಿಧಿ ನಿಷೇಧಗಳೆಲ್ಲ ಇದ್ದಾವೆ. ಕೆಲವರನ್ನು ಮುಟ್ಟಬಾರದು.

ಈಗ ಅನಾಥರಾದ್ರೆ ಮೃಗಗಳ ಕಳೆಬರಹವನ್ನೂ ಎತ್ತಿ ಹಾಕುವವರೇ, ಮತ್ತೆ ಸಚೇಲ ಸ್ನಾನ ಮಾಡ್ತವೆ. ಆದರೆ ಈಗ ವ್ಯವಧಾನ ಇಲ್ಲ. ಅವಸರದ ಕಾರ್ಯಕ್ಕೆ ನಾನು ಹೊರಟವ. ನಮ್ಮಲ್ಲಿ ಇನ್ನೊಂದು ಶಿಷ್ಟಾಚಾರ ಉಂಟು - ನೇರ ಹಸ್ತಸ್ಪರ್ಶ ಮಾಡಬಾರದಾದ್ರೂ ಯಾವುದಾದರೂ ಉಪಾಧಿಯಿಂದ ಮುಟ್ಟಬಹುದು. ಇಕೋ... ನನ್ನ ಕೈಯಲ್ಲಿ ಗದಾದಂಡ ಇದೆ, ನಾನು ಮೆಲ್ಲಗೆ ನೋಯದ ಹಾಗೆ ಬಾಲವನ್ನು ಆಚೆ ಕಡೆ ಇಡುವದಕ್ಕೆ ಪ್ರಯತ್ನಿಸ್ತೇನೆ.

ಭಾಮಿನಿ॥ ಮಾನವೇಶ್ವರನಾಗಿ ಕ್ಷುಲ್ಲಕ | ಕಾನನದ ವಾನರನೊಳಿಂದಿಲಿ | ಹೀನವಾಯಿತು

ಮಾನ ಈತನು ಯಾವ ಮಹತಿಗನೊ || ಸಾನುರಾಗದಿ ಕೇಳಿ ತಿಳಿಯುವೆ |

ಕೋಣೆಯೊಳು ತಾನೆಂದು ಭೀಮನು / ವಾನರೇಶ್ವರಪೇಳು ನಿನ್ನಯ

ನಾಮ ವಿವರವನು || ೭೯ ||

ಅಹ ಹ ... ಯೇನಿದೂ ಯೇನಿದೂ ! ಮರಳುಗೊಂಡೆನೇ!! ಛೇ ಆವೇಷದಲ್ಲಿ ನನ್ನನೇ ನಾನು ಮರೆತೆನೆ! ಯಾರಿವನು? ಭೀಮಸೇನನ ಗಧಾದಂಡದಿಂದ ಬಾಲವನ್ನು ಎತ್ತುವ ಮಾತು ಬಿಡೋಣ, ಅಲುಗಾಡಿಸುವದಕ್ಕಾಗೋದಿಲ್ಲ! ಭೀಮನ ಸತ್ವಪರೀಕ್ಷೆ ಮಾಡುವದಕ್ಕಲ್ಲ ಅಹಂಕಾರ ಕುಗ್ಗಿಸುವದಕ್ಕೆ ಅಂತ ಅನುಗ್ರಹಕಾರಕರಾಗಿ ಇಂದ್ರನೋ ಸಾಕ್ಷಾತ್ ಶ್ರೀಹರಿಯೋ, ಮೃತ್ಯುಂಜಯನೋ ಯಾರಾದ್ರೂ ಬಂದಿರಬಹುದೇ?

ಯೇನೇ ಆದರೂ ಒಂದು ಪಾಠ ಸಿಕ್ಕಿತು ಈ ವೃದ್ಧನಿಂದ. ಇದಕ್ಕೇ ಹೇಳೋದು ವೃದ್ಧರಿಂದ ಶಿಕ್ಷಣ ಪಡಿಬೇಕು. ಬಾಕಿದ್ದವರು ಅಂತ. ಇವ ನನಗೆ ಪಾಠ ಕಲಿಸಿದ ಕೂಡದು ದುಡುಕು ಕೂಡದು. ಅಲ್ಲ, ಹಿಗೊಬ್ಬ ನನಗೆ ಪೂರ್ವಜ ಆಂಜನೇಯ ಮುಖ್ಯಪ್ರಾಣ ಚಿರಂಜೀವಿ ಅಂತ ಕೇಳಿದ್ದೇನೆ ಅವನೇ ಇರಬಹುದೇ? ಇದ್ದರಂತೂ ನಾನು ಧನ್ಯ, ಭಾಗ್ಯವಂತ! ತಪ್ಪಿತು, ತಗ್ಗಿ ಬಗ್ಗಿ ಕೈಜೋಡಿಸಿ ಕೇಳೇನೆ.

ಅಯ್ಯಾ ಶರಣು. ಮಹನೀಯ ದಯವಿಟ್ಟು ಅಪ್ಪಣೆಯಾಗಬೇಕು; ದೇವನೋ ಯಕ್ಷನೋ ಗಂಧರ್ವನೋ ಯಾರು ನೀನು? ಅಯ್ಯಾ ನಾನು ಕುಂತಿದೇವಿ ಹಡೆದ ಮಕ್ಕಳಲ್ಲಿ ಎರಡನೆಯವನು. ದೂರ್ವಾಸದತ್ತವಾದಂತಹ ಮಂತ್ರಸಿದ್ಧಿಯಿಂದ ನಮ್ಮಮ್ಮ ನಮ್ಮ ತಂದೆಯವರ ಅಪ್ಪಣೆ ಪಡೆದು ದೇವತೆಗಳ ಅನುಗ್ರಹದಿಂದ ಪುತ್ರವತಿಯಾದದ್ದು. ಅದರಲ್ಲಿ ನಮ್ಮಮ್ಮ ಯಮನಮಂತ್ರದಿಂದ ನಮ್ಮಣ್ಣನಾದಂತಹ ಯುಧಿಷ್ಠಿರನನ್ನು ಪಡೆದಳು. ಮುಂದಿನ ಯಾವತ್ತೂ ಮಂತ್ರದಿಂದ ಅಂದರೆ ಮೂರನೇ ಮಂತ್ರದಿಂದ ಇಂದ್ರನನ್ನು ಆವಾಹಿಸಿ ನನಗೊಬ್ಬ ತಮ್ಮನನ್ನು ಪಡೆದಳು. ನಾನು ವಾಯುದೇವರ ಪ್ರಸಾದದಿಂದ ಹುಟ್ಟಿದ ಭೀಮಸೇನ, ವಾಯುಕುಮಾರ.

ನೀನು ಆಂಜನೇಯನೇ! ಧನ್ಯ ಧನ್ಯ. ಹಾಗಾದರೆ, ಈ ಸೊರಗಿದ ದೇಹ ಈ ಯಾವತ್ತೂ ಮಾತು ನನ್ನ ಪರೀಕ್ಷೆಗಾಗಿಯೋ? ನಿಜರೂಪ ಹೇಗೆ ಅಂತ ಅಪ್ಪಣೆ ಕೊಡಿಸಬೇಕು. ಆಹಾ, ಜಯ ಜಯಾ, ಮಾರುತೀ ಅನುಗ್ರಹಿಸಬೇಕು. ನಾನಂತೂ ನಿನ್ನ ತಮ್ಮ ವಜ್ರದೇಹಿ, ದುಷ್ಟರಾದಂತಹ ಕೌರವರನ್ನು ವಧೆ ಮಾಡ್ತವೆ ಅಂತ ಪ್ರತಿಜ್ಞೆ ಮಾಡಿದ್ದೇವೆ. ನನ್ನ ತಮ್ಮ ಅರ್ಜುನ ಇಂದ್ರಾಂಶದಿಂದ ಹುಟ್ಟಿದವ, ಅವನೂ ಮಹಾರಥಿ. ಅವನಿಗೆ ಅನುಗ್ರಹವನ್ನು ಅವನಣ್ಣನಾಗಿ ನನ್ನಣ್ಣನಾದ ನಿನ್ನಲ್ಲಿ ಬೇಡ್ತೇನೆ. ಒದಗಿ ಬಂದ್ರೆ ಯುದ್ಧದಲ್ಲಿ ನನ್ನ ತಮ್ಮನ ರಥದಲ್ಲಿ ಧ್ವಜದಂಡದಲ್ಲಿ ಸರ್ವ ರಕ್ಷಕನಾಗಿ ವಾಯುದೇವರ ಅಪರಾವತಾರವಾಗಿ ಉಪಕಾರ ಮಾಡಬೇಕು ಸ್ವಾಮಿ. ಅವಸರವಸರವಾಗಿ ಸೌಗಂಧಿಕಾಪುಷ್ಪವನ್ನು ತರಬೇಕಾಗಿ ಹೊರಟಿದ್ದೇನೆ. ನಿನ್ನ ಸಂಪೂರ್ಣ ಆಶೀರ್ವಾದವಿರಲಿ ಹೋಗಿ ಬರ್ತೇನೆ.

ಭಾಮಿನಿ ಇಂದುಮುಖಿತಾ ದ್ರುಪದ ನಂದನೆ ಗೆಂದು ಪುಷ್ಪವ ಕೊಯ್ಯುತಿರೆ ತಡೆ

ದೆಂದಶೌರ್ಯ ದಿ ವಿಕಟನೆಂಬಾ ಯಕ್ಷನಾರ್ಭಟಿಸಿ ॥ ೮೦ |

ಇದೋ ಇದೇ ಮಹಾ ಸರೋವರ, ಹೂವನ್ನು ಕೊಟ್ಟೇನೆ. ಇದಾರೋ ತಡೆಯುವದಕ್ಕೆ ಬಂದಿದ್ದಾನಲ್ಲ!

ಸೌರಾಷ್ಟ್ರ-ತ್ರಿವುಡೆ| ಕಳುವು ಮಾಡಲು ಬಂದುದಲ್ಲೆ | ಬಲುಮೆಯೊಳು ಕೊಯ್ದಿಲ್ವೆ

ಯೆನ್ನನು | ಕಲಹದೊಳು ನೀ ತೋರಿ ಶೌರ್ಯವ ತೊಲಗಿಸೆಂಬೆ || ೮೦ |

ಯೆಲಾ, ಯೇನಂದೆ? ಕಳ್ಳ ಬಾಕಿದ್ದ ಮಾತನ್ನೆಲ್ಲ ಒಪ್ಪಿಕೊಳ್ಳಬಹುದು.

ಅಯ್ಯಾ, ಯಕ್ಷ ಸಂಬಂಧಿಯಾದದ್ದು ಯೆಂದೆಲ್ಲ ಉಂಟೋ ಪ್ರಪಂಚದಲ್ಲಿ? ಕೊನೆಗೆ ಹೀಗೆ ಆಸಂಬದ್ಧವೋ? ಯೆಲಾ ಯಕ್ಷನೇ, ನಿನಗೆ ಬೇರೆ ಯಾವ ಪದಪ್ರಯೋಗವೂ ಬರೋದಿಲ್ವೋ ಹೇಳು ಉದ್ಧಟನೇ ಇಲ್ಲದಿದ್ರೆ ಮದಾಂಧನೇ ಅದೇನಾದ್ರೂ ಹೇಳು ಕಳ್ಳ... ಅಂತ ಹೇಳ್ತಿಯೋ? ಕಳ್ಳರು ಬರೋದು ಹೀಗೋ? ಅಯ್ಯಾ, ಇಕೋ, ಕುಲೋನ್ನತಿ, ಬಲೋನ್ನತಿ, ವಿದ್ಯೋನ್ನತಿ ಒಳ್ಳೆ ಸಂಸ್ಕಾರ ಈ ಆವರಣದಲ್ಲಿ ಬೆಳೆದವ ನಾನು. ಕಳ್ಳ, ಹ್ಞ ಹಾಗಾದರೆ ನಾನ್ ಹೇಳೇನೆ ಯಕ್ಷರಿಗೆ ಪೂರ್ತಿ ಶುದ್ಧೀಕರಣ ಆಗಲಿಲ್ಲ. ಇನ್ನೂ ಕೂಡಾ ನನ್ನ ಆಕಾರ ನೋಡು, ನನ್ನ ಆರೋಗ್ಯ ನೋಡು. ಕಳ್ಳರು ಹೀಗೆ ಬಾರೇನೋ? ಕಳ್ಳರು ಕತ್ತಲಿಗೆ ಅಡಗಿಕೊಂಡು ಬಾಕಿದ್ದವರೆಲ್ಲ ಅರ್ಧನಿದ್ರೆಯಲ್ಲಿದ್ರೆ ಪೂರ್ತಿ ನಿದ್ರೆ ಮಾಡುವವರೆಗೆ ಕಾದು ಹೋಗುವದು. ನೀನೇ ಹೇಳ್ತಿ "ಯೆದೆ ಉಬ್ಬಿಸಿ ಬಂದಿದ್ದೀ ನನ್ನವರೆನ್ನೆಲ್ಲಾ ಹೊಡೆದಿದ್ದಿ, ಆಮೇಲೆ ಸರೋವರವನ್ನು ಕಲಕಿದ್ದಿ, ಹೂವನ್ನು ಕೊಯ್ದಿದ್ದಿ" ಅಂತ ಇಷ್ಟು ಬಹಿರಂಗವಾಗಿ ಯೆಲ್ಲರೂ ಕಾಣುತ್ತಿರುವಂತೆ ಯೆಲ್ಲರನ್ನು ನಿರೊಧಿಸಿ ಮೈಮೇಲೆ ಬಿದ್ದವರನ್ನು ಗುದ್ದಿ, ಬೀಳಿಸಿ ಹೂವನ್ನು ಹಿಡ್ಕೊಂಡು ಒಳ್ಳೆ ಗಂಡು ಮಗನ

ಹಾಗೆ ಹೆಂಡತಿಗೆ ಗಂಡನ ಹಾಗೆ, ಅಪ್ಪನಿಗೆ ಮಗನ ಹಾಗೆ ನಾನಿಲ್ಲಿ ನಿತ್ತಿದ್ದಾಗ ಕಳ್ಳ ಅಂತ ಹೇಳಿ ಬಿಟ್ಯಲ್ಲ!

ಅಸ್ಥಾನದಲ್ಲಿ ಅಬದ್ಧ ಪ್ರಯೋಗ ಮಾಡ್ತಾ ಇದ್ದೀ ಇಗೊ... ಅರ್ಥ ಆಗ್ತದೆ ನನಗೆ ಈಚೆಯವನನ್ನು ಸಣ್ಣದು ಮಾಡಿ, ಅಬ್ಬರಿಸಿ ಓಡಿಸಿ ಬಿಡಬಹುದು. ಓಡಿಸುವದು ಯಾಕೆ? ನೀನೊಂದು ಜನ ಆಗಲಿಕ್ಕೆ, ಯೆಲಾ ರಣಹೇಡಿ, ಜೀವಗಳ್ಳ ನನ್ನನ್ನು ಕಳ್ಳ ಅಂತ ಹೇಳ್ತಿಯೋ? ನನಗೆ ಈ ಹೂ ಬೇಕು. ನಾನು ಕೊಯ್ದಿದ್ದೇನೆ. ನೀರು ನಾನು ಬೇಕು ಅಂತ ಕದಕ್ಕಿದ್ದಲ್ಲ. ನಾನೇನು ಮೃಗವೋ? ಸರೋವರಕ್ಕಿಳಿದ್ರೆ ಕೆಸರಿಲ್ಲವೆನೋ ಅಡಿಯಲ್ಲಿ? ಆದ್ದರಿಂದ ಬಂದವರೆಲ್ಲ ನನ್ನ ಮಾತನ್ನು ಬಹುಮಾನಿಸದೆ ಪೆಟ್ ತಿಂದು ಕೆಲವರು ನೀರ್ನಲ್ಲೇ ಈಗ ತೇಲತಾ ಇದ್ದಾರೆ. ಇನ್ನು ಸ್ವಲ್ಪ ಹೊತ್ತಾಗುವಾಗ ನೀರಿನ ತಂಪು ತಾಗಿ ಯೆಲ್ಲಿಯಾದ್ರೂ.. ಎಚ್ಚರಾದೀತು. ನಾನು ಭೀಮ ತಿಳಿಯಿತೇನೋ? ಈಗ ಅರ್ಥವಾಯ್ತು ನನಗೆ ಹ್ಹ  ಯಾರ್ಯಾರ ಆಡಳಿತದಲ್ಲಿ ಇರಬೇಕಾದ ಭೂಪ್ರದೇಶದಲ್ಲಿ, ಆಳುವವರು ಈ ಕಡೆಗೆ ದೃಷ್ಟಿ ಹರಿಸುವದಿಲ್ಲ ಎಂಬ ಕಾರಣಕ್ಕಾಗಿ ಯೆಲ್ಲಿಯೋ ಇದ್ದಂತಹ ಯಕ್ಷಲೋಕದ ನೀವು ನಿಮ್ಮ ಶ್ರೀಮಂತಿಕೆಯ ಅಬ್ಬರದಿಂದ ನಮ್ಮ ನೆಲಕ್ಕೆ ಬೇಲಿ ಹಾಕಲಿಕ್ಕೆ ಬಂದ್ರೆ? ಬಾಯ್ಮುಚ್ಚು,

ಭೂಮಂಡಲಕ್ಕೆ ಸೇರಿದ ಪ್ರದೇಶ ಇದು. ಇದು ಯಕ್ಷಲೋಕ ಅಲ್ಲ. ಗಂಧರ್ವಲೋಕ ಅಲ್ಲ. ಬಹುಶ: ನಿಮ್ಮದಾದಂಥ ಪ್ರದೇಶದಲ್ಲಿ ನಿಮ್ಮ ಈ ಅಬ್ಬರ ನಡೆಯುವದಿಲ್ವೋ ಯೇನೋ? ಇದು ಮನುಜ ಭೂಮಿ, ಒಂದು ಸಾವಿರ ಆಧಾರ ಉಂಟು. ಚತು:ಸಮುದ್ರವಲಯಾಂಕಿತವಾದ ಭೂಮಂಡಲಕ್ಕೆ ಚಕ್ರವರ್ತಿತ್ವ ಇನ್ನೂ ಉಂಟು ಜೀವಂತವಾಗಿ, ಅಲ್ಲಿ ಯಾರಿದ್ದಾರೆ ಅಂತ ಕೇಳೋಡ. ಹಾಗಿದ್ದಾಗ ಇಲ್ಲಿನ ಪ್ರಜೆ ನಾನು ಮಣ್ಣಿನ ಮಗ, ಇಲ್ಲಿದ್ದ ಕಾಡು... ಅಧಿಕಾರ ನಡೆಸಲಿಕ್ಕೆ ಹೊರಟಿದ್ದೀರಿ ಅಲ್ವೊ? ನಾವು ಮರ್ತ್ಯರು ಈ ಮಣ್ಣಿನಲ್ಲಿ ಯೇನೇನು ಹುಟ್ತದೆ ಆದಷ್ಟೂ ನಮ್ಮ ಸ್ವಾಮ್ಯಕ್ಕಿದ್ದದ್ದು. ನಮ್ಮಿಂದ ಬಾಕಿದ್ದವರು ಪಡಕೊಳ್ಳಬೇಕು. ಅದನ್ನು ಶೃದ್ಧಾ ಭಕ್ತಿಯಿಂದ ನಾವು ದೇವರನ್ನು ಪೂಜಿಸುವದಕ್ಕಾಗಿ ವಿನಿಯೋಗಿಸಬೇಕು.

ಅಯ್ಯಾ, ಮೊದಲೊಬ್ಬ ಹೇಳಿದ್ದಾನಂತೆ “ನಮ್ಮದೂ ನಮ್ಮದೇ ನಿಮ್ಮದೂ ನಮ್ಮದೇ” . ಅಧಿಕಪ್ರಸಂಗ ಮಾತಾಡಿದೆ ಅಂತಾದ್ರೆ, ಇಲ್ಲದೇ ಇದ್ದಲ್ಲಿ ನಿನ್ನ ಹಸ್ತಕ್ಷೇಪ ಮಾಡಿದಿ ಅಂತಾದ್ರೆ ಕೈಮುರ್ದೇನು ತಲೆ ಬಗ್ದೇನು. ಯೇ ಬಡವ, -ಇನ್ನು ಮಾತಾಡ್ತಿಯೋ? ಸಾಕೋ ಬೇಕೋ? ಭೀಮ ಅಂತ ಹೇಳುವಾಗ ನಿನಗೆ ನಗೆಬಂತು ಅಲ್ಲೊ? ಹೇಳು. ನಿನಗೆ ಯಾರಾದ್ರೂ ಇದ್ರೆ ನಾಯಕರಿದ್ರೆ ಪ್ರಭುಗಳಿದ್ರೆ ಅವರಿಗೆ ವಿವೇಕ ಇದ್ರೆ ಯೇನು ಮಾಡ್ತಾರೋ ಅವರ ಅವಗಾಹನೆಗೆ ಬಿಡು, ನಡಿ ಇಲ್ಲಿಂದ.

(ಕುಬೇರನ ಆಗಮನ)

ಯಾರಿದೂ? ಕುಬೇರ!! ಮಹನೀಯಾ, ದಿಕ್ಪಾಲ ಪಂಕ್ತಿಯಲ್ಲಿ "ರಾಜಾಧಿರಾಜಾಯ, ವೈಶ್ರವಣಾಯ" ಅಂತ ಯಾವಾಗ್ಲೂ ವೈದಿಕರಿಂದ ಪ್ರಚೋದಿಸಲ್ಪಟ್ಟ ನಾವು ವಂದಿಸಿದ್ದೇವೆ. ಯಾಕೆ ಅಂತ ಈಗ ಗೊತ್ತಾಯ್ತು.

ದಿಕ್ಪಾಲ ಪಂಕ್ತಿಯಲ್ಲಿದ್ದಂತಹ ಕುಬೇರ ಧನಾಧ್ಯಕ್ಷ, ಹೌದದು ಶ್ರೀಮಂತಿಕೆಯ ಲಕ್ಷಣಯೇನು ಎಂಬುದಕ್ಕೆ ಒಳ್ಳೆಯ ನಿದರ್ಶನ ನನಗೀಗ ಸಿಕ್ತು. ಹೃದಯ ಶ್ರೀಮಂತಿಕೆ, ಸರ್ವತ್ರ ಶ್ರೀಮಂತಿಕೆ ಇದ್ರೆ ಹೀಗಿರಬೇಕು.

ನಿನ್ನವರೆಲ್ಲಾ ಬಂದ್ರು- "ಯಾರು ಯೇನು ಕಳ್ಳ... ಸುಳ್ಳ" ಅಂತೆಲ್ಲ ಹೇಳಿದ್ರು.

ಆದರೆ ಇಷ್ಟು ಸ್ಥೈರಣೆಯ ಮೂರ್ತಿಯೇ ನೀನು! ತಪ್ಪಲ್ಲ,

ಸಾರ್ಥಕವಾಯ್ತು - ಬ್ರಹ್ಮದೇವರ ಮೊಮ್ಮಗನಂತೆ ನೀನು. ಹುಟ್ಟಿನಿಂದ ವೈಶ್ರವಣ ಅಲ್ಲ. ವಿಶ್ರವಸುವಿನ ಪುತ್ರ ವಿಶ್ರವಸುಪುತ್ರ ವೈಶ್ರವಣ. ಆಮೇಲೆ ಯಾವುದೋ ಕಾರಣಕ್ಕಾಗಿ ಆ ರಾಕ್ಷಸರ ಭೂಮಿ ಆ ದಶಕಂಠನ ಅಟ್ಟಹಾಸ! ಛೇ ಯಾಕಿದು? ಅಂತ ಬಂದಿದ್ದು. ಉತ್ತರಕ್ಕೆ ಬಂದಿದ್ದು ಮಾತ್ರವಲ್ಲ – ತಾನೇ ಸಂಪಾದಿಸಿಯೇನು ಅಂತ. ಆವಾಗ ಶ್ರೀಮಂತಿಕೆಗೆ ಬೆಲೆ. ಶಿವಾರಾಧನೆಯನ್ನು ಮಾಡಿ, ಶಿವಾನುಗ್ರಹದಿಂದಯಕ್ಷೇಶ್ವರ ಪದವಿಗೆ ಯೇರಿದ ಪುಣ್ಯಪುರುಷನಿಗೆ ಇದು ಲಕ್ಷಣ. ಭೂಷಣ ಅಲ್ಲ ಲಕ್ಷಣ. ಅಯ್ಯಾ, ನಿನಗೆ ನಾನು ಸೋತೆ ಅಂತ ಹೇಳಿದೆ. ಕಾಣಿಕೆಯನ್ನು ಕೊಟ್ಟೆ. ಕೊಡಬೇಕಾದದ್ದೇ.

ನನಗೆ ಪ್ರಚೋದನೆ ಅಗ್ನಿ ಸಂಭವೆಯಾದ ಪಾಂಚಾಲಿಯಿಂದ, ಸಾಲದೇ ಇದ್ರೆ ಅವಳ ಇಚ್ಛಾ ಕ್ರಿಯಾಜ್ಞಾನ ಈ ಶಕ್ತಿಯೇ ಈಗ ವಾಯುಕುಮಾರನಾದ ಭೀಮನೆಂಬ ಪುರುಷನಲ್ಲಿ ಆವೇಶಗೊಂಡದೆ. ಅದರ ಪ್ರಚೋದನೆ ಭೀಮನ ಮೈಯಲ್ಲಿ ಬಂದಾಗ ಆ ಶಕ್ತಿದೇವತೆಯ ಆವೇಶ. ಶಕ್ತಿದೇವತೆಯಿಂದಲೇ ಎಲ್ಲಾ ಕ್ರಿಯಾತ್ಮಕ ಚೇತನ ಸಾಕ್ಷಾತ್ಕಾರ ಶಿವನಿಗೆ ಉಂಟಾಗುತ್ತದೆ ಅಂತ ಬಲ್ಲ ನೀನು- ನಾನು ವಿವರಿಸಬೇಕಾದ್ದಿಲ್ಲ. ಆದುದರಿಂದಲೇ ವಾಯುಕುಮಾರನಾದಂತಹ ನಾನು ಆ ಶಕ್ತಿಯಿಂದ ಪ್ರಚೋದಿಸಲ್ಪಟ್ಟ ನಾನು ಮಂಗಳಕಾರಕ ದೃಷ್ಠಿಯನ್ನಿಟ್ಟುಕೊಂಡು ಬಂದದ್ದು. ಆದ್ದರಿಂದ ಶಿವಾವೇಷವೇ! ಸುಳ್ಳೇನು ಇಲ್ಲ. ಬರುತ್ತಾ ನನ್ನ ತಂದೆಯ ಸೀಮಂತ ಪುತ್ರನೋ ಆವೇಶ ಪುತ್ರನೋ ಗೊತಿಲ್ಲ - ಆಂಜನೇಯನ ದರ್ಶನವಾಯ್ತು. ಮೂಲ ಶಕ್ತಿಯನ್ನು ಹೆಚ್ಚಿಸಿಕೊಂಡಾಗ ಅವನೂ ನನ್ನ ಉದ್ದೇಶಕ್ಕೆ ಭಂಗ ತರಲಿಲ್ಲ. ಅವನದ್ದೂ ಅನುಗ್ರಹವಾಯ್ತು. ಹೀಗೆ ನೋಡುವಾಗ ಭೀಮನಾದಂತಹ ಒಬ್ಬ ಮನುಷ್ಯನಲ್ಲಿ ಯತಾರ್ಥಕ್ಕಾದ್ರೆ ಆವೇಷಗೊಂಡದ್ದು ರುದ್ರಾಂಶವೂ ಹೌದು. ವಾಯುವಿನ ಆಂಶವೂ ಹೌದು. ಶಕ್ತಿಯ ಅಂಶವೂ ಹೌದು. ಆದಕಾರಣ ಎಲ್ಲರೂ ನಿನಗೆ ಈ ರೀತಿಯಾದಂತಹ ಪ್ರಚೋದನೆಯನ್ನು ಕೊಟ್ಟು- "ಭೀಮಸೇನನನ್ನು ಅನುಗ್ರಹಿಸು...."

ಕೌಟುಂಬಿಕವಾಗಿ ಯೇನನ್ನೂ ಬಯಸದೇ ಇದ್ದಂತಹ ಉತ್ತಮ ಗೃಹಿಣಿಯಾದಂತಹ ಹದಿಬದೆಯ ಹೆಣ್ಣು ಪಾಂಚಾಲಿಯ ಆಸೆಯನ್ನು ಪೂರೈಸುವಲ್ಲಿ ಕುಬೇರಾ, ನಿನ್ನ ದಿವ್ಯವಾದಂತಹ ಅನುಗ್ರಹದಿಂದ ಅವಳ ಸಿರಿಮುಡಿಗೆ ಈ ಒಂದು ಪುಷ್ಪ ಅಲಂಕಾರವಾಗಲಿ. ಇದೊಂದು ಶುಭ ಸೂಚನೆ. ಯೇನು ಸ್ವಾಮಿ! ನನ್ನ ಅಣ್ಣನಾದ ಧರ್ಮರಾಜನನ್ನು ಅನುಗ್ರಹಿಸುವದಕ್ಕಾಗಿ ಬರ್ತಿರೋ... ಧನ್ಯ ಹೋಗೋಣ ಹಾಗಾದ್ರೆ.



## ೧೩ ದೂರ್ವಾಸಾನುಗ್ರಹ

### ದೂರ್ವಾಸ

ಸಾಂಗತ್ಯ ರೂಪಕ ಲೇಸಿನಿತೀಪರಿ | ಯಾಸೆಯೆ ಭಳಿರೆಹ | ತಾಶೆಯು ಬೇಡೀಗ ವನಕೆ

ರಾಶಿ ಶಿಷ್ಯರಗೂಡಿ | ತೋಷದಿಂದೈದಿ ಪೂ | ರೈಸುವೆ ನಿನ್ನಯ ಬಯಕೆ || ೮೨ ||

ಮಾರ್ಗ ಸುಗಮವಾಗ್ತಾ ಹೋಗ್ತದೆ ನಮ್ಮ್; ಕಾರಣಯೇನು? ನಿಸ್ಪೃಹರಾಗಿ ನಿಸ್ವಾರ್ಥತೆಯಿಂದ ಊರೊಳ್ಳೆದಾಗ್ಲಿ ಅಂತ ಜೀವಿಸುವ ನಮ್ಮಂಥವರಿಗೆ ಕೆಲವು ಸಲ ಎಲ್ಲವುದೂ ಅನುಕೂಲವಾಗಿಯೇ ಬರದೆ. ಬಂದಿರುವುದು ಇಲ್ಲಿ, ಯಾರಾಳ್ಬೇಕು, ಹೇಗೆ ಆಳ್ಬೇಕು? ಎಂಬ ಕನಸು. ನನಗೆ ನೆನಪಾದದ್ದು - ರಾಮರಾಜ್ಯದ ಆ ನೆನಪು, ಸದ್ಯದ ಪರಿಸ್ಥಿತಿಯನ್ನು ನಾನು ಕರ್ಣಾಕರ್ಣಿಕೆಯಾಗಿ ಕೇಳಿ ತಿಳ್ದವ - ಪಾಂಡವರ ಔದಾಸೀನ್ಯವೇ ಕಾರಣವಾಗಿ, ಅವರ ಬದುಕಿನಲ್ಲಿದ್ದ "ಪಾತ್ರಕ್ಕೆ ಬಂದದ್ದು ಪಂಚಾಮೃತ" ಎಂಬ ತೃಪ್ತಿಯೇ ಈ ದುಷ್ಟ ಆಡಳಿತಕ್ಕೆ ಪ್ರೋತ್ಸಾಹವೋ, ಅಲ್ಲ ಸುಯೋಧನನೂ ಆದೀತೋ ಎಂಬ ಸಮಸ್ಯೆ ಬಂದಾವಾಗ ಈಗ್ ಒಂದು ಉತ್ತರ ಸಿಕ್ಕಿತು. ಹೇಗೆ?

ಇವನಿಗೆ ಆಗದಿದ್ದವರನ್ನು, ನಮ್ಮಂತಹ ಒಳ್ಳೊಳ್ಳೆ ಜನಗಳಿಂದ ಬೇಕಾದ ಹಾಗೆ ಕೊಲ್ಲಿಸುವ ಬಲುದೊಡ್ಡ ಕೊಲೆಗಾರ ಇವ! ಅಂವ ಬೇರೇವನನ್ನಾದ್ರೂ ಕೇಳಬಹುದಿತ್ತು - "ಸ್ವಾಮಿ ನನಗೆ ಶ್ರೇಯಸ್ಸು, ಸೌಭಾಗ್ಯ, ಆಯಸ್ಸು ಆಗುವಂತೆ ಹರಸಿ" ಅಂತ ಕೋಳೊದಿಲ್ಲ ಅವ. ಮತ್ತೆ? "ತನಗ್ಯಾರಾಗೋದಿಲ್ಲ ಅವರ ನಾಶ ಮಾಡ್ಬೇಕು" . ಇದರಿಂದ ಪಾಂಡವರನ್ನು ಅಪೇಕ್ಷಿಸಿ ಇವ ಕ್ಷಾತ್ರರಿತ್ಯಾ ದುರ್ಬಲ ಅಂತ ಪ್ರಾಮಾಣಿಕವಾಗಿ ಒಪ್ಪಿಕೊಂಡಹಾಗಾಯ್ತು. ಪಾಂಡವರನ್ನು ಇದಿರಿಸಿ ತಾನು ಬದುಕಲಾರ. ನಮ್ಮಂಥವರು ಪ್ರಾಮಾಣಿಕವಾಗಿ ಅರ್ಥಮಾಡುವದು ಹೇಗೆ – ಪಾಂಡವರು ಕಾಡಿನಲಿದ್ದೂ ಈ ಹೊತ್ತು ಯಾವ ಸೌಲತ್ತು ಸೌಲಭ್ಯ ಅವರಿಗಿಲ್ಲದಿದ್ರೂ ಅವರನ್ನೇ ಎಣಿಸ್ತಾ ಇದ್ದಾನೆ ಇವ. ಹಾಗಾದ್ರೆ ಪಾಂಡವರು ಪ್ರಪಂಚ ಕಾಣದ ಈ ದುಃಸ್ಥಿತಿಯಲ್ಲಿಯೂ ಕೂಡಾ ಇವನಿಗೆ ಪ್ರಬಲರು. ಅದಕ್ಕೇ ನೋಡಿ ಅವರ ನಾಶವನ್ನೇ ಅವ ಬಯಸ್ತಾನೆ. ಇದು ನನ್ನ ಮನಸಾಕ್ಷಿಗೆ ಒಂದು ಪ್ರಶ್ನೆಯೇ. ಎಷ್ಟಂದ್ರೂ ನಮ್ಮ ಮಂತ್ರದಿಂದ ಹುಟ್ಟಿಕೊಂಡವರಲ್ಲೊ? ಪರ್ಯಾಯವಾಗಿ ಪಾಂಡವರು ನನಗೆ ಪುತ್ರಸಮಾನರು.

ಹಾಗಿರುವಾಗ, ನನಗೇನ್ ಹೇಳ್ತಾನವ! "ಅವರ ನಾಶವನ್ನು ನೀವೇ ಮಾಡಿ" ಅರ್ಥಾಗದೆ ನನಗೆ, ಯೇನ್ ಮಾಡ್ದ ಹೇಳಿ? "ನಿನಗೇನ್ ಬೇಕು? ನಿನಗೆ ಪೂರ್ಣತೃಪ್ತಿ ಉಂಟು ಮಾಡ್ತೇವೆ" ಅಂತ ನಾ ಹೇಳಿದ್ದು ಹೌದು. ಪಾಂಡವರ ಸತ್ವಪರೀಕ್ಷೆ ಆಗಲಿಕ್ಕೇ ಬೇಕು.

ಸತ್ವ ಪರೀಕ್ಷೆ ಮಾತ್ರವಲ್ಲ, ಪಾಂಡವರಿಗಿದ್ದ ಶಕ್ತಿಯೇನು ಎಂಬುದನ್ನವರಿಗೆ ಯಾವುದಾದರೊಂದು ಮಾಧ್ಯಮದ ಮೂಲಕ ತಿಳಿಸಿಕೊಡಬೇಕು. ನಿಮ್ಮಂಥವರ ಆಡಳಿತ ಪ್ರಪಂಚಕ್ಕಗತ್ಯ ಉಂಟು ಅಂತ ಅವರಿಗೊಂದು ಉತ್ಸಾಹವನ್ನು ತುಂಬಬೇಕು. ಕೌರವನ ಮನೆಯ ಅನ್ಯಾಯದ ಅನ್ನವನ್ನು ಊಟ ಮಾಡಿಕೊಂಡು ದೂರ್ವಾಸನು ಯುದ್ಧ  ಕೆದರಿ ಬುದ್ಧಿ ಕೆಟ್ಟು, ಪಾಂಡವರ ನಾಶಕ್ಕೆ ಹೊರಟ ಅಂತ ಹೇಳಲಿ. ನಾನು ಹೊಗಳಿಕೆಗೂ ಸೋತವನಲ್ಲ ತೆಗಳಿಕೆಗೂ ಸೋತವನಲ್ಲ. ಘನವಾದ ಉದ್ದೇಶ ಹೇಗೆ? ಪಾಂಡವರು ಯಾಕೆ ಇಷ್ಟು ಸಮರ್ಥರಾಗಿದ್ರೂ ಕೂಡಾ ವೈರಿ ಎಚ್ಚರದಲ್ಲಿಯೂ ಕನಸಿನಲ್ಲಿಯೂ ಅವರದ್ದೇ ಕನಸು ಕಾಣುತ್ತಾನೆ ಎಂಬಂತಹ ಪರಿಸ್ಥಿತಿಯಲ್ಲಿ ರಾಜ್ಯ ಹೋದರೇನು ಅಂತ ಯಾಕೆ ಹೀಗಿದ್ದಾರೆ! ಹಾಗಾದರೆ ನನ್ನ ಮಂತ್ರ ಬೀಜದಿಂದ ಹುಟ್ಟಿದ ಈ ಬೆಳೆಗೆ ಇಷ್ಟೇ ಫಲವೋ?

ಪಾಂಡವರೂ ಇವನಷ್ಟೇ ಅಂತಾದ್ರೆ, "ಪಾತ್ರೆ ಬರಿದಾಯ್ತು ಇನ್ನು ಸಂಜೆವರೆಗೆ ಯೇನೂ ಇಲ್ಲ ಅಂತ ಹೇಳ್ತಾರೆ ಅಂತಾದ್ರೆ... ಅವರು ಬದುಕುದ್ಯಾಕೆ? ಅದಲ್ಲ; "ನಾವೇನು! ಆತ್ಮವರ್ಚಸ್ಸಿದ್ದವರು, ನಮ್ಮ ಪಾತ್ರೆ ಯಾವಾಗಲೂ ಬರಿದಾಗೋದಿಲ್ಲ ಅದು ಅಕ್ಷಯವೇ ಅಂತ ಅವರು ಪ್ರಕಟಿಸಬಲ್ಲವರಾದ್ರೆ, ಅವರ ಧರ್ಮ ಅವರನ್ನು ರಕ್ಷಿಸ್ತದೆ ಅಂತಾದ್ರೆ, ನಾನೂ ನಾನಿದ್ದಲ್ಲೇ ಕ್ಷೇಮದಿಂದ ಇರಬಹುದಲ್ಲ? ನಾನು ಕೊಟ್ಟ ಮಂತ್ರ ಬೀಜ ಹಾಳಾಗಲಿಲ್ಲ; ರಾಮರಾಜ್ಯದ ಪ್ರತಿಬಿಂಬವಾಗಿ ಧರ್ಮಸಾಮ್ರಾಜ್ಯ ಸ್ಥಾಪನೆ ಆಗ್ತದೆ ಎಂಬ ವಿಶ್ವಾಸದಲ್ಲಿ ಮೊದಲಿನ ಹಾಗೆ ಇದ್ ಬಿಟ್ರೆ ದೂರವಾಸನಾಗಿ, ಹೇಗೆ?

ನಮಗೆ ಇನ್ನೊಬ್ಬರ ಅನ್ನ ತಿಂದೆಲ್ಲ ದುರ್ಬುದ್ಧಿ ಬರೋದಿಲ್ಲ. ಯಾಕ್ ಬರೋದಿಲ್ಲ?

ನಾವ್ ಯೇನ್ ಉಣ್ತೇವೆ ಅದನ್ನಲ್ಲೇ ಜೀರ್ಣೋಭವ ಅಂತ ಮಾಡ್ಕೊಳ್ತೇವೆ. ಅನ್ನಗತ ಪ್ರಾಣರಲ್ಲ ನಾವು. ಹಾಗಾಗಿಯೇ ನಮ್ಮಂಥವರು ಹೆಂಡ ಕುಡ್ದಿದ್ದಾರಂತೆ- ಕೇಳಿದ್ದೇನೆ ನಾನು! ಆದರೆ ಅವರು ಅಮಲಾಗಿ ಬಿದ್ದ ಸುದ್ದಿ ಇಲ್ಲ. ದೇವತೆಗಳು ಸೋಮಪಾನ ಮಾಡ್ತಾರೆ ಅವರಿಗೂ ತಲೆಕೆಟ್ಟದ್ದು ಸುದ್ದಿ ಇಲ್ಲ. ಅದೇ ಸೋಮರಸವನ್ನು ಯಾರಾದ್ರೂ ಬ್ರಾಹ್ಮಣರ ಮಕ್ಕಳು ಕುಡಿದ್ರೆ? ಯೇನ್ಮಾಡ್ತಾರೋ ನಂಗೊತ್ತಿಲ್ಲ!! ಹಾಗಾಗಿ ಎಲ್ಲವನ್ನೂ ಜೀರ್ಣಿಸಿಕೊಳ್ಳುವಂತಹ ಒಬ್ಬ ವ್ಯಕ್ತಿಗೆ ಅವನಿಗೆ ಅನ್ನದೋಷ ಎಲ್ಲಿಂದ ಬಂದೀತು? ಅದು ಮಾತ್ರವಲ್ಲ ಈ ಕೌರವ ಎಂಥವ ಅಂತ ನಮಗೆ ಮೊದಲೇ ಸುದ್ದಿ ಉಂಟು. ಹಾಗಾಗಿ, ಅನ್ಯಾಯದಿಂದ ಸಂಪಾದಿಸಿದ ಅನ್ನವನ್ನೇ ಅವ ನಮಗೆ ಹಾಕ್ತಾನೆ ಅಂತ ನಮಗೆ ಗೊತ್ತುಂಟು. ಅನ್ಯಾಯದ ಅನ್ನ ಎಲ್ಲಿಯವರೆಗೆ ನಮ್ಮ ರಕ್ತಗತವಾಗಿರುತ್ತದೆ ಅಲ್ಲಿಯವರೆಗೆ ಅನ್ನಮಯ ಕೋಶಕ್ಕಂಟಿಕೊಳ್ತಾರೆ ಜೀವರಿಗೆ ಅದೇ ಬುದ್ಧಿ ಬರದೆ ಅಂತಲೂ ಗೊತ್ತುಂಟು. ಅವರು ದೇಹಗತ ಪ್ರಾಣರು. ದೇಹದ ಏರುಪೇರಿನಿಂದ ಅವರ ಬುದ್ಧಿ ಕೆತ್ತದೆ. ನನ್ನಂಥವರಿಗೆ ಅಂಥಾ ಭಯ ಏನೂ ಇಲ್ಲ. ಆದರೆ ಅವ ತಿಳಕೊಳ್ಳಲಿಲ್ಲ

ಕೌರವ! “ನನ್ನ ಅನ್ನದ ಪ್ರಭಾವ ಇದು” ಅಂತ ತಿಳ್ಕೊಳಲಿ ತೃಪ್ತನಾಗ್ಲಿ, ಹಾಗಾಗೀ, ಕಾಮ್ಯಕಾವನದಲ್ಲಿದ್ದಂತಹ ಪಾಂಡವರ ಪ್ರದೇಶಕ್ಕೆ ಯಾವಾಗ ಹೋಗೋಣ ಅಂತ ಆಲೋಚಿಸ್ತಾ ಆಲೋಚಿಸ್ತಾ ದಿನವೊಂದು ಸಂದು ಹೋಯ್ತಲ್ಲ!

ಮಧ್ಯಮಾವತಿ-ತ್ರಿವುಡೆ ಮರುದಿವಸ ಸತಿಯುಂಡ ಸಮಯವ | ನರಿತು ಶಿಷ್ಯರ ವೆರಸಿ

ಮುನಿಪತಿ | ಬರಲು ಪೂಜೆಯ ವಿರಚಿಸುತ ಭೂ

ವರನು ವಿನಯದೊಳೆರಗಲೂ || ೮೩ |

ಗ್ರಹಸ್ಥನ ಮನೆಗೆ ಊಟಕ್ಕೆಂದು ಬರುವ ಅತಿಥಿಗಳಿಗೆ ಒಳ್ಳೆ ಸೂಕ್ಷ್ಮದೃಷ್ಟಿ ಇರ್ಬೇಕು; ಹ್ಯಾಗೆ? ದ್ರೌಪದಿ ಊಟ ಮಾಡಿದ ಮೇಲೆ ಆ ಹೊತ್ತು ಮತ್ತೆ ಏನೂ ಇರೋದಿಲ್ಲ ಮಿಕ್ಕೋದಿಲ್ಲ ಅಕ್ಷಯ ಪಾತ್ರದಲ್ಲಿ ಅಂತ ತಾನೆ ಪ್ರತೀತಿ? ಹಾಗಾದರೆ ಈಗ ಪಾಂಚಾಲಿಗೆ ಊಟ ಆಯ್ತೋ ಇಲ್ವೊ? ಬೇರೊಬ್ಬರಾದರೆ ಕೇಳಿಯಾರು “ನಿಮ್ಮ ಮನೆ ಹೆಂಡ್ತಿಗೆ ಊಟ ಆಯ್ಕೆ? ನನ್ನಂಥವ ಕೇಳಲಿಕ್ಕಿಲ್ಲ. ಐದುಮಂದಿ ಪಾಂಡವರು ಕೂತಿದ್ದಾರೆ, ಎಷ್ಟೋ ಋಷಿ ಮುನಿಗಳೆಲ್ಲ ಇಲ್ಲಿ ಸೇರಿದ್ದಾರೆ. ಊಟ ಆದ್ಮಲೆ ಯೇನೇನೊ ಕಥಾಪ್ರಸಂಗ ನಡಿಸ್ತಾ ಇದ್ದಾರೆ. ಎಲ್ಲರೂ ಸಾಂತ್ವನವನ್ನೇ ಮಾಡ್ತಾ ಇದ್ದಾರೆ ಪಾಂಡವರಿಗೆ “ಹೇ ಇದೆಲ್ಲ ಏನ್ ಕಷ್ಟ ಪ್ರಪಂಚದಲ್ಲಿದ್ದದ್ದೇ. ಹಿಂದೆ ಹೀಗಾಗಿತ್ತು ಅಲ್ಲಿ ಹಾಗಾಗಿತ್ತು...” ಕಥಾಶ್ರವಣವೇ ನಡೀತಾ ಇದೆ. ದ್ರೌಪದಿ ಬಹಳ ಶ್ರದ್ಧೆಯಿಂದ ಪಾಂಡವರ ಪಕ್ಕದಲ್ಲಿ ಕುಳಿತಿದ್ದಾಳೆ. ಬುದ್ಧಿ ಇದ್ದವನಿಗೆ ಗೊತ್ತಾದೀತು- ಮನೆ ಯಜಮಾನನಿಗೆ ಊಟ ಆಗದೆ ಅಂತ. ಇಲ್ಲಾದರೆ ಅವಳು ಹೊರಗೆ ಬಂದು ಸಭೆಯಲ್ಲಿ ಕುಳಿತುಕೊಳ್ಳುವದಿಲ್ಲ ವಿಳ್ಯ ಹಾಕಿ. ಬುದ್ಧಿ ಇದ್ದವರು ಅರ್ಥಮಾಡಿಕೊಳ್ಳಬೇಕು ಈಗ ಪಾತ್ರೆ ಕಮಚೆ ಇಟ್ಟಾಗದೆ ಅಂತ. ನಮಗಂತೂ ಗೊತ್ತು; ಇದೇ ಹೊತ್ತು. ಆದ್ದರಿಂದ ಹದಿನಾಲ್ಕು ಸಾವಿರಕ್ಕೆ ಮಿಕ್ಕಿ ಶಿಷ್ಯರ ಗಣವನ್ನೆಲ್ಲ ಸೇರಿಸಿಕೊಂಡು ಧರ್ಮರಾಯನ ಮುಂದೆ ಪ್ರತ್ಯಕ್ಷ ಆಗೋಕಾಗಿದೆ. ಶಂಭೋ ಮಹಾದೇವ!

(ಬಂದ ದೂರ್ವಾಸರನ್ನು ಧರ್ಮರಾಯ ಸ್ವಾಗತಿಸುತ್ತಾನೆ)

ಇದು ನಮಗೆ ಚಿರಕಾಲದ ಅಭ್ಯಾಸವೇ. ಯಾವುದು? ನೆಲದಲ್ಲಿ ಕೂತುಕೊಳ್ಳುದು, ಕಾಡಿನಲ್ಲಿ ಸುತ್ತಾಡೋದು

ಕೆಲವೊಮ್ಮೆ ಅಪರೂಪಕ್ಕೆ ಯಾರಲ್ಲಿಯಾದರೂ ಚಿನ್ನದ ಸಿಂಹಾಸನ ಇದ್ರೆ, ಅವರ್ ಕೈಯ್ಯಲ್ಲೇ ಇದ್ರೆ, ಅವರಿಗೆ ಬೇಕಾಗಿ ಒಂದು ಘಳಿಗೆ ಕುಳಿತು ಏಳುವ ಅಭ್ಯಾಸ ಉಂಟು ನನಗೆ ಯೇನು ಮಾಡೋದು ಆ ಅತೃಪ್ತಿ ಇರೋದು ನಿಮ್ಮಂಥ ಕ್ಷತ್ರಿಯರಿಗೆ ಒಳ್ಳೇದು. ಯಾಕಂದ್ರೆ, ಇದ್ದ ಚಿನ್ನದ ಸಿಂಹಾಸನಯೆಲ್ಲೊ ಕಳಕೊಂಡೆವಲ್ಲಾ! ಇಂಥವರು ಬರುವಾಗಾದ್ರೂ, ಕೊಡುವಾ ಅಂತ ತೋರಿದ್ರೆ ಅರಸೊತ್ತಿಗೆ ಒಳ್ಳೆದು; ನಮಗೆ ಹೇಗಾದ್ರೂ

ಆದೀತು. ಅದಕ್ಕೋಸ್ಕರ ನೀನು ಯೋಚನೆ ಪಡಬೇಡ, ಕುಶಲವೇ?

ಮಧ್ಯಮಾವತಿ-ತ್ರಿವುಡೆ ಕ್ಷೇಮವೇ ಜನಪಾಲ ಸತಿಗಾ| ರಾಮವೇ ದೌಮ್ಯಾದಿ ಭೂಸುರ

ಸ್ತೋಮ ಕುಶಲವೆ ಪೇಳೆನುತಲುಗಿ ದ್ದಾಮ ಮುನಿ ನಗುತೆಂದನು || ೮೪ ||

ಯುಧಿಷ್ಠಿರಾ, ನೀನು ಯಾವ ಕೀಳರಿಮೆಯನ್ನು ನನ್ನುಂದೆ ಇಡಬೇಡ. ಯಾಕೆ? ವ್ಯಕ್ತಿಯನ್ನು ನಾನ್ ಅತ್ತೆ ಮಾಡೋದು, ವೈಯಕ್ತಿಕವಾಗಿ ನಿನ್ನ ಅರ್ಹತೆಯೇನು ಎಂಬುದರ ಕಡೆಗೆ ನಮ್ಮ ಲಕ್ಷ ಉಂಟು. ಆದ್ದರಿಂದ ನಾನು ಕೇಳಿದ್ದು ಕುಶಲವೇ ಚೆನ್ನಾಗಿದ್ದ್ಯೋ ?

ಮುಖ್ಯ ಎಲ್ಲಿ ಇದ್ದಾನೆ ಎಂಬುದಲ್ಲ; ಕ್ಷೇಮ ಅದು ಮುಖ್ಯ. ಕ್ಷೇಮ ಅಂತದ್ರೆ ಕೇವಲ ಶರೀರಕ್ಕೆ ಸಂಬಂಧಿಸಿ ಅಲ್ಲ. ಇಲ್ಲದಿದ್ರೆ ಏನಾಗ್ತದೆ? ಶರೀರದಲ್ಲಿ ಚೆನ್ನಾಗಿದ್ದಾನೆ ಆದರೆ ಮಲಗಿದ ತಕ್ಷಣ ದು:ಸ್ವಪ್ನವನ್ನೇ ಕಾಡ್ತಾನೆ ಅಂತಾಗುವಾಗ ಇವ ಕ್ಷೇಮದಿಂದ ಇದ್ದಾನೆ. ಅಂತ ಹೇಳಲಿಕ್ಕಾಗೊದಿಲ್ಲ.

ನಿಜವಾದ ಕ್ಷೇಮ ಅಂತಂದ್ರೆ ಹೇಗೆ?

ಅಧಿದೈವಿಕ, ಆಧ್ಯಾತ್ಮಿಕ, ಆಧಿಭೌತಿಕ ಈ ಮೂರು ತಾಪಗಳಿಗೂ ಅತೀತನಾಗಿ ಒಬ್ಬ ತೃಪ್ತನಾಗಿದ್ದರೆ ಅವ ಕ್ಷೇಮ ಅಂತರ್ಥ; ನೀನಿರಬಹುದು. ನಿನ್ನ ಸೋದರರು, ಅವರೂ ಇರಬಹುದು ಯಾಕೆ? ನೀನಣ್ಣ ಹಾಗಿರುವಾಗ ಅಣ್ಣ ಸಂತೋಷದಲ್ಲಿದ್ದಾನೆ ಅಂತಾದ್ರೆ ತಮ್ಮಂದಿರು ಸಂತೋಷದಲ್ಲೇ ಇದ್ದಾರೆ. ಇನ್ನು ಸ್ಥೂಲವಾಗಿ ನೋಡಿದರೆ ಆ ತಮ್ಮಂದಿರಲ್ಲಿ ತಮ್ಮತನ ಎಂಬುದೇ ಇಲ್ಲ. ಎಲ್ಲ ನಿನ್ನ ನೆರಳು. ಬೇಕಾದದ್ದೇ ಅದು. ನಿನ್ನ ರಾಣಿ, ಧರ್ಮಪತ್ನಿ ಅವಳು ಕೂಡಾ ಬಹಳ ಸುಖವಾಗಿ ಇದ್ದಾಳೆ ಅಂತ ಕಾಗ್ತಿದೆ. ಇಲ್ಲದಿದ್ರೆ ಈ ಆಧ್ಯಾತ್ಮಿಕವಾದಂತಹ ಆವರಣವೆ, ಈ ಪೌರಾಣಿಕವಾದಂತಹ ಪರಮಾತ್ಮನ ಕುರಿತಾದಂತಹ ಲೀಲಾವರ್ಣನೆಯನ್ನೆಲ್ಲ ಇಷ್ಟು ಶಾಂತ ಮುಖಮುದ್ರೆಯಿಂದ ಬೇರೆ ಹೆಂಗಸರಿಗೆ ಕೇಳಲಿಕ್ಕೆ ಕೂಡೀತೆ? ಹಾಗಾಗಿ, ನಿನ್ನ ತಮ್ಮಂದಿರಿಗೆ ನಿನ್ನ ಧರ್ಮಪತ್ನಿಗೆ ಎಲ್ಲ ಕ್ಷೇಮವೇ ಅಂತ ಕೇಳಿದ್ದಾಕೆ ಗೊತ್ತೋ ಕ್ಷೇಮವೇ' ಎಂಬ ಉತ್ತರವನ್ನು ನಿರೀಕ್ಷಿಸಿ, ಚೆನ್ನಾಗಿರಬೇಕು ನೀವು.

ಇಷ್ಟೇ ಜನ ಇದ್ದಾರಲ್ಲ ಇಲ್ಲಿ? ಇವ್ರೆಲ್ಲ ಇಲ್ಲಿಯೇ ನಿತ್ತಿದ್ದಾರೆ. ಎಷ್ಟು ಜನ ಸಾಧುಗಳು, ಎಷ್ಟು ಜನ ಸಂತರು, ಎಷ್ಟು ವಿದ್ವಜ್ಜನರು, ದೌಮ್ಯಾದಿ ಋಷಿಗಳು! ಸುಮ್ಮೆ ಅಲ್ಲ, ಇವರ ಆಶ್ರಮ, ಇವರದ್ದಾದ ಮಠಯೆಲ್ಲ ಯಾರೂ ಇಲ್ಲದಾಗ್ಲಿಕ್ಕೆ ಕಾರಣ ಎಲ್ಲ ಇಲ್ಲಿಗೆ ಆಕೃಷ್ಟರಾಗಿದ್ದಾರೆ. ಬಹಳ ಸಂತೋಷವಾಯ್ತು. ಇವ್ರಿಗೆಲ್ಲ ನೀನು ಮೃಷ್ಟಾನ್ನವನ್ನು ಒದಗಿಸಿದ ಅಲ್ವೊ? ಯಾಕೆಂದರೆ, ಈ ಭಿನ್ನರುಚಿಯ ಭಿನ್ನಸ್ವಭಾವದ ಇಷ್ಟು ಮಂದಿ ಅತಿಥಿಗಳನ್ನು

ತೃಪ್ತಿಪಡಿಸಬೇಕಿದ್ರೆ, ನಿನ್ನಲ್ಲಿ ಸಜ್ಜನಿಕೆಯನ್ನು ಬಿಟ್ರೆ ಬೇರೆಯೇನುಂಟು? ಆದರೆ ಸಜ್ಜನಿಕೆಯೆನ್ನುವದು ಎಲ್ಲಾ ಕಾಲಕ್ಕೂ ಉಪಯುಕ್ತ ಅಲ್ಲಲ್ಲ. ಒಂದು ದಿವಸ ಎರಡು ದಿವಸ ಸತ್‌ಸಂಗತಿ ಅಂತ ಬಂದಾರು ಆದರೆ ಹೊತ್ ಹೊತ್ತಿಗೆ ತೃಪ್ತಿಯನ್ನು ಕೊಡುವಂತಹ ಊಟ, ಅದನ್ನೆಲ್ಲ ನೀನಿವರಿಗೆ ಒದಗಿಸಿಕೊಡ್ತಿರಬೇಕು. ಅದೇನೋ ಒಂದು ಉಂಟಂತಲ್ಲ ಅಕ್ಷಯಪಾತ್ರೆ! ಹೌದು ಅದು ಪರಮಾತ್ಮನ ಅನುಗ್ರಹ. ನಿಮಗೆ ಆ ಮಹಾತ್ಮ ಪ್ರತ್ಯಕ್ಷ! ನಿನ್ನ ನಂಬುಗೆ ಅದು ದೃಢವಾದದ್ದು ಅದನ್ನು ಮೆಚ್ಚಿದ್ದೇನೆ ನಾನು.

ಈಗ ಒಟ್ಟಿನಮೇಲೆ "ದೇವರ ಕೃಪೆ" ಒಳ್ಳೆಯ ವಿಶ್ವಾಸ, ಆದಿತು. ಅಯ್ಯಾ, ಆದ್ರೆ ಆ ದೇವರನ್ನು ನಾನು ನಂಬುವವನಲ್ಲ ಹಾಗಂತ ನಾಸ್ತಿಕನಲ್ಲ ಹಾಗಾಗಿ ನಿನ್ನಲ್ಲಿ ಒಂದು ಕೇಳಿಕೆಯನ್ನಿಡುವದು.

ಕೇದಾರಗೌಳ-ತ್ರಿವುಡೆ|| ಧಾರಿಣಿಪ ಬೇಡಿನಿತು ನಿನ್ನುಪ | ಚಾರಹಸಿದೈತಂದಿಹೆನು, ಪರಿ

ವಾರ ಸಹಿತಲಿ ಹೇಳು ನೀಪರಿ | ಹಾರವೀಗ || ೮೫ |

ಕೇಳಿದ್ದೇವೆ ನಾವು, ನಿನ್ನಲ್ಲಿ ಹಾಗೊಂದುಂಟು ದೇವರ ಪ್ರಸಾದ, ಅದು ಅಕ್ಷಯವಾಗುಂಟು ಪಾತ್ರೆ ಅಂತ ಸುದ್ದಿ, ಆ ಪ್ರಸಾದ ಸ್ವೀಕರಿಸದೇ ಇರುವದಕ್ಕಿಲ್ಲ ಅಂತ ಸಂಕಲ್ಪಿಸಿ ಹೊರಟು, ಇಲ್ಲಿ ಮುಟ್ಟುವಾಗ ಮಧ್ಯಾಹ್ನ ಆಯಿತು. ಆದ್ದರಿಂದ ನೀನು ನನ್ನನ್ನೂ, ನನ್ನ ಶಿಷ್ಯರನ್ನೂ, ನಿನ್ಗೆ ದೇವರು ಕೊಟ್ಟ ದೇಣಿಗೆ ಉಂಟಲ್ಲ ಅದರಲ್ಲಿ ನಮಗೆ ಪಂಕ್ತಿ ಒದಗಿಸಿಕೊಡಬೇಕು. ಆ ಪ್ರಸಾದವನ್ನು ಉಂಡು ನಾವು ಬಾಯಿಶುದ್ಧ ಮಾಡಿಕೊಳ್ಳಬೇಕು. ದೇವರ ಅಕ್ಷಯಪಾತ್ರದ ಪ್ರಸಾದಕ್ಕೆ ಕಾಲದ ನಿರ್ಣಯವಿಲ್ಲ . ಕೆಲವು ಕಡೆ ದೇವರ ಪ್ರಸಾದ ನೈವೇದ್ಯ ಸಂಜೆಗೆ ಸಿಕ್ಕುವದೂ ಉಂಟು; ಕೆಲವು ಕಡೆ ಬೆಳಿಗ್ಗೆಯೇ ಹೋಗಿ ಕೊಟ್ರು ಕೂಡಾ ಪ್ರಸಾದ ಮರುದಿನ ಸಿಕ್ಕುವದುಂಟು ಪ್ರಸಾದ ಮುಖ್ಯ. ಪ್ರಸಾದ ಪಡೆಯಲಿಕ್ಕೆ ಹೊತ್ತುಗೊತ್ತು ಇಟ್‌ಕೊಂಡ್ರೆ ನಮಗೆ ಪ್ರಸಾದ ಇಲ್ಲಾ ಅಂತಾಗ್ತದೆ. ನಮಗಂತೂ ಅಪರಾಹ್ನ ದೇವರ ಪ್ರಸಾದ ಸ್ವೀಕಾರಕ್ಕೆ ನಿಷೇಧ ಅಲ್ಲ. ಹಾಗಾಗಿ ಹೇಗೆ? ಇಷ್ಟು ಜನಕ್ಕೂ ಒಂದು ಭೋಜನ? ಈಗ ನಿಮ್ಮಲ್ಲಿ ಇಷ್ಟು ಜನರಿಗೆ ಊಟಸಿಕ್ಕೋದು ಭವ್ಯತೆ ದಿವ್ಯತೆಯಿಂದ ಕೂಡಿದ್ದು, ದೇವರ ಅನುಗ್ರಹದ ಅಕ್ಷಯ ಅಂತಲೂ ಕೇಳಿದ್ದೇವೆ. ಮತ್ತೀಗ ನೀನು ಹೊರಗಿಂದೆಲ್ಲ ಸಂಗ್ರಹಿಸಿ, "ಸ್ವಾಮಿಗಳೇ ನೀವು ಬಂದಾಗ ಭಿಕ್ಷೆ ಹಾಗೇನೆ ಅಂತ ಹೇಳಿದರೆ ಅದನ್ನು ಸ್ವೀಕರಿಸುವದಿಲ್ಲ. ದೇವರ ಪ್ರಸಾದ. ಹಾಗಾಗಿ ನಮಗೂ ವಿಶ್ವಾಸ, ಯೇನ್ ಹೇಳಿಯೊ ಹೇಳು. ಉಂಟು - ಕೂತ್ಕೊಳ್ತೇನೆ ಇಲ್ಲ, ಇವತ್ತಂತೂ ಏಕಾದಶಿ ನಮಗೆ. ಆದೀತು ಸ್ನಾನ ಮುಗಿಸಿ ಬರ್ತೇವೆ. ಇಲ್ಲೇ ಸಮೀಪ ಉಂಟಲ್ಲ ನದಿ, ಬಹಳ ಹಿಂದೆ ಇಲ್ಲೊಂದು ನದಿ ಇತ್ತು, ಅಲ್ಲಲ್ಲ, ಈಗಲೂ ಆ ನದಿ ಉಂಟೋ? ಅಥವಾ ಅದು ಮರಳು ತುಂಬಿ ದಾರಿಯನ್ನು ಬದಲಾಯಿಸಿದೆಯೋ? ಜನತೆ ಇದ್ದಲ್ಲಿ ಮರಳೂ ತುಂಬಿಸುವದೇ. ಆಗಲಿ, ಶಿಷ್ಯಂದಿರೇ ಬನ್ನಿ, ನಿಮಗೆ ದೇವರ ಪ್ರಸಾದ ಹೊಟ್ಟೆ ತುಂಬಾ ಸಿಗ್ತದೆ. ಬನ್ನಿ ನನ್ನನ್ನು

ಹಿಂಬಾಲಿಸಿ ಬನ್ನಿ, ಆದರೆ ಒಂದುಂಟು, ನಾನು ಬಾಯಿ ಎಂಜಲು ಮಾಡುವದು ಸೂರ್ಯಾಸ್ತದ ಒಳಗೆ ಗೊತ್ತಾಯ್ತಲ್ಲ? ಇಲ್ಲ ಈ ಹೊತ್ತು ಸ್ನಾನವೂ ಉದ್ದ ಆಗೋದಿಲ್ಲ, ಜಪವೂ ಉದ್ದ ಆಗೋದಿಲ್ಲ. ಸೂರ್ಯಾಸ್ತದ ಒಳಗೆ ಊಟ ಮಾಡಿ ಕೈತೊಳಿಬೇಕು ನಾವು; ಬನ್ನಿ ಹೋಗೋಣ ಸ್ನಾನಕ್ಕೆ.

(ದ್ರೌಪದಿ ಧರ್ಮಸಂಕಟಕ್ಕೊಳಗಾದಳು. ಕೃಷ್ಣನನ್ನು ಪ್ರಾರ್ಥಿಸಿದಳು. ಕೃಷ್ಣನೂ ಊಟ ಬೇಡಿದ. ಅಕ್ಷಯಪಾತ್ರೆಯಲ್ಲುಳಿದ ಒಂದು ಅಗುಳು ನೀಡಿದಳು. ದೇವರು ತೃಪ್ತನಾದ-ಸ್ನಾನಕ್ಕೆ ಹೋದವರಿಗೆಲ್ಲ ಹೊಟ್ಟೆ ತುಂಬಿತು)

ಖರಹರಪ್ರಿಯ-ಅಷ್ಟ || ಬಂದನು ಮುನಿವರನಾಗ | ಶಿಷ್ಯ | ವೃಂದವ ವೆರಸುತ ಬೇಗ

ಮಿಂದಾಗಲಲೆತುಷ್ಟಿ | ಯಿಂದ ತಾನರಿತರ | ವಿಂದಾಕ್ಷನೈತಂದ |

ನೆಂದು ಸಂತೋಷದಿ || ಬಂದನು || ೮೬ ||

ನೀರಿನಲ್ಲಿ ಮುಳುಗಿದ್ ಹೌದು ನಾವು ಯೇಳ್ ಬೇಕಿದ್ರೆ ಒಬ್ಬರನ್ನೊಬ್ಬರು ಆಧರಿಸಬೇಕಾಯ್ತು ಕಾರಣಯೇನು? ರೂಢಿಯ ಭಾಷೆಯಲ್ಲಿ ಹೇಳುವದಿದ್ದರೆ - ಹೊಟ್ಟೆ ಉಬ್ಬರಿಸ್ಯದೆ. ಬಂದಿದ್ದಾನವ ಗೋವಿಂದ ಗೊತ್ತಾಗದೆ ನಮಗೆ ಇಲ್ಲಿಂದಲೇ, ಉದ್ದೇಶಿಸಿದ್ದೂ ಇದನ್ನೇ. ಯಾಕೆ ಅಂತಂದ್ರೆ, ದೇವರು, ಅಕ್ಷಯ ಪಾತ್ರೆ ಭಕ್ತರಿಗೆ, ಅದರ ದ್ಯೋತಕವಾಗಿ ದೇವರ ದಯಾರೂಪವಾದಂತಹ ಸೂರ್ಯನಿಂದ ಕೊಡಲ್ಪಟ್ಟ ಅಕ್ಷಯ ಪಾತ್ರೆ ಪಾಂಡವರಿಗೆ ಶ್ರೀಕೃಷ್ಣ ಹೇಗೆ ತಿಂದ, ಹಾಗೆ ನಮಗೆ ಹೊಟ್ಟೆ ತುಂಬಿತು. ಕೃಷ್ಣನಿಗೆ ಹೊಟ್ಟೆ ತುಂಬುವಾಗ ನಮಗೆಲ್ಲ ಹೇಗೆ ಹೊಟ್ಟೆತುಂಬದೆ!! ಬುಡಕ್ಕೆ ನೀರೆರೆದ್ರೆ ಆ ಮರಕ್ಕೆ ಸಂಬಂಧಿಸಿದ ಎಲೆಗೆ, ಹೂವಿಗೆ, ಹಣ್ಣಿಗೆ ಎಲ್ಲದಕ್ಕೂ ಮುಟ್ಟದೆ. ನಮ್ಮ ಸಂಕಲ್ಪದ ಪ್ರಕಾರ ನಾವು ತಿಳಂತೆ ಭಗವಂತನೇ ಆದಿ ಮೂಲ. ಹಾಗಾಗಿ ಆ ಮೂಲ ನಮ್ಮಂಥವರ ದೃಷ್ಟಿಯಲ್ಲಿ ಬಾಳ ಮೇಲಕ್ಕಿದೆ. ಹಾಗಾಗಿ ನಾವು ಅಲ್ಲಿಗೆ ಯೇರ್‌ಬೇಕು ಅಂತ ಹೇಳ್ತೇವೆ. ತತ್ತ್ವವನ್ನು ತಿಳಿದವ ಇಳಿಬೇಕು ಕೆಳಗೆ ಅಂತ ಹೇಳ್ತಾನೆ. ಯಾಕೆ? ಅದರ ಬುಡ ಮೇಲಿದೆ ಬುಡಮೇಲಾಗಿದ್ದಾವಾಗ ನಾವು ಬುಡಕ್ಕೆ ಇಳಿಯುವುದು. ಈ ತತ್ತ್ವವನ್ನು ತಿಳಿದು ಅನುಷ್ಠಾನಕ್ಕೆ ತಂದುಕೊಂಡವರು ನಾವು. ಆದರೆ ಒಂದುಂಟು -ಆ ಅಕ್ಷಯಪಾತ್ರೆ ಉಂಟು ಅಂತ ತಿಳ್ಕೊಂಡು ಕೂತವನಿಗೆ ಏನೂ ಇಲ್ಲ. ಆ ಅಕ್ಷಯ ಪಾತ್ರಕ್ಕೆ ನಮ್ಮ ಕೊಡುಗೆಯೂ ಏನಾದ್ರೂ ಬೇಕಾಗ್ತದೆ. ಕೆಲವು ಭಕ್ತರು ದಾರಿ ತಪ್ಪುವುದು ಅಲ್ಲಿ. ಧರ್ಮರಾಯ ಅದನ್ನೇ ಹೇಳಿದ “ಕಾಡಿನಲ್ಲಿ ಹುಟ್ಟಿ ಬೆಳೆದ ಮರಕ್ಕೆ ಕಟ್ಟೆ ಕಟ್ಟಿ ನೀರ್ ಯಾರೆರೆದಿದ್ದಾರೆ? ಹಾಗೆ ಕಲ್ಲಿನಲ್ಲಿ ಹುಟ್ಟಿದ ಕಪ್ಪೆಮರಿಗೆ ಆಹಾರ ಯಾರ್ ಕೊಟ್ಟಿದ್ದಾರೆ? ಇಷ್ಟೇ ತಿಳಕೊಂಡ್ರೆ, ನಾವು ಕಲ್ಲು ಅಂತ ಒಪ್ಪಿಕೊಳ್ ಬೇಕಾಗ್ತದೆ ಅಥವಾ ಕಪ್ಪೆಮರಿಗಳು ಅಂತ ತಿಳಕೊಳ್‌ಬೇಕಾಗ್ತದೆ. ನಾವು ಜಡವಾದ, ಹುಟ್ಟಿದಲ್ಲೇ ಬೆಳೆದು ಹುಟ್ಟಿದಲ್ಲೇ ನಾಶ ಹೊಂದುವ ವೃಕ್ಷಗಳು ಅಂತ ತಿಳಕೊಳ್ಳಬೇಕಾಗ್ತದೆ. ಅಂತವರು ಅಪರೂಪಕ್ಕೆ ಕೆಲವರು ಇದ್ದಾರೆ. ಆದರೆ ಸಾಧಾರಣವಾಗಿ

ಪ್ರಪಂಚದಲ್ಲಿ ದೇಹಧಾರಿಗಳಾಗಿ ಪ್ರಜ್ಞಾವಂತರಾಗಿದ್ದವರಿಗೆ ಹಾಗಿರೋದಕ್ಕೆ ಸಾಧ್ಯವೇ ಇಲ್ಲ. ಯಾಕೆ? ಬಹಳ ಸೂಕ್ಷ್ಮವಾಗಿ ನಾನು ಎಂಬುದು ಜಾಗ್ರತವಾಗಿರ್‍ತದೆ. ಈ 'ನಾನು' ಎಂಬುದು ಜಾಗ್ರತವಾಗಿದ್ದವನು ಎಲ್ಲಕ್ಕೂ ನೀನೇ ಅಂತ ಹೇಳಲಿಕ್ಕೆ ಅರ್ಹತೆಯನ್ನು ಪಡೆಯುವದಿಲ್ಲ. ನಾನಿದ್ದಲ್ಲಿಗೆ ನೀನು ಬಾ ಅಂತ ಹೇಳಿದರೂ ತಪ್ಪಾಗ್ತದೆ. ಹಾಗಂತ, ನೀನಿದ್ದಲ್ಲಿಗೆ ನನ್ನನ್ ಯೆಳ್ಕೊ ಅಂತ ಹೇಳಿದರೆ ಪರಿಹಾಸವಾಗ್ತದೆ. ಈ ತತ್ತ್ವದಿಂದ ಪರಮಾತ್ಮ ಸರ್ವವ್ಯಾಪಿ ಅಂತ ಹೇಳಿದ ಉಪನಿಷತ್ತು "ಈಶಾವಾಸ್ಯಮಿದಂಸರ್ವಂ" ಅಂತ ಹೇಳಿದರೂ ನೀನು ಪ್ರತ್ಯೇಕವಾಗಿ ಜೀವಪ್ರಜ್ಞೆಯನ್ನುಳ್ಳವನಾದಕಾರಣ "ಕುರ್ವನ್ನೇವೇಹ ಕರ್ಮಾಣಿ ಜಿಜಿಷೆ ಶತತಂಸಮಾ" ಎನ್ನುವದು; ಎರಡನೇ ಮಂತ್ರವೇ ಅದು. ಎಲ್ಲವೂ ಶಿವನೆ, ಎಲ್ಲವೂ ಪರಮಾತ್ಮನೆ ಎಂಬುದು ಸತ್ಯವಾದರೂ ಯೆಲ್ಲಿಯವರೆಗೆ ಭಿನ್ನತ್ವದಿಂದ ಕೂಡಿಕೊಂಡಿರದೆ ಅಲ್ಲಿಯವರೆಗೆ ನೀವು ಅದರೆಡೆಗೆ ಸಾಗುವ ಕರ್ಮವನ್ನು ಮಾಡಬೇಕು ಎಂಬುದು ತತ್ತ್ವ, ಧರ್ಮರಾಯನ ಮಾತಿನಿಂದ ನಾನ್ ಆವೊಂದು ದೋಷವನ್ನು ಗುರುತಿಸಿದ್ದರಿಂದ, ಎರಡನೇ ಮಾತಿಗೆ ನಾನು ಹೇಳಿದ್ದು ನನಗೆ ಹಸಿವೆಯಾಗ್ತದೆ ಊಟಕ್ಕೆ ಇಕ್ಕು ಅಂತ. ಎಲ್ಲ ದೇವರ ದಯೆ, ಎಲ್ಲ ಭಗವಂತ ನಮಗೆ ಹೊತ್ ಹೊತ್ತಿಗೆ ಕೊಡ್ತಾನೆ - ಈ ಸೋಮಾರಿತನ ಕ್ಷತ್ರಿಯನಾದ ಧರ್ಮರಾಯನಿಗೆ ಬಂದ್ರೆ ಅವನಿಗೆ ಆ ಕಡೆ ಸನ್ಯಾಸತ್ವವೂ ಸಿದ್ಧಿಸೋದಿಲ್ಲ, ಯೋಗಿಗಳ ಅವಧೂತತ್ವವೂ ಸಿಗುವದಿಲ್ಲ. ಸ್ವಲ್ಪ ಕರ್ಮ ಜಾಗ್ರತನಾಗಬೇಕು. ದೇವರು ಕೊಡ್ತಾನೆ ಅಂತಲ್ಲ; ಮತ್ತೆ? ತೆಕ್ಕೊಳ್ಳುವ ಪ್ರಾಪ್ತಿಯೂ ನಮಗುಂಟು "ಅಹಂಕರಿಷ್ಯ ಕರ್ಮದಲ್ಲಿ ಅದು ಮುಖ್ಯ. ಈಗ ಎಲ್ಲ ಸರಿಯಾಯ್ತು, ಕೃಷ್ಣ ಒಳ್ಳೆ ಪಾಠಕೊಟ್ಟ ದೌಪದಿಗೆ ಹೇಗೆ? "ಅದೆಲ್ಲಮಾಡ್ತ ಯೇನು, ದೂರ್ವಾಸರಿಗಲ್ಲ, ಅವರ ಕುಟುಂಬದವರಿಗೆ ಭೋಜನ ಮಾಡ; ಈಗ ಪ್ರಾರಂಭಕ್ಕೆ ನನಗೇನಾದ್ರೂ ಕೊಡು! ಅಂದರೆ ಅರ್ಥಯೇನು? ದೇವರಿಂದ ನಾವು ಪಡೆಯುವದೇ ಅಲ್ಲ, ದೇವರುಯೇನಾದರೂ ಕೊಡಬೇಕಾದ್ರೆ ನಾವು ಕೊಟ್ಟು ಅದನ್ನು ಅಕ್ಷಯ ಮಾಡಿಕೊಳ್ಳಬೇಕು. ಪ್ರಸಾದ ಅಂತಂದ್ರೆ ಅದು, ಹಾಗಾದ್ರೆ ದ್ರೌಪದಿ ಈಗ ಯೇನ್ ಕೊಟ್ಟು? ಯೇನಿಲ್ಲ, ಆ ಪಾತ್ರದಲ್ಲಿ ಯೇನುಂಟು ಅದನ್ನು ಕೊಟ್ಟು. ಅಲ್ಲಿಯೇನೋ ಇತ್ತು ಸ್ವಲ್ಪ, ಪತ್ರವೋ ಪತ್ರದ ಚೂರೋ! ಅಂತೂ ಯಾವುದನ್ನವಳು ಕೊಟ್ಟಳು, ಅದನ್ನಕ್ಷೆಯ ಮಾಡಿ ಕೊಟ್ಟ. ಪಾಂಡವರ ಜ್ಞಾನ - ಜ್ಞಾನ ಅಲ್ಲ ಸಿಕ್ಕಿದ್ದು ಅಕ್ಷಯಪಾತ್ರ ಅಕ್ಷಯಪಾತ್ರ ಬರಿದಾಯ್ತು ಅಂತ ಹೇಳುವದು ಯಾವ ಜ್ಞಾನ?

ಅಕ್ಷಯ ಪಾತ್ರ ಅಕ್ಷಯವೇ ಅದಕ್ಕೆ ಕ್ಷಯ ಇಲ್ಲ. ಆದರೆ ಇವರು ಗೊಂದಲಕ್ಕೆ ಬಿದ್ದಿದ್ದಾರೆ - "ಕ್ಷಯವಾಯ್ತು, ಇನ್ನು ಯೇನೂ ಇಲ್ಲ" ಅಂತ. ಅದೂ ಪೂರ್ಣಜ್ಞಾನ ಅಲ್ಲ. ಈಗ ಅಕ್ಷಯಪಾತ್ರೆ ಅಂತಂದ್ರೇನು, ಪ್ರಪಂಚಕ್ಕೆ ಗೊತ್ತಾಯ್ತು. ನಾಳೆ ಇಲ್ಲಿಂದ ಹಸ್ತಿನಾವತಿಗೂ ವರದಿ ಹೋದೀತು. ಅಕ್ಷಯಪಾತ್ರೆ ಅಂತಂದ್ರೆ ಪರಬ್ರಹ್ಮ ಆ ಪರಬ್ರಹ್ಮನಲ್ಲಿ ನಾವು ಯೇನನ್ನು ಅರ್ಪಿಸುತ್ತೇವೆ ಅದು ಅಕ್ಷಯಫಲವಾಗಿ ನಮಗೆ ಸಿಗ್ತದೆ. ನೀವು ಕೊಟ್ಟಿದ್ದನ್ನು ಅಕ್ಷಯವಾಗಿಸಿ ನಿಮಗೆ ಕೊಡ್ತೇನೆ ಅನ್ನುವದು ದೇವತ್ವ ಹೀಗೆ ಜ್ಞಾನ, ಭಕ್ತಿ,

ಕರ್ಮ ಈ ಸಮನ್ವಯ ಮಾಡದವಿನಾ ನಮ್ಮ ಭಾರತೀಯ ದರ್ಶನ ಯಥಾವತ್ತಾಗಿ ನಮಗೆ ಅನುಕೂಲಕ್ಕೆ ಬರೋದಿಲ್ಲ. ಅದು ಯಾವುದೋ ಒಂದೊಂದು ಹಾದಿಯಾಗಿ ಹೋಗದೆ ಕೌರವನಲ್ಲಿ ನಾನ್ ಹೋದದ್ದು, ಒಂದು ರೀತಿಯ ಸ್ಪರ್ಧಾದೃಷ್ಟಿಯಿಂದ ಅದನ್ನು ಮೊದಲೇ ನಾನು ಗುರುತಿಸಿದ್ದೇನೆ. ಕೌರವನೋ, ವ್ಯಾಸನ ಮಂತ್ರದಿಂದ ಹುಟ್ಟಿದವ. ಆದಕಾರಣ, ಪ್ರಪಂಚ ಹೇಳುವಷ್ಟು ಕೆಟ್ಟವನಾಗಿಕ್ಕಿಲ್ಲ. ಯತಾರ್ಥಕ್ಕಾದ್ರೆ ನನಗೆ ತೋರಿದ್ದೇನು ಅಂದ್ರೆ ನಾನು ಕೊಟ್ಟ ಮಂತ್ರದಿಂದ ಹುಟ್ಟಿದ ಸಂತಾನಕ್ಕಿಂತ ವ್ಯಾಸಕೊಟ್ಟದ್ದರಲ್ಲಿ ಏನಾದರೂ ಅಧಿಕತರದ್ದು ಇದ್ದೀತೋ, ಪರೀಕ್ಷೆ ಮಾಡಿಯೇ ಬೇಕಾದರೆ ಇದನ್ನು ಬೆಳೆಸುವ, ಪರೀಕ್ಷೆಯಲ್ಲಿ ಅದೇ ದೊಡ್ಡದು ಅಂತಾದ್ರೆ ನಮ್ಮ ಮಂತ್ರ ಹಿಂದೆ ಬಿಡುವ, ಪಾಂಡವರು ಕಾಡಿನಲ್ಲೇ ಇರಲಿ ನಮಗೇನು? ಆದರೆ ಕೊನೆಗೆ ಕೌರವನ ಮಾತಿನಿಂದ ಗೊತ್ತಾಯ್ತು. ಊಹೂಂ- ಅವನಿಗೆ ಪಾಂಡವೋ ಶತ್ರುಗಳು! ಈ ದೃಷ್ಟಿಯಿಂದ ಒಂದ್ ಮಾತು ಹೇಳಬಹುದು. ಪಾಂಡವದ್ವೇಷ ಎಂಬ ಒಂದು ವಿಷವನ್ನು ಬಿಟ್ಟೆ ಕೌರವ, ಕೌರವೇಶ್ವರನೇ, ಅದು ಯೇನೇನೂ ಅನುಮಾನ ಇಲ್ಲ. ಯೆಷ್ಟು ದೊಡ್ಡವನಾದ್ರೂ ಪಾಂಡವರಿಗೆ ಹೆದ್ರತಾನೆ. ಈಗ ಸರಿಯಾಯ್ತು ನಾನು ಕಂಡ ರಾಮರಾಜ್ಯದ ಕನಸು. ಧರ್ಮ ಸಾಮ್ರಾಜ್ಯದ ಪ್ರಾರಂಭ ಆಗೋಕು ಅಂತ ನಾನು ಮಂತ್ರವನ್ನು ಕುಂತಿಗೆ ಉಪದೇಶ ಮಾಡಿದ್ದು ಈಗ ಇಲ್ಲಿ ಸಫಲವಾಗ್ಯದೆ. ಆದ್ದರಿಂದ ಕೃಷ್ಣನ ಮುಂದೆ ಪಾಂಡವರ ಮುಂದೆ ಮತ್ತೊಮ್ಮೆ ಹೋಗಿ ಕಾಣಿಸಿಕೊಳ್‌ಬೇಕಾಯ್ತು.

ಹೋ ಹೋ ಹೋ !... ಅಕೊಳ್ಳಿ

ಕೃಷ್ಣಾ, ನೀನು ನಮ್ಮಂಥಾ ಯೋಗಿಗಳಿಗೆ, ತ್ಯಾಗಿಗಳಿಗೆ, ಭೈರಾಗಿಗಳಿಗೆಲ್ಲ ನಮಸ್ಕಾರ ಮಾಡುವವನೋ?

ಬ್ಯಾಡ ಒಂದು ಕೆಲಸ ಮಾಡೋಣ, ಈಗ ಇಲ್ಲಿ ಒಂದು ಅನುಭವಕ್ಕೆ ಬಂದಿದೆ ನಮಗೆ ನೀ ಉಂಡ್ರೆ ನಮಗೆ ಹೊಟ್ಟೆ ತುಂಬದೆ! ಹಾಗಾದರೆ ಕಾರಣಯೇನು? ಕಾಣುವಾಗ ಎರಡೋ ಮತ್ತೆರಡೋ ಹನ್ನೆರಡೋ ಆಗಿ ಕಂಡೂ ಕೂಡಾ ನೀನೇ ನಾವು ನಾವೇ ನೀನು. ನಿನಗಿಂತ ಅನ್ಯರಲ್ಲ ಅಂತ ತೋರಿದ್ರಿಂದ, ಇಲ್ಲಿ ನಾನು ಮಾಡಿದಂತಹ ಈ ಪ್ರಯೋಗ ಇದೆಯಲ್ಲ; ಇದನ್ನು ಯಾರೂ ಆಕ್ಷೇಪಿಸುವದಕ್ಕೆ ಇಲ್ಲಿಗ ಎಡೆಯಿಲ್ಲ. ಕಾರಣಯೇನು? ಇಲ್ಲಿ ಕೂಡಾ ಅವಿನಾ ಸಂಬಂಧ ನಮಗುಂಟು ಅಂತಾದ್ರೆ ನಿಮ್ಮ ಸಂಪೂರ್ಣ ಅನುಗ್ರಹ ಪಾಂಡವರಿಗೆ ಇದ್ದೇ ಇದೆ ಅಂತ ಆಗುವಾಗ ನಾವು ಕೌರವ ಪಕ್ಷಪಾತಿಗಳಾಗಿ ಪಾಂಡವ ವಿದೇಶಿಗಳಾಗಿ ಬಂದದ್ದಲ್ಲ ಎಂಬುದು ಸ್ಪಷ್ಟ. ನಾವು ಪರಸ್ಪರರು ಬಂದೆವು ಎಂಬುದನ್ನು ನಮ್ಮ ಶಿಷ್ಯರಾದ್ರೂ ನೋಡ್ಲಿ ಎಂಬುದಕ್ಕೆ ಬೇಕಾಗಿ ಗಾಢಾಲಿಂಗನದಿಂದ ನಾವು ಬದ್ಧರಾಗೋಣ. ನೀನು ಹೀಗೆ ಮಾಡಿದ್ದು ಬಹಳ ಒಳ್ಳೆಯದೇ ಆಯಿತು. ನಮ್ಮ ಉದ್ದೇಶ ಯೇನಿತ್ತು ಅದಕ್ಕೆ ನೀನು ಕಲಶ ಇಟ್ಟ ಹಾಗೆ ಮಾಡಿದೆ. ಈ

ಪಾಂಡವರಿಗೂ ಒಂದು ತಪ್ಪು ಕಲ್ಪನೆ ಇತ್ತು - "ಯೆಲ್ಲ ಕೃಷ್ಣ ಮಾಡ್ತಾನೆ ನಾವು ಯೇನೂ ಅಲ್ಲ" ಅಂತ. ಆದರೆ ನಾನು ತಿಳ್ಕೊಂಡಿದ್ದೇನೆ, ನೀನು ಗೋಪಾಲಕೃಷ್ಣ, ಗೋಪಾಲಕ ಯೇನ್ಮಾಡ್ತಾನೆ, ಯೆಷ್ಟೋ ಪಶುಗಳನ್ನು ಒಟ್ಟುಗೂಡಿಸಿ ಒಂದು ದೊಡ್ಡದಾದಂತಹ ಹೊಲಕ್ಕೆ ತಂದು ಗೂಟ ಹಾಕಿ ಹಗ್ಗದಿಂದ ಬಂಧಿಸ್ತಾನೆ. ಆಮೇಲೆ ಇವ ದೂರ ಕೂತ್ಕಂಡು ವಿಶ್ರಾಂತಿ ಪಡೀತಾನೆ. ಇದು ನಿನ್ನ ತಮ್ಮ ಯೆಲ್ಲಾ ಜೀವ ಪಶುಗಳೇ. ಆ ಪಶುಗಳನ್ನೆಲ್ಲಾ ನೀನು ತಾರತಮ್ಯಾನುಸಾರವಾಗಿ ಹಗ್ಗದ ಹೆಚ್ಚು ಕಡಿಮೆಯನ್ನು ಉಪಯೋಗಿಸಿಕೊಂಡು ಒಂದೊಂದು ಕರ್ತವ್ಯ ಎಂಬ ಬಂಧನದಲ್ಲಿ ಕಟ್ಟಿ ಹಾಕ್ತಿ. ಆದರೆ ಇಲ್ಲಿ ಇರುವುದು ಗೂಟ ಒಂದೇ, ಸತ್ಯಧರ್ಮ ಅಂತ ಇದನ್ನು ಈ ಕೆಲವು ಜನಗಳು ತಿಳ್ಕೊಳ್ಳದೆ ತಮಗೇನೂ ಉದ್ಯೋಗ ಇಲ್ಲ ಅಂತ ಬಿಸ್ಕೊಳ್ಳೋದು, ಅಲ್ಲಿ ಯೇನ್ ಸಿಕ್ತದೆ ಅದನ್ನು ಮೇದ್ ಕೊಳ್ಳೋದು ಆ ಬಳ್ಳಿಯ ವ್ಯಾಪ್ತಿ ಎಷ್ಟಿದೆ ಅದನ್ನು ತಿಳಕೊಂಡು ಆ ವತ್ತಕ್ಕನುಸರಿಸಿಕೊಂಡು ಮೇಯುವ ದನಗಳು ಮೇಯಬೇಕು. ಗೂಟಕ್ಕೆ ಕಟ್ಟಿದಲ್ಲೇ ಮಲ್ಗೊಂಡು ಮೆಲ್ಕಾಡೋ ಪಶುಗಳಿದ್ದಾವೆ ಕೆಲವು. ಇನ್ನು ಕೆಲವು ಪಶುಗಳಿದ್ದಾವೆ, ಅವು ಹಗ್ಗ ಹರಿದು ಈ ಮೇಯುವಂಥ ದನಗಳ ಮೇಲೆ ಹಾದು ಮೆಟ್ಟಿ ಸೊಕ್ಕಿದವುಗಳು ಇದ್ದಾವೆ. ನನ್ನ ದೃಷ್ಟಿಯಲ್ಲಿ ಕೌರವ ಈಗ ಅಂಥವ. ಪಾಂಡವರೆಂಬ ದನಗಳು ಹೇಗೆ? "ಕೃಷ್ಣ ಕಟ್ಟಿ ಬಿಟ್ಟಿದಾನೆ ನಾವಿಲ್ಲಿ ಮಲ್ಗೊಂಡು ಮೆಲುಕಾಡೋಣ" ಈ ಎರಡೂ ತತ್ತ್ವ ನನಗೆ ಅಂಗೀಕೃತ ಅಲ್ಲ. ಆದ್ದರಿಂದ ಪಾಂಡವರನ್ನು ತಯಾರಿಸಬೇಕು; ಅಲ್ಲೊ?

ತಪ್ಪು ತಿಳ್ಕೊಳ್ ಬೇಡ ನೀನೊಂದು ಅಪರಾಧ ಮಾಡಿದ್ದಿ ದ್ರೌಪದಿಗೆ ಅಕ್ಷಯಾಂಬರವನ್ನು ಕೊಟ್ಟೆಯೋ? ಇದು ನೀನು ಕೇವಲ ಪಾಂಡವರ ಧರ್ಮಕ್ಕೆ ಮೆಚ್ಚಿ ಅವರಿಗುಂಟಾದ ಧರ್ಮಸಂಕಟದಿಂದ ಅವರು ಆತ್ಮಹತ್ಯೆ ಮಾಡಿಕೊಳ್ಳದ ಹಾಗೆ, ಅವರ ಹೆಂಡತಿಯಾದ ಸಾಧಿಯಾದ ದ್ರೌಪದಿಗೆ ಕೊಟ್ಟೆಯಲ್ಲ ನೀನು, ಹೋ ನಮಗೆ ಕಷ್ಟ ಬಂದಾವಾಗಲೆಲ್ಲ ಕೃಷ್ಣ ಬತ್ತಾನೆ ಅಂತ ಪಾಂಡವರು ತಿಳ್ಕೊಂಡಿದ್ದರೆ, ದ್ರೌಪದಿಯೂ ಅಷ್ಟೆ ಇನ್ನು ನನಗೆ ಸೀರೆಯ ಪ್ರಶ್ನೆ ಇಲ್ಲ, ಕಂಚುಕದ ಪ್ರಶ್ನೆಯೂ ಇಲ್ಲ ಬೇಕಾದಾವಾಗ ಶ್ರೀಕೃಷ್ಣ ಬಾನೆ" ! ಆದ್ದರಿಂದ ಅವರಿಗೆ ಸೋಮಾರಿತನ ಬಂದದೆ. ಈಗ ಜೀವನದಲ್ಲಿ ಅವರು ತೃಪ್ತರು. ಇಲ್ಲಿ ನಿನ್ನ ಅವಗಾಹನೆಗೆ ಒಂದು ವಿಷಯ ತತ್ತೇನೆ – "ಪಾತ್ರೆ ಬರಿದಾಗಿದೆ ಯೇನು ಮಾಡುವದು" ಅಂತ ಧರ್ಮರಾಯ ಹೇಳುವಾಗ ಭೀಮಸೇನ ಹೇಳಿದ "ಅದಕ್ಯಾಕೆ ಯೋಚನೆ, ನಾ ಸ್ವರ್ಗಲೋಕಕ್ಕೆ ಹೋಗ್ತನೆ, ದೇವೇಂದ್ರನನ್ನು ಹೊಡ್ಡು ಬಡ್ಡು ಬೇಕಾದ್ರೆ ತಂದು ಕೊಡೇನೆ" . ಅರ್ಜುನನೂ ಅದನ್ನು ಅನುಮೋದಿಸಿದ. ಇಂತಹ ತಮ್ಮಂದಿರನ್ನು ಸೋಮಾರಿಗಳ ಸಾಲಿಗೆ ಸೇರಿಸಿ ನನಗೆ ಕೃಷ್ಣ ಇದ್ದಾನೆ ಅಂತ ತಿಳ್ಕೊಂಡ ಅನ್ಯಾಯಗಾರನೇ, ಆ ಧರ್ಮ ಸಿಂಹಾಸನದಲ್ಲಿಲ್ಲ ಅಂತ ಪ್ರೋತ್ಸಾಹ ಕೊಡ್ತಾನೊ ಅಂತ ತೋರಿದ್ರಿಂದ, ಅವರನ್ನು ಜಾಗೃತಗೊಳಿಸಬೇಕು ಅಂತ ಉದ್ದೇಶಿಸಿ ಬಂದದ್ದು. ಈಗ ಪಾಂಡವರಿಗೂ ಗೊತ್ತಾಯ್ತು "ಕೇವಲ ದೇವರು" ಅಂತ ಪೂಜೆ ಮಾಡಿದರೆ ದೇವರಿಗೂ ಉಪವಾಸ ಭಕ್ತನಿಗೂ ಉಪವಾಸ ಅಲ್ವೊ? ಹಾಗಾಗಿ "ಹರಿಪ್ರೀತ್ಯರ್ಥಂ,

ದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ" -ಅಲ್ಲವೋ? ಆದಕಾರಣ ಬಂದು ಇಷ್ಟನ್ನು ಪಾಂಡವರಿಗೂ ತೋರಿಸಿದಿ ಇಲ್ಲಿನ ಸುದ್ದಿ ತಿಳಿದವರಿಗೂ ತೋರಿಸಿದೆ. ಇಲ್ಲದಿದ್ರೆ ಅವರು ತಾಳ ಹಿಡ್ಕೊಂಡು ಭಜನೆ ಮಾಡಿ ಸಾಮರ್ಥ್ಯ ಇದ್ರೂ ಕೂಡಾ ದೇವರ ಮೇಲೆ ಅಪವಾದ ಹಾಕುವವರು. ಅಂತೂ ಅಪವಾದಕ್ಕೆ ದೇವರು ಅಂತಾಗ್ತಿತ್ತು. ಈಗ ಹಾಗಾಗ್ಲಿಲ್ಲ ಈ ಪ್ರಸಂಗದಲ್ಲಿ ನಾನು ಅಂಗತ್ವವನ್ನು ವಹಿಸಿದ್ದಕ್ಕಾಗಿ ಸಾರ್ಥಕವಾಯ್ತು ಅಂತ ತಿಳಕೊಳತೇನೆ. ಧರ್ಮರಾಜನಿಗೆ ನೀನ್ ಹೇಳು - ತ್ರೇತಾಯುಗದ ಪುನರಾವರ್ತನೆ ಈ ದ್ವಾಪರದಲ್ಲಿ ಮತ್ತೆ ಆಗ್ಲಿ ಎಂಬ ಸಂಕಲ್ಪದಿಂದಲೇ ನಿನ್ನ ಪ್ರಚೋದನೆಯಂತೆ ನಾನು ಮಂತ್ರ ಕೊಟ್ಟದ್ದು. ಧರ್ಮರಾಯ ಕರ್ತವ್ಯಬಾಹಿರನಾಗಕೂಡದು, ಎಲ್ಲಿ ಧರ್ಮವೋ ಅಲ್ಲಿ ಜಯ. ಧರ್ಮಕ್ಕೆ ಪ್ರಭು ಅಚ್ಯುತ "ಪ್ರಭುವೇ ನಮ್ಮ ಮನೆ ಕೆಲಸ ಮಾಡು" ಅಂತಂದ್ರೆ ಆಗಲಿಕ್ಕಿಲ್ಲ. ಹಾಗಾಗಿ ಈ ಪಾಂಡವರು ಮುಂದೆ ಅಧರ್ಮವನ್ನು ಇದಿರಿಸುವವರಾಗಬೇಕು. ಪ್ರಬುದ್ಧನಾದ ಒಬ್ಬ ನಾಯಕ, ಧರ್ಮದೀಕ್ಷೆಯನ್ನುಳ್ಳಂತಹ ಒಬ್ಬ ನಾಯಕ, ಕೈಯಿ ಬಾಯಿ ಮನಸ್ಸು ಶುದ್ಧವಾಗಿದ್ದ ಒಬ್ಬ ನಾಯಕ, ಆತ ತಾನು ಧರ್ಮವನ್ನು ಉಳಿಸುವದಕ್ಕಾಗಿ ಹೋರಾಟ ಮಾಡ್ಲಿಕ್ಕೆ ಬೇಕು. ಪಾಂಡವರಿಂದ ಧರ್ಮರಾಜ್ಯ ಸ್ಥಾಪನೆ ಆಗಬೇಕು. 'ಪಾಂಡವ ಸ್ಥಾಪನಾಚಾರ್ಯ' ನೀನಾಗಬೇಕು.

ಪಾಂಡವರೇ, ದೃಢಚಿತ್ತದಿಂದ ನಿಮ್ಮ ಧರ್ಮ, ಸತ್ಯವನ್ನು ಪರಿಪಾಲಿಸುತ್ತ ಸತ್ಯಮೂರ್ತಿಯಾದಂತಹ ಈ ಗೋಪಾಲಕೃಷ್ಣನ ದಿವ್ಯಕಾರುಣ್ಯದಿಂದ ನೀವು ಧರ್ಮ ಸಾಮ್ರಾಜ್ಯವನ್ನು ಸ್ಥಾಪಿಸಿ, ನಮಗೆ ಊಟ ಹಾಕಿದವನಿದ್ದಾನಲ್ಲ ಅವ ನಾಶ ಆಗ್ಲಿ ಅಂತ ನಾನ್ ಹೇಳೋದಿಲ್ಲ ನಾನು ಬರೋದಕ್ಕೆ ಸ್ವಲ್ಪ ದಿವಸ ಮೊದಲೇ ಅವ ಸಾಯಬೇಕು ಅಂತ ಶಾಪಸಿಕ್ಕಿದ್ಯಂತೆ - ಭೀಮನ ಗದಾದಂಡದಿಂದ ಮಣ್‌ತಿಂದು ಹೋಗು ಅಂತ. ಹಾಗಾಗಿ ನಾನು ಮತ್ತೆ ಶಪಿಸೋದಿಲ್ಲ, ನಿಮಗೆ ಒಳ್ಳೆದಾಗ್ಲಿ ಅಂದ್ರೆ ಸಾಕಲ್ಲ? ಬತ್ತೇನೆ.



## ೧೪ ಘೋಷಯಾತ್ರೆ

ಧರ್ಮರಾಯ

ಭಾಮಿನಿ॥ ಭೂಮಿಪತಿ ಕೇಳ್ ಭಾನುಮತಿಯನು | ಪ್ರೇಮದಲಿ ಪಿಡಿದೆತ್ತಿ ಬಳಿಕಾ |

ಭೀಮಪಾರ್ಥರ ಕರೆದು ಕರುಣೆಗಳರಸನುಸಿರಿದನು || ೮೭ ||

ಸೌಭಾಗ್ಯವತೀ ಭವ - ಕುಮಾರೀ ಭಾನುಮತೀ, ಕಣ್ಣೀರುಗರೆಯಬೇಡ, ಯೇಳಮ್ಮ ಯೇಳು. ಇಂಥ ಸಂದರ್ಭದಲ್ಲಿ ಮಗಳೆ ನಿಜವಾದಂತಹ ವ್ಯಕ್ತಿಗಳ ಯೋಗ್ಯತೆ, ಅರ್ಥವಾಗುವದು. ತಪ್ಪು ಮಾಡದೇ ಇದ್ರೆ ನಾವು ಮನುಷ್ಯರೋ? ತಪ್ಪೇನು ಒಪ್ಪೇನು, ಹೆದರಬೇಡ ನಾನಿದ್ದೇನೆ. ಯಾರನ್ನು ನಚ್ಚಿಕೊಂಡು ನಮ್ಮ ಕೌರವ ಬಂದಿದ್ದಾನೋ ಅವರೆಲ್ಲ... ಸೇವಕರು, ಹಾಗಂತ, ಒಂದೇ ಕುಟುಂಬದಲ್ಲಿ ಹುಟ್ಟಿದವರು ಬಹಳ ದೂರವಾದರೂ ಆಧ್ಯಾತ್ಮಿಕವಾಗಿ ಅಭೇದ ತಾನೆ? ಬಂದದ್ದು ಒಳ್ಳೆದಾಯ್ತು ಒಳಗೆ ದ್ರೌಪದಿ ಇದ್ದಾಳೆ ವಿಶ್ರಾಂತಿ ಪಡೆ ನಡೆ.

ತಮ್ಮಂದಿರೇ, ಭೀಮಾರ್ಜುನರೇ, ರಾಜಕೀಯಕ್ಕಾಗಿ ರಾಜಕೀಯ ಮಾಡಬಾರದು ತಮ್ಮಂದಿರೇ. ರಾಜಕಾರಣ ಯಾಕೆ? ಅದು ಲೋಕಕ್ಷೇಮಕ್ಕೆ, ಜೊತೆಗೆ ಅದನ್ನು ಹಿಡಿದವನ ಉದ್ಧಾರಕ್ಕೆ ನನಗ್ಗೊಂತ್ತುಂಟು... ಭೀಮಸೇನ ಮುಖ ತಿರುಗಿಸಿದಾವಾಗಲೇ ಅರ್ಥವಾಯ್ತು! ನಾವು ಯೇನನ್ನು ಮಾಡಬೇಕೋ ಕೌರವರಿಗೆ ಅದನ್ನು ಚಿತ್ರಸೇನ ಮಾಡಿದ.

ಅರ್ಜುನಾ, ವಿಕ್ರಮಿಗಳಾದ ನಾವು ನಮ್ಮಲ್ಲಿದ್ದಂತಹ ಶತ್ರುತ್ವದ ಪರಿಹಾರಕ್ಕೆ ಮೂರನೆಯವನೊಬ್ಬನು ಮಾಡಿದರೆ ತೃಪ್ತಿ ಪಡಬಹುದೋ? ಸರಿಯಲ್ಲ, ಸಣ್ಣತನ. ಅರ್ಜುನ, ನಮ್ಮ ಅಖಂಡತೆ ಇದು ಯಾವ ಕಾಲದಲ್ಲೂ ನಷ್ಟ ಹೊಂದಕೂಡದು. ಭರತ ವಂಶಜರು ನಾವು! ಆದಕಾರಣ ನಮ್ಮ ಸಂಘಟನೆಯಿದೆಯಲ್ಲ ಇದು ಶತ್ರುಗಳ ಮುಂದೆ ಏಕರೂಪವಾಗಿ ನಿಲ್ಲಬೇಕು. ನಮ್ಮನಮ್ಮೊಳಗೆ ಸರಿ... ಬೇರೆ ಬೇರೆಯಾಗಿಲ್ಲ ಒಂದು ಮನೆಯ ಜಗಳ ಅದು. ದೇಶವ್ಯಾಪಿ... ಹೇಗಿರಬೇಕು? ನಾವು ನೂರ್ರೈದು!

ನಿನಗೆ ಹೆಚ್ಚು ಹೇಳುವದಿಲ್ಲ ಅರ್ಜುನ., ಚಿತ್ರಸೇನನೆಂಬಂತಹ ಗಂಧರ್ವ ಮೊದಲೇ ನಿನಗೆ ಅಂಕಿತನು ಮಾತ್ರವಲ್ಲ, ಗಂಧರ್ವರ ಮಾಯಾಯುದ್ಧದ ಲಕ್ಷಣವನ್ನು ನೀನು ತಿಳಿದವ, ಚಾಕ್ಷುಷೀ ವಿದ್ಯೆಯನ್ನು ಬಲ್ಲವ. ನೀನೇ ಸರಿ; ಭೀಮನಲ್ಲ, ಹೋಗು ಇನ್ನೂ ಉದಾಸೀನ ತೋರಿಸ್ತೀರಿ ನೀವು ತಮ್ಮಂದಿರು ಅಂತಾದ್ರೆ ಇದೋ.... ನೀವು ಕೌರವನನ್ನು ಬಿಡಿಸಿ ತಾರದ ವಿನಾ ನನಗೆ ಈ ಹೊತ್ತು ಭೋಜನವಿಲ್ಲ. ಒಟ್ಟಿಗೆ ಕೂತು ಊಟಮಾಡಬೇಕೋ ಕೌರವ ಬಂದು ಆಗಬೇಕು. ನಾನು ದಂಡನಾಶರ್ತ ಹೇರಿದ್ದಲ್ಲ.

ನನ್ನ ತಮ್ಮಂದಿರ ಗುಣ ನನಗೆ ಗೊತ್ತಿಲ್ವೇ? ನಾನೇನು? ನೀನೇನು? ಕೌರವನೇನು? ಹೋಗಿ ಬಾ.

(ಅರ್ಜುನ ಚಿತ್ರಸೇನನ್ನು ಹಿಡಿದು ತರುತ್ತಾನೆ. ನಂತರ...)

ಚಿತ್ರಸೇನು ಕೇವಲ ವಯಕ್ತಿಕವಾಗಿ ನನಗೆ ಹೆಸರು ಬರಬೇಕು ಅಂತ ಸುಯೋಧನನ್ನು ಬಿಡಿಸಿ ಬಾ ತಮ್ಮ ಅಂತ, ನಾನು ಆಣತಿ ಇತ್ತದ್ದಲ್ಲ. ಹಿಂದೊಮ್ಮೆ ಗಂಧರ್ವಲೋಕವನ್ನೇ ಸುಡ್ತೇನೆ ಅಂತ ಹೇಳಿದ ಹಳೇ ಜೀವ, ಹಳೇ ತಲೆ ಇನ್ನೂ ಹಸ್ತಿನಾವತಿಯಲ್ಲಿ ಬದುಕಿದೆ. ನಮ್ಮವರು ಸುಕ್ಷೇಮಿಗಳಾಗಿ ಇರಬೇಕೋ ಬೇಡವೋ? ನಾವು ಬಿಡಿಸಲಿಲ್ಲ ಆಂತಾದ್ರೆ ಭೀಷ್ಮರು ಬಿಡಿಸದೇ ಬಿಟ್ಟಾರೋ? ಆದಕಾರಣ ಗಂಧರ್ವಲೋಕಕ್ಕೆ ಬರುವ ಅಪಾಯವನ್ನು ತಪ್ಪಿಸುವ ಉದ್ದೇಶದಿಂದಲೂ, ಕಣ್ಣಾರೆ ಕಂಡಾಗ ನಮ್ಮ ಸೋದರರ ಸಂಕಷ್ಟವನ್ನು ಪರಿಹರಿಸಲಾಗದೇ ಇದ್ದಂತಹ ದೌರ್ಜನ್ಯವನ್ನು ತಾಳದೇ ಇದ್ದ ನಾನು ಬಿಡಿಸಿದ್ದೇನೆ ಅಷ್ಟೆ ಹೊರತು ಅನಾಥನಾಗಿದ್ದಾನೆ ಸುಯೋಧನ ಅಂತ ಯಾರೂ ಯಾವ ಕಾಲಕ್ಕೂ ತಿಳಿಯುವದಲ್ಲ. ನಾನಂತೂ ತಿಳಿಯುವದಿಲ್ಲ. ಬಿಟ್ಟು ಬಿಡುವದು ನಿನಗೂ ಕ್ಷೇಮ; ನಮಗೂ ಕ್ಷೇಮ. ಹೋಗಿ ಸುಖವಾಗಿರಿ.

ಹಂ ಹಂ, ನಾಗಪಾಶದಲ್ಲಿ ಬಂಧಿಸಲ್ಪಟ್ಟಿದ್ದಾನೆ ಸುಯೋಧನ! ಪಾಂಚಾಲಿಗೇ ಆಜ್ಞಾಪಿಸ್ತೇನೆ. ಯಾಕೆ? ಈ ಮಹಾಪಾಶವನ್ನು ಬಿಚ್ಚಬೇಕಿದ್ರೆ - ಕಾಯೇನ ವಾಚ ಮನಸಾ ಪತಿವ್ರತೆಯರಾಗಬೇಕು ಅಂತ ಇದೆಯಂತೆ ಶಾಸ್ತ್ರದಲ್ಲಿ, ದೇಹದಿಂದ ಪತಿವ್ರತೆಯರು ಸಾವಿರಾರು ಮಂದಿ ಇದ್ದಾರು ಆದರೆ ಪಾಂಚಾಲಿ ಹಾಗಲ್ಲ. ಐದು ಮಂದಿಯ ಸತಿಯಾಗಿದ್ರೂ ಕೂಡಾ ಹದಿಮೂರು ಸಂಬಂಧವನ್ನು ಇಟ್ಟುಕೊಂಡವಳು! ನನಗೆ ಹೆಂಡತಿಯಾದರೆ ಬಾಕಿದ್ದ ನನ್ನ ನಾಲ್ಕು ತಮ್ಮಂದಿರನ್ನು ಮೈದುನರಂತೆ ಕಂಡವಳು. ಇದು ಬಲು ದೊಡ್ಡ ತಪಸ್ಸು. ಅದು ಮಾತ್ರವಲ್ಲ ನಾವು ಹಸುಗಳೊ ಇಲ್ಲ ಪಾಂಚಾಲಿ ಹಸುವೋ... ಪ್ರತ್ಯಕ್ಷ ಕೌರವನಿಗೆ ಅನುಭವಕ್ಕೆ ಬರ್ಲಿ, ಬೇರೆ ಯಾರಿಂದಲೂ ಬಿಚ್ಚಲಾಗದೇ ಇದ್ದಂತಹ ಈ ನಾಗಪಾಶ ಇದೆಯಲ್ಲ - ಪಾಂಚಾಲಿಗೆ ಅಪ್ಪಣೆಯನ್ನು ಮಾಡಿ ಅವಳು ಬಿಡಿಸುವಂತೆ ಮಾಡಿದ್ದೇನೆ. ಪಾಂಚಾಲಿಯ ಸದ್ಗುಣವನ್ನು ಗ್ರಹಿಸಬೇಕು ಈ ಅಂತ:ಪುರದ ಹೆಣ್ಣುಮಕ್ಕಳು.

ಸುಯೋಧನಾ, ಯೇನೋ ತಮ್ಮ ಇದೆಲ್ಲ? ನೋಡಪ್ಪಾ ರಾಜನಾದವನು ಹಿಂದೆ ಮುಂದೆ ನೋಡದೆ ಏನನ್ನೂ ಮಾಡಕೂಡದು. ಘೋಷಯಾತ್ರೆಗೆ ಬಾ, ಇಷ್ಟು ಅನರ್ಥಪರಂಪರೆ ಎಲ್ಲಿಂದ ಬಂತು? ತಮ್ಮಾ, ಹಿತೈಷಿಯಾಗಿ ಒಂದು ಮಾತು ಹೇಳ್ತೇನೆ ನಾವು ನಿನ್ನ ನೋವನ್ನು ನಮ್ಮ ನೋವು ಅಂತ ತಿಳಕೊಳ್ಳವವರು. ಯೆಲ್ಲಿದ್ದಾರೆ ಈಗ ನಿನ್ನ ಬೆಂಗಾವಲಿನವರು! ಬಹುಶಃ ಕೇಳ್ತಾ ಇರಬೇಕು ಕೌರವನಿಗೆ ಬಂಧವಿಮೋಚನೆ ಆಯೋ ಅಂತ... ಯಾಕೆ? ಮತ್ತೆ ನಿನ್ನೊಟ್ಟಿಗೆ ಬರುವದಕ್ಕೆ ಆದಕಾರಣ ಭೀಷ್ಮರಿದ್ದಾರೆ, ದ್ರೋಣರಿದ್ದಾರೆ

ಇವರನ್ನು ಕೂಡಿಸಿಕೊಂಡು ನೀನು ಎಲ್ಲಿ ಬೇಕಾದರೂ ಹೋಗು ತಮ್ಮಾ ಹೀಗೆ, ಒಬ್ಬೊಬ್ಬನೇ ಹೋಗಬೇಡ ನಿನಗೆ ಶುಭವಾಗಲಿ, ಸುಖವಾಗಲಿ.



## ೧೫ ಅಜ್ಞಾತ

ಧರ್ಮರಾಯ

ನೀಲಾಂಬರಿ-ರೂಪಕ ಅನುಜಾತರಿರ ಕೇಳಿ ವನವಾಸದವಧಿಗೆ ದಿನ ಸಂದುದೀ ನೆಲೆಗಿನ್ನು

ಮನುಜರರಿಯದಂತೆ ಗುಪಿತದೊಳಿರುವರೆ | ಮನೆಯೆಲ್ಲಿ ದೊರಕೊಂಬುದೆಮಗೆ || ಲಲ |

ನನ್ನ ಅನುಜಾತರೇ, ಅರ್ಥಪೂರ್ಣವಾಗಿ ಹೇಳಿದ್ದೇನಪ್ಪಾ ಇಲ್ಲದಿದ್ದರೆ ಬಂಧುಗಳೇ, ತಮ್ಮಂದಿರೇ ಅಂತ ಹೇಳಿದ್ದೆ. ನೆರಳಿನಂತೆ ನನ್ನನ್ನು ಅನುಸರಿಸಿದವರು ನೀವು. ಯೇನು ಮಾಡೋಣ, ದೂತ, ಮೃಗಯಾ ಇತ್ಯಾದಿಗಳು ನಿಜವಾಗಿಯೂ ಸಜ್ಜನರಿಗೆ ಭೂಷಣಪ್ರಾಯವಾದಂತಹ ಕ್ರೀಡೆಗಳಲ್ಲ ಅಂತ ಗೊತ್ತಿದ್ರೂ ಕೂಡಾ, ನಮಗೆ ಕರೆಕೊಟ್ಟವರು ನಮ್ಮ ಪಿತೃಮಹಾಶಯರಿಗೆ ಸಮಾನರಾದಂತಹ ದೊಡ್ಡ ತಂದೆಯವರು. ಅವರ ಕರೆಗೆ ಓಗೊಟ್ಟು ನಾವು ದೂತಕ್ಕೆ ಹೋಗಬೇಕಾಯ್ತು. ದ್ಯೋತ ವ್ಯಸನವೇನೂ ಅಲ್ಲ ನಿಮ್ಮಣ್ಣನಾದ ನನಗೆ, ಕೇವಲ ಮನೆಮಕ್ಕು ಸುಹೃದೂತ ಆಡುವದು ಅಂತ ಹೇಳಿದ್ದರಿಂದ ನಾಲ್ಕಾಟ ಆಡಿದೆ. ಆದರೂ ನನಗೊಂದು ಆತ್ಮತೃಪ್ತಿ -ಸಜ್ಜನಿಕೆ ದುರ್ಜನತ್ವದಿಂದ ಹಿಸುಕಲ್ಪಟ್ಟಿತು; ಸಜ್ಜನಿಕೆ ಸಾಯಲಿಲ್ಲ. ಯೇನೇ ಆಗಲಿ, ಎರಡನೇ ದೂತದಲ್ಲಿ ಹಾಗೇ ಆಯಿತು. ಪ್ರಥಮ ದೂತದಲ್ಲಿ ಸರ್ವಸ್ವವನ್ನು ಕಳಕೊಂಡಿದ್ದೆವು. ಎರಡನೇ ದೂತದಲ್ಲಿ ಸೋತವರು ಹನ್ನೆರಡು ವರ್ಷ ವನವಾಸ ಒಂದು ವರ್ಷ ಅಜ್ಞಾತವಾಸವನ್ನು ಅನುಭವಿಸಬೇಕು ಎಂಬ ಕಟ್ಟಪ್ಪಣೆ. ಆದರೆ ಒಂದು ಸಂತೋಷ; ಮೊದಲನೇ ದೂತದಲ್ಲಿ ಸರ್ವಸ್ವವನ್ನು ಕಳಕೊಂಡಿದ್ದೆವು ಈ ಎರಡನೆಯ ದ್ಯೋತದಲ್ಲಿ ನಾವು ಕಳಕೊಂಡವರಲ್ಲ. ನಮಗೆ ವಯಕ್ತಿಕವಾಗಿ ಸ್ವಾತಂತ್ರ್ಯವೂ ಇದೆ, ಆಯುಧ ಗ್ರಹಣದ ಸ್ವಾತಂತ್ರ್ಯವೂ ಇದೆ. ಜೊತೆಗೆ ನಮ್ಮದ್ದಾದಂತಹ ರಾಜ್ಯ ಕೂಡಾ ನ್ಯಾಸಭೂತವಾಗಿ ಅಲ್ಲಿ ಉಳಿದಿದೆ. ಹನ್ನೆರಡು ವರ್ಷ ವನವಾಸದ ಅವಧಿಯೇನೋ ಮುಗಿಯಿತು ತಮ್ಮಂದಿರೇ, ಆದರೂ ಲೋಕ ಸಂಗ್ರಹವೇನೂ ಕಡಿಮೆಯಾಗಲಿಲ್ಲ. ಈಗ ಹದಿಮೂರನೇ ವರ್ಷ. ಬಹುಶ: ನಾಳೆಯಿಂದಲೋ ನಾಡದಿಯಿಂದಲೋ ಆರಂಭವಾಗಿದೆ. ಈ ಅಜ್ಞಾತವಾಸವನ್ನು ನಾವು ಯೆಲ್ಲಿ ಕಳೆಯೋಣ? ದ್ರುಪದಮಹಾರಾಜ ನಮಗೆ ಹೆಣ್ಣು ಕೊಟ್ಟವ. ಅಲ್ಲಿ ನಾವು ಉಳಿದರೆ ಅವನಿಗೂ ಅಪಾಯ. ಮಾತ್ರವಲ್ಲ ಯಾವನಾದರೂ ಸರಿಯೆ, ಗುಪಿತವಾಸವನ್ನು ಯೆಲ್ಲಿ ಇವರು ಮಾಡ್ತಾರೆ ಅಂತ ಚಿಂತಿಸುವಾಗ ಬಹುಶ: ಹೆಣ್ಣುಕೊಟ್ಟ ಮಾವನಮನೆಯಲ್ಲಿಯೊ? ಅಂತ ಶಂಕಿಸುವದಕ್ಕೆ ಸಾಧ್ಯವಾಗಿದೆ. ದ್ವಾರಕೆಯಲ್ಲಿ ಒಂದು ವಿಭಾಗದವರು ಸಂಪೂರ್ಣ ಕೌರವನ ಪಕ್ಷಪಾತಿಗಳು ಅಂತ ನಮಗೆ ಗೊತ್ತಿದೆ. ಹೇಳಿಕೇಳಿ ಶ್ರೀಕೃಷ್ಣ ನಮ್ಮವ. ಅವನಿಗೂ ಧರ್ಮಸಂಕಷ್ಟಕ್ಕೆ ಎಡೆ ಆಗಬಾರದಲ್ಲ? ಇನ್ನೂ ಒಂದು; ತಮ್ಮಂದಿರೆ, ಕೃಷ್ಣನಲ್ಲಿ ಅಡಗುವದಕ್ಕೆ ಆಗ್ತದೆಯೇ? ಕೃಷ್ಣನ ಮುಂದೆ ನಾವು ಬಹಿರಂಗ, ಅಜ್ಞಾತವಾಸವನ್ನು ದ್ವೀಪಾಂತರದಲ್ಲಿಯೋ ಲೋಕಾಂತರದಲ್ಲಿಯೋ ನಾವು ಮಾಡಿದರೆ ರಾಜಕಾರಣಿಯಾದಂತಹ ದುರ್ಯೋಧನ ಅದನ್ನು ಒಂದು ನೆವವನ್ನಾಗಿ ಮುಂದಿಟ್ಟಾನು. ಈ ಭೂಮಂಡಲದಲ್ಲಿ ಅನೇಕ ರಾಜರು ರಾಜಸೂಯ ಪ್ರಕರಣದಲ್ಲಿ

ನಮ್ಮಿಂದ ನೊಂದುಕೊಂಡವರು! ಈಗಿನ ರಾಜಕಾರಣವೇ ಹಾಗೆ, ನಮಗಾಗದಿದ್ದವರೆಲ್ಲ ಕೌರವನ ಪಕ್ಷಪಾತಿಗಳಾಗುವದಕ್ಕೆ ಸಾಧ್ಯತೆ. ಕಾರಣ ಎಲ್ಲಿಯೂ ಒಂದರಸೊತ್ತಿಗೆ ಎಂಬುದು ನಮಗಾಶ್ರಯಸ್ಥಾನವಾಗಿ ದೊರಕೀತು ಅಂತ ನನಗನ್ನಿಸುವದಿಲ್ಲ. ಆದ್ದರಿಂದ, ಭೀಮ, ಅರ್ಜುನ, ನಕುಲ ಸಹದೇವಾದಿಗಳು ನೀವೆಲ್ಲ ಅಂದು ರಾಜಸೂಯಕ್ಕೆ ಕಪ್ಪಗೊಳ್ಳುವದಕ್ಕಾಗಿ ದಿಗ್ವಿಜಯ ಮಾಡಿದವರು. ನನಗಿಂತ ಹೆಚ್ಚು ಈ ಪ್ರದೇಶದ ಪರಿಚಯ ನಿಮಗುಂಟು. ಯಾರಿರಬಹುದು ನಮಗಾಶ್ರಯದಾತ! ಸರ್ವ ಪಯತ್ನವನ್ನೂ, ಕೌರವೇಶ್ವರ ನಮ್ಮನ್ನು ಕಂಡು ಹಿಡಿಯುವದಕ್ಕಾಗಿ ಮಾಡದೇ ಇರಲಾರ. ಅವನ ಬೌದ್ಧಿಕವಾದಂತಹ ಕಣ್ಣು ಅಲ್ಲಿಗೆ ಮುಟ್ಟಿದರೂ ಆಕ್ಷೇಪವಿಲ್ಲ; ಅವನ ಶಕ್ತಿ ಮಾತ್ರ ಆ ಪ್ರದೇಶಕ್ಕೆ ದುರ್ಗಮವಾಗಿರಬೇಕು.

ಯಾವುದದು? ಮತ್ತ್ಸ ದೇಶ...

ಯರಕಲಕಾಂಭೋಜಿ-ಝಂಪೆ ಕೇಳಿರನುಜಾತರಿರ ಪೇಳ್ವೆ ನಾನೆಂತು | ಕೀಳುವಲರೊಳು

ಸೇವಿಸುವ ಕಾಲ ಬಂತು | ಪಿರಿದಾಗಿ ಬಳಲಿದಿರಿ ಮನದೊಳಗೆ

ಹನ್ನೆರಡು ವರುಷವೆನ್ನೊಡನೆ ಬಲು ಬಗೆಯಿಂದಲಿ ಧರೆಯೊಳೆನ್ನಂಥ

ಪಾಪಿಗಳ್ಯಾರು ನಿಮಗಿನ್ನು | ಪರ ಸೇವೆಯನು ಮಾಡಿರೆಂಬೆ ನಾನಂತು || ೮೯ |

ಹಂ, ವಿರಾಟ ದುರ್ಬಲನೇ ಇರಬೇಕು. ನಮ್ಮ ರಾಜಸೂಯದ ಸಂಗ್ರಹದಲ್ಲಿ ಆತನ ಹೆಸರೂ ಸೇರಿದ ಹಾಗೆ ನನ್ನ ನೆನಪಿನಲ್ಲಿಲ್ಲ. ಸ್ಥಳವೇನೋ ಪ್ರಶಸ್ಥ... ಆದರೆ? ದುರ್ಬಲ ಕ್ಷತ್ರಿಯನು ತಾನೆ ವಿರಾಟರಾಯ? ತಮ್ಮಾ, ದುರ್ಬಲಕ್ಷತ್ರಿಯನೆಂದು ನಾನು ಹೇಳಿದುದು ಅವನನ್ನು ಸಣ್ಣದಾಗಿಸುವದಕ್ಕಲ್ಲ. ಚಂದ್ರವಂಶದ ಕ್ಷತ್ರಿಯ ಕುಮಾರರು ನಾವು - ಪ್ರಬಲರು. ಈಗ ವಿರಾಟನು ಪ್ರಬಲನಾದದ್ದು ಹೇಗೆ ಅಂತಂದ್ರೆ ಕೀಚಕ ತನ್ನ ಅಕ್ಕನಾದಂತ ಸುದೇಷ್ಣಯನ್ನು ಕ್ಷತ್ರಿಯನಾದ ವಿರಾಟನಿಗೆ ಕೊಟ್ಟಿದುದರಿಂದ. ಆದರೆ ಅಲ್ಲಿ ಹುಟ್ಟಿದಂತಹ ಮಕ್ಕಳು ಮಾವ ಹೇಳಿದ ಹಾಗೆ ಕೇಳಿಕೊಂಡಿರಬೇಕು. ಒಂದು ಸಣ್ಣ ಮನಕ್ಲೇಶ ನನಗೆ ಅಷ್ಟೆ. ತಮ್ಮಂದಿರೇss ಪಶ್ಚಿಮಾಭಿಮುಖವಾಗಿ ನಾವು ಹೋಗಬಹುದು ಅಲ್ಲಿ ಆ ವಿರಾಟನ ದಾಸ್ಯವನ್ನು ಮಾಡುವಲ್ಲಿ... ಎಷ್ಟೆಂದರೂ ಕೀಚಕನು ಹೇಳಿದಂತೆ ರಾಜ್ಯಭಾರವನ್ನು ನಡೆಸುತ್ತಿರುವ ರಾಜನ ಕೈಕೆಳಗೆ ತಾನೇ ನಾವಿರಬೇಕಾದುದು? ದಾಸ್ಯ ವಿರಾಟನದ್ದೇ ಆದರೂ ಕೂಡಾ, ಅವನ ಮಾನಸಿಕ ದಾಸ್ಯವಿರುವುದು ಕೀಚಕನ ಮುಂದೆ ತಾನೆ? ನಾವೇನೋ ಅಂಗೀಕರಿಸಿ ಆಗಿದೆ; ಆದರೂ ನಿಮ್ಮ ಮುಖನೋಡುವಾಗ ನಾನೆಂಥ ಅಣ್ಣ ಅಂತ ತೋರದೆ. ಅಣ್ಣನಾದವನು ಯಾವರೀತಿ ತಮ್ಮಂದಿರನ್ನು ನಡೆಸಿಕೊಳ್ಳಬೇಕೋ ಆ ರೀತಿಯಿಂದ ನಡೆಸಿಕೊಳ್ಳುವಲ್ಲಿ ನಾನು ಹಿಂದುಳಿದೆ. ನಾನು ತಮ್ಮನಾದೆ ನೀವು ಅಣ್ಣಂದಿರಾದಿರಿ. ಎಷ್ಟೆಂದರೂ ಮೇಲ್ನೋಟಕನಾಗಿ ಕೀಚಕನಿದ್ದಾನೆ ಅವನು ಹೇಳಿದಂತೆ ವಿರಾಟನೋ ವಿರಾಟನ ಹೆಂಡತಿಯೋ ನಡೆಯಬಹುದು.

ಹ್ಞ ..., ರಾಜಸೂಯದಲ್ಲಿ ಅವಭೃತಸ್ನಾನ ಮಾಡಿಸಿಕೊಂಡಂತಹ ಅಣ್ಣತಮ್ಮಂದಿರು ನಾವು... ಈ ಹೊತ್ತು ಒಬ್ಬ ಕ್ಷುದಕ್ಷತ್ರಿಯನಾದ ವಿರಾಟನ ಅರಮನೆಯಲ್ಲಿ ಹೇಳಿದ ಕೆಲಸ ಮಾಡುತ್ತಾ ಬದುಕಬೇಕಾಯ್ತಲ್ಲ! ನನ್ನ ಹಿರಿತನ ಬಾಧಿಸ್ತಾ ಇರೋದು ಹೀಗೆ ತಮ್ಮ - ಬಲವಂತರಾದ ನೀವು ಯಾಕಾಗಿ ಬಳಲಬೇಕು? ನನ್ನ ದೋಷದಿಂದ. ನನಗೆ ಗೊತ್ತುಂಟು ತಮ್ಮ ನಿಮ್ಮ ಆ ಅನುವರ್ತಿತ್ವವೇ ನನ್ನನ್ನು ನಿಮ್ಮ ಮುಂದೆ ಸಣ್ಣವಾಗಿಸ್ಯದೆ.

ಕೇದಾರಗೌಳ-ಅಷ್ಟೇ ಎಂದ ಮಾತನು ಕೇಳುತಂದು ಮನದಿ ಧರ್ಮಗ ನಂದನ ದುಗುಡದಿಂದ

ಇಂದು ನಾ ಭೂಸುರವೇಷದೊಳಿಹೆ ಕಂಕ | ನೆಂದು ಪೆಸರು ತನಗೆ || ೬೦ ||

ನಿಜ ನಿಜ ನೀವು ಹೇಳುತ್ತಿರುವುದು ನಿಜ- ಲೋಕಾಭಿರಾಮನಾದಂತಹ ಶ್ರೀರಾಮಭದ್ರನ ಪರವಾಗಿ ಲಕ್ಷ್ಮಣದೇವನು ಸುಗ್ರೀವನ ಕುರಿತಾಗಿ ಆಂಜನೇಯನಲ್ಲಿ ಒಂದು ಮಾತನ್ನು ಹೇಳಿದ್ದಾನಂತೆ- “ನಿಜಸ್ಥಾನದಲ್ಲಿದ್ದಾಗ ಎಲ್ಲರಿಗೂ ನೆರಳುಕೊಡುವ ಕಲ್ಪವೃಕ್ಷದಂತಹ ನಮಣ್ಣ, ಕಾಲದೋಷದಿಂದಲೋ, ಕರ್ಮದೋಷದಿಂದಲೋ ಅಥವಾ ಈ ಪ್ರದೇಶದ ದೋಷದಿಂದಲೋ ಸುಗ್ರೀವನಂತಹ ಒಂದು ಸಣ್ಣ ವೃಕ್ಷದ ನೆರಳನ್ನಾಶ್ರಯಿಸಿಕೊಂಡು ಬಂದಿದ್ದಾನೆ” ಅಂತ. ಅಷ್ಟು ದೊಡ್ಡವರಿಗೆ ಅಂತಹ ಸ್ಥಿತಿ ಬಂದಿರುವಾಗ ನಮ್ಮದೇನು ಮಹಾ! ಹಾಗಾದರೆ... ಸರಿ, ವಿರಾಟನಲ್ಲಿಗೇ ಹೋಗುವದು. ಈಗ ನಾನು ಯಾವ ವೇಷಧರಿಸುತ್ತೇನೆ ಅನ್ನುವದಷ್ಟೇ ಅಲ್ಲ, ಸಂದರ್ಭೋಚಿತವಾಗಿ ನಿಮ್ಮ ಮೇಲೂ ನಾನು ಸಭೆಯಲ್ಲಿ ನಿಯಂತ್ರಣವನ್ನು ಮಾಡುವಷ್ಟು ವ್ಯಾಪ್ತಿ ಇರಬೇಕು ನನ್ನ ವೇಷಕ್ಕೆ, ಜನ್ಮನಾ ನಾನು ಕ್ಷತ್ರಿಯನಾದರೂ ಆ ಕ್ಷಾತ್ರವೃತ್ತಿಯಲ್ಲಿ ನನಗೆ ಉತ್ಸಾಹ ಕಡಿಮೆ ಅಂತ ನಿಮಗೊತ್ತುಂಟು. ನನ್ನ ಸಹೋದರರಲ್ಲಿದ್ದಂತಹ ಕ್ಷಾತ್ರ ವರ್ಚಸ್ಸನ್ನು ನಿಯಂತ್ರಿಸುವದಕ್ಕೆ ಸಾತ್ವಿಕವಾದಂತಹ ಬ್ರಹ್ಮವರ್ಚಸ್ಸು ನನ್ನಲ್ಲಿದ್ದರೆ ಕ್ಷೇಮ ತಾನೆ? ಆದುದರಿಂದ, ನನ್ನ ಮನಸ್ಸಿಗೊಪ್ಪುವ ನೀವು ಈ ಮೊದಲೇ ಊಹಿಸಿದಂತೆ ಸ್ಥಾನಮಾನಕ್ಕೆ ಚ್ಯುತಿ ಇಲ್ಲದೇ ಇದ್ದಂತಹ ಒಂದು ವೇಷ ಬ್ರಾಹ್ಮಣವೇಷ, ಕ್ಷತ್ರಿಯರಾದ ನಾವು- ದ್ವಿಜರೇ, ನಮಲ್ಲಿ ಬ್ರಾಹ್ಮಣ್ಯವನ್ನು ವೃದ್ಧಿ ಮಾಡಿಕೊಂಡ ಬ್ರಹ್ಮರ್ಷಿಗಳಿದ್ದಾರೆ. ಕ್ಷತ್ರಿಯರು ತೀರಾ ನಿಕೃಷ್ಟರೇನಲ್ಲ. ನಮಗೂ ಸಂಧ್ಯೋಪಾಸನೆ ಇದೆ, ಗಾಯತ್ರೀ ಮಂತ್ರಪುರಶ್ಚರಣೆ ಇದೆ, ಎಲ್ಲವೂ ಇದೆ. ಆದ್ದರಿಂದ ನಾನು ಈ ಪ್ರಕಾರದಿಂದ ಒಂದು ಥರದ ಸನ್ಯಾಸ, ಅಂದರೆ ಕಾಷಾಯವಸ್ತ್ರದ ಸನ್ಯಾಸವಲ್ಲ. ಶ್ವೇತಾಂಬರಿ ಸನ್ಯಾಸಿಯಾಗಿ... ಹೆಸರೇನು ಅಂತ ಕೇಳಿದ್ರೆ- ಕಂಕ! ಕಂಕ ಎಂಬ ಶಬ್ದಕ್ಕೆ ಮೂಲಧಾತು ಯಾವುದೋ, ವೈಯ್ಯಾಕರಣಿಗಳಿಗೇ ಗೊತ್ತು. ಆದರೆ ನನ್ನ ಮನಸ್ಸಿನಲ್ಲೊಂದು ಅರ್ಥವುಂಟು ಇದು ಕಪಟ ಅಂತ ಧ್ವನಿ.

(ಭೀಮ ಬಾಣಸಿಗನಾಗಿ, ಅರ್ಜುನ ಬೃಹನ್ನಳೆಯಾಗಿ, ನಕುಲಸಹದೇವರು- ಅಶ್ವಪಾಲಕ, ಗೋಪಾಲಕರಾಗಿಯೂ ಪಾಂಚಾಲಿಯೂ ಸೈರಂಧ್ರಿಯಾಗಿಯೂ ಇರುತ್ತೇವೆ ಎಂದು ಹೇಳುತ್ತಾರೆ.)

ನೀವು ಹೇಗೆ? ಭೀಮಾ, ನಿನ್ನ ಯೋಚನೆ ಸರಿ- ನಿನ್ನ ಆಹಾರಕ್ಕೂ ಅದು ಅನುಕೂಲ. ಅರ್ಜುನಾ -ಹೌದು ಊರ್ವಶಿಯ ಪ್ರಕರಣ ಉಪಕಾರಕ್ಕೆ ಆಯ್ತು. ಅವಳು ನಿನಗೆ ನರ್ತನವನ್ನು ಕಲಿಸಿರಬೇಕು ತಾನೆ? ಅರ್ಜುನಾ, ಅದು ನಮಗೊಂದು ಪಂಚಾಂಗವೂ ಆಗ್ತದೆ. ಯಾವಾಗ ನೀನು ಶಿಖಂಡಿಯಾಗುವೆಯೋ ಅಲ್ಲಿಂದ ಒಂದು ವರ್ಷದ ಅವಧಿಗೆ ತಾನೆ ಆ ಷಂಡತ್ವ? ಪುಂಸ್ತ್ವ ನಿನಗೆ ಯಾವಾಗ ಬರ್ತದೆಯೋ ಆವಾಗ ಒಂದು ವರ್ಷ ಮುಗಿಯಿತು ಎಂಬುದೇ ತಾತ್ಪರ್ಯ. ಹಾಗಾಗಿ ಅಜ್ಞಾತವಾಸದ ದಿನದ ಎಣಿಕೆಯ ಪ್ರಮೇಯವಿಲ್ಲ.

ನಕುಲ ಸಹದೇವರು? ಅಶ್ವಪಾಲನೆ, ಗೋಪಾಲನೆ... ಆಗಲಿ ಹಾಗೇ ಆಗಲಿ ಒಳ್ಳೆಯದು. ಪಾಂಚಾಲೀ, ಸರಿಯಾದ ಮಾರ್ಗ ಅದು, ಯಾಕೆ ಅಂತಂದ್ರೆ ರಾಣೀ ವಾಸಕ್ಕೆ ಬೇರೆ ಯಾವ ಪುರುಷರೂ ಪ್ರವೇಶಿಸುವದಿಲ್ಲ. ಕೆಲವೊಮ್ಮೆ ಬಂದ್ರೆ ವಿರಾಟ ಮಹಾರಾಜ, ಅವ ಈಗಾಗ್ಲೆ ವಿರಕ್ತ. ಬೇರೆ ಯಾರ್ ಬಾರೆ? ಮತ್ತೆ ಅಲ್ಲಿ ಇರುವವಳು ಅಕ್ಕ, ಮಹಾರಾಣಿ ಅಂತಂದಮೇಲೆ ತಮ್ಮಂದಿರ ಸವಾರಿಯೂ ಕಡಿಮೆಯಾದೀತು. ಆಮೇಲೆ ಇನ್ನೂ ಒಂದು ರಹಸ್ಯವಿದೆ ವಿರಾಟನ ಸಭೆಯಲ್ಲಿ ಕಂಕಾಭಿದಾನದಿಂದ ಅವನಿಗೆ ಶಾಸ್ತ್ರ ಹೇಳುವ ಸನ್ಯಾಸಿಯಾಗಿ ನಾನಿದ್ದೇನೆ. ವಿಶಾಲವಾದಂತಹ ಭೋಜನ ಶಾಲೆಯಲ್ಲಿ ಪಾಕಶಾಸ್ತ್ರಿಯಾಗಿ ಈ ಭೀಮಸೇನನಿರುತ್ತಾನೆ. ಕಿಚಕನಂತಹ ರಸಿಕರು ಆಗಾಗ ಆಗಾಗ ಹೋಗಿ ಕಾಣುವಂತಹ ನರ್ತನ ಸಂಗೀತ ಇತ್ಯಾದಿಗಳನ್ನು ಯೆಲ್ಲಿ ನೆರವೇರಿಸುತ್ತಾರೆ ಆ ನಾಟ್ಯಶಾಲೆಯಲ್ಲೇ ಅರ್ಜುನನು ನಾಟ್ಯಶಾಸ್ತ್ರಾಧ್ಯಾಪಕನಾಗಿ ಇದ್ದಾನೆ. ಅಶ್ವಪಾಲಕ ಗೋಪಾಲಕರಾಗಿ ನಕುಲ ಸಹದೇವರು. ಒಂದು ರೀತಿಯಿಂದ ಆಡಳಿತದ ಎಲ್ಲಾ ಕೇಂದ್ರದಲ್ಲಿಯೂ ನಮ್ಮವರೇ ವ್ಯಾಪಕವಾಗಿರುವಾಗ ಸೈರಂಧ್ರೀ ನೀನು ಭಯ ಪಡಬೇಕಾಗಿಲ್ಲ. ಒಳ್ಳೆಯದು... ಭಗವಂತನಾದ ಶ್ರೀಕೃಷ್ಣನನ್ನು ಧ್ಯಾನಿಸುತ್ತಾ ಪಶ್ಚಿಮಾಭಿಮುಖವಾಗಿ ಹೋಗೋಣ. ಮತ್ಸ್ಯನಗರಿಗೆ ಸಮೀಪ ಸಮೀಪ ನಾವು ಬಂದಹಾಗಾಯ್ತು.

|ಸಾಂಗತ್ಯ-ರೂಪಕ ಧನುಶರಾಯುಧಗಳ ವರ ಬನ್ನಿ ಮರಕಾಗ ಮನುಜರು ತಿಳಿಯದಂದದಲಿ

ಹೆಣನಾಕಾರದಲಿ ಚರ್ಮದಿ ಸುತ್ತಿ ಬಿಗಿದು ಜನ್ನುಣಿಯರ್ಗೆ ನಮಿಸಿ ಧರ್ಮಜನು ‖ ೯೧ |

ಅದೋ, ಬಹುಶ: ಇದು ಈ ಊರವರ ಸ್ಮಶಾನವಾಗಿರಬೇಕು. ಅಲ್ಲೇ ಬೆಳೆದು ನಿತ್ತಂತಹ ಶಮೀವೃಕ್ಷವನ್ನು ಕಾಣೀರಲ್ಲ ತಮ್ಮಂದಿರೇ? ಕ್ಷತ್ರಿಯರಾದ ನಮಗೆ ವಿಜಯೋತ್ಸವವನ್ನಾಚರಿಸಿ ದಿಗ್ವಿಜಯಕ್ಕೆ ಹೊರಡುವ ಮುನ್ನ ಈ ಶಮೀಪೂಜೆಯನ್ನು ಮಾಡಬೇಕು ಅಂತ ಪದ್ಧತಿಯಿದೆ. ಅಯುಧಪೂಜೆಯೂ ಶಮೀವೃಕ್ಷದ ಬುಡದಲ್ಲೇ ಆದರೆ ಒಳ್ಳೆಯದು. ಅಜ್ಞಾತವಾಸಕ್ಕೆ ಹೋಗುವ ನಮಗೆ ಕೈ ಆಯುಧಗಳ್ಯಾಕೆ? ಬತ್ತಳಿಕೆ ಖಡ್ಗ ಆಮೇಲೆ ಬಿಲ್ಲು ಎಲ್ಲವನ್ನು ತಮ್ಮಾ ಅರ್ಜುನಾ, ಈಗಾಗಲೇ ಮೃಗ ಬೇಟೆಯಾಡಿ

ಸಂಗ್ರಹಿಸಿದ ಮೃಗಗಳ ಚರ್ಮ ನಮ್ಮಲ್ಲಿ ಇದೆ ತಾನೆ? ವನವಾಸದಲ್ಲಾದ್ರೆ ಮಲಗುವದಕ್ಕೆ, ಕುಳಿತುಕೊಳ್ಳುವದಕ್ಕೆಲ್ಲ ಅವು ಉಪಯೋಗಕ್ಕೆ ಬೀಳ್ತಿತ್ತು; ಅಜ್ಞಾತವಾಸದಲ್ಲಿ ಅವು ಯಾಕೆ? ಆದ್ದರಿಂದ, ಚರ್ಮವನ್ನು ಒಂದಕ್ಕೊಂದು ಹೊಂದಿಸಿಯೋ ಅಥವಾ ಒಂದೊಂದೇ ಬೇರೆ ಬೇರೆಯಾಗಿಯೋ, ಮೊದಲು ಆಯುಧಗಳನ್ನು ಕಟ್ಟಿ, ಆಮೇಲೆ ಒಂದು ಮನುಷ್ಯಾಕೃತಿಯ ಶವದಂತೆ ದೂರಕ್ಕೆ ಗೋಚರಿಸುವ ಹಾಗೆ ಅದನ್ನು ಮರಕ್ಕೆ ನೇತಾಡಿಸಿದರೆ ಹೇಗೆ? ಹೇಗೂ ಸ್ಮಶಾನ, ಎತ್ತರದ ಶಮೀವೃಕ್ಷ ದೂರದಿಂದ ಕಂಡವರು ಹೆಣವೆಂದೇ ಗ್ರಹಿಸಬೇಕು. ಮುಂದೇನು ಮಾಡಬೇಕು, ಯಾವ ದೈವವನ್ನು ಪ್ರಾರ್ಥಿಸಬೇಕು ಎಂಬುದನ್ನು ನನಗೆ ಬಿಟ್ಟುಕೊಡಿ, ಬಿಗಿದೆಯಲ್ಲಾ.

ಸಾಂಗತ್ಯ-ರೂಪಕ ಅವಧಿಯೊಳಗೆ ಪಾರ್ಥ ಬಂದೊರ್ವ ಕೇಳಿದ ರವಗೀವುದಲ್ಲದೆ ಬೇರೆ

ಪವನಸಂಭವ ಮೂರ್ಖನಾತಗೀಯದಿರೆಂದು ಅವನೀಶನಮರರರ್ಗೆ ಮಣಿದ ॥ ೬೧ |

ಧನುರ್ವೇದದ ಮೂಲಕವಾಗಿ ನಾವು ಸಾಧಿಸಿದ ಅದೆಷ್ಟೋ ದಿವ್ಯಮಂತ್ರಗಳ ಸಿದ್ಧಿಯನ್ನು ಪಡೆದಿದ್ದೇವೆ. ಆದಕಾರಣ ಇಂದ್ರ ಅಗ್ನಿ ವರುಣ ವಾಯು ಕುಬೇರಾದಿ ಸಕಲ ದೇವತೆಗಳೂ ಧರ್ಮಜನ ಬಿನ್ನಹವನ್ನಾಲಿಸಬೇಕು ಒಂದು ವರ್ಷದ ವರೆಗೆ ನಾವು ಆಯುಧವನ್ನು ಮುಟ್ಟಬಾರದು. ಮಾತ್ರವಲ್ಲ ಸಮತೋಲಸ್ಥಿತಿಯಲ್ಲಿ ನಮ್ಮ ಮನಸ್ಸನ್ನು ಚಿತ್ತವನ್ನು ಬುದ್ಧಿಯನ್ನು ಇರಿಸಿಕೊಂಡು ಮುಂದೆ ಬರುವ ಆ ಶುಭದಿನದ ಪ್ರತೀಕ್ಷೆಯಲ್ಲಿ ನಾವು ಇರಬೇಕು. ಕಾರಣ, ದೇವತೆಗಳೇ ಈ ಮಂತ್ರಾಸ್ತ್ರಗಳನ್ನಾಗಲಿ ಅಥವಾ ಅವುಗಳನ್ನು ಉಪಯೋಗಿಸುವ ಇತರ ಶಸ್ತ್ರಗಳನ್ನಾಗಲಿ ಈ ಒಂದು ವರ್ಷದ ಅವಧಿಯ ಮಧ್ಯದಲ್ಲಿ ಅನಿವಾರ್ಯವಾಗಿ ಅರ್ಜುನನೊಬ್ಬ ಕೇಳಿದರೆ ಬಿಟ್ಟುಕೊಡಬೇಕೆ ಹೊರತು ಭೀಮನೊ ಅಥವಾ ನಕುಲ ಸಹದೇವಾದಿಗಳು ಬಂದರೆ ಖಂಡಿತವಾಗಿಯೂ ಅವರು ಮುಟ್ಟದ ಹಾಗೆ ನೀವು ರಕ್ಷಿಸಬೇಕು. ಬೇರೆ ಯಾರೂ ಅಲ್ಲ, ಸಾಕ್ಷಾತ್ ಪಾರ್ವತೀ ದೇವಿಯವರ ವರನಾದ ಮಹಾದೇವನು ಹೇಳಿದ್ದಾನಂತೆ "ಪಾಶುಪತದಂತಹ ಅಸ್ತ್ರವನ್ನು ನಿಯಂತ್ರಿಸಬೇಕಿದ್ರೆ ಮೊತ್ತಮೊದಲು ತನ್ನ ಇಂದ್ರಿಯಗಳನ್ನು ನಿಗ್ರಹಿಸುವ ತಪಸ್ಸು ಬೇಕು" ಅದಿರುವುದು ಅರ್ಜುನನಿಗೆ ಮಾತ್ರ ಭೀಮಸೇನ ಮುಂಗೋಪಿ, ಮಾತ್ರವಲ್ಲ ತಾಳ್ಮೆ ಬಹಳಬೇಗ ತಪ್ತಾನೆ. ನಾನ್ ಹತ್ತಿರವಿದ್ರೆ ಸುಮ್ಮನಿರಪ್ಪಾ ಅಂತಂದ್ರೆ ಸುಮ್ಮನಾಗ್ತಾನೆ ಹಾಗಾಗಿ ಭೀಮನ ಸ್ವಭಾವ ಬೇರೆ ಅರ್ಜುನನ ಸ್ವಭಾವ ಬೇರೆ. ನನ್ನ ಒಪ್ಪಿಗೆಯಿಲ್ಲದೆ ಭೀಮಸೇನನು ಬಂದು ಕೇಳಿದರೆ ಖಂಡಿತವಾಗಿಯೂ ಆಯುಧಗ್ರಹಣ ಮಾಡಲು ನೀವು ಅವನನ್ನು ಬಿಡಬಾರದು. (ಭೀಮ ಕೋಪಗೊಳ್ಳುತ್ತಾನೆ)

ಕೇದಾರಗೌಳ-ಆದಿ|| ತಮ್ಮ ಬಾ ಬಾ ಕೋಪವಿದೇನು! ಒಮ್ಮೆ ಸೈರಿಸಿನ್ನು ॥ ಧರ್ಮ ಕೆಟ್ಟರೇನು

ಸ್ವಾರ್ಥ ನಮ್ಮ ಕಷ್ಟ ವ್ಯರ್ಥ॥ ॥ ಅರಿಯದಾತನಲ್ಲ ನೀನು । ಮರೆಯ

ಮಾತಿನ್ನೇನು | ಮರುಳಾಟ ಸಾಕು ಬಾರೆಂದು ಕರೆದಪ್ಪಿದನಂದು | ೬೨ |

ತಮ್ಮಾ, ಭೀಮಸೇನಾ, ನೀನೊಬ್ಬ ನನ್ನ ತಮ್ಮನಲ್ವೇನೋ? ಅದನ್ನೇ ನಾನು ಹೇಳಿದ್ದು - ಸ್ವಲ್ಪ ದುಡುಕು ಸ್ವಭಾವ ಭೀಮನದ್ದು ಅಂತ. ತಮ್ಮಾ, ನಿನ್ನನ್ನು ಬಿಟ್ಟು ನಾನೆಲ್ಲಿ ಹೋಗ್ಲಿ ಹೇಳು. ಮೊದಲು ನಾನು ಏನು ಹೇಳಿದೆ? ನನ್ನಿಂದಾಗಿ ನೀವು ಯಾವ ಯಾವೆಲ್ಲ ಕಷ್ಟ ಕಾರ್ಪಣ್ಯಕ್ಕೆ ಒಳಗಾಗಿದ್ದೀರಿ. ನಾನ್ ಮರೆಯುತ್ತೆನೋ ಅದನ್ನು, ನೀನು ದುಡುಕುತ್ತೀ ಅಂತ ನಾನ್ ಯಾಕೆ ಹೇಳಿದೆ? ವನವಾಸದ ಅವಧಿಯಲ್ಲಿ ನೀನು ಮತ್ತು ದೌಪದಿ ಇಬ್ಬರೂ ಸೇರಿಕೊಂಡು "ಹನ್ನೆರಡು ದಿವಸವಾಯ್ತು. ಆದಕಾರಣ ಒಂದು ಲೆಕ್ಕದಮೇಲೆ ಒಂದು ದಿವಸಕ್ಕೆ ಒಂದು ವರ್ಷ ಅಂತುಂಟು ವೈದಿಕವರ್ಷ, ಹನ್ನೆರಡು ದಿವಸ ಕಳಿಯಿತು. ಇನ್ನು ಒಂದು ರಾತ್ರಿ ಅಜ್ಞಾತ ಮಾಡಿದರೆ ನಾಡದು ಬೆಳಿಗ್ಗೆ ನಾವು ಹಸ್ತಿನಾವತಿಗೆ ಹೋಗ್ತಿವೆ ಅಂತ ಎಷ್ಟು ಸಲ ಹೇಳಿದ್ದಿರಿ? ತಮ್ಮಾ ಸೈರಿಸು, ಅಂತ ನಾನು ನಿನಗೆ ಸ್ವಲ್ಪ ಒತ್ತಾಸೆ ಮಾಡಲು, ಅವಳು ಪಾಂಚಾಲಿ ನೀವಿಬ್ಬರು ನನ್ನ ಮುಂದೆ ಸಮಸ್ಯೆಯಿಟ್ಟಾಗ ನಾನೇನು ಹೇಳಿದೆ "ಹದಿಮೂರು ವರ್ಷ ನಾನು ಹೇಳಿದ ಹಾಗೆ ಕೇಳಿ ಹದಿನಾಲ್ಕನೇಯ ವರ್ಷ ನಿಮ್ಮ ಹಿಂದೆ ನಾನು ಬತ್ತೇನೋ ಇಲ್ಲೊ ನೋಡಿ ಅಂತ. ನೀ ನಾಲೋಚಿಸು, ಅಂದು ಇಂದ್ರಪ್ರಸ್ಥದಲ್ಲಿ ನಾವು ಕೂಡಿ ಬಾಳುತ್ತಿರುವಾಗ ರಾತ್ರಿಯೆಲ್ಲರೂ ನನ್ನ ಮಲಗುವ ಕೋಣೆಯಲ್ಲಿ ನಿಮ್ಮ ನಿಮ್ಮ ಆಯುಧಗಳನ್ನು ಇಡಬೇಕು ಅಂತ ಹೇಳಿದ್ದೆ ಹೌದೋ? ಯಾಕಾಗಿ? ನೈತಿಕ ನಿಯಂತ್ರಣ. ನಿಮ್ಮ ಕೈಯಲ್ಲಿ ಆಯುಧ ಇದ್ರೆ ನನಗೆ ನಿದ್ರೆ ಬರೋದಿಲ್ಲ. ಕಾರಣಯೇನು? ನೀವು ಅಂತಹ ವೀರರು. ಆದರೆ ನನ್ನ ಒಪ್ಪಿಗೆ ಇಲ್ಲದೆ ನೀವು ಆಯುಧಗ್ರಹಣ ಮಾಡುವದು ಯಾಕೆ... ನನ್ನ ಸ್ವಭಾವಕ್ಕೆ ಒಪ್ಪಿಗೆಯಲ್ಲ. ಅರ್ಜುನನ ಬಗ್ಗೆ ನಾನು ಯಾಕೆ ಹೇಳಿದೆ?

ಅರ್ಜುನನು ಹಿತವಾಗಿ ಮಿತವಾಗಿ ಸಂದರ್ಭೋಚಿತವಾಗಿ ಯೇನನ್ನಾದರೂ ಮಾಡುವಾಗ ನನ್ನನ್ನು ವಿಚಾರಿಸದೆ ಮಾಡೋದಿಲ್ಲ. ಅಂದು ನನ್ನನ್ನು ವಿಚಾರಿಸದೆ ಕಳ್ಳರನ್ನು ದಮನಿಸಿದ್ದಕ್ಕಾಗಿ ಸ್ವಯಮೇವ ಅವ ತೀರ್ಥಾಟನೆಯ ಶಿಕ್ಷೆಯನ್ನು ಅನುಭವಿಸಿದವ. ನೀನಲ್ಲ ಅಂತಲ್ಲ.

ಆದ್ದರಿಂದ ತಮ್ಮಾ ! ಕೌರವಾದಿಗಳನ್ನು ವಧಿಸುವದಕ್ಕಾಗಿ ತಾನೆ ನಿನಗೆ ಗದಾದಂಡ? ಒಂದು ವರ್ಷ ಉಂಟು ಅಜ್ಞಾತ! ಸತ್ಯಕ್ಕೆ ಧರ್ಮಕ್ಕೆ ನಾವು ಕಟ್ಟು ಬಿದ್ದವರು. ಈ ಮಧ್ಯೆಯೆಲ್ಲಿಯಾದರೂ ನೀನು ಕೌರವನ ಮೇಲೆ ಬಿದ್ದೆ ಅಂತಾದ್ರೆ ಇದಿಷ್ಟೂ ನೀರಿನ ಹೋಮವಾಗೋದಿಲ್ಲೋ ತಮ್ಮಾ? ನಿನೊಬ್ಬ ದುಡುಕಿದ್ರೆ ಬಾಕಿ ಇದ್ದವರೆಲ್ಲ ಆ ಕತ್ತಲೆಯ ಬದುಕಿಗೇ ಹೋಗಬೇಕೋ ಬೇಡವೋ? ಇನ್ನೂ ಒಂದು ಸೂಕ್ಷ್ಮ- ಇಲ್ಲಿ ನಿನಗೆ ಸ್ವಯಂರಕ್ಷಣೆಗೆ ಆಯುಧದ ಅಗತ್ಯವಿದೆಯೋ? ಪಾಕ ಶಾಲೆಯಲ್ಲಿ ಏನುಂಟು, ಅದೆಲ್ಲ ನಿನ್ನ ಆಯುಧವೇ. ನಾನು ಹೇಳೋದು ಕೇಳಿದ್ದೇನೆ "ಭೀಮ ಹೀಡಿದದ್ದೆಲ್ಲ ಅಯುಧವಾಗದೆ" ಅದು ಭೀಮ ಹಿಡ್ದಿದ್ದೆಲ್ಲ ಆಯುಧ ಅಂತ ಬಾಕಿದ್ದವರು ಅದನ್ನು ಹಿಡಿದರೆ ಅದು ಅವರಿಗೆ ಹೆಗಲಭಾರ ಅಂತಲೂ ಗೊತ್ತು. ಆದ್ದರಿಂದ ಸೈರಿಸು ತಮ್ಮ, ನನ್ನ ಹೃದಯದ

ಭಾಷೆಯನ್ನು ನೀನು ಅರ್ಥಮಾಡು. ಕೇವಲ ನನ್ನ ವೈಖರಿಗೆ ಅರ್ಥಮಾಡ್ಬೇಡ. ಈ ಶುಭ ಮೂಹೂರ್ತದಲ್ಲಿ ನಾವೆಲ್ಲರೂ ವೇಷವನ್ನು ಬದಲಾಯಿಸಿಕೊಂಡು ಒಂದೇ ಮಾರ್ಗವನ್ನವಲಂಬಿಸಿಕೊಂಡು ವಿರಾಟರಾಯನ ಆಸ್ಥಾನವನ್ನು ಪ್ರವೇಶಿಸೋಣ. ನಮ್ಮವಳು ಹೇಗೂ ರಾಣೀವಾಸದ ಬಳಿಗೆ ಹೋಗ್ತಾಳಂತೆ. ಭಗವಂತನಾದ ಶ್ರೀಕೃಷ್ಣನು ನಮಗೆ ಬೆಳಕು ತೋರಿಸ್ತಾನೆ ಎಂಬ ವಿಶ್ವಾಸದಿಂದ ನಾವಿಲ್ಲಿ ಭಾವೈಕ್ಯದಿಂದ ಉದ್ಯೋಗದ ಭೇದದಿಂದ ಬಾಳಿ ಬದುಕೋಣ. ಪರಸ್ಪರ ಒಬ್ಬರ ಮೇಲೆ ಒಬ್ಬರ ಕಣ್ಣಿರಲಿ, ಹಾಗಾದರೆ ಹೋಗೋಣ.



## ೧೬ ಭೂಮಿಂಜಯ

### ಉತ್ತರಕುಮಾರ

ಭಾಮಿನಿ ಬಳಿಕಲಿತ್ತಲು ಭದ್ರಪೀಠದಿ | ಗೆಲವಿನಲಿ ಗಣಿಕಾ ಸಮೂಹದ | ಬಳಸಿನಲ್ಲಿ

ಮೆರೆದಿರಲು ಕಂಡನು ಗೋಪನುತ್ತರನ || ೯೪ |

ಪೀಠದಲ್ಲಿ ಯೆರಡು ಶಬ್ದ ಉಂಟು; ಭದ್ರ ಪೀಠಸ್ಥರು, ಪೀಠಭದ್ರರು. ನಾವಂತೂ ಭದ್ರಪೀಠದಲ್ಲಿ ಆಸೀನರಾಗಿರುವವರು. ನಾವು ಅಂತಂದ್ರೆ ನಾನ್ ವೊಬ್ಬ ಅಲ್ಲ, ಇಡೀ ನಮ್ಮ ಪರಂಪರೆ, ಹಾಗಾಗಿಯೇ ನಮ್ಮ ತಂದೆಯವರ ಹೆಸ್ರಂತೆ - ವಿರಾಟ ಮಹಾರಾಜ! ನನಗೆ ಬೇರೆಯವ್ರ ಹೇಳಿದ್ದು ನನ್ಗೊತ್ತಿಲ್ಲ; ಯಾಕಂದ್ರೆ ವ್ಯಾಕರಣ ಅನ್ನುವಾಗ ನಾನ್ ಸ್ವಲ್ಪ ಹಿಂದೆ. ಆದ್ರೆ ಹೇಳುವುದನ್ನು ಪ್ರಾಮಾಣಿಕವಾಗಿ ಹೇಳ್ತನೆ. ವಿರಾಟ ಅಂದ್ರೆ ಯೇನು? ಆವಾಗ ಯಾರೋ ಹೇಳಿದರು ನನಗೆ “ವಿರಾಟ ಪುರುಷ ಅಂತಂದ್ರೆ ದೇವರಂತೆ!! ವಿಶ್ವವ್ಯಾಪಿಯಾದ ಭಗವಂತನಿಗೆ ವಿರಾಟ್ ರೂಪ ಅಂತ ಹೆಸ್ರಂತೆ. ನಮ್ಮ ತಂದೆಗೆ ಅಂಕಿತ ನಾಮ. ಹೆಸ್ರ್ ಅದೇ! ಹಾಗಾದ್ರೆ ಆ ಹೆಸರಿಟ್ಟ ಅಪ್ಪನಿಗೆ ಗೊತ್ತಿತ್ತು ತನ್ನ ಮಗ ಯೇನು ಅಂತ. ಆದ್ರೆ ವಿರಾಟ್ ಪುರುಷ ಯಾವಾಗೂ ಪ್ರತ್ಯಕ್ಷನಾಗೋದಿಲ್ಲ. ಅಂತ ಉಂಟಂತೆ ವೇದಾಂತದಲ್ಲಿ. ನಮ್ಮ ತಂದೆಗೆ ಹೆಚ್ಚು ಪ್ರಕಾಶ ಇಲ್ಲ. ಆದ್ರೂ ನೋಡಿ ನಮ್ಮ ತಳ್ಳಿಗೆ ಯಾರೂ ಬರೋದಿಲ್ಲ! ವೊಂದನೆಯದಾಗಿ ನಮ್ಮ ರಾಜ್ಯ ಸಾಲದು. ಈ ಕೆಲವು ಹೊಸ ಹೊಸಾ ರಾಜಕಾರಣಿಗಳೆಲ್ಲ ಇದ್ದಾರೆ ಹಸ್ತಿನಾವತಿಯಲ್ಲಿ, ಅವಿಗೆ ಇದ್ದ ಕೊಳ ಸಾಕಾಗೋದಿಲ್ಲ ಈಜಲಿಕ್ಕೆ, ವಿಸ್ತರಿಸ್ತಾ, ವಿಸ್ತರಿಸ್ತಾ, ವಿಸ್ತರಿಸ್ತಾ ಹೊಗೋದು. ಗೊತ್ತುಂಟ್ ನನ್ಗೆ, ನೋಡ್ಲಿಲ್ಲ! ನಿಜವಾಗಿಯಾದ್ರೆ ಈ ಕೌರವ ಅಲ್ಲಿ ಸಿಂಹಾಸನದಲ್ಲಿ ಕೂತಿರೋದು ಪೀಠ ಭದ್ರನಾಗಿಯೇ ಅಂತೆ. ಪೀಠ ಭದ್ರವಾಗಿ ಹೇಗೆ ಕೂತ? ಕೆಲವರೆಲ್ಲಾ ಹಳೇ ಕಾಲ್ದವ್ ಇದ್ದಾರೆ ಮಾರಾಯ ಅವನ್ನು ಸುತ್ತಲೂ ಇಟ್ ಕೊಳ್ಳೋದು, ಊರವು, ಛೇ ಇಷ್ಟು ದೊಡ್ಡ ದೊಡ್ಡವು. ಒಳ್ಳೆಯವನ್ನೆಲ್ಲ ಇಟ್ಕಂಡಿದ್ದಾನಲ್ಲ, ಕೆಲವು ದುಷ್ಟ ಕೂಟಕ್ಕೆ, ಕೆಲವು ಭ್ರಷ್ಟ ಗುಂಪಿಗೆ ಹಳೇವೊಬ್ಬ ನಾಯಕನನ್ನು ಮುಖ್ಯಸ್ಥ ಮಾಡಿ ಬಿಟ್ರೆ ಮತ್ತೆ ಯೇನೂ ಮಾಡಬಹುದಾಗಿದೆ - ಕೌರವ ನೋಡ್ವ  ನಾನ್ ಯಾಕ್ ಅವನ ಸುದ್ದಿ ಹೇಳೋದು? ನಮ್ಮ ಸುದ್ದಿಗೆ ಬಂದ್ರೆ ಆವಾಗ ಅವನ ಜಾತಕ ಬಿಚ್ತೇನೆ.

ನಾನೋ? ನನ್ನ ಹೆಸ್ರು ಭೂಮಿಂಜಯ! ನಾನಿಟ್ಟುಕೊಂಡ ಹೆಸ್ರಲ್ಲ, ನಮ್ಮ ತಂದೆಯವು ಇಟ್ಟದ್ದು. ಹಾಗಾದ್ರೆ ನಾನು ಹುಟ್ಟುವಾಗ್ಲೆ ಅತ್ತಿಗೆ ಗೊತ್ತು ಇವ ಭೂಮಿಂಜಯನೇ. ಭೂಮಿಂಜಯ ಅಂತ ಹೇಳಿದ್ರೆ ಎಲ್ಲಾ ಆಕ್ರಮಣ ಮಾಡಿದ್ದು ಅಂತಲ್ಲ. ಇಡೀ ಭೂಮಿಯನ್ನೇ ಜಯಿಸಿದವ. ಹಾಗಾಗಿ ನೋಡಿ, ನಾವ್ ಯೆಲ್ಲಿಯಾದ್ರೂ ಇನ್ನು ಮುಂದೆಯಾದ್ರೂ ಹೋದ್ರೆ, ಇಷ್ಟವರೆಗೆ ಹೋಗ್ಲಿಲ್ಲ. ಇಷ್ಟರವರೆಗೆ ಹೋದದ್ದು ಅಂತಂದ್ರೆ ನಮ್ಮ ಇಲ್ಲಿ ...! ಅವೆಲ್ಲ ಎದ್ದುನಿಂತು ನಮಸ್ಕಾರ ಮಾಡಿ ಅಡ್ಡಬೀಳುವ ಆ ಮುದುಕ ಭೀಷ್ಮನ ಬಗ್ಗೆ

ವೊಂದ್ ಸುದ್ದಿ ಕೇಳಿದ್ದೇನೆ ನಾನು. ಅವ ಯಾರಲ್ಲಿಯೂ ಯುದ್ಧ ಮಾಡ್ಲಿಲ್ಲಂತೆ ಇಷ್ಟ್ರವರೆಗೆ ಮತ್ತೆ ಯಾರೋ ಒಂದು ಬ್ರಾಹ್ಮಣನ ಹತ್ರ , ಅವ ಗುರುವಂತೆ ಇವ ಶಿಷ್ಯ ಅಂತೆ! ಗುರು ಶಿಷ್ಯನನ್ನು... “ನೀವೇ” ಅಂತ ಹೇಳದಿದ್ರೆ ಅವನ ಅಧ್ಯಾಪಕ ವೃತ್ತಿಯೇ ಶೂನ್ಯ, ಹಾಗಾಗಿ “ನನ್ನ ಶಿಷ್ಯ, ಮೆಚ್ಚಿದೆ ನಿನಗೆ...” ಇಷ್ಟೇಯೊ? ಗುರು ಶಿಷ್ಯನಿಗೆ ಕೊಟ್ಟ ಪ್ರಶಸ್ತಿಯೋ ಅದು? ಆದ್ರವೊಂದು, ಅವ ಯೆಲ್ಲಿಯೋ ಹೋಗಿದ್ದನಂತೆ. ಯೆಲ್ಲಿಯಾದ್ರೆ ನಮ್ಗೇನು? ಕಥೆ ಸಿಕ್ಕಿದರೆ ಸಾಕಲ್ಲ? 'ಸುತ್ತಲು ನೋಡುತ ಗಂಗಾತನಯನು...' ಎಲ್ಲಿ? ಕಾಶೀರಾಜರ ಸಭೆಯಲ್ಲಿ, ಪ್ರತಿಯೊಬ್ಬರೂ ಆಯುಧ ಕೆಳಗೆ ಇಟ್ಟಿದ್ದರಂತೆ. ಹೆ ಜನ ಹೌದ್ ಅವ!! ಹೊದ್ದೂ ಬನ್ನೂ ಎಲ್ಲರನ್ನೂ ಬಗ್ಗಿಸುವುದಲ್ಲ ವರ್ಚಸ್ಸು! ಅದೇ, ಭೂಮಿಂಜಯ! ಹಾಗಾಗಿ ಯುದ್ಧಭೂಮಿಗೆಲ್ಲ ಹೋಗ್ಲಿಲ್ಲ. ಹೋಗದೇ ಭೂಮಿಂಜಯ. ನಮ್ಮ ಅಪ್ಪ ಯಾರೋ ಜೋಯಿಸರ ಹತ್ತಿರವೇ ಕೇಳಿ ಹೆಸಿಟ್ಟದ್ ಅದು ಅಲ್ಲೊ? ಯಾರವ? ಆ.. ಅಯೋಧ್ಯೆ - ಬಹಳ ನೆನಪು ಜನಿಗೆಲ್ಲ. ಅಲ್ಲಿದ್ದ ರಾಮ. ರಾಮ ಅಂತ ವಸಿಷ್ಟಾದಿಗಳು ಹೆಸಿಟ್ಟದ್ದಂತೆ. ಅದೆಲ್ಲ ವ್ಯಾಖ್ಯಾನಕಾರರು ಯೇನೆಲ್ಲ ಯೇನೆಲ್ಲ ಹೇಳ್ತಾರೆ. ಅದನ್ನ ಅಂಕಿತ ನಾಮ ಅಲ್ಲಂತೆ 'ರಮುಕ್ರಿಡಾಯಾಮ್' ನೋಡಿ ಆದ್ದರಿಂದ ನಾ ದೊಡ್ಡವನಾದೆ. ಅವ ದೊಡ್ಡವನಾದ್ದರಿಂದ ನಾನ್ ಯಾಕೆ ಸಣ್ಣವನಾಗೇಕು? ಭೂಮಿಂಜಯ! ಯಾರಾದ್ರೂ ಕಳ್ಳ ಕಾಕರು ಬಂದ್ರೆ ನಮ್ಮ ಸೋದರ ಮಾವ ಇದ್ದಾನೆ. ಕೀಚಕ! ಪೆಟ್ಟಿನ ಗುಟ್ಟು ಅವನಿಂದ ಕಲೀಬೇಕು. ಹಾಗಾಗಿ ನಮ್ಮ ತಂದೆಯವರು ಕೂಡಾ, ಕೀಚಕ ಇದ್ದಾನಲ್ಲ ಆಗ್ಲಿಕ್ಕೆ. ಈ ಹೊಸಾ ಕ್ರಾಂತಿ ಮಾಡಿದವರು ನಾವು. ಅವ ಸೂತ ವರ್ಗದವ. ನಾವು ಶುದ್ಧ ಕ್ಷತ್ರಿಯರು. ಈ ನಿಮಿಷದ ವರೆಗೆ ನಮ್ಮಲ್ಲಿ ಬೆರಕೆಯಾಗಿಲ್ಲ. ಆದ್ರೆ ನಾವು ಕ್ಷೇತ್ರದ ಬಗ್ಗೆ ಮಾತ್ರ ಜಾತ್ಯಾತೀತರು. ಹೊಲವನ್ನು ಹಸಿರು ಮಾಡ್ತವರು ನಾವಲ್ಲೊ ಮಾರಯ? ಹಾಗಾಗಿ ಈ ಕೀಚಕ ಸೂತವಂಶದವ. ಅವನಿಗೊಂದು ತೊಂಭತ್ತೊಂಬತ್ತು, ನೂರ್ ಮಂದಿ ಸಹೋದರರು. ನಮ್ಮಮ್ಮ ಒಬ್ಬಳೇ ಮಗಳು. ನಮ್ಮ ತಂದೆಯವರಿಗೆ ಏನು ಉತ್ಸಾಹ ಬಂತು ಅಂತ ಗೊತ್ತಿಲ್ಲ, ವಿರಾಟ ಅಲ್ಲೊ! “ಕೀಚಕ, ನಿನ್ನ ತಂಗಿಯನ್ನು ಕೊಡ್ತಿಯೋ?” ಈಗ ನಮ್ ಆಗಿದ್ದವರು ಬೇರೆಯವ್ರ ಹೇಳ್ತಾರೆ, ದೊಡ್ಡ ಕ್ಷತ್ರಿಯರು ಹೆಣ್ಣು ಕೊಡ್ಲಿಕ್ಕಿದ್ದ ಮನೆ ಅಲ್ಲ ಈ ... ಹೊಟ್ಟೆಕಿಚ್ಚು, ನಾವ್ ಹೋದದ್ ಹಾಗಲ್ಲ ನಮಗೂ ಕೂಡಾ ಹೆಣ್ಣು ಕೊಟ್ಟ ಮನೆಯವರು ನಮ್ಮ ಬಗ್ಗೆ ದುಡೀವವ್ ಆಸ್ಟೇಕು. ರಾಜಕಾರಣ! ಹಾಗಾಗಿ ಕೀಚಕನ ತಂಗಿಯನ್ನು ತಂದದ್ದು. ನೀವೆಲ್ಲ ಬನ್ನಿ ನಮ್ಮ ಮನೇಯಲ್ಲೇ ಇರಿ, ಆ ಕೀಚಕಮಾವ ನನಗೆ ಕೆಲವು ಪೆಟ್ಟಿನ ಗುಟ್ಟು ಹೇಳಿದ್ದಾನೆ. ಗುಟ್ಟು ಹೌದೋ ಅಲ್ವ ಅಂತ ಹೇಳ್ಳಿಕ್ಕೆ ನಾನು ಯಾರಿಗೂ ಪೆಟ್ಟು ಕೊಡ್ಲಿಕ್ ಹೋಗ್ಲಿಲ್ಲ. ಯಾಕೆ ಸಣ್ಣ ಜನಗಳು ನಮ್ಮ ಪೆಟ್ಟಿಗೆ... ಅ.. ಅಮ್ಮ...! ನಾವ್ ಅಂತವರಿಗೆ ಹೊಡೆದರೆ ಕೈಯನ್ನು ನಾವೇ ತೊಳ್ಕೊಳೋಕಾಗ್ತದೆ. ಯಾರಾದ್ರೂ ದೊಡ್ಡ ಜನರು ಸಿಕ್ಕಾರೋ? ಯೆಲ್ಲಿಂದ? ನಾವ್ ಹುಡೋ ಜನವೋ? ಹಾಗೆ ಭೀಷ್ಮನ ಕಥೆಯನ್ನು ಕೇಳಿದ್ದೇಲೆ ಭೂಮಿಂಜಯ ಅಂದ್ರೆ ಯೇನು? ಈ ರೀತಿ ಆಯ್ತು. ನಾವು ಪೀಠ ಭದ್ರರಲ್ಲ ಭದ್ರ ಪೀಠರು. ನಮ್ಮ ತಂದೆ, ನಮ್ಮ ಮಾವ ನಮ್ಗ್ ಯೆಷ್ಟೋ ಇದ್ದಾರೆ. ಅವ್ರ್ ಯಾರು ಅಂತ ನನ್ಗ್ ಇನ್ನೂ ಗೊತ್ತಿಲ್ಲ. ಕೆಲವರು ನನ್ನನ್ನು

ಎತ್ತಿಯಾಡ್ಸಿದ್ದಾರೆ. ಕೆಲವರು ನನ್ನನ್ನು ಮುದ್ದು ಮಾಡಿದ್ದಾರೆ. ಪ್ರೀತಿಯನ್ನೂ ಕೊಟ್ಟಿದ್ದಾರೆ. ಎಲ್ಲ ಹೆಂಗಸ್ರು ಈ ಗಣಿಕಾ ಸಮೂಹ, ಅದ್ ಎಣಿಕೆಗೆ ಇದೆಲ್ಲ ನಮ್ಮ ಮಾವನ ಸಂಗ್ರಹ, ಮಾವ ಅಕಸ್ಮಾತ್ ಸತ್ತನೋ, ಮಾವನ ಅಳಿಯ ನಾನು. ಅಲ್ವೊ? ಸರಿಯಪ್ಪ. ನಮ್ಮ ತಂದೆಯಿಯೇನು ಹೇಳಿದರು? "ಅವ್ರನ್ನೆಲ್ಲ ನೀನ್ ಕಾಯ್ತಾ ಇರು ಮಗನೆ, ನನ್ಗೆ ವೊಂದ್ ಹೆಣ್ಣು ಸಾಕು" ಮಾರಾಯ್ರೆ, ಹ್ಯಾಗೆ? ನಮ್ಮಲ್ಲಿ ವೊಂದ್ ಸ್ಥಾನ ಮಾನ ಇಲ್ಲಿದ್ದಂಥ ಹೆಂಗಸು, ಅವನ್ ಆಳೋದ್ ಬಹಳ ಕಷ್ಟ. ಯಾಕೆ ಅವ್ರ ಮನಸ್ಸಿನಲ್ ಯಾವಾಗೂ ಸಂಘರ್ಷ ಇರದೆ. ಹಾಗಾಗಿ ಇಂಥಾ ಹೆಂಗಸರ ಸಂಗವನ್ನು ಮೇಲ್ ನೋಟಕನಾಗಿ ಯಾವಾತನು ನಡೀಸ್ತಾನೆ ಅವ ದೊಡ್ಡ ಗಂಡಸು. ಅವ ಯಾರೀಗ? ಹ್ಹ ... ಶ್ರೀಕೃಷ್ಣ ಅಂತೆ. ಅವನ ಆದರ್ಶ ಆಗ್ತದೆ. ಯಾರ್ಮನೆಯಲ್ಲೋ ಇದ್ದ ಹದಿನಾ ಸಾವಿರವೋ ಎಷ್ಟೋ ಅವರನ್ನು ಸೆರೆ ಬಿಡಿಸಿದ, ಆಲೋಚನೆ ಮಾಡಿದ. ನಮ್ಮ ಊರ್ನಲ್ ಯಾರಿದಾರೆ ಇವನ್ನೆಲ್ಲ ಮದ್ವ್ಯಾಗ್ಲಿಕ್ಕೆ? ಭಾಷಣ ಮಾಡುವವು ಸಾವಿರ ಜನ ಇದ್ದಾರೆ. ಉದ್ಧಾರ ಮಾಡೋಕು, ಉದ್ಧಾರ! ಇದ್ದ ಸ್ಥಾನದಿಂದ ಬಿಡಿಸಿದರೂ ನಂತರ ಅವಿಗೆ ಸ್ಥಾನ ಕೊಡ್ಲಿಕ್ಕೆ ಇಲ್ಲಿ ಯಾರೂ ಜನ ಇಲ್ಲ. ಆವಾಗ ಮತ್ತೊಂದು ವರ್ಗ ಹುತ್ತಿದೆ. ಕೃಷ್ಣ ಅದೇ ಹೇಳಿದನಂತೆ, ಅವನಣ್ಣ ಬಲರಾಮನ ಹತ್ರ, "ಯೇನ್ ಕೃಷ್ಣ ಇದು ನಿನ್ನೆ .....?" 'ಯೇನಣ್ಣ?' 'ಯೇನ್ ಹುಚ್ಚು?' 'ಹುಚ್ಚಲ್ಲ ಅಣ್ಣ ಇದು ಯಾರ್ ಸೆರೆಯಲ್ಲಿ ಈ ಹೆಂಗಸರೆಲ್ಲ ಇದ್ರೂ, ಅಮ್ಮನ್ ಕೊಲ್ಲಬೇಕಾಗ್ತದೆ. ಸೆರೆಯಿಂದ ಇವನ್ನು ಬಿಡಿಸಿದೆ. ಈಗ ಇನ್ನಿವನ್ ಮದ್ವ್ಯಾಗ್ಲಿಕ್ಕೆ ಅವ್ರವ್ ಜಾತಿಯವ್ರ ಯಾರೂ ತಯಾರಾಗ್ಲಿಲ್ಲ. ಅದಕ್ಕಾಗಿ... ಇದು ಕೃಷ್ಣನ ಕಥೆಯಾದ್ರೆ ನಾನ್ ಯಾಕೆ ಕಡಿಮೆ ಅವನಿಗಿಂತ? ಹೌದು ಮಾರಾಯ್ರೆ ನನ್ನಷ್ಟೇ ಎತ್ರಕ್ಕೆ ಬೇರೆಜನ ಇದ್ರಲ್ವೊ ನಮ್ಮ ಊರಲ್ಲಿ? ಯಾರೂ ತಿಳಿಯೂದಿಲ್ಲ. ಎಲ್ಲರೂ ಹೇಳ್ತಾರೆ ಉತ್ತರಕುಮಾರ ಅಂದ್ರೆ!! ಅದೆ ಕಾರಣ ಉಂಟು. ನನ್ನೊಬ್ಬ ಅಣ್ಣ ಇದ್ದಾನೆ. ಅವನ ನಂತರದ ಮಗ ನಾನು ನಮ್ಮ ಅಪ್ಪನಿಗೆ. ಉತ್ತರ ಅಂತದ್ರೆ ನಂತರದ್ದು. ಆದ್ರೆ ನಾನ್ ಈಗ ವ್ಯಾಖ್ಯಾನ ಬೇರೆ ಮಾಡಿದ್ದೇನೆ. ಇಲ್ಲಿ ಯಾವ ಸಮಸ್ಯೆಗೂ ಉತ್ತರ ಕೊಡುವ ರಾಜ ಕುಮಾರ- "ಉತ್ತರ" . **ನಮ್ಮ ಜನಗಳಿಗೆ ಉತ್ತರ ಸಿಕ್ಕಿದರೆ ಸಾಕು. ಪ್ರಯೋಗಕ್ಕೆ ಬರ್ಬೆಕು ಅಂತಿಲ್ಲ. ಆಶ್ವಾಸನೆಯನ್ನು ಬಹಳ ನಂಬ್ತಾರೆ. ಹೀಗುಂಟು ನಮ್ಮ** ಓಲಗದ ಸ್ಥಿತಿ. ಮತ್ತೆ ಹೊರತೂ ಯೇನ್ ಹೆಣ್ಮರುಳ ಅಲ್ಲ ನಾನು. ಮೊನ್ನೆ ಮೊನ್ನೆ ಯಾರಲ್ಲಿಯೋ ಕೇಳಿದೆ ನಾನು, ಒಬ್ಬು ಮುದುಕಿಯಲ್ಲಿ, ಹೌದೋ ನನ್ನ ಅಮ್ಮನಿಗಿಂತಲೂ ಹೆಚ್ಚು ಪ್ರಾಯದವಳೇ ನಿಮ್ಮ ಈ ಸಂಘದಲ್ಲಿ ನನ್ನನ್ ಯಾಕ್ ಹಾಕಿದ್ದಾರೆ? ತಾಳವಾದ್ಯದಿ ಹೇಳಿದ್ರು "ಕ್ಷತ್ರಿಯರು ನೀವು. ಅದ್ರೆ ಹೆಂಗಸರ ಸಹವಾಸ ಇಲ್ಲದಿದ್ರೆ ಆಗೋದಿಲ್ಲ. ಆ ಸ್ತ್ರೀತ್ವ, ಅಂದ್ರೆ ಸ್ತ್ರೀಯರ ಕೋಮಲತೆ, ದಯೆ, ಅನುಕಂಪ ಈ ವಾತಾವರಣದಲ್ಲಿಯೇ ಬೆಳೆದರೆ, ಸ್ವಲ್ಪ ಏರುತ್ತಿರುವ ನಿಮ್ಮನ್ನು ನಿಯಂತ್ರಿಸ್ಲಿಕ್ ಆಗ್ತದೆ. ಆವರಣ ನಿರ್ಮಾಣ!" ಹಾಗಾದ್ರೆ ಹೀಗೆ- ಯಾಕಂದ್ರೆ ನನ್ನ ವಿಪರೀತ ಆಗಿಬಿಡ್ತದೆ. ಈಗ ನಿಯಂತ್ರಣದಲ್ಲಿದ್ದೇನೆ. ಹಾಗಾಗಿ ಲಲನೆಯರ ಮಧ್ಯದಲ್ಲಿ... ಲಲನೆಯರ ಮಧ್ಯದಲ್ಲಿ ಇದ್ದೂ ಭದ್ರ ಪಿಠಸ್ಥನಾಗಿ!! ಯಾವ ಪರಮಹಂಸ ನನ್ನ ಇದು? ಹೂ. ಆಗಿದ್ದವು ಯೇನ್ ಬೇಕಾದ್ರೂ ಹೇಳ್ಲಿ. ಈಗ ನನ್ನ ಹೊಸ ಉತ್ಸಾಹ ಬಂದದೆ.

ಬೇರೇನಲ್ಲ, ನಿನ್ನೆ ನಮ್ಮಲ್ ವೊಂದ್ ಕಾಳಗ ಆಯ್ತಂತೆ! ನನ್ನ ಅವಗಾಹನೆಗೆ ಬರ್ಲಿಲ್ಲ. ಯಾಕ್ ಬಲ್ಲಿಲ್ಲ? ಇವ ಹೊರೆ ಯೇನೇನ್ ಆಗಿಹೋದೀತು! ದನ ಹಿಡಿಲಿಕ್ಕೆ ಬಂದಿದ್ರಂತೆ ಯಾರೋ, ದನ ಹಿಡಿವವನೆಲ್ಲಾ ಹೊಡಿಯುವ ಜನವೋ ನಾನು? ಯಾರೋ ಕಳ್ಳ ಪೋರ ನನ್ನ ಇದ್ರು ನಿಂತು... ಕೊನೆಗೆ ಸುದ್ದಿ ಸಿಕ್ಕಾಗ ನಮ್ಮ ಪಾಕ ಶಾಲೆಯ ಭಟ್ರು... ಯಾರವ್ರು? ವಲಲಭಟ್ರು! ಆ ಭಟ್ಟ ಉರಿಕೊಳ್ಳಿಯನ್ನು ತಕೊಂಡ್ ಹೋಗಿ, ಯೆಲ್ಲರನ್ನೂ ಹೊಡ್ದು ಬಡ್ಡಿ ದನಗಳನ್ನೂ ಬಿಡಿಸಿದನಂತೆ. ವೊಂದ್ ವರ್ಷಆಯ್ತು ಈ ಅಡಿಗೆ ಭಟ್ಟ ಬಂದು. ನಮ್ಮ ವೊಟ್ಟೆಗೆ ಇದ್ದು, ನಮ್ಮ ಅನ್ನ ತಿಂದವ ಅಷ್ಟೇ ಮಾಡ್ತಾನೆ! ಹಾಗಾದ್ರೆ ನಾವ್ ಯೆಸ್ಟ್ ಮಾಡ್ಲಿಕ್ಕಿಲ್ಲ? ಕೇಳೊ ಕೆಲಸ ಇಲ್ಲ. ನನಗೆ ಯುದ್ಧ ಬರ್ಬೇಕು. ನನ್ಗ ಗೊತ್ತುಂಟು ಅದು. ಸಿದ್ಧಿಯಾದ್ರೆ ಸಾಲದು ಪ್ರಸಿದ್ಧಿಯೂ ಬರ್ಬೇಕು. ಪ್ರಸಿದ್ಧಿಗೆ ರಂಗಸ್ಥಳವೇ ಇಲ್ಲ. ಹ್ಞ ಅವಸರ ಯಾಕೆ ನನ್ಗೆ ಇನ್ನೂ ಹತ್ತಿಪ್ಪತ್ ವರ್ಷ ಹೆಚ್ಚು ಕಡಿಮೆ, ಇಪ್ಪತ್ತು ಆಯ್ತೋ ಇಲ್ವೊ ಗೊತ್ತಿಲ್ಲ, ಯಾಕೆ ನಾನು ಜಾತಕದಲ್ಲಿ ಯೆಲ್ಲಾ ವಿಶ್ವಾಸ ಇದ್ದ ಜನ ಅಲ್ಲ. ಮತ್ತೆ ನಾನ್ ಹುಟ್ಟಿ ಯೆಷ್ಟು ವರ್ಷ ಆಯ್ತು ಅಂತ ಲೆಕ್ಕ ಮಾಡೋದಿಲ್ಲ. ನಾನ್ ಇನ್ನು ಬದುಕಿದರೆ ಯೆಷ್ಟು ವರ್ಷ ಬದುಕೇಕು ಅಂತ ಮಾತ್ರ ನಾನ್ ಆಲೋಚನೆ ಮಾಡೋದು. ನನಗೆ ವೊಳ್ಳೆ ಜೀರ್ಣ ಶಕ್ತಿಯೂ ಉಂಟು, ಬುದ್ಧಿ ಶಕ್ತಿಯೂ ಉಂಟು. ಅಂಗ ಸಾಧನೆ ಮಾಡಿದವ ಆದರೂ ಕೆಲವರು ಹೇಳ್ತಾರೆ... ಉದ್ಯೋಗ ಇಲ್ಲದಿದ್ರೆ ಮತ್ತೆಂತ ಮಾಡೋದು? ಮಂಚದಲ್ಲಿ ಮಲಗೋದು. ಮಲಗಿದರೆ ನನಗೆ ನಿದ್ರೆ ಬರೋದಿಲ್ಲ. ಯಾಕೆ ನಿದ್ರೆ ಬರೋದಿಲ್ಲ? ಹಗಲು ನಿದ್ರೆ ಬಂದಾಗ್ ಜಡ ಆಗ್ತಾನೆ ಮಗ ಅಂತಹೇಳಿ ಈ ಹೆಂಗಸಿರಿಗೆಲ್ಲ ನಮ್ಮಪ್ಪ ಉಪದೇಶ ಕೊಟ್ಟು, ಕೀಚಕನ ಆಸ್ಥಾನದಲ್ಲಿ ಇವೆಲ್ಲ ಕಲಾವಿದೆಯರಾಗಿದ್ದವನ್ನು, “ನೀವ್ ಆಗಾಗ ಆಗಾ ಆಗಾದ್ ಸಂಗೀತ, ಗೋಷ್ಠಿ, ಕಲೆ ಪ್ರದರ್ಶನ ಮಾಡ್ತಾ ನಮ್ಮ ಹುಡ್ಗ ಎಚ್ಚರವಾಗಿರುವ ಹಾಗ್ ಇರ್ಬೇಕು” ಅಂತ. ಅದ್ ಯೆಂಥೆಂತದ್ದೋ ಯೆಂಥೆಂತದ್ದೋ ರಾಗ ಅದೆಲ್ಲಾ ಹಳೆದು ಮಹರಾಯ ಯೇಂಥದ್ದು- ಶಂಕರಾಭರಣ, ಸಿಂಹೇಂದ್ರ ಮಧ್ಯಮ, ಯೇನೇನೋ. ಆದ್ರೆ ನಾನ್ ಕಂಡದ್ದೇನು? ನಮ್ಮಲ್ಲಿ ಕೆಲವರು ಹಾಡ್ ಗಾರ್ತಿಯರು ಇದ್ದಾರೆ ನನ್ನ ಕಲಾ ದೃಷ್ಟಿಯಲ್ಲಿ ಶಂಕರಾಭಣ ರಾಗ ಉಂಟು ಅವಲ್ಲಿ. ಶಂಕರಾಭರಣ ವೇಣೀ.. 'ಸಿಂಹೇಂದ್ರ ಮಧ್ಯಮ' ನೋಡಿ. ನೋಡಿದ್ರೆ ನಾನ್ ಇನ್ನೊಬ್ರಿಗೆ ತೋರೋದಿಲ್ಲ. ನನ್ನಷ್ಟಕ್ಕೆ ಹೇಳೋದು ನಮ್ಮ ಈ ಕೆಲವರು ಹೆಂಗಸರಿದ್ದಾರೆ. ಮುದುಕಿಯರು, ಸಿಂಹದ ಹಾಗೆ ಶಬ್ದ ಇದ್ದವರು. ಇದೆಲ್ಲ ಲಕ್ಷಣ ಶಾಸ್ತ್ರ ಅಂತೆ. ಸ್ವಲ್ಪ ಸ್ವಲ್ಪ ನಮ್ಮ ಮಾವ ನನ್ನ ಹೇಳಿಕೊಟ್ಟಿದ್ದ. ಅಂದ್ರೆ ನನ್ ಕೂತೂಹಲ ಹುಟ್ಟಿದ್ ಇದೆಲ್ಲ ಯೆಂಥದ್ದು ಅಂತ. ಕೂತೂಹಲ ಹುಟ್ಟುವ ಹಾಗೆ ಹೇಳಿದ ನನ್ನ ಮಾವ, ವೊಳ್ಳೆ ಶಿಕ್ಷಕ. ಯಾಕೆ, ಈ ಪಾಠವನ್ನೇಲ್ಲಾ ಹೇಳಿಕೊಟ್ಟಿದ್ದ. ಅದೆಲ್ಲ ಹಿಗ್ ಹೀಗೆ ಅಂತ, ಮಡಿವಂತರಿಗೆ ಅದು ನಿಷೇಧ. ಆದರೆ ಮಡಿವಂತರಿಗೂ ಕೂಡ ಅದೇ ಪ್ರಧಾನ, ಹ್ಞ ಯಾರೋ ಹೇಳಿದರಂತೆ -“ರಸೋ ವೈ ಸಹ” ರಸದಲ್ಲಿ ರಾಜ- 'ಶೃಂಗಾರ'. ಹ್ಞ ಹಾಗಾದ್ರೆ ಅವನಿಗೂ ಶೃಂಗಾರಾಜ ಯಾರು? ನಾನ್ ಹೇಳೋದು ಶಂಕರಾಭರಣವೇಣಿಯರು, ಸಿಂಹೇಂದ್ರಮಧ್ಯಮೆಯರು, ಆಮೇಲೆ? ಆಮೇಲೆ ಆಮೇಲೆ ಎಲ್ಲ ರಾಗದ ಹೆಸರೂ ನನ್ನ ಗೊತ್ತಿಲ್ಲ. ಎಲ್ಲಾ ರಾಗಕ್ಕೂ

ಒಂದೊಂದ್ ಪ್ರತೀಕ ಇಲ್ಲಿ ಉಂಟು ಅವರ ಹಾಡಿನಿಂದ. ಹಾಗಾಗಿ ನಿದ್ದೆ ಮಾಡೋದಿಲ್ಲ ನಾನು, ಸ್ವಲ್ಪ ಕಾಲ್ ಉದ್ದ ಮಾಡ್ವ ಅಂತ ಮಲಕೊಳ್ಳೋದು. ಅವು ಕೆಲುಸಲ ಆಡೋದು ನಿಜವಾಗಿ ನರ್ತನ ಯೇನು ಅಂತ ನನ್ಗ ಗೋತ್ತಿಲ್ಲ. ಆದ್ರೆ ಏಹ್ಹೆ ವೊಂದ್ ಕಲಿಸ್ಟೇಕ್ ಅವಳಿಗೆ ನಾಟ್ಯ ನೋಡಿ, ಕೆಲವುಸಲ ನಾನ್ ಎಣಿಸಿದ್ದೇ ಆಗಿಬಿಡ್ತದೆ ಸಂಕಲ್ಪ ನನ್ನಲ್ಲಿ ಯೇನೋ ದೇವರ ಸನ್ನಿಧಾನ ಉಂಟೋಯೇನೋ. ಇತ್ತೀಚೆಗೆ, ಇತ್ತೀಚೆಗೆ ಅಂತ್ ಹೇಳಿದ್ರೆ ವೊಂದ್ ಹತ್ ಹನ್ನೊಂದ್ ತಿಂಗಳ ಆಯ್ತು. ಹನ್ನೊಂದ ಅಲ್ಲ ವೊಂದ್‌ವರ್ಷ ಪೂರ್ತಿ ಆಯ್ತು. ವೊಬ್ರು ನಾಟ್ಯಾಚಾರ್ಯರು ಬಂದ್ರು ಇಲ್ಲಿ. ಅ … ಕೆಲವರು ಹೇಳಿದರು, ನಾಟ್ಯಾಚಾರ್ಯರು ನಾಟ್ಯವನ್ನು ಮಾತ್ರ ಕಲಿಸ್ತಾರೋ? ಅಲ್ಲಾ ರಸಾಭಿನಯವನ್ನೂ… ಅದೂ ಹೌದು. ಆದ್ರೆ ನೋಡಿ ನಮ್ಮ ಸುಕೃತ, ಬಂದ ನಾಟ್ಯಾಚಾರ್ಯರು, ಅವನೂ ಅಲ್ಲ, ಅವಳೂ ಅಲ್ಲ. ಶುದ್ಧ ಪರಬ್ರಹ್ಮ "ಅದು" . ಹಾಗಾಗಿ ಧೈರ್ಯದಲ್ಲಿ ನನ್ನ ತಂಗಿಯನ್ನು ಅವರಿಗೊಪ್ಪಿಸಿದ್ದೇನೆ. ಸಾಧಾರಣ ವೋಳ್ಳೇ ಆಡ್ತಾಳಂತೆ ನಾನ್ ನೋಡ್ಲಿಲ್ಲ. ಯಾಕೆ ನೋಡ್ಲಿಲ್ಲ? ನಾಟ್ಯದ ಗುಟ್ಟೆಲ್ಲ ನನ್ ಗೊತ್ತುಂಟು. ನನ್ನ ಆಡ್ಲಿಕ್ಕೆ ಗೊತ್ತಿಲ್ಲಿದ್ರೂ, ನಾಟ್ಯಾಚಾರ್ಯರಿದ್ದಾರಲ್ಲ? ಗುರುದಕ್ಷಿಣೆ ಕೊಡೇಕಲ್ಲ? ಅವ್ರ ಹತ್ರ ಹೇಳೇನೆ. ನೋಡ ನೀವು ಕಲಿಸಿದ್ದನ್ನು ನಮ್ಮ ತಂಗಿ ಪ್ರದರ್ಶಿಸಿ. ಅದ್ ವೊಳ್ಳೇದಾಗ್ಲಿಲ್ಲ ನಿಮ್ಮ ಪಾಠ … ನಿಮ್ಮ, ನಮ್ಮದು ನಮ್ಮೆ, ಹೀಗೆಲ್ಲ ಉಂಟು. ಅ.. ಸ್ವಲ್ಪ ಹೌದು ಯಾಕೋ ಜಡ ಆಗ್ತದೆ. ಹ್ಹಂ ನೀವೆಲ್ಲ ಸ್ವಲ್ಪ ರಗಳೆ ಮಾಡೋಡಿ, ಹಾಡು ಗೀಡು ನಾಟ್ಯ, ಯಾಕೋ ಸ್ವಲ್ಪ. ಅತಿ ಆಯ್ತು.

ಯೇ ಅ.. ನೀನು? ನಿನ್ನ ಉದ್ಯೋಗ ಯೇನು? ಓ, ಗೋಪಾಲಕನೋ? ನನಗೆ ಮುಖ ಪರಿಚಯ ಇಲ್ಲ. ಇತ್ತಿಚೆಗೆ ಕೆಲವೆಲ್ಲ ಹೊಸ ನೇಮಕ ಆಗಿದೆ ಅಂತ ಕೇಳಿದ್ದೇನೆ. ನೀ ಹಳಬನೊ? ಹೊಸಬನೊ?

ಹ್ಹ .. ಇದು ವೊಳ್ಳೇದು. ನಿನ್ನ ಭಾಷೆ ಶೈಲಿಯೆಲ್ಲ ಮತ್ತೊಂದು, ಗೊಲ್ಲ ಗೋಪಾಲಕರು, ಗಾವಿಲರು, ಗಾಂಪರು ಅವರಲ್ಲಿ ನಾವು ವ್ಯಾಕರಣ, ಶುದ್ಧ ಸಾಹಿತ್ಯ ನಿರೀಕ್ಷಿಸುವುದೇ ತಪ್ಪು. ತಿದ್‌ಬಾರ್ದು, ಯಾಕ್ ತಿದ್‌ಬಾರ್ದು ಅದೇ ಜಾನಪದ ಸತ್ವ

ವೊಳ್ಳೇದು, ವೊಳ್ಳೇದು ಸ್ವಲ್ಪ ಕೇಳ… ಯೇನು? ಯೇ ಓಲಗಚಾವಡಿ- ವಾಲಗ ಚಾವಡಿ ಅಲ್ಲ.

ದರ್ಶನಕ್ಕಾಗಿ ನೇಮ ಕಾಯ್ತಾ ಇದ್ದೀ! ನೀನು ಶುದ್ಧ ಮಣ್ಣಿನ ಮಗ, ಯಾಕೆ ಅಂತಂದ್ರೆ ನಾನ್ ಹೇಳೋದ್ ಕೇಳಿದ್ದನೆ. "ನೇಮ" , ನೇಮ ಅಂತಂದ್ರೆ ಯೆಂಥದ್ದೊ ಭೂತಗಳಿಗೆ… ಅದು ಕಲಾಪ್ರಕಾರವೋ, ಆರಾಧನವೋ ಹ್ಹ .. 'ನೇಮ'… ? ಯೆಂಥದಕ್ಕೆ? ಅ. ನನ್ನ ದರ್ಶನಕ್ಕೊ? ನನ್ನ ಅಪ್ಪಣೆಯನ್ನು ಕಾಯ್ತಾ ಇದ್ದೆ. ಧಾರಾಳ ಅಪ್ಪಣೆ ಉಂಟು. ನಮ್ಮದು ಮುಕ್ತ ದ್ವಾರ!

*|ಕಾಂಭೋಜಿ-ಝಂಪೆ| ಎಲವೋ ಡಗೆಯಿಂದೇಕೆ ಬಂದೆ ಮೂಗಿನಮೇಲೆ / ಬಿಳುಪಾಗಿ*

*ತೋರುವುದಿದೇನು ಕಲಹದಲಿ ನಿನ್ನೆ ಮತ್ತಿತ ಗೆಲಿದುದೇನಾಯ್ತು!*

ತಿಳುಪಂಜ ಬೇಡೆನಲುಸಿರ್ದ || ೯8 |

ಗೋಪಾಲಕ ಅಂತ್ ಹೇಳ್ವಾಗ್ಗ ಹೌದು, ನಿನ್ನೆ ಯಾರೋ ದನ ಹಿಡಿದ್ರಂತೆ. ನಮ್ಮ ಪಾಕ ಶಾಲೆಯ ಅಡಿಗೆಯವರ್ಯೆರ್ಡ್ ಪೆಟ್ಟು ಕೊಡ್ವಾಗ ಯೆಲ್ಲ ಓಡಿ ಹೋದ್ರಂತೆ.

ಇದು ನಿನ್ಗ ಯಾರ್ ಹಾಕಿದ್ ನಾಮ?

ಎ., ಸತ್ಕಾರ ಮಾಡಿದರೋ ನಿನಗೆ! ಈ ನಮ್ಮ ಊರ್ನಲ್ಲಿ ಯಾರಿಗೆಲ್ಲ ಸತ್ಕಾರ ಆಗ್ತದಪ್ಪ! ಹಾಗಾದರೆ ಯಾರಾದ್ರೂ ನಾಳೆ ನಮ್ಮ ಸತ್ಕಾರ ಮಾಡ್ಲಿಕ್ ಬಂದ್ ಬೇಡ ಅಂತ ಹೇಳ್‌ಬಿಡಿ.

ಯಾರೋ ನಿನಗೆ ಯೇನೂ ಮಾಡ್ಲಿ, ಮೂಗಿನಲ್ಲಿ ನಾಮ ಯಾರ್ ಹಾಕಿದರು? ಹ್ಹಹ್... ಯೇದುಸಿರ್ರೂ ಬಿಡ್ತಿದ್ಯಲ್ಲಪ್ಪ ನೀನು! ಮೊದಲೇ ನಿನ್ನ ಯೆದೆ ಗೂಡ್ ಕಟ್ಟದೆ. ಕಮ್ಮಾರನ ತಿದಿ ವೊತ್ತಿದ್ರೆ ಹ್ಯಾಗೆ..., ನಿನ್ನ ಎದೆಯೂ ತಿದಿಯಾಗಿದೆ. ತಿದಿಯನ್ನು... ವತ್ತಿದವ ಯಾರೋ ಅವ ಕಮ್ಮಾರ? ಗೋಪಾಲಕ, ನಿನ್ನೆ ಜಯಿಸಿ ಆಗದೆ. ಓಹೋ ಇಂದು ಉತ್ತರ ದಿಕ್ಕಿಗೊ? ನಿನ್ನೆಯದು ದಕ್ಷಿಣ ದಿಕ್ಕು!

ಹೌದಪ್ಪ, ನಾಲ್ಕು ಕಡೆಗೂ ನಮ್ಮ ದನಗಳನ್ನು ಮೇಯಿಸ್ಲಿಕ್ಕೆ ಯೆಸ್ಟ್ ಗೋಶಾಲೆ ಉಂಟೋ ನನ್ಗ್ ಗೊತ್ತಿಲ್ಲ. ದನಗಳು ಯೆಷ್ಟಿದ್ದಾನೆ ಅಂತ ಗೊತ್ತಿಲ್ಲ. ದನದ ಹಾಲು ಯೆಷ್ಟು ರುಚಿ ಧಾರಾಳ ಅಂತ ತಿಳವ.

ಹ್ಹಾ ಹ್ಹಾ ಹ್ಹಾ.. ಗೊತ್ತಾಯ್ತು ಗೊತ್ತಾಯ್ತು. ನಿನ್ನೆ ತೆಂಕು ದಿಕ್ಕಿನಲ್ಲಿ ಯೆಲ್ಲಾ ಗಲಾಟೆ ಆಯ್ತು, ಇನ್ನು ಸ್ವಲ್ಪ ದಿವಸಕ್ಕೆ ಅಲ್ಲಿ ಹೋಗೋದೇ ಬೇಡ, ಈ ಕಳ್ಳ ಕೊರಮರು ಎಲ್ಲಿ ಅಡಗಿದ್ದಾರೋ ಏನೋ ಅಂತ ಬಡಗು ದಿಕ್ಕಿಗೆ ಹೋದ್ರೆ? ನಿನ್ನೆಯವರೆಯೋ ನೀವು?

ಗೋಪಾಲಕ ನೀನು, ಗೋಪಾಲ ಮುಖಂಡ! ಅ.. ಯೇನಪ್ಪಾ? ಯೇನು?

ಯೇನ್ ಹೇಳ್ತಿ? ಯೆಲ್ಲಿಯ ಸೈನ್ಯ? ಸೈನ್ಯ ಅಂತ ಗುರ್ತಿಸಿದ್ ಹ್ಯಾಗೆ? ಯಾರು? ಹ್ಹಾ ಕರ್ಪೂರ? ಓಹ್ ... ಕರಿಪುರ! ಹೋಗ್ಲಿ ನಿನ್ನ ಕರ್ಪೂರದ ಉರ್‍ನಜನ ಯಾರವ? ಕರಿಪುರದ ಕೌರವನ ಸೈನ್ಯ ಬಂದದೆ. ಚತುರಂಗ ಸೈನ್ಯ ಕೌರವನದ್ದು. ಹೌದೊ? ಬಂದನೊ?

ಹ್ಹಂ. ಬರ್ಲಿ. ಬಂದವ ಹೋದಾನು. ನಮ್ಮ ಅಡಿಗೆ ಭಟ್ಟ ಬಂದಾನು ರಾತ್ರಿಗೆ

ಅ... ಅಂವ ಹೊಡೆದನೋ? ನಾನೇ ಕೊಟ್ಬೇಕಿತ್ತು ನಿಮಗೆ ನಾಲ್ಕ ನಾಲ್ಕು. ನೀವು ದನಗಳಿಗೆಲ್ಲ ಹೊಡೀತೀರಂತೆ ಹೌದೋ? ಇಲ್ವೋ ಹಾಗಾದರೆ ನಿಮ್ಗ್ ಹೊಡ್ಡ. ಅಲ್ಲಿಗೆ ಗೋತ್ತಾಗೋದಿಲ್ವೇನೂ ನಿಮ್ಮ ಹೊಡೀಲಿಕ್ಕೆ ಚತುರಂಗ ಬಲ ತಕೊಂಡ್ ಬರ್ಬೇಕಾಯ್ತುವ! ಅಂಥವನನ್ನು ಹೊಡೆಯೋದ್ ನಾನೂ...? ಪರಾಕ್ರಮಿಗಳಾಗ್ಬೇಕು. ಪರಾಕ್ರಮಿಗಳಾಗ್ಬೇಕಿದ್ರೆ ತನಗಿಂತ ಸಣ್ಣವರ ತಲೆ ಮೆಟ್ಟೇಕು. ಹೀಗೂ ಕೆಲವು ಉತ್ತರದಲ್ಲಿಯೆಲ್ಲ ತೊಡಗ್ಯದಂತೆ ಅದು. ಯಾಕೆ? ಎಲ್ಲವರ ತಲೆ ಮೆಟ್ಟುವ ಮಹಾನಾಯಕ! ಹಸ್ತಿನಾವತಿಯಲ್ಲಿ ಹಾಗೂ ಆಗ್ಯದೋ ಏನೋ, ನಿನ್ನನ್ ಹಿಡ್ಕೊಂಡ್ ಹೋದ್ದೋ?

ಹೌದೊ? ದೊಡ್ಡ ಮನುಷ್ಯರು ಸಣ್ಣ ಕೆಲಸ ಮಾಡ್ತಾರು; ಆದ್ದರಿಂದ ನಾನು ಹೋಗಬಹುದೊ?

ಅ... ನೀನು ಅದೂ, ನಮ್ ತಂದೆಯವರು ಎಲ್ಲಿಯೋ ಹೊರ್ಗಿರ್ಬೇಕು. ಯೆಂಥದ್ದೊಮಾಡ್ತಾರಂತೆ ನಿನ್ನೇದು ವಿಜಯೋತ್ಸವವೋ ಯೇನೋ. ನಮ್ಮ ಅಡುಗೆ ಭಟ್ಟನೂ ಅಲ್ಲೇ ಇರ್ಬೇಕು ನೀ ನೇರ ಅಲ್ಲಿಗೆ ಹೋಗು. ನೀನು ಕಂಡದ್ದು ವೊಳ್ಳೇದಾಯ್ತುಯ. ಅವ್ರನ್ನು ಹೊಡೀಲಿಕ್ಕೆ ಅವ್ರನ್ನೇ ಕರ್ಕೊಂಡ್ ಹೋಗು.

ಯೇನು? ನನಗೆ ಸರಿ ಸಾಟಿಯಾರೂ ಇಲ್ಲವೋ ಸರಿ.

ಭಲೇ! ಗೋಪಾಲಕ ನೀನೂ ಆರಿಸಿಬಿಟ್ಕೋ ನನ್ನನ್ನೇ? ನೀನೀಗ ಹೇಳೋದ್ ಯೇನು? ಯಾರೇ ಬಂದಿರಲಿ, ನಿಮ್ಮ ಜೀವನದಲ್ಲಿ ದೊಡ್ಡದು ಯಾವುದೂ ಅಲ್ಲ! ಗೋಪಾಲಕ, ನನ್ನ ನೆಲೆಯೇನು? ನನ್ನ ಬೆಲೆಯೇನು? ಒಬ್ಬ ಗೋಪಾಲಕ ಅರ್ಥ ಮಾಡಿಕೊಂಡ. ಈ ಮೂರು ಲೋಕವೇ ಅರ್ಥ ಮಾಡಿಕೊಂಡ್ ಆಯ್ತು. ಭಲರೇ!!

ಸೌರಾಷ್ಟ್ರ-ತ್ರಿವುಡೆ| ಭಳಿರೆ ಕೌರವ ಪಾಂಡು ಸುತರನು | ಹಳುವಕಟ್ಟಿದನೆಂಬ ಹಮ್ಮಿಲಿ |

ಕಲಹಕಂಗಯ್ದಿದನು ತನ್ನಲಿ | ಗೆಲುವೆ ನೆಂದು || ೬ ||

ಭಲರೇ! ಪ್ರಶಸ್ತಿ ನಿನಗೆ, ನಾವು ಬಾಯಲ್ಲಿ ಹೇಳದ್ರೆ ಸಾಲದೇನೋ? ಆ ಕೌರವ ಅವ ನನಗಿಂತ ಅಲ್ಪ ಅಂತ ನನ್ಗ ಗೊತ್ತಾಯ್ತಲ್ಲ? ಅಲ್ಪನೇ, ನಿನಗೆ ಕಥೆ ಹೇಳ್ತೇನೆ. ಆ... ಪಾಂಡುವಿನ ಮಕ್ಕಳು- ಪಾಂಡವರು! ಅವರನ್ನು ಎನೇನೋ ಮಾಡಿ ಕಾಡಿಗಟ್ಟಿದ್ದಾನಂತೆ. ಈಗ ಹತ್ ಹನ್ನೆರ್ಡ್ ವರ್ಷವೋ ಯೇನೊ ಆಯ್ತಂತೆ. ಅದರಲ್ಲಿಯೇ ಗೊತ್ತಾಗೋದಿಲ್ವೊ? ಅವ ಮತ್ತೆ ದನವೂ ಹಿಟ್ಟಾನು, ದನ ಹಿಡಿಯೋದು ಅಂತಂದ್ರೆ... ಗೋಶಾಲೆಗೆ ಹೊಕ್ಕು

ದನಗಳನ್ನೆಲ್ಲಾ ಇನ್‌ಯೇನ್ ಮಾಡ್ತಾನೋ, ಚರ್ಮದ ವ್ಯವಸಾಯ ಮಾಡ್ತಾನೊ, ಮಾಂಸದ್ದೋ! ನನಗೊಂದ್ ಲಕ್ಷ್ಯವೋ ಅವ?

ಆದರೆ ಅವನಿಗೊಂದ್ ಸೊಕ್ಕು "ನಾನ್ ಹಾಗೆ ಮಾಡಿ ಬಿಟ್ಟಿದ್ದೇನೆ, ಹೀಗೆ ಮಾಡಿಬಿಟ್ಟಿದ್ದೇನೆ" . ದೊಡ್ಡಲ್ಲ ಅದು. ನಾನ್ ಮೊದಲೇ ಹೇಳಿದ ಹಾಗೆ ತನಗಿಂತ ಸಣ್ಣವರಿಗೆ ಹೊಡೀವವರು ವೀರರಲ್ಲ. ತನಗಿಂತ ದೊಡ್ಡವರ ಮುಂದೆ ಹೊಡಿಯದೇ ಅವರ ಕೈಯ ಆಯುಧ ಕೆಳ ಹಾಕಿಸುವವ ವೀರ. ನಾನ್ ಹೋದನೋ ಅಲ್ಲಿಗೆ, ಹೋದ್ರೆ ಯೇನ್ ಮಾಡ್ಯೇನು!! ಗೋತ್ತೋ? ನಿನ್ ಹತ್ರ ಹೇಳೋದ್ ಯೆಂಥದ್ದು? ನೀವೂ ಕೇಳಿ ಸ್ವಲ್ಪ ಯೇನ್ ಮಾಡ್ಯೇನು? ಹೋಗಿ ಮೊದಲು ಕರಿಯೋದು ಕೌರವ, ಇದು ಕ್ಷತ್ರಿಯರ ಮರ್ಯಾದೆ ತೆಗೀಲಿಕ್ಕೆ ಹುಟ್ಟಿದ್ದೂ ನೀನು? ಭ್ರಷ್ಟಾಚಾರ ಮಾಡಿಯೇ ಶ್ರೇಷ್ಠ ಆಗ್ಲಿಕ್ ಹೊರಟಿದ್ಯೋ? ಮನಃಸಾಕ್ಷಿ ಇರ್ಲಿಕ್ಕಿಲ್ವೊ? ನಾನ್ ಹೇಳಿದಾವಾಗ್ಲೆ ಶರಣು ಅಂತ ದನ ಬಿಟ್ಟು ಹೋದಾನೋ, ಹೋಗ್ಲಿಲ್ಲ ನಾ ಹೊರಟೆ, ಎಲ್ಲಿಗೆ? ಹಸ್ತಿನಾವತಿಗೆ ಹೋಗಿ ಮುತ್ತಿಗೆ ಹಾಕ್ಕೇನು. ಭೂಮಿಂಜಯ! ನನ್ ಸೈನ್ಯ ಬೇಡ. ಹಾಗಾಗಿಯೆ ಚತುರಂಗ ಸೈನ್ಯ, ನೀನು ಎಲ್ಲಿ ನೋಡಿದ್ದು ಅಂತ ನಾನ್ ಕೇಳಿದ್ದು, ಓಹೋ, ಈಗ ಈ ಉತ್ತರದವರು, ಎತ್ತರದವರು ಇದ್ದ ಚತುರಂಗ ಬಲವನ್ನೆಲ್ಲ ಈ ಕಳ್ಳತನ ಮಾಡ್ಲಿಕ್ಕೆ ತಮಗಾಗಿ ಉಪಯೋಗಿಸಲಿಕ್ಕೆ ಹೊರಟಿದ್ದಾರೋ?

ದೇಶದ ರಕ್ಷಣೆಗಲ್ವೋ? ವೊಳ್ಳೇದದು. ಹೋಗ್ಲಿ, ಬಾಕಿಯಿದ್ದವು ಬರ್ಲಿಕ್ಕಿಲ್ಲ, ಬಂದವು ಲಕ್ಷ ಅಲ್ಲ.

ಅವ್ರನ್ನೆಲ್ಲ ಮೈಮೇಲೆ ಬಿದ್ದರೂ ನಾನ್ ಹೊಡಿಯೋದಿಲ್ಲ. ಯಾಕೆ? ಯಾವುದೇ ಗುಂಪಿನ ಜನ್ರನ್ನು ಹೊಡ್ದ್ ಯೇನೂ ಪ್ರಯೋಜನ ಇಲ್ಲ. ನಮ್ದು ಉತ್ತಮ ರಾಜಕೀಯ ಲಕ್ಷಣ. ಕೆಲವರು ಹಾಗಲ್ಲ. ಆ ಗುಂಪಿನವರಿಗೆ ಈ ಗುಂಪಿನವರು ಹೊಡ್ಯೋದು ಹೊಡ್‌ದ್ರೆ ನಾಯಕನನ್ನೇ ಹೊಡೀಬೇಕು ಏನಂತಿ?

ಬದಲಾಗಿ ಕೌರವನನ್ನು... ಹೌದೇ? ನಂದೆಲ್ಲ ಸಾಮ! ಇಳೀ ಕೆಳಗೆ ಇಳಿದಾನು. ಇಳೀ ಅಂತಂದ್ರೆ ಇಳೀಲಿಲ್ಲ. ದರ್ ದರ್ ದರ್ ಅ ಅದು ಆವೇಶ!! ದರ ದರ ದರ ದರ ಅಂತ ಹೇಳ್ವಾಗ ಅವ ಯಾವುದೋ ಹೆಂಗಸಿನ ಸೀರೆಯನ್ನು ದರ ದರ ದರ ದರ ಎಳೆಸಿದ್ದಾನಂತೆ. ಅಲ್ಲಿಯೂ ಅವನ ಹಣೆಬರ ಗೊತ್ತಾಗೋದಿಲ್ಲೋ? ನಾನ್ ಹಾಗಲ್ಲ ದರ್ ದರ್ನ್ ಕೈ ಹಿಡ್ದ್ ಎಳೆದು ಇಳೀಸ್ಯೇನು. ಯಾರಾದ್ರೂ ಪರಾಕ್ರಮಿಗಳು ಬಂದಿದ್ದಾರೋ ಅಲ್ಲಿಂದ? ಯಾರಾರು ಬಂದಿದ್ದಾರೆ? ಹೋ, ಭೀಷ್ಮ ಬಂದಿದ್ದಾನೊ! .... ಮತ್ತೆ? ಅ.. ದ್ರೋಣ! ಮತ್ತೆ? ಅಸ್ವಸ್ಥರು..... ಹ್ಞ ಅಶ್ವತ್ಥಾಮ- ಇಂಥವರು ಬಂದಿದ್ದಾರಲ್ಲ!

ಮತ್ತೆ ಯಾರು? ದಾನ ಶೂರ! ಅಬದ್ಧ ಪ್ರಯೋಗ ಅದು. ದಾನ ಶೌಂಡ ಆಗೋಕು.

ಸೌರಾಷ್ಟ್ರ-ತ್ರಿವುಡೆ ಕಾದುವೆನದಾರೊಡನೆ ಯೌವನ | ಮಾದವರು ಕುಲವಿಲ್ಲದವದಿರು |

ಭೂದಿವಿಜರಲ್ಲದೆ ಪರಾಕ್ರಮಿ | ಯಾದ ಭಟರ || ೯೭ |

ಆರೊಡನೆ ಕಾದುವೆನು? ನಮ್ಮಲ್ಲಿ ವೋಂದ್ ಆಚಾರ ಉಂಟು. ಬ್ರಾಹ್ಮಣನಿಗ್ ಹೋಡೀಬಾರು.

ಹ್ಹ ಹೌದು ಮರದಿಂದ ಮರಕ್ಕೆಲ್ಲ ಹಾರುವ ವರ್ಗದವರು. ಹಾಗಾಗಿ ಹೇ ಬರೇಬ್ರಾಹ್ಮಣ. ಬ್ರಾಹ್ಮಣರನ್ನು ಹೊಡೀಬಾರ್ದು ಅಂತ ಹೇಳಿದ್ಯಾಕೆ? ಪೆಟ್ಟಿಗಿದ್ದ ಜನಗಳೇ ಅಲ್ಲ ಅವು. ಬ್ರಾಹ್ಮಣ ಯಲ್ಲಿಯಾದರೂ ಪೆಟ್ಟಿಗೆ ಹೋದ ಕಥೆ ಕೇಳಿದ್ದೋ? ಆದ್ರೆ ದ್ರೋಣನ ಬಗ್ಗೆ ನಾನ್ ಇಷ್ಟೇ ಕೇಳಿದ್ದೇನೆ. ಬ್ರಾಹ್ಮಣ ರಾಜಕೀಯಕ್ಕೆ ಸೇರಿದರೆ ಅವ ಪೆಟ್ ತಿನ್ನಲಿಕ್ಕೇ ಇರುವವನು; ಪೆಟ್ ಹೊಡಿಲಿಕ್ಕಲ್ಲ. ಈಗ ದ್ರೋಣನ ಕಥೆ ಹಾಗಾಗ್ಯದಂತೆ. ಅಥೋ ಭ್ರಷ್ಟ ತತೋ ಭ್ರಷ್ಟ ಕ್ಷತ್ರಿಯನಾಗಿ ಗೊತ್ತುಂಟೋ? ಗೊತ್ತಿಲ್ಲ. ಬ್ರಾಹ್ಮಣನಾಗಿ ನೆನಪುಂಟೋ? ಇಲ್ಲ. ಯಾರೋ ದೊಡ್ಡವ್ ಹೇಳಿದ್ದು ಆ ಕಡೆಗೆ ಬ್ರಾಹ್ಮಾಣ್ಯವೂ ಇಲ್ಲ. ಈ ಕಡೆಗೆ ಕ್ಷಾತ್ರವೂ ಇಲ್ಲ". ಪತನ ಅದು! ರಾಜಕೀಯ ಮಾಡ್ತವು ಮಾಡ್ಬೇಕು. ಯಾರ್ ಮಾಡ್ಬೇಕು? ನಮ್ಮಂಥವರು ಮಾಡ್ಬೇಕು. ರಾಜಕೀಯ ಅಂದ್ರೆ ಬೇರೆ ಅದು.

ಇನ್ನು, ಭೀಷ್ಮ! ಯಾವ ಕಾಲದ ಭೀಷ್ಮನೋ! ಅಂತಕನ ನೆರೆಯೂರವನು. ನಿನಗದು ಅರ್ಥಾಗೋದಿಲ್ಲ. ನಿನ್ನೆ ಗೊತ್ತಾಗೇಕು ಅಂತ ಹೇಳೋದಲ್ಲ ನಾನು. ಇವ್ರಿಗಾದ್ರೂ ಗೋತ್ತಾಗ್ಲಿ ಅಂತ ಹೇಳೋದು. ಯಾರ್ದೋ ಪಾಪಕ್ಕಾಗಿ ಅಲ್ಲ ಅವ್ರ ಸ್ವಂತ ಪ್ರಾರಬ್ಧಕ್ಕೆ ಸಾಯ್ಲಿಕ್ಕೆ ಕೂಡ್ಲೆ ಬದಿದ್ದಂತೆ ಮುದ್ರ ನಾನ್ ಕೊಂದ್ರೆ ಅವನ ಆತ್ಮಕ್ಕೆ ಹಾಲ್ ಕುಡಿದಷ್ಟು ತೃಪ್ತಿಯಾದೀತು. ನಾನ್ ಯಾಕ್ ಅವನಿಗೆ ಹಾಲ್ ಕುಡಿಸುವುದು? ತೃಪ್ತಿಪಡಿಸುವುದು? ಅವನ ಮೊಮ್ಮಕ್ಕೇ ಪಡಿಸ್ಬೇಕು. ಹಾಗಾಗಿ ಆರೋಡನೆ ಕಾದುವೆನು ಕೆಲವರು ಹಾರುವರು. ಕೆಲರು ಅಂತಕನ ನೆರೆ ಊರವರು.

ಮತ್ತೆ ನೀನ್ ಕರ್ಣ ಅಂತ್ ಹೇಳಿದ್ಯಲ್ಲ? ಅಧಮ ಕುಲದಲಿ ಸಂದು ಬಂದವು ಅಂದ್ರೆ ಅಲ್ಲಿ ಹುಟ್ಟಿ ಬೆಳು ಆಮೇಲೆ ಬಂದವ್ರು, ಬಂದವ್ರು ಅಂದರೆ ಪರಿವರ್ತನೆ ಹೊಂದಿದವರು ಅಂತ್ ಅರ್ಥ. ಆದ್ರೆ ಬೀಜ ಯಾವ್ದು? ಕರ್ಣ ದೊಡ್ಡವ ಹೌದು. ಅವನನ್ ಕಂಡ್ರೆ ಅವ ಯುದ್ಧ ಮಾಡ್ಲಿಕ್ ತಯಾರಾದ್ರೂ ನಾನ್ ಮಾಡ್ಲಿಕ್ಕಿಲ್ಲ. ನಾನ್ ಕೇಳ್ತೇನೆ ಅವನನ್ನು. ಕರ್ಣ ಯಾರಪ್ಪಾ ನಿನ್ನಪ್ಪ? ಆವಾಗ ಅವ ಸುಮ್ಮನಾದಾನು. ಅವ್ರನ್ನೆಲ್ಲ ನಮ್ಮಂಥವರಿಗೆ ಪ್ರತಿಸ್ಪರ್ಧಿಗಳು ಅಂತ ತಿಳ್ಕೊಳ್ ಬ್ಯಾಡ. ನಾನ್ ಇಲ್ದೇ ಇದ್ದಂತ ರಂಗದಲ್ಲಿ ಯೆಲ್ಲ ಇತಿಹಾಸ ಸ್ಥಾಪನೆ ಮಾಡಿದವು. ನಮ್ಮ ನವ ಯುಗದಲ್ಲಿ...? ಅದೆಲ್ಲ ಹಳಸಿದ ಮೊಸರನ್ನ,

ಕೌರವ ಸಲ್ಲ. ವೊಂದು ತೀರ್ಮಾನಕ್ಕೆ ಬಂದಿದ್ದೇನೆ. ಈ ಕೃತಿಯು ತೀವ್ರವಾದ ಶಬ್ದದಿಂದ ಖಂಡಿಸಲ್ಪಟ್ಟಿದೆ ಅಂತ ಉತ್ತರಕುಮಾರನ ಓಲಗದಿಂದ ವೊಂದು ಸಂದೇಶ ಕಳುಹಿಸೋಣ. ಅಷ್ಟು ಮಾಡಿದರೆ ಸಾಲದೇನೊ?

ಅದು ಹೌದು ಹ್ಞಾ.. ಈಗ ಅರ್ಥಾಯ್ತು ನನ್ಗೆ. ನಾನ್ ಈವರೆಗೆ ಯುದ್ಧ ಪ್ರಯೋಗದಲ್ಲಿ ನೋಡ್ಲಿಲ್ಲ. ವೊಂದ್ ವೊಳ್ಳೇ ಸಂದರ್ಭ ಇದು. ನಮ್ ತಂದೆಗೂ ಗೊತ್ತಾಗೋದ್ ಬ್ಯಾಡ, ಅಡಿಗೆ ಭಟ್ಟನು ಬೇಡ. ಮತ್ತೆ ನಮ್ಮಲ್ಲೊಬ್ಬ ಜೋಯಿಸ ಇದ್ದಾನೆ. ಅವ್ರ ಹತ್ರ ಮೀನಾಮೇಷ ಕೇಳೂದೂ ಬೇಡ. ನೀನು ಗುಟ್ಟಾಗಿ ಇರ್‌ಸ್ಬೇಕು. ನಾನು ವೊಬ್ಬ ಹೋಗಿ... ಮತ್ತೆ ಪ್ರಸಿದ್ಧಿ !

ಕಾಪಿ-ಅಷ್ಟ ಫಲವೇನು ಬಾಯೊಳಾಡಿದರೆ, ನಿನ್ನೆ ಕಲಹದಿ ಸಾರಥಿ ಮಡಿದ ನಲ್ಲದಿರೆ

ಹುಲು ನೃಪಾಲರಿಗಂಜೆ ನಾನು | ತನ್ನ | ಬಲುಮೆಗೆ ತಕ್ಕ ಸೂತನ

ಕಾಣೆನಿನ್ನು || ಕುರುರಾಯ || ೯೮ ||

ಆದರೆ ಯೇನೂ ಅಂತ ನನ್ ಸಂಕ್ಷ ಹೇಳೂದು? ನಮ್ಮ ತಂದೆಯವಿಗೆ ನಿನ್ನೆ ವೊಂದು ಉತ್ಸಾಹ ಬಂದಿದೆ. "ಕುಮಾರ, ನಿನ್ನ ಸಾರಥಿಯನ್ನು ಕಳುಹಿಸು." ತಂದೆಗೆ ಈಗ ಸಾರಥಿ ಇಲ್ಲ. ಹಳೇ ಗಾಡಿ ಮಾತ್ರ ಇರೋದು. ಎಲ್ಲಿಗೂ ಹೋಗೋದಿಲ್ಲ ನಾನ್ ಹೇಳ್ದೆ ಹೊಸ ಗಾಡಿ ಸಮೇತ ಕಳಸ್ತೇನೆ. ಅದು ಬೇಡ ಅಂತೆ. ಅದು ಚಿನ್ನದ್ದು, ನವರತ್ನದ್ದು. ಸ್ವಲ್ಪ ಸವೆದು ಹೋದ್ರೆ? "ಅದು ನಂದು ಹಳೇ ರಥವೇ ಸಾಕು" , ಅಂತ ಹೋದ್ರು. ಅಪ್ಪಣೆ ಅಂತ ಸಾರಥಿ ಕೇಳ್ವಾಗ 'ಹೊಗು' ಅಂತ ಹೇಳಿಬಿಟ್ಟೆ, ಹೋದವ ಹೋಗಿಯೇ ಬಿಟ್ಟ! ಹೋಗಿ ಬಾ ಅಂತ ನಾನ್ ಹೇಳ್ತಿದ್ರೆ ಹಾಗಾಗ್ತಾ ಇಲ್ಲಿಲ್ಲ. ಶಿವನೊಬ್ಬ ಸಾರಥಿಯನ್ನು ನನ್ಗ ಕೊಟ್ಟೆ, ಮತ್ತೇನು ಅಂತ ಈಗ ನನಗೆ ನಿರ್ಣಯ ಇಲ್ಲ. ಆದಕಾರಣ ಮುಂದುವರಿಸಲಾಗದೇ ಸಭಾ ವಿಸರ್ಜನೆ ಮಾಡಲಾಗಿದೆ.

(ಅಷ್ಟರಲ್ಲಿ ಉತ್ತರೆಯ ಪ್ರವೇಶ)

ಭೇ, ಭೇ, ಭೇ ಕೆಲವೇ ತಿಂಗಳುಗಳಲ್ಲಿ ಕಲಾರೂಪಿಣಿಯಾಗಿ ಬಿಟ್ಟಿದ್ದೀ. ಎಯ್ ನಿನ್ನ ಗುರುಗಳಿಗೆ ನಾನ್ ಕೃತಜ್ಞನಾಗಿದ್ದೇನೆ. ಇದು ಭೇ ನೀ ನಡೀವಾಗ್ಲೂ ಕೂಡ ನಾಟ್ಯಶಾಸ್ತ್ರ! ಯೇ ಮಾತಾಡ್ತಾಗ್ಲೂ ರಾಗ! ಅದು ಸ್ವಲ್ಪ ಹೆಚ್ಚಾಯ್ತು. ಅತಿನವ್ಯ ಅದರಲ್ಲಿ ಹಳೇ ಬೇರಿರೂದಿಲ್ಲ. ಮಾತಿಗೆಲ್ಲ ಹಿಂದೋಳ ಉಪಯೋಗಿಸ್ಬೇಡ; ನಡಿಗೆಗೆಲ್ಲಾ ನಾಟ್ಯಶಾಸ್ತ್ರ ಉಪಯೋಗಿಸ್ಬೇಡ ನಮ್ಮೂರ್ನಲ್ ಅದ್ಕ್ ಯೇನ್ ಹೇಳ್ತಾರೆ ಗೋತ್ತುಂಟೊ? "ನೋಡಿದರೆ ಹುಡುಗಿ ಹದಿನಾರ್ ವರ್ಷ ಆಯ್ತುಷ್ಟೇ!! ನಿನ್ನನ್ನು ಪ್ರದರ್ಶನಕ್ಕೆ ನಾನು ಕಲಾವಿದೆಯನ್ನಾಗಿ ಮಾಡಿದ್ದಲ್ಲ; ಕಲೆಯಬಗ್ಗೆ ನನಿದ್ದ ಆಸಕ್ತಿ! ಹ್ದ ಆದಕಾರಣ, ಚೆನ್ನಾಗಿ ಬಾ. ಹೇಗೆ ಬಾ?

ಹೆಜ್ಜೆಯಮೇಲೆ ಹೆಜ್ಜೆಯನಿಕ್ಕುತ... ವೊಂದೇಸಲ ಹಾರ್ಬೇಡ ಅಂತ ಹೇಳಿದ್ದು, ಹಾಗ್ ಬಂದ್ರೇ ಸ್ವಾರಸ್ಯ. ಹ್ಹ ಹೇಳಿದ ಹಾಗೆ, ಯಾರೋ ಹೇಳಿದ್ದಾರೆ, ಲಕ್ಷ್ಮೀ ದೇವಿಗೆ ಹಾಗ್ ಹೇಳ್ತಾರಂತೆ. “ಮಜ್ಜಿಗೆಯೊಳಗಿನ ಬೆಣ್ಣೆಯಂತೆ” , ಹ್ಹ ಈ ಅರ್ಥವೇ ಅದೆ, ಅಂದರೆ ಮಥಿಸಲ್ಪಟ್ಟು ಬಾ. ಹೂ ಈಗ ಯೇನು ಯೇನ್ ಹೇಳೂದಕ್ಕೆ ಬಂದಿದ್ದೀ? ಯೇನಮ್ಮ?

(ಉತ್ತರೆ ಖಾಂಡವದಹನದ ಕಥೆ ಹೇಳುತ್ತಾಳೆ.)

ದೇವೇಂದ್ರನಿಗೆ ಉದ್ಯಾನ ಇತ್ತೋ?

ಈಗ ನೀನು ಕೇಳಿದ್ದಕ್ಕೆಲ್ಲ ವ್ಯಾಖ್ಯಾನ ನನ್ ಹತ್ರ ಕೇಳಿದ್ರೆ ನನ್ಗ್ ಗೊತ್ತಿಲ್ಲ.

ಆದ್ರೆ ನನಗೆ ಯಾವ ವಿಷಯವಾದ್ರೂ ಪ್ರಸ್ತುತವಾಗಿರ್ಬೇಕು. ನನ್ಗೆನಾದ್ರೂ ಲಾಭವುಂಟೋ ಅದ್ರಿಂದ? ನಿನ್ನ ಈ ಕಥೆಯಿಂದ? ಹಾಗಾದ್ರೆ ಕೇಳ್ವ

ನಮ್ಮ ಕಥೆಯೆಲ್ಲ ಸತ್ವವನ್ನು ಕಳ್ಕೊಂಡದ್ ಅಲ್ಲಿ. ಯೇನೋ ಪವಾಡವನ್ನು ತುಂಬಿಸುವುದು. ಯಾರೂ ಮನುಷ್ಯರಿಲ್ಲ - ಕಥಾನಾಯಕರು. ಹಾಗಾಗಿ ಅಲ್ವೇ ನಾನ್ ಹೇಳೋದು? ರಾಮ ಈಗ ದೇವರಾಗಿ ದೇವಸ್ಥಾನ ಕಟ್ಟಿಸುವ ಚಟ ತೊಡಗದೆ. ರಾಮವೊಬ್ಬ ಆದರ್ಶ ವ್ಯಕ್ತಿ. ಆದ್ರೆ ಅದನ್ನು ಸಾಧಿಸ್ತಾ ಇದ್ದಾನಂತೆ ಕೃಷ್ಣ; ನಾನ್ ನೋಡ್ಲಿಲ್ಲ. ಆದೀತು, ನೀನ್ ಯೆಂಥಾ ಕಥೆ ಹೇಳಿದ್ದು?

ಇದು ನಿನ್ನ ಗುರುಗಳದ್ದು. ಖಾಂಡವವನದಹನದ ಕಾಲಕ್ಕೆ ಅರ್ಜುನನ ಸಾರಥಿಯಾಗಿದ್ದವರು ನಿನ್ನ ಗುರುಗಳು.

ಹಾಗೋ? ಅದು ಕಥೆಯಾರಿಗ್ ಗೊತ್ತು? ಅಗ್ನಿಗೆ ಅಜೀರ್ಣವಾದದ್ದಂತೆ! ಇದು ಬೆಂಕಿಗೆ ಚಳಿ ಹಿಡಿಯಿತು ಅಂತ ಹೇಳ್ದಹಾಗೆ, ಅಗ್ನಿ ಅಂತಂದ್ರೆ ಯೆಲ್ಲವನ್ನೂ ಸುಟ್ಟು ಬೂದಿ ಮಾಡೋದು. ಅಲ್ಲ ಇದ್ರೂ ಇರ್ಬಹುದು. ಕೆಲ ಊರಲ್ಲಿ ಜಠರಾಗ್ನಿಗೆ ಅಜೀರ್ಣ ಬಂದದ್ ಇರ್ಬಹುದು! ಇನ್ನು ದೊಡ್ಡ ಹೆಸ್ರು " ಇದು ನನ್ಗೆ ಬೇಕಾದ್ದು ನಿನ್ನ ನಾಟ್ಯಾಚಾರ್ಯರು ಸಾರಥ್ಯವನ್ನು ಬಲ್ಲವರೋ? ಬಲ್ಲವರೋ? ಬಲ್ಲವರು!!

ಕೇದಾರಗೌಳ-ಅಷ್ಟೇ ಎನಲುಬ್ಬುತೆಂದ ಎನ್ನನುಜೆ ಶಾಭಾಸೆನ್ನ ಘನ ನಿನ್ನಿಂದುಳಿಯಿತಿನ್ನು

ನಿನಗೆ ಪೇಳವರಾರು ಕರೆತಾರಾತನ ನೀನೇ ವನಿತೆ ಹೋಗೆನೆ ಕೇಳುತ || ೯ |

ತಂಗೀ... ಆತ್ಯಂತಿಕವಾದಂತಹ ಉಡುಗೊರೆ, ಬಹಳ ಬೇಗ ಆಲೋಚನೆ ಮಾಡ್ತನೆ

ಯಾಕೆ? ಈ ಸುದ್ದಿ ಕೊಟ್ಟದ್ದಕ್ಕೆ. ಆದರೆ ವೊಂದುಂಟು. ನಮಗೆ ಅದೆಲ್ಲ ಬೇಡ ಹೌದೋ ಅಲ್ವೊ ಅಂತ. ನೀನು ನೇರ ಕೇಳುವ ಅಭ್ಯಾಸ ಉಂಟೋ? ಇದ್ರ್ ವೊಂದ್ ಉಪಕಾರ ಮಾಡಬಹುದೊ ನಿಮ್ಮಣ್ಣನಿಗೆ? ನಾನೇ ಕೇಳ್ಬಹುದು ನಾನೇ ಕೇಳಿದರೆ... ಅಪ್ಪಣೆ ಅಂತಾಗ್ತದೆ. ಬಲಾತ್ಕಾರದ ಸಾರಥ್ಯ ಬೇಡ. ವೊಲಿದು... ಅ... ನನ್ಗ ಹೊಂದುವಂಥ ಸಾರಥಿ ಆಗಬೇಕು. ಮತ್ತೆ ಯಾಕೆ ಹೇಳ್ತನೆ? ಸಾರಥ್ಯ ಅಂದ್ರೆ ಅದು ಕೂಡ ವೊಂದ್ ವಿದ್ಯೆ-ಯಾರಿಗೆ? ನಮ್ಮಂಥ ಕ್ಷತ್ರಿಯರಿಗೆ, ಸಂದರ್ಭ ಬಂದ್ರೆ ನಾವು ಸಾರಥ್ಯವನ್ನು ಮಾಡಬಲ್ಲೆವು. ಸೂತ ಅಂತ ವೊಂದ್ ಕೆಟ್ಟ ಜಾತಿ ಉಂಟಂತೆ. ಈ ಸಾರಥಿಗೆಲ್ಲ ಈಗೀಗ ಸೂತ, ಸೂತ ನಿಜವಾದ ಅರ್ಥ ಯೇನು? ಸೂತ್ರಧಾರಿ-ಸಾರಥಿ. ನನಗೆ ಯೆರಡೂ ಗೊತ್ತುಂಟು. ನಿನ್ನಲ್ಲಿ ಹೇಳ್ಳೇನೆ ಅವನಿಗೆ ಯುದ್ಧಮಾಡುವ ಉತ್ಸಾಹ ಬಂತು ಅಂತಾದ್ರೆ ನಾನು ಸಾರಥ್ಯವನ್ನಾದ್ರೂ ಮಾಡಬಲ್ಲೆ. ನನ್ನ ವೃತ್ತಿಯಲ್ಲಿ ಮೇಲು ಕೀಳು ಅಂತ ಇಲ್ಲ. ಅವ ಸಾರಥ್ಯವನ್ನು ಬಲ್ಲವನಾಗಿದ್ರೆ ನನ್ನೊಂದು ಸಂದರ್ಭ ಯೇನು? ನನಗೂ ಗೊತ್ತುಂಟು ಅಂತ ಮಾಡಿ ತೋರಿಸ್ಲಿಕ್ಕೆ ಇದೇ ಸಂದರ್ಭ, ಅವಕಾಶ ಸಿಕ್ಕಿದ್ರೆ... ಬೇಡಪ್ಪ ಅನ್ನಿಗ್ ಯೆಷ್ ಗೊತ್ತುಂಟೋ ಯೇನೊ. ಆದ್ರೆ ನನಗೆ ಧಾರಾಳ ಸಾಕು. ನಾನ್ ಆವಾಗ್ಲೆ ಹೇಳಿದ್ದೇನೆ. ಯೆಂಥಾದ್ದು?

ಶಿವ ಸಾರಥಿಯನ್ನು ಕೊಟ್ರೆ.. ಯೆಂಥ ಸಾರಥಿಯನ್ನು ಕೊಟ್ರೆ? ವೊಂದ್ ಅರ್ಧ ಸಾರಥಿಕೊಟ್ರೆ ನನ್ಗ ಸಾಕು. ಆ ಜಾಗ ತುಂಬಿಸ್ಲಿಕ್ ನನ್ಗ ಗೊತ್ತುಂಟು. ಅದೇ ನಿನ್ಗ ಉಡುಗೊರೆ ಹೇಳಿದೆನಲ್ಲ ಮೂ ತಿಂಗಳೊಳೆ, ಬಹಳ ಸಂತೋಷ ಆಯ್ತು. ಇನ್ನು ನೀನು ಕಲಿಯೋದು ಹೆಚ್ ಬೇಡ. ಕೆಲವು ಸಲ ನಮ್ಮ ಹುಡುಗಿಯರು ವಿದ್ಯಾ ಸರಸ್ವತಿಯರಾದ್ರೆ ಮತ್ತೆ ನಾವು ಬ್ರಹ್ಮರನ್ನು ಹುಡುಕ್‌ಲಿಕ್ ಕಷ್ಟ ಆಗ್ತದೆ. ಆ ಮಟ್ಟಿಗೆ ಏರಿದ ಗಂಡಸು ಬೇಡೋ?

ಸಾಕು, ಅದ್ ನನ್ಗ ಬಿಡು, ನನ್ನ ತಂಗಿಗೆ ಮದುವೆ ಮಾಡ್ಬೇಕೋ, ಬಿಡ್ಬೇಕೋ, ಅದ್ ನನ್ ತಂಗೀ.. ಮುಚ್ಚು ಬಾಯ್... ದಾರಿ ತಪ್ ಬೇಡ ಈ ಕಲ್ತೂ ಕಲ್ತೂ, ಕಲ್ತೂ ಹುಡುಗಿಯರಾಗ್ವಾಗ "ಯಾಕೆ ಮಣ್ಣಿಗೆ ಮದುವೆ?"... ಮತ್ತೆ ಗೊತ್ತಾಗ್ತದೆ, ಹತ್ ವರ್ಷ ಹೋಗ್ವಾಗ ಯಾಕೆ ಮದುವೆ ಅಂತ. ಬಿಡು ಅದು ನನ್ನ ಹೊಣೆ.

ಇದು.. ತಂಗೀ, ನನಗಾಗಿ ನಿನ್ನ ಗುರುವನ್ನು ವೊಪ್ಪಿಸ್ಬೇಕು ಅಂದ್ರೆ ನಿನ್ನ ಪ್ರೇರಣೆಯಿಂದ ಸಾರಥಿ ಸಿಕ್ಕಿದ ಅಂತ ಆದ್ದೇಕು. ನಾನಾಗಿ... .. ಈ ಕೆಲವರಿಗೆ ಕೆಲವು ಉದ್ಯೋಗಕ್ಕೆ ಹಚ್ಚಿದ್ರೆ ಮತ್ತೆ ನಾವ್ ಅವ್ರ ಕೈಯಲ್ಲಿ ಸಿಕ್ ಬೀಳ್ತವೆ. ತಾತ್ಪರ್ಯ ಗೊತ್ತಾಯ್ತುಲ್ಲ? ವೊಳ್ಳೇದು, ತಂಗೀ, ಮಗೂ ನೀನು ಕಾಲ್ ಹಿಡೀಬಹು, ನಾನ್ ಅವ್ ಕಾಲ್ ಹಿಡೀಬಾರು. ನನಗಾಗಿ ವೊಂದ್ ಹೇಳು. "ಗುರುಗಳೆ ಯೇನ್ ಮಾಡಿಯಾದ್ರೂ ನಮ್ಮಣ್ಣನ ಮರ್ಯಾದೆ ಉಳಿಸ್ಬೇಕು" ಅಂತ ಹೇಳು. ದೊಡ್ಡ ಶಬ್ದ. ಅಲ್ಲ ನನ್ ಮರ್ಯಾದೆ ಅವ ಉಳಿಸೋದ್

ಯೆಂಥದ್ದು? ಹ್ಞ ವಿನಯ! ಬೇಕಿದ್ರೆ ಹೇಳು. ನಮ್ಮ ಅಣ್ಣ ಯೇನ್ ಮಾಡ್ಯಾನು ನಿಮ್ಗ ಗೊತ್ತಿಲ್ಲ ಗುರುಗಳೇ, ನಿಮಗೆ ಯೇನಾದ್ರೂ ಯುದ್ಧ ವಿದ್ಯೆ ಗೊತ್ತಿದ್ರೆ ನಮ್ಮ ಅಣ್ಣನನ್ನು ನೋಡಿ ಕಲಿಯಿರಿ. ಅಲ್ಲ ಕಲಿಯೂದ್ ಯೆಂಥದ್ ಈ ನಾಟ್ಯಶಾಸ್ತ್ರದವ್ರೆಲ್ಲ? ಹಾಗೆಲ್ಲ ಉಬ್ಬಿಸಿ ಇಕೋ, ಇನ್ನೇನಿಲ್ಲ ವೊಂದ್ ವೇಷ ಬದಲಾಯಿಸೋದು... ಅವಸರ! ನಾನು ಸಮಯಕ್ಕೆ ಕೊಡುವಷ್ಟು ಮೌಲ್ಯ; ಯೇನ್ ಮಾಡೋದು ನನ್ನ ವೊಟ್ಟೆಗಿದ್ದವ್ರಿಗ್ ಆ ನಿರ್ಣಯ ಇರೋದಿಲ್ಲ. ನನ್ನ ಅದೆಲ್ಲ ಉಂಟು. ಕೆಲವುಸಲ ನನ್ಗ ಸಮಯವನ್ನು ತಪ್ಪಿಸುವವರೂ ಉಂಟು ನಿನ್ನಹಾಗಿದ್ದವು. ಪ್ರಿತಿಯವು. ಹಾಗಾಗಿ ಹೆಚ್ ಮಾತಾಡ್ಬೇಡ... ನಂದು ಮಾತ್ ಕಡಿಮೆ. ಬಾಕಿಯಿದ್ದದ್ ಯೆಂಥದ್ದು? ದುಡಿಮೆ ಹೆಚ್ಚು. ಕ್ಷೇತ್ರ ಈವರೆಗೆ ಸಿಕ್‌ಲಿಲ್ಲ. ಈ ಹೊತ್ತು ಸಿಕ್ಕಿತು ದೈವಾನೂಕೂಲ ಉಂಟು. ಕಾಲ್ ಹಿಡ್ದು... ಗೊತ್ತಾಯ್ತಲ್ಲ? ಕಾಲ್ ಹಿಡ್ದಲ್ಲ, ಗುರುಗಳಕಾಲ್ ಕಟ್ಟಿ, ಯೇನೂ ಆದೀತು ಕಕ್ಕೊಂಡ್ ಬಾ ಅಮ್ಮ.

ತಡ್ಡ್‌ಡಿ ಈ ಮಧ್ಯೆ ವೊಂದು ವೇಷ ಯುದ್ಧಕ್ಕೆ ಉಡುಗೆ ತೊಡುಗೆ, ಯ್ಹೋ... ನಿನ್ನ ಸಾರಥಿಗೂ ಬೇಕಲ್ಲಪ್ಪ ಅದು? ನಾಟ್ಯಾಚಾರ್ಯರಿಗೆ? ಅದು ನಮ್ಮಲ್ಲಿ ಉಂಟು. ಗೊತ್ತುಂಟೋ ಇಲ್ವೋ ಗೊತ್ತಿಲ್ಲದಿದ್ರೆ ನಾನೆ ತೊಡಿಸ್ತೇನೆ ಅಲ್ಲದೇ ನನ್ನ ಯೇನ್ ಗೊತ್ತುಂಟೋ ಯೇನ್ ಗೊತ್ತಿಲ್ಲ ಅಂತಲ್ಲ. ಆ ವೇಷ ಹಾಕ್ಲಿಕ್ಕೂ ಬರ್ತದೆ ಆದ್ರೆ ನಾನು ಓಹ್... ಹೋ... ಯೆರಡೇ ಮಾತು ನನ್ನದು ಅಂತ ಹೇಳಿ ಹನ್ನೆರಡು ಮಾತು ವಾದಿಸುವವರ ಹಾಗೆ ಆಯ್ತು ನಾನೀಗ, ಹೋಗು ಹೋಗು ಬೇಗ ಕರ್ಕೊಂಡ್ ಬಾ.

(ಬೃಹನ್ನಳೆಯ ಪ್ರವೇಶ)

ಓಹೋ ಹೋ ಹೋ ಬರ್ಬೇಕು, ಬರ್ಬೇಕು, ಬರ್ಬೇಕು. ನೀವು ದೊಡ್ಡವರು. ನಾನ್ ಹೇಳ್ ಬಿಟ್ಟದ್ದು ವೊಬ್ಬ ಅರ್ಧ ಸಾರಥಿ ಸಾಕು. ಮಾತಿಗೆ! ನನ್ನ ದೃಷ್ಟಿಯಲ್ಲಿ ನೀವು ಅರ್ಧವೂ ಅಲ್ಲ, ಚೂರೂ ಅಲ್ಲ, ಯೇನೂ ಅಲ್ಲ.

ಅಲ್ಲ ಅಂದ್ರೆ... ಅದೇ ನಾ ಹಾಗೆ ತಿಳ್ಕೊಳ್ಳೋದ್ ವೊಳ್ಳೇದ. ಅಹ್ಞ ನಾನೇನು ? ಅದು ನಿಮ್ಮ ಹಳೇ ಪಾಠ! 'ವಿದ್ಯಾ ದಧಾತಿ ವಿನಯಂ'. ನಮ್ದು ಹೊಸ ಪಾಠ ಹಾಗಲ್ಲ ವಿದ್ಯಾ ದಧಾತಿ? ಮತ್ತೆ ಶಬ್ದ ಯೆಂಥದ್ದು ಗೊತ್ತಿಲ್ಲ. ಸಿದ್ಧಿಯಿಲ್ಲದಿದ್ರೂ ಪ್ರಸಿದ್ಧಿ. ಅಲ್ಲಿಗೆ ಮುಟ್ಟದೆ - ರೊಕ್ಕ ನನ್ನಲ್ಲಿ ಸಾಧನೆಯೂ ಉಂಟು ಸಿದ್ಧಿಯೂ ಉಂಟು. ಹಾಗಾಗಿ ನೀವ್ ಹೇಳಿ, ನಾನ್ ಯೇನೂ ಅಲ್ಲ ಅಂತ. ಅಲ್ಲಲ್ಲ ನಮಗೆ ಪ್ರಸಿದ್ಧಿಯಾದದ್ದು ಬಿಡ್ದ. ಇವ ಪೂರ್ಣ ಆಗ್ಲಿಕ್ಕೆ ಯೆಷ್ಟು ಬಾಕಿ? ಆದ್ದರಿಂದ ನನಗೆ ನಿಮ್ಮಷ್ಟೂ ಯೋಗ್ಯತೆ ಇದ್ದ ಸಾರಥಿ ಬೇಡ. ಹೆಸರಿಗೆ ಸಾಕು. ಆವಾಗ ಪ್ರಸಿದ್ಧಿ ನನ್ಗ್ ಬರ್ತದೆ "ಓಹೋ ತೊಂಭತ್ತೊಂಬತ್ತು ಆಗಿಬಿಟ್ಟಿದ್ದ ವೊಂದ್ ಕಡಿಮೆ ಇತ್ತು, ಯೇನಿನ್ನ!" ಅಂತ ಜನ ತಿಟ್ವಾರು. ಯೆಲ್ಲಾ ಅರ್ಥದಲಿಯೂ ನೀವು ಆ ಕೃತ್ಯಮಾಡಿ, ನನ್ನ ಮಾನ ಪ್ರಾಣ ಪೀಠ ಉಳಿಸಲಿಕ್ಕೆ... ಈ

ವರೆಗೆ ನಾನ್ ಯೆಲ್ಲ ಉಳಿಸಿಕೊಂಡಿದ್ದೇನೆ. ನಿಮ್ಮ ದೆಸೆಯಿಂದ ಅದು ಪೂರ್ಣ ಆಗೂದ್ರಿಂದ ಕೊನೆಗೊಳಿಸ್ವವರು ನೀವಾಗ್ಬೇಕು. ವೊಂದು ದೊಡ್ಡ ಉಪಕಾರ ಮಾಡ್ತೀರೋ? ಹೌದು. ಇದು ಉಪಕಾರ ಅಲ್ಲ ಸಹಕಾರ. ಮತ್ತೆ ನಿನಗೆ ಭಯ ಯಾಕೆ? ಹ್ಞಾ ಬಹುಷಃ ಅದು ನನ್ ತಂಗಿ ಮಾಡಿದ ಮೋಸ ಇರ್ಬೇಕು. ನಾನ್ ಅವಳಲ್ಲಿ ಹೇಳ್ವಾಗ್ ಹೇಳಿದ್ದೇನೆ. ನನ್ನ ಸತ್ತ ಸಾರಥಿಯ ಸ್ಥಾನಕ್ಕೆ ನಿನ್ನ ಗುರುಗಳನ್ ಕರ್ಕೊಂಡ್ ಬಾ ಅಂತ. ಸತ್ತ ಸಾರಥಿಯ ಸ್ಥಾನಕ್ಕೆ ಅಂತ್ ಹೇಳಿದರೆ ನೀನ್ ಅರ್ಥ ಮಾಡಿದ್ದು ಸತ್ತವನ ಜಾಗ ತುಂಬ್ಲಿಕ್ಕೆ.... ನಾನಿದ್ದೇನೆ ಭಯಬೇಡ ನಿನ್ಗೆ.

ಸೌರಾಷ್ಟ್ರ-ತ್ರಿವುಡೆ| ಎಲೆ ಬೃಹನ್ನಳೆ ಯೇಕೆ ಬೆದರುವೆ? ಮುಳಿದು ಪಗೆಗೆಳದೇನ

ಮಾಳ್ವರು | ನಿಲುವೆ ತಾನಾರೆಂಬುದನು ನೀ ತಿಳಿಯದಾದೆ || ೧೦೦ ||

ನಾಟ್ಯಾಚಾರ್ಯರೇ, ಗೊತ್ತಾಯ್ತು ನನ್ಗೆ.

ಅಲ್ವೋ, ಅಷ್ಟೇ ಅಲ್ವೋ ನನ್ಗ ಯಾರಾದ್ರೇನು? ಪೌರುಷ ಇದ್ದವ ಬೇಡ. ಸ್ತ್ರೀಯರನ್ನು ನಾನ್ ಕರ್ಕೊಂಡ್ ಹೋಗೋದಿಲ್ಲ. ನಿಮ್ಮಲ್ಲಿ ಯೆರಡೂ ಇಲ್ಲ. ಯೇ ಇದು ವೊಂದ್ ವಿಚಿತ್ರ! ಇಂಥವರನ್ನೆಲ್ಲ ಕೂಡಿಸ್ಕೊಂಡು ನಮ್ಮ ಈ ನವ್ಯ ದೃಷ್ಟಿಯ ಉತ್ತರಕುಮಾರ ಪ್ರಪಂಚಕ್ ಹೇಗೆ ಉತ್ತರಕೊಟ್ಟ? ನನ್ನ ಬುದ್ಧಿ ಇವೊತ್ ಯೆಸ್ಟ್ ಕೆಲ್ಸ ಮಾಡ್ತಿದೆ! ನಾನ್ ಇಷ್ಟು ತಿಳ್ದವನೊ? ತಿಳ? ಹೆದ್ರಬೇಡಿ. ಹೆದ್ರಬೇಡಿ ಯಾಕೆ ಹೆದ್ರಬೇಡಿ? ಆನರಿಯದವನೇ ಭೀಷ್ಮ? ಕರ್ಣ? ಧಾರಾಳಾ ತಿಳಿದ್ದಿದ್ದೇನೆ. ತಿಳೋದ್ ನೋಡಿ ಅಲ್ಲ; ಸುದ್ದಿ! ಅದನ್ನು ಕೆಳಿದ್ರಿಂದಲೇ ನನ್ನೊಂದ್ ಉತ್ಸಾಹ ಬಂತು. ನಾನೆಷ್ಟು? ಯಾಕೆ ಗೊತ್ತೋ? ಅವನೆಲ್ಲ ವೊಂದ್ಯೆದು ಪೆಟ್ಟು ಹೊಡ್ಡು ಬಂದ್ರೆ ಪ್ರಸಿದ್ಧಿ ನನ್ಗೆ ಬರ್ತದೆ ಮತ್ತೆ ಯೆಂಥೆಂಥವರನ್ನೆಲ್ಲ ಯೇನೇನ್ ಮಾಡಿದವ! ಸುಲಭದಲ್ಲಿ ನಿವೃತ್ತಿಯಾಯ್ತೋ ಇಲ್ವೋ? ಒಂದ್ ಹೊಗಳಿಕೆ ಬೇಕಾಗಿ ನಾನ್ ಯಾಕಾಗಿ ದುಡೀಬೇಕು? ಯುದ್ಧ ಆಗಲಿ ಹೇಳಿದ್ ಯಾಕೆ? ಯತಾರ್ಥ ನನ್ ಮನಸ್ ಹೇಳ್ತದೆ - ನಾನ್ ಹೋದ್ರೆ ಯುದ್ಧ ಆಗ್ಲಿಕ್ಕಿಲ್ಲ!

ಅದ್ರೆ ನಾನ್ ಹೇಳೋದು ಯುದ್ಧ ಆಗಲಿ ಅಂತಲೇ, ವೊಂದು ಪ್ರಚಾರಕ್ಕೆ

ನಿನ್ನ ಸಾರಥ್ಯ ಹೇಗೆ; ನೀನು ಹೇಳಿದ್ಯಲ್ಲ ಹವ್ಯಾಸಿ ಅಂತ? ನಾನು ಪರಿಪೂರ್ಣನಾದ್ರೂ ಕೂಡ ನಾನು ಹವ್ಯಾಸಿಯೇ ಹೊರತು, ನಿತ್ಯ ಯುದ್ಧಕ್ಕೆ ಹೋಗ್ವವ ಅಲ್ಲ. ನೀನೂ ನಾನು ಸೇರಿದರೆ ಬಹಳ ವೊಳ್ಳೇದಾಯ್ತು ನೋಡು. ಆದಕಾರಣ ಸಂಪೂರ್ಣ ಧೈರ್ಯವನ್ನು ಕೊಟ್ಟಿದ್ದೇನೆ, ನನ್ನ ಬಂಗಾರದ ರಥ, ಅದಕ್ಕೆ ಕಟ್ಟುವ ಕುದುರೆಗಳು, ಎಲ್ಲಿವೊಂದ್ ಸಲ ಗುರುಗಳು ನೋಡಿ, ಅದು...

ಹಾಗಾದ್ರೆ ಈ ಕುದುರೆಗಳಾಗ್ಲಿಕ್ಕಿಲ್ಲ. ಬಂಗಾರದ ರಥಕ್ಕೆ ಅದನ್ ಕಟ್ ಬಹ್ದೊ?

ನಾನು ಕಟ್ಟಿಲ್ಲ. ಯಾಕೆ? ಇದ್ ಯೆಂಥಾ ರಥ ನಾಟ್ಯಾಚಾರ್ಯರೇ!

ನಮ್ಮೊಟ್ಟಿಗೆ ಈ ಜನವೂ ಬೇಕು. ಅದು ನಮ್ಮದು ಪದ್ಧತಿ. ನಮ್ಮ ಜನರಿಂದ... ಹೋಗಿದ್ದೇನೆ ಅಂತ ಪ್ರಚಾರ ಮಾಡ್ಲಿಕ್ಕೆ ಜನ ಬೇಡೋ?

ಆ ಪ್ರಚಾರದಿಂದ ನಮ್ಮ ಪಿತೃ ಮಹಾಶಯರಿಗೆ ಗೊತ್ತಾಗಲಿ. ಹುಡುಗ ಇಷ್ಟು ತಯಾರಾಗಿದ್ದಾನೆ ಅಂತ ಆದಷ್ಟೂ ಬೇಗ ಬಿಡ್ಲಿ - ಅಧಿಕಾರ. ಸ್ವಾರ್ಥ ಅಲ್ಲ ನನ್ ವಾಣಿ... ಆದ್ದರಿಂದ ಬೇಕಾದ ರಥವನ್ನು ನಾನೇ ತಂದಿದ್ದೇನೆ. ಯಾಕೆ? ನಾನೂ ಸಾರಥ್ಯವನ್ನು ಬಲ್ಲವ... ಯುದ್ಧಕಣಕ್ಕೆ ಯಾವ ಜಾತಿ ರಥ ಬೇಕು ಅಂತ ನನ್ನ ಗೊತ್ತುಂಟು ಆದ್ರೆ ಉಪಯೋಗ ಇಲ್ಲ. ವಿಲಾಸಕ್ಕೆ ಇಂಥದ್ದನ್ನೇ ಮಾಡಿಸುವುದು. ಕೆಲವರು ವಜ್ರದ ಕಿರೀಟ, ಬಂಗಾರದ ಕಿರೀಟ ಅದು ಪ್ರದರ್ಶನಕ್ಕೆ, ಯಾಕೆ? ಅದೆಲ್ಲ ಮಾಡ್ತಾರೆ ದೇವತಾವಿಗ್ರಹಕ್ಕೆ. ಮನುಷ್ಯರು ಬಂಗಾರದ ಕಿರೀಟ ಇಡ್ತಾರೋ?

ಈಗ ನನ್ ತಲೆಯಲ್ಲಿ ನವರತ್ನದ ಕಿರೀಟ! ಅದು ಕೂತೂಗೊಳಿಸಿದ ಯಾವುದ್ರಲ್ಲಿ ಅಂತ ಕೇಳುದ್ ಬೇಡ, ನವರತ್ನದ್ದು, ರತ್ನ ಖಚಿತವಾದ ವಿಷ್ಠರ! ಮನುಷ್ಯ ರತ್ನದಂತೆ ಪ್ರಕಾಶಿಸ್ಬೇಕು. ಬಂಗಾರದ ಹಾಗಲ್ಲ!

ಓಹ್ ಹೇಳಿದಹಾಗೆ, ಸಾರಥಿಗೆ... ಇದು... ಕವಚ ಬೇಡ್ವ? ಸೀಸಕ ಬೇಡ್ವ?

ನಾನು ಬೇಕು ಅಂತ್ ಹೇಳ್ದವ. ಈಗ ನಮ್ಮಲ್ಲಿ ಕೆಲವು ಹುಡುಗಿಯರು ಎಲ್ಲ ಮಾಡ್ತಾರೆ. ಸಾರಥ್ಯ ಬೇಕಾದ್ರೆ ಪೆಟ್ಟಿಗೂ ಕೂಡ; ಅವ್ರಿಗೆ ನಾವ್ ಯೇನ್ ಹಾಕ್ತೇವೆ ಗೊತ್ತುಂಟೋ? ಗಂಡುಡುಗೆ, ಈಗ ನಿನಗೂ ಅದೇ ಗಂಡುಡುಗೆ ಆಗ್ಬೇಕು. ಯೇ, ನಿನ್ಗೆ ಅಂತ ಬಂದೊಯ್ತು? ಬಾಯ್ತಪ್ಪಿ.

ಇದು ಸಾರಥಿ, ಸಾರಥಿಯೆಂಬ ಉದ್ಯೋಗಕ್ಕೆ ಇಂಥದ್ದೆಲ್ಲ ಬೇಕು ಅಂತ ಉಂಟು. ಹ್ಯಾಗೆ? ನಿಮ್ಗೆ ತೊಡ್ಲಿಕ್ಕೆ ಅಭ್ಯಾಸ ಉಂಟೋ? ಛೇ, ಛೇ, ಛೇ... ಅದ್ ಸರಿಯಲ್ಲ ಅದು. ನೀವೆ ಹೆಂಗಸರು ನಗುವುದು ಯಾಕೆ? ಇಂಥ ವರ್ಗದವರಿಗೆ ಪುರುಷರ ಉಡುಗೆಯೂ ಬೇಡ, ಸ್ತ್ರೀಯರ ಉಡುಗೆಯೂ ಬೇಡ! ಹಾಕಿ ಅಭ್ಯಾಸ ಇಲ್ಲ. "ಅಂಗಿಯನ್ನು ತೊಡಲರಿಯದವ... ನಾ ತೊಡ್‌ಸ್ತೇನೆ ನಾ ತೊಡ್‌ಸ್ತೇನೆ. ಆಯ್ತೊ? ನನಗೆಲ್ಲ ಗೊತ್ತಿದೆ.

ನಿಮಗೇನಾಗ್ಬೇಕು? ಓಹ್ಹೊ ವೈರಿಗಳ ಆಭರಣ ಪೀತಾಂಬರ ಇತ್ಯಾದಿ ತರಬೇಕು ತಾನೆ? ಹ್ಹಾ ... ಗುರುಗಳೊಪ್ಪಿದ್ರಲ್ಲ? ನನಗೆ ನೆನಪಾಗದಿದ್ರೆ ನೀವ್ ನೆನಪು ಮಾಡಿ. ಅಥವಾ ಅವ್ರೆಲ್ಲ ಬಿದ್ದಾವಾಗ ನೀವೇ ತೆಗ್ದು ತರ್‍ತೀರಾದ್ರೆ ತಕೊಂಡ್ ಬನ್ನಿ, ಅದೆಲ್ಲ ದೊಡ್ಡ ವಿಷಯ ಅಲ್ಲ. ಅದೆಲ್ಲ ಬೇಕಾದ್ ಮಾಡ್ವ , ನಮ್ಗ್ ಯೇನೂ ಬೇಡ? ಬಿಳ್ಕೊಳ್ಳು ಸಮಾರಂಭ ಬೇಡ. ಅದೆಲ್ಲ ಬಂದಾವಾಗ್ಗ ಮತ್ತೆ ನೋಡ್ವ, ತಡ ಆದ್ರೆ ಮತ್ತೆ 'ಮಗನೇ ಹೋಗ್ಬೇಡ' ಅಂತ್ ಹೇಳಿದ್ರೆ ಕೆಟ್ಟೇ. ಭಲೇ, ಹೂಂ... ಹಾರಲಿ ರಥ.

ಮಾರವಿ-ಏಕ ಎಲ್ಲಿ ನೋಡಿದರೆದೆ ತಲ್ಲಣಿಸುದು ರಣ | ಮಲ್ಲ ಸುಯೋಧನ | ನಲ್ಲ

ದಿನ್ನುಂಟೆ? | ನಿಲ್ಲು ರಥವ ನೀ / ನೆಲ್ಲಿಗೆ ನಡೆಸುವೆ | ಇಲ್ಲವೆ ಕರುಣವೆ |

ನ್ನಲ್ಲಿಷ್ಟು ನಿನಗೆ 1 ತರವೆ ನೋಡೆ ‖ ೧೦೧ ||

ಗುರು ಬೃಹನ್ನಳೇ... ಸಾರಥೀ, ಹಿಂದೆ ಹೋಗ್ಯ

ಯಾಕೆ ಹೇಳಿದೆ?... ಹಿಂದೆ ಹೋಗೋದ್ ಬೇಡ. ತಿರ್‍ಗಿಸಿ ಹೋಗಲಿ, ಅದೆಲ್ಲ ಯೆಂಥದ ಅದು?

ಸಮುದ್ರ ಮಥನ ಆಯ್ತು ಹಾಲಾಹಲ ಹುಟ್ಟಿತು. ಇದು...! ಯೆಂಥದ್ ಇದು? ಮಿಂಚಿನ ಹಾಗ್ ಕಾಣೋದು?

ವೋ ನಾನು ವೋದಿದ್ದೇನೆ. ಅದೇನೋ ಇದು? ಗುರುಗಳೇ, ತಪ್ಪಿದೆ ನಾನು ತಪ್ಪಿದೆ. ರಥವು ಪ್ರವೇಶ ಮಾಡ್ದಾಗ್ಲೆ ಇನ್ನೂ ವೇದಿಕೆ ಇಲ್ಲ ಅಂತ ಆಗ್ಬಾರ್ದು, ಈಗ್ ಇದ್ ಯೆಂಥದ್ದಿದು? ನಾಟ್ಯಾಚಾರ್ಯರೇ...ವೋ ಗುರುಗಳೇ... ವೊಂದೇಸಲ ತಾರಕಕ್ಕೆ ಏರಿಸಬಾರ್ದು ಅಂತ ವಂದ ಸಂಗೀತ ಶಾಸ್ತ್ರ ಹೇಳದೆ... ಅದೇ ಆಯಾಸ ಆದದ್ದು. ಈಗ ಗೊತ್ತಾಯ್ತು, ಇದು ಈ ಪ್ರಯೋಗದ ಈ ಅನುಭವವೂ ವೊಳ್ಳೇದಕ್ಕೆಆಯ್ತು. ಇನ್ನೊಮ್ಮೆ ಬರುವಾ; ಈಗ ಸಾಕು. ಯೇನೂ ನನ್ನೆ ಸುಖ ಇಲ್ಲ ಅಂತ ತೋರ್‍ತದೆ. ವೊಬ್ಬೊಬ್ಬ ಕೈಯಲ್ಲಿ... ನಾನ್ ಯಾರ್ ಹತ್ರ ಕಾದೋದು?

ಇದೇ ಇಷ್ಟೆಲ್ಲ ಉಂಟು ಅಂತ ಪ್ರತ್ಯಕ್ಷ ನನ್ಗೆ ಗೊತ್ತಿಲ್ಲ ಗುರುಗಳೇ. ವರದಿ ಮಾಡಿದವ ದನ ಕಾಯ್ವುವ ಅಲ್ವೊ?

ಹಾಗಾಗಿಯೇ, ವರದಿಗಾರ ಎಂಥವ? ಯಾವ ವರದಿಯನ್ನು ನಂಬ್‌ಬೇಕು ಅಂತ ಯಾರೋ ಹೇಳಿದ್ದು ನೆನಪು. ಇದು ನಾನ್ ನಂಬಿಬಿಟ್ಟದ್ದು. ನಂಬಿಬಿಟ್ಟದ್ದು. ಅವನು ಹೇಳಿದ “ಮಾರಾಜ್ರೆ ನಿಮಗೆ ದೊಡ್ಡಿತೆ? -ಅಂತ ಹೇಳ್ದ , ಅಲ್ಲ ಇನ್ನು ತಿಳೋ

ತಿಳಿಯದೆಯೋ ನಿಮಗೆ ದೊಡ್ಡಿತೆ? ಅಂದ್ರೆ ಹೆಚ್ಚಾಯ್ತು ಅಂತ ಹೇಳಿದನೋ ಯೇನ್ ಕರ್ಮವೋ, ಯೇನೇ ಆಗಲಿ, ನಾಚಿಕೆ ಬಿಟ್ ಹೇಳ್ತೇನೆ. ಯೆಲ್ಲ ಗೊತ್ತುಂಟು, ಪ್ರಯೋಗ ಮಾಡಿ ಗೊತ್ತಿಲ್ಲ ಅಂತ ನಾನು ಕೆಲವರ ಹತ್ರ ಹೇಳಿದ್ದೇನೆ. ಇನ್ನೊಂದು ಸಲ ಪ್ರಯೋಗ ಬೇರೆ ಯೆಲ್ಲಿಯಾದ್ರೂ ಮಾಡ್ತಪ್ಪ ಸಣ್ಣವೇ ಸಿಕ್‌ಲಿ ಸವಾರಿ ಮಾಡಲಿಕ್ಕೆ ಹೋಗ್ವಾ.

ಇವತ್ತು... ನಿನ್ನಲ್ಲಿ ಹೃದಯ ಬಿಚ್ಚಿ ಹೇಳ್‌ಲೋ ನಾನು?

ಈಗಿನ ರಾಜಕಾರಣಿಗಳಿಗಿದ್ದದ್ದು ಅದು ನಾನ್ ಯಾವಾತ್ತೂ ಬಿಚ್ಚು ಒಕ್ಕಣೆ... ನೀನ್ ನಮ್ಮ ಗುರು, ಆಚಾರ್ಯ, ಆ ಶಾಸ್ತ್ರ ಅಲ್ವೋ? “ಅಡಿಯ ಮುಂದಿಡೆ ಸ್ವರ್ಗ” ಅಲ್ವೋ? ಹೀಗಿರಬಹುದೋ ಅದರ ಅರ್ಥ? ಈಗ ರಾಜರು ಎಲ್ಲ ಅಶ್ವಮೇಧವನ್ನೆ ಮಾಡಿದರು ಅಂತ ಕಥೆ ಉಂಟು. ಸೈನಿಕರಿಗೆ ಹೇಳಿದ್ರೆ ಅದು “ನೋಡಿ, ನಿಮ್ಮ ಈ ಪುಣ್ಯ ಬರಬೇಕಿದ್ರೆ ಮುಂದೆ ಇಟ್ಟ ಹೆಜ್ಜೆ ಹಿಂದೆ ಇಡ್ಬೇಡಿ, ಬಡತಾಯಿ ಮಕ್ಳೇ ಸತ್ ಹೋಗಿ” ! ಹೇಳ್ಳಿಕ್ಕೆ ಬರೋದಿಲ್ಲ. ಹಾಗೆ ಯೆಲ್ಲಿಯಾದ್ರೂ ಹೇಳಿದ್ರೆ ಈ ದೊಡ್ಡ ದೊಡ್ಡ ಮನುಷ್ಯರೆಲ್ಲ ಕೆಲವರು ಹೇಳ್ತಾರಂತೆ- “ನಿಮ್ಗ್ ಅದೆಲ್ಲ ಬೇಡ. ಮತ್ತೆ? ನೀವ್ ನಮ್ಮ ಕಾಲ್ ಹಿಡ್‌ದ್ರೆ ಸಾಕು” . ನನ್ಗು ಮುಖ್ಯ ಅಲ್ಲ. ನಾನಿನ್ನೂ ಬದುಕೇಕು. ನಾನಿನ್ನೂ ಬೆಳೆಯ ಬೇಕು. ಆದ್ದರಿಂದ ಹಿಂದೆ ಹೋಗ

ಸಾರಥೀ, ಯೇನೇ ಆಗಲಿ, ನಮ್ಮ ಅರಮನೆ ಅನ್ನ, ಪಾನ, ಬದುಕಿಗೆ ನಾವ್ಯೇನೂ ಕಡಿಮೆ ಮಾಡ್ಲಿಲ್ಲಲ್ಲ ನಿನಗೆ?

ಆ ನೆನಪನ್ನಾದರೂ ಇಡ್ಕೊಂಡು ಅನ್ನದಾತನ ಕುಟುಂಬಕ್ಕೆ ಸೇರಿದ ಇವನನ್ನು ಮನೆಗೆ ಮುಟ್ಟಿಸು. ಯೇ ಸಾರಥೀ ನನ್ಗೆ ಖಂಡಿತಾ ಕೈಕಾಲ್ ನಡುಗಿ ಈಗ ನಾನ್ ಬೀಳ್ತೇನೆ.

ಯೇನೇ ಆಗಲಿ, ದಯವಿಟ್ಟು ಹಿಂದಿರುಗಿಸು. ಅಧಿಕಾರ ವಾಣಿಯಿಂದ ಈಗ ನಾನು ತಳ್ಳಿಹಾಕಿದ್ದೇನೆ ಅಂತ ಹೇಳ್ಳೇನು, ನನ್ನನ್ನು ಹಿಂದೆ ಅಲ್ಲಿಗೆ ಕರ್‍ಕೊಂಡ್ ಹೋಗ್ತವ್ರ್ ಯಾರು?

ನನ್ನ ಅಪ್ಪಯ್ಯ! ನಿನ್ನ ಬಸುರಿಂದ ಬಂದವ, ನಿನ್ ಮಗ ನಾನು. ಯೆಲಾ ಗ್ರಾಚಾರವೇ ನಾನ್ ಯಾಕ್ ಹೇಳಿದ್ದು? ನಿನ್ನಬಸುರಿಂದ ಬಂದಿದ್ದೇನೆ ಅಂತ ಯಾವ ವಿಜ್ಞಾನಿಯೂ ಒಪ್ಪಲಿಕ್ಕಿಲ್ಲ. ಇನ್ನಿವ್ನಲ್ಲಿ ಮಾತಾಡಿ ಪ್ರಯೋಜನ ಇಲ್ಲ. ಕೆಲವುಸಲ ಬದ್ಕ್ ಬೇಕಾದ್ರೆ ಮುಂದೆ ಹೋದವರೂ ಕೂಡ ನಾವ್ ಹಿಂದುಳಿದಿದ್ದೇವೆ ಅಂತ ಹೇಳಬೇಕಾಗ್ತದೆ ಅಂತ ತರ್ಕಿಸಿ, ಹಿಂದೆ ಮೆಲ್ಲನೆ ಹಾರಿ... ಅವ ಮುಂದಕ್ಕೆ ಹೋಡಿತಾನೆ ಈಗ, ಹಾರಿ ಓಡಿ ಹೋಗ್ತೇನೆ.

ತಿಳಿಯದೆಯೋ ನಿಮಗೆ ದೊಡ್ಡಿತೆ? ಅಂದ್ರೆ ಹೆಚ್ಚಾಯ್ತು ಅಂತ ಹೇಳಿದನೋ ಯೇನ್ ಕರ್ಮವೋ, ಯೇನೇ ಆಗಲಿ, ನಾಚಿಕೆ ಬಿಟ್ ಹೇಳ್ತೇನೆ. ಯೆಲ್ಲ ಗೊತ್ತುಂಟು, ಪ್ರಯೋಗ ಮಾಡಿ ಗೊತ್ತಿಲ್ಲ ಅಂತ ನಾನು ಕೆಲವರ ಹತ್ರ ಹೇಳಿದ್ದೇನೆ. ಇನ್ನೊಂದು ಸಲ ಪ್ರಯೋಗ ಬೇರೆ ಯೆಲ್ಲಿಯಾದ್ರೂ ಮಾಡ್ತಪ್ಪ ಸಣ್ಣವೇ ಸಿಕ್‌ಲಿ ಸವಾರಿ ಮಾಡಲಿಕ್ಕೆ ಹೋಗ್ಬ್ಯಾ.

ಇವತ್ತು... ನಿನ್ನಲ್ಲಿ ಹೃದಯ ಬಿಚ್ಚಿ ಹೇಳ್‌ಲೋ ನಾನು?

ಈಗಿನ ರಾಜಕಾರಣಿಗಳಿಗಿದ್ದದ್ದು ಅದು ನಾನ್ ಯಾವಾತ್ತೂ ಬಿಚ್ಚು ಒಕ್ಕಣೆ... ನೀನ್ ನಮ್ಮ ಗುರು, ಆಚಾರ್ಯ, ಆ ಶಾಸ್ತ್ರ ಅಲ್ವೋ? “ಅಡಿಯ ಮುಂದಿಡೆ ಸ್ವರ್ಗ” ಅಲ್ವೋ? ಹೀಗಿರಬಹುದೋ ಅದರ ಅರ್ಥ? ಈಗ ರಾಜರು ಎಲ್ಲ ಅಶ್ವಮೇಧವನ್ನೆ ಮಾಡಿದರು ಅಂತ ಕಥೆ ಉಂಟು. ಸೈನಿಕರಿಗೆ ಹೇಳಿದ್ರೆ ಅದು “ನೋಡಿ, ನಿಮ್ಗೆ ಈ ಪುಣ್ಯ ಬರಬೇಕಿದ್ರೆ ಮುಂದೆ ಇಟ್ಟ ಹೆಜ್ಜೆ ಹಿಂದೆ ಇಡ್ಬೇಡಿ, ಬಡತಾಯಿ ಮಕ್ಳೇ ಸತ್ ಹೋಗಿ” ! ಹೇಳ್ಳಿಕ್ಕೆ ಬರೋದಿಲ್ಲ. ಹಾಗೆ ಯೆಲ್ಲಿಯಾದ್ರೂ ಹೇಳಿದ್ರೆ ಈ ದೊಡ್ಡ ದೊಡ್ಡ ಮನುಷ್ಯರೆಲ್ಲ ಕೆಲವರು ಹೇಳ್ತಾರಂತೆ- “ನಿಮ್ಗ್ ಅದೆಲ್ಲ ಬೇಡ. ಮತ್ತೆ? ನೀವ್ ನಮ್ಮ ಕಾಲ್ ಹಿಡ್‌ದ್ರೆ ಸಾಕು” . ನನ್ಗದು ಮುಖ್ಯ ಅಲ್ಲ. ನಾನಿನ್ನೂ ಬದುಕ್ಬೇಕು. ನಾನಿನ್ನೂ ಬೆಳೆಯ ಬೇಕು. ಆದ್ದರಿಂದ ಹಿಂದೆ ಹೋಗ್ವ.

ಸಾರಥೀ, ಯೇನೇ ಆಗಲಿ, ನಮ್ಮ ಅರಮನೆ ಅನ್ನ, ಪಾನ, ಬದುಕಿಗೆ ನಾವ್ಯೇನೂ ಕಡಿಮೆ ಮಾಡ್ಲಿಲ್ಲಲ್ಲ ನಿನಗೆ?

ಆ ನೆನಪನ್ನಾದರೂ ಇಡ್ಕೊಂಡು ಅನ್ನದಾತನ ಕುಟುಂಬಕ್ಕೆ ಸೇರಿದ ಇವನನ್ನು ಮನೆಗೆ ಮುಟ್ಟಿಸು. ಯೇ ಸಾರಥೀ ನನ್ನೆ ಖಂಡಿತಾ ಕೈಕಾಲ್ ನಡುಗಿ ಈಗ ನಾನ್ ಬೀಳ್ತೇನೆ.

ಯೇನೇ ಆಗಲಿ, ದಯವಿಟ್ಟು ಹಿಂದಿರುಗಿಸು. ಅಧಿಕಾರ ವಾಣಿಯಿಂದ ಈಗ ನಾನು ತಳ್ಳಿಹಾಕಿದ್ದೇನೆ ಅಂತ ಹೇಳ್ಳೇನು, ನನ್ನನ್ನು ಹಿಂದೆ ಅಲ್ಲಿಗೆ ಕರ್‍ಕೊಂಡ್ ಹೋಗ್ತವ್ರ್ ಯಾರು?

ನನ್ನ ಅಪ್ಪಯ್ಯ! ನಿನ್ನ ಬಸುರಿಂದ ಬಂದವ, ನಿನ್ ಮಗ ನಾನು. ಯೆಲಾ ಗ್ರಾಚಾರವೇ ನಾನ್ ಯಾಕ್ ಹೇಳಿದ್ದು? ನಿನ್ನಬಸುರಿಂದ ಬಂದಿದ್ದೇನೆ ಅಂತ ಯಾವ ವಿಜ್ಞಾನಿಯೂ ಒಪ್ಪಲಿಕ್ಕಿಲ್ಲ. ಇನ್ನಿಲ್ಲಿ ಮಾತಾಡಿ ಪ್ರಯೋಜನ ಇಲ್ಲ. ಕೆಲವುಸಲ ಬದ್ಕ್ ಬೇಕಾದ್ರೆ ಮುಂದೆ ಹೋದವರೂ ಕೂಡ ನಾವ್ ಹಿಂದುಳಿದಿದ್ದೇವೆ ಅಂತ ಹೇಳಬೇಕಾಗ್ತದೆ ಅಂತ ತರ್ಕಿಸಿ, ಹಿಂದೆ ಮೆಲ್ಲನೆ ಹಾರಿ... ಅವ ಮುಂದಕ್ಕೆ ಹೋಡಿತಾನೆ ಈಗ, ಹಾರಿ ಓಡಿ ಹೋಗ್ತೇನೆ.

(ಅರ್ಜುನನೂ ಓಡಿ ಹೋಗಿ ಅವನನ್ನು ಹಿಡಿದು ತರುತ್ತಾನೆ)

ಯೆಲಾ ಗ್ರಾಚಾರವೇ, ನಾನು ಇನ್ ನಿನ್ ರಥ ಹಾರೂದಿಲ್ಲಪ್ಪ, ದಮ್ಮಯ್ಯ...

ಹಾಂ.... ಇವ ಅಲ್ಲಿಯ ಗುಪ್ತಚರನೋ ಯೇನೋ! ಇರ್ಬೇಕು. ಇರ್ಬೇಕು! ಅರ್ಜುನನ ಸಾರಥಿ ಅಂತ ಹೇಳಿದ. ಹಾಗಾದರೆ ಅಲ್ಲಿಯ ಸಂಬಂಧಿಕ ಅಂತಾಯ್ತಲ್ಲ? ಇಗ ಅವ್ರ್ ಯಾರೂ ಇಲ್ಲ. ಆಚೆಗೆ ಸೇರಿದ್ದಾನೆ. ದೊಡ್ಡ ಜನ್ರೆಲ್ಲ ಇದ್ದಾರೆ!! ಇವ ಶತ್ರು ಪಕ್ಷದವನೇ. ಇವ ಹಸ್ತಿನಾವತಿಗೆ ಸಂಬಂಧಪಟ್ಟವನೇ. ನಾನು ನಂಬಿ ಕೆಟ್ಟೆ, ಇನ್ನೀಗ ಯೇನ್ ಮಾಡೋಣ? ಇಂಥವರ ಕೈಯಿಂದ ಬದುಕಿಕೊಳ್ಳಬೇಕಾಗಿದ್ರೆ ಪಲಾಯನ ಮಾಡಿದರೆ ಬೆನ್ನಟ್ಟಿ ಹಿಡೀತಾರೆ. ಯಾರಿಗಾದ್ರೂ ಅರ್ಥಾಗ್ತಿದೆ ಇದು? ಯಾರಿದ್ದಾರೆ? ನನ್ಗೆ ನನ್ನಷ್ಟಕ್ಕೆ ಅರ್ಥಾಗ್ತದೆ. ಈಗೀಗ ನಮ್ಮೂರಿಗೆ ಇಂತವ್ರೆಲ್ಲ ಬರ್ಲಿಕ್ಕೆ ತೊಡಗಿದ್ದಾರೆ! ನಮ್ಮವರಾಗಿ ನಟಿಸಿಕೊಂಡು ಅವ್ರ ತಂದದ್ ಯೆಂಥದ್ದುಂಟು? ಗುಪ್ತಕಾರಸ್ತಾನ ಬಹುಶಃ ಇವ ಹೇಳಿದ್ದೇಕು ಕೌರವನಿಗೆ -ಅವನನ್ನು ತಂದು ಬಲಿಕೊಡ್ತೇನೆ." ಅಂದ್ರೆ ಊರ್ನವ್ರಿಗೆಲ್ಲ ಕಣ್ಣು ನನ್ಮೆಲೆ. ಯೇ, ಇಕೋ, ನೀನ್ ಯಾರೇ ಆಗು, ನೀನ್ ಹಸ್ತಿನಾವತಿಯವನೇ ಆಗು, ಅವ್ರ್ಷ್ಟು ಕೊಡ್ತವೆ ಅಂತ್ ಹೇಳಿದ್ದಾರೆ, ಅದಕ್ಕಿಂತ ಹೆಚ್ಚು ಕೊಟ್ಟೇನು.

ಹಾಗಲ್ಲ, ಇಗೋ ಸಾರಥೀ, ನಿನಗೆ ಯೇನೂ ಇಲ್‌ದಿದ್ರೆ ನನ್‌ಬಗ್ಗೆ ದಯೆಯೂ ಇಲ್ವೊ? ಕರುಣೆಯಿಲ್ವೊ?

ಇರೋದ್ಯೆಲ್ಲಿಂದ? ಅಪ್ಪನಾಗಿ ಗೊತ್ತಿಲ್ಲ. ಅಮ್ಮನಾಗಿ ಗೊತ್ತಿಲ್ಲ. ಆದ್ರವೊಂದ್ ಕೆಲಸ ಮಾಡು ನೀನೀಗ ವೊಂದೋ ನನ್ನ ತಂದೆಯ ಸ್ಥಾನ, ಪುರುಷಾವೇಷ ತಂದುಕೋ. ಇಲ್ಲ ನನ್ನ ತಾಯಿಯ ಸ್ಥಾನ, ಮಾತೃ ಆವೇಷ ತಂದುಕೋ, ಯೆರಡೂ ಅಲ್ಲದೇ ಆದ್ ವೊಂದ್ ಆವೇಷ, ಪರಕಾಯ ಪ್ರವೇಷ!

ಈಗ ನನ್ಗ ಗೊತ್ತಾಯ್ತು, ನಪುಂಸಕರಿಗೆ ದೈಹಿಕವಾದಂತಃ ಕ್ರಿಯೆ ಇಲ್ಲ ಹೊರತು, ಎಲ್ಲ ಕೃತುಶಕ್ತಿಯೂ ಅವ್ರ ಮನಸಿನಲ್ ಬಂದ್ರೆ ಯೇನೂ ಮಾಡ್ಯಾರು, ತಲೆಯನ್ನೂ ಕಡ್‌ದಾರು. ನನಗೆ ಈ ಹೊತ್ತು ಕತ್ತಲೆಯ ವೊಳಗೆ, ಅರಮನೆಗೆ ಮುಟ್ಟದೇ ಇದ್ರೆ ನನ್ ತಾಯಿ ಯೆದೆ ವೊಡೆದು ಸತ್ತಾಳು. ಶ್ರೀಮಂತ ಪುತ್ರನಾದ ನನ್ನನ್ನು ವಾದಿಸಿ ಸಿಟ್ ಬರಿಸ್ತೋ? ಆದ್ರೆ, ನನ್ ಅಭಿಮಾನವನ್ನು ಕೆಣ್‌ಬೇಡ. ಅದು ನನ್ನಲ್ಲಿ ಉಳೀಲಿ. ಅದು ಅದು ಆ ಈಗ ನನ್ನೂ ಗೊತ್ತಾಗದೆ, ಮತ್ ಮತ್ತೆ ಆ ಸಿಟ್... ಅದು ರಸಾವೇಷವಾಗೂದಪ್ಪ ನಿನ್ ಹತ್ರ ಹೇಳಿ ಸುಖ ಇಲ್ಲ. ಸಾರಥಿ, ನನ್ನಿಲ್ಲದಿದ್ದ ಉತ್ಸಾಹ ನಿನ್ ಯಾಕೆ?

ನು? ನೀನು... ಯುದ್ಧ ಮಾಡ್ತಿ, ನಾನು ಸಾರಥ್ಯ ಮಾಡಬೇಕು! ಭಾವೈಕ್ಯ ! ಹ್ಞ ಆಗಲಿ.

(ಅರ್ಜುನ ಉತ್ತರನನ್ನು ಯುಧ ಇಟ್ಟ ಸ್ಮಶಾನದ ಬನ್ನಿ ಮರದ ಹತ್ತಿರ ಕರೆದುಕೊಂಡು ಹೋಗುತ್ತಾನೆ.)

ಸುಡುಗಾಡಿಗೆ ಹೋಗೋದ್ ಯಾರು? ಬಡತಾಯಿ ಮಕ್ಕು, ಬೇಗ ಹೋಗ್ಲಿ. ಆಯ್ತು... ಬಂದ್ದಿದ್ದೇವೆ. ಸ್ಮಶಾನ! ತೋರಿಸಿದ್ದೀ ನೀನು. ಓ ಬಹಳ ಎತ್ತರಕ್ಕೆ ಬೆಳ್ದ್ ಉಂಟ್ ಅದು - ಬನ್ನಿಮರ ಹೌದು. ಓಹ್... ಅದ್ ಆಯುಧವೇ? ಆಯ್ಯೋ ಹುಚ್ಚು ಯಾರು ಸತ್ತರೆ ಸುಡುಗಾಡಿಗೆ ತರ್ಲಿಕ್ಕೆ ಜನ ಇಲ್ಲ ಅಂತ ತಿಳಿತಾರೋ ಅವ್ರ ಇಲ್ಲಿ ಬಂದೇ ಕುತ್ತಿಗೆ ನೇತಾಡ್ಸೋದ್ ಅದು ಹೆಣ ಅದು..

ಮತ್ಯಂಥದ್ದು? ಯೇನು? ಪಾಂಡವರ ಆಯುಧಗಳೋ?

ನಾವು ಉಪಯೋಗಿಸಿದರೆ ಅದು ಯಾರ್‍ಯಾರದ್ದೂ ಕದ್ದು ಉಪಯೋಗಿಸಿದೆವು ಅಂತಾದೀತೋ ಹೇಗೆ? ಹ್ಞ ಸಾರಥಿ ಮರ ಹತ್ಲಿಕ್ ಬರೋದಿಲ್ಲ.

ಯೇನು? ನನ್ನನ್ನು ಏರಿಸ್ಲಿಕ್ಕೆ ನೀನು ಕೈಕೊಡ್ತೀಯಲ್ಲ? ಹಾಗಾದರೆ ಮೇಲೆ ಹೋತ್ತೇನೆ.

ಆದ್ರೆ ವೊಂದು, ಅಯ್ಯಾ ಪರಮಪುರುಷ ಮಹನೀಯಾ, ನೀನ್ ಯಾರು? ದಯವಿಟ್ಟು ಅಪ್ಪಣೆಯಾಗೋಕು.

|ಮಧು-ಮಾಧವಿ ಆದಿತಾಳ ಆರೋ ಸಾರಥಿ ನೀನು ಪೇಳಿನ್ನು ತನಗೆ | ಶೂರ

ನೀನಹುದೆಣೆಗಾಣೆ ನಾ ನಿನಗೆ ||ಪ| ಧುರಧೀರರಹ ಪಾಂಡವರ

ಶಸ್ತ್ರಗಳನು | ಅರಿವೆಯೆಂತೆ ನೀನು | ಮರೆಯೋಳಿರ್ಪುದನು || ೧೦೨ |

ಮಹಾಪುರುಷನೇ ಅಷ್ಟು ಹುಚ್ಚನೋ ನಾನು- ಮೂರ್ಖನೋ? ಅರ್ಜುನದ್ದದು ಹೌದು ಅಂತ ಕೃತಿಯಿಂದ ನನ್ಗ್ ಗೊತ್ತಾಯ್ತು. ಈ ಅರ್ಜುನನದ್ದಾದಂಥ ದೈವದತ್ತವಾದಂತಹ, ಅಗ್ನಿದತ್ತವಾದಂತಹ ಆಯುಧ ಅರ್ಜುನನ ಕೈಗಲ್ಲದೇ ಮತ್ತೊಬ್ಬರ ಕೈಗೆ ಬರಲಾರದು. ಅರ್ಜುನನ ಹೆಸರನ್ನು ನಾನು ಉಚ್ಚರಿಸಿದಾಗ ನನ್ನ ಕೈಗ್ ಬಂತಲ್ಲ. ಇಷ್ಟು ಗೊತ್ತಿದ್ ಮೇಲೆ ಮಹಾಪುರುಷ, ನನ್ನನ್ನು ವಂಚಿಸ್ಬೇಡ. ನನ್ನ ಹೃದಯ ಪರಿಶುದ್ಧವಾದದ್ದು. ಅರ್ಜುನನೇ ನೀನಿರಬಹುದೋ ಎಂಬ ಗೌರವದಿಂದ ಹೆದರಿ ಹೇಳೋದು. ನೀನ್ ಯಾರು? ದಮ್ಮಯ್ಯ ಹೇಳು.

'ಪಾರ್ಥ ಏವ ಧನುರ್ಧರಃ! ದ್ರೋಣಾಚಾರ್ಯರ ಕರಕಮಲಸಂಜಾತ, ನಮೋ ನಮಃ ಅಭಿನವ ಶಸ್ತ್ರದೇವತೆ! ಧನ್ಯನಾದೆ. ಧನ್ಯನಾದೆ. ಬಾಕಿ ಇದ್ದವ್ರೆಲ್ಲ ಎಲ್ಲಿ ಹೋಗಿದ್ದಾರೆ? ಹೋ ಯುಧಿಷ್ಠಿರ ... ಹ್ಞ ಕಂಕಸನ್ಯಾಸಿ! ನಾನ್ ಆಲೋಚನೆ ಮಾಡಿದ್ದೇನೆ, ನಮ್ಮ ಅನ್ನ ತಿನ್ನುವ ನಮ್ಮ ಅಡುಗೆ ಭಟ್ಟ ಇಷ್ಟೆ ಮಾಡಿದ ! ಇದೆ ಇದೆ ಇದೆಲ್ಲ ಛದ್ಮವೇಷ! ಅಲ್ವೊ? ಇದು ಕೌರವನ ಕಣ್ ತಪ್ಪಿಸ್ಲಿಕ್ಕೆ ಅಜ್ಞಾತ.

ಈಗ ನನಗೆ ಸ್ಪಷ್ಟ ಚಿತ್ರಣ ಬಂತು. ಹೇಗೆ ಬಂತು? ದಯವಿಟ್ಟು ನನ್ಗೇ ಬಿಡು ಅದನ್ನು, ನಾ ಹೇಳ್ತೇನೆ ತಪ್ಪಾದ್ರೆ ನೀನು ತಿದ್ದು, ಅಹ್ಞ.. ಗೋಪಾಲಕ! ಅಶ್ವಪಾಲಕ! ಆಗಿ ಬಂದವು ಈ ಪಾರ್ಥನ ತಮ್ಮಂದಿರು. ಬಹುಶಃ ಈ ಗೋಪಾಲಕರ ಮಧ್ಯದಲ್ಲಿದ್ದ ಮುಖಂಡ ಅವನಿಗೆ ಈ ಪುಣ್ಯಾತ್ಮನೇ ಸೂಚನೆ ಕೊಟ್ಟಿದ್ದಾನೋ ಯೇನೋ! ನೀವೊಂದ್ ಉತ್ತರಕುಮಾರನನ್ನು ಹೊರಡಿಸುವಹಾಗೆ ಮಾಡು, ಹಾಗಾದರೆ ಇದು ಮಹಾಪುರುಷರ ಅಜ್ಞಾತತತ್ತ್ವ, ಮಹಾಪುರುಷರ ಛದ್ಮವೇಷತತ್ತ್ವ, ಇದು ಊರ್ನವ್ರು ಉಪದ್ರ ಕೊಡೋದಕ್ಕಾಗಿ ಬೂದಿ ಮುಚ್ಚಿದ ಕೆಂಡ, ಅರ್ಜುನನೇ! ಯುಧಿಷ್ಠಿರ, ಭೀಮ ನಕುಲ, ಸಹದೇವ್ರು ಇದು ನಾನು ತಂದೆಯವ್ರಿಗೆ ಬಿಡ್ತೇನೆ. ಯಾಕೆ? ನಾವ್ ಅನ್ನಹಾಕಿದ್ದು ಸಾರ್ಥಕ ಆಯ್ತು. ಆದ್ದರಿಂದ, ನಿನ್ನ ಸಾರಥ್ಯ ನನಗೆ ಕೀಳ್? ಧನಂಜಯನ ಸಾರಥ್ಯ ಕೀಳ್?

ಅಲ್ಲ, ಇದು ನನಗೆ ಪಾಠ ಪ್ರಯೋಗ, ಯುದ್ಧದ ಪ್ರಯೋಗ ಹೇಗೆ ಅಂತ ಪಾಠ ಹೇಳೋದರ ಮೂಲಕ ಸಾರಥ್ಯದ ಪಾಠದಲ್ಲಿ ನಾನು ಯೆಲ್ಲಿಯವರೆಗೆ ಮುಟ್ಟಿದ್ದೇನೆ ಅಂತ ನೀನು ಪರಾಂಭರಿಸುವುದಕ್ಕೆ ಬೇಕಾಗಿ, ನನ್ನ ಭಾಗ್ಯೋದಯ ಇದು. ನಿನಗೊಬ್ಬ ಮಗನಿದ್ದಾನಂತೆ ಅಭಿಮನ್ಯು, ಅವನ ವೊಟ್ಟಿಗೆ ನನಗೆ ಸ್ಥಾನಕೊಟ್ಟು, ಗುರು, ಪರಮಾಚಾರ್ಯ ಆಗಿ ಕೈ ಹಿಡ್ದು ಉದ್ಧರಿಸ್ಬೇಕು. ಈಗ ಯುದ್ಧಕ್ ಹೋಗ್ತನೋ?

ಯುಧಿಷ್ಠಿರ... ಹೌದಂತೆ, ನನ್ನ ಅಮ್ಮ ಹೇಳ್ತಿದ್ದಳು. “ಆ ಕೀಚಕನ ಮರಣಕ್ಕೆ ಕಾರಣಳಾದವಳು ಸೈರಂಧ್ರೀ, ಮತ್ತೆ ಕೀಚಕನ ತಮ್ಮಂದಿರೆಲ್ಲ ಅವಳನ್ನು ಜೀವಂತ ಸುಡ್ಲಿಕ್ ಹೋದಾವಗ ಅದೇ ಅಡಿಗೆ ಭಟ್ಟ ಬಂದು ಹೊಡ್ದು ಕೊಂದದ್ದು ಮಗ. ಅವಳು ಹೇಳಿದ್ದಾಳಂತೆ, ನನಗೆ ಐವರು ಗಂಧರ್ವ ಪತಿಗಳಿದ್ದಾರೆ. ನಿನ್ನ ಗಂಧರ್ವ ಪತಿಗಳು ಈಗ್ ಯೆಲ್ಲಿದ್ದಾರೆ? ಅವರ ಅಜ್ಞಾತವಾಗಿದ್ದಾರೆ. ಹಾಗಾದರೆ ನೀ ಇಲ್ಲಿಗ್ ಯಾಕ್ ಬಂದೆ? ನನ್ನ ಗಂಡಂದಿರು ಅಜ್ಞಾತರಾದ್ಮೇಲೆ ನಾನು ಪಾಂಡವರ ಮನೆ ಕೆಲಸದವಳಾಗಿದ್ದೆ. ಅವ್ರ್ ಯೆಲ್ಲಿ ಹೋದ್ರು? ಅವು ಯೆಲ್ಲಿಗೋ ಹೋದ್ರು. ಅಜ್ಞಾತ ವಾಸಕ್ಕೆ... ಪಾಂಡವ್ರನ್ ಬಿಟ್ರೆ ಮತ್ತೆ ಮನೆತ ವೋಳ್ಳೇವ್ರು ನೀವೇ” , ಸುಳ್ ಹೇಳ್ಲಿಲ್ಲ. ಹಾಗಂತ ವೊಳಗೆ ಸತ್ಯದ ತಿರುಳನ್ ಇಡ್ಕೊಂಡಳು. ಸ್ವಲ್ಪ ಭಾವವ್ಯತ್ಯಾಸ ಮಾಡಿದೆ ಅಯ್ಯೋ, ನಿಮ್ಮಂಥ ಸುಸಂಸ್ಕೃತರು ಸುಳ್ಳನ್ನು ಹೇಳೋದಿದ್ರೂ ಹೊರಗೆ, ವೊಳಗೆ ಸತ್ಯದ ಬುಡ ಗೊತ್ತಾಯ್ತು ಧರ್ಮಾತ್ಮರು ಪಾಂಡವರು. ದೇವತಾಂಶ ಸಂಭೂತರು ಪಾಂಡವರು, ಹುಡುಗಾಟಿಕೆಯಲ್ಲಿ ಹುಚ್ಚು

ಬುದ್ಧಿಯಿಂದ ಯೇನೇನೋ ಯೇನೇನೋ ಹೇಳಿಬಿಟ್ಟೆ. ಹೇಳಿದ್ದಕ್ಕೆಲ್ಲ ಪಶ್ಚಾತ್ತಾಪ ಇಲ್ಲ. ನಿನ್ನ ಮುಂದೆ ಹೇಳಿಬಿಟ್ನಲ್ಲ ಅಂತ ನನಗೆ ನನ್ನನ್ನು ಕ್ಷಮಿಸ್ಬೇಕು.

ನಾನು ಹೇಡಿ... ಅದ್ ಬೇಡ ಈಗ, ಉತ್ಸಾಹದಿಂದಲೇ ಹೇಳಿದ್ದು, ಯುದ್ಧಮಾಡ್ಯೇನು. ಆದ್ರೆ ಪರಿಸರಯೆಲ್ಲ ನೋಡ್ದಾಗ ಬೇಡ ಅಂತ ತೋರಿತು. ಅಪ್ಪಣೆ ಯಾದ್ರೆ ನಾನೇ ಮಾಡ್ಯೇನು ಯುದ್ಧ. ಅಲ್ಲ ನೀವೇ ಮಾಡ್ತೀರಿ ಅಂತಾದ್ರೆ, ನೀವು ಪ್ರಕಟಗೊಳ್ಳುವುದಕ್ಕೆ ಯೇನಾದ್ರೂ ನಿಮಗೆ ಸದುದ್ದೇಶ ಇದ್ರೆ, ನಾನು ಸಾರಥ್ಯವನ್ನೂ ಮಾಡ್ತೇನೆ.

ಹಾಗಾದ್ರೆ ಇನ್ನು ವೇಗವೇ. ಯೆಲ್ಲಿಗೆ? ಹಸ್ತಿನಾವತಿಯವರೆಗೆ ಹೋಗಿ, ಆ ಕೌರವಾದಿಗಳನ್ನೆಲ್ಲ ಇಳಿಸಿ, ಪಾಂಡವರಿಗೆ ಪಟ್ಟಾಭೀಷೇಚನದ ವೈಭವವನ್ನು ನೋಡಿ ಬರುವಲ್ಲಿಯವರೆಗೂ ನಾನು ಸಿದ್ಧ. ಇಲ್ಲದಿದ್ರೆ ಅದ್ ಆಗುವುದರವರೆಗೆ ನಿಮ್ಮ ಪೊಡನಾಡಿ ಯಾಗಿರುವುದಕ್ಕೂ ಸಿದ್ಧ. ಬಹಳ ತೃಪ್ತಿಯಾಯ್ತು ನಾನು ಪೂರ್ಣನಾಗಿದ್ದೇನೆ. ಅಂದ್ರೆ ಯುದ್ಧ ಬೇಗ ಮುಗಿಸ್ಬ, ನಾವು ಯೇನೇನೆಲ್ಲ ಈಗ ಹೇಳಿಕೊಂಡಿದ್ದೇವೋ ಅದನ್ನು ಕೃತಿಯ ಮೂಲಕ ಮುಗಿಸ್ಬ ಕೃತಿಯ ಮೂಲಕ ಮುಗಿಸಿದ್ದನ್ನು ಹೇಳ್ ಬೇಕಾದ್ದಿಲ್ಲ.



## ೧೭ ಸಮರ ಸನ್ನಾಹ

### ಕೌರವ

ಸಾಂಗತ್ಯ-ರೂಪಕ ಚರಣಾಬ್ದದೆಡೆಯಲ್ಲಿ ಕೈಮುಗಿದು ಪಾರ್ಥ ನಿಂ ದಿರಲು

ಗೋವಳ ರಾಯನೀತ | ಅರಸುಗಳ್ ತಾವೆಂದು ಮೌಳಿಯ ಬಳಿಯಲ್ಲಿ

ಕುರುಭೂಪ ಕುಳ್ಳಿರ್ದನಾಗ || ೧೦೩ |

ಅವಸರವಸರವಾಗಿ ಹಸ್ತಿನಾವತಿಯಿಂದ ಹೊರಟೆ, ಎಲ್ಲಿಗೆ ಅಂತ ನನ್ನ ಆಪ್ತರಿಗೆ ಮಾತ್ರ ಹೇಳಿದ್ದೇನೆಯೇ ಹೊರತು ಬಹಿರಂಗಗೊಳಿಸಲಿಲ್ಲ. ಕಾರಣ ಇಷ್ಟೆ – ರಾಜಕಾರಣ, ರಾಜಕಾರಣ ಈಗ ಎಲ್ಲಿಗೆ ಮುಟ್ಟದೆ ಅಂತಂದ್ರೆ ಯಾರನ್ನೂ ಯಾರೂ ನಂಬುವ ಹಾಗಿಲ್ಲ. ಆದರೆ ನನ್ನ ಮಟ್ಟಿಗೆ ಹೇಳುವದಿದ್ರೆ, ಯಾವನು ಅಧಿಕಾರಾ ರೂಢನಾಗ್ತಾನೆ ಅವನಿಗೆ ಅಡ್ಡಕಾಲು ಇಡುವುದೇ ರಾಜಕಾರಣ ಅಂತ ಆಗಿ ಹೋಗಿದೆ. ಮೊನ್ನೆ ಮೊನ್ನೆವರೆಗೆ ಎಲ್ಲಾ ಸ್ತಬ್ಧರಾಗಿದ್ದವರು ಈ ಮತ್ಸನಗರದವರು, ಈ ಪಾಂಚಾಲರು, ಈ ಯಾದವರು, ಈಗ ಹಾಗಲ್ಲಾ, ಮತ್ತೆ? ಇಲ್ಲದಿದ್ದರೆ ಉಂಟೋ? ಉತ್ತರೆಯ ಮದುವೆಯ ಮಂಟಪವು ಕೂಡ ರಾಜಕಾರಣದ, ಗುಪ್ತಾಲೋಚನೆಯ ಸಭೆಯಾಗಿತ್ತಂತೆ! ಒಬ್ಬೊಬ್ಬರು ಒಂದೊಂದು ಅಭಿಪ್ರಾಯವನ್ನು ಮಂಡಿಸಿದ್ದರಂತೆ. ಕೃಷ್ಣ ಮಾತ್ರ ಅವನ ಸ್ವಷ್ಟಾಭಿಪ್ರಾಯ ಏನು ಅಂತ ಹೇಳಲಿಲ್ಲಂತೆ, ಅದು ಹೊಸ ರಾಜಕಾರಣ. ಬಾಕಿದ್ದವರು ಏನಾದರೂ ತೋರಿದ್ದನ್ನು ಹೇಳ್ತಾರೆ. ಅವ ಅಲ್ಲಿ ಏನು ಹೇಳಿದನಂತೆ? “ಏನೇ ಆಗಲಿ, ಒಬ್ಬ ನಿಯೋಗಿಯನ್ನು ಅಲ್ಲಿಗೆ ಅಟ್ಟೋಣ. ಕೌರವನಲ್ಲಿ ಅರ್ಧ ರಾಜ್ಯವನ್ನು ಕೇಳೋಣ. ಕೊಟ್ಟರಾಯಿತಲ್ಲ. ಕೊಡದಿದ್ದರೆ ನಾವೆಲ್ಲ ಇದ್ದೇವಲ್ಲ! ಇದು ಇಡೀ ನನ್ನ ತಲೆ ಕೆಡಿಸಿದ್ದು, ಈ ಕೃಷ್ಣಪ್ರವೇಶ ಆಗುವಲ್ಲಿವರೆಗೆ ನನಗೆ ವಿಶ್ವಾಸವಿತ್ತು ನಾನೇ ರಾಜಾಧಿರಾಜನಾಗೇನೆ ಅಂತ. ಏನು ಮಾಡೋಣ! ಹೆಣ್ಣು ಕೊಟ್ಟ ಮಾವ ನಮಗೆ ಮಾವ, ಇಲ್ಲಿಗೆ ಹೆಣ್ಣು ಕೊಟ್ಟವ ಶಕುನಿ. ಅಗೋಳ್ಳಿ, ಈಗ ಆ ಮಾವ ಹೋಗಿ ಹೆಣ್ಣು ಕೊಟ್ಟ ಭಾವ ತಲೆ ಎತ್ತಿದ್ದಾನೆ. ಯತಾರ್ಥ ಹೇಳೋದಿದ್ರೆ ಶಕುನಿ ಒಳ್ಳೆಯ ರಾಜಕಾರಣಿ, ಆದರೆ ಅದಕ್ಕೊಂದು ಸ್ಪಷ್ಟವಾದಂತಹ ಮಾರ್ಗ ಉಂಟು. ನನ್ನ ದೃಷ್ಟಿಯಲ್ಲಿ ನೂರು ಶಕುನಿಯರು ಸೇರಿದರೂ ಒಬ್ಬ ಕೃಷ್ಣನಾಗಲಿಕ್ಕಿಲ್ಲ. ಸಿಕ್ಕಿ ಬಿದ್ದಿದ್ದು ನಾನಲ್ಲಿ, ಅಲ್ಲಿ. ಇವನನ್ನು ಏನು ಮಾಡಿಯಾದರೂ ಒಂದೋ ನಮ್ಮ ಸಹಾಯಕ್ಕೆ ತಕ್ಕೊಳ್ಳಬೇಕು. ಇಲ್ಲದಿದ್ದರೆ ಅವನು ಅಲಿಪ್ತಧೋರಣೆಯನ್ನು ಸಾರುವವನಾಗಿ, ಮೂಲೆಯಲ್ಲಿ ಎಲ್ಲಾದರೂ ಕೂತುಕೊಳ್ಳಬೇಕು. ಇಲ್ಲದಿದ್ದರೆ ಈವರೆಗೆ ಮಾಡಿದ್ದೆಲ್ಲಾ ನೀರಿನ ಹೋಮವಾಗ್ತಿದೆ ಅಂತ, ಅವಸರಕ್ಕೆ ಬಂದೆ. ದ್ವಾರಾವತಿಗೆ ಬಂದರೆ ಶ್ರೀಕೃಷ್ಣ ಶಯ್ಯಾಗಾರದಲ್ಲಿದ್ದಾನೆಂತ ಹೇಳಿದರು. ಆದರೆ ಒಂದುಂಟು, ಶ್ರೀಕೃಷ್ಣ ಯಾವಾಗೂ ಹೇಳೊದುಂಟು “ನಾನಂದ್ರೇನು ತೆರೆದ ಪುಸ್ತಕ” - ಹಾಗೆ, ಎಲ್ಲ ಬಾಗಿಲು ತೆರೆದಿಟ್ಟಿದ್ದಾನೆ. ಅವಸರವಾಗಿ ಬಂದಿದ್ದೇನೆ. ಛೇ ಸಿಕ್ಕಿಬಿದ್ದೆ, ಇವ ಈಗ ಮಲಗಿ ನಿದ್ರಿಸಿದ್ದಾನೆ. ನಾನೇ ಆದರೆ ಸಲುಗೆಯಿಂದ ಎಬ್ಬಿಸಬಹುದು. ಇಲ್ಲಿ ಇವನೂ ಇದ್ದಾನೆ. ಮನೆ ಅಳಿಯ. ಅವನ

ಮುಂದೆ ನಾನು ಶ್ರೀಕೃಷ್ಣನನು ಎಬ್ಬಿಸಿದರೆ? ಅಂತೂ ಬಂದಮೇಲೆ ಆ ಕೃಷ್ಣ ಎದ್ದು ವಿಚಾರ ವಿನಿಮಯ ಮಾಡದೇ ಹಿಂದೆ ಹೋಗುವದಕ್ಕಾಗೋದಿಲ್ಲ. ನಮ್ಮಂತವರಿಗೆ ಆಗಾಗ ಬಂದು, ಆಗಾಗ ಎಲ್ಲಾ ಸಂಪರ್ಕ ಇಟ್ಟುಕೊಳ್ಳೋದಕ್ಕೆ ಕಷ್ಟಸಾಧ್ಯವಾಗ್ತಿದೆ. ಏನೇ ಆಗಲಿ ಹ್ಹಾ! ಪಾದ ಮೂಲೆಯಲ್ಲಿ ನಿಂತಿದ್ದಾನೆ. ಅಭ್ಯಾಸವೋ ಏನೋ? ಅಭ್ಯಾಸ ಅಂತಲ್ಲ. ವಯಸ್ಸಿನಲ್ಲಿ ಕೃಷ್ಣನಿಗೆ ಒಂದು ನಾಲ್ಕು ದಿವಸಕ್ಕೆ ಅವ ಸಣ್ಣವನು. ನಾನು ಕೃಷ್ಣನಿಗೂ ಮೊದಲು ಹುಟ್ಟಿದವ, ಸ್ಥಾನದಲ್ಲಿಯೂ ಜೇಷ್ಠತ್ವ ನನಗಿದೆ. ಇದೋ ಶ್ರೀಪಾರ್ಶ್ವದಲ್ಲಿ ಒಂದು ಆಸನ ಇರಿಸಲ್ಪಟ್ಟಿದೆ. ಕೂತುಕೊಳ್ತೇನೆ. ಕೃಷ್ಣ ಏಳಲಿ.

ಕೃಷ್ಣ ಯೆದ್ದನಲ್ಲ...! ಶ್ರೀಕೃಷ್ಣಾ, ಇವೆಲ್ಲವೂ ಬೇಕಾದದ್ದೇ. ಉಪಚಾರ ಅಂತ ಇದಕ್ಕೆ ಹೆಸರು. ಉಪಚಾರ ಕ್ರಿಯಾ ರೂಪದಿಂದ ಬರಬೇಕಿದ್ದರೆ, ಅದು ಕೇವಲ ಕ್ರಿಯೆ ಆಗ್ತದೆ. ಶಬ್ದ ರೂಪದಿಂದ ಬರಬೇಕಿದ್ರೆ, ಅದು ಹೃದಯಸ್ಪರ್ಶಿಯಾಗ್ತದೆ. ಆದಕಾರಣ ಉಪಚಾರಕ್ಕೆ ಏನೂ ಕಡಿಮೆಯಿಲ್ಲ. ಇನ್ನು, ಒಂದು ಕರೆಯಿಲ್ಲದೇ ನಮ್ಮ ಮನೆ ಬಾಗಿಲಿಗೆ ಯಾರು ಬಾರೆ, ಅವರು ನಮಗೆ ಅತ್ಯಂತ ಪ್ರಿಯರು ಅಂತ ಅರ್ಥ. ನಿನ್ನ ಮುಖದಿಂದ ನೀವು ಯಾಕೆ ಬಂದ್ರಿ? ಎಂಬ ಪ್ರಶ್ನೆ ಯಾವಾಗ ಬಂದೀತು, ಯಾವಾಗ ಬಂದಿತು? ಅಂತ ಕಾಯ್ತಾ ನಾನಿದ್ರೆ ನಿನ್ನ ಔಪಚಾರಿಕ ಮಾತುಗಳೇ ಬಹಳ ದೀರ್ಘವಾಗಿ ಬಂತು. ಇನ್ನು ಏನು ಕೊಟ್ಟರೂ ಏನು ಬಿಟ್ಟರೂ ಅದಕ್ಕೆ ಅರ್ಥ ಅಷ್ಟೆ ತಾನೆ? ಆದ್ದರಿಂದ ಒಂದು ಮಾತು ಕೇಳಬಾರದೋ- “ಈಗ ಅಪರೂಪ” ಓಹೋ ಆಶ್ಚರ್ಯ ಆಯ್ಕೆ ಇಲ್ವೋ? ನಾವೇನು? ಮಾತಾಡುವ ವ್ಯಕ್ತಿಗಳು ಏನು ಬಂದಿದ್ದು ಕೇಳಿದರೆ, ಬಹಳ ಸುಲಭದಲ್ಲಿ ಉತ್ತರ. ಬರಬೇಕಾದವರು ಕರೆಗಾಗಿ ಕಾಯಬೇಕಾದವರಲ್ಲ. ಅದೇ ಅಲ್ಲೊ ಈಗ? ಮಾತು ನುಂಗಿದರೆ ರಾಜಕಾರಣದಲ್ಲಿ ಮಹತ್ವ ಇಲ್ಲ. ಬಿಚ್ಚು ಒಕ್ಕಣೆಯಲ್ಲಿ ಮಾತಾಡಬೇಕಾಗ್ತದೆ. ಆದಕಾರಣ ಇಲ್ಲಿ ನಿರ್ವಂಚನೆ.

ಶ್ರೀಕೃಷ್ಣಾ, ಧ್ವನಿಪೂರ್ಣವಾಗಿ ನಾನು ಒಂದು ಮಾತನ್ನು ಹೇಳಿದೆ. ಕೌರವರು ಪಾಂಡವರು ಒಂದಾಗುವದಕ್ಕೆ ಸಾಧ್ಯವೇ ಇಲ್ಲಾ ಅಂತ. ಒಂದು ಸಮಸ್ಯೆ ಉಂಟಲ್ಲ. ನಾನು ಏನು ಉತ್ತರಿಸಿದೆ ಕೃಷ್ಣನ ಸನ್ನಿಧಿಯಲ್ಲಿ? ಸಾಧ್ಯ ಅಂತ. ಯಾಕೆ ಕೃಷ್ಣನ ಸನ್ನಿಧಿಯಲ್ಲಿ ಸಾಧ್ಯ? ನಾವು ಪುರಾಣದಲ್ಲಿ ಕೇಳಿದ್ದೇವೆ. ವೈಕುಂಠವಾಸಿಯಾದ ಶ್ರೀಮನ್ನಾರಾಯಣ ಇದ್ದಾನಂತೆ. ಅವನನ್ನು ಸೇರಿದಾವಾಗ ಗರುಡ ಮತ್ತು ಸರ್ಪ ಎರಡೂ ಅವನಿಗೆ ಅಧೀನವಾಗುತ್ತದೆಯೆ ಹೊರತು ತಮ್ಮ ಸ್ವಾಧೀನದಲ್ಲಿದ್ದುಕೊಂಡು, ಆ ಜಾತಿ ವೈರವನ್ನು ಅವು ಮರೀತಾವೆ ಅಂತ ಒಂದು ಪ್ರತೀತಿ ವರ್ತಮಾನ ಕಾಲದಲ್ಲಿ ಕೃಷ್ಣ ಅಂತದ್ರೆ ಹಾಗೆ, ನೀನೊಂದು ರಸದ ಘಟ್ಟಿ, ಯಾವ ವಿರಸ ಇದ್ದರೂ, ನಿನ್ನಲ್ಲಿ ಬಂದಾವಾಗ ಅದು ಸಮರಸವಾಗಬೇಕು ಅಂತ ನಮ್ಮದೂ ಸಂಕಲ್ಪ. ಮುಖ್ಯ ನೀನೀಗ ಆ ಪಾತ್ರದ ಆವೇಶಗೊಳ್ಳಬೇಕು. ಯಾವ ಪಾತ್ರದ ಆವೇಶ? ಆ ಅಭೇದ ಜ್ಞಾನದ, ಕೇವಲ ವಿಶಾಲ ದೃಷ್ಟಿಯ ಆವೇಶ. ಈ ದೃಷ್ಟಿಯನ್ನು ಮುಂದಿಟ್ಟು ನೋಡುವಾಗ ಕೌರವರೇನು? ಯಾದವರೇನು? ಪಾಂಡವರೇನು?

ಯಾರು ಮಿತ್ರರು? ಯಾರು ಶತ್ರುಗಳು? ಆದ ಕಾರಣ ಮಧ್ಯಸ್ಥನಾಗಿದ್ದಂತಹ ನಿನ್ನಲ್ಲಿ ನಾನು ಹೇಳೋದು, ನಾರಾಯಣನ ಸನ್ನಿಧಾನದಲ್ಲಿಯಾದರೂ ಗರುಡ ಸರ್ಪ ವಿರೋಧವನ್ನು ಬಿಟ್ಟಿದೆಯೇ ಹೊರತು, ಗರುಡ ತನ್ನಾಕೃತಿಯನ್ನು ಬಿಟ್ಟುಕೊಡಲಿಲ್ಲ. ಸರ್ಪ ತನ್ನಾಕೃತಿಯನ್ನು ಬಿಟ್ಟುಕೊಡಲಿಲ್ಲ, ಸ್ವಂತಿಕೆಯನ್ನು ಬಿಟ್ಟು ಕೊಡಲಿಲ್ಲ. ನಾರಾಯಣನಿಗೆ ಗೊತ್ತಿತ್ತು ಸರ್ಪವನ್ನು ಹೇಗೆ ಇರಿಸಿಕೊಳ್ಳಬೇಕು? ಗರುಡನನ್ನು ಹೇಗೆ ಉಪಯೋಗಿಸಬೇಕು ಅಂತ. ಈ ನ್ಯಾಯೇನ ನಾನು ಈಗ ನಿನ್ನಲ್ಲಿ ಕೇಳೋದು...

ಕೌರವರು ಪಾಂಡವರಲ್ಲಿ ರಾಜ್ಯವನ್ನು ಯಾರಾಳಬೇಕು? ಯಾರು ರಾಜ್ಯದ ಆಳ್ವಿಕೆಗೆ ಒಳಪಟ್ಟು, ಪ್ರಜೆಗಳಾಗಬೇಕು? ಇದನ್ನು ಸಂಪೂರ್ಣ ಮನನ ಮಾಡಿದವ ನೀನು. ಕ್ಷತ್ರಿಯೋಚಿತವಾಗಿ ನಾನೊಂದು ತೀರ್ಮಾನಕ್ಕೆ ಬಂದಿದ್ದೇನೆ.

ಸಾಂಗತ್ಯ-ರೂಪಕ ಇಳೆಗಾಗಿ ಪಾರ್ಥಿವ ಪಂಥಕೋಸುಗವಿಂದು | ಕಲಹಗೆಯೆವು

ಭೂದೇವತೆಯು || ಬಳಿಕಾರ ಕರ್ಯ್ಸೇರುವಳೋ ನೀನೆ ಬಲ್ಲೆನೀ

ಬಲವಾಗಬೇಕುಭಯರಿಗೆ || ೧೦೪ |

ಶ್ರೀಕೃಷ್ಣಾ, ಹಸ್ತಿನಾವತಿಯ ಸಿಂಹಾಸನ ಇನ್ನೂ ನನ್ನ ಸ್ವಾಧೀನವೇ, ಚಕ್ರವರ್ತಿತ್ವದ ಎಲ್ಲಾ ಲಾಂಛನಕ್ಕೂ ಒಡೆಯ ನಾನೇ, ಪಾಂಡವರು ದ್ಯೂತದಲ್ಲಿ ತಮ್ಮದೇನುಂಟು ದಾಯಭಾಗ ಕಳಕೊಂಡವರೇ. ಈಗ ಎಲ್ಲಿಗೆ ಬಂದದೆ ಅಂತಂದ್ರೆ ಈಗ ಆಧಿಪತ್ಯ ಯಾರಿಗೆ? ಇದು ನಾನಿಟ್ಟ ಸಮಸ್ಯೆ. ಪಾಂಡವರಿಗೆ ಈಗಲೂ ಪಾಲು ಸಿಕ್ಕಿದರೆ ಸಾಕು ಅಂತುಂಟು ಇದಕ್ಕೆ ನನ್ನ ಒಪ್ಪಿಗೆ ಇಲ್ಲ. ಆದಕಾರಣ ಅಖಂಡ ಸಾಮ್ರಾಜ್ಯಕ್ಕೆ ಆಧೀಶ ಒಬ್ಬನಾಗಬೇಕು. ನಾವು ಸಿಂಹಾಸನದಲ್ಲಿ ಇರುವುದು ಕೇವಲ ನಮಗಾಗಿ ಮಾತ್ರ ಅಲ್ಲ. ಪ್ರಜೆಗಳಿಗೂ ಅವರ ಯೋಗಕ್ಷೇಮ ಚಿಂತನೆಗೂ, ಈ ಎರಡು ಪ್ರಭುತ್ವ ಬಂದಾವಾಗ ಅವನ ಮನೋಧರ್ಮ, ಇವನ ಮನೋಧರ್ಮ ಭಿನ್ನವಾಗುವುದು. ಇಲ್ಲಾ ಅಂತಾದರೆ ಅವರು ನಮಗೆ ಆಶ್ರಿತರಾಗಿರಬೇಕು. ಒಂದೇ ಅರಮನೆಯಲ್ಲಿ ಹುಟ್ಟಿದ ನಾವು ಕೌರವರು, ಪಾಂಡವರು ಇದರಲ್ಲಿ ಯಾರು ಯಾರಿಗೆ ಆಶ್ರಿತರಾಗಬೇಕು ಎಂಬುದೇ ಸಮಸ್ಯೆ. ಕೃಷ್ಣಾ, ಸಮಸ್ಯೆ ಬೇಡ. ಇದು ಕೆದಕಿದಷ್ಟು ಮತ್ತೂ ಮತ್ತೂ ಪ್ರಶ್ನೆಗಳನ್ನು ಹುಟ್ಟಿಸ್ತಾ ಹೋಗ್ತಿದೆ. ಒಂದು ಹೊಸ ಅಧ್ಯಾಯವನ್ನು ಪ್ರಾರಂಭ ಮಾಡೋಣ ಹೇಗೆ? ಗೆದ್ದವರಿಗೆ ರಾಜ್ಯ. ಈ ಮೊದಲೂ ಹಾಗೆ ಪ್ರಥಮ ಸಾಮ್ರಾಟ ಯಾವನಾಗಿ ಇದ್ದನೋ, ಅವನು ಕ್ಷತ್ರಿಯೋಚಿತವಾದಂತಹ ಹೋರಾಟದಿಂದ ಎಲ್ಲರನ್ನೂ ಅಧೀನಕ್ಕೆ ತಂದು ಆಳಿದವ. ಆನಂತರ ಪರಂಪರೆ ಇನ್ನೊಂದು, ಮತ್ತೊಂದು, ಮಗದೊಂದು ಬಂತು. ನಾವು ಮತ್ತೊಮ್ಮೆ ಮರಳಿ ಅಲ್ಲಿಗೆ ಹೋಗೋಣ. ಒಂದು ಹೊಸ ಸೃಷ್ಟಿಯನ್ನು ಮಾಡೋಣ ಎಂಬುದಕ್ಕಾಗಿ ಗೆದ್ದವರಿಗೆ ರಾಜ್ಯ ಅಂತ ಪಾಂಡವರಿಗೂ ಸಾರಿದ್ದೇನೆ. ಯುದ್ಧವೇ ನಿರ್ಣಾಯಕವಾದದ್ದು. ಯಾವ ವಿಧ ದಿಂದಲೂ ಈ ಒಳಜಗಳವನ್ನು

ಬಗೆಹರಿಸುವದಕ್ಕಾಗೋದಿಲ್ಲ ಅಂತಾದರೆ ಹೊಸದಾದಂತಹದ್ದುಂಟು. ಆದ್ದರಿಂದ ಮೊದಲೇ ಹೇಳಿದ್ದೇನೆ ಗರುಡ ಎಲ್ಲಿರಬೇಕು? ಇದನ್ನೆಲ್ಲಾ ತೀರ್ಮಾನಿಸುವ ಹಾಗೆ, ಯುದ್ಧ ಯಾರು ಜಯಿಸಬೇಕು? ಯಾರು ಜಯಿಸಿಯಾರು? ಇದು ಅರ್ಥಶಾಸ್ತ್ರ ಯಾರು ಜಯಿಸಿಯಾರು? ನಿನಗೆ ಗೊತ್ತುಂಟು ಅದು. ಯಾರು ಜಯಿಸಬೇಕು? ಅದು ನಿನ್ನ ಹೃದಯದಲ್ಲಿ ಇದ್ದಂತಹ ಅಂತರಂಗ ಈ ಎರಡನ್ನು ಚೆನ್ನಾಗಿ ನೀನು ವಿಮರ್ಶಿಸಿ ನಮಗೆ ಸಹಾಯ ಮಾಡಬೇಕು ಅಂತ ಕೇಳಲಿಕ್ಕೆ ಬಂದವ ನಾನು. ಅದು ಅಲ್ಲದೇ ಇದ್ರೆ ಪರಿಣಾಮ ಇನ್ನೊಂದು ಸಮಸ್ಯೆಯನ್ನು ಹುಟ್ಟಿಸುವಲ್ಲಿ ಪರ್ಯಾಪ್ತವಾಗ್ತದೆ ಅಂಥ ನನ್ನ ಅನಿಸಿಕೆ.

(ನೀವು ಸಹೋದರರು ಅಸ್ಥಿರವಾದ ಸ್ಥಿರೆಗೆ ಹೋರಾಡಬಹುದೆ ಇತ್ಯಾದಿಯಾಗಿ ಶ್ರೀಕೃಷ್ಣ ಉಪದೇಶಿಸುತ್ತಾನೆ.)

|ಮಾರವಿ-ಏಕತಾಳ|| ಹರಿ ನಿನ್ನೊಳು ಧರ್ಮಶ್ರವಣವ ಕೇಳರೆ ಬಂದಿಹೆವೇನೋ |

ನೆರೆ ಪಾರ್ಥಿವ ಪಂಥದಿ ಕಾದುವೆ ವೀ ರ್ವರ ಪಕ್ಷಕೆ ನೀನು || ೧೦೫ ||

ಇದರಲ್ಲಿ ನನ್ನ ನಿರ್ಣಯವನ್ನೇ ನಾನೀಗ ಮಂಡಿಸ್ತೇನೆ. ಕೃಷ್ಣಾ, ನಿನ್ನ ಅಂಬೋಣ ಅರ್ಥಪೂರ್ಣವಾದದ್ದು. ಆದಷ್ಟು ಹೊಂದಾಣಿಕೆ ಮಾಡಿಕೊಂಡು ರಕ್ತಪಾತವನ್ನು ತಪ್ಪಿಸಬೇಕಾದದ್ದೇ ನಮ್ಮೆಲ್ಲರ ಗುರಿ. ಹಾಗೆಂತಾ ಭೂಮಿ ನಶ್ವರ, ಅಧಿಕಾರ ನಶ್ವರ ಎಂಬ ಪಲಾಯನವಾದವನ್ನು ನಾವು ಮುಂದಿಟ್ಟರೆ, ಪ್ರಪಂಚದ ಕೆಲವು ವ್ಯವಸ್ಥೆಗಳು, ಕೆಲವು ನಿರ್ಣಯಗಳಿದ್ದಾವಲ್ಲಾ ಇವುಗಳನ್ನು ಮೀರಿ ನಾವು ಹೋಗಬೇಕಾಗ್ತದೆ. ಅದೂ ನಿನಗೆ ಗೊತ್ತುಂಟು. ನಾವು ಪರಿಸರದ ಪರಿಸ್ಥಿತಿಯ ಮಕ್ಕಳು. ಈವರೆಗೆ ಸಾಗಿ ಬಂದಂತಹ ಕೌರವ ಪಾಂಡವರ ಕುರಿತಾದಂತಹ ವಿವೇಚನೆಯಲ್ಲಿ ಇನ್ನು ಬೇರೆ ಮಾರ್ಗವೇ ಇಲ್ಲ. ಕೈಲಾದಷ್ಟು ನಾವು ಪರಸ್ಪರರು ತೇಪೆ ಹಂಚಿಕೊಂಡದ್ದುಂಟು. ಇನ್ನು ಅದು ಆಗುವದಿಲ್ಲ. ನಡೆಯುವದಿಲ್ಲ. ಮತ್ತೊಮ್ಮೆ ತೇಪೆಗೆ, ಮತ್ತೊಮ್ಮೆ ಸಂಬಂಧಕ್ಕೆ ಎಲ್ಲಿಯೂ ಸಂಧಿಯೇ ಸಿಕ್ಕುವದಿಲ್ಲ ಅಂತ ಆದ ಮೇಲೆ, ಒಂದು ನಿರ್ಣಾಯಕವಾದಂತಹ ಹಂತ, ಕೊನೆಯದ್ದಿದು. ಒಂದು ದೈವ ಪರೀಕ್ಷೆ. ಎಲ್ಲಿ ಧರ್ಮ? ಎಲ್ಲಿ ಸತ್ಯ? ಅಲ್ಲಿ ಜಯವಾಗ್ತದೆ ಅಂತ. ಇದು ಯತಾರ್ಥಕ್ಕಾದರೆ ನಮ್ಮ ದೇಶದ ರಾಜಕೀಯದಲ್ಲಿ ಬಂದಂಥ ದಿವಾಳಿತನ ಅಂತ ನನಗೆ ಗೊತ್ತುಂಟು. ನಾನಂತೂ ಈ ನಿಲುಗಡೆಗೆ ಬಂದಾಗ್ಯದೆ. ಮತ್ತೆ ಈ ರಾಜಕೀಯದಲ್ಲಿ ನಾವು ಧರ್ಮವನ್ನು ಎಳೆದು ತಕ್ಕೊಂಡು ಬರುವುದು. ಕೆಲವು ಸಲ ವಿಪರೀತಕ್ಕೆ ಕಾರಣವಾಗಿದೆ. ಸತ್ಯ, ಧರ್ಮ, ಏನೊ? ಗೆದ್ದವನದು. ಧರ್ಮ, ಯಾರು ಧರ್ಮದಲ್ಲಿದ್ದಾನೆ ಎಂಬುದಕ್ಕೆ ಸೂಚನೆ ಗೆಲ್ಲುವದು. ಆದಕಾರಣ ಭೂಮಿ ಎನ್ನುವದು ಮಾಧ್ಯಮ. ನಾವು ಭೂ ಭುಜರು, ಕ್ಷತ್ರಿಯರು. ನೀನು ಇಷ್ಟೇ ಹೇಳೋದು ಅಂತಾದರೆ, ನಾನು ಹೋಗಿ ಬರ್ತೇನೆ ಅಂತ ನನ್ನ ಕೊನೆಯ ನಮಸ್ಕಾರಕ್ಕೆ ನೀನು ಸನ್ನದ್ದನಾಗಿ ಬಾಗಿಲವರೆಗೆ ಬಂದು ನನ್ನನ್ನು

ಬಿಳ್ಕೊಡಬೇಕು. ಅದಲ್ಲ, ಬೇಕಿದ್ದರೆ ಅರ್ಜುನನಲ್ಲೂ ಕೇಳು. ಈಗ ಸಂಧಾನ, ಈ ತೇಪೆ ಏಕಪಕ್ಷೀಯವಾಗೋದಿಲ್ಲ. ಪಾಂಡವರಿಗೆ ಯುದ್ಧ ಬೇಡ್ವೊ? ಆಮೇಲೆ ಆಲೋಚಿಸೋಣ. ಇರ್ತೇನೆ ನಾನು, ಇಲ್ಲಿ ನನ್ನ ಹೃದಯದ ವೈಶಾಲ್ಯವನ್ನು ನೀನು ಗ್ರಹಿಸು. ನಾನು ಮೊದಲು ಹೇಳಿದಲ್ಲಿಗೆ ಬಂದ್ದಾಗಾಯ್ತು. ಕೃಷ್ಣ ಸನ್ನಿಧಿಯಲ್ಲಿ, ಮಧ್ಯಸ್ಥಿಕೆಯಲ್ಲಿ ಒಂದು ತೀರ್ಮಾನವಾಗಬೇಕು. ಈಗ ಯುದ್ಧವೇ ಬೇಕು. ಉಭಯರಿಗೂ ನೆರವಾಗಬೇಕು. ಯುದ್ಧ ತಪ್ಪಿಸಬೇಕು ಅನ್ನೋದು ನಿನ್ನ ಪ್ರಥಮ ಭೂಮಿಕೆ. ಆದರೆ ಯುದ್ಧ ಅನಿವಾರ್ಯ ಅಂತ ಮನವರಿಕೆಯಾದರೆ, ಉಭಯ ಪಕ್ಷದವರೂ ಆ ತೀರ್ಮಾನಕ್ಕೆ ಬಂದ ಮೇಲೆ ಇನ್ನು ಆ ತಿದ್ದುಪಡಿಯಿಲ್ಲಲ್ಲ. ಇನ್ನೀಗ ನೆರವನ್ನು ನೀಡುವುದು ಹೇಗೆ? ಯೋಧನಾದರೂ ಕೂಡ ಯೋಧನಾಗದೆ ನೀನು ಇರುವುದು ಒಂದು ಪಕ್ಷಕ್ಕೆ ಇದು ನಿನ್ನದೇ ಆದ ಕೊಡುಗೆ, ಎರಡು ಕಡೆಯವರ ಕೇಳುಗೆಯು ಅದಲ್ಲ. ನನ್ನ ಮಾತಿನಲ್ಲೂ ಇದ್ದದ್ದು ಹೇಗೆ? ಉಭಯರಿಗೂ ನೀನು ಸಹಾಯ ಮಾಡಬೇಕು, ಅವರಿಗೂ ನಮಗೂ ಆದರೆ ಧ್ವನಿ ಏನು ಅಂತ ನಿನಗೆ ಪೂರ್ವಭಾವಿಯಾಗಿ ನನ್ನ ಒಕ್ಕಣೆಯಿಂದ ಅರ್ಥವಾಗಿರಬೇಕು. ಅಂದ್ರೆ ನಮಗೆ ಆಗಬೇಕು ಅಂತ ಆದರೆ ನೀನು ಅಲ್ಲ, ನೀನು ಹೀಗೆ ಅರ್ಥಯಿಸಿದೆ. ಉಭಯರಿಗೂ ಸಹಾಯ ಮಾಡುವದು ಅಂಥದ್ರೆ ಆಯುಧಗ್ರಹಣ ಮಾಡಿ ಯುದ್ಧ ಮಾಡದೇ ಪ್ರತ್ಯೇಕವಾಗಿರುವುದು ಅಂತ ಅಲ್ಲೊ? ಏನು! ಮಂಡಿಸುವುದು ನಾವು, ಉತ್ತರಿಸುವವ ನೀನು. ಹಾಗಾದರೆ ನೀನು ಏಕಾಂಗಿಯಾಗಿ ಅಲ್ವೊ? ಅಲ್ಲಾ ನಿನ್ನ ಹಿತೈಷಿಗಳು ಮಿತ್ರರೆಲ್ಲಾ ಇರಬಹುದು. ಅಂತೂ ಪಾಲು ವಿಭಜನೆ ಮಾಡಿದಾವಾಗ ಯುದ್ಧೋತ್ಸಾಹಿಯಲ್ಲದ ಯುದ್ಧವನ್ನು ಮಾಡದ ಕೃಷ್ಣ ಒಂದು ಪಕ್ಷ, ಯಾದವರು ಮತ್ತೊಂದು ಪಕ್ಷಕ್ಕೆ, ಇದರಲ್ಲಿ ಈಗ ಒಬ್ಬರನ್ನು ಸ್ವೀಕರಿಸಬೇಕು- ನಾನು, ಅರ್ಜುನ, ಬೇಡಾ ಬೇಡಾ, ಕೇವಲ ಸ್ವಾರ್ಥಿಯಲ್ಲಾ ನಾನು. ಇದರಲ್ಲಿ ಕೆಲವು ವಿವೇಚನೆ ನನಗೂ ಉಂಟು. ಹೇಗೆ ಅಂಥ ಹೇಳಿದರೆ ಪಾಂಡವರನ್ನು ನಾನು ಇನ್ನೂ ಕಿರಿಯವರು ಅಂತ ತಿಳಿದದ್ದು; ವಯಸ್ಸಿನಿಂದ ಅಲ್ಲಾ, ಹಿರಿತನ ನನ್ನದು ಅಂತ. ನಮ್ಮಲ್ಲಿ ಯಾವಾಗಲೂ ಯಾವುದೇ ಪಾಲು ವಿಂಗಡಣೆ ಮಾಡಿ ಇಟ್ಟರೆ ಕಿರಿಯರಿಗೆ ಮೊದಲು ಅವಕಾಶವನ್ನು ನಾವು ಮೊದಲು ಒದಗಿಸಿಕೊಡಬೇಕಷ್ಟೆ, ನಾವು ಯಾಕೆ ಪರಂಪರೆ ಬಿಡಬೇಕು? ಅರ್ಜುನನೇ ಹೇಳಲಿ.

(ನಾವು ಬಡವರು ಕಷ್ಣಾ, ನೀವೇ ನಮ್ಮಕಡೆಗೆ ಇರಬೇಕುಯೆಂದು ಅರ್ಜುನನು ಹೇಳುತ್ತಾನೆ.)

ಭಾಮಿನಿ ಹರಿಯೆ ನೀ ಪಾಂಡವರ ಪಕ್ಷವೆ ಹೊರತು ನಮ್ಮೊಳಗಾಗಲಾರೆಯ ಹೊ |

ಕಿರಿಯಲಾಗದು ರಣದಿ ನೀನೆಂದೆನುತ ಬೀಳ್ಕೊಂಡ || ೧೦೬ ||

ಶ್ರೀಕೃಷ್ಣಾ, ಬರೇ ಮುಗುಳು ನಗೆ ಬೀರಿದರೆ ಅರ್ಥ ಸ್ಪಷ್ಟವಾಗುವದಿಲ್ಲ. ಅದಕ್ಕಾಗಿ ನಾನು ಒತ್ತಡವನ್ನು ಹೇರುತ್ತಿರುವದು ನಿನ್ನ ಮೇಲೆ. ಏನಯ್ಯಾ, ಹೇಳಪ್ಪ ಹೇಳು ಏನಾದರೂ ಹೇಳು, ಏನಾದರೂ ಹೇಳು ಅಂದ್ರೆ ಹಾಗಲ್ಲ, ಪಾಂಡವರ ಪಕ್ಷವೋ ಅಲ್ಲ, ನಮ್ಮ ಪಕ್ಷಕ್ಕೆ ಬರುವಿಯೋ? ಯಾಕೆಂದರೆ ಇದು ನಾವು ಅಕ್ಷರಾರ್ಥದಲ್ಲಿ ಗ್ರಹಿಸುವದು ರಾಜಕೀಯದಲ್ಲಿ ಕಾವ್ಯಾತ್ಮಕವಾಗಿ ಅಲ್ಲ. ನೀನು ಪಾಂಡವರ ಪಕ್ಷವೇ. ಮೌನವೇ ಸಮ್ಮತಿ ಅಂತಾದರೆ ನನಗೇನೂ ಬೇಸರವಿಲ್ಲ. ನಾನು ಬಂದು ಅನರ್ಥವಾಯಿತು ಅಂತ ನಾನು ಸಂಕಟ ಪಡುವದಿಲ್ಲ. ನನಗೂ ಒಂದು ಕೃತಾರ್ಥತೆ ಸಿದ್ಧಿಸಿದೆ ಅಂತ ತೃಪ್ತಿ ಉಂಟು. ಕೃಷ್ಣ ಆಯುಧಗ್ರಹಣ ಮಾಡಿ ಯಾವುದೇ ಪಕ್ಷದಲ್ಲಿ ನಿತ್ತರೆ, ಪ್ರತಿ ಪಕ್ಷದವರು ಚೆನ್ನಾಗಿ ಆಲೋಚಿಸಬೇಕು. ನಮ್ಮ ಹಿರಿಯರೆಲ್ಲಾ ಹೇಳಿದ್ದಾರೆ, ಮಾತ್ರವಲ್ಲ! ರಾಜಸಭೆಯಲ್ಲಿ ಪ್ರತ್ಯಕ್ಷ ದರ್ಶನ ನಮಗೆಲ್ಲಾ ಆಗ್ಯದೆ. ಕ್ಷತ್ರಿಯರಲ್ಲಿ ಯಾರುಶ್ರೇಷ್ಠ, ವಿಕ್ರಮ ಯಾರಲ್ಲಿ ಅಂತ ಅಂದ್ರೆ, 'ಅವನು ಕೃಷ್ಣನು' – ಅಂತ ನಮ್ಮಜ್ಜ ಬೆಟ್ಟು ಮಾಡಿ ತೋರಿಸಿದ್ದಾನೆ. ಆದಕಾರಣ ಕೃಷ್ಣ ಆಯುಧಗ್ರಹಣ ಮಾಡಿ ಯುದ್ಧ ಮಾಡುವದಿಲ್ಲ ಅಂತ ಹೇಳಿದ ಮೇಲೆ, ನಮ್ಮ ಪಕ್ಷಕ್ಕೆ ಬಂದರೂ ಅಷ್ಟೇ. ಪಾಂಡವರ ಪಕ್ಷಕ್ಕೆ ಹೋದರೂ ಅಷ್ಟೇ. ಇಲ್ಲೀಗ ನಾನು ಜಯಿಸ್ತೇನೆ, ಎಂಬ ಆತ್ಮವಿಶ್ವಾಸವನ್ನು ತಾಳಿಕೊಂಡು ಹೊರಡಲಿಕ್ಕೆ ಸಿದ್ಧನಾಗಿದ್ದೇನೆ. ಯಾಕೆ ಗೊತ್ತಾ? ನನ್ನನ್ನು ಬಿಟ್ಟರೆ ನನ್ನಲ್ಲಿದ್ದವರು ಎಂತವರು? ಭೀಷ್ಮ, ದ್ರೋಣ, ಕೃಪ, ಅಶ್ವತ್ಥಾಮ, ಕರ್ಣ, ಇವರನ್ನು ಸಮಗ್ರವಾಗಿ ಎದುರಿಸುವವರು ಬಿಡು ಒಬ್ಬರನ್ನು ಎದುರಿಸುವವರು ನಿನ್ನನ್ನು ಬಿಟ್ಟು ಬೇರೆ ಯಾರೂ ಇಲ್ಲಾ ಎಂಬ ಆತ್ಮವಿಶ್ವಾಸ ನನಗೆ. ಆದ್ದರಿಂದ ಕೃಷ್ಣಾ, ನನಗೆ ಲಾಭವೇ ಆಗ್ಯದೆ, ನೀನು ಪಾಂಡವರ ಮನೆಗೆ ಹೋಗು ನಿರಾಯುಧನಾಗಿ, ಇದನ್ನು ಮಾತ್ರ ಉಳಿಸಿಕೊ. ಹೇಳಿದೆಯಲ್ಲ, ಹೇಗೆ? ಆಯುಧ ಗ್ರಹಣಮಾಡಿ ಯುದ್ಧ ಮಾಡದೇ ಇದ್ದ ನಾನು ಒಂದು ಕಡೆಗೆ, ಇದು ಸ್ಥಾಯಿಯಾಗಿ ಉಳಿದರೆ ನನ್ನ ಪಟ್ಟಾಭಿಷೇಕ ಮುಹೂರ್ತಕ್ಕೆ ಪ್ರತ್ಯೇಕ ಆಮಂತ್ರಣ ಕೊಡೇನೆ ನಿನಗೆ ಹೋಗಿ ಬರಲಾ?



## ೧೮ ನೀತಿಯೇ ಕರುಣಾಳು!

ಕೃಷ್ಣ

ಭಾಮಿನಿ॥ ನೀತಿಯೇ ಕರುಣಾಳು ನಿನಗೆ ವಿ | ಘಾತ ವೆಣಿಸಿದ ದುಷ್ಟನೊಳು ಸಂ

ಪ್ರೀತಿಯೇ ಸಂಧಾನಕನುವಾಗುವರೆ ಹೇಳೆನಲು | ಖ್ಯಾತ ಧರ್ಮಜ

ನುಡಿದನನಿಬರ / ಪಾತಕವು ಮಗುಳವರ ಹೊದ್ದಿರ | ಲಾತನಲ್ಲಿ ಸಂಧಿ

ಪ್ರಯತ್ನವ ಮಾಡಿಬಹುದೆಂದ || ೧೦೭ ||

ನೀತಿ ಅಂತಂದ್ರೆ ಸ್ಥಾಯಿಯಾದದ್ದಲ್ಲ; ಅದಕ್ಕೆ ದೇಶ, ಕಾಲ, ಪರಿಸರ, ಸನ್ನಿವೇಶ ಇದರದ್ದಾದ ಧರೆ ಉಂಟು, ಆದಕಾರಣ ನಿನ್ನೆ ನನಗೆ ನೀತಿ ಇದು, ಈ ಹೊತ್ತು ನೀತಿ ಇದು ಅಂತ ಹೇಳೊದಕ್ಕೆ ಅಧಿಕಾರ ಉಂಟು ಶಾಸ್ತ್ರಕಾರರಿಗೆ, ಧರ್ಮ ಬೇರೆ, ಸಂಹಿತೆಗಳು ಬೇರೆ, ನೀತಿ ಬೇರೆ. ಹಾಗಾಗಿ ಉದಾಹರಣೆಗೆ ಹೇಳ್ವ, ಬ್ರಾಹ್ಮಣನಗೇನು ನೀತಿ ಅಂತ ಶಾಸ್ತ್ರ ಹೇಳ್ತದೆ? ನೀತಿ ಇಂಥದ್ದು ಅಂತ ಹೇಳೋದಿಲ್ಲ. ಮತ್ತೆ? ಶಮ ದಮ ಇತ್ಯಾದಿ ಅದು ಧರ್ಮ. ಹಾಗಾದರೆ ನೀತಿಯಲ್ಲಿ ಏನೆಲ್ಲ ಹೇಳಲ್ಪಡದೆ? ಅದು ಆಗಾಗ ರೂಪಿಸಿಕೊಂಡದ್ದು, ಸ್ಮೃತಿ ಬದಲಾವಣೆಗೊಂಡು, ಸೂರ್ಯೋದಯಕ್ಕಿಂತ ಮೊದಲು ತಣ್ಣೀರಿನಲ್ಲಿ ಸ್ನಾನ ಮಾಡಬೇಕು. ಒಂದು ಉದಾಹರಣೆ, ಈಗ ಯಾವನಾದರೊಬ್ಬ ಯಾವುದೋ ಒಂದು ಪರದೇಶಕ್ಕೆ ಹೋದರೆ ಅಲ್ಲಿ ಮಧ್ಯಾಹ್ನಕ್ಕಾದರೂ ಬಿಸಿ ನೀರಿನಲ್ಲೇ ಸ್ನಾನ ಮಾಡಿದರೆ ಮೂರು ದಿವಸ ಇದ್ದಾನು ಅಂತ ಇದ್ರೆ, ಅಲ್ಲಿಗೆ ಬರುವಾಗ ಈ ನೀತಿ ಬದಲಾವಣೆ ಆಗೋದಿಲ್ವೆ? ಹಾಗಾದರೆ ನೀತಿ ಸ್ಥಾಯಿಯಲ್ಲ. ಈಗ ನಾನ್ ಹೇಳುವದು ಆ ನೀತಿ! ರಾಜನೀತಿ ಅಲ್ಲ ! ಇಷ್ಟು ಸಾಗಿ ಬಂದ ಮೇಲೆ ಇನ್ನೊಮ್ಮೆ ಹೇಳೇನೆ; ನಮ್ಮವರು ನಿನ್ನ ಒಬ್ಬನ ಅಭಿಪ್ರಾಯ ಮಂಡಿಸುವುದಕ್ಕೆ ಬಾಕಿಯಿಟ್ಟು, ಬಾಕಿಯಿದ್ದವರೆಲ್ಲ ಹೇಳಿಯಾಗ್ಯದೆ. ಇನ್ನೀಗ ಅವರೂ ಬದಲಾಯಿಸಬೇಕಾಗ್ತದೆ. ಅವರ ಅಭಿಪ್ರಾಯ ಅದು. ಮಹಾ ನಾಯಕನಾದ ಸತ್ಯಸಂಧನಾದ ನಿನಗೆ ಅದು ಭೂಷಣವೊ? ನಿನಗೆ ಬೇಕಾಗಿ ನನಗೆ ಬೇಕಾಗಿ ನೀವೆಲ್ಲ ಬದಲಾಯಿಸತಕ್ಕದ್ದು ಅಂತ ಹೇಳುವ ವ್ಯಕ್ತಿ ಅಲ್ಲ ನೀನು, ಸರ್ವಾಧಿಕಾರಿ ನಾಯಕನಲ್ಲ. ನನಗಾಗಿ ಅಲ್ಲ, ತಮ್ಮಂದಿರಿದ್ದಾರೆ. ಹೆಣ್ಣುಕೊಟ್ಟ ನೆಂಟರಿದ್ದಾರೆ. ಇವರ ಅಭಿಪ್ರಾಯವನ್ನೆಲ್ಲ ಈ ಹೊತ್ತು ನೀವು ತಿದ್ದಿ ಕೊಳ್ಳತಕ್ಕದ್ದು ಅಂತ ಹೇಳುವ ಜನ ಅಲ್ಲ ನೀನು. ಆದರೂ ಹಿರಿಯನಾಗಿ ನೀನಿದನ್ನೆಲ್ಲ ಚಿಂತಿಸಬೇಡೊ? ನಿನ್ನ ಕೊಡುಗೆಯ ದ್ವಾರಾ ನಿನ್ನ ತಮ್ಮಂದಿರಿಗೋ, ಅಥವಾ ನಿನ್ನ ನೆಂಟ್ರಿಗೋ ಆಶಾಭಂಗ ಆದರೆ, ಒತ್ತಾಯದ ಬಲತ್ಕಾರದ ಮಾಘಸ್ನಾನ ಆದರೆ ನಿನ್ನ ನಾಯಕತ್ವ ಸರ್ವಾಧಿಕಾರ ಧೋರಣೆಯದಾಗ್ತದೆ.

ಆದ್ದರಿಂದ ನಾನು ಹೇಳೋದು - ಬೆಳೆದು ಬಂದ ಪರಿಸರ, ಅವನನ್ನು ಬಿಡುವ, ಯಾರನ್ನು? ಹಸ್ತಿನಾವತಿಯವನನ್ನು; ಏನು ಹೇಳಿದರೂ ಅವ ಒಪ್ಪಿಕೊಳ್ಳುವ ಜನ. ದುಷ್ಟ ಅಂತ ಹೇಳಿದರೆ ಎರಡು ಸಲ ಹೇಳಿ ಅಂತ ಹೇಳ್ತಾನವ. ಪಾಪಿ ಅಂತ ಹೇಳಿದರೆ

ಪೂರ್ತಿ ಹಾಗೆ ಹೇಳ್ಬೇಡಿ ಮಹಾ ಪಾಪಿ ಅಂತ ಹೇಳಿ ಅಂತ ಹೇಳ್ತಾನೆ. ಉತ್ತಮ ರಾಜಕಾರಣಿ! ಯಾಕೆ? ಅವ ಇನ್ನೊಬ್ಬ ಹೇಳಿದ್ದನ್ನೂ ಅಂಟಿಸಿಕೊಳ್ಳೋದಿಲ್ಲ; ಅವ ಏನೆಣಿಸ್ತಾನೆ ಅದನ್ನ ಹೇಳೋದೂ ಇಲ್ಲ ಒಂದು ವಿಶಿಷ್ಟ ವ್ಯಕ್ತಿತ್ವ – ಕೌರವೇಶ್ವರದು. ಆ ಮಟ್ಟಿಗೆ ಇನ್ನು ಮುಂದೆ ಒಬ್ಬ ರಾಜಕಾರಣಿ ಒಂದು ಪಕ್ಷದ ನಾಯಕ ಆಸ್ಬೇಕಿದ್ರೆ ಆಚಾರ್ಯತ್ವ ಕೌರವನದು. ಶಕುನಿಯ ಶಿಷ್ಯ! ಈ ರಾಜನೀತಿ ಶಕುನಿಯಷ್ಟು ಯಾರಿಗೆ ಗೊತ್ತುಂಟು? ನಿಜವಾಗಿ ನೋಡಿದರೆ ನಾನು ಬಂದ ಮೇಲೆ, ಅದು ನನ್ನ ಚಾಕಚಕ್ಯತೆ ಅವನನ್ನು ಅಡಗಿಸಿದ್ದು, ಇನ್ನು ಒಳ್ಳೆ ಬುದ್ಧಿವಂತರು ನಾಳೆ ಹೊಗಳ್ವವರಿದ್ದರೆ ಹೇಳ್ಯಾರು ಎಂಥ ಶಕುನಿ ಮಾರಾಯ್ರೆ ಕೃಷ್ಣನಿಗೆ ನೂರು ಶಕುನಿಯರು ಸಾಲದು ಅಂದಾರು. ಆದ್ದರಿಂದ ಅದು ರಾಜಕಾರಣ; ಶಕುನಿಯದು ನಾನು ಬರುವಲ್ಲಿಯವರೆಗೆ ನೀವು ಅನುಸರಿಸಿದ್ದಿದನ್ನೇ ಅಲ್ವೇ? "ತೇನ ಕಲಹೇನ ವಾ?! ನೀನೆ ಹೇಳಿದ್ದುಂಟಲ್ಲ, ಈವರೆಗೆ ಚಲಾವಣೆಯಲ್ಲಿದ್ದದ್ದು ಅದೇ. ಹಾಗಿರುವಾಗ ಅವನ ಸುದ್ದಿ ಬಿಡ್ಡ: ನಮ್ಮವರನ್ನು ನಾವು ಬಿಡಬಾರದಲ್ಲ. ಈಗ ಇವರು ಪಕ್ಷಾಂತರ ಮಾಡ್ತಾರೆ ಅಂತ ಹೇಳೋದು ನಮಗೆ ಕಾಯೇನ ವಾಚಾ ಮನಸಾ ಯಾವೊಂದು ಫಲಾಪೇಕ್ಷೆಯೂ ಇಲ್ಲದೇ ಸಹಾಯ ಮಾಡ್ಲಿಕ್ಕೆ ಬಂದವರು ಇವರು. ಸ್ವಯಂ ಮತ್ತೆ ನಿನ್ನವರಾಕೆ ಅಷ್ಟು ಭಾಷಣ ಮಾಡಿದ್ದು ಸಭೆಯಲ್ಲಿ? ಈಗ ದ್ರುಪದ ಕೇಳ್ತಾನೆ "ಅದನ್ನು ನಿನ್ನೆ ನೀನು ಹೇಳ್ಸಿದ್ದು ಯಾಕೆ ಕೃಷ್ಣಾ" ಅಂತ ಕೇಳೊದು ನನ್ನ ಹತ್ರ ಯಾಕ್‌ಗೊತ್ತುಂಟೊ? ನಿನ್ನ ಮುಖ ನೋಡೋದ್ ಯೆಲ್ಲವಿಗೂ ದಾಕ್ಷಿಣ್ಯ ಆಗ್ತಿದೆ. ಇದೂ ನೀತಿಯೇ? ಈ ಮಾತ್ ನೀನ್ ನಿನ್ನೆ ಹೇಳಿ, ನೀನು, ಎಲ್ಲವೂ ಈ ಭೀಮ, ಅರ್ಜುನ ಎಲ್ಲ ಏನಿದ್ದಾರೆ ಗೊತ್ತುಂಟೊ? ನಿನ್ನೆ ರಾತ್ರಿಯಿಡೀ ನಿದ್ದೆ ಮಾಡ್ಲಿಲ್ಲಂತೆ ಅವು! ಯಾಕೆ? ಉತ್ಸಾಹ! ಏನೇ ಆಗಲಿ ನಮಗೊಂದು ಸಂದರ್ಭ ಸಿಕ್ಕಿತಲ್ಲ. ಈಗ ಉತ್ಸಾಹ ಭಂಗ ಆಗ್ಯದ ಅವರಿಗೆ, ಹೀಗೆ ಮಾಡುವುದು ಒಬ್ಬ ಹಿರಿಯಣ್ಣನಾಗಿ ನೀತಿಯೆ?

ಈಗ ಕೆಲವು ಸಲ ನಾವು ರಾಜೀ ಮಾಡಿಕೊಳ್ಬೇಕಾಗ್ತದೆ. ಶ್ರೀರಾಮ ದೇವರಿಂದ ನಾವು ಕಲೀಬೇಕಾಗ್ತದೆ 'ರಾಮೋ ದುರ್ನಾಭಿಭಾಷತೇ" ರಾಮನೇ ಹೇಳಿದ್ದು ನಾನು ಯೆಲ್ಲ ಆಡೋದಿಲ್ಲ ಅಂತ. ಭರತ ಬಂದಾವಾಗ "ಬರ್ತೇನೆ ಹದಿನಾಲ್ಕು ವರ್ಷ ಕಳೆದು ರಾಜ್ಯ ಆಳ್ತೇನೆ" ಅಂತ ಹೇಳಿದ - ಕುರುಹಾಗಿ ಪಾದುಕೆ ಕೊಟ್ಟು, ಒಬ್ಬ ಅತಿ ಬುದ್ಧಿವಂತ ಹೇಳ್ಯಾನೋ, ಏನು?; ರಾಮ ಕಾಲು ಜಾರಿದ ಅಂತ? ಹಾಗಲ್ಲ ಅದು, ಕುಟುಂಬ ಜೀವನ ನಡೆಸ್ತಾನೋ ಅವ ಕೆಲವು ಸಲ ಹೊಂದಾಣಿಕೆ ಮಾಡಿಕೊಳ್ಳೋಕಾಗ್ತದೆ. ಈಗ ಅಲ್ಲೊಬ್ಬ ಮುದುಕ ಇದ್ದಾನೆ ನಿಮ್ಮ ಅಜ್ಜ, ನಾನು ಅವನನ್ನು ಮೆಚ್ಚೋದಿಲ್ಲಲ್ಲ. ಇದಿರು ಬಂದರೆ ಮೊದ್ಲು ಆ ಮುದುಕನಿಗೆ ಎರಡು ಹೊಡಿಸಬೇಕು ಅಂತ ಇದ್ದೇನೆ ಭೀಷ್ಮನಿಗೆ. ಯಾಕೆ? ಅವ ಯಂಥದೂ ವಿಷಗಳಿಗೆಯಲ್ಲಿಯೋ ರಾಹುಕಾಲದಲ್ಲಿಯೋ ಒಂದು ಹೇಳಿಬಿಟ್ಟ - "ಸಿಂಹಾಸನ

ಏರೋದಿಲ್ಲ, ಮದ್ಯೆ ಆಗೋದಿಲ್ಲ”  ದೊಡ್ಡ ಕೊಡುಗೆ ಅದು. ಹಾ! “ನನ್ನ ಉಳಿವಿಗಾಗಿ ನಮ್ಮ ತಂದೆ ನಮ್ಮ ತಾಯನ್ನು ಬಿಟ್ಟು ಬದುಕಿದನಲ್ಲ. ಅದಕ್ಕೆ ತಾನು ಏನುಕೊಟ್ಟರೂ ಕಡಿಮೆ. ಆವಾಗೊಂದು ಒಳ್ಳೆ ಸಂದರ್ಭ ಸಿಗ್ತು ಭೀಷ್ಮನಿಗೆ,



ತಂದೆಗೆ ಸತ್ಯವತಿ ಬೇಕು ಅಂತಾಯ್ತು. ಛೇ! ಇದನ್ನಾದರೂ ಮಾಡಿಸಿಬಿಟ್ರೆ ನನಗೆ ಪಿತೃಋಣ ಮುಗಿಯಿತು ಅಂತ. ಉದಾರ ಮನಸ್ಸು!! ನಿಜವಾಗಿಯಾದ್ರೆ ಅಲ್ಲಿ ಸರಿಯದು. ಈ ಸಂತಾನವೇ ಮುತ್ತಿತ್ತೋ ಇಲ್ಲಿ? ಈಗ ಸತ್ಯವತಿಯ ಸಂತಾನಕ್ಕೆ ರಾಜ್ಯ ಅಂತ ಅಲ್ವ? ಆ ಸಂತತಿಯೇ ಇಲ್ಲದೇ ಹೋಯ್ತಲ್ಲ. ಆವಾಗ ಸತ್ಯವತಿ ಏನ್ ಹೇಳಿದ್ದು ಮಗನೇ ನೀನೆ; ನಿಜವಾಗಿಯೂ ಯೋಗ್ಯತೆ ಇರುವುದು ನಿನ್ನೆ! ದೇವರ ಸಂಕಲ್ಪವೂ ಹಾಗೇನೆ. ಇದು ಯೇನೋ ಆಗಿಹೋಯ್ತು, ನೀನು ನಡ್ತಿದ್ದೀಯ, ನನ್ನ ಮಕ್ಕಳು ಇರುವಲ್ಲಿಯವರೆಗೆ ಇನ್ನು ನೀನು ಗ್ರಹಸ್ಥಾಶ್ರಮಿಯಾಗು, ಸಿಂಹಾಸನ ಏರು ಅಂತ ಸತ್ಯವತೀ ದೇವಿ ಹೇಳ್ಳಿಲ್ಲೊ? ಯಾಕೆ ಕೇಳ್ಳಿಲ್ಲ ಈ ನಿಮ್ಮ ಅಜ್ಜ? ಕೇಳ್ಳಿಲ್ಲ ! ಯಾಕೆ ಬದ್ರಿಕಾಶ್ರಮಕ್ಕೆ ಹೋಗ್ಲಿಲ್ಲ?

ಇದು ಏನಾಯ್ತು ಗೊತ್ತುಂಟೊ? ಮೊದಲೊಬ್ಬ ಹೇಳಿದ ಹಾಗೆ “ಮನೆಯಲ್ಲಿದ್ದ ಧಾನ್ಯದ ಬಗ್ಗೂ ಆಸೆ, ನೆಂಟ್ರ ಬಗ್ಗೂ ಪ್ರೀತಿ”  ಪರಿಣಾಮ ಏನು? ಉಪವಾಸ, ನೆಂಟ್ರಿಗೆ ಇಕ್ಲಿಕ್ಕೆ ಅವನಿಗೆ ಮನಸ್ಸೇ ಬರೋದಿಲ್ಲ. ಪ್ರೀತಿ ಬಿಡ್ಲಿಕ್ಕಾಗೋದಿಲ್ಲ. ಅದ್ಯವ ಹಾಗೆ 'ಒಳ್ಳೇ ದಿವ್ಸ  ನೋಡಿ ಬಂದ್ರಲ್ಲಪ್ಪ ನನಗಿವತ್ ಏಕಾದಶಿ' ಅಂತ ಹೇಳ್ದ , ಆವಾಗ ಇದ್ದದ್ದನ್ನು ಊಟ ಮಾಡ್ದೆ ಇರೋದು ! ಈ ಭೀಷ್ಮನಿಗೆ ಬಂದ ದೌರ್ಬಲ್ಯ ! ಮದ್ಯೆ ಆಗ್ಟಹುದಿತ್ತು. ಪ್ರತಿಜ್ಞೆ ಪರಿಪಾಲಿಸಿದ. ಆ ಪರಿಸರ ಸನ್ನಿವೇಶ ಎಲ್ಲ ಬದಲಾಯ್ತು, ಯಾರವಳು? ರಾಜಮಾತೆ! ಅವಳು ಹಸ್ತಾಂತರ ಮಾಡಿಯಾಯ್ತು, ಮದ್ದೆ ಆಗ್ಲಿಕ್ ಒಪ್ಲಿಲ್ಲ. ಹೋಗ್ಲಿ ನಿನ್ನ ನಾದಿನಿಯರಿಗೆ ನಿಯೋಗ ಆದ್ರೂ ಮಾಡು ಹೇಳಲಿಲ್ಲವೇ? ಕೂಡದು. ನಿಯೋಗ ಅಂದ್ರೆ ವ್ಯಭಿಚಾರ್ವ? ಬ್ರಹ್ಮಚರ್ಯ ಭಂಗ ಆಗ್ತದ? ಆದರೆ ವೇದವ್ಯಾಸರಿಗೆ ಇದನ್ನನುಸರಿಸಿ ನಾವು ವಿಚಾರಣೆಗೆ ಗುರಿಪಡಿಸಬೇಡ್ವ? ವ್ಯಾಸರಿಗಾಗ್ಟಹುದಂತೆ ಭೀಷ್ಮನಿಗಾಗೇ ಕ್ಷತ್ರಿಯನಿಗೆ? ಅ ಹೆಂಗಸರು ಏನು ಮಾಡಿದರು ಗೊತ್ತೆ? ಅವರು ತಿಳಕೊಂಡು ನಮ್ಮ ಭಾವ ಈಗ ಬರ್ತಾನೆ. ಅಂತ. ಅವರಿಗೂ ಭೀಷ್ಮನ ಬಗ್ಗೆ ಆಸಕ್ತಿ ಇತ್ತು ಅಂತ ನಮ್ಗೆ ಗೊತ್ತಾಗದೆ ಪ್ರಕರಣದಿಂದ. ಆದ್ರೆ ಅತ್ತ ವಾದಿಸಿದರೆ ಏನಾಗ್ತದೆ ಅಂತ ಗೊತ್ತಿದ್ದುದರಿಂದ ತಾವು ಬಾಯಿ ಮುಚ್ಚಿ ಕೂತದ್ದು. ನಿಜವಾಗಿ ಮನಸಾ ಆ ಹುಡುಗಿಯರು ಕೂಡಾ ಮೆಚ್ಚಿದ್ದು ಇವನ್ನೆ ಈ ನಿಮ್ಮ ಅಜ್ಜನನ್ನು, ಈಗ ನಿಯೋಗ ಆದ್ರೂ ಮಾಡಹುದಲ್ಲ. “ಏನೇ ಆಗ್ಲಿ ನಮ್ಮಲ್ಲಿ ಸಂತಾನೋತ್ಪತ್ತಿಯಾದರೂ ನಾವು ಕಣ್ಣಿಟ್ಟ ಭಾವನಿಂದಲೇ ಆಗ್ತದಲ್ಲ” ಹಾಗಾಗಿ ಒಳ್ಳೆ ಅಲಂಕಾರಯೆಲ್ಲ ಮಾಡಿಕೊಂಡ ಅವ್ರು ಬಂದ್ರು; ಇದು ಜನ ಯಾರ್ ಬಂದದ್ದು!!

-

ಭೀಷ್ಮಜ್ಜ ಸಿಕ್ಕಿದರೆ ನಾನು ಕೇಳ್ತೇನೆ ವ್ಯಾಸನಿಂದ ನಿಯೋಗ ಹೇಗಾಯ್ತು ಅಂತ. ವ್ಯಾಸ ಯಾರು? ಸತ್ಯವತೀ ದೇವಿಗೆ ಯಾರಿಂದಲೋ ಹುಟ್ಟಿದ ಒಂದು ಕಾನೀನ ಸಂತಾನ, ಚಂದ್ರವಂಶದ ಸಂತಾನವೃದ್ಧಿಗೆ ಆ ಅವನಿಗೇನ್ ಅಧಿಕಾರ? ಭಿಷ್ಮನೇ ಮಾಡ್ಬೇಕೋ ಬೇಡ್ವೋ? ಹಾಗಾಗಿ ಇವರ ಆಸೆಯೂ ಭಂಗಾಯ್ತು ಈ ಬಾಲ ವಿಧವೆಯರದು. ಬಂದವ ಈ ಕೆಂಜೆಡೆಯವ ! ಇವರು ಅರಗುವರಿಯರನ್ನು ಬಿಡುವ, ಆ ಜಾತಿಯಲ್ಲೇ ಹುಟ್ಟಿದ ಹೆಂಗಾದ್ರೂ ಈ ವ್ಯಾಸನನ್ನು ಕಂಡರೆ ಕಣ್ಮುಚ್ಚದೆ ಬೇರೆ ಏನು ಮಾಡಿ ಸಾಯೋದು



ಅವಳು? ಆ ಅವಧೂತ ವೇಷ, ಕೆಂಜೆಡೆಯ, ಸ್ನಾನ ಇಲ್ಲದೇ ಮೈ ದುರ್ಗಂಧ ಬರುವ, ಅಂದ್ರೆ ಅವಳ . ಆ ವ್ಯಾಸರ ಅಮ್ಮ ಮತ್ಸ ಗಂಧಿ ಹೋಗಿ ಯೋಜನಗಂಧಿಯಾಗ್ವಾಗ ಅವಳ ಗರ್ಭದಲ್ಲಿ ಹುಟ್ಟಿದ ಮಗನಿಗೂ ಅದ ಬಂದದೆ. ನಾನೇನ್ ಕಲ್ಪಿಸಿ ಹೇಳೋದಿಲ್ಲ. ಇನ್ನು ನಿನಗೆ ಸಂದೇಹ ಇದ್ರೆ ನಾನು ನಾಳೆ ವೇದವ್ಯಾಸರನ್ನು ಕರೆಯುತ್ತೇನೆ ನೀವೇ ಹೇಳಿ ಅಂತ.

ಹಾಗಾದರೆ... ಅಲ್ಲಲ್ಲ ಹಾಗಲ್ಲ ಭಾವ, ಈಗ ನಾನು ವಿನೋದಕ್ಕೆ ಹೇಳೂದೂ ಹೌದು. ಆದರೆ ವಿಷಯ ಸತ್ಯ ಮತ್ತೆ ನನ್ನ ಸ್ವಭಾವ ನಿನ್ಗ ಗೊತ್ತುಂಟಲ್ಲ. ನನ್ನ ಹತ್ತಿರದವರು ಸತ್ತಿದ್ದಾರೆ ಅಂತ ಹೇಳಿದ್ರೂ ಕೂಡಾ ಹ್ಞ ಹೌದಾ? ಎಷ್ಟು ಹೊತ್ತಿಗೆ ಸತ್ತು? ಅಂತ ಕೇಳುವ ಜನ ನಾನು. ನಂದೊಂದು ಪ್ರವೃತ್ತಿ ಅದು. ಸದಾ ಲೀಲಾ ವಿನೋದಿ ಅಂತ ಹೇಳಿದ ಹಾಗೆ, ಹಾಗಾಗಿ ವಿಷಯದ ಘನತೆ ಇಲ್ಲಿ ಏನ್ ಕಡಿಮೆ ಆಗೋದಿಲ್ಲ. ಕೃಷ್ಣನ ಸ್ವಭಾವ ಇದು, ಆss ವ್ಯಾಸನಿಗೆ ಹುಟ್ಟಿದವರು, ರಾಜ್ಯ ಆಳ್ಯಾರ? ಜ್ಞಾನಿ! ಕ್ಷತ್ರಿಯರಲ್ಲಿ ಹುಟ್ಟಿದವ ಆಗ್ಬೇಕು.

ಈ ಭೀಷ್ಮಚಾರ್ಯ ಅಲ್ಲಿಯಾದ್ರೂ ಔದಾರ್ಯ ತೋರಿಸ್ಬೇಕಿತ್ತು ವಂಶದ ಬಗ್ಗೆ. ಹಾಗಾದ್ರೆ “ಏನಾದ್ರೂ ಆಗ್ಲಿ ಯಾರಿಂದ ಬೇಕಾದ್ರೂ ಸಂತಾನ ಹುಟ್ಟಿ ಹಾಗಂತ ನನ್ಗ ಬಿಟ್ಹೋಗ್ಲಿಕ್ಕೂ ಉಪಾಯಿಲ್ಲ ಇಲ್ಲಿಂದ” ಅದ್ಯೆಂಥದ್ದು ಏಕಕಾಲಲ್ಲಿ? ಆಯ್ತು ಅಂಗುಲಂಗುಲ ಭೀಷ್ಮನ ಪಥನ !! ಅವನಿಗಿದ್ದ ಮನಸ್ಸಿನ ಸಂಕಟ ಅವನಿಗೂ ಅವನ ದೇವಿಗೂ ಗೊತ್ತು ಇನ್ನೊಬ್ರಿಗ್ ಗೊತಿಲ್ಲ. ಅಷ್ಟು ಎತ್ತರಕ್ಕೆ ಬೆಳೆದ ಭೀಷ್ಮ ಈ ಮೊಮ್ಮಕ್ಕಳ ಕಾಲಕ್ಕಾಗ್ವಾಗ ಸಾಯ್ಲಿಕ್ಕು ಪಾಯಿಲ್ಲಲ್ಲ ಅಂತ ಬದುಕುವ ಪರಿಸ್ಥಿತಿಗೆ ಬಂದರೆ ಏನ್ ದುರಂತ ಅದು ! ಹಾಗಾಗಿ ರಾಮನೇ ಸರಿ ಸಂದರ್ಭಕ್ಕೆ ಸರಿಯಾಗಿ ರಾಜೀ ಮಾಡಿಕೊಂಡ. ಭೀಷ್ಮ ಆಮಟ್ಟಿಗೆ ಮಹಾ ವರಟ! ಬೆಳೆದ-ದೊಡ್ಡ ಆಲದಮರದ ಹಾಗೆ ಬೆಳೆದ ಊರಲಿ ಕೀರ್ತಿಯೆಲ್ಲ ಭೀಷ್ಮನದ್ದು ಔನ್ನತ್ಯ ಹೆಚ್ಚಾಯ್ತು. ಆದರೆ ಕುಟುಂಬದಲ್ಲಿ ವ್ಯವಹರಿಸುವವ, ಈಗೊಂದು ತೋಟ ಮಾಡಿದಾವಾಗ ಒಂದೇ ಮರ ಉದ್ದಕ್ಕೂ ಅಗಲಕ್ಕೂ ಬೆಳೆದರೆ ಮತ್ತೆ ತೋಟ ಎಲ್ಲಿ ಉಂಟು? ಆ ಹದಕ್ಕೆ ಬೆಳೀಬೇಕು. ಭೀಷ್ಮ ಛೇ! ಭೀಷ್ಮ ನಿಯೋಗ ಮಾಡ್ತಿದ್ರೆ ಚಂದ್ರವಂಶದಲ್ಲಿ ಎಂಥವು ಹುಟ್ಟಿದ್ರು ಭಾವ!! ನಿಮ್ಮ ಅಪ್ಪನ ಹಾಗಿದ್ದವನೋ ಅಲ್ಲ ನಿಮ್ಮ

ದೊಡ್ಡಪ್ಪನ ಹಾಗಿದ್ದವನೊ? ಆ ಮತ್ತೊಬ್ಬು ಬಂದ್ಲು ದಾಸಿ ! ಹಾಗೊಂದು ಪದ್ಧತಿ ಉಂಟು, ಈ ಬರೇ ದಾಸಿಯರಿಗೆ ಅವರಿಗೆ ಉತ್ತಮ ಬಂದ ಅಂದ್ರೆ ಏನೇ ಆಗ್ಲಿ ನಾಳೆ ನನ್ನ ಸಂತಾನವಾದ್ರೂ ವೃದ್ಧಿಯಾಗಿ, ಅವ್ಳು ಬಂದ್ಲು. ಇವರು ರಾಜಕುಮಾರಿಯರು, ವಿಲಾಸಿನಿಯರು, ಮೈಯ ಬಿಸಿ ಇದ್ದವರು; ಅವ್ಳು ದಾಸಿ! ಇವ್ಳು ಹೇಳಬೇಕಾದ್ರೆ ಅವಳು ತಯಾರದ್ದು ಸೀರೆ ಉಟ್ಟು ಶೃದ್ಧಾ ಭಕ್ತಿಯಿಂದ - ಹುಟ್ಟಿದವ ವಿದುರ! ಅವನ ಬಗ್ಗೆ ನಾನ್ ಹೇಳ್ಬೇಕೋ? ನಿನಗೂ ಪಿತೃವತ್ ಅವನಲ್ಲಿ ಭಕ್ತಿ ಇದೆ. ಎಷ್ಟು ದೊಡ್ಡ ಜನ ಜ್ಞಾನಿ ಪ್ರಯೋಜನ ಏನು? ಅವನಿಗೆ ಕ್ಷೇತ್ರ ದೋಷ, ಈಚೆಯವರಿಗೆ ಬೀಜ ದೋಷ. ಇದೆಲ್ಲ



ಮೂಕಸಾಕ್ಷಿಯಾಗಿ ಭೀಷ್ಮ ನೋಡಿದ್ದಲ್ವೆ? ನಾನು ಮತ್ತೆ ಭೀಷ್ಮನ ಜಾಗದಲ್ಲಿ ಇರಿದ್ರೆ ಅದು ವಿಷಯವೇ ಬೇರೆ. ನಾನು ಪೂರ್ತಿ ಹೇಳಿಬಿಡ್ತೇನೆ. ಭೀಷ್ಮನನ್ನು ತಿದ್ದುವವರು ಈ ಪ್ರಪಂಚದಲ್ಲಿ ಯಾರೂ ಇಲ್ಲ!! ದೊಡ್ಡ ಮನುಷ್ಯರಿಗಿದ್ದ ಅತ್ಯಂತ ಕೆಟ್ಟಗುಣ ಅದು. ಲೋಕಕ್ಕೆ ನಾಯಕರವರು ಅವರ ಮೊಂಡುತನ ಅವರನ್ನು ಬಿಟ್ಟಿಲ್ಲ! ಇಂಥಹ ನಾಯಕತ್ವ ಮನೆಗೂ ಆಗ್ಲಿಕ್ಕಿಲ್ಲ ರಾಷ್ಟ್ರಕ್ಕೂ ಆಗ್ಲಿಕ್ಕಿಲ್ಲ. ಆದರೆ ಅವರು ಹೇಳ್ತಾರೆ ಧರ್ಮಸಂಕಟ! ಏನ್ ಮಾಡೋದು? ಇಲ್ಲಿ, ಮನುಷ್ಯ ಪ್ರಾಮಾಣಿಕ ಅದು ಒಪ್ಪಬೇಕಲ್ಲ! ಆದರೆ ಎಷ್ಟೋಸಲ ಈ ಪ್ರಾಮಾಣಿಕತನ ಅವರಲ್ಲಿಯೇ ಬೆಳೆದರೆ ಸಾಕು ಅಂತ ತಿಳಿದು ಬಾಕಿಯಿದ್ದವರು ಬೆಳೆದರೆ ಬೆಳೆಯಲಿ ಸತ್ತರೆ ಸಾಯ್ಲಿ ಅಂತ- ಔದಾಸೀನ್ಯ ಅಂತ ಇದಕ್ಕೆ ಹೇಳೋದು ನಾನು. ಆದ್ದರಿಂದ ಭೀಷ್ಮನ ಹಾಗೆ ಕೊನೆವರೆಗೆ ಮಾತು ಉಳಿಸಿಕೊಳ್ಳಬೇಕು ಎಂಬುದನ್ನು ನಾನು ಒಪ್ಪೋದಿಲ್ಲ. ರಾಮನ ಹಾಗೆ ಸಂದರ್ಭಕ್ಕೆ ಸರಿಯಾಗಿ ರಾಜೀ ಮಾಡಿಕೊಳ್ಳಬೇಕು ಅಂತ ಒಪ್ಪವವ ನಾನು. ಒಬ್ಬ ಬುದ್ಧಿಜೀವಿಗೆ ಬೇಕಾದ್ರೆ ನಾಳೆ ಉಪನ್ಯಾಸಕ್ಕೊಂದು ವಿಷಯವಾಗ್ತದೆ. ರಾಮ ಕಾಲುಜಾರಿದ ಭೀಷ್ಮ ಅಲುಗಾಡಲಿಲ್ಲ! ಇದ ಅವನ ದೃಷ್ಟಿ ಇದೆಲ್ಲ ಹೇಳಿದ್ಯಾಕೆ? ನೀತಿ ಅಂದರೆ ಸಂದರ್ಭ, ಕಾಲ ಪರಿಸ್ಥಿತಿ ಜನಾಂಗ ಇವರಲ್ಲಿ ರಾಜೀ ಮಾಡಿಕೊಳ್ಳೋದು. ಈಗ ನೇರವಾಗಿಯೋ ನಮ್ಮ ಗಾಡಿ ಹೋಗೋಕು. ಒಂದ್ ಹತ್ತ ಜನ ನಿತ್ತುಕೊಂಡಿದ್ದಾರೆ. ವಾಹನ ಇಲ್ಲದವರಿಗೆ ರಾಜಮಾರ್ಗದಲ್ಲಿ ನಡೆಯುವ ಹಕ್ಕಿಲ್ಲ ಸರಿ. ಆದರೆ ನಿತ್ಕೊಂಡಿದ್ದಾರೆ. ನಮ್ಮಲ್ಲಿ ಮನುಷ್ಯತ್ವ ಉಂಟಲ್ಲ! ನನಗೇನು ಪರವಾನಿಗೆ ಉಂಟು ಬೀದಿಯಲ್ಲಿ ಸತ್ತರೆ ಅವರು ಹಾಗೆ ಹೇಳೋದಿಲ್ಲ. “ಅಯ್ಯೋಏಳೋದಿಲ್ಲ? ಎಡಕ್ಕೊ, ಬಲಕ್ಕೆ ಹೊಂಡಕ್ಕೊ ಇಳಿಸಿಯಾದರೂ ರಥ ತಕ್ಕೊಂಡು ಹೋಗೊಂದು ಪದ್ಧತಿ, ಹೊಂದಾಣಿಕೆ! ಇಷ್ಟು ಪೀಠಿಕೆ ನಾನು ಮಾಡಿದ್ದು ಯಾಕೆ ಅಂತ ಅಂದ್ರೆ ನಿನ್ನದ್ದಾದ ಈ ಕೊಡುಗೆ, ಅದಕ್ಕೆ ಅವಧಿ ಬಾಧಕ ಬರಲಿಲ್ಲವೋ? ಬಂತು ಅಂತಲ್ಲ ಬರಲಿಲ್ಲವೋ? ಇನ್ನೊಂದು ಈ ಕೊಡುಗೆ ಅವನಲ್ಲಿಯೋ?

ಆದ್ದರಿಂದ ಕರುಣಾಳು ನೀನು. ಈ ಕರುಣೆ ಎಂಬುದಕ್ಕೆ ಸ್ವರೂಪ ಬೇರೆ ಬೇರೆ ಉಂಟು. ಸಕಲ ಜೀವ ಕಾರುಣ್ಯ ಹೌದು. ಶತ್ರುವಾದರೂ ಬದುಕಲಿ ಅಂತ ಹೇಳೊದು ಹೌದು ಅಲ್ವೆ? ಶತ್ರುವಾದರೂ ಬದುಕಬೇಕಾದರೆ ಶರ್ತ ಇಡುವವರು ನಾವಾಗ್ಬೇಕು. ಮತ್ತೆ ಅವನಿಗೆ ಏನೂ ಹೇಳ್ಲಿಕ್ಕೆ ಸಾಧ್ಯವಿಲ್ಲ. ಇದೀಗ ನಮಗೆ ಶರ್ತ ಅಲ್ಲ. ಐದು ಗ್ರಾಮವನ್ನಾದರೂ ಅವ ಕೊಟ್ರೆ !! ಶರ್ತ ಇಡಬೇಕು. ಏನು? ಇಷ್ಟು ಅವ ಕೊಡತಕ್ಕದ್ದು ಒಪ್ತಿಯೋ ಇಲ್ವೊ? ಅಂತ ಅದಲ್ಲಲ್ಲ? 'ಐದು ಗ್ರಾಮವಂ'- ಕೃಷ್ಣರಾಯ ಸಂಧಾನವಂ ಮಾಡಿ ಬರಬೇಕು. ನಾನು ಸಿಕ್ಕಿಬಿದ್ದದ್ ಅಲ್ಲಿ. ನಾಯಕನ ಅಪ್ಪಣೆಯಂತೆ ಹೀಗ್ ಹೀಗೆ ಅಂತ ಆದ್ರೆ ಕಷ್ಟ ನನಗೆ. ಯಾಕೆ? ಅವ, ಹ್ಞೆ, ಅರ್ಧ ರಾಜ್ಯವೋ? ಕೊಡೋದಿಲ್ಲ. ಐದು ಗ್ರಾಮ ಕೇಳಲಿಕ್ಕೆ ಹಕ್ಕೇ ಇಲ್ಲ. ಗ್ರಾಮಾಧಿಕಾರಿಗಳೋ ಪಾಂಡುವಿನ ಮಕ್ಕಳು? ಅಲ್ಲ. ರಾಜ್ಯಾಧಿಕಾರಿಗಳೊ? ಅಂತ ಅವ ಕೇಳಿದರೆ ನಾನು ಉತ್ತರ ಹೇಳಬೇಕಲ್ಲ ಭಾವ! ಈ ನಿನ್ನ ನಯ ವಿನಯ ಅವನಿಗೆ ಅರ್ಥ ಆಗ್ಲಿಕ್ಕಿಲ್ಲ. ಈಗ ಸಂಧಾನ ಇದಕ್ಕಿಂತ ಹೆಚ್ಚಿಗೆ



ಮಾಡ್ಬಹುದು. ನಮ್ಗ  ಹಕ್ಕುಂಟು ಅಂತಾದರೂ ಒಪ್ಪು ಮಹರಾಯ. ಮತ್ತೆ ಬೇಕಾದರೆ ನೀನೇ ಅನುಭವಿಸು. ಹಕ್ಕೆಷ್ಟುಂಟು? ರಾಜ್ಯದಲ್ಲರ್ಧ ಅದನ್ನು ಸಣ್ಣದು ಮಾಡಬಾರದು. ಅನುಭವಿಸೋದು ಅನುಭವಿಸದೇ ಇರೋದು ಮತ್ತೆ. 'ನಮ್ಗ  ಅರ್ಧರಾಜ್ಯದಲ್ಲಿ ಹಕ್ಕುಂಟು ಕೊಡ್ಬೇಕು'. ಆದಕಾರಣ ಕರುಣಾಳುವಾದಂಥ ನೀನು ಕರುಣೆಯನ್ನು ಅಸ್ಥಾನದಲ್ಲಿ ವಿನಿಯೋಗಿಸುವದರ ಮೊದಲು ಕರುಣೆಯನ್ನು ಎಲ್ಲಿ ವ್ಯಯ ಮಾಡಬೇಕೋ ಅಲ್ಲಿ ವ್ಯಯ ಮಾಡ್ಬೇಡವೋ? ನಿನ್ನ ತಮ್ಮಂದಿರ ಬಗ್ಗೆ, ನಿನ್ನ ಬಗ್ಗೆ ಸಂಕಟಪಟ್ಟವರ ಬಗ್ಗೆ, ಈ ಹದಿಮೂರು ವರ್ಷ ತಾಳ್ಮೆಯನ್ನು ತಕ್ಕೊಂಡವರ ಬಗ್ಗೆ, ಅವರ ಬಗ್ಗೆಯೂ ಕರುಣೆಯನ್ನು ತಾಳಬೇಡವೋ?

ಕೌರವನನ್ನು ಹತ್ತಿರ ಮಾಡಿಕೊಳ್ಳಬೇಕಾದರೆ ನಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಹೊರಗಾಗಬಾರದಲ್ಲ! ಆದ್ದರಿಂದ ನಾನು ಹೇಳಿದ್ದು ಈ ಯುದ್ಧವೆಂಬಂಥಹ ಒಬ್ಬ ಕಳ್ಳ ಇವನನ್ನು ನಾವು ಹೊರಗಹಾಕ್ಬಾಗ ದೊಡ್ಡ ಕಳ್ಳನನ್ನು ಮನೆಯಲ್ಲಿ ಹೊಕ್ಕಲು ಬಿಡಬಾರದಲ್ಲ. ಆದ್ದರಿಂದ ದಯವಿಟ್ಟು ನನ್ನ ದೊಡ್ಡ ಭಾವ ಇದನ್ನು ಇನ್ನೊಮ್ಮೆ ಆಲೋಚಿಸಿ ಇದು ನೀತಿ ಅಂತ ಹೇಳಿದರೆ ಮತ್ತೆ ನನ್ನ ಮಾತಿಲ್ಲ. ಈಗ ನನ್ನ ಹತ್ರ ಕೇಳ್ತಿಯೊ? ಯುದ್ಧ ಪ್ರೀಯನೇ ಅಲ್ಲ ನಾನು. ಅಲ್ಲಿದ್ದ ಸೈನ್ಯವನ್ನಾಗಲಿ ಭಂಡಾಗಾರವನ್ನಾಗಲಿ, ಪ್ರಜೆಗಳನ್ನಾಗಲಿ ನಾಶಮಾಡದೇ ನಮಗಾಗದಿದ್ದವನನ್ನು ಮಾತ್ರ ತೆಗೆಯುವುದು ಯಾಕೆ? ಇದ್ದದ್ದನ್ನೆಲ್ಲ ನಾಶಮಾಡಿ ನಮ್ಮ ಆ ಊರು ಮತ್ತೆ ವೃದ್ಧಿ ಮಾಡ್ಲಿಕ್ಕೆ ನಮ್ಮ ಸ್ವಂತ ರಾಜ್ಯದಿಂದ ತಕ್ಕೊಂಡ್ ಹೋಗೋದೊ? ನನ್ನ ರಾಜಕೀಯ ಹಾಗೆ- ರಾಜ ನೀತಿ,

ಯುದ್ಧ ಯಾವ ಕಾಲಕ್ಕೂ ಯಾರಿಗೂ ಸುಖ ಅಲ್ಲ ಅಂತ ನಾನು ನೂರು ಜನರಿಗೆ ಹೇಳಿ ಆಗ್ಯದೆ; ಇನ್ನು ನೂರು ಜನಕ್ಕೆ ಹೇಳಲಿಕ್ಕೆ ಬಾಕಿ ಉಂಟೋ ಏನೋ! ಯುದ್ಧ ಒಂದು ಸಮಸ್ಯೆಯನ್ನು ನಿವಾರಣೆ ಮಾಡೋದೆ ಇಲ್ಲ. ಯುದ್ಧ ಮತ್ತೊಂದು ಯುದ್ಧವನ್ನು ಹುಟ್ಟಿಸ್ತದೆ. ಆದಕಾರಣ ಯುದ್ಧ ಯಾರಿಗೂ ಒಳ್ಳೆಯದಲ್ಲ . ರಾಜನೀತಿಯೂ ಹೇಳ್ತದೆ ಯುದ್ಧ ಸಾರಿದವನೂ ಸೋತ. ಯುದ್ಧ ಇದಿರಿಸಿದವನೂ ಸೋತ. ಸೋತರೆ ಅವರಿಬ್ಬರು ಆ ರಾಜ್ಯದಲ್ಲಿದ್ದ ಪ್ರಜೆಗಳೂ ಸೋತರು ಅಂತ. ಹಾಗಾಗಿ ಸಾಮ. ಆ ಸಾಮ ಮಾಡ್ವಾಗ ಮಾತ್ರ ನಮ್ಮ ಅಂತಸ್ತಿಗೆ ಕಳಂಕ ಬರಬಾರ್ದು. ಯಾರು ಹೆಚ್ಚು ಬಿಡ್ತಾರೆ ಅವ ನಿಜವಾಗಿಯೂ ಲೋಕದಲ್ಲಿ ಶ್ರೀಮಂತ. ನಾವ್ ಬಿಡ್ವ  ಅವನಿಗೆ ಅವ ಅರ್ಧರಾಜ್ಯ  ಕೊಟ್ಟ ಮೇಲೆ ನಾವೇ ಐದು ಬಿಡ್ವ , ಇಲ್ಲಿ ಬಂದದ್ ಅಕ್ಷೇಪ. ಆದ್ದರಿಂದ ನಾನೂ ಯುದ್ಧ ಪ್ರಿಯನಲ್ಲ. ನೀನೂ ಅಲ್ಲ. ಹೆದರುವವ ಅಲ್ಲ ಅಂತಲ್ವೆ? ಅದು ನನಗೆ ಮೊದಲೇ ಗೊತ್ತಿಲ್ವೆ? ಜೀವನದ ಹೋರಾಟದಲ್ಲಿ ಅಜೇಯ ನೀನು. ಒಂದು ರೀತಿಯ ನಿಸ್ಪೃಹ ಮನೋವೃತ್ತಿಯ ಸ್ಥಿತಪ್ರಜ್ಞ ಯುಧಿಷ್ಠಿರ! ಎಲ್ಲಾ ಯುದ್ಧದಲ್ಲಿಯೂ ಸ್ಥಿರತೆ, ಅಲುಗಾಡೋದಿಲ್ಲ ನೀನು, ಹೆದರುವುದಿಲ್ಲ ಅನ್ನೋದು ಯುದ್ಧಕ್ಕಿದ್ದ ಅಧಿಕಾರ ಅಲ್ಲ. ಅದು ಕೌರವಂದು ನಾನು ಯಾರಿಗೂ ಹೆದರೋದಿಲ್ಲ, ಅದು ಕಾಡಿನಲ್ಲಿದ್ದ ಸಿಂಹ ಯಾರಿಗೂ ಹೆದರೋದಿಲ್ಲ. ಪಟ್ಟಕಟ್ಟೋಣವೇ



ಅದಕ್ಕೆ? ದನಕ್ಕೆ ನಾವು ಪೂಜೆ ಮಾಡೋದು ನಾವು ಅದನ್ನು ಪೂಜಿಸುವವರು. ಆದ್ದರಿಂದ ಯುದ್ಧಕ್ಕೆ ಹೆದರೋದಿಲ್ಲ ಹೌದು. ಆದರೆ ಸಂಧಾನದ ಈ ಶರ್ತ ಸರಿಯೋ ಎಂಬುದು ನನ್ನ ಪ್ರಶ್ನೆಯಾಗ್ಯದೆ.

ನೀನು ಏನು ಅಂತ ತಿಳಿ ನಿನ್ನದು ವ್ಯಕ್ತಿಧರ್ಮ ಆಗಬಾರದು ಭಾವ! ಇಡೀ ನಮ್ಮ ಗುಂಪಿನ ಪಕ್ಷದ ಧರ್ಮವಾಗಬೇಕು. ಹ್ಹ  ಹ್ಹ... ಆಗದೇ ಇದ್ದದ್ದೇ ನಿನ್ನ ದೌರ್ಬಲ್ಯ ಅಂತ ಹೇಳೋದು ಗುಟ್ಟಿನಲ್ಲಿ, ದಯವಿಟ್ಟು ನನ್ನ ಆಕ್ಷೇಪ ಮಾತ್ರ ಇಲ್ಲಿ ಉದ್ಘಾಟನೆ ಮಾಡೋಣ. ಗ್ರಾಮ ಎಂಬುದರಲ್ಲಿ ನನಗೆ ಆಕ್ಷೇಪ, ಗ್ರಾಮವೂ ರಾಜ್ಯವೂ ಒಂದಲ್ಲ. ಹಾಗಾದರೆ ಹೀಗೆ ಹೇಳು “ಅದು ಗ್ರಾಮ ಅಂತ ಹೀಗೇ ಹೇಳಿದ್ದು... ಹಾಗಾದರೆ ದಾಯಭಾಗ ಬೇಡ... ಹ್ಹ.. ಅದೂ ಬೇಕು. ಒಂದು ರೀತಿಯಿಂದ ನೀನು ಭೀಷ್ಮಜ್ಜನ ಮೊಮ್ಮಗ ಹೌದು !! ಹೋಗ್ಲಿ ಹೋಗ್ಲಿ ನಿನ್ನ ಮತವೇ ನನ್ನ ಮತ. ಈಗ ನೀತಿಯೇ ಅಂತ ನಾನು ಹೇಳಿದೆನಲ್ಲ. ಹಾಗಾದರೆ ಅವನಿಗೆ ಶಿಕ್ಷೆಯಿಲ್ಲ ಅಂತಲೂ ಕೌರವನಿಗೆ? ದೊಡ್ಡಭಾವ, ಬ್ರಾಹ್ಮಣನಾಗಿ ಹುಟ್ಟಬೇಕಾದವ ಕುಂತೀದೇವಿಯ ಹೊಟ್ಟೆಯಲ್ಲಿ ಹುಟ್ಟಿ ನಮ್ಮಂಥವರ ತಲೆಬಿಸಿ ಮಾಡಿದೆ. ಸಂಕಲ್ಪ ಅವರದ್ದು ದೂರ್ವಾಸರದ್ದು! ಭಾವಾ ನಿನಗೆ ವಿಘಾತವೆಣಿಸಿದ ದುಷ್ಟನಲ್ಲಿ ಸಂಪ್ರೀತಿಯೇ? ನಿನಗೆ ಅಂತ ಹೇಳುವುದರಲ್ಲಿ ಒಂದು ಪ್ರತ್ಯೇಕತೆ ಉಂಟು. ಭೀಮನಿಗೆ ಅವ ವಿಷ ಹಾಕ್ಲಿ ಅರ್ಜುನನ್ನು ಬೇಕಾದ್ರೆ ಮನೆವೊಳಗೆ ಸುದ್ದಿ.

ನಿನಗೆ!! ಆದ್ರೂ, ನಿನ್ನಂಥವರಲ್ಲಿಯೂ ಕೂಡ ಅವ... ಅವನ ವ್ಯವಹಾರ ಅದೇ! ಹಾಗಿರುವಾಗ ಯಾವ ನಾಣ್ಯ ಅವನಲ್ಲಿ ಚಲಾವಣೆಯಿಲ್ಲವೋ ಇದನ್ನು ತಕ್ಕೊಂಡು ಹೋಗಿ ಇದರ ಬದ್ಲು ಬೇರೆ ಕೊಡು ಅಂತ ಕೇಳೋದು ಸುಮ್ಮೆ, ಇದು ದ್ರಾವಿಡ ಪ್ರಾಣಾಯಾಮ ಅಲ್ವೆ? ಆದ್ರೆ ಕೌರವನಿಗೇನು ನಿವೃತ್ತಿ? ಅವ ಇಷ್ಟೇ ಅನ್ಯಾಯ ಮಾಡಿದ್ದಕ್ಕೆ? ನೀನ್ ನಿನ್ನೆ ಏನ್ ಹೇಳಿದಿ? 'ಖಡುಗವಾಗಲಿ, ನೀತಿಯಾಗಲಿ ಒಡೆಯಲಕ್ಷ್ಮೀರಮಣ ನೈತಹ', ಅಲ್ವೊ? ಖಡುಗವು ಆಗಲಿ ಅಂತ ಹೇಳಿದ್ದು, ಹೌದಲ್ಲ? ಹಾಗಾದರೆ ಈಗ ನೀತಿಯೆ? ಸಂಧಾನವೆ? ದಯೆಯೆ? ಪಾಪ ಪುಣ್ಯ ಯಮ ನಿರ್ಣಯ ಮಾಡ್ಲಿ ಅಂತ ಹೇಳುವಾಗ ರಾತ್ರಿಯಲ್ಲಿ ಏನ್ ಬದಲಾವಣೆಯಾಯ್ತು ನಮ್ಮ ದೊಡ್ಡಭಾವನಿಗೆ?

## ೧೯ ಗಾಳಿಯ ಮಗ ಬೆಂಕಿಯ ಮಗಳು

### ಭೀಮ

(ಸಂಧಾನಕ್ಕೆ ಹೊರಟ ಕೃಷ್ಣ, ಸಂಧಾನದ ಕುರಿತು ಭೀಮನ ಅಭಿಪ್ರಾಯ ಕೇಳುತ್ತಾನೆ ಅದಕ್ಕೆ ಭೀಮನ ಉತ್ತರ)

ಸೌರಾಷ್ಟ್ರ-ತ್ರಿವುಡೆ| ಅಣ್ಣನವರಿಗೆ ನೀತಿಯಾದರೆ ತಮ್ಮ ಮನಕೊಪ್ಪಿದರೆ | ಭೂತಳವನ್ನು

ಕೌರವನಿತ್ತರೆನಗಿನ್ನೇನು ದುಗುಡ || ೧೦೮ ||

ಕೃಷ್ಣಸ್ವಾಮಿಯೇ, ನನ್ನನ್ನು ಸಿಕ್ಕಿಸಿ ಹಾಕ್ತಿ ನೀನು. ಈವರೆಗೆ ನಮ್ಮ ಈ ರಾಜಕೀಯದಲ್ಲಿ ಮತದಾನದ ಹಕ್ಕು ನನಗೆ ಸಿಕ್ಕಿದ್ದೂ ಇಲ್ಲ., ನಾನು ಕೇಳಿದ್ದೂ ಇಲ್ಲ. ಯತಾರ್ಥ ಹೇಳ್ತೆನೆ, ಇಷ್ಟು ಪ್ರಾಯ ಆಗಿಯಾದ್ರೂ ನನಗೂ ವೊಂದು ಮತದಾನ ಮಾಡುವ ಹಕ್ಕು ಬಂತಲ್ಲ ಧನ್ಯೋಸ್ಮಿ!.

ಸತ್ಯಕ್ಕಾದ್ರೆ ಹೇಗೆ ಗೊತ್ತೊ? ಅಷ್ಟಕ್ಕೆಲ್ಲ ಬುದ್ಧಿಯನ್ನು ವೆಚ್ಚ ಮಾಡ್ವವ್‌ನೋ ನಾನು? ಬುದ್ಧಿವಂತನೊ? ಬುದ್ಧಿವಂತನೂ ಅಲ್ಲ. ಹಾಗಂತ ಭಾವ ಜೀವಿಯೊ? ಸನ್ನಿಧಾನಕ್ಕೆ ಗೊತ್ತುಂಟು. ಹ್ಞೆ, ಬುದ್ಧಿಜೀವಿ ಅಲ್ಲದೇ ಇದ್ದಂತಹ ಓರ್ವ ಅಭಾವ ಜೀವಿ ನಾನು. ನಾನೀಗ ನನ್ನ ಅಭಿಪ್ರಾಯ ಕೊಡ್ಬೇಕು? ಬುದ್ಧಿಯಿಲ್ಲದಿದ್ದವಿಗೆ, ಸ್ವಭಾವ ಶುದ್ಧಿಯಿಲ್ಲದಿದ್ದವಿಗೆಲ್ಲ ಮತದಾನದ ಹಕ್ಕು ಕೊಟ್ರೆ, ಕೊನೆಗೆ ಕೊಟ್ಟ ಮತವೂ ಕೂಡ ಯೆಲ್ಲಿಗೋ ಹೋಯ್ತು ಅಂತಾದೀತು. ನಾನೊಂದು ಬುದ್ಧಿವಂತಿಕೆಯ ಮಾರ್ಗ ಹಿಡೀತೆನೆ ಸ್ವಾಮಿ.

ಅಣ್ಣನವರು ಹೀಗೆ ಹೇಳಿ; ನೀನು ಒಪ್ಪಿ ಹೊರಟು ನಿಂತಿರುವೆ. ಅಲ್ವೊ? ಸುಲಭದ ದಾರಿ ಇದು, ನಾನು ನಿಮ್ಮ ಪಕ್ಷದವ. ಯಾಕೆ? ಈಗ ಬೇರೆ ಅಭಿಪ್ರಾಯ ಕೊಟ್ರೆ ಯಾಕೆ ಕೊಟ್ಟೆ ಅಂತ ವಿವರಣೆ ಕೇಳಿದರೆ ನಾನು ವಿವರಿಸಬೇಡ್ವೊ? ಇನ್ನೂವೊಂದು ಭಯ ಉಂಟು ನನಗೆ ಸನ್ನಿಧಾನದಲ್ಲಿ ಹೇಳೋದು- ನೀವಿಬ್ರೂ ವೊಂದಾದ್ರೆ, ನಾನು ಮತ್ತೆ ಬೇರೆ ಪಕ್ಷ ಕಟ್ಟುವುದೋ? ಬೇರೆ ಊರಿಗೆ ಹೋಗುವುದೊ? ಆದ ಕಾರಣ, ನಮ್ಮಣ್ಣನಿಗೆ ಇದು ನೀತಿ ಎಂತ ತೋರಿದರೆ, ನೀನೂ ಒಪ್ಪಿದರೆ, ಬಾಕಿ ಇದ್ದದ್ದು ಗೌಣ ಕೌರವ ಕೊಟ್ಟರೆ, ಬಿಟ್ಟರೆ ಅಂತ. ಅವ ಕೊಡ್ಲಿ ಬಿಡ್. ನೀವಿಬ್ಬರೂ ವೊಂದಾದಿರಿ ಇದರಲ್ಲಿ, ಅಂತಾದ್ರೆ ನನ್ನದು 'ಮೌನ ಮತದಾನ' ಉಂಟು! ನನಗೆ ಬಂದ ಸಂಕಟಯೇನು ವೊಬ್ನಿಗೆ?

(ದ್ರೌಪದಿಯ ಪ್ರವೇಶ)

ನೀನು...?! ಆಹ್, ಬಹುಕಾಲದಿಂದ ನಿರೀಕ್ಷಿಸುತ್ತಾ ಇದ್ದೆ, ಮತ್ತೊಮ್ಮೆ ಈ ಅಲಂಕಾರದಿಂದ ನಿನ್ನನ್ನು ಕಂಡೇನೆ? ನನ್ನ ಪುಣ್ಯ ಯಾಕೆ ಅಂತಂದ್ರೆ, ನಾರುಡೆಯಂಥ ಬಟ್ಟೆ ಉಟ್ಟು, ಹೂ ಮುಡೀಬೇಕು ಅಂತ ಆಸೆ ಪಟ್ಟಾವಾಗೂ ಮುಡೀಬಾರು ಎಂಬ ವ್ರತದ ಕಟ್ಟಿನೊಳಗಿದ್ದ ಪಾಂಚಾಲಿಯ ಚಿತ್ರ ನನ್ನ ಕಣ್ಣಿಗೆ ಕಸವಾಗಿತ್ತು. ಇದಾದ್ರೆ ಸರಿ, ಇನ್ ಯೇನುಂಟು ಯೇನಿಲ್ಲ ಅಂತಲ್ಲ. ಮತ್ತೊಮ್ಮೆ ನೀನು ಪಟ್ಟೆ ಪೀತಾಂಬರವನ್ನುಟ್ಟು, ಚಿನ್ನಾಭರಣಗಳನ್ನು ಧರಿಸಿ, ಹೀಗೆ ಬಂದೆಯಲ್ಲ? ನಾಳೆ ನಾನು ಸನ್ಯಾಸಿಯಾದ್ರೂ ಚಿಂತಿಲ್ಲ... ಯೆಷ್ಟೊಂದು ಸಂತೋಷವೇ! ಗೊತ್ತಾಯ್ತು ನನಗೆ, ಹೆ... ನಮ್ಮಲ್ಲಿ ನಡೆದದ್ದು ನಿನ್ನ ಕಿವಿಗೂ ಮುಟ್ಟದೆ ನಮಗೆಲ್ಲ ಒಳ್ಳೆ ಯೋಗ ಈಗ. ಹಾಗಾದ್ರೆ ಶ್ರೀಕೃಷ್ಣ ನಿನಗೆ ಯಾಕೆ ಹೇಳಿ ಕಳುಹಿಸಿದ?

ಗೊತ್ತಿಲ್ಲ! ಇವೊತ್ ಏನಾಗ್ಯದೆ? ಮಾತು ಮಾತ್ರ ಬದಲಾಗೋದಲ್ಲ, ನಿನ್ನೆ ಹೇಳಿದ ಮಾತಿಗೆ ಇವೊತ್ತು ಅರ್ಥವೇ ಬದಲಾಗುವುದುಂಟು. ನನಗೆ ಆದ ಅರ್ಥ ಇಷ್ಟು- ಅದೂ ಕೂಡ ಬೇರೆಯವರ ವ್ಯಾಖ್ಯಾನ ಕೇಳಿ, ಯಾಕೆ ಅಂತಂದ್ರೆ... ವಿಷಯ ನಿಜವಾಗಿಯೂ ಗೊತ್ತಿಲ್ವೊ? ಪಾಂಚಾಲೀ

ಸುರುಟಿ-ಏಕತಾಳ ಕೋಮಲಾಂಗಿ ಕೇಳೇ ಮದಗಜ ಗಾಮಿನಿ ಪಾಂಚಾಲೆ | ಕಾಮುಕ

ಕುರುಭೂಕಾಂತನ ನಿಳಯಕೆ | ಸ್ವಾಮಿಯ ಧರ್ಮಜ ಸಂಧಿಗೆ ಕಳುಹುವ || ೧೦೯ |

ನಿನ್ನೆಯದ್ದೆಲ್ಲ ಇಹೊತ್ತು ನೆನಪು. ಈ ಹೊತ್ತಿನದ್ದೆಲ್ಲ ಇಂದಿನ ಪ್ರತ್ಯಕ್ಷ ಅನುಭವ. ಈಗೇನು? ಅವ ಇದ್ದಾನಲ್ಲ, ಯಾರು? ಹೆಸರು ಹೇಳಬಾರದು ನಾನು. ನಮಗೇನುಂಟು? ಕೊಟ್ರೆ ಉಂಟು; ಅಲ್ಲದಿದ್ರೆ ಬಿಟ್ರೆ ಇಲ್ಲದಿದ್ರೆ ಬಿಡಿಸಿದರುಂಟು. ಇಷ್ಟೇ ಹೌದಲ್ಲ? ಈಗ ಏನಾಗ್ಯದೆ? ಅವ ಕೊಟ್ರೆ ಯುದ್ಧ ಯಾಕೆ ಬೇಕು ಅಂತ ಪ್ರಶ್ನೆ ಹುಟ್ಟಿ, ವೊಂದ್ ಜನ ಹೋಗ್ಲಿಕ್ಕೆ ತಯಾರಾಗ್ಯದ ಹಸ್ತಿನಾವತಿಗೆ ಆ ಕಾಮುಕನಾದಂತಹ ಕುರು, ಕುರುಬ ಅಲ್ಲ. ಕುರು ಭೂಪ! ಅವನ ಅರಮನೆಗೆ... ಕಳುಹಿಸುವವ ನಮ್ಮಣ್ಣ. ಅದು ದೊಡ್ಡದಲ್ಲ. ಯಾಕೆ? ಬೇಡಿ ತಲ್ಲಿಕ್ಕೆ. ಹೌದು... ಹೌದಪ್ಪ, ಮಕ್ಕಳಿಗೆ ಮದುವೆಯಾಗುವ ವಯಸ್ಸಾಯ್ತು, ನನಗೆ ನಿನ್ನನ್ನು ಗೋಳು ಹೊಯಿಸುವ ರಸಿಕತನ ಯೇನು ನನಗೆ! ಅದಲ್ವೆ, ಅದಲ್ಲ. ಸತ್ಯ ಹೇಳ್‌ಬೇಕೊ?

ನಮ್ಮಣ್ಣ ಕಳುಹಿಸುವವ ಸಂಧಾನಕ್ಕೆ, ಅದಕ್ಕಿಂತ ಹೆಚ್ಚಿಗೆ ಇಲ್ಲಿ ಒಂದು ವಿಷಯ ಉಂಟು. ಕಳುಹಿಸುವವ ನಮ್ಮಣ್ಣನಾದ್ರೂ ಹೋಗುವವ ನಿಮ್ಮಣ್ಣ, ಸಂಧಿ ಹೇಗೆ ಅಂತ ಗೊತ್ತುಂಟೆ? ಹ ಕೇಳೀಗ...

ಸುರುಟಿ-ಏಕತಾಳ|| ಆತನ ದುಷ್ಕೃತವು | ಮಗುಳಿನ್ನಾತನ ಹೊದ್ದುವದು |

ಆತನೊಳನುವರವೇತಕೆ ನಮಗೆ | ದಾತನೊಳೆದೂರೀತನು ಬೇಡುವ || ೧೧೦ ||

ಶಾಸ್ತ್ರವನ್ನು ಚೆನ್ನಾಗಿ ಓದಿ ಅರ್ಥ ಮಾಡಿಕೊಂಡ ನಮ್ಮಣ್ಣನಿಗೆ, ಶಾಸ್ತ್ರದಲ್ಲಿ ಹಾಗಿಲ್ಲ ಅಂತ ಹೇಳಲಿಕ್ಕೆ ಮನಸ್ಸು ಬಂದೀತೋ? ಶಾಸ್ತ್ರದಲ್ಲಿ ಏನುಂಟು? ಆತ ತಾಯಿ, ದುಷ್ಟ, ಪಾಪಿಯನ್ನು ಕಂಡಲ್ಲಿ ತಲೆಕಡೀಬೇಕು. ನಮ್ಮಣ್ಣನಿಗೆ ಅದು ಗೊತ್ತುಂಟು. ಇಲ್ಲಿ ಏನಾಗ್ಯದೆ ಅಂತಂದ್ರೆ, ಕೌರವ ಅಂಥವನೇ ಹೌದು; ಅದರಲ್ಲಿ ಆಕ್ಷೇಪ ಇಲ್ಲ. ವೊಂದು ಸಂದೇಹ- ನಾನಿದಕ್ಕೆ ದಂಡನೆಯನ್ನು ಕೊಟ್ರೆ ನನ್ನ ತಂದೆಯ ಅಧಿಕಾರದ ಮೇಲೆ ಹಲ್ಲೆಯಾದೀತೋ ಅಂತ ನಮ್ಮ ಅಣ್ಣನ ತಲೆಗ್‌ಹೋದದ್ದು ಅದು. ತಂದೆ ಅಂತಂದ್ರೆ...ಯಮಧರ್ಮರಾಯ! ಆದಕಾರಣ ಇದು ಅವನ ನ್ಯಾಯಾಲಯದಲ್ಲೇ ನಾಳೆ ತೀರ್ಮಾನವಾಗಬೇಕಾದಷ್ಟು ದೊಡ್ಡದಾಗ್ಯದೆ. ನಾವು ಮಾಡಿದರೆ ಅದಕ್ಕೆ ಸಾಕಷ್ಟು ಶಿಕ್ಷೆಯೂ ಆಗ್‌ಲಿಕ್ಕಿಲ್ಲ. ಇನ್ನೂ ಒಂದುಂಟು. ಇದು ಪ್ರತೀಕಾರ ಅಂತ ಬಂದೀತು. ಆದಕಾರಣ ವಿಷಯಯೆಲ್ಲ ಈವರೆಗೆ ಬೆಳೆದುಬಂದದ್ದು ನನಗೆ ಗೊತ್ತುಂಟು. ಈಗ ನಾನು ಈ ತೀರ್ಮಾನಕ್ಕೆ ಬಂದಿದ್ದೇನೆ. ಕೌರವನ ಅಪರಾಧಕ್ಕೆ ಯಮನೇ ಶಿಕ್ಷೆ ಕೊಡ್‌ಲಿ,

ವೊಂದ್ ಹೇಳ್ತೇನೆ ನಿನಗೆ, ನಮ್ಮಣ್ಣ ರಾಜಕಾರಣಿ ಅಲ್ವೊ? ಹೌದು. ಲೌಕಿಕ ವ್ಯವಹಾರಿ ಅಲ್ವೊ? ಹೌದು. ಯೆಲ್ಲಕ್ಕಿಂತ ಹೆಚ್ಚಿಗೆ ಅವ ನಮ್ಮ ಹಾಗಲ್ಲ. ನಮಗಿಂತ ಸ್ವಲ್ಪ ಎತ್ತರ. ಕೃಷ್ಣ ಇರುವಾಗ ಕೃಷ್ಣನಿಂದ ಸ್ವಲ್ಪ ಸಣ್ಣದಷ್ಟೇ, ನಿನಗೂ ಗೊತ್ತುಂಟಲ್ಲ? ಹಾಗಾಗಿ, “ಅವ ಮಾಡಿದ್ದನ್ನು ಅವ ತಿಂತಾನೆ ಕೃಷ್ಣ” , ದೊಡ್ಡ ಮಾತು! ದೊಡ್ಡಮಾತು!! ಈಗ ನಮ್ಮ ಹಾಗೆ ಸ್ವಲ್ಪ ಉಪ್ಪು, ಹುಳಿ, ಖಾರ ಹೆಚ್ಚು ತಿನ್ನುವವರಿಗೆ ಇದು ಬಂದೀತೊ? ಯೆಂಥಾ ಮಹಾ ಪುರುಷ ನಮ್ಮಣ್ಣ ನಮ್ಮಣ್ಣ ಉತ್ತಮ ಪುರುಷ, ನಿಮ್ಮಣ್ಣ ಪುರುಷೋತ್ತಮ! ಹಾಗಾಗಿ ಉತ್ತಮ ಪುರುಷ ಆಚೆ-ಈಚೆ ಆಗಿ ವೊಟ್ಟು ಅದು ಅಲ್ಲೇ ವೊಂದಾಗದೆ. ನಾವೆಲ್ಲ ಜನಗಳು! ತಿಳೀತಲ್ಲ? ಇವರಿಬ್ಬರಿರೂ ವೊಂದಾಗಿ ಹೀಗೆ ತೀರ್ಮಾನಕ್ಕೆ ಬಂದದ್ದರಿಂದ, ಈಗ ಎಲ್ಲಿಗೆ ಮುಟ್ಟದೆ? ಆತನೊಳೆದೂರೀತನು ಬೇಡುವ ಈತನು ಅಂದ್ರೆ ಯಾರು? ನಿಮ್ಮಣ್ಣ ಅಲ್ಲ. ಅದು ಪ್ರೀತಿಯಿಂದ ಹೇಳೋದು ಅವ. ಇದ್ದಾನೆ ವೊಳಗೆ. ಬಹುಮಾನಾರ್ಹ. ಅಣ್ಣ ಅಂತ ಹೇಳಿದ್ರೆ ಸಣ್ಣದಾಗದೆ ಸ್ವಾಮಿ ಅಂತ ಹೇಳಿದ್ರೆ ಇಲ್ಲಿ ವೊಬ್ಬ ಕೃಷ್ಣ ಇದ್ದಾನೆ. ವೋಗುಡಲಿಕ್ಕೆ ಇಬ್ರೂ ಬರ್ತಾರೆ. ಹಾಗಾಗಿ ಆತನೊಳು ಐದೂರು ಈತನು ಬೇಡುವ. ತಿಳೀತಲ್ಲ? ಗೊತ್ತಾಯ್ತಲ್ಲ?

ನಾನು ರಾಜಕಾರಣಿ ಅಲ್ಲ ನೋಡು. ನಿನಗಾದ್ರೂ ಗೊತ್ತುಂಟು. ಮಂತ್ರಾಗಾರ ಅಂತಾದ್ರೆ ಇದ್ದವರನ್ನೆಲ್ಲ ಕರೆದು ಕೇಳಬೇಡವೋ ಅಂತ. ಅ ಅದು ನಿಮ್ಮಣ್ಣನಿಗೆ ಗೊತ್ತಾಯ್ತು. ಅವ ಕರ್ದ ನನ್ನನ್ನು ಕೂಡ. ನಾನ್ ಗ್ರಹಿಸಿಕೊಂಡೆ ಯೇನೋ ಇವ ಅಧಿಕಪ್ರಸಂಗ ಮಾಡ್‌ತಾನೆ. ನನ್ನನ್ನು ಸಿಕ್ಕಿಸಿ ಹಾಕ್‌ಲಿಕ್ಕೆ ಅಂತ, ಈಗ ನೀನು ಹೇಳ್ವಾಗ ನನಗೆ ತೃಪ್ತಿಯಾಯ್ತು.

ಈ ಮಂತ್ರಾಗಾರ ಅಂತಾದ್ರೆ ನಮ್ಮನ್ನೆಲ್ಲ ಕರದು ಕೇಳೇಕಲ್ವೊ?

ಕೇಳ್ದ , ಕೇಳ್ದ, ಕೇಳುವಾಗ ನಾನೇನು ಮಾಡಿದೆ? ಮರ್ಯಾದೆ ಉಳಿಸಿಕೊಂಡೆ...ಹ

ಸುರುಟಿ-ಏಕತಾಳ॥ ನಾವೆಲ್ಲವರಿದರೆ | ವೊಪ್ಪಿಹೆವೀವಿಜಯೋತ್ಸವಕ್ಕೆ | ಭಾವಕಿ ನಿನ್ನಯ

ಭಾವ ಗಳೇನನ ಲಾವನಿತೆಯ ಮೊಗದಾವರೆ ಕಂದಿತು || ೧೧ |

ನನ್ನದು ಯಾವಾಗೂ ಮಧ್ಯಮ ಮಾರ್ಗ. ನಿನ್ಗ  ಗೊತ್ತುಂಟು. ಆದ್ದರಿದಲೇ ಈ ಪ್ರಪಂಚದಲಿದ್ದಂತಹ ವಿದ್ವಾವಂಸರ ಕೂಟದಲ್ಲಿಯೂ ನಾನು ಮಧ್ಯಮ. ನಮ್ಮ ಅಮ್ಮ ಹಡೆದ ಮಕ್ಕಳಲ್ಲಿಯೂ ನಾನು ಮಧ್ಯಮ. ಹೀಗೆ ನೋಡಿದರೆ ಎಲ್ಲರಲ್ಲಿಯೂ ನಾನು ಮಧ್ಯಮ. ಈ ಮಧ್ಯಮನಾದವ ಬದುಕುವ ಹಾದಿ ಹೀಗೆ ಕಾಣಬೇಕು ಅಂತ ಫಕ್ಕನೆ ನನಗೆ ತಲೆ ಹೊಳೀತು. ಮಹಾನಾಯಕರು, ಲೋಕನಾಯಕರು, ಇವರ ಕಡೆಗೆ ನಾವು ಮತದಾನ ಮಾಡಿಬಿಡುವ, ಯಾಕೆ? ಸೋತರೆ ನಾಯಕರು ಸೋತರು. ಮತದಾನ ಮಾಡಿದವ ಸೋಲ್ತಾನೋ? ಇಲ್ಲ.

ನಾನ್ ಅಲ್ಲಿಗೆ ನನ್ನ ಅಭಿಪ್ರಾಯವನ್ನು ಕೊಡೋದಿಲ್ಲ ಅಂತ್ ಹೇಳೋಣ್ವೋ, ಅದು ಕಷ್ಟ! ಅದು ಕಷ್ಟ! ಆದ್ದರಿಂದ ನಾನು ವೊಪ್ಪಿಬಿಟ್ಟೆ. ಹ್ಯಾಗೆ? ನೀವಿಬ್ರೂ ವೊಂದಾದ ಮೇಲೆ ನಾನೊಬ್ಬ ಬೇರೆಯೋ? ನಾನು ಯಾರನ್ನೂ ಬಿಡಲಾರೆ ಕೃಷ್ಣ, ಅಣ್ಣನನ್ನೂ ಬಿಡಲಾರೆ. ಅಣ್ಣನನ್ನಾದ್ರರೂ ಬಿಟ್ಟೇನು ಕೃಷ್ಣಾ, ನಿನ್ನನ್ನು ಬಿಡಲಾರೆ. ನೀನೆಲ್ಲಿ; ಅಲ್ಲಿ ನಾನು. ಆದಕಾರಣ ಯೇನು ಮಾಡಿದ್ದೇನೆ ಗೊತ್ತೋ? ಹ ಯೇನು ಮಾಡಿದ್ದೇನೆ?

ರೂಢಿಯ ಭಾಷೆಯಲ್ಲಿ ಹೇಳ್ತೇನೆ ಸಹಿಮಾಡಿ, ಬರೀಲಿಕ್ಕೆ ಅವನಿಗೆ ಬಿಟ್ಟಿದ್ದೇನೆ. ಆದ್ದರಿಂದ ನಾನ್ ಯೇನ್ ಈಗ ತೀರ್ಮಾನ ಮಾಡಿದ್ದೇನೆ? ನಾಳೆ ಅಪವಾದಕ್ಕೂ ನಾನಿಲ್ಲ. ಸಿಕ್ಕಿದರೆ ಪಾಲಿಗೆ ನಾನಿದ್ದೇನೆ. ನಷ್ಟಯೇನುಂಟು?

ಸಿಕ್ಕದಿದ್ದರೂ ನಾನ್ ಅಪರಾಧಿಯಲ್ಲ. ಸಿಕ್ಕಿದರೆ ದುಡಿಯದೇ ನನಗೂ ಸಿಕ್ಕಿತು. ನಾನು ಅಂತಲ್ಲ. ನಾವೆಲ್ಲವರು ಇದಕ್ಕೆ ವೊಪ್ಪಿಹೆವು. ಇದು ನಮ್ಮ ಜೀವಮಾನದಲ್ಲಿ. ವೊಂದು ಉತ್ಸವ, ಉತ್ಸವ ಅಂತಂದ್ರೆ ನಿತ್ಯ ಬರೂದಲ್ಲ ಅದು ಅಪರೂಪಕ್ಕೆ ಇವೊತ್ತು ನಮ್ಮ ಬದುಕಿನಲ್ಲಿ ಇದೊಂದು ವಿಜಯೋತ್ಸವ ಆಗದೆ, ಬಹುಶ: ಅದಕ್ಕೆ ಧ್ವಜಾರೋಹಣ ಮಾಡ್ಲಿಕ್ಕೆ ನಾವೆಲ್ಲ ಗ್ರಹಸ್ಥರಾದದ್ರಿಂದ, ಕೃಷ್ಣ ನಿನ್ನನ್ನು, ಸೌಟಿನಲ್ಲಿ ನೀರ್ ಹಾಕ್ಲಿಕ್ಕೆ ಕರ್ದದ್ದೊ ಯೇನೋ! ಆದಕಾರಣ ಹೋಗು. ಹ ಹ್ಹ  ನೀರ್ ಹಾಕೋದು - ಯಾವುದರಿಂದ ಗಿಂಡಿಯಿಂದ ನಮ್ಮಣ್ಣನ ಕೈಗೆ, ಕಣ್ ನೀರ್ ಹಾಕ್ಲಿಕ್ ಹೇಳಿದ್ದಲ್ಲ ನಾನು. ಯಾಕ್ ಅತ್ತೀ?

ಹೂಂ... ಸುಳ್ ಹೇಳ್ಲಿಕ್ಕೆ ವೊಳ್ಳೆ ಚುರುಕು ಬೇಕು. ಸತ್ಯ ಹೇಳಲಿಕ್ಕೆ ಮಕ್ಕಳಾದ್ರೂ ಸಾಕಾಗ್ತದೆ. ಈಗ ನನ್ನ ಸ್ಥಿತಿ ಹಾಗೆ ಅದನ್ನೇನ್ ಕೇಳ್ತಿ? ಗೂಡಿನಲ್ಲಿ ಬಿದ್ದ ಸಿಂಹಕ್ಕೆ ಪೆಟ್ಟುಬಿದ್ರೆ ಬಾಯ್ ಮುಚ್ಚಿ ಬೀಳ್ತದೆ ಅದು.

ಇಕೋ ನನಗೆ ಫಕ್ಕನೆ ಇದೆಲ್ಲ ಅರ್ಥಾಗೋದಿಲ್ಲ. ಈ ನಿಮಗೆ, ನಿಮಗೆ ಅಂತ ನನ್ಗ್ ವೊಬ್ಬನಿಗೇ ಹೇಳಿದ್ದೋ? ಎಲ್ಲರಿಗೋ? ನನ್ನ ಮಟ್ಟಿಗಾದ್ರ್ ಹೇಳ್ತೇನೆ. ಜೋಳಿಗೆ ಹಾಕಿಕೊಂಡು ಹೋಗ್‌ಬಾರೊ ಅಂತಲ್ಲೊ? ಹೋಗ್ಲಿಲ್ವೇ ಹಿಂದೆ...? ಅದರಿಂದ ನಮಗೆ ನಾಚಿಕೆಯಾಗೋದಿಲ್ಲ. ಯಾಕೆ? ಅಭ್ಯಾಸ.

ಸನ್ಯಾಸಿಯಾಗ್ಲಿಕ್ಕೆ ನನಗೆ ಹೆದರಿಕೆಯಾಗ್ತದೆ. ನಮ್ಮ ಅಣ್ಣನಿಗೆ ವೊಳ್ಳೆ ಅಭ್ಯಾಸ ಉಂಟು. ಅರ್ಜುನನಿಗೂ ಅಭ್ಯಾಸ ಉಂಟು! ನನಗಿಲ್ಲ! ಈಗ ಅವರ ಹಾಗೆ ಕಾವಿ ಬಟ್ಟೆ ನಾನೂ ಉಡೋಣ ಅಂತ ಮನಸ್ಸು ಮಾಡಿದರೂ ಸನ್ಯಾಸಿಗಳು ನನ್ನನ್ನು ಹೊಡೆದು ಓಡಿಸ್ಯಾರು. ಹಾಗಾಗಿ ಅಲ್ಲಿಗೆ ನಾನು ಜನ ಅಲ್ಲ. ಇಲ್ಲಿಗೆ ಜನ ಹೌದು; ಜನನಾಯಕ ಅಲ್ಲ. “ಸಂಧಾನ ಮಾಡಿಕೊಳ್ಳುವ ಬದಲು ನೀವೆಲ್ಲ ಸನ್ಯಾಸಿಗಳಾದ್ರೆ ಏನಾಗಿತ್ತು? ನೀವೆಲ್ಲ ಜೋಳಿಗೆ ಹಿಡ್ಕೊಂಡ್ ಹೋಗ್ಬಾರ್ದೊ?” ಅಂತ ನೀನು ಹೇಳುವದಾದ್ರೆ ಅಣ್ಣ ಹೊರ್ಡ್‌ಲಿ, ನಾ ಹೊತೇನೋ ಇಲ್ವೊ ನೋಡು. ಮತ್ತೆ ತಮ್ಮನೂ ಬರ್ಲಿ. ಜೋಳಿಗೆ ಹಿಡ್ಕೊಂಡು ಆವಾಗ ನಾನು ದೊಡ್ಡ ಜೋಳಿಗೆ ತಕ್ಕೊಂಡು ಹೋಗಿ, ಅವರು ಭಿಕ್ಷೆ ಎತ್ತಿದ್ದಕ್ಕಿಂತ ನಾಲ್ಕು ಪಾಲು ಹೆಚ್ಚು ತತ್ತೇನೋ ಇಲ್ವೊ ನೋಡು.

ಯಾಕೆ? ನಾನು ಹೋದಲ್ಲಿ ಮನೆ ಬಾಗಿಲು ಹಾಕೋದಿಲ್ಲ ಯಾರೂ ಯೆಲಾ! ವೊಳಗೆ ನಾನೊಬ್ಬ ಪಾಪದವ ಇಲ್ಲಿ ಸಿಕ್ಕಿಬಿದ್ದದ್ದು ಅದು, ನಾನ್ ವೊಪ್ಪಿದ್ದೇನೆ. ಈಗ ನಾನ್ ಹೇಳಿದ್ದೇ ಸರಿಯಾಗ್ಬೇಕು ಅಂತ ಹಟ ಇಲ್ಲ ನನ್ಗೆ. ಪ್ರಶ್ನೆ ನಿನ್ನದು ದೊಡ್ಡದು. ಉತ್ತರಿಸಬೇಕಾದವ ನಾನೂ ಅಲ್ಲ. ಆದ್ರೆ ನನ್ನ ಈ ಮಂದಬುದ್ಧಿಗೆ ಹೀಗೆ ಹೊಳೀತದೆ. ನಾವೆಲ್ಲ ಇಲ್ಲಿ ಯೇನು ಅಂತ ನಿನ್ಗ್ ಗೊತ್ತು. ನೀನು ಮಕ್ಕಳನ್ ಹಡೆದ ತಾಯಿ. ಹಾಗಾಗಿ ಇದು ಕೌಟುಂಬಿಕವಾದ ಉದಾಹರಣೆ ನಾನು ಕೊಡೋದು- ಮೊಲೆ ಹಾಲು ಕುಡಿಯುವ ಮಗುವಿಗೆ ಹೊಟ್ಟೆಯಲ್ಲಿ ಯೇನಾದರೂ ರೋಗ ಉಂಟಾದ್ರೆ, ನಮ್ಮಲ್ಲಿ ವೈದ್ಯರು ಯೇನ್ ಹೇಳ್ತಾರೆ; ತಾಯಿ ಔಷಧ ತಕ್ಕೊಳ್ಳೋಕು ಅಂತ ಅಲ್ವೊ? ಇಲ್ಲಿ ನಮ್ಮ ತಾಯಿಗೆ ಔಷಧ ತಕ್ಕೊಳ್ಳುವ ಪ್ರಮೇಯ ಇಲ್ಲ . ತಾಯಿಗೆ ಖಂಡಿತ ಗೊತ್ತುಂಟು. ಹೊಟ್ಟೆಯಲ್ಲಿ ರೋಗ ಅಲ್ಲ; ಅದು ಹುಟ್ಟಿದ್ದು, ಜೀರ್ಣಶಕ್ತಿ ಸುಟ್ಟಿದ್ದು, ಆವಾಗ ಈ ಮಗುವಿಗೆ ಆ ಹಾಲು ಕುಡಿದರೆ ಆರೋಗ್ಯ ಆಗ್ತಿದೆ. ನೀನ್ ಹೇಳೋದ್ ಹೌದು. “ನೀವೆಂಥವು”? “ಗಂಡುಗಲಿಗಳು?

ನಮ್ಮ ಯಜಮಾನನ ಮುಂದೆ ನಾವೆಲ್ಲ ಇನ್ನೂ ಶಿಶುಗಳು, ಮತ್ತಿನ್ನೊಂದ್ ಉಂಟು. ತಪ್ಪು ನೀನು ಮಾಡಿದ್ದೀ ಅಂತ ನಾನ್ ಹೇಳೋದಿಲ್ಲ. ಆವೊತ್ತು ಮತ್ಸ್ಯಲಾಂಛನವನ್ನು

ಬೇಧಿಸಿ, ಬೇಡ ನಿನ್ನ ಅಪ್ಪ ದೇವರಿಗೆ ಹರಕೆ ಹೊತ್ತು, ಯಜ್ಞ ಮಾಡಿ, ಹೆಣ್ಣು ಮಗಳಾದ ನಿನ್ನನ್ನು ಪಡೆದದ್ದು ಯಾರಿಗೆ ಕೊಡ್ಲಿಕ್ಕೆ ಅಂತ? ಮತ್ಸ್ಯಲಾಂಛನ ಬೇಧಿಸಿದ್ ಯಾರು? ಅದ್ ಯಾಕೆ ನೀನು ಐದು ಜನರಿಗೆ ಮಾಲೆ ಹಾಕಿದ್ದು? ನಾಕು ಜನರಿಗೆ ಹಾಕು, ನನ್ಗ್ ಹಾಕಿದ್ ಯಾಕೆ? ಅದು ನಿನ್ನ ಪ್ರಾರಬ್ಧ. ಅಲ್ಲಿಗೆ ಬಾ.

ಯಾರಲ್ಲೂ ಹೇಳ್‌ಬೇಡ. ಆ ದ್ಯೂತದ ಸಭೆಯಲ್ಲಿ ನಾನ್ ಯೇನ್ ಆಗಿದ್ದೆ ಗೊತ್ತೊ? ಯಾಕೆ? ನಿನಗೆ ಕಾಣ್‌ಲಿಲ್ಲ ಅದು ಕಣ್ಣಲ್ಲಿ ತುಂಬ ನೀರಿತ್ತು. ಮಸುಕು ಮಸುಕಾಗಿತ್ತು. ನನ್ನ ಸಂಕಟ ನಾನು ಸಹಿಸಿಕೊಂಡದ್ದು. ಯಾಕೆ? ಸತ್ಯಕ್ಕಾದ್ರೆ ನಮ್ಮಣ್ಣ ಧರ್ಮರಾಯನ ಕೈ ಸುಡ್ತೇನೆ ಅಂತ ನಾ ಬೆಂಕಿಗೆ ಕೈ ಹಾಕಿದ್ದೆ. ಅಣ್ಣ, “ಸಾಕು ಮಾಡು” ಅಂತಂದ. ಆದರೆ ಒಂದುಂಟು, ಮರ್ಯಾದೆ ಉಳಿತು!

ಮರ್ಯಾದೆ ಹೋಯ್ತೋ? ಯೆಲ್ಲಿ? ಯಾವಾಗ? ನಿನಗೆ ಅದರ ವಿಷಯವೇ ಗೊತ್ತಿಲ್ವೊ ಹಾಗಾದ್ರೆ? ಇದೆಲ್ಲ ನಮ್ಮೊಳಗೆ ಮಥನ ಆಗಿತ್ತು. ನಮ್ಮ ದೊಡ್ಡಣ್ಣ ಯೇನ್ ಹೇಳಿದ ಗೊತ್ತೋ? ಎಹ್ ನಮ್ಮ ಮರ್ಯಾದೆ ಉಳೀತು. ತಮ್ಮಂದಿರೇ. ಯಾಕೆ? ಶ್ರೀಕೃಷ್ಣ ನಿನಗೆ ಅನುಗ್ರಹ ಮಾಡಿದ ಅಲ್ಲ? ಅಕ್ಷಯಾಂಬರ ಆಯ್ತಲ್ಲ? ಕಾರಣ ಯೇನು ಗೊತ್ತುಂಟೊ?

“ಧರ್ಮೋ ರಕ್ಷತಿ ರಕ್ಷಿತಃ”. ನಮ್ಮ ಧರ್ಮ- ದೇವರ ರೂಪದಲ್ಲಿ ಬಂದು ಹೆಂಡತಿಯ ಮಾನ ರಕ್ಷಿಸಿತು. ಹೆಂಡತಿಯ ಮರ್ಯಾದೆ ಹೋದ್ರೆ ನಮ್ಮ ಮರ್ಯಾದೆ ಹೋದ ಹಾಗೆ, ಅವಳದ್ದು ಉಳಿದದ್ದರಿಂದ ನಮ್ಮದೇನೂ ಹೋಗಲಿಲ್ಲ...! ಸುಮ್ನೆ ನೀನು ನನ್ನನ್ನು ಇಕೋ ತಲೆಬಿಸಿ ಮಾಡಿ ಹಾಕ್ಬೇಡ. ಇಕೋ ಇಕೋ ನಿನ್ಗ್ ವೊಂದ್ ಮಾತ್ ಹೇಳಲೋ? ವೊಂದ್ ಮಾತ್ ಹೇಳಲೋ? ಹೇಳಲೋ? ಆ... ಹೇಳಿದ್ರೆ ಕೇಳ್ತೀಯಾ?

ಭಾಮಿನಿ॥ ಲಲನೆ ತಾನತಿ ಮರುಗುತಿರಲಾ | ಕಲಿಮರುತ್ಸುತ ನುಡಿದ ತನ್ನಿದಿ |

ರೊಳಳಲದಿರು ನಾಮಾಳ್ವುದೇನರಿಭಟರ ಮುಂದಿನಲಿ ॥ ೧೧೨ |

ನೋವಿನಲ್ಲಿಯೂ ಸಂತೋಷಪಟ್ಟವ ನಾನು; ನಿನ್ನ ನಗುಮುಖವನ್ನು ನೋಡಿ. ಅಲ್ಲವೊ? ಈ ಹೊತ್ತಲ್ಲ. ಯಾವಾಗ? ಇದು ನನ್ನದೂ ಪ್ರಾರಬ್ಧವೋ ಅಂತ ನಾನು ಆಲೋಚಿಸುವುದು. ನಿನಗೆ ಕಣ್ ನೀರ್ ಹಾಕ್ಲಿಕ್ಕೆ ಸಿಕ್ಕೋದು ನಾನಿದ್ದಲ್ಲೇ ಅಲ್ವೊ ಸ್ಥಳ? ನಿಮಗೆಲ್ಲ ಹೆಂಗಸರಿಗೆ ಹೇಳಲಿಕ್ಕೆ ಬರದೆ. ನನ್ನ ಪ್ರಾರಬ್ಧ, ನನ್ನ ಪ್ರಾರಬ್ಧ! ಗಂಡಂದಿರ ಮುಂದೆ ತಲೆ ಹೊಡ್ಕೊಳ್ಳೋದು. ನಾನೆಲ್ಲಿ ತಲೆ ಹೊಡಿಯೋದು? ನನ್ನಪ್ಪ ಸತ್ ಹೋಗಿದ್ದಾನೆ. ಅಮ್ಮ ಈ ಊರಲ್ಲಿಲ್ಲ. ಅಲ್ಲ... ಅದೇ ನಾನ್ ಹೇಳಿದ್ದು ನಾನ್ ಹೇಳಿದ್ ಕೇಳೀಯೋ ಅಂತ. ನನ್ನ ಇದ್ರು ಯಾವಾಗೂ ಬಾ. ಯಾವಾಗೂ ಬಾ. ಕೃತಕವಾದ

ಸಂತೋಷವನ್ನಾದರೂ ಅಭಿನಯಿಸು. ನಗಾಡ್ತಾ ಹೋಗು. ಅದಕ್ಕಿಂತ ಹೆಚ್ಚಿಗೆ ನನ್ನ ಬದುಕಿನಲ್ಲಿ ನಿನ್ನ ಕುರಿತಾಗಿ ಇನ್ನು ಬಯಕೆ ಏನೂ ಉಳೀಲಿಲ್ಲ. ಇಕೋ ನಿನ್ನಲ್ಲಿ ವೊಂದೆ ಪ್ರಶ್ನೆ. ಯೆಲ್ಲವರೂ ಹಾಗೆ, ಹೇಗೆ? ಆವಾಗ ಹೇಳಿದ ಹಾಗೆ ನಾನೊಬ್ಬ ಎಲ್ಲಿ ಹೋಗಿ ಹಗ್ಗ ತೆಕ್ಕೊಳ್ಳೋಕು ಅಂತ ಹೇಳೋದು ನೀನು? ನಾನೊಬ್ಬ ಹೋಗಿ ಯೇನ್ ಮಾಡೋದು ಹೇಳು.

ಯೇ... ಇಕೋ ಇಕೋ ಪ್ರಾರಂಭಕ್ಕೆ ನಾ ಹೇಳಿದ್ದು ಬಿಡಬೇಡ. ನನ್ನಲ್ಲಿ ಬೇರೆ ಯಾವ ಸದ್ಗುಣವನ್ನು ನೀನು ಕಾಣದಿದ್ರೂ ಚಿಂತಿಲ್ಲ.

ಇಲ್ಲಿ ಕೇಳೇ. ಇಲ್ಲಿ ಕೇಳು. ನಾನು... ನಾನು ಎಂಬುದನ್ನು ವೊಂದು ಪ್ರತ್ಯೇಕ ಇಡ್ಡ ನನ್ನ ಆ ವೊಡಲ... ತಿಳೀತಲ್ಲ? ನನ್ನ ಸುದ್ದಿ ಬಿಡು. ಆ ಕನಕ ಬ್ರಾಹ್ಮಣ ಬಂದು ಯೆಂಥ ಮಾಟ ಮಾರಣ ಮಾಡಿದ್ದು? ನೆನಪುಂಟಲ್ಲ?

ಮಂತ್ರ ದೇವತೆಯನ್ನು ಬಿಡುವಾಗೂ ಕೂಡ ಆ ದೇವತೆಗೂ ಕೂಡ ವೊಂದ "ದಿಗ್ ಬಂಧನ" ಮಾಡ್ತಾರಂತೆ. ಆವಾಗ ಅದು ಇವ ಹೇಳಿದ ಹಾಗೆ ಕೇಳ್ತದಂತೆ. ನಾನೇನ್ ಅಂಥದ್ದೊ? ಸಾಮಾನ್ಯ ಮನುಷ್ಯ. ಆದ್ದರಿಂದ ನನ್ನನ್ನು ಈಗ ಪ್ರತ್ಯೇಕಿಸಿಡು. ಮೊದಲು ಹೇಳಿದ್ದನ್ನು ನೆನಪು ಮಾಡು. ನಿನಗೆ ಯೇನಾಗೇಕು? ನಾನಲ್ಲ ಹೇಳೋದು. ಆದ ಕಾರಣ, ಹೋಗು ಹೋಗು... ಅಲ್ಲಿಗ್ ಹೋಗು.

|| ಭಾಮಿನಿ || ತಿಳುಹು ಯಮಜಗೆ ನರಗೆ ಕೃಷ್ಣಗೆ / ಒಲಿಸಿ ನಕುಲಾದಿಗಳನುರೆ ಮೂ |

ದಲಿಸಿ ರೋಷವನೇಳಿಸೆನಲೆಂದಳು ಸರೋಜಾಕ್ಷಿ || ೧೧೩ |

ನಾನಿಲ್ಲಿ ಮಧ್ಯಮ. ನಾನ್ ಅದನ್ ಬಿಡ್‌ಲಿಕ್ಕಿಲ್ಲ. ಹೋಗು ಧಾರಾಳ, ಧರ್ಮ ಸೂಕ್ಷ್ಮಯೆಲ್ಲ ಚೆನ್ನಾಗಿ ತಿಳಿದವ, ಆ ಹೊತ್ತು ನೀನು ಪ್ರಶ್ನೆ ಕೇಳಿದ್ದು ನನಗೆ ನೆನಪುಂಟು. ಉತ್ತರ ನೆನಪಿಲ್ಲ. ಅದಿನ್ನೂ ಅಲ್ಲಿ ಬಾಕಿ ಉಂಟು. ಉತ್ತರ ಸಿಕ್‌ಲಿಲ್ಲ? ಯಾಕೆ? ಈಗ ಕೇಳು ನಮ್ಮಣ್ಣನ ಹತ್ರ ಗೊತ್ತಿಲ್ಲದವರ ಹತ್ರ ಧರ್ಮಜಿಜ್ಞಾಸೆ ಹೇಗೆ? ಇದು ಜ್ಯೋತಿಷ್ಯರ ಹತ್ರ ಸಂಗೀತದ ಆರೋಹಣ ಅವರೋಹಣ ಹೇಗೆ? ಅಂತ ಕೇಳಿದ ಹಾಗೆ, ನಾನು ಮೊದಲಿನಿಂದ ಪೆಟ್ಟಿನ ಜನ, ಹೊಡೀ ಅಂತಂದ್ರೆ ಯೇನು? ಕೃಷ್ಣ ನನ್ನನ್ನು ಕರೀವಾಗ ಯತಾರ್ಥಕ್ಕೂ ನನಗೆ ಆ ಭಾವ ಮೂಡಿತ್ತು. ನಿನಗೆ ದಾರಿ ಹೇಳಿಕೊಡ್ತೀನೆ. ನಮ್ಮಣ್ಣನ ಹತ್ರ ಹೋಗು. ಹೆದ್ರಿಕೆಯಾಗ್ತದೊ? ಅಥವಾ ಬೇಡ ಅಂತುಂಟೊ? ನಿನಗೆ ಕರೆ ಕಳಿಸಿದ್ದು ನಿಮ್ಮಣ್ಣ ಅಲ್ಲೊ? ಕಾಲ್ ಹಿಡಿ. ಕಾಲ್ ಹಿಡ್‌ದ್ರೂ ಕೇಳ್ ಕೈ ಹಿಡಿ, ನಿನಗೆ ಗೊತ್ತುಂಟು, ಹನ್ನೆರಡು ವರ್ಷ ವನವಾಸ ವೊಂದ್ ವರ್ಷ ಅಜ್ಞಾತ. ಹನ್ನೆರಡನೇ ದಿವಸ ನಾನ್ ಹೊರಟಿದ್ದೇನೆ ಕಾಡ್‌ನಿಂದ. ಮುಗೀತು ವರ್ಷ. ನೀನೂ ಹೌದು ಅಂದಿದ್ದೆ.

“ನಿಲ್ಲಿ - ತಡೆಯಾಜ್ಞೆ ಕೆಡಿಸದಿರಿ, ಕೆಡಿಸದಿರಿ, ಹನ್ನೆರಡು ವರ್ಷ ವನವಾಸ ವೊಂದ್ ವರ್ಷ ಅಜ್ಞಾತವಾಸ ಮುಗೀಲಿ. ಹದಿಮೂರು ವರ್ಷ ನನ್ನನ್ನು ಹಿಂಬಾಲಿಸಿ, ಹದಿನಾಲ್ಕನೇ ವರ್ಷ ಬಲ್ಲಿ. ನಿಮ್ಮನ್ನು ಹಿಂಬಾಲಿಸುತ್ತೇನೆ” . ನಿನ್ನ ಇದ್ರನಲ್ ಹೇಳಿದ್ದಲ್ಲೋ ನಮ್ಮಣ್ಣ?

ಪರಿಸ್ಥಿತಿಯನ್ನರ್ಥ ಮಾಡಿಕೊಳ್ಬೇಕು. ಇಷ್ಟು ವರ್ಷಾಯ್ತು ನನ್ನ ವೊಡನಾಟ ನಿನಗೆ, ನಾನೇನು ಅಂತ ನಿನಗೆ ಗೊತ್ತಿಲ್ವೇನೆ? ಆದ್ದರಿಂದ ಕೇಳು... ಕೃಷ್ಣನಲ್ಲಿ “ಆವೊತ್ತು ಸೀರೆ ಕೊಟ್ಟಿದ್ಯಲ್ಲ; ಯಾಕೆ ಕೊಟ್ಟೆ? ಈಗ ನನ್ಗ್ ತೋರದೆ ಅವ ಸೀರೆ ಕೊಟ್ಟು ಕೆಡಿಸಿದ್ದು, ಸೀರೆ ಕೊಡದೇ ಇರಿದ್ರೆ ಯೇನಾದ್ರೂ ವೊಂದು ನಾ ಆವೊತ್ತು ಮಾಡ್ತಿದ್ದೆ... ಈಗ ಯೆಲ್ಲಾ ಮಾಡಿ, ಮಾಡಿ, ಮಾಡಿ, ಮಾಡಿ, ಛೀ ಇದು ಮೊದಲೊಬ್ಬ ಹೇಳಿದ್ದಾನಂತೆ. ಯೇನು? ಯೆಲ್ಲವನ್ನು ಬಿಡು. ಆ ಮೋಟನನ್ನು ಹಿಡ್ಕೊ, ಯಾಕೆ ಅವ ಓಡೋದಿಲ್ಲ!

ಅವ್ನನ್ ಹಿಡ್ಕೊಳ್ಬೇಕಾದ್ರೆ ಹಿಡಿಬಲ ಬೇಡ. ನೀನು ಬಂದು ನನಗೆ ತಾಗ್ತಿ, ನನ್ನನ್ನು ಮೂದಲಿಸ್ತೀ. ಅದೂ ಬೇಡ, ಕೃಷ್ಣನ ಬಗ್ಗೆ ನಿನಗೆ ಗೌರವ ಇರ್ಲಿ, ಅಣ್ಣನ ಬಗ್ಗೆಯೂ ಇಲ್ಲಿ. ನಕುಲ ಸಹದೇವರಿಲ್ಲೊ? ಅವ ಬೇಡ. ಯಾರು? ಮತ್ಸಲಾಂಛನ ಬೇಧಿಸಿ ತಂದು “ಬಲ್ಲಿರೇನಯ್ಯಾ? ಮೂರು ಲೋಕದ ಗಂಡ” ಅಂತ್ ಹೇಳ್ತವ. ಅತ್ತಿದ್ದಾರಲ್ಲ ಅಪ್ಪನೂ ಅಮ್ಮನೂ ಎರಡೂ ಇಲ್‌ದಿದ್ದವು. ನಕುಲ ಸಹದೇವರು. ಅಲ್ಲೊ? ಕೆರಳಿಸು. ಚುಚ್ಚಿ ಮಾತಾಡು. ಈ ಕಾಲದಲ್ಲಿ ಸ್ವಲ್ಪ ಹುಡುಗರು ಯದ್ದೆ ಸ್ವಲ್ಪ ಹುಡುಗಿಯರು ಆಲೋಚನೆ ಮಾಡ್ತಾರೆ. ಇದಕ್ಕೆ ಬೇಕಿದ್ರೆ ನಾಳೆ ನಾವೊಂದು ಮೊಳೆ ಶಬ್ಧ ಹುಡುಕ್ವ 'ಶಾಂತಿ ಭಂಗ' ಶಾಂತಿ ಭಂಗ ಅಲ್ಲ ಇದು. 'ಕ್ರಾಂತಿ ರಂಗ'. ಅಂತ ಹೇಳೋಣ. ಆದ್ದರಿಂದ ಹೀಗೇನಾದ್ರೂ ಮಾಡು. ಮತ್ತೆ ಬಂದು ನನ್ನನ್ನು ನೋಡು, ಈಗ ನೀನು ಹೋಗ್ತಿಯೋ? ಅಲ್ಲ ನಾನು ನನ್ನದಾರಿ ನೋಡ್ಲೊ? ಹಾಳಾಗಿ ಹೋಗ್ಲಿ.

ಅಂದ್ರೆ ನನ್ನನ್ನು ನೀನು ಯೇನು ಅಂತ ತಿಳ್ಕೊಂಡಿದ್ದಿ? ದ್ರೌಪದೀ ಇಷ್ಟೆ ಹೌದಲ್ಲ? ಇಷ್ಟೇ ಹೌದಲ್ಲ?

ಅದಕ್ಕೇ ನಾನ್ ಹೇಳಿದ್ದು ತೂಕದ ಮಾತು. ಬೆಲೆಯುಳ್ಳ ಮಾತು ಅಂತ. ನಾ ಹೇಳಿಕೊಟ್ಟದ್ದು ಅಂತಾಗ್ತಾದ್ದು. ನನಗೆ ಹೇಳ್ಕ್ ಹಕ್ಕುಂಟೋ ಹೇಳು? ನಾನು ತಮ್ಮ. ನೀನು? ನಮ್ಮ ಅಣ್ಣನ ಮಗನ ತಾಯಿ! ನಿನ್ ಹಕ್ಕುಂಟು ಕೇಳು. ಇಲ್ ಬೇಡ! ತಮ್ಮಂದಿರ ಮಾತು ಮೀರುವುದಿಲ್ಲ. ಅಲ್ಲಿಗೆ ನಿಲ್ಲಿಸು. ಯಾರಿಗಾದ್ರೂ ಬೇರೆಯವರಿಗೆ ಗೊತ್ತಾದ್ರೆ ಇವ ವೊಬ್ಬನೇ ಮೂರ್ಖ! ಕೃತ್ಯಮ್ಮ ಅಂತ ಪ್ರಚಾರ ಮಾಡ್ಯಾರು. ವೊಂದ್ ಹೇಳಿದರೆ ಮತ್ತೊಂದು ವ್ಯಾಖ್ಯಾನ ಮಾಡವರೆಲ್ಲ ಬಹಳ ಇದ್ದಾರೆ. ಹಾಗಾದ್ರೆ ನಾನೊಬ್ಬ ತಲೆ ಹೋಕ ಅಂತ ಹ್ಹಹ ನೀನ್ ಹೇಳ್ಕ್ ಹೊರಟಿದ್ದು!

ಯೆಂಥೆಂಥಾ ಯೆಂಥೆಂಥಾ ಉಧ್ಗಾರ! ಅದ್ ಇಲ್ಲಿ ಮಾಡ್ಬೇಕಾದ ಘೋಷಣೆ ಅಲ್ವೆ, ನೀನ್ ಅಲ್ಲಿಗೆ ಹೋಗು. ಇಲ್ಲಪ್ಪ, ನಾನು ಅಣ್ಣನ ಮಾತನ್ನು ಉಲ್ಲಂಘಿಸಿ ಎಲ್ಲಿ ಅತಿಕ್ರಮಿಸಿದ್ದು? ಹಾಲಿದ್ದ ದನದ ಕೆಚ್ಚಲಿಗೇ ಅಲ್ವೊ ಕೈ ಹಾಕೋದು? ಈ ದನದ ಕೆಚ್ಚಲಿನಲ್ಲಿ ಹಾಲುಂಟಾದದ್ದು ಬೇರೊಬ್ಬರು ಹಾಕಿದ ಹಿಂಡಿಯಿಂದಲ್ವೊ? ನಾನ್ ಕೇಳೋದ್ ಅದು. ಸೈಂಧವ ಬಂದದ್ ಹೌದು. ಅವನ್ ಹೊಡ್ದ ಅಟ್ಟೆ ಮಾನಭಂಗ ಮಾಡಿದ್ದೂ ಹೌದು. ಯಾಕೆ?

ಅಣ್ಣ ಇಲ್ಲಿಲ್ಲ ಅಲ್ಲಿ. ಅಣ್ಣ ಕೇಳಲಿಕ್ಕಿಲ್ಲ. ಅಣ್ಣನ ತೀರ್ಮಾನ ಯೇನು? ಅದೆಲ್ಲ ಮತ್ತೆ ಕೇಳ್ವ

"ಯೇ ಯಾಕ್ ಹಾಗ್ ಹೊಡ್ದದ್ದು? ದ್ರೌಪದಿಯನ್ನು ಕಂಡು ಬಂದು ಯಾಕೆ?"

ಅಂತ ಕೇಳಿದರೆ, ನಮ್ಮ ಹೆಂಡತಿಯಾದದ್ದಕ್ಕೆ ಅಂತ ಹೇಳುವ ಉತ್ತರ ತಯಾ ಮಾಡಿದ್ದೇನೆ. ಕೀಚಕನದ್ದೂ ಕಥೆ ಹಾಗೇ, ನಿನ್ಗ್ ಗೊತ್ತಿಲ್ವೊ? ಸಟ್ಟುಗ ಹಿಡ್ಕೊಂಡ್ ಬರ್ಲಿಲ್ವೊ? ನೆನಪುಂಟಲ್ಲ? ಆವಾಗ ನಮ್ಮಣ್ಣ ಯೇನು ಹೇಳಿದ? "ಬಹುಜನರಿಗೆ ನೆರಳು ಕೊಡುವ ಮರವನ್ನು ಕಟ್ಟಿಗೆಯಾಗಿ ಕಡೀಬೇಡ. ಬೇರೆ ಮರ ನೋಡು" ಹೇಳ್‌ಲಿಲ್ವೊ? ಹ... ನಾನ್ ಹಾಗೆ ಮಾಡಲಿಲ್ಲವೋ?

ಇದ್ ಹಾಗಲ್ಲ ಮಾರಾಯ್ತಿ, ತೀರ್ಮಾನ ಆಗಿ ಹೋಗ್ಯದೆ. ಕೇಳು, ನಿಮ್ಮಣ್ಣ ವೊಪ್ಪಿ ಹೊರಟಾಗ್ಯದೆ. ನಾನೂ ಹೂಂ ಅಂತ ಹೇಳಿಯಾಗ್ಯದೆ. ಇನ್ನಿದಕ್ ಹೊಸಾ ಅರ್ಥ ಯೆಂಥದ್ದು ಮಾಡೋದು? ನಾನ್ ವೊಬ್ಬನೇ ಹೋಗಿ ಅಲ್ಲಿ... ಹೋರಾಡಬೇಕು. ಕೂಡೀತೇನೆ ನನ್ನಿಂದ? ನನ್ನಿಂದ ಕೂಡೀತೇನೆ? ನೀನ್ ಹೇಳ್ತಿ ಹೌದು "ಯಾರು ಸುಪ್ರೀತರು" ...?

ಕೇದಾರಗೌಳ-ಅಷ್ಟೇ ವನಿತೆ ಕೇಳ್ ಜನನಿಯ ಬಸಿರಿಂದಿಳಿದ ಮೇಲೆ ದಿನವೊಂದಾದರು

ಸುಖವ ಕನಸಿಲಿ ಕಂಡವ ನಾನಲ್ಲ ಕಷ್ಟವು ನುಣುತ ನೂಕಿದೆ ಜನ್ಮವ || ೧೧೪ |

ಯೆಲ್ಲ ಹೇಳ್ಬಾರದು ಯಾರಲ್ಲಿಯೂ ಅಂತ ಉಂಟು. ಆದ್ರೆ ನನಗೆ ನಿನ್ನಂಥಹ, ಶುದ್ಧ ಹೃದಯದ ಮಡದಿಯ ಹತ್ರ ಅಡಗಿಸಿಡೋದಕ್ಕೆ ಮನಸ್ಸು ಬರೋದಿಲ್ಲ. ಇದು ಹೊರಗೆ ಹೇಳವಂಥದಲ್ಲ. ಹೌದೇನೆ?

ಈ ನಿನಗಿಂತ ಕಡಿಮೆ ದುಃಖ ಪಟ್ಟವ ನಾನು ಅಂತ ತಿಳ್ಕೊಂಡಿದ್ಯೋ? ಅದಲ್ಲ.. ಮದ್ವೆ ಆದಮೇಲಿನದ್ದು ನಿನಗೆ ಗೊತ್ತುಂಟಲ್ಲ? ನಾನು ಮತ್ತೂ ಮತ್ತೂ ಹೇಳ್‌ಬೇಕೊ? ಯೆಷ್ಟೋಸಲ ತಡೀಲಿಕ್ಕೆ ಕೂಡದೆ ನನ್ನ ಮುಖದಿಂದ ವೊಂದೆರ್ಡ್ ಸಲ ಬಂದು ಹೋಗ್ಯದೆ

ಯೇನು ಮಾಡೋಣ ಪಾಂಚಾಲೀ, ಈ ಷಂಡರ ಜೊತೆಯಲ್ಲಿ ಹುಟ್ಟಿ ಕೆಟ್ಟೆನಲ್ಲ ಅಂತ ಬಂದು ಹೋದ್ದಲ್ಲ ಅದು, ವೊಳಗಿದ್ದದ್ದು ಬಂದದ್ದು. ಯತಾರ್ಥ ಹೇಳ್ತೇನೆ. ಹೆಣ್ಣಿನಲ್ಲಿ ನೀನೆಷ್ಟು ಕಷ್ಟಪಟ್ಟವಳೋ, ಗಂಡುಸಾಗಿ ಹುಟ್ಟಿ, ಇದು ಬಿಡು ಮಾನ ಅಪಮಾನದ್ದು ಬಿಡು. ನನ್ನ ಹೊಟ್ಟೆ ದೊಡ್ದು, ನಿನ್ಗ್ ಗೊತ್ತುಂಟಲ್ಲ? ನಮ್ಮಮ್ಮ ನಿನ್ನ ಕೈಗೆ ಸೌಟು ಕೊಡ್ತಾಗ ವೊಂದ್ ಮಾತ್ ಹೇಳಿದ್ದಳು. ಯೇನು ಪಾಕ ಮಾಡಿದ್ಯೋ ಸಮಾ ಅರ್ಧ ಅವ್ನಿಗ್ ಇಕ್ಕು ಅಂತ. ಅಲ್ವೊ? ನನಗದು

ಕರ್ಗ್‌ತಿತ್ತೋ? ಅದು ಇಷ್ಟು ತಿಂದಿದ್ದಾನೆ ಅಂತಲ್ಲ. ಯೇ ದೇವರೇ; ನನ್ನ ಪ್ರಾರಬ್ಧವೇ! ಬೇಡ ನನ್ನ ಕಣ್ಣಲ್ಲಿ ನೀರ್ ತರಿಸ್ಬೇಡ,

ಚಕ್ರವರ್ತಿಯ ಮಗನಾಗಿ ಹುಟ್ಟಿ, ಆಮೇಲೆ ಬಿಡು, ಆ ಲಾಕ್ಷಾಗ್ರಹ! ನಾಲ್ಕು ಜನ, ಮುದುಕಿ-ನಮ್ಮ ಅಮ್ಮ, ನಾನೇ ಹೊತ್ತದ್ದು. ನನ್ನ ದುರಾದೃಷ್ಟ, ನಾನ್ ಆಲೋಚನೆ ಮಾಡೋದು. ನನ್ನ ಅಪ್ಪನ ಹೆಣ ನನ್ನ ಹೆಗಲ್ನಲ್ಲಿ ಹೋಗ್ಬೇಕಿತ್ತು. ಬದುಕಿದ್ದ ನನ್ನ ಅಣ್ಣ, ಬದುಕಿದ್ದ ನನ್ನ ತಮ್ಮಂದಿರು, ಬದುಕಿದ್ದ ನನ್ನ ತಾಯಿ, ಬದುಕಿದ್ದೂ ಹೆಣದಂತಾದಾವಾಗ ಈ ಭೀಮನ ಹೆಗಲ್ನಲ್ ಹೊತ್ಕೊಂಡ್ ಹೋಗ್ಬೇಕಾಯ್ತಲ್ಲ, ದೇವ್ರ ಹತ್ರ ಹೇಳ್ಬೇಕು! ನಾನ್ ನನ್ನ ಸಂಕಟ ಇಲ್ಲಿ ಹೇಳೋಣವೋ ಅಣ್ಣನ ಇದ್ರನಲ್ಲಿ? ನನ್ಗ್ ಅವ್ನನ್ ನೋಡ್ವಾಗ ಅಯ್ಯೋ ಪಾಪ ಕಾಣ್ತದೆ. ಅರ್ಜುನನ ಮುಂದೆ ಹೇಳೋಣವೋ? ಛೇ ಅಲ್ಲಿ ಅದು ದಾಕ್ಷಿಣ್ಯ. ಇಲ್ಲಿ ಇದು ಪ್ರಾರಬ್ಧ ಗಂಟು. ಪ್ರಮಾಣ ಮಾಡಿ ಹೇಳ್ತೇನೆ. ತಾಯಿಯ ಹೊಟ್ಟೆಯಿಂದ ಹುಟ್ಟಿಬಂದ ಈ ನಿಮಿಷದವರೆಗೂ, ವೊಂದು ಘಳಿಗೆ, ಸುಖ ಎಂಬ ಶಬ್ದವನ್ನು ನಾನು ಉಚ್ಚರಿಸಲಿಲ್ಲ. ಯಾಕೆ? ಏನು ಅಂತ ಗೊತ್ತಿಲ್ಲ. ಇಷ್ಟು ಗೊತ್ತುಂಟಲ್ಲ ನಿನ್ಗೆ? ಇಷ್ಟು ಗೊತ್ತುಂಟಲ್ಲ? ಆದ್ದರಿಂದ ಸೇಡು ನನ್ನದೂ ಉಂಟು. ಲಡ್ಡು- ಶಂಕಪಾಶಾಣದ್ದು ತಿನ್ನಿಸಿದವನ್ನು ಬದುಕ್ಲಿಕ್ಕೆ ಬಿಟ್ಟಿದ್ದೇನಲ್ಲ. ನನ್ಗಲ್ವೊ ಸಿಟ್ಟು? ಉಂಟು.

ನನ್ನ ಹೆಂಡತಿಯ ಸಿರಿಮುಡಿಗೆ ಕೈಹಾಕಿದವನ... ಇಲ್ವೊ? ಉಂಟು. ಯೆಲ್ಲ ವೊಳ್ಗ್ ಉಂಟು!!

ಹೊಟ್ಟೆಯಲ್ಲಿದ್ದದ್ದೆಲ್ಲ ಬಾಯಿಗೆ ಬರಿಕ್ಕೆ ವೊಳ್ಗಿಂದ ವೊತ್ತಡ ಉಂಟು. “ಉಗುಳಿದ್ರೆ ಶುದ್ಧ ಕೆಡ್ತದೆ. ನುಂಗಿದರೆ ಗಂಟಲು ಸುಡ್ತದೆ” ನಿನ್ನ ಮಾತನ್ನು ವೊಪ್ಪಿ ಹೊರಟ್ರೆ ನಾನ್ ವೊಬ್ಬ ಅಲ್ವೊ ಅಲ್ಲಿ? ನಿನಗೂ ನಾನ್ ಬೇಡ ಅಂತಾಯ್ತು? ಹೋಗ್ಲಿ ಇದೊಂದು ರಗಳೆ ಅಲ್ಲಿಗೆ ಅಂತಲ್ವೊ? ಹೌದು ಉಪಯೋಗಕ್ಕಿಲ್ಲದಂತಹ ವಸ್ತು, ಅಧ್ಯೆ ಯೇನಂತ ಹೆಸ್ರು? 'ಕಸ'. ನನ್ನ ಕೈಯಲ್ಲಿದ್ದ ಗದೆ. ಅದೇ ನನ್ನನ್ನು ತೆಗೆದ್ದು ಈಗ

ಕೇದಾರಗೌಳ-ಅಷ್ಟೇ ಭಾರವಾಯಿತು ಗದೆ / ಧೈಶ್ಯ ಹಿಂಗೂಳಿಸಿತು ನಾರಿನೀನೇನೆಂದರೂ

ಕೌರವಾದ್ಯರ ಕೊಲಲಾರೆನೆನಲು ರೋಷ | ವೇರಿ ಘರ್ಜಿಸುತೆಂದಳೂ || ೧೧೫ |

ಯೆಲ್ಲವೂ ಹೌದು. ಗದೆ ಭಾರವಾಯ್ತು, ಅಂತ ಹೇಳಿದರೆ ಅಗ್ಗವಾದಂತಹ ಅರ್ಥವನ್ನು ನೀನು ಮಾಡ್ಲಿಕ್ಕಿಲ್ಲ. ಗದೆ ಭಾರವಾದ್ರೆ ನಾನ್ ಕೆಳಗಿಡೋದಿಲ್ವೆ? ಕೈಕಾಲ್ ಸಮುರಾಗ್ಯದೋ ನಂದು? ಯೆಲ್ಲವು ಹೇಳ್ತಾರೆ ಮೊದಲಿಗಿಂತ ಸ್ವಲ್ಪ ಗಟ್ಟಿಯಾಗಿದ್ದಿ ಈಗ. ಅದಲ್ಲ. ಈಗ ಭಾರಾಗೋದ್ ಯಾವಾಗ ಗೊತ್ತೊ? ಯೇ ಇದು ನಿನ್ನಲ್ಲಿ ಕೇಳ್ತೇನೆ. ಈ ತಲೆ ನೋವಾದವಿಗೆ ಮುಂದಲೆ ಭಾರ ಆಗ್ತದಂತೆ ಹೌದ? ಮೂಗು ನೋವಾದವ್ರಿಗೆ ಮೂಗುತಿ ಭಾರಾಗ್ತದಂತೆ ಹೌದೊ? ಕಾರಣ ಏನ್ ಅದು?

ಅದಕ್ಕೆ ಭಾರ ಬಂದದ್ದಲ್ಲ. ಆಗ ಅದ್ರ ಪ್ರಯೋಜನ ಬೀಳೋದಿಲ್ಲ; ರೋಗ ಬಾಧಿಸಿರುವಾಗ, ಗದೆ ಉಂಟು ಹೌದು. ಯೆಂಥದಕ್ಕೆ? ನಿಜವಾಗಿಯಾದ್ರೆ ಇದನ್ನು ಸಿಗ್ದು ಯೆಂಟು ತುಂಡು ಮಾಡಿದರೆ ಯೆಂಟು ಬಿಡಾರಕ್ಕೆ ಮಾಡು ಮಾಡ್ಬಹ್ದು. ಕಟ್ಟಿಗೆ ಹೊತ್‌ಹಾಗೆ ಹೊತ್ಕೊಂಡಿದ್ದೇನೆ ಕೈಯಲ್ಲಿ, ಈಗ ನನ್ನ ತೋರ್‍ತದೆ ಆ ಮಯ ಬಂದು ಯಾಕೆ ಕೊಟ್ಟ? ನಾನ್ ಯಾಕೆ ತಕೊಂಡೆ? ಭಾರವಾಯ್ತು. ನಿಜವಾಗಿ ಹೌದು. ಯಾಕೆ? ಮನುಷ್ಯರ ಮುಂದೆ ಮುಖ ತೋರಿಸಲಿಕ್ಕೆ ಸಾಧ್ಯ ಇಲ್ಲದಿದ್ದವಿಗೆ ಮುಖಕ್ಕೆ ಅಲಂಕಾರ ಭಾರ ಅಲ್ವೊ? ರಂಗಕ್ಕೆ ಭಾರದೇ ಇದ್ದ ವೇಷಕ್ಕೆ ಚೌಕಿಯಲ್ಲಿ ಕಿರೀಟ ಭಾರ ಅಲ್ವೊ? ಭಾರವಾಯಿತು ಗದೆ. ಎತ್ತಲಾರೆ. ಯಾಕೆ ಎತ್ತಲಾರೆ? ನನ್ ತಲೆ ಅಷ್ಟು ಭಾರ ಆಗ್ಯದೆ.

ಎತ್ತು ಅಂತ ಹೇಳ್ವವ ಬರ್‍ಲಿ. ನನ್ ವೊಬ್ಬನಿಂದ ಯೇನೂ ಆಗೋದಿಲ್ಲ. ಅದಕ್ಕಾಗಿ ನಾನು ಹೇಳಿದ್ದು, ನಿನಗೂ ನಾನು ಭಾರ ಆದೆನೆ? ನನ್ನಿಂದ ಆಗ್ಲಿಕ್ಕಿಲ್ಲ, ಆಗ್ಲಿಕ್ಕಿಲ್ಲ, ಆಗ್ಲಿಕ್ಕಿಲ್ಲ.

(ದ್ರೌಪದಿ: ನಮ್ಮಪ್ಪನ ಮೂರೂರೋಹಿಣಿ ಬಲ, ನನ್ನ ಮಕ್ಕಳ

ಬಲದೊಂದಿಗೆ ಯುದ್ಧಕ್ಕೆ ಹೋಗುತ್ತೇನೆ)

ಪಾಂಚಾಲಿ... ಪಾಂಚಾಲೀ... ಯಾರೆಲ್ಲ ಇದ್ದಾರೆ? ನಮ್ಮ ಮಕ್ಕಳು. ಅವರು ಐದು ಜನ ನೀನ್ ಹೇಳಿದ್ಹಾಗೆ ಕೇಳ್ತಾರೆ. ಹ್ಞ .. ಹಾಗಾದರೆ ನಮಗೆ ಅವರು ವಿರೋಧ ಆಗ್ತಾರೆ... ನೋಡಿದರೆ ಸಾಕಾಗ್ತದೆ. ನೀನ್ ಹೊರಡು. ಈಗ ನೀನು ಜಯಿಸಿ ಬಂದ್ರೆ ನಮ್ಮ ಮರ್ಯಾದೆ ಉಳದ ಹಾಗೇ. ಇಗೋ ಅದಲ್ಲ ಆ ಕೊನೆಗೆ ಅದ್ ಯೆಂಥದ್ದೊ ಬಂತು. ನೀ ಷಂಡ ಅನ್ನು ಭಂಡ ಅನ್ನು ನನಗೆ ಅದೇನೂ ದೊಡ್ಡದಲ್ಲ. ನನಗೆ ಬಹಳ ತೃಪ್ತಿ ಉಂಟು. ಇವಳಿಗೆ ಇಷ್ಟು ವರ್ಷ ಬೇಕಾಯ್ತಲ್ಲ ನಾವ್ ಯೆಂಥವು ಅಂತ ಗೊತ್ತಾಗ್ಲಿಕ್ಕೆ ಅಂತ, ಆದ್ರೂ ಈಗ ಗೊತ್ತಾಯ್ತು ಅಂತ. ಅದಲ್ಲ. ಪ್ರಸ್ತಾಪಕ್ಕೆ ನಾನ್ ಹೇಳಿದ್ದೇನೆ. ಜೋಳಿಗೆ ಹಾಕಿ ಬೇಡಿಯಾಗಿದೆ ಏಕಚಕ್ರಪುರದಲ್ಲಿ, ಅಲ್ವೊ? ವೇಷ ಮರೆಸಿ ಯೆಲ್ಲೆಲ್ಲಿ ಬದುಕಿ ಆಗ್ತದೆ. ನಮಗೆ ಹೋಗ್ಲಿಕ್ ಯೇನೂ ಉಳಿಲಿಲ್ಲ. ಹೂ.. ಆಗ್ಲಪ್ಪ, ಆಗ್ಲಿ, ಈಗ ಹೆಂಡತಿಯಿಂದ ಈ ರೀತಿ ಬೈಸಿಕೊಳ್ಳದಿದ್ದವನಿಗೆ ಆಯುಷ್ಯ ವೃದ್ಧಿಯಾಗೋದಿಲ್ಲ ಅಂತ ನಮ್ಮ ಅಜ್ಜಿ ಹೇಳಿದ್ದಾಳೆ ಅದ್ ಬಿಡು, ನೀನಲ್ಲೊ ಇದೆಲ್ಲ ಹೇಳಿದ್ದು? ಅದಲ್ಲ ಇಲ್ಲಿ

ವಿಷಯ. ಈಗ ನಿನ್ನೊಂದಿಗೆ ಯಾರೆಲ್ಲ ಇದ್ದಾರೆ? ನನ್ನ ಮಗ ಘಟೋದ್ಗಜ. ಅಲ್ಲ ನನ್ಗ್ ಅದಲ್ಲ ಬೇಕಾದ್ದು. ಆವಾಗ ನೀನ್ ಹೇಳ್‌ದ್ಯಲ್ಲ? ಚೆಂದದಲಿ ಇನ್ನೊಮ್ಮೆ ನುಡಿ ಅಂತ. ಹಾಗೆ ನಾನೂ ನನ್ನ ಒತ್ತಿನ ಮತ್ತಕಾಶಿನಿಯಲ್ಲಿ ಕೇಳ್ತಾ ಇರೋದು. ಇನ್ನೊಮ್ಮೆ ನುಡಿ. ನಿನಗೆ ನಮ್ಮ ಮಕ್ಳು ಬಿಡು. ಜನಕ ದ್ರುಪದಂಗೆ ಯೆಂಥದ್ದು? ಮೂರಕ್ಷೋಹಿಣಿ... ಅ.. ಇಷ್ಟು ಜನ್ರನ್ನು ಕೂಡಿಕೊಂಡು ನೀನು... ಯುದ್ಧಕ್ಕೆ ಹೋಗ್ತಿ? ನಿಮ್ಮ ಹಂಗೇನು ಅಂತ ಕೇಳಿ! ಪಾಂಚಾಲಿ, ನೀನೇ ಯುದ್ಧ ಮಾಡು. ಮಕ್ಕನ್ನು ಕರ್ಕೊಂಡ್ ಹೋಗು. ತಂದೆಯ ಕಡೆಯಿಂದಲೂ ಕಕ್ಕೊಂಡು ಬಾ. ನಿಮ್ಮ ಅಪ್ಪನ ಮನೆಯ ಐಶ್ವರ್ಯದಿಂದ ನಮಗೆ ಹೊಸ ಟೊಪ್ಪಿ ಹಾಕ್‌ಲಿಕ್ ಹೊರ್‌ಟಿದ್ಯೋ? ಹೆಂಡತಿ ಹುಟ್ಟಿದ ಮನೆಯ ಸಹಕಾರ ಬೇಡಿ ಬದುಕುವಷ್ಟೂ ಷಂಡರೊ ನಾವು...? ಮುಚ್ಚು ಬಾಯ್.

|ವಾರ್ಧಿ॥ ವನಿತೆಯ ಕಠೋರ ನುಡಿಯಂ ಕೇಳು ಪವನಜ ಘನರೌದ್ರವತ್ತು ಗದೆಯಂ

ತಿರುಹುತೆಂದ ಕಾ| ಮಿನಿಯೆ ಸೈರಿಸು ಸೈರಿಸಿಲೆ ನಿನ್ನ ನಯನಾಂಬು ಕಣಮದೊಂದಕೆ

ರಿಪುಗಳ ॥ ವನಿತೆಯರ ಕಂಗಳೊಳು ಶತಸಾಸಿರಂ ಕೆಡವಿ ನಿನಗೆಂದ ಭಾಷೆಯಂ

ತೀರ್ಚುವೆನೆಂದೆನುತ | ಲಿನಿಯಳನೊಡಂಬಡಿಸಿ ಕೃಷ್ಣನ ಪದಾಂಬುಜಕೆ

ತಲೆಬಾಗುತಿಂತೆಂದನೂ || ೧೧೬ ||

ಮಾನಕ್ಕೆ ಪೆಟ್ಟಾಯ್ತು ಅಂತ ನನ್ನ ಮಾತಲ್ಲ ಇದು. ಮುಚ್ಚು ಬಾಯಿ ಅಂತ ಹೆದ್ರಿಸಿದ್ದಲ್ಲ. ಮನಸ್ಸು ಬಂದರೆ ರಣಚಂಡಿಯಾಗಿ ಹೋರಾಟ ಮಾಡಬಲ್ಲಳು ಪಾಂಚಾಲಿ. ಅಂತಹ ಹೆಂಡತಿಯ ಗಂಡಂದಿರಿವು, ಅಲ್ವೊ? ಹಾಗಲ್ವೆ, ನೀನು ಹೌದೋ? ಅಂತ ನಾನ್ ಯತಾರ್ಥ ಹೇಳದ್ದು. ನಿನ್ನನ್ನು ಕೆಣಕಿದ್ದು. ನಾನೂ ಅದಕ್ಕೆ ಅನುಕೂಲ ಯೇನೂ ಅಲ್ಲ. ಇಷ್ಟು ನೀನು ಮಾಡ್ತೀಯಲ್ಲ? ನನಗೆ ಅಷ್ಟೂ ಮಾಡಲಿಕ್ಕೆ ಕೂಡದೇ ಇದ್ರೆ ನೀನು ಕೇಳಿದ್ದು ಸರಿ. “ಈ ಮೀಸೆ ಯಾಕೆ? ಅದು ನೀವು ಬೋಳಿಸಿ” ಅಂತ ಹೇಳಿದ್ದು ನೀನು ಪುರುಷವೇಷ ಹಾಕ್‌ಲಿಕ್ಕೆ ತಯಾರಾಗಿ, ಯಾಕೆ? ಈಗೀಗ ಮೀಸೆಯಿಲ್ಲದಿದ್ದ ಗಂಡಸರೂ ಇದ್ದಾರೆ ಅಂತ ಪ್ರಚಾರ ಮಾಡ್ಲಿಕ್ಕೆ. ಅದು ನನ್ಗ್ ಗೊತ್ತಾಗ್ಯದೆ. ಅದೆಲ್ಲ ಬಿಡು. ವಿನೋದ ಅಲ್ಲ. ಇದು ನೀನ್ ಸುಮ್ಮ ಇದ್ದೇಕು. ಗ್ರಹಿಣಿಯಾಗಿ, ಮಾನವತಿಯಾಗಿ, ಹೆಣ್ಣಾಗಿದ್ದೇಕು. ಹೇಳಿದ ಮಾತು ನನಗೆ ನೆನಪುಂಟು, ನೆನಪುಂಟು!

ಗದೆ ಭಾರ ಆಯ್ತು ಅಂತ ಹೇಳಿದ್ ಯಾಕೆ? ಇದ್ದೂ ಭಾರ ಆಯ್ತು ಉಪಯೋಗಕ್ಕಿಲ್ಲದೇ ಅಂತ. ಇಷ್ಟಕ್ಕೆ ನೀನು ಸಿದ್ಧನಿದ್ದೀಯಲ್ಲ? ಅಂದ್ರೆ ಯುದ್ಧಕ್ಕೆ ಬರಿಕ್ಕಲ್ಲ. ಇದನ್ನೇ ಅಲ್ಲಿ ಹೇಳ್‌ಲಿಕ್ಕೂ ಸಿದ್ದನಿದ್ಯಲ್ಲ? ಆ ಕಣ್ಣೀರನ್ನು ತೊಳಕೋ, ನಿನ್ನ ಕಣ್ಣಿನಿಂದ ಅಂದಿನಿಂದ ಇಂದಿನವರೆಗೆ ಬಿದ್ದ ವೊಂದೊಂದು ಹನಿ ಲೆಕ್ಕ ಹಾಕು. ವೊಂದು ಹನಿಗೆ ಸಾವಿರ ಲೆಕ್ಕದಲ್ಲಿ...

ಪಾಂಚಾಲೀ ನೀ ಬಂದೆಯೆಂದಾಗ- ನಾ ಸಂತೋಷಗೊಂಡೆಯೆಂದದ್ದು ಕಟಕಿ. ನಿನ್ನನ್ನು ಕಾಣುವಾಗ ಕರಳು ಕಿವುಚಿದ ಹಾಗಾಗಿತ್ತು. ಆದ್ರೆ ಏನು ಮಾಡೋಣ? ಇವಳೂ ಅಲ್ಲಿ ಹೋಗಿ ಯೆಷ್ಟು ಜನರದ್ದು ಮತದಾನ ಆಯ್ತು? "ನನ್ನದೂ ಅಲ್ಲಿಗೇ" ಅಂತ ಹೇಳಿಬಿಡ್ತಾಳೋ ಅಂತ. ಯಾಕೆ? ಇಡೀ ಈಗ ನನ್ನ ವೊಂದ್ ಆಶಾ ಕೇಂದ್ರ ನೀನ್ ವೊಬ್ಬೇ ಯಾಕೆ? ನಿನಗೆ ಅವನಲ್ಲಿ ಹೆಚ್ಚು ಸಲುಗೆ ಉಂಟು. ಯಾರಲ್ಲಿ? ಈಗ ತಿರುಗಿಸಬೇಕಾದ್ದು ಅವನ್ನು, ಯಾರನ್ನು? ಅವನ್ನು. ನೀ ಮಾತಾಡೇಡ. ಸಭೆಯಲ್ಲಿ ನೀನು ಮಾತಾಡೇಡ. ಇಷ್ಟು ನೀನು ಸಿದ್ಧಳಿದ್ದೀ ಅಂತಾದ್ರೆ ವಿರೋಧಿಗಳ ಹೆಂಡತಿಯರ ಕಣ್ಣಿನಿಂದ ನಾ ವೊಂದು ಹನಿಗೆ ಸಾವಿರದ ಲೆಕ್ಕದಲ್ಲಿ ಸುರಿಸಿ ಆಮೇಲೆ ವಿರೋಧಿಗಳ ರಕ್ತದಲ್ಲಿ ಕೈತೊಳು... ಪಾಂಚಾಲೀ ಈ ಚಂಡಿಯನ್ನು ವರಿಸಿದ ಪ್ರಚಂಡ ಗಂಡ ಇವ. ಷಂಡ ಯೇನೂ ಅಲ್ಲ. ಇಷ್ಟು ನೀ ಸಿದ್ಧಳಿದ್ಯಲ್ಲ? ಬಾ. ನನ್ನ ಹಿಂದಿನಿಂದ ಬಾ. ಸಭಾ ಪ್ರವೇಶ ಮಾಡೋಣ.

ಕಂಸಾಂತಕಾ!

ಭೈರವಿ-ಏಕತಾಳ॥ ಎಲವೋ ಕಂಸಾಂತಕನೇ | ಆ ಖಳ ದುರ್ಯೋಧನನೊಡನೆ |

ಕೊಳಗುಳದೆತ್ನವ ಬಲಿದು ನೋಡಳುಕದೆ ಸಂಧಿಯ ಮುರಿದು || ೧೧೭ |

ಸಿಟ್ಟು ಬಂದದ್ದಲ್ಲ ಸನ್ನಿಧಾನದ ಮುಂದೆ ತಡೀಲಿಕ್ಕೆ ಕೂಡದೇ ಬಂದುಬಿಟ್ಟದ್ದು. ಕಂಸಾಂತಕ! ನೀನು ನಮ್ಮ ದೇವನೇ ಹೌದು. ಬಾವಾ... ನನ್ನ ಬಾವ- ಮಾವನನ್ನು ಕೊಂದವ. ಅಂಥಹ ಬಾವನ ನೆಂಟ್ರು ನಾವು. ಹಿರಿಯನಾದ ಸೋದರ ಮಾವನನ್ನೇ ಕೊಲ್ಲಬಹುದಾದ ದೇವರ ಅರ್ಚಕರು. ಬಾಕಿ ಯಾರನ್ನು ಕೊಲ್‌ಬಾರದು ಹೇಳು? ಆದಕಾರಣ ನನ್ನ ಕಟ್ಟಕಡೆಯ ಮಾತಿದು. ಇದು ನನ್ನದೇ ಮಾತು. ಯೆಮ್ಮ ನುಡಿ ಟ ಠ ಡ ಢ ಣ ಹೋಗೋಕು ನೀನು; ಹೋಗೋಕೆಲ್ಲಿಗೆ ಹಸ್ತಿನಾವತಿಗೆ ಅಲ್ಲಿಗೆ ಹೋಗಿ ನಮ್ಮಣ್ಣ ಇದ್ದಾನಲ್ಲ? ಆಡಳಿತ ಇಲ್ಲದೇ ಇದ್ದ ಧರಣಿಪ! ಇಲ್ಲದಿದ್ರೂ ಧರಣಿಪ! ಈ ಧರಣಿಪನಿಗೆ ಆತನಲ್ಲಿ ದಯೆಯಿದ್ದರೆ ಯೆರಡೂರು ನನಗಾಗಿ ಬಿಟ್ಟು, ನೀನು ಮೂರೂರು ತಕೊಂಡ್ ಬಂದ್ರೆ ಸಾಕು. ಅಂದ್ರೆ ಅರ್ಥಾಯ್ತಲ್ಲ? ನನ್ನ ಲೆಕ್ಕದ ಯೆರಡೂರು ಬೇರೆ. ಅದು... ಈ ಲೆಕ್ಕದಲ್ಲಿ ಸೇರಿಲ್ಲ. ಅದನ್ನು ನಾನೇ ಪಡ್ಕೊಂಡೇನು ನಾನೇ ಪಡಕೊಂಡೇನು. ಆ ಯೆರಡೂರು ನಮ್ ಇಬ್ರಿಗೂ ಪಾಲು. ಅಲ್ಲಿ.... ನಿನ್ನ ತಂಗಿಗೂ ಈ ತಮ್ಮನಿಗೂ, ಇಷ್ಟು ನೀನು ಮಾಡಿದೀ ಅಂತಾದ್ರೆ ಸದ್ಯ ದೇವರಾದ ನಿನ್ನ ತಂಟೆಗೆ ನಾನು ಬರೋದಿಲ್ಲ. ದೊಡ್ಡ ಅನುಗ್ರಹ ಆಗ್ಬೇಕು. ಹೋಗು, ಹೋಗು. ಕೃಷ್ಣಾ... ಕೃಷ್ಣಾ... ದುರ್ಯೋಧನನನ್ನು ಯಾರ್ ಕಾಪಾಡ್ತಾರೆ? ಭೀಷ್ಮರೊ? ದ್ರೋಣರೊ? ಶಾಪವೊ? ಕೋಪವೊ? ಯಾವ ದೇವ ಕೋಪಕ್ಕೂ ನಾನ್ ಹೆದ್ರೋದಿಲ್ಲ. ಯಾವ ಋಷಿ ಶಾಪಕ್ಕೂ ಹೆದರೋದಿಲ್ಲ. ಆ ಕೌರವನ ಪಕ್ಷವನ್ನು ವಹಿಸಿಕೊಂಡು... ಇವರು ಬಿಡು...

ಭೈರವಿ-ಏಕತಾಳ|| ಈಶನ ಮೊರೆಹೊಗಲಿನ್ನು ಬಿಡ | ದಾಸಮರದಿ ರಿಪುಗಳನು |

ನಾಶವ ಮಾಡುವೆನಯ್ಯ | ವರ ಭಾಷೆಯ ಸಲಿಸುವೆ ಸತಿಯ || ೧೧೮ |

ಮುಕ್ಕಣ್ಣನಾದಂತಹ ಸದಾಶಿವನಲ್ಲಿ, ನಾನು ಗದಾ ಪಾಣಿಯಾಗಿ ಹೋಗುವಾಗ ಕೌರವ, ಅಲ್ಲಿ ಆಶ್ರಯ ಪಡೀಲಿಕ್ ಹೋದ್ರೂ ಅಷ್ಟಕ್ಕೆ ನಾನು ಬಿಡ್ಲಿಕ್ಕಿಲ್ಲ. ನಾನು ಹೋಗ್ತೇನೆ ಅಂತಲೇ ಅವ ಕೈಲಾಸಕ್ ಹೋದ್ರೂ, ನಾನ್ ಹೇಳಿದ ಮಾತುಂಟಲ್ಲ? ಶಿವನ ಇದ್ರ್‌ನಲ್ಲಿ ಮಾಡ್ಲಿ. ಯಾಕೆ? ನಾನು ಮಾತು ಮುಗಿಸದೇ ಅವ ಸತ್ತುಹೋದ ಅಂತ ಹೇಳಿದರೆ ನನ್ಗ್ ಕೊರತೆ ಅದು. ಅಂಥವನಲ್ಲ ನಾನು. ಯೇನ್ ಮಾಡೂದು ಅದ್ ಮಾಡ್ತಿದ್ದೆ. ಅದ್‌ಕಿಂತ್ ಮೊದಲೇ ಅವ ಸತ್ತುಹೋದ. ಅಂಥವ ಅಲ್ಲ ಇವ. ಆದ್ದರಿಂದ ಅವ ಕೈಲಾಸಕ್ಕೋಡಿದರೂ ಅವಸರ ಮಾಡ್ಬೇಡ ಇನ್ ವೊಂದ್ ಘಳಿಗೆ, ಮಾಡ- ಪೆಟ್ಟು, ಮತ್ ಇಲ್ಲೇ ಕೂತ್ಕೊ. ಅಂತಕ ನಮ್ಮಣ್ಣನ ಅಪ್ಪ ಇನ್ ಅಲ್ಲಿಗೆ ಹೋಗಿಬಿಡ್ತೇನೆ ಅಂತ್ ಹೇಳಿದ್ರೆ ಹೇಳ್ಯೇನು- ದೊಡ್ಡಪ್ಪ, ಫಕ್ಕನೆ ತಕ್ಕೊಳ್ಬೇಡ. ನನ್ಗ್ ಅನ್ನಹತ್ರ ಸ್ವಲ್ಪ ಕೆಲಸ ಉಂಟು ಅಲ್ಲಿಯೂ ನಾನು ಮಾಡಬೇಕಾದದ್ದನ್ನು ಮಾಡಿ, ಮತ್ ಅಲ್ಲೇ ಕೂತ್ಕೊ, ಯಮನ ಊರಿನಲ್ಲೇ. ಯಾಕೆ? ಯಮನ ಮಗನಾದಂತಹ ನಮ್ಮ ಅಣ್ಣನ ಒಟ್ಟಿಗೆ ಅವ ಊಟಕ್ಕೆ ಕೂತ್ಕೊಳ್ಳೋದ್ ಬೇಡ. ಮತ್ತೆ ನಮ್ಮ ದೊಡ್ಡಪ್ಪನೊಟ್ಟಿಗೆ ಮೊದಲು ಊಟಕ್ಕೆ ಕೂತ್ ಬರ್ಲಿ. ಈ ವ್ಯಂಗ್ಯ, ಈ ಧ್ವನಿ, ಶ್ಲೇಷೆ ಇದೆಲ್ಲ ನಿನ್ಗ್ ಅರ್ಥಾಗದೋ ಇಲ್ವೊ?



ಹಾಗಾದರೆ ವೊಂದ್ ಪ್ರಶ್ನೆ ಬರ್ತದೆ ಇಲ್ಲಿ. ನಾನೊಬ್ಬ ಬೇರೆಯೋ? ಅಂತ. ಬೇರೆ ಅಂತಾದ್ರೆ ಪ್ರಾಮಾಣಿಕವಾಗಿ ಹೇಳ್ತೇನೆ. ಇದಕ್ಕೆ ಪ್ರಾಯಶ್ಚಿತ್ತ ಯೇನ್ ಮಾಡ್ಬೇಕು ಅಂತ ನೀನ್ ಹೇಳ್ತಿ ಮಾಡುವುದಕ್ಕೆ ನಿನ್ನ ಪಾದಸಾಕ್ಷಿ ನಾನು ಸಿದ್ಧನಿದ್ದೇನೆ. ಉರಿಯುತ್ತಿರುವ ಬೆಂಕಿಗೆ ಬಿದ್ದು ದೇಹವನ್ನು ಕಳ್ಕೊಳ್ಬೇಕೆ? ಅಲ್ಲ ಉಮಿಯನ್ನು ರಾಶಿ ಮಾಡಿ, ಆ ರಾಶಿಗೆ ಬೆಂಕಿ ತಗಲಿಸಿ ಅಲ್ಲಿ ಕೂತು ಸಾಯ್ಬೇಕೆ? ಅಲ್ಲ ಊರು ಬಿಟ್ಟು ಬದರಿಕಾಶ್ರಮಕ್ಕೆ ಹೋಗ್ಬೇಕೆ? ಯೇನಾದ್ರೂ ಆದೀತು ಅದೆಲ್ಲ ನಾಳೆ; ಈ ಹೊತ್ತು ಸಹಿಸಲಾರೆ ಕೃಷ್ಣ, ರಕ್ತ ಬಿಸಿಯಾಗ್ತದೆ ನನ್ಗೆ. ಇನ್ನು ನನಗೂ ಕೌರವನ ಹಾಗೆ ಹುಚ್ ಹಿಡ್‌ದೀತು. ದಯವಿಟ್ಟು ಮಾತಾಡಿಸಬೇಡ. ಇಷ್ಟು ಮಾಡಿ ಬರೀಯೋ? ನನ್ನ ದೇವರು ನೀನು. ಅಲ್ವೊ ದೇವರು ನೀನೇ! ಈ ಭಕ್ತನ ಬಗ್ಗೆ ಅನುಗ್ರಹ ಆಗ್ಲಿಲ್ಲ ಅಂತ ಪಶ್ಚಾತ್ತಾಪ ಪಡ್ತೇನೆ. ನಾಳೆ ಹೊರ್ಡ್ ತೇನೆ. ಬದರಿಕಾಶ್ರಮಕ್ಕೆ, ತಪಸ್ಸು ಮಾಡ್ತನೆ. ಕೃಷ್ಣ ಕೃಪೆ ಮಾಡೋ ಅಂತ. ತಿಳೀತಲ್ಲ...?

## ೨೦ ಸಂಧಾನವೋ ಸಂಗ್ರಾಮವೊ?

### ಕೃಷ್ಣ

ಭಾಮಿನಿ ಕೋಣಿಪತಿಕೇಳ್ ಭೀಮನಿಂತೆನ | ಲಾರಮೇಶ್ವರನೆಂದ ನಗುತಲಿ |

ದೇನುಪವನಜ ದ್ರುಪದ ಸುತೆಯರ ಮತವು ಬೇರಾಯ್ತು |

ಮಾನನಿಧಿ ನಿಜವಾಗಿ ನುಡಿಸಂ | ಧಾನವೋ ಸಂಗ್ರಾಮವೋ ಮಗು |

ಳೆನುತ್ತಸುರಾರಿ ಬೆಸಗೊಳಲೆಂದ ಯಮಸೂನು || ೧೧೯ |

ಹಿರಿಯ ಭಾವಯ್ಯ, ನಾನಾವಾಗ್ಲೆ ಅಷ್ಟು ಚರ್ಚಿಸಿದ್ದು ಯಾಕೆ ಅಂತ ನಿನಗೆ ಗೊತ್ತಾಯ್ತೊ? ಈಗ ಭೀಮ ಹೇಳಿದ ಯೆಂಥದ್ದು? ದ್ರೌಪದಿ ಪ್ರಚೋದನೆ ಕೊಟ್ಟದು ಯೇನು ಭೀಮನಿಗೆ?

ಓ ಮಾನನಿಧಿ! ಹಾಗಂದ್ರೆ ಏನು? ಏನನ್ನಾದ್ರೂ ಬಿಟ್ಟೇನು ಮಾನಕ್ಕೆ ಚ್ಯುತಿ ಬರಕೂಡದು!! ಈಗ ಇವರು ಈ ಗುಂಪು ಕಟ್ಟಿದರೆ ನಿನ್ನ ಮಾನ ಉಳಿತದೋ? ಹೇಳಿ ಕೇಳಿ ನಿನ್ನ ತಮ್ಮ, ನಿಮ್ಮೆಲ್ಲರ ಪತ್ನಿ ಇವರೇ ವಿರೋಧದ ಗುಂಪು ಕಟ್ಟಿದ್ದಾರೆ. ನಾಯಕನಾದ ನಿನ್ನ ಮಾನ ಉಳಿತದೊ? ಇದನ್ನು ಬಗೆಹರಿಸಿ ಕೊಳ್ಳಬೇಕೋ ಬೇಡವೋ? ಹಾಗಾಗಿಯೇ ನಾನು ಹೇಳಿದ್ದು ಮಾನನಿಧಿ ನಿಜವಾಗಿ ನುಡಿ- ನಿನ್ಗೆ ಏನೀಗ ದೌರ್ಬಲ್ಯ?

ಏನು, ಏನ್‌ಹೇಳ್ತಿ ನೀನು?! 'ಪರದೇಶಿಗಳು ನಾವು! ಭಾವ, ಅದರ ಅರ್ಥವೇನು? ಯುದ್ಧವನ್ನು ಎದುರಿಸುವಷ್ಟು ಸಾಮರ್ಥ್ಯ ಇಲ್ಲ, ಧನ ಇಲ್ಲ, ಕನಕ ಇಲ್ಲ, ವನವಾಸಿಗಳು; ಅವ ಎಲ್ಲ ಸಂಗ್ರಹ ಮಾಡಿದ್ದಾನೆ ಎಂಬ ಸ್ವಷ್ಟಾರ್ಥದಲ್ಲಿ ಹೇಳ್ತಿಯೋ? ಅಥವಾ ಎಲ್ಲ ದೇವರಿಚ್ಛೆ ಅಂತ ವೇದಾಂತ ಹೇಳ್ತಿಯೋ? ಯೇ ಭಾವಯ್ಯ ಇದನ್ನು ಯಾರಾದ್ರೂ ಗ್ರಾಮಾಂತರದ ಜನ ಹೇಳಲಿ, ನೀವ್ ರಾಜಸೂಯ ಮಾಡುವಾಗ ಏನಿತ್ತು ನಿಮ್ಮ ಹತ್ರ? ಹೇಗೆ ಮಾಡಿದ್ರಿ? ನಿಮ್ಮ ವಿಕ್ರಮದಿಂದ. ನೀನು ಇದನ್ನು ಒಪ್ಪದಿದ್ರೆ ನೀನು ಕ್ಷತ್ರಿಯನೇ ಅಲ್ಲ ಅಂತ ನಾನು ಹೇಳ್ವೆನು. ಯೇನು! ಭೀಷ್ಮ ದ್ರೋಣಾದಿಗಳೆಲ್ಲ ಆ ಪಕ್ಷದಲ್ಲಿದ್ದಾರೆ. ಅವರನ್ನೆಲ್ಲಾ ಇದಿರಿಸುವದು ಹೇಗೆ ಅಂತಲೋ? ಕ್ಷತ್ರಿಯನಿಗೆ ವಿರೋಧಿಯನ್ನು ವಿರೋಧಿಸುವದು ಪಾಪ ಅಂತ ಯಾವ ಗ್ರಂಥದಲ್ಲಿ ಬರೆದದ್ದನ್ನು ಓದಿದ್ದಿ? ನೀನು ಕ್ಷತ್ರಿಯನಾಗಿ ಮಾತಾಡಯ್ಯ; ಪಾಂಡು ಚಕ್ರವರ್ತಿಯ ಮಗನಾಗಿ ಮಾತಾಡು, ಕುಂತಿದೇವಿಯ ಹರಕೆಯ ಮಗನಾಗಿ ಮಾತಾಡು, ದೌಪದಿಯ ಮಾತನ್ನು ಅನುಸರಿಸು. ಈಗ ನಾವು ಯುದ್ಧವನ್ನು ಸಾರುವದಲ್ಲ; ಅದನ್ನು ಅವ ಮಾಡಿ ಅಗಿದೆ. “ಧರಣಿಯಂ ಪಾರ್ಥಿವರ್ ಸೋತಮೇಲರಿಗಳದಂ ಧುರದೊಳಗೆ ಜಯಿಸಿಕೊಂಬುದು ಧರ್ಮ” ಅದನ್ನು ಇನ್ನವ ಬದಲಿಸ್ತಾನೆ ಅಂತ ತಿಳ್ಕೊಳ್ಳೋದು ಬೇಡ. ಯುದ್ಧ ಸಾರುವವ ಪಾಪಿ, ಇದಿರಿಸುವವ ಧರ್ಮಿಷ್ಠ. - 'ಯಶೋಧರ್ಮಃ ತತೋ ಜಯಃ' ಇದು ನಮ್ಮ ನಂಬುಗೆ “ಕರುಣದಿ

ಜಯಲಕ್ಷ್ಮಿ ಯಾರಿಗೊಲಿಯುವಳೊ" ಇದು ನಿನ್ನ ಚಿಂತೆ, ಇದು ಅರ್ಥಶಾಸ್ತ್ರ ಪಂಡಿತರ ಚಿಂತೆ, ನೀನು ಕೇವಲ ಅದಲ್ವಲ್ಲ? ಅವಳು ಯಾರಿಗೆ ಒಲಿಯಲಿ ನಿನ್ನ ಕರ್ತವ್ಯ ನೀನು ಮಾಡಬೇಕಲ್ಲ? ಕ್ಷತ್ರಿಯೋಚಿತವಾದ ಸ್ವಧರ್ಮ ನಿನಗೆ ಬಾಧಿಸ್ತದಲ್ಲ?

ಇನ್ನೀಗ ನಾನ್ ಹೇಳ್ತೇನೆ ನಮ್ಮ ಕೊಡುಗೆ ಸಂಧಾನವೇ ಆಗಿರಲಿ ಅದು ಒಳ್ಳೆಯ ರಾಜನೀತಿ ಹೊರತು ಅದೇ ನಿರ್ಧಾರಕ್ಕೆ ಅಂತ ನಾವ್ ಬರಬಾರ್ದು, "ಧರ್ಮರಾಯ ಚಕ್ರವರ್ತಿಯಾಗೋಕು ಯಾಕೆ? ಚಕ್ರವರ್ತಿಯ ಮಗನಾದ್ದರಿಂದ" ಇದು ನಿಮ್ಮಮ್ಮ ಹೇಳಿದ ಮಾತು. ಹಾಗಾಗಿ ನೀನು ಯಾರಾರಿಗೆ ಅಳುಕುತ್ತಿ ಅವನ್ನೆಲ್ಲ ನನಗೆ ಬಿಡು. ಸಂಧಿ ಎನ್ನುವದು ನಮ್ಮ ಕೊಡುಗೆ ಅದನ್ನವ ಮುರಿದನೋ, ಯುದ್ಧವೇ ಅಲ್ವೋ? ನಾವು ಯುದ್ಧ ಮಾಡೋದು ಅರ್ಧ ರಾಜ್ಯಕ್ಕಾಗಿ ಅಲ್ಲ, ಪಾಲಿಗಾಗಿ ಅಲ್ಲ, ಯುದ್ಧವೇ ಬದ್ಧ ಅಂತಾದ್ರೆ ನಮಗೆ ಸಿಂಹಾಸನವೇ ಸಿಕ್ಕಬೇಕು ಹೌದಲ್ಲ? ಧರ್ಮರಾಯನಾದ ನೀನು 'ಐದು ಗ್ರಾಮ ಸಿಕ್ಕಿದರೂ ಸಾಕು' ಅಂತ ಹೇಳುವದು ಯುದ್ಧಕ್ಕೆ ಹೆದರಿ ಅಲ್ಲ; ಹೌದು ತಾನೆ? ಅಂವ ಸಂಧಾನಕ್ಕೆ ಒಪ್ತಾನೋ; ಐದು ಗ್ರಾಮ ಅಂತ ನೀನ್ ಹೇಳಿದ್ಯಲ್ಲ ನಾನು ಬೇಕಾದ್ರೆ ಐದು ಕೋಣೆಯ ಮನೆಗೂ ಕೂಡಾ ಒಪ್ಪಿಗೆ ಕೊಟ್ಟು ಬತ್ತೇನೆ. ಯಾವುದೇ ಸಮಸ್ಯೆಯನ್ನು ಪೆಟ್ಟುಮಾಡಿ ಜಗಳಮಾಡಿ ಏನೇನೋ ಮಾಡಿ ಬಗೆಹರಿಸುವದಲ್ಲ, ಯಾಕೆ? ಅದೊಂದೂ ಸ್ಥಾಯಿಯಲ್ಲ. ಸ್ಥಾಯಿಯಾದದ್ದು ಯಾವುದು? 'ಧರ್ಮ'. ನೀನು ಧರ್ಮ ಪ್ರಜ್ಞೆಯುಳ್ಳವ ಎಂಬುದು ಸತ್ಯ. ಆದರೆ ನಿನ್ನ ಈ ವ್ಯವಹಾರಕ್ಕೆ ಬಾರದೇ ಇದ್ದಂತಹ ಗೊಡ್ಡು ವೇದಾಂತ ಉಂಟಲ್ಲ ಅದಿನ್ನು ಬೇಡ. ನನ್ನ ದೃಷ್ಟಿಯಲ್ಲಿ ರಾಜ್ಯ ವಿಭಜನೆ ಮಾಡಿದ್ದೇ ತಪ್ಪು, ನಾನಾವಾಗ ಇಲ್ಲಿಲ್ವಲ್ಲ ನಿಮ್ಮ ಸಂಪರ್ಕದಲ್ಲಿ ಧೃತರಾಷ್ಟ್ರ ಪಾಲು ಮಾಡಿದ. ಚಕ್ರವರ್ತಿಯ ಕಿರೀಟ ಎಲ್ಲಿದೆ? ಶ್ವೇತ ಛತ್ರ ಎಲ್ಲುಂಟು? ಸಿಂಹಾಸನ ಎಲ್ಲುಂಟು? ಅಲ್ಲುಂಟು. ಹಾಗಾದ್ರೆ ನೀವು ಪಾಲ್ ತಕೊಂಡದ್ ಯೆಂಥದ್ದು? ಆ ಮುದ್ರ ಕಣ್ಣಿಲ್ಲದಿದ್ದವ ಏನೂ ಮಾಡ್ಯಾನು. ಆದರೆ ಒಳ್ಳೆಯವ! ಒಳ್ಳೆಯವ ಆದದ್ದು ಯಾವಾಗ? ಇದೆಲ್ಲ ಮಾಡಿ ಮಕ್ಕಳು ದುರ್ಬುದ್ಧಿಯಿಂದ ಈಗವನ ಮಾತನ್ನು ಅವರೂ ಕೇಳದೇ ಇರುವಾಗ "ಕೆಟ್ಟೆನಲ್ಲಾ" ಅಂತ ಹೇಳ್ತಾನೆ ಧೃತರಾಷ್ಟ್ರ! ಈಗಲೂ ಅವನನ್ನು ನಂಬಿ ಒಬ್ಬೊಬ್ಬನೇ ಹತ್ತಿರ ಹೋಗಬೇಡ. ನಾಳೆಗೂ ಈ ಮಾತನ್ನು ನೀನೂ ನಿನ್ನ ತಮ್ಮಂದಿರು ಮರೆಯಬಾರದು. ಯೇನು ಮಾಡೋಣ ಪಾಂಡವರಿಗಾಗಿ ರಾಜ್ಯ ಪಾಲು ಮಾಡುವಾಗ, ಆಮೇಲೆ ದೂತ ಆಡುವಾಗ ನಾನ್ ಇರ್ತಿದ್ರೆ ಹೀಗಾಗ್ಲಿಕ್ಕೆ ಬಿಡ್ತಿದ್ದಿಲ್ಲ. ಇನ್ನೀಗ ನಾನು ಬಂದ ಮೇಲೆ ಕೂಡಾ ಭಜನೆ- ತಾಳ ಹಿಡಿದ, ಭಜನೆಗೆ ಕಿವಿಗೊಡುವ ದೇವರು ಅಂತ ನನ್ನನ್ನು ಪರಿಭಾವಿಸಬೇಡ. ಹೋಗಿ ಬರ್ತೇನೆ.

(ಸಲಹೊಲಕ್ಷ್ಮೀರಮಣ ತನ್ನನೆಯತ್ತಲಂಟ್ರಿಯಲಿ ದ್ರೌಪದಿ ಬಂದುಮಣಿದಳು)

ತಂಗೀ ಮೇಲೇಳು. ನಿನಗೆ ನಾನು ಹೇಳಿಕಳುಹಿಸಿದ್ದು ಈ ಪರಿಯಾಗಿ ನನ್ನ ಚರಣದಲ್ಲಿ ಹೊರಳು ಅಂತ ಅಲ್ಲ. ಕಣ್ಣೀರು ಇನ್ನು ಸಾಕು. ಗೊತ್ತಾಯ್ತು ನೀನು ನಿನ್ನ ಕೂದಲನ್ನೇ ಮುಂದಿಟ್ಟು ಮಾತಾಡ್ತಿ ಅದನ್ನು ಕಟ್ಟಿಸ್ತೇನೆ. ಕಟ್ಟಿಸ್ತೇನೆ ಅಂದ್ರೆ ಯುದ್ಧ ನಿರ್ಣಯ ಮಾಡಿ ಬರ್ತೇನೆ ಅಂತಲೇ ಅರ್ಥ ಅಲ್ಲ. ಹೇಳಿ ಕೇಳಿ ನಾನು ನಿನ್ನ ಅಣ್ಣ, ನಾನು ಶಾಂತಿದೂತನೇ, ನೀನೂ ಅಷ್ಟೇ. ನೋಡು, ಆ ದಿನ ರಾಜಸಭೆಯಲ್ಲಿ ಕೌರವ ದುರ್ಬುದ್ಧಿಯಿಂದ ಏನೋ ಮಾಡಿದ. "ಕ್ಷಮಿಸು ಮಗಳೇ" ಅಂತ ಧೃತರಾಷ್ಟ್ರ ಮಾವ ಹೇಳಿದ. ನೀನು ಕ್ಷಮಿಸಿದ್ದಿ ಹಾಗಲ್ಲದಿದ್ದರೆ ಎರಡುವರ ತೆಕ್ಕೊಳ್ತಿದ್ಯೋ? ಅದಕ್ಕಲ್ಲವೆ ಇಂದ್ರಪ್ರಸ್ಥ ಹಿಂದೆ ದೊರೆತದ್ದು. ಭೀಮ ಪ್ರತಿಜ್ಞೆ ಮಾಡಿದ, ಅರ್ಜುನ ಪ್ರತಿಜ್ಞೆ ಮಾಡಿದ, ಆದರೆ ಕ್ಷಮಿಸಿದವರು ಯಾರು? ನೀನು. ನಿನ್ನಲ್ಲಿ ಆ ತಾಯ್ತನ ಅಂತ ಉಂಟು - ಸ್ತ್ರೀತ್ವ ಹಾಗಲ್ಲದಿದ್ರೆ ಧೃತರಾಷ್ಟ್ರನ ಮಗ ಆ ಪಾಶದಲ್ಲಿ ಸಿಕ್ಕಿ ಒದ್ದಾಡುವಾಗ ಬಿಡಿಸದ ಯಾರು? ನೀನು, ನಿನಗೆ ಸಿಕ್ಕಬೇಕಾದದ್ದು ಸಿಕ್ತದೋ ಇಲ್ವೋ ಎಂಬ ಸಂಶಯ ಇದ್ದ ಕಾರಣ ನೀನು ಇಷ್ಟು ದಿನ ಮುಡಿ ಕಟ್ಟಿಲ್ಲ. ಹಾಗಾಗಿ ಪ್ರತಿಜ್ಞೆಗೆ ಜೀವ ಬರುವದು ಈಗ ಇನ್ನು ಆ ಜೀವ ಕೊಡುವ ಕೆಲಸ ಕೌರವನಲ್ಲಿ ಉಂಟು. ಆದ್ದರಿಂದ ಚಿಂತಿಸಬೇಡ, ವಸುದೇವನಾಣೆ ದೇವಕಿಯಾಣೆ ನಿನ್ನ ತುರುಬನ್ನು ಕಟ್ಟಿಸ್ತೇನೆ ದ್ರೌಪದಿ ಮುಡಿ ಕಟ್ಟೋದಿದ್ರೆ ಬೇರೆ ಏನೂ ಬೇಡ, ಧೃತರಾಷ್ಟ್ರ ಕೊಟ್ಟ ಮಾತನ್ನು ನಡೆಸಿದರೆ ಸಾಕು. ಸಂಧಾನ ಆದ್ರೆ ಸಂಧಾನ ನಿನ್ನ ಮುಡಿ ಕಟ್ಟಿಸ್ತೇನೆ.



## ೧೧ ವಿದುರನರಮನೆಗೈದಿದಂ ಶ್ರೀಕೃಷ್ಣನು

### ಕೃಷ್ಣ

|ವಾರ್ಧಿಕ ಕುರುರಾಯನುಳಿದೆಲ್ಲರಾಲಯವ ಸೊಕ್ಕು ಸ | ತರುಣದಿಂ ಕುಶಲಮಂ

ಬೆಸಗೊಳುತ ವಿದುರನರಮನೆಗೆಯ್ದಿದಂ ಕೃಷ್ಣನು || ೧೨೦ |

ಶುದ್ಧ ಸಂಸ್ಕಾರವನ್ನುಳ್ಳ ಜನತೆಯಿಂದ ಕೂಡಿದ ಜನಪದವೇ ಒಂದು ಮಹಾರಾಷ್ಟ್ರ, ರಾಷ್ಟ್ರಕ್ಕಾಗಿ ಧರ್ಮಪೀಠಗಳೂ ಬೇಕು, ನ್ಯಾಯಪೀಠಗಳೂ ಬೇಕು. ಇದರ ಸಂರಕ್ಷಣೆಗೆ ಎಂತ ಒಂದು ಅರಸೊತ್ತಿಗೆಯೂ ಬೇಕು. ಹೀಗೆ ಪರಸ್ಪರ ಹೊಂದಾಣಿಕೆಯಿಂದ ಕೂಡಿ ಬಾಳುವ ಒಂದು ಸಮಾಜ ಛಿದ್ರವಿಚ್ಛಿದ್ರವಾಗಿ, ಹಲವಾರು ಮತಗಳ ಗೊಂದಲಮಯವಾದಂತಹ ಒಂದು ಬೆಳಕಿಲ್ಲದ, ಹಾಗೆಂತ ಪೂರ್ಣ ಕತ್ತಲೆಯಲ್ಲದ ಒಂದು ಸಂಕ್ರಾಂತಿಯ ಘಟ್ಟದಲ್ಲಿ ಈಗ ನಾವೆಲ್ಲ ಹುಟ್ಟಿಕೊಂಡಿದ್ದೇವೆ. ವಿಷಯ ಬಹಳ ಸಣ್ಣದು. ಆದರೆ ಪ್ರತಿಯೊಬ್ಬರು ಪ್ರಪಂಚ ತಮಗಾಗಿ ಇದೆ ಎಂತ ತಿಳಕೊಂಡು ಪ್ರಾಪಂಚಿಕವಾದ ಎಲ್ಲವನ್ನೂ ತನ್ನಲ್ಲೇ ಆವರಿಸಿಕೊಂಡು ತನಗಾಗಿ ಇವೆಲ್ಲ ಅಂತ ತಿಳಿದಾವಾಗ ಮಾತ್ರ ಸಣ್ಣ ಸಮಸ್ಯೆಯೂ, ಬೃಹದಾಕೃತಿಯನ್ನು ತಾಳಿ, ಎಂತಹ ವಿದ್ವಾಂಸರಿಗೂ ಬಗೆಹರಿಸಲಿಕ್ಕೆ ಸಾಧ್ಯವಿಲ್ಲದಂತಹ ಒಂದು ಕಗ್ಗಂಟಾಗಿ ಪರಿಣಮಿಸುತ್ತದೆ ಎನ್ನುವದಕ್ಕೆ ಚಂದ್ರವಂಶದ ಅರಸು ಮಕ್ಕಳಾಗಿ ಹುಟ್ಟಿದ ಸದ್ಯ ಬದುಕುತ್ತಿರುವ ದುರ್ಯೋಧನಾದಿಗಳೂ, ಹಾಗೆಂತ ನನ್ನವರೇ ಆದಂತಹ ಪಾಂಡವರು-ಜೀವಂತ ಉದಾಹರಣೆಯಾಗಿ ಉಳಿದಿದ್ದಾರೆ. ಯುದ್ಧವೇ ಆಗಬೇಕೆ? ಇದು ನಿಜವಾಗಿ ಮೂರನೆಯವನಾಗಿ ನೋಡುವಂತಹ ಒಬ್ಬ ಸಜ್ಜನನಿಗೆ ತೋರುವಂತಹ ಪ್ರಶ್ನೆ ಆಗಬೇಕಾದ್ದಿಲ್ಲ. ಯುದ್ಧವೇ ಆಗಬೇಕಾದರೆ ಮೊದಲಿನ ತತ್ತ್ವ, ಸಂಸ್ಕಾರ, ಸಂಹಿತೆ ಇದೆಲ್ಲ ನಷ್ಟ ಹೊಂದಿ, ಒಂದು ಹೊಸ ಸೃಷ್ಟಿಯನ್ನು ಮಾಡಬೇಕಾದ ಸಂದರ್ಭದಲ್ಲಿ ಅಗತ್ಯವಿದ್ದೀತೇ ಹೊರತು, ಇಲ್ಲದಿದ್ರೆ ಅವಶ್ಯಕತೆ ಏನು? ಒಬ್ಬ ದುರ್ಯೋಧನನ ಸ್ವಾರ್ಥ, ಅವನ ಅಹಂಕಾರ, ಅವನ ದುರಭಿಮಾನ ಇದು ಕಾರಣವಾಗಿ ಯುಧಿಷ್ಠಿರಾದಿಗಳಿಗೂ ಸ್ವಾಭಿಮಾನ ಚುಚ್ಚುತ್ತಾ ಇದೆ. ಪ್ರಕಟವಾಗಿ ಭೀಮ, ಅರ್ಜುನ, ದ್ರೌಪದಿಯರಲ್ಲಿ ಅದು ಪ್ರತ್ಯಕ್ಷವಾಗ್ತಾ ಉಂಟು. ಆದರೆ ಪಾಂಡವರದ್ದಾದಂತಹ ಸ್ವಾಭಿಮಾನ ಅದು ದುರಭಿಮಾನವಲ್ಲ. ಇವರು ಸಂಸ್ಕೃತಿಯನ್ನು ಕಾಪಿಡುವಲ್ಲಿ ಕೈಲಾದ ದೇಣಿಗೆಯನ್ನು ಕೊಡುವದಕ್ಕೆ ಸಿದ್ಧರಾಗಿದ್ದಾರೆ ಅಂತ ಈ ಹೊತ್ತಿನ ಸಭೆಯಲ್ಲಿ ನಡೆದಂತಹ ಮಾತುಗಳಿಂದ ನನಗೆ ಮನವರಿಕೆಯಾಗಿದೆ. ದೌಪದಿಯ ಸಿರಿಮುಡಿ ಬಂಧಿಸಲ್ಪಡಬೇಕು ಹೌದು, ಅವಳ ಸಿರಿಮುಡಿ ಬಂಧಿಸಲ್ಪಡಬೇಕಾಗಿದ್ರೆ ಭೀಮನು ಹೇಳಿದಂತಹ ಮಾತನ್ನು ನಡೆಸಿಯೇ ತೀರಬೇಕೆಂತೇನೂ ಇಲ್ಲ. ಕೌರವನು ಮಾಡಿದ ತಪ್ಪನ್ನು ಒಪ್ಪೋಳ್ಳದಿದ್ದರೂ ಚಿಂತೆ ಇಲ್ಲ. ಬಾಯ್ದೆರೆಯಾಗಿ ಒಪ್ಪಿಕೊಳ್ಳದಿದ್ರೂ ಕೃತಿಯಿಂದ ಅವನದರ ಪರಿಮಾರ್ಜನೆಯನ್ನು ಮಾಡುವದಕ್ಕೆ ಬದ್ಧನು. ಹೌದು, ಬದ್ಧನಾದರೆ ಸಾಲದಲ್ಲಿ ಸಿದ್ಧನಾಗಬೇಕು. ಆಗತಾನೆಯೋ ನೋಡೋಣ. ಸಂಧಿಗೆ ಒಡಂಬಟ್ಟರೆ, ಅವನ ದುರಭಿಮಾನದಿಂದ ಪ್ರಚೋದಿಸಲ್ಪಟ್ಟ, ಈ

ಭೀಮಾರ್ಜುನ ಪಾಂಚಾಲಿಯೇ ಮುಂತಾದವರ ಸ್ವಾಭಿಮಾನಕ್ಕೆ ಏನಾಗ್ತದೆ? ಹಿಂತೆಗೆಯಬಹುದಾಗಿದೆ. ಸರ್ವಥಾ ಕೂಡದು ಸಂಧಿಯನ್ನೆ ಮಾಡಬೇಕು. ಪ್ರಯತ್ನ ನನ್ನದು. ಆಗುವದಿಲ್ಲ ಅಂತಾದ್ರೆ ನಮಗೆ ನಿರ್ವಾಹವಿಲ್ಲ. ನಮ್ಮ ಸುಕೃತ ಏನು ಅಂತ ಅಂದ್ರೆ ಯುಧಿಷ್ಠಿರನಂತವನು ಈ ಪಕ್ಷದ ನಾಯಕನಾಗಿರುವನು. ಆದ್ದರಿಂದಲೇ ಹೇಳಿದ್ದು-ಸಂಧಿಯನ್ನು ಮುಂದಿಡು, ಒಪ್ಪದಿದ್ರೆ ಕೌರವನು ಏನ್ ಹೇಳುತ್ತಾನೋ ಅದನ್ನು ಒಪ್ಪು ಹೀಗೆ ಒಂದು ವಿಧವಾಗಿ ಸಭೆಯ ಉದ್ರಿಕ್ತ ವಾತಾವರಣವನ್ನು, ಶಾಂತ ವಾತಾವರಣವಾಗಿ ಮಾರ್ಪಡಿಸಿ ಪಾಂಚಾಲಿಗೂ, ಭೀಮನಿಗೂ, ದ್ರುಪದನಿಗೂ, ವಿರಾಟನಿಗೂ ಎಲ್ಲರಿಗೂ ಸಾಂತ್ವನದ ಮಾತುಗಳನ್ನು ಹೇಳಿ, ನಿಮ್ಮ ಮಾನಕ್ಕೆ ಮರ್ಯಾದೆಗೆ ಕಿಂಚಿತ್ ಮಾತ್ರ ಊನಬಾರದಂತೆ ಯಶಸ್ವಿಯಾಗಿ ಹಸ್ತಿನಾವತಿಗೆ ಹೋಗಿ ಬತ್ತೇನೆ ಅಂತ ಹೇಳಿದಲ್ಲಿಗೆ; ಹೋಗುತ್ತಿರುವದು ಕೌರವನ ಕಡೆಗೆ ತಾನೆ! ಬೆಂಗಾವಲಿನ ಭಟರೂ ಇರಲಿ, ಆಯುಧ ಸಂಗ್ರಹವೂ ಇರಲಿ ಅಂತ ಯುಧಿಷ್ಠಿರ ಅಪೇಕ್ಷಿಸಿದ್ದರಿಂದ ಇಷ್ಟನ್ನೂ ಕೂಡಿಸಿಕೊಂಡು ರಥಾರೋಹಿಯಾಗಿ ನಾನೀಗ ಹೊರಟು ನಿಂತಿದ್ದೇನೆ ಹಸ್ತಿನಾವತಿಗೆ

ಎಲ್ಲರನ್ನೂ ಸಾಂತ್ವನಗೊಳಿಸಿದ ಹಾಗಾಯ್ತು. ಈಗ ನೋಡಿ, ಧರ್ಮರಾಯ ಮಹಾ ಬುದ್ಧಿವಂತ! ಬಂಡಿ ಬಂಡಿಗಳಲ್ಲಿ ದವಸ, ಧಾನ್ಯ ತುಂಬಿಸಿ ಕೆಲವು ಭಟರನ್ನು ಕಳುಹಿಸಿದ್ದಾನೆ ಒಟ್ಟಿಗೆ, ಯಾಕೆ? ಹೋಗೂದ್ ಅವ್ನಲ್ಲಿಗೆ ಅಲ್ವೆ? ಕೌರವನಲ್ಲಿಗೆ, ಇದು ರಾಜಕಾರಣ, ತನ್ನ ರಾಯಭಾರಿಗೆ ಕೊಡುವಂಥಹ ಸಂರಕ್ಷಣೆ- ಈಗ ಅಕ್ಷೋಹಿಣಿ ಸೈನ್ಯ ಉಂಟು ನನ್ನೊಟ್ಟಿಗೆ, ಅಡಿಗೆಯದ್ದೆಲ್ಲ ಯಾಕೆ? ಗೊತ್ತುಂಟು ನನ್ಗೆ. ಅವನ ಮನೆಯಲ್ಲಿ ಗಂಗೋದಕ ಮುಟ್ಟಾರು; ವಿಷ ಹಾಕ್ಯಾನು! ಬುದ್ಧಿವಂತ ಅಲ್ವ ಧರ್ಮರಾಯ? ಆದರೆ ನಮ್ಮ ಸಾರಥಿಗೆ ಗೊತ್ತುಂಟು ನೋಡಿ, ನಮ್ಮ ಕೃಷ್ಣನಿಗೆ ಈ ರಥವೇ ಆಗೋಕು ಅಂತ. ಯಾಕೆ? ಅದ್ರ ಗುಟ್ಟು ನನಗೂ ನನ್ನ ಸಾರಥಿಗೂ ಗೊತ್ತಿಲ್ಲೊ? ಹೂ.. ಹಾಗಾಗಿ ಅವ, ನನ್ನ ರಥವನ್ನೇ ತಂದಿಟ್ಟಿದ್ದಾನೆ. ಸಾತ್ಯಕಿ, ಅವ ನಿಜವಾಗಿ ನನ್ನ ಯುದ್ಧಮಂತ್ರಿ ಹಾಗಾಗಿಯೇ ಸಾತ್ಯಕಿಯೂ ಕಲ್ಲದ್ದು ಪಾಠ ಸಾಲದು ಅಂತ ತೀರ್ಥಯಾತ್ರೆಗೆ ಅರ್ಜುನ ಬಂದಿರುವಾಗ ನಾನು ಅವನಿಂದ ಪಾಠಕೊಡಿಸಿದ್ದು ಸಾತ್ಯಕಿಗೆ ಇದೆಲ್ಲ ನಡೆದ ಕಥೆ. ಆದ್ರೆ ಅದೆಲ್ಲ ಗುಟ್ಟಿನಲ್ಲಿ ಊರವಿಗೆ ಗೊತ್ತಿಲ್ಲ. ನನ್ನ ಯುದ್ಧ ಮಂತ್ರಿಯಾಗಿದ್ದ ಸಾತ್ಯಕಿ, ಎಷ್ಟೋ ಗಾಡಿಯಲ್ಲಿ ಆಯುಧ ತುಂಬಿಸಿದ್ದಾನೆ. ಧರ್ಮರಾಯ ಆಯುಧ ತುಂಬಿಸಿಲ್ಲ. ಅವನಿಗೆ ಅದೊಂದು ತುರಿಕೆ ಆಯುಧ. ಹಾಗಾಗೇ ಅಲ್ವ, ಮಲಗುವಾಗ ಆಯುಧ ಎಲ್ಲ ತನ್ನ ಕೋಣೆಯಲ್ಲಿ ಇಟ್ಟು ಮಲಗಿ... ಒಬ್ಬೊಬ್ರಿಗೊಂದೊಂದು ದೌರ್ಬಲ್ಯ ಇರ್ತದೆ. ಛೇ, ಧರ್ಮರಾಯ ಆಯುಧ ತುಂಬಿಸಲಿಲ್ಲ. ಸಾತ್ಯಕಿ, ಆಯುಧಗಳನ್ನು ತುಂಬಿಸಿದ. ಈಗ ಸರಿಯಾಯ್ತು ಹಾಂ,

ಹೌದು ದೇವದುಂದುಬಿ ಮೊಳಗಿದ ಹಾಗೆ ತೋರ್ತದೆ. ಮಳೆ ಹನಿಯಿತೋ ಎರಡು, ಇದಕ್ಕೆ ಪುಷ್ಪವೃಷ್ಠಿ ಅಂತ ಹೆಸ್ರು, ಒಳ್ಳೆ ಮುಹೂರ್ತ ಇದು. ನಾನೂ ಕೂಡ ಶಾಸ್ತ್ರವನ್ನು

ಒಪ್ಪುವವ. ಅದಕ್ಕಾಗಿಯೇ ನನ್ನ ಪಂಚಪಾತ್ರೆ, ಸೌಟು, ಸಂಧ್ಯಾವಂದನೆದೆಲ್ಲ ಹಿಡ್ಕೊಂಡಿದ್ದೇನೆ ನಾನು. ನನಗೂ ಹೊತ್ತೊತ್ತಿಗೆ ಅದೆಲ್ಲ ಆಗೇ ತಿರ್ಬೇಕು. ಯಾಕೆ? ನಾನೇ ಮಾಡೋದಿಲ್ಲ ಅಂತಂದ್ರೆ ಮತ್ತೆ ಯಾರೂ ಮಾಡೋದಿಲ್ಲ. ನನ್ನ ಮಕ್ಳೂ ಮಾಡೋದಿಲ್ಲ. ಹಾಗಾಗಿ ಹೇಳಿದ್ದೇನೆ ದಾರುಕನಿಗೆ ಎಲ್ಲೆಲ್ಲಿ ಸಂಧ್ಯಾಕಾಲ ಬರ್ತದೆ, ಸೂರ್ಯಾಸ್ತಮಾನ, ಮಧ್ಯಾಹ್ನ ಅಲ್ಲಿ ರಥ ನಿಲ್ಲಿಸ್ಬೇಕು. ನಾ ಇಳೀಬೇಕು. ಅಲ್ಲಿ ಸ್ನಾನ ಮಾಡ್ಬೇಕು. ನನ್ನ ನಿತ್ಯಾಹ್ನಿಕ ಮಾಡ್ಬೇಕು. ಅಂತ ಹೇಳಿ...

ಇದ್ಯೆಂತದ್ದಿದು. ಈ ಋಷಿಮುನಿಗಳೆಲ್ಲ ಬರ್ತೇವೆ ಅಂತ ಹೇಳ್ತಾರೆ! ಬರ್ಲಿ. ಯಾಕೆ ಅಂತಂದ್ರೆ ನನಗೆ ಎಂದೆಂದಿಗೂ ಶಾಶ್ವತವಾದಂಥಹ ತಪ್ಪಿಲ್ಲದೇ ಇದ್ದ ಸಾಕ್ಷಿ ಹೇಳಲಿಕ್ಕೆ ಇವರೇ ನಮ್ಮ ದೇಶದ ಸಂಸ್ಕಾರಕ್ಕೆ ನಮ್ಮ ದೇಶದ ಧರ್ಮಾನುಷ್ಠಾನಕ್ಕೆ ಇದಮಿಥ್ಥಂ ಅಂತ ಹೇಳ್ವವರು ಇವರೆಲ್ಲ - ಕಣ್ವ ನಾರದ ಪರಶುರಾಮ ಇತ್ಯಾದಿ ಇತ್ಯಾದಿ. ಮಾತಲ್ಲ ಇವರೆಲ್ಲರೂ ರಾಜಕಾರಣಿಗಳೇ. ವಸಿಷ್ಟ ಅಯೋಧ್ಯೆ ರೂಪಿಸಿದವ. ಕಣ್ವ ಈ ಚಂದ್ರವಂಶಕ್ಕೆ ಹೆಣ್ಣು ಕೊಟ್ಟವ. ಪರಶುರಾಮ ಹ್ಞ ಹೌದ್ಹೌದು, ಪರಶುರಾಮನಿದಿರು ಹೇಳ್ಬೇಕು ಕೌರವ. ಕ್ಷತ್ರಿಯ ಧರ್ಮವನ್ನು ಇಪ್ಪತ್ತೊಂದು ಸಲ ಇವುಗಳ ಸಂತಾನ ಮುತ್ತಿಸಿದ ಬ್ರಾಹ್ಮಣ ಅವ. ಕ್ಷತ್ರಿಯ ಧರ್ಮ ಅಂದ್ರೆ ಯುದ್ಧ ಅಂದ್ರೆ ಎಷ್ಟುಂಟು ಅಂತ. ಎಲ್ಲ ಅನುಕೂಲವೇ ನಮಗೆ ಧರ್ಮೋರಕ್ಷತಿ ರಕ್ಷಿತ: ಅಂತ ನಾನ್ ಹೇಳಿದ್ ಅದ್ಕೆ. ಧರ್ಮರಾಯನಲ್ಲಿ ಧರ್ಮ ಉಂಟೋ ಎಲ್ಲೆಲ್ಲಿಂದ ಬರ್ತಾರೆ ನೋಡಿ. ಕೆಲವರು ಕೇಳ್ಯಾರು ಈ ಗಡ್ಡದವರಿಗೆ ಸನ್ಯಾಸಿಗಳಿಗೆ ರಾಜಕೀಯ ಯಾಕೆ ಅಂತ. ನಾನ್ ಹೇಳೋದು ರಾಜಕೀಯದಲ್ಲಿ ಸನ್ಯಾಸಿಗಳೇ ಇರ್ಬೇಕು. ಬಾಕಿ ಇದ್ದವರಿಂದ ಹಾಳಾಗೋದು.

ಬನ್ನಿ, ಬನ್ನಿ, ಬನ್ನಿ ನಾರದರು, ಕಣ್ವರು ಓಹ್ ಕಶ್ಯಪರೂ ಇದ್ದೀರ? ನೀವಿದ್ದರೆ ಬಹಳ ಒಳ್ಳೇದಾಯ್ತು ಯಾಕೆ? ಇಡೀ ಭೂಮಿ ಇದು ನಿಮಗೆ ಕೊಟ್ಟಿದ್ದು ಮೊದಲು, ಹಾಗಾಗಿ ಇವಳಿಗೆ ಕಾಶ್ಯಪಿ ಅಂತ ಹೆಸರು. ಹಾಗಾದರೆ ನಿಜವಾಗಿಯೂ ಈ ಭೂಮಿಯ ಪತಿಯಾರು? ಕೇಳಿ ಆ ಕೌರವನ ಹತ್ರ ನಿನ್ಗ ಯಾರೊ ಕೊಟ್ಟದು ಅಂತ. ಎಲ್ಲ ಅನುಕೂಲವಾಗಿದೆ ಬನ್ನಿ, ಬನ್ನಿ ಇದು ಓಹ್ ಇದು ಹಸ್ತಿನಾವತಿಯ ಉದ್ಯಾನ, ಹ್ಞ ಮಧ್ಯಾಹ್ನವಾಯ್ತು ಹ್ಞ ನೀವೂ ಹೋಗ್ತಿರೋ? ಸರಿಯಪ್ಪ ಸ್ನಾನ ಸಂಧ್ಯಾವಂದನೆ ಅದೂ ಇದು ಎಲ್ಲ ಮಾಡಿ.

ಒಬ್ಬನೇ ನಗರ ಪ್ರವೇಶ ಮಾಡ್ತೆನೆ. ಎಲ್ಲೆಲ್ಲಿ ಹೇಗ್ ಹೇಗೆಲ್ಲ ಉಂಟು? ಇದು ಆಂಜನೇಯ ಸ್ವಾಮಿಯಿಂದ ನಾವು ಕಲ್ತದ್ದು, ಸೀತಾಮಾತೆ ಎಲ್ಲಿದ್ದಾಳೆ ಅಂತ ಹುಡುಕಲಿಕ್ಕೆ ಹೋದ ಹನುಮಂತ ಊರಿಡೀ ಸುತ್ತಾಡಿದ.

ಅಧಿಕ ಪ್ರಸಂಗ ಅಲ್ವೋ? ಅಧಿಕ ಪ್ರಸಂಗ ಅದು ರಾವಣನಿಗೆ; ರಾಮ ಮೆಚ್ಚಿದನಂತೆ.

ಚೂಡಾಮಣಿ ತಂದು ಕೊಟ್ಟದ್ದಕ್ಕಲ್ಲ ರಾಮ ಮೆಚ್ಚಿದ್ದು ಹನುಮಂತನನ್ನು, ಅದು ಹನುಮಂತಲ್ಲ ಇನ್ನೊಬ್ಬ ತಂದು ಕೊಟ್ಟೂ ಅಷ್ಟೆ. ಬಿಗಿದಪ್ಪಿಕೊಂಡ ರಾಮ ಯಾಕೆ? "ನನ್ನನ್ನೇ ನಾನ್ ನಿನ್ಗ ಕೊಟ್ಟಿದ್ದೇನೆ ಮಹರಾಯ" , ಅವಿನಾಭಾವ ಆಲಿಂಗನ ಅಂದ್ರೆ ಅದು ಯಾಕೆ? ಅಷ್ಟೇ ಮಾಡಿ ಬರ್ಲಿಲ್ಲ ಅವ. ಲಂಕೆಯಲ್ಲಿ ಎಷ್ಟು ದುರ್ಗಗಳುಂಟು? ಎಲ್ಲೆಲ್ಲಿ ಗುಪ್ತದ್ವಾರಗಳುಂಟು? ಎಲ್ಲೆಲ್ಲಿ ಹೆಚ್ಚು ಸೈನಿಕ ಬಲ ಉಂಟು? ಎಲ್ಲಿ ಏನೂ ಇಲ್ಲ, ಎಲ್ಲಿ ಹೋದರೆ ಒಂದು ಗಳಿಗೆಯಲ್ಲಿ ಅದನ್ನು ಮುರಿದು ಹಾಕಬಹುದು. ವಿಚಕ್ಷಣ ಆಂಜನೆಯ! ರಾಯಭಾರಿ ದೂತ. ದೂತ ಅಂದರೆ ದೌತ್ಯವೇ ಚಾಕರ ಅಂತ ಅರ್ಥ ಅಲ್ಲ. ಹಾಗಾಗಿ ಉತ್ತಮ ರಾಜಕಾರಣಿ! ರಾಯಭಾರಿ! ಆಂಜನೇಯ!

ನಾನೇನು ನಾನೀಗ ಅವನಿಗಿಂತ ಸಣ್ಣವನಾಗ್ಬೇಕೋ? ಆದ್ದರಿಂದ ಋಷಿಮುನಿಗಳೇ ನೋಡ್ತೆನೆ ನಾನು ಹಸ್ತಿನಾವತಿಯಲ್ಲಿ ಅಲ್ ಏನೇನ್ ಏನೇನ್ ಆಗಿದೆ ಯುದ್ಧಕ್ಕೆ ಸನ್ನಾಹ; ಏನು ಗೋಡೆ ಎತ್ತರಿಸಿದ್ದಾರೆ? ನೋಡಿ ಬರ್ಬೇಕು. ಆದ್ದರಿಂದ ನಾ ಎಷ್ಟೇ ಹೊತ್ತಿಗೆ ಬರ್ತೇನೆ ಅಂತ ಕಾಯ್ಬೇಡಿ. ನೀವ್ ಎಷ್ಟೇ ಹೊತ್ತಿಗೆ ಬರ್ಬೇಕು ರಾಜಸಭೆಗೆ ಅಷ್ಟೆ ಹೊತ್ತಿಗೆ ಬನ್ನಿ ಸರಿ ಹಾ

ಇದ್ ಯೇನಿದು?! ಭೀಷ್ಮರು, ದ್ರೋಣರು, ಹ್ಞಾ ಧೃತರಾಷ್ಟ್ರ, 'ಎಲ್ಲಿ ಕೃಷ್ಣ' ಅಂತ ಆಚೆ ದಿಕ್ಕಿಗೆ ನೋಡ್ತಾರೆ. ದೊಡ್ಡ ಮಾವಾ ನಾನಿಲ್ಲಿ! ಅಂತ್ ಹೇಳುವಾಗ ನೋಡಿ, ಮುದುಕ ತಿರುಗಿದ. ಕಾಣಿಕೆ ನನ್ನ ಯೆಂಥಕ್ಕೆ ಕಾಣಿಕೆ? ಹ್ಞಾ.. ಇವರಿಗೂ ನೋವಾಗ್ಯದೆ, ಈ ಜಗಳ ಒಮ್ಮೆ ಮುಗ್ದರೆ ಸಾಕು ಅಂತ. ಕೃಷ್ಣ ನೀನ್ ಹೇಗೂ ಬಂದಿದ್ದಿ. ಊಟದ ಹೊತ್ತು, ಬಾಯಿ ಎಂಜಲು ಮಾಡಿದರೆ ನಮ್ಮ ಸಂತೋಷ ಎಲ್ಲರೂ ಅಷ್ಟೇ ಹೇಳಿದ್ದು, ನಿಮಗೆ ಇಲ್ಲಿ ಅಡುಗೆ ಮಾಡಿದ್ದಾರೆ ಅಂತ ಯಾರೂ ಹೇಳಲಿಲ್ಲ. ಕೊನೆಗೆ ವಿಚಾರಿಸಿದರೆ ಇದು ಅವನ ಲೆಕ್ಕದ್ದಂತೆ ಎಲ್ಲವರ ಮನೆಯಲ್ಲೂ ಕೊಪ್ಪರಿಗೆ ಇರಿಸಿದ್ದು ಯಾಕೆ? ಎಲ್ಲಿಗಾದರೂ ಅಪ್ಪಿ ತಪ್ಪಿ ಹೋಗ್ತಾನೋ ನೋಡ್ವ, ಹೋದರೆ "ಅನ್ನ ನನ್ನದು, ಈ ಅನ್ನದ ಋಣಕ್ಕಾಗಿಯಾದ್ರೂ ಪೂರ್ತಿ ನನ್ನನ್ನು ಸೋಲಿಸಲಿಕ್ಕಿಲ್ವಲ್ಲ" - ಮಹಾಬುದ್ಧಿವಂತ. ಇಲ್ಲದಿದ್ರೆ ದೂರ್ವಾಸರಿಗೆ ಪಾದಪೂಜೆ ಮಾಡಿ ಇವೊತ್ತು ನಮ್ಮ ಮನೆಯಲ್ಲಿ ಭಿಕ್ಷೆ ಆಗಬೇಕು ಅಂತ ಹೇಳುವ ಜನವೋ ಕೌರವ? ದೂರ್ವಾಸರಿಂದ ಏನಾದರೂ ಶಾಪ ಬಂದರೆ ಪಾಂಡವರಿಗೆ ಆಗಲಿ ಅನ್ನುವವ. ಹಾಗೆ, ಈಗ ನನ್ನನ್ನು ಉಪಯೋಗಿಸುವ ಆಲೋಚನೆ ಅವನದ್ದು! ಯಾರ ಮನೆಯಲ್ಲಾದರೂ ಊಟ ಮಾಡ್ಲಿ ಕೊನೆಗೆ ಹೇಳುವುದು "ನಾನೇ ಅಡುಗೆ ಮಾಡಿಸಿದ್ದು - ಎಲ್ಲವೂ ಮನೆಯಲ್ಲಿ, ನನ್ನ ಮನೆಯಲ್ಲಿ ಊಟ ಮಾಡಿದ್ದೆಯಲ್ಲಿ ಕೃಷ್ಣಾ ಇನ್ನೀಗ ನನ್ನ ಮನೆ ಮಾಡಿನಗಳ ಎಣಿಕೆ ಮಾಡ್ತೀಯಾ?" ಅದು ಹೌದದು ಧರ್ಮರಾಯನಿಗೆ ಅದು ಮೊದಲೇ ಗೊತ್ತುಂಟು ನಾನಿಲ್ಲಿ ಊಟ ಮಾಡ್ಲಿಕ್ಕಿಲ್ಲ. ಮಾಡಬಾರ್ದು, ನೀರು

ಕುಡಿಬಾರ್ದು ಇಲ್ಲಿ, ಕೌರವ ಮಹಾಬುದ್ಧಿವಂತ ಮಹರಾಯ್ರು , ಆದ್ರೆ ಒಂದುಂಟು, ಹಾವಿನ ಹೆಜ್ಜೆ ಹಾವಿಗೆ ಗೊತ್ತಾಗೋದು ಹ್ಡ ... ಅವ ಚಾಪೆಯ ಅಡಿಯಲ್ಲಿ ತೂರಿದ ಅಲ್ವೆ? ನಾನು? ನಾನು ರಂಗವಲ್ಲಿಯ ಅಡಿಯಲ್ಲಿ ತೂರಿಬಿಟ್ರೆ? ಹಾಗೇ ಮಾಡ್ವ

'ಕುರುರಾಯನುಳಿದು ಎಲ್ಲರ ಆಲಯಮಂ ಪೊಕ್ಕು' ಎಲ್ಲರಿಗೂ ಆಗಲಿ, ಆಗಲಿ... ಯಾರೂ ಒತ್ತಾಯ ಮಾಡ್ಲಿಲ್ಲ ಊಟ ಮಾಡ್ಬೇಕು ಅಂತ. ಮಾಡಿದರೆ ಸಂತೋಷ ಹ್ಹಾ... ದಾರುಕಾ ಹೌದ್ ಹೌದು, ದಾರಿ ಇದೇ ಈ ನಗರದ ಕೊನೆಯ ಮನೆ ಇದೆಯಲ್ಲ ದೊಡ್ಡ ಅರಮನೆ! ಅದೂ ಅರಮನೆಯೇ. ಆ ಅರಮನೆ ಅದು ವಿಚಿತ್ರವೀರ್ಯ ಚಕ್ರವರ್ತಿಗಳ ಕಾಲಕ್ಕಾದದ್ದು. ಕೆಲವೊಮ್ಮೆ ಅವರು ಬಂದು ಕೂತುಕೊಳ್ಳೋದಿತ್ತು ಆ ಮನೆಯಲ್ಲಿ. ವೇದವ್ಯಾಸರು ವಿಚಿತ್ರವೀರ್ಯನ ಕ್ಷೇತ್ರವನ್ನು ಒಪ್ಪಿ ಸಂತಾನೋತ್ಪತ್ತಿ ಮಾಡಿದ್ದು, ಹಾಗಾಗಿ ದಾಸೀ ಅಂತಂದ್ರೆ ಅವಳು ಕಸಗುಡಿಸುವವಳಲ್ಲ ರಾಜರಿಗಿದ್ದಾರೆ, ದಾಸಿಯರು ಅಂತ ಇದ್ದಾರೆ. 'ರಾಜಾನಾಂ ಬಹುವಲ್ಲಭಾಃ' ಹಾಗಾಗಿ ವಿಚಿತ್ರವೀರ್ಯನ ದಾಸಿ! ಅಲ್ಲಿಗೆ ಮಹಾರಾಜ ಬರುವಾಗ ಅರಮನೆಯಲ್ಲಿದ್ದದ್ದೆಲ್ಲ ಇಲ್ಲಿಯೂ ಬೇಡ್ವ? ಬಂಗಾರದ ತಂಬಿಗೆ, ಬಂಗಾರದ ಕೊಡ, ಮಂಚ ಪುಣ್ಯಕ್ಕೆ ಕೌರವನಿಗೆ ಇದು ಗೊತ್ತಿದ್ದರೂ ಸಹ ಇದನ್ನು ಸ್ವಾಧೀನ ಮಾಡ್ಲಿಕ್ಕೆ ಧೈರ್ಯ ಬಗ್ಗೆ ಏನ್ ಕರ್ಮವೊ. ಆದರೆ ಅವನಿಗಿದು ಬೇಡ ನನ್ನ ಗೊತ್ತುಂಟು. ಅವ ತೀರಾ ಉದಾಸೀನ ಈಗ, ಯಾಕ್ ಉದಾಸೀನ ಹೇಳಿದ್ದೊಂದೂ ಕೌರವರು ಕೇಳೋದಿಲ್ಲ. ಹಾಗಂತ ಪಾಂಡವರು ಒಳ್ಳೆಯವರು ಒಳ್ಳೆಯವರೇ. ಹಾಗಾಗಿ ಸದ್ಯ ಅವನ ಭಾವನೆ ಏನಾಗಿದೆ ಹೇಳ್ ಬಾಗಿದ ಬಿಲ್ಲಿನ ಹಾಗೆ, ಒಂದು ತುದಿ ಇಲ್ಲುಂಟು. ಒಂದು ತುದಿ ಅಲ್ಲುಂಟು. ನನ್ನ ಉದ್ದೇಶಯೇನು - ಬಾಗಿದ ಬಿಲ್ಲೆಲ್ಲ ಬೇಡ ತುಂಡ್ ಮಾಡಿ ಬಿಡು. ನೀನೀಗ ಸರಿಯಾಗಿಯೇ ಇದ್ದೀ ಅಂತ ಅವನಿಗೊಂದು ಪ್ರಾಮಾಣಿಕತೆಯನ್ನು ಕಲ್ಪಿಸಿಕೊಡೋದಲ್ಲ ಹೇಳಬೇಕು. ಇನ್ನೂ ಒಂದು, ಈ ಹೊತ್ತಿಗೂ ನಮ್ಮ ಪಾಂಡವರ ತಾಯಿ ಕುಂತೀದೇವಿ ಇರೂದ್ ಇಲ್ಲಿಯೇ ಇದರಿಂದ ನಮ್ಮ ಗೊತ್ತಾಗೋದಿಲ್ವೆ ಆ ಅಮ್ಮನಿಗೆ ಇಲ್ಲಿದೆಲ್ಲ ಅನುಭವ ಗೊತ್ತುಂಟು. ಮಾವ ಅಲ್ವ- ಭೀಷ್ಮ, ಯಾಕೆ? “ಆ ಬ್ರಹ್ಮಚಾರಿಯಲ್ಲಿ ನಾನು ಇದ್ದೇನೆ ದೇವರ ಧ್ಯಾನ ಮಾಡ್ತಾ” ಅಂತ ಆ ಅಮ್ಮ ಹೇಳ್‌ಲಿಲ್ಲ? ದ್ರೋಣರು? ವಿದುರನ ಮನೆಯಲ್ಲೇ ಏಕೆ ಕುಳಿತಿದ್ದಾಳೆ ಕುಂತಿದೇವಿ? ನಂಬಬಹುದಾದ ಒಬ್ಬ ಮನುಷ್ಯ ಇಲ್ಲಿ ಇದ್ರೆ, ವಿದುರ ಒಬ್ಬನೇ. ದಾರುಕಾ ಅರಮನೆಯ ಅಂಗಳದ ಬಾಗಿಲಿನಲ್ಲಿ ತಕೊಂಡ್ ಹೋಗ್ ರಥ ನಿಲ್ಲಿಸು.

(ವಿದುರ: ನೋಡಿದಂ ಚಿನ್ಮಯನ ಮೂರ್ತಿಯಂ ಪಿರುದು ಕೊಂಡಾಡಿದಂ)

ಹ್ಯಾಗೆ? ದೇವರು ಸಿಕ್ಕಿ ಬೀಳೋದು ಈ ಇಂಥವರ ಕೈಯಲ್ಲಿ 'ಮಂತ್ರಾಧೀನಂತು ದೈವತಂ', 'ಅರ್ಚಕಸ್ಯ ಪ್ರಭಾವೇಣ ಶಿಲಾ ಭವತಿ ಶಂಕರ” ಈಗ ನಾನು ದೇವರಲ್ಲ ಅಂತ ಹೇಳಿದರೆ ಅವ ಬಿಡ್ಡಿಕಿಲ್ಲ. ಅದು ನನಗೆ ಕಪ್ಪಾಗೋದು. ಮತ್ತೆ ಬಾಕಿಯಿದ್ದವರೆಲ್ಲ “ಕೃಷ್ಣಾ

ನೀನ್ ದೇವ್ರು ನಿನ್ಗ ಗೊತ್ತಿಲ್ಲದ್ದುಂಟೋ" ಅಂತ ಹೇಳಿದರೆ ನನ್ಗೆ ಅವರದ್ದು ಪ್ರತಿಕ್ರಿಯೆಯೂ ಬೇರೆ- ನಿಮ್ಮೆಲ್ಲ ದೇವ್ರ ಮಾಡ್ತಾನೆ. ನೀವು ದೇವ್ರು ಕೊಟ್ಟದ್ದನ್ ಅನುಭವಿಸಿ ಅಂದ್ರೆ ಬೇಡಿ ತಿನ್ನಿ! ಇವ ಹಾಗಲ್ಲ ಪರಮ ಜ್ಞಾನಿ! ಉಪನಿಷತ್ತನ್ನು ತಿಳಿದವ. ಧೃತರಾಷ್ಟ್ರನಿಗೆ ನಿದ್ದೆ ಬಗ್ಗೆ ಇದ್ದಾವಾಗ ವೇದಾಂತ ಬೇಕು!! ಪ್ರಪಂಚದಲ್ಲಿ ಆತ್ಮತತ್ತ್ವ ಎಲ್ಲ ಹೇಳಿದ ಪುಣ್ಯಾತ್ಮ ಮನ್ನಿಸುವುದು ಆತ್ಮನನು ಮೊದಲು ಸರ್ವಥಾ ತನ್ನ ತಾ ಮರೆತಿಹುದು ಮತವಲ್ಲ" ! ಎಂಥಾ ಶಿಷ್ಟಾಚಾರ ಸಂಪನ್ನ! "ಆದ್ರೆ ನಾನ್ ದಾಸೀ ಪುತ್ರ, ಗೊತ್ತಿದ್ದರೆ ನನಗೆ ಅನುಷ್ಠಾನಕ್ಕೆ ಮಾತ್ರ ನಾನ್ ಇನ್ನೊಬ್ಬರಿಗೆ ಹೇಳ್ಬಾರ್ದು. ಯಾಕೆ ಹೇಳ್ಬಾರ್ದು.? ಹಾಗೆ ಹೇಳಿದರೆ ಶಾಸ್ತ್ರ ಮರ್ಯಾದೆಯನ್ನು ನಾನ್ ಮೀರಿದಹಾಗಾಗ್ತದೆ. ಶಾಸ್ತ್ರ ಮರ್ಯಾದೆಯನ್ನು ನಾನ್ ಮೀರಿದರೆ ನಾನ್ ಹೇಳೋದ್ ಶಾಸ್ತ್ರ ಅಲ್ಲದೇ ಹೋಗ್ತಿದೆ" ! ಯಾವ ಬ್ರಾಹ್ಮಣನಿಗೆ ಕಡಿಮೆ ಇವ! ಯಾವ ಋಷಿಗೆ ಕಡಿಮೆ? ನೋಡಿ ಅವ ಹೇಳ್ವಾಗ, ಅಲ್ಲ ಅಂತ ಹೇಳಿದರೆ ನಾನೇ ಸಿಕ್ಕಿಬೀಳ್ತೇನೆ. ಮತ್ತೇನು ಅಂತ ಕೇಳ್ತಾನೆ ಅವ ನನ್ನನ್ನು, ಮತ್ತೇನು ಅಂತ ಹೇಳೋದು? ಸೋಲೋದು ಇಲ್ಲಿ. ಆದ್ದರಿಂದ ಈಗ 'ಯದ್ ಭಾವಂ ತದ್ ಭವತಿ" ನನ್ನ ತಿಳಿಯೋದಿಲ್ವ ಅದು? ದೇವರಾಗಿಯೂ ಅನುಗ್ರಹ ಮಾಡ್ಲಿಕ್ಕೆ ಬರದೆ. ಇವನಿಗೆ ಅಷ್ಟೇ ಬೇಕಾದ್ದು ದೇವರ ಅನುಗ್ರಹ; ಮತ್ತೇನೂ ಬೇಡ ಹೆಂಡತಿ, ಮಕ್ಕು ಆಡಳಿತ. ಅವ ಎಷ್ಟೋಸಲ ಹೇಳಿದ್ದ ಅಂತೆ- ಬುದ್ಧಿವಂತ ಒಳ್ಳೆಯವ ಆಗಿರೋದಿಲ್ಲ. ಒಳ್ಳೆಯವ ಬುದ್ಧಿವಂತ ಆಗಿರೋದಿಲ್ಲ" ಇನ್ನೊಂದು ನಾನ್ ಸೇರಿಸ್ತೇನೆ. ಎರಡೂ ಇದ್ದವನಿಗೆ ಏನೂ ಸಿಕ್ಕೋದಿಲ್ಲ. ಸಿಕ್ಕೇಕಾದವನಿಗೆ ಹಸ್ತಿನಾವತಿ ಯಾಕೆ? ಅಂಬಿಕೆಗೆ ಬದಲಾಗಿ ಹೋದದ್ದು ಇವಳಿಲ್ವೆ? ಭೀಷ್ಮನೇ ಹೇಳಿದ್ದು ಇದು. ಕ್ಷೇತ್ರ ದೋಷ ವಿದುರನಿಗೆ, ದೃಷ್ಟಿದೋಷ ದೊಡ್ಡವನಿಗೆ ಆರೋಗ್ಯ ದೋಷ ಮತ್ತೊಬ್ಬನಿಗೆ, 'ನೀವು ಮೂವರೂ ರಾಜ್ಯವನ್ನಾಳಿ' - ಭೀಷ್ಮ ಹೇಳಿದ್ದು! ಧೃತರಾಷ್ಟ್ರ ಸಿಂಹಾಸನದಲ್ಲಿ ಕೂತುಕೊಳ್ಳಲಿ ಊರಿನ ಪಾರುಪತ್ಯ ಎಲ್ಲ ಪಾಂಡು ನೋಡಿಕೊಳ್ಳಲಿ, ರಾಜಕಾರಣದ ಚಿಂತನೆಯನ್ನು ವಿದುರ ನೋಡಿಕೊಳ್ಳಲಿ" . ಆದರೆ ಈಗ ಮಂತ್ರಿಗಳಿಗೆಲ್ಲ ಇಲ್ಲಿ ಸ್ಥಾನ ಗಟ್ಟಿ ಏನೂ ಇಲ್ಲ. ಕೌರವನ ಆಡಳಿತ ಅಲ್ವೊ? ಅವನಿಗೆ ಮಂತ್ರಿಗಳಿಗೆ ಅರ್ಹತೆ ಬೇಡ, ಅವ ಹೇಳಿದ್ದನ್ನ ಹೌದು ಅಂತ ಹೇಳ್ವವರು ಸಾಕು. ನಿಜವಾಗಿಯಾದ್ರೆ ಈ ಅಂಗದೇಶದ ಕರ್ಣನಿಗೆ ರಾಜ್ಯಕೊಟ್ಟದ್ ಯಾಕೆ ಅವ? ಈ ಸೈಂಧವನನ್ನು-ಭಾವನನ್ನು ಇಡ್ಕೊಂಡದ್ ಯಾಕೆ? ಅನ್ನಿಗ್ ಗೊತ್ತುಂಟು; ಏನು? ಬಾಕಿ ಇದ್ದವರೆಲ್ಲ ವಿರೋಧಿಸ್ತಾರೆ ರಾಜಸಭೆಯಲ್ಲಿ- ಭೀಷ್ಮ, ದ್ರೋಣ, ಕೃಪ, ಅಶ್ವತ್ಥಾಮ. ಹೌದು ಅಂತ ಹೇಳಿಕ್ಕೆ ಇವನಿಗೆ ಒಂದ್ ನಾಲ್ಕು ಜನ ಬೇಕಲ್ಲ. ಅದು ಕೌರವನ ರಾಜಕೀಯ ತಂತ್ರ ಹಸ್ತಿನಾವತಿಗೆ ಸಂಬಂಧಪಡದೇ ಹೋದವರೇ ಇಲ್ಲಿ ಇರೋದು- ದುಷ್ಟ ಚತುಷ್ಟಯ ಅಂತ ಹೇಳಿದ ಅದಕ್ಕೆ ಕರ್ಣ, ಶಕುನಿ, ದುಶ್ಯಾಸನ, ಜಯದ್ರಥ ನಾನ್ ಹೇಳಿದ್ದಲ್ಲಿ ದುಷ್ಟ ಚತುಷ್ಟಯ ಅಂತ. ಎಷ್ಟೋ ಸಲ ವೇದವಾಕ್ಯರು ಹೇಳಿದ್ದಾರೆ. ದುಷ್ಟ ಚತುಷ್ಟಯಗಳು ಕೂಡಿ ಇಲ್ಲಿ ಹಾಳು ಮಾಡಿದವೂ ಅಂತ. ಇಲ್ಲಿ ಬಹಳ ಸಂಬಂಧ ಇದ್ದವರು ಅವರು. ಇವನೊಬ್ಬ ಹ್ದ ಆದರೆ ಇವನಿಗೆ ಆಗೋದಿಲ್ಲಲ್ಲ ಸಿಂಹಾಸನ, ಕ್ಷೇತ್ರ ದೋಷ, ಪರಮ ಭಕ್ತನೇ ಮೆಚ್ಚಿದೆ.

ಭಾಮಿನಿ ನಿನ್ನ ಭಕ್ತಿಗೆ ಮೆಚ್ಚಿದೆನು ಎನ | ಗಿನ್ನು ತೀರದು ನಿನ್ನ ಪೊಗಳಿಕೆ |

ಯನ್ನ ಪಾನಗಳಿಲ್ಲದೇ ಬಳಲಿರ್ಪೆ ತಾನೆಂದ | ೧೨೧ |

ಭಗವಂತನನ್ನು ಅನುಸಂಧಾನ ಮಾಡಿದವ ಭಕ್ತ! ಅಲ್ಲಿ ದೇವನೂ ಮೂಕನಾಗ್ತಾನೆ. ಆದರೆ ಅವ ಏನನ್ನು ಬಯಸ್ತಾನೆ? ಆ ಭಕ್ತ ಬಯಸುವುದು ದೇವರು ಮೆಚ್ಚೆಕು. ಅದರ ಅರ್ಥ ಏನು? ದೇವರು ಮೆಚ್ಚುವಂಥ ಕೆಲಸ ಮಾಡೋಕು. ಮತ್ತೆ ಯೇನೊ ಬಯಕೆ ಅಲ್ಲ. ಅಯ್ಯಾ ವಿದುರದೇವ ನಿನ್ನ ಭಕ್ತಿಗೆ ಮೆಚ್ಚಿದೆ. ಆದ್ದರಿಂದ, ಯೆನಗಿನ್ನು ತೀರದು ನಿನ್ನ ಪೊಗಳಲು, ಯೆನಗಿನ್ನು ತೀರದು ಅಂದ್ರೆ ಶಬ್ದದಿಂದ ಬಣ್ಣಿಸ್ಸಿಕ್ಕೆ ತಿಳಿಯೋದಿಲ್ಲ. ಇನ್ನೂ ಒಂದುಂಟು. ನಿನಗಿನ್ನು ಯೆನ್ನ ಪೊಗಳಿಕೆ ಸಾಕು. ಯಾಕೆ? ಅಲ್ಲಿಯೂ ಶಬ್ದ ಇಲ್ಲ. ಆಂಜನೇಯನಲ್ಲಿ ರಾಮದೇವರು ಒಂದು ಪ್ರಶ್ನೆ ಕೇಳಿದ್ರಂತೆ- “ಆಂಜನೇಯ ನೀನು ಯಾರು?” ಅಂತ. “ಸ್ವಾಮಿ ಅಪ್ಪಣೆ ಮಾಡ್ಬೇಕು- ಹ್ಯಾಗೆ? ವ್ಯವಹಾರದಲ್ಲಿಯೊ? ಆಧ್ಯಾತ್ಮಿಕದಲ್ಲಿಯೊ?” ಅಂತ. “ವ್ಯವಹಾರದಲ್ಲಿ ನೀನ್ ಸ್ವಾಮಿ ನಾನ್ ದಾಸ, ನಿಜವಾದಂಥ ಭಕ್ತಿಪಂಥದ ನನ್ನ ಆಧ್ಯಾತ್ಮಿಕ ಚಿತ್ರದಲ್ಲಿ ನೀನೇ ನಾನು, ನಾನೇ ನೀನು!!” ಇದು ನಮ್ಮ ದೇಶದ ತತ್ತ್ವ 'ಸೋಹಂ ಭಾವೇನ ಪೂಜಯೇತ್' ಅಂತಂದ್ರೆ ಹಾಗೆ. ಆದ್ದರಿಂದ ವಿದುರ ಈ ಭಾವದ ಪೂಜೆ ನೀನ್ ಮಾಡ್ವಾಗ್ಲೂ ನನ್ನದ್ದೇನುಂಟು? ನಾನೇ ನೀನು ನೀನೇ ನಾನು.

ಇನ್ನೊಂದು ವಿನೋದಕ್ಕೆ ಹೇಳಿ ಬಿಡ್ತೇನೆ. ಯಾಕೆ? ಅದು ನನ್ನ ಲಾಭಕ್ಕೆ, ಹೌದೊ ವಿದುರ, ನಾನ್ ಎಷ್ಟು ದೂರದಿಂದ ಬಂದಿದ್ದೇನೆ ಅಂತ ನೀನು ಆಲೋಚನೆ ಮಾಡಬೇಕೊ ಬೇಡ್ವೊ? ಎಂಥಾ ಬಿಸಿಲು ನೋಡ್ಬೇಕೊ ಬೇಡ್ವೊ? ನೀನೆಷ್ಟು ನನ್ಗೆ ಪ್ರದಕ್ಷಿಣೆ ಬಂದಿ! ಆದರೆ ದೇವನಾದ ನಾನು ಭಕ್ತ ಎಷ್ಟು ಸುತ್ತು ತಿರುಗಿದರೂ ಕಣ್ಣು ಭಕ್ತರ ಮೇಲೆ ಇಷ್ಟೇಕೊ ಬೇಡ್ವೊ? ಬಹಳ ಬಳಲಿದ್ದೇನೆ ನಾನು. ಇದು ಬರೇ ವಿನೋದಕ್ಕೆ ಹೇಳಿದ್ದಲ್ಲ ; ನಿಜವಾಗಿ ಆಯಾಸ ಬಂದದೆ. ಅನ್ನ ಪಾನಗಳಿಲ್ಲದೆಯೇ ಬಳಲಿರ್ಪೆ. ಏನಾದ್ರೂ ಉಂಟೋ ಒಳಗೆ? ಇಲ್ಲೇ ಮಾತನಾಡಿಸೋದು ಯೆಂಥಾದ್ದು?

ವ್ಯಾವಹಾರಿಕವಾದ ದೇವಿಗೆ ಎಲ್ಲವೂ ಬೇಕು. ಗೃಹಸ್ಥನಿಗೆ ಏನೆಲ್ಲ ಉಪಚಾರ ಬೇಕು? ನಮ್ಮಲ್ಲಿ ವಿಧ್ಯುಕ್ತವಾದ ಪೂಜೆಯ ಹಾಗೆ, ನೈವೇದ್ಯ ಮಾಡ್ಬೆಕು. ತಾಂಬೂಲ ಕೊಡ್ಬೆಕು; ದೇವರು ವೀಳ್ಯ ಜಗೀತಾನೆ ಎಂಬ ಪ್ರಶ್ನೆ ಇಲ್ಲ. ನಾವು ಯೇನ್ ಉಣ್ತೇವೆ ಯೇನ್ ಅನುಭವಿಸ್ತೇವೆ ಇದನ್ನೇ ಸಮರ್ಪಣೆ ಮಾಡ್ಬೆಕು. ಷೋಡಷ ಉಪಚಾರ ಇಲ್ವೊ ದೇವ್ರಿಗೆ? ಯೇನು? ತಲೆ ತಗ್ಗಿಸಿ ಬರ್ಬೇಕು ಅಂತಲ್ವೆ? ನಾನು ಹಾಗೇ ಬಂದರೆ, ಆ ಲಕ್ಷ್ಮಿಗೆ ತಲೆ ಬಾಗಿದ ಹಾಗಾಗೋದಿಲ್ಲ. ಶಿಲ್ಪಶಾಸ್ತ್ರದಲ್ಲಿ ಪ್ರತಿಯೊಬ್ಬ ಗೃಹಸ್ಥನ ಹೊಸ್ತಿಲಲ್ಲಿ ಇರುವವಳಿಗೆ ಗೃಹಲಕ್ಷ್ಮಿ ಅಂತ ಹೆಸ್ರು, ಹೌದ? ಒಬ್ಬ ಗೃಹಸ್ಥನ ಮನೆಗೆ ಬಂದಾವಾಗ್ಲೂ ಗೃಹಲಕ್ಷ್ಮಿಗೆ ಇವ ನಮಸ್ಕಾರ ಮಾಡಿಯೇ ತೀರ್ಬೇಕು. ಯಾಕೆ ಬೇಕು? ಇವನಿಗೂ ಒಂದು ಮನೆ ಇದ್ರೆ

ಅಲ್ಲಿಯೂ ಇರುವುದು ಗೃಹಲಕ್ಷ್ಮಿ, ಭಾಗ್ಯಲಕ್ಷ್ಮಿ ಅಂತ ಅನ್ನೋದು ಅದು ಆಧ್ಯಾತ್ಮಿಕ ಪ್ರಪಂಚ, ತಲೆ ಬಗ್ಗಿಸಿಯೇ ಬಂದಿದ್ದೇನೆ ಹೌದೊ? ಇದರಲ್ಲಿ ಇನ್ನೊಂದು ತತ್ವಾರ್ಥ ಉಂಟು. ನೋಡಿಯಪ್ಪ ನಮ್ಮ ಮನೆ ಸಣ್ಣದು; ನೀವು ಸಣ್ಣದಾಗಿ ಬನ್ನಿ, ನಮ್ಮ ಮನೆಗೆ ದೊಡ್ಡದಾಗಿ ಬರ್ಬೇಡಿ ಅಂತ, ಯೆಂಥಾ ನೀತಿ! ಬರುವವನ ದೊಡ್ಡಸ್ಥಿಕೆ ತೋರಿಸ್ಲಿಕ್ಕೆ ಇವನ ಮನೆಗೆ ಬರ್ಬಾರ್ದು. ಇವನ ಅಳತೆಗೆ ಸರಿಯಾಗಿ ಅವ ಬರ್ಬೇಕು. ಇದು ವ್ಯವಹಾರ. ಅದ್ಕೆ ಬೇಕಾಗಿ ನಮ್ಮ ಶಾಸ್ತ್ರದಲ್ಲಿ ಹೇಳಿದ್ದಾರೆ, ತಲೆ ತಗ್ಗಿಸಿ ಬರುವಾಗ ಇದು ಸಣ್ಣ ಬಾಗಿಲೇ ಇಡೋಕು. ಕೆಲವು ದೇವಾಲಯಕ್ಕೆ ಹಾಗೆಯೇ-ಸಣ್ಣ ಬಾಗಿಲು. ಹೋಗುವವರೆಲ್ಲ ಹೀಗೆ ಹೀಗೆ ಹೋಗ್ಬೇಕು. ಯಾಕೆ? ಅಲ್ಲಿ ದೇವ್ರು ಸಣ್ಣವನಾಗಿದ್ದಾನೆ ಮೂರ್ತಿ, ವಿರಾಟ್ ರೂಪಿ ಅಲ್ಲ. ಸಣ್ಣವನಾಗಿ ಬಾ, ನಾನ್ ಯೆಷ್ಟೋಸಲ ಹೇಳುವುದುಟು ಕೆಲವರಿಗೆ ಪುರುಷಸೂಕ್ತ ಬಾಯಿಪಾಠಮಾಡಿ ಪ್ರಯೋಜನ ಇಲ್ಲ; ನಿಮ್ಮ ವ್ಯವಹಾರಕ್ಕೂ ಅದ್ರೂ ಏನ್ ಸಂಬಂಧ ಉಂಟು? ಇಲ್ಲಲ್ಲ. ಮತ್ತೆ ನಿಮ್ಗ ಯಾಕದು? ಅಂತ ಹೇಳೂದುಂಟು. ಹಾಗೆ ಇದೆಲ್ಲ ನಿಜವಾದ ವ್ಯವಹಾರ. ಎಷ್ಟು ದೊಡ್ಡ ಅರಮನೆ ಆದ್ರೂ ಕೂಡ ಆ ಮಹಾದ್ವಾರ ಹೊರಗೆ, ಅರಮನೆಯ ಸಭಾಗ್ರಹ ಇದೆಯಲ್ಲ ಅದ್ರೂ ಬಾಗಿಲು ದೊಡ್ಡೆ, ಆದರೆ ರಾಜನ ಅಂತರಂಗದ ಗೃಹ ಇದೆಯಲ್ಲ ಅದೆ ಬಾಗಿಲು ಸಣ್ಣದಿರ್ಬೇಕು. ನನ್ನ ಗೊತ್ತುಂಟು ನಿನ್ನ ಮನೆಗೆ ಬರುವಾಗ ನಾನು ಸಣ್ಣದಾಗಿಯೇ ಬಂದಿದ್ದೇನೆ. ಹೌದಲ್ಲ ಇದು ರಾಜಮಹಾರಾಜರು ಬಂದರೆ ಕೂತುಕೊಳ್ಳುವುದು. ಸ್ವಲ್ಪ ಕಾಡುವ, ಸುಪ್ಪತ್ತಿಗೆ ಹಂಸ ತೂಲಿಕಾ ಅಂತ ಹೇಳೋದು ಇದೆ ಅಲ್ವ? ಚಿನ್ನದಂತಹ ಮನುಷ್ಯ ಮಣ್ಣಿನ ಪಾತ್ರೆಯಲ್ಲಿ ಕೊಟ್ಟರೂ ಚಿನ್ನವೇ! ಬಂಗಾರದ ಪಾತ್ರೆ ತುಂಬಾ ಹಾಲು! ಇದರ ಮೌಲ್ಯ ಕಲ್ಪಿಸಲು ಸಾಧ್ಯವೇ? ನಿನ್ನಂಥವರು ಸುವರ್ಣಪಾತ್ರೆಯನ್ನು ಅಡಿಮೇಲು ಮಾಡಿ ಒಳಗಿದ್ದ ಹಾಲನ್ನು ತೋರಿಸ್ತಾರೆ ಅಲ್ವೊ? ಈ ಹಾಲು ಹೇಗೆ ಉಕ್ಕಿ ಹರೀತದೆ ಅಂತ್ಹೇಳಿ ಒಂದು ಪವಾಡವನ್ನು ನಾನೂ ತೋರಿಸ್ಬೇಡ್ವೊ? ಕೊಟ್ಟಿದ್ದಲ್ಲ, ಕುಡಿತೇನೆ ಕುಡಿತೆವೊಂದರೆ ಪಾಲು

ಮಧ್ಯಮಾವತಿ-ತ್ರಿವುಡೆ ಕುಡುತೆಯೊಂದರೆ ಪಾಲಿನಲಿ ಹಸಿ ವಡಗಿತಾ ಕ್ಷಿರಾಭಿಶಯನಗೆ

ದೃಢವ ತೋರಿಸಲಾಗಿ ಬಿಂದುವ | ಕೆಡಹಿದನು ಕಟವಾಯಲಿ || ೧೨೨ ||

ಕುಡಿತೆವೊಂದರ ಪಾಲಿನಲಿ, ನಿನಗೆ ಮಾತ್ರ ಹೇಳಿದ್ದು. ನೀನು ಕೊಟ್ಟದ್ದು ಒಂದು ಕುಡಿತೆ ಅಂತಲ್ಲ. ನೀನು ಕೊಟ್ಟದ್ದು ಪೂರ್ಣ ಕುಂಭದಲ್ಲಿ, ಪಾತ್ರ ಸಣ್ಣೆರಬಹುದು ತುಂಬಿಕೊಟ್ಟಿದ್ದಿ, ನೀನ್ ಪಾಲು ಮಾಡಿಕೊಡ್ಲಿಲ್ಲ. ಆದರೆ ನಾನದನ್ನು ಸ್ವೀಕರಿಸುವುದು ಪಾಲು ಮಾಡಿ, ಹೊಟ್ಟೆಬಾಕನಾಗಿ ಅಲ್ಲ . ದೇವ್ರು ನೈವೇದ್ಯ ತಕೊಳ್ಳೋದು. ಅಯ್ಯಾ ಇದು ಭಕ್ತಿ! ಇದು ಜ್ಞಾನ! ಆದ್ರೆ ನನ್ನ ತೋರ್ತದೆ ಸದ್ಯ ಊರ್‍ನಲ್ಲಿದ್ದ ಜನಕ್ಕಿದು ಬೇಕೊ; ಹಸ್ತಿನಾವತಿಯಲ್ಲಿ? ಬೇಕಾದವು ಮರ್ತ್ ಬಿಟ್ಟಿದ್ದಾರೆ ಭೀಷ್ಮ ದ್ರೋಣಾದಿಗಳೆಲ್ಲ, ತಾತ್ಪರ್ಯ ಏನು? ಕುಡಿತೆಯೊಂದರ ಪಾಲಿನಲಿ ಹಸಿವಡಗಿತು ಯಾರಿಗೆ? ಭೌತದೇಹಧಾರಿಯಾದ ಕೃಷ್ಣನಿಗಲ್ಲ. ನಿನ್ನ ಭಾವನೆಯ ಕ್ಷೀರಸಾಗರಶಯನನಿಗೆ, ನಾನ್ ಇಲ್ಲಿ ಬೇರೆ ಪಾತ್ರವನ್ನು

ಅಭಿನಯಿಸಿದರೆ ನಿನಗೆ ತೃಪ್ತಿಯಾಗೋದಿಲ್ಲ. ನಾನ್ ಸುಳ್ಳು ಮಾಡಿದೆ ಅಂತಾಗ್ತದೆ. ಒಂದ್ ಮಾತುಂಟು "ಸೊಡರೆಣ್ಣೆತೀರಿದರೆ ಕೊಡನೆತ್ತಿ ಹೊಯ್ಯುವರೆ? ಕೊಡ ಬೇಡ, ಕೊಡದಿರಬೇಡ" . ನಿನ್ಗ ಮಾತ್ರ ಅರ್ಥಾದ್ರೆ ಸಾಕು. ನಾನಿದನ್ನು ವ್ಯಾಖ್ಯಾನ ಮಾಡೋದಿಲ್ಲ. ಆದ್ದರಿಂದ ಕೊಡ, ಬೇಡ! ಕೊಡ್ಬೇಡ ಅಂತರ್ಥ ಅಲ್ಲ. ಒಂದು ಕೊಡ ಎಣ್ಣೆ ಬೇಡ. ಕೊಡದಿರಬೇಡ. ಅಂದ್ರೆ ಅದ್ಕೆ ಬೇಕಾದಷ್ಟು ಎಣ್ಣೆಯನ್ನು ಕೊಡದಿರ್ಬೇಡ. ಹೀಗೆ ಸಾಕು ಒಂದು ಬಿಂದು. ಅದು ಮಹಾಸಿಂಧು ಗೊತ್ತೊ ನಿನ್ಗೆ? "ಆಕಾಶಾತ್ ಪತಿತಂ ತೋಯಂ" ಈ ಜೀವ ಪ್ರಾಣಿಗಳೆಲ್ಲ ಬಿಂದುಗಳು. ಕೊನೆಗೆ ಸೇರ್ಬೇಕಾದ್ದು ಸಿಂಧುವಿನಲ್ಲಿ, ಯಜ್ಞದಿಂದ ಸಿಡಿದ ಕಿಡಿ ಯಜ್ಞವನ್ನೇ ಸೇರಿದರೆ ಪೂರ್ಣಾಗ್ನಿ ಆಗೋದ್ ಅದು. ಅದ್ ಬೇರೆಲ್ಲಿಗಾದ್ರೂ ಬಿದ್ರೆ ಊರೆಲ್ಲ ಸುಟ್ಟಿತು. ಇಲ್ಲದಿದ್ರೆ ನೀರಿಗೆ ಬಿದ್ರೆ ನಂದಿ ಹೋದೀತು. ಪೂರ್ಣದಿಂದ ಪೂರ್ಣವೇ ಹುಟ್ಟಿ ಪೂರ್ಣವೇ ಉಳೀತದೆ. ನಿನಗೆ ನೆನಪಿಸಿದ್ದು ನಾನ್ ಯಾಕೆ ಅಂದ್ರೆ ನೀನ್ ಕಲ್ತದ್ದು ಸರಿ ಅಂತ. ಆದ್ದರಿಂದ ಇದೋ, ನೀನ್ ನನ್ಗ ಏನ್ ಕೊಟ್ಟಿದ್ದಿ? ಅದರ ಒಂದು ಬಿಂದು ಸಿಂಧುವಾಗ್ತದೆ. ನಿನ್ಗ ಮಾತ್ರ ಕಾಣೋದಿದು. ಯಾಕೆ? ಅದು ಭಕ್ತನ ದೃಷ್ಟಿ ನೋಡಿದೆಯೋ? ಏನಾಯ್ತಿಗ? 'ತುಂಬಿತಾ ಪುರವೆಲ್ಲ! ಯಾರೂ ಮುಳುಗಿ ಸಾಯ್ಲಿಲ್ಲ. ... ನಿಮ್ಮ ಮನೆಯಲ್ಲಿರುವ ಕೊಡದಲ್ಲಿಯೂ ಕ್ಷೀರಸಾಗರವನ್ನೇ ಮಾಡಿ ನಾರಾಯಣನನ್ನು ಕಾಣಿ. ಅದು ಉಪ್ಪುನೀರು ಇನ್ನೊಂದು ಮತ್ತೊಂದು ಅಂತ ಮಾಡಿದರೆ, ಏನಾದರೂ ಜಲಚರ ಪ್ರಾಣಿಗಳನ್ನು ಸಾಕಿ, ತತ್ತ್ವ ಅಷ್ಟೆ!

ನನಗೆ ಪೂರ್ಣ ತೃಪ್ತಿಯಾಯ್ತು. ಇನ್ನೂ ಒಂದು; ಈ ಸುದ್ದಿ, ನೀನು ಮಾತ್ರ ಕೌರವನಿಗೆ ಹೇಳಬಲ್ಲೆ; ಇಲ್ಲಿ ಬೇರೆ ಯಾರೂ ಅಲ್ಲ ಯಾಕೆ? ಕೃಷ್ಣ ಹೊಟ್ಟೆತುಂಬಾ ಹಾಲನ್ನೇ ತುಂಬಿಸಿಕೊಂಡು ಬಂದಿದ್ದಾನೆ. ಆ ಅದು ಮಾತ್ರ ಅಲ್ಲ. ನನ್ನಲ್ಲಿ ವಿಷವನ್ನು ಕೊಡ್ಬೇಡ, ಯಾಕೆ? ಪೂತನಿಯೊಬ್ಬಳು... ಗೊತ್ತು.. ಹಾಲು ನಾನು ಯಾವಾಗ್ಲೂ ತಕೊಳ್ಳುವ ಆದ್ದರಿಂದ ಕೌರವೇಶ್ವರಾ, ನೀನು ನಿನ್ನಲ್ಲಿದ್ದಂಥ ಹಾಲನ್ನೇ ನನಗೆ ಕೊಡು. ಹಾಲಾಹಲ ಬೇಡ. ಎಂದು ಬುದ್ಧಿವಂತನಿಗೊಂದು ಸಂದೇಶ ಮುಟ್ಟಿಸ್ಬೇಕು. ವಿದುರದೇವ ಕೌರವನಿಗೂ ನಮ್ಮ ಈ ತತ್ತ್ವಕ್ಕಾಗಿ ಒಂದು ಪರಸ್ಪರ... ಅಲ್ವೊ? ಒಂದು ನಿನ್ನಿಂದ ಆಗೋಕು. ಈಗ ಹೋಗೋಕು. ಆದ್ದರಿಂದ ಕೌರವನಲ್ಲಿ ಹೋಗಿ ಹೇಳ್ತಿಕ್ಕೆ ಏನೂ ದಾಕ್ಷಿಣ್ಯ ಬೇಡ ಅಥವಾ ಬೇರೆ ಏನಾದ್ರೂ ಹೇಳು, ಆವಾಗ್ಲ ಅವನ ಪ್ರತಿಕ್ರಿಯೆ ಏನು ಅಂತ ಕೇಳುವಾಗ ಅವ್ನು ಒಪ್ಪಿಲ್ಲ 'ಯಾವನೋ ಒಬ್ಬ ಬಂದಿದ್ದಾನೆ' ಅಂತಂದ್ರೆ ಅದು ಬಂದು ನನ್ಹತ್ರ ಹೇಳು. ನಾನ್ ಹಾಗೇ ಹೋಗ್ತೇನೆ ಅವನಲ್ಲಿಗೆ, ಯಾಕೆ ಅಂದ್ರೆ ಅವನಲ್ಲಿ ಸ್ವಾಗತ ಸಿಕ್ಬೇಕಲ್ಲ. ಆದ್ದರಿಂದ ಕೃಷ್ಣ ಯೇನು? ಎಂಬುದಕ್ಕೆ "ಯಥಾ ದೃಷ್ಟಿ: ತಥಾ ಸೃಷ್ಟಿ:" ಇದಕ್ಕಾಗಿಯೇ ನಿನ್ನನ್ನು ನಾನು ಉಪಯೋಗಿಸೋದು; ಮತ್ತೆ ದುಷ್ಟ ರಾಜಕಾರಣ ಏನಿಲ್ಲ.

ನೀನ್ ಹೇಳು, ಬೇಕಾದ್ರೆ ಹೀಗೇ ಹೇಳು 'ಪರಮಾತ್ಮನೈದಿಹ' ಅಂತ ಹೇಳು ಹೇಳ್ಬೇಕದು. ಇನ್ನೂ ಒಂದುಂಟು. ಅವರೂ ಇದ್ದಾರಲ್ಲ ಇಲ್ಲಿ; ಅತ್ತೆಯವರು, ಪಾಂಡವರ

ತಾಯಿ. ಅವರ ಕಡೆಯಿಂದ ಬಂದದ್ದಲ್ವ ನಾನು? ಒಂದು ಗಳಿಗೆ ಮಾತಾಡಿಸ ಬೇಡ್ವೋ? ಪರಪುರುಷರ ಮುಂದೆ ನಮ್ಮ ಮನೆತನದ ಹೆಂಗಸರೆಲ್ಲ ಮಾತಾಡ್ಯಾರೊ? ನೀನು ವಿಶ್ವಸ್ಥನೇ, ಆದರೆ ಅಂತರಂಗದ್ದು ಬರ್ಬೇಕಿದ್ರೆ... ಹೌದಲ್ಲ? ಆವಾಗ ನನ್ಗೂ ಅನುಕೂಲ. ನಿನ್ಗೂ ಅನುಕೂಲ ಅಲ್ವೆ? ಇದೆಲ್ಲ ಗ್ರಹಸ್ಥಧರ್ಮದಲ್ಲಿ ತಿಳೀಬೇಕಾದ್ದು, ನೀನು ಹೋಗಿ ಬರುವಷ್ಟರಲ್ಲಿ ಅತ್ತೆಯಲ್ಲಿ ಮಾತನಾಡಿ, ಅತ್ತೆಯನ್ನು ಸಾಂತ್ವನಗೊಳಿಸಿ ನಾನು ಸಿದ್ಧನಾಗ್ತೇನೆ.

ನಾಗಪೂಜೆ ನಾವ್ ಮಾಡ್ಬೇಕು. ಆದರೆ ಆ ವಿಷದ ಚೀಲ ತೆಗೀಬೇಕು. ಕೌರವನನ್ನು ಸರಿದಾರಿಗೆ ತರಲಿಕ್ಕೆ ಸಾಧ್ಯವಿದ್ದರೆ, ನಿನಗ್ ಆಶ್ವಾಸನೆ ಕೊಡ್ತೇನೆ - ಪಟ್ಟ ಅವನಿಗೆ. ಅದು ಸರ್ಪಕ್ಕೆ ಬಿಟ್ಟ ಕೆಲಸ. ಈ ಸರ್ಪ ಏನ್ ಮಾಡ್ತದೆ ಅಂತಂದ್ರೆ ಕೆಲವರನ್ನು ಆಶ್ರಯಿಸಿ ಬಿಡ್ತದೆ. “ಮಹದಾಶ್ರಯ:” ಶಿವನನ್ನು ಸರ್ಪ ಆಶ್ರಯಿಸಿದರೆ ಗರುಡನ ಯೋಗಕ್ಷೇಮ ಕೇಳದಂತೆ “ಹೇಗಿದ್ಯಪ್ಪ ಗರುಡಣ್ಣ” ಹಾಗೆ, ಕೌರವ ಅವ ಮಹತ್ವ ಅಂತ ತಿಳ್ಕೊಂಡವರನ್ನು ಆಶ್ರಯಿಸಿದ. ನನ್ನ ಗರುಡನಿಗೂ ಅವನ ಸರ್ಪವು ಪ್ರಶ್ನೆ ಮಾಡೀತು. ನನಗೆ ಕೌರವ ಪ್ರಶ್ನೆ ಮಾಡ್ಯಾನು. ಆದ್ದರಿಂದ ಸರ್ಪಕ್ಕೆ ಎರಡು ಸ್ವಭಾವ ಉಂಟು! ಕೊನೆಗೇನು ಮಾಡೋದು? ಒಳ್ಳೆ ಮಡಿವಂತರ ಕ್ರಮ ಅದು. ಹೇಳಿದ್ ಒಂದೂ ಕೇಳೋದಿಲ್ವೊ ಒಂದು ಸಲ ನನ್ನನ್ನು ಈ ಕೂಟದಿಂದ ಬಿಡುಗಡೆ ಮಾಡಿ, ನನ್ನಿಂದ ಆಗೂದಿಲ್ಲ ಅದು. ನನಗೆ ವಿಶ್ರಾಂತಿ ಬೇಕು. ನೋಡ್ವ ಹ್ಞಾ

ವಿದುರನ ಹತ್ರ ಉತ್ತರ ಬಂತು. ಇಂದೇನು ಕಜ್ಜ! “ಆಯ್ತು ನಾಳೆ ಬರಬಹುದು. ನಾಡದು ಬರಬಹುದು” ಅಂತ ಹೇಳಿದ್ದಾನೆ ಇನ್ನೀಗ ಕೌರವನ ಜನ ಯಾವಾಗ ಬರ್ತದೆ ಅಂತ ಕಾಯ್ತೇನೆ.



## ೨೨ ಶ್ರೀಕೃಷ್ಣಸಂಧಾನ

### ಕೌರವ

ಭಾಮಿನಿ॥ ಅರಸ ಕೇಳಾ ದಿನದಿ ಕುರುಭೂ | ವರನ ಒಡೋಲಗದ ಘನಸಿರಿ | ಮೆರೆವ

ಸಭೆಗೇನೆಂಬೆ ಸುರಪನ ಸಭೆಯು ನಿಂದಿಸಿತು || ಕರೆದು ಕೌರವ ದೂತ

ನೊಳು ಮುರ | ಹರನ ಬರಹೇಳೆನಲು ಬಂದವ | ನೆರಗುತ್ತೇ ಕೃಷ್ಣ

ಭೂಪನನುಜ್ಞೆಯಾಯ್ತಂದ || ೧೨೩ |

ಏನೇ ಆಗಲಿ, ನನಗೊಂದು ಕೃತಾರ್ಥತೆ ಬಂತು. ಇಷ್ಟೆಲ್ಲಾ ಮುತ್ಸದ್ದಿಗಳೂ, ಹಿರಿಯರೂ, ಮಹಾಪ್ರಜ್ಞರೂ, ವಿರೋಧಪಕ್ಷದವರೂ ಏನೇನು ಏನೇನು ಹುಯಿಲೆಬ್ಬಿಸಿದರು- “ನಮ್ಮ ದೇಶದ ರಾಜಕೀಯದ ಪರಿಶುದ್ಧತೆಗೆ ಪರಮಾತ್ಮನೇ ಬರಬೇಕಾಯಿತು” ಅಂತ ಅಜ್ಜ ಭೀಷ್ಮ ಹೇಳಿದರೋ ಇಲ್ವೋ, ನನ್ನೂಂತ್ತುಂಟು ಅದು; ದೇವ್ರೇ ಬಂದ್ರೂ ಕೆಲವರ್ಷಕ್ಕೆ ಆಗುದಿಲ್ಲ ಇದ್ರ ಶುದ್ಧಿಕರ್ಣ. ಅಷ್ಟು ಕೆಟ್ಟು ಹೋಗ್ಯದೆ. ಇದನ್ನು ನಾನು ಇವರಲ್ಲಿ ಹೇಳಿದ್ರೆ ನನ್ನ ಮೇಲೆ ಮತ್ತೂ ಆಪಾದನೆ ಬರ್‍ತದೆ. ಹೇಳಬೇಕಾದದ್ದನ್ನು ಹೇಳಬೇಕು, ಸಂದರ್ಭ ಬರಬೇಕು.

ಇವರೆಲ್ಲ ಪೂಜೆಮಾಡುವಂತಹ ಮಹಾರಾಜಕಾರಣಿಯಾದಂತಹ ಶ್ರೀಕೃಷ್ಣ ಒಪ್ಪಿ, ರಣವೀಳ್ಯ ತೆಕ್ಕೊಂಡು ಹೋದ. ಈವರೆಗೆ ನನ್ನ ಹಾದಿ ಸರಿ ಇಲ್ಲ ಅಂತ ನಾಳೆ ಜನ ಹೇಳಿತು. ಹೇಳಲಿ. ಧರ್ಮರಾಯ ಏನು? ಅವ ಎಲ್ಲಿಯೋ ಹುಟ್ಟಬೇಕಾದವ, ಅಪ್ಪಿತಪ್ಪಿ ನಮ್ಮ ಕುಟುಂಬದಲ್ಲಿಯೇ ಹುಟ್ಟಿ ರಾಜಕೀಯದಲ್ಲಿ ಇಷ್ಟು ಅವನತಿಗೆ ಬಂದದ್ದು, ಮತ್ತೆ ಅವನ ಹಿಂದಕ್ಕಿದ್ದಾರೆ ಕೆಲವರು ಶತಮೂರ್ಖರು. ಅವರಿಗೆ ಉದ್ಯೋಗವೇನು ಅಂತಂದ್ರೆ, ನಮ್ಮ ಮೇಲೆ ಅಷ್ಟು ಭ್ರಷ್ಟಾಚಾರದ ಆಪಾದನೆ ಮಾಡುವುದು. ಈ ಆಳುವ ಪಕ್ಷದ ಮೇಲೆ ಎಷ್ಟು ಆರೋಪಣೆ ಮಾಡ್ಲಿಕ್ಕೆ ಸಾಧ್ಯವಾಗ್ತದೆ. ಅಷ್ಟೂ ಅವರಿಗೆ ತಿಳಿಯಿತದೆ. ಇದು ಒಂದು ಹೊಸ ರಾಜಕೀಯ. ಹೇಗೆ? ಅವನು ಇಷ್ಟು ಕೆಟ್ಟವನು ಆದ್ದರಿಂದ ನಾವು ಅಷ್ಟ ಅಲ್ಲ ಅಂತ ಹೇಳಿಕೊಳ್ಳೋದು. ಅಂತೂ ದೇಶದ ರಾಜಕೀಯ ಹಾಳಾಗ್ಲಿಕ್ಕೆ ತೊಡಗಿ ವರುಷ ಎಷ್ಟಾಯ್ತು!

ಶಂತನು ಚಕ್ರವರ್ತಿಗಳ ಕಾಲಕ್ಕೆ ಇದ್ ಅಲಗಾಡ್ಲಿಕ್ಕೆ ತೊಡಗಿದ್ದು, ನಮ್ಮ ಅಜ್ಜ ಮಹಾಬುದ್ಧಿವಂತರಾದರೂ ಕೂಡ ಕುಲಾಭಿಮಾನ ಇದೆ ಅವರಿಗೆ. ರಾಷ್ಟ್ರಾಭಿಮಾನ ಕಡಿಮೆಯಾಗಿದೆ. ಕುಲಾಭಿಮಾನಕ್ಕೆ ಬೇಕಾಗುವ ಚಕ್ರವರ್ತಿಯಾದಂತಹ ನನ್ನ ತಂದೆ ಸಾಧುವೋ, ಅಸಾಧುವೋ? ಎಂಭತ್ತು ದಾಟಿದ ಮೇಲೆ ಹದಿನೆಂಟು ವರುಷದ ಹುಡುಗಿಯನ್ನು ಕಂಡು ಕೇಳಿದಾವಾಗ ಸಿಕ್ಕಿಲ್ಲ. ಚಕ್ರವರ್ತಿ ಕೇಳಿದ್ದು ಸಿಕ್ಕುವದಿಲ್ಲ ಅಂತಂದ್ರೆ ಅರ್ಥವೇನು? ಸಿಂಹಾಸನವನ್ನು ಅವಳಿಗೆ ಮಾರಾಟ ಮಾಡಿಯಾದ್ರೂ ಚಿಂತಿಲ್ಲ, ತಮ್ಮ ತಂದೆಯವ್ರು ಹೇಳಿದ ಮಾತನ್ನು ನಡೆಸಬೇಕು ಅಂತ ಅವರ ಪರಿಶುದ್ಧತೆ. ಇದೆಲ್ಲ ತ್ರೇತಾಯುಗಕ್ಕೆ ಸಂಬಂಧಿಸಿದ್ದು, ದ್ವಾಪರದಲ್ಲಿ ನಮ್ಮಜ್ಜ ರಾಮಾವತಾರದ ಆದರ್ಶ

ಹಿಡಿದರಾದಿತೋ? ರಾಮಾಯಣದ ಕಾಲಕ್ಕೆ ರಾಮನ ಆದರ್ಶ ರಾಜಕೀಯವಾಗಿ ಶಿಥಿಲವಾಗಿ ಹೋಗಿದೆ. ರಾಮರಾಜ್ಯ ಕ್ಷೇಮಕರವಾದದ್ದು ಹೌದು. ರಾಮ ದೊಡ್ಡವನ್ನೂ ಹೌದು. ಪ್ರಜೆಗಳೆಂಥವು? ಮಾದಸ್ಥರಾಗಿದ್ರೆ ಅಂದ್ರೆ ಇಲ್ಲ. ಹೇಗಿಲ್ಲ? ಮಡಿ ಮಾಡುವಾತ ಮಡಿವಾಳ ಹೇಳಿಬಿಟ್ಟ; ರಾಮನ ಅರಸೊತ್ತಿಗೆ ಬಗ್ಗೆ, ಇಂಥದ್ದೆಲ್ಲ ನಂಬಿಕೆ ಈ ಮಣ್ಣಿನಲ್ಲಿ ಫಲಕಾರಿಯಾಗುದಿಲ್ಲ. ಸುಮ್ಮನೆ ಅವರವರು ಬೀಜ ಹಿಡ್ಕೊಂಡು ಇಲ್ಲಿ ಊರು ಬಿಟ್ಟು ಹೋಗುವುದೊಳ್ಳೆಯದು.

ಆದರೆ ನಮ್ಮಜ್ಜ ಆದರ್ಶ ವ್ಯಕ್ತಿ ಹೌದು. ವಯಕ್ತಿಕವಾಗಿ ಬಹಳ ಎತ್ತರಕ್ಕೆ ಬೆಳೆದವು. ಆದ್ರೆ ನಮ್ಮ ರಾಷ್ಟ್ರ ಎಲ್ಲಿ ಹೋಯ್ತು?... ಹೌದೊ? ಏನೇ ಆಗಲಿ ಹೆದರಬೇಡ, ನಮ್ಮ ಚಿಕ್ಕಪ್ಪನ ಮಕ್ಕಳಿಗೆ, ಒಂದು ಗಡಿ ನಿರ್ಣಯ ಮಾಡಿ ಅಷ್ಟು ನಿಮಗೆ ಇಷ್ಟು ನಿಮಗೆ ಯಾವಾಗ ನಮ್ಮ ಅಖಂಡವಾದಂತಹ ಈ ರಾಜ್ಯಕ್ಕೆ ಗಡಿ ಹಾಕಿದ್ರು, ನಾವು ಒಳಗಿಂದಲೂ ಸಿಡಿಯುವಂತಿರಲಿಲ್ಲ. ಅದು ಒಣಗದೇ ಇದ್ದಂತಹ ಗಡಿ ಅಂದರೆ ಗಾಯ! ಇದನ್ನೂ ಮನವರಿಕೆ ಮಾಡಿಕೊಂಡಿದ್ದೇನೆ. ಕೊನೆಗಂತೂ ತೀರ್ಮಾನಕ್ಕೆ ಬಂದಿದ್ದೇನೆ. ಹೇಗೆ? ಈ ಸಿಂಹಾಸನ ಅದು ಅಖಂಡವಾದದ್ದಾಗಿರಬೇಕು ಅಂತ. ಎಷ್ಟು ಜನಿಗೆ ಅರ್ಥವಾಗ್ಯದೋ ಗೊತ್ತಿಲ್ಲ.

ಹೌದಯ್ಯ, ಒಬ್ಬೊಬ್ಬ ಒಂದೊಂದು ಶರ್ತದಲ್ಲಿ ಒಂದೊಂದು ಪಾಲು ಕೇಳ್ತಾನೆ. ಇದ್ದದ್ದನ್ನೆಲ್ಲ ಪಾಲುಮಾಡಿ ಕೊಡೋದಾ? ಮತ್ತೆ ಉಳಿದದ್ದೆಂತದ್ದು ನಮ್ಮವ್ರಿಗೆ? ಈ ಔದಾರ್ಯ ಬಂದು, ಬೇಡಪ್ಪಾ ಈ ಸ್ಥಿ ಬೇಡ. ಆಯ್ತು, ಸಂಧಾನ ಮಾಡೋಣ. ನಿಮ್ಗಾಗಬೇಕಾದ್ದೆಲ್ಲಿ? ಕೊನೆಗೆ ಹಸ್ತಿನಾವತಿಯ ರತ್ನಸಿಂಹಾಸನ ಅಖಂಡವಾದದ್ದು. ಬರೇ ಶಿಲ್ಪ ಪ್ರದರ್ಶನಕ್ಕಾದೀತು ಒಳ್ಳೆ ಕೆತ್ತನೆ ಕೆಲಸ. ಇದನ್ನು ನಾನು ಪ್ರದರ್ಶನಾಲಯದಲ್ಲಿರಿಸಬೇಕಾದೀತು.

ನನ್ನ ದೇವರೂ ರಾಜಕೀಯದ್ದು. ತಪ್ಪಿದರೆ ದೇವರು ನನಗೆ ಕೊಡುವ ಪ್ರಸಾದ ಸರ್ವಾಧಿಕಾರ. ಹೀಗೆ ತಿಳ್ಕೊಳ್ಬೇಕು.ಬೇರೆ ಬೇರೆ ನೆವನ ಮಾಡಿ ದ್ಯೋತ ಆಡಿದೆ. ಆಡಿದೆ ಅಂದ್ರೆ ಆಡಿಸಿದೆ. ಪಾಂಡವು ಸೋತ್ರು, ಸೋತದ್ದನ್ನು ನನ್ನೆ ದಕ್ಕೆ ಬಿಡ್ಲಿಲ್ಲ ನಮ್ಮ ಹಿರಿಯರು. ಹಿಂದೆ ಕೊಟ್ರು, ಬಿಡ್ಲಿಲ್ಲ ನಾನು. ಮತ್ತೊಂದು ದ್ಯೋತವನ್ನು ಮಾಡಿ ಶರ್ತ ಇಟ್ಟೆ- ಸೋತವು ಹನ್ನೆರುವರ್ಷ ವನವಾಸ ಒಂದುವರ್ಷ ಅಜ್ಞಾತವಾಸ ಆಗೋಕು ಅಂತ. ಆಡಿದ್ದು ಕಳ್ಳಾಟವೇ. ರಾಜಕೀಯದಲ್ಲಿ ಸತ್ಯ ಹೇಳಿದವ ಮೂರೇ ತಿಂಗಳಲ್ಲಿ ಸತ್ತೇ ಹೋಗ್ತಾನೆ. ಹದಿಮೂರುವರ್ಷ ಹೋದ್ರು ದೂರ. ಇಲ್ಲಿ ಎಷ್ಟು ತಯಾರಿ ಮಾಡಿದ್ದೇನೆ ನೋಡಿ. ಇದು ನನ್ನ ರಾಜಕೀಯದ ತಂತ್ರ, ನನ್ನ ಪ್ರಭುಶಕ್ತಿ, ನನ್ನ ಆಜ್ಞಾಶಕ್ತಿ, ಅಲ್ಲದಿದ್ರೆ ಈಗ ಬಾರೊ? ಶತ್ರುರಥದಿಂದ ಬರುವಂಥಹ ಶ್ರೀಕೃಷ್ಣ ಕಾಣಬೇಕು. ಜನ ಶಕ್ತಿಯ ಬೆಂಬಲ ಯಾರಿಗುಂಟು?... ಇವನಿಗುಂಟು. ಅಲ್ಲಿ ಯಾರುಂಟು? ಹೆಣ್ಣಕೊಟ್ಟ ಎರಡು

ಮನೆಯವರಿದ್ದಾರೆ- ಒಬ್ಬ ವಿರಾಟ, ಒಬ್ಬ ಪಾಂಚಾಲ, ಅವರಊರಿನ ಜನರೆಲ್ಲ ಉಪಪ್ಲಾವ್ಯದಲ್ಲಿ ಉಳಿದಿದ್ದಾರೆ. ಇದೊ ರಾಜಕೀಯ? ನನ್ನನ್ನು ವಿರೋಧಿಸುವವೂ ಕೂಡ ನನ್ನನ್ನು ಮೋದಿಸ್ತಾರೆ ಅಂತ ತೋರಿಸುವುದಕ್ಕೆ ನಿಮಗೆಲ್ಲ ಉಪದ್ರವ ಕೊಟ್ಟದ್ದು- ಭೀಷ್ಮರಿಗೆ, ದ್ರೋಣರಿಗೆ ಎಲ್ಲ.

ಎಂಥಹ ಸಭೆ ಇದು! ರಾಷ್ಟ್ರವನ್ನಾಳುವಂಥಹ ರಾಜನ ರಾಜ್ಯಸಭೆ ಹೀಗಿರ್ಬೇಕು. ಭೀಷ್ಮರಲ್ಲಿ, ದ್ರೋಣರಲ್ಲಿ ಆಮೇಲೆ ಎಷ್ಟೆಷ್ಟೋ ಮಂದಿ... ತಿಳಿಯತಲ್ಲ? ಪಾಂಡವರಿಗೆ ಅರ್ಧ ರಾಜ್ಯ ಅಂತೆ... ಎಂಥ ಅರ್ಧ? ಹಾಗಾದರೆ ಹಸ್ತಿನಾವತಿಯ ಸಾರ್ವಭೌಮಾಧಿಕಾರಕ್ರಮವನ್ನಿಟ್ಕೊಂಡ ಲೆಕ್ಕಾಚಾರದಲ್ಲಿ ಅರ್ಧವೇ ಅಲ್ವೊ? ಪಾಂಡವ್ರಿಗೆ ಅರ್ಧ ಕೊಟ್ರೆ ಅಖಂಡ ಸಿಂಹಾಸನ ಎಲ್ಲಿ ಉಂಟು? ಇದೂ ಅರ್ಧವೇ. ಇದೆಲ್ಲ ವಾದಿಸಬೇಕಾದ ವಿಷಯ ಹೌದು. ಆದ್ರೆ ನನ್ನೆಲ್ಲ ಹಿರಿಯರು.. ಅಜ್ಜನಿಗೂ ಬ್ಯಾಸ ಆಗ್ತದೆ. ದ್ರೋಣರಿಗೂ ಬ್ಯಾಸ ಆಗ್ತದೆ. ಸಧ್ಯದ ಪರಿಸ್ಥಿತಿಯಲ್ಲಿ ನನ್ನ ಪಕ್ಷದವರಿಗೆ ಬೇಸರವನ್ನುಂಟು ಮಾಡಿ ಅವರು ಮನಸಿಲ್ಲದ ಮನಸ್ಸಿನಲ್ಲಿ ನನ್ನೆ ಅನುಮೋದಿಸಿದ್ರೆ ನನ್ನ ಬೆಂಬಲ ಏನುಂಟು? ಅದೆ ಮೇಲೆ ಏನೂ ಮಾತಾಡ್ಲಿಲ್ಲ. ಈಗ ಮಾತಾಡ್ಲಿಕ್ಕೆ ಒಬ್ಬ ಜನ ಬರ್ತಾರೆ. ನನ್ನ ಅವನ ಮುಖಾಮುಖಿ ಎಷ್ಟು ಬೇಗ ಆಗ್ತದೆ ಅಷ್ಟು ಬೇಗ ಇತ್ಯರ್ಥ ಆಗ್ತದೆ ಅದು. ಆದ್ರೆ ಸಂದರ್ಭ ಬರಬೇಕಲ್ಲ.

ನಾನು ಎಣಿಸಿದ್ದೊಂದು, ಅವ ಮಾಡಿದ್ದು ಮತ್ತೊಂದು. ಅವ ಎಲ್ಲಿಗೆ ಹೋದ್ರು ಬಳಸುಬೇಟೆ ಮಾಡಿಕೊಂಡೆ ಬಾರ್ತಾನಲ್ಲ ದೇವ್ರೆ! ನಾನು ನೇರ ಮಾರ್ಗವನ್ನು ಕಲ್ಪಿಸಿದ್ದೇನೆ. ಅದ್ಕೇ ಚಪ್ರಹಾಕ್ಸಿದ್ದು, ತೋರಣ ಕಟ್ಸಿದ್ದು, ಅಲ್ಲೇ ಬರಬೇಕು ಸವಾರಿ ಅಂತ, ಅವ ಅದನ್ನು ಬಿಟ್ಟೇ ಹೋದ. ನಾನು ಆಲೋಚನೆ ಮಾಡಬೇಕಾಯ್ತು- ನಾನು ಎಣಿಸಿದಹಾಗಿಲ್ಲ ಕೃಷ್ಣ, ಅದಕ್ಕೆ ಬೇಕಾಗಿ ಇಷ್ಟು ದೊಡ್ಡ ಸಭೆ, ಏನೋ ಉಂಟು! ತಮ್ಮಂದಿರ ಹತ್ರ ಹೇಳಿದ್ದೇನೆ. ತೊಂಬತ್ತೊಂಬತ್ತು ಮಂದಿಯೂ ನನ್ನಹತ್ತಿರ ಇರಬೇಕು ಯಾಕೆ? ನನ್ನ ರಕ್ಷಣೆಗೆ, ಆಪ್ತನಾದಂತಹ ಕರ್ಣನಲ್ಲಿ ಹೇಳಿದ್ದೇನೆ ಹತ್ತಿರದ ಪೀಠದಲ್ಲಿಯೇ ಕೂಳಿತುಕೊಳ್ಳಬೇಕು ಅಂತ, ಯಾಕೆ? ರಕ್ಷಣೆಗೆ

ಏನೋ ಒಂದುಂಟು... ನನ್ನನ್ನು ಸ್ವಲ್ಪ ಉದಾಸೀನ ಮಾಡಿದ್ನೋ ಅಂತ? ಇಷ್ಟೆಲ್ಲಾ ಮಾಡಿದ್ದೆ ನಾನು; ಕೃಷ್ಣ ಬಾರ್ತಾನೆ ಅಂತ ಕೇಳಿದ ಮಾತ್ರಕ್ಕೆ ಅವನಿಗೆ ಸ್ವಾಗತಮಾಡಿ ಕರೊಂಡುಬಂದು ಅವನಿಗಾಗಿ ಏರ್ಪಡಿಸಿದಂತಹ ದುಶ್ಯಾಸನನ ಅರಮನೆಯಲ್ಲೇ ಊಟೋಪಚಾರ ಮಾಡಸಿದ್ರೆ ಹೀಗ್ ರಗಳೆ ಇದ್ದಿರಲಿಲ್ಲ. ಈಗ ನನಗೆ ಗೊತ್ತಾಗಿದ್ದು ಊರ ತೀರಗ್ಲಿಕ್ಕೆ ಬಿಟ್ಟಿದ್ದು ತಪ್ಪು, ಏಲ್ಲೆಲ್ಲಿ ಬೀದಿ, ಎಲ್ಲೆಲ್ಲಿ ಗುಪ್ತದ್ವಾರ ಇದನ್ನೆಲ್ಲಾ ಆತ ಕಂಡುಕೊಂಡ. ಬಾಕಿ ಇದ್ದದ್ದೆಲ್ಲಾ ಸೋಗು, ಚೆಂತಿಲ್ಲಾ, ಕೃಷ್ಣನಿಗಾಗಿಯೇ ಮೀಸಲಾಗಿದ್ದ ಸಿಂಹಾಸನವನ್ನು ಇರಿಸಿದ್ದೇನೆ. ಅದು ಎಲ್ಲಿ? ನನ್ನ ಹತ್ತಿರವೆ. ಇಲ್ಲಿ ಕರ್ಣ ಈಕಡೆ

ದುಃಶ್ಯಾಸನ ಮಧ್ಯ ನಮ್ಮ ಹೆಣ್ಣು ತಕ್ಕೊಂಡು ಹೋದ ಭಾವ. ಅವ ಇಲ್ಲೇ ಇದ್ದಾನೆ. ಹೇಳ್ತಾರೆ "ದುಷ್ಟಚತುಷ್ಟಯ, ನಾಲ್ಕುಮಂದಿಯ ಮಧ್ಯೆ ಅವ ಇದ್ದಾನೆ" ಅಂತ. ನನ್ನ ಮಟ್ಟಿಗೆ ಅವ ದುಷ್ಟನಲ್ಲ ನನ್ನ ಮಟ್ಟಿಗೆ ಬಾಕಿ ಇದ್ದವರೆಲ್ಲಾ ದುಷ್ಟರು. ಹಾಗಿರುವಾಗ ಈ ಭ್ರಷ್ಟಾಚಾರ ಕಲಿಸೋದು ಈ ಮಿಕ್ಕಿದವರು. ರಕ್ಷಣೆ ಕೋಡಬೇಕಾದವರು ರಕ್ಷಣೆಕೋಡೊದಿಲ್ಲ ಹಾಗಿರುವಾಗ ನಾವೇನು ಮಾಡೋದು. ಹಾಗಿಲ್ಲದಿದ್ರೆ ನಿಜವಾಗಿ ಹಸ್ತಿನಾವತಿಯ ರತ್ನಸಿಂಹಾಸನದಲ್ಲಿ ಕುಳಿತಂತಹ ಪ್ರಭುವನ್ನು ಕಾಪಾಡುದಕ್ಕೆ ಈ ಕರ್ಣ ಬೇಕಾ? ಅಲ್ಲಾ ನಮ್ಮ ಸೋದರಮಾವ ಬೇಕ? ನಮ್ಮಲ್ಲಿಂದ ಹೆಣ್ಣುಕೊಂಡು ಹೋದ ಬಾವನೆಂಟ ಬೇಕ? ನನ್ನ ತಮ್ಮ ದುಃಶ್ಯಾಸನ ಬೇಕ? ಬೇಕು. ಹಸ್ತಿನಾವತಿಯ ಸಿಂಹಾಸನದ ಸಂರಕ್ಷರು ನಾವು ಅಂತ ಹೇಳುವ ಅಜ್ಜ, "ಧೈರ್ಯಕ್ಕೆ ನಾನಿದ್ದೇನೆ ಮಗನೇ ಹೆದರಬೇಡ" ಅಂತ ಒಂದು ಮಾತು ಹೇಳಿದ್ರೆ ಇವರನ್ನೆಲ್ಲಾ ಹೊರಗೆ ಹಾಕುತ್ತಿದ್ದೆ. ಅವರು ಹೇಳುವಲ್ಲಿವರೆಗೆ ಇವರನ್ನು ಬಿಡೋದಕ್ಕೆ ಉಪಾಯವಿಲ್ಲ.

ಎಲ್ಲವರು ಕೂಳಿತಿದ್ದಿರಲ್ಲಾ? ಹೌದು ಒಳ್ಳೇದಾಯ್ತು, ಪ್ರಭುಶಕ್ತಿ ಎಂದರೇನು, ಇವನ ಆಜ್ಞಾಶಕ್ತಿ ಏನು ಕೃಷ್ಣ ಕಾಣಲಿ. ಶ್ರೀಕೃಷ್ಣ, ರಾಯಭಾರಿಯಾಗಿ ಹಸ್ತಿನಾವತಿಯನ್ನು ಪ್ರವೇಶಿಸಿದ್ದಾನೇಂತ ನಮಗೆ ನಿನ್ನೆಯೇ ಗೊತ್ತಾಗಿದೆ. ನನ್ನ ನಿರೀಕ್ಷೆ ಹೀಗಿರಲಿಲ್ಲ. ಆಗ್ಲಿ ಬಂದ ರಾಯಭಾರಿ ಹೀಗೆ ನಡೆದುಕೊಳ್ಳಬೇಕಂತ ಶಾಸನ ಮಾಡುವ ಅಧಿಕಾರ ನಮ್ಮದಲ್ಲ ಹಾಗಾಗಿ ಆಕಡೆಯಿಂದ ಬಂದಂತಹ ಕೃಷ್ಣನಿಗೆ ಎಲ್ಲಿ ಕುಳಿತುಕೊಳ್ಳುವದಕ್ಕೆ ಹಿತವಾಗ್ತದೆ ಅದು ಅವನ ಸತ್ತೆಗೆ ಬಿಟ್ಟುಕೊಟ್ಟದ್ದು. ಆದರೆ ಅದಲ್ಲ ರಾಯಭಾರಿಯಾಗಿ ಕೃಷ್ಣ ಬಂದಿದ್ದಾನೆ. ಅಂತರಂಗಿಕವಾಗಿ ನಾನೂ ಕೂಡ ಶುಭ ಪ್ರತೀಕ್ಷೆ ಉಳ್ಳವನೇ ಆಗಿದ್ದೆ. ಏನೇ ಆಗ್ಲಿ, ಒದಗಿಬಂದಂತಹ ಈ ರಾಜಕೀಯದ ದುಸ್ಥಿತಿಯೊಂದು ಪರಿಮಾರ್ಜನೆಯಾಗಿ ಅದಕ್ಕೊಂದು ವ್ಯವಸ್ಥೆ ಆಗಲಿ. ಹಾಗ ಆಗುವದಿಲ್ಲ, ಅಂತ ತೋರದೆ. ಸದ್ಯ ಶ್ರೀಕೃಷ್ಣನ ಚಲನವಲನವನ್ನು ನಾನು ಕಂಡ ದೃಷ್ಠಿಯಲ್ಲಿ ಏನೇ ಆಗ್ಲಿ. ಬಂದಂತಹ ಕೃಷ್ಣನನ್ನು ಬಹುದಿನ ಉಳಿಸಿಕೊಳ್ಳುವದು ಕ್ಷೇಮಕರವಲ್ಲ ಅಂತ ನನಗನ್ನಿಸ್ತದೆ. ಆದ್ದರಿಂದ್ದೇ ಕೃಷ್ಣನ ಸ್ವಾಗತಕ್ಕಾಗಿ ಸುಸಜ್ಜಿತವಾದಂತಹ ಸಭಾವಲಯವನ್ನು ಅಲಂಕರಿಸುವುದಕ್ಕೆ ಬೇಕಾಗುವಂತಹ ಮಹಾಭಾಗರನ್ನೆಲ್ಲ ಕರೆಸಿಕೊಂಡಿದ್ದೇನೆ. ಏನೇ ಆಗ್ಲಿ ಇಹೊತ್ತು ನಾ ಅಭಿಷೇಚನಗೊಂಡಂತಹ ರಾಜನೊ, ಅಲ್ಲೊ... ನಾ ಹೇಳಿದ್ದು ಸದ್ಯ ಆಚರಣೆಗೆ ಬರದೆ. ಅಜ್ಜ ಭೀಷ್ಮಾಚಾರ್ಯರಿದ್ದಾರೆ. ಪಿತೃಮಹಾಶಯರಿದ್ದಾರೆ. ಆ ಮೇಲೆ ನನ್ನ ಶತಸೋದರರು, ನನ್ನ ಮಕ್ಕು ಎರಡು ತಲೆಮಾರು ಹಿಂದೆ ಎರಡು ತಲೆಮಾರು ಮುಂದೆ ಇಟ್ಟುಕೊಂಡಂತಹ ಮಹಾಭಾಗ್ಯವಾನ್ ಸುಯೋಧನ! ಆದಕಾರಣ ಇಂದ್ರನ ಸಭೆಗೆ ಏನೇನೂ ಕಡಿಮೆಯದ್ದಲ್ಲ ಈ ಭೂಲೋಕದಲ್ಲಿ ಅಂತ ನಾಳೆ ಕಾವ್ಯವಾಣಿಯಾದರೂ ಹೊರಟು ಹೊರಟೀತು. ಇದು ರಾಜಕೀಯದ ಭದ್ರತೆ, ಆಡಳಿತದ ಚಾಕಚಕ್ಯತೆ ಕೌರವನಲ್ಲಿ ಗುರುತಿಸಬೇಕಾದದ್ದು. ಬಂದಂತಹ ರಾಯಭಾರಿ ಕೃಷ್ಣ! ಚಿಂತಿಲ್ಲ, ಯಾರೋ ದೂತ, ನೋಡು, ವಿದುರನ ಮನೆಯಲ್ಲಿ ಶ್ರೀಕೃಷ್ಣ ಬಂದು ಉಳಿದುಕೊಂಡಿದ್ದಾನಂತೆ, ನಮ್ಮನ್ನು ಕಾಣುವದಕ್ಕೆ ಅವಲಂಬಿಕೆಯಂತೆ. 'ಕೃಷ್ಣಾ

ಅರಸರಪ್ಪಣೆಯಾಗಿದೆ. ಮನಸ್ಸಿದ್ದರೆ ಬರಬಹುದು' ಅಂತ ಹೇಳು. ಇದಕ್ಕಿಂತ ಕೂಡಿಸಲೂ ಬಾರದು. ಕಳೆಯಲೂ ಬಾರದು. ಹೋಗ್.

(ಕೃಷ್ಣನ ರಾಜಸಭೆಯ ಪ್ರವೇಶ)

ಸೌರಾಷ್ಟ್ರ-ತ್ರಿವುಡೆ ಎನಲು ಕೋಪವ ತಾಳುತಾ ಕುರು! ಜನಪ ಗರ್ಜಿಸಿ ನುಡಿದ ಗೋಪನೋ

ಳೆನಗೆ ಮಾತು ಗಳೇಕೆ ನೋಡಿದೆ | ಗುಣಗಳೆಲ್ಲ || ೧೨೪ |

ಕೃಷ್ಣಾ, ಒಂದುಸಾವಿರ ವಿಷಯವುಂಟು ಮಾತಾಡುವುದಿದ್ರೆ, ಈ ಜನರನ್ನು ದಿಗಿಲು ಹುಟ್ಟಿಸಿ, ನನ್ನ ಕುರಿತಾಗಿ ಸಂದೇಹ ಹುಟ್ಟಿಸುವುದಕ್ಲ್ವೊ ಈ ಪ್ರಶ್ನಾವಳಿಗಳು. ಆದರೆ ಈ ಪ್ರಶ್ನೆಗಳಿಗೆಲ್ಲಾ ನಾನು ಉತ್ತರಿಸವುದಕ್ಕಿದ್ದದ್ದಲ್ಲ. ಏನಂದೆ, ನನಗೆ ನಾಚಿಕೆಯೋ? ನಿನ್ನನ್ನು ಕಂಡ್ರೆ ನಾಚಿಕೆಯಾಗ್ತಿದ್ಯೇನೊ? ನಿನ್ನನ್ನು ಕಂಡ್ರೆ ಹೆಂಗಸರಿಗೆ ನಾಚಿಕೆಯಾಗೊದಿಲ್ಲ ಮತ್ತೆ ನಮಗೆ ಆಗ್ತದೆನೊ. ಆದರೆ ಮರ್ರ್ಯಾದಸ್ಥರ ಮುಂದೆ ಕೆಲವು ಸಲ ನಾನು ತಲೆ ತಗ್ಗಿಸುತ್ತೇನೆ. ನಿನ್ನ ಮುಂದೆ ನನಗೆ ಏನೂ ನಾಚಿಕೆಯಿಲ್ಲ. ಯಾಕೆ? ನಾ ಒಬ್ಬಾಕೆಯ ಸೀರೆಗೆ ಮೊಳ ಎಷ್ಟು ಅಂತ ನೋಡಲು ಹೋಗಿ ಕೆಟ್ಟಿದ್ದೇನೆ. ಹಾಗಾಗಿ, ಸಾವಿರಾರು ಮಂದಿ ಸ್ನಾನ ಮಾಡುವ ಕಾಲಕ್ಕೆ ಎಲ್ಲಿಯೋ ಕಳಚ್ಚಿಟ್ಟ ಸೀರೆಯನ್ನು ಗಂಟು ಮೂಟೆ ಕಟ್ಟಿ, ಮರದಲ್ಲಿ ಕೂತು, ನಿನ್ನ ಸಂಗೀತ! ನಿನ್ನ ಗಾನ! ಅದೆಲ್ಲಾ ನಡಿತದೆ? ನಿನಗೆ ಊರಹೆಣ್ಣುಮಕ್ಕಳ ಸೀರೆಯ ಬಣ್ಣ ಗೊತ್ತುಂಟು, ಅದರ ಉದ್ದಗಲ ಗೊತ್ತುಂಟು ಇಂತವನ ಮುಂದೆ ನನಗೆ ನಾಚಿಕೆಯೆನೋ.

ಕೃಷ್ಣಾ, ಎಲವೊ ಗೋವಳ... ಮನಸ್ಸಿಗಾದ ನೋವನ್ನು ಈ ಬಹಿರಂಗವಾದಂಥ ಸಭೆಯಲ್ಲಿ ಸ್ಫೋಟಗೊಳಿಸಬಾರದೂ ಎಂಬ ಸಂಯಮದಿಂದ ನಾನಿದ್ದೆ. ನನ್ನ ಸಂಯಮದ ಕಟ್ಟೆಯನ್ನೇ ಒಡೆಯುವುದಕ್ಕೆ ನೀನು ಯತ್ನಿಸ್ತಾ ಇದ್ದಿ. ಕೃಷ್ಣಾ, ಹ್, ಇದಿರಿದಿರುನಿತ್ತು ಆಯುಧದಿಂದ ಹೊಡೆದು ದೇಹಕ್ಕೆ ಘಾಸಿಗೊಳಿಸುವ ವೈರಿಯನ್ನು ಸಹಿಸಬಹ್ದು, ಮನಸ್ಸಿಗೆ ನೋವನ್ನುಂಟು ಮಾಡುವ ಅಂತ:ಶತ್ರು ಇದ್ದಾನಲ್ಲ, ಅದು ಅಸಹ್ಯವಾಗಿದೆ. ಕೃಷ್ಣಾ, ನಿನಗೆ ಇದಕ್ಕೆ ಸರಿಯಾದ ಉತ್ತರಬೇಕು ಈ ಸಭೆಯಲ್ಲೇ ಅಂತ ನೀನ್ ಬಯಸೂದಿದ್ರೆ ನನಗೇನೂ ದಯೆಯೂ ಇಲ್ಲ, ದಾಕ್ಷಿಣ್ಯವೂ ಇಲ್ಲ. ಕೃಷ್ಣಾ ನೀನ್ ಬರ್ತೀ ಅಂತ ಇಲ್ಲಿಗೆ ಸಂದೇಶ ಬಂದಾವಾಗ ಕೃಷ್ಣನ ಅರ್ಹತೆ ಏನು? ನನ್ನ ವ್ಯಕ್ತಿತ್ವವೇನು? ಇದನ್ನು ಚೆನ್ನಾಗಿ ಬುದ್ಧಿಪೂರ್ವಕ ವಿಮರ್ಶಿಸಿ ಆಗಬೇಕಾದಂತಹ ಸ್ವಾಗತವನ್ನು ನಾನು ಮಾಡಿದ್ದೆ. ಕೃಷ್ಣಾ, ನಿನಗೆ ನನ್ನ ಕುರಿತಾಗಿ, ನಾನು ಕೇಳಬೇಕಾದಂತಹ ಪ್ರಶ್ನೆ ಇದೆ. ಉದಾಸೀನವೇ? ಅಲ್ಲ ನೈಚ್ಯ ಭಾವನೆಯೇ? ಅಲ್ಲದೇ ಇದ್ರೆ ಏನಿದು? ಎಲ್ಲಿಗೆ ಹೋದೆ ನೀನು, ಎಲ್ಲಿಗೆ ಹೊರಟವ? ಊರೆಲ್ಲ ಏನು ತಿಳಿದೀತು?, ಕೃಷ್ಣ ಬಂದರೆ ಎಲ್ಲಿಗೆ ಬತ್ತಾನೆ? ಧೃತರಾಷ್ಟ್ರ ನನ್ನ ತಂದೆ, ಭೀಷ್ಮಾಚಾರ್ಯ ನನ್ನಜ್ಜ ದ್ರೋಣ ಕೃಪರು ನನ್ನ ಆಚಾರ್ಯರು, ಎಲ್ಲವರ ಮನೆಯಲ್ಲೂ

ನಿನ್ನ ಸ್ವಾಗತಕ್ಕೆ ಸನ್ನಾಹವಾಗಿದೆ, ಎಲ್ಲಿ ಇದನ್ನು ಸ್ವಪ್ನದಲ್ಲಿಯೂ ಕಂಡುಕೊಳ್ಳಲಿಲ್ವೊ, ಅಂತಹ ವಿದುರನ ಮನೆಗೆ ಹೋದೆಯಲ್ಲ?

*ಸೌರಾಷ್ಟ್ರ-ತ್ರಿವುಡೆ ನಿನಗೆ ನಮ್ಮರಮನೆಯೊಳಾರೋ | ಗಣೆಗೆ ಮನವಾಗದಿರೆ ಗಂಗಾ |*

*ತನುಜ ಗುರು ಕೃಪರಾಲಯದಿ ಭೋ | ಜನವನುಳಿದು || ೧೨೫ ||*

ಕೃಷ್ಣಾ, ನಿನಗೆ ಉತ್ತಮ ವಂಶಜಾತರಾದ ಮನೆ ಆಗೋದಿಲ್ಲ ಅಲ್ವೊ? ನಿನ್ನನ್ನು ಕರೆಯಲಿಲ್ವೊ ಮನೆಯ ಯಜಮಾನು? ನನ್ನ ಪೂಜ್ಯಪಾದರಾದಂತಹ ಸಾರ್ವಭೌಮಾಧಿಕಾರಕ್ಕೆ ಇದ್ದವರು ಕಾಣಿಕೆ ತೆಕ್ಕೊಂಡು ಬೀದಿಗೆ ಬರಲಿಲ್ಲೂ ಕಾಣಲಿಕ್ಕೆ? ಕುರುಕುಲ ರಾಜಸಿಂಹಾಸನವನ್ನು ರಕ್ಷಿಸುವವರು ನಿನ್ನಲ್ಲಿಗೆ ಬರಲಿಲ್ಲೊ ಸ್ವಾಗತಕ್ಕೆ? ಹಿರಿಯರೆಲ್ಲಾ ಹೋದಮೇಲೆ ನಾವ್ಯಾಕೆ ಅಂತ ನಿನ್ನ ಕುರಿತಾದ ಸ್ವಾಗತಕ್ಕೆ ಸಿದ್ಧತೆಯನ್ನು ಮಾಡುತ್ತಿದ್ದೆ. ಆದರೆ ನೀನು ಹೋದದ್ದು ಎಲ್ಲಿಗೆ? ಬಾಗಿಲು ತೆರೆದಿಟ್ಟಲ್ಲಿಗೆ ನೀನು ಬರುವುದಿಲ್ಲ ಅಲ್ವೊ? ಯಾರಾರು ಗೋಕುಲದಲ್ಲಿ ಹೆಣ್ಣು ಮಕ್ಕಳು, ದಂಪತಿಗಳು ಬಾಗಿಲುಹಾಕಿ ಕತ್ತಲೆಯಲ್ಲಿ ಮಲಗಿದ್ದಾರೆ ಅಲ್ಲೆಲ್ಲ ನೀನು ಪ್ರವೇಶ ಮಾಡುವವ. ನಿನಗೆ ಅದೇ ರೂಢಿ ಅಲ್ವೊ?

ಕೃಷ್ಣಾ, ಈ ರಾಷ್ಟ್ರದ ಹಿರಿತನವನ್ನು ಬಯಸಿ ಒಂದು ಮನೆಯಲ್ಲಿ ಕವಲೊಡ್ಡದ್ದನ್ನು ಯಾವುದಾದರೂ ಚಾಕಚಕ್ಯತೆಯಿಂದ ಮಧ್ಯಸ್ಥಿಕೆ ವಹಿಸಿಕೊಂಡು ಬೆಸುಗೆ ಹೊಸೆಯುವಲ್ಲಿ; ನಮ್ಮ ಸ್ಥಾನವೂ ಉಳಿದು, ಮಾನವೂ ಉಳಿದು, ಈ ತಲೆ ನೋವೂ ಅಳಿದು ಏನಾದರು ಮಾಡ್ತಾನೆ ಅಂತಾದ್ರೆ, ನನಗೆ ಬೇಡ ಅಂತ ಇರಲಿಲ್ಲ. ಇಲ್ಲದಿದ್ರೆ ನಿನ್ನಂತವನ ಸ್ವಾಗತಕ್ಕೆ ನಾನು ಇಷ್ಟು ವೆಚ್ಚ ಮಾಡೆನೊ? ಶತ್ರುಪಕ್ಷದಿಂದ ಬಂದಂತಹ ನಿನಗೆ ಗೊತ್ತಾಗಬೇಕು ಕೌರವರನು ಆಡಳಿತದಲ್ಲಿ ತುಂಬಿಸಿದ್ದಾನೆಯೇ ಹೊರತು ಹಿರಿಯರು ಮಾಡಿದ್ದನ್ನು ಕಳಕೊಳ್ಳಲಿಲ್ಲ ಅಂತ. ಇದು ನನ್ನ ರಾಜ್ಯಾಂಗ ರಚನೆ. ನೀನು ಬಂದದ್ದು ಹಾಗಲ್ಲ. ನೀನು ನಮ್ಮ ಮೇಲೆ ನಂಜಿನ ಆರೋಪಣೆ ಮಾಡುತ್ತಿದ್ದಿ, “ಕೌರವ ನಂಜಿನವ”. ಆದರೆ ಆ ನಂಜು ನಿನ್ನಲ್ಲಿ ಪ್ರಯೋಜನಕ್ಕೆ ಬರೊದಿಲ್ಲ ಅಂತ ಗೊತ್ತುಂಟು. ಏಕೆಂದರೆ ಪೂತನಿಯ ಸ್ತನ್ಯಪಾನ ಮಾಡಿದವ ನೀನು. ಅವಳು ಸತ್ತಿದ್ದಾಳೆ ನೀನು ಸಾಯಲಿಲ್ಲ. ಕಾಳಿಂಗನ ಹೆಡೆಯ ಮೇಲೆ ಕುಣಿದು ಆ ವಿಷಜ್ವಾಲೆಯಿಂದ ನಿನ್ನ ಮೈ ಕಪ್ಪು ಮಾಡುಕೊಂಡಿದ್ದಿ ಹೊರತು ನಿನಗೆ ಏನೂ ಆಗಲಿಲ್ಲ. ಹಾಗಾಗಿ ನನ್ನ ವಿಷ ನಿನಗಾಗಿ ಅಲ್ಲ. ಅದನ್ನು ಇರಿಸಿದ್ದೇನೆ ಶತ್ರುದಮನಕ್ಕಾಗಿ, ಕೃಷ್ಣಾ, ಯತಾರ್ಥಕ್ಕಾದರೆ ನಾನೊಂದು ತೀರ್ಮಾನಕ್ಕೆ ಬಂದಿದ್ದೇನೆ. ಕೌರವರು ಪಾಂಡವರು ಒಂದಾಗುವುದು ನಿನಗೆ ಇಷ್ಟವಿಲ್ಲ. ಯಾಕೆ ಇಷ್ಟ ಇಲ್ಲ. ಒಂದಾದರೆ ನಿನಗೆ ಇಲ್ಲಿ ಜಾಗವಿಲ್ಲ. ನಿನ್ನ ರಾಜಕೀಯ ನನಗೆ ಅರ್ಥವಾಗುವುದಿಲ್ಲವೆನೊ; ನೀನು ನಿನ್ನ ಸೈನ್ಯವನ್ನು ಇಬ್ಭಾಗಮಾಡಿ ಸ್ವಲ್ಪ ನನಗೆ, ಸ್ವಲ್ಪ ಪಾಂಡವರಿಗೆ ಅಂತ ಮಾಡಿದ್ದೆ. ಯಾಕೆ? ನಾಳೆ ಯಾರು ಗೆದ್ದರೂ ತನ್ನ ಸಹಾಯದಿಂದ

ಅಂತ ಹೇಳಿಕೊಳ್ಳುವುದಕ್ಕೆ ಈ ದುರ್ಬುದ್ಧಿ ಎಲ್ಲ ನನಗೆ ಕಲಿಸುವುದು ಬೇಡ. ಹಾಗಾಗಿ, ಹಗೆಗಳಲ್ಲಾ ಪಾಂಡವರು ನೀನಗಡು ಎನಗೆ.

ಹಾಗಲ್ಲದಿದ್ದರೆ ಏನಿದು, ನಿನ್ನ ರಾಜಕೀಯದ ತಂತ್ರಜ್ಞತೆಯೋ ಅಲ್ಲ, ನಮ್ಮ ಕುರಿತಾದಂತಹ ಅವಹೇಳನವೋ, ಅಲ್ಲ, ಇಲ್ಲಿದ್ದಂತಹ ಎಲ್ಲ ಸಾಮಾಜಿಕರಿಂದಲೂ ಅತ್ಯುನ್ನತವಾದಂತಹ ಸ್ಥಾನದಿಂದ ಮಾನದಿಂದ ವಿದುರ ಹಸ್ತಿನಾವತಿಯಲ್ಲಿ ಇದ್ದಾನೆ ಅಂತಲೋ ಏನಯ್ಯ? ಏನು, ವಿದುರನನ್ನೇ ಈ ಸಿಂಹಾಸನದಲ್ಲಿ ಪ್ರತಿಷ್ಠಾಪನೆ ಮಾಡುವಂತಹ ಮುಂದಾಲೋಚನೆಯೋ, ಅಲ್ಲ, ವಿದುರನಿಗೆ ಬೇಕಾದವರನ್ನು ಸಿಂಹಾಸನಕ್ಕೆ ತಯಾರು ಮಾಡುವದಂತಹ ಹಿನ್ನೆಲೆಯೋ! ಅಷ್ಟೇ ಅರ್ಥ ಆಗದೇ ಇದ್ದ ಒಬ್ಬ ರಾಜಕಾರಣಿ ಸುಯೋಧನ ಅಂತ ತಿಳ್ಕೊಳ್ಳಬೇಡ. ಹಂ. ಅರಸು ಮಕ್ಕಳಾದಂತಹ ಕೌರವರ ಪಾಂಡವರಲ್ಲಿ ಬಂದಂತಹ ಯಾವ ಜಿಜ್ಞಾಸೆ ಇದೆ ಅಧಿಕಾರದ್ದು. ಇದರ ಇತ್ಯರ್ಥಕ್ಕೆ ಒಂದು ರಾಷ್ಟ್ರೀಯ ಪ್ರಶ್ನೆಯಾಗಿ ನೀನು ಅಂಗೀಕರಿಸಿಕೊಂಡು ಆ ಪಕ್ಷದ ಸಮಷ್ಟಿಮುಖವಾಗಿ ಬಂದಿದ್ದಿ ಅಂತ ಸ್ವಾಗತಕ್ಕೆ ನಾವು ಸಿದ್ಧರಾದರೆ, ಏನೋ ನಿನ್ನ ವಯಕ್ತಿಕವಾದಂತಹ ಕಾರ್ಯಕಲಾಪಗಳನ್ನು ಪ್ರದರ್ಶಿಸುವುದಕ್ಕಲ್ಲದೇ ಇದ್ದರೆ, ವಿದುರನಲ್ಲಿ ಈ ರಾಜಕೀಯದ ನಿನ್ನ ಬರೋಣಕ್ಕೂ ನಿನ್ನ ಅಲ್ಲಿಯ ಪ್ರವೇಶಕ್ಕೂ ಸಂಬಂಧ ಇದೆಯೊ? ಬಹುಷ: ಹೀಗಿರಬೇಕು. ನೀನು ಈ ಹೊತ್ತು ರಾಜಕಾರಣಿಯಾಗಿ ಬರಲಿಲ್ಲ. ನಮ್ಮ ದೃಷ್ಟಿಯ ಯದುನಾಥನಾಗಿ ಬರಲಿಲ್ಲ. ಬರೇ ಗೊಲ್ಲನ ಮಗನಾಗಿ ಬಂದಿದ್ದಿ ಅಂತಾ ಆದರೆ, ಇದು ಸರಿ-ಕುಲವಿಹೀನ...

|ಸೌರಾಷ್ಟ್ರ-ತ್ರಿವುಡೆ॥ ಕುಲವಿಹೀನನು ವಿದುರ ನೀ ಗೋ ವಳನು ನಿನಗವನಲ್ಲಿ ವರಸ ಮಿಳಿತ

ಲೇಸೈ ನಿನ್ನ ಬರವೇ | ನಳುಕದುಸಿರು || ೧೨೭ ||

ಹಾಗಲ್ಲದೇ ಬೇರೆ ಕಾರಣ ಮಂಡಿಸುವುದಕ್ಕೆ ಸಧ್ಯ ಬಿಸಿಯಾದಂತ ನನ್ನ ಮೆದುಳಿನಲ್ಲಿ ರಸಸ್ಫೂರ್ತಿಯೇ ಹುಟ್ಟೋದಿಲ್ಲ. ಬಹುಷ: ಹೀಗಿರ್ಬೇಕು. ಆ ಹುಟ್ಟುಗುಣ, ನಿನ್ನ ಸಣ್ಣ ವಯಸ್ಸಿನಲ್ಲಿ ಗೊಲ್ಲರ, ಗೋಪಾಲಕರ ಸಹವಾಸ, ಗೊಲ್ಲತಿಯರ ಕೂಟ. ಅವರ ಒಟ್ಟಿಗೆ ಸಮಷ್ಠಿಯಲ್ಲಿ ಗುಂಪಿನಿಂದ ಒಂದು ಪಾತ್ರೆಯಿಂದ ಉಂಡು ಬೆಳೆದಂತಹ ಆ ಸೂಕ್ಷ್ಮವಾಸನೆ. ಹೇಳಿಕೇಳಿ ನೀನು ಗೊಲ್ಲ. ವಿದುರ ಕುಲವಿಹೀನ. ಹಾಗಾದರೆ ಮೂಲವಾದಂತಹ ನಿನ್ನ ಸ್ಥಾಯೀಭಾವದ ಸಂಪರ್ಕ-ಸ್ವಭಾವ ಇಲ್ಲಿ ಒಂದಾಯಿತೊ? ಅದು ಹೌದಾಗಿದ್ರೆ, ಕೇವಲ ವಿದುರನ ಆತಿಥ್ಯಕ್ಕೆ ಬಂದಂತಹ ಒಬ್ಬ ಗೊಲ್ಲಕೃಷ್ಣನನ್ನು ಈ ರಾಜಸಭೆಯಲ್ಲಿ ವಿಚಾರಿಸಬೇಕಾದಂತಹ ಯಾವ ಹೊಣೆಗಾರಿಕೆಯೂ ಸುಯೋಧನನಿಗೆ ಇಲ್ಲಾ ಅಂತ ತಿಳ್ಕೊಂಡು ನಾನು ಸುಮ್ಮನೆ ಆದದ್ದು. ವಯ್ಯಕ್ತಿಕವಾಗಿ ಮಾತಾಡೋಣವೋ ಅದಕ್ಕದು ಸ್ಥಾನವಲ್ಲ ಯಾಕೀಗೆ ಮಾಡಿದೆ ಬಹುಷ: ನಾ ಆಗಲೇ ಹೇಳಿದ ಹಾಗೆ ಹೀಗಿರಬೇಕು- ಪಾಂಡವರಲ್ಲ ನನ್ನ ಶತ್ರುಗಳು, ಹಗೆಗಳಲ್ಲಿ ಪಾಂಡವ್ರು ಯಾಕಲ್ಲ? ಅವರ ಸಂಸ್ಕಾರ ಅದಲ್ಲ ಅಂತಲ್ಲ ನನ್ನವಾದ. ಅಷ್ಟು ಶಕ್ತರಲ್ಲ ಅವು, ನೀನು, ನೀನು ಅಪ್ರತ್ಯಕ್ಷವಾಗಿ,

ಬಹುಷ: ನಿನ್ನ ಮುಖವಾಡ ಈ ವಿದುರನೇನೊ ನನಗೆ ಸಂದೇಹವಾಗ್ತಾ ಇದೆ. ಯ್ಯಾಕೆ? ಹೇಳೋದ ಕೇಳಿದ್ದೆ ನಾನು. ಯಮನ ಮಗ ಅಂತೆ ಧರ್ಮರಾಯ ಇವ ಯಮನ ಅಪರಾವತಾರವಂತೆ. ಸದ್ಯ ಕುಂತೀದೇವಿ ಇರುವುದು ಈ ವಿದುರನ ಮನೆಯಂತೆ, ಈ ರೀತಿಯ ಭಾವುಕತೆಯಿಂದ, ಒಂದು ತರಹದ ಆಧ್ಯಾತ್ಮಿಕ ಚಿಂತನೆಯನ್ನು ಮಾಡುವಾಗ, ಈ ತ್ರಿವೇಣೀಸಂಗಮದಲ್ಲಿ ಪೌರೋಹಿತ್ಯಕ್ಕೆ ನೀನೇ ಪವಿತ್ರಧಾರಿಯೋ ಎಂಬ ಸಂದೇಹ ನನ್ನದು ಅಲ್ಲದಿದ್ರೆ ಮತ್ತೇನು? ವಿದುರನಲ್ಲಿ ಆತಿಥ್ಯವೇನು?

*(ವಿದುರ ಕೋಪಗೊಂಡು, ಬಿಲ್ಲು ಮುರಿದು, ಶಸ್ತ್ರಸನ್ಯಾಸ ಕೈಗೊಳ್ಳುತ್ತಾನೆ)*

ವಿದುರನ ಹೃದಯವನ್ನು ನಾನು ಅರಿಯದವನಲ್ಲ. ಅವ ದಾಸೀಪುತ್ರ. ಮನುಷ್ಯ ಒಳ್ಳೆಯವ. ಯಾಕೆ? ಇಷ್ಟು ಜನರನ್ನು ತಿರಸ್ಕರಿಸಿ ಅವನಲ್ಲಿ ನೀನು ಹೋಗುವಾಗ ನನಗೆ ಬೇರೆ ಏನು ಹೊಳೆದೀತು! ಅವನು ಆಡಿದುದೂ ಸತ್ಯ. ಅಂದಿನಿಂದ ಇಂದಿನವರೆಗೆ ನನ್ನ ನಡೆ ನುಡಿ ಇದು ಆಕ್ಷೇಪಾರ್ಹವೇ ಆಗಿತ್ತು ವಿದುರನಿಗೆ. ಆದರೂ ಬಹುಕಾಲದಿಂದ ಇಂತಹ ಮಾನಸಿಕವಾದ ಅಭಿಪ್ರಾಯವ್ಯತ್ಯಾಸ ಇದ್ರೂ ತಲೆಗಾಯುವೆನೆನುತಲಿ ಈ ಬಿಲ್ಲನ್ನು ಉಳಿಸಿಕೊಂಡಿದ್ದಾನೆ. ಹಾಗಾದರೆ ವಿದುರನಿಗೆ ನನ್ನ ಕುರಿತಾಗ್ಯೂ, ನನ್ನ ತಂದೆಯವರ ಕುರಿತಾಗಿ ಇದ್ದಂತಹ ವ್ಯಾಮೋಹವೋ, ವಾತ್ಸಲ್ಯವೋ, ಗೌರವವೋ ಅದೆಷ್ಟು? ಹೀಗೆ ದೀರ್ಘಕಾಲದಿಂದ ಬೆಳಕೊಂಡು ಬಂದಂತಹ ವಿರೋಧಾಭಾಸವಾದಂತಹ ಅನುಗ್ರಹಬುದ್ಧಿ ವಿದುರನಲ್ಲಿದ್ದದ್ದು, ಕುಲವಿಹೀನ ಅಂತ ನಾನು ಒಂದು ಶಬ್ದ ಪ್ರಯೋಗ ಮಾಡಿದ್ದರಿಂದ ಮುರಿದುಹೋಗಬೇಕಾದ್ರೆ ಇದು ವಿದುರನ ದೋಷ ಅಲ್ಲ. ಆ ವಿದುರನಲ್ಲಿ ಮಾನಸಿಕವಾದಂತಹ ಪರಿವರ್ತನೆ ಉಂಟು ಮಾಡಿದಂತಹ ಈ ಭೂಮಿಗಿಳಿದು ಬಂದಂತಹ ಭಗವಂತನ ಪವಾಡ ಇದು. ಈಗ ನನಗೆ ಅದರ್ಥವಾಯ್ತು ವಿದುರನಲ್ಲಿಗೆ ಯಾಕಿವ ಹೋದ ಅಂತ. ದೊಡದಲ್ಲ ಬಿಡು, ಬಿಡಿ.

ಕೃಷ್ಣಾ, "ಎರಡು ಮಾತುಗಳನಾಡುವಕಾರ್ಯ ಇಹುದು" ಅಂತ ವಿದುರನಲ್ಲಿ ಹೇಳಿಕಳಿಸಿದ್ದೀಯಲ್ಲ? ಏನು ನಿನಗೆ ಹೇಳಲಿಕ್ಕುಂಟು ಎರಡೋ ಅಥವಾ ಹನ್ನೆರಡೋ ಬೇಗ ಹೇಳು. ಬೇಕಾದರೆ ಆ ಎರಡು ಮಾತಿನಲ್ಲಿ ಹನ್ನೆರಡು ಅರ್ಥ ಬರುವ ಹಾಗೆ ಹೇಳು.

ಕೃಷ್ಣಾ ಏನೇ ಆಗ್ಲಿ, ನಾಟಕದೊಳಗೆ, ಒಂದೊಂದು ಒಂದೊಂದು ಹೊಸ ಅಂತರ್‌ನಾಟಕಗಳನ್ನು ಸೃಷ್ಟಿ ಮಾಡುವದಕ್ಕೆ ಅಂತಲೇ ಬಂದಿದ್ದೀ ಅಂತ ಅಷ್ಟರ್ಥವಾಯ್ತು. ಆದಕಾರಣ ಅದಕ್ಕೆ ಉತ್ತರ ನನ್ಗೆ ಬೇಕಿಲ್ಲ ಸಧ್ಯ ಪಾಂಡವರ ರಾಯಭಾರಿಯಾಗಿ ನೀನು ಬಂದಿದ್ದೀಯಲ್ಲ? ಆ ಕಾರ್ಯಗೌರವವನ್ನು ಗೌರವವಾಗಿಯೇ ತೊಡಗು ಕೃಷ್ಣಾ, ಕೌರವರ



ಪಾಂಡವರ ಮನಕಷಾಯದ ಆವಿರ್ಭಾವ ಎಂಥದು, ಯಾಕಾಗಿ? ಎಂಬ ಸೂಕ್ಷ್ಮ ವಿವೇಚನೆ ಇಲ್ಲದೇ ಇದ್ದಂತಹ ಓರ್ವ ಮುತ್ಸದ್ದಿ ಅಲ್ಲ ನೀನು. ಆದಕಾರಣ, ಮೇಲಿಂದಮೇಲೆ ದ್ಯೋತಪ್ರಕರಣವನ್ನು ಮಾತ್ರ ನೆನಪಿಸಿಕೊಂಡು

ಅದರಲ್ಲಿ ಬಂದಂತಹ 'ಯಥಾಯೋಗ್ಯಂ ಪ್ರತಿಪತ್ತವ್ಯಂ' ಅಥವಾ 'ಯಥಾಯೋಗ್ಯಂ ಪ್ರಪಥವ್ಯಂ' ಇದನ್ನೇ ಆಧರಿಸಿಕೊಂಡು ತೀರ್ಮಾನಿಸುವುದಕ್ಕೆ ಎಷ್ಟು ದೊಡ್ಡ ಗೊಂದಲ ಉಂಟು ಅಂತ ನೀನು ಬಲ್ಲೆ. 'ಯಥಾಯೋಗ್ಯಂ ಪ್ರಪಥವ್ಯಂ' ಎಂಬ ಒಂದು ವಾಕ್ಯವನ್ನಿಟ್ಟುಕೊಂಡ್ರೆ ಇದಮಿಥಂ ಎಂಬ ತೀರ್ಮಾನ ಇಲ್ಲ ಅಂತ ನೀನೂ ಒತ್ತೀಯಲ್ಲ? 'ವರುಷ ಹದಿನಾಲ್ಕರಲಿ ಮುಗುವುದು ತಮ್ಮ ಪಟ್ಟಣವ' ಇದು ಅದರ ವ್ಯಾಖ್ಯಾನ ಅಂತ ನಾವಂಗೀಕರಿಸಿದ್ರೆ, ಹೇಗೆ ಹೋಗುವುದು? ಎಂಬುದಲ್ಲಿಲ್ಲಲ್ಲ? 'ಯಥಾಯೋಗ್ಯಂ' ಅಂತಂದರೆ ಕ್ಷತ್ರಿಯರಿಗೆ ಯಾವುದು ಯೋಗ್ಯವೋ, ಅದೊ? ಅದಲ್ಲ, ಹದಿಮೂರುವರ್ಷ ಕಳಿಲಿ ಆವಾಗ್ಗ ಯಾವು ಉಚಿತ ಅಂತ ತೋರ್ತದೆ ಅದು, ಈ ರೀತಿಯಾದಂತಹ ಯಾವತ್ತೂ ಒಪ್ಪಂದವೇ ಅಲ್ಲಿರೋದು. ಯಾಕ್ಹಾಗಮಾಡಬೇಯ್ತು ಪಾಂಡವರು ಐದು ಮಂದಿ. ಕಾಣುವವರ ಕಣ್ಣಿಗೆ ಒಂದೇ ಸಮಷ್ಟಿ.

ಕೃಷ್ಣಾ, ಪಾಂಡವರು ದ್ಯೂತದಲ್ಲಿ ಸರ್ವಸ್ವವನ್ನೂ ಸೋತಿದ್ದಾರೆ; ಅಂದರೆ ನಾವು ಸೋಲಿಸಿದ್ದೇವೆ. ಆದರೆ "ದ್ರೌಪದೀ, ಆದದ್ದನ್ನು ಮರೆತುಬಿಡು. ಮರೆಯಬೇಕಾದರೆ ಏನು ಬೇಕು ಕೇಳು" ಅಂತ ನಮ್ಮ ತಂದೆಯವರು ಈ ರಕ್ತಪಾತ ಎಲ್ಲ ಬೇಡ ಅಂತ ಕ್ಷಮಾದಾನ ಮಾಡಿದರು. ದ್ರೌಪದಿಯ ಕೇಳಿಕೆಯ ಮೇಲೆ ಪಾಂಡವರಿಗೆ ಆಯುಧಗ್ರಹಣ ಸ್ವಾತಂತ್ರ್ಯವನ್ನೂ ವ್ಯಕ್ತಿಸ್ವಾತಂತ್ರ್ಯವನ್ನೂ ಕೊಟ್ಟರು. ಅದು ನಮ್ಮ ತಂದೆಯವರ ಕೊಡುಗೆ. ಆ ದೇಣಿಗೆಯನ್ನು ಅವಳು ಸ್ವೀಕರಿಸಿದ್ದಾಳೆ. ಯಾಕೆ? ಅಲ್ಲಿ ನಡೆದದ್ದನ್ನು ಕ್ಷಮಿಸುವುದಕ್ಕಾಗಿ ಹ್ಯಾಗುಂಟು ಈಗ? ದ್ರೌಪದಿ ಜಡೆ ಕಟ್ಟಿದ್ದಾಳೆ? ಎಲ್ಲವನ್ನೂ ಮರೆತರೆ ಹಕ್ಕು ಬರುತ್ತದೆ. ಆದರೆ ಈಹೊತ್ತಿಗೂ ಪ್ರತಿಜ್ಞೆ ಊರ್ಜಿತವಾಗಿದೆ ಎಂಬುದಕ್ಕೆ ಸಂಜಯನ ಮೂಲಕ ಬಂದ ವರದಿಯೂ ನಮಗೆ ಪುರಾವೆಯಾಗಿದೆ. ದ್ರೌಪದಿ ಜಡೆಕಟ್ಟಿ ಧರ್ಮರಾಯನೊಟ್ಟಿಗೆ ಬಂದು- "ಆದದ್ದೆಲ್ಲಾ ಆಗಿ ಹೋಯಿತು ದೊಡ್ಡಪ್ಪ" ನನ್ನ ಹತ್ರ ಹೇಳೋದು ಬೇಡ ಅವ "ನೀವು ಕೊಟ್ಟಿದ್ದನ್ನು ನಾವು ಚೆನ್ನಾಗಿ ವಿನಿಯೋಗಿಸುವುದಕ್ಕೆ ಪರಿಶುದ್ಧರಾಗಿರಲಿಲ್ಲ. ಹದಿಮೂರುವರ್ಷ ನಮಗೆ ಸೂತಕ ಇತ್ತು. ಆದ ಕಾರಣ ಈಗ ಎಲ್ಲ ಮರೆತಿದ್ದೇವೆ. ಇದಕ್ಕೆ ಸಾಕ್ಷಿ ನಿಮ್ಮ ಸೊಸೆಯ ಜಡೆ ಅವಳು ಮೂಡಿದ ಹೂ" ಅಂತ ಹೇಳಲಿ, ಆವಾಗ ತಂದೆಯವರು ಆಲೋಚಿಸುತ್ತಾರೆ. ಅದಕ್ಕುತ್ತರ ನಾನು ಕೊಡ್ತೀನೆ.

ಕೃಷ್ಣಾ ರಾಜಕೀಯದಲ್ಲಿ ಪಕ್ಷದ ನಾಯಕನೊಬ್ಬ ಏನಾದರೂ ಹೇಳಿಕೆಯನ್ನು ಕೊಟ್ಟಿರುವಾಗ ಅದನ್ನೇ ಆ ಪಕ್ಷದ ಸಂಪೂರ್ಣ ನಿಲುಮೆ ಅಂತ ಒಪ್ಪಿಕೊಳ್ಳಲಾಗುವುದಿಲ್ಲ. ದ್ಯೂತದ ನಂತ್ರ ಉದ್ದೇಶ ಬೆಳೆಯುವುದಕ್ಕೆ ಸೂಕ್ಷ್ಮವಾಗಿ ಅಜ್ಞಾತದಲ್ಲಿ ಏನೆಲ್ಲಾ ನಡೆದಿದೆ. ಅಜ್ಞಾತದಲ್ಲಿ

ಅಂದ್ರೆ ಅಜ್ಞಾತವಾಸದಲ್ಲಿ ಅಲ್ಲ, ಜಗತ್ತಿನ ಮುಂದೆ ಕಾಣದೇ ನಡೆದದ್ದು. ಪಾಂಡವರು ಮನ:ಪೂರ್ವಕವಾಗಿ ಕೌರವನಲ್ಲಿ ಒಂದಾಗುವುದಕ್ಕೆ ಸಿದ್ಧರಾಗಿದ್ದಾರೆ ಎಂಬುದಕ್ಕೆ ನನಗೆ ಸ್ಪಷ್ಟ ಪುರಾವೆ ಬೇಕು.

ಕೃಷ್ಣಾ ಪಾಂಡವರು ಮುನ್ನಿನಂತೆ ಇರ್ತಾರೆ ಅಂತ ಹೇಳ್ತಿಯಲ್ಲ. ಮುನ್ನಿನಂತೆ ಅನ್ನೋದೇ ಇಲ್ಲಿ ಜಟಿಲ. ಯಾಕೆ? ಸ್ನೇಹದಿಂದ ಒಂದು ದಿನ ನಾವು ಒಂದು ಪಂಕ್ತಿಯಲ್ಲಿ ಕೂತು ಊಟ ಮಾಡಿದರೆ ವಿರೋಧದಲ್ಲಿ ಬದುಕಿದ್ದು ಎರಡು ದಿನ. ಹ್ಹೀಗೆ ಸಾಗಿಬಂದಂತಹ ನಮ್ಮ ಕೌಟುಂಬಿಕ ಜೀವನ ಮತ್ತು ನಮ್ಮ ರಾಜಕೀಯ ಜೀವನ, ಕೌಟುಂಬಿಕ ಜೀವನದಿಂದ ಒಂದಾಗೋಣ ಎಂಬಂತಹ ಭಾವನೆಯನ್ನು ನಾವು ಮುಂದಿಟ್ಟಾಗ ರಾಜಕೀಯದ ಅರ್ಥಶಾಸ್ತ್ರ ಇದನ್ನು ತುಂಡುಮಾಡುವಂತಹ ಸನ್ನಿವೇಶ- ಇದು ನಿನಗೆ ಗೊತ್ತು. ವಿಶೇಷವಾದಂತಹ ಬಣ್ಣನೆ ಬೇಡ, ಕೌರವನನ್ನ ಅವರೀಗ ಏನು ಅಂತ ಅಂಗೀಕರಿಸಲಿಕ್ಕೆ ಸಿದ್ಧರಿದ್ದಾರೆ? ಇನ್ನುಂದೆ ಹೇಗೆ? ಹೇಗೆ... ಹೇಗೆ ಹೇಗೆ? ಈ ಮಾತಿನಲ್ಲಿ ಇನ್ನು ಬಿಂದು ವಿಸರ್ಗಕ್ಕೆ ಬದಲಾವಣೆ ಆಗುವುದು ಅಂತ ಇಲ್ಲಲ್ಲ? ಕರ್ಣಾ...

ಕೇದಾರಗೌಳ-ಝುಂಪೆ ಅಹಹ ಕೇಳಿದೆಯ ಕರ್ಣ ಜೂಜಿನಲಿ ಮಹಿಯ ಸೋತವರಿಗೆನ್ನ

ಸಹವಾಸವೇನು ರಣಕೆ | ಯೆಳಳುಕಿಹರಯ್ಯ ಸಂಧಾನಕೆ || ೧೨೭ ||

ಕರ್ಣಾ, ಕೌರವನ ಭಾವವೇನು? ಆ ಭಾವದ ಹಿಂದೆ ಇದ್ದಂತಹ ಸಂವೇದನೆ ಏನು? ಇದು ಗೊತ್ತಿದ್ದವ ನೀನೆ. ಕೇಳಿದೆಯಾ ಕರ್ಣ- ಇದು ಧರ್ಮರಾಯನ ಕೊಡುಗೆ, ನಾನು ಮಾಡಿದ ಸರ್ವಾಪರಾಧವನ್ನೂ ಧರ್ಮರಾಯ ಮನ್ನಿಸಿ ತನ್ನದ್ದಾದಂತಹ ಹಿರಿತನದ ಒತ್ತಡವನ್ನು ತಮ್ಮಂದಿರಲ್ಲಿ ಹೇರಿಸಿ, ಒಂದು ಬಲತ್ಕಾರವಾದಂತಹ ಸಂಧಿ! ಹೇಳುತ್ತಿರುವವನು ಕೃಷ್ಣ ಕೃಷ್ಣ ಏನೂ ಅಂತ ತಿಳಿಯುವುದಕ್ಕೆ ಕಷ್ಟ ಆದರೆ ಕೃಷ್ಣನನ್ನು ಓರ್ವ ರಾಯಭಾರಿಯಾಗಿ ಅಂತ ನಾವಂಗೀಕರಿಸಿದರೆ, ರಾಯಭಾರಿಯಾದವನಿಗೆ ಈ ಕೊಡುಗೆ, ಅವನ ಅಧಿಕಾರವ್ಯಾಪ್ತಿಯ ಹೊರಗಿನದು. ಆದಕಾರಣ, ಧರ್ಮರಾಯನ ಅನಿಸಿಕೆಯೆನೋ ಸತ್ಯ ಇದ್ದಹುದು. ಆದರೆ ರಾಜಕೀಯದ ಭದ್ರತೆಗೆ ಅಥವಾ ನಮ್ಮ ಉಳಿಯುವಿಕೆಗೆ ಈ ತೇಲುವ ಮಾತು ಸಾಕಾಗುವುದಿಲ್ಲ. ಸಾಲದಲ್ಲ? ಹಾಗಿದ್ರೆ ಹೀಗ್ ಮಾಡೋಣ.

ದೇಶವನ್ನು ಯಾರ್ ಆಳ್‌ಬೇಕು? ಎಂಬ ರಾಜಕೀಯ ಪ್ರಜ್ಞೆಯಿಂದ ಹೊರಗೆ ಹೋಗಿ, ಒಂದು ಮನೆತನದಲ್ಲಿ ಹುಟ್ಟಿದಂತಹ ಅಣ್ಣತಮ್ಮಂದಿರು ಹೇಗೆ ಒಕ್ಕೂಟದಿಂದ ಬಾಳಬೇಕು ಎಂಬಲ್ಲಿಗೆ ಬಂದಾವಾಗ, ಇದು ನಮ್ಮ ಕೌಟುಂಬಿಕವಾದ ಅಥವಾ ಮತಪರವಾದಂತಹ ಸಂಸ್ಕೃತಿಗೇ ಇಲ್ಲಿ ಹೆಚ್ಚು ಸ್ಥಾನವನ್ನು ಕೃಷ್ಣ ಕಲ್ಪಿಸಿಕೊಟ್ಟಹಾಗ್ ಆಗ್ತದೆ. ಅದ್ಕೆ ಹೀಗೆ ಮಾಡೋಣ. ಈ ರಾಯಭಾರಿಯಾದಂಥ ಕೃಷ್ಣ ಅಲ್ಲ ಇದನ್ನ ಇತ್ಯರ್ಥ ಮಾಡಬೇಕಾದನ್ನು ಅಥವಾ ಇದು ರಾಜಸಭೆಯಲ್ಲಿ ಅರ್ಥಶಾಸ್ತ್ರದ ಒಳಗೆ

ಆಗ್ಬೇಕಾದ್ದಲ್ಲ. ಇದು ವಯಕ್ತಿಕ ಅಲ್ಲವೇ? ಯಾವ ನಮ್ಮ ತಂದೆಯ ಹೇಳಿಕೆಯಂತೇ ಯುಧಿಷ್ಠಿರನೇ ಮುಂದಾಳು ಆಗಿ ಬಂದು ದ್ಯೂತವನ್ನಾಡಿ ಕಳಕೊಂಡಿದ್ದಾನೆ. ಅಂತಹ ಧರ್ಮರಾಯನಲ್ಲಿ, ಸಭೆಯಲ್ಲಿ ನಮ್ಮಪ್ಪ ಕ್ಷಮಾಯಾಚನೆ ಮಾಡಿದ್ದಾನೆ. ಆದದ್ದನ್ನೆಲ್ಲ ಮರೆತುಬಿಡಬೇಕು ಅಂತ. ಆದರೆ ಮರೆತ ಹಾಗೆ ಪಾಂಡವರ ನಡೆಯಿಂದಲೂ ಸ್ಪಷ್ಟ ಅಲ್ಲ

ನುಡಿಯಿಂದಲೂ ಸ್ಪಷ್ಟ ಅಲ್ಲ. ಹೀಗೆ ಮಾಡಿದ್ರೇನು? ಯುಧಿಷ್ಠಿರನೇ ಬಲ್ಲಿ 'ಕಟ್ಟೆ' ಅಂತ ನನ್ನ ಅಪ್ಪನಲ್ಲಿ ಹೇಳ್ಳಿ ಮುಂದೇನುಬೇಕು? ಮುಂದೆ ಆಲೋಚೆ ಮಾಡೋಣ.

ಆದರೆ ವಿಷಯ ಹಾಗಲ್ಲ, ಪಾಂಡವರು ಯುದ್ಧಕ್ಕೆ ಹೆದರಿದ್ದಾರೆ. ಹೇಗಾದರೂ ಮಾಡಿ ಈ ಕಳ್ಳನ ಮಧ್ಯಸ್ಥಿಕೆಯಲ್ಲಿ ರಾಜ್ಯವನ್ನು ಕಬಳಿಸೋಣ ಅಂತ ಯೋಚಿಸಿ ಈ ಚೋರಶಿಕಾಮಣಿಯನ್ನು ಇಲ್ಲಿಗೆ ಅಟ್ಟಿದ್ದಾರೆ. ಹಾಗಲ್ಲದಿದ್ರೆ ಮತ್ತೇನು?

ಕೃಷ್ಣಾ, ಸದ್ಯ ಇಷ್ಟೇ ವಿಚಾರ ಅಂತಾದ್ರೆ ಸಧ್ಯದ ಈ ರಾಯಭಾರಿತ್ವದ ಸಭಾ ವಿಸರ್ಜನೆ ಮಾಡಬಹುದು ಅಂತ ನನಗನ್ನಿಸ್ತದೆ. ಕೃಷ್ಣಾ ನನ್ನಲ್ಲಿ ಭಯವನ್ನು ಹುಟ್ಟಿಸುವದಕ್ಕಿಂದ್ದಂತಹ ಯತ್ನವೋ ಇದು. ಒಂದು ಮಟ್ಟಿಗೆ ಮೆಚ್ಚೇನೆ ನಾನು ನಿನ್ನನ್ನ ಯಾವುದಕ್ಕೆ? ಅಪ್ರಿಯವಾದಂತಹ ಸತ್ಯವನ್ನು, ನಿನ್ನದ್ದಾದಂತಹ ವೈಖರಿಯಲ್ಲಿ ಪ್ರಿಯವಾಗಿ ಮಂಡಿಸುವಲ್ಲಿ ಸಮರ್ಥ.

ಕೃಷ್ಣಾ, ನನ್ನ ಪೆಟ್ಟಿಗೆಯಲ್ಲಿದ್ದ ನಾಣ್ಯಕ್ಕೆ ಮೌಲ್ಯ ನೀನ್ಯಾಕೆ ಕಲ್ಪಿಸ್ತೀ. ಈ ಭೀಮನನ್ನು ನಾನು ಅರಿಯದವನೇ? ಅರ್ಜುನನ್ನು ನಾನು ತಿಳಿಯದವನೇ? ಈ ಹದಿಮೂರುವರ್ಷದಲ್ಲಿ ನನ್ನ ಶತ್ರುಗಳು ಏನೇನು ಸಂಗ್ರಹ ಮಾಡಿದ್ದಾರೆ ಎಂಬುದನ್ನು ನಾನು ತಿಳಿಯದವನೇ. ಮಾವ ಮೊದಲಲಿ ಆ ವಿರಾಟನ ಸಖ್ಯ ಕೊನೆಯಲಿ ಎಂಬುದನ್ನು ನಾನು ಬಲ್ಲೆ. ಕೃಷ್ಣಾ, ನಮ್ಮ ಮನೆಯವರೇ ಹೊರಗಿನವರೊಡನೆ ಕೂಡಿ ಅವರ ಷಡ್ಯಂತ್ರಕ್ಕೆ ಇವರು ಅಧೀನರಾಗಿ ತಾವು ಹುಟ್ಟಿದ ಮನೆಗೆ ಕಲ್ಲು ಹೊಡೆಯುವಾಗ ಮನೆಯಲ್ಲಿದ್ದವರು ಅವರಲ್ಲಿ ಸಂಧಿ ಮಾಡಲಿಕ್ಕೆ ಆಗುದಿಲ್ಲ. ಹೌದೆನೋ? ನೀನು ನನಗೆ ಪಾಂಡವರ ದ್ವಾರಾ ಯಮನ ಮನೆಯನ್ನು ತೋರಿಸುತ್ತಿಯೋ? ನಾನೇನು ಚಿರಂಜೀವಿ ಅಂತ ತಿಳಿಕೊಂಡಿದ್ದೇನೋ? ಇಲ್ಲ. ಸಾಯ್ತಿಯೆ ಅಂತ ಭಯ ಹುಟ್ಟಿಸಿದರೆ ಕ್ಷತ್ರಿಯ ಕುಮಾರನಾದ ನನಗೆ ಆವೇಶ ತುಂಬೀತೇ ಹೊರತು ಭಯ ಬೀಳುವುದಕ್ಕೆ ನಾನೇನು ಬ್ರಾಹ್ಮಣರಿಗೆ ಹುಟ್ಟಿದವನೋ! ನಮ್ಮ ಈಡೀ ಅಧಿಷ್ಠಾನ ಇರುವುದು ಭೂಮಿ; ನಾವು ಭೂಭುಜರು, ಭೂಮಿ ಇದ್ದರೆ ನಾವಿದ್ದೇವೆ. ಹಾಗಿರುವಾಗ "ಧರಣಿಗೋಸುಗ ಬಳಗ ಸಹಿತಲಿ ನಡೆಯ ಬೇಡ ಕೃತಾಂತನಲ್ಲಿಗೆ" ಅಂತ ದೌಮ್ಯಾದಿ ಋಷಿಗಳ ಹಾಗೆ ನೀನು ಉಪದೇಶ ಮಾಡ್ತಿಯಲ್ಲ. ಅದೆಲ್ಲ ನನ್ನಲ್ಲಿ ನಡೆಯಲಿಕ್ಕಿಲ್ಲ. ಈಗ ಕೊನೇಗೆ ಏನೂ ಹೇಳದೀ? "ಬಿಡು ಬಿಡೆಲವೋ... ಅರ್ಧ ರಾಜ್ಯವನ್ನು ಐದು ಗ್ರಾಮದಲ್ಲಿ ಸಂಗ್ರಹಿಸಲಿಕ್ಕೆ ಹೊರಟ್ಟಿದ್ದೀ. ನಾವಿಲ್ಲಿ ನೂರುಜನ ಇದ್ದೇವೆ. ನಮಗೆ ನೂರು ಗ್ರಾಮವನ್ನು

ಧರ್ಮರಾಜ ವಿಂಗಡಿಸಿಕೊಟ್ಟು ಉಳಿದ ಐದು ತೆಕ್ಕೊಳ್ಳಲಿ. ಅಷ್ಟು ಗ್ರಾಮವೇ ಇಲ್ಲಿ ಇಲ್ಲ. ಈ ಸವಕಲು ನಾಣ್ಯ ನಿಮ್ಮ ಗೊಲ್ಲರ ಕೇರಿಯಲ್ಲಿ ನಡೆದೀತು.

ಹ್ಞ .. ಕೃಷ್ಣ, ಬೌದ್ಧಿಕವಾದಂತಹ ಹಲ್ಲೆಗೆ ನನ್ನ ಬುದ್ಧಿಯನ್ನು ನಾನು ಪ್ರತಿಸ್ಪರ್ಧಿಯ ಸ್ಥಾನದಲ್ಲಿ ನಿಲ್ಲಿಸಬಲ್ಲೆ ನಿನ್ನಲ್ಲಿ. ಆದರೆ, ಆದರೆ, ಶಾಖೋಪಶಾಖವಾಗಿ ಹೋಗುತ್ತಿರುವ ಕೆಲವು ನಿನ್ನ ಮಂಡನೆ ಇದೆಯಲ್ಲ..... ನನ್ನ ಅಭಿಪ್ರಾಯದಲ್ಲಿ, ಬದರಿಕಾಶ್ರಮದಲ್ಲಿ ಯಾರನ್ನು ಉದ್ಘಾಟಿಸಬೇಕಿತ್ತೋ, ಅವರನ್ನು ನೀನು ರಾಜಕೀಯ ವೇದಿಕೆಯಲ್ಲಿ ಉದ್ಘಾಟನೆ ಮಾಡುತ್ತಾ ಇದ್ದೀ ಆರೋಗ್ಯವಾಗಿ ಹಿಂದೆ ಹೋಗಬೇಕು ಎಂಬ ಆಸೆ ಇದೆಯೋ ನಿನಗೆ? ನನಗೆ ದಾರಿ ಯಮಲೋಕದವರೆಗೆ ತೋರಿಸಿದೆಯಲ್ಲ? ನಾನು ಉಪಪ್ಲಾವ್ಯದವರೆಗೆ ನೀನು ಸುಕ್ಷೇಮವಾಗಿ ಹೋಗಬೇಕಂತ ಬಯಸುವವ. ಹೋಗದಿದ್ರೆ.. ಎಲವೆಲವೋ ಮುರಾರಿ...

ಪಂಚಾಗತಿ-ಮಟ್ಟಿ ನಡೆಯಲೋ ಮುರಾರಿ ಸುಖದೊಳು | ಸಲುಗೆ ಮಾತನಾಡಿ ಪೆಟ್ಟ

ತಿನ್ನದೆನ್ನೊಳು ನೀನು ಬೇಡಿದ್ರೈದುಗ್ರಾಮದಿ ಒಂದನಾದರಾನುಕೊಡುವನಲ್ಲ ಸಾಮದಿ || ೧೨೮ |

ನಿನ್ನಂತವರಿಗೆ ಒಂದು ಸಲ ಹೇಳಿದರೆ ಸಾಕಾಗೋದಿಲ್ಲ. ಅದಕ್ಕೆ ಬೇಕಾದ್ದು ಮೂರಾವರ್ತಿ. ನಡೆಯಲೂ ನಡೆಯಲೂ ನಡೆಯಲೊ. ಯಾಕೆ? ನಿನ್ನ ಈ ದುಷ್ಟರಾಜಕಾರಣ ಉಂಟಲ್ಲ ಈ ಬೀದಿರಾಜಕೀಯ; ಮತ್ತೊಬ್ಬನ ಖರ್ಚಿನ ವೇದಿಕೆಯಲ್ಲಿ ನಿನ್ನದ್ದಾದಂತಹ ಉಪನ್ಯಾಸವನ್ನು ಮಾಡಿ, ನಮ್ಮ ಜಾಗದಲ್ಲಿ ನಮ್ಮನ್ನೇ ಭ್ರಷ್ಟಾಚಾರದ ತುತ್ತ ತುದಿಗೆ ಏರಿಸುವ ನಿನ್ನ ಚಾಕಚಕ್ಯತೆಯಿಲ್ಲ ಇದು ನಿನ್ನ ಗೊಲ್ಲರ ಕೇರಿಯಲ್ಲಿ ಇಲ್ಲಿ ನಡೆಯೋದಿಲ್ಲ. ಏನೋ ಭಾಗ್ಯದಿಂದ ಚಂದ್ರವಂಶದ ರತ್ನಸಿಹಾಂಸನಕ್ಕೆ ಇಷ್ಟರವರೆಗೆ ದನಕಾಯುವವರು ಬರಲಿಲ್ಲ. ಜನ ಕಾಯುವವರೇ ಬಂದಿದ್ದಾರೆ. ಏನು ಮಾಡೋಣ. ಎಷ್ಟು ಎತ್ತರಕ್ಕೆ ಹಾರುತ್ತಾನೆ ಪಕ್ಷಿ ರಾಜ ಹ್ಞ , ಆ ಕೊಳೆತ ಪ್ರಾಣಿ ಎಲ್ಲಿ ಉಂಟು ಅಂತ ನೋಡ್ತಾನೆ. ಇಷ್ಟು ಸಣ್ಣತನದಿಂದ ನೀನು ನನ್ನಲ್ಲಿ ವ್ಯವಹರಿಸಲಿಕ್ಕೆ ಬಂದಿದ್ದೆಯಲ್ಲಾ. ಆದ್ದರಿಂದ - ನೀನು ಬೇಡಿದ ಐದು ಗ್ರಾಮದಿ ಒಂದನಾದರಾನುಕೊಡುವನಲ್ಲ ಸಾಮದಿ ಅಂದರೆ ಅರ್ಥಾಯೊ? ಯಾರಿಗೆ ಬೇಕು ಅವರು ಯುದ್ಧ ಮಾಡಿ ಪಡಕೊಳ್ಳತಕ್ಕದ್ದು ಅಥವಾ ಅವರು ಮಾಡುವದಿಲ್ಲವೊ ಸಂಧಾನಕ್ಕೆ ಬಂದ ನೀನಾದರೂ ಸರಿ, ಸಂಪೂರ್ಣ ತೆಕ್ಕೊಂಡು ಹೋಗಬೇಕು. ಅದು ನನ್ನ ಛಲ. ಅಂದು ಮೂರು ಅಡಿ ನೆಲವ ಬೇಡಿದ ಅವನೋ ನೀನೋ ನನಗೆ ಮುಖ್ಯ ವಿಷಯವಲ್ಲ. ಆದರೆ ನಮಗೆ ಅದರಿಂದ ರಾಜಕೀಯ ಪಾಠ ಸಿಕ್ಕದೆ. ಏನು? ವಟುವಾಗಿ ಬಂದವನಿಗೆ ಮೂರಡಿ ನೆಲವನ್ನು ಕೊಡೇನೆ ಅಂತ ವಾಗ್ದಾನ ಕೊಟ್ಟರೆ ಅವನು ಒಂದು ಪಕ್ಷದ ನೇತಾರನಾಗಿ ಬಂದು ಇವನನ್ನು ಪಾತಾಳಕ್ಕೆ ಇಳಿಸಿದ್ದಾನೆ. ಆದ್ದರಿಂದ ಐದು ಗ್ರಾಮ ಅಲ್ಲ ಸೂಜಿಯ ಮೊನೆ ಊರುವ ಸ್ಥಳವನ್ನು ನಾನು ಬದುಕಿ ಕೊಟ್ಟೇನು ಬಿಟ್ಟೇನು ಅಂತ ನೀನು ಸ್ವಪ್ನಪಿ ತಿಳಿಯಬೇಡ.

ಕೃಷ್ಣಾ, ಹಗಲನ್ನು ಕತ್ತಲಾಗಿಸಿ, ಕತ್ತಲನ್ನು ಹಗಲಾಗಿಸಿ, ಜನ್ರಿಗೆ ತೋರಿಸುವುದಕ್ಕೆ ನಿನ್ನ ಇಂದ್ರಜಾಲ ಅದನ್ನ ನಾನು ಮೆಚ್ತೇನೆ. ಬಹುಷ: ಇದಕ್ಕೇ ಇರಬೇಕು 'ಅಘಟಿತಘಟನಾಪಟು' ಭೂಮಿಗಿಳಿದುಬಂದ ಕೃಷ್ಣ 'ಕೃಷ್ಣಸ್ತು ಭಗವಾನ್ ಸ್ವಯಂ' ಅನ್ನುವವರ ಭಾವನೆ. ಅದ್ರಮೇಲೆ ನನ್ನ ಯಾವ ಆಕ್ಷೇಪವೂ ಇಲ್ಲ. ಆದರೆ ಅರಸುಮಕ್ಕಳ ಜಗಳ ಇದು. ಅದಕ್ಕೆ ಮಹತ್ವಕೊಡಬೇಕಾದ್ದು ಭೂಭುಜರು ಕ್ಷತ್ರಿಯರು, ಹಂ. "ಬಿಡು ನೆಲನ" ಅಯ್ಯಾ, ಭೂಮಿಯನ್ನು ಅನುಭವಿಸುವುದಕ್ಕೆ ಬೇಕಾಗಿಯೇ ಹಿನ್ನೆಲೆಯುಳ್ಳವರಾಗಿ ಹುಟ್ಟಿಕೊಂಡಂತಹ ನಮಗೆ ರಾಜಕೀಯ ಕ್ಷೇತ್ರಬಿಟ್ರೆ ಬೇರೆ ಯಾವ ಕ್ಷೇತ್ರ ತೋರಿಸ್ತೀ? ಬುದ್ಧಿವಂತ! ನಮಗೆ ಯಮನಲೋಕ ತೋರಿಸ್ತಿ ಮಾತಿನಲ್ಲಿ ಹಿಮಾಲಯದ ತಪ್ಪಲನ್ನು ತೋರಿಸ್ತಿ. ಇದ್ದಹುದು ಸಲುಗೆ, ನಿನ್ನ ವ್ಯಕ್ತಿತ್ವಕ್ಕೆ, ನಿನ್ನ ಮೇಧಾಶಕ್ತಿಗೆ ಇದು ಸಣ್ಣ ವಿಷಯ ಇರಬಹುದು. ಹ್ಣೇಳ್ತಿ "ಛಲಬಿಡು. ಕೇಡುಗರ ನುಡಿಗೆ ಒಡಂಬಡದಿರು", ಅಯ್ಯಾ- ಅಂದಿನಿಂದ ಇಂದಿನವರೆಗೆ ಶತ್ರು ದಮನಕ್ಕೆ ಬೇಕಾಗಿ, ಪ್ರತ್ಯಕ್ಷವಾಗಿ ದುಡಿದಂತಹ ವ್ಯಕ್ತಿ ಸುಯೋಧನ. ಪಾಂಡವರ ಪ್ರತಿಜ್ಞೆಯಲ್ಲಾದರೂ ಏನಿದೆ? ಭೀಮ ಹೇಳಿದ್ದೇನು? ಅರ್ಜುನ ಆಡಿದ್ದೇನು? ಮರಣ! ಇದು ನಮಗೆ ತೃಣ ಸಮಾನ ಕೇಳುವವರಿಗೆ ಗಂಭೀರವಾಗಿ ಹೇಳಿದೆ, ಏನು ಕೊಡುಗೆ ಯುಧಿಷ್ಠಿರನದು? ಐದು ಗ್ರಾಮವಾದರೂ ಸಾಕು, ಸಾಕು. ಪರ್ಯಾಯದಿಂದ ಇದು ಇರ್ಬೇಕು ಪ್ರಚಾರ. "ಭೂಮಿಯ ಲೋಭ ಇದೆ ಕೌರವನಿಗೆ!" ಅಯ್ಯಾ, ಸೂಕ್ಷ್ಮಬುದ್ಧಿ ಇದ್ದವರಿಗೆ ಅರ್ಥವಾಗ್ತಿದೆ. ಕೌರವನಿಗೆ ಲೋಭ ಇದ್ದರೆ, ಅಖಂಡಭಾರತವರ್ಷ, ಆಸೇತುಹಿಮಾಚಲ ಏಕಾಧಿಪತ್ಯ... ಧರ್ಮರಾಯನಿಗೆ ತಾನೆ ಒಂದು ಗ್ರಾಮ ಸಿಕ್ಕಿದರೂ ಸಾಕು. ಹ್ಣ , ಅಯ್ಯಾ, ಬಯಸಿದರೆ ಮೃಷ್ಟಾನ್ನಭೋಜನಬೇಕು ಅನ್ನುವವನನ್ನು ಹೊಟ್ಟೆಬಾಕನನ್ನಾಗಿ ಚಿತ್ರಿಸಿ, ಸಿಕ್ಕದ್ದು ಸಾಕು; ಹಳತದ್ದೂ-ಕೊಳತದ್ದೂ ಎನ್ನುವವನನ್ನು, ನೀನು ಎತ್ತರಿಸ್ತೀ! ನನ್ನ ಭಾಷೆಯಲ್ಲಿ ಹೇಳೋದಿದ್ರೆ ಅವ ಹೊಟ್ಟೆಬಾಕ.

ಚಿಂತಿಲ್ಲ ನೀನ್ಹೇಳಿದ್ದನ್ನು ಪ್ರಪಂಚ ಒಪ್ತದೆ. ಬಹುಸಂಖ್ಯಾತರು ಬುದ್ಧಿ ಇಲ್ಲದೇ ಇದ್ದವರಾದರೂ, ಯಾದವರು, ಗೊಲ್ಲರು, ಗೋಪಾಲಕರು. ಈ ದೃಷ್ಟಿಯಿಂದ ನೋಡಿದರೆ ಶ್ರೀಕೃಷ್ಣನಿಗೆ ಈ ಹೊತ್ತು ಬೆಂಬಲ ಹೆಚ್ಚು. ಆದ್ರೆ ಕೃಷ್ಣಾ, ಹಷ್ಣ. ಸಲುಗೆ ಆಡ್ತಿಯಲ್ಲ? ನನ್ಗೆ ಆ ಸಲುಗೆ ಬರೂದಿಲ್ಲ, ನಿನಗೆ ಗೊತ್ತು. ನನ್ನ ಜಾಯಮಾನವೇ ಅದು?

ಮತ್ತೊಮ್ಮೆ ನನ್ನ ನೀನು ಕೆರಳಿಸುತ್ತೀ ಅಂತಾದರೆ, ನಾನು ನಿನ್ನ ಮೈ ಮೇಲೆ ಓರ್ವ ರಾಜಕಾರಣಿಯಾಗಿ ಏನು ಮಾಡಬೇಕೋ ಅದನ್ನು ಮಾಡಬೇಕಾಗ್ತದೆ. ಸಲಿಗೆಯನ್ನು ಮುಂದಿಟ್ಟು, ಅಪವಾದದ ಹೊರೆಯನ್ನು ಹಸ್ತಿನಾವತಿಯ ಅರಸುಮಕ್ಕಳ ತಲೆಯಲ್ಲಿ ಹೊರಿಸುವುದಕ್ಕೆ ದಯವಿಟ್ಟು ಯತ್ನಿಸದೆ... ಈ ಶೈಲಿ, ಈ ನಿನ್ನ ಧಾಟಿ, ಇದನ್ನು ಕಂಡು, ಕೇಳಿ, ಸಂತೋಷಪಡುವ ಒಂದು ವರ್ಗ ಉಂಟು. ಅಂಥವರು ಇಲ್ಲಿಲ್ಲ ಅದೆಲ್ಲ ಇಲ್ಯಾಕಯ್ಯಾ?... ಆದಕಾರಣ ಮುಖಮುದುಡಿಸಿಕೊಂಡು ಗಂಭೀರದಿಂದ ನಿನ್ನನ್ನು ನಾನು ಮೌನಸ್ವಾಗತ ಮಾಡಿದ ಪರಿಮಾರ್ಜನೆ ಮಾಡಿಕೊಳ್ಳುವುದಕ್ಕೆ, ಕೊನೆಯಲ್ಲಿ

ಒಳ್ಳೆಯ ಮಾತಿನಿಂದ ನಿನ್ನನ್ನು ಬೀಳ್ಕೊಡುತ್ತೇನೆ. ದಯವಿಟ್ಟು ಮಾತು ನಿಲ್ಲಿಸಿ ನೀನಾಗಿ ಹೊರಟು ಹೋಗ್ತಿಯೋ ಅಲ್ಲಾ ನಾವು ಹೊರಡಿಸುವಲ್ಲಿಯವರೆಗೆ ನಮ್ಮನ್ನು ದುಡುಕಿಸುತ್ತೀಯೊ?

ಸಾಕ್ ಮಾಡು, ಮುಗಿದರೆ ಹೊರಟು ಹೋಗು, ಹೊರಟುಹೋಗೋದಿಲ್ವೋ ನನ್ನ ಮನೆ ಒಳಗೆ ಹೋಗಲಿಕ್ಕೆ ನನಗೆ ನಿನ್ನ ಅಪ್ಪಣೆ ಬೇಕಾಗಿಲ್ಲ. ಸಭಾ ವಿಸರ್ಜಿಸುವುದಕ್ಕೆ ನಾನು ಮತ್ತೊಬ್ಬರಲ್ಲಿ ಕೇಳೋದಿಲ್ಲ. ಕೌರವನು ಬಯಸುವದು ಮತ್ತೊಬ್ಬರ ದೇಣಿಗೆಯಾಗಿ ಬಂದಂತಹ ಆಡಳಿತವನ್ನು ಅಲ್ಲ. ಇನ್ನೊಬ್ಬರ ಭಿಕ್ಷೆಗೆ ನಾನು ಕೈಚಾಚಿದವನಲ್ಲ. ಅಥವಾ ಒಂದು ಅವಧಿ ನಿರ್ಣಯದೊಳಗೆ ನಾನು ರಾಜನಾಗಿದ್ದೇನೆ ಅಂತ ಬಯಸಿದವನೂ ಅಲ್ಲ. ಇದಕ್ಕಿಂತ ಹೆಚ್ಚಿಗೆ ಮಾತಿಲ್ಲ.

ಭಾನುಮತೀ, ನಿನ್ನನ್ನು ಆಕ್ಷೇಪಿಸುವುದಕ್ಕೆ ನನ್ನ ಹೃದಯ ಒಪ್ಪುವುದಿಲ್ಲ. ಒಪ್ಪಿಕೊಳ್ಳುವುದಕ್ಕೆ ನನ್ನ ವ್ಯಕ್ತಿತ್ವ ಸಿದ್ಧವಾಗುವುದಿಲ್ಲ. ಇದು ಕೇವಲ ನಮ್ಮ ದಾಂಪತ್ಯಕ್ಕೆ ಮೀಸಲಾದ ಸಮಸ್ಯೆಯೇನೂ ಅಲ್ಲ. ಇನ್ನೂ ಒಂದು ಹೇಳ್ತೇನೆ. ಅತಿ ಭಾವುಕತೆ ನನಗೆ ಸಲ್ಲದು. ಕೃಷ್ಣನದ್ದಾದಂತಹ ವಿಶ್ವರೂಪವನ್ನು ನೀವೆಲ್ಲ ಕಂಡಿದ್ದೀರಿ ಎಂತ್ಹೇಳಿದ ಮೇಲೆ ನಾನು ಕಾಣಬೇಕು ಎಂಬ ಹಠ ನನ್ನದೇನೂ ಇಲ್ಲ. ಸತ್ಯವೇ ಇರಬಹುದು. ಆದರೆ ಒಂದು, ಹ್ಹಹ, ದ್ರೌಪದಿಯೂ ಅಲ್ಲಿ ಅಭಿಪ್ರಾಯ ಮಂಡನೆಗೆ ಅರ್ಹತೆಯನ್ನು ಪಡೆದಿದ್ದಾಳೆ. ನಿನ್ಗೂ ಆ ಸ್ಥಾನ ಇಲ್ಲಾಂತ ಅಲ್ಲ. ಆದರೆ, ಏನು ಮಾಡೋಣ ಹೇಳು. ಪಾಂಚಾಲಿಗೆ ಅವಳ ಅತ್ತೆಯಾದಂತಹ ಕುಂತೀದೇವಿಯಿಂದ ಸಿಕ್ಕಿದ ಮಾರ್ಗದರ್ಶನ ನನ್ನ ಅಮ್ಮನಿಂದ ನಿನಗೆ ಸಿಕ್ಕಿಲ್ಲ. ಸದ್ಯ ಅಷ್ಟೇ ಹೇಳ್ತಾ ಇದ್ದೇನೆ ಆದ್ದರಿಂದ ನನ್ನನ್ನು ತಡೆಯದಿರು... ನೀನು ಮನಃಕಷಾಯವನ್ನು ತಂದುಕೊಳ್ಳುವುದು ಬೇಡ. ಒಳಸರಿ.

|*ಸೌರಾಷ್ಟ್ರ-ತ್ರಿವುಡೆ*| *ಎನೆ ಧರಾಧಿಪ ನುಡಿದನರಿತಿಹೆ ಧನುಜರಿದು ನೀನಿಳೆಯ ಭಾರವ*

ತೊನೆಯಲವತರಿಸಿರುವ ಮಾಯಾ | ಮನುಜನೆಂದು || ೧೨೯ ||

ಕೃಷ್ಣಾ, ನನಗೊಂದು ತತ್ತ್ವ ಉಂಟು. ಭೂಮಿಗಿಳಿದು ಬಂದತಹ ಭಗವಂತನಿಗೆ ಹರಕೆ ಕೊಟ್ಟು ಅವನ ಡಬ್ಬಿಗೆ ಕಾಣಿಕೆ ಹಾಕಿ ಸಿಂಹಾಸನವನ್ನು ಉಳಿಸಿಕೊಳ್ಳುವ ರಾಜಕಾರಣಿ ಅಲ್ಲ ನಾನು. ಕೃಷ್ಣಾ, ನಾವೆಲ್ಲಾ ಜೀವರು. ಜೀವರದ್ದಾದ ವ್ಯಾಪ್ತಿಗೆ ಇತಿಯಿದೆ ಮಿತಿಯಿದೆ. ನನ್ನ ನಿಲುಮೆ ಭದ್ರವಾದದ್ದು. ಇದು ಇಂದು ನಿನ್ನೆಯದಲ್ಲ. ಯಾವಾಗ ನನ್ಗೆ ಬುದ್ಧಿ ಬೆಳೆದು ಬಂದದೆ, ಅಂದಿನಿಂದ ಪಾಂಡವ ವಿರೋಧ ಅಲ್ಲ, ನೀನೂ ಯಾಕೆ ಆ ಶಬ್ದವನ್ನೇ ಉಪಯೋಗಿಸ್ತಿ? ಅಧಿಕಾರದ ಆಸೆ, ಪ್ರಾಮಾಣಿಕವಾಗಿ ಒಪ್ಪಿಕೊಳೇನೆ. ನಾನು ತಿಳ್ದಂತೆ ಹಸ್ತಿನಾವತಿಯ ರತ್ನಸಿಂಹಾಸನದ ಚಕ್ರವರ್ತಿತ್ವ ಅದು ಒಂದು ವ್ಯಕ್ತಿಗೆ ಮೀಸಲು, ವಿಭಜಿಸಿ ಉಳಿದ ಕಥೆ ನನಗೆ ನೆನ್ನಿಲ್ಲ. ಏನು ಮಾಡೋಣ? ಪಿತಾಮಹರಾದಂತಹ ವಿಚಿತ್ರವೀರ್ಯರು

ಅಕಾಲ ಮೃತ್ಯುವಿಗೆ ತುತ್ತಾದಾಗ, ನಮ್ಮಜ್ಜ ಭೀಷ್ಮಾಚಾರ್ಯರು ಕೈಗೊಂಡ ವೃತವನ್ನೇ ಎತ್ತಿ ಹಿಡಿದಾಗ, ಅಧಿಕಾರಕ್ಕೆ ಬೇಕಾಗಿ, ಗೊತ್ತಲ್ಲ ನಿನಗೆ? ಅಂಬಿಕೆ ಅಂಬಾಲಿಕೆಯರಂತಹ ವೃದ್ಧೆಯರಿಗೆ, ನನ್ನ ದೃಷ್ಟಿಯಲ್ಲಿ ವೃದ್ಧೆಯರು- ಭಗವಾನ್ ವ್ಯಾಸರ ಮೂಲಕವಾಗಿ ನಿಯೋಗವಿಧಿಯಿಂದ ಸಂತಾನ ಉತ್ಪತ್ತಿಮಾಡಬೇಕಾಯಿತು.

ನಮ್ಮ ತಂದೆಯವರು ಒಂದು ದೋಷಕ್ಕೆ ಅಧೀನರಾದರು. ಆಮೇಲೆ ನಮ್ಮ ಚಿಕ್ಕಪ್ಪ, ಆತನಿಗೂ ಅಧಿಕಾರ ವ್ಯಾಪ್ತಿಯಲ್ಲಿ ಒಂದು ದೋಷ ಬಂತು. ಇದಕ್ಕಾಗಿ ತಾನೇ ವಿದುರನ ಜನ್ಮವಾದದ್ದು? ವ್ಯಾಸರೇ ಹೇಳಿದ್ದಾರಂತೆ. "ಧೃತರಾಷ್ಟ್ರ ಅಂಗಹೀನ, ಪಾಂಡು ರೋಗಿ, ವಿದುರ ಕ್ಷೇತ್ರದೋಷಿ".

ಹಾಗಾದ್ರೆ ಅಂದು ನಮ್ಮ ಉದ್ದೇಶ ಏನಿತ್ತು ಹಿರಿಯರದ್ದು ಆ 'ಏಕಸಾಮ್ರಾಜ್ಯ', ಅದಾಗ್ಲಿಲ್ಲ. ಆವಾಗ್ಗ ಒಂದು ಒಪ್ಪಂದ ಮಾಡಿದ್ರು, ಭೀಷ್ಮಾಚಾರ್ಯರು- ನಮ್ಮ ತಂದೆಯವು ಒಪ್ಪಿಸಿಕೊಳ್ಳಲು ಹೊರಗಿನ ವ್ಯವಹಾರವನ್ನು ಚಿಕ್ಕಪ್ಪ ಪಾಂಡು ಮಾಡ್ಲಿ, ಸಲಹೆಗಾರನಾಗಿ ವಿದುರ ಬಲ್ಲಿ. ಹಾಗಾದ್ರೆ ಅಂದು ಯಾವ ಉದ್ದೇಶದಿಂದ, ಈ ಸಂತಾನದ ಉತ್ಪತ್ತಿಯಾಯ್ತೋ ಆ ಉದ್ದೇಶ ಪೂರ್ಣ ಫಲಕಾರಿಯಾಗಲಿಲ್ಲ ಇದನ್ನು ತಿಳಿದ ನಾನು, 'ನಾನೇ ರಾಜನಾಗ್ಬೇಕು ಅಂತ ಹೊರಟವ. ಯುಧಿಷ್ಠಿರನಿಗೆ ಆ ಉದ್ದೇಶ ಇಲ್ಲದೇ ಇರ್ಬಹುದು. ಆದರೆ ಆ ನನ್ನ ಅಖಂಡವಾದಂತಹ ಅಧಿಕಾರದವ್ಯಾಪ್ತಿಗೆ ನನ್ನ ಅಣ್ಣನೇ ಇರಲಿ, ತಮ್ಮನೇ ಇರಲಿ, ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕೇ ಇರಲಿ ನನಗೆ ಅಡ್ಡಗಾಲಿಡ್ತಾರೆ ಅಂತಾದ್ರೆ ಅವರೂ ನನ್ನ ವಿರೋಧಿಗಳೇ ಅಂತ ನನ್ನ ಭಾವನೆ. ಇದು ನನ್ನ ರಾಜಕೀಯ ಪ್ರಜ್ಞೆ, ಆದ್ರಿಂದ್ದೇ ನಾನ್ಹೇಳಿರೋದು ಆದದ್ದನ್ನು ಮರೆಯೋಣ ಆಗಬೇಕಾದದ್ದು ಹೀಗೆ, ಹೇಗೆ? ಪಾರ್ಥಿವರು ಸೋತ ಮೇಲೆ, ಧುರದೊಳು ಜಯಿಸಿಕೊಂಬುದು. ಈ ಹಠವನ್ನು ನಾನೀವರೆಗೆ ಸಾಧಿಸಿದ್ದೇನೆ. ನನ್ನ ನಿಲುಮೆ ನನ್ನ ಅರಿವಿನ ಒಳಗೆ ಭದ್ರವಾದದ್ದು. ಅದು ಅಚಲವಾದದ್ದು. ಆದರೆ ಇಷ್ಟು ವ್ಯತ್ಯಾಸ ಇರಬಹುದು. ಕಠಿಣವಾದದ್ದು ಲೋಹ, ಬಿಸಿಯಾದ್ರೆ ಬಗ್ಗಿತು ಬೇಕಾದ ಅಳತೆಗೆ ತರುವದಕ್ಕಾದೀತು. ವಜ್ರವೂ ಕಠಿಣವೇ, ಆದರೆ ಅದಕ್ಕೆ ಒಂದು ಸ್ವರೂಪ ಅಂತ ಇರ್ತದೆ. ಅದನ್ನು ಕೆಡಿಸಬಾರದಲ್ಲ. ದುರ್ಯೋಧನ ಹಾಗೆ. ಇದು ಕಲ್ಲಿನ ಕಂಭ, ಇದು ಬಾಗೋದಿಲ್ಲ. ಯಾರಾದ್ರೂ ಬಲತ್ಕಾರದಿಂದ ಬಗ್ಗಿಸ ಹೊರಟ್ರೆ ತುಂಡಾಗಿ ಹೋದೀತೇ ಹೊರತು ಅವರ ಹಿಂದೆ ಹೋಗ್ಲಿಕ್ಕಿಲ್ಲ.

ಆದ್ದರಿಂದ ಕೃಷ್ಣಾ, ನಾನ್ಹೇಳೋದು ಜೀವನಾದ ಕೃಷ್ಣನಲ್ಲಿ ಸಂಧಾನಕ್ಕೆ ವಿಶ್ರಾಂತಿ, ಆಮೇಲೆ ಅಧ್ಯಾತ್ಮವನ್ನು ನಾನು ಒಪ್ಪಿಕೊಳ್ತೇನೆ; ನನ್ನ ಅನುಭವಕ್ಕೆ ವಿಷಯವಲ್ಲ. ಬಹುಕಾಲದಿಂದ 'ಪುರುಷಾರ್ಥ ಚತುಷ್ಟಯ' ಎಂಬಲ್ಲಿ ಎರಡು ಮತ ಬೆಳೆದು ಬಂದಿದೆ. ಧರ್ಮ ಅರ್ಥ ಕಾಮ-ಜೀವಸಂಬಂಧವಾಗಿ ಇಹಕ್ಕೆ. ಮೋಕ್ಷ-ಪರಕ್ಕೆ, ಅಂತ. ಆ ಸಿದ್ಧಾಂತವನ್ನಂಗೀಕರಿಸುವಲ್ಲಿ ನಾನು ಪುರುಷಾರ್ಥಗಳು ಬದುಕಿಗೆ ಸಂಬಂಧಪಟ್ಟದ್ದು, ಮೋಕ್ಷವಾದರೂ ಬದುಕೇ ಮೋಕ್ಷ ಅಂತ ತಿಳಿದವ. ಈ ಸಿದ್ಧಾಂತದಿಂದ ನಾನು ಮುಂದೆ ಬಂದಿದ್ದೇನೆ. ನನ್ನ ಛಲ ಕೊನೆಯವರೆಗೆ, ನನ್ನ ವ್ಯಕ್ತಿತ್ವದ ಕೊನೆಯವರೆಗೆ ಅದು ಬದಲಾವಣೆ

ಹೊಂದುವದಿಲ್ಲ. ನಿನ್ನ ಕುರಿತಾಗಿ ನೀನ್ ಆಡಿಯೂ ತೋರಿಸಬೇಕಾದ್ದಿಲ್ಲ, ಬೆಟ್ಟೆತ್ತಿಯೂ ತೋರಿಸಬೇಕಾದ್ದಿಲ್ಲ. ಭೀಷ್ಮಾಚಾರ್ಯರ ವಾತ್ಸಲ್ಯದ ಶಿಶು ನಾನು, ಸಜ್ಜನರ ಸಂಪರ್ಕದಲ್ಲಿ ಬೆಳೆದು ಬಂದವ. ನೀನ್ ಏನು ಅಂತ, ಬಾಕಿದ್ದವರಿಗಿಂತ ಕಡಿಮೆ ನಾನು ತಿಳ್ಕೊಂಡಿದ್ದೇನೆ ಅಂತಲ್ಲ. ಆದರೆ ಇಲ್ಲಿ ಪ್ರಾಮಾಣಿಕವಾದ ಒಂದು ಪ್ರಶ್ನೆ ಬರ್ತದೆ. ಇದನ್ನು ದೃಢಮೂಲವಾಗಿ ನೀನು ನಂಬಿದ್ದೀಯೊ ಅಂತ ಕೇಳಿದರೆ, ನನ್ನ ಸುಪ್ತಚೇತನ ನನ್ನ ಸೂಕ್ಷ್ಮವಾಸನ-ಭೂಮಿಗಿಳಿದು ಬಂದವ, ಅವತಾರೀಶ್ರೀಕೃಷ್ಣ, ವಾಸುದೇವ ಅಂತ ಒಪ್ತದೆ. ಆದರೆ ಅದರ ಪ್ರವಾಹಕ್ಕೆ ಹೊರಗೆ ತಡೆ

ಇದೆ. ನಾನು ಬೆಳೆದು ಬಂದ ಪರಿಸರ ಪರಿಸ್ಥಿತಿ... ಈ ಇದು ವಿಚ್ಛೇದಿಸಬೇಕಾಗಿದ್ರೆ ದೇವನಾದ ನಿನಗೆ ಸಾಧ್ಯ. ನಿನ್ನಲ್ಲಿ ನನದು ಒಂದು ಪ್ರಶ್ನೆ ಇದೆ. ಅಘಟಿತಘಟನಾಪಟುವಲ್ಲವೇ ನೀನು? ಗೋವುಗಳನ್ನು ಒಂದಾಗಿಸಿದ್ದಿ ಪಶುವೃತ್ತಿಯಲ್ಲಿ- ಕೊಳಲಗಾನದಿಂದ; ಅದು ಉಪದೇಶದಿಂದಲ್ಲ. ಪ್ರಕೃತಿ ಸಹಜವಾಗಿ ಅಷ್ಟಾವಕ್ರವಾಗಿ ಹುಟ್ಟಿದ ಕುಬ್ಜೆಯ ಡೊಂಕು ತಿದ್ದಿದ್ದೀ. ಇದು ಪ್ರಪಂಚದಲ್ಲಿ ಯಾವ ಸಿದ್ಧಾಂತದಲ್ಲಿಯೂ ಆಗುವಂತಹುದ್ದಲ್ಲ. ನೀನು ಯಮುನಾನದಿಯ ನೀರನ್ನು ನೀನಿದ್ದಲ್ಲಿಗೆ ಬರಿಸಿದ್ದಿ, ಹೊರಗಿದ್ದು, ದೇವದೇವನಾಗಿ ಪ್ರಕಟಪಡಿಸುತ್ತ-ಕೊಡು, ಬಿಡು ಹ್ವೇಳ್ತಿಯಲ್ಲ, ನೋಡೋಣ. ನಿನ್ನ ಸಂಧಾನಕ್ಕೆ ಕೌರವನ ಮನಸ್ಸನ್ನು ಒಪ್ಪಿಸು. ಒಳಗಿದ್ದು ಆಗದು, ಹೊರಗಿದ್ದು ಆಗಬೇಕು. ಇದು ನಿನಗೆ ಮಾತ್ರ ಪ್ರಪಂಚದಲ್ಲಿ ನಿನ್ನ ವ್ಯವಹಾರವಾಗಲೀ ನಿನ್ನ ಉಪದೇಶದ ಬೇರೆ ಬೇರೆ ಶೈಲಿಯಾಗಲೀ, ಮನುಷ್ಯ ಮಾತ್ರದವರನುಸರಿಸಿದರೆ ಜನರಿಂದ ಕಲ್ಲು ಹೊಡೆಸಿಕೊಳ್ಳಬೇಕಾದೀತು. ಗೋಪಿಕಾಚಾರನಾಗಿ ವಂದ್ಯನಾದವ ಯಾರು? ನವನೀತಚೋರನಾಗಿ ಪೂಜನೀಯನಾದವ ಯಾರು? ಒಬ್ಬ ಕೃಷ್ಣ. ಬಿಡಿ, ಬಾಕಿದ್ದವು ಮಾಡಿದ್ರೆ ಪ್ರಪಂಚದಲ್ಲಿ ತಲೆಗೆ ಮುಸುಕು ಹಾಕಿ ರಾತ್ರಿ ಹೋಗಬೇಕಾದೀತು. ಆದ್ರಿಂದ ಏನೋ ಧರ್ಮಸಂಸ್ಥಾಪನೆಗೋ, ಏನೋ ಒಂದು ಬದಲಾವಣೆಗೋ ಈ ಕಾಲದಲ್ಲಿ ನೀನು ಹುಟ್ಟಿಕೊಂಡಿದ್ದೀ ಅನ್ನೋದು ನಮ್ಮ ಆಧ್ಯಾತ್ಮ ಚೇತಸ್ಸಿಗೆ ಹೆಮ್ಮೆ ಪಡುವಂತಹ ವಿಷಯ. ನಮ್ಮ ಕಾಲಕ್ಕೆ ಕೃಷ್ಣ ಬದುಕಿದ್ದನಲ್ಲ! ಆದರೆ ಇದನ್ನು ಆಂತರಂಗಿಕವಾಗಿಯೇ ನಾನು ನಿನಗೆ ಸಮರ್ಪಣೆ ಮಾಡಬೇಕು. ನಿನ್ನ ಅಂತರಾತ್ಮಕ್ಕೆ ಹೊರತು, ಕೈಗೊಂಡಂತಹ ಈ ಉದ್ಯಮದಲ್ಲಿ, ಈ ರಂಗಮರ್ಯಾದೆಯಲ್ಲಿ, ಇದಕ್ಕಿದ್ದಂತಹ ಆವರಣದ ಮರ್ಯಾದೆಯ ಸೀಮೆಯನ್ನು ದಾಟಿ ಆಚೆ ಹೋಗುವುದಕ್ಕೆ ಕೌರವನನ್ನು ನೀನು ಬಲಾತ್ಕಾರವಾಗಿ ತಡೆಯಬೇಡ. ಆದ್ದರಿಂದ ಇಳೆಯ ಭಾರವ ಇಳುಹಲು ಅವತರಿಸಿದ ಲೀಲಾ ಮನುಷ್ಯ ಅಂತ ಒಪ್ಪಿಕೊಂಡವ ನಾನು. ಪ್ರಾಮಾಣಿಕವಾಗಿ ಅದಕ್ಕಿಂತ ಹೆಚ್ಚಿಗೆ ನಿನಗೆ ನಾನು ಏನನ್ನೂ ಹೇಳಲಾರೆ.

|ಸೌರಾಷ್ಟ್ರ-ತ್ರಿವುಡೆ| ಹಿಂದೆ ರಾವಣ ಕಂಸ ಮುಖ್ಯರ | ಕೊಂದು ಮುಕ್ತಿಯ ಕರುಣಿಸಿದೆ

ನೀ ನೆಂದರಿತು ವೈರದಿ ತವಾಂಪ್ರಿಯ | ಹೊಂದುತಿಹೆನು || ೧೩೦ ||

ಕೃಷ್ಣಾ, ನೀನು ಹಿಂದೆ ಅವತಾರ ಮಾಡಿದಾಗ ನಿನ್ನನ್ನು ತಿಳಿಯದೇ ರಾವಣ ಯುದ್ಧ ಮಾಡಿದನೋ? ನೀನು ಯೇನು ಅಂತ ತಿಳಿಯದೇ ಕಂಸ ನಿನ್ನಲ್ಲಿ ಪಂಥಾಹ್ವಾನ ಮಾಡಿದನೋ? ಅದು ಭೂಮಿಯ ಕ್ಷಾತ್ರಧರ್ಮ. ಬಾಕಿದ್ದವು ಹಾಗಲ್ಲ. ನಿನ್ನನ್ನು ಇದಿರಿಸುವ ಸಾಮರ್ಥ್ಯ ಅವರಿಗಿಲ್ಲ. ನಿನ್ನ ಹೆಸರು ಕೇಳಿದಾವಾಗಲೇ "ನಾನಿನ್ನ ದಾಸನಯ್ಯ" ಅಂತ ಹೇಳ್ತಾರೆ. 'ವಿನಾ ದೈತ್ಯೇನ ಜೀವನಂ'. ಈ ಭೂಲೋಕಕ್ಕೆ ಸಂಬಂಧಿಸಿದಂತಹ ಆಡಳಿತಕ್ಕೆ ಭಗವಂತನ ಪ್ರಾತಿನಿಧ್ಯ ನಮಗೆ ಅರಸರಿಗೆ, ಇಲ್ಲಿ ದೇವರ ಪ್ರವೇಶ ಇಲ್ಲ. ದೇವರು ಪ್ರವೇಶ ಮಾಡ್ತಾನೆ ಅಂತಾದ್ರೆ ಇವ ಸಿಂಹಾಸನ ಬಿಟ್ಟು ಇಳಿಯಬೇಕು ಅಂತ ಅರ್ಥ. ರಾವಣ ಕಂಸಾದಿಗಳಿಗೆ ಈ ಭೂಮಿಯಲ್ಲಿ ತಾವು ಮಾಡಬೇಕಾಂದತಹ ಕರ್ಮಕ್ಕೆ ದೇವರ ಆಶೀರ್ವಾದ ಬೇಕಾಗಿರಲಿಲ್ಲ. ಅದು ಸರಿಯೂ ಅಲ್ಲ. ಯಾಕೆ ಅಂತಂದ್ರೆ ಈ

ಪ್ರಪಂಚ ಅನ್ನುವುದು ಜೀವ ಎನ್ನುವಂತಹ ಪಶುಗಳಿಗೆ ಮೇಯಲಿಕ್ಕೆ ಭಗವಂತ ನೀನೇ ಕೊಟ್ಟಂತಹ ಹೊಲ. ಅಲ್ಲಿಯೂ ದೇವರೇ ಬಂದು ಮೇಯಿಸಬೇಕು ಅಂತಾದ್ರೆ ಇವನಲ್ಲಿ ಮತ್ತೆಂತಹದ್ದು? ತಾಣ ಇಲ್ಲದಿದ್ದಂತಹ ದನ ಅಂತ ಆಗ್ತದಲ್ಲ. ಅಲ್ಲಿಗೂ ದನ ಬಂದು "ಹೇ ಗೋಪಾಲಕ ನೀನೇ ನನ್ನ ಬಾಯಿಗೆ ಹುಲ್ಲು ಕಿತ್ತು ಹಾಕು" ಅಂತ ಹೇಳಿದ್ರೆ ಅದನ್ನು ಬೇಗ ಕಟುಕನಿಗೆ ಕೊಡೊದು ಒಳ್ಳೆಯದು. ಬದುಕಿಗೆ ರಾವಣನು ಬೇಡಲಿಲ್ಲ ಕಂಸನೂ ಬೇಡಲಿಲ್ಲ. ಆದರೆ ಅವರು ಬೇಡಿದ್ದು ಏನು? ಸತ್ತ ಮೇಲೆ ನೀನು ಬೇಕು ಅಂತ. ನಾನೀಗ ಹೇಳೋದು ಇಷ್ಟೇ ದೇವನಾದ ನಿನ್ನಿಂದ ನಾನು ಬಯಸುವುದು ಕೇವಲ ದೇಹಾನಂತರದ ಆನಂದ - ಕೈವಲ್ಯ ಹೊರತು ಬದುಕಿಗೆ ದೇವರಾಣೆ ದೇವರ ಡಬ್ಬಿಯಿಂದ ನನಗೆ ಏನೂ ದೇಣಿಗೆ ಬೇಡ, ನಾ ಉಂಟು, ಭೂಮಿ ಉಂಟು. ಹೋರಾಟದ ಕ್ಷಾತ್ರ ಉಂಟು.

*ಸೌರಾಷ್ಟ್ರ-ತ್ರಿವುಡೆ| ಧುರಕೆ ಬೆದರುವನಲ್ಲ ರಿಪುಗಳ | ಕರೆಸಿ ಕೊಡುವವನಲ್ಲ ರಾಜ್ಯವ |*

*ಹರಣದಾಸೆ ಗಳಿಲ್ಲ ತನಗೆ | ದರಸ ನುಡಿದ || ೧೭೦ ||*

ಕೃಷ್ಣಾ, ಈಗ ನನಗೊಂದು ಧನ್ಯತೆ ಬಂದ್ಯದೆ. ಹೇಗೆ ಅಂತಂದ್ರೆ, ಪಾಂಡವರು ನಿನ್ನ ಕೈ ಆಯುಧಗಳು ಅಂತಾದರೆ ಇಲ್ಲಿ ನನ್ನ ಹೋರಾಟ ಯಾರ ಜೊತೆಗೆ? ನಿನ್ನ ಜೊತೆಗೆ ಅಂತಾಯಿತು ಅಲ್ವೊ? ಹಾಗಾದರೆ ಇದು ನನ್ನ ಮನೆ ಮಂದಿಯಲ್ಲಿ ಅಣ್ಣ ತಮ್ಮಂದಿರಲ್ಲಿ ಹೋರಾಟ ಮಾಡಿದೆ ಎಂಬ ಅಪವಾದವನ್ನು ನೀನು ತಪ್ಪಿಸಿದೆ ಇಲ್ಲಿ ನಡೆಯುವುದು ದೇವನಿಗೂ ಜೀವನಿಗೂ ಹೋರಾಟ. ನಿನ್ನ ಘನವಾದ ಉದ್ದೇಶವೇನು ಇಲ್ಲಿಗೆ ಬಂದದ್ದು? ನನಗೆ ಗೊತ್ತುಂಟು ನಮ್ಮಜ್ಜ ಹೇಳಿದ್ದಾರೆ. ಹೋದಜನ್ಮದಲ್ಲಿ ರಾಕ್ಷಸರಾಗಿದ್ದವರೆಲ್ಲ ಈ ಜನ್ಮದಲ್ಲಿ ನಿನ್ನನ್ನು ವಂಚಿಸಿ ಉತ್ತಮ ರಾಜಕಾರಣಿಗಳ ವೇಷ ತೊಡ್ಕೊಂಡು ತಿರುಗುತ್ತಿದ್ದಾರೆ ಹಾಗಾಗಿ ಒಂದು ಒಳ್ಳೆಯ ಮುಹೂರ್ತ ನೋಡಿ ಇವರ ತಲೆ ಕಡಿಲಿಕ್ಕೆ ಕೃಷ್ಣ ಕಾದಿದ್ದಾನೆ. ಆಗ ಅದು ನನಗೆ ಅರ್ಥ ಆಗಲಿಲ್ಲ. ಈಗ ಅರ್ಥಾಯ್ತು, ನಾನು ಸಂಗ್ರಹಿಸಿದ ಈ ತಲೆಯನ್ನು ನಿನಗೆ ಒಪ್ಪಿಸುತ್ತಿದ್ದೇನೆ. ಬೇಕಾದಾವಾಗ ತಲೆ ಕಡಿ. ನೀನು ಅಲ್ಲಿ ನಿಂತು ಏನು

ಮಾಡ್ತಿಯಾ ಇಲ್ಲಿ ನಿಂತು ನಾನು ಅದನ್ನೇ ಮಾಡ್ತೆನೆ. ಯುದ್ಧದಲ್ಲಿ ನಿನ್ನ ಪಾದಾರವಿಂದಕ್ಕೆ ತಲೆ ಕೊಟ್ಟೇನೆ ಹೊರತು ನಿನ್ನ ಈ ಉಪನ್ಯಾಸಕ್ಕೆಲ್ಲ ತಲೆ ಕೊಡುವಷ್ಟು ಒಳಗೆ ಟೊಳ್ಳಾದ ತಲೆಯಲ್ಲ.

ಇದೋ ಬಂಗಾರದ ಹರಿವಾಣದಲ್ಲಿ ಐದು ವೀಳ್ಯದೆಲೆ ಒಂದು ಅಡಿಕೆ "ಹಿರಣ್ಮಯೇನ್ ಪಾತ್ರೇಣ" ಅಂತ ಹೇಳಿದ ಹಾಗೆ, ಈಗ ಕಾಣುತ್ತಿರುವಂತಹ ವಸುಂಧರೆ, ಇದರ ಪ್ರತಿನಿಧಿಯಾದಂತಹ ಸುಯೋಧನ ಇದು ಸ್ವರ್ಣಮಯ. ಇದರಲ್ಲಿ ಐದು ಎಲೆ ಇದೆಯಲ್ಲ ಇದು ನನ್ನದಾದ್ದಂತಹ ಐದು ವೃತ್ತಿಗಳು. ಇದರಲ್ಲಿದ್ದಂತಹ ಅಡಿಕೆ ಇದಕ್ಕೆ ಒಂದೇ ಕಣ್ಣು ಅಂದರೆ ಲಕ್ಷ ನಿನ್ನಲ್ಲಿ ಅಂತ ಅರ್ಥ. ಈ ದ್ಯೋತಕವೆನಿಸಿದ್ದಂತಹ ಈ ರಣವೀಳ್ಯವನ್ನು ನಿನಗೆ ಕೊಟ್ಟಿದ್ದೇನೆ ಸ್ವೀಕರಿಸು.



**೨೩ ಭೀಷ್ಮೋಪದೇಶ**

ಭೀಷ್ಮ

ಕಾಂಬೋಜಿ-ಝುಂಪೆ || ಹರಿಯನನೆಯುತ ಮಂಚದೊಳಗೆ ಮಲಗಿರೆ ಭೀಷ್ಮ |

ಗೆರಗಿದನು ಕುರುರಾಯನೆತ್ತಿ ಮುದ್ದಿಸುತ || ೧೩೧ |

ಶ್ರೀಹರೇ ಕೃಷ್ಣಾ, ಹ್ಹ , ಮಹಾಸನ್ನಿಧಾನದ ಇಚ್ಛೆಗೂ ಭೀಷ್ಮನ ಪ್ರಾರ್ಥನೆಯನ್ನು ಸಲ್ಲಿಸುವ ಔದಾರ್ಯ ಬರಲಿಲಲ್ಲೋ ಅಥವಾ ಅದಕ್ಕೆ ಸತ್ಪಾತ್ರನೂ ನಾನಲ್ವೋ ! ಇನ್ನೇನೂ ಅಲ್ಲ. ಯಾರು ಸರಿ, ಯಾರು ತಪ್ಪು ಅಂತ ವಿಮರ್ಶಿಸಿ ಯೇನೂ ಉಪಯೋಗವಿಲ್ಲದೇ ಇದ್ದಂತಹ ಪರಿಸ್ಥಿತಿ ಬಂತು ನಮ್ಮ ಮನೆತನದಲ್ಲಿ, ಈಗಲೂ ನಾನ್ ಹೇಳ್ತಾ ಇರೋದು ಅದೆ - ಹೀಗಾಗ ಬಾರದಿತ್ತು ಕೃಷ್ಣಾ, ಆದರೇನು ಮಾಡೋಣ. ನಮ್ಮಂಥವರು ಹೀಗಾಗಬಾರದಿತ್ತು ಅಂತ ಸಹೃದಯದಿಂದ ಹೇಳಲಿಕ್ಕೆ ಶಕ್ತರೇ ಹೊರತು ಹೀಗೆ ಆಗಬೇಕು ಅಂತ ತೀರ್ಮಾನಿಸುವ ಅಧಿಕಾರ ಕೃಷ್ಣಾ ನಿನ್ನ ಸನ್ನಿಧಾನಕ್ಕೆ ಅಂತ ತಿಳಿದವ.

ಸುಯೋಧನ ಯುದ್ಧಕ್ಕೆ ಬದ್ಧನಾದ. ಅವನ ಮನೆಯ ಊಟವನ್ನಾಗಲಿ ಅಥವಾ ಪಾನೀಯವನ್ನಾಗಲಿ ಸ್ವೀಕರಿಸದೇ ಇದ್ದಂತಹ ಭಗವಂತ ನೀನು, ಅವನು ಕೈ ಎತ್ತಿ ಕೊಟ್ಟ ರಣವೀಳ್ಯವನ್ನು ಯಡಗೈಯಿಂದ ಅಂಗೀಕರಿಸಿದೆ. ನಿನ್ನ ಚಿತ್ರ ! ಆದಕಾರಣ ಆದದ್ದು ಸರಿಯೇ ತಪ್ಪೇ ಅಂತ ಯೋಚಿಸ್ತಾ ಯೋಚಿಸ್ತಾ ನಾನು ಹಾಸಿಗೆಯಲ್ಲಿ ಪವಡಿಸಿದ್ರೂ ನಿದ್ರಿಸದೇ ಇರಲಿಕ್ಕೆ ಕಾರಣವಲ್ಲ. ಇನ್ನೀಗ ನಾನು ಚಿಂತಿಸಬೇಕಾದದ್ದು, ಈ ಕೌರವನ ಅಥವಾ ಅವನ ಸೋದರರ ಬಗ್ಗೆ, ಕೆಟ್ಟವರೂ ಹೌದು, ಎಲ್ಲ ಉತ್ಪಾತವನ್ನೇ ಮಾಡುವವರೂ ಹೌದು. ಯೇನು ಮಾಡೋಣ, ಹೆತ್ತತಾಯಿಗೆ ನಾಲ್ಕಾರು ಮಂದಿ ಮಕ್ಕಳಿದ್ರೆ ಆರೋಗ್ಯದಿಂದಲೂ, ಶಕ್ತಿಯಿಂದಲೂ ತಮ್ಮ ಕಾಲಿನಲ್ಲಿ ತಾವು ನಿಲ್ಲುವ ಯೋಗ್ಯತೆ ಉಂಟು ಅಂತ ಗೊತ್ತಾದಾಗ ತೃಪ್ತಿ ಬರದೆ ಆ ಮಕ್ಕಳ ಕುರಿತಾಗಿ, ಆದರೆ ಉಳಿದ ಒಂದು ಮಗುವೋ, ಎರಡು ಮಕ್ಕಳೋ, ರೋಗ ಬಾಧೆಯಿಂದ ತಮ್ಮ ತನವನ್ನು ತಾವು ರಕ್ಷಿಸಿಕೊಳ್ಳುವದಕ್ಕೆ ಅಶಕ್ತರಾದಾಗ, ಇಷ್ಟು ಮಾತ್ರವಲ್ಲ ಜೀವನ್ಮರಣ ವ್ಯಾಧಿಯಿಂದ ತೊಳಲ್ತಾ ಇದ್ದಾಗ ತಾಯಿಯ ವಿಶೇಷವಾದಂತಹ ಕಾಳಜಿ ಮತ್ತು ದೃಷ್ಟಿ ಅ ಮಕ್ಕಳ ಮೇಲಿರುತ್ತದೆ- ಸ್ವಾಭಾವಿಕ ನನಗಾದದ್ದು, ಈ ಕೌರವಾದಿಗಳು ತಮ್ಮ ನಾಶವನ್ನೇ ತಂದುಕೊಳ್ಳುವದಕ್ಕೆ ಹೊರಟು 'ಇದೇ ಸರಿ' ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಇನ್ನು ಕೆಲವರು - "ಹೌದು ಹೌದು ಆ ದಾರಿಯೇ ಸರಿ, ಆದಕಾರಣ ನೀವು ಆದರಲ್ಲೇ ಸರಿಯಿರಿ" ಅಂತ ಪ್ರೋತ್ಸಾಹ ಕೊಡ್ತಾ ಇದ್ದಾರೆ. ನನ್ನ ಒಳಗಣ್ಣಿಗೆ ಕಾಡ್ತಾ ಇದೆ ನನ್ನ ಈ ಮಕ್ಕಳ ಸರ್ವನಾಶ. ಆವಾಗ, ಆ ವಾತ್ಸಲ್ಯದ ಕರುಳು ಮಿಡಿಯುತ್ತದೆ, ನೋಯ್ತದೆ. ನೋಯ್ತದೆ, ಹೌದು ತಾಯಿಯಾದವಳು ರುಗ್ಣಶಯ್ಯೆಯಲ್ಲಿದ್ದಂತಹ ಮಕ್ಕಳ ಕುರಿತಾಗಿ ರಾತ್ರಿ ಹಗಲು ಸರ್ವತ್ಯಾಗ ಮಾಡಬೇಕಾದದ್ದು

ಹೌದು, ಅದರೆ ವಿವೇಕಿಗಳ ಮುಂದೆ ಒಂದ್ ಪ್ರಶ್ನೆ ಬರ್ತದೆ. ಕೆಟ್ಟ ಮಕ್ಕಳು ಅಂತ ಗೊತ್ತಿದ್ರೂ ಇಷ್ಟು ಒಳ್ಳೆಯ ಸ್ವಭಾವವುಳ್ಳ ತಾಯಿ ಮತ್ತೂ ಅವರ ಶುಶ್ರೂಷೆಗೇ ಹೋಗ್ತಾಳಲ್ಲ ! ಎಂಥಾ ಮಕ್ಕಳು? ಶುಶೂಷೆಗೇ ಅಂತ ಹೊರಟ ತಾಯಿಯನ್ನು ಸಾಧ್ಯ ಇದ್ರೆ ಹೊಡಿತಾರೆ! ಕಾಲಿನಿಂದ ವದಿತಾರೆ ! ಹಾಗಿದ್ದರೂ ತಾಯಿ ಸೇವಿಸಬೇಕೇ ಅಂತ ಪ್ರಶ್ನಿಸುವ ಬುದ್ಧಿಜೀವಿಗಳಿದ್ದಾರೆ. ಬೌದ್ಧಿಕವಾಗಿ ಹೌದು. ಆದರೆ ತಾಯ್ತನದ ಮಟ್ಟಿಗೆ ಒಂದು ಮೋಹವೇ ಇರದೆ. ಇಲ್ಲದಿದ್ರೆ ಅವಳು ತಾಯಿ ಹೇಗಾದಾಳು? ತಿಳಿದವರು ಹೇಳಿದ್ದಲ್ಲವೇ - ಕೆಟ್ಟ ಮಕ್ಕಳಿರಬಹುದು. ಕೆಟ್ಟ ತಾಯಂದಿರಿರುವದಿಲ್ಲ" ಅಂತ. ನನ್ನ ಪರಿಸ್ಥಿತಿ ಅದೇ.

ಈ ನನ್ನ ನೂರು ಮೊಮ್ಮಕ್ಕಳು, ಈಗಲೋ ಮತ್ತಾವಾಗಲೋ ಎಂಬ ದುರಂತದ ಸಮೀಪ ಇದ್ದಾರೆ. ಬೌದ್ಧಿಕವಾಗಿ ನಾನಿವರಿಗೆ ಸಹಾಯ ಮಾಡುವದು ಸರಿಯಲ್ಲ ಅಂತ ಮನಃಸಾಕ್ಷಿ ಹೇಳದೆ. ನನ್ನ ಮಾತ್‌ಳೋದಿಲ್ಲ. ಯೆಷ್ಟೋಸಲ ಮಹಾ ಸಭೆಯಲ್ಲೇ ನಾನು ಅಪಮಾನಿತನಾಗಿದ್ದೇನೆ. ಮಕ್ಕಳಿಂದ ವದೆಯಲ್ಪಟ್ಟ ತಾಯಿಯೇ ಹೌದು, ಆದರೂ ಕರುಳು ಕೇಳ್ತದೋ? ಯೇನು ಮಾಡಿಯಾದರೂ ಈ ಕೌರವಾದಿಗಳನ್ನು ಬದುಕಿಸಬೇಕು. ಬದುಕಿಸುವಾಗ ಪಾಂಡವರನ್ನು ನೋಯಿಸಬಾರದು. ಪಾಂಡವರನ್ನು ನೋಯಿಸದೇ ಈ ಕೌರವರನ್ನು ಬದುಕಿಸುವದಕ್ಕೆ ಉಪಾಯ ಯೇನು? ಗೊತ್ತಿಲ್ಲ. ಹೃದಯ ಹೇಳ್ತದೆ. ಇವರನ್ನು ಬದುಕಿಸಬೇಕು ಅಂತ. ದಾರಿ ಕಾಣೋದಿಲ್ಲ. ಆದಕಾರಣ ನನ್ನ ಹೃದಯವಿದ್ರಾವಕವಾದ ನೋವನ್ನು ಜಗತ್ತಿನ ತಾಯಿ ತಂದೆಯಾದಂತಹ ಕೃಷ್ಣನ ಸನ್ನಿಧಾನಕ್ಕೆ ಒಪ್ಪಿಸ್ತಾ ಹರೇ ಕೃಷ್ಣಾ ಅಂತ ಹೇಳ್ತಾ, ಹೊರಳ್ತಾ ಇದ್ದೇನೆ.

ಯಾರದೂ ? ಸುಯೋಧನನೇ !! ಬಾ ಮಗನೇ.

|ಮಧುಮಾಧವಿ-ತ್ರಿವುಡೆ|| ಕುರುಕುಲಾನ್ವಯ ತಿಲಕ ಬಾ ಬಾ| ತರಳಬಾರೀ ನಿಶಿತಕಾಲದಿ

ತೆರಳಿ ಬಂದಿಹುದೇತಕೋರ್ವನೆಗೆ ಪೆಳು ಪೆಳ್ಳೆ ಮಾಜದೆ || ೧೩೩ ||

ಕುರುವಂಶ ! ಬೇರೆ ಯಾರನ್ನೂ ಕೌರವ ಅಂತ ಜನ ಗುರುತಿಸಿಲ್ಲ. ನನ್ನ ಒಪ್ಪಿಗೆಯೂ ಇದೆ ಕುಮಾರ ಅದಕ್ಕೆ ಆದುದರಿಂದಲೇ ಕುರುಕುಲಾನ್ವಯ ತಿಲಕ, ನೀನೂ ಉಳಿಸಿಕೊಳ್ಳುವದಕ್ಕೆ ಯತ್ನಿಸಿ ಅಂತ ಭರವಸೆ, ಹಂ, ನಮ್ಮ ಶಕ್ತಿಗೆ ಮೀರಿದ್ದನ್ನು ನಾವು ಬಿಟ್ಟು ಬಿಡೋಣ ಅಲ್ಲವೇ ? ಮುಖಕ್ಕೆ ತಿಲಕ ಅಲಂಕಾರ ಪ್ರಾಯವಾದದ್ದು. ಬೇಕಿದ್ರೆ ನಾವೇ ಸ್ವಲ್ಪ ತಿದ್ದಿಕೊಳ್ಳಬೇಕು. ನನಗೆ ನಾಚಿಕೆ ಆಗೋದು ಅಲ್ಲಿ - ನಿನ್ನ ತಿಲಕವನ್ನು ನಾನು ತಿದ್ದಬೇಕಾಗಿ ಬಂದೀತೇ? ಬರಬಾರದು. ಹಾಗೆಂತ ನೀನೂ ಕೂಡಾ ಹಾಗೆ, ಆದಷ್ಟು ತಿಲಕ ದೊಡ್ಡದಾಗಿ ದೊಡ್ಡದಾಗ್ಲಿ ಅಂತ ಮುಖದ ಉದ್ದಗಲಕ್ಕೆ ತಿಲಕ ವ್ಯಾಪಿಸುವ ಕೃತ್ಯವನ್ನೂ ಮಾಡಬಾರು. ಇಷ್ಟು ಪ್ರಜ್ಞೆ ನಿನಗಿದ್ರೆ ಅಜ್ಜನಾಗಿ ನಿನ್ನನ್ನು ಒಪ್ಪಿಕೊಂಡು ಅಪ್ಪಿಕೊಳ್ಳುವದಕ್ಕೆ ನನ್ನ ಬಾಹುಗಳು ಮುಂದೆ ಬಾ ಇದ್ದಾವೆ ಕುಮಾರಾ, ಕುರುಕುಲಾನ್ವಯ

ತಿಲಕ ! ಅರ್ಥ ಇಲ್ಲದೆ ನಿನ್ನ ಕುರಿತಾಗಿ ನಾನು ಸಂಬೋಧಿಸಿದ್ದಲ್ಲ ಮಗನೆ. ನಮ್ಮಲ್ಲಿ ಹಿರಿತನವನ್ನು ಗುರುತಿಸುವದಕ್ಕೆ ಋಷಿ ಮುನಿಗಳದ್ದಾದ ದೃಷ್ಟಿಕೋನ ಒಂದು, ವ್ಯಾವಹಾರಿಕವಾದ ರಾಜಕಾರಣಿಗಳ ದೃಷ್ಟಿಕೋನ ಮತ್ತೊಂದು ನಮ್ಮ ವಂಶದಲ್ಲಿ ಯಾರು ಹಿರಿಯ ಎಂಬುದನ್ನು ಋಷಿ ಮುನಿಗಳು ಗುರುತಿಸಿದ್ದು ಹಾಗೆ, ವ್ಯಾವಹಾರಿಕರು ನಾವು ಗುರುತಿಸಿದ್ದು - ಮೊದಲು ಹುಟ್ಟಿದವರು ಯಾರು? ಯುಧಿಷ್ಠಿರನೂ ಕುರುಕುಲಾನ್ವಯ ತಿಲಕನೇ. ಸುಯೋಧನನೂ ಹೌದು - ನನಗಲ್ಲೊ ಗೊತ್ತು ?

ವೈದಿಕರಿತ್ಯಾ ಗರ್ಭಾಷ್ಟಮದಲ್ಲಿ ಬ್ರಾಹ್ಮಣರ ಮಕ್ಕಳಿಗೆ ಉಪನಯನ ಮಾಡಬೇಕು ಅಂತ ಇದೆ. ಗರ್ಭಾಷ್ಟಮ ಅಂತ ವೈದಿಕರ ಪಾರಿಭಾಷಿಕ ಪದ ಒಂಬತ್ತು ತಿಂಗಳ ಹೊಟ್ಟೆಯಲ್ಲಿ ಗುರುತಿಸಿ, ಯೇಳು ವರ್ಷ ಮೂರು ತಿಂಗಳಾದ್ರೆ ಎಂಟು ವರ್ಷ ಅಂತ ತಿಳಕೊಳ್ಳಬೇಕು. ಹೀಗೆ ಗುರುತಿಸಿದರೆ ಹಿರಿಯ ನೀನು, ಗಾಂಧಾರೀ ದೇವಿ ಬಹುಕಾಲ ನಿನ್ನನ್ನು ಗರ್ಭದಲ್ಲಿ ಧರಿಸಿದಳು. ಆ ದೃಷ್ಟಿಯಿಂದ, ಗರ್ಭೋತ್ಪತ್ತಿಯ ದೃಷ್ಟಿಯಿಂದ ಗರ್ಭಾದಾನ ಸಂಸ್ಕಾರ ನಡೆದ ತಿಥಿ, ವಾರ, ನಕ್ಷತ್ರವನ್ನು ಗುಣಿಸಿದಾಗ... ನೀನು ಹಿರಿಯವ. ಆದರೆ ಆಡಳಿತದ ಬಗ್ಗೆ ಪ್ರಶ್ನೆ ಬಂದಾಗ ಬೀಜ ಬಿತ್ತಿದ್ದು ಯಾವಾಗ ಎಂಬುದು ಲೆಕ್ಕಾಚಾರವಲ್ಲ ಅಂತ ಹೇಳ್ತಾರೆ ರಾಜ್ಯಶಾಸ್ತ್ರಜ್ಞರು. ಹುಟ್ಟಿ ಕೂಗಿದ್ದು ಯಾವಾಗ? ತಾಯಿಯ ಗರ್ಭದಲ್ಲಿಯೇ ಈ ಪಿಂಡ ಇರಿಸಲ್ಪಟ್ಟಾಗ ವ್ಯವಹಾರದಲ್ಲಿ ಸೂತಿಕವನ್ನು ಕಲ್ಪಿಸುವದಿಲ್ಲ. ಅಲ್ಲಿ ಉತ್ಪತ್ತಿ ಆಗಿದೆ ಎಂಬುವದರಿಂದ ಕುಟುಂಬಕ್ಕೆ ಸೂತಕ ಬರುವದಿಲ್ಲ. ಇದೇ ಧರ್ಮಸಂಕಟ ನಮ್ಮಲ್ಲಿ. ಆದರೆ ಒಂದುಂಟು ಹಾಗಾಗುವದಕ್ಕೆ ಯೇನೂ ಯೆಡೆಯಿಲ್ಲ ಅಲ್ಲಿ "ಶಾಸ್ತ್ರಾತ್ ರೂಢಿರ್ಬಲೀಯಸಿ". ರೂಢಿಯಲ್ಲಿ ಹೇಗೆ? ಮೊದಲು ಹುಟ್ಟಿದವ ಜೇಷ್ಠ, ಅದು ಅಧಿಕಾರದ ಮಟ್ಟಿಗೆ ಮಾತ್ರ. ಆದರೆ ಕೌಟುಂಬಿಕವಾಗಿ ನೋಡುವಾಗ ಮೊದಲೇ ತಾಯಿಯ ಗರ್ಭದಲ್ಲಿ ಉತ್ಪತ್ತಿಯಾದವ ಹಿರಿಯ. ಹಾಗಾಗಿ ಮಗನೇ, ಭೀಷ್ಮನಾದ ನನಗೆ ಎರಡು ಕಣ್ಣಿದ್ದ ಹಾಗೆ - ಕೌರವ ಮತ್ತು ಧರ್ಮರಾಯ. ಇನ್ನು ವ್ಯಾಪಕವಾಗಿ ಹೇಳುವದಿದ್ರೆ ಕೌರವರು-ಪಾಂಡವರು ಅಲ್ವೊ? ನನಗೆ ಭೇದ ಉಂಟೋ? ಆದರೆ, ಭೇದ ಇಲ್ಲದೇ ಇದ್ದಂತಹ ಹೃದಯದ ಸ್ಪಂದನ ಹೇಗೆ? ಯಾರು ಕಷ್ಟದಲ್ಲಿದ್ದಾನೆ ಅವನ ಕುರಿತಾಗಿ ಹೆಚ್ಚು ಕೊಟ್ಟು ಬಿಡೋಣ. ನಿನಗೂ ಗೊತ್ತುಂಟಲ್ಲ ಈಗ, ಇಲ್ಲಿ ಬಂದಾಗ ನಾನ್ ಹಿರಿಯನೇ ಹೊರತು ನಾನಿಲ್ಲದೆ ಇದ್ದಾಗ ಮನೆಯಲ್ಲಿ ನೀನು ಎಷ್ಟು ಮಂದಿಗೆ ಹಿರಿಯ! ಆದ್ದರಿಂದ, ಇಷ್ಟು ನಾನು ಬುನಾದಿಯನ್ನು ಸೃಷ್ಟಿಸಿದ್ದಾಕೆ? ನಿನಗೂ ವಂಚನೆ ಆಗಲಿಲ್ಲ. ಪಾಂಡವರಿಗೂ ಮೋಸ ಆಗಲಿಲ್ಲ. ಆದುದರಿಂದಲೇ ರಾಜ್ಯದ ಅಧಿಕಾರ ಯುವರಾಜ್ಯಾಭಿಷೇಕ ಅವನಿಗೇ ಸಲ್ಲಬೇಕು. ಆದರೆ ಮನೆತನದ ದೃಷ್ಟಿಯಲ್ಲಿ ಯಜಮಾನಿಕೆ ಯಾರಿಗೆ ಸಲ್‌ಬೇಕು? ಕೌರವನಿಗೆ ಸಲ್ಲಬೇಕು. ಗೃಹಕೃತ್ಯಕ್ಕೆ ನೀನೇ ಕುರುಕುಲಾನ್ವಯ ತಿಲಕ, ರಾಜ್ಯದ ಯಾವತ್ತೂ ಅಧಿಕಾರಕ್ಕೆ ಅವನೇ ಕುರುಕುಲಾನ್ವಯ ತಿಲಕ - ಧರ್ಮರಾಯ. ಈ ವ್ಯವಸ್ಥೆ ಮಾಡಿದ್ದೆ ಮಗನೆ ಹಿಂದೆ. ಈಗ ಎಲ್ಲಿಗೆ ಮುಟ್ಟಿದೆ ಅಂತ ನಿನಗೊತ್ತುಂಟು. ಹೀಗಾಯ್ತಲ್ಲ! ಹೀಗಾಗಬಾರದಿತ್ತಲ್ಲ ಅಂತಲೇ ಅಜ್ಜ ಆಲೋಚಿಸ್ತಾ ಎಚ್ಚರಿಕೆಯಲ್ಲಿದ್ದದ್ದೀಗ,

ಆದರೆ ಒಂದುಂಟು ಕುಮಾರಾ, ಇಲ್ಲಿ ಇದ್ದವ ಎಚ್ಚರಿಕೆಯಲ್ಲಿ ಇದ್ದರೆ ಸಾಲದು. ಬರುವವನಿಗೆ ಸ್ವಲ್ಪ ಆತ್ಮಜಾಗೃತಿ ಇರಬೇಕು. ಇನ್ನೊಬ್ಬರ ಯೋಗಕ್ಷೇಮ ಚಿಂತನೆಯಲ್ಲಿ ಇರೋದು, ನಾವು ಯಾರಿಗೆ ಏನನ್ನೂ ಮಾಡೋಣ, ಮೊದಲು ನಮ್ಮನ್ನು ನಾವು ರೂಪಿಸಿಕೊಳ್ಳೋಣ. ಇಷ್ಟು ಗೊತ್ತಿದ್ದವ ನೀನ್ ಯಾಕ್ ಹೀಗಾಡಿದ ಮಗ್ನೆ? ಇಂತಹ ಬುದ್ಧಿಶಾಲಿಯಾದಂತಹ ನೀನು, ಯಾವುದೇ ಕಾರ್ಯವನ್ನು ರೂಪಿಸುವಲ್ಲಿ ಭವಿತವ್ಯವನ್ನು ಗುರುತಿಸಿಕೊಳ್ಳಬೇಕಾಗಿತ್ತು. ಗುರುತಿಸಿಕೊಂಡಿದ್ಯೋ ಗೊತ್ತಿಲ್ಲ. ಆದರೆ ನಮ್ಮ ಅನುಭವದ ಬೆಳಕಿನಲ್ಲಿ ನೋಡುವಾಗ ಈ ಸಲ ಕೌರವೇಶ್ವರ ನಾಳೆಯನ್ನು ಚಿಂತಿಸದೆ ಇದನ್ನು ರೂಪಿಸಿದನೋ ಎಂಬ ಸಂದೇಹ ಬಾಧಿಸ್ತದೆ. ಮೊದಲನೆಯದಾಗಿ, ನಿನ್ನ ಕೃತಿಯಲ್ಲೇ ನಿನಗೆ ವಿಶ್ವಾಸ ಇದ್ದ ಹಾಗೆ ಕಾಣುವದಿಲ್ಲ. ಹ್ವ, ಸರ್ವೆಸಾಮಾನ್ಯ ಮನುಷ್ಯರದ್ದಾದಂತಹ ಮುಖ ಅಂತಂದ್ರೆ ಮನಸ್ಸಿನ ಕೈಗನ್ನಡಿ ಅದು. ಮನಸ್ಸು ಸ್ಥಿಮಿತದಲ್ಲಿ ಇಲ್ಲದೇ ಇದ್ದಾವಾಗ ಮುಖದ ಸ್ವಭಾವ ಬದಲಾಗಿ ಆ ಮಾನಸಿಕವಾದ ಸಂವೇದನೆ ಭಾವನಾತ್ಮಕವಾಗಿ ಪ್ರಕಟಗೊಳದೆ. ಹೌದಲ್ಲ? ನಾನಂತೂ ಎತ್ತಿ ಆಡಿಸಿದ ಮಕ್ಕಳ ಮುಖ ಸ್ವಲ್ಪ ವಿವರ್ಣಕ್ಕೆ ತಿರುಗಿದರೆ ನನಗರ್ಥವಾಗ್ತದೆ. ಒಂದ್ ಮಾತು ಕೇಳಿದ್ದೂ ಕುಮಾರಾ? ದೂರದಿಂದ ಮಗ ಬಂದಾವಾಗ ತಾಯಿಯಾದವಳು ಮೊತ್ತ ಮೊದಲಿಗೆ ಮೋರೆಯನ್ನೇ ನೋಡ್ತಾಳಂತೆ. ನೋಡುವುದು ಮಾತ್ರವಲ್ಲ,... ತಾಯಿ ತಾಯಿ!! ಗಾದೇ ಮಾತಾದ್ರೂ ವೇದಕ್ಕಿಂತ ಪ್ರಾಬಲ್ಯ ಉಳ್ಳದ್ದದು. ಹೆತ್ತ ತಾಯಿ ಗಾಂಧಾರಿಯಾಗಿಲ್ಲ ಕುಮಾರಾ, ನಿಮ್ಮನ್ನು ಸಾಕಿ ಬೆಳೆಸಿದವರು ಯಾರು ಹೇಳು? ನಿನ್ನ ಮುಖದಲ್ಲಿ ನಾನು ವಿವರ್ಣವನ್ನು ಗುರುತಿಸ್ತಾ ಇದ್ದೇನೆ.

|*ಮಧುಮಾಧವಿ-ತ್ರಿವುಡೆ ಕುಂಭಿನಿಪ ಶಶಿಬಿಂಬದಂತಿಹ ಸಂಭ್ರಮದ ಮುಖಕಮಲ*

ನೋಡಲು! ಡಂಬಕಾವ್ಯಥೆಯೆಂಬ ಬಿಸಿಲಿನೊ ಳಿಂಬು ಗೊಂಡಿಹುದೇತಕೆ || ೧೩೪ ||

ಕುಂಭಿನಿಪ ನೀನು! ಯಾರಲ್ಲ ಅಂತಾರೆ? ಪಿತ್ರಾರ್ಜಿತವಾದಂತಹ ಬಲುದೊಡ್ಡದಾದಂತಹ ಆಸ್ತಿ; ಇದಿರು ನೂರು ಮಕ್ಕಳಿಲ್ಲಿ ಅವ್ರೆಲ್ಲರೂ ಆ ಆಸ್ತಿಗೆ ಯಜಮಾನಿಕೆ ಉಳ್ಳವರೇ. ಯಾರಲ್ಲಿ ಕೇಳಿದ್ರೂ - ಯಾರದ್ದು? "ನನ್ನದು" ಹೇಳಬಹುದು. ಸಮಷ್ಟಿಯಿಂದಲೂ ಹೇಳಬಹುದು - 'ನಮ್ಮದು' ಅಂತ. ನಮ್ಮದು, ನನ್ನದು ಅನ್ನುವುದು ಸಂಸ್ಕಾರದ ವ್ಯತ್ಯಾಸ ಅಷ್ಟೇ. ಆದ್ದರಿಂದ ಯಾರದ್ದು ಹಸ್ತಿನಾವತಿಯ ಮನೆತನ? ಹೌದು ಈಗ ನಿನ್ನದೇ, ಯಾಕೆ? ತೊಂಬತ್ತೊಂಬತ್ತು ಮಂದಿ ತಮ್ಮಂದಿರ ಪ್ರಾತಿನಿಧ್ಯ ನಿನಗೆ. ಆದರೆ ಅವರು ಬಂದಾಗ? ನಮ್ಮದು. ಯಾಕೆ? ಬಂದವರೂ ನನ್ನದು ಅಂತ ಹೇಳಿದರೆ ಇಕೋ ಆಗುವದು ಹೀಗೆ... ಯತಾರ್ಥ ಹೇಳು, -ನಿಜವಾಗಿ ನೀನು ಮನಸ್ಸಿನಲ್ಲಿ ನಾಚಿಕೊಂಡಿದ್ದೂ ಇಲ್ವೊ ಈ ವೃತ್ತಿಯಿಂದ? ಅದೇ ಕಾಣದೆ ಮುಖದಲ್ಲಿ, ಸುಕುಮಾರಾ, ಬಡವನೋ ಬಲ್ಲಿದನೋ ಎನ್ನುವದು ಪ್ರಶ್ನೆಯಲ್ಲ. ಮನಸ್ಸಿನಲ್ಲಿ ನಿರ್ಮಲನೋ ಅಲ್ಲ ಕಶಲನೋ? ಎಷ್ಟು ದೊಡ್ಡವನೇ ಅಗಿಲ್ಲ, ಜನಮೆಚ್ಚಿದ ಕೆಲಸವನ್ನು ಮಾಡಿದರೆ, ಜನರ ಮುಂದೆ ನಾಚೊದಿಲ್ಲ ಅಬ್ಬರಿಸ್ತಾನೆ, ಡಂಬಾಚಾರ, ಅವನಷ್ಟಕ್ಕವ ಇದ್ದಾವಾಗ ಸಣ್ಣದಾಗ್ತಾನೆ.

ಅನ್ಯಾಯದಿಂದ ಸಂಪಾದಿಸಿದ ಐಶ್ವರ್ಯದಿಂದ ಅರಮನೆಯಂತಹ ಮನೆ ಕಟ್ಟಿಸಲಿ ಮಗನೆ, ಮಲಗಿದವನಿಗೆ ನಿದ್ರೆ ಬರದೋ? ನಾಳೆಗೆ ಯೇನು ಅಂತ ಮಾರ್ಗವೇ ಸಿಕ್ಕದೇ ಇದ್ದ ದರಿದ್ರನೇ ಆಗಿಲ್ಲ.. ತಿಂದದ್ ಕರಗ್ತದೆ. ಇಷ್ಟು ಗೊತ್ತಿದ್ದೂ ಬಹುಶಃ ಇದು ಬಾಕಿದ್ದವರಿಗೆ ಹೇಳಲಿಕ್ಕೆ ಮಾತ್ರ ಅಂತ ನನ್ನ ಹುಡುಗ ತಿಳಕೊಂಡನೋ? ಮುಖ ಬಾಡಿಯದೆ! ಶಶಿ ಬಿಂಬದಂತಹ ಮುಖ! ನಿನ್ನ ಮುಖ ನಿನಗೂ ಕಾಣುವದಿಲ್ಲ, ನನಗೆ ಕಾಣದೆ. ಅಲಗಾಡದೆ ನಿನ್ನ ಮನಸ್ಸು, ಅಲುಗಾಡುವ ಮನಸ್ಸಿನಿಂದ ತೀರ್ಮಾನವನ್ನು ಕೈಗೊಳ್ಳಬಹುದೇನೋ? ಮಾಡಿದ್ಯಂತಾದ್ದು ನೀನು ನಿನ್ನೆ?

ಮಧುಮಾಧವಿ ತ್ರಿವುಡೆ| ಧರೆಯ ಸಾಮದಿ ಕೊಡೆನು ಸಂಗರ ವಿರಚಿಸುವದೆಂದೆನುತ

ಚಿನ್ಮಯ। ಗರುಹಿ ಕಳುಹಿದೆ ನೀನು ಮುಂದಣ | ಪರಿಯನರಿಯದೆ ತರಳನೆ || ೧೩೫ ||

ಶ್ರೀ ಕೃಷ್ಣ ಬಂದಿದ್ದ. ಕೊಡುಗೆಯನ್ನು ನಿನ್ನ ವಶಕ್ಕೆ ಬಿಟ್ಟಿದ್ದ. ಪಾಂಡವರ ಪ್ರತಿನಿಧಿಯಾಗಿ "ನಮಗಂತೂ ನಮ್ಮದು ಸಿಕ್ಕಬೇಕು; ಹೀಗೆ ಅಂತ ನೀನ್ ಹೇಳಬೇಕು". ಯಾರಿಗೆ ಬಿಟ್ಟಿದ್ದು? ನಿನಗೆ! ಸ್ಥಿರ ಇದ್ದವ ಶ್ರೀ ಕೃಷ್ಣನಲ್ಲಿ ರಣವೀಳ್ಯವನ್ನು ಕೊಟ್ಟು ಯುದ್ಧಕ್ಕೇ ಸನ್ನದ್ಧನಾಗ್ತಾನೋ ಹೇಳು? ಪರಿಸ್ಥಿತಿಯ ಪರಿಚಯ ನಿನಗಿಲ್ಲದೇ ಇಲ್ಲ. ಆದರೆ ಆ ಕಾಲಕ್ಕೆ ಮರವೆಯಾಯ್ತು. ಯೇನ್ಹೇಳಿದ ಕೃಷ್ಣ! "ಕೌರವರ ಪಾಂಡವರ ಯುದ್ಧವೇ ಹೌದು, ಆದರೆ ಇದರಲ್ಲಿ ಯುದ್ಧವೇ ಆದರೆ ನನ್ನದ್ದಾದಂತಹ ಪಾತ್ರ ಬೇರೆ ಇದೆ" ಹೇಳಲಿಲ್ಲವೋ? ಅನ್ಯಾಯ ಮಾಡ್ತಾ ಇದ್ದೆ ನೀನು. ಪಾಂಡವರ ಕೈಯಿಂದ ಕೊಲ್ಲಿಸುತ್ತೇನೆ. ಮುಂದಣ ಪರಿಯನರಿಯದೆ ಸುಮ್ಮನೆ ಕೃಷ್ಣನನ್ನು ಇದಿರಿಗೆ ಹಾಕಿಕೊಂಡೆಯಲ್ಲ ನೀನು. ಒಂದು ಮಾತ್ ಹೇಳಿ ಬಿಡಬಹುದಿತ್ತು ನೀನು - ಕೃಷ್ಣಾ, ಆ ಮಟ್ಟಿಗೆ ನಿನಗೆ ನಮಸ್ಕಾರ. ಅರಸು ಮಕ್ಕಳು ನಾವು. ನಾವೇ ಹೋರಾಟ ಮಾಡಿಕೊಳ್ಳತೇವೆ. ಸತ್, ಬದುಕಿದ್ರೂ ಮೂರನೆಯವರು ಕೈ ಇಲ್ಲಿ ನಡೆಸಬಾರದು, ಎರಡು ದೃಷ್ಟಿಯಿಂದ - ದೇವನು ಎಂಬುದು ಒಂದು ದೃಷ್ಟಿ, ಯಾದವರ ನಾಯಕ ಶ್ರೀಕೃಷ್ಣ ಎಂಬುದು ಇನ್ನೊಂದು. ನಮ್ಮ ಜಗಳದಲ್ಲಿ ನೀವು ಹಸ್ತಕ್ಷೇಪ ಮಾಡೋದು ಬೇಡ. ಯಾರು ಜೈಸಿದರೂ ಸುಖ ಇಲ್ಲ. ನೀನು ಜೈಸಿದರೂ, ಯಾದವರ ಹಂಗಿದ್ರೆ? ಪಾಂಡವರು ಜೈಸಿದ್ರೂ.. ? ಹಾಗಾದ್ರೆ, ಸ್ವಾಯತ್ತವಾದ, ಸ್ವತಂತ್ರವಾದಂತಹ ಈ ಹಸ್ತಿನಾವತಿಯ ರತ್ನಸಿಂಹಾಸನವನ್ನು ಯಾರು ದೊರಕಿಸಿಕೊಂಡೂ, ...? ಮತ್ತೆ ನೀನು ಇಷ್ಟೆಲ್ಲ ರಾಜಕೀಯ ಭಾಷಣ ಮಾಡೋದು ಯಾಕೆ ಅಂತ ತೋರದೆ. ತನ್ನ ನೆಲವನ್ನು ತಾನೇ ಕೊರೆಯುತ್ತಾ "ನೀವೆಲ್ಲ ನಿಮ್ಮ ಕಾಲಲ್ಲೇ ನಿಲ್ಲಿ, ಭದ್ರವಾಗಿ ನಿಲ್ಲಿ" ಅಂತ ಉಪದೇಶ ಮಾಡುವಾಗ ಜನ ನಗತಾರೆ. ಯಾಕೆ? ಇವ ಈಗ ಬೀಳ್ತಾನೆ ಅಂತ. ಹಯ್ಯೋ ಮಗನೇ ಹೀಗೆ ಮಾಡಿದಲ್ಲ !! ಅರ್ಥ ಆಗ್ಯದೆ ನನಗೆ, ನಿನ್ನ ಮನಸ್ಸು ಸ್ಥಿರವಾಗಿಲ್ಲ. ಅಧಿಕಾರ ಸ್ಥಾನದಲ್ಲಿದ್ದವ ಮನಸ್ಸು ಅಲ್ಲೋಲಕಲ್ಲೋಲ ಸ್ಥಿತಿಯಲ್ಲಿದ್ದಾವಾಗ ಯೇನಾದ್ರೂ ತೀರ್ಮಾನ ಮಾಡಿದ್ರೆ ಊರಿಗೂ ಆಪತ್ತು. ಇಂಥಾದ್ದನ್ನು ಯೆಳೆದು ಹಾಕ್ಕೊಂಡ್ಯೋ? ಮತ್ತೊಂದ್‌ಮಾತು ನೀನ್ ಹೇಳಿದ್ದು ಸಾರ್ವತ್ರಿಕ ಸತ್ಯ. ನಾವು ಮೆಚ್ಚಿದ್ದು

ಅಲ್ಲಿ. "ಜಾನಾಮಿ ಧರ್ಮಂ. ಜಾನಾಮಿ ಅಧರ್ಮಂ... ನಿನ್ನದೊಬ್ಬನ ಮನಸ್ಸಲ್ಲ ಮಗನೆ ಅದು ನೂರಕ್ಕೆ ನೂರೂ ಅಂಥವರೇ. ಈ ಧರ್ಮ ಗೊತ್ತಿಲ್ಲದೇ ಕೆಲವರು ಅಧರ್ಮ ಮಾಡೋದೋ? ಬಾಕಿದ್ದ ಮಟ್ಟಿಗೆ...? ಅದೊಂದು ಅರ್ಹತ್ಯೋ? ಮನಃಶಾಸ್ತ್ರವನ್ನು ಯಾರು ತಿಳಿದಿದ್ದಾರೆ ಅವರೆಲ್ಲರೂ ತಲೆದೂಗಬೇಕಾದ ಮಾತು ನೀನು ಹೇಳಿದ್ದು. ವಿವೇಕ ಹೇಳಿದಂತೆ ಮನಸ್ಸು ವರ್ತಿಸೋದಿಲ್ಲ. ಆದ್ದರಿಂದ ನಿನಗೊಬ್ಬನಿಗೇನು ದೊಡ್ಡಸ್ತಿಕೆ ಅದರಲ್ಲಿ? ಕೃಷ್ಣನಲ್ಲಿ ಅದನ್ನು ಹೇಳಿದಲ್ಲ? ಯಾಕೆ ಹೇಳಿದಿ? ಈಗ ನೀನೊಬ್ಬನೇ ಅಂತವ ಅಂತ ಪ್ರಚಾರ ಆಯ್ತೋ? ಧರ್ಮ ಗೊತ್ತಿದ್ರೂ, ಅಧರ್ಮ ಏನು ಅಂತ ಗೊತ್ತಿದ್ರೂ... ಅದನ್ನು ...? ಅಲ್ವೊ? ಹಾಗಾದರೆ ನ್ಯಾಯಾಧೀಶನ ಮುಂದೆ ಪಾಪಿ ಅಂತ ಒಪ್ಪಿಕೊಂಡ ಹಾಗೇ ಆಯ್ತುಲ್ಲ? ಹೇ ಮಗನೇ, ಕೃಷ್ಣನ ಮುಂದೆ ಒಪ್ಪಿದಲ್ಲ ! ಒಟ್ಟೂ ಹಾಳಾಡಿದೆ ನೀನು, ಹೇಳಿ ಪ್ರಯೋಜನ ಇಲ್ಲ. ಈಗ ಬಂದಿದ್ಯಾಕೆ ಹೇಳು, ಭೀಷ್ಮನ ಮೊಮ್ಮಗ ಅಷ್ಟು ಕೆಡದೇ ಇದ್ರೂ, ಇಷ್ಟು ಕೆಟ್ಟರೂ ಭೀಷ್ಮನಿಗೆ ಮೈಲಿಗೆ ಬಂತೋ? ಬಿಳಿಬಟ್ಟೆಗೆ ಸ್ವಲ್ಪ ಕೆಸರು ತಾಗಿದ್ರೆ ಸಾಕಾಗೋದಿಲ್ವೆ? ನೀನು ಅಂಥವನಲ್ಲದೇ ಇದ್ದದ್ದರಿಂದ ಈ ಮರುಕದ ಮಾತಾಡಿದ್ದು, ಮತ್ತೆ ಊರಿನಲ್ಲಿ ಯೆಷ್ಟು ಜನ ಇಲ್ಲ ಯಾರಾರ ಗಂಟು ತಿಂದು ಹಾಕುವವರು! ಅವರೆಲ್ಲ ಮಾತನಾಡಿಸೋದಕ್ಕೆ ನಾನು ಹೋಗೇನೋ?

ನಿನ್ನೆ ಕೃಷ್ಣ ಬಂದಿದ್ದ. ಧುರವೀಳ್ಯ ಕೊಡು, ನನ್ನದು ಆಕ್ಷೇಪ ಅದಲ್ಲ. ಕೃಷ್ಣನ ಕೈಯಲ್ಲಿ ಧುರವೀಳ್ಯ ಕೊಟ್ಟು ಅವ ಹೇಳಿದ್ದಲ್ಲ ...'ಕೊಲ್ಲಿಸ್ತೇನೆ' ಅಂತ. ಅದಾದ್ರೆ ಆಲೋಚನೆ ಮಾಡುವದಕ್ಕುಂಟು ಅಂತ ಸ್ವಲ್ಪ ನನ್ನನ್ನು ನೋಡ್ತಿದ್ರೆ ಸಾಕಿತ್ತು. ಈಗ ಪಾಂಡವರಲ್ಲಿ ಯುದ್ಧ ಬದ್ಧವೇ? ಈಗ 'ಪೊರೆಯುವರಾರೆ' ಅಂತ ಹೇಳಿ? ಹಾಂ, ಅಲ್ಲಿಗೆ ಬಾ, ನಾನು ಮೆಚ್ಚುವದು ಅದಕ್ಕೆ ನಿನ್ನನ್ನಾಕ್ಷೇಪಿಸಿದ್ದೂ ಅಷ್ಟಕ್ಕೇ, ನೆರೆಹೊರೆಯವರ ಯೋಗಕ್ಷೇಮ ಕೇಳ್ತಾ ... ಯಲ್ಲಿ ಅಡಿಗೆ ಆಗದೆ ? ಯಲ್ಲಿ ಊಟ ಆಗಲಿಲ್ಲ? ಅಂತ ಕೇಳುವ ಪ್ರವೃತ್ತಿಯಲ್ಲಿ ನಮ್ಮ ಒಲೆ ಉರಿತದೋ ಇಲ್ಲೋ ಅಂತ ನೋಡೋದು ಮರಿಬಾರಲ್ಲ? 'ನಮ್ಮನ್ನು ಪೊರೆಯುವರಾರ್ರೆ' ಅಲ್ವೊ? ಯೆಷ್ಟು ಸುಲಭವಾದ ಪ್ರಶ್ನೆ ಇದು! ನಮ್ಮ ದೇಶಕ್ಕೊಂದು ಸಂಸ್ಕಾರ ಉಂಟು ಮಗನೆ. ಯೆಲ್ಲರನ್ನೂ ಕಾಪಾಡುವವ ಯಾರು? ದೇವರೊಬ್ಬ, ಹ್ಞ ಮತ್ತೆ? ಹಾಗಾದರೆ ಅದಕ್ಕೆ ಈ ರೀತಿಯಿಂದ ಉತ್ತರವನ್ನು ಕೊಡೋಣ. ಪಾಂಡವರನ್ನು ಕಾಪಾಡುವ ಶಕ್ತಿ ಯಾವುದು? ಆ ಶಕ್ತಿಯನ್ನಿದಿರಿಸಿ ನಮ್ಮನ್ನು ಕಾಪಾಡುವ ಶಕ್ತಿ ಇದೆಯೇ? ಇದ್ದರೆ ಯಾವುದು? ನಮ್ಮದು, ಇದೆಯೇ? ಅಲ್ಲಿಯದು, ಉಂಟೇ?

*ಸಾಂಗತ್ಯ-ರೂಪಕ॥ ಆದಿನಾರಾಯಣ ದುಷ್ಟ ಶಿಕ್ಷಣಕ್ಕಾಗಿ | ಮೋದದಿ ದೇವಕಿಗುದಿಸಿ*

ಸಾದರದೊಳು ಪಾಂಡು ಜಾತರ ಪೊರೆಯುವ ಛೇದಿಸಿಹನು ಕೌಂಸಾದಿಗಳ || ೧೩೬ |

ಹಾಗಾಗಿ, ಆ ಪ್ರಬಲವಾದ ಕೂಟವನ್ನಾಧರಿಸಿಕೊಂಡು ನಾವು ಸ್ವಲ್ಪ ತಿರುಗುವೋ ಆಗದೋ? ಯೇ ಹುಚ್ಚ... ನಮ್ಮದ್ದಾದ ಸಂಸ್ಕಾರವನ್ನವಲಂಬಿಸಿ, ನಮ್ಮ ನಂಬುಗೆಯನ್ನು

ಬೆಳೆಸಿಕೊಂಡು ನೋಡಿದಾಗ, ಪ್ರಪಂಚವನ್ನೇ ರಕ್ಷಿಸುವವ ಆದಿನಾರಾಯಣ. ಆದಿನಾರಾಯಣ ಯಾರು ಅಂತಂದ್ರೆ ಆಧ್ಯಾತ್ಮ ಆಯ್ತುದು. ಈಗ ನಮ್ಮ ವ್ಯವಹಾರದಲ್ಲಿ ನಾವು ಮಾತಾಡೋದು ಈ ಮೂರನ್ನೂ ಜೀವರು, ಜಗತ್ತು, ದೇವರು ಅಳವಡಿಸಿಕೊಂಡು, ಕೇವಲ ದೇವರು ಎಂಬ ವಾದಕ್ಕೆ ಮುಟ್ಟಿದಾವಾಗ ಜೀವರೂ ಸುಳ್ಳಂತೆ, ಜಗತ್ತೂ ಸುಳ್ಳಂತೆ. ಈ ಅರ್ಥದಲ್ಲಿ ಜಗತ್ತನ್ನು ಯಾರು ಸೃಷ್ಟಿ ಮಾಡಿದರು? ಯಾವ ದೇವರು? ಸೃಷ್ಟಿಕರ್ತ ದೇವರು. ಈ ಪ್ರಪಂಚವನ್ನೆಲ್ಲ ನಾಶ ಮಾಡ್ತಾನಂತೆ ಯಾರು? ದೇವರು ಕಾಪಾಡುವವನು ಯಾರು? ದೇವರು. ಈ ದೇವರ್ಕಳಿಗೆ ಭಿನ್ನತೆ ಇಲ್ಲದೇ ಇದ್ರೂ, ಗುರುತಿಸುವದಕ್ಕೆ ಒಂದೊಂದು ಹೆಸರು ಬೇಡವೋ? ಆವಾಗ ಬ್ರಹ್ಮ, ವಿಷ್ಣು, ಮಹೇಶ್ವರ, ಪಾಲನಾ ಕರ್ತೃ ವಿಷ್ಣು, ಯೆಲ್ಲರನ್ನೂ ಕಾಪಾಡುವವ ನಾರಾಯಣ ಎಂಬ ನಂಬುಗೆ ಅಲ್ಲಿಂದ ಬೆಳೆದರೆ ಯೆಷ್ಟೋಸಲ ವೈಜ್ಞಾನಿಕವಾದಂತಹ ಸತ್ಯ, ವಿಶ್ವಾಸ ಪೂರ್ವಕವಾದಂತಹ ನಂಬುಗೆ, ಇದು ಪರಸ್ಪರ ಹೊಂದಿಕೆ ಆಗದೇ ಹೋದೀತು. ಈ ಅವಸ್ಥೆಯಲ್ಲಿ ನಂಬುಗೆಗೆ ಬೆಲೆ ಹೆಚ್ಚು. ಮಾರ್ಗದಲ್ಲಿ ಬಿದ್ದದೆ ಒಂದೆರಡು ಮೊಳದ ಹಗ್ಗ ಅಂತ ಕಲ್ಪಿಸಿಕೊ. ಸಂಶೋಧನಾ ದೃಷ್ಟಿಯಲ್ಲಿ ಬೆಳಕಿನಲ್ಲಿ ಕಂಡಾವಾಗ ಅದು ಹಗ್ಗವಾಗಿ ಪರಿಣಮಿಸಲಿ, ಮನಸ್ಸಿನ ಭಾವನೆಗೆ ಅದು ಸರ್ಪ ಅಂತ ಬಂದ್ರೆ? ಈಗ ನಿನ್ನಲ್ಲೊಂದು ಪ್ರಶ್ನೆ - ಬೌದ್ಧಿಕವಾದಂತಹ ಸಿದ್ಧಿಗಿಂತಲೂ, ಮಾನಸಿಕವಾದಂತಹ ಭಾವನೆಗಳು ತಾನೆ ನಮಗೆ ಸುಖವನ್ನೋ, ದುಃಖವನ್ನೋ ಕೊಡುವಂತಹದ್ದು? ಬೌದ್ಧಿಕವಾದ ಸಿದ್ಧಿಯಲ್ಲಿ ಮೌನವೇ ಅಲ್ವೇ? ಅಲ್ಲಿ ರಸ ಇಲ್ಲವಲ್ಲ? ಜ್ಞಾತ, ಜ್ಞಾನ, ಜೇಯ ಏನೂ ಇಲ್ಲ. ಅದು ಬದುಕೇ ಅಲ್ಲ. ನಾವು ವ್ಯಾವಹಾರಿಕರು ಅಂತಾ...? ಇದೆ, ಇದೆಲ್ಲ ... ನಾನು ರಾತ್ರಿಯೆಲ್ಲಾ ನಿದ್ದೆ ಕೆಟ್ಟು ಹಾಸಿಗೆಯಲ್ಲಿ ಹೊರಳಾಡ್ತಾ ಇರೋದು ಅದಕ್ಕೇ ಅಲ್ಲೊ? ಈಗ ನೀನೂ ಇಷ್ಟು ದೂರ ಬಂದದ್ದು ಅಷ್ಟಕ್ಕೇ ಅಲ್ವೊ? ಆದ್ದರಿಂದ, ನಮ್ಮ ಮಟ್ಟ ಮೀರಿ ಮಾತಾಡೋದು ಬೇಡ, ಯೆಲ್ಲರನ್ನೂ ಕಾಪಾಡುವ ನಾರಾಯಣ ಕಾಪಾಡುವ ಹಾಗೆ ಕಾರ್ಯಕ್ರಮವನ್ನು ರೂಪಿಸಬೇಕು ಅಂತ ಕಲ್ಪಿಸ್ತಾನಂತೆ. ಕೆಲವು ಸಲ ತಾನೇ ಪ್ರತ್ಯಕ್ಷನಾಗಿ ಜನ ಇದ್ದಲ್ಲಿ ಬಾನಂತೆ. ಕೆಲವೊಮ್ಮೆ ಇದ್ದಲ್ಲಿಂದಲೇ ಸಂಕಲ್ಪಿಸ್ತಾನೆ. ಆದರೆ ವಿಶೇಷವಾದ ರಕ್ಷಣೆಯನ್ನು ಕೆಲವರಿಗೆ ಕೊಡಬೇಕಾದ ಸಂದರ್ಭ ಬಂದ್ರೆ ನೇರ ಬರ್ತಾನೆ. ಹಾಗಾದ್ರೆ ಯಾರಿಗೆ ಸಂರಕ್ಷಣೆಯನ್ನು ಕೊಡಬೇಕು ? ಆರ್ತರಿಗೆ, ಹೌದಲ್ಲ. ಪ್ರಾಯ ಬಂದ ಮಕ್ಕಳು ಅಮ್ಮಾ ಅಂತ ದೂರದಿಂದ ಕೂಗಿದ್ರೆ ಇಲ್ಲಿಂದಲೇ ಕೇಳ್ತಾಳೆ ತಾಯಿ “ಯೇನೋ? ಇಂಥಾದ್ದಾಗೇಕು, ಇಂಥಾಬದಿಯಲ್ಲಿದೆ” ಅಲ್ವೊ? ಮೊಲೆಹಾಲನ್ನು ಕುಡಿದು ಬದುಕುವ ಮಗು ಅತ್ತರೆ? ದೇವರದ್ದೂ ಕ್ರಮ ಹಾಗೆ, ಹಾಗಾಗಿ, ತನ್ನ ಅಂತರಂಗಿಕ ಭಕ್ತರು ಕೂಗಿ ಕರೆದಾವಾಗ ಆ ಭಕ್ತರಿಗೆ ಭೂಮಿಗಿಳಿದು ಬತ್ತಾನೆ. ನಮಗೆ ಪುರಾವೆಯನ್ನೂ ಕೊಡ್ತಾರೆ ವ್ಯಾಸರಂತಹ ವಿದ್ವಾಂಸರು. ಅವರು ಜ್ಞಾನದೃಷ್ಟಿಯನ್ನುಳ್ಳವರು. ಆ ಜ್ಞಾನದ ದೃಷ್ಟಿಯಲ್ಲಿ ಅವರು ಯೇನನ್ನು ಕಂಡುಕೊಳ್ತಾರೆ ಇದನ್ನು ನಾವು ಆ ಕಣ್ಣಿನಿಂದ ಕಾಣುವಲ್ಲಿವರೆಗೆ ಒಪ್ಪಿಕೊಳ್ಳಬೇಕು. ಇದಕ್ಕೆ “ಆಚಾರ್ಯವಾನ್ ಪುರುಷೋ ವೇದ” ಅಂತ ಒಂದು ಮಾತು ಬಂದದೆ. ಆದಿನಾರಾಯಣ ತನ್ನ ಆರ್ತಭಕ್ತರನ್ನು ಎತ್ತಿ

ಬೆಳೆಸುವದಕ್ಕಾಗಿ, ದುಷ್ಟರನ್ನು ಶಿಕ್ಷಿಸುವದಕ್ಕಾಗಿ, ಈ ಶಿಕ್ಷಿಸುವದು ಅನುಗ್ರಹ ಬುದ್ಧಿಯಿಂದಲೋ, ದ್ವೇಷ ಬುದ್ಧಿಯಿಂದಲೋ? ಅನುಗ್ರಹ ಬುದ್ಧಿಯಿಂದ. ಈಗ ಊರವರ ಮಕ್ಕಳನ್ನೆಲ್ಲ ಶಿಕ್ಷಿಸಲು ಮನೆಯ ಹಿರಿಯರು ಹೋಗ್ತಾರೋ? ಮನೆಯ ಮಕ್ಕಳನ್ನೇ ಶಿಕ್ಷಿಸ್ತಾರೆ. ಅಲ್ಲಿರುವದೂ ಪ್ರೀತಿಯೇ ಅಲ್ವೆ? ಆದಕಾರಣ, ಸ್ಥೂಲದೃಷ್ಟಿಯಿಂದ - ದುಷ್ಟರನ್ನು ಶಿಕ್ಷಿಸುವದಕ್ಕಾಗಿ ಅಂತ ಹೇಳಿದ್ರೂ ಅವರನ್ನೂ ತಿದ್ದಿ ಉದ್ಧರಿಸುವದಕ್ಕಾಗಿ ಕರುಣಾಳುವಾದಂತಹ ದೇವನು ಈ ಜೀವರ ಮೇಲೆ ವಿಶೇಷವಾದಂತಹ ಮಮಕಾರ ಉಲ್ಬಣಾವಸ್ಥೆಗೆ ಯೇರಿದಾಗ ಉಕ್ಕಿ ಬಂದಾಗ, ತಾಯಿ ಎಳೆಮಗುವಿನ ಕೂಗನ್ನು ಕೇಳಿ ಬಂದಂತೆ ಬಂದ್ರೂ ದೊಡ್ಡ ಮಕ್ಕಳನ್ನು - "ಎಲ್ಲಿದ್ದೀರೋ ಏನ್‌ಮಾಡ್ತೀರಿ" ಅಂತ ಕೇಳೋದಿಲ್ವೊ? ಎಂಬಂತೆ ಪರಮಾತ್ಮ ಜಗತ್ತಿನಲ್ಲಿ ಇಳಿದು ಬತ್ತಾನೆ. ಆದ್ದರಿಂದಲೇ ಅವತರಣ. ಮಿಕ್ಕ ಜೀವರು ತಾಯಿಯ ಹೊಟ್ಟೆಯಿಂದ ಪತನ ಹೊಂದತಾರೆ. ಅದು ಪತನ, ಇದು ಅವತರಣ. ಈಗ ನೀನು ಮಹಾರಾಜ. ಉಪ್ಪರಿಗೆಯ ಮೇಲಿರಬಹುದು. ಆದ್ರೆ ಕೆಳಗೆ ಇದ್ದವರನ್ನು ಕಾಣಬೇಕಾದ್ರೆ ಸಂಭಾವಿತನಾದ ನೀನು ಇಳಿದು ಬರೋದಿಲ್ವೊ? ಕೆಲವರು ಸಣ್ಣ ಜನಗಳಿದ್ದಾರೆ - ಒಬ್ಬ ಉಪ್ಪರಿಗೆಯಲ್ಲಿದ್ದಾನೆ. ಯಾರದು? "ಯಾರೋ ಒಬ್ಬ ಬಂದಿದ್ದಾನೆ". ಇಲ್ಲಿ ಬರಿಕ್ಗಳು. ಹಾಗಾದ್ರೆ ... ಅವನನ್ನು ಇವನ ಜಾಗಕ್ಕೆ ಏರಿಸಿದ! ಹಾಗಾದ್ರೆ ದೊಡ್ಡವ ಯೇನ್ಮಾಡ್ತಾನೆ. ಅಂಗಳದಲ್ಲಿ ನಿತ್ತು ಒಬ್ಬ ಕೂಗ್ತಾನೆ ಅಂತಾದ್ರೆ ಅಲ್ಲಿಗೆ ಬಾರ್ತಾನೆ. ದೊಡ್ಡಸ್ತಿಕೆ ಇದ್ದದ್ದರಿಂದಲೇ ಇಳಿದು ಬಂದದ್ದು. ಆವಾಗ ಕೆಲವರು ತಿಳಕೊಳ್ಳಬಹುದು. "ನೋಡಿದ್ರೋ ಯಾರು ಬಂದ್ರೂ ಮಾಳಿಗೆಯಿಂದ ಇಳಿಯದೇ, ಇದ್ದವರನ್ನು ನಾನು ಅಂಗಳದಲ್ಲಿ ನಿತ್ತು ಕೂಗಿ ಕರೆದಾಗ ಇಳಿಸಿದೆನೋ ಇಲ್ವೊ?

ಹಾಗೇ ಕೆಲವರು ಕೆಟ್ಟವರು ಹೇಳ್ತಾರೆ "ದೇವರನ್ನೇ ನಾವು ಭೂಮಿಗಿಳಿಸಿದ್ದೇವೆ". ದುರ್ಬುದ್ಧಿ ಅದು. ಕೆಲವು ಪಾಪಿಗಳು ಹೇಳಿ ಆಗಿ ಹೋಯ್ತು ಇದಕ್ಕಿಂತ ಮೊದಲೇ ಪ್ರಪಂಚದಲ್ಲಿ - ಹಿರಣ್ಯಕಶ್ಯಪು, ಹಿರಾಣ್ಯಾಕ್ಷನಂತವರು. "ಯೇನೇ ಆಗ್ಲಿ, ಯೆಲ್ಲಿಯೋ ಇದ್ದಂತಹ ದೇವನನ್ನು ನಾವಿದ್ದ ಕಾಲಕ್ಕೆ ನಮ್ಮ ಪ್ರಪಂಚಕ್ಕೆ, ನಮ್ಮ ಬೀದಿಗೆ, ನಮ್ಮ ಮನೆಗೆ ನಾವು ಕರೆಸಿದ್ದೇವೋ ಇಲ್ವೊ"? ನೀನು ರಾವಣನ ಆದರ್ಶ ಹಿಡ್ಕೊಂಡವ ಅಲ್ಲವಲ್ಲ ? ಕಂಸನ ಆದರ್ಶವೂ ಅಲ್ಲವಲ್ಲ ? ಹಂ, ಬಿಡು ಹಾಗಾದರೆ "ಹಿಂದೆ ರಾವಣ, ಕಂಸ ಮುಖ್ಯರ" – ಸುದ್ದಿ ಬೇಡ. ಕೃಷ್ಣನ ಬಗ್ಗೆ ಹೌದದು ಕಂಸನನ್ನು ಅವನೇ ಕೊಂದದ್ದು. ಮೋದದಿ ದೇವಕಿಗೆ ಉದಿಸಿ, ನೋಡು ನೋಡು - ಈಗ ನನ್ನಂಥವರು ಮಹನೀಯರ ವಾಕ್ಯವನ್ನು ಅರ್ಥವತ್ತಾಗಿ ಗ್ರಹಿಸಿ ಹಾಗೇಯೇ ಅನುವಾದ ಮಾಡುವವರು - ಆದಿನಾರಾಯಣ, ದುಷ್ಟ ಶಿಕ್ಷಣೆಗಾಗಿ, ಆರ್ತರಕ್ಷಣೆಗಾಗಿ ಮೋದದಿ ದೇವಕಿಗೆ ಉದಿಸಿ. ಉದಿಸುವದೆಂದರೆ - ಮೇಲೊಗವೋ ? ಹೌದಲ್ಲ ? ಮೋದದಿ... ಈ ಪ್ರಪಂಚದಲ್ಲಿ ? ? ಈ ಯಾವ ಮಗುವೇ ತಾಯಿಯ ಗರ್ಭದಿಂದ ಹುಟ್ಟಿ ಬಗ್ಗಿ... ಅಳದೆ. ಇದು ? ನಗ್ತಾ ಹುಟ್ಟಿದ ಮಗು. ಹಾಗಾಗಿ ಬಾಕಿ ಮಕ್ಕಳ ಸಾಲಿನಲ್ಲಿ ಕೃಷ್ಣನ ಬಾಲ್ಯವನ್ನು ಸೇರಿಸಬಾರದಲ್ಲ ? ಶ್ರೀಕೃಷ್ಣ ಯೇನು ಮಾಡಿದ್ರೂ ಅದು ಅವನಿಗೆ ಮೀಸಲು ಅಂತ ಬಿಟ್ಟು ಬಿಡಬೇಕೇ

ಹೊರತು - 'ನ ದೇವ ಚರಿತಂ ಚರೇತ್', ಕೆಲವು ಸಲ ಸಿಟ್ಟು ಬಂದಾವಾಗ ಕೃಷ್ಣನನ್ನೂ ನೀನು ಬೈದಿದ್ದಿ ರಾಜಕೀಯ ಅದು. ಈಗ ಹೇಳು ಆ ಕೃಷ್ಣ ಯೇನು ಹೇಳಿದ ಯೆದೆತಟ್ಟಿ ! ಮೊದಲೆಲ್ಲಿ ಹೇಳಿದ್ದಾನೋ ನನಗ್ಗೊತ್ತಿಲ್ಲ. ಒಬ್ಬೊಬ್ಬು ಒಂದೊಂದ್ ಥರ ಹೇಳ್ತಾರೆ. ದ್ರೌಪದೀ ಸ್ವಯಂವರಕ್ಕೆ ಬಂದಿದ್ದಾಗ, ರಾತ್ರಿ ಕುಂಬಾರನ ಮನೆಯಲ್ಲಿ ಕುಂತೀದೇವಿಯನ್ನು ಕಂಡಾಗ ಕುಂತೀದೇವಿ ಹೇಳಿದಳಂತೆ "ಹೆತ್ತವಳು ನಾನೆಂಬೆನಲ್ಲದೆ, ಹ್ಹ ಕೃಷ್ಣಾ ಇನ್ನು ಮುಂದೆ ಕಾಪಾಡಬೇಕಾದವ ನೀನು". ಆವಾಗ್ಗ ಹೇಳಿದ್ದಾನಂತೆ- "ಅತ್ತೇ, ಕಣ್ಣೀರಿಳಿಸಬೇಡ ಮಮಪ್ರಾಣಾಹಿ ಪಾಂಡವಾ" ಇದ್ದರೂ ಇರಬಹುದು. ಆದರೆ ಪ್ರತ್ಯಕ್ಷವಾಗಿ ಶ್ರೀಮುಖದಿಂದ ನಾವು ಆ ಶಬ್ದ ಕೇಳಿದ್ದು ಮೊನ್ನೆ ಮೊನ್ನೆ, ಊಟದ ಬಗ್ಗೆ ನೀನು ಆಕ್ಷೇಪ ಎತ್ತಿದಾಗ ಶ್ರೀ ಕೃಷ್ಣ ಒಂದು ಮಾತು ಹೇಳಿದ "ಯೇನಯ್ಯಾ ಕೌರವ, ವೈದಿಕ ಸಂಸ್ಕೃತಿಯನ್ನು ಉಳ್ಳವ ಪರಿಶಿಂಚನೆ ಮಾಡಿ ಊಟ ಮಾಡುವ ವರ್ಗದವರು ನಾವು. ಜನಿವಾರ ಹಾಕಿಸಿಕೊಂಡವರು - ದ್ವಿಜರು ಆದರೆ ಬ್ರಾಹ್ಮಣರಲ್ಲ, ವಿಪ್ರರಲ್ಲ. ನಾವು ತಿನ್ನೋದೋ? ನಾವು ಮುಕ್ಕೋದೋ? ಓಂ ಪ್ರಾಣಾಯಸ್ವಾಹಾ, ಓಂ ಅಪಾನಾಯಸ್ವಾಹಾ ಎಂತ ಜಠರಾಗ್ನಿಸ್ವರೂಪನಾದಂತಹ ಯಜೇಶ್ವರನಿಗೆ ಹವಿಸ್ಸನು ಕೊಡೋದು, ಹಾಗೆ ಕೊಟ್ಟಾವಾಗ ಹೊಟ್ಟೆ ತುಂಬತ್ತದೆ. ಯೇನು ಮಾಡೋಣ. ನಾನು ನಿನ್ನಲ್ಲಿ ಪ್ರಾಣಾಯಸ್ವಾಹಾ ಮಾಡಲಿಕ್ಕೆ ಉಪಾಯವಿಲ್ಲ. ಮಮ ಪ್ರಾಣಾಹಿ ಪಾಂಡವಾ:" ಅಂತ ಹೇಳಿದ. ಗೊತ್ತಾಯ್ತು ಈಗ? ಪ್ರಾಣವನ್ನು ರಕ್ಷಿಸುವವ ಯಾರು? ಆತ್ಮ ಆದ್ದರಿಂದ ಅವನಿಗೆ 'ವಾಸುದೇವ' ಅಂತ ಹೆಸರು. ಯೆಲ್ಲರಲ್ಲಿಯೂ ಚೇತನರೂಪನಾಗಿ ಇದ್ದವನು. ಆದಕಾರಣ ವಾಸುದೇವ. ತಿಳಿದವರು ಹೇಳಿದರು. "ಯೆಂಟುಗೇಣಿನ ದೇಹ, ನೆಂಟ ನೀ ತೊಲಗಿದರೆ ಮಣ್ಣ ಹೆಂಟೆಯಂದದಿ"... ಈ ವಾಸುದೇವ ಸರ್ವತಂತ್ರ ಸ್ವತಂತ್ರ ಬರುವುದು ಅವನಿಷ್ಟ, ಹೋಗುವುದು ಆವನ ಇಷ್ಟ. ಹೀಗಾಗಿ ಸಕಲ ಜೀವದ ಪ್ರಾಣವೂ ಕೂಡಾ ಅವನ ಇಷ್ಟಾನಿಷ್ಟದಲ್ಲಿದೆ. ಒಂದು ಸೂತ್ರದೊಳಾಡುವವು. ಇಂತಹ ಕೃಷ್ಣ ಹೇಳ್ತಾನೆ - "ಪಾಂಡವರು ನನ್ನ ಪ್ರಾಣ. ಅವರನ್ನು ರಕ್ಷಿಸುವವ ನಾನು. ಮಾತ್ರ ಅಲ್ಲ, ಅವರಿಗೆ ನನ್ನದಾದ ಚೇತನವನ್ನು ಕೊಟ್ಟು ಅದು ಬರೇ ಬಡಿಗೆಯಾದರೂ ಅದಕ್ಕೆ ವಜ್ರದಷ್ಟು ಕಾಠಿಣ್ಯವನ್ನು ಪ್ರದಾನ ಮಾಡಿ ನನ್ನ ರಟ್ಟೆಯ ಬಲದಿಂದ ಈ ಹಗುರವಾದ ಕೋಲಿನಿಂದ ನಿನ್ನ ತಲೆ ಒಡಿತೇನೆ" ಅಂತ ಹೇಳಿದ ಅವ. ಪಾಂಡವರನ್ನು ರಕ್ಷಿಸ್ತೇನೆ ಅಂತ ಹೇಳಿದವ ಯಾರು? ಕೃಷ್ಣ

ಈಗ ನಿನ್ನ ಪ್ರಶ್ನೆ "ನಮ್ಮನ್ನು ರಕ್ಷಿಸುವವರು ಯಾರು ?" ಅದು ತೋರಿದ್ದು ಒಳ್ಳೆಯದಕ್ಕಾಯ್ತು. ನಮಗೆ ಬೇರೆ ಜನ ಇಲ್ಲ ಮಗನೆ. ಸಾರ್ವಜನಿಕರಿಗೆ ಸದ್ಯ ನಮ್ಮ ಊರಿನಲ್ಲಿ ಇದ್ದದ್ದು ಒಂದೇ ಕೆರೆ. ಶ್ರೀ ಕೃಷ್ಣ ಎಂಬ ವಿಶಾಲವಾದ ಸರೋವರ, ನಿರ್ಮಲ ಆಗಬೇಕು ಅಂತ ಮನಸ್ಸಿದ್ರೆ ಮೂಡುಗಡೆಯ ಮನೆಯವನೊಡನೆ ಪಶ್ಚಿಮದ ಮನೆಯವನಿಗೆ ಸರಿ ಇಲ್ಲದೇ ಇದ್ರೂ ಅವ ಮೂಡುಬದಿಯಿಂದ ಕೆರೆ ಇಳಿದಾವಾಗ ಇವನಿಗೂ ಶೌಚ ಬೇಕಿದ್ರೆ ಅವ ಪಡುಗಡೆಯಿಂದ ಇಳಿಯುವುದು ಒಳ್ಳೆಯದು - ಅದೇ ಕೆರೆಗೆ. ಅವ

ಮುಟ್ಟಿದ ಕೆರೆಯಲ್ಲಿ ನಾನು ಮುಖ ತೊಳೆಯೋದಿಲ್ಲ ಅಂತ ಹೇಳಿದ್ರೆ ಜನರ ಮುಂದೆ ಮುಖ ತಾರದೇ ಇರುವುದು ಒಳ್ಳೆಯದು. ಆದ್ದರಿಂದ ನಿನ್ನನ್ನು ರಕ್ಷಿಸುವವರು ಯಾರು ಅಂತಿದ್ರೆ ನಾನು ಬೆಟ್ಟು ಮಾಡೋದು ಅಲ್ಲಿಗೆ - ಕೃಷ್ಣ ಒಬ್ಬನೆ. ಅದಲ್ಲದೇ ಇದ್ರೆ, ನೀನು ಬೇರೆ ಯಾರನ್ನಾದ್ರೂ ಕಂಡಿದ್ರೆ ಹೇಳಬಹುದು ಅಂತ ತೋರಿದ್ರೆ, ಅಜ್ಜ ಅದರಲ್ಲಿಯೂ ಅಭಿಪ್ರಾಯ ಕೊಡಲು ಸಿದ್ಧ, ಬದ್ಧ ಅಲ್ಲ. ಯಾಕೆ ? ನನ್ನ ಹುಡುಗ ಒಳ್ಳೆಯದಾಗಬೇಕು ಅಂತ ನನಗುಂಟು. ನೀ ಜಾರಿ ಬಿದ್ದದ್ದು ನೆಲದಲ್ಲಿ, ಯೇಳಲಿಕ್ಕೂ ನೆಲವನ್ನೇ ಆಶ್ರಯಿಸಬೇಕು ಎಂಬಲ್ಲಿ ಸತ್ಯ. ಜಾರಿದ ನೆಲವನ್ನೇ ಆಶ್ರಯಿಸಬೇಕೋ ಅಂತ ಕೇಳಿದ್ರೆ ಕಷ್ಟ. ಯಾಕೆ ? ಅದು ಜಾರುವ ನೆಲ. ಕಾಲು ಜಾರಿ ಅಲ್ಲೇ ಬಿದ್ದದ್ದು. ಆಧರಿಸುವದಕ್ಕೆ ಕೈ ಕೊಟ್ರೆ ಕೈಯ್ಯ ಬಿದ್ದಿತು, ಮತ್ತೊಂದು ಪೆಟ್ಟು ಹೆಚ್ಚಾದೀತು.

"ಅವರದ್ದನ್ನು ಕೊಟ್ಟು ಬಿಡು ಮಗ". ಅದನ್ನು ನಾನು ಯೆಷ್ಟು ಸಲ ಈ ಬಾಯಿಯಿಂದ ಹೇಳಲಿ ಹೇಳು? ಪಾಂಡವರು ಮುಡಿದ ಹೂ ಬಾಡದಂತೆ ಕೃಷ್ಣ ಕಾಪಾಡುತ್ತಾನೆ. ಯೆಲಾ ! ಇದೂ ಒಂದು ಸಂಚಾರೀ ಭಾವದವಾದ ಹೌದು. ನಮ್ಮನ್ನು ತೊರೆಯುವರಾರೈ ಅಂತ ಹೇಳಿದ್ದಕ್ಕೆ ನಾನು 'ಅವನೇ' ಅಂತ ತೋರಿಸುವಾಗ ಅದನ್ನು ಮತ್ತೆ ಬೆಳೆಸಲಿಕ್ಕೆ ನೀನು ಹೋಗೋದಿಲ್ಲ. ಬುದ್ಧಿವಂತರ ಲಕ್ಷಣ ಅದೇ ! ಯಾವ ಸಿದ್ಧಾಂತವನ್ನು ಖಂಡಿಸುವದಕ್ಕೆ ತನ್ನ ವಾದ ದುರ್ಬಲವಾಗಿದೆಯೋ ಅದನ್ನಲ್ಲಿಗೇ ಅಡಗಿಸಿಡುವುದು ಬುದ್ಧಿವಂತರ ಲಕ್ಷಣ. ಆಚೆದಕ್ಕೆ ಹಾರಿದಿ ಅಕೋ!

ಪಾಂಡವರನ್ನು ರಕ್ಷಿಸ್ತಾನೆ ಕೃಷ್ಣ ಅನ್ನುವಾಗ ಈಗ ನಿನಗೆ ಬಂದಿದ್ದು - "ಅದು ಹೌದೋ" ಅಂತ ಅಲ್ವೊ? ನೊಡ್ಡ ಯೆಷ್ಟೇ ಕಲ್ತಿದ್ದಿ  ನೀನು ಅಂತ ಕೇಳೋ ಹೇಳು ಹೇಳು ದ್ಯೂತದಲ್ಲಿ, ವನವಾಸದಲ್ಲಿ ಕೃಷ್ಣ ತೊರೆಯುವ ಮಹಿಮ ಯಾಕೆ ರಕ್ಷಿಸಲಿಲ್ಲ ಅಂತಲ್ಲೊ ನಿನ್ನ ವಾದ? ನಮ್ಮ ಇಚ್ಛೆಗೆಲ್ಲ ದೇವರು ಸಹಿ ಹಾಕಬೇಕೇನೋ? ಈಗ ಪಾಂಡವರ ಅಭಿಪ್ರಾಯದಲ್ಲಿ ತಾವು ಅನಾಥರಾಗಿದ್ದೇವೆ. ಅರಕ್ಷಿತರಾಗಿದ್ದೇವೆ ಎಂಬ ಅಭಿಪ್ರಾಯ ಉಂಟು ಅಂತ ಆಸ್ರೇಲಲ್ಲೋ ನಿನ್ನ ವಾದಕ್ಕೆ ಪುಷ್ಟಿ ಬರೋದು ? ತಾವು ಸುರಕ್ಷಿತರೇ ಇದ್ದೇವೆ ಅಂತ ಅವರು ಹೇಳಿದ್ರೆ ? ಯೆಲ್ಲ ವಿಪರೀತ ಬುದ್ಧಿ ನಿನ್ನದು. ಈ ಪ್ರತಿಯೊಂದು ವಿಷಯದಲ್ಲೂ ಈ ಕೇಡನ್ನೇ ಗುರುತಿಸುವಂತಹ ಈ ಕೆಟ್ಟ ಬುದ್ಧಿ ಯೆಷ್ಟು ತಿಂಗಳಿಂದ ಬಂದದ್ದಿದು? ನಿನಗೊಳ್ಳದೊಂದೂ ಕಾಣೋದಿಲ್ಲಲ್ಲ ! ಯಾಕಯ್ಯ ಇಡೀ ಕಬ್ಬಿನ ಕೋಲು ಒಬ್ಬ ಕೊಟ್ಟಾವಾಗ ಆನೆಯಾಗಿ ಸೋಗೆ ತಿನ್ತಿ ಯಾಕೆ? ಇರುವೆಯಾಗಿ ಸಕ್ಕರೆ ತಿಂದ್ರೇನು ನಿನಗೆ? ಹಾಗೆಲ್ಲ ಕೆಡಕನ್ನು ಯೋಚಿಸಬಾರದಪ್ಪ, ಸುಯೋಧನಾ, ಮಕ್ಕಳ ಅಭ್ಯುತ್ಥಾನವನ್ನು ಬಯಸುವ ಹಿರಿಯರು ಓದಿಸುವ ಕಷ್ಟವನ್ನು ಕೊಡ್ತರೆ ಯಾರಿಗೆ? ಮಕ್ಕಳಿಗೆ, ತನ್ನಷ್ಟಕ್ಕೇ ಬದುಕಿ ಅಂತ ಬಿಟ್ಟಂತಹ ಕೆಲವು ಮಕ್ಕಳು ಇದ್ದಾರೆ ಕೆಲವರಿಗೆ ಆವರು ಈ ಮಕ್ಕಳನ್ನು ಕಂಡು ಹೇಳುವುದುಂಟು. - "ಹ್ವ , ಹಿರಿಯರೆಷ್ಟು ಕಷ್ಟ ಕೊಡ್ತಾರೆ ಇವರಿಗೆ ನಾವಾದ್ರೆ ಹಾರುವ ಹಕ್ಕಿಗಳ ಹಾಗೆ, ಇದ್ರಲ್ಲಿ ಯಾವುದು ಸರಿ ಯಾವುದು

ತಪ್ಪು ಹೇಳು. ಹಾಗಾದ್ರೆ ಮಕ್ಕಳ ಅಭಿವೃದ್ಧಿಗೆ ಬೇಕಾಗಿ ಹಿರಿಯರು ಕೊಡುವ ಈ ಶಿಕ್ಷಣ ಅದು ಒಂಥರ ಕಷ್ಟವೇ ದೇಹಕ್ಕೆ. ಆದರೂ ಅದು ಉತ್ಕರ್ಷಕ್ಕೆ. ಇದೇ ಉದಾಹರಣೆಯನ್ನು ಶ್ರೀ ಕೃಷ್ಣನಿಗೂ ಪಾಂಡವರಿಗೂ ನಾವು ಅನ್ವಯಿಸೋಣ. ಪಾಂಡವರಿಗೆ ತತ್ಕಾಲ ಈ ರೀತಿಯಾದಂತಹ ಶಿಕ್ಷಣವನ್ನೇ ಕೊಡೋಣ ಅಂತ ಭಗವಂತ ಸಂಕಲ್ಪಿಸಿ ಇದ್ದಾನೆ. ಇದ್ದಾನೆ ಎಂಬುವುದಕ್ಕೆ ಪುರಾವೆಯೇನು? ಮೊನ್ನೆ ಅವ ಕೊನೆಗೆ ಕೊಟ್ಟ ಮಾತೇ. ನಿನ್ನನ್ನೂ ನಿನ್ನ ಬಳಗದವರನ್ನೂ ... ಹೇಳಿದನಲ್ಲ? "ಧರಣಿಗೋಸುಗ ಬಳಗ ಸಹಿತಲೆ ನಡೆಯ ಬೇಡ ಕೃತಾಂತನಲ್ಲಿಗೆ" – ಯಾಕೆ ನಿನ್ನ ಬಳಗ? ನಾಳೆಗೆ ಈ ಪಕ್ಷದಲ್ಲಿ ಹಕ್ಕನ್ನು ಸ್ಥಾಪಿಸುವದಕ್ಕೆ ಒಂದೇ ಒಂದು ತಲೆ ಉಳಿಯಬಾರದು. ಅಂತಹ ಸರ್ವತಂತ್ರ ಸ್ವತಂತ್ರವಾದ ವಿರೋಧಿಗಳು ಇಲ್ಲದೇ ಇದ್ದಂತಹ ಒಂದು ಧರ್ಮ ಸಾಮ್ರಾಜ್ಯದ ಅಧಿಕಾರವನ್ನು ಪಾಂಡವರಿಗೆ ಕೊಡಿಸುತ್ತೇನೆ. ಇದಕ್ಕಾಗಿಯೇ ಆ ಪೂರ್ವ ತಯಾರಿ. ಆ ಹೊತ್ತು ದ್ಯೂತದಲ್ಲಿ ಪಾಂಡವರು ಸೋಲದ ಹಾಗೆ ಮಾಡುತ್ತಿದೆ ಅರ್ಧರಾಜ್ಯ ಅವರು ಮೊದಲು ಒಪ್ಪಿದ್ದು ಒಪ್ಪಿದ್ದೇ ಹೌದಲ್ಲ? ಈಗ ದ್ಯೋತದಲ್ಲಿ ನೀನು ಸೋತು ಪಾಂಡವರಿಗೆ ಲಾಭಯೇನು? ಸುಹೃದ್ಯೋತ, ಅಂತಾದ್ರೆ? ಇದು ಆಟಕ್ಕೊಂದು ರಂಗು ಬರುವದಕ್ಕಾಗಿ ಇದು ಬೇಕು ಸ್ಪರ್ಧೆ, ಹೊರಟು ಹೋಗುವಾಗ ಧರ್ಮರಾಯ ಗೆದ್ದದ್ದನ್ನೆಲ್ಲ ತೆಕ್ಕೊಂಡು ಹೋಗ್ತಿದ್ಯೋ? ನೀನು ಗೆದ್ದ ಕಾರಣ? ... ಕೊಡುವದಿಲ್ಲ ಅಂತ ನೀನು ಹೇಳಿದ್ರಿಂದ...? ನಿನ್ನ ನಾಶ ಮಾಡಿ ಪಾಂಡವರಿಗೆ ಕೊಡಿಸುವ ಕೃಷ್ಣ ನಿನ್ನದ್ದನ್ನು ಬೇರೆಯವರಿಗೆ ಉಳಿಸಿ ಹೋಗ್ತಾನೋ? ಅದನ್ನೂ ಕೂಡಿಸಿ ಕೊಡ್ತಾನಲ್ಲ? ಆದ್ದರಿಂದ ಹ್ಞ ... ನಿನ್ನ ಕೆಡುಕನ್ನು ನೀನು ಯೋಚಿಸಬೇಡ. ನಾನ್ ಹೇಳಿದ್ದದು. ಪಾಂಡವರನ್ನು ಯಾವಾಗಲೂ ಪೊರೆದಿದ್ದಾನೆ ಶ್ರೀ ಕೃಷ್ಣ. ಏಕಾದಶಿಯ ಸುಕೃತ ಮಕ್ಕಳಿಗೂ ಬಗ್ಗೆ ಅಂತ ತಾಯಿ ತಂದೆಯರು ಅವರನ್ನು ಉಪವಾಸ ಹಾಕುವದುಂಟು. ಶಿವರಾತ್ರಿ ಜಾಗರದ ಸುಕೃತ ಬಗ್ಗೆ ಅಂತ "ಏ ಮಕ್ಕಳೇ ಈ ಹೊತ್ತು ನಿದ್ರೆ ಮಾಡಲಿಕ್ಕೆ ಕೂಡದು", ಮಕ್ಕಳಿಗೆ ಆವಾಗ ನೋವಾದೀತು "ಇವರು ಮಾಡಿ ಹೋಗಬಾರದೇ ಕೈಲಾಸಕ್ಕೆ, ನಮಗ್ಯಾಕೆ ಉಪದ್ರವ ಕೊಡ್ತಾರೆ" ಅಂತ. ಅವರು ಪ್ರೌಢಾವಸ್ಥೆಗೆ ಬರುವಾಗ "ಹಿಂದಿನವರು ನಮಗೆ ಈ ರೀತಿಯಾದ ಪಾಠವನ್ನು ಕೊಟ್ಟದ್ದು ಈ ಹೊತ್ತು ಒಳ್ಳೆಯದ್ದಾಯ್ತು" ಅಂತ ಹೇಳ್ತಾರೆ. ಪಾಂಡವರ ತೀರ್ಮಾನ ಅಲ್ಲಿಗೆ ಬರಲಿಕ್ಕೆ ಕೆಲವೇ ದಿವಸ ಉಳದೆ. ಯೆಂದಾದರೂ ಧರ್ಮರಾಯ ಆಗಲಿ ಅಥವಾ ಧರ್ಮರಾಯನನ್ನು ಅನುಸರಿಸುವ, ಅನುಮೋದಿಸುವ ಸೋದರರಾಗಲಿ "ಕೃಷ್ಣಾ ನಿನ್ನನ್ನು ನಂಬಿ ನಾವು ಕೆಟ್ಟೆವು" ಅಂತ ಹೇಳಿದ್ದಾರೊ? ಈ ಹೊತ್ತು ಕೂಡಾ ಅವರಿಗೆ ಬೆಂಬಲ ಕೃಷ್ಣ, ಒಂದು ಮಾತು ಹೇಳೇನೆ. -ಸುಯೋಧನಾ, ನಿನ್ನ ಈ ಒಂದು ಹಟದಿಂದ ತಮ್ಮ ಇಚ್ಚೆಗೂ ವಿರೋಧವಾಗಿ ಕಷ್ಟಕ್ಕೆ ಕೈ ಒಡ್ಡಬೇಕಾದಂತಹ ದುಃಸ್ಥಿತಿ ನಮ್ಮವರಿಗೆ ನೀನು ತಂದ್ ಹಾಕಿದಿ. ಶ್ರೀಕೃಷ್ಣನ ದೈವತ್ವದ ಪ್ರಶ್ನೆಯನ್ನು ಮರೆತರೂ ಕೂಡ ನಮ್ಮ ಪಕ್ಷ ದುರ್ಬಲ, ನೀನು ಒಂದಾಲೋಚಿಸು. ಆವಾಗ್ಲೆ ಹೇಳಿದ್ದಲ್ಲ "ಯೇನು ಮಾಡಿಯಾದರೂ ಹಸ್ತಿನಾವತಿಯ ರತ್ನ ಸಿಂಹಾಸನವನ್ನು ತಮ್ಮದನ್ನಾಗಿಸಿ ತಾವು ಒಪ್ಪುವ ನಾಯಕನಿಗೆ ಕೊಡಬೇಕು ಅನ್ನುವ ಪಕ್ಷವೇ ಅಲ್ಲಿ ಇರುವುದು ಅಂತ ಹೇಳಿದೆಯಲ್ಲ?

ಹಾಗಾದರೆ ಅಲ್ಲಿರುವ ಪ್ರತಿಯೊಬ್ಬರಿಗೂ ಪಾಂಡವರಿಗೆ ಕೊಡಬೇಕಾದ ನೆರವಿನಲ್ಲಿ ಕಾಯಾ ವಾಚಾ ಮನಸಾ ಸಮರ್ಪಣ ಭಾವ ಉಂಟು ಅಂತ ತಿಳಿ. ತಮ್ಮ ವೆಚ್ಚದಿಂದ, ತಮ್ಮ ವ್ಯಯದಿಂದ ಸ್ವಯಂ ಉಮೇದ್ವಾರಿಕೆಯಿಂದ ಪಾಂಡವರಿಗೆ ನೆರವನ್ನು ಕೊಡುವ ಒಬ್ಬೊಬ್ಬನೂ ಯುದ್ಧ ಪ್ರಿಯನೇ ಹೌದೋ ? ಪಾಂಚಾಲರು, ವಿರಾಟರು ಇನ್ನೂ ಯಾರಾರೋ! ಇಲ್ಲಿ ಯುದ್ಧ ಬೇಕು ಅಂತ ಹೇಳ್ವವರು ಎಷ್ಟು ಜನ ಸಿಕ್ತಾರೆ? ಇಲ್ಲಿ ಬೇಕಾದವ ನೀನೊಬ್ಬ ಮಾತ್ರ ಬಾಕಿದ್ದವರೆಲ್ಲ ಬೇಡ ಅಂತ ಹೇಳುವವರೇ. ಅಲ್ಲಿ ಬೇಕು ಅಂತಲೇ ಎಲ್ಲವರೂ ಹೇಳ್ತಾರೆ. ಬೇಡ ಅಂತ ಹೇಳುವವ ಒಬ್ಬ ಧರ್ಮರಾಯ. ಈ ದೃಷ್ಟಿಯಿಂದ ರಾಜಕೀಯವಾಗಿ ನಾವು ತುಲನೆ ಮಾಡಿದಾವಾಗ ಆ ಪಕ್ಷ ಪ್ರಬಲವಾದದ್ದು. ತಲೆಯ ಮೇಲೆ ನಾವು ಹೇಳುವದಿದ್ದರೆ ... ಯಾಕೆ? ಒಂದೇ ಮನೋಧರ್ಮದ ಒಂದೇ ತತ್ತ್ವ ಚಿಂತನೆಯ ಒಂದೇ ಉದ್ದೇಶದ ಹತ್ತು ಜನರ ಮುಂದೆ ವಿಭಿನ್ನವಾದಂತಹ ತತ್ತ್ವದ ಉದ್ದೇಶದ ಸಾವಿರ ಜನರು ಇದಿರಿಸಿ ಜಯಿಸಲಾರರು ಮಗನೆ. ಆದಕಾರಣ 'ಧಾರಿಣಿಯಕೊಡಿಸವರ' ಕೃಷ್ಣ ಹೇಳಿದ್ದು ಇದಕ್ಕಿಂತ ಹೆಚ್ಚು ಹೌದು. ಅದನ್ನು ನೀನು ತಿರಸ್ಕರಿಸಿದ್ದಿ. ಆದರೆ ಕುಮಾರಾ, ಕೃಷ್ಣ ಹೇಳಿರುವದು ತಾತ್ವಿಕವಾಗಿಯೂ ಸರಿ. ಬೌದ್ಧಿಕವಾಗಿಯೂ ಸರಿ. ನಿನಗವನಲ್ಲಿ ಅಭಿಪ್ರಾಯ ಒಳ್ಳೇದಿಲ್ಲದೇ ಇದ್ದದ್ದರಿಂದ ನೀನು ತಿರಸ್ಕರಿಸಿದ್ದೂ ಸರಿ. ವತ್ಸಾ, ಊರವರೆಲ್ಲ ಹೇಳ್ತಾರೆ. ಒಬ್ಬ ಹುಡುಗನಲ್ಲಿ "ನೋಡಪ್ಪಾ ನೀನು ಹೀಗೆ ಮಾಡುವದೆಲ್ಲಾ ಸರಿಯಲ್ಲ" ಉಲ್ಲಂಘಿಸಬಹುದು ಅವ. ಆದರೆ ಪ್ರೀತಿಯ ತಾಯಿ "ಮಗಾ, ನೀನು ಹೀಗೆ ಮಾಡಬಾರದು" ಅನ್ನುವಾಗ "ನಾನು ಊರವರ ಮಾತೇ ಕೇಳಲಿಲ್ಲ ಮತ್ತೆ ನಿನ್ನ ಮಾತು ಕೇಳೇನೋ" ಅಂತ ಹೇಳಿದ ಮಗನನ್ನು ತಾಯಿ ಏನಂತ ಕರೀಬೇಕು ಹೇಳು. ಕೃಷ್ಣನ ಹಾಗೋ ನಿನಗೆ ನಾನು? ಒಬ್ಬ ಹಿರಿಯನಾಗಿ ನಿನ್ನ ಕುರಿತಾಗಿ ನನ್ನ ಹೃದಯದ ಸ್ಪಂದನ ಏನು? ... ಗೊತ್ತಾಗ್ತದೇನೋ?

ಸುಯೋಧನಾ, ನಿನ್ನಲ್ಲಿ ನಾನು ವಾದಿಸುವದಕ್ಕೆ ಮುಂದಾಗೋದಿಲ್ಲ ಯಾಕೆ? ವಾದಿಸಲಿಕ್ಕೆ ಕೂಡದು ಅಂತಲೋ? ಆಗದು ಅಂತಲೋ? ಆಂ, ನೀನು ಮೊಮ್ಮಗ. ಯೆಷ್ಟಾದರೂ ನೀನು ಸಣ್ಣವ. ನಿನ್ನಲ್ಲಿ ಚರ್ಚಿಸಿ ನನ್ನ ಸಿದ್ಧಾಂತವೇ ಸರಿ ಅಂತ ಸ್ಥಾಪಿಸಿ ನನಗಾಗಬೇಕಾದ್ದೇನು? ಸಾಂಸಾರಿಕನಾಗಿ ಆಗಿದೆ. ಹಿತವಾದದ್ದನ್ನೇ ಹಿರಿಯರು ಹೇಳ್ತಾರೆ. ಯೇನು ಮಾಡಿದರೂ ಮಕ್ಕಳನ್ನು ತಿದ್ದಲಿಕ್ಕಾಗೋದಿಲ್ಲ ಅಂತಂದ್ರೆ ಒಂದು ರೀತಿಯ ನೋವಿದ್ದೂ ಸಲುಗೆಯಿಂದ "ಯೇನು ಮಾಡೋದು ನನ್ನ ಮಕ್ಕಳ ಮುಂದೆ ನಾನು ಸೋತೆ" ಅಂತ ಹೇಳ್ತಾರೆ. ಆ ಸೋತೆ ಅಂತ ಹೇಳುವ ಮಾತಿನ ಧ್ವನಿಯೇನು ? "ಈ ಮಕ್ಕಳ ಬಗ್ಗೆ ಇದ್ದ ವಾತ್ಸಲ್ಯದ ಮುಂದೆ ನಾನು ಸೋತೆ" ಮತ್ತೆ ಅವರು ಮಾಡಿದ್ದನ್ನೆಲ್ಲ ಒಪ್ಪಿಕೊಳ್ಳುವ ಹುಂಬತನದಿಂದ ಸೋತಿದ್ದಲ್ಲ. ಯೇನ್ ಹೇಳಿದಿ ನೀನು?

"ನೀರೂ.. ಅದು ಮೇಲಕ್ಕೆ ಹರಿಯುವದಿಲ್ಲ" ಅದು ಪ್ರಕೃತಿಯ ನಿಯಮ. ಮನುಷ್ಯ ಬರೇ ಪ್ರಾಕೃತನೋ? ಹಾಗಾದರೆ, ಯೆಲ್ಲೆಲ್ಲೋ ಹರಿಯುತ್ತಿರುವ ನೀರನ್ನು

ಕೆಳಗಿಂದ ಮೇಲಕ್ಕೆ ತಂದು ಅಕ್ಕ ಪಕ್ಕದಲ್ಲಿ ಜನರಿಗೆ ಪ್ರಯೋಜನವಾಗುವಂತೆ ಮಾಡುವದಕ್ಕೇ ನಮ್ಮಲ್ಲಿ ಯೇನು ಹೇಳ್ತಾರೆ? ಸಂಸ್ಕಾರ ಹೌದೋ? ಪ್ರಕೃತಿದತ್ತವಾದ ಯಾವುದೇ ವಸ್ತುವನ್ನು ಸುಸಂಸ್ಕೃತನಾದ ಒಬ್ಬ ಮನುಷ್ಯ ಹಾಗೇ ಉಪಯೋಗಿಸಿಕೊಳ್‌ತಾನೋ? ಯಾಕೆ? ಇವನು ಪ್ರಾಕೃತನಲ್ಲ. ಹಾಗಾದರೆ, ಸುಸಂಸ್ಕೃತನಾದ ಇವನು ಪ್ರಕೃತಿದತ್ತವಾದ ಪ್ರಾಕೃತ ವಸ್ತುವನ್ನಾದ್ರೂ ಕೂಡಾ ಶುದ್ದಿಕರಣಗೊಳಿಸಿ ಆದರಿಂದ ಯೇನನ್ನೂ ಪಡೀತಾನೆ? ಅಮೃತತ್ತ್ವವನ್ನು ಪಡೀತಾನೆ. ಹಾಗಾಗಿ ಅಲ್ವೋ, ಹುಟ್ಟಿನಿಂದ ಪಾಷಾಣ ಎನಿಸಿದಂತಹ ವಿಷ... ಹೌದೋ? ಇದನ್ನು ಮನುಷ್ಯ ಸಂಸ್ಕರಣಗೊಳಿಸಿ, ಔಷಧವಾಗಿ ಪರಿವರ್ತಿಸ್ತಾನೆ.

ಇದಲ್ವೋ ಮನುಷ್ಯನದ್ದಾದ ಕೊಡುಗೆ? ಯಾವುದೇ ಹಣ್ಣನ್ನು ಮೃಗ ಪಕ್ಷಿಗಳು ಮೆಲ್ತಾವೆ. ಹಾಗೇ ಮನುಷ್ಯರು ತಿಂತಾರೋ? ಹಾಗಿರುವಾಗ ಮನುಷ್ಯರಾದ ನಮ್ಮ ಜೀವನಕ್ಕೆ ಪ್ರಕೃತಿಯ ಉಪಮೆಯನ್ನು ಕೊಟ್ಟು ತನ್ನದ್ದಾದ ಮೊಂಡುವಾದವನ್ನು ಮಂಡಿಸುವದನ್ನು ಮೂರ್ಖರು ಮಾಡಬಹುದು. ಮನಃಸಾಕ್ಷಿ ಇದ್ದವರು ಮಾಡುವದಿಲ್ಲ. ನೀರ್ ಹರೀಲಿ ಕೆಳಗೆ, ಕೆಳಕ್ಕೆ ಹರಿಯುವ ನೀರನ್ನು ನಮ್ಮ ಅನುಕೂಲವಾದ ಕ್ಷೇತ್ರಕ್ಕೆ ತಿರುಗಿಸಿ. ಅದಲ್ವೋ ನೀರಿನ ಪ್ರಯೋಜನ ? ನಮ್ಮ ಜೀವನವೂ ನೀರು ಹೋದಲ್ಲೇ ಹೋಗಬಾರದಲ್ಲ? ನೀರು ದಕ್ಷಿಣದಿಂದ ಉತ್ತರಕ್ಕೆ ಹೋಗ್ತದೆ. ಆದರೆ ಈ ಕೃಷಿ ಭೂಮಿಗೆ ಪೂರ್ವಕ್ಕೆ ತಿರುಗಿ ಬರಬೇಕು. ಪೂರ್ವಕ್ಕೆ ತಿರುಗಿಸುವದೇ ಬುದ್ಧಿವಂತಿಕೆಯೋ; ನಮ್ಮ ಪೂರ್ವದಲ್ಲಿದ್ದ ನೆಲವನ್ನೇ ಉತ್ತರಕ್ಕೆ ತೆಕ್ಕೊಂಡು ಹೋಗಿ ಇಡೋದೋ? ಹೇಳಿ ಪ್ರಯೋಜನ ಇಲ್ಲ. ಹುಡುಗ ನಮ್ಮವನೇ ನೀನು. ಸ್ವಲ್ಪ ನಾವೂ ತಪ್ಪಿದೆವು. ಯಾರಾರ ಕೆಳಗೆ ನಿನ್ನನ್ನು ತಿದ್ದಲು ಬಿಟ್ಟುಕೊಟ್ಟೆವು. ಅಂದರೇನಿಲ್ಲ ಹದಿನಾಲ್ಕು ಸೇರು ಅಕ್ಕಿ ಬೇಯಬೇಕಾದ ಮನೆಯವನು; ಒಪ್ಪತ್ತಿನ ಭಿಕ್ಷೆಯ ಊಟದ ಅಕ್ಕಿಯನ್ನು ಬೇಯಿಸುವವನಿದ್ದಾನಲ್ಲ - ಅವನಲ್ಲಿ ಆಡಳಿತ ಕೇಳುವಲ್ಲಿ ಬಂದದ್ದು ಮೋಸ. ಅದೇ ನಾನು ಹೇಳಿದ್ದು ಆವಾಗ, ತಿಲಕ ! ಇದನ್ನು ತಿದ್ದಲಿಕ್ಕೆ ಗೊತ್ತಿಲ್ಲದೇ ಇದ್ದವರು - “ಹೋ ನಮ್ಮ ಕೌರವೇಶ್ವರನ ಮುಖ ಇಷ್ಟು ಉದ್ದಗಲ ಉಂಟು. ಬೊಟ್ಟು ಚಂದ ಕಾಣ್ತದೆ. ನಾವು ಕೈಯ್ಯಾಡಿಸಿ ಮುಖವಿಡೀ ಮಾಡುವ” ಅಂತ ಹೇಳಿ ಮುಖ ಮಸಿ ಮಾಡಿದ್ರು. ಸಂಘದೋಷ. ಅವ್ರ ಹೆಸ್ರು ನಾನು ಹೇಳೋದಿಲ್ಲ. ಯಾಕೆ? ನನ್ನ ಸಂಸ್ಕಾರ ಒಪ್ಪೋದಿಲ್ಲ. ಹಾಗಂತ ಹೇಳದೇ ಇದ್ರೆ ನಿನ್ನಂಥವರಿಗೆ ಅರ್ಥವೂ ಆಗೋದಿಲ್ಲ. ಯಾವಾಗಲೂ ನನ್ನ ದೊಡ್ಡಸ್ತಿಕೆ ಹೇಗೆ? ಬಾಕಿದ್ದವರ ಕುರಿತಾಗಿ ಅವಹೇಳನ ಮಾಡೋದಲ್ಲ... ನಮಗೆ, ಮತ್ತೊಬ್ಬರನ್ನು ಸಣ್ಣವರು, ಅಲ್ಪರು ಅಂತ ಹೇಳಿ ಆಗುವದೇನು? ಅಲ್ಲೊ? ಆದರೆ ನಾವು ಹಿರಿಯರು ಇಷ್ಟು ಸಂತೋಷ ಪಟ್ಟೆವು – “ನಮ್ಮ ಕೈಯಲ್ಲಿದ್ದಂತಹ ಮುತ್ತು ಈ ಗೊಬ್ಬರದ ಹೊಂಡದಲ್ಲಿ ಬಿತ್ತಲ್ಲ !! ನಿನಗರ್ಥವಾದ್ರೆ ನೀನು ಗ್ರಹಿಸಿಕೋ. ನಾನೊಂದು ಮಾತ್ಹೇಳಲೋ - ಹೇಗೂ ಹೊಂಡಕ್ಕೆ ಬಿದ್ದದ್ದು ಹೌದದು. ಇದನ್ನೀಗ ಶುದ್ಧ ಮಾಡಬೇಕೋ ಬೇಡವೋ? ಶುದ್ಧ ಮಾಡೋದೆಲ್ಲಿ? ನಿರ್ಮಲವಾದ ನೀರಿನಲ್ಲಿ ನಿನಗೆ ಕಾಣಿಸುವದಿಲ್ಲ ಅಂತಾದ್ರೆ ತೋರಿಸಿಕೊಟ್ಟೇನು. ಯೇನೇ ಆಗ್ಲಿ ಹೊಂದಿಸಿಕೊಳ್ ಬೇಕಾಗ್ತದೆ. ಯಾವನು

ಹೊಂದಿಸಿಕೊಳ್‌ತಾನೆ ಅವ ಸುಖವಾಗಿ ಬದಕ್ತಾನೆ. ಆದರೆ ಒಂದುಂಟು. ಆಚೆಯವನಿಗೆ ಗೊತ್ತಾಗಬೇಕು ತಪ್ಪಿಬಿದ್ದೆ ಅಂತ. ಹಾಗಾದ್ರೆ ಆ ಹೊಂದಿಕೆ ಶಾಶ್ವತವಾಗಿ ಉಳಿಯುವದು. ತನ್ನದೇ ಸರಿ ಅಂತ ಅವ ಕೊನೆವರೆಗೆ ಹೊರಟ, ಹೊಂದಿಕೆ ಆಗಲಿಕ್ಕಿಲ್ಲ. ಯಾಕೀ ಮಾತು ಹೇಳ್ತೇನೆ - ನಾನೀ ಕುಟುಂಬದ ಹಿರಿಯ. ನನ್ನ ಹಿರಿತನವನ್ನು ಬೆಳ್ಳಗಾದ ನನ್ನ ತಲೆಯಿಂದ ಮಾತ್ರ ಪ್ರಕಟಿಸಿದ್ರೆ ಸಾಲದು. ಈ ವಂಶದಲ್ಲಿ ಭೀಷ್ಮ ಇದ್ದಾನೆ. ಇದ್ದೂ ಈ ಹೊಂದಾಣಿಕೆಗೆ ಇವ ಪ್ರಯತ್ನಿಸಲಿಲ್ಲ – ಈಗ ನಾನು ಊರವರ ಬಗ್ಗೆ ಹೆದರೋದು ಯಾಕೆ? ಈ ಸಾಯುವ ಕಾಲಕ್ಕೆ ನನಗೆ ಅಪವಾದ ಯಾಕೆ? ಕುಟುಂಬದ ಹಿರಿಯನಾಗಿ ನಾನ್ ಆ ಪ್ರಯತ್ನಕ್ಕೆ ಮುಂದೆ ಮುಂದೆ ನನ್ನ ಬುದ್ಧಿಯನ್ನು ತಳ್‌ತಾ ಇರೋದು. ಈಗಲಾದರೂ ಹೊಂದಿಕೆಗೆ ತಯಾರಾಗಿದ್ಯೋ? ಓ ತರಳಾ, ಮೀಸೆ ಬಂದದೆ, ಇಲ್ಲ ಅಂತ ನಾನ್ ಹೇಳೋದಿಲ್ಲ. ನನಗೆ ಈಗಲೂ ಕಾಣೋದು ನೀವೆಲ್ಲ ಸಣ್ಣ ಮಕ್ಕಳು ಅಂತಲೇ. ಪಾಂಡವರಲ್ಲಿ ಕರುಣೆ ಹೆಚ್ಚು ನನಗೆ ಅಂತ ತಿಳಕೊಳ್ಳಬೇಡ. ನಿನ್ನಲ್ಲಿ ಹೆಚ್ಚಾದ್ದರಿಂದ ಈ ಕ್ರಮವನ್ನು ವಹಿಸಲಿಕ್ಕೆ ನಾನು ಒಪ್ಪಿದ್ದು, ನಿನ್ನನ್ನು ಬಿಟ್ಟಾಕಬಾರದು ಅಂತ. ನಾನ್ ಹೇಳಿದರೆ ನಿನಗೆ ಕೊರತೆ ಅಂತ ತೋರಲಿಕ್ಕಿಲ್ವಲ್ಲ? ಅಪಮಾನ ಮಾಡಿದ ಅಂತ ಹೇಳಲಿಕ್ಕಿಲ್ವಲ್ಲ? ಹಾಗಾದ್ರೆ, 'ಸತ್‌ಸಂಗತ್ವೇ' ... ಸತ್‌ಸಂಗದಿಂದ ಯೇನಾಗ್ತದೆ. ಇವನಲ್ಲಿಯೂ ಕೂಡಾ ಸತ್‌ಸಹವಾಸದಿಂದ ಸತ್ಯವೃತ್ತಿ ಮೂಡ್ತದೆ. ಈ ಗುಣ ದೋಷ ಅನ್ನುವದು ಸಹವಾಸಕ್ಕೆ ಸಂಬಂಧಿಸಿದ್ದು, ಆದರೆ ಕೆಲವರು ಪ್ರಶ್ನಿಸ್ತಾರೆ. - “ಸಹವಾಸಕ್ಕೆ ಸಂಬಂಧಿಸಿ ಹೌದಲ್ವೋ? ದುರ್ಗಂಧವನ್ನು ವಮಿಸುವಂತಹ ಯಾವುದಾದರೂ ಪದಾರ್ಥವನ್ನು ಸುಗಂಧಪೂರಿತವಾದಂತಹ ಪದಾರ್ಥದ ಸಾಂಗತ್ಯದಿಂದ ಪರಿಮಳ ಮೂಡಬಹುದೇ” ಅಂತ. ಅದಾಗೋದಿಲ್ಲ ಅದಾಗೋದಿಲ್ಲ. ಸುಗಂಧ ದ್ರವ್ಯಕ್ಕೆ ಯೇನೂ ಗಂಧವಿಲ್ಲದೆ ಇದ್ದಂತಹ ವಸ್ತುವನ್ನು ಸೇರಿಸಿದಾಗ ಮಾತ್ರ ಸುಗಂಧ ಬಂದೀತು ಅಷ್ಟೆ. ಇಲ್ಲದಿದ್ರೆ ಒಳ್ಳೆಯದು ಹಾಳಾಗ್ತದೆ. ಕಸ್ತೂರಿಯ ಜೊತೆಯಲ್ಲಿ ಬೆಳ್ಳುಳ್ಳಿ ಚೂರು ಹಾಕಿ ನೋಡು. ಬೆಳ್ಳುಳ್ಳಿ, ಸದ್ರೂ ಅದರ ವಾಸನೆ ಬಿಡೋದಿಲ್ಲ. ತಿಂದ್ರೂ ತೇಗಿನಲ್ಲಿ ಬರದೆ. ಕಸ್ತೂರಿಯ ಗಂಧ ಸಂಪೂರ್ಣವಾಗಿ ನಷ್ಟವಾಗಿ ಹೋಗ್ತಿದೆ. ಆದ್ದರಿಂದಲೇ ಹೇಳುದು ಮಹಾತ್ಮರಿಗೆ, ದೊಡ್ಡವರಿಗೆ ಅಲ್ಪರ ಸಹವಾಸ ಬರಬಾರದು ಅಂತ. ಅದರಿಂದ ಅಲ್ಪರು ದೊಡ್ಡವರಾಗೋದೂ ಇಲ್ಲ. ದೊಡ್ಡವರು ಅಲ್ಪರಾಗೋದು. ಇದಕ್ಕೆ ನಿದರ್ಶನ

ಸದ್ಯ ನೀನೇ. ಬೇಸರಿಸಬೇಡ. ಕರ್ಣಾದಿ ಬಳಸಿನಲಿ ಕೇಡಾದೆ ವಂಶಕೆ. ಕರ್ಣಾದಿ ಮೂರ್ಖರ, ದುಷ್ಟರ ಅಂತಲೇ ಹೇಳಬೇಕಿತ್ತು. ಸ್ವಲ್ಪ ಹಗುರವಾಗಿ ಹೇಳಿದ್ದು ನಾನು. ಮೂರ್ಖರು ಅಂತಂದ್ರೆ ಅರ್ಥ ಏನು? ಯೇನೂ ಗೊತ್ತಿಲ್ಲದೆ ಬಹಳ ಗೊತ್ತುಂಟು ಅಂತ ಹೇಳುವವರು. ಸತ್ಯ ಹೇಳು ಮಗನೆ - ಈ ಹಸ್ತಿನಾವತಿಯ ಮನೆತನದಲ್ಲಿ ಯೆಷ್ಟು ಉಂಟು? ಈಗ ಯೆಷ್ಟು ಉಳದೆ... ನಿನ್ನ ಹಿತೈಷಿಯಾದ ಕರ್ಣನಿಗೆ ಗೊತ್ತುಂಟೋ? ಮತ್ತೆಂತದ್ದಂವ ಇಲ್ಲಿಯ ರಾಜಕೀಯದಲ್ಲಿ ಕೈ ಹಾಕೋದು? ಹ್ಞ , ಯೇನೂ ಗೊತ್ತಿಲ್ಲ. ಬೇಡ, ನಿನ್ನ ಸೋದರಮಾವ ಒಬ್ಬ ಇದ್ದಾನಲ್ಲ? ಇಲ್ಲಿ ದಿವಸಕ್ಕೆ ಎಷ್ಟು ವೆಚ್ಚವಾಗ್ತದೆ, ಈ

ವೆಚ್ಚ ಹೇಗೆ ತುಂಬಿ ಬರ್ತದೆ. ನಿನ್ನ ಮಾವನಿಗೆ ಗೊತ್ತುಂಟೋ? ಮತ್ತೆಂತದ್ದಂವ ನಿನಗೆ ಲಾಭ ನಷ್ಟದ ಲೆಕ್ಕ ಕಲಿಸುವದು? ಇಲ್ಲಿಂದ ಹೆಣ್ಣು ಕೊಂಡ್ಹೋದನಲ್ಲ - ಜಯದ್ರಥ, ಅವನ ಊರ್ನಲ್ಲಿ ಈ ವರ್ಷ ಮಳೆ ಬಂದದೋ? ಬೆಳೆ ಆಗ್ಯದೋ? ಜನ ಉಂಡಿದ್ದಾರೋ? ಗೊತ್ತುಂಟಂತೆಯೋ ಅವನಿಗೆ? ಇಂಥವರೆಲ್ಲ ನಿನಗೆ ಅಭ್ಯುತ್ಥಾನಕ್ಕೆ ಸಲಹೆ ಕೊಡುವವರು ಅಯ್ಯೋ, ನಾನಾವಾಗ ಹೇಳಿದ್ದದೆ - ಒಂದು ಕಂಡುಗದ ಅಕ್ಕಿಯ ಅನ್ನ ಬೇಯಿಸುವವ ಒಂದು ಸೇರು, ಕಷ್ಟದಲ್ಲಿ ಬೇಯಿಸುವವನಲ್ಲಿ... ಅವರು ಒಳ್ಳೆಯದಾಗಲಿಲ್ಲ, ಇವ ಹಾಳಾಗದ್ದಂತೂ ನೂರಕ್ಕೆ ನೂರು ಸತ್ಯ. ಕುಮಾರಾ, ಇಷ್ಟು ಪ್ರಾಯ ಆಯ್ತು ನಿನಗೆ ದೇವರು ಕೊಟ್ಟ ಮಕ್ಕಳಿದ್ದಾರಲ್ಲ ನಿನಗೆ? ನಾಳೆ ನೀನು ಒಳ್ಳೆ ಸಲಹೆಯನ್ನು ಕೊಟ್ರೆ ಅವರು ಕೇಳಬೇಕು ಅಂತ ತಂದೆಯಾದ ನಿನಗೆ ಅನಿಸ್ತದೋ ಅಥವಾ "ಅಪ್ಪಯ್ಯ ನಿನಗೆ ಬುದ್ದಿ ಇಲ್ಲ" ಅಂತಂದ್ರೆ ಸಂತೋಷ ಪಡ್ತಿಯೋ? ಇದನ್ನು ಹೇಳಲಿಕ್ಕೆ ನಿನಗೆ ನೈತಿಕ ಹಕ್ಕುಂಟೋ ? ನೀನ್ ಕೇಳೀ ನಿನ್ನ ಹಿರಿಯರ ಮಾತು? ಯಾಕೆ ಹೇಳ್ತೇನೆ - ಹಿರಿಯರ ಮಾತನ್ನ ಅನುಸರಿಸದೇ ಇದ್ದವನಿಗೆ ತನ್ನ ಮಕ್ಕಳನ್ನು - ತಾನು ಹೇಳಿದ ಹಾಗೆ ಕೇಳಬೇಕು ಎಂಬ ಹಕ್ಕೇ ಇಲ್ಲ. ನಾಳೆ ದೇವರು ಕಣ್‌ಬಿಟ್ರೆ -ರಾಜನಾಗಬೇಕು ಅಂತಲೇ ಆಸೆ ಅಲ್ವೋ ನಿನಗೆ?

ನೀನು ಮಾಡಿದ ಶಾಸನ ಜನ ಅನುಸರಿಸ ಬೇಡವೋ? ಅನುಸರಿಸಬೇಕಾದ್ರೆ ನೀನು ಚಲಾವಣೆಗೆ ಇಳಿಸುವ ಈ ನಾಣ್ಯದ ಮೌಲ್ಯ ಹ ನಿನ್ನಲ್ಲೂ ಬೇಡ್ವೊ? ನೀನು ಕೊಟ್ರೆ ಅವ್ರಲ್ಲಿ ಅದು ಚಲಾವಣೆಗೆ ಬರಬೇಕು. ಪುನಃ ಹಿಂದೆ ಬಂದ್ರೆ ನಮ್ಮಲ್ಲಿ ಅದು ಚಲಾವಣೆ ಇಲ್ಲ ಅಂತಂದ್ರೆ? ಹಾಗಾದಾಗ ಕಳ್ಳ ನಾಣ್ಯ ಇಳಿಸಿದ ದೋಷ ಯಾರಿಗೆ ಬರ್ತದೆ? ಅವನನ್ನು ಯೆಲ್ಲಿಗೆ ತೆಕ್ಕೊಂಡ್ಹೋಗಿ ಶಿಕ್ಷೆ ಕೊಡೋಣ ಹೇಳು? ಹಾಗೇ ಅಯ್ತು, ನಾನು ಬಹಿರಂಗವಾಗಿ ಹೇಳಬಾರದು ಅಂತ ಅದುಮಿ ಅದುಮಿ ಅದುಮಿ ಇಟ್ಟಿದ್ದೆ. ಇಷ್ಟೆ ಹೇಳಿದ್ರೆ, ಅರ್ಥ ಆದ್ರೂ ನೀನು ಒಪ್ಪಿಕೊಳ್ಳೋದಿಲ್ಲ ಅದನ್ನು !!

ದುಷ್ಟ ಸಹವಾಸ ಬಿಡು, ಧರ್ಮರಾಯ-ಯುಧಿಷ್ಠಿರ ಒಳ್ಳೆಯವ ಅಂತ ಒಪ್‌ತ್ಯೋ? ಬುದ್ಧಿವಂತರನ್ನು ಗುರುತಿಸುವ ಬುದ್ಧಿವಂತಿಕೆ ಇದ್ದವನಿಗೆ ಒಳ್ಳೆಯವನನ್ನು ಗುರುತಿಸುವ ಬುದ್ಧಿ ಇದ್ದೆ ಸ್ವಲ್ಪ ಒಳ್ಳೆಯವನಿಗೆ ಮುಂದೆ ಒಳ್ಳೆಯದಾಗುವ ಯೋಗ ಇದೆ. ನಿನ್ನ ಬಗ್ಗೆ ನನಗೆ ಅದೊಂದು ವಿಶ್ವಾಸ, ಹುಡುಗ ತೀರ ಹಾಳಲ್ಲ. ಆದರೆ ಸಹವಾಸದಿಂದ ಸ್ವಲ್ಪ ಕೆಟ್ಟು ಹೋಗಿದ್ದಾನೆ ಅಂತ. ಹಾಗಾದ್ರೆ ಕೆಟ್ಟು ಹೋದದ್ದು ಯಾವುದು? ಒಳ್ಳೆಯದು. ಒಳ್ಳೆಯದು ಕೆಟ್ಟು ಹೋದ್ರೆ ಅದನ್ನು ಪುನಃ ಒಳ್ಳೆಯದು ಮಾಡುವದಕ್ಕೆ ಸಾಧ್ಯ ಉಂಟು, ಸತ್ಸಂಗದಿಂದ, ನಿನ್ನಂಥವನಿಗೆ ಸತ್ಯಾಗ್ರಹ ಬರುವದಕ್ಕೆ ಶಕ್ತಿ ಉಂಟು. ಹೋಗು ಧರ್ಮರಾಯನಲ್ಲಿ. ಒಂದು ವಾರ ಕೂತುಕೋ, ಅವನೊಟ್ಟಿಗೇ ಊಟಮಾಡು, ಆವನ ಮೈ ಬಿಸಿ ತಾಗ್ಲಿ ತಿಳಿಯಿತೋ?

ಕೆಲವರೆಲ್ಲ ಒಳ್ಳೆಯದಾಗೋದು ಹಾಗೆ, ಒಳ್ಳೆಯವರ ಮೈ ಬಿಸಿ ತಾಗಿಸಿಕೊಂಡು ಸ್ವಲ್ಪ ಹುಡುಗ ಬುದ್ಧಿಯಾದ್ರೂ ಒಳ್ಳೆಯವನು ಅಂತ ಅನಿಸಿಕೊಳ್ತಾರೆ. ನೀನು ನನ್ನನ್ನು ನೋಡು. ಪರಶುರಾಮ ದೇವರು ನಮ್ಮ ಜಾತಿಯ ಹುಡುಗರ ಹೆಸರು ಕೇಳಿದ್ರೆ ಏನು ಮಾಡಿತಿದ್ರು ! ಅಲ್ವೋ? ನಾನು ನಿಜವಾದ ಶಿಷ್ಯ ಯಾರದು ಹೇಳು? ಹೇಗೆ ಸಾಧ್ಯ ಅಯ್ತು ಅದು? ನಮ್ಮ ಒಳ್ಳೆಯತನ. ಈ ಒಳ್ಳೆಯತನಕ್ಕೆ ನಮ್ಮ ಹಿರಿಯರದ್ದಾದಂತಹ ಪ್ರತ್ಯಕ್ಷ ಸಾಕ್ಷಿ. ನನ್ನ ತಾಯಿಯಾದ ಗಂಗಾದೇವಿ ಪರಶುರಾಮ ದೇವರಲ್ಲಿ ಹೋಗಿ ನನ್ನ ಮಗ ಒಳ್ಳೆಯವ, ಅದಕ್ಕೆ ಸಾಕ್ಷಿ ಯಾರು 'ನಾನು' - ಇದೆರೆಡನ್ನೂ ನಂಬಿದಂತಹ ಪರಶುರಾಮ ದೇವರು ಪ್ರಯೋಗಕ್ಕೆ ಅಂತ ನನ್ನನ್ನು ಇಟ್ಟುಕೊಂಡದ್ದು. ಮುಂದೆ ಯೇನ್ ಹೇಳಿದ್ರು? “ಪರಮಶಿಷ್ಯನೇ... ಇದೆಲ್ಲ ಆಗ್ತದಂತೆ ಊರಲ್ಲಿ ಹ ಇದು ನೇರವಾದ ಕ್ರಮದಿಂದ ಈಜೋದು. ಪ್ರವಾಹಕ್ಕೆ ಇದಿರು ಈಜಲಿಕ್ಕೆ ಬರದೆ. ಇದನ್ನು ನೀನು ಕಾಣೀ. ಪ್ರವಾಹಕ್ಕೆ ಅನುಸರಿಸಿ ಈಜಲಿಕ್ಕೆ ನನ್ನ ಮೊಮ್ಮಗನಿಗೆ ಬರುವದಿಲ್ಲ ಅಂತಂದ್ರೆ ಅರ್ಥ ಏನು? ಹೋಗು ಹೋಗು ಮನೆಗೆ, ನಿನಗೊಬ್ಬನಿಗೆ ಹೋಗಲಿಕ್ಕೆ ನಾಚಿಕೆ ಆಗೋದಿದ್ರೆ ನಾನು ಜನ ಕಳಿಸ್ತೇನೆ. ಧರ್ಮರಾಯನಲ್ಲಿಗೆ “ನಮ್ಮ ಹುಡುಗ ಕೌರವ ಬಾನೆ”... ಅಂತ. ಈಗ ಅದು ಸಾಧ್ಯವಿಲ್ಲ ಅನ್ನುವದಕ್ಕೆ ನಿನ್ನ ದುರಭಿಮಾನ ಒಂದೇ ಅಲ್ಲೋ ಕಾರಣ? ಮತ್ತೆ ರಣವೀಳ್ಯ ಕೊಟ್ಟಾದ್ರೇನು? ಎರಡು ಕಡೆಯವರೂ ನಿತ್ತೇನು? ಶಂಖಧ್ವನಿ ಮಾಡಿದ್ರೇನು? ನಾಲ್ಕು ಪೆಟ್ಟಾದ್ರೇನು? ಸಂಧಾನ ಯಾವಾಗಲೂ ಉಂಟು. ಅದಕ್ಕೆ ಅವಧಿ ಬಾಧಕ ಇಲ್ಲ. ಭಲ! ಹ್ಹ ಅರ್ಥ ಆಯ್ತು ನನಗೆ ... “ಅದೊಂದು ಬಿಟ್ರೆ ಬೇರೇನು ಉಂಟು ನನ್ನಲ್ಲಿ” ಅಂತಲ್ವೊ? ಇದು ಹಾವು ಹೇಳಿದ ಹಾಗೆ ಆಯ್ತು. “ಕಚ್ಚಿ ಕೊಲ್ಲುವದು ಬಿಟ್ರೆ ನನ್ನ ಅಸ್ತಿತ್ವ ಏನು” ಅಂತ ಕೇಳಿದ ಹಾಗೆ. ಈ ಸರ್ಪ ಅಷ್ಟಕ್ಕೇ ಇರೋದೋ ಹಾಗಾದ್ರೆ? ಕಚ್ ಬಾರದು ಮಗನೇ, ಭುಸ್ಸುಟ್ಟಬೇಕು. ಹೆಡೆ ಬಿಚ್ ಬೇಕು. ಯಾಕೆ? ಇಲ್ಲದಿದ್ರೆ ಕಪ್ಪೆಗಳೂ, ಇಲಿಗಳೂ ಸವಾರಿ ಮಾಡಿಯಾವು. ಕಚ್ಚಲಿಕ್ಕೇ ಹೊರಟ್ರೆ? ಆ ಜಾತಿಯನ್ನೇ ಕೊಲ್ಲಲಿಕ್ಕೆ ಹೊರಟಾರು ಊರಿನವರು. ಇಷ್ಟು ಗೊತ್ತುಂಟಲ್ಲ , ಮತ್ತೆಂಥದು ನೀನ್ಹೇಳುದು?

ಹೋಗಲಿ, ನಿನಗೇನಂದರೀ ಕರ್ಣಾದಿ ಪಟುಭಟರು? ಮೊರೆಯುವರಾರೈ? ಎಂಬ ಪ್ರಶ್ನೆಗೆ ಅವರು ನಿನಗೇನೆಂದರು? ಇಷ್ಟೇಯೇ !! ಹಾಗಾದ್ರೆ ಇವರೆಲ್ಲ ನಿನಗೆ ಹ್ಹ ... ಮದ್‌ಅರೆಯಲಿಕ್ಕೇ ಇದ್ದವರು. ಕೊನೆಗೂ ಅವರು ಬೆಟ್ಟು ಮಾಡಿ ತೋರಿಸಿದ್ದು ಇವನನ್ನೊ? ನನ್ನ ದುರ್ದೈವ ಅದು. ಕೌರವೇಶ್ವರ ಏನು ಮಾಡಬೇಕು ಅಂತ ಉಪದೇಶಿಸುವದಕ್ಕೆ ನಿಮ್ಮನ್ನೆಲ್ಲ ತಿದ್ದಿ ಎತ್ತರಕ್ಕೆ ಏರಿಸುವದಕ್ಕೆ ಭೀಷ್ಮರು ಸಮರ್ಥರು ಅಂತ ಹೇಳಲಿಲ್ಲ. ನಿನ್ನ ಸ್ನೇಹಿತರು ಬಹುಶಃ ಸಮರ್ಥರಲ್ಲ ಅಂತಲೇ ಹೇಳಿರಬೇಕು. ಕಾಪಾಡ್ಲಿಕ್ಕಾಗ್ವಾಗ ನಿನ್ನೊಟ್ಟಿಗೆ ನಮ್ಮನ್ನು... ಯೇ ದೇವರೇ, ನಮ್ಮ ದೇಶದ ರಾಜಕಾರಣದಲ್ಲಿ ನಿಮ್ಮಂಥವರೆಲ್ಲ ಸೇರಿ ಇಷ್ಟು ಬ್ರಷ್ಟಾಚಾರ ಬಂದ್ದೊಯ್ತೋ ಮಗನೇ!! ಆ ಮಾತನ್ನು ಕೇಳಿ ಬಂದದ್ದೂ ನೀನು? ನಾನು ನಾನೇ, ನನಗೆ ಭೇದವೂ ಇಲ್ಲ ನಿನ್ನಲ್ಲಿ ಕರುಣಯೇ ಇದೆ. ನನ್ನನ್ನೇನು ದೇವರ

ಮುಂದೆ ಪ್ರಮಾಣಕ್ಕಳೀತ್ಯೇನೋ? ನನಗೆ ನಿನ್ನಲ್ಲಿ ಕರುಣೆಯೇ ಇದೆ ಅಂತ ಹೇಳಿದ್ರೆ ... ಯೇನ್ ಹೇಳ್ತಿ? ಅದು ಹೌದಾಗಿದ್ರೆ ... ನೀನು ನನ್ನನ್ನು ಅಗ್ನಿ ಪರೀಕ್ಷೆಗೆ ಗುರಿಮಾಡ್ತಿಯಲ್ಲ. ನಿನ್ನಲ್ಲಿ ನಾನು ಕರುಣೆ ಉಂಟು ಅಂತ ಪ್ರಕಟಪಡಿಬೇಕಾದ್ರೆ...? ಹಾಗಾದ್ರೆ ಈ ಅಜ್ಜ ಸೇನಾಧಿಪತ್ಯವನ್ನು ವಹಿಸುವದರ ಮೂಲಕವೇ ನನ್ನ ವ್ಯಕ್ತಿತ್ವವನ್ನು ಅಷ್ಟು ಸಣ್ಣ ಪಾತ್ರೆಯಲ್ಲಿ ಅಳೆಯುವದಕ್ಕೆ ಹೊರಟ್ಯೇನೋ? ಹಾಗಾದ್ರೆ ನಾನಿಲ್ಲಿ ಒಂದು ಸೇನಾಧಿಪತ್ಯವನ್ನು ವಹಿಸಿ ನಿಮ್ಮನ್ನು ಕಾಪಾಡ್ಲಿಕ್ಕೆ ಮಾತ್ರ ಇದ್ದ ಅರ್ಹತೆಯಿದ್ದವ ಅಂತಲೇ? ಸುಯೋಧನಾ ಅರಿಯೆಯನ್ನೆಯ ಸತ್ವವನು.

*ಭಾಮಿನಿ॥ ಅರಿಯೆ ಕೌರವನನ್ನ ಸತ್ತ್ವವ | ಪರಿಕಿಸೆತ್ತಿದ ಧನುವನಿಳುಹಲು ಶಿರವರಿವೆ ಭೂಪರನು ದಶಸಾಸಿರವನನುದಿನದಿ | ಹರಿಹರಬ್ರಹ್ಮಾದಿಗಂಜೆನು | ನಿರತವೆನ್ನಯ ಶಪಥ ಕೇಳಿಕೊ |*

*ಧುರದಿ ಜಯಪೊಂದುವುದು ನಿನ್ನಯ ಪುಣ್ಯಫಲವೆನುತ || ೧೩೭ ||*

ಈ ವಂಶಕ್ಕೆ, ಈ ನನ್ನ ವಂಶದ ಬೆಳವಣಿಗೆಗೆ ಕೇವಲ ಆಯುಧದ ಬಲವನ್ನು ಮಾತ್ರ ಬಂಡವಲವನ್ನು ಉಪಯೋಗಿಸಿ ರಕ್ಷಿಸುವದಕ್ಕೆ ಇದ್ದವ ಅಂತ ಮಾಡಿ ಬಿಟ್ಯಲ್ಲ. ಹ್ಞ , ನನ್ನ ಇಚ್ಛಾಶಕ್ತಿ, ಕ್ರಿಯಾ ಶಕ್ತಿ, ನನ್ನ ವಿವೇಕದ ಶಕ್ತಿ, ಬಹಳ ಮಾತ್ಯಾಕೆ ಇದನ್ನೇ ಒಟ್ಟೂ ಮೊತ್ತದಲ್ಲಿ ಸತ್ತ್ವ ಎನ್ನುವದು. ಯೇನು ಮಾಡುವ ಅದನ್ನು ಗುರುತಿಸುವದಕ್ಕೂ ಸ್ವಲ್ಪ ಸತ್ತ್ವ ಬೇಡವೋ? ಮಣೆ ಹಾಕದ್ಕೆ, ನೀನು ನನ್ನನ್ನು ಸಣ್ಣದು ಮಾಡ್ದಿ ಅಂತ ನನಗೆ ಬೇಸರ ಅಲ್ಲ. ಸೇನಾಧಿಪತ್ಯದ ಮಾತೇನೋ? ಅದಿನ್ನು ಹೊಸತಾಗಿ ನನಗೆ ಬೇಕೋ? ಅಂದಿನಿಂದ ಇಂದಿನವರೆಗೂ ಹೌದು. ಈ ವಂಶದ ರಕ್ಷಣೆಗಾಗಿ ಸದಾ ಜಾಗೃತನಾಗಿ ನಾನ್ ಇರ್ತೇನೆ ಅಂತ ಮಾತು ಕೊಟ್ಟಿದ್ದೇನೆ. ನನ್ನ ಹಿರಿಯರಿಗೆ, ನಮಗೆಲ್ಲ ಒಂದು ಸ್ವಭಾವ ತಿಳಿದೋ ತಿಳಿಯದೆಯೋ ಹಿರಿಯರಿಗೊಂದು ಭರವಸೆಯ ಮಾತನ್ನು ಕೊಟ್ರೆ ನಾವದನ್ನು ಉಲ್ಲಂಘಿಸೋದಿಲ್ಲ. ನೆನಪುಂಟು. ಭೀಷ್ಮ ಬರೇ ಕೌರವನ ಸೇನಾಧಿಪತಿಯಾಗಿ ಕುರುಕ್ಷೇತ್ರಕ್ಕೆ ಬಂದ್ರೆ, ದೊಡ್ಡವರಿರೋದಿಲ್ವೊ ಅಲ್ಲಿ? ಅವರೇನ್ಹೇಳಿಯಾರು? “ಇವನಿಗೆ ಚಕ್ರವರ್ತಿತ್ವದ ಅಧಿಕಾರ ಬೇಕಾಗಿಲ್ಲ ... ಸೇನಾಧಿಪತ್ಯಬೇಕಾಯ್ತು” ಅಂತ ಜನರಿಂದ ಮಂಗಳಾರತಿ ಮಾಡಿಸಿಕೊಳ್ಳಲಿಕ್ಕೆ... ಅಂತಹ ಮಾತೇ ಬಾರದ ಹಾಗೆ ಭೀಷ್ಮನ ಸತ್ತ್ವವೇನು? ಇದನ್ನು ತೋರಿಸ್ತೇನೆ. ಮೊದಲು ಪೊರೆಯುವ ಮಹಿಮನ ಮುಂದೆ ನನಗೆ ಪ್ರಶಸ್ತಿ ಬಂದ್ರೆ ಅವನದ್ದು ಬರಬೇಕು. ಆಮೇಲೆ ತೋರಿಸ್ತೇನೆ. ಹೇಳಿದ್ಯಲ್ಲ, ವಿರಾಟ, ಪಾಂಚಾಲರು - ಒಬ್ಬೊಬ್ಬರೂ ದ್ವೇಷ ಸಾಧಿಸ್ತಾರೆ. ಹಸ್ತಿನಾವತಿಯ ರತ್ನ ಸಿಂಹಾಸನದ ಬಗ್ಗೆ ಸವಾಲಾಗಿದ್ದಾರೆ ಅಂತ, ಅವರ ಮುಂದೆ ತೋರಿಸ್ತೇನೆ ಭೀಷ್ಮನ ವರ್ಚಸ್ಸನ್ನು, ಆಮೇಲೆ ಸೇನಾಧಿಪತಿಯ ವೃತ್ತಿಯಿಂದ ನಾ ಬದುಕಿದ್ದಷ್ಟು ಕಾಲ ನಿನ್ನನ್ನು ವಿರೋಧಿಗಳ ಆಯುಧದಿಂದ ರಕ್ಷಿಸಲಿಕ್ಕೆ ಯತ್ನಿಸ್ತೇನೆ. ಅದಕ್ಕೆ ಧಾಟಿ ಹೀಗೆ - “ಪಿಡಿಯಂ ಚಕ್ರಮನೆಂಬ ಚಕ್ತಿಯನಿಳಾಚಕ್ರಂ ಭಯಂಗೊಳ್ಳಿನ ಪಿಡಿಯಷ್ಟೆಂ ಕರಚಕ್ರಮಂ” ದೇವರಲ್ಲಿ ನನ್ನ ಸವಾಲು. ಕೃಷ್ಣ ನಿನ್ನಲ್ಲಿ ಏನು ಹೇಳಿದ್ದಾನೆ? “ಅಯುದ್ಧಮಾನ

ಸಂಗ್ರಾಮೇ ನ್ಯಸ್ತಶಸ್ತ್ರೋಹಮೇಕತಾ" – ಅದನ್ನು ಪೂರ್ತಿ ಮುರಿದರೆ ನಿನಗೇ ಅಪಾಯ. ಯಾಕೆ? ಅಯುಧಗ್ರಹಣ ಮಾಡಿ ಕೃಷ್ಣ ಯುದ್ಧಕ್ಕೆ ಇಳದ್ರೆ...! ಅಂತಹ ಉತ್ಸಾಹವನ್ನು ನಾನು ಎಳೆದು ಹಾಕ್ಯೇನೋ? ಕೃಷ್ಣನಿಂದ ಯುದ್ಧ ಮಾಡಿಸೋದಿಲ್ಲ – 'ನ್ಯಸ್ತಶಸ್ತ್ರ' ಅಂತ ಹೇಳಿದ್ದಾನಲ್ಲ ಅದನ್ನು ಸುಳ್ಳು ಮಾಡ್ತೇನೆ - ಕೃಷ್ಣನ ಕೈಯಲ್ಲಿ ಚಕ್ರ ಹಿಡಿಸ್ತೇನೆ. ಯೆತ್ತಿದ ಬಿಲ್ಲು ಕೆಳಕ್ಕಿಳಿಸಬೇಕಾಗಿದ್ರೆ ಹತ್ತು ಸಾವಿರ ಮಕುಟವರ್ಧನರ ತಲೆಯನ್ನು ಲೆಕ್ಕ ಇಟ್ಟು ಕತ್ತರಿಸ್ತೇನೆ. ಕಡಿಮೆಯಾದರೆ ಕೇಳು, ಹೆಚ್ಚಾದರೆ ಕೇಳುವದು ಬೇಡ ಅಜ್ಜನಲ್ಲಿ. ಆಮೇಲೆ, ಕಪಿಧ್ವಜನಾದ ನನ್ನ ಮೊಮ್ಮಗ ಅರ್ಜುನ - ಹೆಮ್ಮೆ ಅದು !! ತನ್ನ ಧರ್ಮಧ್ವಜವನ್ನು ಎತ್ತಿ ಹಿಡಿಯುವದಕ್ಕೆ ಪ್ರಭು ಶ್ರೀ ರಾಮ ಆ ಹೊತ್ತು ಈ ಆಂಜನೇಯನನ್ನು ಉಪಯೋಗಿಸಿದನಂತೆ. ಈ ಹೊತ್ತೂ ಹಾಗೆ, ಭಾವೀ ಧರ್ಮಸಾಮ್ರಾಜ್ಯದ ಧ್ವಜವನ್ನು ಯೆತ್ತಿ ಹಿಡಿಯುವದಕ್ಕೆಂದು ಕೃಷ್ಣನ ಅಪೇಕ್ಷೆಯಂತೆ ಭೀಮನ ಪ್ರಾರ್ಥನೆಯಂತೆ ಆ ತ್ರೇತಾಯುಗದ ಆಂಜನೇಯ ಸ್ವಾಮಿ ಅರ್ಜುನನ ಧ್ವಜದಲ್ಲಿದ್ದಂತಹ ಕಪಿಚಿತ್ರದಲ್ಲಿ ಆವಾಹಿಸಲ್ಪಟ್ಟಿದ್ದಾನಂತೆ ! ಅಂತಹ, ಆವಾಹಿಸಲ್ಪಟ್ಟ ಕಾಣುವವರ ಕಣ್ಣಿಗೆ ಸೂಕ್ಷ್ಮ ರೂಪದಲ್ಲಿದ್ದಂತಹ ಹನೂಮಂತ ಜಾಗೃತಗೊಂಡು ತನ್ನದ್ದಾದ ನಿಜರೂಪವನ್ನು ಈ ದ್ವಾಪರ ಯುಗದಲ್ಲೂ ಕಣ್ಣಿದ್ದವರಿಗೆ ಕಾಣಿಸುವಂತೆ ಅವನು ತಿರುಗಿ ನೋಡುವಂತೆ ಮಾಡಿಯೇನು. ಅಗ್ನಿದತ್ತವಾದಂತಹ ರಥ, ಅಗ್ನಿದತ್ತವಾದಂತಹ ಬಿಲ್ಲು, ನನ್ನ ಮೊಮ್ಮಗನದ್ದೇ ಐಶ್ವರ್ಯ. ಅವನ ಐಶ್ವರ್ಯದಲ್ಲಿ ನನ್ನದ್ದಾದಂತಹ ಸ್ಪರ್ಧೆಯಲ್ಲ. ಇಂತಹ ಯೋಗ್ಯತೆಯಿದ್ದ, "ಪಾರ್ಥ ಏವ ಧನುರ್ಧರಃ" ಅಂತ ಗುರುವಿನಿಂದ ಪ್ರಶಸ್ತಿ ಪಡೆದ, ಭಗವಂತ ಶ್ರೀ ಕೃಷ್ಣನನ್ನೇ ತನ್ನ ಮನೋರಥದ ಸಾರಥಿಯನ್ನಾಗಿ ಪಡೆದಂತಹ ಭಾಗ್ಯದ ಜೊತೆಯಲ್ಲಿ ಈ ಯುದ್ಧ ಕ್ಷೇತ್ರದಲ್ಲಿ ಮಹಾರಥಿಯಾಗಿ ಸಾರಥ್ಯವನ್ನು ಸಂಗ್ರಹಿಸಿಕೊಂಡ ಅರ್ಜುನನ ರಥವನ್ನು ಈ ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ 'ಪದಿನೆಣ್ಗಾವುದಂ' ಹಿಂದೆ ಸರಿಯಿಪ್ಪೆಂ. ಇಷ್ಟನ್ನು ಈ ಮುದ್ದ ಮಾಡ್ತಾನೆ. ನೀನು ಕೇಳಿದ್ದೆಷ್ಟು.... ಸೇನಾಧಿಪತ್ಯ. ಅಷ್ಟು ಮಾಡಿದ್ರೆ ಇದಿಷ್ಟನ್ನು ಯಾರಿಗೆ ಮತ್ತೆ ಸಂಗ್ರಹಿಸಿಡೋದು? ಪ್ರಾಮಾಣಿಕವಾಗಿ ಹೇಳೇನೆ. ನನ್ನ ಶಕ್ತಿ, ನನ್ನ ಭಕ್ತಿ, ನನ್ನದ್ದಾದಂತಹ ಯೆಲ್ಲವನ್ನೂ ಮಗನೇ ನಿನ್ನ ಬದುಕಿಗಾಗಿ ಈ ಹೊತ್ತು ಮೀಸಲಾಗಿರಿಸಿದ್ದೇನೆ. ಹೆದರಬೇಡ ಹೋಗು. ಇದು ಬೇಸರವೇನೋ? ಬೇಸರ ಅಲ್ಲ, ಮುದುಕರಿಗೆ ಈ ಮಕ್ಕಳು ಹೀಗೆಲ್ಲ ಮಾಡ್ತಾರಲ್ಲ ಅಂತ ಕರಕರೆಯಾಗುವದು ಅಷ್ಟೆ, ಅಂತೂ... ಈ, ನೆಗ್ಗಿನಮುಳ್ಳು ಅಂತೊಂದುಂಟು ಅದು ಹೇಗೆ ಬಿದ್ದರೂ ಮುಳ್ಳು ಮೇಲೆ, ಆಯ್ತಪ್ಪ ನೀನೇ ಜಯಿಸಿದೆ. ನಾನು ಸೋತೆ, ಬತ್ತೇನೆ ಬೆಳಿಗ್ಗೆ ಹೋಗು.



## ೧೪ ಗೀತೋಪದೇಶ

### ಶ್ರೀಕೃಷ್ಣ

*॥ ಭಾಮಿನಿ ॥ ಕರೆದುತರೆ ಶ್ರೀಕೃಷ್ಣನಿತ್ತಲು | ತುರಗವನು ಚಪ್ಪರಿಸಿ ಮುಂದಕೆ |*

*ಹರಿಸಿಸ್ಯಂದನವರವ ಪಾರ್ಥನಕರೆದು ಪೇಳಿದನು || ೧೩೮ ||*

ನಾನು ಶಂಖ ಊದಿದೆ ಅಂತ ನೀನು ಊದಿದ್ದೋ? ಅಲ್ವಲ್ಲ ? ನಾನು ನಿನ್ನನ್ನು ಯೆಚ್ಚರಿಸುವುದಕ್ಕಾಗಿ ಈ ಮಾತು ಹೇಳಿದ್ದು ನೋಡಿದೆಯೋ! ಯೇನು ಮಾಡೋಣ, ಹೋರಾಟದ ಕಣಕ್ಕೆ ಇಳ್ದಾಗಿ ಹೋಗಿದೆ! ಯಾವಾಗ ನಾವು ಯುದ್ಧ ರಂಗವನ್ನು ಪ್ರವೇಶಿಸಿದ್ದೇವೊ ಯುದ್ಧಮಾಡುವದಕ್ಕಲ್ಲದಿದ್ರೆ ಯುದ್ಧವನ್ನು ಇದಿರಿಸುವದಕ್ಕೆ ಹೌದಲ್ಲ? ಸರಿ, ಮೊದಲಕರೆ ಅಲ್ಲಿಂದಲೆ ಬಂದ ಹಾಗೆ ಇದೆ "ಕೌರವ ಸೇನಾಪತಿ.. ಅಲ್ಲವೇ? ಶಂಖನಾದವನ್ನು ಮಾಡಿದ ಮೇಲೆ ನಾವು ಸಿದ್ಧರಿದ್ದೇವೆ ಎಂಬುದಕ್ಕೆ ಬೇಕಾಗಿ ಅಲ್ಲವೆ ಶಂಖ ಊದದ್ದು? ನನಗಗತ್ಯ ಇರ್ಲಿಲ್ಲ. ನಾನು ಪ್ರತಿಭಟನೆನೂ ಅಲ್ಲವಲ್ಲ? ಆದರೆ ನಿಮ್ಮ ಸಮಾಧಾನಕ್ಕೆ ಬೇಕಾಗಿ ನಾನು ಶಂಖ ಊದಿದ್ದು ಆಷ್ಟೇ. ಯಾಕೆ? ನಾನು ಶಬ್ದ ಎತ್ತದೆ ಇದ್ರೆ ನಿಮ್ಮ ಅಣ್ಣನೂ ಯೇನೂ ಮಾಡುವದಿಲ್ಲ. ಹಾಗಾಗಿ ಮೊದಲಿಗೆ ನಾನು ನನ್ನ ಪಾಂಚಜನ್ಯವನ್ನು ಮೊಳಗಿಸಿದೆ - ಉತ್ತರವಾಗಿ,

ಅರ್ಜುನಾ ನಮ್ಮಲ್ಲಿ ಈ ಪಕ್ಷದ ನಾಯಕ ಯಾರು? ನಾನು ಯಾಕೆ ಕೆಳಿದೆ ಅಂತಂದ್ರೆ, ನೆನಪಿಸಿಕೊಳ್ಳಬೇಕಾಗ್ತದೆ ಸದಾ, ನನ್ನ ಮಟ್ಟಿಗಲ್ಲ, ನನ್ನತ್ತೆಯಮಗನಾದ ನಿನ್ ಮಟ್ಟಿಗೆ ಆದ್ದರಿಂದಲೆ ಪ್ರೀತಿಯಿಂದ ಕರೆಯುವುದಲ್ವೇ - ಪಾರ್ಥ ಕೌಂತೆಯ ಯಾಕೆ - ನಮ್ಮತ್ತೆಯ ನೆನಪಾಗ್ಲಿ ಅಂತ ಅಷ್ಟೆ. ಈ ಪಕ್ಷದ ಮಹಾನಾಯಕನಾಗಿ ನಿಮ್ಮಣ್ಣನಿದ್ದಾನೆ ಇಷ್ಟು ಮಾತ್ರ ಅಲ್ಲ, ಸೇನಾರಕ್ಷಣೆಯ ನಾಯಕತ್ವವನ್ನು ಭೀಮವಹಿಸಿಕೊಂಡಿದ್ದಾನೆ. ಬಲಂ ಭೀಮಾಭಿರಕ್ಷಿತಂ" ಅಲ್ಲವೇ? ಹಾಗಾದರೆ ನಮ್ಮಲ್ಲಿ ಬಹುನಾಯಕತ್ವವೋ? ಅಹುದು, ಯಾಕೆ ಅಂತಂದ್ರೆ ಒಂದು ಸಂಘಟನೆಗೆ ; ಅದು ಈಗ ಏಕನಾಯಕತ್ವದಲ್ಲಿ ಏನಾಗ್ತದೆ ಅಂತ ನಮಗೆ ಗೊತ್ತಾಯ್ತಲ್ಲ ಸರ್ವಾಧಿಕಾರ, ಆದರೆ ಹೇಳ್ತಾನೆ "ನಿಮ್ಮನ್ನು ವಿಚಾರವಿನಿಮಯ ಮಾಡ್ಲಿಕ್ಕೆ ಅಂತ ಬಂದದ್ದು; ಆದರೂ ತೀರ್ಮಾನ ನನ್ನದೇ. ಹಾಗಾದರೆ ಅಲ್ಲಿಯೂ ಇದ್ದಾರೆ ಕೆಲವರು ಪ್ರಮುಖರು, ಆ ಪ್ರಮುಖರಿಗೆ ಸದ್ಯ ಉದ್ಯೋಗ ಎಷ್ಟು ಅಂತದ್ರೆ ಈ ಸರ್ವಾಧಿಕಾರಿಯಾದಂತಹ ನಾಯಕ ಅಕ್ರಮಮಾರ್ಗದಲ್ಲಿ ನಾಯಕತ್ವಕ್ಕೆ ಬಂದವನು, ಬರು ತೆಕ್ಕೊಂಡು ಬಂದದ್ದಕ್ಕೆ ಮುದ್ರೆ ಒತ್ತಲಿಕ್ಕೆ ಕೆಲವರು ನಾಯಕರಿದ್ದಾರೆ, ನಮ್ಮಲ್ಲಿ ಹಾಗಲ್ಲ. ನಮ್ಮಲ್ಲಿ ಒಂದು ಒಕ್ಕೂಟ ಯಾಕಾಗಿ? ಒಬ್ಬೊಬ್ಬನೆ ಯಾವ ತೀರ್ಮಾನವನ್ನೂ ಕೈಗೊಳ್ಳಲಾಗದು. ಇದೊಂಥರದ ಸಮಷ್ಟಿ, ಹಾಗಾದ್ರೆ ಇಂತಹ ಈ ಸಮಷ್ಟಿಯಲ್ಲಿ ಧರ್ಮರಾಯ ಒಬ್ಬನೇ ಏನಾದರೂ ತೀರ್ಮಾನಿಸ್ತಾನೋ? ತೀರ್ಮಾನಿಸಕೂಡದು, ಯಾಕೆ ಅಂತಂದ್ರೆ ಈ ತರದ ಈ ಹೋರಾಟ ಇದೆಯಲ್ಲ

ಇದೊಂದು ಪಕ್ಷದ ಹೋರಾಟ ಅಂತ ತಿಳಕೊಳ್ ಕೂಡದು. ಇದರ ಕೊನೆಗುಂಟು - ಪ್ರಪಂಚ ಮುಂದೆ ಯೇನಾಗ್ತಿದೆ ಎಂಬುದು. ಆದ ಕಾರಣ ಪ್ರಾರಂಭಕ್ಕೆ ಯಾರೂ ತಿಳಕೊಳ್ಳುದು ಬೇಡ ಈ ಸಾರೆ ನಾವೇ ಜಯಿಸ್ತೇವೆ ಅಂತ. ಯಾರು ಜಯಸಿದರೂ ಸಮಷ್ಟಿಯಿಂದ ಆಳಬೇಕಾದದ್ದೇ ಹೊರತು, ದೃಷ್ಟಿಯಿಂದ ಒಂದು ಏಕಪಕ್ಷದಿಂದ ಆಳಲಿಕ್ಕೆ ಕೂಡದು. ಅಷ್ಟೂ ಜನ ಸೇರಿ ಆಗಿ ಹೋಗ್ಯದೆ ಈಗ! ಆದ್ರೆ ನಿಮ್ಮಣ್ಣ ಮಾಡಬೇಕಾದ ಕೆಲಸ ಮಾಡಿದ - ನಮ್ಮಪಕ್ಷದ ನಾಯಕ. ಅಲ್ಲಿಯ ಸೇನಾಧಿಪತಿಯಲ್ಲಿ ಹೋಗಿ ಒಂದು ಒಳ್ಳೆ ಆಶೀರ್ವಾದ ಬೇಡಿದ. ಯೇನ್ ಹೇಳ್ತಿ ಅರ್ಜುನಾ ಅವನಂತಹ ಒಬ್ಬ ರಾಜಕೀಯ ತಜ್ಞ ಈಗ ಯಾರೂ ಬದುಕಿಲ್ಲ. ಆ ಪಕ್ಷದ ದಂಡನಾಯಕನ ಹಾರ್ದಿಕವಾದ ಬೆಂಬಲ ಈ ಪಕ್ಷಕ್ಕೆ ಸಿಕ್ಕಿ ಆಯ್ತು. !! ಕೌರವ ಓದಿ ಕಲ್ತದ್ದು, ಅವ ಪೂರ್ತಿ ಪಾಠ ಆದವ ಅಲ್ಲ , ಕೇವಲ ಅರ್ಥಶಾಸ್ತ್ರಮಾತ್ರ. ಆ ಅರ್ಥಶಾಸ್ತ್ರವನ್ನು ಹೇಗೆ ಉಪಯೋಗಿಸಬೇಕು ಎಂಬ ಧರ್ಮಶಾಸ್ತ್ರದ ಪುಟ ಹರಿದುಹೊಗಿದೆ ಅವ ಓದುವಾಗ ಹಾಗೆಂತ ಹೇಳ್ತಾನೆ -"ಧರ್ಮಯೇನು ಅಂತ ನನಗೆ ಗೊತ್ತುಂಟು " ಅದೀಗ ಅವನಿಗೆ ಅಂತ ಯೇನು? ಹಿಂದೆ ಹಿರಣ್ಯಕಶ್ಯಪುಗೂ ಗೊತ್ತಿತ್ತು, ರಾವಣನಿಗೂ ಗೊತ್ತಿತ್ತು. ಗೊತ್ತಿದ್ದವ ಅಧರ್ಮ ಮಾಡುವಾಗ ನಾವು ಹೇಳುವುದು ದಂಡನಾರ್ಹ ಅಂತ, ಹಾಗಾದರೆ ಗೊತ್ತಿದ್ದೂ ಮಾಡ್ತಾನೆ - ಅದು ಪ್ರಪಂಚಕ್ಕೆ ಒಂದು ಪಂಥಾಹ್ವಾನ "ನಾನು ಗೊತ್ತಿದ್ದೂ ಮಾಡ್ತೀರಿ  ನೀವೆನ್ ಮಾಡ್ತೀರಿ?" ಧರ್ಮರಾಯ ಹಾಗಲ್ಲ.

ಇಲ್ಲಿ ದೃಷ್ಟದ್ಯುಮ್ನ - ಸೇನಾಪತಿ, ಆದರೆ ಒಂದುಂಟು ಅರ್ಜುನಾ ಹೋರಾಟಕ್ಕೆ ನಾಯಕ ಯಾರು ನಮ್ಮ ಪಕ್ಷದಲ್ಲಿ? ನೀನೇ ಹೌದಲ್ಲ? ನಾನಲ್ಲವಲ್ಲ? ನಾನು ಶಸ್ತ್ರ ಹಿಡಿಯುವದಿಲ್ಲ ಅಂತ ಹೇಳಿದ್ದ್ಯಾಕೆ? ನನ್ನ ಭಾವನೆಂಟ ನೀನ್ ಹಿಡಿದ್ರೆ ಮತ್ತೆ ನಾವು ಹಿಡಿಯಬೇಕಾದ ಅಗತ್ಯ ಇಲ್ಲ. ನೀನ್ ಆ ಹೊತ್ತೇ ಹೇಳಿದ್ದಿ - "ಈ ಸಲ ಹೋರಾಟ ನನ್ನದೇ ಸ್ವಾಮಿ" ಹಾಗಾದರೆ, ನಾನ್ಯಾಕೆ? "ನನ್ನ ರಥದಲ್ಲಿ ಸಾರಥ್ಯವನ್ನು ಮಾಡಬೇಕು" ಅಲ್ಲವೇ? ಯಾಕೆ ಒಪ್ಪಿಕೊಂಡದ್ದು? ನಿನ್ನ ರಥದಲ್ಲಿ ಕುಳಿತರೆ ನಿನಗಂತೂ ಪೆಟ್ಟು ಬೀಳಲಿಕ್ಕೇ ಇಲ್ಲ, ನನಗೂ ಬೀಳಲಿಕ್ಕೆ ಇಲ್ಲ ಅಂತ. ಇಂಥಾ ಹೋರಾಟದ ಕಣದಲ್ಲಿ ಖಂಡಿತ ಜಯಿಸುವವ ಯಾರು? ಅವನ ಸಾರಥ್ಯ ಮಾಡ್ಲಿಕ್ಕೆ ಅಂತ ಒದ್ದಿ ಬಂದದ್ದು ನಾನು. ಅರ್ಜುನಾ ನೀನು ಹೇಳಿದೆಯಲ್ಲ ಸೇನೆಯ ಉಭಯ ದರ್ಶನ ನನಗೊಮ್ಮೆ ಆಗಬೇಕು ಅಂತ; ಆದಕಾರಣ ಉಭಯ ಸೇನೆಯ ಮಧ್ಯೆ ನನ್ನ ರಥವನ್ನು ಕೊಂಡುಹೋಗಿ ನಿಲ್ಲಿಸಬೇಕು. ಸಾರಥಿ, ಅಂತ ಹೇಳಲಿಲ್ಲ ಅಚ್ಯುತ ಅಂತಲೇ ಹೇಳಿದ್ದಿ. ಆದರೆ ಉದ್ಯೋಗ ಇದೇ ಆಲ್ವೆ ಅಚ್ಯುತನಿಗೆ?

ಈಗ ನೀನು ಹೇಳಿದ ವೃತ್ತಿ ಯಾವುದು? ಅದರ ಒಳಗೆ ನಾವು ಮಾತನಾಡುವ, ತ್ರಿಕಾಲಗಳಲ್ಲಿ ಸಂಧ್ಯಾವಂದನೆಯನ್ನು ಮಾಡಬೇಕು ದ್ವಿಜರು, ಮಾಡತಕ್ಕದ್ದು - ಆದರೆ ಸ್ಥಳವೇ ಸಿಕ್ಕಲಿಲ್ಲ ಅಂತಾದ್ರೆ? ಹೊತ್ತಾಯ್ತು ಅಂತ ಮಾಂಸದ ಅಂಗಡಿಯಲ್ಲಿ ಸಂಧ್ಯಾವಂದನೆ

ಮಾಡ್ತೇವೋ? ಆದ ಕಾರಣ ಸ್ಥಾನ ಮರ್ಯಾದ ಮುಖ್ಯ ಈ ಸ್ಥಾನಕ್ಕೆ ಯಾವ ಮರ್ಯಾದ? ಇದಿರು ನಿತ್ತದ್ದು ಯಾವ ಪಕ್ಷ ಅಂತ ಗೊತ್ತಲ್ಲ ನಿನಗೆ? ಯೇನ್ ಹೇಳ್ತೇವೆ ನಮ್ಮ ರಾಜಕೀಯ ಭಾಷೆಯಲ್ಲಿ ಅದಕ್ಕೆ ? ವಿರೋಧಪಕ್ಷ. ಅವರು ನಮ್ಮನ್ನು ಹೇಳುವದೂ ಹಾಗೇ. ಇದರಿಂದ ಒಂದು ತತ್ತ್ವ ಸಿದ್ಧವಾಗಿದೆ ಸರಿಯಾದ ಪಕ್ಷ ಯಾವುದೂ ಇಲ್ಲ ಇಲ್ಲಿ - ಅದಕ್ಕೆ ಇದು ವಿರೋಧ ಇದಕ್ಕೆ ಅದು ವಿರೋಧ. ಆದ ಕಾರಣ - ವಿರೋಧಪಕ್ಷಗಳೇ ಇರೋದು ಹೋರಾಟದ ಕಣದಲ್ಲಿ, ಮತ್ತೊಂದು ನಿಜವಾದ ಪಕ್ಷ ಉಂಟು- ಅದು ದೂರದಲ್ಲಿ ನೋಟಕರಾಗಿ ನಿವೃತ್ತರದು, ಅದಕ್ಕೊಂದು ಹೆಸರಿಡುವ – ಜನತಾ ಅಂದರೆ ಕೋಟಿ ಕೋಟಿ ಜನ ನೋಡ್ತಾ ಇದ್ದಾರೆ - ಯೇನಾಗ್ತಿದೆ ನೊಡುವಾ ಅಂತ ಕೆಲವರು, ಯೇನಾದರೂ ಆದೀತು ಅಂತಿದ್ದಾರೆ ಯಾಕೆ? ಅವರು, ಹಿಂದೆ ನಾವು ಕಾವ್ಯಗಳಲ್ಲಿ ಓದಿದ ಹಾಗೆ ರಾಮ ರಾವಣರ ಯುದ್ಧದ ಪ್ರಾರಂಭವಾಗುವಾಗಲೇ ಕೈಬಾಯಿ ತೊಳೆದು ಶುದ್ಧರಾಗಿ ಕುಳಿತವರು. ಯಾಕೆ ಕೈ ಬಾಯಿ; ತೊಳೆದದ್ದು? ಸ್ವಸ್ಥಿ ಹೇಳಲಿಕ್ಕೆ ಬಾಯಿ, ಯೆತ್ತಲಿಕ್ಕೆ ಕೈ, ರಾಮ ಜಯಿಸ್ತಾನೋ – 'ರಾಮಾಯ ಸ್ವಸ್ತಿ'. ರಾವಣ ಗೆಲ್ತಾನೋ - 'ರಾವಣಾಯ ಸ್ವಸ್ತಿ'. ಅವರಿದಲ್ಲಿ ಹೆಚ್ಚಿನ ತೀವ್ರತೆಯನ್ನುಳ್ಳವರಲ್ಲ. ಬಹುಶಃ ಅವರಿಗೆ ಅವರದ್ದೇ ಸಮಸ್ಯೆ ಬೇರೆ ಉಂಟು. ಇಷ್ಟು ದೊಡ್ಡ ರಾಜಕೀಯಕ್ಕೆ ಅವನ್ಯಾಕೆ ತಲೆಹಾಕ್ತಾರೆ, ಕೈ ಹಾಕ್ತಾರೆ.

ಇಷ್ಟು ನಾನು ವಿವರಿಸಿ ಹೇಳಿದ್ಯಾಕೆ? ಈ ಪಕ್ಷದಿಂದ ಹೋರಾಟಕ್ಕಿದ್ದ ನಾಯಕ ನೀನು. ಇದಕ್ಕೆ ಬೇಕಾದ ಪೂರ್ವ ಸಂಗ್ರಹವೆಲ್ಲ ಆಗಿದೆ. ಶಿವನನ್ನು ಒಲಿಸಿ ಪಡೆದ ಅಸ್ತ್ರಗಳು, ಪರಾಶಕ್ತಿಯಾದ ಜಗಧೀಶ್ವರಿಯಿಂದ ಸಿಕ್ಕಿದ್ದು - ಅಂಜಲಿಕ, ಪ್ರಾಂಜಲಿಕ. ಹಾಗೇ ಗುಹ, ಗಣಪ ಇವರೆಲ್ಲ ಕೊಟ್ಟದ್ದು, ಇದು ಬತ್ತಳಿಕೆಯಲ್ಲಿ ಸ್ಥಳ ಉಂಟು ಅಂತ ತುಂಬಿಸುವದಕ್ಕಲ್ಲವಲ್ಲ? ಹಾಗಾದರೆ ಈ ಹೋರಾಟದಲ್ಲಿ ಯತಾರ್ಥಕ್ಕಾದ್ರೆ ಈ ಎಲ್ಲವರು ಇರೋದು - ಅರ್ಜುನ ಯೇನ್ಮಾಡ್ತಾನೆ ಅಂತ? ಬಾಕಿ ಇದ್ದವರೆಲ್ಲ ಜಯಿಸಲಿ, ಅವರವರ ವೃತ್ತಿ ಧರ್ಮದಲ್ಲಿ; ನೀನೆಲ್ಲಿಯಾದ್ರೂ ಹಿಂದೆ ಆದ್ರೆ ಈ ಪಕ್ಷವುಂಟು ಅಂತ ಲೆಕ್ಕ. ಅಂದಿನ ರಾಜಸೂಯದ ಧನಂಜಯನಾದರೆ ಸಾಲದು, ಮೂರು ಲೋಕದಲ್ಲಿಯೂ ಕೂಡಾ ವಿಜಯ ವಿಕ್ರಮಿಯಾದಂತಹ ಯಾವ ತ್ರಿಲೋಕ ವಿಜಯಿಯಾದ ಪಾರ್ಥನಾದರೂ ಸಾಲುವದಿಲ್ಲ ಇಲ್ಲಿ. ಎಂಥ ಅರ್ಜುನ ಬೇಕು? "ವಿಕ್ರಮಾರ್ಜುನ" ! ಇಲ್ಲಿ ತೋರಿಸಬೇಕಾದದ್ದು ನಿನ್ನ ವಿಕ್ರಮ. ಆದ್ದರಿಂದಲೇ ನೋಡು, "ಸೇನಯೋರುಭಯೋರ್ಮಧ್ಯೆ ರಥಂ ಸ್ಥಾಪಯ ಮೇಚ್ಯುತ್" ಅಂತ ಹೇಳಿದೆಯಲ್ಲ - ತಂದು ನಿಲ್ಲಿಸಿದ್ದೇನೆ.

|ಮಾರವಿ-ಏಕತಾಳ ಪರಿಕಿಸು ಪಾರ್ಥನೆ ನಿಂದಿಹರಿಪುಮೋ | ಹರದೊಳು ರತಿಕರನು

ಕರದೊಳು ಶಸ್ತ್ರಾಸ್ತ್ರಗಳುರೆ ಧರಿಸುತ | ತಿರುಹುತ ಮೀಸೆಯನು || ೧೩೯ |

ಈಗ ನೀನು ನೋಡಬೇಕಾದದ್ದು ನನ್ನನ್ನಲ್ಲ ; ಅಲ್ಲಿ ನೋಡು ಪಾರ್ಥಾ, ನಾನ್

ಯೇನ್ ಹೇಳಿದೆ? ಪರಿಕಿಸು ಪಾರ್ಥನೆ - ಸುಮ್ನೆ ನೋಡು ಅಂತ ಹೇಳಿದ್ದಲ್ಲ, ಹಾಗಾದ್ರೆ ನೋಡಿ ನೀನು ಪರೀಕ್ಷಿಸ್ಬೇಕು, ಯೇನನ್ನು ಪರೀಕ್ಷಿಸ್ಬೇಕು? ಅಂದರೆ ನನ್ನ ಮಾತಿನಲ್ಲಿದ್ದ ಧ್ವನಿ - ನೀನು ಪ್ರತ್ಯೇಕ ಪ್ರತ್ಯೇಕ ವಿಂಗಡಿಸಿ, ಬಿಡಿಬಿಡಿಯಾಗಿ - ವ್ಯಷ್ಟಿದರ್ಶನ ಮಾಡಕೂಡದು, ಸಮಷ್ಟಿದರ್ಶನ ಮಾಡಬೇಕು ಅಂತ ಅರ್ಥ, ಇದಿರು ನಿತ್ತದ್ದು ವಿರೋಧಪಕ್ಷ ನಮಗೆ ಬೇಕಾದದ್ದು ಅಷ್ಟೇ – ಈ ಪಕ್ಷಕ್ಕೂ ಆ ಪಕ್ಷಕ್ಕೂ ಹೋರಾಟ. ಇದು ವ್ಯಕ್ತಿ ನಿಷ್ಠವಾದದ್ದಲ್ಲ. ಆದ್ರೆ ನೋಡು ಯೇನೇ ಆಗಲಿ ನಾವು ಆ ಪಕ್ಷದ ಶಿಸ್ತು, ಆ ಪಕ್ಷದ ಒಕ್ಕೂಟ, ಆ ಪಕ್ಷದ ಒಮ್ಮತ ಒಳಗುಂಟೋ ಇಲ್ವೋ ! ಆದರೆ ಛೇ... ಮೆಚ್ಚಬೇಕಾದದ್ದು, ನಾವು ತಿಳಕೊಂಡಿದ್ದೆವು - ಇವರೆಲ್ಲ ನಿವೃತ್ತರಾಗಿ ವರ್ಷ ಎಷ್ಟೇ ಆಯ್ತು ; ಈ ಸಲ ಯೇನಿವರೆಲ್ಲ ರಂಗ ಪ್ರವೇಶಕ್ಕೆ ಬಂದಿದ್ದಾರೆ? ಹಾಗಾದರೆ ಆ ಪಕ್ಷ ಬೆಳದೆ ಅಂತ ಅರ್ಥ. ಯಾಕೆ ಬೆಳೀತು? ಬಹುಶಃ ಈ ಪಕ್ಷವನ್ನು ಈ ಸಲ ನಿರ್ನಾಮ ಮಾಡಿಬಿಡ್ಡೆಕು ಅಂತ ಎಲ್ಲರೂ ಸೇರಿದ್ದಾರೋ ಯೇನೋ! ನನಗೆ ಹಾಗೆ ಕಾಣದೆ, ಇಲ್ಲದಿದ್ರೆ ಯೇನು ಹೊಂದಾಣಿಕೆ! ಯೆಲ್ಲ ವಿಶಮ ಹೊಂದಾಣಿಕೆ !! ತಾತ್ವಿಕವಾಗಿ ಯಷ್ಟೋ ಮತಭೇದಗಳುಂಟು ಇವರಿಗೆಲ್ಲ; ನಾ ಕಂಡವ ಕೆಲವರನ್ನು. ಛೇ ಇವರೆಲ್ಲ ಈ ಪಕ್ಷಕ್ಕೆ ಈ ಸಲ ಸೇರಿಯಾರು ಅಂತ ನಾನು ಸ್ವಪ್ನದಲ್ಲಿ ಎಣಿಸಲಿಲ್ಲ. ನಾ ತಿಳ್ಕೊಂಡಿದ್ದೆ - ಯಾವ ಪಕ್ಷಕ್ಕೂ ಸೆರೋದಿಲ್ಲ ಇವರೆಲ್ಲ ನಿವೃತ್ತ ರಾಜಕಾರಣಿಗಳು ಅಂತ. ಈಗ ನಿವೃತ್ತರಾದವರು ಹೊಸ ಉತ್ಸಾಹದಿಂದ ಪ್ರವೃತ್ತರಾಗಿ ಮುಂಚೂಣಿಯಲ್ಲೇ ನಿತ್ತ ನಾಯಕರು! ಆ ಪಕ್ಷ ಈ ಸಲ ಒಂದಾಗ್ಯದೇ! ಆವಾಗ ನಾವೂ ಯೋಚನೆಮಾಡೇಕು, ಪಕ್ಷದ ದೃಷ್ಟಿಯಿಂದ ನೋಡೋಕು, ಈ ಪಕ್ಷದಲ್ಲಿ ಹೋರಾಟಗಾರರ ಮುಂದಾಳು ಯಾರು ಅಂತ. ಆಗ ನಾನು ಹೇಳಿದ್ದು ಯಾಕೆ ? ಎರಡೆರಡು ಸಲ ಹೇಳಿದ್ದು - ನಿನಗೆ ನೆನಪಿಸುವದಕ್ಕೆ.

ಕೆಲವು ಸಲ ನನಗೇ ತೋರ್ತದೆ- ನಾನು ಆಯುಧ ಹಿಡಿಯೋದಿಲ್ಲ ಅಂತ ಹೇಳಿ ಮೋಸ ಮಾಡಿದೆನೋ ಅಂತ. ಯಾಕೆ? ಇಷ್ಟೆಲ್ಲ ಕಲಬೆರಕೆಯಾಗಿ ನನ್ನಿದಿರು ಬರ್ತದೆ ಅಂತ ನನಗೆ ಗೊತ್ತಿರಲಿಲ್ಲ. ಈ ಬೆರಕೆಗೆಲ್ಲ ಪಂಚಗವ್ಯ ಕೊಡಬೇಕಾಗಿದ್ರೆ ನೀನು ಸಾಕು; ನನಗೆ ಮಾತ್ರ ಭರವಸೆ ಕೊಡಬೇಕು. ಇಲ್ಲದಿದ್ರೆ ನಾನೇ ಬೇಕು ಅಂತಾದ್ರೆ ಅನಿಸ್ತದೆ- ಇದು ಪಕ್ಕನೆ ಮತ್ತೆ ಶುದ್ಧ ಆಗುವ ಪಕ್ಷ ಅಲ್ಲ. ಅವರಿಗೆ ಯಾವಾಗ ಪಕ್ಷ ನಿಷ್ಠೆ ಉಂಟೋ ನಮಗೂ ಒಂದು ತರದ ಎಚ್ಚರಿಕೆ ಅಲ್ಲೊ? ಅದೂ ಕೂಡಾ ನಿವೃತ್ತರಾದಂತಹ ಹಿರಿಯರೆಲ್ಲ ಪಕ್ಷ ನಿಷ್ಠೆಯನ್ನು ಅಷ್ಟು ತೋರಿಸುವಾಗ ನಾವೂ ಸ್ವಲ್ಪ ಬುದ್ಧಿಯನ್ನು ಚುರುಕು ಮಾಡಿಕೊಂಡು ರಕ್ತ ಬಿಸಿಮಾಡಿ... ಅದೋ... ಅದೋ... ನಾ ಹೇಳಬಾರು, ನಮಗೂ ವಯಸ್ಸೇನು ಕಡಿಮೆ ಅಲ್ಲ. ಆದರೆ ಇವರೆಲ್ಲ ಇದ್ದದ್ದರಿಂದ ನಾವು ಸಣ್ಣ ಮಕ್ಕಳಾಗಿದ್ದೇವೆ. ಅಷ್ಟೆ. ಛೇ... ಕ್ಷೌರ ಇಲ್ಲದಿದ್ದ ಮುದ್ರ, ಬಿಳಿ ಗಡ್ಡ, ಮೀಸೆ ಅದ್ರಮೇಲೆ ಕೈ ಆಡಿಸ್ತಾನೆ!... ಈ ಹಣ್ಣು ಮೀಸೆಯನ್ನು ಹಣ್ಣು ಮುದುಕು ತಿರುವುತ್ತಾರೆ ಅಂತಾಗುವಾಗ ಹೊಂತಕಾರಿಯಾದ ನಿನ್ನ ಮೀಸೆಯನ್ನು ತಿರುಗಿಸಲಿಕ್ಕೆ ನನ್ನ ಕೈ ಬರಬೇಕೋ ? ನೀನು ಸಹ ತಲೆಯೆತ್ತಿ

ನಿತ್ತು... ಹೂಂ ಅವಿರುದ್ಯಾಕೆ ಮತ್ತೆ? ಅವರ ಮುಂದೆ ಒಮ್ಮೆ ಮೀಸೆಯನ್ನು ಹುರಿಮಾಡು. ಅಷ್ಟು ಮಾತ್ರವಲ್ಲ ಮತ್ತೇನು ಮಾಡ್ಬೇಕು ನಿನಗೆ ಗೊತ್ತಿಲ್ವೊ?

ನೀನು ಬಾಣ ಪ್ರಯೋಗ ಮಾಡೋದಿಲ್ಲ. ಸೇನಾಧಿಪತಿ ಇದ್ದಾನೆ, ಅವ ಒಬ್ಬ ಅಧ್ಯಕ್ಷ ಅಷ್ಟೇ. ನಾವು ಮಾಡಿದ್ದನ್ನು ಹೌದು ಅಂತ ಹೇಳಲಿಕ್ಕಿದ್ದವ. ಅವನಿಗೆ ಯಾಕೆ ಸೇನಾಧಿಪತ್ಯ ಕೊಟ್ಟಿದ್ದೇವೆ ಅನ್ನುವ ಗುಟ್ಟು ನಿನಗ್ಗೊತ್ತುಂಟಲ್ಲ ? ಯೇನು ? ಯಾಕೆ ಹೇಳು? ಅದೆಲ್ಲ ನಾಳೆ ನಿನ್ನ ಮಕ್ಕಳ ಮದುವೆ ಆಗುವಾಗ ಎಲ್ಲ – ಭಾವನ ಮರ್ಯಾದೆ ಅಳಿಯನ ಮರ್ಯಾದೆ ಅಂತ ಹೇಳು ಹಾಗಾಗಿ, ಭಾವ ಎಂಬುದಕ್ಕಲ್ಲ. ಅವನು ಹುಟ್ಟಿದ್ದು ಯಜ್ಞದಿಂದ, ಹುಟ್ಟುವಾಗ್ಲೆ ರಥ, ಕವಚ, ಆಯುಧ ದೈವಾಯತ್ತವಾಗಿ ಅವನಿಗೆ ಸಿಕ್ಕದೆ. ಅಷ್ಟು ಮಾತ್ರವಲ್ಲ ಅವನ ಹುಟ್ಟಿಗೆ ಬೀಜಮಂತ್ರ ಯಾವುದು ಎಂಬುದೂ ನಿನಗೆ ಗೊತ್ತುಂಟು. ದ್ರೋಣರ ಭಯಕ್ಕೆ ಒಬ್ಬರು ಜನ ಇರಲಿ ಅಂತ ನಾವು ದೃಷ್ಟದ್ಯುಮ್ನನನ್ನು ಮಾಡಿದ್ದು. ಮತ್ತೆ ದ್ರೋಣರನ್ನು ಕೊಲ್ಲಬೇಕು ಅಂತಲ್ಲ; ದೃಷ್ಟದ್ಯುಮ್ನ - ಹುಟ್ಟಿದ್ದೇ ಅದಕ್ಕೆ ಅಷ್ಟು ವಿವೇಕ ಇಲ್ಲದೇ ಇದ್ದವರೋ ದ್ರೋಣಾಚಾರ್ಯರು ?

ಆದರೆ ಒಂದು ಗುಟ್ಟು ನಿನಗೆ ಹೇಳ್ತೇನೆ ಇಷ್ಟು ದೊಡ್ಡ ಸೈನ್ಯ ಉಂಟಲ್ಲ. ಇಂಥವರೆಲ್ಲ ಇದ್ದಾರಲ್ಲ ? ನಮಗೊಂದು ಸುದ್ದಿ ಮುಟ್ಟದೆ ಇತ್ತೀಚೆಗೆ - ಇಷ್ಟಿದ್ರೂ ಕೌರವ “ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಂ” ಅಂತ ಹೇಳಿ ಬಿಟ್ಟಿದ್ದಾನಂತೆ. ಸತ್ಯ ಹೇಳಲಿಕ್ಕೆ ಬರದೆ ಅವನಿಗೆ - ಇದೊಂದು ಸತ್ಯವೇ. ಯಾಕೆ ? ಹನ್ನೊಂದರೋಹಿಣಿ ಸೈನ್ಯ ಇದ್ರೂಕೂಡಾ, ಭೀಷ್ಮರಿಂದ ರಕ್ಷಿಸಲ್ಪಡುವದಿದ್ರೂ ಕೂಡಾ, ಅವನ ಸೇನೆ ಸ್ವಲ್ಪ ದುರ್ಬಲವಾಗಿದೆ - ಅಪರ್ಯಾಪ್ತ. ಮತ್ತೆ ವಿಶೇಷ ಓದಿದವರು ಆ ಶಬ್ದದ ಮೇಲೆ, ಆ ಭಾಷೆಯ ಮೇಲೆ, ಅಕ್ಷರದ ಮೇಲೆ ಜಗ್ಗಾಡಿ ಯೆಲ್ಲಿಂದ ಯೆಲ್ಲಿಗೆ ಕಟ್ಯಾರು ಜುಟ್ಟು! ಹಾಗೆ, ನಿಜವಾಗಿ ಅಪರ್ಯಾಪ್ತಂ ಎಂಬ ಶಬ್ದಕ್ಕೆ ರೂಢಾರ್ಥಯೇನು? 'ಸಾಲದು'. ಕೌರವ ಸಾಲದು ಅಂತ ಯಾಕೆ ಹೇಳಿದ? ಭೀಷ್ಮರಿಗೂ ಒಂದು ಮುಳ್ಳುಂಟು ಇಲ್ಲಿ ನಿಮ್ಮ ದೊಡ್ಡಪ್ಪ, ಹೌದಲ್ಲ ? ಈಗ ಗಂಡಸೇ, ಅವ ಮಹಾರಥಿಯೇ. ಆದರೆ ಒಮ್ಮೆ ಹೆಣ್ಣಾಗಿ ಆಮೇಲೆ ಗಂಡಾಗಾಗಿ ಅದು ಭಿಷ್ಮಾಚಾರ್ಯರ ಮಡಿವಂತಿಕೆಗೆ ಸಾಲದು. ಒಬ್ಬ ಶಿಖಂಡಿ ಇಲ್ಲಿದ್ದಾನೆ. ಆದ್ದರಂದಲೇ ಇರಬೇಕು “ಆಚಾರ್ಯ ಮುಪಸಂಗಯ್ಯ” ದ್ರೋಣನಲ್ಲಿ ಹೋಗಿ ಗುಟ್ಟಾದ ಶೈಲಿಯಲ್ಲಿ ಒಂದು ಮಾತು ಹೇಳಿದನಂತೆ. ಭೀಷ್ಮಾಭಿರಕ್ಷಿತವಾದ ನಮ್ಮ ಬಲ ಅಪರ್ಯಾಪ್ತವಾಗದೆ ಗುರುಗಳೇ, ಯಾಕೆ ಅಂತ ನಿಮಗೆ ನಾ ಹೇಳಬೇಕಾಗಿಲ್ಲ. ಆದ ಕಾರಣ 'ಅಯನೇಶುಚಸರ್ವೆಷು' ಭಿಷ್ಮರನ್ನು ನೀವು ನೋಡಿಕೊಳ್ಳಬೇಕು. “ಯಾರು ? ದ್ರೋಣರು. ಆದರೆ ದ್ರೋಣರಿಗೆ ಮೊದಲೇ ಹೇಳಿಬಿಟ್ಟಿದ್ದಾನೆ. “ತವಶಿಷ್ಯೇಣ ಧೀಮತಾಂ” ಅವ ಸೇನಾಧಿಪತಿಯಾಗಿದ್ದಾನೆ. ಅದರ ಅರ್ಥಯೇನು ಅಂತಂದ್ರೆ ನಿಮ್ಮನ್ನು ಭೀಷ್ಮಾಚಾರ್ಯರು ನೋಡಿಕೊಳ್ತಾರೆ. ಹೀಗಾಗ್ಯದೆ. ಭಿಷ್ಮರನ್ನು ನೋಡ್ಲಿಕ್ಕೆ

ದ್ರೋಣಾಚಾರ್ಯರು, ದ್ರೋಣಾಚಾರ್ಯರನ್ನು ರಕ್ಷಿಸಲಿಕ್ಕೆ ಭೀಷ್ಮಾಚಾರ್ಯರು. ಈ ದ್ವಂದ್ವದಲ್ಲಿ ಬಿದ್ದಿದ್ದಾರವರು. ಇದು ನಮಗೊಳ್ಳೆಯದು. ಇದನ್ನೆಲ್ಲ ನೀನು ಅಲ್ಲಿ ಕಾಣಬೇಕು ಅಂತ ನಾನು ಹೇಳುವದು. ಸುಮ್ಮನೆ ನರನೆ ನೋಡು ಅರಿಗಳನ್ನು, ಪಾರ್ಥನೆ ಪರಿಕಿಸು ರಿಪುಮೋಹರವನು ಅಂತ ಹೇಳಿದರಾಗಲಿಲ್ಲ. ಹೇಳಿದ್ದನ್ನೆಲ್ಲವನ್ನು ಪರೀಕ್ಷೆ ಮಾಡಿ ನಿನ್ನ ಪುರುಷೋತ್ತಮಾತ್ಮಕವಾದ ಕಣ್ಣಿನಲ್ಲಿ ಇದ್ದನ್ನೆಲ್ಲ ನೀನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಅದೋ ನೋಡು, ಮಿಸೆಮೇಲೆ ಅವರ ಕೈ ಹೋಗ್ತದೆ ! ನೀನೇನು ಎಲ್ಲ ಸರದಿ ಪ್ರಕಾರ ಬರ್‍ಲಿ. ಪ್ರಾಯ ಪ್ರಕಾರ ಮರ್ಯಾದೆ ಅಂತಲೋ? ನಾನ್ ನಿನಗೆ ಹೇಳ್ತೇನಲ್ಲ ನನಗಿಲ್ಲದ ಮೀಸೆ... ನಿನಗೆ ಇದ್ದ ಮೀಸೆ ತಿರುಗಿಸ್ಲಿಕ್ಕೇನಂತೆ? ತಿರುಗಿಸು, ತೆಗಿ ಬತ್ತಳಿಕೆಯಿಂದ ಬಾಣ ಹೂಂ, ಹೊಡೆ.

ಅಲ್ಲಿಂದಲೇ ತೊಡಗ್ತೀಯೋ ? ಅಡ್ಡಿಲ್ಲ ನೀನೂ ತಿಳಿದುದನ್ನೇ ನಾನು ಹೇಳಿದ್ದು, ಸಮಷ್ಠಿಯಿಂದ ನೋಡಿದರೆ ಸಾಕು ಅಂತ ಮಾಡಿಕೊಂಡೇ ತೀರಬೇಕು ಅಂತಿಲ್ಲ ಅಂತ ನಾನ್ ಹೇಳೋದು. ಸೂರ್ಯದರ್ಶನ ಮಾಡು' ಅಂತ ಒಂದ್ ಮಾತುಂಟು. ಸೂರ್ಯದರ್ಶನ ಮಾಡುವಾಗ ಸೂರ್ಯನನ್ನೇ ನೋಡುವದು ಉದ್ದೇಶ. ಸೂರ್ಯದರ್ಶನ ಅಂತಂದ್ರೆ ಕಿರಣದರ್ಶನ ಎಂಬಲ್ಲಿಗೆ ವ್ಯಾಪ್ತಿಯಲ್ಲ. ಸೂರ್ಯದರ್ಶನವೇ ಆಗಬೇಕು. ಸೂರ್ಯದರ್ಶನ ಮಾಡು ಎಂಬ ಮಾತಿನಲ್ಲಿ ನೆಲ ನೋಡಬೇಡ ಅಂತ ಇಲ್ಲ. ಆದರೆ ನೆಲವನ್ನೇ ನೋಡುವದು ಆ ದೃಷ್ಟಿಯಲ್ಲಲ್ಲ. ನೀನೀಗ ತಪ್ಪಿಬಿದ್ದಿ ಅಂತ ನಾನ್ ಹೇಳೋದಲ್ಲ. ಅಲ್ಲಿಂದಲೇ ಬೇಕಾದ್ದಪ್ಪ. ಈ ಕೆಲವರಿಗೆ ಸಂಗೀತ ಶಾಸ್ತ್ರದಲ್ಲಿ ಕೆಲವು ರಾಗಗಳ ಹೆಸರುಂಟು ನಂದೂ ಸ್ವಲ್ಪ ಪರಿಶ್ರಮ ಉಂಟು ಅದರಲ್ಲಿ ನಿನಗೊತ್ತುಂಟಲ್ಲ - ಕೊಳಲೂದುವದು. ಆದರೆ ಚೆನ್ನಾಗಿ ಅಭ್ಯಾಸ ಮಾಡಿದ ಮೇಲೆ ಪ್ರತೀಸಲ ಆಧಾರಷಡ್ಜ ಹಿಡಿಯಬೇಕಾದ ಅಗತ್ಯ ಇಲ್ಲ. ಆ ಸ್ವರಸ್ಥಾನದ ನಿರ್ಣಯ ಇರ್ತದೆ. ನೀನಂತಹ ನಿರ್ಣಾಯಕವಾದಂತಹ ಮಟ್ಟಕ್ಕೆ ಯೇರಿದವ ಎಂಬ ಆತ್ಮವಿಶ್ವಾಸದಿಂದ ನಾನ್‌ಹೇಳಿದ್ದು - ಸಮಷ್ಟಿಯಿಂದ ನೋಡು ಅಂತ.

ಹ್ಞೆ... ಇದು ನೀನೇ ಮಾತಾಡೋದೋ! ಅರ್ಜುನಾ ಪ್ರಾರಂಭದಲ್ಲಿ ನಾನು ಧಾಟಿಯಲ್ಲಿ ಯಾಕೆ ಮಾತಿಗೆ ತೊಡಗಿದ್ದು ಅಂತಂದ್ರೆ - ಯೆಷ್ಟೆಂದೂ ನಿನಗೆ ನನ್ನಲ್ಲೊಂದು ಸಲಿಗೆ, ಕುದುರೆಗಳನ್ನು ಹೊಡೆಯಲಿಕ್ಕಲ್ಲೊ ನೀನು ನನ್ನ ಕೈಯಲ್ಲಿ ಚಮ್ಮಟಿಕೆಗಳನ್ನು ಕೊಟ್ಟದ್ದು ? ಯಾಕೆ, ಅಲ್ಲಿ ವರೆಗೆ ಸಿಟ್ಟು ಬಂದದೆ ಅಂತರ್ಥ. ನಿನಗೆ ಹೊಡೆದ್ರಡ್ಡಿಲ್ಲಪ್ಪ. ನಾನ್ ಹೊಡ್ದ್ರ ನಿನಗೊಂದು ಮಾನ ಮರ್ಯಾದೆ ಹೋಗಲಿಕ್ಕುಂಟೋ? ಈಗ ನೀನೇ ಎಲ್ಲಿ ತಂದು ನಿಲ್ಲಿಸಿದೆ ? “ಇಷ್ಟು ಜನ ಕೂಡಿ ಹೊಡಿಲಿ ನನ್ನನ್ನು ಬೇಕಾದ್ರೆ ನಾನು ಪ್ರತಿಕ್ರಿಯೆ ತೋರಿಸುವದಿಲ್ಲ” ಅಂತ ಹೆಳಿ. ವಿರೋಧಿಗಳ ಬಗ್ಗೆ ಔದಾರ್ಯ ತೋರಿಸಿದ ನೀನು ನಿನ್ನ ಭಾವ ನಾನೆರಡು ಪೆಟ್ಟು ಹೊಡ್ದ್ರೆ ನೀನ್ ಕೈ ಎತ್ತಲಿಕ್ಕಿಲ್ಲ.

ಆದ್ದರಿಂದಲೇ ನಾನು ಹೇಳೋದಿಲ್ಲ ಯಾಕೆ? ನಾ ಹೊಡೆದರೂ ನೀನು ಕೈಎತ್ತೋದಿಲ್ಲ. ಕೈ ಎತ್ತದೇ ಇದ್ದವರಿಗೆ ನಾನು ಕೈ ಎತ್ತೋದಿಲ್ಲ.

ಅಲ್ಲ, ಅರ್ಜುನ ಛೇ... ಇದೆಲ್ಲಿಂದ ಬಂತಯ್ಯ ನಿನಗೆ ಈ ಕೊಳಕು ! "ಕುತಸ್ತ್ವಾಕಶ್ಮಲಮಿದಂ ವಿಶಮೇಸಮುಪಸ್ಥಿತಂ" ಅರ್ಜುನಾ, ನಾನ್ ಆವಾಗಲೇ ಹೇಳಿದ್ದೇನೆ - 'ಸ್ಥಾನ ಮರ್ಯಾದೆ' ಅಂತ ಒಂದ್ ಹೌದಲ್ಲ ? ಈಗ ನಿನ್ನಲ್ಲಿದ್ದ ದಯೆ ಅಂದರೆ ಭೂತದಯೆ, ಅನುಕಂಪ, ಸಹಾನುಭೂತಿ ಇನ್‌ಯೇನೆಲ್ಲ ಹೇಳಬಹುದೋ ಇದಕ್ಕೆ ಮೆಚ್ಚತಕ್ಕದ್ದೇ. ಆರ್ಯವಂಶಜನಾದಂತಹ ನಿನಗೆ, ಸುಸಂಸ್ಕೃತ ನಾದ ನಿನಗೆ, ಕೋಟಿ ಕೋಟಿ ನರರ ಮಧ್ಯೆ ಪ್ರತ್ಯೇಕ ನರನೆಂದು ಬಾಕಿದ್ದವರಿಂದ ಕರೆಯಲ್ಪಡುವ ನಿನಗೆ, ಈ ಹೃದಯವೈಶಾಲ್ಯ ಬಂದರೆ ಆಕ್ಷೇಪ ಅಲ್ಲ. ಈ ಸ್ಥಳಕ್ಕೆ ಮಾತ್ರ ಬರಬಾರದು. ಪ್ರತಿಯೊಂದು ವಿಷಯದಲ್ಲಿಯೂ ವಿಚಾರಕ್ಕೂ ಒಂದು ಸ್ಥಾನವನ್ನು ನಾವು ಕೊಡಬೇಕು. ಈಗ, ನೀನು ನಾನು ಚರ್ಚೆ ಮಾಡಿದರೆ ನಾಳೆ ಪ್ರಪಂಚಕ್ಕೂ ಸ್ವಲ್ಪ ಲಾಭ ಆಗಬೇಕು. ನೀನಾಲೋಚನೆ ಮಾಡು, ಶೃದ್ಧೆ ಬೇಡವೋ ಜೊತೆಗೆ ವಿವೇಕವೂ ಬೇಡವೋ? ನಾವು ಯಾದವರೆಲ್ಲ ಕೂಡಿ ವಿನೋದಕ್ಕೆ ಹೇಳುವ ಕ್ರಮ ಉಂಟು "ಜನಿವಾರ ಯಾವ್ಯಾವ ಕಾಲಕ್ಕೆ ಹೇಗೇಗೆ ಉಪಯೋಗಿಸಬೇಕು ಅಂತ ಕಲ್ತಿರಬೇಕು" ನಾವೆಲ್ಲ ಜನಿವಾರ ಇದ್ದಜಾತಿಯವರು. ಹಾಗಂತ ಕಿವಿಯಲ್ಲಿಟ್ರೆ ಸಾಕೋ ? ದೇವಸ್ಥಾನದ ಅಂಗಳವೂ ಆಗಬಾರದಲ್ಲ ? ಹಾಗಾದರೆ ಇದೆರಡೂ ಒಟ್ಟಿಗೆ ಕೂಡಿಬರಬೇಕು. ಶ್ರದ್ಧಾ ಮೇಧಾ - ಅಲ್ಲವೇ ? ಅಲ್ಲಿ ಸ್ಥಳ ದೋಷ ಬಂತಲ್ಲ - ಎಲ್ಲಿ ? ದೇವಸ್ಥಾನದ ಅಂಗಣ ಅನ್ನುವಾಗ ಇಲ್ಲಿ ಆಚಾರ್ಯತ್ವ ಉಳಿಯಿತು ಹೌದು. - ಇಟ್ಟದ್ದು ಕಿವಿಯಲ್ಲೇ ಅರ್ಜುನಾ ನೀನೂ ಹೀಗೇ 'ಹೃದಯ ದೌರ್ಬಲ್ಯದಿಂದ ಮರುಳನಂತೆ 'ಅನಾರ್ಯರಂತೆ ನುಡಿಯುವದೇ ? ಇದಕ್ಕೆ ಅಸ್ಥಾನ ವೈರಾಗ್ಯ' ಅಂತ ಹೆಸರು. ವೈರಾಗ್ಯ ಭೂಷಣಪ್ರಾಯವಾದದ್ದು ಮನುಷ್ಯನಿಗೆ, "ಕಿಂ ನೋ ರಾಜ್ಯೇನ ಗೋವಿಂದ ಕಿಂ ಜೀವಿತೇನವಾ"- ಈ ಭಾವ ಒಳ್ಳೆಯದು - ಇಲ್ಲಿಯೇ ಅದು ? ದೇವಸ್ಥಾನದ ಗರ್ಭಗುಡಿಯ ಮುಂದೆ ಕೈಮುಗಿದು ನಿತ್ತಾವಾಗ ಮಹಾಮಂಗಳಾರತಿ ಎತ್ತುವಾಗ ನಿನಗೆ ತೋರಲಿ "ಯೆಲ್ಲಿಯ ಹೆಂಡತಿ ಯೆಲ್ಲಿಯ ಸಂಸಾರ ಯೇ ಪರಮೇಶ್ವರಾ ಪಾರುಮಾಡು" ಹ್ಹ ... ಯುದ್ಧ ಭೂಮಿಯಲ್ಲಿ ಬಂದು ನೀನು...? ಜನಿವಾರ ಕಿವಿಯಲ್ಲಿ ಇಡುವ ಮಟ್ಟಿಗೆ ನನ್ನ ಭಾವ ನೀನು ತಪ್ಪುವದಿಲ್ಲ - ಜಾಗ ನೋಡೋದಿಲ್ಲಆದ್ದರಿಂದಲೇ ಅರ್ಜುನಾ 'ವಿಷಮೇ ಸಮುಪಸ್ಥಿತಂ'ಕುತಸ್ತ್ವಾ ಕಶ್ಮಲಂ - ನಾನ್ ಹೇಳೋದು ಹಾಗೆ ವಿಷಮವಾದಂತಹ ಸನ್ನಿವೇಷದಲ್ಲಿ ಈ ನಿನ್ನ ಕೊಡುಗೆಗೆ ಕಷ್ಮಲ ಅಂತ ಹೆಸರು. ನೋಡಪ್ಪಾ ಗುರುಗಳೋ, ಹಿರಿಯರೋ, ಅರ್ಚಕರೋ, ತೀರ್ಥ ಕೊಡುವಾಗ ನಾವು ಶ್ರದ್ಧೆಯಿಂದ ತೀರ್ಥಕ್ಕೆ ಕೈಕೊಡಬೇಕು. ಕೈವೊಡ್ಡುವಾಗ ಕೈ ತೊಳೆದುಕೊಳ್‌ಬೇಕಲ್ಲ ? ಯೇನೋ ಮಾಡಿ ಬಂದ ಕೈಯಲ್ಲಿ "ಓ ತೀರ್ಥವೊ... ಕೊಟ್ಟುಬಿಡಿ" ತೀರ್ಥವನ್ನು ಕೆಡಿಸಬಾರದು... ? ಈ ನಿನ್ನ ಕೊಡುಗೆ ಉಂಟಲ್ಲ ವಿರೋಧಿಗಳ ಮಟ್ಟಿಗೆ ..ಹ್ಹೆ.. ದೇವ್ರೆ. ಯೇನಂತ ನಿನು ಹೇಳುವುದು? "ಕೃಷ್ಣಾ ಸ್ವಜನ" ಹ್ಹ ಹ್ಹ ಹ್ಹ.

ನಿಮ್ಮ ದೊಡ್ಡಪ್ಪ  ಕುರುಡ ಹೇಳಿದ್ದನಂತೆ - ಯುದ್ಧದ ಪ್ರಾರಂಭಕ್ಕೆ, ಮೊದಲೇ ಸವಾರಿ ಆಗಿತ್ತಂತೆ ಕುರುಕ್ಷೇತ್ರಕ್ಕೆ - ಕುರುಡನದು. ಅವನಿಗೆ ಕಣ್ಣಾಗಿ ಸಂಜಯ. ಈ ಸಲ ಸಂಜಯ ಒಳ್ಳೆ ಪ್ರಕಾಶಕ್ಕೆ ಬಂದ. ಯಾಕೆ ಅಂತಂದ್ರೆ ಮಹಾನಾಯಕನಾದಂತಹ ಧೃತರಾಷ್ಟ್ರನಿಗೇ ಕಣ್ಣಾದ !! ಆ ಸಂಜಯನಲ್ಲಿ ಅವ ಕೇಳಿದ್ದೇ ಹಾಗಂತೆ- ಹೇಗೆ? 'ಮಾಮಕಾ: ಪಾಂಡವಾ:' ಧೃತರಾಷ್ಟ್ರನಿಗಾದರೂ ನನ್ನವರು ಎಂಬುದಕ್ಕೊಂದು ಪರಿಧಿ ಉಂಟು.

ನಿನಗೆ ಯೆಲ್ಲವರೂ ನಿನ್ನವರೇ !! ಅಲ್ಲದಿದ್ರೆ "ಕೃಷ್ಣಾ ಸ್ವಜನಂಮೇ" ವಿರೋಧಿಗಳನ್ನು ಸ್ವಜನಂ ಅಂತ ಹೇಳಿಯಾರೋ ಯಾರಾದ್ರೂ ಮಾಮಕಾ: ಎಂದರೆ ಮತ್ತೇಂತಹದ್ದು ? ಪರ್ಯಾಯದಿಂದ ಒಂದೇ ಅರ್ಥ ಅಲ್ವೊ ? ಧೃತರಾಷ್ಟ್ರನ ಸ್ವಜನಂ ಎಂಬುದು ಹನ್ನೊಂದಕ್ಕೋಹಿಣಿಯ ಒಳಗೆ ನಿನ್ನದು 'ಸ್ವಜನಂ' – ನಮ್ಮದನ್ನೂ ಸೇರಿ – ಹನ್ನೊಂದು ಕೂಡಿಸು ಏಳು, ನೀನು ಹದಿನೆಂಟರ ಸಂಖ್ಯೆಗೆ ಮುಟ್ಟಿದ್ದೀ ಯೇ ಹುಚ್ಚಾ !! ಅಲ್ಲ, ಹುಚ್ಚನಿಗೇ ಹುಚ್ಚ ಅಂತ ಗೊತ್ತಾಗೋದಿಲ್ಲ. ಗೊತ್ತಾದ್ರೆ ಹುಚ್ಚು ಇಲ್ಲ. ಆದರೆ ನನಗೆ ಕಾಣದೆ ಇಲ್ಲಿ ನಿನ್ನ ಹುಚ್ಚು ವೇಷ. ಈ ನಿನ್ನದ್ದಾದಂತಹ ಅನುಕಂಪೆ ಈ ತ್ಯಾಗ ಈ ಸಂನ್ಯಾಸಕ್ಕೆ ತಯಾರಾಗುವದೆಲ್ಲ ಇದೆಯಲ್ಲ? ಇದಕ್ಕೆ ಈ ಸ್ಥಾನ ದೋಷ ಅನ್ನುವದು ಭಾಧಿಸಲ್ಪಟ್ಟು ಯೇನಾಗ್ತದೆ ಗೊತ್ತೊ ? 'ಅನಾರ್ಯಜುಷ್ಟ' ವಾಗುವದು ಮಾತ್ರವಲ್ಲ "ಅಸ್ವರ್ಗಂ ಅಕೀರ್ತಿಕರಂ' ಅಸ್ವರ್ಗ್ಯಂ ಅಂತ ಹೇಳಿದಕೂಡಲೆ 'ಸ್ವರ್ಗಕ್ಕೆ ಬೆಂಕಿ ಹಾಕಲಿ" ಅಂತ ನೀನು ಹೇಳಬಹುದು. ನನ್ನ ಅಸ್ವರ್ಗ್ಯ ಎಂಬ ಪದದಲ್ಲಿರೋದು 'ನಾರಕಿ' ಆಗಿ ಅಂತ ಧ್ವನಿ. ಅಷ್ಟು ಮಾತ್ರವೋ? ಪ್ರಪಂಚದಲ್ಲಿ ಯೇನ್ ಹೇಳ್ತಾರೆ ನಿನ್ನನ್ನು ನಿನ್ನ ಆಚಾರ್ಯರಾದ ದ್ರೋಣರಾದರೂ ಯೇನ್ ಹೇಳಿದ್ದಾರೆ - 'ಪಾರ್ಥ ಏವ ಧನುರ್ಧರಃ '... ಅಲ್ವೊ? ಶಿವಕೊಟ್ಟದ್ದಾಕೆ ಪಾಶುಪತಿ? ಇಟ್ಟುಕೋ ಕೆಲವರಲ್ಲಿ ಇರದೆ ಅದು - ದೇವರದ್ದಾದ ಮುಡಿ ಇಟ್ಟುಕೊ. ಯಾಕೆ? ಅವ ಖರ್ಚು ಮಾಡೋದಿಲ್ಲ. ಯೆಲಾ ಯೆಲಾ, ಹ ಅರ್ಜುನಾ, ನಿನ್ನನ್ನೇ ಸರ್ವಸ್ವ ನಂಬಿದ ನಿಮ್ಮಣ್ಣ ನಮ್ಮ ಪಕ್ಷದ ನಾಯಕ. ಭೀಮನನ್ನು ಕಳುಹಿಸಿದನೋ ಪಾಶುಪತ ಪಡೆಯಲಿಕ್ಕೆ? ವೇದವ್ಯಾಸರು ಕೂಡಾ ಸೂಚಿಸಿದ್ದು ಯಾರ ಹೆಸರನ್ನು? ನಿನ್ನ ಹೆಸರನ್ನು, ಅಂದಿನಿಂದ ಇಂದಿನವರೆಗೆ ಯೇನ್ ಹೇಳ್ತಾ ಬಂದಿ? ಯೆಷ್ಟೇ ಆಪಾದನೆಯನ್ನು ಮಾಡಿದ ಇವರ ಮೇಲೆಲ್ಲಾ. ಯಾರಾರನ್ನು ಭ್ರಷ್ಟಾಚಾರದ ತುತ್ತತುದಿಯ ಪರಮಾಚಾರ್ಯರು ಅಂತ ನೀನು ಹೆಸರಿಸಿದ್ದೂ, ಈ ಹೊತ್ತು ನೀನ್ ಹೇಳಿ ಇವರೆಲ್ಲ ನನಗೆ ವಂದ್ಯರು ಅಂತ.

ನಿನಗೆ ವೀರ ಅಂತ ಹೇಳಿದ್ದ್ಯಾರು? ಅವರಿಗೆ ತಲೆಸಮ ಇಲ್ವೊ ಅಥವಾ ಹೇಳಿಸಿಕೊಂಡ ನಿನಗೆ ಬುದ್ಧಿ ಸಮ ಇಲ್ವೊ? ನಿನ್ನೆ ನಿನ್ನೆ - ಎಷ್ಟೇ ಆಕ್ಷೇಪ ಆ ಕರ್ಣನ ಮೇಲೆ !! ನೀನು ಮಾಡಿದಷ್ಟು ಆಕ್ಷೇಪ ಯಾರೂ ಮಾಡ್ಲಿಲ್ಲ. ಅಷ್ಟು ಮಾತ್ರವೋ? ಈ ಯುದ್ಧ ಬೇಡ ಅನ್ನುವದಕ್ಕೆ ಕಾರಣ ಯೇನು? ಈ ರಾಜ್ಯದಿಂದ ಏನೂ ಸುಖ ಇಲ್ಲ; ಅದರ ಧ್ವನಿಯೇನು?

ರಾಜ್ಯದಿಂದ ಸುಖ ಸಿಗ್ತಿದೆ ಅಂದ್ರೆ ಮಾಡಿಯೇನು ಅಂತಲ್ವೊ? ಅರ್ಜುನಾ, ಹಾಗಾದ್ರೆ, ಎಲ್ಲಿ ಕಷ್ಟ ಇದೆ, ಎಲ್ಲಿ ದುಃಖ ಇದೆ ಅಲ್ಲಿ ನನ್ನ ಭಾವನೆಂಟ ಇಲ್ಲ; ಎಲ್ಲಿ ಸುಖ ಉಂಟು ಅಲ್ಲಿ ಪ್ರಥಮ ಸದಸ್ಯನಾಗ್ತಾನೆ ಅಂತಲ್ವೊ? ಎಂಥಾ ಹುಂಬನಯ್ಯಾ ನೀನು! ನೀನು ಒಂದು ವೇಳೆ ಈ ಬಲುದೊಡ್ಡದಾದಂತಹ ಔದಾರ್ಯವನ್ನು ಈ ವಿರೋಧೀಪಕ್ಷದ ಮೇಲೆ ತೋರಿಸಬಹುದು. ಅವರು ನಿನ್ನ ಪಕ್ಷಕ್ಕೆ ಬಂದಾರೋ? ಯೇನಿಲ್ಲ ನೀನು ಪಕ್ಷ ಕಟ್ಟುವ ಆಲೋಚನೆಯಲ್ಲೇ ಇಲ್ಲ. ಹಾಗಾದರೆ ನಮ್ಮ ಪಕ್ಷದವರಾದರೂ ಒಪ್ಪಿಯಾರೊ? ಇದಕ್ಕೆ - ನಿನ್ನ ಕೊಡುಗೆಗೆ? ನಿನಗೆ ಮುಖ್ಯ ಅಲ್ಲ - 'ಪಕ್ಷದಮನೆ ಹಾಳಾಗಿಹೋಗಲಿ' ಅಲ್ಲೊ? ಅಲ್ಲಿ ಬಂತಪ್ಪ ವ್ಯಕ್ತಿನಿಷ್ಠೆ. ನಾನಾವಾಗ ಪ್ರಸ್ತಾಪನ ಹೇಳಿದ್ದೂ ಅದಕ್ಕೇ, ವ್ಯಷ್ಟಿದರ್ಶನ ಇಲ್ಲಿ ಮುಖ್ಯವೂ ಅಲ್ಲ; ಸಮಷ್ಟಿದರ್ಶನವೋ ಅಂತ. ಈಗ ನೀನ್ ಅಲ್ಲಿಗೇ ಬಂದಿ "ನಾನುವಷ್ಟಿ ದರ್ಶನ ಮಾಡಿಕೊಳ್‌ತೇನೆ. ಆಮೇಲೆ ಸಮಷ್ಟಿ" ಈಗ ಅದೆಲ್ಲ ಬಂದದ್ದು ನಿನ್ನಲ್ಲಿಯೇ ! ನಿನಗೆ ಸಂಕಟ ಆಗ್ತಿದೆ ಅಂತಾದ್ರೆ ಲೋಕಕ್ಕೆ ಬೇಕಾದದ್ದನ್ನು ನೀನು ಮಾಡೋದಿಲ್ಲ. ನಿನಗೆ ಸುಖ ಆಗ್ತದೆ ಅಂತಾದ್ರೆ ಲೋಕ ಇದಿರು ನಿತೂ ನೀನು ಮಾಡುವುದನ್ನು ಬಿಡುವದಿಲ್ಲ.

ಹಾಗಾದರೆ ಮೂರ್ಖ ಕೌರವ ಒಬ್ನೊ ? ನೀನೂ ಅಂತ ಹೇಳಲಿಕ್ಕೆ ನನ್ನ ನಾಲಿಗೆ ತಡವರಿಸ್ತದೆ. ಅರ್ಜುನಾ, ನೀನು ಒಂದು ವೇಳೆ ಆಯುಧವನ್ನು ಕೆಳಗೆ ಹಾಕಬಹುದು. ನಿನಗಾಗುತ್ತಿರುವಂತಹ ಸಂಕಷ್ಟವನ್ನು ನೀನು ಹೇಳಿ "ಸೀದಂತಿ ಮಮಗಾತ್ರಾಣಿ" ಆಗ್ತದೆ, ನನಗೆ ಕಾಣ್ತದೆ. ಆದರೆ ಒಂದು ವಿಷಯ ಉಂಟು ರೋಗಿಗೆ ಯೇನೇಲ್ಲ ಆಗಬಾರದ್ದು ಆಗತದೋ ಅದನ್ನು ಹೇಳಲಿಕ್ಕೆ ತಿಳಿತದೆ ಅಂತಂದ್ರೆ ವೈದ್ಯನಿಗೆ ಔಷಧ ಕೊಡಬಹುದು ಅಂತೊಂದು ಆತ್ಮವಿಶ್ವಾಸ ಹುಟ್‌ತದೆ, ಇಲ್ಲದಿದ್ರೆ ಒಂದೊಂದು ಕೊಟ್ಟು ನೋಡ್ಬೇಕು - ಆದಾಗ್ತದೋ, ಇದಾಗ್ತದೋ... ಆದರೆ ನನಗೆ ಸಿಕ್ಕಿದಂತಹ ಆತುರ, ಯೇನಾಗ್ತದೆ ಅಂತ ಹೇಳಲಿಕ್ಕೆಬಲ್ಲ. ಆದ್ದರಿಂದ ನಾನೊಮ್ಮೆ ಧನ್ವಂತರಿ ಆಗಿ ಪ್ರಯತ್ನ ಮಾಡಬಹುದು ಅಂತ ಉತ್ಸಾಹ. ಆದರೆ ಮೊಟ್ಟಮೊದಲಿಗೆ ನಿನಗೆ ಉಂಟಾದಂತಹ ಹೃದಯ ದೌರ್ಬಲ್ಯ ಇದೆಯಲ್ಲ ಅದು ನಾನು ನಿನ್ನ ನಾಡಿಮಿಡಿತ ನೋಡೇ ಕಂಡಕೊಂಡೆ. ಇದು ಬೇರೆನೂ ಅಲ್ಲ, ನಿನಗೆ ಬೇರೆ ಯಾವ ದೋಷವೂ ಬರಲಿಲ್ಲ, ಬಂದದ್ದು ಸ್ವಲ್ಪ ಹೃದಯಕ್ಕೆ ದೌರ್ಬಲ್ಯ. ಅನ್ಯಥಾ ಭಾವಿಸಬೇಡ ಅದನ್ನು ದೈಹಿಕ ಅಂತ ತಿಳಕೊಂಡು ತಲೆಬಿಸಿ ಮಾಡಬೇಡ. ಹೃದಯ ದೌರ್ಬಲ್ಯ ಅಂತಂದ್ರೇನು? ಮಾನಸಿಕವಾದಂತಹ ಒಂದು ಚಂಚಲತೆ. ಶ್ರದ್ಧೆಯೇನೋ ಉಂಟು ನಿನಗೆ ಗುರು ಹಿರಿಯರಲ್ಲಿ; ಅವರಿಗುಂಟೋ ನಿನ್ನ ಬಗ್ಗೆ? ಈಗ ಭೀಷ್ಮದ್ರೋಣಾದಿಗಳ ಹೆಸರು ಹೇಳಿದೆಯಲ್ಲ - ಭೂತಕಾಲದ್ದು - ಆಗ ನಾನೊಂದು ಚಾಟೂಕ್ತಿ ಹೇಳಿದೆನಲ್ಲ ಈಗ ಹೇಗಾದೀತು ಭೂತದರ್ಶನವೊ ವರ್ತಮಾನ ದರ್ಶನವೋ ಅಂತ. ಈಗ ನಾನು ನಿನ್ನಲ್ಲಿ ಕೇಳೇನೆ ಆ ಭೂತಕಾಲದ ದರ್ಶನವನ್ನು ಕೊಡೋದಕ್ಕೆ ನಿಮ್ಮ ಅಜ್ಜ ಇಲ್ಲಿ ಬಂದದ್ದೋ? ದ್ರೋಣರದಕ್ಕಾಗಿ ಬಂದ್ರೆ?

ಅವ್ರು ಯಾಕೆ ಬಂದ್ರು? ಹೋರಾಟಕ್ಕೆ ಬಂದವರು... ನೀನೀಗ ಯುದ್ಧ ಬೇಡ ಅಂತ ಆಯುಧ ಕೆಳಗೆ ಹಾಕಿದ್ರೂ ನಿನ್ನನ್ನು ಬಿಟ್ಟು ಬಿಡ್ತಾರೆ ಅಂತ ತಿಳಕೊಂಡಿದ್ಯೋ ?

ಓ ನನ್ನ ಭಾವ, ಆ ಹೊತ್ತು ಗೋಗ್ರಹಣದಕಾಲದಲ್ಲಿ ಆ ಭೂಮಿಂಜಯಕುಮಾರ ಯಾರವ? ಉತ್ತರಕುಮಾರನೆಂದೇ ಪ್ರಸಿದ್ಧನಾದವ ಅವ ಯುದ್ಧದಲ್ಲಿ ಬೆನ್ನು ತೋರಿಸುವಾಗ ನೀನೇನ್ ಮಾಡಿದ್ದಿ? ನೀನಗ್ಯಾಕ್ಕೆ ಆ ಭೂತದ ಕಲ್ಪನೆ ಇಲ್ಲ ನಿನ್ನ ಮಟ್ಟಿಗೆ? ಯಾರಾರಮಟ್ಟಿಗೆಲ್ಲ ಹೇಳ್ತೀಯಲ್ಲ ! ಮೊದಲವ್ರೆನಾಗಿದ್ರು ಯೇನೇನೆಲ್ಲ ಮಾಡಿದ್ದರು ! ನಿನೇನ್ ಮಾಡಿದ್ದೆ? ಉತ್ತರಕುಮಾರನಿಗೆ ಯೇನು ಅಂತ ಹೇಳಿ ಅವನನ್ನು ಹುರಿದುಂಬಿಸಿದಿ? ಈ ಸನ್ನಿವೇಶಕ್ಕೆ ತಕ್ಕಂತೆ ಬದಲಾಗುವ ನೀನು ಯೇಂಥದ್ದಯ್ಯ? ಯೆತ್ತಿದವರ ಕೈಗೂಸೋ ನೀನು? ನೀನು ಓಡಿದ್ರೂ ಅವ್ರು ಬಿಡೋದಿಲ್ಲ ಈಗ. ಆದ್ದರಿಂದ ನಿನ್ನನ್ನು ನಂಬಿ ಬಂದ ನಾನೂ ಪೆಟ್ಟು ತಿನ್ನಬೇಕಾಗ್ತದೆ ಯೇಲಾ ಹೇಡಿಯೇ ಸಾರಥ್ಯವನ್ನಾದರೂ ಮಾಡು ಹೋರಾಟ ನಾನ್ ಮಾಡ್ತೇನೆ" ಅಂತ ಹೇಳಿದೆಯಲ್ಲ? ನಿನ್ನನ್ನು ಉತ್ತರಕುಮಾರನ ಜಾಗದಲ್ಲಿ ದರ್ಶಸಿ ನಾನೀಗ ಅರ್ಜುನನಾಗಬೇಕು ಅಂತ ಹೇಳೋದೋ? ಈಗ ನಿನ್ನ ರಥ ನಿತ್ತದ್ದೆಲ್ಲಿ? ಶಂಖನಾದ ಆಗ್ಯದೋ? ಯೇರಡೂಕಡೆಯ ಒಮ್ಮತ ಆಗ್ಯದೋ? ಹಾಗಾದರೆ ನೀನು ಮುಂಚೂಣಿಯಲ್ಲಿ ನಿತ್ತಿದ್ದ್ಯ್ಯ, "ಈಗ ನಾನಿಲ್ಲ" ಅಂತ ಹೇಳಿದ್ರೆ ಈ ಪಕ್ಷಕ್ಕೆ ಬೇರೆ ದ್ರೋಹ ಮಾಡ್ಬೇಕೋ ನೀನು? ಇನ್ನೀಗ ನಿನ್ನ ಜಾಗಕ್ಕೆ ನಾವು ಜನ ಹುಡುಕುವುದೆಲ್ಲಿ ? ಯಾರನ್ನು ತಂದ್ ಹಾಕುವದು? ಯೇನ್ ಒಟ್ಟು ಹುಡುಗಾಟಿಕೆಯೋ? ಆದಕಾರಣ ಹೃದಯ ದೌರ್ಬಲ್ಯವನ್ನು ಬಿಟ್ಟು ಯೇಳು. ಪರತಂಪನಾಗಿ ವೃತ್ತಿಕ್ಷೇತ್ರದಲ್ಲಿ ವಿಜ್ರಂಭಿಸು.

ಕತ್ತಲೆ ಹೊತ್ತಿಗೆ ಮಾರ್ಗ ಕ್ರಮಣ ಮಾಡುವವನಿಗೆ ಅಲ್ಲಿ ಬಿದ್ದಿದ್ದಂತಹ ಹಗ್ಗ ಸರ್ಪವಾಗಿ ಕಾಣ್ತದೆ ಅಂದರೆ ಅವ ಸುಳ್ಳುಗಾರ ಅಂತ ನಾನು ಹೇಳಿಯೇನೊ? ಕಂಡದ್ದು ಸಮ ಅಂತ, ಹಗ್ಗಗೊತ್ತಿದ್ದವ ಒಪ್ಪುವದು ಸರಿಯೇ? ಈಗ ನಿನಗೂ ನನಗೂ ಇದ್ದ ಮತಭೇದ ಅದೇ. ನೀನು ಹಗ್ಗವನ್ನು ಹಾವು ಅಂತ ಹೇಳ್ತಿ ನಾನು ಬರೇ ಹಗ್ಗ ಅಂತ ಹೇಳ್ತಾ ಇದ್ದೇನೆ. ಆದ್ದರಿಂದ ಅರ್ಜುನಾ, ಇಷ್ಟು ಜನರೂ ದುರಾತ್ಮರು ಅಂತ ನೀನು ಒಪ್ತಿ, ನಿನಗೆ ಪಾಪಭಯವೂ ಉಂಟು. ನಾನು ನಿನ್ನಲ್ಲಿ ಈಗ ಕೇಳುವುದು, ಈ ಪಾಪಿಗಳನ್ನು ಇನ್ನು ಬದುಕಲಿಕ್ಕೆ ಬಿಟ್ಟು ನಿನ್ನಂತಹ ಪುಣ್ಯಾತ್ಮನ ವಧೆಯನ್ನು ಕಾಣಬೇಕು ಕೃಷ್ಣ ಅಂತ ಪ್ರಾರ್ಥಸಲಿಕ್ಕಿಲ್ವಲ್ಲ? ಈ ಪಾಪಿಗಳು ವೃದ್ಧಿಯಾಗ್ಲಿ... ಅಲ್ವೇ? ನಿನ್ನ ಪುಣ್ಯದಲ್ಲಿ ನೀನೊಬ್ಬ ಸ್ವರ್ಗಕ್ಕೆ ಹೋಗುವ ಆಲೋಚನೆಯೊ? ಈ ಪಾಪದಲ್ಲಿ ಸಣ್ಣದು ದೊಡ್ಡದು ಅಂತ ಇತ್ಯರ್ಥ ಮಾಡೋದು ಹೇಗೇ? ನಾವಿಬ್ರ್ ಇಲ್ವೊ ಇಲ್ಲಿ, ಈಗ ಯಾರಿಗೋ ಒಬ್ಬನಿಗೆ ಕಣ್ಣು ಕುರುಡಾಗಬೇಡ್ವಾ? ನನಗಾಗಿದೆ ಅಂತ ಹೇಳುವಷ್ಟು ಧೈರ್ಯ ಉಂಟೋ ನಿನಗೆ? ಈಗ ಕೃಷ್ಣನಿಗೆ ಕಾಣುವದಲ್ಲ ಹಾವಾದ್ರೂ ಹಗ್ಗವಾಗಿಯೇ ಎಂಬ ಆ ನಿರ್ಧಾರ ನಿನ್ನದಿಲ್ವಲ್ಲ? ಯಾಕೆ ಕೇಳುವುದು ಅಂತಂದ್ರೆ ನನ್ನ ಧರ್ಮರಾಯ ಭಾವನ ತಮ್ಮ ನೀನು, ಕೌರವನ

ತಮ್ಮ ಅಲ್ಲಲ್ಲ? ಕೌರವ ಕಂಡ್ರೂ ಕೂಡಾ ಅದೆಲ್ಲಾ ಡೊಂಬರಾಟ ಅಂತಹೇಳುವ ಜನ. ಹಾಗಾದ್ರೆ ಈಗ... ಅವ್ರು ಕೊಂದ್ರೆ... ಕೊಲ್‌ಲಿ ಅಲ್ವೊ? ಇಷ್ಟು ಜನರೂ ಸತ್ರೆ? ಆ ಹನ್ನೊಂದಕ್ಕೋಹಿಣಿಸೈನ್ಯದವರೆಲ್ಲ ಪಾಪಾತ್ಮರು, ಲೋಭಿಗಳು ಅಂತ ನೀನು ಒಪ್ಪಿಯಾಯ್ತು. ನಮ್ಮ ಪಕ್ಷದವರು ಹೇಗೆ? ನಿನಗೆಲ್ಲ ಅರ್ಧಂಬರ್ಧ ಸುದ್ದಿ ಸಿಕ್ಕದ್ದು, ಪೂರ್ತಿ ಸಿಕ್ಕಿರೋದು ನನಗೆ. ಒಂದು ವೇಳೆ ಸಿಕ್ಕಲಿಲ್ಲ ಅಂತಾದ್ರೆ ಕಾಣ್ತದೆ ಅದೆಲ್ಲ. ನಿಮ್ಮಣ್ಣ ಹೋಗಿ, ನಾನ್ ಆವಾಗ ಹೇಳಿದ್ದವನಲ್ಲಿ ಯೆಂಥದ್ದು? ಮಾನಸಿಕವಾದ ಬೆಂಬಲ ಪಡೆದಿದ್ದಾನೆ ಐದೇ ಜನರ ಬಗ್ಗೆ ನಿಮ್ಮಜ್ಜನಿಂದ. ಅಷ್ಟಕ್ಕೇ ನಿಲ್ಲಿಸ್ಯೋ? ನಿಮ್ಮಜ್ಜನಿಂದ ತೊಂದರೆ ಬರ್ಲಕ್ಕಿಲ್ಲ... ಅಜ್ಜ ಹೇಳಿದ್ದನಂತೆ - “ ಎತ್ತಿದ ಬಿಲ್ಲು ಕೆಳಕ್ಕಿಳಿಸಬೇಕಾಗಿದೆ. ಯೆಷ್ಟು ಸಾವಿರ ತಲೆ ತೆಗೆತೇನೆ ಅಂತ? ನಮ್ಮವರೆಲ್ಲ ಹೊಗ್ಲಿ ಅಲ್ಲೊ ದಿನಕ್ಕೆ ಹತ್ತು ಸಾವಿರದ ಲೆಕ್ಕಕ್ಕೆ? ನೊಡು ಇಕೊ, ಅಲ್ಲಿಂದಲ್ಲಿಗೆ ನಾವು ಬಗೆಹರಿಸಿಕೊಂಡು ಮುಂದುವರಿಯೋಣ; ಈಗ ಈ ಪಾಪಿಗಳು ಅವರು ಬದುಕಲಿ ನಮ್ಮಲ್ಲಿ ಅಜ್ಜ ದಿನಕ್ಕೆ ಹತ್ತು ಸಾವಿರ ತಲೆ ತೆಗಿಲಿ, ಐದು ಜನರ ಮಟ್ಟಿಗೆ ಭಾಧಕ ಇಲ್ಲ ಎಂಬ ಭರವಸೆಯೋ? ಇದೋ ಪಕ್ಷ ಕಟ್ಟುವವರ ಕ್ರಮ? ಹುಚ್ಚ ವಿನೋದ ಆಡ್ತಾ ಇದ್ದಾನೆ. ಇಲ್ಲಿ ನಿನಗೆ ನಾನು ಆಜ್ಞೆ ಮಾಡ್ತಾ ಇದ್ದೇನೆ - ಗಾಂಡೀವ ಕೈಯಿಂದ ಜಾರುವದಲ್ಲೋ? ನೀನಾಗಿ ಕೈಯಿಂದ ಜಾರಿಸುವುದಲ್ವಲ್ಲ? ಗಟ್ಟಿಯಾಗಿ ಹಿಡಿ, ಈಗ ನಿನಗಲ್ಲದಿದ್ರೂ ನನಗಾಗಿ ಹಿಡಿ, ಬಾಣ ತೆಗಿ, ಯೆಲ್ಲ ಸಂಗ್ರಹ ಮಾಡಿ ಇವ ಇಟ್ಟುಕೊಂಡಿದ್ದಾನೆ ಇಡೀ ಪಕ್ಷಕ್ಕೆ ಬೇಕಾದಷ್ಟು; ಅದನ್ನು ವೆಚ್ಚಮಾಡೋದಿಲ್ಲ. ಹಾಗಾದ್ರೆ ನಿನ್ನನ್ನು ನಂಬಿಕೊಂಡೇ ಬಂದ ಬಾಕಿದ್ದವರು ಯುದ್ಧಕ್ಕೆ ಹೆದರಿದರೆ ಹೆದರಲಿ. ಇದು ಬಹುಶಃ ನಮ್ಮ ದೇಶದ ಸೋಲೋ, ನಮ್ಮ ರಾಜಕೀಯದಲ್ಲಿದ್ದ ಟೊಳ್ಳೋ ಗೊತ್ತಿಲ್ಲ. ಕೆಲವರಲ್ಲಿ ಎಲ್ಲ ಶಕ್ತಿ ಸಂಗ್ರಹ ಇದೆ. ಸಮಯಕ್ಕಾಗುವಾಗ ಅವರಿಗೆ ಔದಾಸೀನ್ಯ ಬಂದು ಬಿಡುವುದು; “ನಾನಿಲ್ಲ ಈ ಸಲ”! “ಇನ್ನೊಂದು ಸಲಕ್ಕೆ ಅವನಿಗಿಲ್ಲ”; ಯಾಕೆ? ಊರು ಉಳಿಯುವದಿಲ್ಲ. ಮಾತೆಲ್ಲ ಮತ್ತೆ, ಪಾಪವೋ ಪುಣ್ಯವೋ, ನಿನಗೆ ಬೇಕಾದಷ್ಟು ಜನ ಇದ್ದಾರೆ. ಹೇಳಿಕೊಡುವವರು ಇಲ್ಲೊ? ಪಾಪ ಬಂತೋ ಅಂತ ಮೊದಲು ಬಂದ್ರೆ ಆದಕ್ಕೆ ಪ್ರಾಯಶ್ಚಿತ ಯೇನು ? ಈಗ ಪ್ರಾಯಶ್ಚಿತ ಇಲ್ಲದೇ ಇದ್ದ ಪಾಪ ಇಲ್ಲಲ್ಲ? ನೀನ್ ಹೇಳಿದಿ “ಕುಲಕ್ಷಯ ಕೃತಂ ಪಾಪಂ” ಅಲ್ಲವೇ? ಅ ಕುಲಕ್ಷಯ ಅಂದ್ರೇನು? ಕುಲ ಎಂಬ ಶಬ್ದಕ್ಕೆ ಅರ್ಥ ಎಷ್ಟು? ಕುಲಪುತ್ರ ಅಂದ್ರೇನು? ಈ ನಮ್ಮ ಕುಟುಂಬದಲ್ಲಿ ಹುಟ್ಟಿ ಹತ್ತು ರಾತ್ರಿ ಸೂತಕ ತಂದವರೆಲ್ಲ ಕುಲಪುತ್ರರಲ್ಲಲ್ಲ? ಕುಲಪುತ್ರ ಎಂಬ ಶಬ್ದಕ್ಕೆ ಒಂದು ವಿಶೇಷವಾದಂತಹ ಅರ್ಥ ಉಂಟು ಅಂತ ಒಪ್ಪುವ ಪಂಡಿತ ನೀನು. ಹಾಗಾದರೆ ಕುಲ ಎಂಬ ಶಬ್ದಕ್ಕೆ ಕೇವಲ ಒಂದ್ ಹತ್ತು ದಿನದ ಸೂತಕ ಆಚರಿಸ್ತೇವೆ ಅಂತಷ್ಟೇ ಅರ್ಥ ಇರೋದೋ? ರಕ್ತ ಸಂಬಂಧ ನಮ್ಮ ಹೊಟ್ಟೆಯಲ್ಲಿ ಹುಟ್ಟಿದ ಹುಳಗಳಿಗೂ ನಮಗೂ ಉಂಟು. ಆದರೆ ಒಂದುಂಟು ನಿನಗೊಂದು ನ್ಯಾಯ ಹೇಳ್ತನೆ. ಈ 'ಗೋವತ್ಸ ನ್ಯಾಯ' ಅಂತೊಂದು ಗೊತ್ತುಂಟಲ್ಲ? ಅದ್ಯಾಕೆ ದನದ ಕರು ಅಂತ ಹೇಳೋದು? ನಿಜವಾಗಿ ಅದು ಹುಟ್ಟಿದ್ದು ಎತ್ತಿಗಲ್ವೊ? ಈಗ ರೂಢಿಯಲ್ಲಿ ಎಲ್ಲವರೂ ದನದ ಕರು ಅಂತ ಹೇಳಿದ್ದಾರೆಯೇ ಹೊರತು ಎತ್ತಿನ ಕರು ಅಂತ

ಹೇಳಿದ್ದಾರೋ? ನಮ್ಮಲ್ಲಿ ಹೇಗೆ... ಅಪ್ಪನ ಮಗ ಅಂತ ಹೇಳುದು ಹೌದೋ? ಯಾವುದರಿಂದ ಅಂತ ನಾನು ಕೇಳಿದ್ದಲ್ಲ. ಈ ಮಾತಿನಲ್ಲಿದ್ದ ವ್ಯಂಗ್ಯ ಗ್ರಹಿಸು ನೀನು. ಹಾಗಾದರೆ ನಮ್ಮ ಕುಲ ಅಂತ ಹೇಳಿದ ಮಾತ್ರಕ್ಕೆ ಅದೇನು ಕುಲ ಅಗೋದಿಲ್ಲ.

ಆದ್ದರಿಂದ ನಮ್ಮ ಮೈಯಲ್ಲಿ ವ್ಯಾಧಿಗಳು ಹುಟ್ಟಿಕೊಳ್ಳುವದಿಲ್ವೊ? ಅದು ನಮ್ಮ ಸಂತಾನವೇ - ನಮ್ಮಿಂದ ಹುಟ್ಟಿದ್ದು. ನಮ್ಮಿಂದ ಜನ್ಮವಾದದ್ದು ನಾವು ಜನಕ ಸ್ಥಾನ ಅಂತ ಹೇಳಿದವನ ತಲೆಗೆ ಮದ್ ಹಾಕಬೇಕೋ ಬೇಡವೋ? ಕೌರವರು... ನನಗಾವಾಗಿಂದ ಉರಿಯೇರಲಿಕ್ಕೆ ಹತ್ತದೆ ಇವ ಹೇಳಿಬಿಟ್ನಲ್ಲ -ಸ್ವಜನಂ ಕೃಷ್ಣ..ಯಾರು? ಈ ಕೌರವರು !! ಇದು ಭೀಷ್ಮರ ಪಕ್ಷವೋ? ಅಲ್ಲಿಗೆ ಬಾ, ಅದು ಪಕ್ಷ ಯಾವುದು? ಇವಯಾಕೆ ಆ ಪಕ್ಷ ಸೇರಿದ್ದು? ಒಳ್ಳೆಯವರ ಪಕ್ಷಕ್ಕೆ ಬರಬಾರದಿತ್ತೆ? ಇಲ್ಲದಿದ್ರೆ ಇಷ್ಟು ವರ್ಷ ವಿಶ್ರಾಂತಿ ಪಡೆತಿದ್ರಲ್ಲ. ಈ ಸಲ ಯಾಕೆ ಪ್ರವೇಶಿಸಿದ್ದು? ಇದೆಲ್ಲ ಎಷ್ಟೋ ಪ್ರಶ್ನೆ ಉಂಟು. ಅರ್ಜುನಾ, ಭೀಷ್ಮರಂಥವರಿಗೆ ನೀನು ಸಿದ್ಧನಲ್ಲ. ದ್ರೋಣರಂತಹ ಬ್ರಾಹ್ಮಣೋತ್ತಮರಿಗೆ ನೀನು ಸಿದ್ಧನಲ್ಲ. ಈ ಸಲದ ಹೋರಾಟದಲ್ಲಿ ಎಲ್ಲಾ ಪಕ್ಷಕ್ಕೂ ಜಾತಿ ಮತ ಗಿತ ಯೇನೂ ಇಲ್ಲ. ಸಮಷ್ಟಿಯಲ್ಲೊಂದು ಪಕ್ಷ. ಒಂದು ಹೋರಾಟ, ನಾನಾವಾಗಲೇ ಹೇಳಿದ್ದೇನೆ. ಈ ಸಲ ಇತ್ಯರ್ಥ ಅದರೆ ಆಗಬೇಕು. ಮುಂದೆ ಈ ಹೋರಾಟಕ್ಕೆ ಅರ್ಥವೇ ಇಲ್ಲ. ಹಾಗಾಗಿ ಹದಿನೆಂಟಕೋಹಿಣಿ ಸೈನ್ಯ ಬಂದು ಸೇರಿದೆ ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ, ಬರೇ ಯುದ್ಧ ಕ್ಷೇತ್ರದಲ್ಲಿಯೋ? ವಿಶಾಲವಾದ ಬಯಲು ಪ್ರದೇಶ ಉಂಟು ಅಂತ ಸ್ಥಳ ಆರಿಸಿದ್ದೋ? ಇದೆಲ್ಲಿ? ಕುರುಕ್ಷೇತ್ರ ಕುರುಕ್ಷೇತ್ರ ಅಂದರೆ ಎಂಥ ಕ್ಷೇತ್ರ? ಧರ್ಮಕ್ಷೇತ್ರವಾದ ಕುರುಕ್ಷೇತ್ರ ಈಗ ರಣಕ್ಷೇತ್ರ, ಅರ್ಜುನಾ, ಇದನ್ನು ವ್ಯಾಪಕವಾಗಿ ವಿಶೇಷದಿಂದ ದರ್ಶನ ಮಾಡಿಕೊಳ್ಳೋಕೇ ಹೊರತು ಕೇವಲ ಮನಸ್ಸಿನಿಂದಲ್ಲ. ಅದರೆ ನನಗೆ ಒಂದು ತೋರಿದ್ದು ವಿವೇಕದ ಎತ್ತರಕ್ಕೆ ಯೆಲ್ಲವರ ಅಂತಃಕರಣ ಯೇರೋದಿಲ್ಲ. ಅದನ್ನೇ ಹೃದಯ ದೌರ್ಬಲ್ಯ ಅಂತ ಹೇಳಿರೋದು. ಅದು ದೋಷ ದೋಷವೇ. ಅದರೆ ಆ ದೋಷವನ್ನು ತಿದ್ದಿಕೊಳ್ಳ ಬೇಕು. ನೀನ್ ಹೇಳಿ "ಇವರನ್ನು ನಾನು ಕೊಲ್ಲಲಾರೆ" "ಅವರು ನನ್ನನ್ನು ಕೊಂದರೆ ಕೊಲ್ಲಲಿ". ಅರ್ಜುನಾ ನೀನೊಬ್ಬ ಇಲ್ಲಿ ಸತ್ರೆ ಈ ಯುದ್ಧ ಪ್ರಾರಂಭಕ್ಕೆ ನಿನ್ನೆ ನಿನ್ನೆ ನಿಮ್ಮಣ್ಣ ಏನು ಪ್ರತಿಜ್ಞೆ ಮಾಡಿದ್ದಾನೆ ಗೊತ್ತೋ? "ನಮ್ಮಲ್ಲಿ ಒಬ್ಬ ಅಳಿದ್ರೆ ಕೌರವರಲ್ಲಿ ಒಬ್ಬ ಉಳಿದ್ರೆ ನಾನ್ ಸಾಯ್ತೇನೆ"... ಹೌದೋ? ನಿನ್ನ ಒಬ್ಬನ ಅಳಿವಿನಿಂದ ಯೆಷ್ಟು ದೊಡ್ಡ ಗಂಡಾಂತರ ಬರ್ತದೆ? ಮತ್ ಇನ್ನೊಂದು ಸಂದೇಹ ನಿನಗೆ "ಭೀಷ್ಮರನ್ನೂ, ದ್ರೋಣರನ್ನೂ ಇದಿರಿಸಿದರೂ ಬದುಕುತ್ತೇವೆ ಅಂತ ಹೇಳೋದು ಹ್ಯಾಗೆ?" ಅಯ್ಯಾ, ಯುದ್ಧಾಂಗಣಕ್ಕೆ ಬಂದಂತಹ ಒಬ್ಬ ಕ್ಷತ್ರಿಯ ಮೊದಲು ಜೋಯಿಸರ ಮನೆಗೆ ಹೋಗಿ ಜಾತಕ ಕೊಟ್ಟು ಬರೋದು" ಈ ಸಲ ಹೇಗುಂಟು ನನಗೆ? ಅಷ್ಟಮದಲ್ಲಿ ಹೇಗೆ? ಭಾಗ್ಯ ಸ್ಥಾನದಲ್ಲಿ ಹೇಗೆ? ಅಂತೆಲ್ಲ ಕೇಳ್ತಾನೋ? ನೀನೇ ಒಂದು ಸಂದರ್ಭದಲ್ಲಿ ಹೇಳಿದ್ದಿ "ಬ್ರಾಹ್ಮಣರಿಗೆ ಯಜ್ಞದ ಹೇಳಿಕೆ ಬಂದ್ರೆ, ಯೆಳೆಕರುಗಳಿಗೆ ಗರಿಕೆ ಹುಲ್ಲು ಕಂಡ್ರೆ, ...ಕ್ಷತ್ರಿಯರಿಗೆ ಯುದ್ಧ ಕಂಡ್ರೆ... ಉತ್ಸಾಹ ಬರದೆ ಅಂತ" ಈ ನೀನು ಜಾತಿ ಬಿಟ್ಟದ್ದಾವಾಗ? ಆದ್ದರಿಂದ ಇದೆಲ್ಲ

ಬೇಡ, ಕೌರವ ಸ್ವಜನನೋ? ಸ್ವಜನನ ಗುಣ ಕಂಡಿದ್ದ್ಯಲ್ಲ ಕೌರವ ನಿಮ್ಮ ಮೇಲೆ "ನಮ್ಮ ಸಹೋದರರು, ನಮ್ಮ ಚಿಕ್ಕಪ್ಪನ ಮಕ್ಕಳು, ಅನಾಥರಾಗಿ ಪಾಪ ಎಷ್ಟೋ ವರ್ಷ ಕಾಡಿನಲ್ಲಿ ಬದುಕಿದವರು, ಗಡ್ಡೆ ಗೆಣಸು ತಿಂದು ಊರಿಗೆ ಬಂದ ಮೇಲಾದ್ರೂ ಸುಭಿಕ್ಷವಾಗಿ ಊಟ ಮಾಡ್ಲಿ" ಅಂತ ಮಾಡಿದ್ದಿಲ್ವೊ ತಿರ್ನ್ಕ್ಕೆ ಲಡ್ಡು ಹೋಳಿಗೆ... ಬಾಯಿಯಲ್ಲಿ ನೀರು ಬರೋದಿಲ್ವೊ !! ಅವ ಮಾಡಿದ್ದಕ್ಕೆ ಇದಿರಿಸಲಿಕ್ಕೆ ನಮಗೆ ಗೊತ್ತುಂಟು ಅಂತಾದ್ರೂ ಒಮ್ಮೆ ಎದೆಯುಬ್ಬಿಸಬೇಕೋ ಬೇಡವೋ, ಒಮ್ಮೆ ಘಂಟಾಘೋಷವಾಗಿ ಸಾರಿ ಬಿಡು. ಇಲ್ಲಿ ಅವರಿಗೆ "ನೀವೆಲ್ಲ ಮಹಾಪಾಪಿಗಳು ಅಂತ. ನನಗೆ ಗೊತ್ತುಂಟು, ಕೌರವ ಮಹಾ ದುಷ್ಟ ಅಂತ ಗೊತ್ತುಂಟು. ಆತತಾಯಿ ಅಂತಲೂ ಗೊತ್ತುಂಟು. ಅದರೂ ನಾನು ಕೊಂದೆ ಅಂತ ಬೇಡ. ಬಡಪಾಯಿ ಯೆಲ್ಲಿಯಾದರೂ ದಾರಿಯಲ್ಲಿ ಬಿದ್ದು ಸಾಯಲಿ" ಒಮ್ಮೆ ಹೇಳು, ಹೇಳಿದರೆ ನಿನ್ನನ್ನು ಸುಮ್ಮನೆ ಬಿಡ್ತಾರೋ ಅವರು? ಆದು ನೀನ್ಹೇಳೋದಿಲ್ಲ. ಕೌರವ ಆತತಾಯಿ, ಈ ಕಾಲಕ್ಕೆ ಇವರೆಲ್ಲಾ ಇದ್ರಲ್ಲಿ ಯಾರೆಲ್ಲ ! ಯಾರ ಕಾಲ್ಲಿದ್ದು ನೀನು ಮಂತ್ರಾಕ್ಷತೆಗೆ ತಲೆ ಒಡ್ಡಬೇಕೋ. ಯಾರ ಹೆಸರು ಹೇಳಿ ನೀನು ಕೈಯಲ್ಲಿ ಆಯುಧ ಹಿಡಿಬೇಕೋ ಇವರೆಲ್ಲರೂ ಹಸ್ತಿನಾವತಿಯಲ್ಲಿದ್ದು ಹೇಳಬಹುದು ಹಾಗಲ್ಲಾಂತಂದ್ರೆ; ಇಂಥಾ ಕೆಲವು ಕಡೆಯಿಂದ ಈ ಪಲಾಯನವಾದ ಪಂಡಿತರು ಅಂತ ಹೇಳ್ತಾರೆ. ಪಂಡಿತರು ಅಂತಹ ಸಂದರ್ಭದಲ್ಲಿ "ಯೇನು ಮಾಡೋದು, ನಾನು ನಿಷ್ಕ್ರಿಯನಿದ್ದೇನೆ. ನನ್ನ ಮಾತು ಯಾರೂ ಕೇಳೋದಿಲ್ಲ ಹಸ್ತಿನಾವತಿಯಲ್ಲಿ" ಅಂತ ಹೇಳಿಕೊಂಡು ಜಾರುವವರು ಕೆಲವರು. ಆದರೆ ಅವರು ಈ ಹೊತ್ತು ನಮ್ಮ ಮುಂದೇ ಇದ್ದಾರೆ. ಮನಸ್ಸಾದ್ರೆ ಹತ್ತು ಸಾವಿರಕ್ಕೆ ಕಡಿಮೆ ಇಲ್ಲದೆ ತಲೆ ಕತ್ತರಿಸಲಿಕ್ಕೆ ಬರದೆ ಅವಿಗೆಲ್ಲ. ಕೌರವನನ್ನು ಮಾತ್ರ ಯೇನು ಮಾಡಲಿಕ್ಕೂ ಬರಲಿಲ್ಲ!! ಹೇಳಿದ ಮಾತು ಕೇಳಲಿಲ್ಲ. ಹೌದಪ್ಪ, ಹಿಡಿದು ಕಟ್ಟಿ ಹಾಕಲಿಕ್ಕೇನಾಯ್ತು? ಅಲ್ಲ, ವಿಚಾರಣೆಯಿಲ್ಲದೆ ಕಾರಾಗ್ರಹಕ್ಕೆ ತಳ್ಳುವದು - ಸದ್ಬುದ್ಧಿ ಬಂತು, ಸದ್ಭಾವನೆ ಬಂತು ಅಂತ ಕೌರವರಿಂದ ಬರಹದ ಮೂಲಕ ತೆಕ್ಕೊಂಡು ಮತ್ತೆ ಬೇಕಾದ್ರೆ ಬಿಡೋದಪ್ಪ. ಆವಾಗ ಅಲ್ಲೊಂದು ಕಾರಣ ಅಡ್ಡ ಬರ್‍ತದೆ ದೊಡ್ಡ ಮನುಷ್ಯರಿಗೆ – "ನನಗೆ ಈ ಕೌರವರ ಬಗ್ಗೆ ಅಂತಲ್ಲ, ಪಾಂಡವರ ಬಗ್ಗೆ ಅಂತಲ್ಲ, ಪ್ರಪಂಚದಲ್ಲಿ ಹುಟ್ಟುವ ಮಕ್ಕಳ ಬಗ್ಗೆ ಮಮತೆ ಅನ್ನುವದು ಕರ್ತವ್ಯವಾಗಿದೆ" ಅಂತ. ಮೆಚ್ಚಬೇಕಾದ ಮಾತೇ ಇದು. ಈ ಮಮತೆ, ಮಮಕಾರ ಅನ್ಯಾಯದ ಮಟ್ಟಿಗೂ ಅಲ್‌ವಲ್ಲ? ನಮ್ಮ ಮಕ್ಕಳ ಬಗ್ಗೆ ನಮಗೆ ವಾತ್ಸಲ್ಯ ಉಂಟು ಹೌದು. ಅಜೀರ್ಣ ರೋಗದಿಂದ ಬಾಧಿಸಲ್ಪಟ್ಟಿದ್ದಾನೆ. ಹೌದು. ಅದು ಗೊತ್ತಾದ ಮೇಲೂ ನಾವು ತಿಂಡಿ ತೀರ್ಥವನ್ನು ಕೊಡಬಹುದೋ? ಉಪವಾಸ ಹಾಕಬೇಕೋ ಬೇಡವೋ? ಆದ್ದರಿಂದ ಈ ಹಿರಿಯರಿಗೆಲ್ಲ ಕೌರವರ ಬಗ್ಗೂ ಪಾಂಡವರ ಬಗ್ಗೂ ಮಮತೆ ಇಲ್ಲ ಅಂತ ತಳ್ಳಿ ಹಾಕುವ ಕೃಷ್ಣ ಅಲ್ಲ ನಾನು. ಅವರಿಗೂ ಅದದ್ದೇನು ಅಂದ್ರೆ, ಮಮತೆ ಅಲ್ಲ ಅದು. ಅಲ್ಲ ಅಂತ ಹೇಳೋಣವೋ ಬೇರೆ ಶಬ್ದ ಎಂಥದು ಹುಡೋದು? ಈ ಕೆಲವು ಹಳೇ ಅಜ್ಜಂದಿರಿದ್ದಾರೆ ಮನೆಯಲ್ಲಿ. ಅವರ ಕಣ್ಣೆದಿರಿನಲ್ಲಿಯೇ ಹುಟ್ಟಿದ ಮಕ್ಕಳು ಎಂಥಾ ದುರ್ಬುದ್ಧಿಯವರಾದ್ರೂ ಕೂಡಾ "ಓ ನನ್ನ ಭಂಗಾರವೇ" ಅಂತ ಹೇಳೋದು!! ನಮ್ಮ ನಾಡನುಡಿಯಲ್ಲೊಂದು ಮಾತುಂಟು.

'ಮುದ್ದು ಮಕ್ಕಳು' – ವ್ಯಾಮೋಹ. ಅ ಮೋಹದ ಮುಂದೆ ಅವರಲ್ಲಿದ್ದ ನಿಜವಾದ ಅತ್ಮ ವರ್ಚಸ್ಸು ಶಕ್ತಿ ಪ್ರದರ್ಶಿಸಲಿಕ್ಕಾಗಲಿಲ್ಲ. ಹಸ್ತಿನಾವತಿಯಲ್ಲಿ ಸಂಧಿವಿಗ್ರಹಿಯಾಗಿದ್ದವರು ಭೀಷ್ಮಾಚಾರ್ಯ. ಇಲ್ಲಿ ಅವರು ಕಾಲು ಜಾರಿದರು. ತಪ್ಪು ಮಾಡಿದರು ಅಂತ ನಾನು ಹೇಳೋದಿಲ್ಲ. ಬರೇ ಆ ವ್ಯಾಮೋಹದ ಕುರುಡು ಕಣ್ಣಿನಲ್ಲಿ ಕೌರವನನ್ನು ವಿಚಾರಿಸಲಿಲ್ಲ. ವಾರಣಾವತದಲ್ಲಿ ಲಾಕ್ಷಾಗೃಹ ದಗ್ಧವಾಯಿತು. ಪಾಂಡವರೇ ಸುಟ್ಟು ಹೋದ್ರು ಅಂತ ನಿಜವಾಗಿ ಮುದ್ದ ಕಣ್ಣೀರು ಹಾಕಿದ್ದಾನೆ. ಮತ್ತೆ ವಿದುರ ಯೇನೋ ಕರ್ಣಮಂತ್ರ ಹೇಳಿದ್ದರಿಂದ ಸ್ನಾನ ಮಾಡದೆ ಹಾಗೇ ಬಂದಿದ್ದಾನೆ ಅಂತ ಸುದ್ದಿ. ಅಂದರೆ "ನೀವು ಸೂತಕ ಆಚರಿಸಬೇಕಾದ ಅಗತ್ಯ ಇಲ್ಲ. ಪಾಂಡವರು ಸುಭಿಕ್ಷವಾಗಿದ್ದಾರೆ" ಅಂತ ಸುದ್ದಿ ಕೊಟ್ಟಿರ ಬೇಕು. ಅಷ್ಟೂ ನಮಗೆ ಊಹನಾ ಶಕ್ತಿ ಇಲ್ಲವೇ? ಯಾಕೆ ಹಾಗಾದರೆ ಅವರು ವಿಚಾರಿಸಲಿಲ್ಲ? ಲಾಕ್ಷಾಗೃಹದಲ್ಲಿ ಪಾಂಡವರು ಸುಟ್ಟು ಹೋದ್ರೂ, ಹೋಗಲಿಲ್ಲವೋ? ಲಾಕ್ಷಾಗೃಹ ಸುಟ್ಟದ್ದೇ. ಲಾಕ್ಷಾಗೃಹ ನಿರ್ಮಾಣ ಮಾಡಿದ್ಯಾರು? ಒಂದು ಸಣ್ಣ ವಿಚಾರಣೆ ಮಾಡಿದ್ರೆ ಸತ್ಯ ಹೊರಗೆ ಬರ್‍ತಿರ್‍ಲಿಲ್ವೊ ? ಹಾಗಾದರೆ ಯಾಕೆ ಮಾಡ್ಲಿಲ್ಲ? ಗೊತ್ತಿಲ್ಲ. ಅವ ಹತ್ರ ನಾನು ಕೇಳುವ ಹಾಗಿಲ್ಲ. ಕೇಳಿದರೆ ಹೇಳ್ಯಾರು. "ಮೋಹ ಹೌದು ಕೃಷ್ಣಾ ಕೌರವರು ಅನಾಥರು. ಅವರ ಅಪ್ಪನಿಗೆ ಹೇಗೂ ಸಿಂಹಾಸನ ಇಲ್ಲ. ಎರಡ್ಕಣ್ಣೂ ಇಲ್ಲ. ಹಾಗಾಗಿ ಅಪ್ಪನ ಕಣ್ಣೂ ನಾನಾಗಿದ್ದೇನೆ. ಅಜ್ಜನೂ ನಾನೇ ಆಗಿದ್ದೇನೆ"

ಪಾಪ ಆ ದೊಡ್ಡ ಜೀವ ಇಲ್ಲಿ ಶೂನ್ಯವಾದಂತಹ ಅರಮನೆಯನ್ನೇ ನೋಡಿದೆ. ಆ ಭೀಷ್ಮನ ಕಣ್ಣ ಮುಂದೆ ಎಷ್ಟೋ ಜನ ಚಿರಂಜೀವರೆಲ್ಲ ಅಳಿದು ಹೋಗಿದ್ದಾರೆ !! ಭೀಷ್ಮರಲ್ಲಿಯೂ ಒಂದ್ ಕಳಂಕ ಅಂತ ನಾವ್ ಹೇಳಬಹುದಷ್ಟೇ ಹೊರತು, ನಿನ್ನ ಸಾಲಿಗೆ ಸೇರಿಸಲಿಕ್ಕಿಲ್ಲ ಭೀಷ್ಮರನ್ನು, ನಿನಗೆ ಹೃದಯ ದೌಬ್ಬಲ್ಯವೇ. ಆದ್ದರಿಂದ ಅಂತಹ ಭೀಷ್ಮರು, ತಿಳಿದವರು ಈ ಹೊತ್ತು ಕೌರವನ ಮೇಲಿನ ವ್ಯಾಮೋಹದಿಂದ, ನಿಮ್ಮ ಮೇಲಿನ ವಾತ್ಸಲ್ಯದಿಂದಲ್ಲ; ಕರ್ತತ್ಯ ದೀಕ್ಷೆಯಿಂದಲೇ ಬಂದಿದ್ದಾರೆ ಪ್ರತಿಜ್ಞಾಬದ್ಧರಾಗಿ, ಯಾರ ಪ್ರತಿಜ್ಞೆಯಾದರೂ ಸುಳ್ಳಾದೀತು, ಭೀಷ್ಮರ ಪ್ರತಿಜ್ಞೆಸುಳ್ಳಾದೀತೆ? "ನನ್ನ ಅರ್ಜುನ ಒಬ್ಬ ಶಿಷ್ಯ. ಅವ ತನಗಿಂತ ಇಮ್ಮಡಿ ವಿದ್ವಾಂಸನಾದರೆ ನನ್ನ ಗುರುತ್ವ ಸಾರ್ಥಕವಾಯ್ತು ಅಂತ ಹೇಳಿದ ನಿಮ್ಮ ಪ್ರಾಚೀನ ಗುರುಕುಲದ ಪ್ರಾಚಾರ್ಯರು - ದ್ರೋಣಾಚಾರ್ಯರು ಹೌದೋ? ಈ ಹೊತ್ತು ಅವರು ಬಂದದ್ದು ಯಾಕೆ? ಅಲ್ಲ ನಮ್ಮ ಹುಡುಗ ಯೇನ್ಮಾಡ್ತಾನೆ ಅಂತ ನೋಡಲಿಕ್ಕೆ ಪರೀಕ್ಷಾರಂಗವೋ ಇದು? ಹಾಗಾದರೆ ಇಂತಹ ದ್ರೋಣ ಭೀಷರು ಅತತಾಯಿಯಾದಂತಹ ದುರ್ಯೋಧನನಿಗೆ ಬೆಂಬಲವನ್ನು ಕೊಟ್ಟು, ನಮಗಾಕ್ಷೇಪ ಇದ್ದ ಪಕ್ಷ ಅದು. ಇಂತಹ ವಿರೋಧೀ ಪಕ್ಷಕ್ಕೆ ಬೆಂಬಲ ಕೊಡುವವರನ್ನು ಕೂಡಾ ನಾವು...? ಈಗ, ನಾನಾವಾಗ ಹೇಳಿದಲ್ಲಿಗೆ ಬಾ, ಸಮಷ್ಟಿಯಿಂದ ನೋಡಿದರೆ ವಿರೋಧ ಪಕ್ಷದವರು ಅಂತಲೇ ಹೇಳಬೇಕೇ ಹೊರತು ಆವರ ಪಕ್ಷಕ್ಕೆ ಸೇರಿದ್ದರಿಂದ ಅದು ನಮ್ಮ ಪಕ್ಷ ಅಯ್ತು ಅಂತ ನೀನೊಬ್ಬ ಹೇಳಿದರೆ ಅಯ್ಯೋ? ಅವರೇನು ಪಕ್ಷಾಂತರ ಮಾಡಿದರೋ?

ಅಲ್ಲೇ ಇದ್ದಾರಲ್ಲ. ಸಕ್ರೀಯವಾಗಿ, ಸಜೀವವಾಗಿ, ತ್ರಿಕರ್ಣಪೂರ್ವಕವಾಗಿ ದುಡಿಯುವದಕ್ಕೆ ಕಂಕಣಬದ್ಧರಾಗಿದ್ದಾರೆ. ಇಷ್ಟುಂಟು ವಿಷಯ.

ನಿಜವಾಗಿ ಆದ್ರೆ ಆ ಭೀಷ್ಮಾಚಾರ್ಯ ತನ್ನ ನಂತ್ರ ಹುಟ್ಟಿದವರಿಗೆ ಯೆಳ್ಳು ನೀರು ಬಿಟ್ಟಿದ್ದು. ಯೆಷ್ಟು ನೋವಾಗಿದ್ದೀತು ಅ ದೊಡ್ಡ ಜೀವಕ್ಕೆ; ನಾನು ಬಲ್ಲೆ. ಅವಾಗ ಒಂದೇ ಸಲ ಹುಟ್ಟಿಕೊಂಡರು ನೂರು ಅಪಸ್ವರವೋ ಸುಸ್ವರವೋ !! ಒಂದು ಸಂತೋಷ ಅಯ್ತು. ಯೇನೇ ಆಗ್ಲಿ ಮನೆಯಲ್ಲಿ ನೂರು ತೋಟ್ಟಿಲು ಕಟ್ಟಿತಲ್ಲ ! ಈ ಸಂತೋಷದ ಮುಂದೆ ನಿಜವಾದಂತಹ ವೈಚಾರಿಕ ಪ್ರಜ್ಞೆ ಸ್ವಲ್ಪ ಮಸುಳಿಸಿತು. ನಾನು ನಿನ್ನಲ್ಲಿ ಕೇಳೋದು ಅವಳಿಗೇ ಬೇಡದ್ದು. ಯಾರಿಗೆ? ನಿಮ್ಮ ದೊಡ್ಡಮ್ಮನಿಗೆ. ಅವಳ್ ಹೆತ್ತಾಕಿದ್ದೂ, ಹೊತ್ತಹಾಕಿದ್ದೊ? ಹೊತ್ತ್ಹಾಕಿದ್ದು !! ಈ ಬ್ರಹ್ಮಚಾರಿಯಾದ ಮುದುಕನಿಗೆ ಯಾಕೆ ಬೇಕಿತ್ತು! ಊರಿನಲಿದ್ದ ತುಪ್ಪಯೆಲ್ಲಾ ತರಿಸಿ, ಈ ಇದೆಲ್ಲ ಬೇರೆ ಬೇರೆಯಾದ ಒಂದೊಂದು ತುಂಡಿಗೆ ಒಂದೊಂದು ಕೋಣೆ ಮಾಡಿ ಈ ಆಜ್ಯದಲ್ಲಿ ಈ ಪಿಂಡವನ್ನು ಬೆಳೆಸಿದ್ದು !! ಆದಕಾರಣ ಯೇನೋ ಒಂದು ಥರದ ವ್ಯಾಮೋಹ ! ಕೌರವನನ್ನಾಕ್ಷೇಪಿಸ್ತಾರೆ ಭೀಷ್ಮಾಚಾರ್ಯರು, ಸಾವಿರ ಬಾಯಿಂದ ತೆಗಳ್ತಾರೆ. ಕೊನೆಗೆ 'ಅಜ್ಜಾ' ಅಂತ ಕೂಗ್ದಾಗ 'ನಾನಿದ್ದೇನೆ ಮಗನೆ' ಅಂತ ಹೇಳ್ತಾರೆ. ಇದೂ ಒಂದು ಥರದ ದೌರ್ಬಲ್ಯ, ಬರಬಾರದಿತ್ತು ಭೀಷ್ಮರಂಥವರಿಗೆ. ಆದರೆ ಉಂಟು. ಸ್ವಲ್ಪ ಸ್ವಲ್ಪ ದೋಷಗಳಿಲ್ಲದ ವ್ಯಕ್ತಿಗಳ್ಯಾರು? ಹೀಗೆ ವೈಚಾರಿಕವಾಗಿ ನಾವು ಸಂಶೋಧನೆ ಮಾಡ್ಲಿಕ್ಕೆ ಹೊರಟ್ರೆ ಮರ್ಯಾದಾ ಪುರುಷೋತ್ತಮನಾದ ರಾಮನನ್ನು ನಾವು ಆಕ್ಷೇಪಿಸಲಿಕ್ಕೆ ಬರದೆ. ಆದರೆ ಅದೆಲ್ಲ ಚಂದ್ರನಲ್ಲಿ ಕಳಂಕ ಇದ್ದ ಹಾಗೆ, ನಿನ್ನ ಕೊಡುಗೆ ಯಾರಿಗೆ ಹೇಳು ಈಗ

ಯೇನಾಯ್ತೋ ನಿನಗೆ ಯೇಳಯ್ಯಾ, ಅವರಿಗ್ಹೋಡಿತ್ಯೋ, ನಾ ನಿನಗ್ಹೊಡಿಲೊ ಹೇಳು. ಇಕೋ, ಇದನ್ನು ಪ್ರಾರಂಭಕ್ಕೆ ನೀನು ಹೇಳಿ ಬಿಡ್ತಿದ್ರೆ ಇಷ್ಟು ಕಷ್ಟದ ಯೋಚನೆ ಮಾಡಬೇಕಿತ್ತೋ ನೀನು ನಾನು. “ಕೃಷ್ಣಾ ನೀನು ನನಗೆ ಸರಿಯಾಗಿ ದಾರಿ ತೋರಿಸು”... ಅಯ್ಯಾ ಈಗ ನನಗೆ ಅರ್ಥ ಅಯ್ತು. “ಇವರೆಲ್ಲಾ ಸಾಯ್ತಾರಲ್ಲಾ” - ಅಲ್ವೊ? ಅವರಾಗಿ ಸತ್ತೂ ಸಾಯ್ತಿ. ನೀನು ಕೊಲೆ ಮಾಡಬೇಕಾದೀತಲ್ಲ ! ಅರ್ಜುನಾ, ಇದು ನೀನು ಅಂತಲ್ಲ. ಈ ಕೊಲ್ಲುದು, ಕೊಲಿಸುದು, ಕೊಲ್ಲಲ್ಪಡುದು ಎಂಬ ವಿಷಯದಲ್ಲಿ ನಿನ್ನಂಥವರಲ್ಲ, ನಿನಗಿಂತ ಎತ್ತರದ ವಿದ್ವಾಂಸರು ಕೂಡಾ ಕೆಲವು ಸಲ ಮೋಹಕ್ಕೆ ಅಧೀನರಾದದ್ದುಂಟು. 'ನಿಜವಾದ ಪಂಡಿತ' ಅಂತ ನಾವು ಯಾರನ್ನು ಹೇಳೇವೋ ಅವನು ಮಾತ್ರ ಇದಲ್ಲಿಯೇನೂ ಭ್ರಮಿಸುವದಿಲ್ಲ. “ಗತಾಸುನಗತಾಸೂಂತ ನಾನು ಶೋಚಂತಿ ಪಂಡಿತಾಃ” – ತಿಳಿತಲ್ಲ. ಯಾರೆಲ್ಲ ಗತಾಸೂನಗತಾಸೂನು? ಸತ್ತವರಿಗಾಗಿಯೂ ಅಳುವದಿಲ್ಲ. ಇದ್ದವರಿಗಾಗಿಯೂ ಅಳುವದಿಲ್ಲ. ಆವಾಗ ಕೆಲವರು ಕೇಳ್ತಾರೆ ಬಾಲೀಶ ಬುದ್ಧಿಯವರು. “ಇದ್ದವರಿಗಾಗಿ ಯಾರಾದರೂ ಅಳ್ತಾರೋ” ! ಅಳುವವರಿದ್ದಾರೆ. ನಾನ್ ಹೇಳುವ ಮಾತಿನಲ್ಲಿ ಧ್ವನಿ ಅದಲ್ಲ. ಸತ್ತವರಿಗಾಗಿಯೂ ಅಳುವದಿಲ್ಲ. ಇದ್ದವರಿಗಾಗಿಯೂ

ಅಳುವದಿಲ್ಲ. ಯಾಕೆಂದರೆ, ಇವರೂ ಸಾಯುವದಕ್ಕೆ ಇದ್ದವರು ಅಂತ ಮುಂದೆ ಹೋದವರನ್ನು ನೋಡಿ ಕಲೀತಾರೆ. ಇದರ ಅರ್ಥ ಸ್ವಂತ ಅಳಿವು ಉಳಿವಿನ ಪ್ರಶ್ನೆಯೂ ಅವರಿಗಿರುವದಿಲ್ಲ . ನಿನಗೆ ಪಾಪ ಆ ಪಾಂಡಿತ್ಯ ಎಲ್ಲಿಂದ ಸಿದ್ಧಿಸಬೇಕು ? ಆದ್ದರಿಂದ ನೀನು ಕೃಷ್ಣಾ ಅವರು ಸತ್ತು ಹೋದರೂ ನನ್ನ ಕೈಯಿಂದ ಸತ್ತರು. ಅವರ ರಕ್ತದಿಂದ ತೋಯಿಸಲ್ಪಟ್ಟ ಸಿಂಹಾಸನವನ್ನು ನಾವು ಆಳೇಕೋ"? ಪ್ರಶ್ನೆ ಹೌದು. ಒಳ್ಳೆ ಜಿಜ್ಞಾಸೆ. ಇದಕ್ಕೆಲ್ಲ ಕಾರಣ ಯೇನು ಗೊತ್ತೊ, ಹುಟ್ಟುವುದಂದ್ರೆ ಯೇನು, ಸಾಯುವದಂದ್ರೆ ಯೇನು? ಈ ವಿಜ್ಞಾನವನ್ನು ಚೆನ್ನಾಗಿ ತಿಳಿಯದೇ ಇದ್ದದ್ರಿಂದ. ಓ ಅರ್ಜುನಾ, ನಿನ್ನಲ್ಲಿ ಪ್ರಶ್ನೆಯ ದ್ವಾರವೇ ನಾನು ಸಿದ್ಧಾಂತವನ್ನು ಮಂಡಿಸುತ್ತೇನೆ.

*ಕೇದಾರಗೌಳ-ಅಷ್ಟೇ ಆರು ನೀನೆಲೆ ಪಾರ್ಥ ಬಂಧವರ್ಗಗಳಲ್ಲಿ ತೋರಿಸು ರಣಕೆ ನಿಂದು*

*ಕಾರುಣ್ಯದಿಂದ ಶೋಕವ ಕೊಂಡು ಬರಿನಗೆ | ಗೇಡಾದೆ ಹೇಸಿಕೆಯು ॥ ೧೪೦* ||

ಅರ್ಜುನಾ ನೀನ್ಯಾರು? ಪರಿಣಾಮದ ಕಡೆಗೆ ಲಕ್ಷ್ಯವಿಟ್ಟು ನೀನು ಯೇನನ್ನು ಮಾಡ್ಬೇಕು. ಯೇನನ್ನು ಬಿಡ್ಬೇಕು ಎಂಬವಿಷಯವನ್ನು ತಿಳಿಯದಾದೆ. "ಕಾರ್ಪಣ್ಯದೋಷೋಪಹತ ಸ್ವಭಾವ ನೀನು. 'ಕೃಪಣಃ ಫಲ ಹೇತವ ಇಂತಹ ಫಲ ಏನಾದೀತು ಅಂತ ನೀನು ಲಕ್ಷ್ಯ ಇರಿಸಿದ್ದರಿಂದ ನಿನ್ನ ಹೃದಯಕ್ಕೆ ಕಾರ್ಪಣ್ಯ ದೋಷ ಬಂತು. ಇದು ವೈಚಾರಿಕವಾದಂತಹ ಬೆಳವಣಿಗೆ ಅಲ್ಲ. ಅರ್ಜುನಾ, ಪ್ರತಿಯೊಬ್ಬರೂ ನಾವು ನಮ್ಮನ್ನೇ ಬೆಟ್ಟು ಮಾಡಿ ತೋರಿಸಿಕೊಳ್ಳುತ್ತಿದ್ದೇವೆ. ನಾನು ಹೌದಲ್ಲ? ನಿನ್ನಲ್ಲಿ ನಾನು ಕೇಳ್ತೇನೆ, ಅರ್ಜುನಾ ನೀನೆಂದರೆ ಏನು ಎಷ್ಟು? ಆವಾಗ ಹೇಳಿದೆಯಲ್ಲ "ಸಮಷ್ಟಿಯನ್ನು ದರ್ಶನ ಮಾಡಬೇಕಾದ್ರೆ ವ್ಯಷ್ಟಿಯನ್ನು ದರ್ಶನ ಮಾಡೋದು ಸರಿಯಾದದ್ದು" ಅಂತ. ಆ ಸಿದ್ಧಾಂತವನ್ನು ಇಲ್ಲಿ ಈ ವಿಷಯಕ್ಕೆ ನಾನು ಒಪ್ಪಿಕೊಳ್ತೇನೆ. ವ್ಯಷ್ಟಿಯಿಂದಾಲೋಚಿಸೋಣ, ಅರ್ಜುನ, ನಾನು ಅಂತ ನೀನ್ ಹೇಳ್ತಿ; ನಿನ್ನಲ್ಲಿದ್ದ 'ನಾನು' ಅಂತ ಹೇಳುವದಿದೆಯಲ್ಲ, ಸಮಷ್ಟಿಯಿಂದಲ್ಲೊ? ಸಮಷ್ಟಿ ಬೇಡ, ವ್ಯಷ್ಟಿಯಿಂದ ನಾನದನ್ನಾಲೋಚಿಸುವದಕ್ಕೆ ಯತ್ನಿಸ್ತೇನೆ. ಈ ನಿನ್ನ ದೇಹ, ಇದರಲ್ಲಿದ್ದ ಅವಯುವಗಳು ಇವೊಂದೂ ನೀನಲ್ಲ ಎಂಬುದು ಅರ್ಥವಾಗ್ತದಲ್ಲ? ನಿನಗೆ ಅಂತ ಯೇನು ಸಣ್ಣ ಮಗುವಿಗಾದರೂ ಅರ್ಥವಾಗಬೇಕು. ನನ್ನದು ಅಂತ ನಾವು ಯಾವುದನ್ನು ಉದ್ದೇಶಿಸಿ ತೋರಿಸ್ತೇವೋ ಎಲ್ಲವುದೂ ಪ್ರಥಮಾ ವಿಭಕ್ತಿ ಅಗಲಿಕ್ಕಿಲ್ವಲ್ಲ? ನಾನು ಬೇರೆ, ನನ್ನದು ಬೇರೆ, ರೂಢಿಯಲ್ಲಿ ಹೇಳೋದುಂಟು, ಈ ದೇಹ ನನ್ನದು. ಈ ಜೀವ ನನ್ನದು. ಈ ಪ್ರಾಣ ನನ್ನದು. ಈ ಶ್ವಾಸ ನನ್ನದು. ಇನ್ನು ನೀನು ಕೂಡಿಸಿಕೋ ಬೇಕಾದಷ್ಟು ಹಾಗಾದರೆ ಇದೊಂದೂ ನಾನಲ್ಲ. ಹಾಗಾದರೆ 'ನಾನು' ಯೇನು? ಇದೆಲ್ಲ ಇಲ್ಲದಿದ್ರೆ ಅದೂ ಇಲ್ಲ ಅಂತ ಯಾರಾದ್ರೂ ಹೇಳ್ತಾರೋ? ಹಾಗಾದ್ರೆ 'ನಾನು' ಎಂಬುದೊಂದು ಉಳಿತದೆ. ಯಾಕೆ ನೀನು ಅಲೋಚಿಸುವದಿಲ್ಲ. ಆ 'ನೀನು' ಅಂದ್ರೆ ಯೇನು ಅಂತ? ಈ ಶರೀರವೋ? ಅಳಿಯುವದು ಅಂದ್ರೇನು? ನಾಶ ಅಂತಂದ್ರೆ ಯಾವುದು ನಾಶವಾಗುವದು? ಶರೀರ, ಶರೀರ ನಾಶ ಆಗ್ತದೆ ಅಂತ

ನಾವು ಹೇಳೋಣ. ಶರೀರಕ್ಕೆ ಇರುವಿಕೆ ಯಾವಾಗ? ಇದಕ್ಕೆ ಉಪನಿಷದ್ ರಹಸ್ಯವನ್ನು ತಿಳಿಯಬೇಕು. ಅರ್ಜುನಾ, “ನಾಸತೋ ವಿದ್ಯತೇ ಭಾವೋ ನಾ ಭಾವೋ ವಿದ್ಯತೇ ಸತಃ” ಅರ್ಥ ಆಗ್ತದಲ್ಲ ನಿನಗೆ? ಯಾವುದು ಇದೆ ಅದು ನಿತ್ಯ. ಯಾವುದು ಇಲ್ಲ, ಹಾಗಾದರೆ ಅದು ಮಿಥ್ಯ. ಮಿಥ್ಯ ಅಂತಂದ್ರೆ ಕೇವಲ ಸುಳ್ಳು ಅಂತ ಹೇಳಲಿಕ್ಕೆ ಸಾಧ್ಯ ಇಲ್ಲ. ಮಿಥ್ಯಾ ಎಂಬ ಶಬ್ದಕ್ಕೆ ಇಲ್ಲದ್ದು ಅಂತ ಅರ್ಥ ಅಲ್ಲ. ನನ್ನ ಹೇಳಿಕೆಯಂತೆ - 'ಅಲ್ಲದ್ದು' ಮಿಥ್ಯಾಜ್ಞಾನ ಅಂತಂದ್ರೆ ವಿಪರೀತ ಜ್ಞಾನ. ಅದೇ ನಿಜವಾಗಿ ಇದ್ದದ್ದು. ಹಗ್ಗವೂ ಸರ್ಪ ಅಂತ ಕಂಡು ಹೋಗುವದು.

ಈ ಮಿಥ್ಯೆಯೂ ಕೂಡಾ ಕಾಣುವದು ಯಾವುದನ್ನಾಧರಿಸಿ? ಅಲ್ಲಿ ಸತ್ಯರೂಪವಾದ ಹಗ್ಗವೇ ಇಲ್ಲದಿದ್ರೆ ಹಾವು ಕಾಣುವದಕ್ಕೆ ಸಾಧ್ಯವಿಲ್ಲ. ಮಿಥ್ಯಾದರ್ಶನವಾದಾವಾಗ್ಲೂ ಇದ್ದದ್ದು ಸತ್ಯವೇ ಅಲ್ಲಿ ಸ್ಥಾಯಿಯಾಗಿ, ಹಾಗಾದರೆ ತ್ರಿಕಾಲಾಭಾಧಿತ ಸತ್ಯ ಎಂಬ ಹೆಸರು ಅದಕ್ಕೆ ಮಾತ್ರ ಸಲ್ತದೆ. ಹಾಗಾದರೆ ಮಿಥ್ಯೆಯೇನು? ಒಬ್ಬ ಕೊಲೆ ಮಾಡುವದಕ್ಕುಂಟೇ? ಇದ್ದದ್ದಕ್ಕಲ್ವೊ ನಾಶ? ಹಾಗಾದರೆ ಇಲ್ಲದೇ ಇದ್ದದ್ದಕ್ಕೆ ನಾಶ ಎಂಥದ್ದು? ಒಬ್ಬನಿಗೆ ಹುಟ್ಟದೇ ಇದ್ದ ಮಗನಿಗೆ ಮದುವೆಯ ಅಲೋಚನೆ ಯಾಕ್ ಮಾಡೋದು ? ಈ ಹೊತ್ತು ಬಂಜೆ ಮಗನಿಗೆ ಮದುವೆ ಅಂತ ಹೇಳುವವನಿಗೆ ಬುದ್ಧಿ ಸಮ ಉಂಟೋ? ಬಂಜೆಗೆ ಮಗನಿಲ್ಲ. ಮಗ ಇದ್ದೆ ತಾಯಿ ಬಂಜೆ ಅಲ್ಲ. ಈ ನ್ಯಾಯದಂತೆ - ಇಲ್ಲದೇ ಇರುವಿಕೆಗೆ ಇರುವಿಕೆ ಎಂಬುದು ಇಲ್ಲ. ಇರುವಂಥಾದ್ದಕ್ಕೆ ಇಲ್ಲದಿರುವಿಕೆ ಎಂಬುದಿಲ್ಲ. ಇದು 'ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ' ಎಂಬ ನನ್ನ ಮಾತಿನ ಅರ್ಥ. ಅದ್ದರಿಂದ, ನೀನು ಎಂಬಲ್ಲಿ ಈ ಕಣ್ಣು, ಈ ಕಿವಿ, ಮೂಗು ಇದೊಂದು ನೀನಲ್ಲ. ನಿನ್ನದೇ ಇವು ಅವಯವವಾಗಿರಬಹುದು. ಅದು ನೀನ್ ಇದ್ದದ್ದರಿಂದ. ಇನ್ನು ದೈಹಿಕವಾಗಿ ಅರೋಗ್ಯ ಶಾಸ್ತ್ರದ ಪ್ರಕಾರ ಒಂದು ಉದಾಹರಣೆ ಹೇಳ್ತೇನೆ. ಕಣ್ಣು ಹೋದ್ರೆ ಮನುಷ್ಯ ಬದಕ್ತಾನೆ ಹೌದೋ? ಕಿವಿ ಕೇಳದೇ ಇದ್ರೂ ಬದಕ್ತಾನೆ. ಒಂದು ಅವಯವ ತುಂಡಾದ್ರೆ ಬದಕ್ತಾನೆ ಹೌದಲ್ಲ? ಯಾವುದಿಲ್ಲದಿದ್ರೆ ಬದುಕೋದಿಲ್ಲ? ಹಾಗಾದರೆ ಈ ದೇಹದಲ್ಲಿ 'ಚೈತನ್ಯ' ಇದು ನಾಶವಾಗುವಂತಹದ್ದಲ್ಲ. ಅದ್ದರಿಂದಲೇ ವೇದಾಂತಿಗಳು ಸಿದ್ಧಾಂತಿಗಳು ಏನ್ ಹೇಳ್ತಾರೆ ಗೊತ್ತೋ? ಅರ್ಜುನಾ ಈಗ ಅಷ್ಟು ಸುಲಭದಲ್ಲಿ ನಿನಗರ್ಥವಾಗ್ಲಿಕ್ಕಿಲ್ಲ. ಅದರೆ, 'ಅಶ್ಚರ್ಯವತ್‌ಪ್ರಶ್ಯತಿ ಕಶ್ಚಿದೇನ' ಬೆರಗು ಹುಟ್ಟಿಸುವಂತಹದ್ದು ! ಯಾಕೆ? ಯೇನೋ ಒಂದು ಉಂಟು ಅಂತಾಯತ್ತಲ್ಲ ಅದ್ರಲ್ಲಿ. ಯತಾರ್ಥಕ್ಕಾದ್ರೆ ನಾನು ಉಪದೇಶಿಸುವ ಅತ್ಮ ತತ್ತ್ವಕ್ಕೆ ಸಂಬಂಧಿಸಿ ಹೇಳಿದ್ದು, ಮತ್ತೆ ಬೇರೆ ಯಾವುದಕ್ಕೂ ಅಲ್ಲ. ಹಗುರವಾದ ವಿನೋದಕ್ಕೆ ವಿಷಯವೇ ಅಲ್ಲ ಇದು. ಇದಕ್ಕೆ ವ್ಯವಸಾಯಾತ್ಮಿಕವಾದಂತಹ ಬುದ್ಧಿ, ಕುಶಾಗ್ರಮತಿ, ಅಂತರ್ ಮುಖಿತ್ವ - ಇದಕ್ಕೆ ಮಾತ್ರ ಸಿದ್ಧಿಸುವಂತಹದ್ದು. ಆದ್ದರಿಂದಲೇ ಉಪನಿಷತ್ತುಗಳು ಸಾರಿದವು 'ಏಕಮೇವಾದ್ವಿತೀಯವಾದದ್ದು' ಅಂದರೆ ಶುದ್ಧ ಅದ್ವೈತವಾದದ್ದು. ಅದೊಂದೇ ಸತ್ಯವೂ, ಶಾಶ್ವತವೂ, ಸನಾತನವೂ ಅಗಿ ಇದ್ದದ್ದು. ಆದ್ದರಿಂದ ಅದೊಂದೇ ಇಲ್ಲಿ ಇದ್ದದ್ದು. “ಸರ್ವಂಖಲ್ವಿದಂ ಬ್ರಹ್ಮ, ಈಶಾ ವಾಸ್ಯಮಿದಂ ಸರ್ವಂ ಓಂ

ತತ್ ಸತ್", ಇತ್ಯಾದಿ ಇತ್ಯಾದಿ ನೀನೋದಿದ್ದೆಲ್ಲ ನೆನಪು ಮಾಡಿಕೊ. ಹಾಗಾದರೆ ಅದೊಂದೇ ಸ್ಥಾಯಿಯಾಗಿದ್ದದ್ದು ಅಂತ ನಾನು ಪ್ರಸ್ತಾಪತ್ವೇನ ಹೇಳಿದ್ದಾಯಿತು. ಅದೊಂದೇ ಸರ್ವವ್ಯಾಪಕವಾಗಿ ಇರುವುದು ಹೌದಾಗಿದ್ರೆ, ಮತ್ತೆ ಬಾಕಿ ಇದ್ದದ್ದಕ್ಕೆ ಸ್ಥಳ ಎಲ್ಲಿ ಅಂತ ಹುಡುಕ ಬೇಕು. ಈ ಶುದ್ಧ ಅದ್ವೈತ ಸಿದ್ಧಾಂತ ಎಲ್ಲಿ ತಲೆಯೆತ್ತಿ ನಿಲ್ಲದೆ, ಯೆಲ್ಲಿ ಬಾಕಿ ದ್ವೈತಾದಿ ಸಿದ್ಧಾಂತಗಳು ತಲೆ ತಗ್ಗಿ ಬೀಳ್ತಾವೆ. ಇಲ್ಲಿ ಪ್ರಪಂಚದಲ್ಲಿರುವ ತತ್ತ್ವ ಒಂದೋ, ಎರಡೋ ಬಹುಧಾ ಅಲ್ಲೋ? ಒಂದೇ ಅಂತ ಹೇಳಿದರೆ ಸತ್ಯ ಅದೀತು. ದೇವರೂ ಇದ್ದಾನೆ. ಜೀವರೂ ಇದ್ದಾರೆ ಅಂತ ಹೇಳುವಾಗ ದೇವರಿಗೂ ಪೂರ್ಣತೆ ಇಲ್ಲ ಅಂತ ಪರ್ಯಾಯವಾಗಿ ಹೇಳಿದ ಹಾಗಾಗ್ತದೆ. ದೇವರಿದ್ದಲ್ಲಿ ಜೀವರಿಲ್ಲ, ಜೀವರಿದ್ದಲ್ಲಿ ದೇವರಿಲ್ಲ ಅಂತೇಳೀದ್ರೆ ದೇವರಂತಂದ್ರೆ 'ದೊಡ್ಡಜೀವ' ಅಂತ ಹೇಳಿದ ಹಾಗೆ ಹೊರತು ದೇವರು - ಬ್ರಹ್ಮ ಅಂತ ಹೇಳಿದ ಹಾಗಾದೀತೋ? ನಮ್ಮ ಉಪನಿಷತ್ತುಗಳಲ್ಲಿ ಹೇಳಿದ್ದು 'ಬ್ರಹ್ಮ ಅಂತಲೇ ಅಂತಹ ಬ್ರಹ್ಮ ಸತ್ಯ. ಆತ್ಮ ಅಂತ ಕೆಲವು ಸಲ ದೇಹಕ್ಕೂ ಹೇಳ್ತಾರೆ. ಮನಸ್ಸಿಗೂ ಹೇಳ್ತಾರೆ. ಆತ್ಮಗತ ಎಂದರೇನು? ಅದ್ದರಿಂದಲೇ ನೋಡು ರೂಢಿಯಲ್ಲಿ “ಆತ್ಮಹತ್ಯೆ” ಅಂತ ಹೇಳುವಾಗ ಕೆಲವು ಕುತರ್ಕದ ಪಂಡಿತರು ಹೇಳುವದುಂಟು “ಆತ್ಮಕ್ಕೆ ನಾಶ ಇಲ್ಲ ಅಂತ ಶಾಸ್ತ್ರದಲ್ಲಿ ಹೇಳದೆ. ಆತ್ಮಹತ್ಯೆ ಮಾಡಿಕೊಂಡ ಅಂತ ಇವ ಹೇಳ್ತಾನೆ”. ಇಲ್ಲಿ ಆತ್ಮಹತ್ಯೆ ಅಂತಂದ್ರೆ – ತನ್ನನ್ನು ತಾನೇ ಕೊಂದುಕೊಂಡ. ತಾನು ಎಂಬ ಅರ್ಥದಲ್ಲಿ ಹೇಳುವದು ವೇದಾಂತಿಗಳು ಹೇಳುವ ಆತ್ಮ ತತ್ವವನ್ನು ನಾನೀಗ ನಿನಗೆ ಉಪದೇಶಿಸ್ತಾ ಇರೋದು. ಅದು ಯೆಲ್ಲೆಡೆಯಲ್ಲೂ ವ್ಯಾಪಕವಾಗಿದೆ. ಒಂದೆಡೆಯಲ್ಲಿ ಉಂಟು, ಒಂದೆಡೆಯಲ್ಲಿ ಇಲ್ಲ ಅಂತ ಹೇಳಲಿಕ್ಕೆ ಬರೋದಿಲ್ಲ. ಕೆಲವು ದೇಹಗಳಲ್ಲಿ 'ನಾನು' ಅಂತ ಧ್ವನಿಸ್ತದೆ. ಕೆಲವು ಪದಾರ್ಥಗಳಲ್ಲಿ ತಾವಾಗಿ ಸುಮ್ಮನಿದ್ ಬಿಡ್ತದೆ ಸುಪ್ತವಾಗಿ, ಆದಕಾರಣ, ಎಲ್ಲವೂ ಅದೇ ಆಗ್ತದೆ. ಆ ಎಲ್ಲವೂ ಅದೂ ಆಗಿದ್ದನ್ನು ಬಿಡಿಬಿಡಿಯಾಗಿ ಕಾಣುವ ದೃಷ್ಟಿಯನ್ನೇ ನಾನು ಮಿಥ್ಯಾದೃಷ್ಟಿ ಅಂತ ಹೇಳಿದ್ದು. ಅದು ವಿಪರೀತವಾಗಿ ನಮಗೆ ಕಾಣದೆ. ಕೆಲವು ದೇಹದಲ್ಲಿ ಮಾವನಾಗಿ, ಕೆಲವು ದೇಹಗಳಲ್ಲಿ ಅಜ್ಜನಾಗಿ, ನಮ್ಮ ಜನ್ಮದಾತರಾದ ತಂದೆಯೇ ಇರಲಿ, ಈ ಆತ್ಮ ನಷ್ಟವಾದ ಬಳಿಕ ಅದನ್ನು ತಂದೆ ಅಂತ ಕರೆತೇವೋ? ದೇಹವನ್ನ ಸುಟ್ಟು ಔರ್ಧಕ್ರಿಯೆಯನ್ನು ಮುಗಿಸಿಬಿಡ್ತವೆ. ಮತ್ತೂ ನಾವು ಪಿತೃಶ್ರಾದ್ಧ ಅಂತ ಮಾಡ್ತವಲ್ಲ. ಹಾಗಾದ್ರೆ ಪಿತೃ ಉಳಿದಿದ್ದಾನೆ. ಇಲ್ಲಿ ದೇಹ ಸುಟ್ಟು ಹೋಗಿರ್ತದೆ. ಅಲ್ಲಿ ಪಿತೃ ಅಂತ ನಾವು ಸಂಬೋಧಿಸುವುದು ಯಾವುದಕ್ಕೆ? ದೇಹದಲ್ಲಿದ್ದ ಚೈತನ್ಯಕ್ಕೆ ಇದನ್ನು ನಾನು ಯಾಕೆ ನಿನ್ನಲ್ಲಿ ಹೇಳಿದೆ ಅಂತಂದ್ರೆ ಶಾಸ್ತ್ರದ ಬಗ್ಗೆ ಆಸಕ್ತಿ ಇದೆ, ಧರ್ಮಶ್ರದ್ಧೆ ಇದೆ, ಪಾಪ ಪುಣ್ಯಗಳ ಭಯ ಉಂಟು ನಿನಗೆ. ಆದಕಾರಣ ಜಿಜ್ಞಾಸುವಾಗಿ ನನ್ನಲ್ಲಿ ಪ್ರಶ್ನಿಸಿದ್ದಿಯಾ, ಸಾಧನೆ ಇಲ್ಲದೇ ಇದ್ರೂ ಅತ್ಯಂತ ಉತ್ಸಾಹ ಇದ್ರೆ ಹೇಳಬಹುದು ಅಂತುಂಟು. ಹಾಗಾಗಿ ಹೇಳ್ತೇನೆ. ಇಲ್ಲದಿದ್ರೆ ಅಷ್ಟು ಹಗುರವಾಗಿ ಹೇಳುವ ವಿಷಯವಲ್ಲ ಇದು.

ಮತ್ತೆ ಕೆಲವರು ಹೇಳುವುದುಂಟು. “ಸ್ವಲ್ಪ ವೇದಾಂತ ಹೇಳಿ” ಯಾಕೆ? ಯಾರಿಗೆ

ಗೊತ್ತು !! ಅದು ಜೀರ್ಣ ಆಗಬೇಕು. ಆದ್ದರಿಂದ ಅರ್ಜುನಾ ಇದನ್ನು ಜೀರ್ಣಿಸಿಕೊಳ್ಳುವದಕ್ಕೆ ಯತ್ನಿಸು. ನಿನ್ನಲ್ಲಿದ್ದ ನೀನಾಗಲಿ, ನಿನ್ನ ವಿರೋಧಿಯಾಗಿ ಸದ್ಯ ನಾನು ಬೆಟ್ಟು ಮಾಡಿ ತೋರಿಸಿದಂತಹ ದುರ್ಯೋಧನನಲ್ಲಿದ್ದ ಅವನಾಗಲಿ ಅಥವಾ ಒಂದು ನೊರಜಿನಲ್ಲಿದ್ದಂತಹ ಚೇತನವಾಗಲಿ, ಇದು ತತ್ತ್ವತಃ ಅಖಂಡವಾದದ್ದು. ಅದ್ವೈತವಾದದ್ದು. ಅದಕ್ಕೆ ನಾಶವಿಲ್ಲ. ಹಾಗಾದರೆ ಇದು? ಇದು ಕೇವಲ ಆರೋಪಿತ, ಕಲ್ಪಿತ. ಯತಾರ್ಥಕ್ಕೆ ಇಲ್ಲ. ಎಲ್ಲಿಯ ತಂದೆ ಎಲ್ಲಿಯ ತಾಯಿ, ಎಲ್ಲಿಯ ಬಂಧು? ಇದು ಮೂಲತತ್ತ್ವ, ಇಷ್ಟು ನೀನು ತಿಳಕೊಂಡೆ ಅಂತಾದ್ರೆ ಕೊಲ್ಲುವದು ಯಾರನ್ನು? ಕೊಲ್ಲಬೇಕಾದ್ರೆ ಆತ್ಮನಲ್ಲದೆ ಬೇರೆ ಯಾವುದಕ್ಕೂ ಅಸ್ತಿತ್ವವಿಲ್ಲ. ಆದರೆ ಸ್ಥೂಲ ದೃಷ್ಟಿಗೆ ದೇಹ ಕಾಣದಲ್ಲ ! ಅದಕ್ಕೆ ಅಸ್ತಿತ್ವವೇ ಇಲ್ಲದ ಮೇಲೆ ಅದು ಈಗಲೂ ಜಡ ಅಲ್ವೊ? ಸಣ್ಣ ಪ್ರಾಯದಲ್ಲಿ ಯಾವುದೋ ಒಂದು ದೃಶ್ಯವನ್ನು ಕಂಡ ನೆನಪನ್ನು ನಾನು ನಿನಗೆ ಹೇಳ್ತೇನೆ. ಬೇತಾಳನ ಕುಣಿತ ಅಂತ ಉಂಟು - ಕೆಲವು ಉತ್ಸವಗಳಲೆಲ್ಲ. ನಮ್ಮ ಗೋಕುಲದಲ್ಲೆಲ್ಲ ಉಂಟು - ಗೋಪಾಲಕರಲ್ಲೆಲ್ಲ. ಒಂದು ದೊಡ್ಡ ಆಕೃತಿ ಮಾಡೋದು, ಅದರೊಳಗೆ ಒಬ್ಬ ನಿಲ್ಲೋದು ಅದಕ್ಕೆ ತಟ್ಟಿರಾಯ ಅಂತ ಹೆಸರು. ಆ ತಟ್ಟಿರಾಯನ ಕುಣಿತ ಕಂಡು, ಮಕ್ಕಳಾಟಿಕೆಯಲ್ಲಿ ಹೆದರಿದವರು ಎಷ್ಟೋ ಮಂದಿ ಇಲ್ವೊ? ನಿಜವಾದ ಕುಣಿತ ಯಾರದು? ಅದರೊಳಗಿದ್ದವನದು. ಹಾಗೇ, ಇದೆಲ್ಲ ಅಷ್ಟೆ. ಈ ಡಿಂಬದ ಒಳಗೆ ಆ ಚೇತನ ಇದ್ದದ್ದರಿಂದ ಅವರು ನಾನು ನಾನು ನಾನು ಅಂತ ಸದಾ ಚೀರುವದರಿಂದ ಇಕೋ, ಕಬ್ಬಿಣದ ಗುಂಡು ತಣ್ಣಗಿರದೆ ಅದಕ್ಕೆ ಬಿಸಿ ಉಂಟೋ? ಯೆಲ್ಲಿಯಾದರೂ ಗುಟ್ಟಿನಲ್ಲಿ ಬೇರೆ ಇದ್ದು ಆ ಬೆಂಕಿಯ ಸಮೀಪವರ್ತಿ ಈ ಕಬ್ಬಿಣದ ಗುಂಡಾದ್ರೆ? ಬಿಸಿ ಅದ್ರ ಗುಣವೋ? ಆ ಬೆಂಕಿಗೂ ಇದಕ್ಕೂ ಪ್ರತ್ಯೇಕ ಪ್ರತ್ಯೇಕ ವಿಂಗಡಣೆ ಅಂತಾದ್ರೆ?

ಕಬ್ಬಿಣ ಕಬ್ಬಿಣವೆ ಬೆಂಕಿ ಬೆಂಕಿಯೆ. ಹಾಗೇ ಈ ಆತ್ಮನನ್ನು ಈ ದೇಹದಿಂದ ಪ್ರತ್ಯೇಕಿಸಿ ಇಟ್ರೆ ಇದೆಂಥದ್ದು ಮತ್ತೆ? ಬರೇ ಜಡ. ಮೊದಲೀ ಜಡವಾದದ್ದನ್ನು, ಕೊಲ್ಲುವದಕ್ಕೆ ಸಾಧ್ಯವಿದೆಯೊ? ಈ ದೃಷ್ಟಿಯಿಂದ ನಾವು ಶಾಸ್ತ್ರ ವಿವೇಚನೆ ಮಾಡ್ಬೇಕು. ಸಮದೃಷ್ಟಿ ಅಂದ್ರೆ ಅದು - 'ನಹಿಜ್ಞಾನೇನ ಸದೃಶಂ ಪವಿತ್ರಮಿಹವಿದ್ಯತೆ. ಓದಿದ್ದು ಸಾಲದು, ಯಾರು ಓದಿದ್ದೂ ಸಾಲದು. ಇದನ್ನು ಓದಿದ್ರೂ ಸಾಲದು. ಅದು ಕರಗಬೇಕು. ಈ ವಿಪರೀತ ಭಾವ ಉಂಟಾಗತಕ್ಕ ಅಂತಃಕರಣವೃತ್ತಿ ಉಂಟಲ್ಲ. ಇದಕ್ಕೆ ವಿವೇಕದ ಆವೃತ್ತಿ ಬರಬೇಕು. ಈಗ ಎನಾಗ್ತದೆ - ಮನಸ್ಸು ಬೇರೆ, ಬುದ್ದಿ ಬೇರೆ. ಬುದ್ದಿ ನಿಜವಾದದ್ದನ್ನು ತೋರಿಸ್ತದೆ. ಆದರೆ ಮನಸ್ಸು ಭಾವಾತಿರೇಕದಿಂದ ಸಂಚಾರೀ ಭಾವವನ್ನು ತಾಳ್ತದೆ. ಆದ್ದರಿಂದಲೇ ಈ ಸುಖ ದುಃಖ ಈ ರೀತಿಯಾದ ನಮ್ಮ ಅನುಭವಗಳನ್ನು ಸಂವೇದನೆ' ಅಂತ ಹೇಳ್ತವೆ ಹೊರತು ಜ್ಞಾನ ಅಂತ ಹೇಳ್ತವೆಯೋ? ಸಂವೇದನಾ ಅಂತಂದ್ರೆ ಮನಸ್ಸಿಗಾಗುವಂತಹದ್ದು . ಸಂವೇದನೆ ಸತ್ಯವಲ್ಲ. ಅದು ಮನಸ್ಸಿನ ವೃತ್ತಿ. ಆ ಮನಸ್ಸಿನ ವೃತ್ತಿಯಿಂದಲ್ಲ ಪ್ರಪಂಚವನ್ನು ಕಾಣಬೇಕಾದದ್ದು ವಿವೇಕದ ವೃತ್ತಿಯಿಂದ. ಅಂತಹ ವಿವೇಕ ಅದು ಸುಮ್ಮೆ ಸಿದ್ಧಿಸಲಿಕ್ಕಿಲ್ಲ.

ಆ ವಿವೇಕ, ಮನಸ್ಸು ಮತ್ತು ಬುದ್ಧಿ ಎರಡೂ ಒಂದಾದ ಪಾಕ ಇದೆಯಲ್ಲ - ಇದಕ್ಕೆ ವ್ಯವಸಾಯಾತ್ಮಿಕ ಬುದ್ಧಿ ಅಂತ ಹೆಸರು. ಇದು ಒಂದು ಬೀಜ ತನ್ನಷ್ಟಕ್ಕೆ ಹುಟ್ಟಿ ಗಿಡವಾಗಿ ಹಣ್ಣನ್ನು ಬಿಡ್ತದೆ. ಅದು ಹಣ ಹಣ್ಣೆ. ಆದರೆ ಆ ಹಣ್ಣಿಗೆ ನಿಜವಾದ ಸ್ವಾದ ಎಷ್ಟುಂಟು ಅಂತ ಗೊತ್ತಾಗ ಬೇಕಿದ್ರೆ ಕೃಷಿ ಧರ್ಮವನ್ನು ಅವಲಂಬಿಸಿಕೊಂಡು, ಅದರ ರಸವನ್ನು ಹೆಚ್ಚಿಸುವದಕ್ಕಲ್ಲ. ಪೂರ್ಣ ರಸ ನಮಗೆ ಸಿಕ್ಕುವಂತೆ ಮಾಡಬೇಕಾಗಿದ್ರೆ ನೀರು, ಗೊಬ್ಬರಗಳನ್ನು ಒದಗಿಸಿ ಕೃಷಿ ಮಾಡಬೇಕು. ಹಾಗೇ ನಮ್ಮ ಅಂತಃಕರಣ ವೃತ್ತಿಯನ್ನು ಚೆನ್ನಾಗಿ ಕೃಷಿ ಮಾಡಬೇಕು. ಯಾವತ್ತೂ ನಮ್ಮ ಬುದ್ಧಿಯ ಬುಡ ಮನಸ್ಸು. ಜಾಗ ಇಲ್ಲದೆ ಯಾವ ಜ್ಞಾನವನ್ನೂ ಗ್ರಹಿಸಲಿಕ್ಕಿಲ್ಲ ನಮ್ಮ ಬುದ್ದಿ, ಬುದ್ದಿ ತಾನಾಗಿ ಗ್ರಹಿಸ್ತದೋ?

ಭಾವದ ದ್ವಾರಾ ಹೋಗಬೇಕು. ಹಾಗಾಗಿ ಯಾವ ಅನ್ನವು ಪರಿಶುದ್ಧವಾಗಿದ್ರೂ ಕೂಡಾ ನಮ್ಮ ಹೊಟ್ಟೆಯಲ್ಲಿ ಚೆನ್ನಾಗಿ ಜೀರ್ಣಶಕ್ತಿ ಇದ್ರೂ, ಯಾವ ಬಾಯಿಯ ಮೂಲಕ ನಾವದನ್ನು ಒಳಗಡೆ ಕೊಡ್ತೇವೋ ಅ ಬಾಯನ್ನು ಸುರಿವಿಗೆ ಶುಚಿ ರುಚಿಯಾಗಿ ಇಟ್ಟುಕೊಳ್ಳಬೇಕು. ಬಾಯಿ ರುಚಿ ಇಲ್ಲದವನಿಗೆ ಪದಾರ್ಥ ರುಚಿ ಉಂಟೋ? ಬಾಯಿ ರುಚಿ ಇಲ್ಲದವ ಜಗೀತಾನೋ? ನುಂಗಿದರೆ ಹೊಟ್ಟೆಗೆ ಸುಖ ಉಂಟೋ?

ಹಾಗಾಗಿ ನಮ್ಮ ಮನಸ್ಸು ಮೊದಲು ಈ ಎಲ್ಲಾ ವಿಷಯದಲ್ಲಿ ಮಧ್ಯಸ್ಥರದಲ್ಲಿ ನಿಲ್ತದೆ. 'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋ' ಎಂದು ಹೇಳಿದ ಸ್ಮೃತಿಕಾರ ಅವಿವೇಕಿಯೆನೂ ಅಲ್ಲ. ಆದರೆ ಯೇನು ಮಾಡೋಣ? ಮನಸ್ಸು ಚಂಚಲ ಅಲ್ವೊ ಅರ್ಜುನಾ? ಅದರ ಸ್ವಭಾವ ಅದು. ಈ ಚಂಚಲವಾದಂತಹ ಮನಸ್ಸನ್ನು ಹ್ಯಾಗೆ ನಾವು ಬಿಗಿಹಿಡಿಯಬೇಕು? 'ಅಭ್ಯಾಸೇನತು ಕೌಂತೇಯ' ಅದಕ್ಕೆ ಅಭ್ಯಾಸವೇ ಬೇಕು. ಅಭ್ಯಾಸ ಇಲ್ಲದಿದ್ರೆ; ಈಗ ನೀನು ಕ್ಷತ್ರಿಯ ಕುಮಾರ ಕೇವಲ ತಾಯಿ ತಂದೆಯರ ಸಂಪರ್ಕದಿಂದ ಹುಟ್ಟಿಕೊಂಡ ದೇಹ ಆದ್ರೆ ಇಷ್ಟು ಬೆಳೆದೀತೋ? ಎಷ್ಟು ವ್ಯಾಯಾಮ ಮಾಡಿದ್ದೀರಿ - ಅರಸು ಮಕ್ಕಳು. ಭೀಮ ಒಬ್ಬ ಬೆಳೆದು ಬಿಟ್ಟಿದ್ದಾನೆ ಎಷ್ಟು ನಾನು ಕಳೆದ ಸಲ ನೋಡುವ ಹಾಗಿಲ್ಲ ಈ ಸಲ !! ನಿನಗೆ ಹುಟ್ಟಿನಿಂದ ಬಂದದ್ದೊ ಅದು ಎರಡು ಕೈಯಲ್ಲಿ ...ಸವ್ಯಸಾಚಿ?

ಅಭ್ಯಾಸಬಲ, ಅಭ್ಯಾಸಬಲ. ಹಾಗೆ ಮಾನಸಿಕವಾದಂತಹ ಅಭ್ಯಾಸ ಅಂತೊಂದುಂಟು. ಅಭ್ಯಾಸದ ಜೊತೆಯಲ್ಲಿ ವೈರಾಗ್ಯವೂ ಬೇಕು. ಇದನ್ನು ವಿಂಗಡಿಸಿ ತಿಳಕೊಳ್ಳುವದು ನಾವು - ಶಾಸ್ತ್ರದಲ್ಲಿ ಹೇಳಿದಂತಹ ಆಚಾರ ಸಂಹಿತೆಯಿಂದ. ಇದಕ್ಕೆ ನನ್ನ ಭಾಷೆಯಲ್ಲಿ 'ಕರ್ಮಯೋಗ' ಅಂತ ಹೆಸರು. ಅದರ ರಹಸ್ಯ ಹೇಳ್ತೇನೆ ಕೇಳು. ವೇದದಲ್ಲಿ ಹೇಳಿದಂತಹ ಕರ್ಮಕಾಂಡ ಅಲ್ಲ. ಅವೆಲ್ಲಾ "ತ್ರೈಗಣ್ಯ ವಿಷಯಾ: ವೇದಾಃ" - ಅಲ್ಲೆಲ್ಲಾ ಇಂತಿಂಥಾ ಕರ್ಮ ಮಾಡಿದರೆ ಇಂತಿಂಥಾ ಫಲ ಸಿಗ್ತದೆ ಅಂತುಂಟು.

ಇಷ್ಟು ಭಂಡವಾಳ ಹಾಕಿದರೆ ಇಷ್ಟು ಲಾಭ ಬರ್ತದೆ ತಿಂಗಳಿಗೆ, ಅದು ವ್ಯಾಪಾರದ ಮನೋವೃತ್ತಿ. ಅದರಿಂದ ಮತ್ತಷ್ಟು ವ್ಯಾಪಾರದ ವೃತ್ತಿ ಬೆಳೆದೀತೇ ಹೊರತು ನಿರಸನ ಉಂಟಾಗಲಿಕ್ಕಿಲ್ಲ. ನಾನು ಹೇಳುವ ಕರ್ಮ ಇದೆಯಲ್ಲ, ಇದು ನಿಜವಾಗಿ ಆದ್ರೆ ಅಂತರಂಗ ತಿರ್ದ್‌ಲಿಕಿದ್ದದ್ದು. ಮನಸ್ಸಿಗೆ ಬೇಕಾದಂತಹ ಜೀವಧಾತುಗಳನ್ನು ಒದಗಿಸಲಿಕ್ಕಿದ್ದದ್ದು, ಆದ್ದರಿಂದ ನಾನಿದನ್ನು ಕರ್ಮಯೋಗ ಅಂತ ಕರೀತೇನೆ. 'ಯೋಗ' ಶಬ್ದಕ್ಕರ್ಥ ಯೇನು? ಯೋಗ ಕ್ಷೇಮಂ ಅಂತಂದ್ರೆ ಬೇರೆ. ಇಲ್ಲಿ ಯೋಗ ಅಂತಂದ್ರೆ – 'ಸಮದೃಷ್ಟಿಂ ಯೋಗ ಇತಿ ಲಾಭವೋ ನಷ್ಟವೋ, ಸುಖವೋ ದುಃಖವೊ ಸ್ತುತಿಯೋ ನಿಂದೆಯೋ ಇದರ ಕಡೆಗೆ ಲಕ್ಷ್ಯವಿಲ್ಲದೆ 'ತಾನು ಮಾಡಬೇಕಾದದ್ದಿದು' ಅಂತ ಪ್ರಾಮಾಣಿಕತನದಿಂದ ಮಾಡುವ ಆ ಸಮಭಾವ ಇದೆಯಲ್ಲ, ಸಮದೃಷ್ಟಿ, ಆ ಸಮದೃಷ್ಟಿಯ ವೃತ್ತಿಗೆ ಯೋಗ ಅಂತ ಹೆಸರು. ಆದರೆ ಒಂದುಂಟು. ಯೋಗ ಸಮದೃಷ್ಟಿ ಇದ್ರೆ ಸಾಕಲ್ಲ ; ಅವನು ಯೋಗಿಯಾಗ್ತಾನೋ ಅಂತ ಕೇಳಿದರೆ - ಆಗೋದಿಲ್ಲ. "ಯೋಗಃ ಕರ್ಮಸುಕೌಶಲಂ" ಆವನು ತನ್ನ ಕ್ರಿಯೆಯಲ್ಲಿ ಕೌಶಲ್ಯವನ್ನು ಕಾಣಿಸಬೇಕು. ಈ ಕರ್ಮವನ್ನು ಮಾಡದೆ ಯಾರಿಗೂ ಸಹ ಇರುವದಕ್ಕೆ ಸಾಧ್ಯವಿಲ್ಲ.

ಕೆಲವರು ಹೇಳ್ತಾರೆ - ನಾನೀಗ ಕರ್ಮ ಯಾಕ್ ಮಾಡೋದಿಲ್ಲ? ಆದರೆ ಖಾಸಾ ಶಾಸ್ತ್ರಪಂಡಿತನಾದ ನಿನಗೆ ಗೊತ್ತುಂಟು. 'ಯೇಳು ನಡಿ' ಅಂತ ನಾನೊಬ್ಬನಿಗೆ ಹೇಳ್ತೇನೆ. ನಾನೀಗ ನಡ್ಯೋದಿಲ್ಲ ಕೂತ್ಕೊಳ್ತೇನೆ ಅಂತ ಹೇಳಿದ್ರೆ ಅವ ನಡೆಯುವ ಕರ್ಮ ಬಿಟ್ಟು ಕುಕ್ಕೊಳ್ಳುವ ಕರ್ಮ ಹಿಡ್ದ ಅಂತ ಅರ್ಥವಲ್ಲ. ನಾನು ಯೇನೂ ಮಾಡೋದಿಲ್ಲ ಅಂತ ಹೇಳೋದು ಒಂದು ಥರದ ಕರ್ಮವೆ ಸೂಕ್ಷ್ಮ ಕರ್ಮ. ಈ ಪ್ರಪಂಚದಲ್ಲಿ ದೇಹಧಾರಿಗಳಾಗಿ ಇದ್ದವರು ಕೇವಲ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಾದಿ, ವಿಕಾರಗಳು ಇದ್ದವರಲ್ಲಿ ಕರ್ಮಬಾಹಿರತ್ವ 'ಕರ್ಮಸನ್ಯಾಸ' ಎಂಬ ಮಾತು ಇಲ್ಲ. ಹಾಗಾದರೆ ಕೆಲವರು ಇದ್ದಾರಲ್ಲ, ನನ್ನ ಭಾಷೆಯಲ್ಲಿ - ಅವರು ಪಲಾಯನ ಪಂಡಿತರು. ಯೇನೂ ಕರ್ಮವನ್ನು ಮಾಡೋದಿಲ್ಲ, ಹಾಗಂತ ಮಾಡೋದಿಲ್ಲೋ? "ಜಟಿಲೋ ಮುಂಡಿ ಲುಂಛಿತ ಕೇಶಃ, ಕಾಶಾಯಾಂಬರ ಬಹುಕೃತ ವೇಶಃ"- ಇಲ್ಲ ಕರ್ಮ ಇಲ್ವೊ? ಉಂಟು. ಯೇನಿಲ್ಲ ಅಂದ್ರೂ ಪಾದಪೂಜೆ ಮಾಡಿಸಿಕೊಳ್ಳವರಾದ್ರೂ ಇದ್ದಾರೆ. ಹಾಗಾಗಿ ಪೂಜೆ ಮಾಡೋದು ಶಿಷ್ಯರ ಕರ್ಮ. ಇದನ್ನು ಪಡೆಯುವದು ಅವರದ್ದಾದ ಕರ್ಮ, ಇದಕ್ಕೆ ಬೇಕಾದರೆ ಧರ್ಮ ಅಂತ ಹೆಸರಿಡಿ. ಅಲ್ಲ ನಿಜವಾಗಿ ಸನ್ಯಾಸ ಅಂದ್ರೆ "ಕಾಮ್ಯಾನಾಂ ಕರ್ಮಣಾನ್ಯಾಸಂ ಕರ್ಮ" ಆ ಕಾಮ ಇದೆಯಲ್ಲ - ಅದಿಲ್ಲದೆ ಕೇವಲ ಕರ್ತವ್ಯಕ್ಕಾಗಿ ಕರ್ತವ್ಯವೇನು?

ಚಿತ್ತಶುದ್ಧಿಗಾಗಿ ಕರ್ಮ, ನೀನು ದೇವರ ಭಜನೆ ಮಾಡು, ಯುದ್ಧ ಮಾಡು, ಯಜ್ಞ ಮಾಡು, ಶಾಸ್ತ್ರ ಓದು, ದಾನ ಧರ್ಮ ಮಾಡು, ಯೇನನ್ನೂ ಮಾಡು ಚಿತ್ತಶುದ್ಧಿ ಅಂತಾದ್ರೆ ಅದು ಕರ್ಮಯೋಗ, ಅದರಲ್ಲಿ ಚಿತ್ತಅಶುದ್ಧಿ ಉಂಟಾದ್ರೆ, ಅಷ್ಟು ಮಾಡಿದ್ದೇನೆ, ಇಷ್ಟು ಮಾಡಿದ್ದೇನೆ, ತಾಮ್ರಪಟದಲ್ಲಿ ಬರೆದಿಡಬೇಕು ಅದಾಗ ದಾನವಲ್ಲ ಯೇನೂ

ಅಲ್ಲ. ಪ್ರತಿಯೊಂದು ವ್ಯಕ್ತಿಗೂ ಈ ಪ್ರಪಂಚದಲ್ಲಿ ದೇಹ ಇದ್ ಮೇಲೆ ನಾನು ಎಂಬ ವ್ಯಕ್ತಿ ಪ್ರಜ್ಞೆ ಇದ್ ಮೇಲೆ, ಯಜ್ಞ, ದಾನ, ತಪ ಈ ಮೂರು ಉಪದಿಷ್ಟವಾದದ್ದು ಯಾಕೆ? ದೇಹ, ಮನಸ್ಸು, ಬುದ್ಧಿ ಮೂರು ಇದೆಯಲ್ಲ, ಆದಕಾರಣ ಈ ಮೂರಕ್ಕೆ ಮೂರು. ಬೇರೆ ಬೇರೆ ಇದೆ ನಿನಗೊತ್ತುಂಟುಲ್ಲ. ಕರ್ಮ ಬೇರೆ ಬೇರೆ ಅಲ್ಲೇ ಇರೋದು ವಿವೇಕಿಗಳದ್ದಾದ ಸರಿಯಾದ ಮಾರ್ಗ, ಆಯುರ್ವೇದ ಶಾಸ್ತ್ರದಲ್ಲಿ ಒಬ್ಬ ರೋಗಿಗೆ ಹೊರಗಿನ ಚಿಕಿತ್ಸೆ ಮತ್ತು ಒಳಗಿನ ಚಿಕಿತ್ಸೆ ಎರಡೂ ವಿಧಿಸಲ್ಪಡದೆ ಪ್ರಸಂಗತ್ತೇನ. ಹೊಟ್ಟೆಗೆ ತೆಕ್ಕೊಳ್‌ಲಿಕ್ಕೆ - ಲೇಹ್ಯವೊ ಕಷಾಯವೊ ಅರ್ಕವೊ ಅರಿಷ್ಟವೊ; ಮೈಗೆ? ತೈಲವೋ ಅಥವಾ ಇತರ ಇತರ ಮಿಶ್ರಣ. ಇದನ್ನು ಹಾಗೇ ತೆಕ್ಕೊಳ್‌ಬೇಕಲ್ಲದೆ ಮೈಗೆ ಲೇಪಿಸಬೇಕಾದದ್ದನ್ನು ಹೊಟ್ಟೆಗೆ ತೆಕ್ಕೊಂಡು, ಹೊಟ್ಟೆಗೆ ತೆಕ್ಕೊಳ್ಳಬೇಕಾದ್ದನ್ನು ಮೈಗೆ ಲೇಪಿಸಿದರೆ? ಆವಾಗ ಔಷಧಿಗೂ ಬೆಲೆ ಇಲ್ಲ ಅಂತಾಗಿದೆ. ಶಾಸ್ತ್ರಕ್ಕೂ ಕೆಲಸ ಇಲ್ಲ. ಶಾಸ್ತ್ರಿ ಅನಿಸಿಕೊಂಡವನಿಗೂ ಕೆಲಸ ಇಲ್ಲ ಅಂತಾಗ್ತದೆ. ಅದೇ ನಾನು ಹೇಳಿದ್ದು "ಯೋಗಃ ಕರ್ಮಸು ಕೌಶಲಂ' ಕಿಂ ಕರ್ಮ, ಕಿಂ ಅಕರ್ಮ ಎಂಬಲ್ಲಿ ಮಹಾ ಮಹಾ ಪಂಡಿತರೂ ಕಾಲು ಜಾರಿದ್ದಾರೆ. ಮತ್ತೆ ನೀನೇನು ಮಹಾ, ಅಲ್ಲವೋ? ಹಾಗಂದ್ರೆ ಪರವಾನಿಗೆಯನ್ನು ಕೊಡ್ತೇನೆ ಅಂತಲ್ಲ ಕಾಲು ಜಾರಲಿಕ್ಕೆ ನೀನು ತಿದ್ದಿಕೊಳ್ಳಬೇಕು ನನ್ನ ಶಿಷ್ಯನಾಗಿ, ನಾನು ಯೋಗೇಶ್ವರ ಕೃಷ್ಣನಾಗಿ ಉಪದೇಶ ಮಾಡ್ತಾ ಇರೋದು. ಕರ್ಮವನ್ನು ಬಿಟ್ಟಿರಲಿಕ್ಕೆ ಸಾಧ್ಯವಿಲ್ಲ. ಮಾಡಿಯೇ ತೀರಬೇಕು ಯಾಕೆ? ಇಕೋ ಯಜ್ಞ ದಾನ, ತಪಸ್ಸು ಅಂತ ಹೇಳಿದ್ದಲ್ಲ. ದಾನ ಅನ್ನುವದು ಮೈಗೆ ಸಂಬಂಧಪಟ್ಟದ್ದು, ಶ್ರೀಮಂತಿಕೆ ಇದ್ದಾಗ ಕರೆದು ದಾನವಮಾಡು. ಹ್ಯಾಗೆ ಬರಬೇಕು ನಮ್ಮ ಬುದ್ಧಿಗೆ? ಕೊಟ್ಟು ಅಭ್ಯಾಸ ಬೇಕು. ಕೂಡಿಸುವದಕ್ಕೆ ಕಲ್ಲರೆ ಸಾಲದು, ಕೂಡಿಸುವಾಗ ಎಷ್ಟು ಸಂತೋಷವಾಗದೆ ಅಷ್ಟೇ ಸಂತೋಷ ಕೊಡುವಾಗಲೂ ಆದ್ರೆ ದಾನದಿಂದಾಗಬೇಕಾದ ತ್ಯಾಗ ಸಿದ್ಧಿಸಿತು ಅಂತರ್ಥ. ಹಾಗೆಯೇ ಯಜ್ಞ; ಯಜ್ಞ ಉಂಟಲ್ಲ ನಮ್ಮಲ್ಲಿ ದೇವತಾರಾಧನೆ ಇದಕ್ಕೆ ಭಕ್ತಿ ಅಂತ್ತೇಳ್ವವರಿದ್ದಾರೆ. ಕೆಲವರು, ಅವರನ್ನೆಲ್ಲ ನನ್ನಿಧಿಗೆ ನಾಳೆ ಕರಕೊಂಡು ಬಾ. ಭಕ್ತಿ ಪಂಥವೂ ಒಂದು ಪಂಥವೇ? ಪಂಥ ಅಂತ ಅದಕ್ಕೆ ಹೆಸರು ; ಸಿದ್ಧಾಂತ ಅಂತ ಹೆಸರೇನೂ ಇಲ್ಲ. ಪಂಥ - ದಾರಿ. ಇವೆಲ್ಲ ದಾರಿಗಳು, ಹಾಗೇ ದೇವರು - ದೊಡ್ಡವ ಅಂದರೆ ಒಂದು ಭಾವ – ಭಕ್ತಿ, ಅದು ಮಾರ್ಗ ಇದು ಯಜ್ಞಶಬ್ದದಲ್ಲಿ ಉಲ್ಲೇಖಿಸಲ್ಪಡದೆ. ಯಜ್ಞ - 'ಪ್ರಜಾಪತಯೇ ಇದನ್ನಮಮ' ಅಲ್ಲಿ ಕೂಡಾ ತ್ಯಾಗವೇ, ಸಮರ್ಪಣ ಭಾವ. ಆಮೇಲೆ ತಪ - ಅದು ವಿವೇಕಕ್ಕೆ ಸಂಬಂಧಪಟ್ಟದ್ದು, ಇದು ಮೂರೂ ಮನುಷ್ಯರಿಗೆ ಕರ್ತವ್ಯ. - ಯೆಲ್ಲಿ? ಜಾಗೃತಾವಸ್ಥೆಯಲ್ಲಿ, ಜಾಗೃತಾವಸ್ಥೆಯಲ್ಲಿ ಇದೆಲ್ಲ ಪಥ್ಯ, ಆಹಾರ ಅಲ್ಲ. ರೋಗಿಯಾದವನಿಗೆ ಕಷಾಯ, ಲೇಹ್ಯ ಪಥ್ಯ. ಅದನ್ನವೋ? ಹಾಗಂತ ಅದರಲ್ಲಿಯೂ ಅನ್ನದ ಗುಣ ಇಲ್ಲ ಅಂತ ತಳ್ಳಿ ಹಾಕುವದಕ್ಕಾಗುವದಿಲ್ಲ. ಅದು ಸಾಕಾಗೋದಿಲ್ಲ. ಆದ್ದರಿಂದ ಇಂತಹ 'ಸಾಧನಾ' - ಯಜ್ಞ, ದಾನ, ತಪ ಇದು ಅಭ್ಯಾಸಕ್ಕೆ ಸೇರದೆ. ಅಭ್ಯಾಸೇನತು ಕೌಂತೇಯ ಅಂತ ಹೇಳಿಲ್ಲ. - ಒಟ್ಟೂ ಇದಕ್ಕೆ ನನ್ನ ಭಾಷೆಯಲ್ಲಿ ಕರ್ಮಯೋಗ ಅಂತಲೇ ಹೆಸರು. ಕರ್ಮ ಮುಖ್ಯ ಬಿಟ್ಟು ಬಿಡಬಾರದು. ಬಿಟ್ರೆ ಬಿಟ್ಟ ದೋಷ ಬರ್ತದೆ.

ಮಾಡಿದರೆ ಮಾಡಿದ ದೋಷವಿಲ್ಲ. ಮಾಡುವದು ಕರ್ತವ್ಯಕ್ಕಾಗಿ, ಫಲ ಯೇನೇ ಅಗ್ಗಿ. ಫಲದ ಕಡೆಗೆ...?

ಫಲದ ಕಡೆಗೆ ಹೇಳುವದಾದ್ರೆ ಇದೀಗ ಕ್ಷತ್ರಿಯ ನೀನು. ನಾನು ಕ್ಷತ್ರಿಯರದ್ದು ಮಾತ್ರ ಹೇಳ್ತೇನೆ. ಬಾಕಿದ್ದ ಜಾತಿಯವರದ್ದೆಲ ಸುದ್ದಿ ಹೇಳೋದಿಲ್ಲ ಇಲ್ಲಿ. ಯಾಕಂದ್ರೆ ನಮ್ಮಲ್ಲಿ ಜಾತಿಯೇ ಇಲ್ಲ. ಹಸ್ತಿನಾವತಿಯಲ್ಲಿ ಜಾತಿಯೆಂಥದ್ದು? !! ಆದರೆ ನಾಲ್ಕು ವರ್ಣ ವ್ಯವಸ್ಥೆ ಅಂತ ಉಂಟು. ಈ ವರ್ಣ ವ್ಯವಸ್ಥೆ ಬೇಕಾಗ್ತದೆ - ಸಮಾಜದ ಸ್ವಾಸ್ಥ್ಯಕ್ಕೆ. ಅದಕ್ಕೆ ಜಾತಿ ಅಂತ ಇತ್ತೀಚೆಗೆ ಯಾರೋ ಹೆಸರು ಹಾಕಿದ್ದು, ಅದು ಜಾತಿಯಲ್ಲಿ ವರ್ಣ. ಯಾವ ದೇಶದಲ್ಲಿಲ್ಲ? ಯಾವ ನಾಗರೀಕ ರಾಷ್ಟ್ರದಲ್ಲಿಲ್ಲ? ಇದ್ದೇ ಇರಬೇಕು ತಲೆ ಕೆಲಸ ಮಾಡುವ ಒಂದು ವರ್ಣ. ಕೈ ಕೆಲಸ ಮಾಡುವವರು ಅವರಿಗೆ ಸೈನಿಕರು ಅಂತಲೇ ಹೆಸರು. ಹೋರಾಟಕ್ಕೆ ಇರೋದು. ಇಡೀ ವಿಶ್ವ ಅಥವಾ ರಾಷ್ಟ್ರವನ್ನು ಒಂದು ವ್ಯಕ್ತಿಗೆ ನಾವು ಹೋಲಿಸಿದರೆ ಒಂದು ರೂಪಕವನ್ನು ನಿರ್ಮಿಸಿದರೆ ತಲೆಯ ಸ್ಥಾನದಲ್ಲಿ ಬ್ರಾಹ್ಮಣರು, ಬ್ರಾಹ್ಮಣರು ಅಂತ ಹೇಳಿದರೆ ಅ ಭಟ್ಟನ ಮಗ ಈ ಭಟ್ಟ ಅಂತ ಹೇಳುವುದು ಬೇಡ ಆದು ಜಾತಿ, ಆ ಬ್ರಹ್ಮ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವವರಿದ್ದಾರೆ ಅದು ಧರ್ಮಕ್ಕೆ ಬರೂದಿಲ್ಲ. ಸ್ವಲ್ಪ ಆರ್ಶ ಬೇಕಾಗ್ತದೆ. ಆದ್ದರಿಂದ ಅದಕ್ಕೆ ಆನುವಂಶಿಕತೆ ಹೇಳಲ್ಪಟ್ಟಿದೆ ಹೊರತು ಬ್ರಾಹ್ಮಣ ಅನ್ನುವದು ಒಂದು ವರ್ಣ, ಬ್ರಾಹ್ಮಣ ಎನ್ನುವದು ಸಿದ್ಧಿ, ಬ್ರಾಹ್ಮಣ ಇದ್ದವ ನಿಜವಾಗಿ ಬ್ರಾಹ್ಮಣನಾಗಿಯೇ ಉಳಿದ ಎಂತ ಅರ್ಥ. ಇಲ್ಲದಿದ್ರೆ ಬ್ರಾಹ್ಮಣನಾಗಿ ಹುಟ್ಟಿದ, ಇನ್ಯಾವದನ್ನೂ ಬೆಳೆಸಿದ ಅಂತ ಆಗ್ತದೆ. ಹಾಗಾಗಿ, ಇಷ್ಟು ವ್ಯಾಪಕವಾದ ಅರ್ಥದಿಂದ "ಚಾತುರ್ವರ್ಣ್ಯಂ ಮಯಾ ಸೃಷ್ಟಂ, ಗುಣಕರ್ಮ ವಿಭಾಗಶಃ" ಎಂಬ ನನ್ನ ಮಾತನ್ನು ವ್ಯಾಖ್ಯಾನಿಸಬೇಕು. ನಾಳೆಯಾರಾದರೂ ನಿನ್ನಲ್ಲಿ ಕೇಳಿದರೆ - "ನಿನ್ನೆ ಕೃಷ್ಣ ಯೆಂಥದ್ದು ಹೇಳಿದ" – ಅಂತ ನಿನ್ನಲ್ಲಿ ಹೇಳಲಿಕ್ಕೆ ನಾನು ನೆನಪಿಸಿದ್ದು, ನೀನು ಕಲ್ಲದ್ದು ಕಡಿಮೆ ಅಂತ ಅಲ್ಲ. ಹಾಗಾಗಿ ಬ್ರಾಹ್ಮಣ್ಯದಿಂದ ಬ್ರಾಹ್ಮಣ, ಕ್ಷತ್ರಿಯ? ಶಾಸ್ತ್ರದಿಂದ. ಶಾಸ್ತ್ರ ಅಂದರೇನು? 'ಶತಾಯತೇ ಇತಿ' - ಅರ್ಥ ನೀನು ಮಾಡಿಕೋ, ಇವನ್ಯಾರು? ದುಷ್ಟರು. ದುಷ್ಟರನ್ನು ದಂಡಿಸುವದಕ್ಕೇ ಇರುವವರು. ಪ್ರತ್ಯೇಕವಾಗಿ ಅವರಿಗೆ ಬಾಹುಜರು ಅಂತ ಹೇಳಲ್ಪಡ್ತದೆ. ವಿಶ್ವವಿರಾಟ್ ರೂಪಿಯಾದಂತಹ ಪುರುಷೋತ್ತಮನ ಬಾಹುಜರು. ಅಯ್ಯಾ, ಕೈಯ್ಯ ಕೆಲಸ ಯೇನು ಅಂತ ನಾನು ನಿನಗೆ ಹೇಳಬೇಕೋ? ಕೈ ಎಂಥದ್ದು? ವಿರೋಧಿಯನ್ನು ನಿವಾರಿಸುವಂಥದ್ದು ! ಹೊಡೆಯುವದಲ್ಲ, ನಿವಾರಿಸುವದು. ಇದು ನೋಡು, ನೀನಿದ್ದಲ್ಲಿಗೆ ಬಂದದ್ದು ಯುದ್ಧ, ತಾನಾಗಿ ಬಂದಂತಹ ಯುದ್ಧವನ್ನು ನಿವಾರಿಸುವದು ಅಂದರೆ ನಿಗ್ರಹಿಸುವದು ಕ್ಷತ್ರಿಯನಾದ ನಿನಗೆ ಕರ್ತವ್ಯವೋ? ಹಾಗಾದರೆ ನಿನ್ನ ವರ್ಣೋಚಿತವಾದ ಸ್ವಧರ್ಮಾನುಷ್ಠಾನ ಹೇಳಿದರೆ ಇದೇನು ಹಿಮಾಲಯಕ್ಕೆ ಹೋಗುವ, ಬದರಿಕಾಶ್ರಮಕ್ಕೆ ಹೋಗುವ ಆಲೋಚನೆಯೋ?

ಯೇ ಹುಚ್ಚ ! ಸ್ವಜನ್ಮದಿಂದ ಬಂದಂತಹ ಯುದ್ಧವೃತ್ತಿ, ಅಭ್ಯಾಸ ಬಲದಿಂದ ಬಂದಂತಹ ಯುದ್ಧವೃತ್ತಿ ಇದರಲ್ಲಿ ನಿನಗೆ ಅಳುಕು ಹುಟ್ಟಿದೆ ಅಂತಾದ್ರೆ, ಮುನಿವೃತ್ತಿ ಹಿಡಿದೀತೋ? ಪ್ರವಾಹಕ್ಕೆ ಅನುಕೂಲವಾಗಿ ಈಜಲಿಕ್ಕೆ ಬರುವದಿಲ್ಲ ಅಂತ ಹೇಳುವವ ಪ್ರವಾಹಕ್ಕೆ ವಿರುದ್ಧವಾಗಿ ಈಜಿ ಬದುಕಲಿಕ್ಕೆ ಉಂಟೋ? ನೀನು ತಪಸ್ಸಿಗೆ ಹೋದ್ರೆ ಅಲ್ಲಿ ಮೃಗ ಬೇಟೆ ಆಡ್ತಿ. ನನಗೊತ್ತುಂಟು ನಿನ್ನ ಜಾತಕ ಫಲ.

ತಪಸ್ಸಿಗೆ ಹೋಗಿ ಶಿವಾನುಗ್ರಹಕ್ಕೆ ಕೂತವನು, ಒಂದು ಹಂದಿಯ ನೆವನ ಹಿಡ್ಕೊಂಡು ಕಿರಾತನಲ್ಲಿ ಪೆಟ್ಟು ಮಾಡಿದ ಜನ ನೀನು. ಯುದ್ಧ ಅನ್ನೋದು ರಕ್ತಗತವಾದದ್ದು ನಿನಗೆ. ಒಲ್ಲೆ ಅಂತಂದ್ರೆ ಆಗೋದಿಲ್ಲ. ಅದ್ದರಿಂದ ಪ್ರಾಮಾಣಿಕವಾಗಿ ಒಂದು ತೀರ್ಮಾನಕ್ಕೆ ಬಾ. ಹತೋವಾ ಪ್ರಾಪ್ಯಸಿ.... ಜಿತ್ವಾ..? ಅದನ್ನು ಬಿಟ್ಟು ಬಿಡು. “ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನ” ಕರ್ತವ್ಯಕ್ಕಾಗಿ ಕರ್ಮ ಮಾಡು. ಇದು ಹೇಳುವವ ಯಾರು? ನಾನು ಕೂಡಾ ಕರ್ಮ ಮಾಡ್ತೇನೆ. ಈ ಮಂತ್ರವನ್ನು ನಾನು ಸೂರ್ಯನಿಂದ ಪಡೆದು ಎಷ್ಟೋ ಮಹಾನುಭಾವರಿಗೆಲ್ಲಾ ಹೇಳಿದ್ದೇನೆ. ಆವಾಗ ನಿನಗೊಂದು ಸಂದೇಹ ಬಂದೀತು. “ಯೇಲಾ ಈ ಕೃಷ್ಣ ನಾನು ಒಂದೇ ಸಂವತ್ಸರ, ತಿಂಗಳು ಮಾತ್ರ ಬೇರೆ ಬೇರೆ, ಯಾವಾಗ ಹೇಳಿದ” ಅಂತ. ಅಯ್ಯಾ, ಇದೇ ನನ್ನ ಅವತಾರದ ರಹಸ್ಯ. ಕೆಲವರು ಬೇರೆ ಬೇರೆ ಥರದಿಂದ ಹೇಳ್ತಾರೆ. “ಸ್ವಯಂಭುವಾದಂತಹ ಪರಮಾತ್ಮ, ದುಷ್ಟರ ಶಿಕ್ಷೆಗೆ ಶಿಷ್ಟರ ಪರಿಪಾಲನೆಗೆ ಇದ್ದಲ್ಲಿಂದ ಸಂಕಲ್ಪ ಮಾಡಿದರೆ ಸಾಲದೋ ಅಂತ. ಅವ ಇಳಿಯುದೋ? ಪತನವೋ? ಬಾಯಿಗೆ ಬಂದ್ದಾಗೆಲ್ಲ ಹೇಳ್ತಾರೆ. ಅದಕ್ಕೆ ಭಾವುಕರು ಭಾವುಕತನದ ಉತ್ತರ ಹೇಳ್ತಾರೆ. ನನ್ನಲ್ಲಿ ಯಾರಾದರೂ ಕೇಳಿದರೆ ತಾರ್ಕಿಕವಾಗಿ ಉತ್ತರ ಹೇಳಿಯೇನು. ಯಾಕೆ? ಭಾವುಕತನ ಎಲ್ಲರಿಗೂ ಹಿಡಿಸೋದಿಲ್ಲ. ಈಗ ನೀನು ರಾಜಕುಮಾರ ಹೌದೋ? ಯಾವುದೇ ಒಂದು ಹೊಸ ಶಾಸನ ಮಾಡಬೇಕಿದ್ರೆ ಕೆಲವು ಮೌಲ್ಯಗಳು ಹಳತಾಗಿ ಬಿಡ್ತವೆ ಒಳ್ಳೇದ್ದೆ, ಆದರೆ ವರ್ತಮಾನ ಕಾಲದಲ್ಲಿ ಆವು ಚಲಾವಣೆಗೆ ಆಗೋದಿಲ್ಲ. ಹಾಗಂತ ಹಳೆ ಮೌಲ್ಯಗಳ ಮೌಲ್ಯದಿಂದ ಕೆಲವು ಹೊಸ ಮೌಲ್ಯಗಳನ್ನು ಸೃಷ್ಟಿಸಬೇಕಾಗ್ತದೆ. ಸೃಷ್ಟಿಸಬೇಕಾಗಿದ್ರೆ ರಾಜನಾದವ ಒಬ್ಬ ಕೂತು ಆಲೋಚನೆ ಮಾಡಿದರೆ ಸಾಕೋ? ಅದಕ್ಕೆ ಸಂಬಂಧಿಸಿದವರೆಲ್ಲ ಬೇಕಲ್ಲ? ಸಂಬಂಧಿಸಿದವರು ತಾನಿದ್ದಲ್ಲಿಗೆ ಬರಲಾರರಾದರೆ ಅವರಿದ್ದಲ್ಲಿಗೆ ಇವ ಹೋಗಬೇಕೋ ಬೇಡವೋ? ಭಗವಂತನಾದ ನನ್ನ ನಿಜವಾದ, ಅವತಾರದ ಒಳಗಿನ ಉದ್ದೇಶ ಅದು. ಒಂದೊಂದ್ ಅವತಾರದಲ್ಲಿ ಕೆಲವು ಮೌಲ್ಯಗಳನ್ನುಳಿಸಬೇಕಾಗ್ತದೆ. ಆ ಮೌಲ್ಯ ಈ ಕಾಲಕ್ಕೆ ಅಳಿಸಬೇಕಾಗ್ತದೆ. ಅಳಿಸಬೇಕೆಂದ್ರೆ ನಾನು ಇದ್ದಲ್ಲಿಂದ ಸ್ವಯಂಭೂವಾಗಿ ಮಾತ್ರ ಹೇಳಲಿಕ್ಕಾಗದೋ? ನನಗೆ ಮುಖ ಯಾರು? ಋಷಿಮುನಿಗಳು, “ಬ್ರಾಹ್ಮಣೋಸ್ಯಮುಖಮಾಸೀತ್” ಹಾಗಾದರೆ ಋಷಿಮುನಿಗಳು ನಾನಿದ್ದಲ್ಲಿಗೆ ಬಗ್ಗಿ, ಯೆಲ್ಲಿಗೆ? ವಾಚಾಮಗೋಚರ - ವೇದಪುರುಷನಲ್ಲಿಗೆ, ವೈಕುಂಠಕ್ಕಲ್ಲ. ವೇದಪುರಷನಲ್ಲಿಗೆ ಬರಲಿಕ್ಕೆ ಅವರಿಗೆ ಸಾಧ್ಯವೇ? ಸಮುದ್ರದ ಅಳತೆಗೆ ಅಂತ ಉಪ್ಪಿನ ಗೊಂಬೆ ಇಳದ್ರೆ ಗೊಂಬೆ ಉಳಿತದೋ? ಉಳಿಯುವದಿಲ್ಲವಲ್ಲ. ಆವಾಗ ಇವರಿದ್ದಲ್ಲಿಗೆ

ನಾನು ಅವರಂತೆ ಬರಬೇಕಾಯ್ತು. ಈ ಗುಟ್ಟು ನಿನಗ್ಗೊತ್ತಾದೀತು. ರಾಮಾವತಾರದ ಮೌಲ್ಯಗಳನ್ನೆಲ್ಲ ನಾನು ಕೃಷ್ಣಾವತಾರದಲ್ಲಿ ಇಟ್ಟುಕೊಂಡಿದ್ದೇನೋ? ಅದನ್ನು ಭಂಡಾರದಲ್ಲಿಟ್ಟಿದ್ದೇನೆ. ಅದು ಸದ್ಯ ಚಲಾವಣೆಗೆ ಇಲ್ಲ. ರಾಮಾವತಾರದ ಮೌಲ್ಯವನ್ನು ಅಪಮೌಲ್ಯಗೊಳಿಸಿದ್ದೇನೆ ಅಂತಲ್ಲ. ಈಗ ಕೆಲವು ಹೊಸ ಮೌಲ್ಯಗಳ ಸೃಷ್ಟಿ ಬೇಕಾಗ್ತದೆ. ಇದು – "ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ" ಧರ್ಮ ಸಂಸ್ಥಾಪನೆ ಅಂತಂದ್ರೆ ಅದೇನು ಶಿಲಾ ಸ್ಥಾಪನೆ ಮಾಡಿದ ಹಾಗಲ್ಲ. ದೊಡ್ಡ ಮನುಷ್ಯರು ಹೋಗಿ ಒಂದೊಂದು ಕರಿ ಕಲ್ಲು ಹಾಕುವ ಹಾಗೆ ಹಾಕುವದಲ್ಲ ಅದು.

ಧರ್ಮದ ಮೌಲ್ಯಗಳನ್ನು ಬದಲಾವಣೆ ಮಾಡೋದು. ಈಗ ಬೇಡ; ಪರುಶರಾಮಾವತಾರದಲ್ಲಿ ತಾಯಿಯ ತಲೆ ಕಡಿದವ ನಾನು ಅಂತಲೇ ಹೇಳ್ತಾರೆ. ಭೀಷ್ಮನ ಹಾಗಿದ್ದವರು ತಾಯಿಯ ತಲೆ ಕಡಿಬಹುದೋ? ಆ ಕಾಲಕ್ಕೆ ಅದು ಮೌಲ್ಯ. ಯಾಕೆ? ತಾಯಿಯ ತಲೆಯನ್ನು ಮಗ ಕಡಿದ್ರೂ ಬದುಕಿಸುವ ಅಪ್ಪ ಇದ್ದ ಸತ್ತವರನ್ನು ಈಗ ...? ಕೂಡದು. ಇದು, ಶಾಸ್ತ್ರದ ಯಾವತ್ತೂ ಆಚಾರ ಸಂಹಿತೆಯ ಬದಲಾವಣೆ. ಬದಲಾವಣೆ ಮಾಡಬೇಕಿದ್ರೆ - ಪ್ರಭು ಸಂಹಿತೆ ಅಲ್ವೊ ಆದು? ಪ್ರಭುವೇ ಬರಬೇಕೋ ಬೇಡವೋ? ಪ್ರಭು ಯಲ್ಲಿಗೆ ಬರಬೇಕು. ಆ ವಿಭಾಗದ ಸದಸ್ಯರ ಮುಂದೆ ಬರಬೇಕು. ಋಷಿಮುನಿಗಳಲ್ಲಿ "ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ" ಇಲ್ಲದೆ ಇದ್ರೆ ಇದ್ದಲ್ಲಿಂದ ಯೇನಕ್ಕೇನೂ ಮಾಡಿಬಿಡ್ತಿದ್ದೆ. ಆದರೆ ಇದ್ದ ಜಾಗದಲ್ಲಿ ನಾನಿದ್ರೆ ನನಗೆ ದ್ವೈತ ಪ್ರತೀತಿ ಉಂಟೋ? ಶುದ್ಧ ಅದ್ವೈತವೇ ಅಲ್ವೊ?

ಹಾಗಾದರೆ ವ್ಯಾವಹಾರಿಕ ಜಗತ್ತಿನಲ್ಲಿ ಮನುಷ್ಯರನ್ನು ಆಚಾರ್ಯ ರೂಪಿನಿಂದ ತಿದ್ದಬೇಕಿದ್ರೆ ನಾನೂ ಬಂದು ಆಚರಿಸಬೇಕಾಗ್ತದೆ. "ಯದ್ಯದಾಚರತಿ ಶ್ರೇಷ್ಠಃ, ತತ್ತ ದೇವೇತರೋ ಜನಾಃ" ದೊಡ್ಡಮನುಷ್ಯನಾಗಿ ಅವನು ಯೇನ್ಮಾಡ್ತಾನೆ. ಅದನ್ನು ಬಾಕಿದ್ದವರು ಅನುಸರಿಸ್ತಾರೆ. ಇಲ್ಲದೇ ಇದ್ರೆ ಈ ಲೋಕವನ್ನು ಕೊಂದ ಬಲು ದೊಡ್ಡ ದೋಷಕ್ಕೆ ನಾನು ಹೊಣೆ ಅಗ್ತಿದ್ದೆ. ಇದು ನನ್ನ ಅವತಾರದ ರಹಸ್ಯವಪ್ಪಾ. ಹಾಗಾಗಿ ಪ್ರಪಂಚದಲ್ಲಿ ನಾನು ಅವತಾರ ಪುರಷನಾಗಿದ್ರೂ ನಾನು ಸದಾ ಕರ್ಮಿಯಾಗಿದ್ರೂ 'ನಮ್ ಕರ್ಮಾಣಿ' ಯಾವ ಕರ್ಮವೂ ನನಗಂಟೋದಿಲ್ಲ "ಪದ್ಮಪತ್ರಮಿವಾಂಭಸಿ" ಯಾಕೆ ಅಂತಂದ್ರೆ-ಯೆಲ್ಲವುದನ್ನೂ ನಾನು ಮಾಡೋದಿಲ್ವೆ? ಮಾಡ್ತೇನೆ. ನನಗೆ ಪಾಪ ಉಂಟೋ? ಪುಣ್ಯ ಉಂಟೋ? ಇಲ್ಲ. ಯಾಕಿಲ್ಲ? ನನ್ನ ಹಾಗೆ ನೀನೂ ಆಗಬಹುದು. ದೇವರಾದದ್ರಿಂದ ಪಾಪ ಪುಣ್ಯ ಇಲ್ಲ ಅಂತಲ್ಲ. ನನ್ನ ಕರ್ಮದ ಕುಶಲಗಾರಿಕೆ ಅದು. ಹಲಸಹಣ್ ತಿಂದಿದ್ಯಲ್ಲ ಸಣ್ಣ ಪ್ರಾಯದಲ್ಲಿ. ಗೊತ್ತಿಲ್ಲದವ ತಿಂದ್ರೆ ಏನೆಲ್ಲ ಆಗ್ತದೆ? ಹಣ್ಣು ಹೊಟ್ಟೆಯಲ್ಲಿ ಹೋಗ್ತದೆ. ಮೂತಿಯಲ್ಲಿ, ಕೈಯಲ್ಲಿ ಎಲ್ಲ ಮಯಣ ಅಂಟಿಕೊಳ್‌ತದೆ. ಬುದ್ಧಿವಂತನಾದರೆ ಏನ್ಮಾಡ್ತಾರೆ? ಕೈಗೆ ಸ್ವಲ್ಪ ... ಯೆಲ್ಲರಿಗೂ ಗೊತ್ತು ಯೆಣ್ಣೆ ಹಚ್ಚಿಕೊಳ್ಳತಾರೆ. ಮೊದಲೇ ಯೆಣ್ಣೆ ಹಚ್ಚಿಕೊಂಡು ಹಲಸಿನ ಹಣ್ಣು ಬಿಚ್ಚಿದ್ರೆ, ಮೇಣ ತಾಗ್ತದೋ? ಇದು ಇದು ಕರ್ಮದ ಕುಶಲಗಾರಿಕೆ.

ಯೋಗ ಅಂತಂದ್ರೆ ಅದು. ಯೆಲ್ಲ ಮಾಡು, ಯಾವುದನ್ನೂ ಅಂಟಿಸಿಕೊಳ್ಳಬೇಡ. ನನ್ನ ಹಾಗೇ ಆಗ, ಅರ್ಜುನಾ ನನ್ನ ಹಾಗೇ ಜ್ಞಾನಿಯಾಗು. ನನ್ನ ಹಾಗೇ ಯೋಗಿಯಾಗು. ಕೈಭ್ಯವನ್ನು ಬಿಟ್ಟು ಬಿಡು. ನಿನ್ನ ಛಳಿಜ್ವರ ದೂರ ಹೋಗ್ಲಿ. ಎದ್ದು ನಿಲ್ಲು. ಇಷ್ಟಕ್ಕೆಲ್ಲ ಕಲಶ ಇಟ್ಟ ಹಾಗೆ, ನಾನ್ ಹೇಗೆ ಯೆಲ್ಲವನ್ನೂ ವ್ಯಾಪಿಸಿಕೊಂಡಿದ್ದೇನೆ ಎಂಬುದನ್ನು ತೋರಿಸ್ತೇನೆ. ಈ ಕಣ್ಣಿನಿಂದ ನೀನು ಕಾಣಲಾರೆ. ನಿನಗೆ ನಾನು ನನ್ನ ಕಣ್ಣು ಕೊಟ್ಟಿದ್ದೇನೆ. ಯಾಕಂದ್ರೆ ನೀನೂ ನಾನೆ, ನಾನೂ ನೀನೆ. ಈ ದರ್ಶನ ಆಗಬೇಕಿದ್ರೆ ನಿನ್ನ ಕಣ್ಣಿನಿಂದಾಗೋದಿಲ್ಲ. ನನ್ನ ಕಣ್ಣಿನಿಂದ ನೋಡು-ಅನುಗ್ರಹ ಮಾಡಿದ್ದೇನೆ.

ನೋಡು ನನ್ನ ವಿಶ್ವರೂಪವನ್ನು.



**೧೫ ಅವತಾರ ರಹಸ್ಯ**

ಭೀಷ್ಮ ಮತ್ತು ಕೃಷ್ಣ

ಕೇದಾರಗೌಳ-ಅಷ್ಟೇ ಮುರಹರನನು ನೋಡಿ ನಗುತ ಗಾಂಗೇಯನು ಶರಣರ ಪೊರೆಯುವರೆ

ನಿರತ ವ್ಯಾಮೋಹಗಳಷ್ಟಿರಬಹುದೀತ | ಗೆನುತಾಗ ಪೇಳಿದನು || ೧೪೧ |

ಕಾಣ್ತಾ ಇದ್ದೇನಲ್ಲಾ ಈ ದೃಶ್ಯವನ್ನು! ಆದರೆ ಈ ಸ್ವಾಮಿಯೇ ಹೇಳಿದಂತೆ ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಒಂದು, ಪ್ರಮಾಣವಾಕ್ಯವನ್ನು ಅಥವಾ ಪ್ರತಿಜ್ಞಾವಾಕ್ಯವನ್ನು ಕೃಷ್ಣಾರ್ಜುನರ ಸಂವಾದದಲ್ಲಿ ಯೇನಿತ್ತು ಎಂಬುದನ್ನು ವ್ಯಾಸಾನುಗ್ರಹವನ್ನುಳ್ಳಂತಹ ಸಂಜಯ ನಮ್ಮ ಧೃತರಾಷ್ಟ್ರನಿಗೆ ಹೇಳ್ತಾ ಬರ್ತಾನೆ, ಅಲ್ಲಿಂದ ನಮಗೆ ಸುದ್ದಿ ಸಿಕ್ಕದೆ- "ನನ್ನ ಭಕ್ತರು ಯಾವಾಗಲೂ ಪತನ ಹೊಂದುವುದಿಲ್ಲ. ಭಕ್ತರ ಪತನ ಅಂತಂದ್ರೆ ನನ್ನದೇ ಪತನ, ಆದ್ದರಿಂದ ಅರ್ಜುನಾ ನನ್ನ ಭಕ್ತನಾಗು". ಸ್ವಾಮಿಯ ಅಪ್ಪಣೆಯಂತೆ ನಾಲ್ಕು ವಿಧ ಭಕ್ತರಿಗೂ ಸಂಬಂಧಿಸಿಯೋ ಅಲ್ಲ ಕೇವಲ ಆತನ ಭಕ್ತರಿಗೆ ಸಂಬಂಧಿಸಿಯೋ? ಅದಕ್ಕೆ ಉತ್ತರ ಸಿಕ್ಕಲಿಲ್ಲ. ಇಲ್ಲಿ ಈಗ ನನಗೆ ಸಂದೇಹ ಬಂದದ್ದು ಯಾಕೆ? ಅಲ್ಲಿ ಸಾರಥ್ಯ ಮಾಡ್ತಾ ಇದ್ದಾನೆ, ಹುರಿದುಂಬಿಸ್ತಾ ಇದ್ದಾನೆ - "ಹೋಡಿ, ಮುದುಕ ಎಷ್ಟು ದಿವಸಾಯ್ತು! ಎಂಟುದಿವಸ ಪೂರ್ತಿ ಎಂಟುಸಾವಿರ ಜನರ ತಲೆ ಕಡ್ದು ಈಗ ಬಂದಿದ್ದಾನೆ". ಇದೆಂತದು ಇದು? ಹಾಗಾದರೆ ತನ್ನ ಭಕ್ತರ ಪತನವನ್ನು ತಾನು ಸಹಿಸುವುದಿಲ್ಲ ಎಂದ ಸ್ವಾಮಿ ನಾಲ್ಕು ವಿಧದ ಭಕ್ತರನ್ನು ಹೆಸರಿಸಿ, ಇಂತಹ ಭಕ್ತರನ್ನು ಮಾತ್ರ ತಾನು ಪತನ ಹೊಂದುವುದಕ್ಕೆ ಬಿಡುವುದಿಲ್ಲ, ಬಾಕಿದ್ದ ಭಕ್ತರ ಬಗ್ಗೆ ನನಗೆ ಇವರ ಮುಂದೆ ಯೇನೂ ಅಲ್ಲ ಅಂತ ಹೇಳಿದನೋ? ಇದು ಜಿಜ್ಞಾಸೆ. ಹಾಗಾದರೆ ಈ ಭಕ್ತರನ್ನು ರಕ್ಷಿಸುವಂತಹ ಮಾರ್ಗದಲ್ಲಿ ಏನಾದ್ರೂ ಬೇರೆ ಬೇರೆ ವ್ಯವಸ್ಥೆಯನ್ನು ಮಾಡಿದ್ದಾನೋ ತಿಳಿಬೇಕಾಯ್ತಲ್ಲ. ಮಾತ್ರವಲ್ಲ ನನಗೆ ಸಂದೇಹ ಬಂತು, ನಾನೊಂದಾತ್ಮ ವಿಶ್ವಾಸದಿಂದ ಹೇಳಿ ಬಿಟ್ಟಿದ್ದೆ - ನನ್ನ ಭಕ್ತಿಯ ಸಾಮರ್ಥ್ಯದಿಂದ, ಆತ್ಮವರ್ಚಸ್ಸಿನಿಂದ ಸ್ವಾಮಿಯೆನಿಸಿದಂತಹ ಕೃಷ್ಣನ ಕೈಯಲ್ಲಿ ಆಯುಧ ತರಿಸ್ತೇನೆ ಅಂತ. ಇಷ್ಟರವರೆಗೂ ಆಗಲಿಲ್ಲ. ಆಗಲಿಕ್ಕೆ ಅರ್ಜುನನ ರಥವನ್ನು ನನ್ನ ಇದಿರಿಗೆ ತರಲಿಲ್ಲ ಅವ. ತಾರದೇ ಇದ್ದ ಹಾಗೇ ನನಗೆ ಉತ್ಸಾಹ ಹೆಚ್ಚಿತು. ಭೀಷ್ಮನಂತಹ ಭಕ್ತನ ಕೈಯಲ್ಲಿ ಚಕ್ರ ಹಿಡಿಯಬೇಕಾದಿತು ಅಂತ ಹೆದರಿದನೋ? ಈಗ ನೋಡಿದರೆ ಹಾಗಲ್ಲ! ಅವನೇ ಮುಂದೆ ಬಾ ಇದ್ದಾನೆ. ಹಾಗಾದರೆ ನನ್ನ ಮಾತನ್ನು ಸುಳ್ಳಾಗಿಸ್ಯಾನೋ! ಛೇ, ಅಂತೂ ತಲೆಬಿಸಿಯಾಯ್ತು ನನಗೀದೃಶ್ಯವನ್ನು ಕಾಣುವಾಗ, ಏನೇ ಆಗಲಿ, ನನ್ನ ಗುಟ್ಟನ್ನು ಸ್ಪಷ್ಟಪಡಿಸದೇ, ಅವನನ್ನೇ ಆಕ್ಷೇಪಿಸುವಂತೆ ಒಂದು ಪೂರ್ವಪಕ್ಷವನ್ನು ಮಂಡಿಸಿ, ಆ ಮಾಧ್ಯಮದಿಂದ, ಅವನ ಮುಖದಿಂದ ಉತ್ತರವನ್ನು ತರಿಸಿ, ಕೊನೆಗೆ ನನ್ನ ನಿರ್ಧಾರಕ್ಕೆ ಒಂದು ಸ್ವರೂಪವನ್ನು ಕೊಡುವ ಉದ್ದೇಶ. ಒಳ್ಳೆ ವಾದದ ಕ್ರಮ ಹೀಗೆ.... ಅಲ್ಲವೇ? ಓ ಚಿನ್ಮಯನೇ

*|ಕಾಂಭೋಜಿ-ಝಂಪೆ! ಚಿನ್ಮಯನೆ ಲಾಲಿಪುದು ಪುಣ್ಯವಂತೆಗೆ ಘೋರಾ / ರಣ್ಯಗಳು ಪಟ್ಟಣಗಳ*

*ಮಣ್ಣೆ ಹೊನ್ನಹುದು // ಪುಣ್ಯಹೀನೆಗೆ ರಾಜ್ಯ ಕಾನನವೆ ಕೇಳ್ ಮತ್ತೆ*

*ಚಿನ್ನಗಳು ಮೃತ್ತಿಕೆಗಳಂತೆ ತೋರುವುವು || ೧೪೨ ||*

ಸ್ವಾಮೀ ನಾನು; ಶ್ರೀಕೃಷ್ಣ, ನಾವೆಲ್ಲರೂ ಮೊದಲಿನಿಂದಲೂ ಊಹೆಯಿಂದ ಕೃಷ್ಣ ಅನ್ನುವಂತಹ ಈ ದೇಹ, ಮೃಣ್ಮಯವಾದದ್ದು, ಕೃಷ್ಣತ್ವ ಚಿನ್ಮಯತ್ವಕ್ಕೆ ಸಲ್ತದೆ ಅಂತ ನಂಬಿದವರು. ನಮ್ಮದು ಎಲ್ಲೆಲ್ಲಿ ನಡೀತದೆ ಅಲ್ಲಿ ಸ್ಥಾಪಿಸಿದವರು. ಈಗ ಪ್ರತ್ಯಕ್ಷ ಪ್ರಪಂಚ ಒಪ್ಪಿದ ಮೇಲೆ ಧೈರ್ಯವಾಗಿ ನಿನ್ನಲ್ಲಿದ್ದ ಪ್ರಣಯವನ್ನು ಕಾಣದೆ ಓ ಚಿನ್ಮಯನೇ ಅಂತ ಕರೆಯುವದಕ್ಕೆ ಸನ್ನದ್ಧರಾದವರು. ಮೊನ್ನೆ ನಿನ್ನ ಚಿನ್ಮಯ ಸ್ವರೂಪವನ್ನು ನಮ್ಮ ಹುಡುಗ ನೋಡಿದ ಅಂತ ಸಂಜಯ ಹೇಳಿದ. ಇನ್ನೂ ಸಂದೇಹ ಯಾಕೆ ? ಹೌದು, ಕೇವಲ ದೈಹಿಕವಾಗಿ ದೃಶ್ಯಮಾಧ್ಯಮವಾಗಿ ಕಾಳಗ ಅಂತಂದ್ರೆ ಇದೇ. ಆ ಮಾತು ಬೇರೆ ಆದರೆ ನಾವು ಅಷ್ಟಕ್ಕೇ ಇರುವವರೋ? ಆ ಮಾತು ಬೇರೆ ಆದರೆ ನಾವಷ್ಟಕ್ಕೆ ಇರುವವರೋ? ನಾವು ಅಂತಂದ್ರೆ ಸಮಷ್ಟಿಯಲ್ಲಿ - ಮನುಷ್ಯರು. ಮೈಯಿಂದ ಕಾಳಗವನ್ನು ಕ್ರಿಮಿಕೀಟಾದಿಗಳೂ ಮಾಡ್ತವೆ. ಬುದ್ಧಿ ಇದ್ದವರು ಬೌದ್ಧಿಕ ಕಾಳಗವನ್ನು ಮಾಡಬೇಕೋ ಬೇಡವೋ? ಆವಾಗ ಪ್ರಶ್ನೆ ಬರದೆ - ಸಾರಥಿಯನ್ನೇ ಉದ್ದೇಶಿಸಿ ಈ ಸೇನಾಧಿಪತಿ ವಾಗ್ಯುದ್ಧಕ್ಕೆ ತಯಾರಾಗಬಹುದೇ ಅಂತ? ಆಗಬಹುದು, ಯಾಕೆ ಆಗಬಾರದು? ನೀನು ಯುದ್ಧದಲ್ಲಿ ಉತ್ಸಾಹಿ ಎಂಬುದು ಗೊತ್ತಾಗಿದೆ. ಆದ ಕಾರಣ, ಉತ್ಸಾಹಿಯಾದವರನ್ನು ಈ ಕಡೆಯವರು ಸ್ವೀಕರಿಸಿಕೊಳ್ಳ ಬೇಕಾಗ್ತದೆ. ರಥಿಕನನ್ನು ಮಾತ್ರವಲ್ಲ ಅವನ ಸಾರಥಿ, ರಥ, ಕುದುರೆಗಳು ಇತ್ಯಾದಿ ಇತ್ಯಾದಿ. ಆದರೆ, ಹೆಚ್ಚು ಕಡಿಮೆ ಯಾವ ಯೋಧನಾದರೂ ಪ್ರತಿಯೋಧನಲ್ಲೇ ಜಿಜ್ಞಾಸೆ ಮಾಡುವುದೇ ಹೊರತು ಸಾರಥಿಯಲ್ಲಿ ಜಿಜ್ಞಾಸೆ ಮಾಡಬೇಕು ಅಂತ ತೋರಿದರೆ ನಿನ್ನನ್ನು ಬಿಟ್ಟರೆ ಬೇರೆ ಎಲ್ಲಿಂದ ಹುಡುಕಲಿ. ಕೆಲವರಿಗೆ ಅಂತವರೇ ಸಾಕಗ್ತಾದೆ, ಹಾಗಂತ ನನಗೂ ಕೆಲವರು ಇದಿರಾಗಿದ್ದಾರೆ. ಬೌದ್ಧಿಕವಾಗಿ ಬುದ್ಧಿಯುಂಟು ಅಂತ ಅಂತಲ್ಲಿ ತೋರಿಸಿಕೊಳ್ಳಲಿಲ್ಲ. ಕೆಲವರಿಗೆ ಎರಡು ಕೊಟ್ಟದ್ದೇ - ಹೋಗಿ ಮಕ್ಕಳೇ ಅಂತ. ಆದರೆ ನಿನ್ನ ಮುಂದೆ ಬರುವಾಗ ಇದ್ದ ಸಂದೇಹವನ್ನೆಲ್ಲ ನಿರಶನ ಮಾಡಿಕೊಳ್ಳೋಣ ಅಂತ ತೋರಿತು. ಬಾಕಿ ಎಲ್ಲ ಆಗ್ಯದೆ ಸ್ವಾಮಿ ನನಗೆ, ಬಾಕಿದ್ದವರ ದೃಷ್ಟಿಯಿಂದ ಆಗಿದೆ ಅಂತ ಹೇಳೋದಲ್ಲ ನಾನು. ನಾನು ಪೂರ್ಣತೃಪ್ತ ಬದುಕಿನಲ್ಲಿ. ಒಂದು ವಿಚಾರದಲ್ಲಿ ಅತೃಪ್ತ - ಹೌದೋ ಅಲ್ಲವೋ ಅಂತ ಸಂದೇಹ, ಶಾಸ್ತ್ರದ ಬಗ್ಗೆ ಬಂದದ್ದು.

ಯಾಕೆ? ಶಾಸ್ತ್ರಕ್ಕೆ ಹಲವಾರು ಮುಖಗಳು - ಧರ್ಮ ಅಂತ ಬಂದವಾಗ ಧರ್ಮಸ್ಯ ಮುಖಾನಿ ಭಿನ್ನಾನಿ', ಭಿನ್ನಾನಿ ಅಂತ ಹೇಳ್ವವ ಇದಮಿತ್ಥಂ ಅಂತ ಹೇಳಲಿಕ್ಕೆ ತಯಾರಾಗಲಿಲ್ಲ ಅಂತ ಸ್ಪಷ್ಟ ಅಲ್ಲವೋ? ಬಾಕಿದ್ದವರು ಏನ್‌ತಿಳ್ಕೊಂಡ್ರು? ಓ! ಭೀಷ್ಮನ ಪಾಂಡಿತ್ಯ ಯೇನು! ಧರ್ಮಸ್ಯ ಮುಖಾನಿ ಭಿನ್ನಾನಿ ಅಂತ ಹೇಳ್ಬಿಟ್ಟ! ಹ್ವ ಅಲ್ವೋ? ಆದರೆ ಬಾಕಿದ್ದವರು ನನ್ನಗಿಂತ ಹೆಡ್ಡರಾದ್ದರಿಂದ ನನ್ನನ್ನು ಜ್ಞಾನಿ ಅಂತ ಹೇಳಿದರು ಅಷ್ಟೇ. ನಿನ್ನನ್ನಪೇಕ್ಷಿಸುವಾಗ

ನಾನು ಇನ್ನೂ ಕಲಿಯುವುದಕ್ಕೆ ಎಷ್ಟೋ ಬಾಕಿ ಉಂಟು. ಜಗದ್ಗುರು ನೀನು, ಲೋಕಗುರು ನೀನು, ಆ ಕಾರಣ, ಸಂದೇಹ ನಿವೃತ್ತಿಯೆಲ್ಲಿ? ಈ ಶಾಸ್ತ್ರದ ಒಂದು ಮುಖದಲ್ಲಿ.

ಈ ಉತ್ಸಾಹಕ್ಕೆ ಕಾರಣ ಏನು? ನೀನ್ ಎಷ್ಟೋ ಹೇಳಿದಿಯಂತೆ ನಮ್ಮ ಹುಡುಗನಿಗೆ. ಆ ಮಧ್ಯೆ ಒಂದು ಶಬ್ದ ಈಗಲೂ ನನ್ನ ತಲೆ ತಿನ್‌ತಾ ಉಂಟು. ಯಾವುದರದೋ ಗತಿ ಬಹಳ ಗಹನ. ಏನದು? 'ಕರ್ಮಣೋ ಗಹನಾ ಗತಿಃ' ಅಂತ ಶ್ರೀಮುಖದಿಂದ ಬಂತಂತೆ ಅಲ್ವೋ? ಈ ಪ್ರಶ್ನೆ ನನ್ನಲ್ಲಿ ಹುಟ್ಟಿ ಬಹಳವರ್ಷ ಆಯ್ತು. ಬಹಳ ಗಹನ ಅಂತ ಆದರೆ, ನಿನಗೂ ಗಹನವಾದೀತೋ? ಆಗಲ್ಲಿಲ್ಲ ನಿನಗೂ ಆಯ್ತು ಅಂತಾದ್ರೆ ಬಿಟ್ಟು ಬಿಡು. ನೀನೂ ಅಲ್ಲ ನಾನೂ ಅಲ್ಲ, ಕರ್ಮವೇ ಪರಬ್ರಹ್ಮ ಅಂತ ಪೂಜೆ ಮಾಡಲಿಕ್ಕೆ ಹೇಳ್ಳೊ. ಈ ಇತ್ಯರ್ಥಕ್ಕಾಗಿ ಈ ಕರ್ಮದ ಗತಿಯ ಕುರಿತಾಗಿಯೇ ನನ್ನ ಸಂದೇಹ. ನಿವೃತ್ತಿಗೆ ಸನ್ನಿಧಾನವನ್ನು ಆಚಾರಪೀಠದಲ್ಲಿ ಗುರುತಿಸುವುದು. ಆದೀತಲ್ಲ?

ಪಾಪ ಪುಣ್ಯ ಅಂತ ಎರಡು ಶಬ್ದ ನಮ್ಮ ಶಾಸ್ತ್ರದಲ್ಲಿ, ನಿನ್ನ ಮುಖದಿಂದದಲೂ ಬಂತಂತೆ ಸುಕೃತಿಗಳು ಅಂತ. ಸುಕೃತಿವಿಶೇಷದಿಂದಲೇ ಎಷ್ಟೋ ಜನ ಹತ್ತಿರವಾಗ್ತಾರೆ ಅಂತ 'ಚರ್ತುವಿಧಂ ಭಜಂತೆ ಮಾಂ ಜನಃ ಸುಕೃತಿನೋರ್ಜುನ'. ಸುಕೃತಿ ಅದನ್ನೇ ಪುಣ್ಯ ಅಂತೇಳುವುದು. ಪಾಪ ಅಂತೇಳುವುದು? ದುಷ್ಕರ್ಮ. ಅದರ ಫಲಕ್ಕೂ ಹೆಸರು ಅದೇ ಪಾಪ. ಅಂತಾದ್ದರಿಂದ ಪ್ರಪಂಚದಲ್ಲಿ ನಮಗೆ ವ್ಯಕ್ತವಾಗ್ತದೆ, ಹ್ಯಾಗೆ? ಪುಣ್ಯಾತ್ಮರು ಮಣ್ಣು ಮುಟ್ಟಿದರೂ ಚಿನ್ನವಾಗುವುದು; ಪಾಪಿ ಚಿನ್ನ ಮುಟ್ಟಿದರೂ ಮಣ್ ಆಗುವುದು, ಹೀಗಾಗ್ತದೆ. ಆದರೆ ಉದ್ದೇಶಕ್ಕೆ ಅನುಸರಿಸಿ ಫಲ ಸಿದ್ಧಿಯಾಗುವುದಿಲ್ಲ, ಹಾಗಾದರೆ ಈ ವಿಪರೀತ ಫಲ ಯಾಕಾಗ್ತದೆ.? ಆವಾಗ ಪುಣ್ಯಫಲ ಇದ್ದೆ ಹಿಂದಿನದು ಅಂತ ಪುಷ್ಟಿ ಸಿಕ್‌ತದೆ. ಹಾಗಾಗಿ ಅಲ್ಲವೋ, ಪುಣ್ಯಾತ್ಮರು ಕಾಡಿನಲ್ಲಿದ್ದರೂ ಅರಮನೆ, ಅರಸನ ಬೋಗಕ್ಕಿಂತಲೂ ಹೆಚ್ಚಿನ ಭೋಗ ಅನುಭೋಗಿಸುವುದು. ಅವರು ಮಾತ್ರ ಭೋಗವನ್ನನುಭವಿಸುವದಲ್ಲ, ಸಾವಿರ ಜನ ಬಗ್ಗೆ ಅವರಿಗೂ... ಅರಮನೆಯಲ್ಲಿದ್ದವರೂ ಎಷ್ಟೋಸಲ ಬಯಸಿದರೂ ಒಂದೊ ಬಾಯಿರುಚಿ ಕೆಟ್ಟಿರುವುದು, ಇಲ್ಲದಿದ್ರೆ ಜೀರ್ಣವಾಗದೆ ಇದ್ದಾವಾಗ ಮಲಗಿದ್ದ ಹಾಸಿಗೆಯಲ್ಲಾದರು ಬಂಡೆಕಲ್ಲಿನ ಅನುಭವ! ಇದೆಲ್ಲ ನಾವ್ ಕಾದ್ದೇವೆ. ಇದು ನಾನು ನನ್ನ ಧೀರ್ಘಕಾಲದ ಬದುಕಿನಲ್ಲಿ ಕಂಡಂತಹ ಸತ್ಯ. ಅಂಥಹ ಪ್ರತ್ಯಕ್ಷ ಪ್ರಮಾಣದಿಂದ ನಾನೊಂದು ತೀರ್ಮಾನಕ್ಕೆ ಬಂದೆ ಸ್ವಾಮಿ **"ತಸ್ಮೈ ನಮಃ ಕರ್ಮಣೇ"...** ಅಲ್ಲಲ್ಲ, ಪ್ರಾರಬ್ಧ ದೊಡ್ಡದು; ಇದರ ಮುಂದೆ ಯಾವುದೂ ಅಲ್ಲ. ಆವಾಗ ಮತ್ತೊಂದು ಸಂದೇಹ ಬರ್ತದೆ. ಈಗ ಒಬ್ಬ ಕಳ್ಳನನ್ನು ಯಾಕೆ ಕಳ್ಳನ ಮಾಡ್ಯಯಾ ಅಂತ ಕೇಳಿದರೆ ಪ್ರಾರಬ್ಧ ಅಂತ ಹೇಳ್ತಾನೆ. ಯಾಕೆ ಸಿಕ್ಕಿಬಿದ್ದಿದ್ದಿ ಅಂತ ಕೇಳಿದರೆ ಪ್ರಾರಬ್ಧ ಅಂತ ಹೇಳ್ತಾನೆ. ಇಷ್ಟಕ್ಕೆ ಒಪ್ಪಿ ಬಿಡ್ತನೋ; ಆ ಕಳ್ಳನನ್ನೂ ಹಿಡ್ಕೊಂಡು ಕೆಲವು ಜನ ದಂಡಿಸ್ತಾರೆ, ಹೊಡೀತಾರೆ. "ಏ ಯಾಕ್ಹೊಡೀತೀರಿ? "ಅವನ ಪ್ರಾರಬ್ಧದಿಂದ ಅವ ಕಳ್ಳತನ ಮಾಡಿದ್ದಾನೆ. ಆವಾಗ ಇವ್ ಹೇಳ್ತಾನೆ "ನನ್ನ ಪ್ರಾರಬ್ಧದಿಂದ ನಾನಿವನಿಗೆ ಹೊಡೇತೇನೆ", ಅಂತು

ಇಂತೂ ಈ ಪ್ರಾರಬ್ಧ ಸಂಪೂರ್ಣ ಉಂಟು ಅಂತ ಸಂದೇಹ ಬರ್ತದೆ. ಇಲ್ಲ. ಅಲ್ಲಗಳೆಯುವುದಕ್ಕೆ ಪ್ರತ್ಯಕ್ಷ ಕಾಣ್ತೇನೆ. ಇಂತಹ ತುಮುಲದಲ್ಲಿ ಸಿಲುಕಿದ್ದೇನೆ. ಈ ಸೃಷ್ಟಿಕರ್ತ ಅಂತ ಒಬ್ಬನಿದ್ದಾನಲ್ಲವೋ; ಬ್ರಹ್ಮ ಅಂತ ಅವನ ಹೆಸರು.

|*ಕಾಂಭೋಜಿ-ಝಂಪೆ ಹೇಳಲಾರೆನು ಕರ್ಮ ಸಕಲರನು ಬಾಧಿಪುದು ಶೂಲಿಯನ್ನು ಬಳಲಿಸಿತು*

*ಬ್ರಹ್ಮನ ಕಪಾಲ // ಕೂಲಿಯಾಳುಗಳಂತೆ ಸೃಷ್ಟಿಗೆಯ್ಯುವನಜನು* |

*ಶ್ರೀಲಲನೆಪತಿ ನಿನ್ನ ಬೆನ್ನ ನಟ್ಟಿಹುದು* ||*೧೪೩* |

ಸ್ವಾಮಿ ಈ ಬ್ರಹ್ಮನ ಕಥೆಯನ್ನು ಪೇಳಲಾರೆನು. ನಂಬುಗೆ ಅಡ್ಡ ಬರದೆ ಅದು ಅಷ್ಟೆ. ಆದರೆ ಶ್ರದ್ಧೆಯನ್ನು ಒಂದು ನಿಮಿಷ ಬದಿಗಿರಿಸಿ, ಕೇವಲ ವಿಚಾರಕ್ಕೆ ಕೆಲಸ ಕೊಟ್ಟಾವಾಗ; ಹುಂ, ಯೇನು ಸ್ವಾಮಿ! ಶಿವದೇವರು ಮೃತ್ಯುಂಜಯ!! ಕಥೆ ಯೆಂಥದ್ದು? ಹ್ಹ ಹ್ಹ ಅಂತಹ ಶಿವ ಶಂಕರ ಯೆಲ್ಲ ಹೌದು ಆದರೆ ಬ್ರಹ್ಮ ಕಪಾಲ ಹಿಡ್ಕೊಂಡು ಕೆಲವು ವರ್ಷ ಊರೂರು ತಿರ್ಗಿದ್ದು ಪ್ರಾರಬ್ಧ ಅಲ್ಲದಿದ್ರೆ ಬೇರೆ ಎಂಥಾದ್ದು ಅದು? ಕರ್ಮದೋಷವೆ. ಬ್ರಹ್ಮನಿಗೆ ತಲೆ ಹೋಗಲಿ ಅದೂ ಒಂದು ಗ್ರಹಚಾರವೇ. ತಲೆ ಹೋದ್ರೂ ತಲೆನೋವು ಹೋಗ್ಯದೋ? ಒಂದ್ ನಿಮಿಷ ಸುಮ್ಮನಿರುವುಕ್ಕಾಗೋದಿಲ್ಲ ಈ ಬ್ರಹ್ಮನಿಗೆ, ಸೃಷ್ಟಿ ಮಾಡ್ತಾ ಹೋಗೋದೆ. ಯಾಕೆ? ಯಾವುದರದ್ದೋ ಒತ್ತಡ. ಇನ್ಯಾವುದು ಒತ್ತಡ? ಪ್ರಾರಬ್ಧ, ಅದು ಕರ್ಮದೋಷ. ಶಿವನಿಗೆ ಬ್ರಹ್ಮಕಪಾಲ, ಬ್ರಹ್ಮನಿಗೆ ಈ ಕರ್ಮಕಪಾಲ. ಅಂದರೆ ಇಬ್ಬರನ್ನೂ ಪ್ರಾರಬ್ಧವೇ. ಹಾಗಾದರೆ ಏನು? ಬ್ರಹ್ಮನನ್ನು ಬಿಟ್ಟುಬಿಡಿ, ದೇವರ ಸಾಲಿನಿಂದ ಸ್ವಲ್ಪ ಕೆಳಗಿಳಿಸಿ. ಈ ಬ್ರಹ್ಮರುದ್ರಾದಿಗಳನ್ನೆಲ್ಲ ಸಂಪೂರ್ಣ ದೇವರು ಅಂತ ಹೇಳಿದರೆ ಪ್ರಾರಬ್ಧದ ಉಪದ್ರವ ಬರ್ತದೆ.

ಇನ್ನು, ನೀನು ಸಾಕ್ಷಾತ್ ನಾರಾಯಣ. ನಿನಗೂ ಪ್ರಾರಬ್ಧ ಬಿಡಲಿಲ್ಲ! ಮತ್ಸ್ಯನಾಗಿ, ಕೂರ್ಮನಾಗಿ, ವರಾಹನಾಗಿ, ಇನ್ನೂ ಏನೇನೋ ಆಗಿ... ಇದೇನು, ಹತ್ತು ಮುಗಿದು ಹನ್ನೊಂದನೆಯ ಅವತಾರವೋ ಸೂತಾವತಾರ! ಹೀಗಿರುವಾಗ ನಮ್ಮ ಹುಡುಗನ ದುಷ್ಕರ್ಮಗಳನ್ನು ಯಾಕೆ ನಿಂದಿಸಬೇಕು. ಹದಿನಾಲ್ಕು ಲೋಕವನ್ನು ರಕ್ಷಿಸುವವನಿಗೆ ಹೀಗೆ ಪ್ರಾರಬ್ಧ ಬೆನ್ನು ಬಿಡುವುದಿಲ್ಲ ಅಂತಾದ್ರೆ, ಮತ್ತೆ ಯಾರನ್ನು ಯಾರು ನಿಂದಿಸಿ ಏನು ಪ್ರಯೋಜನ. ಒಟ್ಟಿನಲ್ಲಿ ತಸ್ಯೆ ನಮಃ ಕರ್ಮಣೇ ಅನ್ನದೆ ಬೇರೆ ಯೇನು ಹೇಳುವುದಕ್ಕೆ ಸಾಧ್ಯ?

**ಕೃಷ್ಣನ ಉತ್ತರ :-** ಆಚಾರ್ಯರೇ, ಬಹಳ ಸ್ವಾರಸ್ಯಕರವಾದ ಸಮಸ್ಯೆಯಿದು. ತಮಗೆ ಅಂತಲ್ಲಾ ಅನೇಕಮಂದಿ ವಿದ್ವಾಂಸರಿಗೆ ಇದೊಂದು ಸಂದೇಹ ಉಂಟು ನಾವು ದೇವರೂ ಅಂತ ಪೂಜಿಸುವ ಇವನಿಗೂ ಏನು ಬಂದದ್ದು ಈ ಕರ್ಮಬಂಧನ ಅಂತಲ್ವೇ? ತಮಗೊತ್ತುಂಟು ಗೋತ್ತಿಲ್ಲಾ ಅಂತಲ್ಲಾ ಆದರೆ ತಮಗೆ ಗೊತ್ತಿದ್ದದ್ದನ್ನು ಶ್ರೀಕೃಷ್ಣನ

ಮುಖದಿಂದಲೂ ಹೇಳಿಸಿ, ತಮ್ಮ ನಂಬುಗೆಯ ಮೇಲೊಂದು ಮುದ್ರೆಯನ್ನು ಒತ್ತಿಸೋಣ ಅಂತ ತಾವು ಹೊರಟಿದ್ದೀರಿ, ಚಿಂತಿಲ್ಲ. ಒಳ್ಳೆಯ ಪ್ರಶ್ನೆ, ಬೇಕಾದದ್ದು ಅದು. ನನ್ನಂತವರು ಏನಾದರೂ ಕೈ ಕಟ್ಟಿ ನಮ್ಮಲ್ಲಿ ತಪ್ಪಿಲ್ಲ ಅಂತೇಳಬೇಕಾಗಿದ್ರೆ ವರ್ತಮಾನಕಾಲದಲ್ಲಿ ಆಚಾರ್ಯಭೀಷ್ಮರನ್ನು ಬಿಟ್ರೆ ಬೇರೆ ಜನ ಯಾರು ಸಿಕ್ತಾರೆ ಹೇಳಿ! ಆದ್ದರಿಂದ ನಿಮ್ಮ ದ್ವಾರಾ, ಪ್ರಪಂಚಕ್ಕೆ ಕೃಷ್ಣನದ್ದಾದಂತಹ ಈ ಕರ್ಮದ ಸುಭಗತನವನ್ನು ಪ್ರಕಟಪಡಿಸೋಣ. ಇದು ಕೇವಲ ರಣಕ್ಷೇತ್ರವಲ್ಲ, ಧರ್ಮಕ್ಷೇತ್ರವೂ ಹೌದು, ಆದ್ದರಿಂದ ಆಲಿಸಿ ಆಲಿಸಿ.

*ಮಾರವಿ-ಏಕತಾಳ॥ ಗರುಡಧ್ವಜನದ ಕೇಳುತ ಗಂಗಾ | ತರಳನ ನುಡಿಗಳನು*

ದುರಿತಗಳೊದಗದ ತೆರದೊಳು ಶರಣರ | ಪೊರೆವುದೆ ಬಿರುದೆನ್ನ || ೧೪೪ |

ಆಚಾರ್ಯರೇ, ಶುದ್ಧವಸ್ತುವೊಂದುಂಟು ಅದು ಸತ್ಯ ಅಂತ ಕರೆಯಲ್ಪಡುತ್ತದೆ ಎಂಬಲ್ಲಿಗೆ ನಾವು ಹೋದಾಗ ವಾದವೂ ಇಲ್ಲ, ಪ್ರತಿವಾದವೂ ಇಲ್ಲ. ವ್ಯಾವಹಾರಿಕವಾಗಿ ಸೃಷ್ಟಿ ಮಾಡುವವನೊಬ್ಬ, ಪಾಲನೆ ಮಾಡುವವನೊಬ್ಬ, ಲಯಕರ್ತ ಒಬ್ಬ, ಹೀಗೆ ಒಂದು ಸತ್ಯಸ್ವರೂಪಕ್ಕೆ ಮೂರು ರೂಪವನ್ನು ಕಲ್ಪಿಸಿ, ತ್ರಿಮೂರ್ತಿಗಳೂ ಅಂತ ನಾವು ಒಪ್ಪಿದಾಗ, ದೇಹ ಉಂಟು, ಬುದ್ದಿ ಉಂಟು, ಚಿತ್ತ ಉಂಟು. ಈ ದೇಹ, ಬುದ್ಧಿ, ಚಿತ್ತ ಇದ್ದಾವಾಗ ಜ್ಞಾನರೂಪಿಯಾದಂತಹ ಭಗವತ್ಸರೂಪಗಳೇ ಆದರೂ, ಕ್ರಿಯಾಶಕ್ತಿಯನ್ನು ಪ್ರಕಟಿಸದೇ ಇರುವುದಕ್ಕೆ ಸಾದ್ಯವೇ? ಈ ಕ್ರಿಯಾಶಕ್ತಿ ಹುಟ್ಟಿ, ಕ್ರಿಯೆಗೆ ಸ್ವರೂಪ ಬರಬೇಕಾಗಿದ್ದರೊಂದಿಚ್ಛಾಶಕ್ತಿಯೂ ಪ್ರಬಲವಾಗಿರಬೇಕು. ಆದ್ದರಿಂದ ಜ್ಞಾನಶಕ್ತಿಯಾದರೂ ಇಚ್ಛಾಶಕ್ತಿಯಿಂದ ಕ್ರಿಯಾಶಕ್ತಿಯನ್ನು ಅಳವಡಿಸಿಕೊಂಡು ಈ ಪ್ರಪಂಚದಲ್ಲಿ ವ್ಯವಹರಿಸ್ತದೆ ಎಂಬ ನ್ಯಾಯವನ್ನು ಒಪ್ಪಿದಾವಾಗ, ನಾರಾಯಣನಾದ ನನಗೂ ದೇಹ ಇದೆ, ನನಗೂ ಅವತಾರ ಇದೆ, ಈ ಕೃಷ್ಣನಿಗೂ ಇದೆ ಅನ್ನುವಾಗ ಕರ್ಮಬಾಹಿರತ್ವ ನಮಗುಂಟಾಗುವುದೇ ಇಲ್ಲ. ನಾವು ಕರ್ಮವನ್ನು ಮಾಡಿಯೇ ತೀರಬೇಕಾಗ್ತದೆ. ಆದರೆ ಕೆಲವರಿಗೆ ಕರ್ಮ ಅಂಟಿಕೊಳ್ಳುತ್ತದೆ. ಕೆಲವರಿಗೆ ಕರ್ಮ ಅಂಟಿಕೊಳ್ಳುವುದಿಲ್ಲ. ಈ ವಿವೇಚನೆ ಮುಖ್ಯ. ಇದು ಹೇಗೆ ಅಂತಂದ್ರೆ ಬಾಕಿದ್ದವರು ಕರ್ಮಫಲದ ಒತ್ತಡದಿಂದ ಈ ಪ್ರಪಂಚದಲ್ಲಿ ಬಿದ್ದು, ಅದರ ಪ್ರೇರಣೆಯಂತೆ ವ್ಯವಹರಿಸ್ತಾ ಹೋಗ್ತಾರೆ. ಆದ್ದರಿಂದ ಇವರು ಕರ್ಮಬಂಧನಕ್ಕೆ ಸಿಲುಕಿರೋದು. ದೇವರಾದಂಥವು, ನಾನೇ ಅಂತಿಳ್ಕೊಳ್ಳಿ; ಯಾವ ಕರ್ಮವನ್ನು ಮಾಡುವದಿದ್ರೂ ಕೂಡ ಕರ್ಮಕ್ಕೆ ನಾವು ಅಂಟಿಕೊಳ್ತವೆಯೇ ಹೊರತು, ಕರ್ಮ ನಮಗೆ ಅಂಟಿಕೊಳ್ಳುವುದಿಲ್ಲ. ಇದೇ ಇರೋದು ಕರ್ಮದ ಕುಶಲಗಾರಿಕೆ, ಕರ್ಮಯೋಗದ ರಹಸ್ಯ ಇದು. ಆದರೆ ಕಾಣುವವರ ಕಣ್ಣಿಗೆ ಕೃಷ್ಣನೂ ದುಡೀತಾನೆ, ಬಾಕಿದ್ದವರನ್ನೂ ದುಡಿಸ್ತಾನೆ. ಕೃಷ್ಣನಂತವನು ಏನ್‌ಮಾಡ್ತಾನೆ? ಕರ್ಮಕ್ಕಾಗಿ ಕರ್ಮವನ್ನು ಮಾಡ್ತಾನೆ.

ಹಗುರವಾಗಿ ಹೇಳೋಣ ತಮಗಾಗಿ ಅಲ್ಲ ಊರಿನವರಿಗೆ ಅರ್ಥವಾಗುವುದಕ್ಕೆ. ಒಂದು ವ್ಯಕ್ತಿ ನೀರಿಗೆ ಬಿದ್ದಿರ್ತದೆ ಈಜು ಬರುವುದಿಲ್ಲ. ನೀರು ಕುಡಿದು ಪ್ರಾಣೋತ್ಕ್ರಮಣ

ಅವಸ್ಥೆಗೆ ಮುಟ್ಟಿರ್ತದೆ. ಅಷ್ಟು ಹೊತ್ತಿಗೆ ಜೀವಕಾರುಣ್ಯವುಳ್ಳಂತಹ ವ್ಯಕ್ತಿಯೊಬ್ಬ ಆ ಮಾರ್ಗದಲ್ಲಿ ಬಂದವ, ಬಿದ್ದವ್ಯಕ್ತಿಯನ್ನು ಎತ್ತುವುದುಕ್ಕೆ ಅವನು ಉಟ್ಟ ಬಟ್ಟೆಯಲ್ಲಿ ಧುಮುಕ್ತಾನೆ, ಸತ್ಯವಾದರೂ ಬಿದ್ದವನ ಸ್ಥಾನ ಅವನದಲ್ಲವಲ್ಲ; ಸ್ವಬುದ್ಧಿಯಿಂದ ಹಾರಿ ಅವನನ್ನು ರಕ್ಷಸಿದವನದು? ಅದರಂತೆ ಈ ಪ್ರಪಂಚದಲ್ಲಿ ದೇವನಾದಂತಹ ನಾನು ಭಕ್ತರ ಉದ್ಧಾರಕ್ಕಾಗಿ ಭಕ್ತರನ್ನು ಈ ಸಂಸಾರ ಸಾಗರದಿಂದ ಹಿಡಿದೆತ್ತಿ ಅವರನ್ನು ಪಾರು ಗಾಣಿಸುವುದಕ್ಕಾಗಿ ನಾನಾ ರೂಪವನ್ನು ತಾಳಿಕೊಂಡು ಬರೆನೆ. ಹಾಗೆ ಅವರನ್ನು ಉದ್ಧರಿಸ್ತೇನೆ.

ಈ ಭಕ್ತರನ್ನು ಉದ್ಧರಿಸುವುದಕ್ಕಾಗಿ ಬಿದ್ದ ಮಗುವನ್ನು ಎತ್ತುವುದಕ್ಕೆ ತಾಯಿಯಾದವಳು ಸ್ವತಃ ಬಾಗಬೇಕಾದದ್ದು ಅನಿವಾರ್ಯ ಎಂಬಂತೆ ಅವಳು ಸೊಂಟ ಬಗ್ಗಿಸಿ ಮಗುವನ್ನು ಎತ್ತಿದಾವಾಗ ಒಂದು ಹೆರಿಗೆಯಲ್ಲಿ ಅವಳ ಸೊಂಟಬಗ್ಗಿತು, ವೃದ್ಧೆಯಾದಳು ಎನ್ನುವವರು ಪಾಮರರಲ್ಲವೇ ಆಚಾರ್ಯರೇ? ಅವಳು ಮಗುವನ್ನು ಯೆತ್ತುವುದಕ್ಕಾಗಿ ಬಾಗಿದ್ದು, ಯೆತ್ತಿದ ಮಾತ್ರಕ್ಕೆ ಪುನಃ ಅವಳು ಮೊದಲಿನಂತೆ ಆಗ್ತಾಳೆ. ಇದು ನನ್ನ ಅವತಾರದ ರಹಸ್ಯ, ಕರ್ಮವನ್ನು ನಾನು ಮಾಡುವುದು ಭಕ್ತರಿಗಾಗಿ, ಆ ಫಲವನ್ನು ನಾನೊಲಿಸಿಕೊಳ್ಳುವುದಿಲ್ಲ. ಹಾಗಾಗಿ ಫಲಹೇತುಕವಾಗದೆ ಇದ್ದಂತಹ ನಿಷ್ಕಾಮ ಕರ್ಮವನ್ನು ಭಕ್ತರಿಗಾಗಿ ದೇವರು ಮಾಡ್ತಾನೆ. ಭಕ್ತರನ್ನು ಉದ್ಧರಿಸುವುದು ಬಿರುದು ನನಗೆ ಇಷ್ಟು ಸರಿ ಹೌದಲ್ವೇ?

*ಕಾಂಭೋಜಿ-ಏಕತಾಳ॥ ಪಂಕಜಾಕ್ಷ ಭೇದವೇ | ಕಿಂಕರನಲ್ಲವೆ ನಾನು |*

ಶಂಕೆಯೇನ್ನೆ ಪಾರ್ಥನಧಿಕ | ಕಿಂಕರನಾಗಿಹನೇ ನಿನಗೆ || ೧೪೫ ||

ಕೃಷ್ಣ ಇದನ್ನು ನಾನು ಒಪ್ಪಿಕೊಳ್ಳಬೇಕೋ? ಎಂಥೆಂಥವರು ಒಪ್ಪಿಯಾಗ್ಯದೆ ಈ ಮೋದಲೇ, ಬಾಕಿ ಇದ್ದವರಿಗೆಲ್ಲಾ ಹಿಂದಿನಿಂದ ಒದೆತ ನಿನಗೆ ಅದು ಸೆಳೆತ! ಇದು ಗೊತ್ತಿಲ್ಲದೆ ನಾನು ಕೇಳಿದಲ್ಲ. ಈ ನಿನಗೆ ಭಕ್ತರ ಸೆಳೆತ ಜೋರು ಅಂತಾಗುವಾಗ ಏನೇ ಆಗಲಿ ಕಡಿವಾಣ ಇರುವುದು ನಮ್ಮ ಕೈಯಲ್ಲಿ ಅಂತಾಯ್ತಲ್ಲ. ಹಾಗಾದರೆ ಈ ದೇವರು ಭಕ್ತರಿಗೆ ಅಧೀನ. ಅದು ಹೌದಾದರೆ, ನಾನು ನಿನ್ನ ಭಕ್ತ ಹೌದೋ ಅಲ್ವೋ? ಓ ಪಂಕಜಾಕ್ಷ ಇದೊಂದು ಸಂದೇಹ ನನಗೆ. ಅರ್ಜುನನಿಗೆ ನೀನು ಸಾರಥಿಯಾಗಿದ್ದೀ. ಈಗ ಇಬ್ಬರೂ ನಿನ್ನ ಭಕ್ತರು, ನಿನ್ನ ಸಮಕ್ಷಮದಲ್ಲಿ ಹೋರಾಟಕ್ಕೆ ಬದ್ಧರು. ಹಿಂತೆಗೆಯುವುದಕ್ಕೆ ಅರ್ಜುನನಿಗೆ ಆಗೋದಿಲ್ಲ, ಬಂದ ಮೇಲೆ ಹಾಗೆ ಹೋಗಲಿಕ್ಕೆ ನನಗೂ ಆಗೋದಿಲ್ಲ. ಹೌದಲ್ಲ? ನಿನಗೆ ಕಷ್ಟ ಆಗ್ತದೋ ಅಂತ? ಬೇರೆ ಏನೂ ಅಲ್ಲ, ಭಕ್ತರಲ್ಲಿ ತಾರತಮ್ಯ ಏನೂ ಇಲ್ಲಲ್ಲ? ಹಾಗಿರುವಾಗ ನಿನ್ನಲ್ಲಿಯೂ ತಾರತಮ್ಯ ಇರಬಾರದಲ್ಲ? ಈಗ ನೀನು ಅರ್ಜುನನ ಸಾರಥಿಯಾಗಿರುವೆ. ಅರ್ಜುನನ ಸಾರಥಿಯಾಗಿರುವಾಗ, ಅರ್ಜುನ ರಕ್ಷಿಸಲ್ಪಟ್ರೆ ಭೀಷ್ಮ ಭಕ್ತ ಸೋತ, ಭೀಷ್ಮ ಭಕ್ತ ಗೆದ್ದ, ಅರ್ಜುನ ಬಿದ್ದ! ಆವಾಗ ದೇವರು ಭಕ್ತರನ್ನು ಕಾಪಾಡ್ತಾನೆ ಎಂಬ ಸಿದ್ಧಾಂತವೇ ನಾಶ ಹೊಂದ್‌ತದೆ. ಸ್ವಾಮಿ ನೀನು ಒಂದು

ತಿಳಕೋಳ್ಬೇಕು.... ಈ ವಾದವನ್ನು ನಾನು ಮಂಡಿಸುವ ಕಾಲ ಯಾವುದು ಅಂತ. ಕೌರವರೂ, ಪಾಂಡವರು, ಅಂದ್ರೆ ಅರ್ಥ ಆಯ್ತಲ್ಲ ಈ ಎರಡು ತರದ ವ್ಯಕ್ತಿತ್ವವು ಪ್ರಪಂಚದಲ್ಲಿ ಜೀವಂತವಾಗಿರುವಾಗ, ನಾನ್ ಈ ವಾದವನ್ನು ಮಂಡಿಸುತ್ತೇನೆ. ಈಗ್ಳೊಂದ ಅಪ್ಪಣೆ ಆಗ್ಬೇಕು. ಭಕ್ತನನ್ನು ಕಾಪಾಡುವ ಪ್ರಭು ಈ ಕೃಷ್ಣ, ಅದನ್ನು ಹೌದು ಅಂತ ತೋರಿಸುವುದು ಹೇಗೆ? ಅರ್ಜುನನಿಗೆ ಸಾರಥ್ಯ ನೀನೂ ಮಾಡಿದ್ದೆ. ಏಕಕಾಲದಲ್ಲಿ ಒಂದೇ ವೃತ್ತಿ ದೇವರಿಗೆ ಮಾಡಲಿಕ್ಕೆ ಸಾಧ್ಯವಿಲ್ಲ. ಹೀಗೆ ಮಾಡುವ, ಈಗ ಇಷ್ಟು ದಿವಸ ಅಲ್ಲಿ ಆಯ್ತಲ್ಲ ಸಾರಥ್ಯ. ಇನ್ನು ಉಳಿದ ದಿವಸ ಸ್ವಲ್ಪ ಈ ಕಡೆಯಿಂದ ಮಾಡಿದರೆ ಭಕ್ತರ ಬಗ್ಗೆ ದೇವರಿಗೆ ಪಕ್ಷಪಾತ ಇಲ್ಲ ಅಂತ ಆಗ್ತದೆ. ಇದೊಂದು ಸಿದ್ಧಾಂತ ಸ್ಥಾಪಿಸಲಿಕ್ಕಾಗದೆ. ಹಾಗೆ ಮಾಡಹುದು ಅಲ್ವೋ? ಅರ್ಜುನ ದೊಡ್ಡವನೇನೂ ಅಲ್ವಲ್ಲ? ನಾವು ಸಮಾನರು ಆದ ಕಾರಣ ನನಗೆ ಸಾರಥ್ಯ ಮಾಡೋದೊಳ್ಳೆದು ದೇವರಿಗೆ ಪಕ್ಷ ಪಾತವಿಲ್ಲ ಅಂತ ಆಗೋದಕ್ಕೆ ಅಲ್ವೇ?

|ಮಾರವಿ-ಏಕತಾಳ॥ ಭೇದವು ನಿಮ್ಮೊಳಗುಭಯರ ಪಾಲಿಪ | ನಾದಿಪಿತಾಮಹನು |

ಕಾದಿಹ ತೈಲವ ತೊಡೆದನೆ ಧರ್ಮಜ | ಹೋದೆಯೋ ಕುರುಬಲಕೆ || ೧೪೭ |

ತಾವು ಪರಮ ಭಕ್ತರು; ಅಲ್ಲ ಅಂತ ಅಲ್ಲಗಳೆಯುವುದಕ್ಕೆ ನೀವಾರಾಧಿಸಿದ ಆ ವಾಸುದೇವ ಮೂರ್ತಿಯಾದ ನನಗೆ ಹಕ್ಕಿಲ್ಲ ಒಪ್ಪಿಕೊಳ್ತೇನೆ. ಆದ್ರೆ ಒಂದು ರಹಸ್ಯ ಇದೆ ಇದರಲ್ಲಿ, ದೇವರಲ್ಲಿ ಭಕ್ತರಿಗೆ ತಾರತಮ್ಯ ಇಲ್ಲ ಎಂಬುದರ ಜೊತೆಯಲ್ಲಿ, ಭಕ್ತರಿಗೂ ತಾರತಮ್ಯ ಇಲ್ಲ ಅಂತಾಗಬೇಕೋ ಬೇಡವೋ? ಆದರೆ ಭಕ್ತರಲ್ಲಿ ತಾರತಮ್ಯ ಇದೆಯಲ್ಲ ಇಲ್ಲಿ. ಅರ್ಜುನನೊ ಭೀಷ್ಮ? ಆಚಾರ್ಯರೇ ಭಕ್ತರಲ್ಲಿಯೂ ವ್ಯತ್ಯಾಸ ಇದೆ. ಪ್ರಬುದ್ಧರು ಅಂತ ಕೆಲವರು, ಕೇವಲ ದುರ್ಬಲರು ಅಂತ ಕೆಲವರು. ಅರ್ಥಿ, ಅರ್ಥಾರ್ಥಿ, ಜಿಜ್ಞಾಸು, ಜ್ಞಾನಿ, ಇದು ಭಕ್ತರಲ್ಲಿ ಇದ್ದಂತಹ ಪ್ರಭೇದ. ಒಂದು ತಾಯಿಗೆ ನಾಲ್ಕು ಮಕ್ಕಳಿದ್ರೆ ನಾಲ್ಕೂ ಮಕ್ಕಳ ಕುರಿತಾದಂಹ ಯೋಗಕ್ಷೇಮದ ಚಿಂತನೆ ಏಕವಾಗಿದ್ರೂ, ವ್ಯವಹಾರದಲ್ಲಿ ಭಿನ್ನತೆ ಉಂಟೇ ಉಂಟಲ್ಲ? ವಯಸ್ಸು ಬಂದ ಮಗನಿಗೆ ಏನು ಔಷಧಿ ಕೊಡಬೇಕೋ ಅದನ್ನು ತಾಯಿ ಅವಳೇ ಹೇಳಿಬಿಡ್ತಾಳೆ - ಇಂತಿಂಥ ಔಷಧಿಯನ್ನು ತೆಕ್ಕೋ ರೋಗ ನಿವಾರಣೆಗೆ ಅಂತ ತೆಗೆದುಕೊಳ್ಳಬೇಕಾದದ್ದು ಅವನ ಕೆಲಸ. ಮೊಲೆ ಕುಡಿಯುವ ಮಗುವಿದೆ ಆ ಮಗುವಿನಲ್ಲಿ ಇಂತಹ ಕಷಾಯ ತೆಕ್ಕೆ ಔಷಧಿ ತೆಕ್ಕೊ ಅಂತ ಹೇಳುವುದಿಲ್ಲ. ಆ ಮಗುವಿಗೆ ಎಲ್ಲವನ್ನೂ ಇವಳು ಮೊಲೆ ಹಾಲಿನ ಮೂಲಕವಾಗಿ ಕೊಡಬೇಕಾಗುತ್ತದೆ. ಆವಾಗ ಒಂದು ಯುಕ್ತಿ ಉಂಟು ಹೇಗೆ? ಯಾವ ಔಷಧಿಯ ಸತ್ವ ಮಗುವಿಗೆ ಸಿಕ್ಕಿ ಅದರ ಆರೋಗ್ಯ ಬೇಳೆಯಬೇಕೋ ಆ ಔಷಧಿಯನ್ನು ಮೊಲೆ ಹಾಲು ಕೊಡುವ ತಾಯಿಯೇ ಕುಡಿಯಲಿ ಅಂತ. ಈಗ ತಮಗೆ ಅರ್ಥ ಆಯ್ತು. ಈ ಆರ್ತ ಭಕ್ತರು ಅಂತ ಕೆಲವರಿದ್ದಾರೆ. ಅವರು ಆ ವರ್ಗಕ್ಕೆ ಸೇರಿದವರು. ಹಾಗಾಗಿ ತಾಯಿಯಾಗಿ ಅವರು ಯಾರನ್ನು ನಂಬುತ್ತಾರೋ ಆ ದೇವರೇ ಈ ಕೆಲವು ಔಷಧಿಯನ್ನು ಸೇವಿಸುವಂತೆ ತನ್ನ

ಇಚ್ಛೆಗೆ ವಿರೋಧವಾಗಿ ಆದ್ರೂ ತನ್ನ ಸ್ಥಾನಕ್ಕೆ ಚ್ಯುತಿ ಬರುವದಿದ್ರೂ ಕೂಡಾ ಆರ್ತರನ್ನು ಕಾಪಾಡುವುದಕ್ಕೆ ಈ ರೀತಿ ಅಂಟಿಕೊಳ್ಳಬೇಕಾಗ್ತದೆ. ತಾಯಿಬೆಕ್ಕು ಮರಿಯನ್ನು ಕಚ್ಚಿಕೊಂಡ ಹಾಗೆ ಇದು ಭಾಗವತೋತ್ತಮರು ದೇವರನ್ನು ಗುರುತಿಸಿಕೊಳ್ಳುವ ಬಗೆ, ಈ ಮಾತು ತಮಗೂ ಸಂಬಂಧಿಸಿದೆ. ಅರ್ಜುನನ ರಥವನ್ನು ಬಿಟ್ಟು ಒಂದುಗಳಿಗೆ ನಿಮ್ಮ ರಥದಲ್ಲಿ ಕುಳಿತು ತೋರಿಸಿದ್ರೆ ತಮಗೆ ನೆಮ್ಮದಿ ಆಗ್ತದೆ. ಇದೇ ಮಾತನ್ನು ನಾನು ತಮಗೆ ಹೇಳಿದ್ರೆ? ಈಗ ಧರ್ಮರಾಯನಾಗಲಿ ಪಾಂಡವರಾಗಲಿ ನಿಮ್ಮ ಮೊಮ್ಮಕ್ಕಳ  ಹೌದಲ್ಲ? ಕೌರವರೇ ಹೆಚ್ಚೇನೂ ಅಲ್ಲಲ್ಲ? ಈಗ ಕೆಲವಾರು ದಿವಸಗಳಿಂದ ಅಲ್ಲಿ ಸೇನಾಧಿಪತ್ಯ ಆಯ್ತಲ್ಲ? ಒಂದೆರಡು ದಿವಸ ಈ ಕಡೆಯಿಂದ ಮಾಡಿದ್ರೆ ಏನಾದಿತು? ಪ್ರಶ್ನೆ ಹುಡುಗಾಟಿಕೆಯದ್ದು ಅಂತ ತಾವು ತಿಳ್ಕೊಳ್ತಾರು, ಅಲ್ಲ, ಆದೀತೋ? ಆಗಲಿಕ್ಕಿಲ್ಲ. ಆದರೆ ನಿಮ್ಮನ್ನು ನಾನ್ ಕೇಳ್ತೇನೆ - ನಿಮಗೆ ಈ ಭೇದ ಯಾಕೆ? ಪಾಂಡವರೇನು ದುಷ್ಕೃತ್ಯವನ್ನು ಮಾಡಿದವ್ರೊ? ಅನ್ಯಾಯಗಾರರೊ? ಅಲ್ಲ. ಧರ್ಮರಾಯ ತಮ್ಮಲ್ಲಿ ನಯ ವಿನಯ ತೊರೆದನೋ? ಏನಾದರೂ ಸಿಟ್ಟುಗೊಂಡು ನಿಮಗೆ ಏನಾದರೂ ಕಾಯಕ, ಮಾನಸಿಕ ಹಿಂಸೆಯನ್ನು ಮಾಡಿದ್ದನೋ? ಅಲ್ಲವಲ್ಲ? ಆದ್ದರಿಂದ ತಮ್ಗಿರಬೇಕಾದ್ದೇನೂ? ಒಂದು ನಿರ್ಲಿಪ್ತ ದೋರಣೆ, ಹೌದಲ್ಲ? ಅದಲ್ಲ, ಕರ್ಮಕ್ಷೇತ್ರಕ್ಕೆ ಬಂದ್ರೆ ಸ್ವಲ್ಪ ಇಲ್ಲಿ.... ಹೀಗೆ ಯಾಕೆ ಮಾಡಬಾರದು? ಸಾಧುವಾದದ್ದು ಸಾಧುವಾದದ್ದು ಆಚಾರ್ಯರೇ, ದೇವನಾದ ನಾನು ಕೂಡಾ ಭಕ್ತರಿಗೊಂದು ಪ್ರತಿಜ್ಞಾವಾಕ್ಯವನ್ನು ಹೇಳಿದ್ದುಂಟು- 'ನಮೇ ಭಕ್ತಃ ಪ್ರಣಷ್ಯತಿ' ಅಂತ. ಇದರ ವ್ಯಾಖ್ಯಾನ ತಮಗೆ ಅಗತ್ಯ ಅಂತ ತೋರ್ತದೆ. ತಾವು ಭಕ್ತರಲ್ಲವೋ ಅಂತ ಕೇಳಿದಿರಲ್ಲ? ತಾವು ಭಕ್ತರೇ ಹೌದು. ಆದರೆ ನಾನು ನನ್ನ ಪ್ರತಿಜ್ಞೆಗೆ ಹೊಸ ವ್ಯಾಖ್ಯಾನ ಮಾಡುವುದಕ್ಕೆ ಸಾಧ್ಯವಿಲ್ಲ.

ತಮಗೆ ಕೌರವನ ಹಂಗುಂಟು.

ತಾವು ಏನು ಮಾಡಿದ್ರೂ ಲಾಭ ಕೌರವನಿಗೆ. ಆದ್ರೆ ಧರ್ಮಪ್ರಜ್ಞೆಯುಳ್ಳ ನನಗೆ, ಧರ್ಮ ಸಂಸ್ಥಾಪಕನಾದ ನನಗೆ, ಕೌರವನ ಸೇನಾಧಿಪತಿಗೆ ಜಯವನ್ನು ಒದಗಿಸಿಕೊಡುವುದಕ್ಕೆ ಕಷ್ಟಸಾಧ್ಯವಾದೀತು. ಭೀಷ್ಮ ಭಕ್ತನಾಗಿ ಬಂದಾವಾಗ ಅನುಗ್ರಹ ಮಾಡೋಣ. ಕೌರವನ ಸೇನಾಧಿಪತಿಯಾಗಿ ಆ ಹಂಗಿನಲ್ಲಿ ಕೊರಳು ಸಿಕ್ಕಿಸಿಕೊಂಡು ಬಂದಾವಾಗ ನಿಮ್ಮನ್ನು ನನ್ನ ಭಕ್ತನಾದ ಅರ್ಜುನನ ಕೈಯಿಂದ ಈ ಹೊತ್ತು ಯುದ್ಧದಲ್ಲಿ ಸೋಲಿಸದೇ ನಾನ್ ಬಿಟ್ಟೆ ಅಂತಾದ್ರೆ, ಆಚಾರ್ಯರೇ 'ಅನ್ಯಾಯಮಾಡುವವನು ಅನ್ನ ಉಂಡ, ಸತ್ಯ ಹೇಳಿದವನು ಸತ್ತೆಹೋದ' ಎಂಬ ಮಾತಿಗೆ ನಾನೂ ಸಹಿ ಹಾಕಿದಂತಾಗುವುದಿಲ್ಲವೇ? ಆದ್ರಿಂದ ನನ್ನ ಪ್ರತಿಜ್ಞೆ ಉಂಟು - ಎಲ್ಲಿಯವರೆಗೆ ಭೀಷ್ಮಚಾರ್ಯರು ಕೌರವನ ಸೇನಾಧಿಪತಿಯಾಗಿರ್ತಾರೆ; ಅಲ್ಲಿಯವರೆಗೆ, ಭಕ್ತ ಎಂಬುದನ್ನು ನನ್ನ ಹೃದಯದಿಂದ ಬದಿಗೆ ಸರಿಯಿಸಿ ಸೇನಾಧಿಪತಿಯನ್ನು ನನ್ನ ಭಕ್ತನಾದ ಅರ್ಜುನನ ಕೈಯಿಂದ ಮತ್ತೆ ಸೋಲಿಸುವಂತೆ ಮಾಡುತ್ತೇನೆ ಎಂಬ ಪ್ರತಿಜ್ಞೆನನ್ನದು. ಇದಕ್ಕೆ ಪ್ರತಿಕ್ರಿಯೆ ಏನು ನಿನ್ನು?

**ಭೀಷ್ಮನ ಉತ್ತರ :-**

|*ಕಾಂಭೋಜಿ-ಏಕತಾಳ ಕುರುಪತಿಯೊಳಿರ್ದು ಜೀವ / ಪೊರೆದು ಋಣವ ಗಳಿಸಿದೆನು* ||

ತೊರೆಯಲಾರೆ ಹರಿಯೆ ಕುಂತೀ | ತರಳರ ಹಂಗೇನೊ ನಿನಗೆ || ೧೪೭ ||

ಒಳ್ಳೆ ಬುದ್ಧಿವಂತಿಕೆಯ ಮಾತು ಇದು. ಯಾಕೆ? ಈಗ ನನ್ನೊಬ್ಬನನ್ನು ಬಿಟ್ರೆ ಬೇರೆ ಎಷ್ಟು ಮಂದಿ ಈ ಮಾತನ್ನು ಕೇಳಿಯಾರು ಹೌದಲ್ಲ? ನ್ಯಾಯ ಅಂತಲೇ ತೀರ್ಮಾನ ಕೊಟ್ಟಾರು. ನನಗದರ ಗುಟ್ಟು ಗೊತ್ತಾಯ್ತು. ಏನು? ಭೀಷ್ಮಾಚಾರ್ಯ ಆಕಡೆಯಿಂದ ಸೇನಾಪತಿ ಆಗ್ತಾನೆ ಅಂತಾದ್ರೆ ಅರ್ಜುನನ ಸಾರಥ್ಯ ಅಗತ್ಯ ಇಲ್ಲ. ಮತ್ತೆ? ಅಂತೂ ಇಲ್ಲಿಂದ ಅಲ್ಲಿಗೆ ಎಳೆಯುವ ಆಲೋಚನೆ ಹೊರತೂ; ಇಲ್ಲಿಗೇನೂ ಆಲೋಚನೆ ಇಲ್ಲಲ್ಲ. ಅಲ್ಲಲ್ಲ ಸತ್ಯ ಅಷ್ಟೇ ಅಲ್ವೋ? ಸ್ವಾಮಿಯೇ, ಇದು ನನಗೆ ಮೊದಲೇ ಗೊತ್ತಾದದ್ದರಿಂದ; ಯಾವುದು? ನಿನ್ನ ಈ ಸಂಕಲ್ಪ ಈ ಹುಡುಗನನ್ನು.... ಮನಸ್ಸ ಬಲ್ಲಿಲ್ಲ. ಯಾಕೆ? ಎಷ್ಟಾದ್ರೂ ನನ್ನ ಮೊಮ್ಮಕ್ಕಳು, ವಾತ್ಸಲ್ಯ! ಆವಾಗ್ಲೆ ನಾನು ಹೇಳಿದ್ದೇನೆ ಎಲ್ಲರನ್ನೂ ಕರ್ಮ ಬಾಧಿಸ್ತದೆ ಅಂತ. ಆ ಕರ್ಮದ ಒತ್ತಡ, ಹಾಗೇ ಕರ್ಮದ ಸೆಳೆತ, ಈಗೀಗ ನನಗೂ ತೋರ್ತದೆ. ಯಾಕೆ ಈ ರಗಳೆ ಒಂದೂ ಬೇಡವಾಗಿತ್ತು. ಇದು ನಿನ್ನಲ್ಲಿ ಮಾತ್ರ ಹೇಳುವುದು. ಆ ಹೊತ್ತೇ ನಾನು ಎಲ್ಲವರ ಹಾಗೆ ಗೃಹಸ್ಥಾಶ್ರಮಿಯಾಗಿದ್ರೆ ಈ ಅಧಿಕಾರಕ್ಕೆ ಬೇಕಾಗಿ ಜಗಳವೇ ಬರಿದ್ಧಿಲ್ಲೋ ಅಂತ? ಯಾಕೆ? ಸತ್ಯವತೀ ದೇವಿಯರನ್ನು ತಂದು ನಮ್ಮ ಅಪ್ಪನಿಗೆ ತೃಪ್ತಿ ಮಾಡುವ ಬದಲು ನಾ ಸುಮ್ಮನಿದ್ದರೇನು ನಮ್ಮಪ್ಪ ಸಿಟ್ಟು ಮಾಡಿಲ್ಲ. ನನಗೊಂದು ಮದುವೆ ಆಗಿ, ಮಕ್ಕಳಿದ್ರೆ ಈ ಸಿಂಹಾಸನ ಯಾರಿಗೆ ಅಂತ ಪ್ರಶ್ನೆಯೇ ಬಾ ಇರಲಿಲ್ಲ. ಹಾಗಾಗಲಿಲ್ಲ ನೋಡು. ಹಾಗಾದರೆ ನನ್ನ ತ್ಯಾಗಕ್ಕೆ ನನಗೆ ಸಿಕ್ಕಿದ ಫಲ ಒಳ್ಳೇ ಫಲ- ಪ್ರಾರಬ್ಧವೇ! ವರವೇನು ಬಂತು; ಈಗ ಅದೇ ನನಗೆ ಉಪದ್ರ ಆಗಿದೆ. ಯಾಕೆ ಉಪದ್ರ ಆಗ್ಯದೆ? ಬದುಕಿದೆ ಎಷ್ಟು ವರ್ಷ!! ಆವಾಗ ಸನ್ನಿಧಾನದಿಂದ ಅಪ್ಪಣೆ ಮಾಡಬಹುದು - "ಇಚ್ಛಾಮರಣಿ ಅಲ್ವೋ? ಸಾಯಬಹುದಲ್ಲ". ಸಾಯಲಿಕ್ಕೆ ಮನಸ್ಸು ಬರಿಲ್ಲ ಕೃಷ್ಣ, ನನ್ನ ಹುಡುಗ ಕೌರವ, ನನಗೊತ್ತುಂಟು ಈಗ್ಲ ಪಾಪ ನನ್ನ ಮಗು ಚಡಪಡಿಸ್ತದೆ. ಆವಾಗ ವಾತ್ಸಲ್ಯ, ಆ ಹಂಗು ಕೃಷ್ಣ ಕೌರವೇಶ್ವರನ ಹಂಗನ್ನು ತೊರೆಯಲಾರೆ ಕೃಷ್ಣ.

ಆದರೆ ಅಂತ ಉಂಟು; ನನ್ನ ಜಾಗವು ನಿನ್ನದು ಕೂಡ? ನನ್ನ ಮಟ್ಟಿಗೆ ಆಗ ಅಪ್ಪಣೆ ಆಯ್ತಲ್ಲಾ. ನೀವೆಲ್ಲಾ ಪತಿತರು ಆದ ಕಾರಣ... ಅಲ್ವೋ? ಈ ಅವತಾರ ಮಾಡಿದವನಿಗೂ ಪತಿತನಾದವನಿಗೂ ಒಂದೇ ಸ್ವಭಾವ ಅಲ್ಲಲ್ಲ? ತೂಕ ಒಂದೇ ಹೇಳ್ಬಹುದು. ಇದು ಒಳ್ಳೆ ವ್ಯಾಪಾರದ ಗುಟ್ಟು ನನ್ನಗೊತ್ತಾಯಿತು; ಜನ ಸಾಮಾನ್ಯರನ್ನು ಹುಚ್ಚುಗಟ್ಟಿಸಲಿಕ್ಕೆ. ಬಂಗಾರವನ್ನು ತೂಗ್ತಾನೊ? ತೂಕಕ್ಕೆ ಹಾಕುವುದು ಎಂತದ್ದನ್ನು? ಒಂದು ಗುಲಗುಂಜಿ, ಎಷ್ಟು ತೂಕ ಉಂಟು ಎಂಟು ಗುಲಗುಂಜಿ ತೂಕ ಉಂಟು? ಎರಡಕ್ಕೂ ಒಂದೇ

ಸ್ಮಶಾನದಲ್ಲಿ ಬಿದ್ದ ಹೂ, ದೇವರ ಪೂಜೆಗೆ ಇದ್ದದ್ದು ಈಗ ಸ್ಮಶಾನದಲ್ಲಿ ಬಿದ್ದದ್ದೆ, ಬಿದ್ದರೆ ಆ ಹೂ ದೇವರಿಗೆ ಆಗ್ಲಿಕ್ಕೇ ಇಲ್ಲವೋ? ಶುದ್ಧೀಕರಣ ಆಗ್ಬೇಕು. ಹಾಗಾದರೆ ಆ ಶುದ್ಧೀಕರಣ ಹೇಗೆ ಮಾಡೋಣ? ಬೀಳುವುದಕ್ಕಿಂತ ಮೊದಲು ಅದು ಶುದ್ಧವಾಗಿತ್ತಲ್ಲ! ಆ ಶುದ್ಧದ ಕಾಲದಲ್ಲಿ ಅದು ಸಂಗ್ರಹಿಸಿದ್ದೇನುಂಟು, ಅದನ್ನು ಈ ಶುಚೀಕರಣಕ್ಕೆ ವಿನಿಯೋಗಿಸಿದ್ದರೆ ತಪ್ಪಲ್ಲಲ್ಲ? ನಾನು ಈ ಪಾಪಿಗಳ ಒಟ್ಟಿಗೆ ಸಂಪರ್ಕ ಮಾಡುವ ಮೊದಲು ಪಾಪಿಯಾಗಿದ್ದಿಲ್ಲವಲ್ಲ? ಈಗಲೂ ಪಾಪಿ ಅಲ್ವಲ್ಲ? ಹಾಗಾದರೆ ಪಾತ್ರಕ್ಕೆ ಕೊಳೆ ತುಂಬದೇ ಅಂತ ಸನ್ನಿದಾನದಿಂದ ಅಪ್ಪಣೆ ಆಗ್ಬೇಕು. ಹಾಗಾದ್ರೆ ಆ ಕೊಳೆಯನ್ನು ತೊಳೆಯುವುದಕ್ಕೆ ಈ ಮೊದಲು ನಾನು ಸಾಧಿಸಿದಂತಹ ಶುದ್ಧ ಭಕ್ತಿ - ಇದನ್ನೇ ಬಂಡವಾಳವಾಗಿ ವಿನಿಯೋಗಿಸ್ತೇನೆ. ನಿನ್ನ ಹಂಗು ಯಾಕೆ ನಮಗೆ? ಆದಕಾರಣ, ಭೀಷ್ಮನು ಆರ್ಜಿಸಿದಂತಹ ಯಾವತ್ತೂ ಭಕ್ತಿಯ ಶಕ್ತಿ ಪೂರ್ಣ ವೆಚ್ಚವಾದರೂ ಅಡ್ಡಿ ಇಲ್ಲ. ನಿನ್ನ ಶುದ್ಧ ಭಕ್ತ ಅಂತ ಕೃತಿಯಿಂದ ಮಾಡಿ ತೋರಿಸ್‌ದಿದ್ದರೆ ಶ್ರೀಕೃಷ್ಣ ಭಕ್ತನಲ್ಲ! ಆದರೆ ಇಷ್ಟಕ್ಕೆ ಪ್ರತಿಜ್ಞೆ ಮುಗಿಯುವುದಿಲ್ಲ. ಓ ದೇವರ ದೇವ ಇವ ಯಾರು? ಈ ದೇವರಾಜನ - ಸುತನಾದಂತಹ ಈ ಪಾರ್ಥನನ್ನು, ದ್ವೇಷದಿಂದ ಅಲ್ಲ; ನೀನಿಗೆ ಇಬ್ಬರನ್ನೂ ರಂಗಕ್ಕೆ ಇಳಿಸಿದೆಯಲ್ಲ? ಆದಕಾರಣ ಕೇವಲ ನನ್ನ ಭಕ್ತಿಯ ಪರಿಶುದ್ಧತೆಯನ್ನು ನಿನ್ನ ಮೂಲಕ ಒಪ್ಪಿ ಸಾಯುವುದಕ್ಕಲ್ಲ. ಜಗತ್ತು ಒಪ್ಪುವಂತೆ ನಾನುಮ ಮಾಡಿಯೇನು. ಇಲ್ಲದಿದ್ದರೆ ನನ್ನ ಬದುಕು ನಿಷ್ಪಲ ಅಂತ ಆದೀತು. ನಾಳೆ ಭೀಷ್ಮನ ಚರಿತ್ರೆಯಲ್ಲಿ ಯಾರಾದ್ರೂ ಕಳಂಕವನ್ನು ಕಂಡಾರು. ಆದ್ದರಿಂದ ಈ ಹೊತ್ತು ನೀನು ಪ್ರತಿಜ್ಞಾಬದ್ಧ ಆಗಿದ್ದೀಯಲ್ಲ? ನಿನ್ನ ಅರ್ಜುನ ನನ್ನನ್ನು ಸೋಲಿಸ್ತಾನಲ್ಲ? ನಾನು ನನ್ನ ಮೊಮ್ಮಗನನ್ನು ಸೋಲಿಸ್ತೇನೆ ಅಂತ ಹೇಳುವುದಿಲ್ಲ ಯಾಕೆ? ನಾನು ಮಕ್ಕಳನ್ನೆಲ್ಲ ಸೋಲಿಸುವುದಕ್ಕೆ ಹುಟ್ಟಿದವನಲ್ಲ. ಈ ನಿನ್ನ ಭಕ್ತನನ್ನು ತಾಯಿ ಬೆಕ್ಕೇ, ಈ ಹೊತ್ತು ಈ ನಿನ್ನ ಮರಿಯನ್ನು, ಈ ಮಂಗನ ಮರಿ ಹೈ ಆಗಲಿ, ಗೆಲ್ಲುತ್ತೇನೆ. ನಾನು ಗೆಲ್ಲಲಿಲ್ಲ ಅಂತ ಆದರೆ... ಆದರೆ ಅಲ್ವೋ....? ನನ್ನದೆಲ್ಲ ವಿಡಂಬನೆ ಅಂತ ತಿಳ್ಕೊ. ಇದಿಷ್ಟೂ ತಿರುಳಿಲ್ಲದೇ ಇದ್ದಂತಹ ಆರ್ಭಟ ಅಂತ ತಿಳ್ಕೊ. ಆದ್ದರಿಂದ ಕೃಷ್ಣಾ, ನೀನ್ಯಾಕೆ ನಿನ್ನ ಹಂಗ್ಯಾಕೆ? ನಾನು ಮರ್ಕಟಾರ್ಭಕ ಅಂತ ಹೇಳಿದ ಮೇಲೆ ಇನ್ ಮಾರ್ಜಾಲಾರ್ಭಕ ಯಾಕಾಗೋದು? ಹಿಂದೆ ಬರುವುದಕ್ಕೆ ಸಾಧ್ಯವಿಲ್ಲ. ಆರ್ತೋರ್ಜಿಜ್ಞಾಸು ಅರ್ಥಾರ್ಥಿ ಜ್ಞಾನಿ ಅಂತ ನೀನು ಹೇಳಿದ್ದೀಯಂತೆ. ನಾನು ಇನ್ ಆರ್ತನಾಗುವುದಕ್ಕೆ ಸಾಧ್ಯವಿಲ್ಲ. ಮೀಸೆ ಬಂದ ಮಗು, “ಅಮ್ಮಾ ಮೊಲೆಕೊಡು” ಅಂತ ಕೂಗಬಾರದು. ಹಾಗಾಗಿ ನಾನು ಆರ್ತನಲ್ಲ ಜಿಜ್ಞಾಸು ಅಲ್ಲ ಆದರೆ ಅರ್ಥಾರ್ಥಿ ಹೌದು ಯಾಕೆ? ಇಲ್ಲದಿದ್ದರೆ ಉದ್ಯೋಗ ನನಗೆ ಬೇಡ. ಇಂತಹ ಪುರುಷಾರ್ಥದಲ್ಲಿ ವಿಶ್ವಾಸವನ್ನಿಟ್ಟು ಅರ್ಥಾರ್ಥಿ, ಅಂತಂದ್ರೆ ಪರಮ ಪುರುಷಾರ್ಥ- ಬಿಡುಗಡೆ. ಈ ಕಡೆಗೆ ಲಕ್ಷವನ್ನಿಟ್ಟ ಜ್ಞಾನಿಗಳ ಮಾರ್ಗವನ್ನು ಅವಲಂಬಿಸುವ ಒಬ್ಬ ನಾನು. ಹಾಗಾಗಿ ನಾನು ನಿನ್ನನ್ನು ಬಯಸಿದ್ದು ಹೆಚ್ಚೇ. ನನಗೆ ನಿನ್ನ ಹಂಗ್ಯಾಕೆ? ಆದರೆ ನನ್ನ ಹಂಗು ನಿನಗೆ ಇಲ್ಲದಿದ್ದೀತೆ? ಆಗುವುದಕ್ಕೆ ಸಾಧ್ಯ ಇಲ್ಲ ಅದು. ಸ್ವಯಂ ಮಗನು ಪ್ರಬುದ್ಧನಾಗಿ ಎಲ್ಲಿಯೋ ದುಡಿಯುತ್ತಾ ಆನಂದದಿಂದ ಇದ್ದು, ತಾಯಿ ಅವನನ್ನು ಬಿಟ್ಟು ಅವನಿಗೆ ತಾಯಿಯನ್ನು ಬಿಡಲಿಕ್ಕೆ ಉಪಾಯ ಇಲ್ಲ. ಆದ್ದರಿಂದ ಬಿಡುವುದಿಲ್ಲ.

ಸ್ಮಶಾನದಲ್ಲಿ ಬಿದ್ದ ಹೂ, ದೇವರ ಪೂಜೆಗೆ ಇದ್ದದ್ದು ಈಗ ಸ್ಮಶಾನದಲ್ಲಿ ಬಿದ್ದದ್ದೆ, ಬಿದ್ದರೆ ಆ ಹೂ ದೇವರಿಗೆ ಆಗ್ಲಿಕ್ಕೇ ಇಲ್ಲವೋ? ಶುದ್ಧೀಕರಣ ಆಗ್ಬೇಕು. ಹಾಗಾದರೆ ಆ ಶುದ್ಧೀಕರಣ ಹೇಗೆ ಮಾಡೋಣ? ಬೀಳುವುದಕ್ಕಿಂತ ಮೊದಲು ಅದು ಶುದ್ಧವಾಗಿತ್ತಲ್ಲ! ಆ ಶುದ್ಧದ ಕಾಲದಲ್ಲಿ ಅದು ಸಂಗ್ರಹಿಸಿದ್ದೇನುಂಟು, ಅದನ್ನು ಈ ಶುಚೀಕರಣಕ್ಕೆ ವಿನಿಯೋಗಿಸಿದ್ದರೆ ತಪ್ಪಲ್ಲಲ್ಲ? ನಾನು ಈ ಪಾಪಿಗಳ ಒಟ್ಟಿಗೆ ಸಂಪರ್ಕ ಮಾಡುವ ಮೊದಲು ಪಾಪಿಯಾಗಿದ್ದಿಲ್ಲವಲ್ಲ? ಈಗಲೂ ಪಾಪಿ ಅಲ್ಲವಲ್ಲ? ಹಾಗಾದರೆ ಪಾತ್ರಕ್ಕೆ ಕೊಳೆ ತುಂಬದೇ ಅಂತ ಸನ್ನಿದಾನದಿಂದ ಅಪ್ಪಣೆ ಆಸ್ಬೇಕು. ಹಾಗಾದ್ರೆ ಆ ಕೊಳೆಯನ್ನು ತೊಳೆಯುವುದಕ್ಕೆ ಈ ಮೊದಲು ನಾನು ಸಾಧಿಸಿದಂತಹ ಶುದ್ಧ ಭಕ್ತಿ - ಇದನ್ನೇ ಬಂಡವಾಳವಾಗಿ ವಿನಿಯೋಗಿಸ್ತೇನೆ. ನಿನ್ನ ಹಂಗು ಯಾಕೆ ನಮಗೆ? ಆದಕಾರಣ, ಭೀಷ್ಮನು ಆರ್ಜಿಸಿದಂತಹ ಯಾವತ್ತೂ ಭಕ್ತಿಯ ಶಕ್ತಿ ಪೂರ್ಣ ವೆಚ್ಚವಾದರೂ ಅಡ್ಡಿ ಇಲ್ಲ. ನಿನ್ನ ಶುದ್ಧ ಭಕ್ತ ಅಂತ ಕೃತಿಯಿಂದ ಮಾಡಿ ತೋರಿಸ್‌ದಿದ್ದರೆ ಶ್ರೀಕೃಷ್ಣ ಭಕ್ತನಲ್ಲ! ಆದರೆ ಇಷ್ಟಕ್ಕೆ ಪ್ರತಿಜ್ಞೆ ಮುಗಿಯುವುದಿಲ್ಲ. ಓ ದೇವರ ದೇವ ಇವ ಯಾರು? ಈ ದೇವರಾಜನ - ಸುತನಾದಂತಹ ಈ ಪಾರ್ಥನನ್ನು, ದ್ವೇಷದಿಂದ ಅಲ್ಲ; ನೀನಿಗೆ ಇಬ್ಬರನ್ನೂ ರಂಗಕ್ಕೆ ಇಳಿಸಿದೆಯಲ್ಲ? ಆದಕಾರಣ ಕೇವಲ ನನ್ನ ಭಕ್ತಿಯ ಪರಿಶುದ್ಧತೆಯನ್ನು ನಿನ್ನ ಮೂಲಕ ಒಪ್ಪಿ ಸಾಯುವುದಕ್ಕಲ್ಲ. ಜಗತ್ತು ಒಪ್ಪುವಂತೆ ನಾನುಮ ಮಾಡಿಯೇನು. ಇಲ್ಲದಿದ್ದರೆ ನನ್ನ ಬದುಕು ನಿಷ್ಫಲ ಅಂತ ಆದೀತು. ನಾಳೆ ಭೀಷ್ಮನ ಚರಿತ್ರೆಯಲ್ಲಿ ಯಾರಾದ್ರೂ ಕಳಂಕವನ್ನು ಕಂಡಾರು. ಆದ್ದರಿಂದ ಈ ಹೊತ್ತು ನೀನು ಪ್ರತಿಜ್ಞಾಬದ್ಧ ಆಗಿದ್ದೀಯಲ್ಲ? ನಿನ್ನ ಅರ್ಜುನ ನನ್ನನ್ನು ಸೋಲಿಸ್ತಾನಲ್ಲ? ನಾನು ನನ್ನ ಮೊಮ್ಮಗನನ್ನು ಸೋಲಿಸ್ತೇನೆ ಅಂತ ಹೇಳುವುದಿಲ್ಲ ಯಾಕೆ? ನಾನು ಮಕ್ಕಳನ್ನೆಲ್ಲ ಸೋಲಿಸುವುದಕ್ಕೆ ಹುಟ್ಟಿದವನಲ್ಲ. ಈ ನಿನ್ನ ಭಕ್ತನನ್ನು ತಾಯಿ ಬೆಕ್ಕೇ, ಈ ಹೊತ್ತು ಈ ನಿನ್ನ ಮರಿಯನ್ನು, ಈ ಮಂಗನ ಮರಿ ಹೈ ಆಗಲಿ, ಗೆಲ್ಲುತ್ತೇನೆ. ನಾನು ಗೆಲ್ಲಲಿಲ್ಲ ಅಂತ ಆದರೆ... ಆದರೆ ಅಲ್ವೋ...? ನನ್ನದೆಲ್ಲ ವಿಡಂಬನೆ ಅಂತ ತಿಳ್ಕೊ. ಇದಿಷ್ಟೂ ತಿರುಳಿಲ್ಲದೇ ಇದ್ದಂತಹ ಆರ್ಭಟ ಅಂತ ತಿಳ್ಕೊ. ಆದ್ದರಿಂದ ಕೃಷ್ಣಾ, ನೀನ್ಯಾಕೆ ನಿನ್ನ ಹಂಗ್ಯಾಕೆ? ನಾನು ಮರ್ಕಟಾರ್ಭಕ ಅಂತ ಹೇಳಿದ ಮೇಲೆ ಇನ್ ಮಾರ್ಜಾಲಾರ್ಭಕ ಯಾಕಾಗೋದು? ಹಿಂದೆ ಬರುವುದಕ್ಕೆ ಸಾಧ್ಯವಿಲ್ಲ. ಆರ್ತೋಃಜಿಜ್ಞಾಸು ಅರ್ಥಾರ್ಥಿ ಜ್ಞಾನಿ ಅಂತ ನೀನು ಹೇಳಿದ್ದೀಯಂತೆ. ನಾನು ಇನ್ ಆರ್ತನಾಗುವುದಕ್ಕೆ ಸಾಧ್ಯವಿಲ್ಲ. ಮೀಸೆ ಬಂದ ಮಗು, "ಅಮ್ಮಾ ಮೊಲೆಕೊಡು" ಅಂತ ಕೂಗಬಾರದು. ಹಾಗಾಗಿ ನಾನು ಆರ್ತನಲ್ಲ ಜಿಜ್ಞಾಸು ಅಲ್ಲ ಆದರೆ ಅರ್ಥಾರ್ಥಿ ಹೌದು ಯಾಕೆ? ಇಲ್ಲದಿದ್ದರೆ ಉದ್ಯೋಗ ನನಗೆ ಬೇಡ. ಇಂತಹ ಪುರುಷಾರ್ಥದಲ್ಲಿ ವಿಶ್ವಾಸವನ್ನಿಟ್ಟು ಅರ್ಥಾರ್ಥಿ, ಅಂತಂದ್ರೆ ಪರಮ ಪುರುಷಾರ್ಥ- ಬಿಡುಗಡೆ. ಈ ಕಡೆಗೆ ಲಕ್ಷವನ್ನಿಟ್ಟ ಜ್ಞಾನಿಗಳ ಮಾರ್ಗವನ್ನು ಅವಲಂಬಿಸುವ ಒಬ್ಬ ನಾನು. ಹಾಗಾಗಿ ನಾನು ನಿನ್ನನ್ನು ಬಯಸಿದ್ದು ಹೆಚ್ಚೇ. ನನಗೆ ನಿನ್ನ ಹಂಗ್ಯಾಕೆ? ಆದರೆ ನನ್ನ ಹಂಗು ನಿನಗೆ ಇಲ್ಲದಿದ್ದೀತೆ? ಆಗುವುದಕ್ಕೆ ಸಾಧ್ಯ ಇಲ್ಲ ಅದು. ಸ್ವಯಂ ಮಗನು ಪ್ರಬುದ್ಧನಾಗಿ ಎಲ್ಲಿಯೋ ದುಡಿಯುತ್ತಾ ಆನಂದದಿಂದ ಇದ್ದು, ತಾಯಿ ಅವನನ್ನು ಬಿಟ್ಟು ಅವನಿಗೆ ತಾಯಿಯನ್ನು ಬಿಡಲಿಕ್ಕೆ ಉಪಾಯ ಇಲ್ಲ. ಆದ್ದರಿಂದ ಬಿಡುವುದಿಲ್ಲ.

ಒಳ್ಳೆ ತಾಯಿಯಾದ್ರೆ, ಒಳ್ಳೆ ಮಗನಾದ್ರೆ ತಾಯಿ ಬಿಟ್ರೂ ಅವ ಬಿಡೋದಿಲ್ಲ. ಒಂದು ಪ್ರಾರ್ಥನೆ ಉಂಟು. ನಿನ್ನ ಸಂಪೂರ್ಣವಾದಂತಹ ಸಾಮರ್ಥ್ಯ ನೀನು ಅರ್ಜುನನಲ್ಲಿ ನಿಕ್ಷೇಪಿಸಿರುವೆ. ಹಾಗಾಗಿ ಪ್ರತಿಜ್ಞಾಬದ್ಧನಾಗಿ ನಿತ್ತಿದ್ದೇನೆ. ಈ ಹೊತ್ತು ನಾನು ಗೆಲ್ಲಲಿಲ್ಲ; ನನ್ನ ಭಜನೆಯಲ್ಲ ಸುಳ್ಳು, ಇಷ್ಟು ಮಾಡಿದ್ದು ನಾನು ಹೊಟ್ಟೆತುಂಬಿಸಲಿಕ್ಕೆ ಅಂತ ಒಪ್ಪಿಕೊಳ್ತೇನೆ. ನೋಡೋಣ ಬಿಡು ಅರ್ಜುನನ್ನು ನನ್ನ ಇದಿರಿಗೆ......

|*ಶಂಕರಾಭರಣ-ಮಟ್ಟೆ*| *ಎನ್ನ ಪೌತ್ರನಸ್ತ್ರಕುಶಲ* | *ವನ್ನು ನೋಳ್ಪ ತವಕವಿಹುದು* |

*ಧನ್ಯನಹನು ಗೆಲಿದರೆನ್ನ* | *ಕುಲದಿ ಶೂರನು* || *೧೪೯* ||

ಎಲಾ.... ನಿನ್ನ ಅಜ್ಜ ಯಾರು? "ಧುರದಿ ಪ್ರಾಜ್ಞ ನೀನು ಹೇಳಿದ್ದು ಹೌದು. ಅಲ್ಲಿ ನಾನು ಕಂಡು ಮೆಚ್ಚಿದ್ದೇನನ್ನು? ನಿನ್ನ ಕರಕೌಶಲ, ಗುರಿ ಸಿದ್ಧಿ ಇತ್ಯಾದಿ ಇತ್ಯಾದಿ.... ಆ ಕಾಲಕ್ಕೆ ನೀನು ಯುದ್ಧವನ್ನು ಕ್ರೀಡೆಯನ್ನಾಗಿ ಅಂಗೀಕರಿಸಿ ಯುದ್ಧಾಂಗಣವನ್ನು ಕ್ರೀಡಾಂಗಣವನ್ನಾಗಿಸಿ, ಆ ಯುದ್ಧದ ಪ್ರಾಜ್ಞತೆಯನ್ನು ತೋರಿಸಲಿಲ್ಲ ಏನೇನು ಕೇಳಿದ್ದೇನೆ ಅಲ್ಲ. ಹೊರಗಿನವರಿಂದ ಬಂದ ಸುದ್ದಿ ಈ ಅಜ್ಜನಿಗೆ ಏನಾಯ್ತು? ಸಂದೇಹಕ್ಕೆ ಕಾರಣವಾಯ್ತು.

ಯಾರು ಹೊಡೆದದ್ದರಲ್ಲಿ ಯಾರು ಬಿದ್ದರು ಎನ್ನುವುದು ಮುಖ್ಯ ಅಲ್ಲ, ಅದು ಲೆಕ್ಕಾಚಾರದ ಯುದ್ಧ. ನನ್ನ ಸ್ವಭಾವ ಹೇಗೆ? ಇದರಲ್ಲಿ ಏನೇನು ಕೌಶಲ್ಯವನ್ನು ಪ್ರಕಟಪಡಿಸಬಹುದು, ಪ್ರತಿಯೊಂದಕ್ಕೂ ಕಲಾತ್ಮಕವಾದ ರೂಪವನ್ನು ಕೊಡುವ ದೃಷ್ಟಿ ನಮ್ಮ ದೇಸೀಯ ದೃಷ್ಟಿ, ದೇವತಾರಾಧನೆಯಾಗಲಿ ಅಥವಾ ಉತ್ಸವವಾಗಲಿ, ಅದಾಗಲಿ ಇದಾಗಲಿ ಏನೇ ಆಗಲಿ, ಕಲಾಪ್ರಜ್ಞೆನಮ್ಮಲ್ಲಿ ಬಹಳ ಹಿಂದಿನಿಂದ ಬಂದದ್ದು. ಆದ್ದರಿಂದಲೇ ಭಗವಂತನನ್ನು "ಸಕಲಕಲಾವಲ್ಲಭ" ಅಂತಲ್ವೋ ಕರೆಯುವುದು? ಯಾವ ಪದಾರ್ಥಕ್ಕೂ ಸ್ವಯಮೇವ ಕಲಾ ಸ್ವರೂಪ ಇರೋದಿಲ್ಲ. ಅದೆಲ್ಲ ಪ್ರಾಕೃತಿಕವಾಗಿರದೆ. ಹೌದಲ್ಲ? ಪರಂಪರೆ ಅಂತಂದ್ರೆ ಜಡವೋ? ಅದರಲ್ಲಿ ಏನಾದರೂ ಕೊಡುಗೆ ಬೇಡವೋ? ಅಕೋ ಆ ಮಟ್ಟಿಗೆ ನಾನು ನಿನ್ನನ್ನು ಅಂಗೀಕರಿಸಿದ್ದು ಎನ್ನ ಪೌತ್ರನ ಅಸ್ತ್ರ ಕೌಶಲ್ಯ ಮತ್ತೆ "ಇಕೊ ಈ ಬಾಣ ಬಿಟ್ಟಿದ್ದೇನೆ, ಆ ಬಾಣದಿಂದ ಖಂಡಿಸಿದ್ದೇನೆ", ಎಷ್ಟಾಯ್ತಲ್ಲಿ ಬಿಟ್ಟಿದ್ದು ಖಂಡಿಸಿದ್ದು? ಆ ಕೌಶಲ! ಆವಾಗ ಕ್ರೀಡಾ ಮನೋವೃತ್ತಿ ಅಂತ ಬರದೆ. ಸ್ಪರ್ಧೆ!

ಭಗವಂತನನ್ನು ಏನ್ ಹೇಳ್ತೇವೆ ನಾವು? "ರಸದ ಘಟ್ಟಿ". ಈ ದೃಷ್ಟಿಯಿಂದ ಅಭ್ಯಾಸ ಮಾಡಿಕೊಂಡು ಬಂದದ್ದು ಈ ಯುದ್ಧ ವಿದ್ಯೆ, ರಣದ ಕೌಶಲ. ಆದ್ದರಿಂದ ಪ್ರಾಜ್ಞ, ನನ್ನ ಪೌತ್ರನಾದ ನಿನ್ನ ಆ ರಣ ಕೌಶಲ್ಯ ಇದೊ ಕಾಣುವ ಬಯಕೆ ಆಯ್ತು. ಕೇಳಿದ್ದು ಸುಳ್ಳೇನಲ್ಲ. ಅಲ್ಲಿ ಹಾಗೆ ಮಾಡಿದ್ದಾನೆ. ಇಲ್ಲಿ ಹೀಗೆ ಮಾಡಿದ್ದಾನೆ. ಕೆಲವರಿಗೆ ಅಷ್ಟು ಸಾಕಾಗ್ತದೆ. ನನ್ನಂತ ವೃತ್ತಿ ಕ್ಷೇತ್ರದ ರಸಿಕಹೃದಯದ ಮುದುಕನಿಗೆ ಅದೇ ಬೇಕಾಗ್ತದೆ. ಎಷ್ಟು ಉಂಟು? ನೋಡುವಾ ಅಂತ ಬಂದಿದ್ದೇನೆ. ನೀನು ಅದನ್ನು ಪ್ರಕಟಪಡಿಸು. ಈ

ಅಜ್ಜನನ್ನು ಮೆಚ್ಚಿಸಿದೆ ಅಂತಾದ್ರೆ, ನನ್ನ ವಂಶದಲ್ಲಿ ಹುಟ್ಟಿದ್ದಕ್ಕೆ ಸಾರ್ಥಕತೆ ಅಲ್ಲ. ಇಷ್ಟು ವರ್ಷ ಬದುಕದ್ದಕ್ಕೆ ಧನ್ಯನಹೆನು. ಉಂಟೇನು? ಆ ಪ್ರಶಸ್ತಿಗೆಲ್ಲ ಬೆಲೆಯುಂಟಾ? ನೀನು ಪಡೆದದ್ದಕ್ಕೆ? ಅದಕಲ್ವಲ್ಲ ಯೋಗ ಅಂತ ಹೇಳಿದ್ದು ನಮ್ಮ ಸ್ವಾಮಿ. 'ಯೋಗಃ ಕರ್ಮಸುಕೌಶಲಮ್' ಇಲ್ಲದಿದ್ದರೆ ಅದು ಯೋಗ ಅಲ್ಲ ಹ್ವ ಏನಾಗ್ಯಾದೆ? ಆ ಆಧಾರದ ಮೇಲೆ ಅಜ್ಜ ಪ್ರಶಸ್ತಿ ಪತ್ರ ಕೊಡ್ಲಿಕ್ಕಿಲ್ಲ? ಮಗನೇ ಊರಿನಲ್ಲಿ ಪ್ರಚಾರಕ್ಕೆ ಅದೆಲ್ಲ ಒಳ್ಳೆಯದು ಯಾಕೆ? ಉತ್ತಮ ಸಂಗೀತಗಾರ ಅಂತ ಸೇನಾಪತಿಯು ಪ್ರಶಸ್ತಿ ಕೊಡೋದೋ? ಯಾರು ಕೊಡ್ಬೇಕು ಮತ್ತೆ? ದೇಶೀಯ ಕಲೆಯನ್ನು ಇನ್ನಾವುದೋ ದೇಶದವ - "ಆಹ! ಓಹೋ!" ಅಂತ ಹೇಳಿದರೆ ಅದಲ್ಲ. ಮಣ್ಣಿನ ಮಕ್ಕಳು ಅದನ್ನ ಒಪ್‌ಬೇಕು ಧನುರ್ವೇದ ಅನ್ನುವುದು ಕ್ಷತ್ರಿಯರ ಕ್ಷೇತ್ರಕ್ಕೆ ಸಂಬಂಧ ಪಟ್ಟದ್ದು. ನಾನು ಹೇಳುವುದು ಅದು-ಈ ನೀನು ಪೂಜಿಸಿದ ಕೈಲಾಸದ ಈಶ್ವರದೇವರು ಯುದ್ಧವಿದ್ಯಾವಿಶಾರದ್ನೋ? ಅವರ ರಕ್ತ ಅದೋ? ನೀನು ಎಲ್ಲಿ ಸೆಣಸಾಡಿದ್ರೂ ಅದು ರಣಕ್ಷೇತ್ರವೊ? ನಾನ್ ಆಕ್ಷೇಪಿಸುವುದಲ್ಲ, ನಿನಗೆ ಆ ಶಿವದೇವರಲ್ಲಿ ಪ್ರಾರ್ಥನೆಯೂ ಇತ್ತು. ಆ ಶಿವದೇವರಿಗೆ ನಿನ್ನಲ್ಲಿ ಅನುಗ್ರಹ ಬುದ್ಧಿಯೂ ಇತ್ತು!!

ಅದೆಲ್ಲ ಪ್ರಶಸ್ತಿ ಹೌದಾಗಿದ್ರೆ ಮಗನೆ ಇಂಥದ್ದು ನನ್ನಲ್ಲಿ ಎಷ್ಟಿಲ್ಲ ಅದು! ಆ ಪರುಶರಾಮ ದೇವರೇನು ಶಿವನಿಗಿಂತ ಕನಿಷ್ಠರೋ? ಅವರಲ್ಲಿ ಕಲಿತದ್ದು ಮಾತ್ರವಲ್ಲ ಮೂಲಸ್ವರೂಪದಿಂದ ವಿಷ್ಣುವಿನ ಅಪರಾವತಾರವೇ ಅಲ್ವೆ? ಇಪ್ಪತ್ತೊಂದು ಸಲ ಭೂಪ್ರದಕ್ಷಿಣೆ ಮಾಡಿ - ಕ್ಷತ್ರಿಯಕುಲಕುಠಾರನೆನಿಸಿದಂಥಹ ಪರಶುರಾಮ ದೇವರು ನನ್ನ ಗುರುಗಳು, ಒಂದಲ ನನ್ನ ಮೈಮೇಲೆ ಬೀಳಲಿಕ್ಕೆ ಬಂದದ್ದು ನಿನದೊತ್ತುಂಟು ಕತೆ! ಖಾಡಿ ಖಾಡಿ! ಓ ಪರುಶರಾಮದೇವರಲ್ಲಿ, ಅಲ್ಲಿ ಕೈಲಾಸಪರ್ವತದಲ್ಲಿ ಆದ ಹಾಗೆ ಒಂದು ಘಳಿಗೆಯದಲ್ಲ ಅದು. ದಿನ ದಿನದ ಲೆಕ್ಕಾಚಾರದ ಮೇಲೆ ಅಂತಲ್ಲೋ ಹೇಳಿದ್ದು? ಅದು ಆಗ್ಯದಪ್ಪ

ನಿನಗೆ ಶಿವನಿಂದ ಆಘಾತವಾದದ್ದನ್ನು ಕೇಳಿದ್ದೇನೆ. ಬಾಣ ಎಲ್ಲ ಮುಗಿದಾಗ ಬಿಲ್ಲಿನಿಂದ ಕಿರಾತನ ನೆತ್ತಿಗೆ ಹೊಡೆದೆಯಂತೆ, ಶಿವದೇವರಿಗೆ ಎಲ್ಲಿ ಪೆಟ್ಟು ಬಿದ್ರೂ ತಲೆ ಕೆಡೋದಿಲ್ಲ. ಹಣೆಗೆ ಬಿದ್ರೆ ಹೊಡೆದವನ ತಲೆ ಉಳಿಯೋದೇ ಇಲ್ಲ. ಆದ ಕಾರಣ "ಈಗ ಸುಟ್ಟು ಬಿಡೇನೆ" ಅಂತ ಶಿವ ದೇವರಿಗೆ ಆವೇಶ ಬರುವಾಗ ಆ ಜಗಧೀಶ್ವರಿ, ನಮ್ಮಮ್ಮ ಅವಳು ಬಂದು ತಡೆದಳಂತೆ! ಮತ್ತೂ ಹೇಳಿದಳಂತೆ "ನಿಮಗೆ ಕೆಲವುಸಲ ಈ ರಸಾವೇಶ ಹೆಚ್ಚಾಗ್ತಿದೆ, ಆವಾಗ ಎಲ್ಲಿದ್ದೀರಿ ಏನ್ ಮಾಡ್ತೀರಿ ಎಂದು ಗೊತ್ತಾಗೋದಿಲ್ಲ. ನನ್ನೊತ್ತಾಗದೆ ಹುಡುಗಾಟಿಕೆ ಅಂತ ಭೇ, ವೇಷ ಕಟ್ಟಿ ಇಲ್ಲಿಗೆ ಬಂದು ಪರೀಕ್ಷೆಗೆ ಅಂತ ಹೇಳಿ ಈಗ ಹುಡುಗ ನೆತ್ತಿಗೆ ಹೊಡೆದಿದ್ದಾನೆ ಅನ್ನುವಾಗ 'ಲೋಕಸುತ್ತೇನೆ' ಅಂತ ಹೊರಟಿದ್ದೀರಲ್ಲ! ನಮ್ಮ ಮಗುವಿನ ಮೇಲೆ ಕೈ ಮಾಡಬೇಡಿ". ಇಲ್ಲದಿದ್ದರೆ ನಿನ್ನ ಮುಖ ಕಾಣುವ ಭಾಗ್ಯ ನನಗಿರಿತ್ತೊ ಇಲ್ಲೊ ಮಗನೆ! ಏನೇ ಆಗಲಿ ಆ ಪಾರ್ವತಿ ಅಮ್ಮ ದೊಡ್ಡ ಅನುಗ್ರಹ ಮಾಡಿದ್ದು. ಹೋಗ್ಲಿ, ಆದರೂ ಶಿವ ಹೇಳಿದ್ದು - "ಮೆಚ್ಚಿದೆ" ಅಂತ. ನನ್ನ ಗುರುಗಳು

ಅರ್ಹತಾ ಪತ್ರದಲ್ಲಿ ಅದನ್ನೂ ಬರೆದು ಕೊಟ್ಟಿದ್ದಾರೆ - “ನಿನಗೆ ನಾ ಸೋತೆ”! ಯಾಕೆ ಹೇಳಿದೆ ಇದೆಲ್ಲ? ಇದು ನಮ್ಮವರು ನಮಗೆ ಕೊಡುವ ಪ್ರಶಸ್ತಿ, ಈ ಪ್ರಶಸ್ತಿಯೆಲ್ಲ ಇದು ಮೊದಲೇ ಇದ್ದಂಥಹ ಸ್ನೇಹ ಸಂಬಂಧದಿಂದ, ಕೊಡುವ ಕಾಲ ಬರುವಾಗ ಮೊದಲು ನಮ್ಮಂಥವರಿಗೇ ಬರುವುದು ಅದು.

ಆದರೆ ಹಾಗೆಲ್ಲ ವಾದ ಮಾಡಿದರೆ ಕೊನೆಗೆ ನಾವು ಉದ್ಘಾಟಿಸಿದ ಪ್ರಶಸ್ತಿಯನ್ನು ಎಲ್ಲಿಯಾದರೂ ಬೀಸಾಡಬೇಕಾದಿತು ಆದ್ದರಿಂದ ನಾನು ಹೇಳಿರೋದ ಹತ್ತು ಜನ ಕಾಣಲಿಕ್ಕೆ ನಿನಗೂ ಇರಲಿ, ಹತ್ತು ಜನ ಓದುವುದಕ್ಕೆ ನನ್ನ ಪ್ರಶಸ್ತಿಯೂ ಇರಲಿ; ಅದಕ್ಕೆ ಮೌಲ್ಯ ಏನೂ ಇಲ್ಲ. ಈಗ ನಾವು ಮಾಡಬೇಕಾದದ್ದೇನು ಗೊತ್ತುಂಟೋ? ಪ್ರಶಸ್ತಿಗೆ ಅರ್ಥಕೋಡಬೇಕಾದ್ದೀಗ ನಾವು ದುಡಿದು. ನನ್ನ ಮುಂದೆ ನಡೆದೀತೋ? ಈ ಭೀಷ್ಮ, ಧನುರ್ಧಾರಿಯಾಗಿ ನಿತ್ತರೆ ಈ ಭೀಷ್ಮನ ಪಕ್ಷದಲ್ಲಿದ್ದ ಒಬ್ಬನೇ ಒಬ್ಬನನ್ನಾದರೂ ಕೂದಲು ಕೊಂಕಿಸಲಿಕ್ಕೆ ಮೊಮ್ಮಗನೇ ನಿನಗೆ ಕೂಡೀತೆ?

ಹೌದಪ್ಪ ಚಿತ್ರಸೇನ ಗಂಧರ್ವನನ್ನು ನೀನು ಬಿಡಿಸಿದ ಮೇಲೆ ನಗೆ ಸುದ್ದಿ ಸಿಕ್ಕಿದ್ದು ಹೌದು ಮಗನೆ ನೀನು ಚಿತ್ರಸೇನನನ್ನು ಯೇನು ಮಾಡಿದ್ದು? ಮುಖಾಮುಖಿಯಾಗಿ ಇದಿರಿಸಿದ್ದು ಅಲ್ವೋ? ನಾನು ಕೂತಲ್ಲಿಂದ ಗಂಧರ್ವಲೋಕ ಸುಡುತ್ತೇನೆ ಅಂತ ಹೇಳಿ ಎಲ್ಲರನ್ನೂ ಹೆದರಿಸಿದ ಜನ, ನನ್ನ ಶಬ್ದಕ್ಕೆ ಹೆದರಿದರು ಗಂಧರ್ವರು. ನೀನು ಪೆಟ್ಟೇ ಮಾಡಬೇಕಾಯ್ತು ಅಲ್ವೋ? ನನ್ನ ರಕ್ಷೆಯಲ್ಲಿ ಕೌರವ ಇದ್ರೆ ಹಾಗಾಗ್ತಿತ್ತೋ?

ಗೋಗ್ರಹಣದಲ್ಲಿ ದ್ರೋಣರನ್ನೂ ನನ್ನನ್ನೂ ನೀನು ಸೋಲಿಸಿದೆ. ಹೇಗೆ? ಬಾಣ ಬಿಟ್ಟಲ್ವೋ ಪಾಪ!! ನಮಗಿಬ್ಬರಿಗೂ ಬಂದದ್ದು ಏನು? ಕಾರುಣ್ಯ, ಅರ್ಜುನಾ, ವನವಾಸ ಅಜ್ಞಾತವಾಸದಲ್ಲಿ ಬಹಳಷ್ಟು ಕಂಗಾಲಾಗಿದ್ದಾರೆ ಮೊಮ್ಮಕ್ಕಳು, ಅಜ್ಜನ ಅನಿಸಿಕೆ. ಗೋಗ್ರಹಣಕ್ಕೆ ಕೌರವ ಮುಂದಾದ ಯಾಕೆ ಅಂತ ನನ್ನೊತ್ತಾಯ್ತು. ನಿಮ್ಮನ್ನು ಬೆಳಕಿಗೆ ಎಳೆದು, ಅವಧಿಗಿಂತ ಮೊದಲು ನಾನು ಕಂಡಿದ್ದೇನೆ ಪಾಂಡವರನ್ನು ಅಂತ ಪುನಃ ಕಾಡಿಗೆ ಅಟ್ಟಿಕ್ಕೆ. ಅಯ್ಯೋ, ನಾವೆಲ್ಲ ಬದುಕಿದ್ದು ಈ ಹುಡುಗರು ಹದಿಮೂರು ವರುಷ, ಕಷ್ಟ ಪಟ್ಟದ್ದೇ ಸಾಕು ಆದ ಕಾರಣ, ಇದಕ್ಕೇನಾದರೂ ಮಾರ್ಗ ಕಾಣಬೇಕು ಅಂತ ನಾನು ಹೊರಟಾವಾಗ, ದ್ರೋಣಚಾರ್ಯರಿಗೂ ಇದರ ಸುಳಿವು ಸಿಕ್ಕಿತ್ತು, ಅವರೂ ಹೊರಟು, ಅದಕ್ಕಾಗಿ ನಿಮ್ಮ ಬಗ್ಗೆ ಅನುಕಂಪಯಿದ್ದದ್ದರಿಂದ ಇವ ದನ ಹಿಡಿಯುವುದು ಯಾಕೆ ಅಂತೂ ನಮಗೆ ಅರ್ಥಾಯ್ತು. -ನಿನ್ನಣ್ಣ ಧರ್ಮರಾಯ ಗೋಗ್ರಾಸ ಇಲ್ಲದಿದ್ರೆ ಗಂಗಾಜಲ ಮುತ್ತಿಕ್ಕಿಲ್ಲ ಅಯ್ಯೋ ಹೊಟ್ಟೆಗೆ ಹಿಟ್ಟಿಲ್ಲದೆ ಯೆಷ್ಟಕಷ್ಟ ಪಟ್ಟೊ ನಮ್ಮ ಮಕ್ಕಳು ಕಾಡ್ನಲ್ಲಿ ಅಂತ ನಾನಾಗ ಆಲೋಚಿಸಿದ್ದು, ವಿರಾಟನ ಮನೆಯಲ್ಲಾದರೂ ಎರಡುಹೊತ್ತು ಊಟ ಮಾಡ್ತಾ ಇದ್ರು. ಆದರೆ ಇವ ಬಿಡೋದಿಲ್ಲಲ್ಲ ಅಂತ ಅನುಕಂಪ ಬಂದು ನಾವೂ ಹೊಗ್ವಾ ಅಂತ ಹೊರಟಿದ್ದು, ಕೌರವ ಏನು ತಿಳಕೊಂಡ? ಹೋ, ಈಸಲ ನನ್ನೊಟ್ಟಿಗೆ ಸರ್ವಾನುಮತದಿಂದ

ಇವರೆಲ್ಲಾ ಇದ್ದಾರೆ ಅಂತ. ಬಂದಾವಾಗ ಏನಾಯ್ತು? ನೀನೇ ದುಡುಕಿ ಬಂದೆ ಹೌದೊ? ಯುದ್ಧ ಮಾಡಿದೆ, ಎಲ್ಲ ಸೋತರು. ಅವರ ಸುದ್ದಿ ಬಿಡು ಅದು ಯಾವಾಗ್ಲೂ ಹಿಂದುಳಿದದ್ದೇ ಅದು ಆದರೆ ನಮ್ಮನ್ನು ಹಿಂದುಳಿದವರು ಅಂತ ನೀನು ಹೇಳಬಹುದೇ? ಯುದ್ಧದಲ್ಲಿ ದೊಡ್ಡ ದೊಡ್ಡ ಪೆಟ್ಟಾಯ್ತು ಅದು ನನ್ನ ಮಾನಕ್ಕೆ ಹೌದೋ ಮಗನೇ! ನಿನ್ನ ಪೆಟ್ಟು ತಾಗಿ ಈ ದ್ರೋಣಾಚಾರ್ಯರು ಈ ಭೀಷ್ಮನ ಒಟ್ಟಿಗೆ ಮಣ್ಣಿನಲ್ಲಿ ಬಿದ್ದದ್ದು ಅಂತ ಮಾಡಿದ್ಯೋ ನೀನು?

ಇಕೊ ಇಕೋ, ಸುಳ್ ಹೇಳ್ಬೇಡ ಹಾಗಾದರೆ ನಿನಗೆ ಸಾಕ್ಷಿಕೊಡ್ತೇನೆ. ನಿನ್ನ ಸಾರಥಿಯಾಗಿದ್ದಲ್ಲ ಅವ ಕೆಲವರ ಆಭರಣಯೆಲ್ಲ ತೆಗೆಲಿಕ್ಕೆ ಬಂದಾವಾಗ ನಮ್ಮ ಹತ್ರ ಬರುವಾಗ ನೀನು ಹೀಗೆ ಹೇಳಿದ್ದು ಹೌದೊ? ಅವರನ್ನಿಬ್ರನ್ನು ಮುಟ್ಟೇಡ ಹಾಗಾದರೆ ನಾವು ನಿದ್ರೆಯಲ್ಲಿದ್ದೆವೊ? ಎಚ್ಚರದಲ್ಲಿದ್ದೆವೊ? ಈಗ ನಾನು ಹೇಳುವುದು ಅದು – ನೀನೇ ಅಲ್ವೇ ಹೇಳಿದ್ದು? ಅದ್ ಬಿಡು, ಅದು ನಾನು ಹೀಗೆ ಕಣ್ ತೆರೆದು ನೋಡಿದ್ದೇನೆ ದ್ರೋಣಾಚಾರ್ಯರನ್ನು ಹೀಗೆ ಚಿವುಟಿದ್ದೇನೆ ನೋಡಿ ಹುಡುಗನಿಗೆ ಎಷ್ಟು ಭಕ್ತಿ ಅಂತ ಹಾಗಾದರೆ ನೀನು ಸೋಲಿಸಿ ನಾವು ಮಲಗಿದ್ದೋ? ನಿನ್ನ ಬಾಣ ತಾಗಿ ನಾವು ಬಿದ್ದದ್ದೂ ಅದು? ನಿನ್ನ ಒಳ್ಳೆತನಕ್ಕೆ ನಾವು ಸೋತದ್ದು. ಮತ್ತೆ ನಿನ್ನ ಮೋಹನಾಸ್ತ್ರಯೆಲ್ಲ ನಮಗೆ ತಾಗ್ತಿದೆಯೇನೊ?

ಅದನ್ನೆಲ್ಲ ದೊಡ್ಡದೊಡ್ಡ, ದೊಡ್ಡದೊಡ್ಡ ಪ್ರಶಸ್ತಿ ಪುಟದಲ್ಲಿ ಸೇರಿಸ್ತಾ ಹೋಗ್ತಿ ಅಲ್ವೇನೋ? ಕೆಟ್ಟ ಹುಡ್ಗ, ಆದ್ದರಿಂದ ಯೆನ್ನ ಪೌತ್ರನ ಕುಶಲ ಕಂಡು ಧನ್ಯನಾಗಬೇಕು ಎಂಬ ಆಸೆ ನನಗಿದೆ. ಅದಕ್ಕಾಗಿ ಮಾತು ನಿಲ್ಲಿಸು. ನೋಡೋಣ ಯೇನುಂಟು? ಆದರೆ ವೊಂದುಂಟು ತೊಡಗೂದೆಲ್ಲಿಂದ? ಆ ಸಣ್ಣ ಪುಟ್ಟ ಬಾಣಯೆಲ್ಲ ಬೇಡ, ನನ್ನ ಪ್ರಶಸ್ತಿಗೆ ನಿನ್ನ ಪ್ರಶಸ್ತಿಯನ್ನು ಒತ್ತೆ ಇಡ್ತಿಯೊ? ಶಿವನು ನಿನಗೆ ಮೆಚ್ಚಿಕೊಟ್ಟ ಪ್ರಶಸ್ತಿ ಏನು? ಅದನ್ನೇ ಮುಂದೆ ಒಡ್ಡು, ನಾನು ಗುರುದತ್ತವಾದುದನ್ನೇ ಮುಂದೆ ಒತ್ತೇನೆ. ಅಲ್ಲಿಂದ್ದೇ ಬಾಣ ಪ್ರಯೋಗ ಪ್ರಾರಂಭವಾಗಿ ತೆಗಿ ಪಾಶು ಥಥ ನೋಡ್ತೀನೆ.

ಯೆಲಾ ಯೆಲಾ ಯೆಲಾ! ಹ್ಯಾಗೆ ಹ್ಯಾಗೆ ಪ್ರತಿಜ್ಞಾ ಬದ್ಧನಾದವ ಯಾರು? ಅವ ಹೀಗೆ ನೋಡ್ತಾ ಇದ್ದಾನೆ. ಇಲ್ಲಿ ಈ ಹುಡುಗ ಏನೂ ಅಲ್ಲ. ಅವ ಪಾಶುಪತಾಸ್ತ್ರ ಹೂಡು, ಬಿಡು ಅಂತಂದ್ರೆ ಬಿಟ್ಟಾನೋ ಈ ಅಜ್ಜನ ಮೇಲೆ? ಬಿಡ್ಲಿಕ್ಕೂ ಇಲ್ಲ. ಎಷ್ಟು ಅಸ್ತ್ರಪ್ರಯೋಗ ಮಾಡಿದ್ದಾನೆ! ನಾನ್ ಎಲ್ಲಾ ಖಂಡಿಸಿದ್ದೇನೆ. ಖಂಡಿಸಿದ್ದು ಮಾತ್ರ ಅಲ್ಲಿಗೆ ಹೊಡೆಲಿಕ್ಕೊ ನಾನು ಹುಟ್ಟಿದ್ದು? ಹುಡುಗರ ಕೈಯಿಂದ ಪೆಟ್ಟು ತಪ್ಪಿಸಲಿಕ್ಕೆ ಬೇಕಾಗಿ ನಾನು ಪೇಚಾಡಿದ್ದಷ್ಟೇ. ಹಾಗಾದರೆ ನಾನು ಬಿಟ್ಟ ಬಾಣ ಎಲ್ಲ ಎಲ್ಲಿಗೊಯ್ತು?

ಓಹ್ಹೊ! ಪಂಥದಲ್ಲಿ ಮೊದಲ ಎದುರಾಳಿ ಅವ ನನಗೆ. ಕೃಷ್ಣ ಇವನನ್ನು ಛೂಬಿಟ್ಟಿದ್ದ! ಅವ ಎಲ್ಲಿಯವರೆಗೆ ಬುದ್ಧಿವಂತ!! ತಾನು ಪ್ರತಿಜ್ಞೆ ಮಾಡಿದ್ದಾನೆ; "ಅರ್ಜುನಾ ನೀನೂ ಪ್ರತಿಜ್ಞೆ ಮಾಡು" ಹೇಗೆ? ಇವ ಮಾಡಿದ ಮೇಲೆ ಮೊತ್ತಬ್ಬ ಪ್ರತಿಜ್ಞೆ ಮಾಡ್ಬೇಕೋ? ಆದ್ದರಿಂದ ಇವನನ್ನು ಬಿಡುವ.

ನಾನ್ ಬಿಟ್ಟ ಮಂತ್ರಾಸ್ತ್ರಗಳನ್ನೆಲ್ಲ ಇವ ನುಂಗಿ ಹಾಕಿದ್ದು, ಅಂತಂದ್ರೆ ಬಾಣವನ್ನು ನುಂಗಿ ಹಾಕಿದ್ದಲ್ಲ ಆ ಬಾಣದಲ್ಲಿ ನಾನು ಮಂತ್ರ ರೀತ್ಯಾ ಆಹ್ವಾಹಿಸಿದ ದೇವತೆ ಉಂಟಲ್ಲ; ಅದನ್ನೇ ಈ ಮಹಾದೇವತೆ ಸ್ವಾಹಾ ಮಾಡಿದನಲ್ಲ ಮಳೆಯಾಗಿ ಬಿದ್ದಹನಿಯೆಲ್ಲ ಹೊಳೆಯಾಗಿ ಸಮುದ್ರವನ್ನೇ ಸೇರುವ ಹಾಗೆ, ಆಕಾಶಾತ್ ಪತೀತಂ ತೋಯಂ...ಗಚ್ಛತಿ...

ನಾನು ಅಗ್ನಿಯನ್ನು ಆಹ್ವಾನಿಸಿ ಅದನ್ನು ಆಗೇಯಾಸ್ತ್ರಮಾಡಿ ಪ್ರಯೋಗಿಸುವಾಗ ಅಗ್ನಿಯನ್ನೇ ಇವ ನುಂಗಿಬಿಟ್ಟ ಮತ್ತೆ ಉಳಿದದ್ ಯೇಂಥದ್ದು? ಬರೇ ಬಿದಿರಿನ ತುಂಡು! ಯೇ ಪುಣ್ಯಾತ್ಮ ಯೇ ಪುಣ್ಯಾತ್ಮ! ಹಾಗಾದರೆ ಅವ ಪಾಶುಪತವನ್ನು ಬಿಡ್ಲಿಲ್ಲ ಅವನ ಪ್ರಶಸ್ತಿಯನ್ನೆಲ್ಲ ಒತ್ತೆ ಇರಿಸಲಿಲ್ಲ. ನಾನು ನನ್ನ ಪ್ರಶಸ್ತಿಯನ್ನು ಒತ್ತೆ ಇರಿಸಿಯಾಗ್ಯದೆ ಯಾವುದದು ಪರಶುರಾಮದತ್ತ ಅಸಿರತ್ನ! ಆದರೆ ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯುವ ಹಾಗೆ ಇವ ಮಾಡಿದ್ದಾನಲ್ಲ. ಇವ ಅಂದ್ರೆ ಕೃಷ್ಣ. ಇವನನ್ನು ಸ್ವಲ್ಪ ಎಚ್ಚರಿಸಬೇಕಾಗಿದೆ. ಯಾಕೆ? ನೀನ್ಯಾಕೋ ನಿನ್ನ ಹಂಗ್ಯಾಕೋ? ಅಂದಿದ್ದೇನೆ. ಆದ ಕಾರಣ ಪರಶುರಾಮದತ್ತವಾದ ಅಸಿರತ್ನವೆಂಬ ಈ ಮಹಾಸ್ತ್ರವನ್ನು ಸಾರಥಿಯಾದ ಕೃಷ್ಣನ ನೆತ್ತಿಯನ್ನೇ ಲಕ್ಷ್ಯವನ್ನಾಗಿರಿಸಿ ಪ್ರಯೋಗಿಸ್ತೇನಂತೆ.

(ಕೃಷ್ಣನ ನೆತ್ತಿ ಒಡೆಯಿತು, ರಕ್ತ ಸುರಿಯಿತು, ಭೀಷ್ಮನ ಕೊರಳು
ಕತ್ತರಿಸುವೆನೆಂದು ಕೃಷ್ಣ ಕೈಯಲ್ಲಿ ಸುದರ್ಶನವನ್ನು ಧರಿಸಿ ಆರ್ಭಟಿಸಿದ.)

ಯಾರೂ ಹೆದ್ರಬೇಡಿ, ಭಯಪಡಬೇಕಾಗದ್ದಿಲ್ಲ ಕೋಪ ಬಂದದ್ದಲ್ಲ ಇದು ತಂದದ್ದು. ಏನ್ ಆಪಾದನೆ ಮಾಡ್ತಾನೆ ನನ್ಮೇಲೆ. ಈ ಹೊತ್ತು ಅಪರಾಹ್ನಕ್ಕೆ ತೊಡಗಿದ್ದಾಗ "ನೀವು ದುಷ್ಟನೊಟ್ಟಿಗೆ ಕೂಡಿಕೊಂಡಿದ್ದೀರಿ. ನೀವು ಪಕ್ಷಪಾತ ಮಾಡಿದ್ದೀರಿ ಭೀಷ್ಮಾಚಾರ್ಯರೇ" ಈಗ ಕೊನೆಗೆ ಏನು ಹೇಳಿದ!

ಸಾರಥಿಯ ಮೇಲೆ ದುಡುಕಿ ಯಾರೂ ಕೈ ಮಾಡಬಾರದು, ಮಹಾರಥಿಯಾದವನಿಗೆ ಮಹಾರಥಿಯ ಕಡೆಗೆ ಲಕ್ಷ್ಯವಿರಬೇಕು, ಇನ್ನೊಬ್ಬ ಸಮಯ ಕೇಳಿದರೆ ಕೊಟ್ಟು ಯುದ್ಧ ಮಾಡಬೇಕು, ನನ್ನ ಸೇನಾಧಿಪಥ್ಯದಲ್ಲಿ ನಾನು ತಂದ ಶಾಸನ ಅದು. ಇದರ ಜೊತೆಯಲ್ಲಿ ದ್ರೋಣಾಚಾರ್ಯರು ಒಂದು ಸೇರಿಸಿದ್ದಾರೆ ದಿವ್ಯಾಸ್ತ್ರಗಳನ್ನು ಯಾರೂ ಪ್ರಯೋಗಿಸಬಾರದು. ನಿಯಂತ್ರಣ ಹಾಕಿದ್ದು ಯಾಕೆ? ಅವರು ರಾಯಕಟಕಾ

ಚಾರ್ಯರಾದ್ದರಿಂದ ಅವರಿಗೆ ಹೇಳುವ ಹಕ್ಕುಂಟು. ಹೌದು ಸಾರಥಿಯ ಮೇಲೆ ಕೈ ಮಾಡಬಾರದು. ಆದರೆ ನನ್ನದ್ದು ಒಂದು ಪ್ರಶ್ನೆಯುಂಟು ಸಾರಥಿ ತನ್ನ ರಥಿಕನ ಕೈಯಿಂದ ಆ ರಥಿಕನನ್ನು ಸೋಲಿಸ್ತೇನೆ ಅಂಥ ಪ್ರತಿಜ್ಞೆ ಮಾಡಬಹುದೋ? ಸಾರಥಿಗೆ ಯಾಕೆ ಬೇಕಿತ್ತು ಈ ಅಧಿಕಪ್ರಸಂಗ? ಹಾಗಾದರೆ ಇಲ್ಲಿ ಸಾರಥಿ ರಥಿಕ ಎಂಬ ನ್ಯಾಯ ಅಲ್ಲ. ನಾನು ಭಕ್ತನೂ ಹೌದೋ ಅಲ್ವೋ ಎಂಬ ಆತ್ಮ ಪರೀಕ್ಷೆ, ಯೇ ಪುಣ್ಯಾತ್ಮ ಯೇನಂತೆ? ಯಾರು ಬಾರ್ತಾರೆ ಈ ಭೀಷ್ಮನನ್ನು ಕಾಪಾಡುವುದಕ್ಕೆ? ಬ್ರಹ್ಮನೋ ರುದ್ರನೋ ಇಂದ್ರನೋ ಚಂದ್ರನೋ ಇಗೋಳಿ ಜಾಗ್ರತೆ, ಯಾರಾರ ಒಲೆ ಇಲ್ಲ ಅಂತ ಮಾಡ್ತಾನೋ! ಬಂದರೆ ಯಾಕ್ ಬಂದಾರು ಅವರು? ಭೀಷ್ಮನಿಗೂ ಅವರಿಗೂ ಸಂಬಂಧ ಏನು? ಕೆಲವರು ಅಲ್ಲಿ ಕಾಯ್ತಾ ಇದ್ದಾರೆ, ಯಾವಾಗ ಇವನ ತಲೆ ಹೋದೀತು ಅಂತ. ಯಾಕೆ? ನಾನು ಅವರಲ್ಲಿ ಸಂಪರ್ಕ ಅಷ್ಟಕಷ್ಟೇ ಇಟ್ಟುಕೊಂಡವನು. ರುದ್ರನಲ್ಲಿಯೂ ಅಷ್ಟೇ ಬ್ರಹ್ಮನಲ್ಲಿಯೂ ಅಷ್ಟೇ. ನಾ ನಂಬಿದ್ದು ಇವನನ್ನು, ಇವನು ಅವತಾರಮಾಡುವುದಕ್ಕಿಂತ ಮೊದಲೇ “ಓಂನಮೊಭಗವತೇವಾಸುದೇವಾಯ' ಎಂಬ ದ್ವಾದಶಾಕ್ಷರೀ ಮಹಾಮಂತ್ರವನ್ನು ಸಿದ್ಧಿ ಮಾಡಿ ಕೊಂಡವು. ಮಂತ್ರ ಸಿದ್ಧಿ! ಈ ಸ್ವಾಮಿಯನ್ನು ಬಿಟ್ಟು, ಇವ ಕೊಲ್ಲಲಿಕ್ಕೆ ಬತ್ತೇನೆ ಅಂದಾವಾಗ ನಾನು ಕಾಡು ದೈವಗಳನ್ನು ಹುಡುಕಿಕೊಂಡು ಹೋದೇನೊ? ನನ್ನ ಈ ಶ್ರದ್ಧೆಗೆ ಪೆಟ್ಟದು. ಹಾಗಾದರೆ ಏನೇ ಆಗಲಿ ಕೊಲ್ತಾನಾದ್ರೆ ಕೊಲ್ಲಲಿ ಬಿಡುದಿದ್ರೆ ಬಿಡಲಿ, ತಾಯಿ ಮಗುವಿಗೆ ಹೊಡೆಯುವಾಗ ಒಳ್ಳೆ ಮಗುವಾದ್ರೆ ಅಮ್ಮಾ ಅಮ್ಮಾ ಅಂತ್ತೇ ಅತ್ತೀತಷ್ಟೆ ಹೊರತು ಬೇರೆ ಯಾರನ್ನಾದರೂ ಕರೆದೀತೆ? ಇಂಥ ಅಚಲವಾದ, ಅವ್ಯಭಿಚಾರಿಭಕ್ತಿಯ ಭೀಷ್ಮ ಹಿಡಕೊಳ್ಳೋದು ಕೃಷ್ಣನನ್ನೇ ಆದ್ರೆ ಹೇಗೆ, ರಥದಿಂದ ಇಳಿದು ಹೋಗಿ ಅವನ ಕಾಲು ಹಿಡಕೊಳ್ಳೋದು. ಕೂಡದು ಕೂಡದು ಯುದ್ಧ ವಿರಾಮವಾಗ್ಲಿಲ್ಲ. ಇದು ಪಂಥ ಊರ್ಜಿತವಾಗಿ ಉಂಟು. ಕಾಲ್ ಹಿಡ್ಕೊಂಡ್ರೆ ಕೌರವ ಸೇನಾಧಿಪತಿ ಶರಣಾದ ಕೃಷ್ಣನಿಗೆ ಅಂತ ಆಗ್ತದೆ. ಶರಣಾಗಬಾರದು ಅಂತಲ್ಲ, ಆದರೆ ಪಂಥಮಾಡಿದ್ದೇನೆ. ನೀನ್ಯಾಕೋ ನಿನ್ನ ಹಂಗ್ಯಾಕೋ ಅಂತ. ಕೊನೆಗೆ ಶರಣಾಗಿ ಬಿಟ್ರೆ, “ನೋಡಿ, ಪ್ರತಿಜ್ಞೆಯೆಲ್ಲ ಮಾಡಿದ ಗುಟ್ಟಿನಲ್ಲಿ ಹೋಗಿ ಅಲ್ಲಿ ದಮ್ಮಯ್ಯ ನನ್ನ ಮರ್ಯಾದೆ ಉಳಿಸಬೇಕು ಅಂತ ಬೇಡಿಕೊಂಡ” ಅಂತ ಹೇಳ್ಯಾರು, ಅಂಥವರೇ ಇರೋದು. ಅದೂ ಪೂರಾ ಕೇಳೋಡಿ ನಮ್ಮ ಕೌರವನ ಕೈಗೆ ಇಂಥದ್ದು ಒಂದೊಂದು ಸಿಕ್ಕಿದರೆ ಮತ್ತೆ ಎಷ್ಟು ವ್ಯಾಖ್ಯಾನಮಾಡ್ಯಾನೊ? ಇದು ಶರಣಾಗೋದಲ್ಲ. ಮತ್ತೆ ಅದಕ್ಕೆ ಹೀಗೆ ಮಾಡೋಣ ರಥದಿಂದ ಹಾರಿದ್ದೇನೆ. ಬಿಲ್ಲು, ಬತ್ತಳಿಕೆಯನ್ನು ರಥದಲ್ಲೇ ಇಟ್ಟಿದ್ದೇನೆ. ನಿಧಾನವಾಗಿ ನಡೆದು ಬಂದಿದ್ದೇನೆ ಬಂದದ್ದು ಮಾತ್ರವೊ? ಈ ಸ್ವಾಮಿಯು ಆ ಚಕ್ರವನ್ನು ಧರಿಸಿದ ಬಲಗೈಯನ್ನು ನನ್ನ ಎಡಗೈಯಿಂದ ಹಿಡಿದಿದ್ದೇನೆ. ಆಮೇಲೆ ಈಗ ತೊಡಗುತ್ತೇನೆ.

*ಮಧುಮಾಧವಿ-ಏಕತಾಳ ಶ್ರೀಮನೋಹರ ಸ್ವಾಮಿ ಪರಾಕು | ಪ್ರೇಮದೊಳೆನ್ನಯ ಮಾತ*

*ಲಾಲಿಸಬೇಕು ಎನ್ನಯ ಕಂಠವನಿರಿಯಲು ಚಕ್ರವ ಚಿನ್ಮಯ ಕಯ್ಯಲಿ*

*ಪಿಡಿದಿಹೆಯ ॥ ಚೆನ್ನಾಯ್ತು ಸೇವಕಚಯವ ಪಾಲಿಸಿ ಲೋಕ | ವನ್ನು*

*ರಕ್ಷಿಪ ದೇವ ಮಹಾನುಭಾವ | ಶ್ರೀಮನೋಹರ ॥ ೧೫೦ ॥*

ಚೆನ್ನಾಯ್ತು ಚೆನ್ನಾಯ್ತು ಚೆನ್ನಾಯ್ತು ಯಾಕೆ? ಬೇರೆ ಯಾರೂ ಅಲ್ಲ, ಇಷ್ಟಕ್ಕೆ ಸ್ವಾಮಿ.... ಈ ನನ್ನಂಥವನಿಗೆ.... ಈ ರಸಾವೇಶಬಂದ್ರೆ ತಣಿಯಲಿಕ್ಕೆ ಸ್ವಲ್ಪ ಹೊತ್ತು ಬೇಕಾಗ್ತದೆ ಅನುಭವಿಸುವವನಿಗೆ. ಪ್ರದರ್ಶಿಸುವವನಿಗೆ ಆವೇಶ ತಣಿಯೋದೇ ಇಲ್ಲ! ಎಷ್ಟು ಚೆನ್ನಾಯ್ತು ಈ ಪ್ರಕರಣ. ಚಕ್ರ ಹಿಡದದ್ ಯಾಕೆ, ಯಾರೆದುರು? "ಭೀಷ್ಮನ ತಲೆಕತ್ತರಿಸ್ತೇನೆ!" ಸ್ವಾಮಿ ಚಕ್ರ ಇರೋದು ಇಷ್ಟಕ್ಕೆಯೊ? ಬೇರೆ ಯಾರೂ ಸಿಕ್ಕೋದಿಲ್ಲ ತಲೆಕೊಡಲಿಕ್ಕೆ ಭಕ್ತರೇ ಇರೋದು. ಯಾಕೆ? ಶರಣರು, ಶರಣರು ಅಂತಂದ್ರೆ ತಲೆಯನ್ನು ನಿನ್ನ ಪಾದ ಮೂಲದಲ್ಲಿ ಇಡ್ತಾರೆ. ಅಲ್ಲಿ ಕಡಿದುಬಿಡುವುದು. ಈಗ ಹಾಗೆ ಅಲ್ಲೋ ಈ ಕೃತಿಯಿಂದ ಕಂಡದ್ದು? ಓಪರಾಕೆ, ಮನಸಾರೆ ನಿನಗೆ ಶರಣಾಗಿ ಶತಮಾನ ಶತಮಾನಗಳು ಸಂದವು. ಹೊಸತಾಗಿ ಶರಣಾದದ್ದಲ್ಲ. ಆದರೆ ವೃತ್ತಿಯಲ್ಲಿ, ಕೃತಿಯಲ್ಲಿ ಆ ಕ್ಷೇತ್ರದ ಮರ್ಯಾದೆಯಲ್ಲಿ ಈ ತಲೆ ಬಾಗುವಂಥದ್ದು ಅಲ್ಲ. ಇದು ನನ್ನ ಶುದ್ಧವಾದಂತಹ ಸಂಸ್ಕೃತಿಯ ಭಕ್ತಿ, ನನ್ನ ವೃತ್ತಿಕ್ಷೇತ್ರದಲ್ಲಿ ನನ್ನ ಕಾರ್ಯಕ್ಷೇತ್ರದಲ್ಲಿ, ನನ್ನ ಆತ್ಮ ಗೌರವ ನನ್ನ ಸ್ವಧರ್ಮ ಪ್ರಜ್ಞೆ ಇದನ್ನು ಕಾದಿಡುವಲ್ಲಿ ಕಾಪಾಡುವಲ್ಲಿ ನಾನು ಯಾರಹಂಗಿಗೂ ಬಿದ್ದವನಲ್ಲ. ಮನಸಾರೆ ನಾನು ನಿನಗೆ ಶರಣು. ಆದ್ದರಿಂದ ಈಗ ಇಳಿದು ಬಂದು ಕೈಯನ್ನು ಹಿಡಿದು ವಿರೋಧಿಸಿದೆನೇ ಹೊರತು ಪಾದಮುಟ್ಟಿದೆನೇ? ಯಾಕೆ? ದೀನತೆ ಇಲ್ಲ ಭೀಷ್ಮನಲ್ಲಿ. ಅದೇ ಯಾರೋ ಹೇಳಿದ ಹಾಗೆ, ವಿನಾ ದೈನ್ಯೇನ ಜೀವನಂ ಅನಾಯಾಸೇನ ಮರಣಂ ಇಛಾಮರಣಿ ನಾನು, ಇನ್ನೇನು ಭಾಗ್ಯ ನಾನು ಸಂಪಾದಿಸುವದಕ್ಕುಂಟು? ಆದಕಾರಣ ನಿನ್ನಲ್ಲಿ ಹೃದಯಪೂರ್ವಕವಾಗಿ ಪ್ರಾಮಾಣಿಕವಾಗಿ ಒಂದು ಪ್ರಶ್ನೆಯನ್ನು ಕೇಳುವುದುಂಟು- ಓ ಶ್ರೀಮನೋಹರಸ್ವಾಮಿ ನಿಜವಾಗಿಯೂ ನನ್ನ ಕುತ್ತಿಗೆಯನ್ನು ಕತ್ತರಿಸಲಿಕ್ಕೇ ಈ ಚಕ್ರವನ್ನು ಧರಿಸಿದ್ದು? ಯಾಕಂತಂದ್ರೆ, ಈ ಭೀಷ್ಮನ ಕುತ್ತಿಗೆ ಕತ್ತರಿಸಿಯೇ ನೆಲಕ್ಕೆ ಬೀಳಬೇಕೆಂತಿದ್ರೆ ಓ ಪ್ರಭೂ! ವಿಭೋ! ಚಕ್ರ ಬೇಕೋ? ಜ್ಞಒಂದು ಚಿಗುರನ್ನು ಚಿವುಟುವುದಕ್ಕೆ ಉಗುರು ಸಾಕಾಗ್ತದೆ ಅಲ್ಲಿ ಕೊಡಲಿ ಯಾಕೆ ಬೇಕು? ಬೇಡಲ್ವೆ? ಈ ಸುದರ್ಶನ ಚಕ್ರದ ಯೋಗ್ಯತೆ ಎಷ್ಟು! ನೀನು ಹಿಡಿದರೆ ಅದಕ್ಕೆ ಕ್ರೀಯಾಶಕ್ತಿ ಬರುವುದುಂಟು. ಕುಳಿತಲ್ಲಿಂದ ನೀನು ಆಜ್ಞೆ ಮಾಡಿದರೆ, ಹೋಗು, ಇಷ್ಟು ಕೆಲಸ ಮಾಡಿ ಬಾ, ಪ್ರತ್ಯಕ್ಷ ನಾನು ಕಂಡವನು ಅಂದಿನ ರಾಜಸೂಯಯಾಗದಲ್ಲಿ ನೀನು ಅಲುಗಾಡದೆ ಸ್ಥಾನದ ಮಾನವನ್ನು ಬಿಡದೆ, ಸ್ಥಾನಚ್ಯುತಿ ಇಲ್ಲದೆ, ನಿನ್ನ ಚಕ್ರವನ್ನು ಆಜ್ಞಾಪಿಸಿ ಕಳುಹಿಸಿದಾವಾಗ ಎಷ್ಟು ರುಂಡಗಳು ಉರುಳಿದ್ದಾವೆ ಶಿಶುಪಾಲ ದಂತವಕ್ರಾದಿಗಳದ್ದು!! ಈಗ ಏನು ಆಜ್ಞಾಶಕ್ತಿ ನೀನ್ನಲ್ಲಿಲ್ಲವೇ ಅಥವಾ ಈ ಚಕ್ರದಲ್ಲಿ ನಿನ್ನ ಆಜ್ಞಾಶಕ್ತಿಯನ್ನು ನೆರವೇರಿಸುವ ಕ್ರೀಯಾಶಕ್ತಿ ಇಲ್ಲವೇ? ಈಗಲೂ ಉಂಟು, ಆಗಲೂ ಉಂಟು, ಹಾಗಾದರೆ ಇದು ಏನು? ನನಗೆ ಅರ್ಥವಾಗುತ್ತದೆ ಚೆನ್ನಾಯ್ತು ಅಂತ ಕೇಳಿದಕ್ಕೆ ಭಕ್ತರನ್ನು ಕಾಪಾಡುವಲ್ಲಿ ಭಕ್ತರನ್ನು ರಕ್ಷಸುವವಲ್ಲಿ ಭಕ್ತರ ಮರ್ಯಾದೆಯನ್ನು ಉಳಿಸುವಲ್ಲಿ ನೀನು ತಾಳುವ ಕೆಲವು ರೂಪಗಳು, ನೀನು ಮಾಡುವ ಕೆಲವು ವಿಕಾರಗಳು, ಚೇಷ್ಟೆಗಳು, ಇದೆಲ್ಲ ಭಗವಂತನ ಲೀಲೆ, ಇದನ್ನು ಕಂಡೆ ನಾನು, ಪ್ರಹ್ಲಾದ ಒಂದು ಮಾತು ಹೇಳಿದನಂತೆ ಉಗ್ರ ನರಸಿಂಹಾವತಾರದಿಂದ ನೀನು ಬಂದಿಳಿದಾಗ, ನಿನ್ನ ಕೋಪವನ್ನು ತಣಿಸಲಿಕ್ಕೆ ಬಾಕಿಯಿದ್ದವರು ಕೊನೆಗೆ ಲಕ್ಷ್ಮೀದೇವಿಯವರನ್ನೇ ಮೊರೆಹೊಕ್ಕರಂತೆ.

ಶ್ರೀ ಮನೋಹರ ಹೌದು ನೀನು. ಆದರೆ ಶ್ರೀದೇವಿಗೆ ನಿನ್ನ ಹತ್ತಿರ ಬರಲಿಕ್ಕೆ ಧೈರ್ಯ ಇಲ್ಲ. ಯಾಕೆ ಧೈರ್ಯ ಇಲ್ಲ? ಉಗ್ರನರಸಿಂಹ! ಆ ಅಮ್ಮ ಬಂದು ಹೇಳಿದರಂತೆ "ಅಯ್ಯೋ ಇದು ಯಜಮಾನರಲ್ಲ" ಅವಳು ನಡುಗಿದ್ದಾಳೆ ಕೇಳಿದ್ದೇನೆ. ಕೊನೆಗೆ ಎಲ್ಲರೂ ಸೇರಿ ಈ ಹುಡುಗನನ್ನು ಮುಂದೆ ಮಾಡಿದರಂತೆ, ನೋಡಪ್ಪಾ ಪ್ರಹ್ಲಾದ, "ನಿನ್ನ ಮೂಲಕವಾಗಿ ನಮ್ಮ ದೇವರಿಗೆ ಇಷ್ಟು ಸಿಟ್ಟು ಬಂತು... ಆವಾಗ ನಗುನಗುತ್ತಾ ಆ ಮಗುವಾದಂತಹ ಪ್ರಹ್ಲಾದ ಹೇಳಿದನಂತೆ "ದೇವರಿಗೆ ಸಿಟ್ಟೆ? ದೇವರಿಗೆ ಸಿಟ್ಟು ಬಂತು ಅಂತ ನಿಮಗೆ ಯಾರು ಹೇಳಿದ್ದು? ಯೇ ದೇವರೇ ಆ ಕೆಂಪು ಕಣ್ಣೆ, ಆ ಕೆಂಚ ಮೀಸೆ, ಆ ಕೋರೆ ದಾಡೆ, ದೊಡ್ಡವರು ನೀವು, ನಾನ್ ಆಕ್ಷೇಪಿಸಿದ್ದೇನೆ ಅಂತ ತಿಳಿದುಕೊಳ್ಳಬಾರದು, ನಿಮಗೆ ಈ ದೇವರು ಮುಖ ನೋಡುವ ಕೆಲಸ ಯಾಕೆ? ಮುಖ ನೋಡಿ ಮಣೆ ಹಾಕೊದ್ ಯಾಕೆ? ನೀವ್ ದೇವರ ಪಾದ ನೋಡಿ, ಪಾದ ಹಿಡ್ಕೊಳ್ಳಿ, ನನಗೆ ಪಾದದ ಗುರುತುಂಟು. ಮುಖ ನನಗೆ ಬೇಡ", ಎಷ್ಟು ಎಷ್ಟು ತತ್ವಾರ್ಥ ಭೋದಕವಾದದ್ದು. ಪ್ರಹ್ಲಾದ ಬಂದು ಹೇಳುವಾಗ ನಾಚಿಕೆಯಾಯ್ತಂತೆ ನಿನಗೆ, ಆದರೂ ಹತ್ತು ಜನರ ಮುಂದೆ ವೇಷ ಕಟ್ಟಿ ಬಂದಾಗ್ಯದಲ್ಲ. ಆವಾಗ ಇಂತಹ ದಿವ್ಯರತ್ನ ಹುಟ್ಟಿದಂತಹ ಕ್ಷೇತ್ರದಲ್ಲಿ ಮತ್ತೊಂದು ಉಂಟೊ? ಅಂತ ಹುಡುಕುತ್ತೇನೆ ಅಂತ ಮರ್ಯಾದೆ ಉಳಿಸಿಕೊಂಡೆ. ಹಾಗಾದರೆ ಎಷ್ಟು ದೊಡ್ಡವರು ಭಕ್ತರು! ಅದರ ಧ್ವನ್ಯಾರ್ಥ ಏನು? ಇಂಥಹ ಮಹಾನುಭಾವ, ಭಕ್ತರ ಮೊರೆವ ದೇವದೇವಾ, ನಿನ್ನ ಒಂದು ಸಿಟ್ಟಿಗೆ ಬ್ರಹ್ಮಾಂಡ ಈಡೇ? ಮತ್ತೆ ಯೆಂಥದ್ದಕ್ಕಿನ್ನು?

|*ಮಧುಮಾಧವಿ—ಏಕ॥ ಎನಗೆ ನಗೆಯು ಬಂತು ನಿನ್ನ ಕಂಡಿಂತು* | *ತೃಣವ ಮುರಿವುದಕ್ಕೆ*

*ಕೊಡಲಿಯು ಬೇಕೆ ॥ ಘನವಾಯ್ತು ಚಕ್ರವ ಕಳುಹಿಸೆನ್ನಯ ರೋಮ*

ವನು ಕಡಿದರೆ ನಾನು ಶರಣನೇ ನಿನಗೆ || ಶ್ರೀಮನೋಹರ ॥ ೧೫೧ |

ಓಹೋ! ನಗು ಬಂತು ಸ್ವಾಮಿ ನನಗೆ. ಯಾಕೆ ನಗು ಬಂದದ್ದು? ಜಯಸಿದೆ ನಾನು. ಕರ್ಮ ಬಂಧನವನ್ನು ಕಡಿದು ಸ್ವತಂತ್ರನಾದೆ ನಾನಿಂದು, ಖಂಡಿತ ನನಗೆ ಗೊತ್ತಾಯ್ತು ಭೀಷ್ಮನ ತಲೆ ಕಡಿಯಲಿಕ್ಕಲ್ಲ ಅಂತ. ಆದುದರಿಂದಲೇ ನಾನು ಹೇಳಿರುವುದು – ತೃಣವ ಕತ್ತರಿಸಲು ಕೊಡಲಿಯು ಬೇಕೇ? ಸ್ವಾಮಿ, ಭಕ್ತಿಯ ಮೇಲೆ ಭರವಸೆ ಇದು ಒಂದ್ ಮಾತ್ ಹೇಳಿದ್ದೆ - ಕೃಷ್ಣನ ಕೈಯಲ್ಲಿ ಚಕ್ರಾಯುಧವನ್ನು ಹಿಡಿಯುವಂತೆ ಮಾಡೇನೆ. ಮೊದಲಿನಿಂದಲೂ ನನ್ನ ಭಕ್ತಿಯ ಸ್ವರೂಪ ಕ್ಷಾತ್ರದ್ದು, ನನ್ನ ಹುಟ್ಟು ಗುಣ. ನಾವು ಪೂಜೆ ಮಾಡುವ ದೇವರು ಬತ್ತಲೆಯೂ ಅಲ್ಲ ನಿರಾಯುಧನೂ ಅಲ್ಲ ಆ ಭಾವನೆ ಅದು ನಮ್ಮ ವೈದಿಕ ಭಾವನೆ. ಹೇಗೆ ಸಾಲಂಕೃತ ಎಲ್ಲಿಯವರೆಗೆ ಅಲಂಕಾರ? ಉಟ್ಟ ಬಟ್ಟೆ ಅಲ್ಲ, ಧರಿಸಿದ ಉತ್ತರೀಯ ಅಲ್ಲ, ಹಾಕಿದ ದಾರ ಮಾತ್ರ ಅಲ್ಲ. ಮತ್ತೆ? ಕೈಗಳಲ್ಲಿಯೂ ಕೂಡಾ ಒಂದರಲ್ಲಿ ಅಭಯ ಹಸ್ತ ಆದ್ದರಿಂದಲೇ ಒಂದು ಕೈಯಲ್ಲಿ ಹೂ ಮತ್ತೊಂದು ಕೈಯಲ್ಲಿ ಗದೆ ದೇವಿಯಾಗಿ ಆರಾಧಿಸುವದಿದ್ದರೂ ಹಾಗೆ ಸಾಂಗ ಸಾಯುಧ ಸವಾಹನ ಸ

ಪರಿವಾರ, ಆಯುಧ ಇಲ್ಲದಿದ್ದ ದೇವರು ನಮ್ಮ ಪೂಜೆಗೆ ವಿಷಯವೇ ಅಲ್ಲ. ಕಾರಣ, ಕುರ್ವನೇವೇಹ ಕರ್ಮಾಣಿ.. ನಮಗೆ ಉಪನಿಷತ್ತಿನ ಉಪದೇಶ ಅದು. ಹೋರಾಟ ಮಾಡು, ಕರ್ಮವನ್ನು ಮಾಡು ಸದ್ಯ ನಿನ್ನ ಉಪದೇಶವು ಅದೇ ಆಗಿತ್ತು. ದುಡಿ, ಕೆಲಸಮಾಡು, ಹೋರಾಟ ಮಾಡು, ಮನಸ್ಸಿನಲ್ಲಿ ನನ್ನನೀಡು ಹೀಗೆ ಪವಿತ್ರವಾದ ಭಾವದಿಂದ ಕೃಷ್ಣನ ಉಪಾಸಕನಾದಂತಹ ನಾನು ಕಂಡಿದ್ದು ಬರಿಗೆ ಕೃಷ್ಣ ನನ್ನ ಕೃಷ್ಣ ಹೇಗಿರಬೇಕು ಚಕ್ರಧಾರಿಯಾದಂತಹ ಕೃಷ್ಣ ಆ ಕೃಷ್ಣನ ರಸ ಹೇಗಿರಬೇಕು ಒಂದು ಕಣ್ಣಿನಲ್ಲಿ ಕಾರುಣ್ಯ ಭಾವ ಇನ್ನೊಂದು ಕಣ್ಣಿನಲ್ಲಿ ವರ್ಚಸ್ವೀ ಭಾವ ನೋಟ ಆ ಕ್ಷಾತ್ರಪ್ರಭೆ ಹೊಮ್ಮಬೇಕು. ಯಾವಾಗ ನಾನು ಯುದ್ಧ ಮಾಡದಿದ್ದ ಕೃಷ್ಣನ ಕುರುಕ್ಷೇತ್ರಕ್ಕೆ ಬರ್ತಾನೆ ಅಂತ ಕೌರವ ಹೇಳಿದನೋ ಆವತ್ತಿನಿಂದಲೇ ನಾನು ಯಾವ ಕರ್ಮಕ್ಕೆ ಯುದ್ಧಕ್ಕೆ ಹೋಗುವುದು ಅಂತ ಮನಸ್ಸಿನಲ್ಲಿ ಎಣಿಸಿದವ. ನನಗೆ ಹೋರಾಟದ ಕೃಷ್ಣ ಬೇಕು ಸ್ವಾಮಿ.

ಕೊಲುವೆನೆಂಬ ಪ್ರತಿಜ್ಞೆ ದೇವನದ್ದಾಗಲಿ ಗೆಲುವೆನೆಂಬ ಪ್ರತಿಜ್ಞೆ ನನ್ನದಾಗಲಿ, ನನ್ನ ದೇವನನ್ನು ಹೇಗೆ ಕಾಣಬೇಕಂತ ಬಯಸಿದೆನೊ ಹಾಗೆ ಕಂಡೆ. ಎಲ್ಲಿ ಕಂಡೆ? ನನ್ನ ಕರ್ತವ್ಯ ಕ್ಷೇತ್ರದಲ್ಲಿ ಕಂಡೆ. ಕರ್ತವ್ಯ ರೂಪವಾದಂತಹ ಪೂಜ್ಯ ಸ್ಥಾನದಲ್ಲಿ ಕಂಡೆ. ಏನು ಪ್ರಸಾದ? ಒಂದು ಚಕ್ರ ಬಿಟ್ಟು ಬಿಡುವುದು. ಬದುಕು ಪೂರ್ತಿಯಾಯ್ತು. ಯತಾರ್ಥಕ್ಕಾದರೆ ಈ ಥರದ ಬದುಕಿನಲ್ಲಿ ನಾನು ಜಿಗುಪ್ಸೆಗೊಂಡವ. ಆದರೆ ಪ್ರಾರಬ್ಧ ಬಿಡೋದಿಲ್ಲ ನನಗಷ್ಟೇ. ಎಲ್ಲಿಯಾದರೂ ಚಾಪೆ ಬಿಡಿಸಿ ಮಲಗದಿರೆ ಹುಡುಗರು ಬಂದು ಕರಕರೆ ಮಾಡ್ತಾರೆ “ಅಜ್ಜ ಬನ್ನಿ ನನ್ನ ಹತ್ತಿರ”. ಈ ಯುದ್ಧದಲ್ಲಿಯೂ ಮನಸ್ಸಿಲ್ಲ ಅದೂ ಮಾತ್ರ ಅಲ್ಲ, ಪಾಂಡವರಿಗೆ ಏನೂ ಆಗುವುದಿಲ್ಲ. ಅವನ ಸಾವನ್ನು ಕಾಣುವಂತಹ ದುರ್ಯೋಗ ನನಗೆ ಇನ್ನು ಬೇಡ ಮುಗಿಸಿಬಿಡು ಸ್ವಾಮಿ. ನೀನು ಮನಸ್ಸು ಮಾಡಿದರೆ ಅದು ಅನುಗ್ರಹವೇ ಆಗ್ತದೆ. ನಿನಗೆ ಖಂಡಿತ ಗೊತ್ತುಂಟು ಆಗ್ಲಿಕ್ಕಿಲ್ಲ ಈ ಮುದುಕನ ಹತ್ತಿರ ಅಂತ. ಯಾಕೆ ನನ್ನ ಭಕ್ತಿ ಅಷ್ಟು ಧೃಡವಾದದ್ದು. ಸಕಲ ಕೈಲಾಣ ಗುಣ ಪರುಪೂರ್ಣವಾದಂತ ಪೂರ್ಣ ಬ್ರಹ್ಮನೆನಿಸಿದ ವಾಸುದೇವನನ್ನು ನಂಬಿದವರಿಗೆ ಸೋಲು ಉಂಟೇ ನಿನ್ನ ಭಕ್ತರು ಸೋಲ್ತಾರೆಯೊ? ಸೋಲುವುದಿಲ್ಲ. ಅಲ್ಲಿಯೂ ನಾನೂ ಸಿದ್ದನಿದ್ದೇನೆ ನಿನ್ನ ಚಕ್ರವನ್ನು ನಾನು ಆಹ್ವಾನಿಸುತ್ತೇನೆ ಅಪ್ಪಣೆ ಮಾಡೇಬಿಡು ಮುದುಕನ ಒಂದು ಕೂದಲು ತುಂಡಾದರೆ ಮತ್ತೆ ಹೇಳು ನಿನ್ನ ಭಕ್ತನು ನಾನು ಅಲ್ಲಿಯೂ ನನ್ನ ಭಕ್ತಿ ದೊಡ್ಡದು ಇನ್ನೂ ಶ್ರೀಮುಖದಿಂದ ಅಪ್ಪಣೆಯಾಗಬೇಕು ಎಷ್ಟು ಸರಿ ಎಷ್ಟು ತಪ್ಪು?

ಚಕ್ರವನ್ನು ಹಿಂದಿಟ್ಟು ಕೃಷ್ಣ ರಥಕ್ಕೆ ಮರಳುತ್ತಾನೆ.

**೧೬ ಶರತಲ್ಪ**

**ಭೀಷ್ಮ**

*ಭಾಮಿನಿ ಇವರ ಬರವನು ಚರರು ಗಂಗಾ ಭವನಿಗರುಹಲು ಬಂದರೇ ಪಾ ಡವರು*

*ಮರಣವ ತಂದರೇ ಕುರುರಾಯಗಕಟೆಂದ ತವಕದಲ್ಲಿ ಕರೆದಂತ ರಂಗದ ಭವನದಲಿ*

*ಬೆಸಗೊಂಡ ರಿಪುಗಳ ನಿವಹಕೇ ರಾತ್ರಿಯಲಿ ಬಹು ದನುಚಿತವು ನಿಮಗೆನುತ || ೧೫೨ |*

ಯೇನು! ಪಾಂಡವರು ಬಂದರೇ? ಶ್ರೀಕೃಷ್ಣನು ಕರೆತಂದನೇ! ಹಾ ಕೌರವನಿಗೆ ಮರಣವನ್ನು ತಂದನೇ!! ದೊಡ್ಡದಲ್ಲಯೆಲ್ಲ, ಸ್ವಾಮೀ ಮುಂದೆನೋಡು, ನನ್ನನ್ನೇ ನೋಡು. ಅಂದು ಮನಸ್ಸಿನಲ್ಲಿ ಆಸೆಯನ್ನಿಡ್ಕೊಂಡಿದ್ದೆ ಪರಾಕೆ; ಪಾಂಡವರ ಕಡೆಯಿಂದ ಸಂಧಾನಕ್ಕಾಗಿ ಬಂದ ಕೃಷ್ಣ ಬಹುಶಃ ನನ್ನಲ್ಲಿಗೂ ಬಂದ್ರಾದೀತು ಅಂತ ಇತ್ತು. ಇಲ್ಲದಿದ್ರೆ, ಬ್ರಹ್ಮಚಾರಿ, ಪ್ರತ್ಯೇಕ ಮನೆ ಇದ್ದೂ, ನಾನು ಅಡುಗೆ ಮಾಡೋದಿಲ್ಲ. ಆ ಹೊತ್ತು ಪ್ರತ್ಯೇಕವಾದ ಅಡುಗೆಯನ್ನು ಮಾಡಿಸಿದ್ದೆ, ಯಾಕೆ? ನಿನ್ನನ್ನು ಉಣ್ಣಿಸಬೇಕು ಅಂತಲ್ಲ, ನಿಂದು ನೈವೇದ್ಯಮಾಡಿ ಪ್ರಸಾದ ಸ್ವೀಕರಿಸಬೇಕು ಅಂತ. ಅಂದಿನ ಆಸೆ ಈಡೇರಲಿಲ್ಲ. ಅಂತೂ ಈ ಮುದ್ರ ಸಾಯೋದಕ್ಕಿಂತ ಮೊದಲು ಆಸೆ ಪೂರ್ತಿಯಾಯ್ತು. ಅರಮನೆಯಲ್ಲಿ ಸ್ವಾಗತಿಸಬೇಕಾದ ನಾನು ನಿನ್ನನ್ನು ಯುದ್ಧಾಂಗಣದಲ್ಲಿ ಇದೋ ಸ್ವಾಗತಿಸ್ತಾ ಇದ್ದೇನೆ - ಧನ್ಯ ಧನ್ಯ.

*ಸೌರಾಷ್ಟ್ರ-ತ್ರಿವುಡೆ ಮುರವಿರಾಮನ ಶ್ರೀಕರಾಂತ್ರಿಗೆ ಶಿರವ ಚಾಚಲು ನೆಗಹಿ ಭೀಷ್ಮನ*

ಚರಣದಲಿ ಪಾಂಡವರ ಕೆಡಹಿಸು | ತಿರದೆ ನುಡಿದ | | ಕಾಯಬೇಕೀ ತರಳರೈವರ

ಕಾಯಗಳನೆನಲೆಂದ ಸರ್ವರ ಕಾಯುವರೆ ಕೊಲುವರೆ ಸ್ವತಂತ್ರದ ಕಾಯ ನೀನೇ || ೧೫೩ ||

ಹ್ಹ , ಅಜಯ್ಯನ ಪಾದ ಹಿಡೊಕೊಳ್ಳಿಕ್ಕೂ ಸ್ವಾಮಿ ಅಪ್ಪಣೆ ಮಾಡ್ಬೇಕೇನ್ರೊ ನನ್ನ ಮಕ್ಕಳೇ? ಚನ್ನಾಯ್ತು. ಕಾಯಬೇಕೇ ಕೃಷ್ಣಾ? ಅರ್ಥವಾಯ್ತು ಇವರನ್ನು ನಾನು ರಕ್ಷಿಸಬೇಕು. ಎನ್ನುವದಲ್ಲ ಅದರ ಒಳಧ್ವನಿ-ರಕ್ಷಿಸಬೇಕೆಂಬ ಅರ್ಥದಲ್ಲಿ ನೀನು ಕಾಯಬೇಕು. ಅಂತ ಹೇಳಿದರೆ, ಹ್ಹ ಭೀಷ್ಮಯೆಷ್ಟರವ ರಕ್ಷಿಸಲಿಕ್ಕೆ ಶಿಕ್ಷಿಸಲಿಕ್ಕೆ? ಲೋಕ ರಕ್ಷಕ ನೀನು, ಲೋಕ ಶಿಕ್ಷಕ ನೀನು. ನನ್ನಕಕ್ಷೆಯಲ್ಲಿದ್ದಂತಹ ನನ್ನ ಐದು ಮಂದಿ ಮೊಮ್ಮಕ್ಕಳನ್ನು ನಾನು ಕಾಪಾಡೆನೆ ಅಂತ ಹೇಳುವ ಅಧಿಕ ಪ್ರಸಂಗಿ ನಾನಲ್ಲ. ಮುಖ್ಯ ಇಲ್ಲಿ ಈ ಪಾಂಡವರ ಕಾಯಬೇಕು. ಕೆಲವು ವರ್ಷದವರೆಗೆ ಬೇಕು ಪಾಂಡವರ ಕಾಯ, ಅವರ ಕಾಯ ಉಳಿಯಬೇಕಿದ್ರೆ ಈ ಭೀಷನ ಕಾಯವನ್ನು ಪಾಂಡವರಿಗಾಗಿ ಸಮರ್ಪಿಸಬೇಕು.

ಸೌರಾಷ್ಟ್ರ-ತ್ರಿವುಡೆ॥ ಧುರಕೆ ನಾಳೆ ನಪುಂಸಕನ ತಂ | ದಿರಿಸಲಾತನ ಮುಂದೆ ಚಾಪವ

ಭರದೊಳಿಳುಹುವೆನೆನಲು ಧರ್ಮಜ | ಮರುಗಿ ನುಡಿದ | ೧೫೪ ||

ಈವರೆಗೆ ನನ್ನ ದೇಹದ ಎಲ್ಲಾ ದುಡಿಮೆ, ನೂರು ಮೊಮ್ಮಕ್ಕಳಿಗಾಗಿ ಆಯ್ತು. ಇನ್ನು ಉಳಿದ ಗಳಿಗೆಯಲ್ಲಿ ಈ ಐದು ಮೊಮ್ಮಕ್ಕಳಿಗಾಗಿ ನನ್ನ ದೇಹ ಸವೆಯ ಬೇಕು. ಅಂತೂ ನನ್ನ ಸೇವೆ ಭಗವಂತನಿಗೆ ಸಂತೋಷ ಆದ್ರೆ ಕಾಯ ಸಮರ್ಪಣೆಗೆ ಸಿದ್ಧನಿದ್ದೇನೆ. ಆದರೆ ನನಗೊಂದು ವ್ರತವಿದೆ. ಅದೊಂದು ಕಾಲದಲ್ಲಿ ನಡೆದಂತಹ ಪ್ರಕಾರ "ಹೆಣ್ಣಿಗೆ ಸೋಲುವವನಲ್ಲ ಭೀಷ್ಮ, ಗಂಡುಸರಲ್ಲಿ ಭೀಷ್ಮನನ್ನು ಗೆಲ್ಲುವವರಿಲ್ಲ" ಎಂಬ ಒಂದು ಪ್ರತೀತಿಯಿಂದ ಆ ಅಂಬೆ ಗಂಡೂ ಅಲ್ಲ ಹೆಣ್ಣು ಅಲ್ಲ, ಆದರೆ ಎರಡೂ ಆಗಿ ಬತ್ತೇನೆ ಅಂತ ಹಟತೊಟ್ಟಿದ್ದು ನನ್ನ ಅವಗಾಹನೆಗೆ ಬಂದ್ಯದೆ. ನಿಮ್ಮಲ್ಲಿ, ಹಾಗೊಂದು ಶಕ್ತಿ ಇದೆ - ದ್ರುಪದ ಪುತ್ರ ಶಿಖಂಡಿ. ಅವನನ್ನೇ ನಾಳೆ ಬೆಳಿಗ್ಗೆ ತಂದು ನಿಲ್ಲಿಸಿ. ಶಿಖಂಡಿ ಬಂದಾವಾಗ ಆಯುಧತ್ಯಾಗ ಮಾಡುತ್ತೇನೆ ಎಂಬುದು ನನ್ನ ಪ್ರತಿಜ್ಞೆ ಕೌರವನಿಗೆ ವಂಚನೆಯೇನೂ ಅಲ್ಲ. ಗೊತ್ತುಂಟು, ಪ್ರಪಂಚಕ್ಕೆ ಗೊತ್ತುಂಟು. ಆಮೇಲೆ ಬೇಕಾದದ್ದುನ್ನು ಮಾಡಿಕೊಳ್ಳಿ.

*ಭಾಮಿನಿ॥ ಎಲೆ ಯುಧಿಷ್ಠಿರ ನಿನ್ನ ಸತ್ಯದ / ಫಲ ನಿನಗೆ ಕೈಸೇರುವುದು ಹಂ | ಬಲಿಸುವೆಯ*

ಮುಂದಿನ್ನ ರಣ್ಯವ ಮರುಳಲಾ ಮಗನೆ | ಕೊಲುವರಾರೆನ್ನನು ಜಗಯ! ದೊಳಗೆ

ಸಾಕಿದು ಪಡೆವೆ ಮುಕ್ತಿಯ ನಳಲಬೇಡೆಂದೊರೆದು ಕೃಷ್ಣಗೆ ನಮಿಸಿ ಕಳುಹಿದನು || ೧೫೫ ||

ಧರ್ಮಜ, ಮರುಳೇ, ಇಚ್ಛಾಮರಣಿಯಾದ ನನ್ನನ್ನು ಕೊಲ್ಲುವವರುಂಟೆ? ಮೃತ್ಯುಂಜಯ ನಾನಲ್ಲವಾದರೂ ಮೃತ್ಯುವನ್ನು ನನ್ನ ವಶಕ್ಕೆ ನಾನು ತಂದವ. ಆದ್ದರಿಂದ ಇದು ಕೇವಲ ನೆವನ. ದೇವರು ನಿನಗೆ ಒಳ್ಳೆಯದು ಮಾಡ್ಲಿ. ನಾಳೆ ನಾನು ಹೇಳಿದ್ದನ್ನು ಮಾಡು.

(ಮರುದಿನ ಯುದ್ಧರಂಗದಲ್ಲಿ ಶಿಖಂಡಿ ಇದಿರು ನಿತ್ತಾವಾಗ)

ಯೆಲಾ ಯೆಲಾ ಶಿಖಂಡಿ ನೀನು ಬಯಸಬಹುದು, ನಾನ್ ಅಂತಹ ಹೆಣ್ಣುಗನೇನೋ? ಇದೋ ಆಯುಧವನ್ನು ಕೆಳಗೆ ಹಾಕಿದ್ದೇನೆ. ಹಾ... ಪಾರ್ಥನ ಶರದಿಂದ ನೊಂದೆ ಅರ್ಜುನಾ, ಹೇಗೂ ನಿನ್ನ ಬಾಣದಿಂದ ಇದೋ... ಜೀವ ವಾಲ್ತಾ ಇದೆ. ಅರ್ಜುನ ಒಂದು ಉಪಕಾರ ಮಾಡು. ಈವರೆಗೆ ಈ ಮಣ್ಣಿಗಾಗಿ ದುಡಿದ ಜೀವ ಇದು; ಮಣ್ಣಿನಲ್ಲೇ ಮಣ್ ಆಗಿ ಹೋಗಬೇಕಾದ ದೇಹ ಇದಲ್ಲ. ಈ ಮೃತ್ಯುಲೋಕದ ಸ್ಪರ್ಶದಿಂದಲೇ ಮೃತ್ಯುಲೋಕದ ಮೃತ್ಯುಪಾಶ ಕಂಠಕ್ಕೆ ಬಿದ್ದದೆ. ಈ ಮೃತ್ಯುವನ್ನು ಜಯಿಸಿ ಅಮೃತತ್ತ್ವವನ್ನು ಪ್ರಾಪ್ತಿಸುವ ಉದ್ದೇಶಿ ನಾನು. ಹಾಗಾಗಿ, ನನಗೆ ಗೊತ್ತಿಲ್ಲ, ಪ್ರಾಣೋತ್ಕ್ರಮಣ ಕಾಲದಲ್ಲಿ ನಮ್ಮ ಆರ್ಷ ಪದ್ಧತಿಯಂತೆ ದರ್ಭೆಯ ಮೇಲೆ ಮಲಗಿಸಬೇಕು; ನೆಲದಲ್ಲಿ ಅಲ್ಲ, ಇದು ಶಿಷ್ಟಾಚಾರ. ಅಂದರೆ ಮಣ್ಣಿನ ಸಂಪರ್ಕ ಕಡಕೊಳ್‌ಬೇಕು ಆ ದೇಹ. ಆದರೆ ವೀರನಾದ ನನಗೆ ವೀರಶಯ್ಯ ಬೇಕು. ಮಗನೇ ಬಾಣಗಳಿಂದಲೇ ಒಂದು ಶಯ್ಯೆಯನ್ನು ಮಾಡು ಆದೀತು. ತಲೆ ಸ್ವಲ್ಪ ಎತ್ತರಕ್ಕೆ ಬೇಕಾಗಿದೆ ಯಾಕೆ? ಈ ದಿವ್ಯ ಮಂಗಳ ಮೂರ್ತಿಯನ್ನು ಕಣ್ಣಾರೆ ಕಂಡು ಒಂದು ನಿವೇದನೆ ಮಾಡುವುದಕ್ಕುಂಟು ಮಗನೆ ಒಂದು ತಲೆದಿಂಬು ಮಾಡು.

ಹಾ, ಅರ್ಜುನಾ, ಅಮ್ಮನ ಎದೆ ಹಾಲು ಕುಡಿದಿದ್ದೇನೆ. ಕೊನೆಗೂ ಅದೇ ಬೇಕಾಗಿದೆ. ಯಾಕೆ? ಅಮೃತದಿಂದ ಹುಟ್ಟಿ ಅಮೃತದಲ್ಲೇ ಸೇರಬೇಕು. ನಮ್ಮ ವೈದಿಕಪ್ರಕ್ರಿಯೆ ಅದು - "ಅಮೃತಮಸಿ ಅಮೃತೋಪಸ್ತರಣಮಸೀಸ್ವಾಹಾ" ನನ್ನ ತಾಯಿಯ ಎದೆ ಹಾಲು... ಅರ್ಥವಾಯಿತ್ತಲ್ಲ? ಗಂಗಾಜಲ! ಹಾ, ಧನ್ಯ ಧನ್ಯ. ನನ್ನ ವಂಶದಲ್ಲಿ ಅರ್ಜುನನಂತಹ ಮೊಮ್ಮಗನನ್ನು ಪಡೆದು ನಾನು ಧನ್ಯ. ನೀನು ಉತ್ತರಾಧಿಕಾರಿ ಮಗ್ನೆ, ನನ್ನ ಸ್ಥಾನವನ್ನು ನಿನಗೆ ಬಿಟ್ಟು ಕೊಡುವುದಕ್ಕೆ ಸಂಪೂರ್ಣ ತೃಪ್ತನಿದ್ದೇನೆ.

ಯುಧಿಷ್ಠಿರಾ, ಯಾಕೆ ಕಣ್ಣೀರಿಳಿಸ್ತಿ ಮಗನೆ ನಿನ್ನ ಕಡೆಗೆ ಭಗವಂತನಿದ್ದಾನೆ. ನಿನ್ನ ಕಡೆಗೆ ಜಯ ಇದೆ. ಅಭಿಶೇಚನಗೊಂಡ ಬಳಿಕ ಬಾ, ಅಜ್ಜ ಈ ಹೊತ್ತು ಕಣ್ಣು ಮುಚ್ಚೋದಿಲ್ಲ, ಆಹೊತ್ತು ಕೆಲವು ರಹಸ್ಯ ಹೇಳೋದಕ್ಕಿದೆ.

ಸ್ವಾಮಿ, ಪರಾಕೆ, ಉಂಟು ನೂರು ವರ್ಷ ಬದುಕಿ, ನನ್ನ ಬದುಕಿಗೆ ಬೇಕಾದಂತಹ ಲೌಕಿಕ ಭೋಗಕ್ಕೆ ಬೇಕಾ ಕೃಷ್ಣ? ಅದು ಕೊಡು ಇದು ಕೊಡು ಅಂತ ಬೇಡಲಿಲ್ಲ. "ವಿನಾ ದೈನ್ಯೇನ ಜೀವನಂ ಅನಾಯಾಸೇನ ಮರಣಂ". ಕೃಷ್ಣಾ, ಇದು ದಕ್ಷಿಣಾಯನ, ಉತ್ತರಾಯಣ ಬಾರದೆ ಸಾಯುವದಕ್ಕಾಗೋದಿಲ್ಲ. ಆವರೆಗೆ ಕಾಯಬೇಕು ಅಂಬುಜನಾಭ.



ಚಿತ್ರಕೃಪೆ: ಕೆರೆಮನೆ ಶಿವಾನಂದ ಹೆಗಡೆ

## ೨೭ ಮುಂದೇನು?

ಸುಯೋಧನ

ಸಾವೇರಿ- ರೂಪಕತಾಳ ಏನ ಮಾಡುವದಿನ್ನು ಪಾಂಡವರ ಸೋಲಿಪಡೆ |

ದಾನವಾಂತಕನವಗೆ ಸಾರಥಿಯಾಗಿಹನು || ೧೫೬ ||

ಹೇಳಿದ್ದನ್ನು ಮಾಡಿ ಮುಗಿಸಿದ್ದಾರೆ ನಮ್ಮ ಸೇನಾಪತಿ. ನಿನ್ನೆ ಹೇಳಿದ್ದಾರೆ, ಅವ ಕೃಷ್ಣ ಯೇನೋ ತಂತ್ರ ಮಾಡಿ ಧರ್ಮಜನನ್ನು ಬಿಡಿಸಿದ್ದಾನೆ ಅಂತ. ಇನ್ನೊಮ್ಮೆ ಹಿಡಿಲಿಕ್ಕೆ ಪ್ರಯತ್ನ ಮಾಡಿ ಎಂತ ಹೇಳಿದರೆ ಅವರು ಹೇಳ್ತಾರೆ "ಬ್ರಾಹ್ಮಣ ಯಾವುದೇ ಒಂದು ಕೆಲಸವನ್ನು ಒಂದು ಸಲ ಮಾಡೋದು"!! ಈಗ ಬದಲಾಯಿಸುವನೋ? ನನಗೆ ಮನಸ್ಸುಂಟು. ಸಾಕು ನಮ್ಮ ಸೇನಾಧಿಪತ್ಯವನ್ನು ಬಿಟ್ಟುಕೊಡಿ, ಈ ಬಿಟ್ಟುಕೊಡಿ ಅಂತ ಹೇಳಿದ್ದೇ ನಮಗುಪದ್ರ ಆದೇ? ಕೆಲವು ಕಡೆ ಹಾಗೆಲ್ಲ ಆಗ್ತದೆ. ಪ್ರೀತಿಯಿಟ್ಟು ಜಾಗ ಬಿಡ್ತಿರೋ ಅಂತ ಕೇಳಿದರೆ ಅವರೇ, ಮತ್ತೊಂದು ಗುಂಪು ಕಟ್ಟಿಕೊಂಡು... ಅಲ್ವೊ? ಮತ್ತೇನು? ಮತ್ತೆ ನಾವು ಕೈಯ್ಯಿಬಾಯಿ ಶುದ್ಧ ಅಂತ ಹೇಳ್ತಾರೆ! ಆವಾಗ ಮೂರನೆಯ ಒಂದು ಶತ್ರುಪಕ್ಷವನ್ನು ನಾನು ಎದುರಿಸಬೇಕು. ಸ್ವಲ್ಪ ಮಟ್ಟಿಗೆ ನಮ್ಮಲ್ಲಿ ಬ್ರಾಹ್ಮಣರ ಬೆಂಬಲ ಆದ್ರೂ ಉಂಟು ಆಶೀರ್ವಾದಕ್ಕೆ, ದೇವರ ಪೂಜೆ ಮಾಡ್ಲಿಕ್ಕೆ, ಯುದ್ಧಕ್ಕಲ್ಲ. ಕಾರಣವೇನು? ನಮ್ಮಲ್ಲಿ ದ್ರೋಣಾಚಾರ್ಯರು ಇದ್ದಾರೆ ಅಂತ ಆ ಮಟ್ಟಿಗೆ ಆ ಜಾತಿಗೆ ನಮಸ್ಕಾರ ಮಾಡಬೇಕು ಮಾರಾಯ. ತಮ್ಮವ ಒಬ್ಬ ಯೆಲ್ಲಿಯಾದ್ರೂ ದೊಡ್ಡ ಹೆಸ್ರು ಕೇಳಿದ್ರೆ "ಅಯ್ಯೋ ಅಂವ ಯಾರವ... ನಮ್ಮವ... ಒಗ್ಗಟ್ಟು ಒಗ್ಗಟ್ಟು ಈ ನಮ್ಮ ಜಾತಿಯಲ್ಲಿ. ರಾಜಕಾರಣಿಗಳ ಜಾತಿಯಲ್ಲಿ ಅದೂ ಇಲ್ಲಲ್ಲ!!

ಆದ್ದರಿಂದ ಅಲ್ವೊ, ಕೃಪಾಚಾರ್ಯರಿಗೆ ಉತ್ಸಾಹ ಉಂಟು. ಯುದ್ಧವಾಡೋದಿಲ್ಲ ಅವರು. ಅವರೂ ಇಲ್ಲೇ ಬಿಡಾರ ಮಾಡಿದ್ದಾರೆ. ಯಾಕೆ? ನಮ್ಮಭಾವ ಇದ್ದಾರಲ್ಲ ಸೇನಾಪತಿಗಳು ಅಂತ. ಅಶ್ವಥಾಮಾಚಾರ್ಯರು ಕೂಡಾ ಹೀಗೇ, ಬಹುಷಃ ಜಾಗ್ರತರಾಗಿದ್ದಾರೆ ಯಾಕೆ? ತಮ್ಮ ಅಪ್ಪಯ್ಯ ಇದ್ದಾರೆ ಅಂತ. ಈ ಅಪ್ಪಯ್ಯನನ್ನು ಬಿಟ್ಟುಕೊಡ್ತಿರೋ ಅಂತ ಹೇಳಿದರೆ ಆ ಮಗ ಈ ಭಾವ ಅವರು ಯೆಲ್ಲಾ ಬಿಡಾರ ತೆಗಿದ್ರೆ...? ಶತ್ರು ಪಕ್ಷದವರಿಗೆ ಅಷ್ಟು ಬುದ್ಧಿ ಇಲ್ಲದಿದ್ರೂ ಕೃಷ್ಣನಿಗುಂಟು. "ನೋಡಿ ಜಾಗ್ರತರಾಗಿ ಈ ಕೌರವನ ಯಾವತ್ತೂ ಮುಂದಿನ ಆಡಳಿತಕ್ಕೆ ಪೂರ್ವಭಾವಿಯಾಗಿ ಈಗಲೇ ತಲತಲಾಂತರದಲ್ಲಿದ್ದಂತಹ ಬ್ರಾಹ್ಮಣರ ಬಿಡಾರಗಳನ್ನೆಲ್ಲಾ ಖಾಲಿ ಮಾಡ್ಲಿಕ್ಕೆ ಆಜ್ಞೆ ಮಾಡಿದ್ದಾನೆ. ಅಂತ" ಪ್ರಚಾರ ಮಾಡದೇ ಹೋದಾನೋ? ಯೇನೂ ಮಾಡಿಯಾನು. ಕೃಷ್ಣ ಒಬ್ಬ ಅಲ್ಲಿ ಇದ್ದಷ್ಟು ಕಾಲ... ರಾಜಕಾರಣಿ ಹೌದು... ನಾವು ಕಲ್ಲದ್ದು ಸಾಕಾಗೋದಿಲ್ಲ. ಸುಳ್ಳನ್ನೇ ಹತ್ತುಸಲ ಹೇಳಿ ಸತ್ಯಮಾಡ್ತಾನೆ! ಆದ್ರೆ ತಪ್ಪಾಯ್ತಲ್ಲ ನಮಗೆ ಇಲ್ಲೀಗ ಹೊರಟಾಯ್ತಲ್ಲ. ಹಾಗಾಗಿ ದ್ರೋಣಾಚಾರ್ಯರನ್ನು ತಳ್ಳಿ ಹಾಕೊದಕ್ಕಿಲ್ಲ ಅವರು ಇದ್ದಾಗ ಬೇರೆಯವರು

ಕೆಲಸ ಮಾಡೋದಿಲ್ಲ. ನಮ್ಮಲ್ಲಿ ಅದೊಂದುಂಟು ದೊಡ್ಡದೋಷ. ಈ ಹೊತ್ತಿನ ಮಟ್ಟಿಗೆ ಒಂದು ಒಳ್ಳೆ ಸಮಾರಾಧನೆ ಆಗಬೇಕು ಅಂತ ಹೊಸಾ ಅಡಿಗೆಯವರನ್ನು ತರಮಾಡಿದರೆ ನಮ್ಮಲ್ಲಿ ಇದ್ದ ಅಡಿಗೆಯವರು ಆಮೇಲೆ ಅವರು ಇಲ್ಲದಿದ್ದಾಗ ಉಪ್ಪು ಅದಕ್ಕೆ ಹಾಕ್ತಾರೆ! ಒಗ್ಗರಣೆ ಸುಟ್ಟು ಹಾಕ್ತಾರೆ! ನಮ್ಮ ಪಕ್ಷವೇ ಹಾಗಾದೇಲೆ!

ಭೀಷ್ಮನ ಸೇನಾಧಿಪತ್ಯದಲ್ಲಿ ನಮ್ಮ ಕರ್ಣನಿಗೆ ವಿಪಕ್ಷ. ದ್ರೋಣನಿಗೆ ಸೇನಾಧಿಪತ್ಯ ಕೊಟ್ಟಾವಾಗ ಇಲ್ಲಿ ಶಲ್ಯ ಅಂವ ಇಂವ ಅಂತ್ಹೇಳುವ ದೊಡ್ಡದೊಡ್ಡ ಮುಖಂಡರಿದ್ದಾರೆ. "ಮೆರೆದರೆ ನಾವು ಮೆರೆಯಬೇಕು ಈ ಸಲದ ಹೋರಾಟದಲ್ಲಿ" ಅಂತ. ಅಲ್ಲ ಅದೂ ಸತ್ಯ; ನಾನು ಕೃಷ್ಣನಿಗೆ ವೀಳ್ಯ ಕೊಟ್ಟಿದ್ದು, ಹಾಗೆ ಯೇನಾದ್ರೂ ಪಕ್ಷ ಪ್ರತಿ ಪಕ್ಷ ಎಂಬುದು ನಾಳೆಗೆ ಉಳಿಬೇಕಾಗಿದ್ರೆ ಈ ಸಲದ ಜಗಳದಲ್ಲಿ ಗೊತ್ತಾಗೋದು; ಇಲ್ಲದಿದ್ರೆ ಇನ್ನೊಂದು ಪ್ರತಿಪಕ್ಷ ಇಲ್ಲ ಅಂತಾಗಿದೆ. ಹಾಗಾಗಿ ಇತ್ಯರ್ಥ ಆಗಿಹೋಗ್ಲಿ ಕೃಷ್ಣಾ ಅಂತ ರಣವೀಳ್ಯ ಕೊಟ್ಟಿದ್ದೇನೆ. ಹೀಗಿರುವಾಗ ಸೇರಿದವರಲ್ಲಿ ತಾತ್ವಿಕ ಹೊಂದಾಣಿಕೆ ಇಲ್ಲದಿದ್ರೂ ಸೋಲಿಸಲಿಕ್ಕೆ ರಾಜಕೀಯದ ಉದ್ದೇಶ ಗೊತ್ತಾಯ್ತಲ್ಲ? ಆಚೆಯವರನ್ನು ಸೋಲಿಸುವುದಕ್ಕೆ; ನಾವು ಗೆಲ್ಲುವುದಕ್ಕಲ್ಲ. ಸತ್ಯ ಹೇಳ್ತನೆ ಇಲ್ಲಿ ಪಾತಾಳದವರೂ ಇದ್ದಾರೆ! ನಮಗೂ ಅವರಿಗೂ ಏನೂ ಸಂಬಂಧ ಇಲ್ಲ. ಒಟ್ಟೂ ಏನು? ಪಾಂಡವರು ಯಾರಿಗೆ ಆಗುವದಿಲ್ಲೋ ಅವರನ್ನು ನಾನು ಕೂಡಿಸಿಕೊಂಡದ್ದು, ಇದೊಂದು ರಾಜಕೀಯ. ಇದರಲ್ಲಿ ನಾನು ಒಳ್ಳೆಯದಾಗಬೇಕು ಅಂತ ಬಂದವರು ಬಹಳ ಕಡಿಮೆ. ಕೌರವರಲ್ಲಿ ಒಳ್ಳೆತನ ಅಲ್ಲ ಆ ಶತ್ರುಪಕ್ಷ ಉಂಟಲ್ಲ-ಕೌರವನದು. ಆ ಪಾಂಡವರಲ್ಲಿ ಕೆಲವರು, ಕೆಲವರಿಗೆ ಮೊದಲೇ ಹೊಡೆದಿದ್ದಾರೆ. ಆ ನೋವುಂಟು ಅವಿಗೆ. ಅವರಿಗೆ ಸ್ಥಾನವು ಸಿಕ್ಕಲಿಲ್ಲ ಮಾನವೂ ಸಿಕ್ಕಲಿಲ್ಲ. ಹೀಗೆ ಅತೃಪ್ತರಾದವರು ಈಗ ನನ್ನೊಟ್ಟಿಗೆ ಸೇರಿಕೊಂಡದ್ದು, ಹಾಗಾಗಿ ಒಂದು ಕಣ್ಣನ್ನು ಅವರಮೇಲೂ ಇಟ್ಟಿರಬೇಕು. ಯಾಕೆ ಅಂತ ಹೇಳಿದ್ರೆ ಬರಬರುತ್ತಾ ಬರಬರುತ್ತಾ ಪಾಂಡವರು ಜಯಿಸಿದ ಹಾಗೆ ಇವರಿಗೆ ಕಾಣದೆ. ಈವರೆಗೆ ಆದ ಎಣಿಕೆ ಸ್ವಲ್ಪ ಅವರು ಮುಂದೆ ಇದ್ದಾಗುಂಟು. ಇವರು ಅಲ್ಲಿಗೆ ಜಾರಿದ್ರೆ? ಯೇನು ಪ್ರಾರಬ್ಧ ಮಾರಾಯ ಒಂದು ರಾಷ್ಟ್ರದ ನಾಯಕನಾಗೋದು ಬಹಳ ಕಷ್ಟ ಉಂಟು. ಹಾಗಾಗಿ... ಬದಲಿಸಿದ್ರೆ... ಬಾಕಿದ್ದವರೆಲ್ಲ ಹೊಸಬರು. ಇವರೆಷ್ಟಾದ್ರೂ ಹಳಬರು. ಅವರನ್ನಾದ್ರೂ ನಂಬಬಹುದು ಈ ಹೊಸಬ್ರು ಅವರಿಗೆ ಪಾಂಡವರಲ್ಲಿದ್ದಂತಹ ದ್ವೇಷವನ್ನು ತೀರಿಸಲಿಕ್ಕೆ ಬೇಕಾಗಿ ನನ್ನ ಪಕ್ಷದ ಸಕ್ರೀಯ ಸದಸ್ಯರಾಗಿ "ನಾಳೆ ಜಯಿಸದ್ದೇ ನಾವು" ಅಂತ್ಹೇಳಿ ನನ್ನ ನಾಯಕತ್ವವನ್ನು ಬಿಡು ಅಂತ್ಹೇಳಿದರೆ.... ಬಿಡಬೇಕಾಗ್ತದೆ.

ಯೇನು ಮಾಡೋದು... ದೇವರು ನನಗೆ ಸ್ವಲ್ಪ ರಾಜಕೀಯದ ತಲೆ ಕೊಟ್ಟಿದ್ದಾನೆ, ಬುದ್ಧಿಕೊಟ್ಟಿದ್ದಾನೆ. ಆದ್ದರಿಂದಲೇ ನನಗೆ ತಲೆ ಹಾಳಾದದ್ದು. ಯೇನು ಗೊತ್ತಿಲ್ಲದಿದ್ರೆ, ಧರ್ಮರಾಯನ ಹಾಗಾಗಿದ್ರೆ ದೇವರ ಪೂಜೆ ಮಾಡ್ತಾ ಕುತ್ಕಳ್ತಿದ್ದೆ. ದ್ರೋಣಾಚಾರ್ಯರ ಸೇನಾಧಿಪತ್ಯದಲ್ಲಿ ಪಾಂಡವರನ್ನು ಸೋಲಿಸುವದಕ್ಕೆ ಯಾರನ್ನು ಉಪಯೋಗಿಸುವದು?

ಆ ಮಟ್ಟಿಗೆ ನನ್ನಷ್ಟು ಬುದ್ಧಿವಂತರು ನನ್ನ ಪಕ್ಷದಲ್ಲಿ ಯಾರೂ ಇಲ್ಲ. ಕರ್ಣನಿಗೂ ಮತ್ತೊಬ್ಬರನ್ನು ಸೋಲಿಸಲಿಕ್ಕೆ ಗೊತ್ತಿಲ್ಲ. ಅಂದ್ರೆ ಅರ್ಥಾಯ್ತಲ್ಲ? ಸೋಲಿಸುವದು ಅಂದ್ರೆ ಬೇರೆ; ಅದು ಹೊಡೆದು ಬಡದು ಅಲ್ಲ. ಅಲ್ಲಿ ಕೃಷ್ಣ ಮಾಡುವ ಕೆಲಸವನ್ನು ಇಲ್ಲಿ ಒಬ್ಬ ಮಾಡಬೇಕು. ಕೃಷ್ಣನಾದವರಿಲ್ಲ. ಮತ್ತೆ ಇದ್ರೆ ಸ್ವಲ್ಪಮಟ್ಟಿಗೆ ನಾನು. ನಾನು ನಾಯಕನೇ ಹೋರಾಟಕ್ಕಿಳೆ...? ಕೂಡದು. ಏಕಕಾಲದಲ್ಲಿ ಪಕ್ಷದ ನಾಯಕನೂ, ಮುಖಂಡನೂ ಮಹಾಯೋಧನೂ ಆದ್ರೆ, ಅದೇನಾಗ್ತದೆ ಅಂದ್ರೆ; ಸೇನಾಧ್ಯಕ್ಷನೂ ನಾಯಕನೇ, ಶಾಸಕರೂ ನಾಯಕರೇ ಆದಾಗ ಊರಲ್ಲಿದ್ದವರು ಈ ನಾಯಕ ಯಾವಾಗ ಹೋದಾನು ಅಂತ ಪ್ರಯತ್ನ ಪಟ್ಟಾರು. ಅಂತೂ ಇಂತೂ... ಯೇನ ಮಾಡಲಿ ನಾನು? ಯೇನ್ ಮಾಡ್ಲಿ ಅಂತ ಚಿಂತೆ ಅಲ್ಲ. ಚಿಂತೆ ಬಂದ್ರೆ ನನ್ಗ ಗೊತ್ತಿಲ್ಲೊ -ಐದು ಗ್ರಾಮ ಒಂದು ಗ್ರಾಮ ಕೂಡಿಸಿ ಕೊಡ್ತೀನೆ ಹೊರಟು ಹೋಗಿ ಅಂತ್ಹೇಳಿದ್ರೆ ಉಳದ್ದು ನನಗೇ. ಈಗ ಅದಲ್ಲ... ಪಾಂಡವರನ್ನು ಸೋಲಿಸಬೇಕು. ಕೆಲವರಿಗೆ ಹಾಗಯ್ಯ, ತಾವು ಗೆಲ್ಲದಿದ್ರೂ ಚಿಂತಿಲ್ಲ ಅವರು ಸೋತ್ರೆ ಹಾಲುಕುಡಿಸುವವರು ಎಷ್ಟು ಜನ ಇದ್ದಾರೆ! ಅವರು ಸೋಲಬೇಕು. ಯೇನು ಮಾಡಲಿ ಯೇನು ಮಾಡಿ ಸಾಯ್ಲಿ.

## ೧೮ ಚಕ್ರವ್ಯೂಹ-ಚಿಂತನ

### ದ್ರೋಣ

ಆಹಾ, ಹಳೆಯ ಹೇಳಿಕೆಗೆ ಹೊಸ ವ್ಯಾಖ್ಯಾನವನ್ನೇ ನಾನ್ ಕೇಳ್ತಾ ಇದ್ದೇನೆ ಮರೆಯಲ್ಲಿ ನಿಂತು. ಹೂಂ, ಕರ್ಣನಂಥವನು ಯಾಕೆ ಹೀಗೆ ಮಾತಾಡ್ತಾನೊ ಎಂಬುದಕ್ಕೆ ಕೆಲವು ಸಲ ನಮ್ಮಂಥವರಿಗೆ ಉತ್ತರವೇ ಸಿಕ್ಕೋದಿಲ್ಲ. ಭೀಷ್ಮನ ಬಗ್ಗೆ ಅಮಿತವಾದಂತಹ ಭಕ್ತಿ, ಅಚಲವಾದಂತಹ ಶ್ರದ್ಧೆಯುಳ್ಳವ ಕರ್ಣ! ಶರತಲ್ಪದಲ್ಲಿ ಭೀಷ್ಮರು ಪವಡಿಸಿದ್ದನ್ನು ತಿಳ್ದು, ಅವರ ಯುದ್ಧದಿಂದ ಹಿಂದೆ ಸರಿದವನು, ತಾನು ಅಪರಾಧಿ ಎಂದು ಮನಸಾ ತರ್ಕಿಸಿಕೊಂಡು, ಕ್ಷಮಾಯಾಚನೆಗಾಗಿ, ಭಯದಿಂದ ಬಹು ದೂರ ನಿತ್ತದ್ದನ್ನು ಕಂಡವರು ನಾವು ಮೊನ್ನೆ ಮೊನ್ನೆ.

"ಅದಾರು?" ಅಂತ ಹಳೇ ಪರಿಚಯದಿಂದ ದೂರದೃಷ್ಟಿಯುಳ್ಳಂಥಹ ಭೀಷ್ಮರು, ಗುರುತಿಸಿ- "ಕರ್ಣಾ ಬಾ," ಅಂತ ಕರೆದಾವಾಗ ಯೇನೋ ಧನ್ಯತೆಯಿಂದ ಪುಳಕಿತನಾದಂತೆ ನಮಗೆ ಕಂಡಿತು. ಅಪರಾಧಿ ನಿತ್ತ ಹಾಗೆ ಮೌನವ್ರತದಿಂದ ನಿತ್ತ. ಆಗ ಭೀಷ್ಮರು ಹೇಳಿದರು, "ಬೇಸರವಿಲ್ಲ ಬೇಸರವಿಲ್ಲ. ನೀನು ಸಕಲ ಕಲ್ಯಾಣ ಗುಣ ಪರಿಪೂರ್ಣನೇ ಹೌದಾಗಿದ್ರೂ, ನನ್ನ ವೈಯಕ್ತಿಕ ಜೀವನದಲ್ಲಿ ಆಕ್ಷೇಪಿಸುವ ಯಾವುದೇ ಕ್ರಿಯಾಲೋಪ ನಾವು ಕಾಣದೇ ಇದ್ದರಿಂದ, ನಿನ್ ಬಗ್ಗೆ ನಮಗೊಂದು ಮನಃ ಕಶಾಯ ಏನು? ಪಾಂಡವವಿದ್ವೇಷ. ಈ ಪಾಂಡವ ವಿದ್ವೇಷಕ್ಕೆ ಕಾರಣವೇನು? ನಿನಗದಾವುದೋ ಒಂದು ಪೂರ್ವಗ್ರಹ! ಈ ತಪ್ಪನ್ನು ತಿದ್ದಿಕೋ" ಅಂತ ಹೇಳ್ವಾಗ್ಗ ಯಾವುದೋ ಒಂದು ಭಾವಸಮಾಧಿಗೆ ಬಂದು ಕಣ್ಣೀರಿಳಿಸುವುದನ್ನು ಕಂಡವ ನಾನು. ಈಗ ಇದೇನ್ ಕೇಳ್ತಾ ಇದ್ದೇನೆ? ಭೀಷ್ಮರ ಇದಿರ್ನ್ಲ್ಲಿ ಅವರ ಸೇನಾಧಿಪತ್ಯವನ್ನು ಖಂಡಿಸಿದ ಕರ್ಣ! ಪಶ್ಚಾತ್ತಾಪಾಗ್ನಿಯಿಂದ ಬೆಂದು ಪರಿಶುದ್ಧನಾದ. ಇದೇನಿದೀಗ ಎರಡನೇ ಅಧ್ಯಾಯ? ಅದೇ ನಾನ್ ಹೇಳಿದ್ದು. ಹಳೇ ವಿಷಯಕ್ಕೆ ಈಗ ಹೊಸ ವ್ಯಾಖ್ಯಾನ.

ಏನಾಗ್ಯದೆ ಇವನಿಗೆ? ಸೇನಾಧಿಪತ್ಯ ನನ್ಗ ಕೊಟ್ವಾಗ್ಯದೆ. ಆಗ ಅನುಮೋದಿಸಿದವರಲ್ಲಿ ಇವನೂ ಒಬ್ಬ. ಈಗ ಯೇನ್ ಹೇಳ್ತಾನೆ? ಇವರ ಮುಖವನ್ನೇ ನೋಡ್ಬೇಡ ಭೀಷ್ಮರಿಗೆ ಕೊಡಬೇಡ! ದ್ರೋಣರಿಗೆ ಕೊಟ್ಟಲ್ಲಿ ಆಕ್ಷೇಪ ಇಲ್ಲ! ಆದರೆ ಈಗ ಸೇನಾಧಿಪತ್ಯಕ್ಕೆ ಒಪ್ಪಿ, ಅಲ್ಲಿ ನನ್ನನ್ನು ಕೂತುಗೊಳಿಸಿ, ಈಗ ಅಲ್ಲಿಂದ ಇಳಿಸು, ತಳ್ಳಿಹಾಕು! ಅಬ್ಬಬ್ಬಬ್ಬಬ್ಬ. ಛ಼ ಯೇನೋ ಒಂದು ಅತೃಪ್ತಜೀವ. ಅವನ ಅತೃಪ್ತಿ ಅದು ಆವೇಶ ವಾಗ್ವಾಗ್ಗ, ಪೂರ್ವಾಗ್ರಹ ಅದು ಯೆದ್ ಕಾಣ್ತದೆ ಹಿನ್ನೆಲೆಯಾಗಿ ಪೂರ್ವಾಗ್ರಹವೂ ಪ್ರಚೋದಕವಾಗಿದೆ. ಹಾಗಂತ, ಕೌರವಯೆಲ್ಲಾದರೂ ಇವನ ಸಲಹೆಯನ್ನು ಅಂಗೀಕರಿಸಿ, ಆದರೆ ದಾಕ್ಷಿಣ್ಯದ ಮುಂದೆ, ಆಚಾರ್ಯರೆ ಬಿಟ್ಟುಕೊಡಿ ಅಂತ ಹೇಳೋದಕ್ಕೆ ಕಷ್ಟ ಸಾಧ್ಯವಾಗಿ ಉಳದ್ರೂ, ಅವನಿಗೂ ಕೂಡಾ ಅಸಮಾಧಾನವಾದ ಸೇನಾಪತಿಯಾಗಿ ನಾನು ಇನ್ ಮುಂದೆ ಬದ್ಕ ಬೇಕೆ?

ಅಥವಾ ಸಾಯೇಕೆ? ಏನೇ ಆಗ್ಲಿ ಇದನ್ನು ನಾನು ಕೇಳಿದ್ದೇನೆ. ಅಂತ ನಾನೇ ಮನಸ್ಸಿನಲ್ಲಿ ಬೇಯೂದಲ್ಲ. ಕೌರವನ ಮುಂದೆ ಒಮ್ಮೆ ಕರ್ಣನನ್ನು ವಿಚಾರಿಸ್ಬೇಕು. ವಿಚಾರಿಸ್ಬೇಕು.

ಕರ್ಣಾ...ನಾ ಯುದ್ಧದಲ್ಲಿ ಸೋತಿರಬಹುದು; ಸತ್ತಿಲ್ಲ. ಸೇನಾಪತಿಯಾಗಿ ನನ್ನ ಕರ್ತವ್ಯ ಯೇನು ಎಂಬುದನ್ನು ತಿಳ್ಕೊಂಡೇ, ನಾನು ಈ ಗುಪ್ತಾಲೋಚನೆಯ ಸಭೆಯಲ್ಲಿ ನನಗೆ ಆಮಂತ್ರಣಯಿಲ್ಲದೇ ಇದ್ದರೂ, ಗೋಡೆಯನ್ನೇ ಕಿವಿಯನ್ನಾಗಿಸಿ ಆಲಿಸುತ್ತಾ ಇದ್ದೆ. ಸೇನಾಧಿಪತಿಯ ಕರ್ತವ್ಯ ಅದು. ಆದಕಾರಣ ಕರ್ಣಾ, ನಾವೂ ಕೂಡ ಹಳೇ ವಾಕ್ಯಕ್ಕೆ ಹೊಸ ವ್ಯಾಖ್ಯಾನ ಮಾಡಬೇಕಾಗಿ ಬಂದಿದೆ.

|ಸೌರಾಷ್ಟ್ರ-ತ್ರಿವುಡೆ | ಎಲವೊ ಸೂತನ ಮಗನೆ ನಿನ್ನಯ ಒಲವನರಿತೆಹೆ ನಾನು ಪೂರ್ವದಿ |

ಲಲನೆಯರ ಸಮ್ಮುಖದಿಗಳುಪಿದಗ್ಗಳಿಕೆಯೇನು || ೧೫೭ |

ಸೂತನ ಮಗನೆ..., ಮಹತ್ವಾಕಾಂಕ್ಷೆ ನಿನ್ನದು. ಇದ್ದುದರಲ್ಲಿ ತೃಪ್ತನಲ್ಲ. ಇದನ್ನು ನಾವು ಬಹಳ ಹಿಂದಿನಿಂದಲೇ ಸೂಕ್ಷ್ಮವಾಗಿ ಅವಲೋಕಿಸ್ತಾ ಬಂದು, ಆ ತೀರ್ಮಾನವನ್ನು ಬದಲಾಯಿಸಲಿಕ್ಕೆ ಸಂದರ್ಭ ನೀನೇ ವೊದಗಿಸಿ ಕೊಡ್ಲಿಲ್ಲ. ಗೊತ್ತು ಕರ್ಣ ನನ್ಗೆ, ವಿದ್ವಾಂಸ ನೀನು, ಯುದ್ಧವಿದ್ಯೆಯಲ್ಲಿ ಅರ್ಜುನನಿಗೆ ಸರಿಸಮಾನ. ಪರೀಕ್ಷಾ ರಂಗದಲ್ಲಿ ನಾವೇ ಕೂತುಕೊಂಡು ಹೇಳಿದ್ದು, ಕರ್ಣ ಅರ್ಜುನ ಇಬ್ಬರು ಸರಿಸಮಾನರು. ಆದರೆ ಕುಲದ ಹಿರಿಮೆ ಅರ್ಜುನನಿಗೆ ಹೆಚ್ಚು. ಆದ್ದರಿಂದ 'ಪಾರ್ಥ ಏವ ಧನುರ್ಧರಃ!' ಅಂತ ಹೇಳಿದೆವು. ಅರ್ಜುನನ ಅಪೇಕ್ಷಿಸಿ ನಿನಗೆ ಪೂರ್ಣ ಸಿದ್ಧಿ ಆಗ್ಲಿಲ್ಲ. ಮತ್ತೆ? ಆವಾಗ್ಲೆ ತೀರ್ಮಾನ ಹೇಳಿದ್ದೇನೆ. ಧರೆಯೊಳ್ ಆಳೊಬ್ಬಬ್ಬರಿಗೊಂದೊಂದು ಗುಣ. ಪಾರ್ಥಂಗೆ ಮೂರು ಗುಣ' ನಿನ್ನಲ್ಲಿ ವೊಂದ್ ಗುಣವನ್ನು ನಾವು ಉಲ್ಲೇಖಿಸಿದ್ದೇವೆ. ಹೇಗೆ ಅಂತಂದ್ರೆ ನಿನ್ನ ಭದ್ರವಾದ ಮುಷ್ಠಿ ಆ ಬಿಲ್ಲನ್ನು ನಿನ್ನ ಮುಷ್ಠಿಯಲ್ಲಿ ಹೀಗೆ ಹಿಡ್ದ್ರೆ ನಿರ್ವಾತ ಪ್ರದೇಶದಲ್ಲಿ ಉರಿಯುತ್ತಿರುವ ಜ್ಯೋತಿಯ ಹಾಗೇ, ಕಂಪನ ಇಲ್ಲ! ರಾಮನಿಗೆ ಕಂಪನ ಇಲ್ಲಿಲ್ಲ. ಯೇನಿಲ್ಲ, ಆ ಗುರಿಸಾಧನೆ, ಅದು ಶ್ರೀರಾಮನಲ್ಲಿದ್ದ ಹಿರಿಮೆ. ಈ ಯೆಲ್ಲಾ ಗುಣ ಅರ್ಜುನನಲ್ಲಿ ಉಂಟು. ಪೂರ್ಣ ಅಂತಲ್ಲ, ಅಂದ್ರೆ ಪರಿಪೂರ್ಣ ಕ್ಷಾತ್ರ ವೃತ್ತಿಯ ವರ್ತಮಾನ ಕಾಲದ ಕೋದಂಡದೀಕ್ಷಾ ಗುರು ಅಲ್ಲದೇ ಇದ್ರೂ, ಕೋದಂಡ ದೀಕ್ಷೆಗೆ ಆದರ್ಶ ಪುರುಷ, ನಾವು ಪ್ರಾಮಾಣಿಕವಾಗಿ ಹೇಳಿದ್ದೆವು ಅಂದಿನಿಂದ "ನಿನಗೇನೋ ನನ್ನನ್ನು ತಗ್ಗಿಸ್ಲಿಕ್ಕೆ ನೋಡ್ತಾರಲ್ಲ ಇವೆಲ್ಲ" ಅಂತ ತೋರಿತು. ಏನ್ ಮಾಡೋಣ? ನನ್ನ ಪರಿಸ್ಥಿತಿ ನಿನ್ನ ಪರಿಸರ ಅದಕ್ಕೆ ಕಾರಣವಾಯ್ತು. ಮತ್ತೂ ಮತ್ತೂ ಸೂತ ಪುತ್ರತ್ವವನ್ನೇ ನೀನು ಉದ್ವೇಷಿಸಿದೆ. ಸೂತ ಪುತ್ರನ ಸ್ವಭಾವವನ್ನೇ ಆ ಕೀಳರಿಮೆಯನ್ನೇ ನೀನು ಪ್ರಕಟಿಸುತ್ತಾ ಬಂದಿ. ಹ್ಞ ಈಗ ನಮ್ಮೆಲ್ಲವರ ಬಗ್ಗೆ ಅವಿಶ್ವಾಸವನ್ನು ಕೌರವಲ್ಲಿ ಮೂಡಿಸುವದಕ್ಕೆ ಯತ್ನಿಸಿದ್ದೆ ನೀನು. ಯೇನಪ್ಪಾ? ಕಾಯೇನ ವಾಚಾ ಮನಸಾ ನಮ್ಮಿಂದ ನಿನಗೇನಾದ್ರೂ ದ್ರೋಹವಾಗಿಲ್ಲ. ಸೂತ ಪುತ್ರನಲ್ಲ; ನೀನು ಇನ್ನಾವನೋ ಎಂಬುದನ್ನು ಸಾರ್ವಜನಿಕರ ಮುಂದೆ ಪ್ರಕಟಪಡಿಸಲಿಕ್ಕೆ ನಿನ್ನ ಸಂಶೋಧನೆಯಲ್ಲಿಯೂ

ನಾವ್ ಕಾಣ್‌ಲಿಲ್ಲ. ಹಾಗಿರುವಾಗ ನಿನಗೆ ನಿನ್ನ ಮೂಲದ ಬಗ್ಗೆ ಕಾಳಜಿ ಇಲ್ಲದಿದ್ರೆ ನಾವ್ ಯಾಕ್ ಸೂತಪುತ್ರನೋ ಅಲ್ಲ ಬೇರೆ ಪುತ್ರನೋ ಅಂತ ತಲೆ ಕೆಡಿಸಿಕೊಳ್ಳೋದ್ ಯಾಕೆ?

ಇಲ್ಲಿ ಯೇನ್ ಕಾಣ್ತದೆ ಅಂತಂದ್ರೆ ವಿಶಿಷ್ಟವಾದಂತಹ ಗುಣಗಳಿದ್ರೂ ಕೂಡ, ಅದರ ಮೇಲೆ ಆವರಣವಾಗಿ ಬಂದದ್ದು ಆ ಅತೃಪ್ತಿ. ಅದರಿಂದ ನಿನ್ಗೆ ಪ್ರಪಂಚಯೆಲ್ಲ ವೊಮ್ಮೆ ವಿರೋಧವಾಗಿ ಕಾಣ್ತದೆ. ಇದು ಯಾವ ವ್ಯಕ್ತಿಯಲ್ಲೇ ಆಗಲಿ, ವೊಳ್ಳೆಯ ಸ್ವಭಾವ ಅಲ್ಲ. ಆದ್ದರಿಂದ ಏನು, ಭೀಷ್ಮರಿಂದ ಆಗದೇ ಇದ್ದದ್ದು, ದ್ರೋಣನಾದ ನನ್ನಿಂದ ಆಗದೇ ಇದ್ದದ್ದು, ಯೇ ಅಧಿರಥನ ಸಾಕುಮಗನೇ ನಿನ್ನ ಜಾತಕದ ಫಲದಲ್ಲಿ ಆದೀತು ಅಂತ ತಿಳ್ಕೊಂಡಿದ್ದೆಯೋ? ಎಲ್ಲಿ ಮಾಡಿದ್ದೀ? ಯೆಲ್ಲಿ? ಹೇಳದ್ದು, ನಿನ್ನ ದಾನದಿಂದ ತೃಪ್ತರಾದವರು, ದಾನಕಾಂಡ ಹೇಳದ್ದು. ನಿನ್ನಿಂದ ಯೇನಾದರೂ ಆಶ್ವಾಸನೆ, ಪಡೆಕೊಂಡವು ಆಶ್ವಾಸನೆಯನ್ನು ನೀನು ಈಡೇರಿಸಿದಾವಾಗ, ಸತ್ಯವಂತ, ನನ್ನಿಯನ್ನುಳ್ಳವ, ಅಂತ ಹೇಳಿದ್ದದ್ದು. ಇದು ಸೀಮಿತ ಇದು ಸೀಮಿತವಾದದ್ದು. ಸಮಷ್ಟಿಯಾಗಿ ನೋಡಿದರೆ ನೀನು, ಯಾವ ಅಧಿಷ್ಠಾನದಲ್ಲಿ ನಿನ್ನ ಧ್ವಜವನ್ನು ಏರಿಸಿದ್ದಿಯೇ, ಆ ಭೂಮಿಗೆ, ಆ ಅನ್ನಕ್ಕೆ, ಆ ಸಿಂಹಾಸನಕ್ಕೆ ಆ ಕೌರವೇಶ್ವರನಿಗೆ, ಎಲ್ಲಿದೆ ನಿನ್ನ ದಾನ? ಎಲ್ಲಿದೆ ನಿನ್ನ ಸತ್ಯ? ನಾವು ತಿಳಿಯದಿದ್ದವರೋ? ಸುಮ್ಮನೇ ಹೇಳಿದರೋ ಕೆಲವರಾದರೂ, ಕೌರವನಿಗೆ ನಾಲ್ಕು ಮಂದಿ ದುಷ್ಟರ ವ್ಯೂಹ ಇದೆ ಅಂತ; ದುಷ್ಟ ಚತುಷ್ಟಯ! ಭೀಷ್ಮಾಚಾರ್ಯರು ಹೇಳಿದ್ದಾರೆ, ನಿನ್ನಲ್ಲೇ ಹೇಳಿದ್ದಾರೆ, ಮೊನ್ನೆ ಹೇಳಿದ್ದಾರೆ.

ನೀನೊಬ್ಬ ಸ್ವಾಮಿ ಹೌದೇನೋ? ನೀನೊಬ್ಬ ವೀರ ಭಕ್ತ! ಅಂತಾದ್ರೆ... ಆದ್ರೆ ಆ ಹೊತ್ತು ಧೀರ ನೀನಾಗಿರಲು... ಅಲ್ವೋ ಅದು? ಘೋಷ ಯಾತ್ರೆ! ಪ್ರೋತ್ಸಾಹ ನಿನ್ನದು. ಅಲ್ಲಿ ಯೇನಾಯ್ತು? ಗಂಧರ್ವಪತಿಯಾದಂತಹ ಚಿತ್ರಸೇನ, ಥ್ಥ ನಿನ್ನನ್ನು ಬಂಧಿಸಿ, ತನ್ನ ರಥದಲ್ಲಿ ಹಾಕಿ, ಗಂಧರ್ವ ಲೋಕಕ್ಕೆ ವೊಯ್ಯುತ್ತಿರುವ ಕಾಲದಲ್ಲಿ, ಕರ್ಣ ಇದ್ರಿಸಲಿಕ್ಕೆ ಬಂದನೋ? ಕರ್ಣಾ ಇದ್ರಿಸಲಿಕ್ಕೆ ಬಂದೆಯಾ ನೀನು? ಇದನ್ನು ಭೀಷ್ಮರು ಸೂಚ್ಯವಾಗಿ ಮೊನ್ನೆ ಹೇಳಿದರು ಅಂತ ನಾನು ಹೇಳಿದ್ದು, ಯಾವ ಸ್ವಾಮಿ ಭಕ್ತನಾದರೂ ಯಾವ ನಿಷ್ಠೆಯನ್ನುಳ್ಳಂತಹ ಯೋಧನಾದರೂ, ತನ್ನ ಸ್ವಾಮಿ ಆಪತ್ತಿಗೆ ಸಿಕ್ಕಿದಾಗ, ಅವ ಮರಣೋನ್ಮುಖವಾಗಿ ಹೋಗ್ತಾ ಇದ್ದಾನೆ ಅಂತ ಆಗ್ವಾಗ, ಅವನ ಜೀವನಕ್ಕೆ ಜೀವ ಕೊಟ್ಟು, ವೊಂದೋ ಅವನಿಗೆ ಹೊಸ ಜೀವವನ್ನು ಕೊಟ್ಟಾನು, ಇಲ್ಲ ಅವನ ಜೀವದೊಟ್ಟಿಗೆ ಇವನೂ ಸೇರಿ ಕೊಂಡಾನು. ಕೌರವ ಸಾಕಿದನಲ್ಲ! ನಿನಗಿದ್ದಷ್ಟು ಕರ್ತವ್ಯ ಈಗ ನಾನು ನಿನ್ನಲ್ಲಿ ಕೇಳೇನೆ, ಭೀಷ್ಮರಿಗೂ, ನನಗೂ ಉಂಟೇನೊ? ಯುದ್ಧದಲ್ಲಿ?

ನಾವು ನಿಷ್ಪಕ್ಷಪಾತಿಗಳಾಗಿ ಉಳಿದ್ರೆ ನಮ್ಮನ್ ಈ ರಂಗಕ್ಕೆ ಇಳಿಸ್ತವ್ರ್ ಯಾರು? ನಾವು ಸರಿಯಾಗಿ ಮಾಡ್‌ಲಿಲ್ಲ ವಂಚನೆ ಮಾಡಿದ್ದೇವೆ ಅಂತ ಹೇಳ್ಲಿಕ್ಕೆ, ಭೀಷ್ಮರು

ಹೇಳಿದಮೇಲೂ ನಿನಗೆ ನಾಲಿಗೆ ಬಂತ? ನೀನೇನ್ ಮಾಡಿದ್ದೀ ಆವೊತ್ತು? ನಮಗೆ ಸುದ್ದಿ; ನಾವ್ ಬಲ್ಲಿಲ್ಲ. ಏನ್ಮಾಡಿದ್ದೀ? ಏನಾಡಿದ್ದೀ? ವೊಂದ್ ಮಾತುಂಟು. ವಿರೋಧಿ ಮನೆಬಾಗಿಲಿಗೆ ಬಂದು, ಆಯುಧ ಝಳಪಿಸುವಾಗ ಮನೆಯ ಹೆಂಗುಸಿನ ಸೀರೆಯ ಸೆರಗಿನಲ್ಲಿ ತಲೆ ಮರೆಸಿಕೊಂಡ ಅಂತ. ಯೆಂಥಹ ಗಂಡಸಾದ್ರೇನು? ಯೆಂಥಹ ವೀರನಾದೇನೋ ನೀನು? ಯೆಲ್ಲಿ ಅಡಿಗಿದ್ದೀ ಅಂತ ಗೊತ್ತಿಲ್ಲ ಮತ್ತೆ ನಿನ್ನ ಮುಖ ಕಂಡದ್ ಯಾವಾಗಂತೆ ಅಲ್ಲಿ? ಅರ್ಜುನ ಹೋಗಿ, ಕೌರವನನ್ನು ಬಿಡಿಸಿ, ಕೌರವನನ್ನು ಮನ್ನಿಸಿ, ಆ ಶತ್ರುಪಕ್ಷದವರು ಬಿಟ್ಟಾಗ, ವಾದ್ಯಘೋಷ ಕೇಳಿದ ನೀನು ಯೆಲ್ಲಿದ್ದೀ ಅಂತ ಗೊತ್ತಿಲ್ಲ ಬಂದು, ಆ ಕೌರವ ಯುದ್ಧ ಜಯಸಿದನೋ ಅಂತ ಕೇಳಿದವ ಅಲ್ವೋ ನೀನು? ಮರ್ಯಾದೆ ಕೆಟ್ಟನ್ನೇ ಯೆಂಥಹ ಕೀಳು ಯೇನು, ಇದಕ್ಕಿಂತ ನಿಕೃಷ್ಟವಾದದ್ದೇನು? ಆದಕಾರಣ ಕೌರವನ ಪ್ರಾಣಾಪತ್ತಿಗೆ ಅವ ಸಾಯ್ತಾನೆ ಅಂತ ಗೊತ್ತಿದ್ರೆ ವೊಂದೋ ನೀನು ವೋಡ್ಸವ, ವಿರೋಧಿಗಳು ಅಮ್ಮನ್ ಅರ್ಧ ಜೀವ ಮಾಡಿದರು ಅಂತಂದ್ರೆ ಬೇಗ ಅವನ ಜೀವ ತೆಗೆಯುವಂಥ ವಿಶ್ವಾಸ ಘಾತಕಿ! ಶಕುನಿ, ಸೈಂಧವ, ದುಃಶಾಸನ, ಆಹಾ ಕರ್ಣ! ದುಷ್ಟ ಚತುಷ್ಟಯ:! ನಮ್ಮ್ ಗೊತ್ತಿಲ್ಲೊ ಅದು? ನಾವೇ ಹೆಳ್ಳಿಲ್ಲ. ಯಾಕೆ ಹೇಳಿಲ್ಲ? ಮನುಷ್ಯ ಸಹಜ. ಕೆಲವರಿಗ್ ಯೇನಾದ್ರೂ ಪೂರ್ವಾಗ್ರಹ ಇರದೆ ಅಂತ. ಈಗ? ಇಲ್ಲಿ? ಅದನ್ನೇ ಅಂದ್ರೆ ನೀನ್ ಆವೊತ್ ಹೇಳಿದ್ದನ್ನೇ ಉದ್ಘಾಟಿಸುವಾಗ, ನಾವ್ ಆವೊತ್ ಹೇಳಿದ್ದಕ್ಕೆ, ಆ ಸಂದರ್ಭದಲ್ಲಿ, ಈ ವ್ಯಾಖ್ಯಾನವನ್ನು ಹೇಳಿಸುತ್ತಾ ಇದ್ದೀ ನೀನು. ಆದಕಾರಣ ಯೆನು? ನನ್ನ ಸೂಚನೆ ಯೇನು? ಸೇನಾಧಿಪತ್ಯವನ್ನು ವಿಸರ್ಜನೆ ಮಾಡು ಅಂತ ಹೇಳು ಅಂತಲ್ವೆ? ಇದಲ್ವೆ ಗುಪ್ತಾಲೋಚನೆ? ಇದಲ್ವೆ ಗುಪ್ತಾಲೋಚನೆ?

ನಾನ್ ನಿವೃತ್ತನಾಗಬಹ್ದು, ನಾನ್ ನಿವೃತ್ತನಾದರೆ ನೀನ್ ಬದುಕಿಸ್ತಿಯೇನೊ? ಸಿಂಹಾಸನದ ಸಂರಕ್ಷಣೆಯ ಹೊಣೆ ಹೊತ್ತು, ತಾನು ಉಸಿರಾಡುತ್ತಿರುವವರೆಗೆ ಅದು ಪ್ರಶ್ನಾತೀತವಾಗಿ ಉಳಿಸಿದಂತಹ ಭೀಷ್ಮರಿಂದ ಆಗದೇ ಇದ್ದದ್ದು, ಅಥವಾ ನಿಮಗೆಲ್ಲಾ ಪಾಠ ಹೇಳಿದ ಆಚಾರ್ಯನಾದ ನನ್ನಿಂದ ಆಗದೇ ಇದ್ದದ್ದು, ನಿನ್ನಿಂದ ಆಗದೇನೋ? ಯೇನು ಮಹತ್ವಾಕಾಂಕ್ಷೆ? ಯೇನಾಗೇಕು ಅಂತ ನಿನ್ನ ಮನಸ್ಸು? ಇಷ್ಟಾದದ್ದು ಸಾಲದೋ? ಯೇನೂ ಇಲ್ದಿದ್ದ ಅನಾಮಧೇಯನಾದ ವೊಬ್ಬ ಕೌರವನ ಆಪ್ತ ಸಖ, ಈ ಆಪ್ತ ಸಭೆಯಲ್ಲಿ ಮೂರನೇ ಆಸನದಲ್ಲಿ ಕೂತುಕೊಳ್ಳುವ ಸ್ಥಾನ. ಭೀಷ್ಮ, ದ್ರೋಣ, ಕರ್ಣ, ನೀನ್ ಯೆಂಥ ಅಲ್ಪನೊ?

ನಮಗೆ ಮುಖ ಕಾಣಿಸಬಾರದೊ ಕೌರವ? ನಾವು ಕೌರವನಿಗೆ ಮುಖ ಕಾಣಿಸಬಾರದೊ? ಪ್ರಾಮಾಣಿಕವಾಗಿ ಕೇಳು. ವಸ್ತುನಿಷ್ಠವಾಗಿ ಹೇಳು. ಯಾವುದೇವೊಂದು ವಸ್ತುವನ್ನು ವಸ್ತುನಿಷ್ಠವಾಗಿ ನೋಡದ ವಿನಾ ಪೂರ್ವಾಗ್ರಹವನ್ನು ಇಟ್ಟುಕೊಂಡು ಆ ವಸ್ತುವನ್ನು ನೋಡಿದರೆ, ಯೇನಾಗ್ತಿದೆ ಗೊತ್ತೊ? ಬ್ರಹ್ಮರಾಕ್ಷಸನ ಧ್ಯಾನ ಮಾಡಿದವನಿಗೆ, ಬ್ರಹ್ಮರಾಕ್ಷಸ ಸಾಕ್ಷಾತ್ಕಾರ ವಾಗುವ ಹಾಗೆ ಮಾತನಾಡ್ತೀ, ಮಾತನಾಡ್ತೀ ಇದ್ದೆ ಉತ್ತರಿಸು.

ಶಿವನೇ ಇದೆಲ್ಲ ನಮ್ಮಂಥವರ ಪ್ರಾರಬ್ಧ, ಇದು ಪ್ರಾರಬ್ಧ! ಯಾಕೆ ಪ್ರಾರಬ್ಧ ಅಂತಂದ್ರೆ ನಾನೂ ತಪ್ಪಿ ಬಿದ್ದೆ. ಆದರೆ ನನ್ನ ತಪ್ಪನ್ನು ತಿದ್ದುವುದಕ್ಕೆ ಇನ್‌ರಂಗ ಇಲ್ಲ. ವರ್ತಮಾನ ಕಾಲದ ಅಭಿನವ ಪ್ರಭು ಅಭಿನವ ಪ್ರಭು ರಾಮ. ಯಾಕೆ ಹೇಳ್ತೇನೆ? ರಾಯ ಕಟಕಾಚಾರ್ಯ, ನನ್ನ ಸ್ಥಾನ ಯೇನು! ನಾನಿದ್ದಲ್ಲಿ ವರ್ತಮಾನ ಕಾಲದ ಯೆಲ್ಲಾ ಅರಸು ಮಕ್ಕಳು ಹುಡುಕಿಕೊಂಡು ಬಂದು ಧನುರ್ವೇದವನ್ನು ನನ್ನಿಂದ ಕಲಿತುಕೊಂಡು ಗುರುದಕ್ಷಿಣೆ ಕೊಟ್ಟು ಹೋಗೋಕಾಗಿತ್ತು. ಇಷ್ಟು ಅರ್ಹತೆಯಿದ್ದ ನನಗೆ ವಿನಾಕಾರಣ ದ್ರುಪದನಲ್ಲಿ ಹಠ ಹುಟ್ಟಿತು. ಹಳೇ ಸ್ನೇಹಿತ ಅಂತ ಯೇನಾದ್ರು ಕೊಟ್ಟಾನೋ ನೋಡೋಣ ಅಂತ ಹೋದೆ. ಅವನಿಗೆ ಗುರುತೇ ಇಲ್ಲ!! “ನನ್ನಲ್ಲಿ ನಂಟೆಲ್ಲಿ?” ಅಂತ ಹೇಳ್ವಾಗ ನನ್ನ ಕ್ರೋಧ ಬಂತು. ನಿನ್ನನ್ನು ಶಿಕ್ಷಿಸದೇ ಬಿಟ್ರೆ, ಅಂತ ಹೇಳಿದೆ. ಹೌದು ಕ್ಷತ್ರಿಯರು! ರಾಜರು! ಅವರಿಗೆ ಸಂಧಿ, ವಿಗ್ರಹ ಎಲ್ಲ ಗೊತ್ತುಂಟು. ಇದಿರು ಹಾಕ್ಕೊಂಡಾಯ್ತು. ನನ್ನಿಂದ ಕಟ್ಟು ತಡೀಲಿಕ್ ಆಗ್ತದೋ ಬ್ರಾಹ್ಮಣನಿಗೆ? ಹಸ್ತಿನಾವತಿಯ, ನನ್ನ ಭಾವ್ಯೆಂಟ ಇದ್ದಾನೆ ಅಲ್ಲಿ ಕೃಪ, ಹೆಂಡತಿ ಮಕ್ಕಳನ್ನು ಅಲ್ಲಿ ಬಿಟ್ಟು ನಾನು ದ್ರುಪದನಲ್ಲಿ ಹೋದದ್ದು. ಪುನ: ಮರಳಿ ಅಲ್ಲಿಗೇ ಬಂದೆ, ಯೆಷ್ಟಾದರೂ ಹೆಣ್ಣನ್ನು ನಾವು ಯಾವ ಮನೆಯಿಂದ ಸ್ವೀಕರಿಸಿದ್ದೇವೋ ಆ ಮನೆ ನಮ್ಮ ಮನೆ ಆಗೋದಿಲ್ಲ ಸ್ವತಂತ್ರವಾಗಿ ಜೀವಿಸ್ಬೇಕು. ಯತಾರ್ಥ ಹೇಳೋದಿದ್ರೆ ನನ್ನಲ್ಲಿ ಇದ್ದಂತಹ ವಿದ್ಯೆಯನ್ನು ವ್ಯಾಪಾರಕ್ಕೆ ತಿರುಗಿಸಿ, ವಿಕ್ರಯಿಸ್ಬೇಕಾಯ್ತು. ಹಸ್ತಿನಾವತಿಯ ಅರಸು ಮಕ್ಕಳಿಗೆಲ್ಲ ಧನುರ್ವೇದವನ್ನು ಹೇಳಿಕೊಡುವ, ಅಧ್ಯಾಪಕನಾಗಿ ಇಲ್ಲಿ ಉಳಿದೆ. ದ್ರುಪದನನ್ನು ಸೋಲಿಸುವ ವೊಬ್ಬ ಶಿಷ್ಯನನ್ನು ಆರಿಸಬೇಕು ಅಂತ ಫಣತೊಟ್ಟೆ, ಅರ್ಜುನನಂತೂ ಪರಿಪೂರ್ಣ. ನನ್ನಿಂದ ಪಡಕೊಳ್ಳೋದಕ್ಕೆ ಸಮರ್ಥನೂ ಆದ, ಸಂಪೂರ್ಣ ನಾನು ಅವನಲ್ಲಿ ನಿಕ್ಷೇಪಿಸಿದೆ. ಪರ್ಯಾಯದಿಂದ ನನ್ನ ಮಗನನ್ನು ವಂಚಿಸಿದೆ, ಅಶ್ವತ್ಥಾಮ! ಅವ ದುಂಬಾಲು ಬಿದ್ದ ನನಗೆ ಹೇಳಿಕೊಡಿ, ಬೇಡ ಮಗನೆ, ಬ್ರಾಹ್ಮಣರಿಗೆ ಅದೆಲ್ಲ ಬೇಡ ಹಾಗೆ ಅಂತ ಅವನಿಗೂ ಸಂಪೂರ್ಣ ಹೇಳಿಕೊಡದೆ, ಅರ್ಜುನನಿಗೆ ಸಂಪೂರ್ಣ ಹೇಳಿಕೊಟ್ಟು, ಸರಿಯಪ್ಪ, ದ್ರುಪದನಲ್ಲಿ ನನಗಿದ್ದಂತಹ ಹಠವನ್ನು ಸಾಧಿಸಿದೆ. ಆದರೆ, ರಾಜರು! ಅರಸರ್ಗೆತ್ತಣದು ಜಾತಿ? ಅರಸರ್ಗೆತ್ತಣದು ಸಂಬಂಧ? ರಾಜಕೀಯದಲ್ಲಿದು ಹಾಸುಹೊಕ್ಕಾಗಿ ಬಂದದ್ದು. ರಾಜಕಾರಣದಲ್ಲಿ ಪರಸ್ಪರ ವಿರೋಧವೂ ಇಲ್ಲ, ಪರಸ್ಪರ ಸ್ನೇಹವು ಇಲ್ಲ ಅದು ಕಾಲಾನುಸಾರ, ಹಾಗಾಗಿ ಈ ಹೊತ್ತು ಎರಡಾಗಬಹುದು ನಾಳೆಗೆ ವೊಂದಾಗಬಹುದು ಗೊತ್ತಿತ್ತು ನನಗೆ. ಯೆಲಾ ಯೆಲಾ, ನನ್ನ ಪಟ್ಟದ ಶಿಷ್ಯ ನನ್ನ ಮಗನಿಗಿಂತ ಮಿಗಿಲಾದಂತಂತಹ ಅರ್ಜುನನನ್ನು ದ್ರುಪದ ಸೆಳಕೊಂಡ, ಮಗಳನ್ನು ಕೊಟ್ಟು, ಇದೆಲ್ಲ ಗೊತ್ತಿದ್ದದ್ದು ಇದನ್ನೆಲ್ಲ ನಾನು ನನ್ನ ಮನಸ್ಸಿನಲ್ಲೇ ಈಗ ವಿಮರ್ಶಿಸ್ತಾ ಇದ್ದೇನೆ. ಏನಾಯ್ತು? ಸಚ್ಚಿಷ್ಯ ಈ ಹೊತ್ತು ನನ್ನೆ ಶತ್ರು! ನನ್ನ ಆತ್ಮಾವೈ ಪುತ್ರನಾಮಾಸಿಯನ್ವಯ ಅವ ಅಲ್ಲಿಯ ಶತ್ರುವೂ ಅಲ್ಲ. ಇಲ್ಲಿಯ ಶತ್ರುವೂ ಅಲ್ಲ. ನನ್ನ ದೆಸೆಯಿಂದ ಅವನಿಗೆ ಇಲ್ಲಿ ಮಿತ್ರತ್ವವನ್ನು ಮಾಡೋಕಾಯ್ತು. ಈಗ ಇಲ್ಲಿಗೆ ಬಂತು. ಗೆದ್ದ ರಾಜ್ಯ ಕೌರವನ ವಶ ಕೊಟ್ಟೆ. ಕೌರವನ ರಾಜಕೀಯದ ಮುತ್ಸದ್ದಿತನದಲ್ಲಿ ಅವನ ಪೀಠಾರೋಹಣದ ಮಹಾದಾಹದಲ್ಲಿ ಈ ಹೊತ್ತು ನಾನು ಕೌರವನಿಗೆ ಬೇಕಾಗಿ ದುಡಿಯುವ ಆಳಾದೆ-ಸ್ಥಾನ ಸೇನಾಪತಿ ಇದ್ದದ್ದು, ಸೇನಾಪತಿ ಅಂತಂದ್ರ ಅರ್ಥ ಏನು?

ಅವ ದೊಡ್ಡ ಸೈನಿಕ, ಹೋರಾಟಗಾರ! ಅಯ್ಯೋ ಈ ಯುಗದ ಧನುರ್ವೇದದ ಪರಮಾಚಾರ್ಯನಾಗಬೇಕಿದ್ದ ನಾನು, ಈಗ ಬಂದದ್ದಿಷ್ಟು ಯಾವ ಕೌರವ ನನ್ನ ಮೂಢ ಶಿಷ್ಯನೋ, ಯಾವ ಸುಯೋಧನ ನನ್ನ ಮೂರ್ಖ ಶಿಷ್ಯನೋ ಅವ ಪ್ರಭುಸ್ಥಾನದಲ್ಲಿದ್ದುಕೊಂಡ ಸತ್ಯಾತ್ಮರಾದ ಪಾಂಡವರನ್ನು ವಿರೋಧಿಸೋದ್ಬಂತು. ಮಗನಾದಂತಹ ಅರ್ಜುನನಿಗಿದಿರಾಗಿ ಹೋಗಬೇಕಾದ ಪ್ರಮೆಯ ಬಂದದೆ. ಹೋಗಲಿ, ಕರ್ಣನನ್ನು ನಾನು ಪೂರ್ವಾಗ್ರಹದಿಂದ ಹೀಗೆ ಹೇಳ್ತೇನೆ ಅಂತ ಹೇಳಿದ ಹಾಗೆ ನನ್ನದೂ ಒಂದು ಥರದ ಮಹತ್ವಾಕಾಂಕ್ಷೆಯೇ ಆಯಿತು. ಈಗ ಏನಾಗ್ಯದೆ? ಹೋರಾಟಗಾರ ಹೌದು ನಾನು; ಅರ್ಜುನನ ಮುಂದೆ ಸಾಗೋದಿಲ್ಲ. ಹಾಗಾದರೆ ಧನುರ್ಧರನಾದಂತಹ ಅರ್ಜುನನ ಮುಂದೆ, ಆಚಾರ್ಯನಾದಂತಹ ನಾನೂ ಪೂರ್ಣ ಕ್ಷತ್ರಿಯನಾಗಿಲ್ಲ. ಹಾಗೆಂತ ಬ್ರಾಹ್ಮಣರ ಪಂಕ್ತಿಯಲ್ಲಿ ಪೂರ್ಣನೂ ಆಗ್ಲಿಲ್ಲ. ನನ್ನ ಮಗ ಅಂತೂ ಯೆರಡೂ ಆಗ್ಲಿಲ್ಲ. ಆಕಡೆಗೆ ಕ್ಷತ್ರಿಯನೂ ಆಗ್ಲಿಲ್ಲ ಈಕಡೆಗೆ ಬ್ರಾಹ್ಮಣನೂ ಆಗಿಲ್ಲ. ಇದೊಂದು ದೊಡ್ಡ ದುರಂತ, ಆದ್ರೆ ಇನ್ನು ತಿದ್ದಿಕೊಳ್ಳೋದ್ ಯಾವಾಗ? ತಿದ್ದಿಕೊಳ್ಳೋದ್ ಯಾವಾಗ? ಆಗೋದಿಲ್ಲ. ಆದ್ರೂ ಪ್ರಚಾರ ಉಂಟು, ಈಗ ಅರ್ಜುನಾದಿಗಳಿಗೆ ವಿಶ್ವಾಸ ಉಂಟು. ಗುರು ಕೋಪ! ಗುರು ಶಾಪ! ಇದರ ಮುಂದೆ ಬ್ರಹ್ಮಾಸ್ತ್ರವೂ ಅಲ್ಲ ಅಂತ. ಅದ್ ಅವರ ವಿಶ್ವಾಸ. ಆದ್ರೆ ನನ್ಗೆ ಗೊತ್ತುಂಟು, ನನ್ಗೆ ಆಗದಿದ್ದವನ್ನು ಶಪಿಸಿಕೊಲ್ಲಲಿಕ್ಕೆ ಆಗೋದಿಲ್ಲ ಇಲ್ಲಿ. ಆಗೊದಿದ್ರೆ, ನನ್ನ ಶತ್ರುವನ್ನು ಯಾಗದ ಮೂಲಕ ಪಡೆದ ದ್ರುಪದನನ್ನು ಆವಾಗ್ಲೆ ಶಾಪ ಕೊಟ್ಟು ಕೊಲ್ತಿದ್ದೆ. ಯಾಕ್ ನಡೆಯೋದಿಲ್ಲ?

ಈ ಬೆಂಕಿಗೆ ಉಷ್ಣ ಸಾಕಾಗೋದಿಲ್ಲ. ಯೇನು ಸಂಧ್ಯಾವಂದನೆ ಜಪ ತಪ ಈ ಅನುಷ್ಠಾನ ನಾನ್ ಮಾಡಿದ್ದೂ ಯತಾರ್ಥಕ್ಕಾದ್ರೆ ನನಗಿಂತ ಹೆಚ್ಚಿನ ಅರ್ಹತೆಯಿದೆ ಇಲ್ಲಿ ಈಗ ನನ್ನ ಭಾವನೆಂಟ ಕೃಪನಿಗೆ! ಹ್ಹಹ್ ಹಾಗಾಗಿ ಅವರನ್ನು ಪತಿತ ಅಂತ ಹೇಳೊದಕ್ಕಿಂತ ನಾನು 'ಪ್ರವಾಹಪತಿತ' ಅಂತ ವೊಪ್ಪಿಕೊಂಡು ಇದನ್ನೆಲ್ಲ ಸಹಿಸಿಕೊಂಡಿದ್ದೇನೆ. ಕೆಲವೊಮ್ಮೆ ತೋರ್ತದೆ ಬಿಟ್ಟು ಹೋದ್ರೇನಿಲ್ಲಿಂದ ಅಂತ? ಕೂಡದು ಕೂಡದು, ಬಿಟ್ಟುಹೋದ್ರೆ ನಾನ್ ಮುಂದೇನ್ ಮಾಡೋದು? ಕೆಸ್ರಿಗೆ ಇಳ್ದಾಯ್ತು, ವೊಂದೋ ಇನ್ ಕೆಸ್ರನಲ್ಲೇ ಸಂಪೂರ್ಣ ಮುಳ್ಗೋದು, ಕೆಸ್ರ ನಲ್ಲಿ ಮುಳುಗಿದಾವಾಗ್ಗ ಕೆಸರಿನ ಅಡಿಯಲ್ಲಿ ನೀರಿದ್ರೆ ಶುದ್ಧ ಮಾಡಿಕೊಂಡು ಮೇಲೆ ಬರೋದು ಈ ನ್ಯಾಯ! ಹೋಗ್ಲಿ...

ಸುಯೋಧನಾ... ಕರ್ಣನ ಮಾತನ್ನೆಲ್ಲ ನಾನ್ ಕೇಳಿದೆ ಕರ್ಣನನ್ ಆಕ್ಷೇಪಿಸಿದೆ. ಆಮೇಲೆ ನನ್ನಷ್ಟಕ್ಕೆ ನಾನು ಮಥನಮಾಡಿದೆ. ಆದ್ದರಿಂದ ಅದನ್ನು ಮರೆತುಬಿಟ್ಟೆ. ನಿನ್ನ ಪ್ರಾಣಸ್ನೇಹಿತನಾದ ಕರ್ಣನಲ್ಲಿ ನನಗಿದ್ದಂತಹ ಮನಃಕಷಾಯ ಇದ್ಯಲ್ಲ ಅದನ್ನು ಬಿಟ್ಟುಬಿಟ್ಟೆ. ಅವನನ್ನು ನೀನು ಉಳಿಸಿಕೊಳ್ಳತಕ್ಕದ್ದು, ಉಳಿಸಿಕೊಳ್ಳಬೇಕು. ಆದ್ರೆ? ಆದ್ರೆ ಅಂತ ವೊಂದುಂಟು, ನನಗ ಆದ್ದದ್ದೇನು? ಅದನ್ನ ನಾನ್ ಹೇಳಿದ್ದೇನೆ. ಅಲ್ಲಿ ಹೀಗ್ ಹೀಗ್ ಆಗ್ಯದೆ. ಕೃಷ್ಣನ ರಕ್ಷಾಕವಚ ಅದು ಬ್ರಹ್ಮಾಸ್ತ್ರವನ್ನು ಕೂಡ ಅರ್ಜುನನಿಗೆ ಮುಟ್ಟದ ಹಾಗೆ

ತಡೀತದೆ. ಇದೆಲ್ಲ ನಿನ್ಗ  ಗೊತ್ತಿದ್ದದ್ದೇ. ಹಾಗಾಗಿ ನನ್ನ ಪರಾಭವಕ್ಕೆ ಕಾರಣಸ್ಥಾನದಲ್ಲಿದ್ದವ ಅವವೊಬ್ಬ. ಅದಕ್ಕೆ ಇವ ಹೇಳ್ತಾನೆ ಅದು "ಶಿಷ್ಯ ಪ್ರೇಮ. ಊಟ ಇಲ್ಲಿಯಾದ್ರೂ ಕೂಡ ಅನುಗ್ರಹ ಪಾಂಡವ್ರಲ್ಲಿ ಉಂಟು". ಅನುಗ್ರಹ ಏನೂ ಇಲ್ಲ. ಅನ್ನದ ಋಣದಿಂದ ನಾನು ಮುಕ್ತನೂ ಅಲ್ಲ. ಕಷ್ಟ ಸಾಧ್ಯ ನನಗೆ. ಇದನ್ನೂ ನಾನ್ ಹೇಳ್ತೇನೆ; ಮಾತ್ರ ಅಲ್ಲ, "ಗುರುಗಳು ತೆಗಳಿದರು, ಗುರುಗಳು ಹೇಳಿದ ಹಾಗೆ ಇವ ವಿಶ್ವಾಸ ಘಾತುಕನು" ಎಂಬುದನ್ನು ನೀನು ಸ್ಥಾಯಿಯಾಗಿ ಮತ್ತೊಮ್ಮೆ ವಿಮರ್ಷಿಸಬೇಡ. ಯಾಕೆ? ಈ ಕರ್ಣನಿಗೆ ಅವನದ್ದಾದಂತಹ, ವೊಂದು ಕ್ರಾಂತಿಕಾರಕವಾದಂತಹ ಮನೋವೃತ್ತಿ ಇದೆಯಲ್ಲ? ಅತೃಪ್ತಿ. ಈ ಅತೃಪ್ತಿಯಲ್ಲಿ ದ್ರೋಣ ಮಹಾಪರಾಧಿ ಇಂತಹ ಪತಿತ ಸಮಾಜಕ್ಕೆ ಅವ ಮುಂದೆ ಬರುವುದಿದ್ರೂ ಕೂಡ ಇವ ದೊಡ್ಡ ಬಂಡೆಕಲ್ ಇತ್ತವ ಎನ್ನುವ ವೊಂದು ಸಣ್ಣ ವಿಷಯವನ್ನು ಬಲುದೊಡ್ಡ ಪ್ರಮಾಣವಾಗಿ ಅಂಗೀಕರಿಸಿಕೊಂಡು ಖಂಡಿಸ್ವಂಥಹ ಸ್ವಭಾವ ಬಂದ್ರೆ ತಪ್ಪಿಲ್ಲ. ಆ ಏಕಲವ್ಯನ ಪ್ರಕರಣವಪ್ಪಾ... ನಿಮ್ಮೆಲ್ಲ ಗೊತ್ತಿದ್ದದ್ದೇ, ಅವ ಇಲ್ಲಿ ಬಂದಾವಾಗ ಕಲಿಸೊದಿಲ್ಲ ಅಂತ ನಾನ್ ಹೇಳಿದೆ. ಕಲಿಸೊದಿಲ್ಲ ಅಂತ ಯಾಕೆ ಹೇಳಿದೆ ಅಂತ ಅರಸು ಮಕ್ಕಳಾದ ನಿಮಗೆಲ್ಲ ಗೊತ್ತುಂಟು. ಇದು ಯುದ್ಧವಿದ್ಯೆ, ಆಯುಧವಿದ್ಯೆ ಯಾವ ಕಾಲಕ್ಕೇ ಆಗಲಿ ಯುದ್ಧವಿದ್ಯೆ ಆಯುಧವಿದ್ಯೆ - ಧನುರ್ವೇದ ಅಂತಂದ್ರೆ ಅದು ಬೇಟೆಯಾಡ್ಲಿಕ್ ಇದ್ದದ್ದಲ್ಲ. ಅದ್ ಯೆಲ್ಲಿಯೋ ಗುರಿ ಹೊಡೀಲಿಕ್ ಇದ್ದದ್ ಅಲ್ಲ. ಇದಕ್ಕೆ ಅರ್ಹತೆಯಿದ್ದ ವೀರ ಕ್ಷತ್ರಿಯರನ್ನೇ ನಾವ್ ಆರಿಸ್ಬೇಕಲ್ಲದೇ ಅದು ಸಾರ್ವಜನಿಕ ವಿದ್ಯಾಲಯ ಆಳ್ವಾರು. ಸಾರ್ವಜನಿಕರಿಗೆಲ್ಲ ಅದನ್ ಕೊಡ್ಬಾರ್ದು ಅದೊಂದ್ ನಿಬಂಧನೆ ಉಂಟು. ಅರಸು ಮಗನಾದ ನಿನಗದು ಗೊತ್ತುಂಟು. ಹಾಗಾಗಿ ನೀವ್ ಯಾರೂ ಆಕ್ಷೇಪಿಸಲಿಲ್ಲ. ಈ ಹೊತ್ತಿಗೂ ಭೀಷ್ಮಾಚಾರ್ಯರೂ ಆಕ್ಷೇಪಿಸಲಿಲ್ಲ. ಆದ್ರೂ ಅವ ಹಠ ಸಾಧನೆ ಮಾಡಿ ಕ್ಷತ್ರಿಯೋಚಿತವಾದಂತಹ ನಮ್ಮ ವಿದ್ಯೆಗೆ ಅವ ವೊಂದು ಸವಾಲಾಗಿ ನಿತ್ಕಂಡು, ನನ್ನ ಮಣ್ಣಿನ ಮೂರ್ತಿಯನ್ ಇಡ್ಕೊಂಡು ಯೇನೋ ಸಿದ್ಧಿಮಾಡಿಕೊಂಡ. ಬೇಟೆಗೆ ನಾವ್ ಹೋಗಿದ್ದಾವಾಗ, ಆ ಅವನನ್ನು ಕಂಡು ಆಕ್ಷೇಪಿಸಿದೆ. ಆವಾಗ ನೀವೆಲ್ಲ ಸಮಷ್ಟಿಯಲ್ಲಿದ್ದವು. "ಯೇನು ಗುರುಗಳೇ ಗುಟ್ಟಿನಲ್ಲಿ ಹೀಗೊಂದು ತಯಾರ್ ಮಾಡಿದ್ದೀರೋ?" ಆವಾಗ ಹೇಳಿದೆ ನಾನಾದ್ರೆ ಆ ಮಣ್ಣಿನ ಮುದ್ದೆ ಯಾಕೆ? ಸುಮ್ಮಾದ್ರಿ, ಗುರುದಕ್ಷಿಣೆ ನಾನ್ ಕೇಳ್ತನೆ ಅಂತ ಅಮ್ನಲ್ಲಿ ಹೋಗಿ ಗುರುದಕ್ಷಿಣೆ ಕೊಡು. "ಕೊಡೆನೆ ನಾನು! ಹೆಬ್ಬೆರಳು ಕತ್ತರಿಸಿಕೊಡು ಅಂದೆ. ನಾನು ಯಾಕೆ ಹೇಳಿದೆ? ಅವನಿಗೆ ಹೆಬ್ಬೆರಳಿದ್ರೆ ನನ್ನ ನಷ್ಟ ಏನಿಲ್ಲ. ಆದರೆ ಕ್ಷತ್ರಿಯ ಕುಮಾರರಾದಂತಹ ನಿಮಗೆ ಹಾಗೊಬ್ಬ ಯೋಧ ತಯಾರಾದ್ರೆ ನಾಳೆ ಹಸ್ತಿನಾವತಿಗಲ್ಲ ಕ್ಷತ್ರಿಯ ವರ್ಗಕ್ಕೆಲ್ಲ ಅವ ಸವಾಲಾದ್ರೆ? ಹಾಗಾಗಿ ಯುದ್ಧವಿದ್ಯೆ ಗೋಪ್ಯ, ಅಲ್ಲಿ ಸಾರ್ವಜನಿಕ ಇಲ್ಲ, ಅಲ್ಲಿ ಎಲ್ಲವಿಗೂ ಸ್ವಾತಂತ್ರ್ಯ ಇಲ್ಲ. ಆಯುಧದ ಗುಟ್ಟು ಯಾರಾದ್ರೂ ಹೇಳ್ತಾರೋ? ಹೇಳ್ ಬೇಕಾದಗೇ ಹೇಳೋದು. ಹಾಗಾಗಿ ಅಸ್ತ್ರಗಳು ಅಂತಂದ್ರೆ ಹಾಗೆ, ಮತ್ತೆ ಬೇಟೆಯಾಡ್ಲಿಕ್ಕೆ ಅವ್ನಿಗೆ ಅವನ ಕುಲದ ಉದ್ಯೋಗವೇ ಸಾಕು. ಹೀಗೆ ಅವನನ್ನು ಆಕ್ಷೇಪಿಸಿದ್ದು, ಇದು ಯಾವ ಕಾಲಕ್ಕೂ ಸರಿಯಾದಂತಹ ರಾಜನೀತಿ, ರಾಜವಿದ್ಯೆ ಇದೆಲ್ಲ

ಸಾರ್ವಜನಿಕರಿಗಲ್ಲ. ಲೌಕಿಕ ವಿದ್ಯೆ ಬೇರೆ ಇದೆಲ್ಲ ಪ್ರತ್ಯೇಕವಾದಂತಹ ಗೋಪ್ಯ ಕಾಪಾಡೋಕಾದದ್ದು. ಈ ಉತ್ತರ ಉಂಟು.

ಆದ್ರೆ ಕರ್ಣನಂತವರಿಗೆ ನಾನ್ ಯಾಕದನ್ನೆಲ್ಲ ಉತ್ತರಿಸ್ಬೇಕು? ಹಾಗಾಗಿ ಅವರದ್ದಾದಂತಹ ಸಂಘರ್ಷ ಮನೋವೃತ್ತಿ "ನಮ್ಮ ಜಾತಿಯವನಿಗೆ ಅಥವಾ ನಮ್ಮ ಸಾಲಿನವನಿಗೆ ಬ್ರಾಹ್ಮಣ ವಿದ್ಯೆ ಹೇಳಿಕೊಡ್ಲಿಲ್ಲ". ಚೆನ್ನಾಗಿ ವಿವೇಚಿಸಿದರೆ, ಅವ್ರಿಗೂ ಇದು ಅಪರಾಧವಾಗಿ ಕಾಣ್‌ಲಿಕ್ಕಿಲ್ಲ. ದ್ರೋಣ ಮಾಡ್ಬೇಕಾದ್ದನ್ನೇ ಮಾಡಿದ್ದಾನೆ ಅಂತ ಅವರ ಮುಖಂಡನಂತೆ ಇವ ಮಾತಾಡ್ತಾನೆ. ಅವನಿಗೆ ಕೆಲವು ಕಡೆಯಲ್ಲಿ ಆಘಾತವಾಗ್ಯದೆ, ಹಾಗಾಗಿ ಅವ ನೊಂದು, ಅದಕ್ಕೊಂದು ಸ್ವರೂಪ ಕೊಟ್ಟು ನಮ್ಮನ್ನು ಆಕ್ಷೇಪಿಸಿದ್ದಕ್ಕೆ ಸಂದರ್ಭ ಸಿಕ್ಕಾಗೆಲ್ಲ ಸಂದರ್ಭದ ಲಾಭ ಪಡಿತಾ ಇದ್ದಾನೆ. ಈಗ ನಾ ಯಾಕೆ ಹೇಳಿದ್ದು ನಿನ್ನೆ? ಕರ್ಣನ ಮಾತಿಗೆ ಅದು ಹಾಗೆ ಅಂತ ನಿಲುಗಡೆಯಿಲ್ಲ. ಖಂಡನೆಗಾಗಿ ಖಂಡನೆ ಮಾಡೋಕಾಗಿದೆ ಎಲ್ಲಾ ವಿಷಯವೂ ಮಂಡನೆಗೆ ಪೂರಕವಾಗ್ತದೆ. ಬಿಟ್ ಬಿಡು, ನಿನ್ಗವೊಂದು ರಹಸ್ಯ ಹೇಳ್ತನೆ. ನನ್ನ ಪ್ರತಿಜ್ಞೆ ಧರ್ಮರಾಯನನ್ನು ಹಿಡ್ದು ತರ್ತೆನೆ ಅಂತ ಇದು ಪೂರೈಸಬೇಕಲ್ಲ, ಪೂರೈಸ್ಬೇಕಲ್ಲ? ಅಯ್ಯಾ ಕುರುಕುಲಾಗ್ರಣೀ...

|ಕಾಪಿ-ಅಷ್ಟತಾಳ ಕುರುಕುಲಾಗ್ರಣೀಯೇ ಕೇಳಯ್ಯಾ | ನಾಳೆ |

ಪರಿಕಿಸಿ ನೋಡಮ್ಮ ಕಾರ್ಯದ ಬಗೆಯ || ೧೫೮ |

ನೇರ ಭೀಷ್ಮರು ನಿತ್ತರೆ ಲೋಕಾಚಾರ್ಯರಾದಂತಹ ಭಾರ್ಗವ ರಾಮರೂ ಸೋತದ್ ಹೌದಾಗಿದ್ರೆ ಯಾಕೆ ಈ ಯುದ್ಧದಲ್ಲಿ ಸೋಲಾಯ್ತು? ಅರ್ಜುನನ ಹಿನ್ನೆಲೆಯಾಗಿ ಬಲು ದೊಡ್ಡ ಪ್ರಭಾವಳಿ ಇದೆ. ಬಹುಶಃ ತನ್ನ ಸಂಪೂರ್ಣ ಚಿಚ್ಛಕ್ತಿಯನ್ನು ವಿನಿಯೋಗಿಸುವದಕ್ಕೆ ಬೇಕಾಗಿಯೇ ಅವನು ಯುದ್ಧದಲ್ಲಿ ಆಯುಧ ಹಿಡ್ದು ಸೈನಿಕನಾಗೋದಿಲ್ಲ ಅಂತ ಹೇಳಿದ್ ಇರ್ಬೇಕು. ಸೈನಿಕನಾಗಿದ್ರೆ ಏಕಕಾಲದಲ್ಲಿ ಯೆರ್ಡನ್ನೂ ಮಾಡ್ಲಿಕ್ಕಾಗೋದಿಲ್ಲ. ಹಾಗಾಗಿ ಕುರುಕ್ಷೇತ್ರದ ಮಟ್ಟಿಗೆ, ದ್ವಾರಕಾನಾಥನಾದ ಕೃಷ್ಣ, ವಾಸುದೇವ ಪಾರ್ಥನ ಸಾರಥಿಯಾಗಿ ಅವನ ರಥದಲ್ಲಿ ಪ್ರತಿಷ್ಠಾಪಿತಮೂರ್ತಿಯಾಗಿ; ನನಗೆ ತೋರ್ತದೇ ಯೋಗೀಶ್ವರನಾಗಿಯೇ ಕೆಲಸ ಮಾಡ್ತಾನೆ. ಸರ್ವಶಕ್ತನಾಗಿ ಭೀಷ್ಮರೂ ಮಲಗದೇ ಯೇನ್ ಮಾಡೋದು ಏನ್ ಮಾಡೋದು ಏನ್ ಮಾಡಲಿಕ್ಕೂ ಸಾಧ್ಯವಿಲ್ಲ. ನಾನೇ ಹೇಳೋದು ಭೀಷ್ಮರು ಅಷ್ಟಾದ್ರೂ ಮಾಡಿದ್ರು, ಅದರ ಅರ್ಧದಷ್ಟಾದರೂ ಮಾಡ್ಲಿಕ್ಕೆ ನಾನು ಪ್ರಯತ್ನಿಸಹುದೇ ಹೊರತು ಆ ಅರ್ಧದಷ್ಟಾದರೂ ಪ್ರಯತ್ನಿಸಿಕ್ಕೆ ಸಾಧ್ಯ. ಇಲ್ಲದಿದ್ದದ್ರೆ ಬಾಕಿವುಳ್ದವು ಅವ್ರೆಲ್ಲ ಹೀಗೆ ಮಾತಾಡೋದು- "ಈ ದೊಡ್ಡ ಸ್ಥಾನದಲ್ಲಿ ಇದ್ದವನಿಗೆ ಹೊಣೆಯಿಲ್ಲ!" ಇದ್ದವಿಗೆ ಆಕ್ಷೇಪಿಸುವುದಕ್ಕೆ ಬಹು ಸುಲಭ. ನಮ್ಮಂಥವಿಗೆ ಕೆಲವು ಯೇನಾಗ್ತಿದೆ ಅಂತಂದ್ರೆ ಉಗುಳಿದರೆ ಶುದ್ಧ ಕೆಡದೆ ನುಂಗಿದರೆ ಗಂಟಲು ಸುತ್ತದೆ. ನಮ್ಮ ಹೊಣೆ ನಮ್ಮ ಸ್ಥಾನ ಇದರ ವೊಳಗೆ ನಾವೇನಾದ್ರೂ ಪ್ರತಿಕ್ರಿಯೆಯನ್ನು ಮಾಡ್ಬೇಕೆ ಹೊರತು, ಸುಮ್ಮನೆ ಇದ್ದವನಿಗೆ ಆಕ್ಷೇಪಕ್ಕಾಗಿ?

ಆದ್ರಿಂದ ಪ್ರಾಮಾಣಿಕವಾಗಿ ನಿನ್ನಲ್ಲಿ ಹೇಳ್ತೆನೆ ನನಗೆ ನಿನ್ನಲ್ಲಿ ತುಂಬ ಸ್ನೇಹ ಇದೆ. ನಮ್ಮ ಶಿಷ್ಯ ಕರ್ಣ ಇದ್ದವ ನಿನೊಬ್ಬನೇ. ಬಾಕಿ ಇದ್ದ ಅರ್ಜುನ ಅವ್ರು ಇವ್ರೆಲ್ಲ ನಮ್ಮ ಶಿಷ್ಯರೇ, ಆದ್ರೆ ಆಮೇಲೆ ನಮ್ಗೆ ಆಗದೇ ಇದ್ದವ್ರಲ್ಲಿಯೇ ಎಲ್ಲ ನೆಂಟಸ್ತಿಕೆ ಹೆಣ್ಣು ಕೊಟ್ಟು ತಂದು ಎಲ್ಲ ಬೆಳೆಸಿಕೊಂಡಿದ್ದಾರೆ. ಮಾತ್ರ ಅಲ್ಲ ನಿನ್ಗ  ಗೊತ್ತಿದ್ದ ಹಾಗೆ ನಮ್ಮ ಸಚ್ಛಿಷ್ಯ ಅರ್ಜುನನ ಮದುವೆಗೂ ನಮಗೆ ಕರೆಯೋಲೆ ಬರಲಿಲ್ಲ. ಯಾಕಂದ್ರೆ ಬಹುಶಃ ನಾವ್ ಅದು ಹೋಗದ ಮನೆ ಹೇಳಿದನೊ? ಆದರೆ ಹೋಗದ ಮನೆಯಿಂದ ಅವ ಹೆಣ್ಣು ಸ್ವೀಕರಿಸ್ತಾನೆ! ಹೋಗ್ಲಿ ಅವನ ಮಗನ ಮದುವೆಗಾದ್ರೂ.. ನಾವಲ್ಲಿ ಹೋಗದೇ ಇದ್ದ ಸ್ಥಳ ಅಲ್ಲ ಅದು. ಯಾಕಲ್ಲ ಅಂತಂದ್ರೆ ನಿನಗೆ ನೆನಪುಂಟಲ್ಲ? ಗೋಗ್ರಹಣದ ಸಂದರ್ಭದಲ್ಲಿ ನಾವ್ ಆ ಊರಿಗೆ ಹೋಗಿದ್ದೇವೆ. ನಮಗೆ ನಿಷೇಧಿತ ಪ್ರದೇಶವೇನೂ ಅಲ್ಲ. ಅದು ಮಾತ್ರ ಅಲ್ಲ, ಅಲ್ಲಿ ಅರ್ಜುನ ನಮ್ಮನ್ನು ಗುರ್ತಿಸಿದ್ದಾನೆ. ನಾವ್ ಅರ್ಜುನನ್ನು ಗುರ್ತಿಸಿದ್ದೇವೆ. ಅವನ ಮಗನ ಮದ್ದೆಗೂ ಹೇಳಿಕೆ ಇಲ್ಲ. ಆದ್ದರಿಂದ ಬಹುಶಃ ಗುರು-ಶಿಷ್ಯ ಎಂಬಂತಹ ಸಂಬಂಧ, ವೊಂದು ಪರಿಧಿಯ ವರೆಗೆ ಇಡ್ಕೊಂಡು, ಮತ್ತೆ, ನಾವ್ ಅರಸು ಮಕ್ಕಳು ಅಂತಿದ್ದದ್ದು. ಆದ್ರೆ ತಪ್ಪಿಲ್ಲ, ಯಾಕೆ ನನ್ನ ಗುರುದಕ್ಷಿಣೆ ಅಳತೆ ಮೀರಿ ಕೊಟ್ಟ ಬಲುದೊಡ್ಡ ಸ್ಥಾನ ಪಾಂಡವಿಗೆ ಅರ್ಜುನನ ಮೂಲಕ ಸಿಕ್ಕದೆ. ನೀನು ನನ್ನಿಂದ ಪಡೆಯ ಬೇಕಾದ್ದನ್ನೆಲ್ಲ ಪಡ್‌ದಿದ್ದಿಯೋ ಪಡೀಲಿಲ್ವೋ? ಯಾಕೆ ಅಂತಂದ್ರೆ ನಿನ್ನ ಜಾಯಮಾನಕ್ಕೆ ನಮ್ಮ ಈ ಧನುರ್ವೇದ ಹೆಚ್ಚೆಚ್ಚು ಹಿಡಿಸಲಿಲ್ಲ. ಗೊತ್ತುಂಟು ಅದು, ಭೀಮನಿಗೂ ಹಿಡಿಸಲಿಲ್ಲ. ಹಾಗಾಗಿ ಗದಾಯುದ್ಧ ಇದು ಮೂಲಭೂತವಾದ ತುಡಿತವಾದದ್ದರಿಂದ ಇಲ್ಲಿ ಕಲೀಬೇಕಾದ ಶಿಷ್ಟಾಚಾರದ ಗದಾಯುದ್ಧ ಕಲ್ಲು, ಅದರಲ್ಲಿ ಮುಟ್ಟಲೇ ಬೇಕಾದ ಮಟ್ಟಕ್ಕೆ ಮುಟ್ಲಿಕ್ಕೆ ನಿವಿಬ್ರೂ ಬಲರಾಮನ್ನು ಆಶ್ರಯಿಸಿದ್ದು ನಮ್ಮ  ಗೊತ್ತುಂಟು. ಆದ್ರೆ ಅಂದಿನಿಂದ ಇಂದಿನ ವರೆಗೆ ನಮ್ಮ ಕುರಿತಾದಂತಹ ಯೋಗಕ್ಷೇಮದಲ್ಲಿ ಯಾವ ಪ್ರತಿಫಲವನ್ನೂ ನಿರೀಕ್ಷಿಸದೇ ಒದಗಿಬಂದ ಸಂಕಷ್ಟಕಾಲಕ್ಕೆ ನಮ್ಮ ಪ್ರಯೋಜನವನ್ನು ಪಡೀಲಿಕ್ಕೆ ನೀನು ಮನಸ್ಸು ಮಾಡಿದ್ರಿಂದ ನಿನಗಾಗಿ ನಾವು ಹೋರಾಟಕ್ ಇದ್ದದ್ದು, ಈ ಹೃದಯ ಇಲ್ಲದಿದ್ರೆ - ಹಿರಿಯರಾಗಿ ಭೀಷ್ಮರಿಗೆ ಕರ್ತವ್ಯವುಂಟು; ಇಲ್ಲಿದ್ದ ಆಚಾರ್ಯರುಗಳಿಗೆ ಅಧ್ಯಾಪಕರಿಗೆ ಬ್ರಾಹ್ಮಣರಿಗೆ ನಮ್ಮ ಕ್ಷತ್ರಿಯರ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸುವ ಹೊಣೆಗಾರಿಕೆ ಏನುಂಟು? ಹಾಗಾದ್ರೆ ಈ ಕುರುವಂಶದಲ್ಲಿ ಕೃಷ್ಣನು ವೊಪ್ಪುವಂತೆ ಅಗ್ರಗಣ್ಯ ವ್ಯಕ್ತಿ ನೀನು; ಕೃಷ್ಣನೇ ಹೇಳಿದ್ದಾನೆ "ಪಾಂಡವ ವಿದ್ವೇಷ ಬಿಟ್‌ರೆ ಆರಿಹರು ನಿನ್ನಂತೆ?" ನಾವು ಅದನ್ನೇ ಕಂಡು ಕೊಂಡದ್ದು. ಪ್ರಯತ್ನಿಸಿದೆವು ಇಲ್ಲ ಕೌರವರು ಪಾಂಡವಿಗೆ ವೊಂದುಮಾಡಿನ ಅಡಿಯಲ್ಲಿ ಒಲೆ ಉರಿಸಿದರೆ ಹೊಗೆ ಮಾತ್ರ ಬರೋದು, ಬೆಂಕಿ ಉರಯೋದಿಲ್ಲ ಅಂತ ನಮ್ ಗೊತ್ತಾಗ್ಯದೆ ಇನ್ನೂ ಕೌರವನನ್ನು ಮತ್ತೊಮ್ಮೆ ನಾವಿದ್ದಷ್ಟು ಕಾಲ ಇದ್ದಮನೆಯಲ್ಲೇ ಉಳಿಸ್ಲಿಕ್ಕೆ ಸಾಧ್ಯವಾಗದೋ ಅಂತ ಸೇನಾಧಿಪತ್ಯವನ್ನು ವಹಿಸಿಕೊಂಡದ್ದು. ಆದ್ರೆ...? ಪ್ರಾಮಾಣಿಕತೆಯಿಂದ ದುಡಿಯೋಣ ಅಂತಂದ್ರೆ, ನಾನ್ ಹೇಳಿದೆನಲ್ಲ? ಹೇಗೆ? ಶ್ರೀಕೃಷ್ಣಕೃಪಾಶ್ರಿತ! ಅವನನ್ನು ಇದ್ರಿಸಲಿಕ್ಕಾಗೋದಿಲ್ಲ. ಭೀಷ್ಮರು ಈ ಅನುಭವವನ್ನು ಕಂಡಿದ್ದಾರೆ. ಭೀಷ್ಮರು ಎಸೆದ ಬಾಣಯೆಲ್ಲ ಅರ್ಜುನ ಖಂಡಿಸಲಿಲ್ಲ ಆದ್ರೆ ಬಾಣ ಎಲ್ಲಿ ಹೋಯ್ತೋ

ಗೊತ್ತಿಲ್ಲ. ಅರ್ಜುನ ಬಿಟ್ಟ ವೊಂದೊಂದು ಬಾಣವನ್ನೂ ಈ ಮುದುಕ ತುಂಡ್ ಮಾಡಿದ್ದಾನೆ ಕೊನೆಗೆ ಅವ್ರೊಂದ್ ಮಾತ್ ಹೇಳಿದರಂತೆ. 'ಇದೆಲ್ಲ ಸಾರಥಿಯ ಬಲುಮೆ' ಅಂತ. ನಾನೂ ಹೇಳೋದ್ ಅದನ್ನೇ. ಹಾಗಾಗಿ ಭೀಷ್ಮರನ್ನೇ ನಾನೂ ಅನುಸರಿಸುವವನಾದ್ದರಿಂದ ಶಕ್ತಿ ಹೀನನಾದದ್ದಲ್ಲ ನಮಗೆ ಅರ್ಥವಾಗ್ತದೆ. ಅವನ ಬೆನ್ನಿಗಿದ್ದಂತಹ ಯಾವುದೋ ವೊಂದು ಮಹಾಶಕ್ತಿ ಅರ್ಜುನನ್ನು ರಕ್ಷಿಸ್ತದೆ, ಕೆಲವರನ್ನು ಕುಣಿಸ್ತದೆ, ಕೆಲವರಿಗೆ ಕಣ್ ಕತ್ತಲೆಯನ್ನು ತರ್‍ತದೆ. ತೀರ್ಮಾನಕ್ಕೆ ಬರ್‍ವ, ನೀನ್ ಮಾಡ್ಬೇಕಾದವೊಂದು ದೊಡ್ಡ ಕೆಲಸ ಉಂಟು ಈ ಹೊತ್ತಿನ ಯುದ್ಧದಲ್ಲಿ.

//ಕಾಫಿ-ಅಷ್ಟತಾಳ | ಅರ್ಜುನನೊಬ್ಬ ತಪ್ಪಿದರೆ / ಮಿಕ್ಕ / ಧೂರ್ಜಟಿ ಮೊದಲಾದವರೆನಗಿದಿರೆ |

ಊರ್ಜಿತ ಚಕ್ರವ್ಯೂಹವನು | ಮಾಡಿ | ಘರ್ಜಿಸಿ ಕಟ್ಟುವೆ ಧರ್ಮಪುತ್ರನನು || ೧೫೯ ||

ಸುಯೋಧನಾ, ಕೃಷ್ಣನನ್ನು ತಪ್ಪಿಸುವುದಕ್ಕೆ ನಮಗೆ ಸಾಧ್ಯ ಇಲ್ಲ. ಯಾಕೆ ಅಂತಂದ್ರೆ ಅವ ಎಲ್ಲವನ್ನೂ ತಪ್ಪಿಸಿಕೊಳ್ಳವ, ಅರ್ಜುನನ್ನು ತಪ್ಪಿಸ್ಲಿಕ್ ಸಾಧ್ಯ ಉಂಟು. ನಮಗೆ ಯುದ್ಧದಿಂದ ಅಂದ್ರೆ ನೇರ ನಮ್ಮ ಕುರುಕ್ಷೇತ್ರದ ಈ ಕೇಂದ್ರಸ್ಥಾನದಲ್ಲಿ ನಡೆಯುವ ಯುದ್ಧದಿಂದ ಅರ್ಜುನನು ನಿರ್ಗಮಿಸುವ ಹಾಗೆ ಮಾಡೋದಕ್ಕೆ ಸಾಧ್ಯ ಉಂಟು. ಆವಾಗ ಅರ್ಜುನೊಬ್ಬ ತಪ್ಪಿದರೆ, ಅರ್ಜುನನ ರಥದಲ್ಲಿ ಕೃಷ್ಣನಿಗೆ ತಪ್ಲಿಕ್ಕೆ ಸಾಧ್ಯ ಆಗೋದಿಲ್ಲ. ಅರ್ಜುನನ ಜೊತೆಯಲ್ಲಿ ಅವ ಹಿಂದೇ ಇರ್‍ತಾನೆ ಇರ್‍ಲಿ. ಅರ್ಜುನನನ್ನು ತಪ್ಪಿಸುವುದು ಮುಖ್ಯ. ಈಗ ನೋಡು, ಅರ್ಜುನನನ್ನು ಇದಿರಿಸುವುದಕ್ಕಾಗೋದಿಲ್ಲ ಅಂತ ಈ ಗತಕಾಲದ ನಮ್ಮ ಅನುಭವದಿಂದ ನಾವ್ ಕಂಡವ್ರು, ಅರ್ಜುನವೊಬ್ಬ ತಪ್ಪಿದ್ರೆ, ತಪ್ಪಿದ್ರೆ ಮತ್ತೆ ಪಾಶುಪತಕೊಟ್ಟಂತಹ ಸದಾಶಿವ ಬಂದ್ರೂ ಕೂಡ ಈ ದ್ರೋಣಾಚಾರ್ಯನು ಗಣನೆಗೆ ತರುವವನಲ್ಲ. ಧನುರ್ವೇದದಲ್ಲಿ ಯಾಕೆ? ಧನುರ್ವೇದಕ್ಕೆ ದೇವನೇ ರುದ್ರ ಆ ರುದ್ರನನ್ನು ನಿತ್ಯ ಆವಾಹಿಸಿ ರುದ್ರಮಂತ್ರವನ್ನು ಜಪಿಸಿ, ವೊಂದೊಂದು ಅಸ್ತ್ರದಲ್ಲಿಯೂ ಕೂಡ ರುದ್ರಸನ್ನಿಧಾನವನ್ನು ಮಾಡಿಕೊಂಡೇ ನಾವು ಪ್ರಯೋಗ ಮಾಡ್ತವು. ಮಂತ್ರಾಧೀನಂತು ದೈವತಂ ರುದ್ರ ವೊಂದ್ ರೂಪದಿಂದ ಅರ್ಜುನನಿಗೆ ವೊಲೀಲಿ, ರುದ್ರನ ಸರ್ವರೂಪದಿಂದ ನಮ್ಮ ಧನುರ್ವೇದಕ್ಕವ ವೊಲಿದವನಾದ್ದರಿಂದ ಇದು ಅವನದ್ದಾದಂತಹ ಮೂಲದ್ರವ್ಯವಾದದ್ರಿಂದ, ಇದರ ದೇವತೆಯೇ ಅವನಾದದ್ರಿಂದ, ಆ ವಿದ್ಯೆ ಈ ಹೊತ್ತಿಗೂ ನಮ್ಮ ಕೈಯಲ್ಲಿಯೇ ಇದ್ದದ್ರಿಂದ, ಆಚಾರ್ಯ ದ್ರೋಣರ ಕೈಯಲ್ಲೇ ರುದ್ರ ನಿಮ್ಮ ಅನುಗ್ರಹ ಮಾಡದೇ ಎಲ್ಲಿಗ್ ಹೋಗ್ತಾನೆ? ಆದ್ದರಿಂದ ವೊಂದ್ ವೇಳೆ ರುದ್ರನೇ ಈ ಹೊತ್ತು ಕೈ ಬಿಟ್ರೂ ಆ ನಾನ್ ಅಭ್ಯಾಸ ಮಾಡಿದಂತಹ ಧನುರ್ವೇದ, ಅಷ್ಟು ಸುಲಭದಲ್ಲಿ ಬಿಟ್ ಹೋಗ್ಲಿಕ್ಕಿಲ್ಲ. ಆದ್ದರಿಂದ ವಿಶ್ವಾಸ ಅರ್ಜುನನನ್ನು ನೀನು ತಪ್ಪಿಸ್ಬೇಕು.

ಹೇಗೆ ತಪ್ಪಿಸುವುದು? ವೊಂದು ಸೂಚನೆ ನಾನ್ ಹೇಳ್ತೇನೆ ನಮ್ಮಲ್ಲಿ ಬಂದ್ ಸೇರಿದ್ದಾರಲ್ಲ? ಇವೆಲ್ಲ ನಮ್ಮನ್ನು ಉದ್ಧಾರ ಮಾಡ್ಲಿಕ್ಕೂ ಬಂದವ್ರಲ್ಲ. ಕೆಲವರು ಪಾಂಡವರ

ಶತ್ರುಗಳು. ಮೊದಲು ಪೆಟ್ಟು ತಿಂದವ್ರು, ಅವರು ಅವರೇ ಆಗಿ ಪಾಂಡವರನ್ನಿದಿರಿಸಿ ಬದುಕುವ ಸಾಮರ್ಥ್ಯ ಇಲ್ಲಿದ್ದವು. ರಾಜಕೀಯದಲ್ಲೊಂದು ನೀತಿ ಉಂಟು. ಹೇಗೆ? 'ಶತ್ರುವಿನ ಶತ್ರುವೇ ಮಿತ್ರ' ಅಂತ. ಅವರ ಶತ್ರುಗಳು ಯಾರು? ಪಾಂಡವರು. ಪ್ರತ್ಯೇಕವಾಗಿ ಅರ್ಜುನ! ಆ ಪ್ರತ್ಯೇಕವಾಗಿ ಅರ್ಜುನ ಶತ್ರುವಾದದ್ದರಿಂದ ಅವನಿಗೆ ನೀನು ಶತ್ರುವಾದದ್ದರಿಂದ ನಾವೆಲ್ಲವೂ ಮಿತ್ರರಾಗ್ಲಿಕ್ ಕಾರಣ. ಈ ಸಮಸಪ್ತಕರು ಅವ್ರ್ಇವ್ರೆಲ್ಲ ಇಲ್ಲಿದ್ದಾರಲ್ಲ? ಇಲ್ಲದಿದ್ರೆ ಕೌರವ ಜಯಿಸಿದ್ರೇನು ಬಿಟ್ರೇನು ಅವರಿಗೆ? ಪಾಂಡವರ ಮೇಲಿನ ವಿದ್ವೇಶದಿಂದ ಅವರೆಲ್ಲ ಇಲ್ಲಿ ಸೇರಿದ್ದಾರೆ ಹೌದು ತಾನೆ? ಇವರೆಲ್ಲ ಅಲ್ಲಲ್ಲಿ ಅಲ್ಲಲ್ಲಿ ಪಾರ್ಥನನ್ನು ಎದುರಿಸಿ ಪೆಟ್ಟುತಿಂದು ಈಗಲಾದರೂ ಪಾಂಡವರ ಹೊಗೆ ಕಾಣೋಣ ಅಂತ ಬಂದವರು. ಈ ಚಂದ್ರವಂಶದ ರತ್ನ ಸಿಂಹಾಸನದ ಆಳ್ವಿಕೆಯ ಅಡಿಯಲ್ಲಿ, ಭದ್ರವಾದ ರಾಜ್ಯವನ್ನು ಕಟ್ಟಿ ಪರಂಪರಾಗತವಾಗಿ ನಿಮ್ಮವರು ಆಳ್ತಾ ಬಂದಿದ್ದಾವಾಗ ಇಂಥವರದ್ದೆಲ್ಲಾ ಪ್ರವೇಶ ಇಲ್ಲಿಗೆ ಆಗ್ಯದೆ. ಅವರೆಲ್ಲ ಅಸ್ಪೃಶ್ಯರಾಗಿ ಹೊರೆ ಇದ್ದರು. ಯೆಲ್ಲ ಬಿಟ್ಟು ಒಬ್ಬ ದುಷ್ಟ ಕ್ಷತ್ರಿಯ ಎಂಬ ಕಾರಣಕ್ಕಾಗಿ ಸೌಭ ಪಟ್ಟಣದ ಸಾಲ್ವನನ್ನು ಕೂಡ ಅಸುರರ ಸಾಲಿಗೆ ಸೇರಿಸಿದವರು ಭೀಷ್ಮಾಚಾರ್ಯರು. ಇದು ರಾಜಕೀಯ, ಅವ್ರ ಇದ್ದಾರಲ್ಲ? ಅವರ ಶತ್ರು ಅರ್ಜುನ ಅಲ್ಲೋ? ಆ ಗುಂಪನ್ನು ಈಗ ಪ್ರತ್ಯೇಕಿಸಿ, ಪ್ರತ್ಯೇಕಿಸಿ ಅಂತಂದ್ರೆ ಪ್ರಚೋದಿಸಿ, ಯಾವ ಗುಂಪೂ ಆದೀತು ಪಾಂಡವರ ವಿರೋಧಿಗಳು, ಅವನ್ನೊಂದು ಗುಂಪುಗೂಡಿಸಿ, ಅವರು ಅರ್ಜುನನನ್ನು ಎಳೆಯುವ ಹಾಗೆ ಮಾಡಿದರೆ, ಕುರುಕ್ಷೇತ್ರದಲ್ ಎಲ್ಲಿ? ನಮ್ಮ ಈ ಕೇಂದ್ರ ಯುದ್ಧ ಭೂಮಿಯಿಂದ ಅರ್ಜುನ ವೊಂದು ನಿಮಿಷ ತಪ್ಪಿದರೆ, ಧರ್ಮರಾಯನನ್ನು ನಾನ್ ಹಿಡೇ ತತ್ತೇನೆ. ನೀನ್ ಯೇನ್ ತಿಳ್ಕೊಂಡಿದ್ದೀ? ಧರ್ಮರಾಯನನ್ನು ಅವನು ಆರ್ಜಿಸಿದಂಥ ಯಾವತ್ತೂ ಧರ್ಮದಂತೆ ಕಾಯುತ್ತಿರುವವನು ಅರ್ಜುನ, ಮತ್ತು ಕೃಷ್ಣ. ಮತ್ತೆ ಭೀಮ ನಕುಲ... ಯೆಲ್ಲ ಬಿಡು, ನನಗೇನ್ ಲಕ್ಷ್ಯವೇ ಇಲ್ಲ. ಧರ್ಮರಾಯನನ್ನೊಡಿಯೋದಕ್ಕೆ ರಕ್ತಪಾತ ಇಲ್ಲದೇ ಸಾಧ್ಯ ಉಂಟು. ಈಗ ನನ್ನೊಂದು ಭಾವನೆ ಧರ್ಮರಾಯನಂಥವರನ್ನು ರಕ್ತ ಇಳಿಸಿ ನಾವ್ ಯಾಕೆ ಸೆರೆ ಹಿಡಿಬೇಕು? ಅವನ್ನು ಜೀವಂತ ಸೆರೆಹಿಡಿಯಬೇಕು. ಸೆರೆ ಹಿಡಿದ್ರೆ ಲಾಭಯೇನು ಅಂತಲ್ವೇ? ಧರ್ಮರಾಯ ಇಲ್ಲದಿದ್ರೆ ಅವ್ರಿಗ್ ಯುದ್ಧ ಯಾಕೆ?

ಧರ್ಮರಾಯನನ್ನು ನಾವು ಇಲ್ಲಿ ಬಂಧನದಲ್ಲಿ ಇರಿಸಿದರೆ ಪಾಂಡವರು ಯುದ್ಧ ಜಯಿಸಿದರೆ, ಮತ್ತೆ ಧರ್ಮರಾಯನನ್ನು ಬಿಡಿಸಿ ಪಟ್ಟಾಭಿಷೇಕ ಮಾಡ್ಬೇಡ್ವೋ? ಅದೆಲ್ಲ ಅಷ್ಟೇ ಸುಲಭ ಸಾಧ್ಯ ಅಲ್ಲ. ಧರ್ಮರಾಯನನ್ ನಾನಿಲ್ಲಿ ಬಂಧಿಸಿ ಇಟ್ರೆ, ಬೇಕಿದ್ರೆ... ಅದ್ ರಾಜಕೀಯ ನಾವ್ ಧರ್ಮರಾಯನಿಗೆ ನಾಳೆ ಪಟ್ಟಕಟ್ಟುತ್ತೇವೆ ಅಂತ ಹೇಳಲೂ ಬಹುದು. ಮನಸ್ಸಿದೆ ಅಂದ್ರೆ ಇಲ್ಲಿಯೂ ಧರ್ಮರಾಯ ಅರ್ಹ ಅಂತ ನಮ್ಮ ಮತ. ಅದೀಗ ಪ್ರಸ್ತುತ ಅಲ್ಲ, ಅದಕ್ಕೆ ಮಹತ್ವ ಇಲ್ಲ. ಕೆಲವು ಸಲ ರಾಜಕೀಯದಲ್ಲಿ ಹಾಗ್ ಬೇಕಾಗ್ತದೆ ಮಹಾನೇತಾರ ಯಾರು ಅವನನ್ನು ಗೌರವದಿಂದ ಬಂಧಿಸಿ, ಅವರಿಗೆ ನಾಯಕತ್ವ ಇಲ್ಲದೆ ಆಯ್ತು. ಯಾರು ಪರಮ ಲಕ್ಷ್ಯವೋ ಅವರು ಅವರ ಕೈಯಲ್ಲಿ ಇಲ್ಲದೇ ಆಗಿ ಶತ್ರು ಬಂಧನದಲ್ಲಿದ್ರೆ

ವೊಮ್ಮೆ ತಳಮಳವೂಂಟಾಗ್ತದೆ, ಛಿದ್ರವಿಛ್ಛಿದ್ರವುಂಟಾಗ್ತದೆ ಇದು ವಿಷಯ. ಇನ್ನೊಂದಿದೆ. ಯೇನು? ಈಗ ನಾವೆಲ್ಲ ಸೈಂಧವನ ಬಗ್ಗೆ, ದುಃಶಾಸನನ ಬಗ್ಗೆ ಶಕುನಿಯ ಬಗ್ಗೆ, ಕರ್ಣನ ಬಗ್ಗೆ ಸದಭಿಪ್ರಾಯದವರು ಅಂತ ಅದರ ಅರ್ಥ ಅಲ್ಲ. ಈಗ ಸಣ್ಣಪುಟ್ಟ ಅಭಿಪ್ರಾಯ ವ್ಯತ್ಯಾಸ ಇದ್ದದ್ದು. ಈ ಸಣ್ಣಪುಟ್ಟ ಅಭಿಪ್ರಾಯ ವ್ಯತ್ಯಾಸವನ್ನು ಇಂತಹ ಘಟ್ಟದಲ್ಲಿ ನಾವು ಸ್ವಲ್ಪ ಬದಿಗೆ ಸರಿಸಿ. ವೊಕ್ಕಟ್ಟಿಗೆ ಬಂದು, ಸಮಷ್ಟಿಯಿಂದ ನಮ್ಮ ಬಲವನ್ನು ವಿರೋಧಿಗಳ ಮುಂದೆ ಇಟ್ರೆ, ಜಯಿಸುವುದು ಕಷ್ಟ ಸಾಧ್ಯ ಅಲ್ಲ. ನನಗೆ ಗೊತ್ತುಂಟು, ನಮ್ಮ ಈ ಪಾಳ್ಯದೊಳೆ ಸ್ವಲ್ಪ ಕಚ್ಚಾಟ ಇದ್ದದ್ದೇ, ಬಹುಸಂಖ್ಯಾಕವಾದಂತಹ ನಮ್ಮ ಶಕ್ತಿ ಅದು; ಆ ಶಕ್ತಿಯ ಮುಂದೆ ಸಾಕಾಗೋದಿಲ್ಲ. ಆ ಏಳಕೋಹಿಣಿ ಸೈನ್ಯದ ಮುಂದ್ ಹನ್ನೊಂದ್ ಅಕ್ಷೋಹಿಣಿ ಸೈನ್ಯ ಈವರೆಗೆ ಏನೂ ಮಾಡ್ಲಿಲ್ಲ; ಸತ್ತದ್ದೇ. ಬೇರೇನೂ ಆಗ್ಲಿಲ್ಲ. ಹಾಗಾಗಿ ನನ್ನ ಈ ಉಪದೇಶವನ್ನು ನೀನ್ ಆಲಿಸ್ಬೇಕು. ಸೈಂಧವ ಬೇಕು ನಮಗೆ ಅವ ಮಹಾ ದ್ವಾರಪಾಲಕನಂತೆ ನಿಲ್ ಬೇಕು, ಕರ್ಣ ಬೇಕು ದುಃಶಾಸನ ಬೇಕು, ಇವರೆಲ್ಲ ಬೇಕು; ಮಾತ್ರ ಅಲ್ಲ ನೀನೂ ಬೇಕು. ವೊಮ್ಮೆ ಈ ಒಕ್ಕೂಟದಲ್ಲಿ, ಗುಂಪುಗಾರಿಕೆಯನ್ನು ಮರೆತು ನಿತ್ತರೆ ನನಗೂ ದೈವಾನುಗ್ರಹ ಉಂಟು ನಮಗೂ ದೈವಾನುಗ್ರಹ ಉಂಟು. ಇದರ ಸೂಚಕವಾಗಿ ಸೈಂಧವನಿಗೊಂದ್ ಅನುಗ್ರಹ ಉಂಟು.

ಕಾಫಿ-ಅಷ್ಟತಾಳ॥ ಉರಗ ಭೂಷಣನ ವರವುಂಟು / ಇನ್ನು / ಸರಿಯಾರು ಸೈಂಧವ ನೃಪತಿಗೆ ಗಂಟು

ಸರಕು ಮಾಡನು ನಾಲ್ವರನ್ನು | ಕಾ | ದಿರುವನು ಪದ್ಮವ್ಯೂಹದ ದ್ವಾರವನ್ನು ॥ ೧೬೦ |

ಸುಯೋಧನಾ, ಬಹುಸಂಖ್ಯಾಕರು ಇದ್ದ ವೊಂದು ಸೇನೆ ಕಾಣುವವರ ಕಣ್ಣಿಗೆ ತೀರಾ ಕಡಿಮೆ ಸಂಖ್ಯೆಯ ಜನಗಳು ಅಂತ ತೋರುವ ವೋಂದು ಚಮತ್ಕಾರ ಉಂಟು ವ್ಯೂಹರಚನೆಯಲ್ಲಿ. ಅದಕ್ಕೆ ಚಕ್ರವ್ಯೂಹ ಅಂತ ಹೆಸ್ರು, ಚಕ್ರವ್ಯೂಹ ಅಂತಂದ್ರೆ ಹೇಗೆ? ಮೊದಲು ವೋಂದ್ ವೃತ್ತ. ಈ ವೃತ್ತ ಬಲಕ್ಕೆ ತಿರ್‍ಗಿ ಅದರ ಹೊರಗೆ ಮತ್ತೊಂದು ವೃತ್ತ. ಅದು ಯೆಡಕ್ಕೆ ತಿರ್‍ಗ್‍ಬೇಕು. ಅರ್ತಾಯ್ಕೆ? ಸಣ್ಣ ವೃತ್ತ ಬಲಕ್ಕೆ ತಿರುಗಿದರೆ ಅದರ ಹೊರಗಿನ ವೃತ್ತ ಯೆಡಕ್ಕೆ ತಿರ್‍ಗ್ ಬೇಕು. ಹೀಗೆ, ಸೈನ್ಯ ಯೆಷ್ಟುಂಟು? ಇಂತಹ ಕೆಲವು ವೃತ್ತಗಳನ್ನು ರಚನೆ ಮಾಡ್ತಾ ಹೋಗ್ತಾಗ, ದೂರದಿಂದ ಕಾಣ್ತವರಿಗೆ ಆ ಹೊರಗಿನ ವೃತ್ತ ಮಾತ್ರ ಕಾಣಿಸುವುದು ಅವು ತಲೆ ಹಾಕ್ತಾರೆ, ಹಂ, ಯೇನುವೊಂದು ಸಾವಿರ ಸೈನಿಕರಿರಹು ಅಂತ. ಅದೇ ನಾ ಹೇಳಿದ್ದು ಈಸಲ ಎಲ್ಲವನ್ನು ನಾವು ಕೂಡಿಸಿಕೊಂಡು ಒಂದು ಚಕ್ರವ್ಯೂಹವನ್ನು ತಯಾರಿಸುವುದು. ಇದರಲ್ಲಿ ಆ ಮುಖದ್ವಾರ ಅಂತ್‍ವೊಂದುಂಟಲ್ಲ? ಆ ಮುಖದ್ವಾರಕ್ಕೆ ನಿರ್ಣಯ ಇಲ್ಲ. ಕಾರಣ ತಿರ್‍ಗ್‍ತಾ ಇರೋದು ಈ ತಿರ್‍ಗ್‍ತಾ ಇದ್ದಂಥ ಮುಖದ್ವಾರದಲ್ಲಿ, ಆ ದ್ವಾರರಕ್ಷಕನಾಗಿ ನಿಲ್ವವನಿಗೆ ಯುದ್ಧ ವಿದ್ಯೆ ಚೆನ್ನಾಗಿ ಗೊತ್ತಿದ್ದೇಕು. ಯುದ್ಧ ವಿದ್ಯೆ ಗೊತ್ತಿದ್ದವನೇ, ಪ್ರತ್ಯೇಕವಾಗಿ ಆ ಅವನಿಗೆ, ಅಂದ್ರೆ ನಿನ್ನ ತಂಗಿಯ ಗಂಡನಿಗೆ - ಸೈಂಧವನಿಗೆ, ಶಿವದೇವರದ್ದೊಂದ್ ವರ ಉಂಟು. ಆ ವರಕ್ಕೆ ಕಾರಣ ಯೇನು? ನಿನ್ಗೂ ಗೊತ್ತಿರ್ಬೇಕು ಕಾಡಿನಲ್ಲಿದ್ದ ದ್ರೌಪದಿಯನ್ನು ಪೀಡಿಸ್ಲಿಕ್ ಹೋದ ಅವ್ನಿಗೆ, ಭೀಮಾರ್ಜುನರು ಹಿಡ್ದ್ ಯೆರ್ಡ್ ಪೆಟ್ ಹೊಡದದ್ದರಿಂದ ಅವಮಾನಿತನಾಗಿ ಬಂದವ

ಹಸ್ತಿನಾವತಿಗೆ ಬರುವುದಕ್ಕಿಂತ ಮೊದಲು ಕಠಿಣವಾದಂತಹ ತಪಸ್ಸನ್ನಾಚರಿಸಿದ; ಶಿವನ ಕುರಿತಾಗಿ, ಶಿವ ಪ್ರತ್ಯಕ್ಷನಾದ. “ಯೇನ್ ಬೇಕಪ್ಪ” ಅಂತ ಕೇಳಿದ್ರೆ 'ಪಾಂಡವರನ್ನು ಜಯಿಸುವಂಥಹ ವರ ಕೊಡಬೇಕು'. 'ವೊಂದುದಿವಸದ ಮಟ್ಟಿಗೆ' ಅಂತ ಶಿವದೇವ್ರ ಹೇಳಿದ್ದು ಯಾಕೆ? ಅವನ ಉಪಾಸನೆ ಆವೊತ್ತಿನ ಮಟ್ಟಿಗೆ ಮಾತ್ರ “ಯದಾಹ್ನಾತ್ ಕುರುತೇ ಪಾಪಂ ತದಾಹ್ನಾತ್ ಪ್ರತಿಮುಚ್ಯತೆ” ಧೀರ್ಘಕಾಲದ ತಪಸ್ಸಿಲ್ಲ. ಅರ್ಜುನನ ತಪಸ್ಸಿನ ಹಾಗಿದ್ದದ್ದಲ್ಲ, ವೊಂದು ದಿವಸ ಪಾಂಡವರನ್ನು ಜಯಿಸುವ ವರ. ಆ ವರವನ್ನು ಈ ಹೊತ್ತು ಉಪಯೋಗಿಸುವ ಹಾಗಿರುವಾಗ್ಗ. ಶಿವನ ವರವುಳ್ಳ ಸೈಂಧವನಿಗೆ ಈ ಹೊತ್ತು ನೇತೃತ್ವ, ಯುದ್ಧವಿದ್ಯೆ ಗೊತ್ತಿದ್ದ್ರಿಂದ ಅವನೂ ತಿರ್‍ಗ್ ತಾ ಇರ್‍ಬೇಕು ದ್ವಾರ ಸ್ಥಾನದಲ್ಲಿ. ತಿರ್‍ಗ್‌ತಾ ಇದ್ದಾವಾಗ ಬಾಕಿಯಿದ್ದವರಿಗೆ ಪ್ರಥಮ ಚಕ್ರದಲ್ಲಿಯೇ ಬಾಗಿಲು ಸಿಕ್ಕೋದಿಲ್ಲ. ವೊಂದ್ ವೇಳೆ ಪ್ರಥಮ ಚಕ್ರವನ್ನು ದಾಟಿ ವೊಳ್ಗ್ ಬಂದ್ರೆ ಈಚೇದು ಅಪಸವ್ಯವಾಗಿ ತಿರೋದ್ರಿಂದ ಅಂತೂ ಈ ತಿರ್‍ಗ್‌ತಾ ಇದ್ದದ್ದನ್ನು ನೋಡಿದವರಿಗೆ ತಲೆ ತಿರುಗು ಉಂಟಾಗ್ತದೆ.

ಇದೆಲ್ಲ ಸಣ್ಣ ಪ್ರಾಯದಲ್ಲಿ ನಿಮಗೆಲ್ಲ ತೋರಿಸಿಕೊಟ್ಟಿದೇನೆ ನಾನು. ಅಲಾತ ಚಕ್ರ ಅಂತ ವೊಂದುಂಟು. ಬರೇ ಉರಿಯುತ್ತಿರುವ ಕಟ್ಟೆಗೆಯನ್ನು ನಾವು ಎಷ್ಟು ಜೋರಾಗಿ ಬೀಸ್ತೇವೆ ಅಷ್ಟದು ಸಿದ್ಧ ಕಾಣ್ತದೆ. ನಿಧಾನ ಆದ ಹಾಗೆ ಅದೊಂದ್ ಎಂಟೋ ಹತ್ತೋ ಆದಂತೆ ಕಾಣ್ತದೆ ಸ್ಥಬ್ಧವಾಗುವಾಗ ವೊಂದೇ. ಹೀಗೆ ಆ ಚಕ್ರವ್ಯೂಹವನ್ನು ರಚಿಸಿ ಕೇಂದ್ರ ಸ್ಥಾನದಲ್ಲಿ ನಾನ್ ನಿತ್ತು, ದ್ವಾರ ಸ್ಥಾನದಲ್ಲಿ ಸೈಂಧವ ನಿತ್ತು, ಎಡ ಬಲಗಳ ಸ್ಥಾನದಲ್ಲಿ ಕರ್ಣ ಮತ್ತು ದುಃಶಾಸನ ನಿತ್ತರೆ ಧರ್ಮರಾಯನನ್ನು ಈ ಬಲೆಯಲ್ಲಿ ಹಿಡೀಲಿಕ್ಕೆ ಸಾಧ್ಯ. ಧರ್ಮರಾಯನೊಟ್ಟಿಗೆ ಬಂದ್ರೆ ಭೀಮನನ್ನೂ ಹಿಡೀಲಿಕ್ಕೆ ಸಾಧ್ಯ. ಬಹಳ ಮಾತ್ ಯಾಕೆ? ಅಲ್ಲಿ ಉಳಿದ ಎಲ್ಲಾ ಸೈನ್ಯವನ್ನೂ ಕೂಡ ನಮಗೆ ಹಿಡಿಯುವದಕ್ಕೆ ಸಾಧ್ಯ. ವೊಂದು ದಾರದಲ್ಲಿ ಹಲವಾರು ಮೀನುಗಳನ್ನು ಹಿಡಿಯುವುದಕ್ಕೆ ಸಾಧ್ಯ ಎಂಬ ಅಂಬಿಗನ ನ್ಯಾಯದಂತೆ, ಇಷ್ಟು ನಾನ್ ಮಾಡ್ತೇನೆ ಚಕ್ರವ್ಯೂಹದ ರಚನೆ. ಆ ವ್ಯೂಹದ ಆಲೋಚನೆ ಈ ಮಂಥನ ಈಗ ನಿನ್ನ ಚಿತ್ರದಲ್ಲಿ ಮೂಡಿದೆ ಅಂತಾದರೆ, ಬಿಡು ಮತ್ತೆ ನಾಳೆ ನೋಡ ಈ ಮಾತನ್ನು ನಂಬು, ಅಲ್ಲಿ ಏನ್ ಮಾಡೋದಕ್ಕೂ ಸಾಧ್ಯ ಇಲ್ಲ. ಅರ್ಜುನ ವೊಬ್ಬ ತಪ್ಪಿದರೆ ಸಾಧ್ಯವಾದೀತು ಅಂತ ಹೇಳದ್ದಕ್ಕೆ ರಹಸ್ಯ ಇದು. ಆದಕಾರಣ ಮಿತ್ರನಾದ ಕರ್ಣನನ್ನೂ ಕರೀ ಸೈಂಧವನನ್ನೂ ಕರೀ, ನಾವ್‌ವೊಂದು ವೊಕ್ಕೂಟ ಅಂತ ಮಾಡೋಣ. ವೊಕ್ಕೂಟದಲ್ಲಿ ವಿಷಯ ಯೇನು? ನಮ್ಮ ತಾತ್ವಿಕವಾದ ವೈಯಕ್ತಿಕ ವಾದಂತಹ ಸಂಘರ್ಷ ಅಲ್ಲ. ನಮ್ಮ ನಾಯಕನಾದ ನಿನ್ನನ್ನು ಯೇನ್ ಮಾಡಿಯಾದ್ರೂ, ಪ್ರಯತ್ನ, ಯೆಂಥಹ ರಾಜಕಾರಣದಲ್ಲಿ ಅಭಿಪ್ರಾಯ ವ್ಯತ್ಯಾಸ ಇದ್ರೂ ಕೂಡ ವೊಂದು ಪಕ್ಷದಲ್ಲಿ ನಾಯಕನನ್ನು ಉಳಿಸಬೇಕು ಅಂತಾಗುವಾಗ ವೊಗ್ಗಟ್ ಆಗದೇ ಇದ್ದಂಥವರನ್ನು ನಾವ್ ಹೊರ್‍ಗ್ ಹಾಕೋದ್ ವೊಳ್ಳೇದು. ವಿಷಯ ಮನನವಾಯ್ತಲ್ಲ? ಹಾಗಾದರೆ ಕೊಡು ರಣವೀಳ್ಯ ನನಗೂ ಸ್ವಲ್ಪ ವಿಶ್ರಾಂತಿ ಬೇಕು ಆಗಲಿ ನಾಳೆ ಬೆಳಿಗ್ಗೆ ನೋಡ ಹೋಗೋಣ ನಾಳೆ ಜಯವನ್ನು ಸಂಪಾದಿಸೋಣ. ಕೌರವೇಶ್ವರ ನಿನಗೆ ಶುಭವಾಗಲಿ ಮಂಗಲವಾಗಲಿ.

## ೨೯ ಅಭಿಮನ್ಯುವಿಗೆ ಅನುಜ್ಞೆ

ಧರ್ಮರಾಯ

|| ವಾರ್ಧಕ್ಯ || ಇತ್ತ ಧರ್ಮಜಂ | ಬೆರಳ ಮೂಗಿನೊಳಿಟ್ಟು ಚಿಂತೆಯಂ

ತಾಳಿ ತನ್ನೊಡನೆ ತಿಳಿದಿಂತೆಂದನು || ೧೭೧ |

ಬೇಡಾ, ಬೇಡಾ ಯುದ್ಧ ಅಂತ ಹೇಳಿದೆ. ತಮ್ಮಂದಿರೂ ಒಪ್ಪಲಿಲ್ಲ ಅದು ದೊಡ್ಡದಲ್ಲಾ ಅನ್ನೋಣ. ನನ್ನ ತಮ್ಮಂದಿರು ತಾನೆ? ಭಗವಾನ್ ಶ್ರೀಕೃಷ್ಣನೇ “ಯುದ್ಧ ಬೇಕು, ಧರ್ಮರಾಯ, ನೀನು ಒಪ್ಪಿಕೊಳ್ಳತಕ್ಕದ್ದು” ಅಂತ ಹೇಳಿದ್ಮೇಲೆ, ಒಲ್ಲೆ ಅನ್ನೋದು ಕ್ಷಾತ್ರಕ್ಕೂ ಭೂಷಣವಲ್ಲ.

ಈಗ ತಿಳಿದೆ ನಾನು ಯಾಕೆ ಬೇಡಾ ಅಂತ ಹೇಳಿದೆ? ಏನು, ಹಿರಿಯರಾದಂತಹ ಭೀಷ್ಮರು ನಮ್ಮ ಮೇಲೂ ಅನುಗ್ರಹದೃಷ್ಟಿ ಇಟ್ಟಿದ್ದರಿಂದ ತಲೆ ಉಳಿಯಿತು. ಆದರೆ ದಿನವೊಂದಕ್ಕೆ ಹತ್ತು ಸಾವಿರಕ್ಕೆ ಕಡಿಮೆ ಇಲ್ಲದ ಮಕುಟವರ್ಧನರ ತಲೆ ಹಾರಿಯೇ ಹೋಯಿತು. ಈಗಲೋ ಸರದಿ ದ್ರೋಣರದು. “ಶಾಪಾದಪಿ ಶರಾದಪಿ”..!! ದ್ರೋಣರ ಸೇನಾಧಿಪತ್ಯದಲ್ಲಿ ಏನಾಗ್ಯದೆ! ಈಗ ಪರಿಸ್ಥಿತಿ ಎಲ್ಲಿಗೆ ಮುಟ್ಯದೆ! ಅವರು ಚಕ್ರವ್ಯೂಹವನ್ನು ಬಲಿದಿದ್ದಾರಂತೆ! ಈ ಚಕ್ರವ್ಯೂಹವನ್ನು ಇವರು ಬಲಿದದ್ದು ದೊಡ್ಡದಲ್ಲ, ಅರ್ಜುನ ಇಲ್ಲಿಲ್ಲ. ಸಮಸಪ್ತಕರ ಹೇಳಿಕೆ ಬಂದಿದ್ದರಿಂದ ಶ್ರೀಕೃಷ್ಣನ ಅಂಬೋಣದಂತೆ ಅರ್ಜುನ ಅಲ್ಲಿ ನಿರ್ಗಮಿಸಿದ್ದಾನೆ. ಯಾರಿದ್ದಾರೆ, ಕ್ಷತ್ರಿಯರು?

ಭೀಮಸೇನ ಹೋಗಿ ಪ್ರಯತ್ನ ಪಟ್ಟು ಪೆಟ್ಟು ತಿಂದು ಘಾಯವಡೆದು ಶುಶ್ರೂಶೆಯಲ್ಲಿದ್ದಾನೆ. ಇನ್ಯಾರಿದ್ದಾರೆ? ನಕುಲ - ಸಹದೇವರು ಚಿಕ್ಕವರು, ಕ್ಷತ್ರಿಯರೇನೋ ಹೌದು ನೇರ ಕ್ರಮದಲ್ಲಿಂದ ಹೋರಾಟದಲ್ಲಿ ಒಂದೋ ಬದುಕಿಯೇನು ಇಲ್ಲ ಕೊಂದೇನು - ಇದಕ್ಕೆ ಸರಿ ಅವರು. ಭಗವಂತನಾದ ಶ್ರೀಕೃಷ್ಣನೇ ಉಪದೇಶ ಮಾಡಿದ್ದಾನಂತೆ ನನ್ನ ತಮ್ಮನಿಗೆ “ಇದು ಧರ್ಮಯುದ್ಧ, ವೈದಿಕರಿಗೆ ಯಜ್ಞದ ಕರೆ ಬಂದ ಹಾಗೆ ಉತ್ತಮ ಕ್ಷತ್ರಿಯರಿಗೆ ಇಂತಹ ಯುದ್ಧದ ಆಹ್ವಾನ ಬರದೆ. ಇದರಲ್ಲಿ ಏನಯ್ಯಾ? ಯಪ್ರಚ್ಚಾಲಾಭ ಸಂತುಷ್ಟನಾಗಿ ಹತೋವಾ ಸ್ವರ್ಗ ಸಿಗದೆ, ಬದುಕಿದ್ರೆ ಈ ದ್ವಂದ್ವಗಳನ್ನು ಲೆಕ್ಕಿಸದೆ ಎಲ್ಲರೂ ಸಮಭಾವದಿಂದ ನೋಡಿಕೊಂಡು, ನನ್ನಲ್ಲಿ ಹೃದಯವನ್ನು ಸಮರ್ಪಿಸಿ ಕರ್ತವ್ಯ ದೀಕ್ಷಿತನಾಗಿ, ಯುದ್ಧವನ್ನು ಮಾಡು”. ಅದು ಹೌದು, ಅದು ಹೌದೇ. ಆದರೆ ಅದು ಧರ್ಮ ಯುದ್ಧ. ಬಹಿರಂಗವಾದಂತಹ ಲೋಕವು ಒಪ್ಪುವಂತಹ ಧನುರ್ವೇದ ಪ್ರಕಾರದ ಯುದ್ಧದಲ್ಲಿ ಇದೀಗ ನಮ್ಮ ಆಚಾರರು ದ್ರೋಣರು ಏನು ಮಾಡಿದರು? ಈ ವ್ಯೂಹವನ್ನಾದರೂ ಭೇದಿಸುವದು ಹೇಗೆ? ಇದಕ್ಕೆ ಈಗಿಂದೀಗ ಉತ್ತರರಿಸಲಿಲ್ಲಾಂತಾದ್ರೆ ನಾನು ಸೋಲನ್ನು ಒಪ್ಪಿಕೊಂಡ ಹಾಗೆ, ಯುದ್ಧದಲ್ಲಿ ಸೋಲನ್ನು ಒಪ್ಪಿಕೊಂಡ್ರೆ ನಾನು ಆಮೇಲೆ ಹ್ಹ ಹ್ಹ ,

ಕೌರವನನ್ನು ಇದಿರಿಸುವದಕ್ಕೆ ನಮಗೆ ನೈತಿಕ ಬಲವಿಲ್ಲ. ಏನು ಮಾಡಲಿ? ಎಂತಹ ವ್ಯೂಹ ಇದು ಎಂತಹ ವ್ಯೂಹ!!

*// ಭಾಮಿನಿ ಕಾಮಪಿತನಿದ ಬಲ್ಲನಾ ಬಲ | ರಾಮ ನರಿವನು ಪಾರ್ಥ ತಿಳಿವನು |*

*ಭೂಮಿಯಲಿ ಸುರಪತಿಯ ಮೊಮ್ಮಗನರಿದ ಹೋಗಲಿಕೆ |*

ಕ್ಷೇಮದಲಿ ಬರಲರಿಯ ನವನೀ | ಸೀಮೆಯಲಿ ಮಿಕ್ಕವರ ಕಾಣೆನು |

ಹಾ ಮಹಾದೇವೆನುತ ಚಿಂತಿಸುತಿರ್ದನವನೀಶ | ೧೬೨ ||

ಇಂತಹ ಚಕ್ರವ್ಯೂಹವನ್ನು ಭೇದಿಸುವದಕ್ಕೆ, ಪ್ರಪಂಚ ಸಂಬಂಧಿಯಾಗಿ ಹೊರತು, ದೇಹಸಂಬಂಧಿಯಾಗಿ ಅಲ್ಲ, ವಸುದೇವ-ದೇವಕೀ ಜಾತನಾಗಿ ಈ ಭೂಮಿಯಲ್ಲಿ ಮೈವೊಡೆದು, ಜನರ ಮುಂದೆ ಗೋಚರಿಸುತ್ತಿರುವಂತಹ ಶ್ರೀಕೃಷ್ಣ; ಅವನೊಬ್ಬ ಸಂಗ್ರಾಮ ಶೂರ, ಅವನನ್ನು ಬಿಟ್ಟರೆ ಆಮೇಲೆ ಬಲಭದ್ರ ಸ್ವಾಮಿ ತಿಳಿದಿದ್ದಾರೆ. ಈ ಪ್ರಪಂಚದಲ್ಲಿ ಅಂತಹ ಯೋಧರೇ ಬೇರೆ ಇಲ್ಲಾ. ಆದ್ದರಿಂದಲೇ ಕೃಷ್ಣನೋ ಅಥವಾ ಬಲರಾಮನೋ, ಬಂದು ಸಭೆಯಲ್ಲಿ ಎದ್ದು ನಿಂತಾಗ, ಬಾಕಿ ಇದ್ದ ಕ್ಷತ್ರಿಯರೆಲ್ಲಾ ಮಾತು ಮುಗಿಸ್ತಾರೆ. ಅಥವಾ ಮಾತಾಡೋದೇ ಇಲ್ಲ. ಇವತ್ತು ಅಂತಹ ಅರ್ಹತೆ ಇರುವದು ಯದುರಾಜರೆನಿಸಿದಂತಹ ರಾಮಕೃಷ್ಣರಿಗೆ ಮಾತ್ರ. ಆಮೇಲೆ ನನ್ನ ಪ್ರೀತಿಯ ಸಹೋದರನಾದಂತಹ, ತ್ರೀಲೋಕ ವಿಜಯಿಯಾದಂತಹ ಫಲ್ಗುಣ-ಪಾರ್ಥ, ಏನು ಮಾಡೋಣ? ಕೃಷ್ಣಾರ್ಜುನರು ಇಲ್ಲಿ ಇಲ್ಲದೆ ಇದ್ದಂತಹ ಹೊತ್ತು! ಆದರೆ ಒಂದುಂಟು, ನಮ್ಮ ಅರ್ಜುನನ ಮಗ ಅಭಿಮನ್ಯು.. ಆತನೂ ಇಂತಹ ವ್ಯೂಹವನ್ನು ಭೇದಿಸಬಲ್ಲ. ವ್ಯೂಹಗರ್ಭವನ್ನು ಪ್ರವೇಶಿಸಬಲ್ಲ. ಒಳಗಿನಿಂದಲೇ ತಿರುಗಿ ನಿಂತು ಹೊರಗಿನ ವ್ಯೂಹವನ್ನು ರಚಿಸಿದಂತಹ ಎಲ್ಲರ ರುಂಡಗಳನ್ನು ಚೆಂಡಾಡಬಲ್ಲ ಎಂಬ ವಿಶ್ವಾಸ ನನಗುಂಟು. ಆದರೆ ಹೋಗಲಿಕ್ಕೆ ತಿಳಿದವನು ಕ್ಷೇಮದಿಂದ ಹೊರಗೆ ಬರಲಿಕ್ಕೆ ತಿಳಿದಾನೇ? ಅವರು ಬಿಡದೇ ಇದ್ರೆ ಗೂಡಿನಲ್ಲಿ ಹಿಡಿಯಲ್ಪಟ್ಟಂತಹ ಸಿಂಹದ ಮರಿಯಾಗಿ ನನ್ನ ಅಭಿಮನ್ಯು ಪರಿಣಮಿಸಿದರೆ... ಈ ಶಂಕೆ ಕಾಣ್ತಾ ಇದೆ. ಏನು ಮಾಡಲಿ! ಕೃಷ್ಣನೇ ದಾರಿ ತೋರಿಸಲಿ.

(ಅಭಿಮನ್ಯುವಿನ ಪ್ರವೇಶ)

ಮಗನೇ ಅಭಿಮನ್ಯುಕುಮಾರ, ನಿನ್ನ ಸಂಸ್ಕಾರಕ್ಕೂ ನಿನ್ನ ವಯಸ್ಸಿಗೂ ತಕ್ಕುದಾದಂತಹ ಮಾತೇ ಹೌದು. ಆದರೆ ಹಿರಿಯಯ್ಯನೆಂಬ ನೆಲೆಯಲ್ಲಿ, ನನ್ನ ಹೊಣೆ ಇದು ನನ್ನನ್ನು ಸ್ವಲ್ಪ ತಡೀತಾ ಇದೆ. ಆಲೋಚಿಸು. ಚಕ್ರವ್ಯೂಹವನ್ನು ಬಹಳ ಸರಸವಾಗಿ ಬಹು ಸುಲಭವಾಗಿ ನೀನು ಪ್ರವೇಶಿಸಬಲ್ಲೆ. 'ಕದಳಿಯೊಳು ಮದದಾನೆ ಹೊಕ್ಕಂದದಲಿ' ಎಂಬುದನ್ನು ನಾನು ಬಲ್ಲೆ. ಆದರೆ ನೀನು ಒಳ ಪ್ರವೇಶಿಸಿದ ಮೇಲೆ ಅವರೆಲ್ಲ ನಿನ್ನನ್ನೇ ಲಕ್ಷ್ಯವಾಗಿಟ್ಟುಕೊಂಡು ನಿನ್ನ ಮೈಮೇಲೆ ಬಿದ್ದರೆ ನಾನಾ ವಿಧದಿಂದ ಘಾಸಿಗೊಳಿಸುವುದಕ್ಕೆ ಮುಂದಾದರೆ ಮಗನೇ.. ಅದೊಂದು ಕಾಲಾಗ್ನಿ,

| *ತೋಡಿ-ಆದಿತಾಳ* | *ಮಗನೆ ಕೇಳ್ ಕಾಲಾಗ್ನಿಯ ಹೊಗಬಹುದಹಿಪನ* | *ಝಗಝಗಿಸುವ*

*ಪೆಡೆಯೊಳು ನಲಿದಾಡಬಹುದು* | *ವಿಗಡ ಮೃತ್ಯುವಿನ ಬಾಯೊಳು ಹೊಕ್ಕು*

ಬರಬಹುದು | ಪೊಗುವಡಸಾಧ್ಯವು ಚಕ್ರವ್ಯೂಹವನು || ಎಂತು ಪೋಪೆಯೊ

ಮಗನೆ | ಚಕ್ರವ್ಯೂಹಕಿ | ನ್ನೆಂತು ಪೋಪೆಯೋ ಮಗನೆ || ೧೬೩ ||

ನಾಡ ನುಡಿಯೊಂದುಟು ಮಗನೇ. ಈಡೀ ಪ್ರಪಂಚವನ್ನು ಸುಟ್ಟು ಬೂದಿ ಮಾಡುವ ಕಾಲಕಾರಣನಾದಂತಹ ಶಿವನ ಹಣೆಗಣ್ಣಿನ ಕಿಚ್ಚು, ಇದಕ್ಕೆ ಕಾಲಾಗ್ನಿ ಎಂದು ಹೆಸರು. ಈ ಕಾಲಾಗ್ನಿಯನ್ನಾದರೂ ಹೊಗಬಹುದು. ಕಾಲಾಗ್ನಿ ಸದೃಶ್ಯವಾದಂತಹ ಒಂದು ಕೃತಕವಾದಂತಹ ಮಾರಕವಾದಂತಹ ಅಗ್ನಿ ಇದೆ. ಅದಕ್ಕೆ ಬಡಬಾಗ್ನಿ ಅಂತ ಹೆಸರು. ಇನ್ನು ವಿಷಧರನಾಗಿ ಶಿವನ ಕೊರಳನ್ನಲಂಕರಿಸುವ ನಾರಾಯಣನಿಗೆ ಹಾಸುಗೆ ಎನಿಸುವ ಆ ಶೇಷನನ್ನಾದರೂ, ಅವನ ಹಣೆಯಲ್ಲಿದ್ದಂತಹ ಮಣಿಯನ್ನಾದರೂ ಸ್ವಾಧೀನ ಪಡಿಸಬಹುದು. ಮೃತ್ಯುದೇವತೆಯನ್ನಾದರೂ ಕೈ ಹಿಡಿದು ಕೇಳಬಹುದು "ನಿನಗೆ ವಯಸೆಷ್ಟು?" ಅಂದ್ರೆ ಇದಕ್ಕೆಲ್ಲ ಸಹಜವಾದಂತಹ ಒಂದು ಗುಣ ಸ್ವಭಾವ ಅಂತ ಇರದೆ. ಈ ಸಾದ್ರಶ್ಯವಾದಂತಹ ಇದೆಯಲ್ಲ, ಬಂಗಾರಕ್ಕೆ ಸದೃಶ್ಯವಾದದ್ದು ಕೃತಕವಾದದ್ದು ಅದು ಬೆಲೆಯುಳ್ಳದ್ದೂ ಅಲ್ಲ. ಹಾಗೆಂತ ಅಪಾಯಕಾರಿಯಾಗಿಯೂ ಹೌದು. ಇಷ್ಟೇ ಅಲ್ಲ ದ್ರೋಣಾಚಾರರು, ಅವರೂ ಕಾಲಾಗ್ನಿ ಸ್ವರೂಪರು, ಕಾಲಾಗ್ನಿ ಸ್ವರೂಪರು ಬ್ರಾಹ್ಮಣರು ಮಾತ್ರವಲ್ಲ, ಕ್ಷತ್ರಿಯರೂ ಹೌದು! ಹೌದಲ್ಲ, ಇಂತಹ ಬ್ರಾಹ್ಮ ಮತ್ತು ಕ್ಷಾತ್ರ ಎರಡೂ ಸೇರಿದಾವಾಗ ಕಾಲಗ್ನಿ ಸದೃಶ್ಯರು ಅಂತ ಅವರನ್ನು ಹೇಳಿದ ಹಾಗೆ, ಬಹಳ ಅಪಾಯಕಾರಿಯಾದಂತಹ ವಿದ್ಯೆ ಅದು.

ಇನ್ನೊಂದು, ಫಣಿಕೇತನ- ಕೌರವ! ಫಣಿಯನ್ನಾದರೂ ತುಡುಕಬಹುದು ಅಂತ ಹೇಳಿದರೆ, ಫಣಿಕೇತನ ಈ ಕೌರವನ ನಂಜಿಗೆ, ವಿಷಕ್ಕೆ, ಗರುಡ ಮಂತ್ರ ಇಲ್ಲ ಮಗನೆ. ಅವನು ಅಲ್ಲಿದ್ದಾನೆ. ನಿನ್ನ ತಂದೆ ಕಾಡಿನಲ್ಲಿ ಹದಿಮೂರು ವರ್ಷ ನಿದ್ದೆ ಮಾಡಲಿಲ್ಲ ಯಾಕೆ? ಇದ್ದಾನೊಬ್ಬ ಯುದ್ಧಸ್ವರೂಪ ಅಲ್ಲಿ, ಕರ್ಣ. ಆ ಕರ್ಣ, ನಿನ್ನಪ್ಪನ ತಲೆಕತ್ತರಿಸದೆ, ಕೈಕಾಲು ತೊಳೆಸಿಕೊಳ್ಳುವದಿಲ್ಲ, ಸೇವೆ ಮಾಡಿಸಿಕೊಳ್ಳುವದಿಲ್ಲ, ಅಂತ ಪ್ರತಿಜ್ಞಾಬದ್ಧನಾಗಿದ್ದಾನಂತೆ!! ಇನ್ನೊಬ್ಬ ಹೊಸ 'ನಿಷ್ಪಾಂಡವ' ಅಂತ ಮಾಡುವದಕ್ಕೆ, ಒಂದು ದಿನದ ಮಟ್ಟಿಗೆ ಶಿವಾನುಗ್ರಹವನ್ನು ಸಂಪಾದಿಸಿದವ ಸೈಂಧವ. ಹಾಗಾದ್ರೆ ಇದು ಕೃತಕ ಬುದ್ಧಿ ಸ್ವರೂಪ. ಮೃತ್ಯುವನ್ನಾದರೂ ಜಯಿಸಬಹುದು. ಕಾಲಾಗ್ನಿಯನ್ನಾದರೂ ಜಯಿಸಬಹುದು, ಸರ್ಪದ ಹೆಡೆಯಲ್ಲಿದ್ದಂತಹ ಮಣಿಯನ್ನಾದರೂ ತರಬಹುದು. ಈ ಕೃತಕವಾದಂತಹ ಈ ಮೂರು ಶಕ್ತಿಯನ್ನು ದುಡುಕುವದು ಅಪಾಯಕಾರಿ, ಅಪಾಯಕಾರಿ. ಅಭಿಮನ್ಯು, ವಿಶ್ವಾಸ ಇದೆಯಪ್ಪ, ಹಿರಿಯರಾದ ನಾವೆಲ್ಲ ಎಪ್ಪತ್ತರಲ್ಲಿ, ಇನ್ನೂ ಮಾಡಿ ಮುಗಿಸದೆ ಇದ್ದುದನ್ನು ನೀನೊಬ್ಬ ಇಪ್ಪತ್ತರಲ್ಲೇ ಪೂರೈಸುವೆ ಎಂಬ ವಿಶ್ವಾಸ ಇದೆ. ಯಾಕಿದೆ? ನಿನ್ನನ್ನು ಹಡೆದವಳು, ಶ್ರೀಕೃಷ್ಣನ ಭಗಿನಿ ಸುಭದ್ರೆ, ನಿನ್ನನ್ನು ಪಡೆದ ತಂದೆ,

ಮೂರು ಲೋಕದ ಗಂಡ, ಧನುರ್ಧರ ಪಾರ್ಥ. ಅಂತಹ ಯಾವತ್ತೂ ಸಂಪರ್ಕದಿಂದ ಸಾಧಾರಣವಾದ್ದು ಹುಟ್ಟುವದಕ್ಕಿಲ್ಲ, ತಿಳಿಯದೆ ಇದ್ದಷ್ಟು ಬೆಪ್ಪನೊ ನಿನ್ನ ದೊಡ್ಡಪ್ಪ? ಆದಕಾರಣ ತಂದೆಯ ಕಡೆಯಿಂದ ದೇವೇಂದ್ರ, ತಾಯಿ ಕಡೆಯಿಂದ ವಾಸುದೇವ!! ಎಚ್ಚರಿಕ್ಕೆ ಹೇಳಿದ್ದು. ಆದರೆ ಹಿರಿಯರಾದಂತಹ ನಾವು ಮಕ್ಕಳಿಗೆ 'ಜಾಗ್ರತೆ' ಅಪಾಯ ಇದೆ, ಅಂತ ಎಚ್ಚರಿಕೆ ಹೇಳಿದ್ದು. ಭಗವಂತನಾದ ವಾಸುದೇವ, ನಿನ್ನನ್ನು ಎಲ್ಲಿದ್ದರೂ ಯಾವ ವಿಧದಿಂದಾದರೂ ಕಾಪಾಡಲಿ. ಮಗನೇ... ಹೋಗಿ ಬಾ...



# ೩೦ ಶಲ್ಯಸಾರಥ್ಯ

## ಶಲ್ಯ

(ಕರ್ಣನಿಗೆ ಸಾರಥ್ಯಮಾಡಲು ಶಲ್ಯನನ್ನು ಒಪ್ಪಿಸಲು, ರಾತ್ರಿ ಹೊತ್ತು ಶಲ್ಯನ ಬಿಡದಿಗೆ ಕೌರವ ಬರುತ್ತಾನೆ)

|| ಭಾಮಿನಿ || ವೀರ ಕರ್ಣನ ನುಡಿಯ ಕೇಳುತ | ಭೂರಿ ಸಂತಸವೆತ್ತು ಕೌರವ ಭೂರಮಣನತಿ

ತವಕದಲಿ ಮಾದೇಶನರಮನೆಗೆ | ಚಾರು ವಿಭವದೊಳೆಯ್ದೆ ಬರಲಾ | ಚಾರಕರ

ಸನ್ನೆಯಲಿ ತಿಳಿದು ವಿ | ಚಾರಿಸುತ ಬಳಿಕಿದಿರು ಬಂದರಸನನು ಮನ್ನಿಸಿದ || ೧೬೪ ||

ನಿಮಗೆ ಎಷ್ಟು ಸಲ ನಾನು ಪಾಠ ಹೇಳೋದು? ದೊಡ್ಡವರ ಕ್ರಮವೇ ಹಾಗೆ. ಭೂರಿವೈಭವದಿಂದ, ಪಲ್ಲಕ್ಕಿಯನ್ನು ಏರಿಕೊಂಡು ಕೌರವೇಶ್ವರ ಬರ್ತಾ ಇದ್ದಾನೆ ಅಂತಲ್ವ  ನೀವ್ ಹೇಳಿದ್ದು? ಮತ್ತೆ ಅವ ನಡ್ದ ಹೋದ್ರೆ ನೀವ್ ಎಲ್ಲಿ ಹೋಗೋದು, ಬಾಗಿಲ ಕಾಯ್ದವರು? ದೊಡ್ಡಸ್ತಿಕೆ ಅಂದ್ರೆ ಅದಯ್ಯ, ಆದಿತಯ್ಯ. ಇಲ್ಲಿ ಸ್ವಾಗತಕ್ಕೆ ಸಿದ್ಧನಿದ್ದೇನೆ. ವರದಿ ಮುಟ್ಟಿಸು.

ಓಹೋ ಹೋ ಹೋ..ನಮಸ್ಕಾರವೋ ಅದು ಬಿಡಯ್ಯ, ನೀನ್ ಕೊಟ್ರೆಷ್ಟು? ನಾನ್ ತಕ್ಕೊಂಡ್ರೆಷ್ಟು? ಅಲ್ವೋ? ಬಾ, ಕುಳಿತುಕೋ, ಇದೀಗ ಯಾರ ಸ್ಥಾನ, ಯಾರ ಮಾನ ಅಂತ ಇತ್ಯರ್ಥ ಆಗ್ಬೇಕಿದ್ರೆ ಬಹಳ ಕಷ್ಟ. ಎಲ್ಲವೂ ನಮ್ಮದೇ ನಮ್ಮದೂ ನಿಮ್ಮದೇ ನಿಮ್ಮದೂ ನಮ್ಮದೇ. ಹೌದಲ್ಲ? ಆದ್ದರಿಂದ ಈ ಪ್ರದೇಶ ಯಾರದ್ದು? ಈಗ ನಮ್ಮದು; ಈಗ ಸಮಷ್ಟಿಯಲ್ಲಿ. ಆದ್ದರಿಂದ, ನಾನಿರುವುದರಿಂದ ಇದಕ್ಕೆ ಅರಮನೆ ಅಂತ ಹೆಸ್ರು. ಅಲ್ಲೊ? ಮತ್ತೊಂದುಂಟು ಕೌರವೇಶ್ವರಾ, ನಿಜವಾದ ರಾಜರು, ಯೋಗ್ಯತೆ ಇದ್ದವರು ಅವು ಎಲ್ಲಿದ್ದೂ ರಾಜರೇ, ನಿನ್ನ ಹಾಗೆ ಅಲ್ಲೊ? ಆದಕಾರಣ, ನಾವೂ ಅಷ್ಟೇ, ಎಲ್ಲಿದ್ರೂ ರಾಜರೇ.

ಛೇ... ಅಥವಾ ನಿನ್ನಂಥವರು ಬಂದ್ರೆ, ಅದೂ ನನ್ನಂಥವರು ಒಂದ್ ಕಡೆ ಕುಳಿತರೆ ಅದನ್ನು ಬಿಡಾರ ಅಂತ ಹೇಳ್ಯಾರೊ? ಹೇಳಿದರೆ ಅವರಿರೋದು ಎಲ್ಲಾದೀತು ಮತ್ತೆ? ಅವರೆಲ್ಲ ಇರೋದು ಬಿಡಾರದಲ್ಲಿ. ನಾವೆಲ್ಲ ದೊಡ್ಡಸ್ತಿಕೆಯಲ್ಲಿರೋರು ಆ.. ಬಂದ್ಯಲ್ಲ? ಕುಳಿತೆಯಲ್ಲ? ರಾತ್ರಿ ಬಹಳ ಆಗ್ಯದೆ, ಏನಾದ್ರೂ ಬೇಕಾದೀತೆ? ಆ... ಆಗಿ ಮುಗಿದ ಹೊತ್ತು. ಅಲ್ಲಲ್ಲ... ನನಗೆ ರಾತ್ರಿಯದೆಲ್ಲ ಎಲ್ಲವೂ ಆಗ್ಯದೆ. ನೀನು ಪಾಪ, ಎಲ್ಲ ಮುಗಿಸಿ ಹೊರಟಿದ್ಯೋ? ಅಲ್ಲ, ಮಾವನಲ್ಲಿ ಹೋಗಿ ಅಲ್ಲಿ ನೋಡೋಣ... ಅಂತ? ಹೌದಲ್ಲ? ಆದೀತು. ಅಂತೂ ಏನ್ ಬೇಕು ಕೇಳುವ ಹಕ್ಕು ನಿನ್ಗಿದೆ. ನಮ್ಮಲ್ಲಿ ಏನುಂಟು? ಕೊಡುವ ಹಕ್ಕು ನಮ್ಗೆ.

ಏನು ವಿಶೇಷ? ಹೌದು ನಾನು ಮಹಾವೀರನೇ, ಮೊದಲಿನ ಕಥೆ ಅದು. ಆದರೆ ಗುಟ್ ಹೇಳ್‌ಲೋ? ಏನಾದರೂ ಮಾಡಿ ಬಂದ ಹೆಸ್ರಲ್ಲ ಅದು. ಈ ಕೆಲವರಿಗೆಲ್ಲ ಎಲ್ಲಿ ಏನ್ ಮಾಡಿದ್ದಾರೆ - ಅವಿಗೇ ಗೊತ್ತಿಲ್ಲ. ಆದರೆ ಮಹಾವೀರರು!! ಬಹಳ ಎತ್ತರದವರು. ಅದೊಂದು ದೊಡ್ಡಸ್ತಿಕೆಯೇ ಹೌದು ದೊಡ್ಡವರಿಗೇ ದೊಡ್ಡವರ ಗುಟ್ಟು ಗೊತ್ತಾಗೋದು... ಈ ಪ್ರಾಯಕ್ಕೂ ನಾನ್ ಹೇಗಿದ್ದೇನೆ?... ಹ್ಞ.. ಹೌದು ಹೀಗಾಗ್ತದೆ. ನಿನ್ನನ್ನು ನೋಡಿದರೆ ಗೊತ್ತಾಗ್ತದೆ ಮುಖ ಎಲ್ಲ ಬಾಡಿ ಹೋಗ್ಯದೆ!! ಅದಲ್ಲದಿದ್ದರೆ ಈ ರಾತ್ರಿ ಹೊತ್ತಿಗೆ, ನನ್ಗ ಗೊತ್ತಿಲ್ವೊ ಕೌರವೇಶ್ವರಾ, ಕೆಲವು ಸಲ ನಿನ್ನಲ್ಲಿ ಬಂದು ಕರದ್ರೆ ಬರುವ ಜನ ಅಲ್ಲ ನೀನು, ಇಹೊತ್ತು ಹೀಗಾಗಿ ಹೊಗ್ಯದೆ!! ಅಲ್ವೊ? ಈಹೊತ್ತು ನೀನಾಗಿ ಬಂದೆ ನೋಡು.

ವೋ... ಅಕೋ... ಅಕೋ... ನಮ್ಮದೂ ಸ್ವಲ್ಪ ಹೋಗ್ಯದೆ, ಈ ಹೊತ್ತಿನ ಯುದ್ಧದಲ್ಲಿ. ನಮ್ಮು ಅಂದ್ರೆ ಹಸ್ತಿನಾವತಿಯದ್ದಲ್ಲ. ನಮ್ಮೊಟ್ಟಿಗೆ ಬಂದದ್ದು. ವೈಯಕ್ತಿಕವಾಗಿ ನನ್ನದೂ ಹೋಯ್ತು, ಅಂದ್ರೆ ನನ್ನದು ಬೇರೆ ಅಂತಲ್ಲ; ಒಟ್ಟಿಗೆ ಹೋದದ್ದೆ, ಅಂದ್ರೆ ಹೋದದ್ದು ಮರ್ಯಾದೆ ಅಲ್ಲ; ನಮ್ಮ ಜನ. ಅಂದೊಂದು ಉಳದೆ. ಕೆಲವರಿಗೆ ಹಾಗಲ್ಲ, ಜನ ಉಳ್ದಿರ್ತದೆ... ಹೋಗಿರ್ತದೆ!! ಈಗ ನೋಡು, ಯುದ್ಧದಲ್ಲಿ ಅತಿರಥ, ಮಹಾರಥ ಎಲ್ಲ ಹೋಗಿದ್ದಾರೆ ಅಲ್ವೆ? ಯುದ್ಧ ಪ್ರಾರಂಭದಲ್ಲೇ ನಮ್ಮಲ್ಲಿ, 'ಯಾರು ಸೇನೆಗೆ ಅಧಿಪರು?' ಪ್ರಶ್ನೆ ಬಂದದೆ. ನಾವೆಲ್ಲ ಆ ಸರದಿಗೆ ಕಾದವರೇ ಅಲ್ಲ. ನಿನ್ನ ಗೊತ್ತುಂಟಲ್ಲ? ನೀನೇ ಹೇಳಿದಂತೆ ದ್ರೋಣಾಚಾರ್ಯರಲ್ಲಿ, “ತಾವು ಭವಾನ್ ಭೀಷ್ಮಶ್ಚ, ಕೃಪಶ್ಚ” ಮತ್ಯಾರೋ; ನಾವೆಲ್ಲ ಇದ್ದೇವಲ್ಲ. ಒಟ್ಟಿನ ಮೇಲೆ ಇರಾದೆ. “ಅನ್ಯಾಶ್ಚ ಬಹವ: ಶೂರಾಃ”. ಹಾಗಾದರೆ ಅಷ್ಟುದೊಡ್ಡ ಹೊರೆ, ಮಾವ ನೀವೆಲ್ಲ ಇದ್ರಲ್ಲ ಅಂತ ಹೇಳೋದು ಸರಿಯೊ? ಅವರನ್ನು ಕೇಳೋಕು - “ಯಾಕೆ, ನೀವೆಲ್ಲ ಇದ್ ಹೀಗಾಯ್ತು” ಅಂತ.

ನನ್ಗೆ ಇಲ್ಲಿ ನೋವಿದ್ರೆ, ನಿನ್ನ ಪಕ್ಷದಲ್ಲಿ ನನಗೆ ಅಭಿಪ್ರಾಯ ವ್ಯತ್ಯಾಸ ಇದ್ರೆ, ಈಗಿಂದೀಗ ಪಕ್ಷ ಬಿಟ್ಟೆ, ಹೊರಟೆ ಅಂತಂದ್ರೆ ತಡೀತೀಯಾ? ಆ ಪಕ್ಷ ನಾಶಾಗ್ನಲ್ಲಿವರೆಗೂ, ಇವ ಇಲ್ಲಿ ಸಕ್ರೀಯ ಸದಸನ್ಯಾಗಿ ಇದ್ದಾನೆ. ಯಾರು ನಮ್ಮ ನಿಕಟವರ್ತಿಗಳಾಗಿದ್ದಾರೆ, ಅವರನ್ನೆಲ್ಲ ಮೊದಲ ಪಂಕ್ತಿಯ ಊಟಕ್ಕೆ ಏಳಿ ಅಂತ ಹೇಳ್ತೇವೋ ನಾವು? 'ಸಾರ್ವಜನಿಕರು, ಎಲ್ಲ ಏಳಿ” ಯಾಕೆ? ಅವರೂ ಊಟಕ್ಕೆ ಬಂದವರು. ಕೈತೊಳ್ಕೊಂಡು ಅಲ್ಲೇ ಹೋಗ್ತಾರೆ. ನಮಗೆ ನಿಕಟವರ್ತಿಗಳಾಗಿದ್ದವರು ಇಹೊತ್ತು ಊಟ ಬೇಡ, ನಾಳೆ ಮಾಡ್ಡ, ಅಲ್ಲ, ಹೇಳಿದ್ದು ನಾನು. ಆಮಟ್ಟಿಗೆ ನಾವಿಲ್ವೊ?

ನಾನಿದ್ದು ಹಾಗಾಯ್ತು ಅಂತಲ್ಲವೇ? ಅದಕ್ಕೆ ಕಾರಣ, ಸೇನಾಪತಿಯ ಹತ್ತಿರ ಕೇಳ್ಬೇಕು. ಯಾಕೆ ಅಂತಂದ್ರೆ, ನಾವೆಲ್ಲ ಪಕ್ಷಕ್ಕೆ ನಿಷ್ಠರು. ನಮ್ಮ ನಾಯಕ ಪೀಠಕ್ಕೆ ನಿಷ್ಠರು. ನಮ್ಮ ಎಲ್ಲಾ ಉದ್ಯೋಗ ಹೇಗೆ? ಅಂತಂದ್ರೆ ನಮ್ಮ ನಾಯಕನ ಕೈ ಗಟ್ಟಿ ಮಾಡೋದಷ್ಟೆ. ಹಾಗಾದರೆ ಮೊದಲೇ ವಶ ಇಲ್ಲದ ಕೈಗೆ ಮತ್ತೆ ನಾವಿದ್ದು ಏನ್ ಮಾಡೋದು? ಮೊದ್ಲು ನಾನಿದ್ದದ್

ಅದ್ರೆ, ನಿನಗೂ ಅಷ್ಟೇ ವಿಶ್ವಾಸ. ಈ ಅದ್ ಮಾತ್ರ ಅಲ್ಲ, ಅಂದಿನಿಂದ ನನಗೆ ಹಾಗೇ ಇತ್ತು ಅಯ್ಯೋ ಈ ಸುಯೋಧನ ಏಳ್‌ಲಿಕ್ಕೆ ಕೂಡದಿದ್ದ ಮುದುಕರಿಗೆಲ್ಲ ಸೇನಾಧಿಪತ್ಯ ಕೊಟ್ಟು, ನಾವಿದ್ದೇವೆ ಅಂತ ಕಾದಿರಿಸಿದನಲ್ಲ! ಕರ್ಣ ಹೌದು, ಮೊದಲ ದಿನವೇ, ಅವನಿಗೆ ಸೇನಾಧಿಪತ್ಯವನ್ನು ಕೊಡ್ಬೇಕಿತ್ತು. ಯಾಕೆ? ಇಷ್ಟು ತಡ ಆಗ್ತಿರ್ಲಿಲ್ಲ ಇತ್ಯರ್ಥಕ್ಕೆ.

(ಅರ್ಜುನನಿಗೆ ಕೃಷ್ಣ ಸಾರಥ್ಯವಿದ್ದ ಕಾರಣ ಹೀಗಾಯ್ತು

ಎಂದು ಕೌರವ ಹೇಳುತ್ತಾನೆ)

ಆದ್ರೆ ಕೃಷ್ಣ ಸಾರಥ್ಯ ಮಾಡಿದ್ದು, ಅರ್ಜುನ ಮೂರುಲೋಕದ ಗಂಡನಾದದ್ದರಿಂದಲ್ವೊ? ಇಲ್ಲದಿದ್ರೆ ಅವ ಧರ್ಮರಾಯನ ರಥದಲ್ಲಿ ಕೂತು ಕೊಳ್ಳಿರಲಿಲ್ವೊ? ಅಲ್ಲಲ್ಲ, ಶ್ರೀ ಕೃಷ್ಣನಿಗೂ ಭದ್ರತೆ ಬೇಕಾಯ್ತು. ಯಾಕೆ? "ಅಯುಧ್ಯಮಾನ ಸಂಗ್ರಾಮಮೇನ್ಯಸ್ತಶಸ್ತ್ರೋಹ ಮೇಕತಾ" ಅಂತ ಹೇಳಿದ್ದಲ್ವೊ? ಆದ್ದರಿಂದ ನನ್ನನ್ನು ಕೇಳಿದರೆ, ನೀವೆಲ್ಲ, ದೊಡ್ಡವ ಹಾಗೆ ಹೀಗೆ ಅಂತ ಹೇಳ್ತೀರಿ ಕೃಷ್ಣನನ್ನು, ಅಲ್ಲ ಅಂತ ನಾನು ಅಲ್ಲಗಳೆಯೋದಿಲ್ಲ. ಯಾಕೆ ಅರ್ಜುನನ ರಥದಲ್ಲೇಕೇ ಅವ ಕುಳಿತ? ನಾಲ್ಕು ಪೆಟ್ಟು ಕಡಿಮೆ ಆದೀತು ಅರ್ಜುನನ ರಥದ ಮೇಲೆ ಕೂತರೆ ಅಂತ.

ನಾನು ಉದಾಹರಣೆ ಹೇಳ್ತೇನೆ. ಆ ಭೀಷ್ಮ... ನಮ್ಮ ಹಿರಿಯರು.. ಕೈತಪ್ಪಿಯೋ, ಗುರಿತಪ್ಪಿಯೋ, ಅಲ್ಲ ದೃಷ್ಟಿತಪ್ಪಿಯೋ. ಕೃಷ್ಣನ ನೆತ್ತಿಗೆ ಬಾಣ ಹೊಡೆದಾವಾಗ, ಅಲ್ವೆ? ಕೃಷ್ಣ ನೆಲಕ್ಕೆ ಹಾರಿದ... ಚಕ್ರ ಹಿಡಿದ! ಅರ್ಜುನ ಹೋಗಿ ಕಾಲುಕಟ್ಟಿ ಬೇಡಿದ – ದಮ್ಮಯ್ಯ ಅಂತ. ಛೇ, ನಿಮ್ಮಂಥವರನ್ನು ನಂಬಿ ಸಾರಥ್ಯಕ್ಕೆ ಬಂದರೆ ಯಾರಾರ ಹೆಂಡಂದಿರಿಗೆ ಗಂಡದಿರಿಲ್ಲಾ ಅಂತ – ಆದೀತು" ಅಂತ ಕೃಷ್ಣ ಅಂದ. ಆವಾಗ ನನ್ನೆ ಈ ಗುಟ್ಟು ಸಿಕ್ಕಿದ್ದು. ಅವನೂ ಕೂಡ ಇಲ್ಲಿ ಕೂತರೆ ಸ್ವಲ್ಪ ಕಾಲ ಬಾಳಬಹುದು... ಮೊದಲೇ ಶರ್ತ ಹಾಕಿದ್ದಾನೆ ನನ್ನ ಮೇಲೆ ಯಾರೂ ಕೈ ಹಾಕಬಾರು ಅಂತ. ಹಾಗೆ ಅವನೂ ಒಂದು ಸುಭದ್ರ ಸ್ಥಾನವನ್ನು ಇಡ್ಕೊಂಡದಲ್ವೊ? ಅರ್ಜುನನ... ನೀನ್ ಆಲೋಚನೆ ಮಾಡು, ನನ್ನ ದೃಷ್ಟಿಯಲ್ಲಿ ಅರ್ಜುನ ಬರೇ ದುರ್ಬಲನಾದದ್ದಕ್ಕೆ ಕೃಷ್ಣ ಕೂತಿದ್ದಾನೆ ಅಂತ ಇಲ್ಲ ಯೋಧ ನ್ಯಾಯ ಅದು, ಅರ್ಜುನನೂ ಅಂತಹ ಅರ್ಹತೆಯಿದ್ದವನಾದ್ದರಿಂದ..

ಒಬ್ಬ ಆರೋಗ್ಯ ಇದ್ದವ, ಎರಡು ಜನನ್ನು ಬಿದ್ರೂ, ಹೊರ್ಲಿಕ್ಕೆ ತ್ರಾಣ ಇದ್ದವ ಸಿಕ್ಕಿದ್ರೆ... ಹ್ಞ ನಮ್ಮ ಇವನನ್ನು ಯಾರು ನಡೆಸ್ತಹುದು ಅಂತ ಹೇಳಿದ ಹಾಗೆ ಆಗ್ತದೆ ಅದು ಅಲ್ವ? ಕರ್ಣನಿಗೊಬ್ಬ... ಸಾರಥಿ!! ಹ್ಞ .. ಅಷ್ಟು ದಾರಿದ್ರ ಬಂತೋ ನಮ್ಮ ಪಕ್ಷದಲ್ಲಿ? ಯಾಕೆ ಕೇಳಿದೆ ನಾನು? ಸೂತ ತನ ಮಾಡ್ವವರಿಲ್ವೊ ಇಲ್ಲಿ? ನಿನ್ಗೊಂದ್ ಗುಟ್ ಹೇಳ್ತೇನೆ, ನಮ್ಮಲ್ಲಿರೋದು ಭೂರಿ ಸಂಖ್ಯೆಯಲ್ಲಿ ಅದೇ ಜಾತಿಯವರು. ಶುದ್ಧ ಅನ್ನೋದು ನೀವು ಕೆಲವರು, ಮತ್ತೆ ನಾವು ಹೌದಲ್ಲ? ಹಸ್ತಿನಾವತಿಯಲ್ಲಿ ಆವೊಂದು ವರ್ಗಕ್ಕೆ ಕಡಿಮೆ

ಉಂಟೋ ಪುಣ್ಯಾತ್ಮಾ? ಸಾರಥಿ ಸಿಕ್ಲಿಲ್ವೊ? ಏನು, ಈಗೀಗ ನಿನ್ನ ನಾಯಕತ್ವವೂ ಶಿಥಿಲ ಆಗ್ಯದೊ ಹೇಗೆ? ಅಂದ್ರೆ ನೀನ್ ಹೇಳಿದ ಹಾಗೆ ಯಾರೂ ಕೇಳೋದಿಲ್ವೊ

ಹ್ಯಾಗೆ? ಇಷ್ಟು ಸಣ್ಣ ಉದ್ಯೋಗಕ್ಕೂ ಮೌಲ್ಯಮಾಪನವೊ? ಒಬ್ಬ ಸರಿಯಾದ ಸಾರಥಿ ಅಲ್ವೊ? ಸಂದೇಹದಿಂದ ಕೇಳೋದು. ನಾವು ಕೇಳಿದ್ದೇವೆ. ಆ ವಿರಾಟನಗರದಲ್ಲಿ ಆಹೊತ್ತು, ನೀವು ಗೋಗ್ರಹಣ ಮಾಡಿದಾವಾಗ್ಗ , ಅಲ್ಲಿ ಅರಗುವರನಿಗೆ ಸರಿಯಾದ ಸಾರಥಿ ಒಬ್ಬ ಸಿಕ್ಕಿದ್ದರಿಂದ ಜಯದ ಮಾಲೆ ಅವನ ಕುತ್ತಿಗೆಗೆ ಬಿದ್ದದಂತೆ. ಹಾಗೆಯೋ ಇದು ಹೇಗೆ? ನಿನ್ನ ಕರ್ಣ ಹಾಗಲ್ಲಲ್ಲ? ಇದು ನೀನೆ ಮಾತಾಡೋದಲ್ಲ?

ಸುಯೋಧನಾ... ನೀನೇ ಮಾತಾಡೋದಲ್ವ ಅಂತ ನಾನ್ ಕೇಳಿದ ಅದ್ಕೆ, ಏನಾದರೂ ಎಚ್ಚರ ತಪ್ಲಿಲ್ಲಲ್ಲ? ಯಾರಿಗೆ ಯಾರು ಸೂತ? ನಿನ್ನ ಕರ್ಣ... ಅವನಿಗೆ ಶಲ್ಯ ಭೂಪತಿಯಿಂದ... ಏನ್ ಮಾಡ್ಲಿಕ್ ಹೋಗ್ತಿ? ಮಹಾರಥಿ ಅಂತ ಮುರ್ಧಾಭಿಷೇಕ... ಆಚಾರ್ಯ ಭೀಷ್ಮರೇ ಹೇಳಿದ್ದಾರೆ ಅವ ಅರ್ಧರಥಿ ಅಂತ. ದ್ರೋಣರೇನಾದ್ರೂ ನನ್ನ ಶಿಷ್ಯ ಅಂತ ಒಪ್ಪಿಕೊಳ್ಳಿಲ್ಲ ಅಮ್ಮನ್ನ? ನಿನ್ನೊಂದು ಮಾತ್ರ ಹೇಳಲೊ? ಸುಯೋಧನ, ನಿನ್ಗಿಷ್ಟು ಹಟ ಯಾಕೆ?

ನರಿಯನ್ನು ತಕ್ಕೊಂಡು ಬಂದು, ಮೈಸುಟ್ಟು... ಅದರ ಮುಖಕ್ಕೆ ಹುಲಿಯ ಮುಖವಾಡ ಇಟ್ಟು... ಇದು ಹೆಬ್ಬುಲಿ ನೋಡಿ!! ನಿನ್ಗೆ ನಿಜವಾದ ಹೆಬ್ಬುಲಿಗಳೆಲ್ಲ ಗೋಚರಿಸುವುದಿಲ್ಲ ಅಲ್ವೊ? ಯ್ಯೇ... ಹೇಳಿದ್ದೇನ್ ನೀನು? ನಾನ್ ಏನ್ ಮಾಡ್ಬೇಕಂತ? ಯೇನೊ? ಯೇನು? ನಿನಗಾಗಿ ನಾವು ಏನಾದರೂ ಮಾಡುವುದಕ್ಕಿದವರೆ? ಅಥವಾ ಯೇನಕ್ಕೇನ್ ಮಾಡ್ಲಿಕ್ಕಿದ್ದವರೊ?

ಇಕೋ... ಮತ್ತೊಮ್ಮೆ ಮಾತನಾಡಿದರೆ, ನಾನ್ ಹೇಳ್ಯೇನು... ಸಂಕಲೆ ತಕೊಳ್ಳಿ, ಕಟ್ಟಿ ಹಾಕಿ ಅಂತ. ಅರ್ಥ ಬೇರಾದೀತು. ಯಾಕೆ? ಇದು ಅದರ ಶಬ್ದ, ರಾಜನಾದವನು ಆಡಲೇ ಬಾರದು. ಏನಯ್ಯ ನಿನ್ನಲ್ಲಿ ಮನುಷ್ಯತ್ವವೇ ಇಲ್ಲವೋ ಹೇಗೆ? ಹಾಗಾದರೆ ಇಲ್ಲಿಗೆ ಬಂದು ನಾನು ಅಷ್ಟು ಅಲ್ಪನಾಗಿ ಹೋದನೊ?

ಸುಯೋಧನಾ, ಅವನಿಗೆ ನಾನು ಸಾರಥ್ಯ ಮಾಡ್ಬೇಕು ಅಂತ ಹೇಳಿದೆ. ಬೇರೆ ಹೇಳ್ತಿದ್ರೆ ನನಗೆ ಬೇಸರ ಇಲ್ಲ. ಕರ್ಣನ ಸೇನಾಧಿಪತ್ಯದಲ್ಲಿ ಎಲ್ಲ ಸೋತು ಹೋಯ್ತು ಮಾವ, ನನಗಾಗಿ ನೀವು ಸಕ್ರೀಯವಾಗಿ ದುಡೀಬೇಕು ಅಂತ ಹೇಳ್ತಿದ್ರೆ ಒಂದೋ ಯುದ್ಧದಲ್ಲಿ ಗೆಲ್ತಿದ್ದೆ. ಇಲ್ಲದಿದ್ರೆ ಸಾಯ್ತಿದ್ದೆ. ಇಷ್ಟು ಹೇಳಲಿಕ್ಕೆ ನಿನ್ನ ನಾಲಿಗೆ ತಿರ್‌ಗ್ಲಿಲ್ಲ. ಎಲ್ಲವರೂ ಸೇರಿ ನಿನ್ನ ಕರ್ಣನನ್ನು ದೊಡ್ಡು ಮಾಡ್ಲಿಕ್ಕೆ, ಒಂದು ಬುದ್ಧಿವಂತಿಕೆ ಮಾಡಿದ್ಯಲ್ಲ. ಅವ ಶಿಖಂಡಿಯಾಗಿದ್ರೂ ಮೂರುಲೋಕದ ಗಂಡನಾಗಿ ಭೂಮಿಂಜಯನಾದಂತಹ ಉತ್ತರ

ಕುಮಾರನನ್ನ ಏನು ಮಾಡಿದ? ಅವ ಛಳಿ ಬಿಡಿಸಿ ಅವನನ್ನು ಮಹಾರಥಿಯನ್ನಾಗಿಸಿದ. ಯಾಕೆ? ಅವ ರಾಜಕುಮಾರ, ಅವನಲ್ಲಿ ಸುಪ್ತವಾಗಿತ್ತು ಅದು.

ಆದಕಾರಣವೇ ಅರ್ಜುನ ಸಾರಥ್ಯಕ್ಕೆ ಒಪ್ಪಿದ್ದು ಅದು ನಾಳೆಗೆ ಇವ ಆದಾನು ಅಂತ. ಸಂದರ್ಭ ಬಂದ್ರೆ ನೀನ್ ಹೀಗೆ ಹೇಳಬೇಕಾಗಿದೆ. ಅವ ಹೇಳಿ ಕೊಟ್ಟಿದ್ದೂ, ಅಲ್ಲ ನೀನಾಗಿ ಗ್ರಹಿಸಿದ್ದೂ? ನಾನು ಏನಂತ ಮಾಡಿ, ಸಾರಥ್ಯ ಮಾಡ್ಲಿಕ್ಕೆ? ನಾಚಿಕೆ, ಮಾನ, ಮರ್ಯಾದೆ ಎಲ್ಲ ಬಿಟ್ಟವರಿಗೆ ಮತ್ತೊಬ್ಬರ ಕುರಿತಾಗಿ ಮರ್ಯಾದೆ ಕೊಡ್ಬೇಕು ಅಂತ ಗೊತ್ತಾಗುವುದಿಲ್ಲ. ಅವರವರ ಕಾರ್ಯವನ್ನೇ ಸಾಧಿಸಿಕೊಂಡ್ರಾಯ್ತು. ಏನೋ, ಯಾರ್‍ಯಾರ ಯಾರ್‍ಯಾರ ಸಮಾಧಿಯಮೇಲೆ ಅರಮನೆ ಕಟ್ಟಿ ಒಡೋಲಗ ಮಾಡ್ಲಿಕ್ಕೆ ಹೊರಟಿದ್ದ್ಯೇನೊ ಕೆಟ್ಟ ಹುಡ್ಗ? ನೀನು ಊರಿಗೆ ದೊರೆ ಇರ್ಬಹುದು. ನಾವೇನು ನಿಮ್ಮ ಮನೆಗೆ ಭಿಕ್ಷಾನ್ನಕ್ಕೆ ಬಂದವರೋ? ಈ ಹೊತ್ತಿಗೂ ನಮ್ಮ ಸಿಂಹಾಸನ ಯಾರಿಗೆ ಎಂಬ ಪ್ರಶ್ನೆ ಇಲ್ಲ. ಇದೆಲ್ಲ ನಿಮ್ಮ ಕಾಲಕ್ಕಾದ್ದು. ನಮ್ಮ ಊರಲ್ಲಿ ಪ್ರಜೆಗಳನ್ನು ಹೇಗೆ ಆಳ್ಬೇಕು ಅಂತ ಮಾತ್ರ ಆಲೋಚನೆ ಇರೋದು. ನಿಮ್ಮ ಕಾಲಕ್ಕಾಗ್ವಾಗ ಯಾರ್ ಆಳ್ಬೇಕು ಎಂಬ ಸಮಸ್ಯೆ ಬಂದದೆ. ಮತ್ತಲ್ವೆ ಪ್ರಜೆಗಳನ್ನು ಅಳೂದು ಹೇಗೆ ಅಂತ? ಆಳ್ವವನೇ ಯಾರು ಅಂತ ನಿರ್ಣಯ ಇಲ್ಲ!

ಇವ ಒಂದ್ ಹೇಳ್ತಾನೆ. ಕರ್ಣ ಎಂಥವ!! ಯೆಂಥವ!!! ಯೆಂಥವ? ಅವ ಒಬ್ನೆ ಗಂಡುಸಂತೆ! ಓಹ್ ಉಂಟೊ? ಹಾಗಾದರೆ ಇವ್ನಿಗೆ ಏನೂ ಬೆಲೆಯಿಲ್ಲದಂಥ ಒಂದು, ಹ್ಹಹ್ಹ , ಕನ್ನಡಿ ಚೂರು. ಇದಕ್ಕೆ ಎಷ್ಟು ಬೆಲೆ ಗೊತ್ತುಂಟೊ? ಹೌದೇನೊ? ಈ ದೊಡ್ಡವ ಹಾಕಿಕೊಂಡ, ಬೀದಿಯಲ್ಲಿ ಹೆಕ್ಲಿಕ್ಕೆ ಸಿಕ್ಕುವ ಹರಳಿನ ಉಂಗುರ ಅಲ್ವೆ ಅದು? ಹಾಕಿಕೊಂಡವು ದೊಡ್ಡವನು. ಆವಾಗ್ಗ ಬಾಕಿಯಿದ್ದವರು ಹೇಳ್ತಾರೆ, ಎಷ್ಟು ತೂಕ ಉಂಟು ಗೊತ್ತುಂಟೊ? ಎಷ್ಟು ಬೆಲೆ ಆದೀತದೆ, ಅದ್ ಹೇಗೆ ನೀವ್ ಹೇಳೋದು? “ಅವ್ರು ಹಾಕಿಕೊಂಡಿದ್ದಾರಲ್ಲ! ಹಾಗೆ, ನೀನ್ ದೊಡ್ಡವನಾಗಿದ್ದಕ್ಕೆ ನೀನ್ ಹಿಡ್ಕೊಂಡಿದ್ದರಿಂದ ಕರ್ಣನಿಗೆ ಸೂತನ ಮಗನಾಗಿಯೂ ಸೂತತನ ಗೊತ್ತಿಲ್ಲ, ಅಂಥವನಿಗೆ ಮಹಾರಥಿ ಕರ್ಣ ಅಂತ ಮಾಡಿಸ್ತಿ!! ಮಾಡು. ನಿನಗೆ ಅದೆಲ್ಲ ಒಗ್ತಿದೆ. ನಾವು ಇಷ್ಟಕ್ಕೆ ಇದ್ದವರು ಅಂತ ಮಾಡಿದ್ಯಲ್ಲ? ಹದಿನಾ ದಿನ ಕಳೀತು ನಾವಿಲ್ಲಿ ಬಂದು ಅಲ್ಲೊ? ನಮ್ಮ ಈ ಹದಿನಾರರ ಲೆಕ್ಕ ಇವ ಮಾಡಿದ್ ಹೀಗೆ, ನಿನಗೇನಾದ್ರೂ ಪೂರ್ವ ದ್ವೇಷ ಇತ್ತೊ ನನ್ನತ್ರ ? ಶಲ್ಯ ಭೂಪತಿಯನ್ನು ಹೀಗೆ ಇಟ್ಕೊಂಡು ಆತಿಥ್ಯವನ್ನೆಲ್ಲ ಮಾಡಿ, ಹದಿನಾರ್ ದಿನ ಕಳಿದರೆ, ಹದಿನೇಳನೇ ದಿವಸಕ್ಕೆ ಹಬ್ಬ ಮಾಡ್ತ ಅಂತ?

ಅಹ್... ಅಲ್ಲಲ್ಲ, ಯಾಕೆ ಹಾಗೆ ಕೇಳಿದೆ? ಸೂತಸುತನಿವ, ನಿನ್ನಲ್ಲಿ ಮತ್ತೊಬ್ಬನ ಔದಾರ್ಯ ಪ್ರಕಟಣೆಗೆ ಮೌಲ್ಯ ಇಲ್ಲ ಅಂತ ಗೊತ್ತಾಯ್ತು, ನೀನ್ ತಿಳ್ಕೊಂಡಿದ್ಯಪ್ಪ ಇವರೆಲ್ಲ ನಾನ್ ಹೇಳಿದ ಹಾಗೆ ನನಗಾಗಿ ದುಡೀಲಿಕ್ಕಿದ್ದವರು ಅಂತ. ಶಲ್ಯ ಭೂಪತಿಯೂ ಅಷ್ಟಕ್ಕೇ ಇಲ್ಲಿರೋದೋ? ಅವನ ಸೇನಾಧಿಪತ್ಯದಲ್ಲಿ ಹಿಂದೆ ಹೋಗಿ ಆಳಾಗಿ ದುಡ್ಡಿದ್ದೇನೆ

ಗೊತ್ತುಂಟೋ ನಿನ್ಗೆ? ಯಾಕೆ?... ಶಿಸ್ತು.. ಶಿಸ್ತು... ಅಲ್ಲ ನಿಮ್ಗೆಲ್ಲ ಇಲ್ಲ ಅದು. ಆದ್ರೆ ಹಿರಿಯ ಸ್ಥಾನದಲ್ಲಿ ಕುಳಿತ್ಕೊಂಡು ಶಿಸ್ತು ಬದ್ಧರಾಗಿ ಇರ್ಬೇಕು ಅಂತ, ಬಾಕಿದ್ದವರಿಗೆ ಉಪನ್ಯಾಸ ಮಾಡ್ಲಿಕ್ಕೆ ಕಲ್ತದ್ದು. ನನಗೆ ವೈಯಕ್ತಿಕವಾದ ಶಿಸ್ತು. ಬಂದಿದ್ದೇನಪ್ಪ – ತನು, ಮನ, ಧನಗಳಿಂದ ದುಡೋದೊಂದೇ ನಾನ್ ಕಲ್ತದ್ದು, ಯತಾರ್ಥಕ್ಕಾದರೆ ನನ್ನ ತಂಗಿಯ ಮಕ್ಕಳು ಅವ್ರಲ್ವೇ - ನಕುಲ ಸಹದೇವರು? ನಾನು ಅಲ್ಲಿಗೆ ಹೋಗ್ಬೇಕಾದವ ಅಲ್ವೆ? ಅಲ್ಲಿಗೆ ಹೋಗ್ಬೇಕಾದವ, ನೀನು ಕುದ್ರೆಗಳಿಗೆ ಕೊಟ್ಟ ಹುಲ್ಲಿಗೆ ಬೇಕಾಗಿ ನಾ ಇಲ್ಲಿಗೆ ಬಂದು ಹುಲ್ಲಿಗೂ ಸಮ ಅಲ್ಲ ಇವ ಅಂತಾಗಿ ಬಿಟ್ನಲ್ಲ ನಾನು!! ಯೆಂಥಹ ಧೂರ್ತ ರಾಜಕಾರಣಿ ನೀನ್ ನೋಡು. ದಾರಿಯಲ್ಲಿ ಸೌಕರ್ಯ ಒದಗಿಸಿದ್ದಕ್ಕೆ, ಒಪ್ಪತ್ತಿನ ಊಟ, ಒಪ್ಪತ್ತಿನ ಸ್ಥಾನ, ಕೊಟ್ಟಿದ್ದಕ್ಕೆ, ಏನಾಗ್ಬೇಕು? ಇದನ್ನು ಯಾ ಮಾಡಿದ್ದಾರೆ ಅವ್ರಿಗೆ ಸಂಪೂರ್ಣ ಸಹಾಯ ಅಂತ ನಾವು ಘೋಷಣೆ ಮಾಡಿ ಆಗ್ಯದೆ. ನಾವೊಂದು ಘೋಷಣೆ ಮಾಡಿದ ಮೇಲೆ ಮತ್ತೆ ಅದ್ಕೆ ತಿದ್ದುಪಡಿ ಮಾಡುವ ಜನ ಅಲ್ಲ. ಅಂದ್ರೆ ನಿಮ್ಗೆ ಬೆಳಿಗ್ಗೆ ಒಂದು, ಮಧ್ಯಾಹ್ನಕ್ಕೊಂದು ಕತ್ತಲೆಗೊಂದು ಮಾಡಿ ಮತ್ತೆ ಬಾಕಿ ಉಳಿಸೋದು ಪದ್ಧತಿ. ಈ ದುರ್ಬುದ್ಧಿಯನ್ನು ತಕ್ಕೊಂಡು ನನಲ್ಲಿ ಬಂದಿದ್ಯೋ? ಯಾಕ್ ನಾನ್ ದುಡೀಬೇಕಲ್ಲಿ? ಕರ್ಣನ ಸೇನಾಧಿಪತ್ಯದಲ್ಲಿ ಸಾಧಾರಣ ಕಾಲಾಳುವಾಗಿ ನಾನ್ಯಾಕೆ ದುಡೀಬೇಕು? ನನ್ನೆ ಬಿಡ್ದದೆ ಇವೊತ್ತಿನ ಯುದ್ಧದಲ್ಲಿ ನಾಲ್ಕು ಪೆಟ್ಟು, ಹೌದೋ? ನಾನಲ್ಲೇ ಕರ್ಣನಿಗೆ ಬಡಿಯೋಣ ಅಂತ ಯೋಚಿಸಿದ್ದೆ. ನಿಮ್ಮಂಥ ಏಳಲಿಕ್ಕೆ ಕೂಡದ ನಾಯಕ ನಮ್ಮಿದ್ರೆ ನಮ್ಮ ಊರವರ ನಾಲ್ಕು ಜನರಿಂದ ಇದಲ್ವೇ ಸಿಕ್ಕೋದು ಅಂತ. ಆದ್ರೂ ಬಹುಮಾನಿಸಿದ್ದೇನೆ ಯಾಕೊ ನೀನು ನಿಯಮಿಸಿದ್ದು, ನಿನ್ನಲ್ಲಿ ಬಂದು ಹೇಳೋ ನಾನು? ಇಕೋ, ಇಂಥಾ ಏಳಕ್ಕೆ ಕೂಡದವರಿಗೆಲ್ಲ ನಾಯಕ ಪಟ್ಟ ಕೊಟ್ಟು, ನಮ್ಮನ್ನೆಲ್ಲ ಸೂರೆ ಕೊಡೇಡ ಅಂತ ದೂರಿದೆನೊ? ಇವರೆಲ್ಲ ಇಷ್ಟಕ್ಕೇ ಇದ್ದವರು ಅಂತ ಮಾಡಿದೆ; ಅವನ ಸಾರಥ್ಯ ಮಾಡೋಕು ಅಂತ ಹೇಳಿದ್ಯಲ್ಲ? ಯೆಲಾ ಮತ್ತೊಮ್ಮೆ ಹೇಳೊ.

|| ಸೌರಾಷ್ಟ್ರ-ತ್ರಿವುಡೆ|| ಏನನುಸುರಿದೆ ಸೂತ ಜಾತಂ | ಗಾನು ಸಾರಥಿಯಾಗಬೇಕೆ ನಿ |

ಧಾನವೇ ಪೇಳೆಂದನುರು ದು | ಮ್ಮಾನದಿಂದಾ || ೧೬೫ |

ಕರ್ಣ ಯಾರು? ವೀರ ಇರ್ಬಹುದು. ಏನೂ ಕಲಿಯದೆ ದೊಡ್ಡ ವಿದ್ವಾಂಸ ಇರ್ಬಹುದು., ಅಂದ್ರೆ ಏನೂ ಕಲಿಯದವರ ಕೂಟದಲ್ಲಿ ದೊಡ್ಡ ವಿದ್ವಾಂಸ ಇರ್ಬಹುದು.. ಕೆಲವರ ಬಗ್ಗೆ ನಾವ್ ಹಾಗೆ ಹೇಳೂದುಂಟು. ಗುರು ಯಾ ಅವ್ನಿಗೆ? ಇಲ್ಲ. ತಾಯಿ ಯಾರು ಗೊತ್ತಿಲ್ಲ. ತಂದೆ ಯಾರು? ಯಾರಿಗ್ ಗೊತ್ತು! ಇಷ್ಟಿಲ್ಲಾದ್ರೂ ಇಷ್ಟಕ್ಕೆ ಬಂದಿದಾನಲ್ಲ; ಸಣ್ಣ ಮಗು ತನ್ನ ದೇಹದ ಭಾರದ ಬಂಡೆಕಲ್ಲು ಹೊತ್ತಹಾಗೆ! ಇಷ್ಟಕ್ಕೆ ಬೇಕಾದ್ರೆ ಕರ್ಣನಿಗೆ ಪ್ರಶಸ್ತಿ ಕೊಡ್ವ ಸೂತನವನು ನದಿಯಲ್ಲಿ ತೇಲಿಬಂದ ಮಗುವನ್ನು ಅವ ಸಾಕಿದ್ದು. ಯೇನು?

ಅವನನ್ನು ಮೇಲಕ್ಕೆತ್ತೂದಿದ್ರೆ ಕ್ರಮ ಹೀಗಲ್ಲ. ಈಗ ಇರಹುದು. ನಾನೂ ಕೂಡ ಅಷ್ಟುದೊಡ್ಡ ಜಾತಿವಾದಿ ಯೇನೂ ಅಲ್ಲ. ಆದ್ರೆ ಬಾಕಿಯಿದ್ದವರು ಜಾತಿ ಬೇಕು ಅಂತ ಹೇಳ್ವಲ್ಲಿವರೆಗೆ ನಮಗೆ ಬಿಟ್ಟುಬಿಡ್ಲಿಕ್ ಉಪಾಯ ಇಲ್ಲ. ಇಲ್ಲಿದ್ರೇನಾದೀತು? ನಾವು ಬಿಟ್ಟಿದ್ದು ಬಿಟ್ಟದ್ದೇ. ಬಿಟ್ರೆ ಸುಖ ಉಂಟೊ? ಇಲ್ಲಿ ಯಾರ್ ಯಾರು ಹೇಳ್ವವರಿದ್ರು ಅವರೆಲ್ಲ ಹೇಳಿದ್ ಆಯ್ತು. ಅಲ್ವೊ? ಭೀಷ್ಮಾಚಾರ್ಯರೂ ಅವನನ್ನು ಸೂತ ಪುತ್ರ ಅಂತ ಹೇಳಿದ್ರು, ದ್ರೋಣಾಚಾರ್ಯರೂ ಹೇಳಿದ್ರು ಅವನನ್ನು ಸೂತಪುತ್ರ ಅಂತ. ನಾವು ಮೊನ್ನೆ ಬಂದವು ನಮ್ಮ ಮತ್ತೆ ಹೊಸ ಹೆಸ್ರು ಎಲ್ಲಿಂದ?

ಹಾಗಾಗಿ ಇವರೆಲ್ಲರೂ ಸೂತ ಪುತ್ರ ಅಂತ ಹೇಳಿದ್ಮೇಲೆ ಅವನನ್ನೂ ಮೇಲಿದ್ದವರನ್ನು ಕೆಳ್ಗಿಳಿಸಿ ಅವನ ಸಮಾನಸ್ಕಂದತೆಗೆ ಕುಳ್ಳಿರಿಸುವ ಈ ನಿನ್ನ ಸಮತಾ ವಾದ ಬೇಡ, ಯೇನು? ನಾವು ಹೇಳಿಕೇಳಿ ಭೂವರರು.... ಆದ್ರೂ ತೋರಿಸಿದ್ದೇನೋ? ನಾವು ಭೂವರರು ಪೂರ್ಣಕುಂಭ ಸ್ವಾಗತ ಮಾಡೋಕು ಹೇಳಿದ್ದೆನೋ? ಭೂವರತ್ವ ನಮ್ಗಿದ್ರೂ ರಾಜದಂಡ ಹಿಡಿದಂಥಹ ಕೈಯಿಂದ, ಕರ್ಣನ ಸೇನಾಧಿಪತ್ಯದಲ್ಲಿ, ಅವನ ಆಜ್ಞೆಯಂತೆ "ಹೊಡೀ"; ಹೊಡ್ಡಿದ್ದೇನೆ. "ನಿಲ್ಲು", ನಿಲ್ಲಿಸಿದ್ದೇನೆ. ಇನ್ ಇದಕ್ಕಿಂತ ಕೆಳಗೆ ನಾವೆಲ್ಲ ಎಲ್ಲಿಗೆ ಹೋಗ್ಬೇಕು ಕೌರವ ನಿನ್ನ ಕರ್ಣನನ್ನು ಮೇಲಕ್ಕೇರಿಸಲಿಕ್ಕೆ ಬೇಕಾಗಿ? ಇಂಥಾ ಅಲ್ಪರನ್ನೆಲ್ಲ ಮೇಲಕ್ಕೇರಿಸಲಿಕ್ಕೆ ಬೇಕಾಗಿ ನಾವು ಪಾತಾಳಕ್ಕೆ ಇಳೀ ಬೇಕೋ? ಆದ ಕಾರಣ, ಇಷ್ಟೇ ಕೇಳಿ ಬಂದಿದ್ದೀ ಅಂತಾಂದ್ರೆ, ನೀನಾಗಿ ಹೋಗ್ತಿಯೋ ಅಥವಾ ನಾನಾಗಿ ಹೋಗಿಮಲಗಲೋ?

ಸುಯೋಧನಾ, "ಖತಿಯಿದೇನ್ಯೆ ಮಾವ" ಅಂತ ಅಲ್ವೊ? ಅದೆ ಮಧ್ಯದಲ್ಲೊಂದ್ ಯೆಂಥದು ಹೇಳಿದ್ದು? "ಹೀಗೆಲ್ಲ ನೀವ್ ಮಾತಾಡೋದ್ ಮಾವ? ಮನಸ್ಸಿಲ್ಲದಿದ್ರೆ ಅಗೋದಿಲ್ಲ ಅಂತ ಹೇಳಿ" ಮತ್ತೂ ಅಪರಾಧಿ ಸ್ಥಾನದಲ್ಲಿ ಇವನನ್ನೇ ನಿಲ್ಲಿಸುವ ಪ್ರಯತ್ನ ಅಲ್ವೊ ನಿನ್ನದು? "ಇಷ್ಟೆಲ್ಲ ಹೇಳ್ಬೇಕೊ ಮಾವಾ" ಅಂದ್ರೆ ಇಷ್ಟೇ ಅಧಿಕ ಪ್ರಸಂಗ ಯಾಕ್ ಮಾಡಿದಿರಿ ಅಂತಲ್ವೊ? ಉಪಾಯಿಲ್ಲ. ಇದು ಶ್ರೀಮಂತನ ಗಂಟು ಮುಳುಗಿಸಲು ಬಂದ ಸಾಲಗಾರನ ಶೈಲಿ. ಎರಡೂ ಲಾಭವೂ ಅವರಿಗೇ ಆಗೋಕು, ಸಣ್ಣವರಿಗೆ. ಅಂತೂ ನಿನ್ನೆ ಈ ಮಾವನಿಂದ ಉಪಕಾರ ಆಗ್ಬೇಕಾದದ್ದು... ಅಲ್ವ?

ಜಾತಿ ಕೆಟ್ಟವನಿಗೆ ಅಂತ ನಾನ್ ಹೇಳೋದಿಲ್ಲ. ಜಾತಿ ಇಲ್ಲದವನಿಗೆ ಸಾರಥ್ಯ ಮಾಡೋದ್ರ ಫಲ...? ಅದ್ ಹೌದು... ಜಾತಿ ಕೆಟ್ಟವರಿಗಿಂತ... ಅಲ್ವೊ? ನಾನ್ ಹೇಳಿದ್ದು ಕರ್ಣನಿಗೆ ಜಾತಿಯೇ ಇಲ್ಲ ಅಂತ. ಕೆಟ್ಟದ್ದಲ್ಲ. ಜಾತಿ ಇಲ್ಲ. ಆದ್ರೆ ಕೇವಲ ಜಾತ್ಯಾತೀತ ಎಂಬುದಕ್ಕೆ ಮನ್ನಣೆ ಕೊಡ್ಲಿಕ್ ಆಗೋದಿಲ್ಲ. ಆದ್ದರಿಂದ ಇಷ್ಟು ಮಾತಾಡಿದ್ದು ಹೆಚ್ಚು ಅಂತ ನಿನಗೆ ತೋರಿದರೆ ನಾನ್ ತೆಗಳಿದೆ ಅಂತ ಸಿಟ್ಟುಗೊಳ್ಳಬಾರು... ಅದಿಲ್ಲೇ ಬಿಟ್ ಹೋಗು. ಹಾಗಾದರೆ ಒಂದ ಕೆಲಸ ಮಾಡು, ಈಗಿಂದೀಗ ಕರ್ಣನನ್ನು "ಇಷ್ಟು ದಿನ ಇಲ್ಲಿ ದುಡ್ಡಿದ್ಯಲ್ಲ ಈಗ ಇಲ್ಲಿಂದ ಬಿಟ್ಟು ಬೇರೆ ಎಲ್ಲಿಯಾದ್ರೂ ಹೋಗಿ ಬೀಡಾರ ಮಾಡೇಕಿದ್ರೆ

ಎಷ್ಟೇ ಕೊಡ್ಬೇಕು" ಅಂತ ಕೇಳು. ಕೆಲವು ಸಲ ಹಾಗಾಗ್ತದೆ. ಸಾರಥ್ಯದ ಬಗ್ಗೆ ನನ್ನ ಅಸಮಾಧಾನ, ಅಲ್ಲೂ ಸಾರಥ್ಯ ಸರಿಯಲ್ಲ ಅಂತಾಂದ್ರೆ, ಕ್ಷತ್ರಿಯರಾದಂಥಹ ನಾವು ಗುರುಕುಲದಲ್ಲಿ ಅದನ್ನು ಅಭ್ಯಾಸ ಯಾಕೆ ಮಾಡ್ತೇವೆ? ಅಲ್ಲಲ್ಲ, ಸಾರಥ್ಯ ಕ್ಷತ್ರಿಯರಿಗೆ ಹೀನವಾದದ್ದಲ್ಲ. ಕೆಲವರು ನಮ್ಮಲ್ಲಿ ಏನಾಗಿದ್ದಾರೆ? ಅವರಿಗೆ ಅದ್ ಮಾತ್ರ ಗೊತ್ತು ಬಾಕಿ ಇದ್ದದ್ದು ಗೊತ್ತಿಲ್ಲ. ಹಾಗಾಗಿ ಸರ್ವಾಂಗೀಣ ಪರಿಣತರಲ್ಲ. ನಾನ್ ಅದನ್ನೇ ಆಕ್ಷೇಪಿಸಿದ್ದು. ಕರ್ಣ ಮಹಾರಥಿ ಅಲ್ಲ ಅಂತಾಯ್ತಲ್ಲ? ಸೂತನ ಮಗನಾಗಿ ಅದಕ್ಕೂ ಸಲ್ಲ ಅಂತಾಯ್ತಲ್ಲ? ಹಾಗಾಗಿಯೇ ನಾನು ಹೇಳಿದ್ದು ಏನು ಅಲ್ಲದಿದ್ದ ಕರ್ಣ ಸಾರಥ್ಯ ಹೀನ ಏನೂ ಅಲ್ಲ. ಆದರೆ ನಾವು ಕಲಿತ ಸಾರಥ್ಯ.. ಉಪಯೋಗ ಆಗ್ತಾರದು ಅಂತಲ್ಲ. ಅಯ್ಯೊ, ಪವಿತ್ರವಾದಂತಹ ಪರಿಶುದ್ಧವಾದಂಥ ಒಂದು ತೀರ್ಥ ಅಥವಾ ಅಮೃತ ನಾನ್ ಪ್ರೀತಿಯಿಂದ ಬೆಳೆಸಿದ ಒಂದು ಕಳ್ಳಿಗಿಡ ಅದ್ ಬಾಡಿಹೋಗ್ತದೆ. ಅಂತಂದ್ರೆ ಬುಡಕ್ಕೆ ಇದನ್ ಎರೀಬಾರ್ದು. ನಮ್ಮನ್ನು ನೀನು ಉಪಯೋಗಿಸಿಕೋ. ಹೀಗೆಲ್ಲ ಅಪವ್ಯಯ ಮಾಡೋದೆ? ನಾನು ಬದುಕಿ ಸತ್ತ ಹಾಗೆ ಅಲ್ಲೊ ಕರ್ಣನಿಗೆ ಸಾರಥ್ಯ ಮಾಡಿದರೆ? ಆದ್ದರಿಂದ ಹೀನವೇ ಅದು ಸಾರಥ್ಯ ಮಾಡೋದ್ ಹೀನ.

| ಸೌರಾಷ್ಟ್ರ-ತ್ರಿವುಡೆ | ಇನ್ನು ಬಗುಳಿನ್ನೊಮ್ಮೆ ಕುರುಪತಿ | ನಿನ್ನ ಭಾವವನರಿತೆ ಚಿತ್ತದೊ |

ಳುನ್ನತದ ಸಿರಿಮದದಿ ನುಡಿದೆಯೊ | ಎನ್ನೊಳಿದನು || ೧೬೬ ||

'ಅತಿಶಯದ ಮಾತುಗಳೇಕೆ ಮಾವಾ' ಅಂತ ಹೇಳಿದೆಯಲ್ಲ. ಅತಿಶಯದ್ದು ಅಂತಿದ್ರೆ ಸ್ವಲ್ಪ ಹೆಚ್ಚಿನದ್ದು ಅಂತಲ್ವ? ಹ್ಞೆ ನಾನು ಯೆಂಥವ ಗೊತ್ತುಂಟೋ ನಿನ್ಗೆ? ನಾನ್ ಕನ್ನಡಿ ಹಾಗಿದ್ದ ಜನ ಅಷ್ಟು ಸ್ವಚ್ಛ. ಹಾಗಾಗಿಯೇ ಅಲ್ವ? ಇದಿರು ನಿತ್ತವರ ಪ್ರತಿಬಿಂಭವೇ ಇಲ್ಲಿ ಪ್ರತಿಬಿಂಬಿಸುವುದು. ನಾನ್ ನಿನ್ನಲ್ಲಿ ಮಾತಾಡಿದ ಧಾಟಿ ಯಾವುದು? ಅತಿಶಯ, ನಿನ್ನ ಅಳತೆಗೆ ಮೀರಿದ್ದು, ನನ್ನ ಅಳತೆಗಂತೂ ಬಹಳಷ್ಟು ಮೀರಿದ್ದು, ನಿನ್ನೆ ಈ ಮಾತ್ ಹೇಳದೆ ಮತ್ತೆ ನಾನ್ ಯಾರಿಗೆ, ಮರ್ಯಾದಸ್ತರಿಗೆ ಹೇಳೋದು, ಇನ್ನು ಬಗ್ಗು ಅಂತ? ಅಲ್ಲ ನಂದೊಂದು ಆಲೋಚೆ ನಿನ್ನ ಮಾತಿಗೆ ತಕ್ಕ ಉತ್ತರ ನನ್ನದು. ನೀನ್ ವೊಳ್ಳೆ ಶೈಲಿಯಿಂದ ಗೌರವದಿಂದ ಮಾತಾಡೋ? ಅದಕ್ಕೆ ಮತ್ತೆರಡು ವಾಕ್ಯ ಸೇರಿಸಿ ಮಾತಾಡುವ ಜನ ನಾನು. ನನ್ನ ಸ್ವಭಾವವೇ ಹಾಗೆ. ಹಾಗಾಗಿ ಊರಲ್ಲಿ - ನೀನ್ ಈ ಆವಾಗ ಹೇಳಿದ ಎರಡು ಮುಖದ ವಿಮರ್ಶೆ ಉಂಟು. ಶಲ್ಯ ಭೂಪತಿಯೋ? ಆಗ್ಲಿಕ್ಕಿಲ್ಲ ಅದು. ಅದು ಶಲ್ಯವೇ! ಎಲ್ಲಿಗೂ ಹಾಗೊಂದು ಪ್ರಚಾರ ಉಂಟು ಒಳ್ಳೆವರಿಗೆ... ಆಹ್ಹ ... ನಾನೇನು ಮಾಡೋದು?

ಹಾಗಾಗಿ ನೀನ್ ಒಳ್ಳೆ ಶೈಲಿಯ ಮರ್ಯಾದೆಯಲ್ಲಿ ಮಾತಾಡ್ತೀಯೋ? ಮರ್ಯಾದೆಯಿಂದ ಮಾತಾಡ್ತೇನೆ. "ಮಾವಾ ಕರ್ಣ ಬಹಳ ದೊಡ್ಡವ ನಿಮ್ಮ ಸಧ್ಯ ಬೇರೇನೂ ಯೋಗ್ಯತೆಯೂ ಇಲ್ಲ ಅರ್ಹತೆಯೂ ಇಲ್ಲ. ಹೇಗೂ ನಮ್ಮ ಅರಮನೆಗೆ

ಅಲ್ವೋ? ಅದೇನು? ಬಾಕಿ ಇದ್ದದ್ದು ಕೇಳಿಸೋದಿಲ್ವಲ್ಲ. ನನ್ಗ ಉರಿ ಏರ್ತದೆ, ಕೌರವ ಆದ್ರೇನು, ಅಮ್ಮ ಅಪ್ಪ ಆದ್ರೇನು? ಅಲ್ಲ ಮತ್ತೊಬ್ಬಾದ್ರೇನು? "ಶಲ್ಯ ಭೂಪತಿಗಳೆ ಬನ್ನಿ, ನಮ್ಮ ಕರ್ಣನ ರಥ ಹೋಡೀರಿ" ಹೇಳ್ಯಾರೊ? ಸತ್ಯ ಹೇಳ್ತೇನೆ, ಇದುವರೆಗೆ ನಾನು ಕೇಳಿಸಿಕೊಂಡವನಲ್ಲ. ನಿನ್ನನ್ನು ದೂರೋದಿಲ್ಲ. ಯಾಕೆ? ನನ್ನ ಪ್ರಾರಬ್ಧ! ಮತ್ತೆ ಏನು ಅಂತ ಹೇಳೋದು? ಸಾರಥ್ಯ... ಸಾರಥ್ಯ... ಸಾರಥ್ಯ..

ಮಾವ ಮನೆ ಹಾಳಾಯ್ತು ಮತ್ತೇ? ಅಂತೂ ನಿನಗೆ ಈ ಮಾವನ ಗಂಟಿನಲ್ಲಿ ಪಾಲ್ ಬೇಕು ಅಷ್ಟು ನನ್ನ ಅರ್ಥಾಗ್ತದೆ ಗೊತ್ತಾಯ್ತು. "ಈ ಮಾವನೂ ಕೂಡಾ ಒಂದು ಗುಂಡು ಕಲ್ಲು ಅವನಿಗೆ ಏನೂ ಒಂದು ತನ್ನತನ ಇಲ್ಲ" ಅಂತಲ್ವೇ? ನೀನು ನಾಳೆ ಮಹಾರಥಿಯಾಗಿ ಯುದ್ಧಕ್ ಹೋಗ್ತಿಯೊ? ಹೋಗ್ಲಿ ಬಿಡು. ಮನೆತನಕ್ಕೆ ಬೆಂಕಿ ಹಾಕು; ಅದೂ ಮಾಡಿ ಪ್ರಯೋಗದಿಂದ ತಿಳಾಗ್ಯದಲ್ಲ?! ನಾನು ಹೇಳೋದು ಹಾಗಲ್ಲ, ಮನೆಗೆ ಬೆಂಕಿ ಹಾಕ್ಷಹುದು ಅಂತಾದ್ಮಲೆ ಮತ್ತೆ ಮನೆ-ತನ ಎಲ್ಲಿ ಉಂಟು? ಅಲ್ಲೋ? ಆದ್ದರಿಂದ ಹೇಳಿದ್ದು ನಾನು ಯಾವುದಾದರೂ ಯೋಧನನ್ನು ತಂದು ನಿಲ್ಲಿಸು ನನ್ಮುಂದೆ ಅವನಲ್ಲಿ ನೀನೇ ಕೇಳೋಕು "ಯಾರಪ್ಪ ನಿನ್ನ ಅಪ್ಪ?" ಹೇಳ್ಳಿಕ್ಕೆ ಅನ್ನಿಗೆ ಗೊತ್ತಿರಬೇಕು. ಅಂಥವ ಒಬ್ಬ ಇದ್ರೆ ಆಲೋಚಿಸೋಣ ಅಂತೆ ಇದು ಯೇನಯ್ಯ? ಒಂದೋ ಹುಟ್ಟಿಸಿದವನಿಗೆ ಬೇಡದ್ದು, ಇಲ್ಲ ಹುಟ್ಟಿಸಿದವಳಿಗೆ ಬೇಡದ್ದು! ಆವಾಗ್ಲೆ ಗೊತ್ತಾಯ್ತಲ್ಲ ಅದು ಏನು ಅಂತ ಈ ಹಾದ್ರಕ್ ಹುಟ್ಟಿದ್ದು ನಿ:ಕೃಷ್ಟ ಅಲ್ಲ ಅಂತ ನೀನ್ ಯಾವ ಪುಸ್ತಕದಲ್ಲಿ ಓದಿದ್ದಿ? ಏನು ಮಾಡೋದು? ಮನುಷ್ಯರಲ್ಲಿ ಅದ್ ಆಗೋದಿಲ್ಲಲ್ಲ. ಕಸಿ ಕಟ್ಲಿಕ್ಕೆ ಹೂ.. ನಿಷೇಧ ಅಂತ ಹೇಳಿದ್ದಾರೆ. ಆ ಅಲ್ಲ ಪ್ರತಿಕೂಲ ಪರಿಸ್ಥಿತಿಯಲ್ಲಿ ಹಾಗಾದದ್ದೇ ಈಗ ಜೀವಂತ ಸತ್ಯವಾಗಿ ಉಂಟಲ್ಲ ನಿಮ್ಮ ಮನೆತನದವರ ಮುಂದೆ; ನೀನ್ ನನ್ನ ಬಾಯ್ ಬಿಡಿಸಬೇಡ. ಕುಂದಿಲ್ಲದಿದ್ರೆ ರಾತ್ರೆ ನಿನ್ನನ್ ಇಲ್ಲಿಗೆ ಅಟ್ಟತಾನೊ? ಅವನಲ್ಲಿ ಈಗ ಉಪಮೆ; ನನ್ನ ಅರ್ಥಾಯ್ತು ತಾವರೆ ಕೆಸರೇ ಬುಡವಾಗಿ ಹುಟ್ಟಿದರೂ, ತಾವರೆಯಾದದ್ದರಿಂದ ದೇವರಿಗೆ ಸಮರ್ಪಿಸಲ್ಪಟ್ಟಿತು. ಕೆಸರಲ್ಲಿ ಹುಟ್ಟಿದ್ದೆಲ್ಲ ದೇವರಿಗಾದೀತೋ? ಹಾಗೆ ಮುತ್ತು... ನಮ್ಮಂಥ ಅರಸರ ಕಿರೀಟದಲ್ಲಿಯೂ ಅದಿರದೆ. ನಮ್ಮ ಪಾಂಡುವಿನ ಮಕ್ಕು ಆದೀತೋ ಆ ಮಾತು ಬೇರೆ, ನಮ್ಮೆ ಯಾರಾದೀತು ಎಂಬುದರಿಂದ ಬಾಕಿ ಇದ್ದವರ ಮಡಿವಂತಿಕೆ ಗುರುತಿಸ್ಲಿಕ್ ಆಗೋದಿಲ್ಲ! ಹೀನ ಅಂತ ನಾನ್ ಹೇಳೋದಿಲ್ಲ ಯಾಕೆ ಅಂದ್ರೆ ಒಳ್ಳೆ ಕೃಷಿಕನನ್ನು ಹೀನ ಅಂತ ನಾವ್ ಹೇಳೋದಿಲ್ಲ. ಅವ ಗೊಬ್ಬರ ಹೊರ್ತಾನೆ, ಬುಡಕ್ಕೆ ಹಾಕ್ತಾನೆ. ಫಲ ನಮಗೆ ಬರದೆ ಅವನನ್ನು ಹೀನ ಅಂತ ಹೇಳ್ಬಹುದೊ? ಯೆಂಥದ್ದು? ಯೆಂಥಾ ಬೆಳೆ ಇದು? ಯೇನು ಕರ್ಣ!! ಅಂದ್ರೆ ತೆಜಸ್ಸು ಓಹೋ... ಅಹ... ಅಹ... ಕುರುಡನ ಮಗ ಆದದ್ದಕ್ಕೆ ಸಾರ್ಥಕ ಆಯ್ತು!! ನೀನು ಕರ್ಣನಲ್ಲಿ ತೇಜಸ್ಸು ಕಂಡೆ ಅಲ್ವೇನೊ? ಅಲ್ವೇನೊ? ಕರ್ಣನಲ್ಲಿ.. ಹೌದಲ್ಲ? ಯಾರು ತೇಜಸ್ವಿಗಳು ಯಾರು ಓಜಸ್ವಿಗಳು ಅವರಲ್ಲಿ ಇವನಿಗೆ ಏನೂ ಕಾಣೋದಿಲ್ಲ ಕೃಷ್ಣನಲ್ಲಿ ಮಾತಾಡಿದ ಶೈಲಿ ನಮ್ಮ ವರದಿ ಆಗ್ಯದೆ ಬಹಳಷ್ಟು ಪ್ರಕರವಾದಂಥ ಬೆಳಕನ್ನು ಕೊಡುವ ದೀಪ ಅವರಿಗೆ ಕಣ್ಣನ್ನು ಕುಕ್ಕದೆ

ಆವಾಗ ಕಣ್ಣು ಮುಚ್ಚಿ ಕೊಳ್ತಾರೆ ಅವರು. ಅವರ ಮನೆಯಲ್ಲಿ ಉರಿಯುವ ಹಣತೆ, ಇದೆಷ್ಟು ತಂಪಾದ ದೀಪ! ನಿನ್ನ... ನಿನ್ನ... ಸ್ವಭಾವಕ್ಕೆ... ಯೇನೊ?

(ಕೌರವ ಮಾವನನ್ನನು ಒಪ್ಪಿಸಲು ತ್ರಿಪುರದಹನದ ಕಥೆ ಹೇಳುತ್ತಾನೆ)

ಹೌದಪ್ಪ ಸಾರಥ್ಯದ ಕುರಿತಾಗಿ ಮೂರು ಮೂರು ಬಗೆಯಾಗಿ ಕಥೆ ಕೇಳಿದ್ದೇನೆ. ತ್ರಿಪುರ ದಹನ ಎಂಬ ಹೆಸರಿನಿಂದಲೂ ಕಥೆ ಕೇಳಿದ್ದೇನೆ ತ್ರಿಪುರ ಮಥನ ಅಂತಲೂ ಕೇಳಿದ್ದೇನೆ. ತ್ರಿಪುರ ಸಂಹಾರ ಅಂತಲೂ ಕೇಳಿದ್ದೇನೆ. ಕಥೆ ಒಂದೇ ಅದು. ಸಂದೇಹ ಬಂದೇ ಬರ್ತದೆ ಬಹಳಷ್ಟು ಭಾಷಾಶಾಸ್ತ್ರ ಪರಿಣಿತರಿಗೆ, ಸಂಹಾರ ಎಂಬ ಅರ್ಥವನ್ನು 'ಮಥನ' ಕೊಡೋದಿಲ್ಲ ಆ... ಯೇನು? ಹೌದಪ್ಪ ಹ್ಞ .. ಅಲ್ಲಿ ತಾರತಮ್ಯ ಇಲ್ಲ ಅಂತ್ಲೊ ನಿನ್ನ ಅಭಿಪ್ರಾಯ? ಯೋಧ ಯಾರು? ಸಾರಥಿ ಯಾರು? ಇಲ್ಲಿ ಸದಾಶಿವನಿಗೆ ಎಣೆ ಯಾರು? ನಿನ್ನ ಕರ್ಣ. ಇಲ್ಲಿ ಬ್ರಹ್ಮನ ಜಾಗ ನನ್ನ ಕೊಡ್ಲಿಕ್ ಹೋಗ್ತಿ, ಅಲ್ಲಲ್ಲ ಸಿಟ್ ಮಾಡ್ಬೇಡ ಆದ್ ಹಾಗೂ ಆಗ್ತದೆ. ಇದ್ ಹೇಗೂ ಆಗ್ತದೆ ನೀನ್ ಹೇಳಿದ್ರೆ ಇನ್ ಯೇನೇನೋ ಆಗ್ತಿದೆ. ಅಲ್ವೊ? ಹೋಗ್ಲಿ ಬಿಡು... ಗೊತ್ತಾಯ್ತು ತ್ರಿಮೂರ್ತಿಗಳು ಒಂದಾಗಿ ತ್ರಿಪುರಸಂಹಾರ ಮಾಡಿದ್ರು ಲೋಕ ಕಲ್ಯಾಣಕ್ಕೆ ಬೇಕಾಗಿ, ಅಲ್ವೊ?

ಈಗ ನಾವು ಮೂರು ಮೂರ್ತಿಗಳು ಯಾರು? ಈ ಬ್ರಹ್ಮ ಈ ವಿಷ್ಣು... ಆ ಅವ ರುದ್ರ, ಉದ್ಧಾರಕ್ಕಾಗಿ ಇದು... ಯಾರ ಮನೆ ಸುಡ್ಲಿಕ್ಕಾಗಿ? ಅದು ಬಿಡು, “ನದೇವಚರಿತಮ್ ಚರೇತ್” ಶ್ಲೋಕ ನನ್ಗ ಸಣ್ಣ ಪ್ರಾಯದಲ್ಲೇ ಗೊತ್ತುಂಟು ಅದೆಲ್ಲ ಅದು ದೇವತೆಗಳ ಕಥೆ. ಅವ್ರ್ ಯೇನೂ ಮಾಡ್ತಾರೆ. ಯೇನೂ ಮಾಡ್ತಾರೆ ಅಂದರೆ ಅದನ್ನೆಲ್ಲ ನಾವು ಆಚಾರಕ್ಕೆ ಇಟ್ಕೊಂಡ್ರೆ ನಮ್ಗೆ ಬಹಳ ಕಷ್ಟಾದೀತು. ತಮ್ಮನನ್ನು ತಮ್ಮ ಅಂತಲೇ ಹೇಳ್ಬೇಕೋ? ಅರ್ಥಾಯ್ತಲ್ಲ... ಅದೆಲ್ಲ... ಅದ್ರೆ ಆ ಉದಾಹರಣೆ ಸರಿಯಲ್ಲ. ಊರ್ನಲ್ಲಿ ಯಾರಾದ್ರೂ ಮಾಡ್ತಾರೋ, ಮಾಡಿದ್ದಾರೋ ಹೇಳು. ಈಗ ಪ್ರತ್ಯಕ್ಷ ತೋರಿಸಿಕೊಡು. ತನಗಿಂತ ಸಣ್ಣವರಿಗೆ, ದೊಡ್ಡವ ಸಾರಥ್ಯಮಾಡಿದ್ ಎಲ್ಲಿ ಯಾದ್ರೂ ಉಂಟೊ? ನೀನು ತೋರಿಸಿದ್ರೆ ಆಕ್ಷೇಪ ಹೇಳಿಕ್ಕೆ ಯೇನು? ನಾನು ಅಷ್ಟು ದೊಡ್ಡ ರಾಜಕಾರಣಿ ಅಂತ ತಿಳ್ಕೊಂಡಿದ್ಯೋ; ಯೇನು ಹೊತ್ತಿಗೆ ಬೇಕಾದ ಹಾಗೆಲ್ಲ ವ್ಯಾಖ್ಯಾನ ಮಾಡುವಷ್ಟು? ಅದಿದ್ರೆ ಇರದೆ ತಪ್ಪಲ್ಲ. ಯಾರಿಗೆ ತಮ್ಮ ಅಧಿಕಾರಪೀಠ ಭದ್ರವಾಗಿ ಇರೋದಿಲ್ಲೋ, ಸದಾ ಅಲುಗಾಡುತ್ತಾ ಇರದೋ ಅವರು ಬಾಕಿ ಇದ್ದವರ ಬಗ್ಗೆ ಸಂಶಯ ತಾಳುತ್ತಲೇ ಇರುವುದು.

ವಿಷಯವನ್ನು ಹೇಳ್ವಾಗ ನೀನು ನಿನ್ಗೆ ಬೇಕಾದ ಹಾಗೆ ತಿರುಗಿಸ್ತಿಯಲ್ಲ, ಶಬ್ಬಾಸ್! ಹೌದೇನೊ? ಕೃಷ್ಣ ಅರ್ಜುನನಿಗೆ ಸಾರಥ್ಯ ಮಾಡ್ತಾನೆ. ಹೌದು ಅಲ್ಲ ಅಂತಲ್ಲ. ಅರ್ಜುನ ಯಾರು? ಆವಾಗ್ಲೆ ಹೇಳಿದ್ದೇನೆ ಪ್ರಸ್ತಾಪಕ್ಕೆ ಅದು ಬಿಡು. ಅರ್ಜುನ ಯಾರು? ಕೃಷ್ಣನ... ತಂಗಿಯ... ಏನಲ್ಲದಿದ್ರೂ ಈ ಅಣ್ಣನಿಗೆ ಇಷ್ಟೇ ಇಲ್ಲಿಕಿಲ್ಲೊ? ತಂಗಿಯ ಕುಂಕುಮ ಆದ್ರೂ

ಉಳೀಲಿ ಅಂತ? ಈಗ ಯೇನು ಕರ್ಣನ ತಂಗಿಯನ್ನು ನನ್ಗೊ ಅಲ್ಲ ನನ್ನ ತಂಗಿಯನ್ನು ಅವ? ನನ್ಗೆ ಯೇನು ಸಂಬಂಧ ಮಾಡ್ಲಿಕ್ ಆಯ್ತುದೊ? ಯೆಲ್ಲಿಲ್ಲದಿದ್ದಂಥ ಸಂಬಂಧವನ್ನು ಕಲ್ಪಿಸಿಕೊಂಡು ರಾತ್ರಿಯಿಡೀ ಸಮಯವನ್ನು ಹಾಳ್ ಮಾಡೋದು. ನನ್ಗಂತೂ ನಿದ್ರೆ ಬರೋದಿಲ್ಲ ಬಾಕಿಯಿದ್ದವರಿಗೂ ನಿದ್ರೆ ಮಾಡಿ ಸಾಯ್ಲಿಕ್ಕೆ ಬಿಡೋದಿಲ್ಲ, ಇನ್ ಬೇರೆ ಅಬದ್ಧ ಇಲ್ಲ.

ಫಡ ಫಡ ಕೌರವ ಖಳ... ಸಿಟ್ ಬಂದರೆ ನನ್ಗೆ ಶಬ್ದವೇ ಬರೋದಿಲ್ಲ. ಯಾಕೊ? ನಾವ್ ಈ ಶಬ್ದಗಳನ್ನೆಲ್ಲ ಬಾಯಿ ಪಾಠ ಮಾಡಿಕೊಂಡವರೇ ಅಲ್ಲ. ಸರಿಯಾದಂಥಹ ಅರ್ಥ ಕೋಶವನ್ನು ಓದಿ ಸುಸಂಸ್ಕೃತರಾದ ಈ ಹಳೆ ಪ್ರಬುದ್ಧವಾದಂಥಹ ಶೈಲಿಯನ್ನು ಉಪಯೊಗಿಸಿ ಮಾತಾಡುವವರು. ನಿನ್ನಂಥವ ಬಂದ್ರೆ... ಯೆಲ್ಲ ಬೇಡ್ದೆ ಇದ್ದದ್ದು ಬರ್ತದೆ. ಅದ್ ಏನಾಗ್ತದೆ ಗೊತ್ತುಂಟೋ? ಹಾಲಿಗೊಬ್ಬ ರುಚಿಯಾಗ್ಲಿ ಅಂತ ಒಂದಿಷ್ಟು ಉಪ್ಪು ಹಾಕಿದ ಹಾಗೆ ಆಗಿ ಬಿಡ್ತದೆ. ಇಲ್ಲದಿದ್ದದ್ರೆ ನಾನು ಈ ದಾಟೆಯಲ್ಲಿ ಇಷ್ಟು ಕೆಳಗಿಳಿದು ಮಾತನಾಡ್ತವನೋ? ಆದ ಕಾರಣ ಇನ್ನೂ ಕೂಡ, ಮತ್ತು ಮತ್ತು, ಅದನ್ನೇ... ಬೇಡ. ಆದೀತು. ನಮ್ಮ ಮರ್ಯಾದೆಗೆ ಧಕ್ಕೆ ಬರೋದಿಲ್ಲ ಅಂತಾದ್ರೆ ಯಾವ ಉದ್ಯೋಗವನ್ನೂ ನಾವ್ ಮಾಡ್ಲಿಕ್ಕೆ ತಯಾರು. ಸೇನಾಪತಿ, ಯಾಕವ, ಕರ್ಣ? ಸೇನಾಪತಿಯಾಗೇ ಯಾಕಿದ್ದೇಕು? ಈಗಿಂದೀಗ ಹೋಗಿ ಘಂಟಾ ಘೋಷವಾಗಿ ಸಾರಿಬಿಡು. ಯಾರನ್ನು ಯೇನೂ ಮಾಡ್ಲಿಕ್ಕೆ ಬರದೆ ನಿನಗೆ. ಮೊದಲೊಮ್ಮೆ ಯಾರಿವ? ಎಂಬ ಪ್ರಶ್ನೆ ಬಂದಾಗ ಇವನ ಹೆಸ್ರು ಹೇಳಿ, ಅಲ್ಲಿಯ ರಾಜ ಅಂತ ಮಾಡಿದ್ಯಲ್ಲ... ಯಾವ ದೇಶ? ಆ.. ಅಂಗಾಧಿಪತಿ! ಮಾಡಿದ್ಯಲ್ಲ? ಅಷ್ಟೇ ಸಾಲದು ಈಗ ನಿನ್ ತಲೆಯಲ್ಲಿ ಕಿರೀಟ ಉಂಟಲ್ಲ? ಇತ್ಯರ್ಥ ಆಗ್ಲಿಲ್ಲ ಈ ಕಿರೀಟ ಯಾರ ತಲೆಗೆ ಅಂತ! ಈಗ ಇಟ್ಕಂಡಿದ್ಯಲ್ಲ? ಸಾರ್ವಜನಿಕರ ಸಮಕ್ಷಮದಲ್ಲಿ ಈ ಕಿರೀಟವನ್ನು ಕರ್ಣನ ತಲೆಯ ಮೇಲಿಡು. "ಸದ್ಯ ನಾನೇ ಹೇಳೋದು, ಹಸ್ತಿನಾವತಿಯ ರತ್ನ ಸಿಂಹಾಸನಾಧೀಶ್ವರ ಅಲ್ಲ ಅಂತ ನಾನ್ ಹೇಳಲ್ಲಿಯವರೆಗೆ, ಇವನೇ" ಅಂತ ಘಂಟಾಘೋಷವಾಗಿ ಸಾರು, ಅಲ್ಲ ಅಂತ ನೀನೇ ಸಾರಲ್ಲಿವರೆಗೆ ಆ ಶ್ವೇತ:ಛತ್ರ ಉಂಟಲ್ಲ? ಪಾಂಡು ಚಕ್ರವರ್ತಿಯ ನೆತ್ತಿಯ ಮೇಲೆ ರಾರಾಜಿಸ್ತಾ ಇತ್ತು ಅದು ಮಡಚಿಟ್ಟು ಕೆಲವು ವರ್ಷ ಆಯ್ತಲ್ಲ? ಇವೊತ್ತು ಬಿಚ್ಚು ಆ ಶ್ವೇತ:ಛತ್ರವನ್ನು ಹಿಡ್ದು, ಹ್ಞೆ ನೀನೆ ನಿತ್ತರೆ ಬಹಳ ಚೆಂದ ಆಮೇಲೆ ನಿನ್ನ ತಮ್ಮಂದಿರು ಅವನ ಸೇವೆಗೆ ಒಬ್ಬ ಚಾಮರ ಹಿಡೀಲಿ ಮತ್ತೊಬ್ಬ ಕಟ್ಟಿಗೆ ಕೋಲ್ ಹಿಡೀಲಿ ಉಳಿದವರೆಲ್ಲ ಉಂಟಲ್ಲ ಒಂದ್ ತಟ್ಟೆ ಕೈಯಲ್ಲಿ ಹಿಡ್ಕೊಳ್ಳಿ ಯಾಕೆ? ಕರ್ಣನಿಗೆ... ಹ್ಞೆ ಹ್ಞೆ ತಾಂಬೂಲ ಉಗ್ಯಲಿಕ್ಕೆ ಹಣೆಬಾರ ಕೆಟ್ಟವು ಲಜ್ಜೆಗೆಟ್ಟವು ಮರ್ಯಾದೆ ಕೆಟ್ಟವು ತಮ್ಮೆಲ್ಲ ಈಚೆಯವಿಗೂ ಇಲ್ಲ ಅಂತ ಮಾಡ್ತೀರಲ್ಲ!! ಇಷ್ಟು ನೀನ್ ಮಾಡ್ತೀಯೋ? ಸತ್ಯ ಅವನೇ ಈ ಕಡೆಯ ನೇತಾರ ಅಲ್ಲ, ಮಹಾರಾಜ! ಅಂತ ನೀನ್ ಹೇಳು ಆಮೇಲೆ ಅವ ನನ್ನಲ್ಲಿ ಕೇಳ್ಳಿ ಅಥವಾ ನನ್ನ ಅಪ್ಪಣೆ ಮಾಡ್ಲಿ, ಆವಾಗ್ಗ ಉತ್ತರವನ್ನು ಕಾದಿರಿಸ್ತೇನೆ. ನಡಿ ಹೊರ್ಗೆ,

ಕುಂತಿ ಯಾಕ್ ಹೇಳ್ಬೇಕು ಕರ್ಣ ನನ್ನ ಹಿರೀಮಗ ಅಂತ? ಬೇಡ ಬೇಡ ಕರ್ಣ ಕುಂತಿಯ ಹಿರೀಮಗ ಆಗೋದ್ ಬೇಡ, ತಿಳೀತಲ್ಲ? ಮಾದ್ರಿ ಸಾಕಿದ ಮಗ ಆಗ್ಲಿ, ಸಾರಥ್ಯ ನಾನ್ ಮಾಡ್ತಿದ್ದೆ ಇವ ಏನೂ ಅಲ್ಲಲ್ಲ! ಕೌರವಾ ಈವೊಂದು ಸೊನ್ನೆಯನ್ನು ಹಿಡ್ಕೊಂಡು ನೀನು... ಯಾಕೆ ಹೇಳಿದ್ದು ಅಷ್ಟು ದೊಡ್ಡ ಜನ ಅವ ಆಗ್ಬಾಗ ಆಲೋಚನೆ ಮಾಡ್ವ  ಅಂತ ಹೇಳಿದ್ದು, ಈಗ ಸದ್ಯ, ಕರ್ಣನಿಗೆ ನೀನು ಕೊಡೆ ಹಿಡಿಯೋದಕ್ಕೆ ತಯಾರಿಲ್ಲ...? ನಿನ್ನ ಸ್ಥಾನಕ್ಕೆ ಒಗ್ಗದ್ದು ನೀನ್ ಮಾಡೋದಿಲ್ಲ. ಬಾಕಿಯಿದ್ದವರಿಂದ ಮಾಡಿಸಲಿಕ್ಕೆ ಪ್ರಯತ್ನಿಸಬಹುದೊ?ಹ್ಞೂ.. ಏನು? ನನ್ನನ್ನು ಏನು? ನಾನು ಪಲ್ಲಕ್ಕಿ ಕೊಟ್ಟು ಇಲ್ಲಿಗೆ ಕರಸಿದ್ದೋ?... ನಂದೇ ಪಲ್ಲಕ್ಕಿಯಲ್ಲಿ ಬಂದದ್ದು, ಹೌದಾ? ಅಂದ ಹಾಗೆ ನನ್ಗದು ಅರ್ಥಾಯ್ತು. ನಾಚಿಕೆಯಿಂದ ಮುಸುಕು ಹಾಕ್ಕೊಂಡು ಹೋಗ್ಬೇಕೊ ಕಳ್ಳನ ಹಾಗೆ ಅಂತಲ್ವೋ? ಕೌರವಾ ಯೇನು ಮಾಡೋಣ ಸೂಲಗಿತ್ತಿಯೂ ಕೂಗ್ಲಿಲ್ಲ. ತಿಂಗ್ಳು ಮೂರಾದ ಮೇಲೆ ಕೂಗು ಕೇಳಿದ್ದು, ಈಗ ಅದು... ಈಗ ನಮ್ಗ  ಕಚ್ಚೆಕ್ಕೆ ಬರ್ತದೆ!

ಯೇ ದೇವರೇ, ಈಗ ನಾನು ಯೇನ್ ಮಾಡಿ ಸಾಯೋದು ಅಂತ ನೀನ್ ಹೇಳೋದು? ನೀನ್ ಇಲ್ಲಿಂದ ಹೋಗ್ಬೇಕಾದ್ರೆ ಬೇರೆ ಏನನ್ನು ಕೊಟ್ರೂ ಆಗೋದಿಲ್ಲ ಅಲ್ಲ? ಅಲ್ಲ ಯೇನ್ ಮಾಡ್ದೆ ಅಂತಲ್ಲ ನೀನು ಸರಿಯಾದ ಕಾರಣ ಕೊಟ್ರೆ... ಮಾಡಬಹುದು ಅಂತ ಹೇಳಿದರೆ, ನಾಳೆ ಯಾರಾದರೂ ನನ್ನಂಥ ಸಂಭಾವಿತರು ಕೇಳಿದರೆ? ಅದು ನಮ್ಮ ಕೌರವೇಶ್ವರ ಹೇಳಿದ್ದಾನೆ, ಅದು ಉಂಟಂತೆ ಶಾಸನದಲ್ಲಿ ಅನ್ನಬಹುದಾಗಿದೆ. ಅದಕ್ಕಾಗಿ ನೀನೊಂದು ಪಂಕ್ತಿ ಸೇರಿಸಿದರೂ ಆದೀತು.

ಅಲ್ಲ ಅದಿರಲಿ ಈಗ ಪರಶುರಾಮಾಚಾರ್ಯ, ಇವನಿಗೆ ಶುದ್ಧ ರಾಯಸ ಕೊಟ್ಟಾಗ್ಯದೊ ಕ್ಷತ್ರಿಯ ಅಂತ? ಹಾಗಾದರೆ ಅದ್ ಯಾಕೆ ಪ್ರಚಾರ ಆಗ್ಲಿಲ್ಲ? ಈಗ, ಆದೀತು ಆದೀತು ನೀನ್ ಸುಳ್ಳು ಹೇಳೋದಿಲ್ಲ. ಹಾಗಾದರೆ ಸೂತ ಪುತ್ರ ಅಲ್ಲ. ಪರಶುರಾಮಾಚಾರ್ಯರೇ ಹೇಳಿದ್ದಾರೆ ಕ್ಷತ್ರಿಯನೇ!

ಕೌರವ, ನಿನ್ನಲ್ಲಿ ಹೇಳ್ತೇನೆ ಹುಡ್ಗ; ಹತ್ತಿರ ಬಾ ಈಗ ಸಮಾಧಾನ ಆಯ್ತು. ತಲೆ ತಂಪಾಯ್ತು ಪರಶುರಾಮರ ಕಣ್ಣಿಗೆ ನಾನ್ ಬಿದ್ದಿದ್ದೇನೆ ಅಂತಾದ್ರೆ ಅಲ್ವೊ? ಇನ್ನು ಸ್ವಲ್ಪ ವಿಮರ್ಶೆ ಮಾಡೋ ಸಾಧಾರಣ ಒಂದು ತುಂಬಿ ಕರ್ಣನ ತೊಡೆ ಕೊರೆದೀತೋ? ಅದ್ ಎಂಥಾ ತುಂಬಿಯೋ ಯಾರಿಗ್ ಗೊತ್ತು? ಕಲ್ಪನೆ... ಸತ್ಯ ಗೊತಾಗ್ನಲ್ಲಿಯ ವರೆಗೆ ಕಲ್ಪನೆಯಲ್ಲಿಯೇ ಇರೋದು ಒಳ್ಳೇದು ನಾವು ಅಲ್ವೊ? ದೇವರಿದ್ದಾನೆ ಅಂತ್ ಹೇಳೋದು ಕಲ್ಪನೆ ಅದು ಇಲ್ಲಾ ಅಂತ ಹೇಳೋದು? ನಿರಾಕರಣೆಗಿಂತ ಕಲ್ಪನೆ ಒಳ್ಳೆಯದು. ಹಾಗಾಗಿ ಇದ್ದೂ ಇದ್ದಹುದು. ಎಲ್ಲವರೂ ಕೂಡಿ ಅರ್ಜುನನ್ನು ದೊಡ್ಡು ಮಾಡ್ತ ಅಲ್ವೊ? ಆಮಟ್ಟಿಗೆ ಸ್ವಲ್ಪ ಹೊಟ್ಟೆಕಿಚ್ಚು ನನ್ನೂ ಉಂಟು. ಹೊರೆ ಹೇಳೋಡ ಈ ಕುಂತಿಯ ಮಕ್ಕಳನ್ನೇ ಎಲ್ಲವರೂ ಕೂಡಿ ದೊಡ್ಡು ಮಾಡಿದ್ರೆ ನನ್ನ ತಂಗಿಯ ಮಕ್ಕಳು ಕೊನೆಗೂ... ಅಲ್ವೊ? ಆ

ತೊಡೆಯನ್ನು ತುಂಬಿ ಕೊರೆಯದೇ ಇರ್ತಿದ್ರೆ... ಕರ್ಣ ನಿಜವಾಗಿಯೂ ಕಲ್ತು ಬರ್ತಿದ್ದ ಅಲ್ಲ! ಅಲ್ಲ ಹೆಸ್ರು ಬದಲಾಯಿಸಿ ಕಲ್ತದ್ದು ಕೆಲವು ಸಲ ಹಾಗೆ ಬೇಕಾಗ್ತದೆ. ಕೆಲವು ಗುರು ಪೀಠದಲ್ಲಿ ಪ್ರವೇಶ ಸಿಗ್ಬೇಕಾಗಿದ್ರೆ ಸರಿಯಾದ ಹೆಸ್ರು ಕೊಟ್ರೆ ಆಗೋದಿಲ್ಲ. ಆದ್ರೆ ಅಲ್ಲಿ ಕರ್ಣ, ಬ್ರಾಹ್ಮಣ ಅಂತ ಹೇಳ್ದ  ಕಾಣ್ತದೆ; ಬ್ರಾಹ್ಮಣ ಅಂತಲೇ ಈಗ ನನ್ಗೆ ತೋರ್ತದೆ, ಈ ದೊಡ್ ದೊಡ್ಡ ಗುರುಗಳು ಅಂತ ಹೇಳ್ತಾರಲ್ಲ, ಬ್ರಾಹ್ಮಣನಾದಂಥಹ ಪರಶುರಾಮನಿಗೆ ಈ ದೊಡ್ಡ ಬ್ರಾಹ್ಮಣ ಜಾತಿಯೋ, ಕ್ಷತ್ರಿಯ ಜಾತಿಯೋ, ಬೆರಕೆ ಜಾತಿಯೋ ಅಂತ ಗೊತ್ತಾಗ್ಲಿಲ್ಲ ಅಂತಾದ್ರೆ... ಅಲ್ವೊ? ಕರ್ಣ ಪ್ರಾಪ್ತಾವಸ್ತೆಗೆ ಮುಟ್ಟುವಾಗ? ಸರಿ ಎನ್ನು, ಇನ್ನು ಮಾತಿಲ್ಲ. ಯಾಕೆ? ನಮ್ಮ ಮಾತು ಮುಂದೆ ಹೋಗ್ಲಿಕ್ಕಿಲ್ಲ. ನ್ಯೂ ಹೋಗ್ಲಿಕ್ಕೆ ಸಾಧ್ಯವೇ ಇಲ್ಲ ಇಲ್ಲ. ಪರಶುರಾಮಾಚಾರ್ಯರು ಕರ್ಣ ವಿಜೃಂಭಿಸಬೇಕಾಗಿದ್ರೆ... ಓಹೋ ಈಲ್ಲಿ ಅರ್ಜುನ ವಿಜೃಂಭಿಸ ಬೇಕಾಗಿದ್ರೆ ಯಾರ ಸಾರಥ್ಯ ಬೇಕು? ಗೊತ್ತಾಯ್ತಪ್ಪ, ನನ್ನನ್ನು ನೀನು ಶ್ರೀ ಕೃಷ್ಣನಿಗೆ ಸಮಾನ ಅಂತ ಹೇಳಿ ನನ್ನನ್ನು ಬ್ರಹ್ಮ ದೇವನಿಗೆ ಸಮಾನ ಅಂತ ಹೇಳಿ... ಇಷ್ಟು ದೊಡ್ಡ ಒಂದು ಪ್ರಶಸ್ತಿ ಇಲ್ಲಿಂದ ಸಿಕ್ಕಾಗ... ಹೋಮ್ ನಾವು ಸಣ್ಣವರಾಗಿ ಉಳ್ಕೋದ್ ಯಾಕೆ? ವಂದ್ ಮಾತುಂಟು, ಅಲ್ಲಿ ಸಂಪೂರ್ಣ ಸೂತ್ರಧಾರಿ ಯಾರು? ಕೃಷ್ಣ ಏನಾದರೂ ಸಂಶಯ ಬಂದಾವಾಗ ಅರ್ಜುನ ಕೃಷ್ಣನಲ್ಲೇ ಕೇಳ್ತಾನಲ್ಲ? ಯಾವುದಕ್ಕೂ ನಿರ್ದೇಶನ ಕೃಷ್ಣನದ್ದಲ್ವೊ? ಇಲ್ಲಿಯೂ ಹಾಗೇ ಆದೀತಲ್ಲ? ನಮಗೆ ಆ ಸ್ಥಾನ ಕೊಟ್ಟರೆ ಸಾಲದು ಅಲ್ಲ... ಬೇಕಾಗಿ ಬರ್ಲಿಕ್ಕಿಲ್ಲ... ಅಲ್ಲ... ಬಂದ್ರೆ... ಬಂದ್ರೆ ನೀನಿದ್ಯಲ್ಲ? ಯಾಕೆ? ನಿನ್ನಿಂದ ನಾನು ಸಾವಿರ ಆಡಿಸಿಕೊಂಡೇನು ಅಂಥವರಿಂದಲ್ಲ. ನಾನು ನಿನ್ನ ಗೊತ್ತುಂಟಲ್ಲ? ಹ್ಣು... ಆದ್ದರಿಂದ ನನ್ನನ್ನು... ಸಾರಥಿ ಅಲ್ಲೇ ಹೊಡಿ, ಇಲ್ಲೇ ಹೊಡಿ ಅಂತ ಹೇಳಿದ್ರೆ ನಾನು ಅವನ ಮುಸುಡಿಗೆ ಹೊಡದೇನು. ನೀನು ಒಪ್ಪಿದ್ದ ಸಾರಥ್ಯದಲ್ಲಿ ನನ್ನ ಚಾಕಚಕ್ಯತೆ ಏನು? ನಾನ್ ಯಾರಿಗೆ ಸರಿ? ಭೂಲೋಕದಲ್ಲಿ ಕೃಷ್ಣನಿಗೆ ಸರಿ. ದಾರುಕನಿಗೆ ಸರಿ ಅಲ್ಲ. ಮಾಥಲಿಗೆ ಸರಿ. ನನಗೆ ನಿರ್ದೆಶನ ಬೇಕೋ ಕೂತವಂದು? ಕೆಲವು ಸಲ ಏನಾಗ್ತದೆ, ಒಳ್ಳೆ ಸೂತನಿಗೆ, ಹಿಂದೆ ಕೂತ ನಿರ್ದೇಶಕ ಕೊಟ್ಟ ನಿರ್ದೇಶನ ಕೇಳಿದರೆ, ಇದ್ರೆ ಬರೂದೂ ಕಾಣೋದಿಲ್ಲ. ಅಡ್ಡ ಹೋದದ್ದು ಗೊತ್ತಾಗೋದಿಲ್ಲ ಯೇನ್ ನೀನು ಅಂತ ಕೇಳ್ವಾಗ ಒಟ್ಟೂ ಹೋದೀತು. ಆದ್ದರಿಂದ ಸಾರಥಿಯನ್ನು ಮಾತಾಡಿಸ ಕೂಡದು. ಬೇಕಿದ್ರೆ ನಿರ್ದೆಶನ ನಾನೇ ಮಾಡ್ತೇನೆ. ನನ್ ತಲೆ ಮೇಲೆ ಅವ ಕೈಯಾಡಿಸಕೂಡದು. ಕೈಯಾಡಿಸಿದರೆ ಮತ್ತೆ ನೀನು ನನ್ನಿಂದ ದೂರವಾಗ್ತಿ ಆದೀತೋ?

ಅದೇನೂ ಬೇಡ ನನ್ನನ್ ಅವ ವೊಬ್ಬ ಭೂಪತಿಗಳು ಅಂತ ಕರೆದು ಆಗ್ಲಿಕ್ಕೇನುಂಟು? ನೀನು ಭೂಪತಿಗಳು ಅಂತ ಕರೆಯಿಸಿಕೊಳ್ಳಿಕ್ಕೆ ತಯಾರಾಗಬೇಕಾದವ, ಈಗ ಆದ್ರೂ ಆಗ್ಲಿಲ್ಲಲ್ಲ? ನಾವು ಆಗಿ ಆಗ್ಯದೆ. ನಮ್ಮನ್ನು ಈಗ ಭೂಪತಿ ಅಂತ ಒಬ್ಬ ಹೊಸ್ತು ಕರೆದು ಏನಾಗ್ಬೇಕು? ನಾನು ಹೌದು, ನನ್ನ ಅಪ್ಪನೂ ಹೌದು ನನ್ನ ಅಜ್ಜನೂ ಹೌದು ಆಯುಷ್ಯ ಕೊಟ್ಟರೆ ನನ್ನ ಮಕ್ಕಳೂ ನಾಳೆಗೆ ಭೂಪತಿಗಳೇ.

ನೀನು ಬಂದದ್ದು ಬಹಳ ವಿಶೇಷ ಆಯ್ತು, ನಿನ್ನನ್ನು ಅಲ್ಲಿಗೆ ಮುಟ್ಟಿಸಿದ ಮೇಲೇ ನಾನ್ ಮಲ್ಗೋದು. ಕಾರಣ? ಸುತ್ತು ಮುತ್ಲು ವಿರೋಧಿಗಳಿದ್ದಾರಪ್ಪ, ಕೌರವ ನೀನು ನನ್ನನ್ನು ಮಾವ ಅಂತ ಕರ್ದಿದ್ದೀ ನೀನ್ ನನ್ನ ಅಳಿಯ, ನೀನ್ ಅಲ್ಲಿ ಮುಟ್ಟಿದೀ ಅಂತ ಗೊತ್ತಾದ್ಮೇಲೇ ನಾನಿಲ್ಲಿ ದೀಪ ನಂದಿಸೋದು. ಹೊರಟ್ ಹೋಗು, ಬೆಳಿಗ್ಗೆ ಬರ್ತೇನೆ. ಸೇನಾಧಿಪತ್ಯ ಅವನಿಗೆ, ಸಾರಥ್ಯ ನನಗೆ, ನಿನಗೆ ಅನುಮಾನವೋ? ಬೆಳಿಗ್ಗೆ ಆಗ್ತಾಗ ಈ ಜನ ಇಲ್ಲೇ ಯೆಲ್ಲಿಯಾದ್ರೂ.. ನಾನು ಅಂಥವ ಏನೂ ಅಲ್ಲ. ನಾನು ಬರ್ತೇನೆ ಅಂದಲ್ಲಿಗೆ ಬಂದೇನು. ಬರ್ಲಿಕ್ಕಾಗದಿದ್ರೆ ಕಾರಣ ಹೇಳ್ಯೇನು, ಬ್ಯಾಡ ಅವನನ್ನು ನನ್ನ ಕೈಗೊಪ್ಪಿಸುವದು ಬೇಡ. ನನ್ನ ಕೈಯಲ್ಲಿ ಅವನನ್ನು ಕೊಡೋದ್ ಯಾಕೆ? ಕಾರಣ ಇಷ್ಟೆ ಅದೂ ಕೂಡ ಒಂದು ಭಾರದ ವಸ್ತುವೇ; ನೀನು ನನ್ನ ಕೈಯಲ್ಲಿ ಕೊಟ್ರೆ ಮತ್ತೂ ಭಾರವೇ ಅದು. ಹಾಗಾಗಿ ಯಾರ ಕೈಯಲ್ಲಿ ಯಾರನ್ನು ಕೊಡೋದ್ ಬ್ಯಾಡ, ಬೆಳಿಗ್ಗೆ ನಾನು ಬರ್ತೇನೆ. ಅಲ್ಲಿ ನೀನು ಒಮ್ಮೆ ಒಪ್ಪಿಸಿ ಬಿಡು.... ಆಗದೊ? ಹಾಗಾದರೆ ನೀನು ಬರಿಯಲ್ಲ ಯುದ್ಧ ಭೂಮಿಗೆ? ಯಾಕೆ? ನೋಡಿದರೆ ಮಾತ್ರ ಸಾಕೊ? ಬೇಕಾದ್ರೆ ನಿರ್ದೇಶನ ಕೊಡ್ಲಿಕ್ಕೆ ನೀನು. ನಾನು ಬರ್ತೇನೆ.





## ೩೧ ಕರ್ಣರಸಾಯನ

ಕರ್ಣ

*॥ ಕಂದ | ಇತ್ತಲು ಕರ್ಣಾರ್ಜುನರಿಗೆ / ಹತ್ತಿತು ಕಾಳಗವಿಳೆ ಬಾಯ್ ಬಿಡಲೀ ತೆರದಿಂ ॥*

*ಮತ್ತೆ ವಿಭಾಡಿಸುತಿರೆ ಗಜ | ರುತ್ತಲೆ ಮೊದಲಿಸಿದು ಮಾತಾಡಿದರಾಗಳ್ ॥ ೧೬೭ |*

*(ಕರ್ಣಾರ್ಜುನರು ಮುಖಾಮುಖಿಯಾದಾಗ ಎಲವೋ ಸೂತ ಮಗನೆ-*

*ಎಂದು ಅರ್ಜುನ ಸಂಬೋಧಿಸುತ್ತಾನೆ.)*

ಪಾರ್ಥಾ, ಹೇಳಿಯೂ ಕೇಳಿಯೂ ಹಳಸಿದಂತಹ ವಿಚಾರಗಳಿಗೆ ಮನ ಮಾಡಬೇಡ. ನಾನು ಸೂತ್ರಪುತ್ರನಾದರೇನು, ಅಥವಾ ಯೇನಾದರೇನು? ಕರ್ಣಾರ್ಜುನರ ಕಾಳಗದ ನಿರೀಕ್ಷೆಯಲ್ಲೇ ಇದ್ದ್ರೂ, ಪ್ರಪಂಚವು ಕೂಡಾ ದಿನವನ್ನು ಎಣಿಸುತ್ತಲೇ ಇತ್ತು. ಅಯ್ಯಾ, ಕೌರವರ ಪಾಂಡವರ ಯುದ್ಧ ವಯ್ಯಕ್ತಿಕವಾದಂತಹ ನಮ್ಮ ಸ್ಪರ್ಧೆಯನ್ನು ಇತ್ಯರ್ಥಮಾಡುವುದಕ್ಕೆ ಇದ್ದಂತ ಒಂದು ರಂಗವನ್ನು ನಿರ್ಮಿಸಿದ್ದಕ್ಕೆ ನಾವು ದೇವರಿಗೆ ಕೃತಜ್ಞರಾಗೋಣ. ಕೌರವ ಪಾಂಡವರ ಜಗಳ ಆಗದೇ ಇದ್ರೂ, ಕರ್ಣಾರ್ಜುನರ ಜಗಳ ಆಗೇ ತೀರಬೇಕು. ಪರೀಕ್ಷಾ ರಂಗದಲ್ಲಿ "ಪಾರ್ಥ ಏವ ಧನುರ್ಧರ:" ಅಂತ ಹೇಳುವಾಗ ಆಕ್ಷೇಪಿಸಿದವ ನಾನು - ಈ ಚಪ್ಪರ ವ್ಯಾಪ್ತಿಯಲ್ಲೋ? ಪ್ರಪಂಚ ವ್ಯಾಪ್ತಿಯಲೋ? ಅಂತ, ಯೇನೇನು ಪ್ರದರ್ಶನ ನೀನು ಕೊಟ್ಟಿದ್ದಿ, ಅದನ್ನೆಲ್ಲ ನಾನೂ ಧನುರ್ವೇದದ ಮೂಲಕ ಕೊಟ್ಟಿದ್ದೇನೆ. ಆದರೆ ಪಾರ್ಥಏವ ಎಂಬುದು ಅಲ್ಲಿ ಇತ್ಯರ್ಥವಾಗ್ಲಿಲ್ಲ. ಅದಾಗಬೇಕಿದ್ರೆ ನೀನೋ? ನಾನೊ? ಯೇನು ಮಾಡೋಣ ಆಹೊತ್ತು ಯುದ್ಧಕ್ಕೆ ಮುಂದಾದಾಗ ಸಮಯಾವಕಾಶ ಇಲ್ಲದೇ ಇದ್ದುದರಿಂದ ತಡೆ ಹಿಡಿಯಲ್ಪಟ್ಟಿತು. ಕಾರಣ 'ಸೂತ ಪುತ್ರ... ಬಿಡು ಯಾಕೆ ಅತಂದ್ರೆ ಯಾವ ಶತಮಾನದಲ್ಲಿ ಇದ್ದಂತಹ ಮಹಾಪುರುಷರು ಯಾರಾರು ಬೆರೆಳೆಣಿಕೆಗೆ ಬಾರ್‍ತಾರೋ ಅವರೆಲ್ಲ ಪಿತೃ ಪ್ರಾಧಾನ್ಯತೆಯಿಂದ ಮಹೋನ್ನತವಾದಂತಹ ಯಶಸ್ಸನ್ನೋ ಹೆಸರನ್ನೋ ಸಂಪಾದಿಸಿದ್ದಲ್ಲ. ಅರ್ಜುನಾ ಆ ಸುದ್ದಿಯನ್ನು ಬಿಡು. ಜಾತಿ, ಕುಲ ಅನ್ನುವದು ವೃತ್ತಿಯಿಂದ ಮಾತ್ರ ತೀರ್ಮಾನಿಸಬೇಕಾದಂತಹ ಒಂದು ಕಾಲಘಟ್ಟ ಶಂತನು ಚಕ್ರವರ್ತಿಯ ಎರಡನೆಯ ವಿವಾಹದಿಂದ ಬಂದಿರುವಾಗ... ಮತ್ತ್ಯಾಕದು?

ಈಗ, ತಲೆಯನ್ನು ನೀಗಲಿಕಹುದು...? ಅಯ್ಯಾ ಕೊರಳೇ ನಮ್ಮ ಪ್ರಶ್ನೆ. ನಿನ್ನ ಕೊರಳು ನನ್ನ ಕೊರಳು. ನಾವು ಅದಕ್ಕೆ ಹೆಗಲು ಕೊಟ್ಟಾಗಿ ಹೋಗ್ಯದೆ ಈ ಹೊತ್ತು ಸೂರ್ಯಾಸ್ತಮಾನದೊಳಗೆ ಕರ್ಣನೋ ಅರ್ಜುನನೋ ಇತ್ಯರ್ಥ ಮಾಡ್ತೇನೆ ಅಂತ ಪ್ರತಿಜ್ಞಾಬದ್ಧನಾಗಿದ್ದೆ. ನಾನೇನು ಸಮಯವನ್ನು ನಿರ್ಣಯ ಮಾಡಿಲ್ಲ; ಆದರೆ ಸಮಯವನ್ನು ನಿರೀಕ್ಷಿಸುವವ. ಒಂದು ಔಚಿತ್ಯ ಉಂಟು, ಏನದು? ಪ್ರಪಂಚದಲ್ಲಿ ಮೈತ್ರಿಗೆ ಕೃಷ್ಣಾರ್ಜುನರು

ಸ್ಪರ್ಧೆಗೆ ಕರ್ಣಾರ್ಜುನರು! ಅರ್ಜುನ ಮಧ್ಯದಲ್ಲಿ ನಿಲ್ತಾನೆ; ಈಕಡೆಯಲ್ಲಿ ಕೃಷ್ಣ ಆಕಡೆಯಲ್ಲಿ ಕರ್ಣ ಹಾಗಿರುವಾಗ, ನಿರ್ಣಾಯಕವಾದಂತಹ ಹೊತ್ತಿನಲ್ಲಿ ಯೇನೇನುಂಟು ಮಂತ್ರಾಸ್ತ್ರಗಳು ಇದರ ಪ್ರಯೋಗಕ್ಕೆ ನೀನು ಮನಸ್ಸು ಮಾಡಬೇಕು. ಆದ ಕಾರಣ ವಿನಾ ವಾದ ಬೇಡ. ಬಿಡ್ತೀಯೋ ಎರಡು ಬಾಣ ಬಿಡು. ಪ್ರತಿಸ್ಪರ್ಧಿಯ ಬೆನ್ನು ತೋರಿಸುವುದೇ ತ್ರಿಲೋಕವಿಜಯಿಯಾದ ಪಾರ್ಥನ ಹೆಚ್ಚುಗಾರಿಕೆ ಅಂತ ತಿಳ್ಕೊಂಡಿದ್ಯೆನೋ? ಬಹಳ ಬಹಳಹಾರಾಡ್ತಿ ಹಿಂದಾದಂತಹ ಕರ್ಣನ ಪರಾಭವವೇ ಗಾಂಡೀವಿಯ ಗಂಡು ತನಕೆ ಒಂದು ಪ್ರತಿಮೆ ಅಂತ ತಿಳ್ಕೊಂಡಿದ್ಯೆನೊ? ಕರ್ಣಾರ್ಜುನರು ಮುಖಾಮುಖಿಯಾದದ್ದಿಲ್ಲ - ವೈಯಕ್ತಿಕವಾಗಿ ಅದನ್ನು ಕಾದಿರಿಸಲಾಗಿದೆ, ಹಾಗಿರುವಾಗ, ದ್ರೌಪದಿ ಸ್ವಯಂವರವೊ ಇನ್ನೊಂದೋ ಮತ್ತೊಂದೋ ಅದೆಲ್ಲ ಬಿಡು ಬಿಡು. ಈಗ ರಾಧೇಯಗೆ ಸಲುವುದೇ? ಆ ಪ್ರಶ್ನೆಗೆ ಔಚಿತ್ಯ ಉಂಟು. ಅಷ್ಟುಂಟೋ ನೋಡೇನೆ ಅಂತ ಅಲ್ವೆ? ಅದಕ್ಕೆ ಸಿದ್ಧನಾಗಿ ಬಂದಿದ್ದೇನೆ. ಮತ್ತೆ ನಿನಗಿದ್ದ ಸಾಧನಾ ಸಂಪತ್ತು - ಇದರ ಬಗ್ಗೆ ನನಗೆ ಅಸೂಯೆ ಇಲ್ಲ. ಆದರೆ ಅಂತಹ ಸಾಧನಾ ಸಂಪತ್ತು ಕರ್ಣನಿಗಿಲ್ಲ ಎಂಬುದು ಕರ್ಣನ ಶೂನ್ಯತೆಯ ದ್ಯೋತಕ ಅಂತ ತಿಳ್ಕೊಳಬೇಡ. ಇಷ್ಟರಲ್ಲಿ ಅಷ್ಟನ್ನೂ ನಾನು ಇದಿರಿಸ್ತೇನೋ ಇಲ್ಲೋ ಎನ್ನುವದು ಪ್ರಶ್ನೆ, ಐಶ್ವರ್ಯ ಉಂಟು ಅಂತ ಶ್ರೀಮಂತ ಕೊಬ್ಬಬಾರದು ಅದನ್ನು ವ್ಯಯಿಸುವಂತಹ ರೀತಿ ನೀತಿಯಲ್ಲಿ ಅಂವ ಎಷ್ಟರ ಮಟ್ಟಿನ ಅರ್ಥಶಾಸ್ತ್ರಪರಿಣಿತಮತಿ ಎಂಬುದು ಕೃತಿಯಿಂದ ಕಾಣಬೇಕು. ಮತ್ತೊಬ್ಬನಲ್ಲಿ ಏನೂ ಇಲ್ಲ ಅಂತ ಹೇಳುವುದು, ತನ್ನಲ್ಲಿ ಉಂಟು ಎಂಬುದಕ್ಕೆ ಅರ್ಥವಾಗಬಾರದು. ಆದ್ದರಿಂದ ನೀನೇನು? ಪ್ರಪಂಚವೇ ತಿಳಿದಿದೆ; ನಾನೇನು ಪಾಮರ ಅಂತ ತಿಳ್ಕೊಂಡಿದ್ಯೋ? ಅಂತಹ ಔನ್ನತ್ಯ ಇದ್ದಂತಹ ಅರ್ಜುನನನ್ನೇ ಇದುರಿಸಿ, ಒಂದೋ ಬದುಕಬೇಕು ಇಲ್ಲ ಸಾಯಬೇಕು ಇದು ನನ್ನ ಉದ್ದೇಶ. ಯುದ್ಧದಲ್ಲಿ ಯೇನು, ಇಬ್ಬರೂ ಬದುಕುವದಿಲ್ಲ. ಸಮಬಲರಾದರೆ 'ಪಾರ್ಥಏವ' ಎಂಬ ನಿರ್ಣಯಕೊಡುವ ದಿವಸವನ್ನು ನಾವು ಮುಂದೂಡಬೇಕಾಗ್ತದೆ. ಆದ್ದರಿಂದ ಪಾರ್ಥಏವ ಧನುರ್ಧರನೋ ಕರ್ಣಏವ ಧನುರ್ಧರನೋ ಎಂಬುದು ಇತ್ಯರ್ಥಕ್ಕೆ ಬಂದ ಈ ಹೊತ್ತಿನಲ್ಲಿ ಬಹಳಷ್ಟು ಹಾರಾಟ ಬೇಡ ಚೀರಾಟ ಬೇಡ, ಪ್ರಯೋಗವೇ ನಡೆಯಲಿ, ಹೂಡು ಬಾಣವನ್ನು.

*(ಕರ್ಣನ ರಥವನ್ನು ಅರ್ಜುನ ಹಾರಿಸುತ್ತಾನೆ)*

ಯೇನಾಯಿತು, ನನ್ನ ರಥ ಒಂದು ಯೋಜನ ಹಿಂದೆ ಹೋದ್ರೆ? ಅರ್ಜುನನ ರಥಯೆಂಥದ್ದು? ನನಗ್ಗೊತ್ತುಂಟು ಅವನನ್ನ ಅವ ರಕ್ಷಿಸಿಕೊಂಡ್ರೆ ಸಾಕಾಗ್ತದೆ. ಶಲ್ಯ ಭೂಪತಿ ಮತ್ತೊಮ್ಮೆ ಅಲ್ಲೇ ತಂದು ನಿಲ್ಲಿಸಿದ್ಯಲ್ಲ ರಥವನ್ನು, ಅರ್ಜುನಾ ಎಚ್ಚರಿಕೆ ಎಚ್ಚರಿಕೆ ಎಚ್ಚರಿಕೆ, ನೋಡು ನಿನ್ನ ರಥದ ಗತಿಯೇನಾಯ್ತು? ರಥಯುದ್ಧದಿಂದ ಪ್ರಾರಂಭಿಸಿದ್ದಿ, ಮಂತ್ರಾಸ್ತ್ರ ಪ್ರಯೋಗ ಆಗ್ಲಿ, ಅರ್ಜುನಾ ನಿನಗೆ ಮಾತ್ರ ಅಲ್ಲ ಸಂದೇಹ ಇದ್ದದ್ದು ರಾಧಾಸೂನು?! ನಮ್ಮ ಪ್ರಭುವಾದಂತಹ ದೃತರಾಷ್ಟ್ರನಿಗೂ ಇದ್ದಿತ್ತು. ಎಲ್ಲಿಯವರೆಗೆ ಯುದ್ಧಾತುರತೆ ಆತನಿಗೆ ಇದೆ ಎಂಬುದಕ್ಕೆ ಪ್ರಪ್ರಥಮ ದಿವಸ ಧೃತರಾಷ್ಟ್ರನಿಗೆ ಬಂದಂತಹ

ಒಂದು ಜಿಜ್ಞಾಸೆ ಕಾಣುವದಕ್ಕಿಲ್ಲವಲ್ಲ ಈ ಯುದ್ಧ? ಕಾಣಬೇಕು ಅಂತ ಅವನ ರಕ್ತದಲ್ಲಿತ್ತು. ಆವಾಗ ಸಂಜಯನೇ ಕಣ್ಣಾಗಿ ದೊರಕಿದ್ದು ಹ್ಹ .. ನಾನು ಮಾಡಿದಂತಹ ಯುದ್ಧದಲ್ಲಿ ಧೃತರಾಷ್ಟ್ರನಿಗೂ ಇದ್ದಂತಹ ಸಂದೇಹ ನಿವಾರಣೆ ಆಗ್ಯದೆ ಅಂತ ನಾನು ತೃಪ್ತನಿದ್ದೇನೆ. ಮೇಲೆ ನೋಡು, ಸೂರ್ಯಾಸ್ತವೇ ಆಯಿತೋ ಎಂಬ ಭ್ರಮೆ, ನಮ್ಮ ಬಾಣಗಳ ಮುಸುಕು ಸರಿಸಿ ವೈಮಾನಿಕರು ಕೆಳಕ್ಕೆ ನೋಡುವಂತಾಗಿದೆ! ಹಾಗಾದರೆ ನಾನು ಕಲಿತದ್ದೆಲ್ಲಿ? ನನ್ನ ಗುರು ಯಾರು? ನನ್ನ ಪಾಂಡಿತ್ಯದ ಪರಿಧಿ ಎಷ್ಟು? ಎಂಬುದನ್ನು ಬಾಯಿಂದ ಹೇಳಬೇಕಾದ ಅಗತ್ಯವಿಲ್ಲ. ಆದರೆ ಒಂದುಂಟು, ಯುದ್ಧಧರ್ಮ ಮಂತ್ರಾಸ್ತ್ರಗಳನ್ನು ಧಾರಾಳಾ ಪ್ರಯೋಗಿಸಬಹುದು ಆದರೆ ಉಪಸಂಹರಿಸಬೇಕು ಉಭಯರೂ, ಇಲ್ಲದೇ ಇದ್ರೆ ಪ್ರಪಂಚದಲ್ಲಿ ಉತ್ಪಾತವಾದೀತು. ಈಗ ಹೇಗೆ? ಮಂತ್ರಾಸ್ತ್ರದ ಎಸುಗೆ ಮಾತ್ರವೋ? ಅಲ್ಲ ಅದನ್ನು ಉಪಸಂಹರಿಸುತ್ತಿರುವಂತಹ ಸಿದ್ಧಿಯೂ ನೀನ್ ಹೇಳುವಂತೆ ಅನಾಮಧೇಯನಾದ ಒಬ್ಬ ಕರ್ಣನಲ್ಲಿ ಉಂಟು ಅಂತ ಒಪ್ಪಿದೆಯೋ? ಪ್ರತೀ ಸಲ ತಾನ್ ಮೇಲೆ ಎನ್ನುವುದು ಬೇಡ, ಈವರೆಗೆ ನಡೆದ ಯುದ್ಧದಲ್ಲಿ ನಾವು ಸಮಾನತೆಯನ್ನು ಪ್ರದರ್ಶಸಿದ್ದೇವೆ, ರಥ ಯುದ್ಧದಿಂದ ತೊಡಗಿದರೆ ಅಲ್ಲಿಯೂ ಕರ್ಣ! ಈಗ ಕೇಳೇನೆ ಅರ್ಜುನಾ ನಿನ್ನಲ್ಲಿ ಆ ಸ್ವಯಂ ಸ್ಫೂರ್ತಿ, ಕ್ಷಾತ್ರ ವರ್ಚಸ್ಸು ಜಾಗೃತವಾಗ್ಯದೆ ತಾನೆ? ಆದ್ದರಿಂದ ಇದು ಯುದ್ಧ. ಇನ್ನು ದಿವ್ಯಾಸ್ತ್ರಗಳು ಮುಗಿದವು ಅಂತಲ್ಲ. ಅದೂ ಒಂದು ಪ್ರಯೋಗ ನಡೆಯಲಿ.

|ಮಾರವಿ-ಏಕತಾಳ ಇಂತೀ ಪರಿಯಲಿ ಕರ್ಣನು ರೋಷವ | ನಾಂತತಿ ಸಾಹಸದಿ |

ಸಂತಸ ದಲಿ ಭುಜಗಾಸ್ತ್ರವ ತೆಗೆದನ | ನಂತಪರಾಕ್ರಮದಿ ॥ ೧೬೮ |

ಇದೊಂದು ಸರ್ಪಮುಖೀ ಬಾಣ! ಇದು ಶಸ್ತ್ರ ಇದು ಅಸ್ತ್ರವಲ್ಲ. ನನ್ನ ಗುರುಗಳು, ಸರಿಯಾದಂತಹ ಅರ್ಹತೆಯುಳ್ಳಂತಹ ಪ್ರತಿಭಟನ ಮುಂದೆ ಮಾತ್ರ ಇದನ್ನು ಪ್ರಯೋಗಿಸತಕ್ಕದ್ದು ಅಂತ ಆಜ್ಞೆ ಮಾಡಿದ್ದಾರೆ. ಇಂತಹ ಯಾವತ್ತೂ ಆ ಸರ್ಪಮುಖೀ ಬಾಣ ಇದಕ್ಕೆ ಮಂತ್ರ ದೇವತೆಯನ್ನು ಆವಾಹಿಸುವದಕ್ಕಿದ್ದಂತಹ ಮಂತ್ರೋಪದೇಶವನ್ನು ನನ್ನ ಗುರುಗಳಾದ ಭಾರ್ಗವರಾಮರು ಮಾಡಿದ್ದಾರೆ. ರುದ್ರದೇವತೆಯನ್ನು ಮನಸಾ ಧ್ಯಾನಿಸಿ ಈ ಸರ್ಪಮುಖೀ ಬಾಣದಲ್ಲಿ ಸಂಹಾರ ಶಕ್ತಿಯನ್ನು ಆವಾಹಿಸಿ ಪ್ರತಿಭಟನಾದ ಅರ್ಜುನನ ಕೊರಳಿಗೆ ನೇರವಾಗಿ ಹಿಡ್ಡಿದ್ದೇನೆ. ಯೇನಿದೂ! ಸ್ವಯಂ ಇದರಲ್ಲಿ ಯೇನೋ ಪ್ರತ್ಯೇಕ ಆವೇಶಗೊಡಂತೆ ಇದೆಯಲ್ಲ ಈ ಬಾಣದಲ್ಲಿ ಸರ್ವಸ್ವಭಾವವೂ ನನಗೆ ಗೋಚರಿಸ್ತಾ ಇದೆ. ನಾಲಿಗೆಯನ್ನು ಹೊರಕ್ಕೆ ಚಾಚುತ್ತದೆ, ಮಾತ್ರವಲ್ಲ ವಿಷವನ್ನು ವಮಿಸುತ್ತಾ ಇದೆ. ಆಂ, ಇದ್ದರೇನಂತೆ ರುದ್ರದೇವರನ್ನು ತಾನೆ ನಾನಿದಕ್ಕೆ ಆವಾಹಿಸದ್ದು? ರುದ್ರನು ವಿಷಕಂಠನೂ ಹೌದು ಸರ್ಪಾಭರಣನೂ ಹೌದು ಬಹುಶಃ ರುದ್ರನ ಸಂಪೂರ್ಣವಾದಂತಹ ಶಕ್ತಿ ಇದರಲ್ಲಿ ಮೈಗೂಡಿದೆ. ಅಂತ ನಾನು ಸಮಾಧಾನ ತಾಳೇನೆ. ಒಂದು ವೇಳೆ ಪ್ರತ್ಯೇಕ ಶಕ್ತಿಯೇ ಆವೇಶಗೊಂಡಿರಲಿ, ಮಂತ್ರಶಕ್ತಿಯ ಮುಂದೆ ಅದೆಷ್ಟು? ಇಚ್ಛಾ ಕ್ರಿಯಾ ಜ್ಞಾನ

ಇವು ಮೂರು ಯೋಧನಾದ ನನ್ನ ಸ್ವಾಧೀನ. ಆದ ಕಾರಣ, ನನ್ನ ನಿಯಂತ್ರಣದಲ್ಲಿದ್ದ ಈ ಬಾಣಕ್ಕೆ ಬೇರೆ ಯಾವ ಭೂತಾವೇಶವಾದರೂ ಕೂಡಾ ಕಳವಳ ಪಡಬೇಕಾದ್ದೇನಿಲ್ಲ ಆದರೆ ಒಂದು ಸಂದೇಹ. ಗುರಿಯೇನಾದರೂ ತಪ್ಪಿ ಹೋದಿತೊ? ಅರ್ಜುನನ ಕೊರಳು ತಪ್ಪಿಹೋದೀತೋ! ಹೋಗುವುದಕ್ಕೆ ಶಕ್ಯವಿಲ್ಲ. ಆದರೂ ಮಹಾರಥಿಯೂ ಅಷ್ಟೇ ಅಲ್ಲ ಸೂತತ್ವದಲ್ಲಿ ಅದ್ಭುತ ಚಮತ್ಕಾರವನ್ನು ತೋರಿಸುವವನು ಆದ ಹಿರಿಯನಾದ ಭೂಪತಿ ಶಲ್ಯ - ಇವನದ್ದಾದ ಸಲಹೆಯನ್ನು ಕೇಳಿಕೊಳ್ಳುವದು ಒಳ್ಳೆಯದು.

| *ಭಾಮಿನಿ // ಏನು ಸಾರಥಿ ಸರಳು ಪಾಂಡವ / ಸೇನೆಯನು ಗೆಲಲಹುದೆ ಪಾರ್ಥನ* |

*ಮಾನಿನಿಗೆ ವೈಧವ್ಯದೀಕ್ಷಾವಿಧಿಯ ಕೊಡಬಹುದೆ* |

ಆನಲಮ್ಮುವರುಂಟೆ ನಿನಗಿದು | ಸಾನುರಾಗವೆ ಹೇಳೆನಲು ರವಿ |

ಸೂನುವಿನ ಮೊಗ ನೋಡಿ ಮಾದ್ರಾಧೀಶನಿಂತೆಂದ || ೧೬೯ ||

ಸಾರಥೀ, ಸಾರಥಿಯಾಗಿ ಉತ್ತರಿಸಬೇಕಾದದ್ದು ಜೊತೆಗೆ ಮಹಾರಥಿಯಾಗಿಯೂ ಕಲ್ಪಿಸಬೇಕಾದದ್ದು - ನೋಡಿದೆಯಲ್ಲ ಅರ್ಜುನನ ಕೊರಳಿಗೆ ನೇರಾಗಿ ಗುರಿ ಹಿಡ್ಡಿದ್ದೇನೆ. ಆದರೂ ಯೇನೋ ಈ ಬಾಣದಲ್ಲಿ ನನಗೆ ಅರಿವಿಗೆ ಬಾರದ ಒಂದು ವಿಕಾರ ಗೋಚರಿಸ್ತಾ ಇದೆ, ಹೇಗೆ? ಸಂಪೂರ್ಣ ಪಾಂಡವ ಸೇನೆಯನ್ನು ಗೆಲ್ಲುವುದಕ್ಕೆ ಪರ್ಯಾಪ್ತವಾದದ್ದು ತಾನೆ ಈ ಬಾಣ? ಸೇನೆಬಿಡು, ಅರ್ಜುನನ ದಮನದಲ್ಲಿ ನಿರ್ಣಾಯಕ ವಾಗ್ತದೆ ಯುದ್ಧ, ಕೊರಳು ಕತ್ತರಿಸಲಾಪುದೆ? ಕೌರವನಿಗೆ ಜಯಸಿರಿಯನ್ನು ದೊರಕಿಸುವಲ್ಲಿ ಪರ್ಯಾಪ್ತವೇ? ಹೇಗೆ? ಕರ್ಣನಲ್ಲಿ ಏನೆಲ್ಲ ಇದೆ ಅಂತ ಗೊತ್ತಾಯ್ತಲ್ಲ. ಕೊರಳಿಗೆ ಗುರಿ, ಬಾಣಬಿಡಲೇ? ಏನು ನಿನ್ನ ಅಭಿಪ್ರಾಯ?

ಪ್ರಶ್ನೆ ಅಂದರೆ..... ಅಜ್ಞಾನದ್ದೇನೂ ಅಲ್ಲ. ಹೇಗೆ.... ಕರ್ಣಾ ಅಂತ ಚರ್ಚಿಸೋಣ ಏನು ಹೆಚ್ಚು ಕಡಿಮೆ? ಮಿಕ್ಕ ಯಾವ ಶಕ್ತಿಯಿದ್ದರೂ ಕೂಡಾ ಅದು ನನ್ನ ಕ್ರೀಯಾಶಕ್ತಿಗೋ ಇಚ್ಛಾ ಶಕ್ತಿಗೋ ಅತೀತವಾಗಿ ಇರಲು ಸಾಧ್ಯವೇ ಇಲ್ಲ. ಹಗೆ ಇದ್ರೆ ಅದರ ಅಪರಾಧದಿಂದ ಅದು ಹಾಳಾಗಿ ಹೋದೀತು. ಅರ್ಜುನನ ಕೊರಳಿಗೆ ಸರಿಯಾಗಿ ಹಿಡ್ಡಿದ್ದೇನೆ ಗುರಿ. ಅದರಲ್ಲಿನ ಹೊಸ ಆವೇಶ ನನ್ನ ಗುರಿಯನ್ನು ತಪ್ಪಿಸಲು ಅದು ಪರ್ಯಾಪ್ತವಾದೀತೇ? ಕೃಷ್ಣ ತಪ್ಪಿಸಿಯಾನು ಅಂತ ನೀನು ಹೇಳುವುದೋ? ಕೃಷ್ಣ ತಪ್ಪಿಸ್ತಾನೆ ಅಂತಾದ್ರೆ ಹ್ಞ , ನಾವು ತಪ್ಪಿದೆವು ಅಂತಾಗೊದಿಲ್ವಲ್ಲ. ಅರ್ಜುನ ತಪ್ಪಿಸಿಕೊಂಡ್ರೆ ಆ ಮಾತು ಬೇರೆ, ಕೃಷ್ಣ ತಪ್ಪಿಸಿದರೆ ಅದಕ್ಕೆ ಅರ್ಥ ಬೇರೆ, ಆದ ಕಾರಣ, ಬಾಣದಲ್ಲಿ ಯೇನಾವೇಶಗೊಂಡಿದೆ ಎಂಬುದು ಇಲ್ಲಿ ಮುಖ್ಯ ವಿಷಯವಲ್ಲ, ರಥ ಕಲ್ಪವನ್ನೋ ಅಶ್ವ ಹೃದಯವನ್ನೂ ತಿಳಿದಂತಹ

ನೀನು ಸೂಕ್ಷ್ಮವನ್ನು ಗುರುತಿಸಬಲ್ಲೆಯಾದರೆ ಕೃಷ್ಣ ಸಾರಥಿಯಾಗಿ ಹೇಗೆ ತಪ್ಪಿಸಬಲ್ಲ? ಕೃಷ್ಣದೇವರು ಅಂತ ಹೇಳಿದರೆ ನಮ್ಮ ಉದ್ಯಮಕ್ಕೆ ಮೌಲ್ಯ ಇಲ್ಲ ಅಂತ ಅರ್ಥ. ಹಾಗಾದರೆ, ಬಾಣವೇನು ಮಹತ್ವವಾದದ್ದು, ಗುರಿಯೂ ಸರಿಯಾದದ್ದು ಏನು ಮಾಡಿಯಾನು? ಎಷ್ಟು ತಗ್ಗಿಸಿಯಾನು



ರಥವನ್ನು? ಐದಂಗುಲ! ಈಗ ನನಗೆ ಬೇಕಾದದ್ದು ಆ ಸಾರಥ್ಯದ ಚಾಕಚಕ್ಯತೆ ಸಾರ್ವತ್ರಿಕವಾದದ್ದಲ್ಲ. ಕೃಷ್ಣ, ತಪ್ಪಿದರೆ ಶಲ್ಯ, ಯೇನು ಮಾಡಬಹುದು? ರಥ ತಗ್ಗಿಸಬಹುದು? ಹಾಗಾದರೆ ನನ್ನ ಗುರಿ ಕೊರಳಿಗಿದದ್ದು ಕಿರೀಟಕ್ಕಾದೀತು. ಈ ಬಾಣ ನಾನು ಉದ್ದೇಶಿಸಿದಂತಹಯಾವ ಉದ್ದೇಶ ಉಂಟೋ ಅದನ್ನು ಸಿದ್ಧಿಸಲಾರದು, ಯಾಕೆ ಸಿದ್ಧಿಸಲಾರದು? ಕೃಷ್ಣ ರಥ ತಗ್ಗಿಸಿಯಾನು.... ಅಲ್ವೋ? ಈ ಬಾಣದಿಂದಲೇ ನನ್ನ ಉದ್ದೇಶ ಸಿದ್ದಿಯಾಗಬೇಕಾಗಿದ್ರೆ...? ಗುರಿ ಬದಲಿಸಬೇಕು ಅಂತ ನಿನ್ನ ಹೇಳಿಕೆ ಅದು ನಮ್ಮ ದಾರಿದ್ರವನ್ನು ತೋರಿಸುತ್ತದೆ. ಆದ ಕಾರಣ, ಈಗ ನಿಂತು ಯುದ್ಧ ಮಾಡುತಿರುವ ನಾವು ಗುರಿಯನ್ನು ಬದಲಿಸಬಹುದೇ ಸಾರಥ್ಯ? ಪ್ರತಿ ಸ್ಪರ್ಧಿಗಳಿಗೆ ಒಂದು ತರದ ಉತ್ಸಾಹ ಬಂದು ಯಾರು? ಎಂಬ ನಿರ್ಣಯಕ್ಕೆ ಬರುವಾಗ ಮತ್ತಲ್ಲಿ ಅಭ್ಯಾಸ ಮಾಡುವದಕ್ಕಿಲ್ಲ ತಪ್ಪಿಸುವದಕ್ಕಿಲ್ಲ ಹಿಡ್ಡಿದ್ದೆ ಗುರಿ, ಹೋದ್ರೆ ಹೋಗಲಿ, ಈ ಹೊತ್ತು ಸಂಧ್ಯಾಕಾಲಕ್ಕೆ, ತೊಡಗಿದಂತಹ ನಮ್ಮ ಯುದ್ಧದಲ್ಲಿ ಕರ್ಣಾರ್ಜುನರಲ್ಲಿ ನಾವು ಅನುಸರಿಸಿದಂತಹ ಮಾರ್ಗದಲ್ಲಿ, ಆ ಮಾರ್ಗದಲ್ಲಿ ನಾವಿಟ್ಟ ಪದಗತಿಯಲ್ಲಿ ಬದಲಾವಣೆ ಎಂಬುದಿಲ್ಲ. ಇದು ತುಮುಲ ಯುದ್ಧವಲ್ಲ.

*# ಭಾಮಿನಿ // ಒಂದು ಶರಸಂಧಾನ ನಾಲಿಗೆ / ಯೊಂದು ನಮ್ಮಲಿ ಕುಟಿಲವಿದ್ಯೆಯ |*

*ನೆಂದು ಕಂಡೈ ಶಲ್ಯ ನಾವಡಿಯಿಡುವ ಧರ್ಮದಲ್ಲಿ |*

ಇಂದು ಹೂಡಿದ ಸರಳ ನಿಳುಹುವು | ದಂದವೇ ನೀನರಿಯೆ ಹೊರಸಾ |

ರೆಂದು ಖಾತಿಯೊಳಂಬನೆಸೆದನು ಕರ್ಣನಾ ಕ್ಷಣದಿ || ೧೭೦ ||

ಒಂದು ಶರಸಂಧಾನ- ಇಂದಿನ ಯುದ್ಧದಲ್ಲಿ ಬಂದ ಪ್ರಶ್ನೆಯೇ ಕೊರಳು ಕೊರಳು ಕೊರಳು! ಎದೆಗೆ ನಾನು ಗುರಿ ಹಿಡಿದರೆ ಕೊರಳಿಗೆ ತಾಗಿತು ಅಥವಾ ಬೇರೆಲ್ಲಿಗಾದರೂ ತಾಗೀತು ಅಥವಾಪ್ರಾಣ ಹೋದೀತು. ಪ್ರಾಣವೆಂಬುದೇ ಇಲ್ಲಿ ಗುರಿಯಲ್ಲ. ಹೋರಾಟದಲ್ಲಿ ನಮ್ಮಿರ್ವರ ಪಾಂಡಿತ್ಯದ ಸ್ಪರ್ಧೆ- ಇದಕ್ಕೆ ಬೀಜವಾದದ್ದು ಪರೀಕ್ಷಾರಂಗದಲ್ಲಿ, ಶಲ್ಯಭೂಪತೀ ಈಗ ಇಲ್ಲಿ ನಿಜವಾಗಿ ಬೇಕಾದದ್ದು ಅರ್ಜುನನ ಯೋಧ ನ್ಯಾಯದಂತೆ ಅವನ

ಘನತೆಯ ಪ್ರದರ್ಶನಕ್ಕೆ, ಈ ಬಾಣವನ್ನವನು ಮಧ್ಯಮಾರ್ಗದಲ್ಲಿ ಕತ್ತರಿಸಬೇಕು. ಕತ್ತರಿಸುವದಲ್ಲ; ಕೃಷ್ಣ ರಕ್ಷಿಸುವುದು. ಕೃಷ್ಣ ಕೃಪಾ ಪೋಷಿತನಾದ ಅರ್ಜುನನು ಕರ್ಣನಿಗೆ ಈ ಹೊತ್ತು ಇದಿರಾಳಿ ಅಂತ ಕರ್ಣ ಊಹಿಸಿಯೇ ಇಲ್ಲ. ಕೊರಳಿಗೆ ಗುರಿ ಹಿಡಿದಿದ್ದೇನೆ, ಕೃಷ್ಣ ಕಂಡಿದ್ದಾನೆ ಭಯಗೊಂಡಿದ್ದಾನೆ! ಅರ್ಜುನನನ್ನು ರಕ್ಷಿಸುವಲ್ಲಿ ತನ್ನ ಚಾಕಚಕ್ಯತೆಯನ್ನು ಪ್ರದರ್ಶಿಸುವುದಕ್ಕೆ ಇದ್ದಾನೆ ಎಂಬ ನಿನ್ನ ಮಾತಿನಿಂದ ನನಗೆ ಗೊತ್ತಾದದ್ದು ಹೇಗೆ ಓಹೊ ರಥವಿದ್ಯೆಯಲ್ಲಿ ಸಾರಥ್ಯದಲ್ಲಿ ಇಷ್ಟು ಚಮತ್ಕಾರ ಉಂಟು ಎಂಬ ಹೊಸ ವಿಷಯ, ಇದು ನಾಳೆ ಪ್ರಪಂಚಕ್ಕೆ ಉಪಕಾರಕ್ಕೆ ಬೀಳಲಿ. ಇಲ್ಲಿ ಒಂದು ಶರಸಂಧಾನ ಎಂದರೆ ಬದಲಾವಣೆ ಇಲ್ಲ. ನಮ್ಮ ಪ್ರತಿಜ್ಞೆ ಕೊರಳು ಕತ್ತರಿಸುತ್ತೇವೆ ವಿನಃ ಬೇರೆಲ್ಲಾದರೂ ಹೊಡೆದು ಪ್ರಾಣ ತೆಗೆಯುತ್ತೇವೆ ಅಂತ ಅಲ್ಲ. ನಾಲಿಗೆ ಒಂದೇ ಕರ್ಣಾರ್ಜುನರನ್ನು



ಸಂಬಂಧಿಸಿ ಗುರಿ ಬದಲಿಸುವ ಮಾತಿಲ್ಲ. ನಿನ್ನ ಸಲಹೆಯನ್ನು ಅತ್ಯಂತ ಕೃತಜ್ಞತೆಯಿಂದ ಬಹುಮಾನಿಸುತ್ತ ಕೃತಿಯಲ್ಲಿ ಮಾತ್ರ ತಿರಸ್ಕರಿಸುತ್ತಿದ್ದೇನೆ, ಪ್ರಯೋಗಿಸುತ್ತೇನೆ ನೋಡೋಣ.

*(ಸರ್ಪಾಸ್ತ್ರವು ಹಿಂತಿರುಗಿ ಬಂದು ತನ್ನನ್ನು ಪುನಃ ಬಿಡಲು*

*ಕರ್ಣನನ್ನು ಕೇಳಿಕೊಳ್ಳುತ್ತದೆ.)*

ಯೆಲಾ, ಯೇನು! ಆಯ ಯೇನು ಕೆಟ್ಟಿತು! ಯಾರು ನೀನು? ಕರ್ಣಾರ್ಜುನರ ಯುದ್ಧದಲ್ಲಿ ಮಧ್ಯಪ್ರವೇಶಿಸಿದ್ದೆ. ಹಾಗೆ ಮಾಡು ಹೀಗೆ ಮಾಡು ಅಂತ ಸಲಹೆ ಮಾಡ್ತಿ! ಅಯ್ಯಾ ಮಧ್ಯವರ್ತಿಯೇ, ನಿನಗೂ ಈ ಯುದ್ಧಕ್ಕೂ ಸಂಬಂಧವೇನು? ಅಶ್ವಸೇನನೋ ನೀನು? ನಾನು ಬಿಟ್ಟ ಬಾಣ ಫಲಕಾರಿಯಾಗಲಿಲ್ಲ. ಫಲಕಾರಿಯಾಗಬೇಕಾದ್ರೆ ನಿನ್ನನ್ನು ನಾನು ಇನ್ನೊಮ್ಮೆ ಉಪಯೋಗಿಸಬೇಕು. ಅಯ್ಯಾ ಫಲಕಾರಿಯಾಗದೇ ಇದ್ದದ್ದಕ್ಕೆ ಕಾರಣ ನಾನು ಮುಂದೆ ಫಲಕಾರಿಯಾಗುವುದಕ್ಕೆ ನಿಮಿತ್ತ ನೀನು.

ಮುಚ್ಚು ಬಾಯ್ ಅಶ್ವಸೇನ, ನೀನು ವೈರಿ ಅರ್ಜುನನಿಗೆ, ನೇರಾಗಿ ಹೋದ್ರೆ ನಿನ್ನನ್ನೂ ನಿನ್ನ ಕುಟುಂಬವನ್ನೂ ನಾಶಮಾಡಿಯಾನು ಅರ್ಜುನ, ಭೀರುವಾಗಿ ಸೂಕ್ಷ್ಮಾಕೃತಿಯನ್ನು ತಾಳಿ ಯಲ್ಲಿ ನಿನಗೆ ಸುರಕ್ಷಿತವಾದಂತಹ ಪ್ರದೇಶವೊ ಅದನ್ನಾರಿಸಿದ್ದು ನೀನು ಕರ್ಣನ ಬತ್ತಳಿಕೆ. ನಿನಗೆ ಗೊತ್ತಿಲ್ಲ; ಅಯ್ಯಾ; ಕರ್ಣಾರ್ಜುನರು ಪಂಥವನ್ನು ಮಾಡಿದ್ದು - ಸ್ವಂಯಂ, ತಮ್ಮಮ್ಮ ಶಕ್ತಿಯನ್ನು ಭಂಡವಲವನ್ನಾಗಿಸಿ, ನಿನಗೆ ಅರ್ಜುನ ಸಾಯಬೇಕು. ನಿನ್ನಿಂದಲೇ ಸಾಯಬೇಕು ಅಲ್ವೋ? ನೇರ ಹೋಗಲಿಕ್ಕೆ ಸಾಮರ್ಥ್ಯ ಇಲ್ಲ ನಿನಗೆ, ನನಗೆ ಸಾಮರ್ಥ್ಯ ಇಲ್ಲ ಅಂತ ಹೇಳಲಿಕ್ಕೆ ಧೈರ್ಯ ಉಂಟು ನಿನಗೆ? ಅರ್ಜುನನ ತಲೆ ಕತ್ತರಿಸುತ್ತೇನೆ ಅಂತ ನನ್ನ ಪ್ರತಿಜ್ಞೆಯಲ್ಲಿ ಸ್ವಯಂಪೂರ್ಣನಲ್ಲ ಕರ್ಣ, ಕರ್ಣನಿಗೆ ಮತ್ತೊಬ್ಬರ ನೆರವು ಬೇಕಾದೀತು. ಅಂತ ಊಹಿಸ್ತಿಯೋ? ನಾನು ಅರ್ಜುನನು ಕೊಂದಾಗ ಬೇಕಿದ್ರೆ ದೂರ ನಿತ್ತುಕೊಂಡು ಯೆಲ್ಲಿಂದಾದ್ರೂ ಬೇಡಿ ಕಾಡಿಯಾದ್ರೂ ಒಂದು ಕುಡುವೆ ಹಾಲು ಕುಡಿಯುವುದು ಬಿಟ್ಟು ಹ್ಹ ನನ್ನಲ್ಲಿ ಪಾಲುಗಾರಿಕೆ ನೀನು ಬಯಸ್ತಾ ಇದ್ದಿ! ನಿನ್ನ ಇಚ್ಛೆಗೆ ಜನ ಅಲ್ಲ ಕರ್ಣ, ನಾನು ಅರಿವಧೆಯನ್ನು ಎಸಗುವಲ್ಲಿ ನನ್ನ ಸ್ವಾರ್ಥವೂ ಇದೆ. ಪರ್ಯಾಯದಿಂದ ಕೌರವೇಶ್ವರನ ವೈಭವದ ಕಡೆಗೆ ದೃಷ್ಟಿಯಿದೆ. ನಾನು ಈ ಹೊತ್ತು ಕುರುಕ್ಷೇತ್ರವನ್ನು ಪ್ರವೇಶಿಸಿ ಈ ಯುದ್ಧದಲ್ಲಿ ಯೋಧನಾಗಿ ದುಡಿಯುತ್ತಿರುವುದು ಕೌರವನ ಹಂಗಿನಿಂದ. ಅರ್ಜುನನ ವಧೆ ಯೆಸಗುವಲ್ಲಿ ಕೌರವನ ಹಂಗೂ ಇದೆ. ಅದಕ್ಕಿಂತ ಹೆಚ್ಚಿಗೆ ಸ್ವಾಯತ್ತವಾದಂತಹ ನನ್ನ ಅಭಿಮಾನ ಇದೆ. ಪರರ ಹಂಗಿನಲ್ಲಿ ಗೆಲುವಂತಹ ಕರ್ಣನಲ್ಲ. ನಿನಗೆ ಅರ್ಜುನನಲ್ಲಿ ವಿರೋಧ ಇದ್ರೆ ಇದಕ್ಕಿಂತ ಮೊದಲೇ, ಹೊತ್ತು ನೋಡಿ ಹಿಂದಿನಿಂದ ಹೋಗಿ ಕಚ್ಚಿ ಸಾಯಿಸಬಹುದಿತ್ತು. ನೀನೂ ಹಾಳಾಗಿ ಹೋಗಿ, ನಿನ್ನ ಸಹಾಯವನ್ನು ಪಡೆದು ನಾನೂ ಕೂಡ ಪರರ ಹಂಗಿಗನಾಗಿ ನಾವಿಬ್ಬರೂ ಸೇರಿ ಅರ್ಜುನನ ವಧೆ ಮಾಡುವಲ್ಲಿ, ಊಂ ಹು.... ನನ್ನ ವ್ಯಕ್ತಿತ್ವ ಒಪ್ಪುವದಿಲ್ಲ, ನಡೆ.



*(ಕರ್ಣನ ಈ ಮಾತಿನಿಂದ ಕುಪಿತನಾದ ಶಲ್ಯ. ಜರೆಯಲು ತೊಡಗುತ್ತಾನೆ.)*

ಶಲ್ಯಭೂಪತೀ, ನನ್ನ ಸದ್ಯದ ಜಯ ಈ ಅಶ್ವಸೇನನನ್ನು ಅವಲಂಬಿಸಿಕೊಂಡಿದೆ ಅಂತ ನೀನೂ ಕೂಡಾ ತೀರ್ಮಾನಕ್ಕೆ ಬಂದೆಯೋ? ಶಲ್ಯಭೂಪತಿಯ ಸಾರಥ್ಯದಲ್ಲಿ ಈ ಹೊತ್ತು ಕರ್ಣನು ನಭೂತೋನ ಭವಿಷ್ಯತಿ ಅನ್ನುವಂತಹ ವ್ಯಕ್ತಿತ್ವವನ್ನು ಸ್ಥಾಪಿಸಬಲ್ಲ ಅಂತ ನನ್ನ ಗುರುವಿನ ಅಪ್ಪಣೆ. ಕ್ರೀಯೆಯಿಂದಲೂ ತೋರಿಸ್ತಾ ಬಂದಿದ್ದೇನೆ ಈ ಸಂಧ್ಯಾಕಾಲದ ವರೆಗೆ. ಇಲ್ಲಿ ಈ ಅಲ್ಪನ ಸಹವಾಸದಿಂದ? ಕೂಡದು. ನೀನು ಸ್ಥಿರವಾಗಿ ನಿಲ್ಲು, ಸಾರಥ್ಯ ಮಾಡು, ಕರ್ಣ ಏನು ಅಂತ ನಾನು ಮಾಡಿ ತೋರಿಸ್ತೇನೆ. ಇದು ಬಾಣವೊ ಇದು? ಅಶ್ವಸೇನ ಒಬ್ಬ ವ್ಯಕ್ತಿ. ಅಂತರಂಗದಲ್ಲಿ ಅರ್ಜುನನ ಬಗ್ಗೆ ಅವನಿಗೆ ದ್ವೇಷ, ಆ ದ್ವೇಷ ಸಾಧಿಸುವದಕ್ಕಾಗಿ ಅವ ನಾಗದೇವತೆಯಾದದ್ದರಿಂದ ಸೂಕ್ಷಾಂಶದಿಂದ ಬಾಣದಲ್ಲಿ ಸೇರಾನೆ. ಹೋಗಲಿ ಬಿಡು. ಇವನೂ ನನ್ನ ಬಾಣದಲ್ಲಿ ಮತ್ತೊಮ್ಮೆ ಆವೇಶಗೊಂಡು ನಾನು ಯೆದೆಗೆ ಗುರಿ ಹಿಡಿಯಬೇಕು ಅಂತ ಅವ ಹೇಳುವದು?

ಮಾರವಿ-ಏಕತಾಳ || ಅಂಬರ ಕುಸಿದರು ತೊಟ್ಟ ಶರವ ತೊಡೆ | ನೆಂಬ ಬಿರುದು ತನಗೆ | ಹಂಬಲಿಸುವುದೇಕೆನುತಲೆ ಗರ್ಜಿಸು | ತಂಬನು ನೂಕಿಸಿದ || ೧೭ |

ಅಂಬರ ಕುಸಿಯಲಿ! ಪಾತಾಳ ಮೇಲಕ್ಕೆ ನೆಗೆಯಲಿ! ಈ ತೊಟ್ಟ ಶರವನ್ನು ತೊಡೆ, ಯಾಕೆಂದರೆ ಉಗುಳಿದ್ದು ಅದು ಉಚ್ಚಿಷ್ಟ, ಹೊಟ್ಟೆಗೆ ಹಸಿವಾಗ್ತದೆ ಅಂತ ಉಗುಳಿದ್ದನ್ನು ತಿನ್ನ ಕೂಡದು. ನೀನಾ ವಿಷಯದಲ್ಲಿ ತಲೆ ಕೆಡಿಸಿಕೊಳ್ಳಬೇಡ, ಸಾರಥ್ಯ ಮಾಡು. ಯೆಲ್ಲಿದ್ದಾನೆ ಅರ್ಜುನ ನೋಡೋಣ. ಶಲ್ಯಾ ಈ ಕಾರಣಕ್ಕಾಗಿ ನೀನು ರಥ ಬಿಟ್ಟು ಹೋಗಿ ಅಂತಾದ್ರೆ ಧಾರಾಳ ಹೋಗಬಹುದು. ಕಳ್ಳನಿಗೊಂದು ಒಳ್ಳೆನೆ ಅಂತ ಒಂದು ಗಾದೆ ಉಂಟು ಹೋಗ್ಲಿ, ಪರಶುರಾಮದೇವ್ರು ನನಗನುಗ್ರಹಿಸಿದ್ದಾರೆ. ಶಲ್ಯನ ಸಾರಥ್ಯ ಇಲ್ಲದಿದ್ರೇನು? ಇನ್ನೂ ಮಂತ್ರಾಸ್ತ್ರಗಳಿದ್ದಾವೆ. ಆದಕಾರಣ ಸೂತತ್ವವನ್ನೂ ನಾನೇ ಮಾಡಿಕೊಳ್ಳುತ್ತಾ ನಾನೇ ರಥಿಕನಾಗಿ ಹೋರಾಟ ಮಾಡುತ್ತಾ, ಅರ್ಜುನನ್ನು ಇದಿರಿಸ್ತೇನಂತೆ.

ಪಂಚಾಗತಿ-ಮಟ್ಟೆತಾಳ ಮೋಡಿಯಿಂದಲೀರ್ವರೆ | ಬ್ಲಾಡುತಿರುವ ರಭಸವನ್ನು / ನೋಡಿ ದಿವಿಜರೆಲ್ಲ

ಕೊಂ | ಡಾಡುತಿರ್ದರು | ನೋಡಿ ದಿವಿಜರೆಲ್ಲ ಕೊಂ | ಡಾಡುತಿರುಲು

ಭಾನು ಸುತನ | ರೂಢಿಸಿದ ವರೂಥವೀಳೆಯೋ | ಕೂಡಿ ಕುಸಿದುದು || ೧೭೨ ||

ಹಾ..... ರಥ ಹೂತು ಹೋಯ್ತು! ಸಾರಥಿ ಬಿಟ್ಟು ಹೋದ. ಯುದ್ಧ ಮಾಡ್ತಾ ಇದ್ದ ಹಾಗೇನೆ ರಥದ ಗಾಲಿ ನೆಲದಲ್ಲಿ ಹೂತು ಹೋದ ಅನುಭವವಾಯ್ತು. ಕುದುರೆಗಳು ಎಷ್ಟು ಕಷ್ಟ ಪಟ್ಟು ಮೇಲಕ್ಕೆ ರಥವನ್ನು ಎಳೆದರು ಕೂಡಾ ಅಲುಗಾಡುವುದಿಲ್ಲ ರಥ! ಕುದುರೆಗಳು ಆಯಾಸಗೊಂಡಿದ್ದಾನೆ. ಛೇ ಹೂಂ, ದೈವದ ಮುನಿಸು, ದೈವಾನುಗ್ರಹ



ಇಲ್ಲ. ಶಿವನೇ! ಅಂತ ನಾನು ಉದ್ಧರಿಸಬಹುದೇ ಹೊರತು ಪ್ರತ್ಯಕ್ಷವಾಗಿ ಆ ಕಡೆಗೆ ಅನುಗೃಹ ಮಾಡಿದವನು ಪಾಶುಪತ ಶರವನ್ನು ಅರ್ಜುನನಿಗೆ ನೀಡಿ ಪ್ರಪಂಚದಲ್ಲಿ ಯಾವ ಯೋಧನು ಇದಿರಾಗುವದಕ್ಕಿಲ್ಲ ಅಂತ ಮಾಡಿ ತೋರಿಸಿದ ಮೇಲೆ, ಶಿವನು ಕೂಡ ಪಾಶುಪತ ಶಕ್ತಿ ಯಾವನ ಸ್ವಾಧೀನ ಇದೆಯೋ ಅವನ ಮುಂದೆ ಶಿವಾನುಗ್ರಹ ನನಗುಂಟು ಅಂತಂದ್ರೆ ಮೂರ್ಖತನವೇ. ಕೃಷ್ಣಸ್ತು ಭಗವಾನ್ ಸ್ವಯಂ!! ಕೃಷ್ಣ ಪ್ರತ್ಯಕ್ಷವಾಗಿ ಅರ್ಜುನನನ್ನು ರಕ್ಷಿಸ್ತಾನೆ ಎಂಬುದಕ್ಕೆ ಸರ್ಪಾಸ್ತ್ರ ತಪ್ಪಿ ಹೋದದ್ದೇ ಉದಾಹರಣೆ, ಮತ್ಯಾವ ದೇವರ ಬಲ ನಮಗೆ? ಹ, ನಮಗಿರುವದು ನಾವು ನಂಬಿದಂತಹ ಈ ಸ್ಥಿರೆ ಆದಂತಹ ಭೂಮಿ, ಕ್ಷತ್ರಿಯರಿಗೆ ಇವಳು ಸ್ಥಿರೆಯೆ. ಈ ಯುದ್ಧಕ್ಕೆ ವಿಷಯವೇ ಈ ಭೂಮಂಡಲ. ಆಡಳಿತದ, ರಣದ ಅಭಿಮಾನೀ ದೇವತಯೇ ಇವಳು. ಅವಳೇ ಮುನಿದಳು! ನನ್ನ ದುಡಿಮೆ ಯಾವನಿಗಾಗಿಯೋ ಆ ಕೌರವನಿಗೆ ಈ ಮಣ್ಣು ಮುನಿಯಲಿಲ್ಲ ಅಂತಾದ್ರೆ, ಇದ್ದಂತಹ ಈ ರಣ ಕ್ಷೇತ್ರದಲ್ಲಿ ನನ್ನ ರಥದ ಗಾಲಿಯನ್ನೇ ಭೂಮಿ ಕಚ್ಚಿ ಹಿಡ್ದದ್ದು, ಅಂದ್ರೆ ಕೆಸರಿನಲ್ಲಿ ಹೂತು ಹೋದದ್ದಲ್ಲ ಅದು. ಮಾತುಂಟು - ಹಾವು ಕಚ್ಚಿದರೆ ಔಷಧಿ ಉಂಟು ಮಣ್ಣು ಕಚ್ಚಿದರೆ? ಔಷಧಿ ಇಲ್ಲ!! ಹಾ... ದೈವವಿಹೀನ.

*// ಭಾಮಿನಿ // ಏನ ಮಾಡುವುದಿನ್ನು ದೈವವಿ | ಹೀನನಲ್ಲಾ ನೃಪತಿ ರಣದಭಿ |*

*ಮಾನಿ ದೇವತೆ ಮುಳಿದಳೆಂದಿಗೆನುತ್ತ ಚಿಂತಿಸಿದ |*

ಭಾನುಸುತ ರಥವಿಳಿದು ಕುಂತೀ | ಸೂನುವಿನ ಮೊಗ ನೋಡಿ ನೀತಿವಿ |

ಧಾನದಲಿ ತಾನೊರೆದ ಸರ್ವರು ಮೆಚ್ಚುವಂದದಲಿ || ೧೭೩ |

ದೈವ ವಿಹೀನನಲಾ ನೃಪತಿ!! ಯೇನು ಮಾಡೋಣ? ಆದ್ರೆ ಒಂದು ಆಸೆ ಇತ್ತು - ಸರ್ವಶಕ್ತಿಯನ್ನೂ ಉಪಯೋಗಿಸಿ ಕೊನೆಯ ಉಸಿರು ಇರುವವರೆಗೂ ಹೋರಾಟ ಮಾಡಬೇಕು ಅರ್ಜುನನಲ್ಲಿ ಅಂತ. ಸಮಭಟನಾಗಿ ಯುದ್ಧ ಮಾಡುವದಕ್ಕೆ ಸಾಧ್ಯವಿಲ್ಲದೇ ಹೋಯ್ತಲ್ಲ! ಯೇನು ಮಾಡೋದೀಗ? ಈ ರಥದಿಂದ ಕೆಳಕ್ಕೆ ಧುಮುಕುತ್ತೇನೆ. ಅರ್ಜುನಾ, ನಿನ್ನನ್ನು ಸ್ಪರ್ಧಿಸುವವನೇನೋ ಹೌದು ನಾನು. ಆದರೆ ಈ ಸ್ಪರ್ಧೆಯಲ್ಲಿ ಪ್ರತಿಭಟನಾದ ನಿನ್ನಲ್ಲಿ ಅಭಿಮಾನ ಶೂನ್ಯ ಕರ್ಣ ಅಂತ ತಿಳಕೊಳ್ಳಬೇಡ. ಸಣ್ಣ ಪುಟ್ಟ ವ್ಯಕ್ತಿಗಳ ಮೇಲೆ ಹಲ್ಲೆ ಮಾಡುವ ವ್ಯಕ್ತಿತ್ವವೇ ಕರ್ಣನಿಗಿಲ್ಲ ಅಂತ ನೀನು ಕೇಳಿರಬಹುದು. ಅಯ್ಯೋ ವಸ್ತುಸ್ಥಿತಿ ಇದಾಗಿದ್ರೂ ವೊದಗಿ ಬಂದಂತಹ ಪರಿಸ್ಥಿತಿ ನಿನಗೂ ಅರ್ಥವಾಗದೆ ತಾನೆ? ಮುಟ್ಟುತ್ತೇವೆ ಅನ್ನುವ ಸನ್ನಿವೇಶ ಇದು. ಯುದ್ಧದಲ್ಲಿ ತೋರಿಸಬೇಕಾದಂತಹ ಒಲವು ಯೇನು ಎಂಬುದು ಒಂದು ನಿಮಿಷದ ಮೊದಲು, ನೀನು ನಾನು ಪ್ರಕಟಿಸಿದ ಪ್ರಕಟಣೆಯನ್ನು ನೋಡಿ ಅರ್ಥೈಸಿಕೊಂಡಿರಬಹುದು. ಅಲ್ವೋ? ಚಂದ್ರವಂಶದಲ್ಲಿ ಹುಟ್ಟಿದವ ನೀನು. ಚಂದ್ರವಂಶದ ಔನ್ನತ್ಯಕ್ಕೆ ಯಾವುದು ಪ್ರತೀಕವೋ ಆ ಶುದ್ಧಸಂಸ್ಕೃತಿ ಈ ಹೊತ್ತು ಅರ್ಜುನನಿಂದ ಲೊಕವೇ ಕಂಡುಕೊಂಡದೆ. ವಿರೋಧಕ್ಕಾಗಿ ವಿರೋಧ ಅಲ್ಲ, ಜಯಕ್ಕಾಗಿ ಯಾವುದಾದರು ಥರದ ಹೋರಾಟವಲ್ಲ. ಇಲ್ಲದಿದ್ದರೆ ಹ್ದ ಈ ಕೃಷ್ಣಾರ್ಜುನರ ಸಮಾವೇಶ, ಈ ಸಮಾಗಮ



ಆಗುವುದಕ್ಕೆ ಸಾಧ್ಯವೇ ಇಲ್ಲ. ಒಬ್ಬನು ಹೃಷೀಕೇಶ, ಮತೊಬ್ಬ ಗುಡಾಕೇಶ! ಸ್ತುತಿ ಅಲ್ಲ ಇದು - ಪ್ರಾಮಾಣಿಕವಾದಂತಹ ಅನಿಸಿಕೆ. ಧರ್ಮ ಏನು ಧರ್ಮದ ಮರ್ಮ ಏನು? ಕಿಂ ಕರ್ಮ ಕಿಂ ಅಕರ್ಮ ಇದನ್ನು ನೀನು ಪ್ರಶ್ನಿಸಿದವ ಅದರ ರಹಸ್ಯವನ್ನು ಆಚಾರ್ಯನಾದಂತಹ ಶ್ರೀಕೃಷ್ಣನಿಂದ ಕೇಳಿದವ, ಕೇವಲ ಕಾರ್ಯ ಸಾಧನೆ ಆಗ್ತಿದ್ರೆ, ಯುದ್ಧ ಇಲ್ಲಿಯವರೆಗೆ ಬೆಳೆದು ಬರ್ತಿರಲಿಲ್ಲ, ಮುಗ್ದು ಹೋಗ್ತಿತ್ತು ಹೌದಲ್ಲ? ಅಯ್ಯಾ, ಧರ್ಮಪುತ್ರ ಅಂತ ಹೆಸರು ನಿಮ್ಮಣ್ಣನಿಗಾದ್ರೂ ನಿನ್ನ ತಾಯಿ ಆ ಕ್ಷತ್ರಿಯಾಣಿ, ನೋಂಪಿಯನ್ನು ನೋಂತು, ಸುಧರ್ಮ ಸಭೆಯ ಅಧ್ಯಕ್ಷ ದೇವೆಂದ್ರನನ್ನೆ ಮನಸಾ ಧ್ಯಾನಿಸಿ “ಸಾಕೋರ್ವ ಮಗ” ಅಂತ ನಿನ್ನನ್ನು ಹಡೆದ ಬಳಿಕ ಮತ್ತೆ ಸಂತಾನ ಬೇಡ ಅಂತ ಹೇಳಿದವಳಂತೆ! ನೋಡು ರಥ ಹೂತದೆ ಇಲ್ಲಿ. ಇದು, ರಥಿಕನಾಗಿ ಯುದ್ಧ ಮಾಡಬೇಕೋ ನೆಲದ ಮೇಲೆ ನಿತ್ತು ಯುದ್ಧ ಮಾಡಬೇಕೋ? ನೀನೆ ತೀರ್ಮಾನಿಸಿದರೆ ಮುಗಿಯಿತು. ಯುದ್ಧ ನೀತಿಯನ್ನು ಅನುಸರಿಸಿಕೊಂಡು ರಥವಿಹೀನನಾದಂತಹ ನಾನು, ಮತ್ತೊಂದು ಹೊಸ ರಥ ತರಿಸುವ ಆಲೋಚನೆ ಅಲ್ಲ, ಬೇರೊಬ್ಬ ಸಾರಥಿಯನ್ನು ಬರಿಸುವ ಆಲೋಚನೆಯಲ್ಲಿ ನಿರ್ಣಾಯಕ ಯುದ್ಧ, ಒಂದು ಶರಸಂಧಾನ ನಾಲಿಗೆಯೊಂದು' ಎಂಬ ಹಟದಲ್ಲಿ ನಾವು

ಯುದ್ಧಕ್ಕೆ ಇಳಿದವು. ಒಂದು ಐದು ನಿಮಿಷ ನೀನು ಯುದ್ಧ ವಿರಾಮವನ್ನು ಘೋಷಿಸಿದೆ ಅಂತಾದ್ರೆ ರಥ ಎತ್ತುವುದಕ್ಕೆ ಯತ್ನಿಸಿ, ರಥಯೆತ್ತಿ ಸಮದಂಡಿಯಾಗಿ ನಿನ್ನ ರಥಕ್ಕೆ ಇದಿರಾಗಿ ತಂದು ರಥವನ್ನು ನಿಲ್ಲಿಸ್ತೇನೆ. ಕೊಡುವುದು ಬಿಡುವುದು ನಿನ್ನಿಷ್ಟ. ಸರಿ ಹಾಗಾದರೆ ಪ್ರಯತ್ನಿಸ್ತೇನೆ

*(ಕೃಷ್ಣ– ಕರ್ಣನನ್ನು ಕೊಲ್ಲಲು ಇದೇ ಸಮಯ ಎಂದು ಪ್ರಚೋದಿಸುತ್ತಾನೆ.)*

ಅರ್ಜುನಾ ಒಳ್ಳೆ ಕೆಲಸವನ್ನೇ ಮಾಡಿದೆ! ಹ್ಹ ...ಹ್ಹ ... ನಿನ್ನಲ್ಲಿ ನಾನು ಸಮಯವನ್ನು ಯಾಚಿಸಿದ್ದ. ಅಪೇಕ್ಷಿಸಿದ್ದು, ನೀನೆ ಹೇಳಿದ್ದು – “ಆಯ್ತು ರಥ ಎತ್ತಿ ಬಾ”, ಇನ್ನೇನು ಒಂದು ಕೂದಲಳತೆಯಷ್ಟೇ ಬೇಕಾದದ್ದು ಅದಕ್ಕಿಂತ ಮೊದಲೇ ಯಾರ ಪ್ರಚೋದನೆಯೋ, ಯಾವ ಉತ್ಸಾಹವೋ ನನಗೆ ಗೊತ್ತಿಲ್ಲ! ಬಾಣ ಪ್ರಯೋಗ ಮಾಡಿ ನನ್ನ ರಥದ ಧ್ವಜದಂಡವನ್ನು ತುಂಡು ಮಾಡಿದೆ! ಒಳ್ಳೆಯದು - ಯಚ್ಚರಿಕೆಯನ್ನು ಕೊಟ್ಟೆ, ಈಗ ನೋಡು ರಥ ನೆಲಕ್ಕೆ ಬಂದಿದೆ. ಸಾರಥಿ ಇಲ್ಲ ಅಂತ ಮಾತ್ರ ಕೊರತೆ. ಆದರೇನು ಕೈಯಲ್ಲಿ ಬಿಲ್ಲಿದೆ. ಮಂತ್ರಾಸ್ತ್ರಗಳು ಇನ್ನೂ ಉಳಿದಿದ್ದಾನೆ. ಅರ್ಜುನ, ಇದು ನಿನ್ನ ದುರ್ದೈವವೊ ಅಲ್ಲ ನನ್ನ ದುರಂತವೋ ಹೇಳಲಿಕ್ಕೆ ಬರೋದಿಲ್ಲ. ಒಂದು ತೀರ್ಮಾನಕ್ಕೆ ನಾನು ಬಂದಿದ್ದೇನೆ ನನ್ನ ಹೆತ್ತ ತಾಯಿ ನಿನಗೆ ದ್ರೋಹ ಮಾಡಿದ್ದಾಳೆ ಯಾವಳೋ ಒಬ್ಬಳು ಅವಳು. ಆದರೆ ವಿವೇಕ ಉಳ್ಳವರಿಗೆ ಅರ್ಥವಾಗದೆ - ಶ್ರೀಮಂತ ಮನೆತನಕ್ಕೆ ಸೇರಿದವಳು ಯಾವುದೋ ಕಾರಣಕ್ಕಾಗಿ ಅಪವಾದಕ್ಕೆ ಭಯಗೊಂಡು ಭೀರುವಾದ ಅವಳು, ಈ ಮಗು ಯೆಲ್ಲಿಯಾದರೂ ಬದುಕಲಿ ಅಂತ ತಿಳಿದೇ ಆ ಪೆಟ್ಟಿಗೆಯಲ್ಲಿ ಅಷ್ಟು ಚಿನ್ನದ ಆಭರಣಗಳನ್ನು ತುಂಬಿಸಿ ನನ್ನ ದೇಹದಲ್ಲೂ ಚಿನ್ನಾಭರಣಗಳನ್ನು ತೊಡಿಸಿ ತೇಲಿ ಬಿಟ್ಟಿದ್ದಿರಬೇಕು ಅಲ್ವೋ? ಚಿನ್ನದಾಸೆಗಾದರೂ ಯಾರಾದ್ರೂ... ಅಲ್ಲವೇ? ಅದರಿಂದಲೆ



ನಾನು ವಸುಷೇಣನೆನೆಸಿದ್ದು. ಹಸ್ತಿನಾವತಿಗೆ ಅದು ಬಂದು ಸೇರಬೇಕೆ! ನೋಡು ಹಾಗಾದರೆ ನನ್ನ ತಾಯಿ ಇಲ್ಲಿಗೆ ಬಂದು ಸೇರಲಿ ಅಂತ ಉದ್ದೇಶಿಸಿದ್ದು, ಇಲ್ಲಿಯವನಾದಂತಹ ಅಧಿರಥ ಚಿನ್ನದಾಸೆಗಾಗಿ ಅಲ್ಲದಿದ್ದರೂ ಕೂಡ, ನನ್ನನ್ನು ರಕ್ಷಿಸಿದ. ಯೆಲ್ಲ ಒಂದು ಘಟನೆ ನನಗೆ ತೋರದೆ - ನನ್ನಮ್ಮ ಚಿನ್ನಾಭರಣದ ಜೊತೆಯಲ್ಲಿ ಆ ಪೆಟ್ಟಿಗೆಯನ್ನು ಯಾಕೆ ತೇಲಿ ಬಿಟ್ಲು? ಅದನ್ನೆ ನಾನು ಹೇಳಿದ್ದು ಯೇನು? ಅಳುಕುವ ಭಟ ನಾನು ಅಂತ ತಿಳಿದೊ? ಅಳುಕೊ.... ನನಗೆ! ನನಗೆ ಅಳುಕೊ......? ಪ್ರಪಂಚದಲ್ಲಿದ್ದದ್ದೆಲ್ಲ ಹೋಗ್ಯದೆ. ಪ್ರಥಮ ಮುಖದಲ್ಲೇ ನಾನು ದುರಂತವನ್ನು ಇದುರಿಸಿದವನು ನೀರಿನಲ್ಲಿ ಮುಳುಗಲಿಲ್ಲ! ಮತ್ತೂ ಬದುಕಿದೆ ನಾನು ನಾನಾಗಿ ಮೆರೆದೆ. ನೀನು ಕೇಳಿದೆಯಲ್ಲಾ “ಸೂತ ಪುತ್ರನಾಗಿಯೂ ಸೂತತ್ವದ ನೆಲೆಯನ್ನು ತಿಳಿಯಲಿಲ್ಲ” ಅಂತ. ತಿಳಿಯಲಿಲ್ಲ ನಾನು; ಇದನ್ನೆಲ್ಲ ತಿಳಿಯಬೇಕು ಅಂತ ಯತ್ನಿಸಿದವನೇ ಅಲ್ಲ. ಆದರೆ ಪರಿಸ್ಥಿತಿ ಪರಿಸರ ನನಗೆ ಒಂದೊಂದನ್ನು ತಿಳಿಸುತ್ತಾ ಬಂದಿದೆ.

ಆಹಾ, ಐರಾವತವನ್ನು ಇಳಿಸಿದ ಅರ್ಜುನ! ಮತ್ಸ್ಯ ಲಾಂಛನವನ್ನು ಭೇದಿಸಿದ ಅರ್ಜುನ!! ಇಡೀ ದ್ವಿಗ್ವಿಜಯ ಮಾಡಿ ರಾಜ ಸೂಯಕ್ಕೆ ಧನವನ್ನು ಒಪ್ಪಿಸಿದಂತಹ ಅರ್ಜುನ!!! ಈ ಹೊತ್ತು ನನ್ನ ಮುಂದೆ ನೀನು ತೀರಾ

ಚಿಕ್ಕವನಾಗಿ ಪ್ರಕಟಗೊಂಡೆ! ಅವಸರ ಯೆನಿತ್ತು? ನಾನೇನು ಹೇಳಿದ್ದೆ.... ರಥವನ್ನೆತ್ತಿ ಮೇಲಕ್ಕೆ ಬಂದರೆ ಈ ಹೊತ್ತು ಈ ಮೂರು ಮೂರ್ತಿಗಳು ಬಂದರೂ ಇದಿರಿಸ್ತೇನೆ ಅಂತ ಹೆದರಿದೆಯಾ ಅರ್ಜುನಾ? ಅಷ್ಟು ಸಮಯವನ್ನು ಕೊಟ್ಟರೆ ಹಾಗಾದಿತು ಅಂತ ಹೆದರಿದಿ, ಅಲ್ಲದಿದ್ದರೆ ಇದ್ಯಾಕೆ? ಆದರೂ ಸಿದ್ಧನಾಗಿದ್ದೇನೆ. ನೋಡೋಣ ಮಂತ್ರಾಸ್ತ್ರಗಳನ್ನು ಪ್ರಯೋಗಿಸು.

*(ಯುದ್ಧ)*

*// ಭಾಮಿನಿ // ಹಾನಿದೋರಕ್ಕೇರಿದು ನೃಪ ನಿ | ಸ್ಥಾನ ಕುಸಿದುದು ಕೇಳು ಕೊಳಗುಳ |*

*ಕಾನುವಡೆ ಕೈಕಾಲು ನಡುಗಿತು ಧೈರ್ಯಸಿರಿ ತೊಲಗಿ |*

ಹೀನ ನಾದನು ಕೌರವೇಶ್ವರ | ಗೇನು ಗತಿಯೋ ಹರ ಮಹಾದೇ |

ವೀನಿರೋಧಕೆ ಕಾದೆನೆಂದೆನುತಳಲಿದನು ಕರ್ಣ || ೧೭೪ ||

ಹಾ ಮರೆತು ಹೊಯ್ತಲ್ಲ! ಹೌದು ಹಾನಿಯೇ ಕಾಣಿಸ್ತಾ ಇದೆ. ಒಂದೊಂದನ್ನೂ ನೆನಪು ಮಾಡ್ತೆನೆ, ಅಸ್ತ್ರ ಮಂತ್ರ ನೆನಪು ಬರುವದಿಲ್ಲ!! ಯಾಕೆ ನೆನಪು ಬರುವದಿಲ್ಲ? "ಮೃತ್ಯು ಸನ್ನಿಹಿತವಾಗುವ ಕಾಲಕ್ಕೆ ಮಂತ್ರಾಸ್ತ್ರಗಳ ನೆನಪು ಬಾರದೇ ಹೋಗಲಿ" ಅಂತ ಪರಶುರಾಮ ದೇವರು ಹೇಳಿದ್ದಾರೆ. ಬಹುಶಃ ಹೌದದು. ಮರಣವನ್ನೇ ನಾನು ಇದಿರಿಸಬೇಕಾಗಿದೆ. ಆದರೆ,ಶಿವನೇ ಯೇನು ಮಾಡಲಿ? ಹೀಗಾಗಬಾರದಿತ್ತು ಅಂತ ನಾವು ಸದ್ಭಾವನೆಯಿಂದ ಎಣಿಸಬಹುದೇ ಹೊರತು ಹೀಗಾಗತಕ್ಕದ್ದು ಅಂತ ನಿರ್ಣಯಿಸುವ



ನಿಯತಿಯೇ ಬೇರೆ ತಾನೆ? ಆದ್ರೆ ಒಂದು ಕೌರವೇಶ್ವರನ ಬಗ್ಗೆ ನನಗೆ ಬಂದ ಅವಿನಾಭಾವ ಇದನ್ನು ಕತ್ತರಿಸುವದಕ್ಕೆ ಸಾಧ್ಯವಾಗುವದೇ ಇಲ್ಲ!! ಬಹುಶಃ ನನ್ನಲ್ಲಿದ್ದ ದೌರ್ಬಲ್ಯ ಅದೂ ಒಂದಿರಬೇಕು. ಅವನಿಂದ ನಾನು ಉಪಕೃತ. ಇಲ್ಲದೆ ಇದ್ರೆ ನಾನು ತಲೆಯೆತ್ತಿ ಬಾಳಿ ಬದುಕುವದಕ್ಕೆ, ನನಗೆ ಆಸರೆ ಸಿಕ್ಕುತ್ತಿರಲಿಲ್ಲ. ಪ್ರಾಮಾಣಿಕತೆಯನ್ನು ಬಹುಮಾನಿಸುವದಿದ್ರೆ ಪ್ರಪಂಚ ಕೌರವೇಶ್ವರನನ್ನು ಹೇಗೆ ಚಿತ್ರಿಸ್ತದೆ ಅಂತ ನಾನು ಹೇಳಬೇಕಾದವನಲ್ಲ ಹೇಳಬೇಕಾದವನಲ್ಲ ಅಂತ ಮಾತ್ರವಲ್ಲ ಪ್ರಪಂಚ ನನ್ನನೆಷ್ಟು ಗುರತಿಸ್ತದೇ? ನನ್ನನ್ನು ನಾನು ಗುರುತಿಸಿಕೊಂಡಿದ್ದೇನೆ, ಸ್ವಲ್ಪ ಅಂಶವನ್ನು ಕೌರವ ಗುರುತಿಸಿಕೊಂಡಿದ್ದಾನೆ. ಅಯ್ಯೋ.... ಕೌರವನು ಸತ್ತು ಹೊಗ್ತಾನಲ್ಲ ಅಂತ ತೋರುವಾಗ ಈ ಅಂತ್ಯ ಕಾಲದಲ್ಲೂ ಕೂಡಾ ಅದೇ ನನ್ನ ಸ್ಮರಣೆಗೆ ಬರದಲ್ಲ. ಕೌರವನಿಗೇನು ಗತಿ, ಕೌರವನಿಗೇನು ಗತಿ ಅಂತ ಎಣಿಸುತ್ತಾ ನಾನು ಅಳಿದರೂ ಕೂಡಾ ಆಮೇಲೆ ನನ್ನ ಗತಿ ಮಂದವಾಗಿ ಹಿಂಬಾಲಿಸುವದೇ ಆಗಿ ಬಂದೀತಲ್ಲ? ಈ ಕಾಲದಲ್ಲಿಯಾದರೂ ನೆಮ್ಮದಿಯಿಂದ, ಶಾಂತಿಯಿಂದ, ಸೂರನ ಮಗನಾಗಿ ಹುಟ್ಟಿದರೂ ಓಜಸ್ಸಿಲ್ಲದೆ ತೇಜಸ್ಸಿಲ್ಲದೆ ಕಳೆಗುಂದಿದ ನಾನು ಮುಂದೆ ಆ ಪ್ರಕಾಶವನ್ನಾದರೂ ಕಂಡು

ಓಜಸ್ವಿಯಾಗಿ, ತೇಜಸ್ವಿಯಾಗಿ ಉತ್ತಮ ಜೀವನಕ್ಕೆ ಒಂದು ಒತ್ತಡವನ್ನಾದರೂ ಸಂಪಾದಿಸಿಯೇನೇ ಈ ಕಾಲಕ್ಕೆ? ಇಲ್ಲ, ಆಗ್ಲಿಕ್ಕಿಲ್ಲ. ಹಾಗಾದರೆ ಕರ್ಣನೇನು? ಕರ್ಣನಿಗಿರುವುದು ಬಾಹುಬಲ! ಕರ್ಣನಿಗಿರುವುದೇನು? ಗೆಲುವು, ಅವನ ಕ್ಷಾತ್ರ.... ಅದನ್ನಾದರೂ ಪ್ರಕಟಿಸೋಣವೋ, ಕೈ ಸೋತೆನಲ್ಲಾ...!!

ನೀಲಾಂಬರಿ-ಏಕತಾಳ || ಶಿವ ಶಿವ ಸಮರದೊಳು | ಕೈಸೋತೆನಲ್ಲ | ಭುವನೇಶ ಮಮತೆಯೊಳು | ಕುವರಂದದೊಳೆನ್ನನು | ಆಪತ್ತಿಗಾ | ಗುವನೆಂದು ಸಲಹಿದನು || ೧೭೫ |

ಯಾವ ವಿಧದ ವಿಘ್ನ ವಿಡ್ಡೂರಗಳು ನನ್ನ ಇದಿರು ಬಂದು ಪ್ರತ್ಯಕ್ಷವಾದ್ರೂ ಧೈರ್ಯದಿಂದ ಯದೆಯೊಡ್ಡಿ ಅವುಗಳಶಕ್ತಿಯನ್ನು ಕುಗ್ಗಿಸಿ ಸ್ವಯಂ ಶಕ್ತಿಯಿಂದ ನಾನು ಮುಂದೆ ಮುಂದೆ, ಮುಂದೆ ಬಂದಿದ್ದೇನೆ. ಇಲ್ಲ... ಬೆಳವಣಿಗೆ ಪೂರ್ತಿ ಆದ್ಮಲೆ ಮತ್ತೆ ಪತನವೇ. ಯಾಕೆ ಹೀಗಾಗ್ತದೆ? ಹೂಂ, ಹೌದು ಯಾರನ್ನೂ ದೂರಿ ಪ್ರಯೋಜನವಿಲ್ಲ. ಈ ಕಾಲದ ಗಂಗಾಪುತ್ರ ಭೀಷ! ಆ ಉತ್ಕರ್ಷ ಎಷ್ಟಿತ್ತು! ಬರಬರುತ್ತಾ ಬರಬರುತ್ತಾ ಕಳೆಗುಂದಿ ಭೀಷ್ಮ ಎಂಬ ಹೆಸರನ್ನು ಮಾತ್ರ ಉಳಿಸಿ ಶರತದಲ್ಲಿ ಮಲಗಬೇಕಾದಂತಹ ಒಂದು ಪತನಯೋಗ, ಒಂದಪಕರ್ಷವನ್ನು ಭೀಷ್ಮನಲ್ಲಿಯೂ ನಾವು ಕಾಣೇವೆ. ಈ ಕ್ಷತ್ರಿಯ ಕುಮಾರರಿಗೆಲ್ಲ ಧನುರ್ವೇದವನ್ನು, ಧಾರೆಯೆರೆದು ಅರ್ಜುನನಂತಹ ಘನ ವಿಕ್ರಮಿಯನ್ನು ತಯಾರಿಸಿದಂತಹ ದ್ರೋಣ..... ಬರಬರುತ್ತಾ ಬರಬರುತ್ತಾ ಕಳಪೆಯಾಗಿರುವದನ್ನು ನಾವು ಕಂಡಿದ್ದೇವೆ! ಅಭಿಮನ್ಯುವಂತವನನ್ನು ಇದಿರಿಸುವಲ್ಲಿ ಎದೆಗುಂದಿದ ಸೇನಾಪತಿಯಾದಂತಹ ಕೋಲಗುರು ದ್ರೋಣ!! ನನ್ನ ಕೈಯಿಂದಲೇ - "ಕರ್ಣ, ಹೋಗು ಅಭಿಮನ್ಯವಿನ ಕೈಯ್ಯಲ್ಲಿದ್ದಂತಹ ಆಯುಧವನ್ನು ಕತ್ತರಿಸು" ಅಂತ ಹೇಳಿದಾವಾಗ ನಾನು ಆಕ್ಷೇಪಿಸಿದ್ದೇನೆ. ಹೌದು ಮತ್ತೆ "ಯಥೇಚ್ಛಸಿ ತಥಾಕುರು" ಅಂತಲೂ ಹೇಳಿದರು ದ್ರೋಣರು. ಇದು ಸರಿ ಅಂತಲೇ



ನಾನು ಆ ಬಿಲ್ಲನ್ನು ತುಂಡರಿಸಿದೆ. ದ್ರೋಣರದ್ದು ಅಪಕರ್ಷ ಅದು. ನನಗೂ ಅದೇ ಅಪಕರ್ಷ. ಬಹುಶಃ ನಾನು ಕೈಸೋಲುವುದಕ್ಕೆ ಕಾರಣ, ಮನಸ್ಸಿಲ್ಲದ ಮನಸ್ಸಿನಿಂದ ಮತ್ತೊಬ್ಬರ ವೊತ್ತಡಕ್ಕೆ ಮಣಿದು ಆ ಅಭಿಮನ್ಯುಕುಮಾರನ ಆಯುಧ ಕತ್ತರಿಸಿದ್ದರಿಂದಲೇ ನನ್ನ ಕೈ ಕತ್ತರಿಸಲ್ಪಟ್ಟಿತೋ ಏನೋ! ದುರ್ವಿಧಿ!!

ಇಷ್ಟು ಕಾಲ ಬದುಕಬಾರದಿತ್ತು ನಾನು. ಅಂದೇ ಒಂದು ಪ್ರಶ್ನೆಯನ್ನಿಡಬಹುದಾಗಿತ್ತು ಪರೀಕ್ಷಾರಂಗದಲ್ಲಿ, ಅಧಿರಥನಿಗೆ ಸಿಕ್ಕಿದ ಮಗು ಯೆಲ್ಲಿಂದ? ಅಥವಾ ಹೀಗೆ ಬಂಗಾರ ಸಮೇತ ನೀರಿಗೆ ಎಸೆದ ತಾಯಿ ಯಾರು ಅಂತ ವಿಚಾರಿಸಿ ಹಸ್ತಿನಾವತಿಯವರು ಅಂತ ಹೇಳಿದ್ರೆ ಬಹುಶಃ ವಿಚಾರಣೆಯಾಗಿ ಸತ್ಯ ಹೊರಬತ್ತಿತ್ತೋ ಏನೋ! ಮತ್ತೊಂದುಂಟು; ಹೇಳಿದರೂ ಕೂಡಾ ವಿಚಾರಿಸುವ ಒಂದು ನೈತಿಕತೆ ಹಸ್ತಿನಾವತಿಯ ಸಿಂಹಾಸನ ಎಂದೋ ಕಳಕೊಂಡದ್ದಲ್ಲವೇ? ಭೀಷ್ಮನ ತಾಯಿಯಾದಂತಹ, ಶಂತನು ಚಕ್ರವರ್ತಿಯ ಹೆಂಡತಿ ಗಂಗಾದೇವಿ ಮಹಾರಾಣಿ! ಹೆತ್ತ ಏಳು ಮಕ್ಕಳನ್ನು ನೀರಿಗೆ ಎಸೆದಿದ್ದಾಳೆ - ಗೊತ್ತು, ದೇವವ್ರತನಾದ ಭೀಷ್ಮನಿಗೆ, ಏಳು ಮಕ್ಕಳನ್ನು ನೀರಿಗೆ ಎಸೆದ ಮಹಾರಾಣಿಯೊಬ್ಬಳು ಇತಿಹಾಸದಲ್ಲಿ ಜೀವಂತ ವ್ಯಕ್ತಿಯಾಗಿ ಉಳಿದಂತಹ ಪರಂಪರೆಯಲ್ಲಿ ಈ ಒಂದು

ಮಗುವನ್ನು ನೀರಿಗೆ ಬಿಟ್ಟವಳು ಯಾರು ಅಂತ ಕೇಳುವವರು ಯಾರು?! ಕೇಳದೇ ಇದ್ದದ್ದೇ ಒಳ್ಳೆದಾಯ್ತು. ಅಂತೂ ಕರ್ಣಾರ್ಜುನರ ಸ್ಪರ್ಧೆ ಬೆಳೆದು ಬಂತು. ಅದಕ್ಕೊಂದು ಆಸರೆಯೂ ಸಿಕ್ತು. ನನಗೊತ್ತು, ಕೌರವೇಶ್ವರ ಕರ್ಣನಿಗೆ ಮಾನವನ್ನಾಗಲಿ ಸ್ಥಾನವನ್ನಾಗಲಿ ಕಲ್ಪಿಸಿದ್ದು ಆಪತ್ತಿಗಾದಾನು ಅಂತ. ಅದವನ ಪ್ರಾಮಾಣಿಕವಾದ ಅನಿಸಿಕೆ. ಆದರೆ ಯೇನು ಮಾಡೋಣ, ಭೀಷ್ಮದ್ರೋಣರಂತೆ ಒಂದು ಅಪಕರ್ಷತ್ವ ನನಗೂ ಬಂತು. ಹಾಂ, ಹಾಂ, ಅರ್ಜುನ ಹೇಳಿದಂತೆ - "ವಿರೋಧಿಗಳನ್ನೆಲ್ಲಾ ಕೊಲ್ಲಬಹುದು ನಾನು ಆದರೂ ಕೃಷ್ಣಾ ಭೀಷ್ಮದ್ರೋಣರನ್ನು ವಧಿಸಲಾರೆ ಕೃಷ್ಣಾ?! ಆವಾಗ ಶ್ರೀಕೃಷ್ಣ ಒಂದು ಮಾತು ಹೇಳಿದಂತೆ ಸಂಜಯನದ್ವಾರಾ ಧೃತರಾಷ್ಟ್ರ ಕೇಳಿದ್ದರಲ್ಲಿ ಕಿಂಚಿದಂಶ ನಮ್ಮ ಕಿವಿಗೂ ಬಿದ್ಯದೆ. "ನೀನೇನು ಕೊಲ್? ಕೊಲ್ಲಲಿಕ್ಕೆ ನೀನ್ಯಾರು? ಕಾಲದಿಂದ ಈ ಮೊದಲೇ ಹತರಾದವರು ಈ ಭೀಷ್ಮದ್ರೋಣಾದಿಗಳು" ಅಂತ. ಆದ್ದರಿಂದ "ನಿಮಿತ್ತ ಮಾತ್ರಂ ಭವ ಸವ್ಯಸಾಚಿ?! ಆ ಕಾಲಘಾತಕ್ಕೆ ಭೀಷ್ಮದ್ರೋಣರು ಸಿಕ್ಕಿದ್ದಾರೆ ಮೂರನೆಯವ ಕರ್ಣನೇ ಇದ್ರೂ ಇರಬಹುದೇ? ತಸ್ಯೈ ನಮಃ ಕರ್ಮಣೇ... ಹಾಗಾಗಿ ಅಪತ್ತಿಗಾಗುವವ ಕರ್ಣ ಅಂತ ಅವ ಪ್ರಾಮಾಣಿಕವಾಗಿ ನಂಬಿದರೂ, ಕಾಲದಿಂದ ಕೊಲ್ಲಲ್‌ಪಟ್ಟಂತಹ ಕರ್ಣ ಯೇನು ಮಾಡುವದಕ್ಕೆ ಸಾಧ್ಯ? ಆದರೆ ಒಂದು - ಭೀಷ್ಮದ್ರೋಣರು ಕಾಲದಿಂದ ಹತಿಸಲ್ಪಟ್ಟರು. ಕರ್ಣ ಹಾಗೋ? ಕರ್ಣ ಹಾಗೋ? ಸತ್ಯವನ್ನು ತಿಳದ್ದರಿಂದ ಸತ್ತೇ ಹೋದ!!

|| ನೀಲಾಂಬರಿ-ಏಕತಾಳ | ಎನ್ನ ಕುಲವ ಕೃಷ್ಣನು | ಎಚ್ಚರಿಸಿ ತಾ | ನೆನ್ನೊಡೆಯನ ಕೊಂದನು ||

ಇನ್ನೆಂತು ಅಗಲುವೆನು | ಕೌರವನಿಗೆ | ಎನ್ನಂಥ ಮಿತ್ರರಾರಿನ್ನು || ೧೭೯ ||



ಕೃಷ್ಣ ಬಂದಿದ್ದ; ಬಂದವ ಸಂಧಾನಕ್ಕಾಗಿ ಬಂದ ಶ್ರೀಹರಿ ರಣವೀಳ್ಯವನ್ನು ಪಡಕೊಂಡ! ಬರುತ್ತಾ ಏಕಾಂತಕ್ಕೆ ನನ್ನನ್ನು ಆಹ್ವಾನಿಸಿದ, ಎಚ್ಚರಿಸಿದ. ಯುದ್ಧದಿಂದ ಏನಾದೀತು ಎಂಬುದನ್ನೂ, ಜೊತೆಗೆ ನನ್ನ ಹುಟ್ಟಿನ ಗುಟ್ಟನ್ನೂ ಬಿಚ್ಚಿಟ್ಟ ಹುಂ, ರಣವೀಳ್ಯವನ್ನು ಸ್ವೀಕರಿಸುವದಕ್ಕಿಂತ ಮೊದಲಾಗಿದ್ದೆ ಯೇನನ್ನಾದರೂ ಯೋಚಿಸುವದಕ್ಕೆ ಸಾಧ್ಯತೆ ಇತ್ತೋ ಯೇನೋ! ಯುದ್ಧನಿರ್ಣಯ ಆದೇಲೆ, ಯಾರನ್ನು ಹೆಚ್ಚು ನಂಬಿ ಕೌರವೇಶ್ವರ ಯುದ್ಧವೇ ಬದ್ಧವೆಂದು ಸಾರಿದನೊ ಆ ಕರ್ಣನನ್ನು ಸಮೀಪಕ್ಕೆ ಕರೆದು, "ಕುಂತೀದೇವಿಯ ವಿವಾಹಾತ್ ಪೂರ್ವದಲ್ಲಿ ಜನಿಸಿದಂತಹ ಪುತ್ರ ನೀನು, ಕಾನೀನ ಪುತ್ರ ಕಾನೀನ ಪುತ್ರನಿಗೆ ಹಿರಿತನ ಇಲ್ಲಿ ಕೊಟ್ಟಿದ್ದನ್ನು ಕಾಣೇವೆ ನಾವು. ಸತ್ಯವತಿದೇವಿಯರ ಸೊಸೆಯಂದಿರಲ್ಲಿ ಸಂತಾನೋತ್ಪತ್ತಿಯನ್ನು ಮಾಡಿದಂತಹ ಬಾದರಾಯಣ ಕೃಷ್ಣಪಾಯನ ಸದ್ಯ ವ್ಯಾಸನೆಂದು ಪ್ರಸಿದ್ಧಿ ಪಡೆದವ ಕಾನೀನ ಪುತ್ರನೇ. ಜೇಷ್ಠತ್ವ ಅವನಿಗಾದ್ದರಿಂದಲೇ ಅವನಿಗಿಲ್ಲಿ ನಿಯೋಗ ವಿಧಿಯಂತೆ ಸಂತಾನೋತ್ಪತ್ತಿ ಮಾಡುವ ಹಕ್ಕೂ ಬಂತು, ಧರ್ಮದ ಸಮ್ಮತಿಯೂ ಬಂತು. "ಕರ್ಣಾ ನೀನು ಪಾಂಡು ಚಕ್ರವರ್ತಿಯ ಮಹಾರಾಣಿಯಾದ ಕುಂತಿಗೆ ಮೊದಲು ಹುಟ್ಟಿದವನಾದ್ದರಿಂದ ಕಾನೀನ ಪುತ್ರ ಜೇಷ್ಠತ್ವವನ್ನು ಆಕ್ಷೇಪಿಸುವದಕ್ಕೆ ಯಾರಿಗೂ ಹಕ್ಕಿಲ್ಲ ಈಗ ಬದುಕಿದ್ದವರಲ್ಲಿ. ಒಪ್ಪು, ಒಪ್ಪಿದರೆ ನೀನೇ ರಾಜನಾಗ್ತಿಯ. ನೀನು

ರಾಜನಾಗುವುದರ ಮೂಲಕ ಯೇನಾಗ್ತಿದೆ? ನಿನ್ನ ಒಡೆಯನಾದ ಕೌರವನನ್ನು ರಕ್ಷಿಸಿದ ಹಾಗಾಗ್ತದೆ. ಪಾಂಡವರಿಗೆ ಭಯ ಅಂತ ತಿಳಕೊಳ್‌ಬೇಡ ಒಪ್ಪು, ಒಪ್ಪು..." ಕೃಷ್ಣ ನಿಜವಾಗಿ ಶಾಂತಿದೂತ ಅಂತ ಪ್ರಾಮಾಣಿಕವಾಗಿ ಅನಿಸಿತು ಆವಾಗ ಕೆಲವರೆಲ್ಲ ಹೇಳಿದರು - "ಕೃಷ್ಣನೇ ಯುದ್ಧವನ್ನು ಬಯಸುತ್ತಾನೆ ಈ ಕಾಲಕ್ಕೆ ರಕ್ತಕ್ರಾಂತಿ ಅನಿವಾರ್ಯ ಅಂತ ಹೇಳ್ತಾನೆ..." ಇಲ್ಲ ಇಲ್ಲ. "ಐದುಮಂದಿ ಪಾಂಡವರೂ ನಿನ್ನನ್ನು ಓಲೈಸ್ತಾರೆ? ಕೌರವನಂತೂ ಓಲೈಸಬೇಕಾಗುತ್ತದೆ." ಬಹಳ ಮಾತ್ಯಾಕೆ. ಬಹುಶಃ ದ್ರೌಪದಿಯಂತಹ ಹೆಣ್ಣನ್ನು ಬಯಸದೇ ಇದ್ದ ಪುರುಷರು ವರ್ತಮಾನ ಕಾಲದಲ್ಲಿ ಯಾರೂ ಇಲ್ಲ! ಮತ್ಸ್ಯಲಾಂಛನ ಭೇದಿಸುವದಕ್ಕೆ ನಿನಗೆ ಸೂತತ್ವ ಬಾಧೆಯಾಯ್ತು ಕರ್ಣಾ; ಪಾಂಚಾಲಿಗೆ ಗಂಡನಾಗು, ಆಹಾ.. ಯೇನ್ ಔದಾರ್ಯ ಏನ್ ದೊಡ್ಡಸ್ತಿಕೆ ಶ್ರೀಕೃಷ್ಣನದ್ದು! ಅಪರಾಧ ಏನೂ ಅಲ್ಲ, ಅಂದು ಕುಂತಿ ಪುತ್ರರು ಆರುಮಂದಿ ಅಂತಾದ್ದೇಲೆ ಹಕ್ಕಿನಿಂದ ಪಾಂಚಾಲಿ ಅವರಿಗೆ ರಾಣಿ "ಮಕ್ಕಳು ಸಮವಾಗಿ ಹಂಚಿಕೊಳ್ಳಿ" ಅಂತ ಹೇಳಿದ್ದಾಳೆ. ಮಕ್ಕಳು ಎಷ್ಟು ಅಂತ ಅವಳು ಹೇಳಲಿಲ್ಲ, ಐದೊ ಆರೋ ಅಂತ. ಆವಾಗ ಕೈಕಾಲು ನಡುಗಿತು ಹೃದಯ ಕಂಪಿಸಿತು. ವೀರಾವೇಶವೆಲ್ಲ ಅಡಗಿ ನೀರು ಬಿಸಿಯಾದಾವಾಗ ಕುದಿದು ಕುದಿದು ಆಮೇಲೆ ಆವಿ ತಣ್ಣಗಾಗುವಂತೆ ಕಣ್ಣೀರಾಗಿ ಸುರಿಯಿತು. ಕೃಷ್ಣಾ ಕಾಡಲಾಗದು ಕೋಪವ ಮಾಡಲಾಗದು...

ಕ್ಷಮಿಸು ಕೃಷ್ಣಾ, ನಿನ್ನ ಕೊಡುಗೆ ಬಹಳ ದೊಡ್ಡದು, ಆದರೆ ಅಪಾತ್ರನು ನಾನು. ಕೌರವನಲ್ಲಿ ದಾಸ್ಯ ಅಳಿದು ಹೊಗುವದಿಲ್ಲ. ದೇಹದಿಂದ ನಾನು ಪ್ರಭುವಾದರೂ ನೀನು ಹೇಳುವ ಈ ಅರಸೊತ್ತಿಗೆ ಇದು ಕೌರವನ ಆಣತಿಯಂತೇ ಹೊರತು ನನ್ನ ಅಧಿಕಾರ ಆಗಲಿಕ್ಕಿಲ್ಲ. ಪಾಂಡವರಿಗೂ ಅನ್ಯಾಯವಾದೀತು. ನಾನು ರಾಜನಾಗಿ ಕೌರವ ಹೇಳಿಯಾನು



"ಪಾಂಡವರನ್ನು ಕಾಡಿಗಟ್ಟು" ಅಂತಂದ್ರೆ? ನಾನು ಪ್ರಭುವಾಗಿ ಮುದ್ರೆಯನ್ನು ಒತ್ತಬೇಕಾಗ್ತದೆ. ಸಾಲಗಾರ ನಾನು ಕರ್ಣ ಕುರುಪತಿಗೊಂದೆ ಜೀವ ಒಂದೇ ಭಾವ; ಆದ್ದರಿಂದ ಅಗಲಿಕ್ಕಿಲ್ಲ ಸಂಧಾನ. ಕೃಷ್ಣಾ, ಕೌರವನಿಗಿಂತ ಒಂದು ನಿಮಿಷ ಮೊದಲು ಈ ದೇಹವನ್ನು ಗಂಧದ ಕೊರಡಿನಂತೆ ತೇದು ತೇದು ತೇದು ಮುಗಿಸಿ ಬಿಡ್ತೇನೆ. ಕೃಷ್ಣಾ ಹುಟ್ಟು ಸಾಕು ಮುಂದೆ ಹುಟ್ಟಿಸಬೇಡ. ಮುಂದೆ ಹುಟ್ಟಿಸುವದಿದ್ರೆ ಭವ್ಯವೂ ದಿವ್ಯವೂ ಅದಂತಹ ಬದುಕು ನನಗೆ ಬಗ್ಗಿ. ಅದಕ್ಕನುಕೂಲವಾಗಿ ಸತ್ತಮೇಲೆ ಯದ್ಧಾನಂತರದಲ್ಲಿ ಧರ್ಮರಾಯನ ಕೈಯಿಂದ ಎಳ್ಳು ನೀರು ಬಿಡಿಸು ಕೃಷ್ಣಾ ಅಂತ ಕೇಳಿದೆ. ಮೆಚ್ಚಿದ. ಸಂತೊಷ ಪಟ್ಟ. ಮನಮುನಿಸಿಲ್ಲ! "ನಾನು ಹೀಗೆ ಹೇಳಿದ್ದು ಕೇವಲ ಸಂಧಿಪ್ರಿಯನಾಗಿ, ನೀನು ಒಪ್ಪುವದಿಲ್ಲ. ಕರ್ಣಾ ರಘುಕುಲ ಲಲಾಮ ನೀ ರಾಮಂಗೆ ಸರಿ ಅದರ ಗುಣ ನಿನಗೆ ಪರೋಕ್ಷದಲ್ಲಿ ಗೊತ್ತಾದೀತು" ಅಂತ ಹೇಳಿ ಹೋದ. ಹಾಂ, ಅದಕ್ಕೆ ಮತ್ತೊಮ್ಮೆ ವೊತ್ತು ಎಂಬಂತೆ ಬಂದವಳು ನನ್ನ ತಾಯಿ ಕುಂತೀದೇವಿ! ತಂದೆ ಯೆಚ್ಚರಿಸಿದ ಸೂರ್ಯದೇವ, "ಮೋಸ ಹೋಗೋಡ". ಮೋಸ ಆದ್ರೂ ತಾಯಿಯಿಂದಲ್ವೆ? ಯಾವನೋ ಮಹಾಪುರುಷ ಹೇಳಿದ್ದಾನಂತೆ "ಕೆಟ್ಟ ಮಕ್ಕಳಿರಬಹುದು ಕೆಟ್ಟತಾಯಿ ಇಲ್ಲಕ್ಕಿಲ್ಲ". ಪರಿಸ್ಥಿತಿಯನ್ನು ಅರ್ಥೈಸಿಕೊಂಡವ

ನಾನು. ನನ್ನಮ್ಮ ನನ್ನನ್ನ ಯಾಕೆ ಒಗೆದಳು ನೀರಿಗೆ ಅಂತ. ಯೆಲ್ಲಿಯಾದರೂ ಬದುಕಲಿ ಎಂಬ ಸಂಕಲ್ಪವೇ. ತಾಯಿ ಅಂತ ಕೇಳಿದೆ - ಯೇನು ಬಿಜಯಂ ಗೈದಿರಿ ಮಾಹಾರಾಣಿಯವರು ಒಂದು ಕೊಂಕೇ ಅದು. ತಡೆಯದೇ ಹೇಳಿಬಿಟ್ಟದು. ಆಗ ಒಂದೇ ಮಾತು- "ಚಂದ್ರವಂಶದ ಕುಡಿಯ ಕಾಪಾಡು". ಹಾಗಂದ್ರೇನು? ನನ್ನ ಐದು ಮಕ್ಕಳನ್ನು ಕಾಪಾಡೇಕು. ಹಂ, ತಾಯಿ, ಅರ್ಜುನನ್ನು ಬಿಟ್ಟು, ಐದು ಮಕ್ಕಳ ತಾಯಿಯಾಗಿ ನೀನು ಎಂದೆಂದು ಇರುವಂತೆ ನಾನು ಯುದ್ಧವನ್ನು ಮಾಡ್ತೇನೆ. ಅದರರ್ಥ - ನಮ್ಮ ಪಂಥ ಹಿಂದೆ ತೆಕ್ಕೊಳ್ಳಬೇಕಾದದ್ದಲ್ಲ. ಅರ್ಜುನನ್ನು ಕೊಂದೇನು. ಆ ನಿಮಿಷಕ್ಕೆ ಬಂದೇನು, ನಿನ್ನ ಮಗನಾಗಿ ಇಲ್ಲ ನಾನು ಸತ್ರೆ ಅರ್ಜುನನಂತೂ ಉಳಿತಾನಲ್ಲ? ಆಗ್ಗೆ ಆಕೆ ಮತ್ತೊಂದು ಹೇಳಿದಳು- "ಚಿಂತಿಲ್ಲ ಮಗನೇ ಕ್ಷತ್ರಿಯಾಣಿ ನಾನು ಇನ್ನೊಂದು ವರ ಕೇಳೇನೆ" ಯೇನು? "ತೊಟ್ಟಂಬ ತೊಡದಿರು!!" ಅದೇಂತದು ಅದು? ಹೊಸತಾಗಿ ತೋರಿತು ನನಗೆ. ಆ ಕ್ರಮವೇ ಇಲ್ಲ ಯುದ್ಧದಲ್ಲಿ ಯಾಕೆ ಅಂದ್ರೆ, ಉಗುಳಿದ್ದನ್ನು ಮತ್ತೊಮ್ಮೆ ಉಚ್ಚಿಷ್ಟ ಅಂತಲೇ ತಿರಸ್ಕರಿಸುವರು. ಆಗ ಹೇಳಿದೆ ಯುದ್ಧ ನೀತಿ ತಾಯಿ ಅದು. ಸಮಭಟರು ಯುದ್ಧ ಮಾಡುವಾಗ ಗುರಿ ತಪ್ಪಿಸುವುದಿಲ್ಲ. ಅಥವಾ ಆ ಬಾಣದ ಶಕ್ತಿಯನ್ನು ಆ ಕೂಡಲೇ ಉಪಯೋಗಿಸುವುದಿಲ್ಲ. ಗದಾ ಯುದ್ಧದಲ್ಲಿಯೂ ಹಾಗೆ, ಸೊಂಟದ ಕೆಳಗೆ ಹೊಡೀಬಾರು, ಭುಜದ ಮೇಲೆ ಹೊಡಿಬಾರು ಅಂತ ಇದ್ದ ಹಾಗೆ ಧನುರ್ವೇದದಲ್ಲೂ ಇದೆ. ಹೇಳಿ ಕೇಳಿ ನಮ್ಮ ಲಕ್ಷವೇ ಕೊರಳು. ಯಾಕೆ ಕೆಳ್ತಾಳೆ ತಾಯಿ ಅಂತ ಗೊತ್ತಾಗಲಿಲ್ಲ ನನಗೆ. ಆ ಕೂಡಲೇ ಹೇಳಿದೆ ಛೇ ನೀನ್ ಕೇಳಬೇಕಾದ್ದೇ ಇಲ್ಲ. ಹ ನಮ್ಮ ನಿರ್ಧಾರ ನಿರ್ಧಾರವೇ ಉತ್ತಮ ಸಂಗೀತಗಾರ ಇಂಥ ಸ್ವರಸ್ಥಾನ ಕಲ್ಪಿಸಿ ಹಿಡಿದ್ರೆ ಅದೇ ಅದು. ಮತ್ತೆ ಯೇರಿಳಿ ಇಲ್ಲ. ಹಾಗೆ, "ತೊಟ್ಟಂಬ ತೊಡದಿರು"- ತತಾಸ್ತು, ಈಗಲ್ಲವೇ ನನಗದು ಗೊತ್ತಾದದ್ದು - ಆ. ಅಶ್ವಸೇನ! ಶಲ್ಯ ನನಗೆ ಹೇಳಿದ್ದು – "ಹೂಂ ತೊಡು" ಪ್ರತಿಬಂಧಕ ಬಂತು!! ಮಾತೆಗಿತ್ತೆನು



ಭಾಷೆಯನು. ಯಾರು ಹೇಳಿದ್ದರು ಕುಂತಿ ದೇವಿಗೆ! ಯಾರು ಹೇಳಿದ್ದರು ಅಂತ ನಾವು ಯಾಕೆ ಯೋಚಿಸ್ಬೇಕು? ಸರ್ವಜ್ಞ ಸರ್ವಾಂತರ್ಯಾಮಿ ಕೃಷ್ಣ ಇದ್ದ ಮೇಲೆ....

ಹಂ, ಹೋಗಲಿ, ಯೇನಾದ್ರು, ಕೌರವನಿಗೆ ಇನ್ನೇನು? ನನಗಿಂತ ಆಪ್ತರು ಯಾರು? ಸರ್ವಸ್ವವನ್ನು ಕೌರವೇಶ್ವರನಿಗಾಗಿ ಸವೆಯಿಸುವ ಉದಾರಿಗಳು ಯಾರು? ಯಾರೂ ಇಲ್ಲ. ಕರ್ಣ ಈವರೆಗೆ ಬದುಕಿದ್ದು ದೊಡ್ಡದು. ನನ್ನ ಪರಿಸ್ಥಿತಿ ಬೇರೆಯವರಿಗೆ ಬರ್ತಿದ್ರೆ.... ಹೇಳ್ ಹೆಸರಿಲ್ಲದೇ ಹೋಗ್ತಿತ್ತು. ಯೆಲ್ಲವನ್ನು ಇದಿರಿಸಿದೆ. ಭೂಮಿ ಕಚ್ಚಿ ಹಿಡ್ಡದ್ದೂ ಹಾಗೇ, ಕತ್ತಿ ಮಸೆಯುತ್ತಾ ಇದ್ದಾಗ ಒಮ್ಮೆ ಹಿಡ್ಡು ತಿರಿಗಿಸೋಣ ಅಂತ ಆಮೇಲೆ ಪ್ರಚೋದನೆ ಬಂದಾವಾಗ ಕತ್ತಿ ತಿರುಗಿಸುತ್ತಾ ಇದ್ದಾಗ ಗುರಿ ತಪ್ಪಿ ಆಶ್ರಮದಲ್ಲಿಂದ್ದತಹ ಹೋಮಧೇನುವಿನ ಕುತ್ತಿಗೆಯ ಮೇಲೆ ಬಿತ್ತು ಅದು ಸತ್ತು ಹೋಯ್ತು, ಬ್ರಾಹ್ಮಣ ಸಿಟ್ಟಿಗೆದ್ದ, "ಸಕಾಲದಲ್ಲಿ ಅಯ್ಯಾ ನಿನ್ನನ್ನು ಭೂಮಿಯೇ ನಿರೋಧಿಸಲಿ" ಶಾಪ ನೀಡಿದ. ಆಮೇಲೆ ಕ್ಷಮೆ ಯಾಚನೆ ಮಾಡಿದ್ರೆ.....? ಯೇನು ಮಾಡೋಣ ಬ್ರಾಹ್ಮಣ ಹೇಳಿಯಾಗಿ ಹೋಯ್ತು. ಇದು

ಬುದ್ಧಿಪೂರ್ವಕ ಬಂದದ್ದಲ್ಲ. ಯೆಲ್ಲ ದೈವದ ಪ್ರಚೋದನೆ. ಯಾವ ಬ್ರಾಹ್ಮಣರನ್ನು ಪ್ರತಿನಿತ್ಯ ಅವರು ಕೇಳಿದ್ದು ಕೊಟ್ಟು ತೃಪ್ತಿ ಪಡಿಸಿದ್ದೇನೋ ಆ ಬ್ರಾಹ್ಮಣರೇ ನನಗೆ ವಿರೋಧಿಗಳಾದ್ದದ್ದು ಯೆಂತಹ ದುರ್ದೈವ! ಪರಶುರಾಮ ದೇವರು – ಬ್ರಾಹ್ಮಣರಿಗಲ್ಲದೇ ಬೇರೆಯವರಿಗೆ ಅಸ್ತ್ರ ವಿದ್ಯಾಭ್ಯಾಸವನ್ನೇ ಮಾಡಿಸುವದಿಲ್ಲ ಅಂತ ಹೇಳಿದವರು! ಅದರೆ ದೇವವ್ರತನಿಗೆ ವಿದ್ಯಾಭ್ಯಾಸ ಮಾಡಿಸಿದರು ಅಂತ ಕೇಳಿದ ಮೇಲೆ, ದ್ರೋಣರ ಗುರುಕುಲದಲ್ಲಿಯೂ ನನಗೆ ವಿದ್ಯಾಭ್ಯಾಸಕ್ಕೆ ಸರಿಯಾದ ಆಶ್ರಯ ಸಿಕ್ಕದೇ ಇದ್ದಾಗ ಭೀಷ್ಮ ದ್ರೋಣರಿಗೆ ಧನುರ್ವೇದವನ್ನು ಉಪದೇಶ ಮಾಡಿದ ಮಾಹಾಬ್ರಾಹ್ಮಣ ಕ್ಷತ್ರಿಯ ದೇಶಿಯಾದ ಪರಶುರಾಮರನ್ನೇ ಆಶ್ರಯಿಸಿದೆ ನಾನು. ಜ್ಞಾನಿಯಾದ ಅವರೂ ಪ್ರಾರಂಭಕ್ಕೆ ಗುರುತಿಸಲಿಲ್ಲ! ಒಂದು ಮಾತು ಕೇಳಿದರು "ಕ್ಷತ್ರಿಯನೋ ನೀನು?? ಅಲ್ಲ ಅಂತ ಹೇಳಿದೆ. ನಾನು ಕ್ಷತ್ರಿಯನಲ್ಲವಲ್ಲ? ಹೇಳಿಕೋಟು, ಆ ಕಾಲಕ್ಕೆ ಇಂದ್ರ, ಕೃತ್ರಿಮವನ್ನು ಮಾಡಿ ವಜ್ರದುಂಬಿಯಾಗಿ ಬಂದು, ಗುರು ನನ್ನ ತೊಡೆಯ ಮೇಲೆ ತಲೆಯಿಟ್ಟು ವಿಶ್ರಾಂತಿ ಪಡೆಯುತ್ತಾ ಇದ್ದಾವಾಗ ನನ್ನ ತೊಡೆಯನ್ನು ಕೊರೆಯುವುದಕ್ಕೆ ಹತ್ತಿದ. ರಕ್ತಪಾತವಾಯ್ತು. ಎಚ್ಚರಗೊಂಡಂತಹ ಪರಶುರಾಮರು ಸಿಟ್ಟಿಗೆದ್ದು - "ನೀನು ಕ್ಷತ್ರಿಯನೇ ಇರಬೇಕು ಬ್ರಾಹ್ಮಣನಿಗೆಲ್ಲಿಂದ ಬಂದೀತು ಈ ತಾಳ್ಮೆ? ಆದ ಕಾರಣ ಯೇನು ಕಲಿಸಿದ್ದೇನೊ ಅದು ನಿನ್ನ ಮರಣದಲ್ಲಿ ರಕ್ಷಣೆ ಕೊಡದೇ ಹೋಗ್ಲಿ"! ಅದು ಹೌದು- "ವಿದ್ಯಯಾಮೃತಮಶ್ನುತೇ," ಧನುರ್ವೇದ ಅದು ಅಮೃತತ್ತ್ವವನ್ನು ಕರುಣಿಸಬೇಕು; ಕರುಣಿಸಲಿಲ್ಲ. ಹಾಗಾದ್ರೆ? ಹಾಗಾದ್ರೇನಿಲ್ಲ, ಸಂಪೂರ್ಣವಿಜೃಂಭಿಸು ಪರಶುರಾಮನ ಶಿಷ್ಯ. ಹೋದಲ್ಲಿ ಬಂದಲ್ಲಿ ಅಲ್ಲ, ಮತ್ತೆ ? "ಕೊನೇ ಕಾಲದಲ್ಲಿ ಶಲ್ಯನ ಸಾರಥ್ಯದಿಂದ" – ಹೀಗನುಗ್ರಹ! ಹಾಗಾದರೆ ಪರಶುರಾಮನು ಪೂರ್ತಿ ಬದುಕಿಸಲಿಕ್ಕೆ ನನಗಾಚಾರ್ಯನಾಗಲಿಲ್ಲ! ಬ್ರಾಹ್ಮಣನ ಶಾಪ, ಗುರುಗಳ ಕೋಪ; ತಾಯಿಯ ಪ್ರಲಾಪ! ಶ್ರೀಕೃಷ್ಣನದ್ದಾದ- "ಮಮ ಪ್ರಾಣಾಹಿ ಪಾಂಡವಾ?! ಆ ಕಡೆಗೆ ಇಂದ್ರ..... ಛೇ ಛೇ ಛೇ, ಈ ಪ್ರಪಂಚದಲ್ಲಿ



ಯಾರಾರು ಒಬ್ಬ ಜೀವಾತ್ಮನಿಗೆ ಉತ್ಕರ್ಷಕವಾಗಿ ಮಂತ್ರಾಕ್ಷತೆಯನ್ನು ಹಾಕ್ಬೇಕು; ಅವರೆಲ್ಲ ನನಗೆ ಮುನಿದು ನಿಂತರು!! ಹಾಗಾದರೆ ನಾನು ಬದುಕುವುದು ಪ್ರಪಂಚದಲ್ಲಿ ದಿವ್ಯ ಶಕ್ತಿಗಳಿಗೆ ಸಹನೆ ಆಗೋದಿಲ್ಲ. ಆದರೂ ಬದುಕಿದೆ ಹಟದಿಂದ. ಇದು ಸೂರ್ಯನ ಮಗನಾದ್ದರಿಂದ ನನಗೆ ಬಂದ ಯೋಗ, ಯೆಲ್ಲವನ್ನು ಮರೆತು, ಇನ್ನು ವಿಲಪಿಸಲಾರೆ. ಸೂರ್ಯನ ಉಪಾಸನೆ ಮಾಡಿದ್ದೇನೆ. ಆ ಸೂರ್ಯನ ಉಪಾಸನೆಯಿಂದ ನನಗೆ ಸಿಕ್ಕಿದ್ದು - "ಧೀಯೋ ಯೋನ; ಪ್ರಚೋದಯಾತ್" ಆ ಧೀಶಕ್ತಿ ಮಾತ್ರ ಈಗ ಮರಣಕಾಲಕ್ಕೆ ಆ ಧೀಶಕ್ತಿಯನ್ನೇ ಉಪಯೋಗಿಸಿಕೊಂಡು ನಾನು ದೇಹ ಅಲ್ಲ, ನಾನು ಮನಸ್ಸಲ್ಲ, ನಾನು ಬುದ್ಧಿಯಲ್ಲ ನಾನು. ನಾನೇ, ನಾನು ನಾನೇ ಅಂತ ಒಂದು ಮೂಹೂರ್ತ ನಿರ್ವಿಕಲ್ಪ ಸಮಾಧಿಯಿಂದ ಕುಳಿತು ಬಿಟ್ಟೇನಂತೆ.

| *ಕಂದ* | *ಎನುತಪರೋಕ್ಷದಿ ರವಿಜಂ* | *ಮನವಿರಿಸುತ ನರನ ವರೂಥಾಗ್ರದ ಹರಿಯಂ* ॥

ನೆನೆದೀಕ್ಷಿಸುತಿರೆ ಪಾರ್ಥನ | ಘನಶರವಳುಕಲು ದ್ವಿಜನಾಗಿಯೆ ಹರಿ ಬಂದಂ || ೧೭೭ |

ಇಲ್ಲಿ ಯಾರು? ವೃದ್ಧವಿಪ್ರ  ಸ್ವಾಮಿ, ನನ್ನ ದುರ್ದೈವ ಹೀಗೂ ಕಾಡ್ತದಲ್ವೇ? ಯೇನೂ ಇಲ್ಲದೇ ಇದ್ದಂತಹ ಪರಿಸ್ಥಿತಿ, ನಾನು ಮಾತ್ರ ಇದ್ದೇನೆ! ಅಷ್ಟೆ. ಈ ಯುದ್ಧಭೂಮಿಯಲ್ಲಿ ಈವರೆಗೆ ಕೇಳಿದವರಿಗೆ ಕೊಟ್ಟಿದೇನೆ ಇಲ್ಲ ಅಂತ ಹೇಳಲಿಲ್ಲ. ಈಗ ನನ್ನ ಬಾಯಿಂದ ಸಾಯುವ ಕಾಲಕ್ಕೆ ಇಲ್ಲ ಅಂತ ಹೇಳಿಸ್ತಿರೋ ಯೇನು ಅಂತ ಕೊಡ್ಲಿ? ಯೇನೂ ಕುಂಡಲಗಳು!

*// ತಿಲ್ಲಾನಿ-ಅಷ್ಟತಾಳ | ವಿಪನಲ್ಲೀತ ಸಾಕ್ಷಾತ್ / ಸುಪ್ರಸನ್ನ ನೆಂದು ತಿಳಿದು / ಕ್ಷಿಪ್ರದಿಂದ ಕುಂಡಲಂಗಳ*

ಸುಪ್ರತಾಪನು ಕೊಡಲು ಧಾರೆ | ಯ ಪ್ರವಾಹಿಸದಿತ್ತರದು ತಾ |

ನಪ್ರಯೋಜಕವಪ್ಪುದೆಂದನು || ೧೭೮ |

ವಿಪ್ರಾಕೃತಿಯಿಂದ ಬಂದವ? "ಬ್ರಾಹ್ಮಣೋಸ್ಯ ಮುಖ ಮಾಸೀತ್- ವಿಶ್ವ ವಿರಾಟವಾದಂತಹ ಪರಾಮಾತ್ಮನ ಮುಖವೇ ಬ್ರಾಹಣ ವರ್ಣ, ಅದರಲ್ಲಿ ಈ ವೃದ್ಧ ಬ್ರಾಹ್ಮಣ ಅಂದ್ರೆ ಸಂಪೂರ್ಣ ವೃದ್ಧಿಯನ್ನು ಹೊಂದಿದವ. ಸಾಕ್ಷಾತ್ ನನ್ನನ್ನು ಅನುಗ್ರಹಿಸುವುದಕ್ಕೆ ಬಂದಂತಹ ಆ ಕ್ಷೀರಸಾಗರ ಶಯನ ಆ ನಾರಾಯಣನೇ ಇರಬೇಕು. ಕುಂಡಲ ಕರ್ಣಕುಂಡಲ! ಛೇ ಕಾಣುವವರು ಯಾರು? ದಿವ್ಯ ಚೇತನವುಳ್ಳವರು. ಅವರೆಲ್ಲ ಈ ಮೊದಲೇ ಪಡೆದು ಆಗಿ ಹೋಗ್ಯದೆ ನನ್ನಿಂದ. ಹಂ, ಹಂ, ಕೃಷ್ಣನ ಮುಂದೆ ನನ್ನದೊಂದು ಋಣ ಇದೆ. ಅವನು ಯೇನು ಕೊಡುಗೆಯಾಗಿ ಇಟ್ಟ ಅದನ್ನು ಪ್ರಸಾದವಾಗಿ ಸ್ವೀಕರಿಸಲಿಲ್ಲ. ನನ್ನಿಂದವನು ಏನನ್ನೂ ಕೇಳಲಿಲ್ಲ. ಧನ್ಯ ಧನ್ಯ ಸ್ವಾಮಿ, ಕರ್ಣಕುಂಡಲ ಇದೋ ಕಳಚಿದ್ದೇನೆ. ತೆಕ್ಕೊಳ್ಳಿ.



ಸ್ವಾಮಿ ಧಾರೆಯೆರದು ಕೊಡಬೇಕೇ! ಯೆಲ್ಲಿದೆ ನೀರೆಲ್ಲಿದೆ? ಕುದುರೆಗಳಿಗೆ ಬಾಯಾರಿದ್ರೆ ನೀರಿಲ್ಲ ಇಲ್ಲಿ. ಹಾಗಿರುವಾಗ ನೀರಿಲ್ಲದೇ ಇದ್ದಲ್ಲಿ ಧಾರೆಯೇನು? ರಕ್ತಧಾರೆ! ಆಹಾ, ಆಹಾ, "ಈಶ್ವರ: ಸರ್ವಭೂತಾನಾಮ್" ಹೃದಯದಲ್ಲಿ ಅಮೃತಕಲಶವಿದೆ; ನೀನು ಕಂಡೆ! ಚಿಂತಿಲ್ಲ ಸ್ವಾಮಿ, ಎಲ್ಲವರೂ ಹೇಳಿದರು ಬಲು ದೊಡ್ಡ ನಂಜಿನ ಬುರುಡೆ ಕರ್ಣ ಅಂತ ನೀನೊಬ್ಬ ಹೇಳಿದೆಯಲ್ಲ ಹೃದಯವಾಸಿ "ಅದು ಅಮೃತಮಯವಾಗಿದೆ" ಅಂತ. ಹಾಂ, "ಅಮೃತೋಸಿ ಅಮೃತೋಪಸ್ತರಣಮಸಿ", ಧನ್ಯ! ಆದರೆ ಸ್ವಾಮಿ ನಿನ್ನ ದಿವ್ಯ ರೂಪವನ್ನು ಕಾಣೇಕು ಅಂತ ಆಸೆಯಿದೆ.

*// ಮೋಹನ-ಅಷ್ಟತಾಳ || ಕಂಡನು | ವಿಶ್ವರೂಪವ ಕರ್ಣನು | ಕಂಡನು |*

*ಕಂಡನು ಸಕಲ ಬ್ರಹ್ಮಾಂಡದೊಡೆಯನನು / ದಂಡಮೂರುತಿಯ ಶ್ರೀಪುಂಡರೀಕಾಕ್ಷನ | |*

*ಹರಿಕೋಟ ಲಾವಣ್ಯದಿಂದ / ಮೊಗ | ಸ್ಫುರಿಸೆ ಕೋಮಲಕಾಯದಿಂದ | ರತ್ನ |*

*ವೆರಸಿದ ಹಾರಗಳಿಂದ | ಪೀತಾಂ | ಬರಮುಟ್ಟು ಶೋಭಿಸಲಂದ*

ಶಿರ | ಕಿರಿಸಿದ ಜ್ವಲಿಪ ಶ್ರೀ ಸಿರಿಮುಡಿ ಗಂಧ ಸುಂ | ದರಕೋಟಿ

ಮದನನನಿರದೆ ಹಿಂಗಿಸುತಿರೆ || ಕಂಡನು || ೧೭೯

ಆಹಾ, ಕಂಡೆ ಕಂಡೆ ಅರ್ಜುನನ ರಥದಲ್ಲೇ ಕಂಡೆ ವಾಸುದೇವನಾಗಿ ಧನ್ಯೋಸ್ಮಿ ಧನ್ಯೋಸ್ಮಿ ಕೃಷ್ಣ.....





## ೩೧ ಗದಾಯುದ್ಧ

### ಕೌರವ

*ಸಾಂಗತ್ಯ-ರೂಪಕ ತಾಳ ಕುರುರಾಯನಿದನೆಲ್ಲ ಕಂಡು ಸಂತಾಪದಿ ಮರುಗಿ ತನ್ನಯ ಭಾಗ್ಯವೆನುತ ಬರಿದಿನ್ನಿವರೊಳು ನಾ ಕಾದಲೇಕೆನುತೊಳ || ಸರಿದನು ಮನದಿ ಚಿಂತಿಸುತ || ೧೮೦ ||*

ಅಖಂಡವಾದಂತಹ ಭಾರತವರ್ಷಕ್ಕೆ ಸಕಲ ಪ್ರಜೆಗಳಿಗೂ ಭರವಸೆಯನ್ನು ಹುಟ್ಟಿಸುವ ಸ್ಥಿರವಾದ ಒಂದು ಆಡಳಿತವನ್ನು ಸ್ಥಾಪಿಸಬೇಕು ಅಂತ ಮನಗಂಡವನು ನಾನು. ಅರಸೂತ್ತಿಗೆಯನ್ನು ಮಾಡಬೇಕಾದವನಿಗೆ ಮತ್ತೊಂದು ದಾಯಾದ್ಯ ಪ್ರತಿಪಕ್ಷ ತಲೆಯತ್ತಿ ನಿಲ್ತದೆ ಅಂತಾದ್ರೆ ನಿರ್ಣಯಾತ್ಮಕವಾದಂತಹ ಒಂದು ಸಂಗ್ರಾಮ ಅನಿವಾರ್ಯ ಅಂತಲೂ ಕಂಡವನು ನಾನು. ಹಾಗಾಗಿ ಪಾಂಡವರು ಹಕ್ಕನ್ನು ಸ್ಥಾಪಿಸುವದಕ್ಕೆ ಮುಂದೆ ಬಂದಾಗ ಯುದ್ಧವಲ್ಲದೆ ಬೇರೆ ಯಾವ ಕ್ರಮದಿಂದಲೂ ಸೂಜಿ ಊರುವ ನೆಲವನ್ನು ನಿಮ್ಮ ಸ್ವಾತಂತ್ರ್ಯಕ್ಕೆ ಬಿಟ್ಟು ಕೊಡುವವನಲ್ಲ ಅಂತ ಸಾರಿದವನು ನಾನು. ಇಂದಿಗೂ ನನ್ನದೇ ಆದಂತಹ ನಿರ್ಧಾರ ಸತ್ಯ. ಅದೇ ಅನಿವಾರ್ಯ ಎಂಬ

ನಿರ್ಣಯವನ್ನು ನಾನು ಬಿಟ್ಟು ಕೊಟ್ಟಿಲ್ಲ. ಮಹಾಸಂಗ್ರಾಮ ಪ್ರಾರಂಭವಾಯ್ತು ಹೌದು, ನನ್ನ ಬಲ ಇದು ದುರ್ಬಲವೂ ಆಯ್ತು ಸತ್ಯ. ಆದರೇನು ನಾನು ಉಳಿದಿದ್ದೇನೆ. ಯಾವವನನ್ನು ಕೇಂದ್ರವನ್ನಾಗಿಸಿಕೊಂಡು, ಈ ಸಕಲ ಬಲಗಳೂ ಈ ಬಲಕ್ಕೆ ಅಧೀನವಾಗಿ ದುಡಿದವೋ ಆ ಬಲಗಳು ನಿರ್ಮೂಲವಾದರೂ, ಕೇಂದ್ರ - ಅದು ದುರ್ಬಲವಾಗುವದಕ್ಕೆ ಸಾಧ್ಯವಿಲ್ಲ. ಆದುದರಿಂದ ಮುಖಾಮುಖಿಯಾಗಿ ನಾನೂ ಭೀಮನೂ ಹೋರಾಟ ಮಾಡಿದ್ದು ಸತ್ಯ. ಹ್ಞ . ಮೊದಲೇ ಅವನಲ್ಲಿ ಮಾನವೀಯತೆ ಕಡಿಮೆಯಾಗಿ ದಾನವೀಯತೆಯೇ ತಲೆಯೆತ್ತಿ ಬಂದದ್ದನ್ನು ಕಂಡಿದ್ದಾರೆ. ಸುಮ್ಮನೇ ಹೇಳಲಿಲ್ಲ ರಾಕ್ಷಸಿಯ ಗಂಡ ಅಂತ, ಗಂಡನಾಗಿಯೇ ಉಳಿಯಲಿಲ್ಲ ರಾಕ್ಷಸೀಸ್ವಭಾವದ ಪ್ರತ್ಯಕ್ಷ ದರ್ಶನವನ್ನೂ ನೋಡಿದ. ಮೊನ್ನೆ ಮೊನ್ನೆ ಯೇನು ನಡೀತು ಇಲ್ಲಿ?

ಸೋದರನಾದಂತಹ ದುಃಶಾಸನನ ಹೊಟ್ಟೆಯನ್ನು ಸೀಳಿ ಕರುಳು ಮಾಂಸಗಳನ್ನು ಮೆದ್ದು ರಕ್ತದಲ್ಲಿ ಸ್ನಾನ ಮಾಡಿದಂತಹ ರುದ್ರಭೀಮನ ದೃಶ್ಯ ಇದು ಮಾನವೀಯತೆಯೇ? ಅಲ್ಲ. ಹಾಗೆಂತ ದಿವ್ಯತ್ವವೋ? ಅದೂ ಅಲ್ಲ. ಕೆಲವರಿದ್ದಾರೆ ಪಕ್ಷಪಾತಿಗಳು ಅವರ ಪಕ್ಷದವರು ಯೇನು ಮಾಡಿದರೂ ಅದು ಸರಿಯಾದದ್ದು ಧಾರ್ಮಿಕವಾದದ್ದು ಅಂತ ಹೇಳುವವರು. ಚಂದ್ರವಂಶದ ರಕ್ತಕ್ಕೆ ಅದೇ ವಂಶದಲ್ಲಿ ಹುಟ್ಟಿದ ಒಂದು ಸೋದರ ರಕ್ತ ಆಪ್ಯಾಯಮಾನವಾಗ್ತದೆ ಅಂತಾದ್ರೆ ಯೇನು! ನಾನು ಗುರುತಿಸಿದ್ದೂ ಆಸುರೀ, ಪಾಶವೀಯ ಅಲ್ಲ. ಯಾಕಲ್ಲ? ಪಶುಗಳಾದರೂ ಸ್ವಜಾತಿಯ ಪ್ರಾಣಿಗಳ ರಕ್ತವನ್ನು ಹಿರೋದಿಲ್ಲ ಮಾಂಸವನ್ನು ಮೆಲ್ಲೋದಿಲ್ಲ. ಇಂತಹ ಆಸುರೀ ಶಕ್ತಿ ಈಗ ವಿಜೃಂಭಿಸಿಕೊಂಡು ಮದಬಂದ ಆನೆಯಂತೆ ಹಿಂದಿನಿಂದ ಮುಂದಿನಿಂದ ಹಾಯುವದಕ್ಕೆ ಮುಂದೆ ಬಾರ್ತಾ ಉಂಟು.

ಮುಖಾಮುಖಿ ಹೋರಾಟ ಮಾಡುವಾಗ ಆ ಪಶುಶಕ್ತಿಯ ಮುಂದೆ ಬೆನ್ನು ತೋರಿಸಿದ್ದೂ ಹೌದು. ನಾನು ಬೆನ್ನು ತೋರಿಸಿದರೆಯೇನಾಯ್ತು, ಕೈಯಲ್ಲಿ ಹಿಡಿದಂತಹ ಆಯುಧ - ಗದೆ ಇದನ್ನು ನೆಲಕ್ಕೆ ಇರಿಸಲಿಲ್ಲ. ಇದು ನೆಲಕ್ಕೆ ವಿರೋಧೀಶಕ್ತಿಯಿಂದ, ನನ್ನ ಕೈಯಿಂದ ಪತನವಾಗಬೇಕೇ ಹೊರತು ನಾನಾಗಿ ಆಯುಧಗ್ರಹಣ ಮಾಡಿದ ಮೇಲೆ ಅದನ್ನು ನೆಲಕ್ಕೆ ಇರಿಸುವ ಪ್ರಮೇಯವೇ ಇಲ್ಲ. ಅದೋ ಅದೋ ಈಗ, ನಾನು ಬೆನ್ನು ತೋರಿಸಿದಾಗ ಭಿಮನಿಗೆ, ಅವನು ಬೆಂಗಡೆಯಿಂದ ಮೂದಲಿಸಿ ಬರುತ್ತಿದ್ದಾನೆ. ಇದು ಸರಿ, ಹಾಗಾದ್ರೆ ಮುಂದಿನಿಂದ ಹಾಯಲಿಕ್ಕೆ ಬಂದ ಪಶುಶಕ್ತಿಗೆ ನಾನು ಬೆನ್ನು ತೋರಿಸಿದರೆ ಅದು ನನ್ನ ಹಿಂದಿನಿಂದ ಅಟ್ಟಿಸಿಕೊಂಡು ಬರ್ತದೆ. ಇದು ಕೌರವನ ವ್ಯಕ್ತಿತ್ವವನ್ನು ರೂಪಿಸುವದಕ್ಕೆ ವಿದ್ವಾಂಸರಿಗಿದ್ದ ವಿಷಯ, ಅರ್ಥೈಸಿದರೆ ಅರ್ಥೈಸಲಿ, ಲೋಕದಲ್ಲಿ ನಾನೇ ಒಳ್ಳೆಯವನು ಅಂತ ವೇದಿಕೆಯ ಮೇಲೇರಿ ಭಾಷಣವನ್ನು ಬಿಗಿದು ನನ್ನನ್ನು ನಾನು ಉದ್ಘಾಟಿಸಿಕೊಂಡಿಲ್ಲ. ಅಷ್ಟೂ ಪ್ರಯತ್ನವೂ ನಡೆದದ್ದು ನಮ್ಮ ವಿರೋಧೀ ಪಕ್ಷದಿಂದಲೇ - ತಾವು ಒಳ್ಳೆಯವರು ಅಂತ. ಹೀಗಾಗಿ ಯುದ್ಧ ವಿರಾಮವೇ ಇಲ್ಲ.

ಕೌರವನ ಪೂರ್ಣವಿರಾಮ ಆಗುವಲ್ಲಿವರೆಗೆ ನನ್ನನ್ನು ವಿರೋಧಿಸುವರಿಗೂ ಯುದ್ಧ ವಿರಾಮ ಇಲ್ಲ. ಮುಂದೆ ಬಂದಾಗ ಅಜ್ಜ - ಭೀಷ್ಮರನ್ನು ಕಂಡೆ. ಭೀಷ್ಮರು ಮತ್ತೇನು, ಅದೇ ಹಳೆ ಪದ್ಧತಿಯಂತೆ "ಇನ್ನಾದರೂ ಸಂಧಿಯನ್ನು ಮಾಡಿಕೋ ಮಗನೆ" ಅಂದರು. ನಿರ್ಧಾರವನ್ನು ಅಲ್ಲಿಯೂ ಹೇಳಿದ್ದೆ ಆವಾಗ ಹೇಳಿದರೂ, "ಬಲಭದ್ರಸ್ವಾಮಿ ಉತ್ತರಕುರುಜಾಂಗಣಕ್ಕೆ ಬಂದಿದ್ದಾನೆ. ಇನ್ನೇನು ಕೆಲವೆ ಗಳಿಗೆವೊಳಗೆ ಕುರುಕ್ಷೇತ್ರವನ್ನು ಪ್ರವೇಶಿಸುವದಕ್ಕೆ ಇದ್ದಾನೆ. ಅಲ್ಲಿಯವರೆಗಾದರೂ ಯುದ್ಧವನ್ನು ನೀನು ನಿಲ್ಲಿಸಬೇಕು". ಛೇ ತಾಟಸ್ಥ ಧೋರಣೆ ನನಗೆ ಹಿಡಿಯುವುದಿಲ್ಲವಲ್ಲ ಅಜ್ಜ ಎಂದಾಗ "ತಾಟ್ಯಸ್ಥ ಅಲ್ಲ, ಸ್ವಲ್ಪ ಹೊತ್ತು ಬಲರಾಮನ ನಿರೀಕ್ಷೆಗಾಗಿ ಪರಿಸರವನ್ನು ನಿನ್ನದ್ದನ್ನಾಗಿಸಿಕೋ. ಅದೋ, ಅಲ್ಲಿ ವೈಪಾಯನ ಸರೋವರ ಇದೆ. ಜಲಸ್ತಂಬನ ವಿದ್ಯೆಯ ಮಂತ್ರೋಪದೇಶ ಮಾಡೇನೆ ಅಲ್ಲಿ ಒಂದ್ ಗಳಿಗೆ ಇರು – ನೀರ್‍ನಲ್ಲಿ" ಅಂತ ಉಪದೇಶಿಸಿದರು. ಈವರೆಗೂ ನಾನು ಅಜ್ಜನ ಮಾತನ್ನು ಅಕ್ಷರಶಃ ಪಾಲಿಸಿದವನಲ್ಲ. ಕೊನೆಘಳಿಗೆಯಲ್ಲಾದರೂ ಅವರ ಮಾತಿಗೆ ಬೆಲೆಕೊಟ್ಟು, ಹಾಗಂತ ನನ್ನ ರಕ್ತದ ಗುಣವಲ್ಲ ಬೆನ್ನುತೋರಿಸುವದು, ಅವರಿಗೂ ಒಂದು ಸಮಾಧಾನವಾಗಲಿ ಆಗುವದಿದ್ದರೆ, ಸಂಗ್ರಾಮಕ್ಕೆ ಅಂತ ಹೊರಟ ಬಲಭದ್ರಸ್ವಾಮಿ ತೀರ್ಥಾಟನೆಯನ್ನು ಮಾಡಬೇಕಾದಂತಹ ಪ್ರಮೇಯ ಬಂದರೂ, ಕೊನೆಯಲ್ಲಾದರೂ ಬಲರಾಮಸ್ವಾಮಿಗೂ ಕೂಡಾ, ಒಂದಾಶ್ವಸನೆಯನ್ನು ಕೊಟ್ಟಿದ್ದಕ್ಕೆ ಇಲ್ಲಿ ದುಡಿಯುವದಕ್ಕೆ ಒಂದು ಸಂದರ್ಭವನ್ನು ಒದಗಿಸೋಣ. ಯೇನಿದ್ದರೂ ನನಗೊಂದು ಸಂತೋಷ. ಈ ಯುದ್ಧದಲ್ಲಿ ಬಲರಾಮನೂ ಉತ್ಸಾಹ ತೋರಿಸಿದವನೇ, ಯಾಕೆ? ಅವನ ತಮ್ಮ ಭೂಮಿಗಿಳಿದುಬಂದ ಭಗವಂತ. ಅವನೂ ಎಷ್ಟರಮಟ್ಟಿಗೆ ರಣದಲ್ಲಿ ಉತ್ಸಾಹಿಯಾಗಿದ್ದಾನೆ ಎಂಬುದನ್ನು ಪ್ರತ್ಯಕ್ಷ ಕಂಡಿದ್ದೇನೆ. ನನ್ನ ಮನೆಯ ಗಂಗೋದಕ ಅವನಿಗೆ ಸಲ್ಲೋದಿಲ್ಲ. ನನ್ನ ಸಹಪಂಕ್ತಿ ಅವನಿಗೆ ಹಿಡಿಸಲಿಲ್ಲ! ಹಾಗೆಂತ ನಾನು ಕೈಯೆತ್ತಿ ಕೊಟ್ಟಂತಹ ರಣವೀಳ್ಯವನ್ನು,



ಎರಡೂ ಕೈಯನ್ನು ಅಡಿಗೆ ಮಾಡಿ ಸ್ವೀಕರಿಸಿಕೊಂಡಿದ್ದಾನೆ ಎಂಬಲ್ಲಿ, ಕೃಷ್ಣನಿಗೂ ಯುದ್ಧೋತ್ಸಾಹ ಇದೆ ಅಂತಾಯ್ತು. ಆಗಲಿ ಹಾಗಾಗಿ, ಕರದ ಗದೆಯಂ ಪೆಗಲೊಳಾಂತು, ಅಂದ್ರೇನು? ಇನ್ನೂ ಕೂಡಾ ನಾನು ಅದನ್ನೇ ಧಾರಣ ಮಾಡಿಕೊಂಡಿದ್ದೇನೆ ಅಂತ. ಅಜ್ಜನ ಮಾತಿನಂತೆ ದ್ವೈಪಾಯನ ಸರೋವರದಲ್ಲಿ ಒಂದ್‌ಘಳಿಗೆ ಮುಳುಗಿ ಬಲರಾಮನ ನಿರೀಕ್ಷೆಯಲ್ಲಿದ್ದೇನೆ. ಸಾಗ್ತೇನೆ ಮುಂದೆ.

*(ಸಂಜಯನಬೇಟಿ)*

|| ಭಾಮಿನಿ || ಭೂತಳಾಧೀಶ್ವರನೆ ಕೇಳಂ | ದೀ ತೆರದ ರಣಭೂಮಿಯೊಳಗತಿ

ಭೀತಿಯಲಿ ಮನನೊಂದು ಬೀಳುತ್ತೇಳುತಡಿಗಡಿಗೆ |

ಧಾತುಗೆಡದಯ್ತುರುವ ಕುರುಕುಲ | ನಾಥನನು ಸಂಜಯ |

ನೋತು ಮನದೋಳು ಚಿಂತಿಸುತ ಕಾಲ್ಕೆರಗಿ ಬೆಸಗೊಂಡ || ೧೮೧ |

ಸಂಜಯ!! ಪರಿಸ್ಥಿತಿಯನ್ನು ಗುರುತಿಸಿ ನನ್ನ ಪಿತೃಮಹಾಶಯರ ಕಣ್ಣಾದಂತಹ ನೀನು, ನಮ್ಮ ತಂದೆಯ ಕಣ್ಣಿನಿಂದಲೇ ಇದನ್ನು ತೋರಿಸಿ ಆ ನಮ್ಮ ಪಿತೃತ್ವದ ಹೃದಯವನ್ನೇ ತಂದುಕೊಂಡು ಆ ಧೃತರಾಷ್ಟ್ರ ಮಹಾರಾಜನ ಭಾವವನ್ನೇ ನೀನು ಮಾತಾಗಿ ನುಡಿಯುತ್ತಾ ಇದ್ದೀ. ಇಷ್ಟು ನನಗೆ ಅರ್ಥವಾಯ್ತು ಆದರೆ, ನಿನ್ನ ದ್ವಾರಾ ನಾನು ಆ ಮಹಾಸನ್ನಿಧಾನಕ್ಕೂ ಸಂದೇಶವನ್ನು ಕಳಿಸಬೇಕಾಗ್ತದೆ. ಯೇನಾಗ್ಯದೆ ಇಲ್ಲಿ? ಯುದ್ಧಕ್ಕೆ ಬೆನ್ನು ತೋರಿಸಲಿಲ್ಲ ನಾನು. ನಿಜವಾಗಿಯೂ ನಾನು ಹೆಮ್ಮೆಪಟ್ಟಿದ್ದೇನೆ. ಪ್ರಪಂಚದಲ್ಲಿದ್ದಂತಹ ಧಾರ್ಮಿಕ ಶಕ್ತಿಗಳೆಲ್ಲಾ ಒಟ್ಟಾಗಿ, ಯುದ್ಧ ತಪ್ಪಿಸುವದಕ್ಕೆ ನನಗೆ ತ್ಯಾಗವನ್ನು ಉಪದೇಶಿಸಿದ್ದುಂಟು. ಇಷ್ಟು ಮಾತ್ರವಲ್ಲ ನನ್ನ ಶತ್ರುಪಕ್ಷದ ನೇತಾರನಾದಂತಹ ಯುಧಿಷ್ಠಿರನೇ ಸಂಧಿಯ ಕೊಡುಗೆಯನ್ನು ಕೊಟ್ಟದ್ದುಂಟು. ಹಿರಿಯ ಮುತ್ಸದ್ದಿಗಳಾದ ನೀವೆಲ್ಲರೂ ಯುದ್ಧವನ್ನು ತಪ್ಪಿಸುವದಕ್ಕೆ ಸಲಹೆಯನ್ನು ಕೊಟ್ಟದ್ದುಂಟು. ಈ ಯೆಲ್ಲವನ್ನು ತಿರಸ್ಕರಿಸಿ ನಾನು ಯೇನು ನಿರ್ಧರಿಸಿದೆ? ಯುದ್ಧ! ಅದು ಈ ಹೊತ್ತು ಜೀವಂತವಾಗಿ ಉಳಿಯಿತು. ಹಾಗಾದರೆ ಪ್ರಪಂಚದ ಇತರೇ ಇತರೇ ಧಾರ್ಮಿಕಶಕ್ತಿಗಳನ್ನು ಹಾಗೂ ದೈವೀಶಕ್ತಿಗಳನ್ನೆಲ್ಲಾ ಇದಿರು ಹಾಕಿಕೊಂಡು ನಾನೋರ್ವನೇ ನನ್ನ ಆತ್ಮ ಶಕ್ತಿಯಿಂದ, ಧೈರ್ಯದಿಂದ ಯೇನನ್ನು ತೀರ್ಮಾನಿಸಿದ್ದೇನೆ ಅದು ಈ ಹೊತ್ತು ಜೀವಂತ ಸತ್ಯವಾಗಿ ಉಳದೆ.

ಬಲು ದೊಡ್ಡದಾದಂತಹ ಒಂದು ರಮ್ಯಕಾವ್ಯಕ್ಕೆ ಕತೃವಾಗಿದ್ದೆ ನಾನು ಅದನ್ನೇ ನೋಡುತ್ತಾ ನೋಡುತ್ತಾ ಬಂದೆ. ನೋಡುವಾಗ ಒಂದುವೇಳೆ ನಾನು ತಲೆ ತಗ್ಗಿಸಿ ಈ ಕಾವ್ಯ ಪ್ರಕರಣವನ್ನು ಅವಲೋಕಿಸಿದೆನೋ ಯೇನೋ ಈಗ ನನಗೆ ಸಂದೇಹವಾಗಿದೆ. ಯೇನಾಯ್ತು? ಕಾವ್ಯ ಚೆನ್ನಾಗಿ ಮೂಡಿಬಂದಿದೆ. ಶೃಂಗಾರ, ವೀರ, ಕರುಣ, ಹಾಸ್ಯ, ಭೀಭತ್ಸ ಇತ್ಯಾದಿ ರಸಗಳು! ಇದನ್ನು ಕಂಡು ಮನಸಾ ಹೆಮ್ಮೆ ಪಟ್ಟಿದ್ದೇನೆ. ಹಾಗೆಂತ



ಮನುಷ್ಯ ಸಹಜವಾದಂತಹ ಭಾವುಕತೆಯಿಂದ ಕಣ್ಣಹನಿ ಉದುರ್‍ಯದೆ. ಇದು ಮೆಚ್ಚುಗೆಯ ಕಣ್ಣನೀರೂ ಹೌದು, ಸಂವೇದನೆಯ ದ್ಯೋತಕವಾದಂತಹ ದುಃಖದ ಕಣ್ಣೀರೂ ಹೌದು. ಯೆಂತೆಂತಹ ವೀರರು ನನ್ನ ಕಡೆಯಲ್ಲಿ ದುಡಿದವರು!! ಮಣ್ಣಿನ ಮಕ್ಕಳು ಮಣ್ಣಾಗಿ ಶತ್ರುಪಕ್ಷದವರೇ ಆಗಲಿ, ಅಭಿಮನ್ಯುಕುಮಾರನಂತವರು ಸತ್ತರೇನಾಯ್ತಂತೆ ವೀರರಸ ಪ್ರತಿವಾದ್ಯವಾದಂತಹ ಅವರ ಮುಖಮಂಡಲವನ್ನು ಕಂಡು, ದುರ್ಯೋಧನನೇ ಈ ರಣಕಾವ್ಯದಲ್ಲಿ ವೀರರಸ ಜೀವಂತವಾಗಿ ಇದೆ ಎಂಬುದನ್ನು ಕಂಡೆ. ಆಮೇಲೆ ಕೆಲವರು ಸಾಯುವ ಕಾಲಕ್ಕೆ ಅನ್ನದ ಋಣ ಇದ್ದವರು - ಕರ್ಣನಂಥವರು ಅವರ ಮುಖದಲ್ಲಿ ಕರುಣಾ ರಸವನ್ನು ದರ್ಶಿಸಿದೆ. ಆದರೂ ತಾವಿಲ್ಲದೇ ಇದ್ದದ್ದರಿಂದ ನಮ್ಮ ನಾಯಕ ಅನಾಥನಾದನೇ ಎಂಬ ಕರುಣಾಭಾವ ಅವರಲ್ಲಿ ಮೂಡಿದ್ದರಿಂದ ಆ ಕರುಣಾರಸವನ್ನು ಕಂಡೆ ನನ್ನ ಕೃತಿಯಲ್ಲಿ, ಆಮೇಲೆ ಸಹೋದರನಾದಂತಹ ದು...ಛೇ... ಯೇನು ಭೀಭತ್ಸ ಯೇನು ಭೀಭತ್ಸ ಅದು! ಹೀಗೆ, ಶೃಂಗಾರ, ವೀರ, ಕರುಣ, ಭೀಭತ್ಸ ಮತ್ತೆ ಕೆಲವರ ಮುಖದಲ್ಲಿ ಹಾಸ್ಯವನ್ನು ಗುರುತಿಸಿದೆ. ಇಲ್ಲಿದ್ದು ಕೊಂಡು ನನಗೆ ಋಣಿಯಾಗಿದ್ದು ಕೊಂಡು ಕಾಯೇನವಾಚಾ ಮನಸಾ ನನಗಾಗಿ ತಮ್ಮ ದೇಹವನ್ನು ಸಮರ್ಪಿಸಬೇಕಾದವರಲ್ಲಿ

ಕೆಲವರು ಯುದ್ಧಕ್ಕೆ ಬೆನ್ನು ತೋರಿಸಿದರು! ಬೆನ್ನು ತೋರಿಸಿದರು ಅಂತಂದ್ರೆ ಓಡಿಹೋದ್ರು ಅಂತಲ್ಲ, ಯೇನೋ ಶತ್ರುಪಕ್ಷದ ವಶೀಲಿಗೆ ವಶರಾದರು. ಇದನ್ನು ತಿಳಿದವರು - "ಛೇ ಯಂತ ಮಹಾನಾಯಕರೆಲ್ಲ ಹೀಗೂ ಮಾಡಿದರೆ" ಅಂತ ಸಾಯುವ ಕಾಲಕ್ಕೆ ಅವರ ಮುಖದಲ್ಲಿ ಮೂಡಿದ ಹಾಸ್ಯರಸ ಅದನ್ನೂ ಕಂಡೆ. ಇನ್ನೇನು ಬೇಕು! ಆದರೆ ಒಟ್ಟೂ ಈ ರಸಗಳಲ್ಲಿ ಮುಳುಗಿದಂತಹ ನಾನು ಒಂದು ನಿಮಿಷ ಅದ್ಭುತ ಸ್ಥಬ್ದನಾದದ್ದು ಹೌದು. ಯಾಕೆ ಅಂತಂದ್ರೆ ಕಾವ್ಯವನ್ನು ನಿರ್ಮಿಸಿದಂತಹ ಕವಿ ತನ್ನ ಕಾವ್ಯವನ್ನೇ ಓದುತ್ತಾ ಪರ್ಯಾಯವಾಗಿ ಹೇಳುತ್ತಾನಂತೆ - "ಈ ಕಾವ್ಯ ನಿರ್ಮಾಣ ಮಾಡಿದ ಕವಿಗೆ ಇದೋ ನಮನ ಅಂತ". ಇಷ್ಟು ಸಂತೋಷಪಟ್ಟರೂ ಕೂಡಾ ನನ್ನ ನಿಲುಮೆ ಬದಲಾಗಲಿಲ್ಲ, ಯೇನು ಮಾಡೋಣ ! ದುಃಖಾಂತವೋ ಸುಖಾಂತವೋ... ಉದ್ಯಮ, ಸಾಹಸ, ಬುದ್ಧಿಶಕ್ತಿ, ಪರಾಕ್ರಮ ಇದು ಪುರುಷಾಯತ್ತ ಅಂತ ನಾನು ನಂಬಿದವ. ಇದರಿಂದ ಆಚೆ ಯೇನೋ ಒಂದು ಉಂಟು ಅಂತಲೂ ಒಪ್ಪಿದವ. ಆದುದರಿಂದ ಹೀಗೇ ತೊರಸಿದಂತಹ ಕಾವ್ಯ ಮುಂದೆ ದುರಂತವಾಗಿ ಪರಿಣಮಿಸಿದರೆ ಕಾವ್ಯ ಕರ್ತೃವಾದ ನನ್ನನ್ನು ದೂರುವುದಕ್ಕಾಗೋದಿಲ್ಲ. ಸಂಜಯಾ, ಹಾಗೊಂದು ಉಂಟು.... ಇಷ್ಟಾದರೂ ಅದೊಂದುಂಟು....ಯೇನು ?

| ಭಾಮಿನಿ || ಆದಡಲೆ ಸಂಜಯನೆ ನೀ ಕೇ | ಳಾದಿ ಸುಕೃತ ವಿಶಾಲ ವನವದು ಸೀದು

ಹೋದರೆ ಜಯಸಿರಿಯು ಜಂಗುಳವ ಜಾರಿದರೆ |

ಆಧರಿಸುವವರಾರು ವಿಧಿ ಬರೆ || ದಾದಿಯಕ್ಷರಕಿಂದು ಪ್ರತಿಕೂ |

ಲಾದಿಯುಂಟೇಯೆಂದು ಕಂಬನಿದುಂಬುತುಸುರಿದನು || ೧೮೨ |



ಸರ್ವೇ ಸಾಮಾನ್ಯವಾಗಿ ನಮ್ಮ ದೇಶದ ಸಂಸ್ಕೃತಿಯಲ್ಲಿ ನಮ್ಮ ಶ್ರದ್ಧಾ ಕ್ಷೇತ್ರದಲ್ಲಿ ಹೀಗೊಂದು ನಂಬುಗೆ ಉಂಟು ಯೇನ ಮಾಡಿದರೇನು ಹಿಂದೆ ಒಂದಿರ್‍ತದೆ - ಇದಕ್ಕೆ ವಿಧಿ ಅಂತ ನಾವು ಹೇಳಬೇಕಾಗ್ತದೆ. ಉದ್ದೇಶ ಸಿದ್ಧಿ ಆಗೋದಿಲ್ಲ. ಎಷ್ಟೋ ಸಲ, ಕೊನೆಗೆ ಪ್ರತಿಕೂಲವೇ ಬರ್‍ತದೆ. ಅಲ್ಲಿ ನಿನ್ನಂತಹ ವಿದ್ವಾಂಸರು ಪುರುಷನನ್ನು ಆಕ್ಷೇಪಿಸಲಾಗದು. ನಮ್ಮ ಯೋಜನೆ ಅದಕ್ಕನುಸರಿಸಿದಂತಹ ಸಂಯೋಜನೆ ಬುದ್ಧಿವಂತರು ಒಪ್ಪುವಂತೆ ಇದ್ದರೆ ಆ ರೂಪರೇಖೆಯನ್ನು ಆಕ್ಷೇಪಿಸುವದಿಲ್ಲ. ಒಬ್ಬ ಕೃಷಿಕ ಒಳ್ಳೆ ಕಾಲದಲ್ಲಿ ಬೀಜವನ್ನು ಬಿತ್ತಿ ಅನುಕೂಲವಾದ ನೀರು ಗೊಬ್ಬರಗಳನ್ನು ಒದಗಿಸಿ ಅದಕ್ಕೆ ಬೇಕಾದಂತಹ ರಕ್ಷಣೆಗೆ ಭದ್ರವಾದಂತಹ ಬೇಲಿಯನ್ನು ನಿರ್ಮಿಸಿ ಮತ್ತು ಹುಲುಸಾದಂತಹ ಬೆಳೆಯನ್ನು ಪಡೆಯಲಿಲ್ಲ ಅಂತಾದ್ರೆ, ಇಲ್ಲಿ ಕೃತಿಗಲ್ಲ ಆಕ್ಷೇಪ ಬೇರೇನು ಅಂತ ಹುಡುಕಬೇಕು. ಬೇರೆ ಯೇನು ಅಂತ ಹೇಳುವದಕ್ಕೆ ಯಾವ ಜ್ಞಾನಿಗೂ ಸಿಕ್ತಿಲ್ಲ, ವಿಜ್ಞಾನಿಗೂ ಉತ್ತರ ಸಿಕ್ಕಿಲ್ಲ! ಚೆನ್ನಾಗಿ ಹುಟ್‌ಹಾಕ್ತಾನೆ ಅಂಬಿಗ, ಪ್ರಯಾಣಿಕರೆಲ್ಲ ತಾವು ಮುಂದೆ ಹೋಗ್ತವೆ ಎಂಬ ಆತ್ಮವಿಶ್ವಾಸದಿಂದಲೇ ದೋಣಿ ಯೇರ್‍ತಾರೆ. ಕೆಲವೊಮ್ಮೆ ಅಪರೂಪಕ್ಕೆ ಇಷ್ಟು ಮಂದಿಯೂ ದೋಣಿ ಬುಡಮೇಲಾಗಿ ಅಂಬಿಗನ ಸಹಿತ ನೀರು ಪಾಲಾಗುವದು

ಉಂಟು. ಆದರೆ ಇದು ಪ್ರಪಂಚದ ಧರ್ಮ ಅಂತಲೂ ಹೇಳಲಿಕ್ಕಾಗೋದಿಲ್ಲ ಪ್ರಕೃತಿಯ ನಿಯಮ ಅಂತಲೂ ಹೇಳಲಿಕ್ಕಾಗೋದಿಲ್ಲ. ಹೀಗೆ, ಕೆಲವೊಮ್ಮೆ ವಿಪರೀತವಾದ ಮಳೆ ಬಂದು ನೆಲವೇ ಕೊಚ್ಚಿ ಹೋಗುವುದುಂಟು! ಮಳೆಯಾಗುವ ಪ್ರದೇಶದಲ್ಲಿ ಕೆಲವು ಸಲ ಬರಗಾಲ ಬಂದು ಭೂಮಿ ಒಣಗಿ ಹೋಗುವದೂ ಉಂಟು ಅದಕ್ಕೆ ಯೇನು ಅಂತ ಕೇಳಿದರೆ ಶಾಸ್ತ್ರ ಉತ್ತರಿಸುವುದಿಲ್ಲ. ಅವರೇನ್ಹೇಳ್ತಾರೆ ಅಂತಂದ್ರೆ - ಅಕಸ್ಮಾತ್ ಅಥವಾ ಆ ಅದೃಷ್ಟ ಅಂತಂದ್ರೆ ತಮಗೂ ದೃಷ್ಟವಾಗದ್ದು, ಅಗೋಚರವಾದದ್ದು ಅಂತ ತಾತ್ಪರ ತಾನೆ? ಹೀಗೆ, ಕಾರ ವ್ಯಕ್ತವಾದರೂ ಕಾರಣ ಗೊತ್ತಾಗದೇ ಇದ್ದಾವಾಗ ಅದನ್ನು ಅದೃಷ್ಟ ಅಂತ ಹೇಳ್ತವೆ ಇನ್ನೊಂದು ಶಬ್ದ ಉಪಯೋಗಿಸ್ತೇವೆ – ವಿಧಿ! ಅದನ್ನೇ ನಾವು ಕಾರಣವಾಗಿ ಇಲ್ಲಿ ತರಬೇಕೇ ಹೊರತು, ಸಂಜಯಾ ನನ್ನ ಕೃತಿಯನ್ನು ಆಪಕ್ಷೇಪಿಸಬಾರದು. ನೀನೇನೋ ಹೇಳಿದೆ ಪಿತೃಹೃದಯದಿಂದ "ಇಂದು ನಿನ್ನೆಯ ಮಂದಮತಿಯಲಿ" ಹ ಬುದ್ದಿಗೆ ಯಾವ ಕೊರತೆಯೂ ಇಲ್ಲ. ಚೆನ್ನಾಗಿ ಮಾಡಿದ್ದೇನೆ. ಆಲೋಚಿಸು, ಇಚ್ಚಾಮರಣಿಯಾದ, ವಯೋವೃದ್ಧ, ಪ್ರಬುದ್ಧ ಭೀಷ್ಮರು ಅವರೇ ಈ ಹೊತ್ತು ಶರಪಂಜರದಲ್ಲಿ ಮಲಗಿದರೇನು? ಶತ್ರುಪಕ್ಷದವರಾದರೂ ಹೇಳ್ತಾರೆ - ಅತಿ ಉನ್ನತಿಯಲ್ಲಿ ಈ ಹೊತ್ತು ಭೀಷ್ಮರಲ್ಲದೆ ಬೇರೆ ಯಾರು? ಆ, ಕುಲೋನ್ನತ್ತಿ, ಆ ಬಲೋನ್ನತಿ ಆಮೇಲೆ ಅವರದ್ದಾದಂತಹ ವಿಭೂತಿಮತ್‌ಶಕ್ತಿಯ ಆರ್ಜಿತ ಔನ್ನತ್ಯ ! ಭೀಷ್ಮರನ್ನು ಸದ್ದು ಹೊಡೆದು ನಿಲ್ಲುವ ಕ್ಷತ್ರೀಯ ಇರಲಿಲ್ಲ. ಮೊನ್ನೆಯವರೆಗೆ ಕ್ಷತ್ರಿಯನೇನು ಗತಕಾಲವನ್ನು ನಾನು ಸ್ಮರಿಸಿಕೊಂಡ್ರೆ ಇಪ್ಪತ್ತೊಂದು ಸಲ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯಕುಲಕುಠಾರನೆನಿಸಿ ಕೊಡಲಿಯನ್ನು ತೊಳೆದಂತಹ ಬ್ರಹ್ಮವರ್ಚಸ್ವೀ ಭಾರ್ಗವರಾಮನನ್ನೂ ಯುದ್ಧದಲ್ಲಿ... ಹ್ಹ .... ಅವರ ಬಾಯಿಂದಲೇ "ಭೀಷ್ಮ ನಿನಗೆ ಸೋತೆ" ಎಂತ ಹೇಳಿಸಿದ ಕ್ಷಾತ್ರ ಶಕ್ತಿ ಇದ್ದರೆ ವರ್ತಮಾನ ಕಾಲದಲ್ಲಿ ಭೀಷ್ಮರದ್ದು: ಗತಕಾಲದಲ್ಲಿ ಲೋಕಾಭೀರಾಮ ಶ್ರೀ ರಾಮನದ್ದು. ಇಂತಹ



ಭೀಷ್ಮರ ಸೇನಾಧಿಪತ್ಯದಲ್ಲಿ ಶತ್ರು ಬಲವನ್ನು ಕುಗ್ಗಿಸುವದಕ್ಕಾಗೋದಿಲ್ಲ ಅಂತಾದ್ರೆ ಕೌರವನ ದೋಷವೂ ಅಲ್ಲ, ಭೀಷರ ದೋಷವು ಅಲ್ಲ, ಈ ಪಾಂಡವರೇನು - ಮೂರು ಲೋಕದ ವಿಜಯಿಯಾದ ಅರ್ಜುನನಿಗೆ ಧನುರ್ವೇದ ಯೇನು ಅಂತ ಗುರುತಿಸಿ ಅದರ ಪರಿಸಮಾಪ್ತಿ ಎಲ್ಲಿ ಅಂತ ಹೇಳಿಕೊಟ್ಟು ಪಾರ್ಥ ಏವ ಧನುರ್ಧರಃ ಎಂಬ ಪ್ರಶಸ್ತಿಯನ್ನು ನೀಡಿದಂತಹ ದ್ರೋಣಾಚಾರ್ಯರು ಆಚಾರ್ಯಪೀಠ, ಕೋಲರುದ್ರ !! ಬೇಡ, ಶರಾದಪಿ ಅಲ್ಲ ಶಾಪಾದಪಿ, ಇಂತಹ ವರ್ಚಸ್ವೀ ದ್ರೋಣರನ್ನೂ ಕೂಡಾ ಮುಂದೆ ಮಾಡಿದರೂ, ಶತ್ರುಬಲಕ್ಕೆ ಜಯವಾಗಿದೆ ಎಂಬ ದರ್ಶನವನ್ನು ನಾನು ಕಾಣಬೇಕಾಯ್ತು.

ದ್ರೋಣರೇನು ಕೈಲಾಗದವರೇ? ಅಥವಾ ಮಹಾರಥಿಯಾದ ಕರ್ಣ ದುರ್ಬಲನೇ? ಆ ಮಟ್ಟಿಗೆ ನನಗೆ ತೃಪ್ತಿಯೇ, ಒಬ್ಬ ರಾಜಕಾರಣಿಯಾದವ ಹೋರಾಟದಲ್ಲಿ ಗಳಿಸಿದ್ದರಲ್ಲಿ ಎಷ್ಟನ್ನು ಸದ್ಯ ಮುಂದಕ್ಕೆ ಬಿಡಬೇಕು ಎಂಬ ಚಾಕಚಕ್ಯತೆಯಲ್ಲಿ ಸಂಜಯಾ, ನಿಮ್ಮ ಕಣ್ಣ ಮುಂದೆ ಬೆಳೆದ ಈ ಹುಡುಗ ಯೇನೂ ಹಿಂದಾಗಲಿಲ್ಲ. ನನ್ನ ರಾಜಕೀಯ ಸೂತ್ರದಲ್ಲಿ ಭಗವಾನ್ ವಾಸುದೇವನೆಂದು ಕೆಲವರಾದರೂ ನಂಬುವ, ಅಘಟಿತಘಟನಾಪಟು ಅಂತ ಕೆಲವರು ಸ್ತೋತ್ರ ಮಾಡುವ ಕೃಷ್ಣನನ್ನು ಕಟ್ಟಿ ಹಾಕಿ ನನಗೆ ಬೇಕಾದಂತೆ ಕುಣಿಸಿಕೊಂಡ ಹೆಮ್ಮೆ ನನ್ನದು. ಪ್ರಾಮಾಣಿಕವಾಗಿ

ಹೇಳು ಪಾಂಡವರ ಬಲದಿಂದ ನಾನು ದುರ್ಬಲನಾದೇನೊ? ಇಲ್ಲ ಹಾಗಾದರೆ, ಕಣ್ಣಿಗೆ ಕಾಣದ, ವಿದ್ವಾಂಸರಿಗೂ ಊಹಿಸಲಿಕ್ಕೆ ಬಾರದ ಕೇವಲ ಒಂದು ತರ್ಕ ಯೇನು? ಪ್ರಾರಬ್ಧ! ನನ್ನದಲ್ಲ ನನ್ನದಲ್ಲ ಸ್ವಲ್ಪ ಹಿಂದಕ್ಕೆ ನೋಡ್ತಾ ಹೋದರೆ,

ಚಂದ್ರನಿಗೆ ಶಾಪ ಉಂಟಂತೆ ಕ್ಷಯರೋಗಿಯಾಗು ಅಂತ! ಆಮೇಲೆ ಅನುಗ್ರಹವೂ ಉಂಟಂತೆ ಒಂದು ಪಕ್ಷದಲ್ಲಿ ವೃದ್ಧಿಯಾಗ್ತಾ ಬಾ ಅಂತ. ಹಾಗಾದರೆ ಒಂದು ಪಕ್ಷದಲ್ಲಿ ವೃದ್ಧಿ, ಒಂದು ಪಕ್ಷದಲ್ಲಿ ಕ್ಷೀಣ ಚಂದ್ರ! ಇವನೇ ಮೂಲಪುರುಷನಾಗಿ ಉಳ್ಳಂತಹ ನಮ್ಮ ವಂಶದ ಚರಿತ್ರೆಯನ್ನು ಸಿಂಹಾವಲೋಕನ ಮಾಡುವಾಗ ಬಹುಶಃ ಈಗ ಕೃಷ್ಣ ಪಕ್ಷ ಇರಬೇಕು ಚಂದ್ರವಂಶಕ್ಕೆ ಶಂತನು ಚಕ್ರವರ್ತಿಗಳ ಕಾಲದಿಂದ ಯೇನೋ ಒಂದು ಥರದ ಹ್ದ ... ಗ್ರಹಣ ಪೀಡಿಸಿದ ಹಾಗೆ ನಾವು ಕಾಣ್ತೇವೆ. ಭೀಷ್ಮರಂಥವರು ಅಧಿಕಾರತ್ಯಾಗ ಮಾಡಬೇಕಾಗಿ ಬಂದದ್ದು! ಅಧಿಕಾರ ತ್ಯಾಗ ಮಾಡಿದ್ರೂ ರಾಜಮಾತೆಯವರಾದಂತಹ ಸತ್ಯವತೀ ದೇವಿಯವರು ವಿಧವೆಯಾದದ್ದು!! ಆದರೆ ಎರಡು ಮಕ್ಕಳ ತಾಯಿಯಾಗಿ ಇದ್ದದ್ದರಿಂದ ಮಕ್ಕಳ ಮುಂದಿನ ಭವಿಷ್ಯ ರೂಪಿಸುದಕ್ಕೆ ಅಧಿಕಾರಸೂತ್ರವನ್ನು ತನ್ನ ಕೈಯಲ್ಲಿಟ್ಟುಕೊಂಡಿದ್ದು, ಅರ್ಥಾತ್ ಭೀಷ್ಮಾಚಾರ್ಯರನ್ನು, ಚಿತ್ರಾಂಗದನೂ ಅಳಿದ ಬಳಿಕ, ವಿಚಿತ್ರವೀರ್ಯನು ಶಿಥಿಲವೀರ್ಯನಾದ ಬಳಿಕ ಕಾಶಿರಾಜನ ಮಕ್ಕಳನ್ನು ಮದುವೆ ಮಾಡಿಸಿ ಆ ವಿಚಿತ್ರವೀರ್ಯನು ಅಕಾಲ ಮೃತ್ಯುವನ್ನು ಅಪ್ಪಲಾಗಿ, ಭಗವನ್ ವೇದವ್ಯಾಸರದ್ವಾರಾ ನಿಯೋಗ! ನಿಯೋಗವಾದರೂ ಸರಿಯಾಯ್ತಿ? ಜೇಷ್ಠನೂ, ಶ್ರೇಷ್ಠನೂ, ಉತ್ತರಾಧಿಕಾರಿಯೂ ಆಗಬೇಕಾದ ಮಗ ಜಾತ್ಯಂಧನಾದ. ಆ ಮೇಲೆ ನೋಡೋಣ,



ಅವನೂ ರೋಗಿಯಾದ, ಮೂರನೆಯವನು ನಿರೋಗಿಯೂ ಹೌದು ವಿದ್ವಾಂಸನೂ ಹೌದು... ಆದರೇ, ನಿಮಗೆಲ್ಲ ಗೊತ್ತಿದ್ದ ಹಾಗೆ ಕ್ಷೇತ್ರಶುದ್ಧಿಯಿಲ್ಲದೇ ಹೋದ ಬಳಿಕ ಯೇನಾಯ್ತು? ಇದು ಈ ಹೊತ್ತು ಬದುಕಿದ್ದವರಿಗೆಲ್ಲ ಗೊತ್ತು. ಇದಕ್ಕೆಲ್ಲ ಕಾರಣಯೇನು ಅಂತ ನಾವು ಯೋಚಿಸಿದರೆ... ಕಾರಣಯೇನು?.... ಗೊತ್ತಲ್ಲ! ಹೌದಾಗಿದ್ರೆ ಜೇಷ್ಠನನ್ನು ಬಾಕಿ ಇರಿಸಿ, ಕನಿಷ್ಠನಾದವನನ್ನು ಗ್ರಹಸ್ಥಾಶ್ರಮಿಯನ್ನಾಗಿಸಿ, ಸಂಸಾರವನ್ನು ಬೆಳೆಸುವ ಹೊಣೆಗಾರಿಕೆ ಅವನಿಗೆ ಪರ್ವತದ ಬುಡದ ಲಾವಾರಸದಂತೆ ಅನುಕೂಲಕಾಲಕ್ಕೆ ಪ್ರವಹಿಸಿ ಎಲ್ಲವನ್ನು ಸುಟ್ಟು ಬಿಡ್ತದೆ ಎಂಬಂತೆ ದೇವಾಪಿಯ ಕಥೆ ನನಗೆ ನೆನಪಿಗೆ ಬರದೆ. ದೇವಾಪಿ ಇರುತ್ತಾ ಶಾಂತನು ಇಲ್ಲಿಯ ಯಜಮಾನ ಯಾಕೆ?

ಪುರುಷವಂಶದವರಾದ ನಮಗೆ ಈ ಸರ್ವಾಧಿಕಾರ ಬರುವುದಕ್ಕೆ ಕಾರಣ ಯೇನು? ಯಯಾತಿ ಮಹಾರಾಜನ ಜೇಷ್ಠಪುತ್ರನು ಅಧಿಕಾರಬಾಹಿರವಾಗಿ ತಂದೆಯಿಂದ ತಿರಸ್ಕರಿಸಲ್ಪಟ್ಟು, ಕನಿಷ್ಟನಾದಂತಹ ಪುರುವಿಗೆ ತಂದೆಯಿಂದ ನಿಯೋಜಿಸಲ್ಪಟ್ಟ ಅಧಿಕಾರ ಬಂದಾವಾಗ.... ಸಂಜಯಾ ಹೇಳು ಸೋಗಿಗಾಗಿ ಸುಮ್ಮನೆ ಇರಬಹುದು ಆದರೆ ಅಂತಃಸತ್ವ ಆ ಕಳಕಳಿ ಅದು ಒಳಗಿಂದೊಳಗೆ ಸ್ಪಂದನಗೊಳ್ಳದೇ ಇದ್ದಿತೇ? ಯದುವಂಶಕ್ಕೆ ಈ ಒಂದುಥರದ ಬೇಗುದಿ ಇದ್ದಂತೆ ಕಾಣದೆ, ಕಾಣದೆಯೇನು ಇಲ್ಲದಿದ್ರೆ ಶ್ರೀಕೃಷ್ಣನಿಗೆ ಯಾಕೆ ಹಠ? ಪಾಂಡವರಿಗೆ ರಾಜ್ಯ ಕೊಡಬೇಕು ಎಂಬಂತಹ ಉದ್ದೇಶ ಶ್ರೀಕೃಷ್ಣನಿಗೆ ಯಾಕೆ? ಈ ಉದ್ದೇಶ ಇಲ್ಲದಿದ್ರೆ, ಮನುಷ್ಯ ಸಹಜವಾದಂತಹ

ವ್ಯವಹಾರವನ್ನು ಬಿಟ್ಟು ತನ್ನ ಮೂಲ ಸ್ವರೂಪವಾದಂತಹ ದೇವತ್ವವನ್ನು ಅದುಮಿ ಹಿಡ್ಕೊಂಡು ಆ ತನ್ನ ಸರ್ವಾಧಿಕಾರಿ ಧೋರಣೆಯಿಂದ ಯೆಲ್ಲವನ್ನು ತನ್ನಿಚ್ಛೆಯಂತೆ ಕುಣಿಸುವ ಪವಾಡವನ್ನು ಯಾಕೆ ಮಾಡಬೇಕಿತ್ತು ಕೃಷ್ಣ ವರ್ತಮಾನಕಾಲದಲ್ಲಿ ? ಆದ್ದರಿಂದ ಈ ಸರ್ವಾಧಿಕಾರವುಳ್ಳ ಸರ್ವಶಕ್ತಿಯಾದದ್ದು ತನ್ನಿಚ್ಛೆಯಂತೆ ತನ್ನ ವಿಶೇಷಾಧಿಕಾರದಂತೆ ತನಗೆ ಬೇಕಾದವರನ್ನು ಯೇರಿಸುವುದು ಬೇಡವಾದವರನ್ನು ಇಳಿಸುವುದು ಅಂತ ಮಾಡ್ತಿದೆ ಅಂತಾದ್ರೆ ನನ್ನಂತಹ ಯೋಧ ಅಂತರಂಗದಲ್ಲಿ ಹೆಮ್ಮೆ ಪಡಬೇಕು. ನಾನು ಆ ನೆಲೆಯಲ್ಲಿದ್ದೇನೆ! ಯಾವುದೋ ಕಾಣದ ಕೈಯೊಂದು ನಮ್ಮ ಉದ್ದೇಶಕ್ಕೆ ವಿರುದ್ಧವಾಗಿ ಹಸ್ತಚಾಲನೆಯನ್ನು ಮಾಡ್ತಾ ಉಂಟು ಎಂಬುದನ್ನು ಕಾಡ್ತಾ ಇದ್ದೇವೆ. ಆದ್ದರಿಂದ ಕೃಷಿಕನಂತೆ ಇನ್ನೊಮ್ಮೆ ಹೇಳುತ್ತೇನೆ.... ನನ್ನ ಯೋಜನೆ ಯೆಲ್ಲೂ ಕೆಟ್ಟಿಲ್ಲ. ಬೀಜ ಬಿತ್ತಿದ್ದೂ ಸರಿಯಾಗಿದೆ, ಬೆಳೆ ಬೆಳೆದದ್ದು ಇದ್ಯಲ್ಲ ಇದೇ ಸೀದು ಹೋಗ್ಯದೆ ಅಷ್ಟು ಯಾಕೆ ಅರ್ಥಮಾಡೋದಿಲ್ಲ ನೀನು? ಇಲ್ಲಿ ನನ್ನನ್ನು ಯಾಕೆ ದೂರಬೇಕು? ಆದರೆ ಒಂದುಂಟು -ಜಯಸಿರಿಯು...ಜಯಲಕ್ಷ್ಮಿ ಒಬ್ಬನ ಅಧೀನದಲ್ಲಿದ್ದಾಳೆ, ನಾನ್ ನಿನ್ನಲ್ಲೇ ಇದ್ದೇನೆ ಅಂತ ಪ್ರತ್ಯಕ್ಷ ಹೇಳ್ತಾಳೆ, ಒಳಗಿಂದೊಳಗೆ ಅವಳು ಇನ್ನಾವುದೋ ಶಕ್ತಿಗೆ ಹ್ಞ , ತನ್ನ ನಿಷ್ಠೆಯನ್ನು ಸಮರ್ಪಿಸಿ ಹೊರಗಿನಿಂದ ನಿಷ್ಠೆಯನ್ನು ಇಲ್ಲಿ ತೋರಿಸುತ್ತ, ಹೊಸಭಾಷೆಯಲ್ಲಿ ಹೇಳುವದಾದರೆ ದೇಹಾಂತರ ಮಾಡೋದಿಲ್ಲ ಪಕ್ಷಾಂತರ ಮಾಡ್ತಾಳೆ ಅಂತಾದ್ರೆ.... ನಮ್ಮ ದೋಷವೇನು? ನೋವಾಗ್ತದೆ! ಕಣ್ಣಲ್ಲಿ ನೀರು ಸುರಿತಾ ಇದೆ ಇದನ್ನೆಣಿಸುವಾಗ, ಹಾಗೆಂತ ಬರೇ ವಿಧಿ, ಬರೇ ಹಣೆ ಬರಹ "ತಸ್ಮೈ



-

ನಮಃ ಕರ್ಮಣೆ ಕಾಲಾಯ ತಸ್ಮೈ ನಮಃ" ಅನ್ನುವ ಪುರುಷ ಸಿಂಹನೆ ಈ ಸುಯೋಧನ? ಅದೃಷ್ಟ, ಕಾಲ, ಪ್ರಪಂಚದ ನಿಗೂಢಶಕ್ತಿ ಇದನ್ನೆಲ್ಲ ಇದಿರು ಹಾಕಿಕೊಂಡೇ ಹೋರಾಟ ಮಾಡಬೇಕಾದವ ಕ್ಷತ್ರಿಯ. ನಾವು ಭೂಭುಜರು, ಆದ್ದರಿಂದಲೇ ಋಷಿಮುನಿಗಳ ಧರ್ಮಸಂಹಿತೆಯನ್ನು ತಿರಸ್ಕರಿಸಿದ್ದೇವೆ. ನನ್ನ ರಾಜಸಭೆಯಲ್ಲಿ ಹಲವಾರು ತರದ ತ್ಯಾಗದ ಉಪದೇಶವನ್ನು ನಡೆಸಿದ್ದಾರೆ - ಪ್ರಾತಃಸ್ಮರಣೀಯರಾದಂತಹ ಋಷಿಮುನಿಗಳೆಲ್ಲ - ಕಣ್ವರಾಗಲಿ, ನಾರದರಾಗಲಿ, ಕಾಶ್ಯಪರಾಗಲಿ ನನ್ನ ಚಿತ್ತಪ್ರವೃತ್ತಿಯಲ್ಲಿ ಅವಗಣನೆಗೆ ಪಾತ್ರರೇನೂ ಅಲ್ಲ; ಸ್ವೀಕಾರ ಯೋಗ್ಯರೇ. ಆದ್ದರಿಂದಲೇ ಧರ್ಮಯೇನು ಅಂತ ನನಗೆ ಗೊತ್ತು ಅಂತ ದಿಟ್ಟತನದಿಂದಲೇ ಉತ್ತರಿಸಿದೆ ಕೃಷ್ಣನಲ್ಲಿ. ಆದರೆ ಧರ್ಮಯೇನು ಅಂತ ಗೊತ್ತಿದ್ದರೂ ಕೂಡ ನನ್ನ ಈ ವ್ಯವಹಾರಕ್ಷೇತ್ರದಲ್ಲಿ ಅದು ಬೆಲೆ ಬರುದಿಲ್ಲಾ, ಅದನ್ನು ಉಪಯೋಗಿಸುವದಿಲ್ಲ. ಅಧರ್ಮಯೇನು ಅಂತಲೂ ಗೊತ್ತುಂಟು ಆದರೆ ಅದರಿಂದ ನನಗೆ ನಿವೃತ್ತಿ ಇಲ್ಲ ಅಂತ ಹೇಳಿರುವುದು ಸಾರ್ವಜನಿಕರ ಮುಂದೆ ಅಲ್ಲ. ಸಂಜಯಾ, ನಿನಗೆ ಗೊತ್ತುಂಟು ಯಾವ ಪ್ರಜೆಯಾದರೂ ನನ್ನ ಇಷ್ಟುವರ್ಷದ ಆಡಳಿತವನ್ನು ಆಕ್ಷೇಪಿಸುವದಿಲ್ಲ. ಅಥವಾ ನಮ್ಮ ಅಧಿಕಾರ ಕ್ಷೇತ್ರದಲ್ಲುಳಿದ ಯಾವನೇ ಸದ್‌ಗ್ರಹಸ್ಥ ತನ್ನ ಬದುಕು ಭದ್ರವಾಗಿದೆ ಅಂತಲೇ ಹೇಳ್ತಾನೆ ಹೊರತು ಇದಕ್ಕೆ ಅಭದ್ರತೆ ಅಂತ ಹೇಳೋದಿಲ್ಲ.

ಒಂದ್ ಐದುಮಂದಿ ಪಾಂಡವರಿಗಾಗದವನಾದ ನಾನು ರಾಷ್ಟ್ರವನ್ನಾಳುವ ಚಕ್ರವರ್ತಿಯಾಗುವದಕ್ಕೆ ತಕ್ಕವನಲ್ಲ ಅಂತ ಆಗುವದಾದರೂ ಹೇಗೆ? ಇಲ್ಲಿ ಚಕ್ರವರ್ತಿ ಯಾರಾಗಬೇಕು ಅಂತ ತಿರ್ಮಾನಿಸುವದು ಪಾಂಡವರಲ್ಲ ಮತ್ಯಾರು? ನಿಜವಾಗಿ ವ್ಯವಹಾರದ ಮರ್ಯಾದೆಯನ್ನು ಮೀರಿ ದೇವರು ಬಂದದ್ದರಿಂದ ದೇವರದೂ ಮರ್ಯಾದೆ ಅಲ್ಲ ಅಂತ ನಾನ್ ಹೇಳ್ತನೆ. ಯೇನು ಮಾಡುವದು ಹೇಳು ಹೇಳ್ತಾರೆ ಕೆಲವರು, ಐದು ಗ್ರಾಮವನ್ನಾದರೂ ಕೊಡುವದಕ್ಕೆ ಒಪ್ಪಿದ್ರೆ... ಹ ಸಂಜಯಾ ನೀನಗೊತ್ತುಂಟಲ್ಲ ಐದು ಗ್ರಾಮ ಯಾಕೆ ಹತ್ತು ಗ್ರಾಮವನ್ನಾದರೂ ಪಾಂಡವರಿಗೆ ನಾನು ಕೋಡ್ತಿದ್ದೆ, ನನ್ನ ಚಕ್ರವರ್ತಿತ್ವವನ್ನು ಅವರು ಅನುಮೋದಿಸಿದರೆ, ಹಸ್ತಿನಾವತಿಯ ರತ್ನಸಿಂಹಾಸನದಲ್ಲಿ ನೀನೇ ಇರು, ಶ್ವೇತಛತ್ರ ನಿನ್ನ ತಲೆ ಮೇಲೆ ಇರಲಿ ಐದು ಗ್ರಾಮಯೇನು, ಐದು ಮನೆಯನ್ನಾದ್ರೂ ತಮ್ಮ ಸ್ವಾಯತ್ತತೆಗೆ ಬಿಟ್ಟುಕೊಡಬೇಕು ಅನ್ನುವದು ಪಾಂಡವರ ಸಂಧಾನದಲ್ಲಿದ್ದಂತಹ ನಿಗೂಢ ರಹಸ್ಯ, ಅಖಂಡ ಭಾರತವರ್ಷದ ಚಕ್ರವರ್ತಿಯಾಗಿ ನಾನು ಐದು ಗ್ರಾಮದ ಬಗ್ಗೆ ಮಾತ್ರ ಸರ್ವಾಧಿಕಾರ ನನ್ನ ದಾಯಾದಿಗಳಿಗೆ ಬಿಟ್ಟುಕೊಟ್ರೆ..ಹ ಆಲೋಚಿಸು ಸಂಜಯಾ,

ಇಂದ್ರಪ್ರಸ್ಥದಲ್ಲಿ ಕೇವಲ ಅಶನಾರ್ಥಿಗಳಾಗಿದ್ದವರು ರಾಜಸೂಯದಂತಹ ಮಹಾಕಾರ್ಯವನ್ನು ಮಾಡಿದರು. ದೇಶ ದೇಶವನ್ನು ದಿಗ್ವಿಜಯ ಮಾಡಿ ಸೂರೆಗೊಂಡ್ರು, ಕಪ್ಪಗಾಣಕೆಗಳನ್ನು, ನಾಳೆ ಐದು ಗ್ರಾಮ ಸಿಕ್ಕಿದರೆ ಹಸ್ತಿನಾವತಿಯನ್ನು ಅವರು ಸೂರೆಗೊಳ್ಳುವದಿಲ್ಲ ಅಂತ ಯಾಕೆ? ಆದ್ದರಿಂದ ನಾನ್ ಬದುಕ್ತೇನೊ, ಸರ್ವವೂ ನನ್ನದಾಗಿ



ಬದುಕಬೇಕು; ಅಲ್ಲ, ಒಂದು ವೇಳೆ ಯುದ್ಧದಲ್ಲಿ ಗೆದ್ದು ಸಾಯ್ತೇನೊ, ನನ್ನ ಮಕ್ಕಳಿಗಾದರೂ ಸಹ ಒಂದು ಸ್ಥಿರವಾದ ಆಡಳಿತ ಉಳಿಬೇಕು. ಇಂತಹ ಸಮಸ್ಯೆಯನ್ನು ಬಗೆಹರಿಸುವದಕ್ಕೆ ಈ ಮಾರ್ಗದಲ್ಲಿ ಬಂದಿದ್ದೇನೆ. ಇನ್ನೂ ಯುದ್ಧಕ್ಕೆ ಬೆನ್ನು ತೋರಿಸಲಿಲ್ಲ ಸಂಜಯಾ. ಆದ್ದರಿಂದ ಯುದ್ಧ ವಿರಾಮ ಇಲ್ಲ. ನನ್ನ ಪಂಚಪ್ರಾಣಗಳಿಗೆ ವಿರಾಮವಾಗುವವರೆಗೂ, ನೀನು ಈಗಾಗಲೇ ಕೇಳಿದೆಯಲ್ಲ ಯುಧಿಷ್ಠಿರ ಹೇಳ್ತಾನಂತೆ ನಮ್ಮಲ್ಲಿ ಒಬ್ಬ ಸತ್ರೆ ನಾವೆಲ್ಲ ಸೋತ ಹಾಗೇ ಸತ್ತ ಹಾಗೇ! ಹ್ಹ ಹ್ಹ ....ತಮ್ಮಂದಿರ ಬಗ್ಗೆ ಅವನ ಸ್ಥಿರತೆ ಅದು. ನನ್ನ ಶತಸೋದರರು, ಶತಪುತ್ರರೂ ಅಳಿದಿದ್ದಾರೆ. ಆದರೂ ನಾನು ಉಳಿದಿದ್ದೇನೆ!! ಆಲೋಚಿಸುವ - ಧರ್ಮರಾಯ ತನ್ನ ಸೋದರರಲ್ಲಿ ಒಬ್ಬ ಸತ್ರೆ ಸಾಯ್ತನೆ ಅಂತ ಹೇಳ್ತಾನೆ. ನನ್ನ ಇಷ್ಟು ಸೋದರರು ಮಕ್ಕಳು ಸತ್ತೂ ನಾನು ಬೆಂಕಿಗೆ ಹಾರಿ ಸಾಯ್ಕೆನೆ ಅನ್ನುವ ಷಂಡನಲ್ಲ, ಸಂಜಯಾ ಛಲ ಇದೆ. ವೈರಿಗಳ ಬಲ ಪ್ರತ್ಯಕ್ಷ ಕಾಣುವಾಗ ನಮ್ಮ ದೌರ್ಬಲ್ಯವನ್ನು ನಾವು ಒಪ್ಪಿಕೊಂಡಾಗ ಶತ್ರು ದಮನಕ್ಕಿದ್ದಂತಹ ಉಪಾಯವನ್ನು ಕೈಗೊಳ್ಳುವಲ್ಲಿ ಯಾವ ವೀರನಿಗೂ ಕೊರತೆಯೇನೂ ಇಲ್ಲ. ಯುದ್ಧಕ್ಕೆ ಭಯಗೊಂಡಲ್ಲಿ ಈಗಲೂ ಸರಿಯಾದಂತಹ ರಾಜಮಾರ್ಗ ಇಲ್ಲವೆ ಶ್ರೀಕೃಷ್ಣನು ತೆರೆದಿಟ್ಟದ್ದು? "ಸಂಧಾನಕ್ಕೆ ಒಪ್ಪು. ಐದು ಗ್ರಾಮವನ್ನಾದರೂ ಬಿಡು" ಇಷ್ಟು ಸುಲಭವಾಗಿ ಬದುಕಲಿಕ್ಕೆ ನನಗೆ ಉಪಾಯ ಉಂಟು.

ಆದರೆ ಬದುಕಿಗೊಂದು ಅರ್ಥ ಉಂಟು ಅಂತ ಕಲ್ಪಿಸಿಕೊಂಡವ ತನ್ನ ನಿರ್ಧಾರವನ್ನು ಬದಲಾಯಿಸೋದಿಲ್ಲ. ರಾಜ್ಯವನ್ನಾಳುವಂತಹ ಚಕ್ರವರ್ತಿ ನಾನಾಗಬೇಕು ಅಂತ ಸತ್ಯಪ್ರತಿಜ್ಞನಾದವ ಘಳಿಗೆ ಘಳಿಗೆಗೆ ಧೋರಣೆಯನ್ನು ಬದಲಾಯಿಸ್ತಾನೆ ಅಂತಾದ್ರೆ ನಾಳೆ ನನ್ನ ಆಡಳಿತದಲ್ಲಿ ಪ್ರಜೆಗಳು ಶಾಸನವನ್ನು ಏನೆಂದು ಅಂಗೀಕರಿಸಬೇಕಾದೀತು ? "ಈ ಹೊತ್ತು ಹೀಗೆ ಹೇಳಿದ್ರು ನಮ್ಮ ಪ್ರಭು; ನಾಳೆ ಬದಲಾವಣೆ ಆಗಲಿಕ್ಕಿಲ್ಲ ಅಂತ ಹೇಳೋದು ಹ್ಯಾಗೆ" ಅಂದಾರು. ಧೋರಣೆ ಒಂದೇ; ಈ ಮೊದಲು ನಾನ್ ಹೇಳಿದಂತೆ ಆಡಳಿತ ಅಷ್ಟು ಭದ್ರವಾಗಿದೆ, ಅಷ್ಟು ಕಠಿಣವಾಗಿದೆ. ಕೌರವನ ಕೈಯಲ್ಲಿ ಇದು ಬಾಗುವದಿಲ್ಲ. ಇದರ ಮುಂದೆ ಯಾವ ವಶೀಲಿಯೂ ನಡೆಯುವದಿಲ್ಲ, ಯಾರ ದಾಕ್ಷಿಣ್ಯಕ್ಕೂ ಇದು ಸೋಲುವದಿಲ್ಲ. ಹಾ.... ಮುರಿಯಲ್ಪಟ್ಟರೆ ತುಂಡಾಗಿ ಬಿದ್ದಿತು. ವಜ್ರದ ಹಾಗೆ, ಲೋಹದ ಹಾಗೆ ಬಿಸಿಯಾದ್ರೆ ಬಾಗೋದಿಲ್ಲ, ಮಿದುವಾಗೋದಿಲ್ಲ. ನಿರ್ಧಾರ ಕೈಗೊಂಡಿದ್ದೇನೆ - ಸ್ವಲ್ಪ ಕಾಲ, ನನಗೆ ಬೇಕಾದಂತಹ ಫಲ ಬಂದಿತು. ಯಾಕೆಂದರೆ ತೀರ್ಥಯಾತ್ರೆಯ ಅವಧಿ ಈ ಹೊತ್ತಿಗೆ ಮುಗ್ಧದಂತೆ. ಹಾಗಾಗಿ ಮರಳಿ ದ್ವಾರವತಿಗೆ ಹೋಗದೆ ಯೆಲ್ಲಿ ನಡೀತಿದೆ ಧರ್ಮಯುದ್ಧ ಕುರುಕ್ಷೇತ್ರದಲ್ಲಿ ? ಅಲ್ಲಿಗೇ ಹೋಗ್ತೇನೆ ಅಂತ ಹೇಳಿಕೊಂಡೇ ಬಂದದ್ರಿಂದ ಇಲ್ಲಿಗೆ ಆ ಬಲಭದ್ರಸ್ವಾಮಿ ಬರುವಲ್ಲಿವರೆಗೆ ನಮ್ಮಜ್ಜ ಹೇಳಿದ್ರು ಭೀಷ್ಮಾಚಾರ್ಯ "ದ್ವೈಪಾಯನ ಸರೋವರದಲ್ಲಿ ಮುಳುಗಿರು ಮಗ, ತಲೆಮರೆಸುವದಲ್ಲ ಇದು ರಾಜಕೀಯದಲ್ಲಿ ಇದ್ದದ್ದೇ, ವಿರೋಧಿಗಳು ಪ್ರಬಲರಾದಾಗ ಅವರನ್ನು ಬಗ್ಗು ಬಡಿಯುವಂತಹ ಮತ್ತೊಂದು ಶಕ್ತಿ, ಕೆಲವನ್ನು ಬಹಳ ಗೋಪ್ಯವಾಗಿ ಇರಿಸಬೇಕಾಗ್ತದೆ" ಇದು ನನ್ನ ಅವಗಾಹನೆಗೆ ಬರಲಿಲ್ಲ. ಆದ್ದರಿಂದ ಅವ ಕತ್ತಲೆಯಲ್ಲಿ ಅಡಿಗಿದ ಅಂತ ಹೇಳೋದಿದ್ರೆ ನಾಳೆಗೆ ಅವರೆಲ್ಲಿಯಾದ್ರೂ ಜಯಿಸಿದರೂ ಅವರ ಆಡಳಿತದಲ್ಲಿ ಭದ್ರತೆ ಇಲ್ಲ ಅಂತ ಕಂಡಕೊಂಡಿದ್ದೇನೆ.



ಸಂಜಯಾ, ಇದು ಸೂಕ್ಷ್ಮವಾದ ವಿಚಾರ, ತಲೆಮರೆಯಿಸಿಕೊಳ್ಳುವದಲ್ಲ. ನಿನ್ನಲ್ಲಿ ಮಾತ್ರ ಹೇಳಿದ್ದೇನೆ- ನಿನ್ನ ಬಗ್ಗೂ ನನಗೆ ವಿಶ್ವಾಸ ಇತ್ತು; ಅದಕ್ಕಿಂತ ಹೆಚ್ಚಿಗೆ ನೀನು ನನ್ನ ತಂದೆಯ ಆವೇಶಗೊಂಡವನು, ಆ ಹೃದಯ ಆದೃಷ್ಟಿಯನ್ನುಳ್ಳವನು. ಸರೋವರದಲ್ಲಿ ಅಡಗ್ತೇನೆ. ಬಲಭದ್ರಸ್ವಾಮಿ ಬಂದಾನು ನಿರೀಕ್ಷೆಯಂತೆ, ಬರ್ಲಿಲ್ಲ, ನೀರಲ್ಲ ನನ್ನ ವಾಸದ ಮನೆ, ನಾನು ನಂಬಿದ್ದು ನೆಲವನ್ನು ಈ ನೆಲದ ಮಗ ನೀರಿನಲ್ಲಿರುವದಕ್ಕೆ ನಾನೇನು ಜಲಚರವೇ ? ಮನುಷ್ಯನಾಗಿ ಮನುಷ್ಯಲೋಕದಲ್ಲಿ ಯತ್ನಿಸಿದವನು ನಾನು. ಅದರಿಂದಾಚೆ ತಲೆ ಭಾಗಿದವನಲ್ಲ. ನನಗೇನು ಮನುಷ್ಯನಾಗಿ ಹುಟ್ಟಿ ನೀರಿನಲ್ಲಿ ಮನೆಮಾಡಿಕೊಳ್ಳುವ ಹವ್ಯಾಸವೇನೂ ಇಲ್ಲ ಅದು ಕೆಲವರಿಗೆ

ನೆಲದಲ್ಲೆ ಹುಟ್ಟೋದು, ನೆಲದಲ್ಲಿ ಸುಖವಾಗಿ ಬಾಳೋದಕ್ಕಾಗೋದಿಲ್ಲ ಅಂತಾದ್ರೆ, ನೀರ್ನಲ್ಲಿ ಬದುಕೋದು. ನಾನು ನರನೇ; ನಾನು ನಾರಾಯಣನಾಗೋದಿಲ್ಲ. ಆದ್ದರಿಂದ, ತಂದೆಗೆ ಹೋಗಿ ಹೇಳು ಈ ಸಂಕಲ್ಪ ಮಾಡಿದ್ದಾನೆ ದುರ್ಯೋದನ, ಮರಳಿ ಬರುದಿದ್ರೆ ಅಭಿಷೇಕಕ್ಕೆ ಸಿದ್ಧವಾದಂತಹ ಮೂಹೂರ್ತದಲ್ಲಿ. ಅದಲ್ಲದಿದ್ರೆ, ಆತ ತತ್ವಕ್ಕಾಗಿ ಬದುಕಿ ಆಳುವದಕ್ಕೆ ಸಾಧ್ಯವಾಗಲಿಲ್ಲ ಅಂತಾದ್ರೆ ಸತ್ತಾದ್ರೂ ಮಣ್ಣಿನಲ್ಲಿ ಮಣ್ಣಾಗಿ ನಾಳೆಗೆ ಶತ್ರು ಪಕ್ಷದವರು ಆಳುತ್ತಿರುವ ರಾಜ್ಯದಲ್ಲಿ ಆ ತತ್ತ್ವ ಸ್ಪಂದಿಸುತ್ತಾ ಇರ್ತದೆ. ಅಲ್ಲಿಯವರೆಗೆ ಇದೆ ಕೌರವನ ಹಟ ಅಂತ ಹೇಳು. ತಾಯಿಗೂ ಸಾಂತ್ವನ ಹೇಳು. ನನ್ನ ಕೈಹಿಡ ಭಾನುಮತಿಗೂ ಈ ವಿಚಾರ ತಿಳಿಸು. ಇದರಲ್ಲಿ ಮತ್ತೆ ಎರಡಿಲ್ಲ. ಋಣ

ಇದ್ದರೆ ಸಂಜಯಾ ನಿಮ್ಮೆಲ್ಲರ ಕಣ್ಮುಂದೆ ಬೆಳೆದಂತಹ ಈ ಸುಯೋಧನ ಮತ್ತೊಮ್ಮೆ ಈಗ ನೀನು ಹೇಳಿದಂತೆ 'ಪೊಡವಿ ಪಾಲಕ ಭಾಗ್ಯದಾಯಕ'. ಆ ಶ್ವೇತಛತ್ರ ಆ ವಂದಿಮಾಗದರು ಇದೆಲ್ಲ ಈ ಮೊದಲಿಗಿಂತ ಇಮ್ಮಡಿಯಾಗಿ ನೀವು ಕಂಡು, ಆ ಸುಖದಲ್ಲಿ ನಮ್ಮ ಹುಡುಗ ಚೆನ್ನಾಗಿದ್ದಾನೆ ಎಂಬ ಒಂದು ತೃಪ್ತಿಯ ಉಸಿರನ್ನು ಎಳೆಯುವಂತೆ ಮಾಡುವ ಪ್ರಯತ್ನ ನನ್ನದು. ನನ್ನ ಸೋದರರನನ್ನು ನುಚ್ಚು ನೂರು ಮಾಡಿದ ಭೀಮಸೇನನನ್ನು ಬದುಕಗೊಟ್ಟು, ನನ್ನ ಹೃದಯ ಸ್ವರೂಪನಾದ ಕರ್ಣನನ್ನು ಯಾವದೋ ಪ್ರಕಾರದಿಂದ ಕೊಂದ ಅರ್ಜುನನ್ನು ಬಿಟ್ಟು, ಯುದ್ಧವನ್ನು ನಾನು ಬಿಟ್ಟೇನೋ? ಅವರನ್ನು ಕೊಂದ ಮೇಲೆ ಯುದ್ಧಕ್ಕೆ ವಿರಾಮ ನನ್ನದು. ನನ್ನ ತಮ್ಮಂದಿರಿಗೂ, ಸ್ನೇಹಿತರಿಗೂ ಆದದ್ದು ಆಗೇನೆ. ಅದಲ್ಲದಿದ್ದೆ ಅವರ ಕಗ್ಗೊಲೆಗೆ ಕಾರಣೀಭೂತರಾದವರ ಹೆಂಡಂದಿರ ಓಲೆಯನ್ನು ಕಳುಚುವುದಕ್ಕೆ ಯತ್ನಿಸುತ್ತೇನೆ. ಹೋಗೋ ಸಂಜಯ್ ಹೋಗು, ಇನ್ನು ಹೆಚ್ಚು ತಿರುಗಾಡುವುದು ಸೂಕ್ತವಲ್ಲ. ಪೂರ್ವಾಭಿಮುಖವಾಗಿ ಹೋಗ್ತನೆ, ಸರೋವರದಲ್ಲಿ ವರುಣ ಮಂತ್ರವನ್ನು ಜಪಿಸುತ್ತಾ ಇತ್ತೇನೆ. ಆದರೆ ಒಂದಿದೆ, ಈ ಸರೋವರಕ್ಕೆ ನಾನಿಳಿದಾಗ ಎಲ್ಲಾದರೂ ಕುರುಹನ್ನು... ಹೌದಲ್ಲ! ಹೆಜ್ಜೆಯನ್ನು ಗುರುತಿಸಿ ಯಾವನೋ ಒಬ್ಬನು ಸರೋವರಕ್ಕೆ ಇಳಿದಿದ್ದಾನೆ ಅಂತ ನನ್ನ ವಿರೋಧಪಕ್ಷದವರು... ಇಲ್ಲಿಗೇ...ಬಂದರೆ? ಅದಕ್ಕೆ ಹೀಗೆ ಮಾಡುವಾ...? ಹೇಗೆ? ಹಾವಿನ ಹೆಜ್ಜೆ ಹಾವಿಗೆ ಗುತ್ತಾಗ್ತಿದೆ. ಹೌದು, ಪನ್ನಗಕೇತನನ ಹೆಜ್ಜೆಯೇನು ಅಂತ ಪನ್ನಗಶಯನನಿಗಲ್ಲದೆ ಈ ಬಡ ಪಾಂಡವರಿಗೆಲ್ಲಿ ಗೊತ್ತಾಗಬೇಕು. ಯೇನು



ಮಾಡೋದು..ಸರ್ಪಧ್ವಜನಾದಂತಹ ನನ್ನ ವಿಷವನ್ನೆಲ್ಲ ಕುಗ್ಗಿಸಿದವ ಆ ಸರ್ಪಶಯನ. ಮತ್ತೆ ಯಮನ ಮಗನೂ ಅಲ್ಲ ಗಾಳಿಗೆ ಹುಟ್ಟಿದವನೂ ಅಲ್ಲ. ಅವರೆಲ್ಲ ಸೂತ್ರದ ಬೊಂಬೆಗಳು. ಆಗಲಿ, ಅಂದಿನಿಂದ ಇಂದಿನವರೆಗೂ ನನ್ನ ಸವಾಲಿದ್ದದ್ದು ಆಂತರಂಗಿಕವಾಗಿ ಕೃಷ್ಣನಲ್ಲೇ. ಈಗ ಯಾಕೆ ಬಿಟ್ಟು ಕೊಡಬೇಕು ಅದನ್ನು ? ಆದ್ದರಿಂದ ಒಂದು ಯುಕ್ತಿ ಮಾಡ್ತೇನೆ. ಸರೋವರಕ್ಕೂ ಬೆನ್ನು ಹಾಕಿ ಮೇಲಿಂದ ಹಿಂದೆ ಹಿಂದೆ ಹೆಜ್ಜೆಯನ್ನಿಟ್ಟುಕೊಂಡು ಕೊಳಕ್ಕೆ ಇಳ್ದ್ರೆ ಸಾಧಾರಣದವರು ತರ್ಕಿಸುವದು "ಯಾರೋ ಮೇಲೆ ಒಬ್ಬ ಎದ್ದು ಬಂದಿದ್ದಾನೆ ಅಂತ. ಹಾಗಾದರೆ ಯೆಲ್ಲಿಂದ ಹೋದ ? ಯಾರಿಗೆ ಗೋತ್ತು ಅವ ಹೋದ ಮಾರ್ಗ"! ಅವರಿಗೆ ಗೊತ್ತಾಗೋದಿಲ್ಲ, ಅವ ಮೇಲೆ ಬಂದದ್ದು ಮಾತ್ರ ಗೊತ್ತಾಗದೆ ಜನ ಸಾಮಾನ್ಯರಿಗೆ, ಗುರುತಿಸಿದ್ರೆ ಅವ ಒಬ್ಬ ಗುರುತಿಸಬೇಕು, ಯಾರು ? ಕೃಷ್ಣ. ನಾನು ಬಲು ದೊಡ್ಡ ರಾಜಕಾರಣಿ, ಬಲುದೊಡ್ಡ ಪಂಡಿತ ಅಂತ ಹೆಮ್ಮೆ ಪಟ್ರೂ.... ಅವನ ಮುಂದೆ ಚಿಂತಿಲ್ಲ, ಅವನೇ ಗುರುತಿಸಿ, ನನ್ನ ಹೆಜ್ಜೆಯನ್ನು ಗುರುತಿಸಿ ನನ್ನನ್ನು ಮೇಲಕ್ಕೆ ಕರೆಯುತ್ತಾನೆ ಅಂತಾದ್ರೆ ಆಧ್ಯಾತ್ಮಿಕವಾಗಿ ಮೇಲಕ್ಕೆ ಹೋಗೇನಲ್ಲ ನಾನು ಅದಲ್ಲ; ಅವನೇ ಗುರುತಿಸುವ ಪಾಂಡವರನ್ನು ಮುಂದಿಟ್ಟು ಕೊಂಡು ನನ್ನನ್ನು ಅಪಮಾನ ಪಡಿಸ್ತಾನೆ ಅಂತಾದ್ರೆ ಆ ಪ್ರಶಸ್ತಿಯೂ ಅವನಿಗೇ ಸಲ್ಲದಲ್ಲಿ ಪಾಂಡವರಿಗಲ್ಲವಲ್ಲ ? ಹೀಗಾಗಿ, ನಡೆಯಲ್ಲಿ ನುಡಿಯಲ್ಲಿ ಕೃಷ್ಣನನ್ನೇ ಪ್ರತಿಸ್ಪರ್ಧಿಯನ್ನಾಗಿ ಪಡೆದಂತಹ ನಾನು, ಯೇಷ್ಟು ದೊಡ್ಡ ಜೀವ ಅಂತ ಸಂತೋಷವಾಗ್ತದೆ. ಹೀಗೆ ಚಿತ್ರಕ್ಕೆ

ನೆಮ್ಮದಿಯನ್ನು ತಂದುಕೊಂಡು ಮೆಲ್ಲಗೆ ನಾನು ಯೋಚಿಸಿದಂತೆ ಹಿಂದಕ್ಕೆ ಹೆಜ್ಜೆಯನ್ನಿಟ್ಟುಕೊಂಡು ಮೆಲ್ಲ ಮೆಲ್ಲನೆ ಇಳಿತೇನೆ. ಜಲಸ್ಥಂಬನವನ್ನು ಪಠಿಸುತ್ತಾ ನೀರಿನಲ್ಲೇ ಇದ್ದೇನೆ.

ಯೇನು ಮಾಡೋಣ, ಯುದ್ಧಕ್ಷೇತ್ರದ ತಡಿಯಲ್ಲಿ ರಾರಾಜಿಸಬೇಕು ಅಂತ ಉದ್ದೇಶಿಸಿ ಈ ಜಲಸ್ತಂಬನ ವಿದ್ಯೆಯಿಂದ ನೀರಿನಲ್ಲಿ ಮುಗಿದವ ನಾನು. ನನ್ನ ಉದ್ದೇಶ ಸಿದ್ಧಿಯಾಗೋದಿಲ್ಲ; ಶೃಂಗಾರಾದಿ ನವರಸ ಭರಿತವಾದ ಒಂದು ಯುದ್ಧಕಾವ್ಯವನ್ನು ನಿರ್ಮಿಸಿಕೊಂಡು ಬಹಳಷ್ಟು ಮುಂದೆ ಸಾಗಿ ಬಂದಿದ್ದೇನೆ. ಕೊನೆಗೆ ಉಳಿದಂತಹ ರಸಗಳೆಲ್ಲ ವಿರಸವಾಗಿ ನೀರಸವಾಗಿ ಈ ನನ್ನ ವೀರಜೀವನದ ಮಹಾಕಾವ್ಯ ದುರಂತದ ತಡಿಗೆ ಈಗ ಯೇರ್ತಾ ಇದೆ.

*(ಕೃಷ್ಣನೊಂದಿಗೆ ಪಾಂಡವರು ಬಂದು ಒಬ್ಬೊಬ್ಬರಾಗಿ*

*ಮೂದಲಿಸಿ ಯುದ್ಧಕ್ಕೆ ಕರೆಯುತ್ತಾರೆ.)*

| *ಭಾಮಿನಿ* // *ಮರುತಜಾತನ ಕರ್ಕಶದ ನುಡಿ* | *ಕುರುಕುಲೇಶಗೆ ನಾಟಿತಂಬಿನ* |

*ತೆರದಿ ಮರೆದುದು ಬಳಿಕ ಸಲಿಲಸ್ತಂಭವಿದ್ಯೆಗಳು* |

ಘುರುಘುರಿಪ ಬಿಸುಸುಯ್ಲಿ ನುರಿಗತಿ | ತುರುಗಿ ಕುದಿದುಕ್ಕಿದುದು ಜಲ ಮಿಗೆ |

ಭರದೊಳಾ ಛಲದಂಕ ಕೌರವನಡರಿದನು ತಡಿಗೆ || ೧೮೩ |



ಅಬ್ಬಬ್ಬಬ್ಬಬ್ಬಾ!! ಯೇನು ಮೂದಲಿಕೆಯ ಮಾತಿದು! ಹೊರಗಿನ ಪ್ರಪಂಚದಲ್ಲಿ ಕೇಳುವವರಿಗೆ ಆಪ್ಯಾಯಮಾನವಾದೀತು ಹೌದಲ್ಲ? ಕೃಷ್ಣನಂತವ ಯೇನ್ಹೇಳ್ತಾನೆ! “ಯಲವೋ ಭಂಡರ ಭಾವ ನಿನಗೆ ಯಾಕೆ ಈ ಶಂಡತನ? ಹೌದು, ಬಂಡರಭಾವ ನಾನಾಗ್ಲಿಲ್ಲ. ಶಂಡರ ತಿಲಕ ನಾನಾಗಲಿಲ್ಲ. ಹೇಳಬಹುದಿತ್ತಲ್ವ.. ನೀರಿನೊಳಗೆ ನಿತ್ತು. ಹೇಳೋದೋ? ಇದರ ರಹಸ್ಯಯೇನು ಅಂತ ಅವನಿಗೆ ಗೊತ್ತುಂಟು. ಗಂಧಾತ್ಮಕವಾದಂತಹ ಈ ಭೂಮಿಗೆ ಜನಕಸ್ಥಾನ ನೀರು. ಇದು ಜನ್ಯ. ಹಾಗಾಗಿ ಭೂಮಿಯ ಬೇರು ನೀರಿನಲ್ಲಿ ಅಂತ ಮಾಡಿತೋರಿಸಿದವನು ಕೃಷ್ಣ, ಭೂಮಿಯ ಬೇರು ಸಡಿಲಾಗಿ ಭೂಮಿ ನೀರಿನಲ್ಲಿ ಮುಳುಗುತ್ತಿದ್ದಾಗ ಯಜ್ಞವರಾಹನಾಗಿ ಆಳಕ್ಕಿಳಿದು ಭೂಮಿಯನ್ನು ಉದ್ಧರಿಸಿದಂತಹ ಒಬ್ಬ ಕೃಷ್ಣ  ಹೇಳ್ತಾನೆ ನೀರಿನಲ್ಲಿ ಮುಳುಗಬೇಡ ಅಂತ! ಈ ಕುರುಭೂಪತಿಯೂ ಹಾಗೆ, ಈ ಧರಣಿಯನ್ನೂ ನನ್ನದು ಅಂತ ತಿಳಿದವ. ಆದ್ದರಿಂದಲೇ ಅವನ ಎಚ್ಚರಿಕೆಯ ಮಾತಿತ್ತು- “ಧರಣಿಗೋಸುಗ ನಡೆಯಬೇಡ” ರಾಜ್ಯಕ್ಕೆ ಅಂತಲ್ಲ, ಧರಣಿಗಾಗಿ ಯೇನು ಮಾಡೋಣ, ಯಾವ ಧರಣಿಯನ್ನು ನಾನು ನನ್ನ ಆತ್ಮ ಅಂತ ಪ್ರೀತಿಸಿದ್ದೇನೋ ಆ ಭೂಮಿಯೇ ನನ್ನ ಬಲಭುಜದಂತಿದ್ದ ಕರ್ಣನ ರಥವನ್ನು ಕಚ್ಚಿ ಹಿಡಿದಾವಾಗ್ಲೆ ಆಲೋಚಿಸಿದ್ದೇನೆ ಇದರ ಬೇರು ಯೇನೋ ಕತ್ತರಿಸಲ್ಪಡದೆ ಅಂತ. ನನ್ನ ಮೇಲೆ ಯೇನ್ ಆಕ್ಷೇಪ?

ದ್ರೌಪದಿಯ ಸೀರೆಯನ್ನು ನಾನು ಯೇಳೆದಿದ್ದೇನೆ ಅಂತ ಹೇಳುವವನು ಯಾರು? ಸ್ನಾನಕ್ಕಾಗಿ ಇಳಿದಂತಹ ಊರಿನಲ್ಲಿದ್ದ ಗೊಲ್ಲತಿಯರ ಸೀರೆಯನ್ನೆಲ್ಲಾ ಮೂಟೆ ಕಟ್ಟಿ ಮರಹತ್ತಿ ಕೊಳಲೂದಿದಂತಹ ನಮ್ಮಕಾಲದ ದೇವರು! ಆಮೇಲೆ ಹ್ಹೆ... ನನ್ನನ್ನು ಭಂಡ ಅಂತಾನೆ! ಲೌಕಿಕವಾಗಿ ಅದು ಕೃಷ್ಣನಲ್ಲಿ ಕೇಂದ್ರೀಕೃತವಾಗಿದೆ ಅಂತ ವಿಚಾರವಾದಿಗಳು ಹೇಳ್ತಾರೆ. ಅವನ ಮುಂದೆ ನಾನೇಕೆ ಭಂಡನಾದೇನು? ನಾನೇಕೆ ಅವನ ಭಾವನಾದೇನು? ಆದರೂ ಚುಚ್ಚು ಮಾತನ್ನಾಡ್ತಾನೆ ಬಿಡಿ. ಅದು ಅವನಿಗೆ ಮೀಸಲು. ಸತ್ಯವಾಕ್ ಸತ್ಯಸಂಕಲ್ಪ ಎಂಬ ಮುದ್ರೆ ಯೆಲ್ಲಿಯವರೆಗೆ ಇದೆಯೋ ಅಲ್ಲಿಯವರೆಗೂ ಅವನ ಕಳ್ಳತನವೂ ಒಳ್ಳೆಯತನವೇ ಆಗ್ತಿದೆ. ಆದರೆ ಈ ಪಾಂಡವರು.... ಹ್ಹೇ ದೇವ್ರೇ.. ಇವರ ಮಿದುಳನ್ನೇ ತೊಳೆದು ಬಿಟ್ಟಿದ್ದಾನೆ! ಅಲ್ಲಿ ಯೆಲ್ಲ ಉಪದೇಶ ಅವನದ್ದೇ. ಈ ಬಟ್ಟಂಬಯಲಾದ ತಲೆಯುಳ್ಳವರು ಚಕ್ರವರ್ತಿತ್ವದ ಕಿರೀಟವನ್ನು ತಲೆಯಲ್ಲಿ ಇರಿಸಿಕೊಳ್ಳುವದಕ್ಕೆ ಹೊರಟಿದ್ದಾರೆ!! ಆದಕಾರಣ ಯುದ್ಧಕ್ಕಾಹ್ವಾನ ಇದು.

ಅವನ ಕರ್ಕಶದ ನುಡಿ.... ಯಾರದ್ದು? ಅವನದ್ದು. ಅದು ಹೌದು.... ನೀರಿನಲ್ಲಿದ್ದು ನನಗೆ ಬೆವರ್ತದೆ! ಹಾಗಾದರೆ ಈ ಸಲಿಲವು ನನ್ನ ಉರಿಯನ್ನು ತಡೆಹಿಡಿಯಲಾರದು ಅನ್ನುವಾಗ ಬೆವರುತ್ತಿರುವಂತಹ ನಾನು, ಯೆಲ್ಲಿ ಬೀಸುತ್ತಾ ಇದೆ ಗಾಳಿ ಎಂಬ ಪ್ರದೇಶಕ್ಕೆ ಬರಬೇಕಾಗ್ತದೆ. ಆದರೆ ಗಾಳಿಯ ಪ್ರಾತಿನಿಧ್ಯವನ್ನು ವಹಿಸಿ, ಕರೆಯುತ್ತಾ ಇದ್ದವನು ಗಾಳಿಯ ಮಗನಾದಂತಹ ಈ ರಾಕ್ಷಸಿಯ ಗಂಡ. ಅವನಲ್ಲಿ ಯೇನು ಮಾತು?



ಮಗನಾಗಿ ಹುಟ್ಟಿ ಚಕ್ರವರ್ತಿತ್ತ್ವದಲ್ಲೇ ಈವರೆಗೆ ಬದುಕನ್ನು ಸವೆಯಿಸಿ ನಾಳೆಗೆ ಸತ್ತೂ ಕೂಡಾ ರಾಜನಾಗೇ ಸತ್ತೇನು ಕೃಷ್ಣನ ಮುಂದೆ ಈ ಸವಾಲು ಒಡ್ಡುತ್ತಲೇ ಇದ್ದೇನೆ. ಈ ಪ್ರಪಂಚದಲ್ಲಿ ರಾಜನಾದವ ಸತ್ತಮೇಲೂ ರಾಜನ ಹೆಣವಾಗಿ ಜನರಿಂದ ಗುರುತಿಸಲ್ಪಡಬೇಕೆ ಹೊರತು ರಾಜನಾಗಿ ಬದುಕಿದ್ದು ಹೆಣರಾಜನಾಗಿ ಆ ಮೇಲೆ ಮುಂದೆ ದಂತಕಥೆಯಾಗುವ ಉದ್ದೇಶ ಅಲ್ಲ ನನ್ನದು.

ಆದ ಕಾರಣ ಯಾರಾರಲ್ಲಿ ಗಂಡುತನ ಇದೆ ಹಿಡಿಯಿರಿ ಆಯುಧ ಬನ್ನಿ ಮುಂದೆ. ಅರ್ಥಶಾಸ್ತ್ರ ಗೊತ್ತಿಲ್ಲದೇ ಇದ್ದಂತಹ ನೀನು ಇದ್ ಆ ಭಾಸ ಆಯ್ತು ಅಂತ ಹೇಳಬಹುದು. ರಾಜನೀತಿಜ್ಞನಾದಂತಹ ಕೃಷ್ಣನಲ್ಲಿ ಏಕಾಂತದಲ್ಲಿ ಕೇಳಿ ನೋಡು, ರಾಜಕೀಯದಲ್ಲಿ ಹೀಗೆಲ್ಲ ಉಂಟೋ ಇಲ್ಲೋ ಅಂತ? ಕೃಷ್ಣ ಎಷ್ಟು ಸಲ ಓಡಿದ್ದಾನೆ? ಎಷ್ಟು ಸಲ ಅಡಗಿದ್ದಾನೆ? ಅಂದರೆ ನೀನೂ ಉತ್ಸಾಹಿ ಅಂತ? ಅಯ್ಯೋ ಮೊನ್ನೆ ಮೊನ್ನೆಯವರೆಗೆ ಯುದ್ಧದಲ್ಲಿ ಉತ್ಸಾಹಿಯಲ್ಲದೇ ಇದ್ದವ ಈ ಹೊತ್ತು ನಾನಾದರೆ ನಾನು ಅಂತ ಹೇಳಬೇಕಿದ್ರೆ ನೀನು ಸ್ವಯಂ ಪ್ರಜ್ಞೆಯಿಂದ ಆಡುವ ಮಾತಲ್ಲ ಅದು. ಯಾಕೆ? ನಾನ್ ಐವರನ್ನೂ ಆಹ್ವಾನಿಸಿದ್ದ್ಯಾಕೆ?

ಮೊದಲೂ ನಾನು ರಣವೀಳ್ಯ ಕೊಡುವಾಗ ನಿಮ್ಮ ರಾಯಭಾರಿಯಾದಂತಹ ಕೃಷ್ಣನಲ್ಲಿ; ಕರಕೊಂಡು ಬಾ, ನಿನ್ನ ಐದು ಮಂದಿ ಪಾಂಡವರನ್ನೂ, ನೆರಹು ಭೂಭುಜರ ಪಡೆಯನ್ನು, ರಣಕ್ಕೆ ಬೆದರುವವನಲ್ಲ, ಮತ್ತೊಬ್ಬರ

ವಿಕ್ರಮಕ್ಕೆ ಮಣಿಯುವವನಲ್ಲ ಅಂತ ಹೇಳಿದ್ದೇನೆ. ಇಂದೂ ಅದು ಸ್ಥಾಯಿಯಾಗೇ ಉಳಿದಿದೆ. ಅದರಲ್ಲಿ ಯಾವ ಬದಲಾವಣೆಯೂ ಇಲ್ಲ. ಅದೇ ಕೃಷ್ಣನನ್ನು ಸಾಕ್ಷಿಯಾಗಿ ಇಟ್ಟು ಹೂ ನಾನು ಐವರನ್ನು ಹೋರಾಟಕ್ಕೆ ಕರೀತೆನೆ ಎಂಬುದನ್ನು ನೆನಪಿಸಿದ್ದಷ್ಟೇ. ಆದರೇ... ಐವರು ಅಂತಂದ್ರೆ ನಿನ್ನಲ್ಲಿಯೂ ನಾನು ಹೋರಾಟ ಮಾಡ್ತೇನೆ ಅಂತಲ್ಲ, ಅರ್ಜುನನ್ನು ಅಂಗೀಕರಿಸ್ತೇನೆ ಅಂತಲೂ ಅಲ್ಲ. ಅರ್ಜುನನಿಗೊಬ್ಬ ಪ್ರತಿಭಟ ಪ್ರತ್ಯೇಕ ತಯಾರಿದ್ದ ನಮ್ಮಲ್ಲಿ. ಆ, ಮತ್ತೆ ಯಮಳರು ಅವರ ಸುದ್ದಿ ನನಗ್ಯಾಕೆ? ಯುಧಿಷ್ಠಿರಾ, ನಾನು ಸೋತಿದ್ದೇನೆ ಅಂತ ಮನವರಿಕೆಯಾಗಿ ಈಗ ನೀನೂ ಮೂದಲಿಸಬಹುದು. ತಣ್ಣೀರಾದರೂ ಕೂಡಾ ಒಲೆಯಲ್ಲಿಟ್ಟಾವಾಗ ಉರಿಯ ಪ್ರಭೆಯಿಂದ ಬಿಸಿಯಾಗ್ತದೆ. ನೀರು ಬಿಸಿಯಾದ್ರೂ ಮತ್ತೊಂದು ಗಡಿಗೆ ಒಡೆಯಲಾರದು. ಆದಕಾರಣ ನಿನ್ನೆಯ ಬಲುಹೇನು?

*ಸುರುಟಿ-ಅಷ್ಟತಾಳ ನಿನ್ನಯ ಬಲುಹೇನು | ಮಾರುತಿ | ಯನ್ನು ನಿರೀಕ್ಷಿಪೆನು |*

ಸಣ್ಣವ ನರ್ಜುನ ಚಿಣ್ಣರು ಯಮಳರು | ಇನ್ನೂ ಭೀಮನ | ನೆನ್ನಿದಿಯೊಳು ಬಿಡು || ೧೮೫ ||

ಯುಧಿಷ್ಠಿರಾ... ಯುದ್ಧಾಂಗಣದಲ್ಲಿ ನಿನ್ನ ಬಲುಹೇನು? ಇದು ಇನ್ನೂ ಪ್ರಶ್ನೆಯಾಗಿಯೇ ಉಂಟು. ಹೆಸರಿರಬಹುದು ನಿನಗೆ ಯುಧಿಷ್ಠಿರ ಅಂತ, ಯುದ್ಧದಲ್ಲಿ ಅಬಲ ಅಂತ ಅರ್ಥ. ಕೆಲವು ಸಲ ಹಿರಿಯರು ಹೆಸರಿಸುವಾಗ ಭಾಷಾಶಾಸ್ತ್ರವನ್ನು ಮರೆತು ಬಿಡ್ತಾರೆ



ಎನ್ನುವದಕ್ಕೆ ಜೀವಂತ ಉದಾಹರಣೆ ನೀನು. ಯುದ್ಧದಲ್ಲಿ ಸ್ಥಿರ! ಯೆಲ್ಲಿ ಯುದ್ಧ ಮಾಡಿದ್ದೀ? ಎಲ್ಲಿ ಯುದ್ಧದಲ್ಲಿ ಸ್ಥಿರನಾಗಿದ್ದಿ? ಹೋಗಲಿಬಿಡು, ಆಧ್ಯಾತ್ಮಿಕ ರಿತ್ಯಾ ಅರ್ಥೈಸೋಣವೋ ಬದುಕಿನ ಹೋರಾಟದಲ್ಲಿ ಸ್ಥಿರ, ನೀನು ಎಷ್ಟು ಸಲ ಚಂಚಲನಾದದ್ದು! ಎಷ್ಟು ಸಲ ಕಾಲುಜಾರಿದ್ದು! ಆಂತರಂಗಿಕವಾಗಿ ಬಾಹ್ಯರಂಗಿಕವಾಗಿ ನೀನು ಯುದ್ಧದಲ್ಲಿ ಸ್ಥಿರನೇ ಅಲ್ಲ. ಮತ್ತೇ? ಚರನೇ. ಇನ್ನು ನಾನು ಪ್ರತಿಜ್ಞಾಬದ್ಧ - ಇವನ ಬಗ್ಗೆ ಯಳವೆಯಿಂದಲೇ, ಅದು ನನ್ನ ತೀರ್ಮಾನವಾಗಿತ್ತು. ನನ್ನ ಹಿತೈಷಿಗಳ ಉಪದೇಶವೂ ಅದೇ ಆಗಿತ್ತು. ಯಾಕೆ ಅಂತಂದ್ರೆ ಈ ಭೀಮಸೇನ ನಮ್ಮ ಈ ಕುರುವಂಶದಲ್ಲಿ ಹುಟ್ಟಿಕೊಂಡಿದ್ದು ಹೇಗೆ?

ವನಜೀವನದಲಿ ತುರುಚೆ, ಕಬ್ಬಿನ ಬನದಿ ಕಡಸಿಗೆ, ಚೂತ ಮಯ ಕಾನನದಿ ಗೊಬ್ಬು.... ಅಂತಹದ್ದೊಂದು ಅಧಿಕಪ್ರಸಂಗಿ ಇವ. ಚಂದ್ರವಂಶದ ಹೆಸರು ಹೇಳಿಕೊಳ್ತಾನೆ; ರಾಕ್ಷಸಿಗೆ ಗಂಡನಾಗ್ತಾನೆ!! ನನ್ನ ಮಗ ಘಟೋದ್ಗಜ ಅಂತ ಹೇಳ್ತಾನೆ!! ಆ ಕಡೆಗೆ ಮನುಷ್ಯತ್ವವೇ ಇಲ್ಲ, ಆಂಶಿಕವಾಗಿ ದೇವತ್ವವೂ ಇಲ್ಲ. ಎಲ್ಲವುದರ ಕಲಬೆರೆಕೆಯಾಗಿದ್ದಂತಹ, ಈ ಚಂದ್ರವಂಶದಲ್ಲಿ ಹುಟ್ಟಿದ ಧೂಮಕೇತು ಇದ್ದಾನಲ್ಲ, ಇವನ ನಾಶವೇ ನನ್ನ ಜೀವನದ ಉಸಿರು. ಕಾರಣ, ಮನಸ್ಸಿದ್ರೆ ಅವನನ್ನು ಬಿಡು ಹುಂ... ತಾಯಿಯ ಗರ್ಭಕ್ಕೆ ಪೂರ್ತಿ ತಿಂಗಳಾಗದೇ ಇದ್ರೂ ಭೂಮಿಯಲ್ಲಿ ಬಿದ್ದಾಗ ಭೂಮಿ ಒಡೆಯಿತಲ್ಲ! ಯೆಲಾ ಭೂಭಾರಕನೇ ನಿನ್ನ ತಾಯಿಯ ಕೈಯಿಂದ ಜಾರಿಬಿದ್ದಾವಾಗ ಬಂಡೆಕಲ್ಲು ಒಡ್ಡದೆ. ನಿನಗೆ ದೇಹ ಬೆಳದೆ ಹೊರತೂ ಬುದ್ಧಿ ಬೆಳದದೇನೂ? ನಾನು ಪಂಥಾಹ್ವಾನ ಮಾಡಿದ್ದು ಹೌದು,

ಯಾಕೆ? ನಿನ್ನಂತಹ ಪೈಶಾಚಿಕವೃತ್ತಿಯ ಒಬ್ಬ ಮನುಷ್ಯಕೋಟಿಯಲ್ಲಿದ್ರೆ ಸಾಕು, ಮನುಷ್ಯತ್ವ ಎಲ್ಲ ಆ ಕಡೆಗೆ ಆಕರ್ಷಿಸಲ್ಪಡದೆ. ನೀನು ಧೂಮಕೇತು ಅಲ್ಲ ಅಂತ ಹೇಳ್ತಿಯೋ? ಈಗ ಇದಿರಾಗ್ತಿಯೋ ಹೇಳು, ಅಯ್ಯಾ ನಿನ್ನ ನೈಪುಣ್ಯ ಯಾವುದರಲ್ಲಿ ಎಂದು ನನಗೆ ಗೊತ್ತಿಲ್ಲವೇನೋ?

*ಕಾಭೋಜಿ-ಝಂಪೆ ಊಟದಲಿ ನಿಪುಣನೆಂಬುದಬಲ್ಲೆ ಸಾಕು ವಾ | ಚಾಟವನು ಬಿಡು ಪರಾಕ್ರಮದ*

*ತೋಟವನು ತರಿವೆ ಜೂಜಾಟದಲ್ಲಿ ನಿನ್ನ ಬೊಟ್ಟ ಬಾಟವೇನಾಯ್ತೆನಲು ನುಡಿದ || ೧೮೬ ||*

ಈ ಪ್ರಪಂಚದಲ್ಲಿ ಭೀಮನಿಗೊಂದು ಪ್ರಶಸ್ತಿ ಇದೆ - ಪಾಕಶಾಸ್ತ್ರದ ಬಗ್ಗೆ ಭೀಮಪಾಕ! ಜೂಜಾಟದಲ್ಲಾದರೂ ನಳ ಬಲ್ಲಿದ. ಕರೆದೆನಲ್ಲಾ ನಿನ್ನನ್ನು, ಬಾರಯ್ಯಾ ದೂತವನ್ನಾಡುವಾ ಅಂತ, ಯೇನಾದರೂ ಅದರ ಬಗ್ಗೆ ಒಂದು ಎರಡು ಗೊತ್ತುಂಟೊ ನಿನಗೆ? ಇಲ್ದೆ ನನ್ನನ್ನ ಅಭ್ಯಾಸಕ್ಕೆ ಕರೆದದ್ದ್ಯಾಕೆ? ಯೆಲಾ ಭಂಡನೇ ನನಗೆ ಗೊತ್ತಿಲ್ಲ ಎಂಬುದರಿಂದ ಗೊತ್ತಿಲ್ಲದೆ ಇದಂತಹ ನೀನು ಒಂದಾಟ ಆಡ್ಯೋ ಅಂತ ಕರದ್ದಲ್ವೊ? ಹಾಗಾದರೆ ಆಟದ ಕೊನೆಯಲ್ಲಿ, ಆದೀತು! ಯೆಲ್ಲಿಯೂ ಆಗ್ಲಿಕ್ಕಿಲ್ಲ. ಇದು ನಿರ್ಣಾಯಕ ಯುದ್ಧ ಅಂತ ಹೇಳ್ವಾಗ ಕೊನೆಯಲ್ಲಿ ಕೂಡದು ಅಂತ ಹೇಳಬಾರದು. ಕೊನೆಯಾಗಿಯೇ ತೀರಬೇಕು. ಅಯ್ಯೋ ಈ ಪ್ರಪಂಚದಲ್ಲಿ ಆಸುರೀ ಸ್ವಭಾವಕ್ಕೆ ಕೆಲವು ಲಕ್ಷಣಗಳನ್ನು



ಶಾಸ್ತ್ರಕಾರರು ಹೇಳಿದ್ದಾರೆ. ಬಹುಶಃ ನೀನು ನಂಬುವ ದೇವರು ಕೂಡಾ ಅದನ್ನು ಹೇಳಿರಬೇಕು ಅಂತ ನನ್ನ ಎಣಿಕೆ. ಯೇಲಾ, ನಮ್ಮ ಕುಟುಂಬದಲ್ಲಿ ಹುಟ್ಟಿದ ಚಿಕ್ಕಪ್ಪನ ಮಗನೆಂಬವನೇ, ನಿನಗೆ ದೇವರು ಒಂದು ಜೀರ್ಣಶಕ್ತಿ ಕೊಟ್ಟಿದ್ದಾನೆ ಹೊರತು ಬೇರೆನೂ ಕೊಟ್ಟಿಲ್ಲ. ಶಂಕಪಾಶಾಣ ಹಾಕಿದರೂ ನಿನ್ನ ಹೊಟ್ಟೆಯಲ್ಲಿ ಜೀರ್ಣವಾಗ್ತದೆ!! ಉಂಡವ ಯೇನು ಮಾಡಿಯಾನು? ನಿದ್ದೆ ಮಾಡಿಯಾನು. ಯೆನನ್ನೂ ಮಾಡಲಿ, ಅದು ನನಗೆ ಗೊತ್ತುಂಟು. ಮಾಡಬೇಕಾದದ್ದನ್ನು ಮಾಡೋದಿಲ್ಲ, ಯೆಲಾ ಯೆಲ್ಲಿಹೋದ್ರೂ ಬಾಣಸಿಗ ನೀನು ಉಂಟೇನೋ... ಭೂತಕ್ಕೆ, ರಾಕ್ಷಸರಿಗೆ ಬಲಿಯಾಗಿ ಬ್ರಾಹ್ಮಣರು ಸಂಕಲ್ಪ ಮಾಡಿ ಬಿಟ್ಟದ್ದನ್ನು... ಅಬ್ಬಾ.... ಅದು ನಿನಗೆ ರುಚಿಯಾಗ್ತದೆ! ಜೀರ್ಣವಾಗದೆ ಅಂತ ಪ್ರಪಂಚದಲ್ಲಿದ್ದ ಯೆಲ್ಲಾ ವಸ್ತು ತಿನ್ನುವದಕ್ಕಿದ್ದದ್ದಲ್ಲ. ಅನ್ನ ಅಂದ್ರೆ ಯೇನನ್ನನ್ನಾದರೂ ತಿಂದು ಕರಗಿಸಿಕೊಳ್ಳುವದಲ್ಲ. ಹೊಟ್ಟೆಯಲ್ಲಿ ಹುಲ್ಲೂ ಕರಗೀತು, ಮನುಷ್ಯರ ಮಾಂಸವೂ ಕರಗೀತು ಎಂಬುದರಿಂದ ಅದು ಮನುಷ್ಯರ ಅನ್ನ ವಾಗದೇನೋ? ಹಾಗಾದರೆ ಯೇನು? ಹೊಟ್ಟೆ ಬಾಕ! ಅಯ್ಯೋ. “ಸಟ್ಟುಗಮಂ ಕೊಂಡೊಟ್ಟಾರಿಸಿ ಬೋನವಿಟ್ಟು... ಆಮೇಲೆ ನಿನ್ನ ಹೆಂಡತಿಯನ್ನು ರಾಜಸಭೆಯಲ್ಲಿ ತಮ್ಮನಾದಂತಹ ದುಃಶಾಸನನದ್ವಾರಾ ಸೀರೆ ಸುಲಿಸುವಾಗ ತಲೆ ತಗ್ಗಿಸಿ, ಗಂಡಂದಿರು ಶಂಡರಂತೆ ಅಭಿನಯಿಸಿ ಈಗ 'ಹೊಸತಾಗಿ ಕೌರವ ಸೋತಿದ್ದಾನೆ ಅಂತ, ನೀರಿನಲ್ಲಿ ಹೊಕ್ಕದ್ದು ಹೇಡಿಯಾಗಿ' ಅಂತ ನೀವು ನೀವಾಗಿ ಆರೋಪಿಸಿಕೊಂಡು ನಿಮ್ಮ ಬೆನ್ನನ್ನು ನೀವು ಚಪ್ಪರಿಸುವ ಗಂಡುತನ!! ನಿಮಗಿದಾರ ಗಂಡಂದಿರಂ ಮಾಡಿದ? ನಿಮ್ಮನ್ನು ಗಂಡಸು ಅಂತ ಮಾಡಿ ಯೇನು ಮಾಡೋಣ ಹೇಳು.... ನೀನು ಒರೆಗೆ ಹಚ್ಚಿನೋಡ್ಲಿಕ್ಕೆ ತೂಕ ಮಾಡಿ ನೋಡ್ಲಿಕ್ಕೆ ಯಾವ ಶುದ್ಧ ಲೋಹವೊ ನೀನು? ಚಿನ್ನ ಆದ್ರೆ

ಕಲ್ಲಿನಲ್ಲಿ ಒರೆದು ನೋಡಬೇಕು. ಅದನ್ನಾದ್ರೆ ತೂಕ ಮಾಡಿ ನೋಡಬೇಕು. ಯೇನೂ ಅಲ್ಲದ ನೀನು ತೂಕಕ್ಕೆ ತಕ್ಕಡಿಯಲ್ಲಿ... ಸುಯೋಧನ ಯೇನೂ ಬಣ್ಣ ಇಲ್ಲದೇ ಇದ್ದಂತಹ ನಿನ್ನನ್ನು ಹೆಚ್ಚಿಸುವಕ್ಕಿದ್ದ ಅಗ್ಗದ ಒರೆಗಲ್ಲಲ್ಲ. ಗಂಡಸುತನ ಇದ್ರೆ... ಬಾ.

*(ಗದಾಯುದ್ಧದ ನಂತರ)*

ಹಾsss, ಯೇನು ಮಾಡೋಣ, ಭೀಮಸೇನನ ಗದಾಘಾತದಿಂದ ತೊಡೆಮುರಿದು ಈ ಯುದ್ಧಾಂಗಣದಲ್ಲಿ ಬಿದ್ದಿದ್ದೇನೆ. ಕೊನೆಗೂ ನಾನು ನೆಚ್ಚಿದ ಜೀವನದ ಉಸಿರಾಗಿ ಯೋಚಿಸಿದ ಭೂಮಿಯೇ ನನಗೆ ಆಶ್ರಯವಾಯ್ತು. ಬಿದ್ದರೂ ನಾನು ನನ್ನ ಮಣ್ಣಿನಲ್ಲಿ; ನನ್ನ ವಿರೋಧಿಗಳ ಮಣ್ಣಿನಲ್ಲಲ್ಲ. ಆದರೆ... ಆದರೆ ಯೇನು ಚಮತ್ಕಾರ ಇದು! ಮೈತ್ರೇಯರ ಶಾಪ ಸತ್ಯವೋ ಅಲ್ಲ ಭೀಮಸೇನನ ಗದಾದಂಡದ ಪ್ರಭಾವ ಸತ್ಯವೋ! ಭೀಮನ ಗದೆಯ ಬಲ ಅಲ್ಲ ಇದು. ಶಾಪಕ್ಕೆ ಪೂರಕವಾದದ್ದು ಯಾವುದು? ಅದೇ ನಮ್ಮ ಅಮಾತ್ಯಶ್ರೇಷ್ಠನೆನಿಸಿದ ವಿದುರನ ಅರಿಕೆ-ಮೈತ್ರೇಯರನ್ನು ಪೂಜಿಸಿ, ಕರೆತಂದು ಆ ವಿದುರ ನನಗೆ ನೀತಿಯನ್ನು ಹೇಳಿಸಿದಾವಾಗ ನಾನು ತೊಡೆತಟ್ಟಿ ನಗಾಡಿದೆ. ಮೈತ್ರೇಯರು ಶಾಪಕೊಟ್ರು, "ಭೀಮಸೇನನ ಗದೆಯಿಂದ ಹೊಡೆಯಲ್ಪಟ್ಟು ತೊಡೆಯುಡಿದು ಭೂಮಿಯಲ್ಲಿ



ಬೀಳು". ವಿದುರ ನನ್ನ ಹಿತೈಷಿ, ಆದರೆ ಆ ಕಾಲಕ್ಕೆ ಅವ ಧರ್ಮರಾಯನ ಪಕ್ಷಪಾತಿಯಾಗಿ ಬಿಟ್ಟ, ತಪ್ಪಲ್ಲ. ಯಾವನೋ ಋಷಿಯ ಶಾಪದಿಂದ ಯಮನೇ ಮೈವೊಡೆದು ಶೂದ್ರಯೋನಿಯಲ್ಲಿ ಹುಟ್ಟಿದನಂತೆ ಅವ ವಿದುರ! ಧರ್ಮರಾಯ ಸಾಕ್ಷಾತ್ ಯಮನ ಮಗ ಹಾಗಾಗಿ, ಕುರುಕುಲದಲ್ಲಿ ಹುಟ್ಟಿದ ಮಕ್ಕಳಿಗೆ ಚಿಕ್ಕಪ್ಪನ ಸ್ಥಾನದಲ್ಲಿರಬೇಕಾಗಿದ್ದ ವಿದುರ ಧರ್ಮರಾಯನ ಬಗ್ಗೆ ಮಾತ್ರ ಚಿಕ್ಕಪ್ಪನಲ್ಲದ ಪಿತೃ ಸ್ಥಾನವನ್ನಂಗೀಕರಿಸಿದ ಹೌದಲ್ಲ... ಇವನು ಯಮನ ಮಗ, ಅವನು ಯಮನ ಅಪರಾವತಾರ. ಹೀಗೆ ಯೇನೋ ಒಂದು ಪಿತೃತ್ವವು ಅವನಲ್ಲಿ ಸುಪ್ತವಾಗಿ ಅಡಗಿದ್ದದ್ದು ಯೇನು ಅಂತ ಹೇಳಲಿಕ್ಕೆ ಬಾರದ ಭಾವವಾಗಿ ಪ್ರಕಟವಾಗಿ ವಿಶೇಷ ಆಸಕ್ತಿ ಧರ್ಮರಾಯನ ಬಗ್ಗೆ ವಿದುರನಿಗೆ ಉಂಟಾಯ್ತು! ನಮ್ಮಪ್ಪನ ಹಿತೈಷಿಯಾಗಿ ನನ್ನ ರಕ್ಷಣೆಗಾಗಿ ಭೀಮಸೇನನ ಗದಾಘಾತದಿಂದ ಬೀಳುವ ಯೋಗವನ್ನು ತಪ್ಪಿಸುವದಕ್ಕಾಗಿ ಬಿಲ್ಲನ್ನು ಸಂಗ್ರಹಿಸಿಟ್ಟಿದ್ದ. ಆದರೆ ಅಲ್ಲಿಯೂ ಹ್ಹ ಹ್ಹ .... ಹೂಂ ಈ ಶ್ರೀಕೃಷ್ಣ ನಾಟಕ ಹೂಡಿದ, ಬಿಲ್ಲು ಮುರಿಸಿದ. ಹಾಗಾದರೆ ನಾ ಸೋತದ್ದು ಲೋಕದ ದೈವದ ಮುಂದೆ. ಈ ಪ್ರಪಂಚದಲ್ಲಿದ್ದಂತಹ ಕ್ಷಾತ್ರವರ್ಚಸ್ಸಿನ ಮುಂದೆ ಇವನಿಗೆ ಸೋಲಾಗಲಿಲ್ಲ. ಆಗಲಿ, ಕೃಷ್ಣನಿಗೆ ತೃಪ್ತಿಯಾಯ್ತಲ್ಲ.

ಅಯ್ಯಾ ಗೋವಳರಾಯ ನಿನ್ನದ್ದಾದಂತಹ ಸ್ವಯಂಶಕ್ತಿಯನ್ನು ಅದುಮಿ ಇಟ್ಟು, ಆದರೆ ಅದನ್ನೆ ಅಧಿಷ್ಠಾನವಾಗಿಸಿ ಈ ಪ್ರಪಂಚದಲ್ಲಿ ಜೀವರ ಜಾಣತನವನ್ನು ಪ್ರಕಟಿಸಿದೆಯಲ್ಲ! ಅದು ನಿನಗೆ ಭೂಷಣವಾದರೆ ಕೌರವನಿಗೂ ಆತ್ಮತೃಪ್ತಿ. ನಿಮ್ಮ ಈ ಕಲಹದಲ್ಲಿ ಸಕ್ರೀಯವಾಗಿ ಭಾಗವಹಿಸಿ ಕಾಣುವವರ ಕಣ್ಣಿಗೆ "ಅಯುಧ್ಯಮಾನ ಸಂಗ್ರಾಮೇ ನಸ್ತಶಸ್ತ್ರೋಹ ಮೇಕತಾ ಅಂತ ಪ್ರತಿಜ್ಞೆಯನ್ನು ಬಳಸಿಕೊಂಡು ಇಷ್ಟು ಮಾಡಿದೆಯಲ್ಲ! ಚಿಂತಿಲ್ಲ...

ಕೃಷ್ಣಾ ನಿನ್ನ ಬಗ್ಗೆಯೇನು?... ಶ್ರೀವನಿತೆಯರಸನೆ ವಿಮಲ ರಾಜೀವ ಪೀಠನ ಪಿತನೆ ಸನಕಾದಿ ಮುನಿ ವಂದ್ಯನಾದವ, ಕೌರವ ಪಾಂಡವರ ಈ ಕಲಹದಲ್ಲಿ ನೀನೂ ಒಬ್ಬ ವೀರಶ್ರೀ- ಲಾಲಿತಗಾತ್ರನಾದಂತಹ ವೀರನಾರಾಯಣನಾಗಿ ರಂಜಿಸಿದೆಯಲ್ಲ! ಈ ರೂಪವನ್ನು ಕಂಡಾಗ, ಈ ಕೌರವನದ್ದಾದಂತಹ ಜೀವ ಅಥವಾ ಈ ರಣಕಾವ್ಯ, ದುರಂತವಾಗಿ ದುರ್ಯೋಧನನಲ್ಲಿ ಆವಿರ್ಭವಿಸಿದರೂ ಈ ಕಾವ್ಯನಾಟಕ ದುರುಂತವಾಗಿ ಪರಿಣಾಮ ಹೊಂದಲಿಲ್ಲ. ಇದರಂತ್ಯ ಯೇನಾಯ್ತು?

ವೀರನಾರಾಯಣನ ಚರಿತ್ರೆಯಾಯ್ತು ಎಂಬಲ್ಲಿಗೆ, ಕೊನೆಯ ಘಳಿಗೆಯಲ್ಲಿ ನನಗೊಂದಾತ್ಮವಿಶ್ವಾಸ-ವಿರೋಚಿತವಾದಂತಹ ಪೂಜೆಯಿಂದ ಶಾಂತಸ್ವಭಾವದ ಲಕ್ಷ್ಮೀಪತಿಯಾದ ನಾರಾಯಣನ ಮೂರ್ತಿಯನ್ನು ವೀರಲಾಲಿತಗಾತ್ರನಾದ ವೀರ ನಾರಾಯಣನನ್ನಾಗಿ ನಾನು ಪ್ರವೇಶಿಸಿದೆನು. ಕುರುಕ್ಷೇತ್ರದಲ್ಲಿ ಧನ್ಯೋಽಹಂ, ಧನ್ಯೋಽಹಂ,. ರಣವೀಳ್ಯವನ್ನು ಕೊಟ್ಟಾಗ ಹೇಳಿದ್ದೆ ತಲೆಯ ನಿನಗೆ ಸಮರ್ಪಿಸುವೆ ಅಂತ. ಕೃಷ್ಣಾ ಆದರೆ ಇನ್ನೊಂದು ನಿನ್ನ ಕೈಯಲ್ಲಿ ಇದೆ - ದೇಶದ ಸ್ವಾಸ್ಥ್ಯ, ಇವರಿಂದಲ್ಲ. ಇವರು ಉತ್ತಮ

ಆಡಳಿತಗಾರರೇ ಅಲ್ಲ ನೀನಿದ್ದೀಯಲ್ಲ ಎಂಬ ಭರವಸೆಯಲ್ಲಿ ನಿನ್ನನ್ನೇ ನೋಡ್ತಾ ಸಂತೋಷದಲ್ಲಿ ಕಣ್ಮುಚ್ಚುತ್ತೇನೆ. ಅಭಯನೀಡು.





## ೩೩ ಶ್ರೀಕೃಷ್ಣಪರಂಧಾಮ

*ಶ್ರೀಕೃಷ್ಣ*

|*ವಾರ್ಧಿಕ ಹರಿಯು ನಿಜರಮಣಿಯರೊಡಂಬಡಿಸಿ ಕಾನನಕೆ*| *ಬರಲು*

*ಕೇಳಿಸಿತಭ್ರವಾಣಿ ಯೊಂದೆಡೆಗೆ ಪರಮ* |

ತೀರ್ಥಾಟನೆಗೆ ಪೋದ ನಿನ್ನವರೆಲ್ಲ ಸುರೆ ಕುಡಿದು ಹೊಯ್ದಾಡುತ || ೧೮೭ |

ಪಾರ್ಥನಿಗೆ ಉಪದೇಶ ಮಾಡುವ ಕಾಲಕ್ಕೆ 'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ಅಂತ ಹೇಳಿದ್ದೆ. ಈಗಲೂ ಆ ಮಾತು ಸುಳ್ಳಲ್ಲ. ಆದರೆ ಧರ್ಮ ಸಂಸ್ಥಾಪನೆಯನ್ನು ಉದ್ದೇಶಿಸಿ, ಅವತರಣ ಮಾಡಿದ ನಾನು ಈ ದ್ವಾಪರದ ಅಂತ್ಯ ಕಲಿಯ ಪ್ರಾರಂಭಕ್ಕೆ ಹೀಗಾದೀತು, ಹೀಗಾಗ್ಬೇಕು, ಎಂಬ ನಿರೀಕ್ಷೆಯಲ್ಲೇ ಇದ್ದಿರ್ಲಿಲ್ಲ. ಯಾಕೆ ಹೀಗಾಯ್ತು ಎಂಬುದಕ್ಕೆ ಉತ್ತರವೂ ಸಿಗೋದಿಲ್ಲ . ಕಾಯೇನ ವಾಚಾ ಮನಸಾ 'ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ' - ಅಧರ್ಮವು ತಲೆಯೆತ್ತಿ ನಿತ್ತಾವಾಗ ನನ್ನನ್ನು ನಾನೇ ಸೃಷ್ಟಿಸಿಕೊಳೇನೆ ಎಂಬ ಸಂಕಲ್ಪದಲ್ಲಿಯೇ ಅವತರಿಸಿಕೊಂಡವ ನಾನು. ಆದ್ರೂ ಯಾಕ್ ಹೀಗಾಯ್ತು? ಅಧರ್ಮ ಸಂಪೂರ್ಣ ನಾಶವಾಯಿತೇ ಅಂತ ಕೇಳಿದರೆ ಆಯಿತು ಅಂತ ಹೇಳಲಿಕ್ಕೆ ನನಗೆ ಆತ್ಮಸ್ಥೆರ್ಯವಿಲ್ಲ. ನಮ್ಮವರೇ! ಛೇ, ವೊಳಜಗಳ, ಗುಂಪುಗಾರಿಕೆ ಮಾತ್ರವಲ್ಲ ಋಷಿ ಮುನಿಗಳನ್ನು ಕಂಡವಾಗ ತಾತ್ಸಾರ, ಇದು ಹುಟ್ಟಿ ಇಷ್ಟೇ ಎತ್ತರಕ್ಕೆ ಬೆಳೆದೀತು ಅಂತ ನನ್ನ ಅವಗಾಹನೆಗೆ ಬಲ್ಲಿಲ್ಲ. ಕಾರಣವೂ ಇಲ್ಲದೆ ಇಲ್ಲ. ಅಖಂಡ ಭಾರತ ವರ್ಷದ, ಧರ್ಮಸಿಂಹಾಸನವನ್ನು ಶುದ್ಧಿಗೊಳಿಸಬೇಕು, ಶುದ್ಧನಾದ ಒಬ್ಬ ವ್ಯಕ್ತಿಯನ್ನು ಅಲ್ಲಿ ಕುಳ್ಳಿರಿಸ್ಬೇಕು, ತದ್ವಾರಾ ಈ ಸುವರ್ಣಭೂಮಿಯಲ್ಲಿ ಮತ್ತೊಮ್ಮೆ ಬಂಗಾರದ ಹೊಳೆ ಹರೀಬೇಕು ಎಂಬುದಕ್ಕಾಗಿ ಹಲವಾರು ವರ್ಷಗಳ ನನ್ನ ಬದುಕನ್ನು ಆ ಹಸ್ತಿನಾವತಿಗೆ ಸಂಬಂಧಿಸಿಯೇ ಪಾಂಡವರ ಜೊತೆಯಲ್ಲಿ ಕಳೆದದ್ದರಿಂದಲೋ ಯೇನೋ... ನನ್ನ ಮತ್ತು ನಮ್ಮಣ್ಣ ಬಲರಾಮ - ನಮ್ಮ ಆಡಳಿತದ ಈ ದ್ವಾರಾವತಿಯ ಬಗ್ಗೆ ನಾನು ದೃಷ್ಟಿ ಹರಿಸಲಿಕ್ಕಾಗ್ಲಿಲ್ಲ. ಈಗ ತೋರ್‍ತದೆ ಅದೂ ವೊಂದು ಪ್ರಮಾದವೇ ಆಯ್ತು. ದ್ವಾರಾವತಿಯನ್ನು ವೊಂದು ಧರ್ಮದ ಬೀಡಾಗಿ ಎತ್ತರಿಸಿ ಪ್ರಪಂಚದ ಮುಂದೆ ಬಿತ್ತರಿಸಿದ ಬೆಳೆಸಿದ ನಾನು, ಇದನ್ನವಗಣಿಸಿದ್ದಾಗ್ಲಿಲ್ಲ. ಆದ್ದರಿಂದಲೇ ಇರ್ಬೇಕು ಇಲ್ಲಿ ನನ್ನ ನೋಟವೂ ಇಲ್ಲದೆ ಆಯ್ತು! ನಮ್ಮ ಅಣ್ಣನಂತೂ ವೊಂದು ಥರದ ಔದಾಸೀನ್ಯವನ್ನು ತಾಳಿ, ಕೌರವರ ಪಾಂಡವರ ಯುದ್ಧ ಒದಗಿ ಬರುವ ಕಾಲಕ್ಕೆ ತೀರ್ಥಾಟನೆಗೂ ಹೊರಟು ಹೋದ! ಎಲ್ಲರೂ ಸ್ವತಂತ್ರರಾದರು ವೃತ್ತಿಗಳು ಅಂಧಕರು ಭೋಜರು ಹೀಗೆ ಕೊನೆಗೆ ತಮತಮಗೆ ತಮ್ಮ ತಮ್ಮದೇ ಆದಂತಹ ಗುಂಪಿನ ಹೆಸರನ್ನು ಇಡ್ಕೊಂಡು, ಹೀಗೆ ಅಧಃಪತನಕ್ಕೆ ಈಡಾದರು! ಇಲ್ಲದೇ ಹೋದರೆ ಯೇನರ್ಥ? ಯಾದವರು ವೊಂದು ಒಕ್ಕೂಟ - ಯಾದವರು! ಇದರ ವೊಳಗೆ ಅಂಧಕರೂ ಇದ್ದಾರೆ ವೃಷ್ಣಿಗಳೂ ಇದ್ದಾರೆ ಯೆಲ್ಲವರೂ ಇದ್ದಾರೆ ಈ ವೊಕ್ಕೂಟದಲ್ಲಿ, ಆಮೇಲೆ ಯೇನಾಯ್ತು? ತಾವು ತಾವು ಬೇರೆ

ಬೇರೆ! ವಿಭಜನೆ ಕೂಡದು ಸಂಘಟನೆ ಬೇಕು ಅಂತ ಹೊರಟು ನಾನು ಈ ತೀರ್ಮಾನಕ್ಕೆ ಬಂದು ವೊಂದು ವೊಗ್ಗಟ್ಟಗೆ ತಂದದ್ದನ್ನು ನಾನ್ ಇಲ್ಲದೇ ಯಿದ್ದಾವಾಗ ಇವರು ವಿಭಜನೆಗೆ ವೊಳಗಾಗಿಸಿ ಹೀಗಾಯ್ತು!

ಮೊನ್ನೆ ಮೊನ್ನೆ ಕಣ್ವರು ಬಂದಿದ್ದರು. ಕಣ್ವರ ಮುಂದೆ ನಮ್ಮವರೇ ಎಂತಹ ಹುಡ್ಗಾಟಿಕೆಯನ್ನು ಮಾಡಿದರು! ಪ್ರಭಾಸತೀರ್ಥದಲ್ಲಿ ಕಣ್ವರನ್ನು ಕಂಡಾವಾಗ್ಗ ಇವರಿಗೊಂದು ವಿನೋದ ಮೂಡಿದ್ದು, ಛೇ ನಾಚಿಕೆ! ಅದರಲ್ಲಿಯೂ ನನ್ನ ಮಗನಾದಂತಹ ಸಾಂಬ ಇದಕ್ಕೆ ಒತ್ತು ಕೊಟ್ಟು, ತಾನು ಸ್ತ್ರೀ ವೇಷವನ್ನು ಧರಿಸಿ, ಗರ್ಭಿಣಿ ಅಂತ ನಟಿಸಿ ಯಾದವರಿಂದೊಡಗೂಡಿ ಕಣ್ವರ ಮುಂದೆ ನಿತ್ತಾವಾಗ್ಗ, ಯಾದವರ ಪ್ರಶ್ನೆ - "ನಮ್ಮ ಕುಟುಂಬದಲ್ಲಿ ವೊಂದೇ ಹುಡುಗಿ, ಬಸುರಿಯಾಗಿದ್ದಾಳೆ; ಯಾವ ಸಂತಾನವನ್ನು ಹೆರ್ತಾಳೆ?" ಉಂಟೆ? ಕಣ್ವರಲ್ಲಿ ಈ ಪ್ರಶ್ನೆ! ಥಕ್ಕ ಅವರು ನೊಂದು, ನೊಂದದ್ದರಿಂದ ಉಂಟಾದಂತಹ ಸಿಟ್ಟಿನಿಂದ, "ನಿಮ್ಮ ವಂಶನಿರ್ಮೂಲಕ್ಕಿದ್ದಂತಹ ಮುಸಲವನ್ನೇ ಹೆರಾಳಿವು". – ನನ್ನನ್ನು ಛೇಡಿಸಿದರೇ, ನನ್ನನ್ನು ವಿನೋದಿಸಿದರೇ! ಅಂತ ಶಾಪ ಕೊಟ್ರು, ನಾಚಿಕೊಂಡು, ಕಣ್ಣೀರಿಳಿಸಿಕೊಂಡು ಬಂದು ನನ್ನಲ್ಲಿ ಸತ್ಯವನ್ನು ಆಮೇಲೆ ಹೇಳಿದರು. ಯೇನು ನಿವೃತ್ತಿ? ಸರಿ ಮುಸಲ ಹೆತ್ತದ್ದು ಹೆತ್ತದ್ದೇ. ಸಾಗರದಲ್ಲಿ ಹೋಗಿ ಇದನ್ನು ಚೆನ್ನಾಗಿ ತೇದು, ತೇದು, ತೇದು, ತೇದು, ಸಮುದ್ರದ ನೀರಿನಲ್ಲಿ ಸೇರಿಸಿಬಿಡಿ ಅಂತ ಹೇಳಿದೆ. ಹಾಗೆ ಹೋಗಿದ್ದಾರೆ ಸಮುದ್ರದ ಬದಿಗೆ, ರುಕ್ಕಿಣಿ ಬಂದು ಕೇಳಿದಾಗ ರುಕ್ಕಿಣಿಯನ್ನು ಸಾಂತ್ವನಗೊಳಿಸಿದೆ. ರುಕ್ಕಿಣೀ, 'ಕಾಲಾಯ ತಸ್ಮೈ ನಮಃ', ದೇವಾಂಶನೇ ಆಗಿಲ್ಲ, ದೇವನೇ ಆಗಿರಿ ಎಣಿಸಿದ್ದೆಲ್ಲ ಈ ಪ್ರಪಂಚದಲ್ಲಾಗೋದಿಲ್ಲ. ಯಾವಾಗೂ ಪ್ರಕೃತಿಗೂ ಪುರುಷನಿಗೂ, ಪುರುಷನಿಗೂ ಪುರುಷೋತ್ತಮನಿಗೂ, ಸ್ಪರ್ಧೆ ನಡೆದೇ ತೀರ್ತದೆ - ಇದು ಪ್ರಪಂಚದ ನಿಯಮ. ಆದ್ದರಿಂದ ಇಲ್ಲಿ ಕಾಲ ತಲೆಯೆತ್ತಿ ನಿತ್ತಿತು, ಕಲಿಯುಗ ಬಂದು ಕೆಲವಾರು ವರುಷವಾಯಿತು. ಕಲಿ ನನ್ನನ್ನು ಕಂಡು ಪ್ರಾರ್ಥಿಸ್ತಾನೆ - "ನನ್ನ ನಿಜವಾದ ನಿಲುಮೆಯನ್ನು ಯಾವಾಗ ಪ್ರತಿಷ್ಠಾಪಿಸಲಿ ಕೃಷ್ಣಾ? ನೀನಿರೋದ್ರಿಂದ ಕಷ್ಟವಾಗ್ಯದೆ" ಅಂತ. ಅವನನ್ನು ಸಾಂತ್ವನಗೊಳಿಸಿದೆ, ಇನ್ನೂ ಬಹಳ ದಿನ ಇಲ್ಲ ಅಂತ. ರುಕ್ಮಿಣಿಗೆ ಹೇಳಿದೆ - ನೀವೆಲ್ಲ ಆಚಮನಾದಿಗಳನ್ನು ಮಾಡಿಕೊಂಡು ಗುರುವಿನಿಂದ ಉಪದಿಷ್ಟವಾದಂತಹ ಮಂತ್ರವನ್ನು ಪಠಿಸುತ್ತಾ, ನಿಮ್ಮ ನಿಮ್ಮ ದೇಹವನ್ನು ಯೋಗಾಗ್ನಿಯಲ್ಲಿ ಆಹುತಿ ಮಾಡಿ ನಿಮ್ಮ ನಿಮ್ಮ ಮೂಲಸ್ವರೂಪವನ್ನೆ ಪಡೆಯಿರಿ ಅಂತ ಸಾಂತ್ವನಗೊಳಿಸಿ ಈಚೆ ಬಂದಾವಾಗ ನಮ್ಮಣ್ಣ ಬಲಭದ್ರಸ್ವಾಮಿ, ಸಮುದ್ರದ ಬದಿಯಲ್ಲೇ ಹೀಗೆ ತಿತಾ ತಿತಾ ಇದ್ದಂತೆ, ಅವನಿಗೆ ಯೇನು ತೋರಿತು, ಸಮುದ್ರಕ್ಕೆ ಇಳಿಯೋಣ ಅಂತ ಹಾಗೆ ಇಳಿದನಂತೆ. ಇಳದನ್ನು ಆಮೇಲೆ ಗೋಚರಿಸಿಲಿಲ್ಲವಂತೆ. ಬಹುಶಃ ನಮ್ಮಣ್ಣನ ನೆನಪು ಮಾತ್ರ ಶೇಷವಾಗಿ ಉಳಿಯಿತೇ ಹೊರತು, ಬಲರಾಮಣ್ಣನ ಜೀವನ, ಅದು ಶೇಷಾವತಾರಿಯಾದವನ ಮೂಲ ಸ್ವರೂಪದಲ್ಲೇ ಸೇರಿ ಹೋಯಿತು ಅಂತ ನಾನು ನನ್ನಷ್ಟಕ್ಕೆ ಎಣಿಸಿ, ತೃಪ್ತಿಯನ್ನು ತಂದುಕೊಂಡೆ. ಆದರೆ ಶೃಂಗಾರದ ಬಂಗಾರದ ವೈಭವದ ಯೆರಡನೇ ವೈಕುಂಠವಾಗಿದ್ದಂತಹ ದ್ವಾರವತಿಯನ್ನು ನೋಡ್ತಾ ಇದ್ದೆ ನಿರ್ಜನವಾದ

ಬೀದಿ! ಎಲ್ಲಿಯೂ ಶಬ್ದವಿಲ್ಲ. ಅಯ್ಯೋ ನಾಡು ಕಾಡಾಗಿ ಹೋಯಿತು!! ಯೆಷ್ಟೆಂದರೂ ನನ್ನ ಮೈ ನನ್ನ ಮನ ಈ ಪ್ರಕೃತಿಗೆ ಸಂಬಂಧಿಸಿಯೇ ಉಳಿದು, ಬೆಳೆದು ಬಂದದ್ದರಿಂದ ಇದೊಂದು ಥರದ ನೋವನ್ನೇ ನನ್ನ ಅಂತಃಕರಣಕ್ಕೆ ಉಂಟು ಮಾಡ್ತಾ ಉಂಟು. ಅಂತಃಕರಣವೂ ಪ್ರಕೃತಿಜನ್ಯ ತಾನೆ? ಈಗ ನನ್ನ ಮನಸ್ಸು ಏಕಾಂತವನ್ನು ಬಯಸ್ತಾ ಇದೆ. ಏಕಾಂತವನ್ನು ಬಯಸಬೇಕಿದ್ರೆ ಇಲ್ಲಿ ಬೇಡ, ಸಾಗ್ತೇನೆ ಮುಂದೆ.

ಹಾ, ಹಾ, ಇದೇನು! ನಭೋವಾಣಿ! ಮದ್ಯವನ್ನು ಕುಡಿದು ನೆಲೆ ತಪ್ಪಿ ತಲೆ ಹಾಳಾಗಿ, ತಮ್ಮತಮ್ಮಲ್ಲಿ ಹೊಡೆದು ಸತ್ತರೆ? ಅಯ್ಯೋ ಮುಂದೆ, ಮುಂದೆ? ಗಾಂಧಾರಿಯ ಶಾಪಪ್ರಭಾವದಿಂದ ಸತ್ತರೇ!! ಹ್ಞಾ ಯೇನು ನಾಚಿಕೆ! ಬಹುಶಃ ಪ್ರಪಂಚದ ಇತಿಹಾಸದಲ್ಲಿ ಇದು ಸ್ವರ್ಣರೇಖೆಯೋ ಅಲ್ಲ ಕೃಷ್ಣರೇಖೆಯೋ ನನಗರ್ಥವಾಗೋದಿಲ್ಲ. ಯಾರು ತನ್ನತನವನ್ನು ಇಡೀರಾಷ್ಟ್ರಕ್ಕೆ, ಪ್ರಪಂಚಕ್ಕೆ ಅರ್ಪಣೆ ಮಾಡಿ ನಿಸ್ವಾರ್ಥದಿಂದ ಇದನ್ನು ಸೇವಾಧರ್ಮ ಅಂತ ತಿಳಿದು ಜೀವನವನ್ನು ಸವೆಯಿಸಿದರೋ ಅಂತಹ ಮಹಾಪುಷರಿಗೆಲ್ಲ ಕೊನೆಗಳಿಗೆಯಲ್ಲಿ ವೊಂದಲ್ಲವೊಂದುತರವಾದಂತಹ ದುರಂತವೇ ಬಾಧಿಸ್ತದಲ್ಲ! ದೇವವ್ರತನಾದ ಭೀಷ್ಮನ ಕಥೆ ಈಗ ಮತ್ತೊಮ್ಮೆ ನನಗೆ ನೆನಪಿಗೆ ಬರದೆ. ಎಂತಹ ಭವ್ಯವೂ ದಿವ್ಯವೂ ಆದಂತಹ ಬದುಕು ಬಾಳಿದ ಆ ಮುದುಕ ಯಾವ ಪ್ರಾಮಾಣಿಕತೆಯಿಂದ ಈ ಸಂಸಾರವನ್ನು ಬೆಳೆಸ್ಬೇಬೇಕು ಅಂತ ತನ್ನನ್ನು ತಾನೇ ಸವೆಯಿಸಿಕೊಂಡ! ಕೊನೆಗೆ ಅವನಿಗೆ ಅವನ ಕುಟುಂಬದವರೇ ಮಾಡಿದ್ದು ಶರತಲ್ಪ! ಶರತಲ್ಪದಲ್ಲಿ ಪವಡಿಸಿ, ಈ ಕಡೆಗೆ ಬದಕೂ ಬೇಡವಾಗಿ, ಆ ಕಡೆಗೆ ಸಾಕ್ಕೆ ಉಪಾಯವಿಲ್ಲವಾಗಿ ಮತ್ತೆ ತಿಂಗಳು ಒಂದು ನವೆದ. ಅಲ್ಲಿಯೂ ನಾನು ಸಾಕ್ಷಿಯಾಗಿದ್ದೆ. ಬಹುಶಃ ಗತಕಾಲದಲ್ಲಿ ಇನ್ನು ಇಂತಹ ಮಹಾಪುರುಷರ ಜೀವನ, ಕೊನೆಗಳಿಗೆಯಲ್ಲಿ ಇಂತಹ ದುರಂತವಾದುದಕ್ಕೆ ಉಲ್ಲೇಖಗಳು ಸಿಗಬಹುದೋ ಯೇನೋ! ನನಗೂ ಅದೇ ತೋರಾ ಇದೆಯಲ್ಲ. ಯಾಕಾಗಿ ಬದುಕಿದೆ, ಯಾಕಾಗಿ ದುಡಿದೆ, ಕೊನೆಗಳಿಗೆಯಲ್ಲಿ ಏಕಾಂತವನ್ನು ಬಯಸಿ ಶಾಂತಿಯ ಅನುಸಂಧಾನವನ್ನಾದರು ಮಾಡೋಣ ಅಂತ ನಾನು ಮುಂದೆ ಮುಂದೆ ಹೋಗ್ತಾ ಇದ್ದಾವಾಗ, ಕೇಳಿದ್ದೇನೆ.... ನನ್ನವರು ಕೊನೆಗೆ ಸುರೆ ಕುಡಿದು, ಆಹಾ! ಹೆಂಡ ಕುಡಿದು! ತಲೆ ಕೆಟ್ಟು ಯೇನ್ ಮಾಡೇನೆ ಅಂತ ತಿಳಿಯದೇ, ಹುಚ್ಚರಂತೆ, ಬಹುಶಃ ಮುಸಲದ ಅವಶೇಷವಾಗಿ ನೀರಿನಲ್ಲಿ ಕೆಸರಾಗಿ ಪರಿಣವಿಸಿದ್ದು ಮುಳ್ಳಿನ ಗಿಡವಾಗಿ ಹುಟ್ಟಿ ಅದೇ ಅಯುಧವಾಗಿ ಇವರನ್ನು ಕೊಲೆ ಮಾಡಿಸಿತೋ ಯೇನೋ!

ಹೌದು.... ಕಣ್ವರ ನುಡಿ ಸತ್ಯವಾಯಿತು ಸತ್ಯವಾಯಿತು! ಕೊನೇಗಳಿಗೆಯಲ್ಲಿ ಇದನ್ನು ಕಂಡೆ. ಜೀವನದುದ್ದಕ್ಕೂ ಧರ್ಮಸ್ಥಾಪನೆಗೆ ಬೇಕಾಗಿ ದುಡಿದಿದ್ದೇನೆ ಅಂತ ಹೆಮ್ಮೆಗೊಂಡೆ. ಜೀವನ ಸಾರ್ಥಕವಾಯಿತು ಅಂತ ತೃಪ್ತಿಗೊಂಡೆ. ಆದ್ರೆ ಈ ಕೊನೆಯ ನಿಮಿಷದಲ್ಲಿ ಛೇ, ಈ ಅವಾಚ್ಯವೂ ಈ ಅಪಶಕುನವೂ ಆದಂತಹ ಮಾತನ್ನು ಕೇಳಿದೆನಲ್ಲ! ಯೇನು ಮಾಡಲಿ ಅದೋ ಮುಂದೆ ಮಂದೆ ಬಾ ಇದ್ದಾವಾಗ ವಿಶಾಲವಾದಂತಹ ವಟವೃಕ್ಷ! ವಟವೃಕ್ಷ

ನೆರಳನ್ನು ನೀಡ್ತಾ ಇದೆ. ಸೂರ್ಯಾಸ್ತಮಾನವಾಗ್ಯದೆ, ಹುಣ್ಣಿಮೆಯ ಚಂದ್ರೋದಯವಾಗಿದೆ! ಹಾ ಹ್ಹಾ ಕಾರ್ತೀಕಶುದ್ಧಪೂರ್ಣಿಮೆ ಇಂದು ಪೂರ್ಣಿಮೆಯ ದಿವಸದಲ್ಲಿ ಪೂರ್ಣಚಂದ್ರ ಪ್ರಕಾಶಿಸ್ತಾ ಇದ್ದಾನೆ. ಪೂರ್ಣಚಂದ್ರ ಇದು ಸಂತೋಷ, ಯದುಕುಲ ಚಂದ್ರನಾಗಿ ಪೂರ್ಣ ಪ್ರಕಾಶದಿಂದ ಪ್ರಕಾಶಿಸಿದೆ ಕೃಷ್ಣ ನೀನು; ಚಂದ್ರ ನನಗೆ ಸಂದೇಶವನ್ನು ಕೊಡ್ತಾ ಇದ್ದಾನೆ. ಪೂರ್ಣಚಂದ್ರ ಅಂತ ಹೇಳಿದರೇನು, ನಾಳೆಯಿಂದ ಕ್ಷಯ ಚಂದ್ರ ತಾನೇ! ಹೌದು ಹೌದು ಬಾಲಚಂದ್ರನ ಉದಯ ಆಸ್ಬೇಕಿದ್ರೆ ಇನ್ನೂ ಕಾಲ ಕೆಲವು ಹೋಗೋಕು. ನಾಳೆಯಿಂದ ಕ್ಷೀಣಚಂದ್ರನೇ! ಯದುವಂಶದ ಚಂದ್ರನಿಗೂ ಕ್ಷೀಣವೇ, ಕ್ಷೀಣವೇ! ಮೈಗೂ ಕ್ಷೀಣ ಮನಸ್ಸಿಗೂ ಕ್ಷೀಣ. ಸ್ವಲ್ಪ ವೊರಗುತ್ತೇನೆ ಈ ಮರದ ಬುಡದಲ್ಲಿ ಹ್ಹಾ ಹಾ ಹಾ

*(ಬೇಡನೊಬ್ಬ ಬಾಣ ಎಸೆಯುತ್ತಾನೆ ಮಲಗಿದ ಕೃಷ್ಣನ ಹೆಬ್ಬೆರಳಿಗೆ*

*ತಾಗುತ್ತದೆ ಹತ್ತಿರ ಬಂದ ಅವನನ್ನು ಕಂಡು)*

| *ಭಾಮಿನಿ // ಎಂದು ಹಲವಂದದಲ್ಲಿ ಹಲುಬುವ / ಮಂದಮತಿ ಶಬರನನು ಕಾಣುತ*

*ಮಂದರೋದ್ಧಾರಕನು ನುಡಿದನು ಬೆದರದಿರು ನಿನಗೆ*

ಮುಂದೆ ಪಾಪವು ಸೇರದಲ್ಲದೆ | ನಿಂದೆ ಹೊದ್ದದು ಬೆದರಿದಿರು ನಡೆ |

ಎಂದು ಕಳುಹುತ್ತವನ ತರು ಮೂಲದೊಳು ಮಲಗಿರ್ದ || ೧೮೮ |

ಅಯ್ಯಾ, ವ್ಯಾಧನೆ, ಪ್ರಮಾದವಾಗಲಿಲ್ಲ. ಅಥವಾ ಪ್ರಮಾದವೆಂಬುದು ಒಂದು ಅಪರಾಧವೂ ಅಲ್ಲ. ಪ್ರಮಾದವಾಯಿತು ಅಂತ ತಿಳ್ಕೊಂಡು ಅದರ ಬಗ್ಗೆ ಪಶ್ಚಾತ್ತಾಪವನ್ನು ಪಡುವಂತಹ ವ್ಯಕ್ತಿಯನ್ನು ಪಾಪಿ ಅಂತ ಗುರುತಿಸಲಿಕ್ಕೆ ನಮ್ಮ ಶಾಸ್ತ್ರವೂ ವೊಪ್ಪುವುದಿಲ್ಲ. ನನ್ನ ಹೃದಯವೂ ವೊಪ್ಪುವುದಿಲ್ಲ. ಆಗಬೇಕಾಯಿತು ಆಯಿತು. ಆಗಬೇಕಾದುದನ್ನು ತಪ್ಪಿಸುವುದಕ್ಕೆ ಯಾರಿಗೂ ಅಧಿಕಾರವೂ ಇಲ್ಲ ಶಕ್ತಿಯೂ ಇಲ್ಲ. ಆದ ಕಾರಣ ಹೆದರಬೇಡ ಪಾಪಶಂಕೆಯೂ ಬೇಡ ನಿನಗೆ. ಯಾಕೆ ಅಂತಂದ್ರೆ ನನ್ನ ಬಗ್ಗೆ ನಿನಗೆ ಗೌರವ ಇದೆ. ಸ್ವಪ್ನದಲ್ಲಿಯಾದರೂ ವಿರೋಧಿಸುವುದಕ್ಕೆ ಇಲ್ಲಿ ಯೆಡೆಯೇ ಇಲ್ಲ, ನನ್ನ ಜೀವನದ ಉದ್ದಕ್ಕೂ ಶ್ರೇಷ್ಠ, ಮಧ್ಯಮ ಕನಿಷ್ಠ ಅಂತ ವಿಭಾಗೀಯವಾದಂತಹ ಮನೋವೃತ್ತಿಯನ್ನು ನಾನು ಪ್ರಕಟಿಸಿದವನೇ ಅಲ್ಲ. ಬೇಡರು ನನಗೆ ಬೇಡವಾಗಿಲ್ಲ; ಬಾಹ್ಮಣರು ಮಾತ್ರ ಬೇಕಾಗಿಯೂ ಇಲ್ಲ. ಸರ್ವಜನರ ಹಿತಕ್ಕೋಸ್ಕರವಾಗಿ ನನ್ನ ಜೀವನವನ್ನು ನಾನು ಮುಡಿಪಾಗಿ ಇರಿಸಿದವನು ಅಂತ ನೀನು ಬಲ್ಲೆ. ಆದ್ದರಿಂದ ನಿನಗೆ ಪಾಪ ಬರುವುದಿಲ್ಲ, ಅಪವಾದವೂ ಸೇರೋದಿಲ್ಲ. ಹೀಗಾಗಬೇಕಾದುದು ನಿಯತಿ, ಇದು ನಿಯಮ. ಬಹುಶಃ ಹಿಂದಿನ ಜನ್ಮದಲ್ಲಿ ನಾನು ಯಾರನ್ನಾದರು ವಿಚಾರಿಸದೇ ಬರೇ ಮೃಗೀಯ ದೃಷ್ಟಿಯನ್ನು ತಂದು ಕೊಂಡು ಬೇಟೆಯಾಡುವಂತೆ ಬಾಣವನ್ನುಯೆಸೆದು ಮೋಸದಲ್ಲಿ ಕೊಂದಿದ್ದೇನೊ ಯೇನೋ. ಆದ್ದರಿಂದಲೇ ಈ ಜನ್ಮದಲ್ಲಿ ಅದರ ಪರಿಮಾರ್ಜನೆ ಆಯಿತು ಎಂಬ ತೃಪ್ತ

ನಾನು, ಹೋಗು ಹೋಗು, ನನ್ನಷ್ಟಕ್ಕೆ ನನ್ನಲ್ಲಿ ಮಲಗುವದಕ್ಕೆ ಬಿಡು. ಹಾ ಅಬ್ಬ! ದಾರುಕ ದಾರುಕ ಹ್ಹೂ ದಾರುಕ,

*ವಾರ್ಧಕ ಇನ್ನದನು ಪೇಳಿ ಫಲವಿಲ್ಲ ನೀಗಜಪುರದೊ | ಳೆನ್ನ ವಿಷಯವ ಧರ್ಮಜಂಗರುಹಿ*

ವಾಸವನ | ಸನ್ನುತ ಕುಮಾರಕನ ಇಂತೆನ್ನ ಬಳಿಗೆ ಬರಂತೆಸಗು ಬೇಗದಿ || ೧೮೯ ||

ದಾರುಕ, ಅಹುದು ದಾರುಕ, ಕೇಳುವ ಕುತೂಹಲ ನಿನಗಿದೆ. ಇನ್ನು ಹೇಳಿ ಕೇಳಿ ಉಪಯೋಗವೇನೂ ಇಲ್ಲ. ಮುಂದಾಗಬೇಕಾದುದೇನು? ಇದನ್ನು ಚಿಂತಿಸಬೇಕಾದದ್ದೇ ಇಲ್ಲಿ ಕರ್ತವ್ಯ ಅಂತ ನಾನೆಣಿಸ್ತೇನೆ. ದಾರುಕ, ಜೀವನವಿಡೀ ದುಡಿದೆ. ನಾನು ಯೆಲ್ಲೆಲ್ಲಿ ಯೆಲ್ಲೆಲ್ಲಿ ಪಾದವನ್ನಿರಿಸಿದ್ದೇನೆ ಅಲ್ಲಲ್ಲಿದ್ದಂತಹ ಅನ್ಯಾಯವನ್ನು ಧೈರ್ಯವಾಗಿ ಖಂಡಿಸಿದ್ದೇನೆ; ಖಂಡಿಸಿದ್ದು ಮಾತ್ರವಲ್ಲ ಧೈರ್ಯವಾಗಿ ನ್ಯಾಯವನ್ನು ಮಂಡಿಸಿದ್ದೇನೆ. ಜೀವನದುದ್ದಕ್ಕೂ ನಾನು ದುಡಿದದ್ದು ಸಾರ್ಥಕವಾಯಿತ್ತು ಅಂತ ತೃಪ್ತಿಯ ಉಸಿರನ್ನೂ ಬಿಟ್ಟಿದ್ದೇನೆ. ಆದ್ ಯೆನ್ ಮಾಡೋಣ? ಅಗಬೇಕಾದದ್ದು ಆಗುವಂತೆ ಸಾಗ್ತದೆ. ಕಾಲ ಯಾರನ್ನೂ ಕ್ಷಮಿಸೋದಿಲ್ಲ, ಕಾಲ ಯಾರನ್ನೂ ರಕ್ಷಿಸೋದಿಲ್ಲ ನಿಷ್ಪಕ್ಷಪಾತಿಯಾಗಿದೆ. ನೀನು ವೊಂದು ಉಪಕಾರ ಮಾಡು. ಬಂದದ್ದು ಪೊಳೆದಾಯ್ತು ಈಗಿಂದೀಗ ಹಸ್ತಿನಾವತಿಗೆ ಸಾಗಿ ಇಲ್ಲಿ ನನಗಾದಂತಹ ಈ ಅವಸ್ಥೆಯನ್ನು ಯುಧಿಷ್ಠಿರನಿಗೆ ತಿಳಿಸು. ಆದಷ್ಟು ಬೇಗ ಆ ಅರ್ಜುನ ಆ ಅರ್ಜುನ...... ದಾರುಕ ನಿನ್ನ ಗೊತ್ತು ದೇಹ ಯೆರ್ಡಾದ್ರೂ ಜೀವ ವೊಂದು, ಉಸಿರೊಂದು ಊರಿನಲ್ಲಿ ಕಂಡವರು ನಮಗೆ ದೃಷ್ಟಿಯನ್ನು ಹಾಕಿದ್ರು, ಬಹುಶಃ ಆ ದೃಷ್ಟಿ ದೋಷವಾಗಿ ಪರಿಣಮಿಸಿತೋ ಯೇನೋ! ನರ ನಾರಾಯಣರು ಆರ್ಜುನ ಕೃಷ್ಣ ಕಪ್ಪು ಬಣ್ಣದ, ನರನೂ ನಾರಾಯಣ, ಬಿಳಿ ಬಣ್ಣದ ನಾರಾಯಣನೂ ನರನೇ. ಹೀಗೆ ವಿಶ್ವ ವಿರಾಟ್‌ರೂಪಿಯಾದಂತಹ ಚಿನ್ಮಯ ಮೂರ್ತಿಯ ಶಿರೋಪಾರ್ಶ್ವದಲ್ಲಿದ್ದ ಬಿಳಿ-ಕರಿ ಯೆರೆಡು ಕೂದಲುಗಳನ್ನೇ ಜನ ನೋಡ್ತಾರೋ ನರ ನಾರಾಯಣರಾದಂತಹ ವಾಸುದೇವಕೃಷ್ಣನಲ್ಲಿಯೂ ಅರ್ಜುನನಲ್ಲಿಯೂ ಎಂಬಲ್ಲಿಯ ವರೆಗೆ ಪ್ರಪಂಚದ ಇತಿಹಾಸದಲ್ಲಿ ವರ್ಣನೆ ನಡೆದು ಹೋಗ್ಯದೆ. ನನಗೂ ಅರ್ಜುನನಿಗೂ ಅವಿನಾಭೇದ. ಆದ್ದರಿಂದ ದಾರುಕ, ದಾರುಕ ಶ್ರಮವಾದರೂ ಚಿಂತಿಲ್ಲ. ಎಲ್ಲಾ ಕ್ಷೇತ್ರದಲ್ಲಿಯೂ ನನಗೆ ಸಾರಥಿಯಾಗಿದ್ದವ ನೀನು. ಈಗಲೂ ಕೊನೇಯ ನನ್ನ ಮನೋರಥದ ಸಾರಥಿಯಾಗಪ್ಪ. ಸಾಗು ಸಾಗು ಅರ್ಜುನ ಬೇಗ ಬರುವಂತೆ ಮಾಡು. ಸರಿ. ಇನ್ನೇನೂ ಪ್ರಪಂಚದಲ್ಲಿ ನಾನು ಸಾಧಿಸುವುದಕ್ಕೆ ಉಳೀಲಿಲ್ಲ; ದಾರುಕ ಉಳದದ್ ಅದ್‌ವೊಂದೇ, ಅರ್ಜುನನ್ನೊಮ್ಮೆ ಕಾಣಬೇಕು. ಸಂಸಾರವಂದಿಗನಾಗಿಯೂ ನಾನು ಬಾಳುವೆಯನ್ನು ನಡೆಸಿದ್ದೇನೆ ನಿನ್ ಗೊತ್ತು. ಅಷ್ಟಮಾಂಗನೆಯರು, ನನ್ನ ಅರ್ಧ ಶರೀರೆಯರು! ಆಮೇಲೆ ಷೋಡಶಸಹಸ್ರ ನನ್ನ ಪ್ರೀಯತಮೆಯರು, ಅವರಲ್ಲಿಯೂ ಪಡೆದ ಸಂತಾನ ಸೌಭಾಗ್ಯವೇನೂ ಕಡಿಮೆಯಾಗಿಲ್ಲ. ಆದ್ರೆ ನಿನ್ ಗೊತ್ತಿಲ್ಲ; ನಾ ಪಡೆದ ಸಂತಾನದ ಹೆಸರನ್ನೆಲ್ಲ ಹೇಳಿಸುವುದಕ್ಕೆ ವೂಬ್ಬ ಸಾಂಬನಾಗಿ ಹೋದ! ಕೊನೆಗೆ ಅವನೂ ಅವನ ಸೋದರರೊಂದಿಗೆ ಅಳಿದ! ನನಗಿರುವ

ಆಸೆ ವೊಂದೆ, ಅರ್ಜುನನ್ನೊಮ್ಮೆ ಕಾಣಬೇಕು ಅರ್ಜುನನ್ನೊಮ್ಮೆ ಅಪ್ಪಿಕೊಳ್ಳಬೇಕು ಅರ್ಜುನನ್ನೊಮ್ಮೆ ನನ್ನಲ್ಲಿ ನಾನು ಆವಾಹಿಸಿಕೊಳ್ಳಬೇಕು. ಹೋಗು.

(ದಾರುಕನ ಮಾತಿನಂತೆ ಅರ್ಜುನ ಕೃಷ್ಣನನ್ನು ಹುಡುಕಿ ಬಂದ.

ದಾರಿಯಲ್ಲಿ ನಾರದರು ಹೇಳಿದರು - "ಕೃಷ್ಣನನ್ನು ಮುಟ್ಟಬೇಡ".

ಸಂದಿಗ್ಧಕ್ಕೆ ಒಳಗಾದ ಅರ್ಜುನ ಬಂದು ಕೃಷ್ಣನನ್ನು ಕಂಡ)

ಹ್ಞ ..... ನೀನು? ಅರ್ಜುನ, ಪಾರ್ಥ..... ಬಂದೆಯಾ?

ಅಷ್ಟತಾಳ॥ ಬಂದೆಯಾ ಪಾರ್ಥ ಕೇಳ್ | ಆನಂದವಾದುದು | ಬಂದೊಮ್ಮೆ ಮೈ ಮುಟ್ಟಿ ತಡವು

ಹಿಂದಿನ ಮೈತ್ರಿಯ | ಬಂಧನ ಕಳಚದೆ ಬಂಧುವೆ ಮಗುದೊಮ್ಮೆ ಅಪ್ಪು || ೧೯೦ ||

ತೃಪ್ತಿಯಾಯ್ತಪ್ಪ ಬಂದೆಯಲ್ಲಾ ನೀನು. ಕೊನೆಗೂ ಬಂದೆಯಲ್ಲಾ ಅರ್ಜುನ ಸಂತೋಷವಾಯ್ತು. ಅರ್ಜುನ, ಈ ಪ್ರಪಂಚದಲ್ಲಿ ಧೀರ್ಘಕಾಲದ ಜೀವನವನ್ನು ಸವೆಯಿಸಿದವ ನಾನು. ದೇಹಿ ಎಂದು ಬೇಡಿದವನಲ್ಲ. ಆದರೆ ನಾನು ದೇಹಿ ಎಂಬುದನ್ನು ಮರೆತವನೂ ಅಲ್ಲ ನಿನ್ಗ್ ಗೊತ್ತಲ್ಲ? ಬಾಲ್ಯ, ಕೌಮಾರ, ಯೌವನ ವಾರ್ಧಕ್ಯ ಈ ಅವಸ್ಥೆಗಳನ್ನು ನಾನು ದೇಹದಿಂದ ಅನುಭವಿಸಿದವನು ಪ್ರಕಟಪಡಿಸಿದವನು. ನೀನೂ ಅಷ್ಟೇ. ನಾನು ಹುಟ್ಟಿ ಯೆಂಟು ದಿನವಾಗಬೇಕಾಗಿದೆ ನೀನು ಭೂಜಾತನಾದವ, ನಿನಗೂ ಈಗ ದೇಹಕ್ಕೆ ವಾರ್ಧಕ್ಯ ಬಂದಿದೆ. ಇದನ್ನು ನಾನು ಕಾಣುತ್ತಾ ಇದ್ದೇನೆ. ತಾಯಿ ತಂದೆಯರ ಸಂಪರ್ಕದಿಂದ ಹುಟ್ಟಿದ ಯಾವ ದಿವ್ಯ ವ್ಯಕ್ತಿಯೇ ಆಗಿಲ್ಲ ಯಾವ ದಿವ್ಯ ಶಕ್ತಿಯೇ ಆಗಿಲ್ಲ ಅದು ಆಧರಿಸಿದಂತಹ ಉಪಾಧಿಯನ್ನು ಮರೆತಿರುವುದಕ್ಕೆ ಸಾಧ್ಯವಿಲ್ಲ. ಅರ್ಜುನಾ ಇದನ್ನು ನಿನಗೆ ಧಾರಾಳವಾಗಿ ಅರ್ಥವಾಗುವಂತೆ ಉಪದೇಶಿಸಿದವನು ನಾನು. ಅದನ್ನು ಜೀರ್ಣಿಸಿಯೂ ಕೊಂಡಿದ್ದಿ, ಆದ್ರೆ ಅರ್ಜುನಾ, ವ್ಯವಹಾರ ಅಂತ್ ವೊಂದಿದೆ; ಪಾರಮಾರ್ಥಿಕ ಸತ್ಯಕ್ಕೆ ವ್ಯಾವಹಾರಿಕವಾದಂತಹ ಸತ್ಯವೇ ಆವರಣ. ಯಾಕ್ ಇದನ್ ಹೇಳ್ತೇನೆ ಗೊತ್ತೋ? ಹ ಹ ಅರ್ಜುನಾ ಮೈ ಉರಿಯ ಹತ್ತಿದೆ ನನ್ನ ಮನಸ್ಸು ಉರೀಲಿಲ್ಲ. ಆದರೆ ಮನಸ್ಸಿನಲ್ಲಿ ತೃಪ್ತಿಯಿದ್ದರೂ, ದೇಹ ಭೌತಿಕವಾದ ಸ್ವಭಾವವನ್ನು ಮೀರಿ ಉರಿದಿಲ್ಲ. ನೋಡು, ಬಾಣದ ಆಘಾತವಾಯ್ತು, ಇದೋ ಬೆರಳೆಡೆಯಿಂದ ರಕ್ತವು ಸುರಿಯುತ್ತಾ ಇದೆ. ಹೌದು ಕುಸಿದು ಬಿದ್ದೆ. ಅರ್ಜುನಾ, ಆದರೆ ಮನಸ್ಸು ನಿನ್ನ ಕಡೆಗೆ ಸೆಳೆಯಲ್ಪಟ್ಟಿತು. ಬಾ ಬಾ ಅರ್ಜುನಾ ವೊಮ್ಮೆ.... ಕ್ಷತ್ರಿಯರ ಕೂಟವನ್ನೇ ಅಲುಗಾಡಿಸಿದ "ಪಾರ್ಥ ಏವ ಧನುರ್ಧರಃ" ಎಂಬ ಬಿರುದನ್ನು ಪಡೆದ ನಿನ್ನಾಕಠಿಣವಾದಂತಹ ಬಾಹುದಂಡದಿಂದ ಕೂಡಿದ ಮೃದುವಾದಂತಹ ಯಾವ ಹಸ್ತ ಇದೆಯೋ ಆ ಕೈಯಿಂದ ವೊಮ್ಮೆ ನನ್ನ ಮೈಯ್ಯನ್ನೆಲ್ಲಾ ಸವರಪ್ಪ ಸವರು ಸವರು. ಸಾಲದು ಸಾಲದು ಯೆಂತಹ ಬಂಧುಗಳು ನಾವು! ಬಾವ ಮೈದುನಂದಿರು ಯೆಷ್ಟಿಲ್ಲ

ಪ್ರಪಂಚದಲ್ಲಿ? ಆದರೆ ನಿನಗೂ ನನಗೂ ಅವಿನಾಭಾವ! ಅರ್ಜುನಾ, ವೊಟ್ಟಿಗೆ ಆಡಿದ್ದೇವೆ. ಮೊಟ್ಟಿಗೆ ಕ್ರೀಡಿಸಿದ್ದೇವೆ, ವೊಟ್ಟಿಗೆ ಮಲಗಿದ್ದೇವೆ. ಕೃಷ್ಣನೇನು ಅಂತರಂಗ ಬಹಿರಂಗ ಅರ್ಜುನನ ಮಟ್ಟಿಗೆ ತೆರೆದಿಟ್ಟಿದ್ದಾನೆ, ನೀನೂ ಮುಚ್ಚಿಡ್ ಲಿಲ್ಲ. ಆ ಅವಿನಾಭಾವದ ಆ ಅದ್ವೈತದ ವೊಂದು ಪರಮಾನಂದವಿದೆಯಲ್ಲ? ಇದನ್ನು ಕಾಣಿಸುವುದಕ್ಕಾಗಿ, ಅಂದು ಶ್ರೀರಾಮನು ಸೀತೆಯನ್ನು ಕಂಡ ಬಳಿಕ, ಚೂಡಾಮಣಿಯನ್ನು ವೊಪ್ಪಿಸಿದಾವಾಗ ಯೆನನ್ನೂ ಕೊಡುವುದಕ್ಕೆ ಅಸಾಧ್ಯನಾಗಿದ್ದೇನೆ ಅಂತ ಸಾರ್ವಭೌಮ ರಾಮನು ತೋರಿಸಿಕೊಡ್ತಾನೋ ಎಂಬಂತೆ ತನ್ನನ್ನೇ ತಾನು ಹನುಮಂತನಿಗೆ ಅರ್ಪಿಸಿದನಂತೆ, ಆ ಆಲಿಂಗನದ ಮೂಲಕ. ಅರ್ಜುನಾ, ನಿನ್ನ ಸರ್ವಸ್ವವಲ್ಲವೆ ನಾನು? ನನ್ನ ಜೀವನದ ಉಸಿರಲ್ಲವೇ ನೀನು? ಬಾ...ಬಾ..... ಮತ್ತೊಮ್ಮೆ ನನ್ನನ್ನು ಪ್ರೀತಿಯಿಂದ ಅಪ್ಪಿಕೋ...... ಅಪ್ಪಿಕೋ...

ಯೇನು? ಯೇನಪ್ಪ? ಸಂದಿಗ್ಧವೇ ನಿನಗೆ? ನಿನಗೂ ತಡೆಯೆ!... ನನ್ನ ಅರ್ಜುನನಿಗೂ ತಡೆಯೆ! ಯೇನೋ... ನೀನ್ ಯೇನ್ ಹೇಳ್ತಾ ಇದ್ದಿ? ಅರ್ಜುನಾ, ತ್ರಿಕಾಲಜ್ಞಾನಿಯಾದ ನಾರದರ ಮಾತಿನಲ್ಲಿ ನಿನಗೆ ಶ್ರದ್ಧೆ ಹುಟ್ಟಿದರೆ ಅಪಚಾರವೂ ಅಲ್ಲ, ಅಪರಾಧವೂ ಅಲ್ಲ. ಋಷಿಪಣೀತವಾದದ್ದೇ ಸ್ಮೃತಿ. ಆದರೆ ಆದರೆ, ಅರ್ಜುನಾ ಇಲ್ಲಿ ಕೇವಲ ವೈಯಕ್ತಿಕವಾದಂತಹ ಬಂಧ ಸಂಬಂಧ ಇದನ್ನೀಗ ಜಾಗೃತಗೊಳಿಸಿ ನಾನಾಡುತ್ತಿರುವ ಮಾತು. ನಾರದರು ಹೇಳ್ ಹೇಳ್‌ಲಿ.

ಅಷ್ಟತಾಳ॥ ಮುನಿಯ ಮಾತನು ಬಿಡು | ಬಾಯಾರುತಿದೆ ಬೇಗ ! ಇನಿತು ನೀರನು ತಂದು ಕೊಟ್ಟು |

ಮನಕೆ ನೆಮ್ಮದಿಯ ತಾರೊಂದುಪಕಾರವ | ಘನತೆಯಿಂ ನೀನೆಸಗಯ್ಯ || ೧೯೧ |

ಅರ್ಜುನಾ, ಅಹುದು ಜ್ಞಾನಿಯಾದ ನಾರದರು ಮುಂದೆ ನಿನಗೆ ಆಪತ್ತು ಬಂದೀತು ಅಂತ ಎಚ್ಚರಿಸಿದ್ದಿದ್ರೆ ಆ ಆಪತ್ತಿಗೆ ಭಯಪಡಬೇಕಾದದ್ದು ವಿಹಿತವೇ. ಅರ್ಜುನಾ ನಿನ್ನ ಬದುಕಿನಲ್ಲಿ ನಿನಗೆ ನನಗಿಂತ ದೊಡ್ಡದಾದ ವೊಂದು ವಸ್ತು, ಈ ಮೊದಲು ಕಾಣಿಸಿಕ್ಕಿತೇನಪ್ಪಾ? ಅಂದರೆ... ಹೌದಲ್ಲ? ಯೇನೇ ಆಗಲಿ ಅರ್ಜುನಾ ನಿನಗಲ್ಲ ನಿನ್ನವರಿಗೂ ಅಲ್ಲ, ಈ ಜಗತ್ತಿಗೆ ಸರ್ವನಾಶವೇ ಉಂಟಾಗಲಿ, ನಾರದಲ್ಲ ಇಂದ್ರಾದಿ ದೇವತೆಗಳೇ ತಡೆಯೊಡ್ಡಿರ್ಲಿ, ಕೃಷ್ಣನಿಗಿಂತ ಮಿಗಿಲೇನೋ ಅದೆಲ್ಲ? ಅಥವಾ ನಿನ್ನ ಬದುಕಾದರೂ ನಿನಗೆ ಕೃಷ್ಣನ ಬದುಕಿಗಿಂತ ಮಿಗಿಲಾಯಿತೋ ಅರ್ಜುನಾ? ಕೃತಘ್ನನಾಗಬೇಡ, ಆಲೋಚಿಸಿ ನೋಡು ಅರ್ಜುನಾ, ನಿನ್ನ ಮನಸ್ಥೈರ್ಯವನ್ನೋ, ನಿನ್ನ ಹೃದಯವನ್ನೋ ಪರೀಕ್ಷೆಗೆ ಹಚ್ಚುತ್ತೇನೆ ಅಂತ ಅನ್ಯಥಾ ಭಾವಿಸಬೇಡ. ನನ್ನ ಪ್ರೀತಿ! ನನ್ನ ಪ್ರೇಮ! ನಾರದನೇ ಹೇಳಿದ್ದಾನೆ - "ಪರಮಪ್ರೇಮಸ್ವರೂಪ ಭಗವಂತ". ಅಂದ್ರೆ ಯೆಲ್ಲರೂ ಭಗವಂತನನ್ನು ಪ್ರೇಮಿಸ್ತಾರೆ ಅಂತಲ್ಲ ಭಗವಂತನಿಗೊಂದು ಸ್ವರೂಪ ಇದ್ದರೆ ಅದು ಬರೇ ಪ್ರೇಮಸ್ವರೂಪ. ಆಲೋಚಿಸು ಅರ್ಜುನಾ, ನಾನು ಈಜಗತ್ತಿನಲ್ಲಿ ರುಕ್ಮಿಣಿಯನ್ನು ಸತ್ಯಭಾಮೆಯನ್ನು, ಬೇಡ ನನ್ನ ಮಕ್ಕಳನ್ನು, ಪ್ರೇಮಿಸಿದ್ದೆಷ್ಟು; ನಿನ್ನನ್ನು ಪ್ರೀತಿಸಿದ್ದೆಷ್ಟು? ಆಲೋಚಿಸು... ಆಲೋಚಿಸು.

ಉದ್ವೇಗಕ್ಕೋ ಉದ್ರೇಕಕ್ಕೋ ಅಧೀನನಾಗ್ಬೇಡ. ನಾನಂತೂ ಹೇಳ್ತೇನೆ ಅರ್ಜುನಾ ಈ ಪ್ರಪಂಚದಲ್ಲಿ ನಿನಗೆ ನಾನು ಮೊದಲಿಗನು, ಯಾಕೆ? ನಾನೇ ನೀನು ಅಂತ ಹೇಳಿದವ, 'ಪಾಂಡವಾನಾಂ ಧನಂಜಯೋಸ್ಮಿ!' ಹಾಗಾದರೆ ಅರ್ಜುನಾ.... ಅರ್ಜುನಾ ನಾರದನು ಹೇಳಿದ ಅಂತ ಹೇಳಿಕೊಂಡು, ಆಪತ್ತು ಬಂದೀತು ಅಂತ ಭಯಗೊಂಡು, ಈ ಜನ್ಮದಲ್ಲಲ್ಲ, ಮುಂದೊಂದು ದಿವ್ಯವಾದಂತಹ ಜನ್ಮ ಇದ್ರೂ ಕೃಷ್ಣನನ್ನು ಮುಟ್ಟಬೇಡ ಅಂತ ಹೇಳಿದ್ರೆ ಕೇಳುವಂತಹ ವೊಂದು ಕೀಳರಿಮೆ ನನ್ನ ಅರ್ಜುನನಿಗೆ ಬಂತೇನೋ?

ನಾನು ನಿನಗೆ ಅಸ್ಪೃಶ್ಯನೇನೋ? ಮೊದಲೇ ನಿನ್ನ ಮನಸ್ಸು, ದೇಹ ನನ್ನನ್ನು ಮುಟ್ಟಲಿಲ್ವೋ? ಇಕೋ.... ವೊಂದು ಮಾತ್ ಹೇಳ್ತೇನೆ. ನಿನ್ನಜ್ಜ ಭೀಷ್ಮರು ಶರತಲ್ಪದಲ್ಲಿ ಪವಡಿಸಿದರು. "ಹಾ ಬಾಯಾರ್ತದೆ" ಅಂತ ಹೇಳಿದರು. ಬಾಯಾರ್ತದೆ ಅಂತ ಹೇಳಿದುದರ ಅರ್ಥ ಯೇನು? ಬೇರೆ ಯಾರೂ ಮಾಡಿಕೊಳ್ಳಲ್ಲ ನೀನರ್ಥೈಸಿಕೊಂಡೆ. ಮತ್ತೊಮ್ಮೆ ನನ್ನ ತಾಯಿಯ ಎದೆಹಾಲು ಕುಡೀಬೇಕು ಎಂಬುದರ ಧ್ವನಿ ಅದು. ಆದ್ದರಿಂದ ನೀನು ಸುರಗಂಗೆಯನ್ನು ಪಾತಳಗಂಗೆಯನ್ನು ಬಾಣ ಪ್ರಯೋಗದಿಂದ ತರಿಸಿ ಭೀಷ್ಮನ ದಾಹವನ್ನಡಗಿಸಿದವನು. ನಿನಗೆ ಆತ ಪಿತೃ ಸದೃಶ; ಆದರೆ ನಿನಗೆ ಆಚಾರ್ಯ ಸದೃಶನಲ್ಲ. ನಿನಗೆ ಯೆಲ್ಲವೂ ನಾನೇ ಮಾತೃ ಪಿತೃ ಆಚಾರ್ಯ! ಹಾಗಿರುವಾಗ ನಾನಿದೋ ಕೊನೇಯ ಗಳಿಗೆಯಲ್ಲಿ ಬಯಸುತ್ತೇನೆ ಯೇನು? ನಿನ್ನ ಕೈಯಿಂದ.... ನಿನ್ನ ಕೈಯಿಂದ ನನಗೆ ಬಾಯಾರ್ತದೆ.

ಅರ್ಜುನಾ ಅರ್ಜುನಾ ನನ್ನ ಮಕ್ಕಳ ಮಲ ಪುರೀಶಾದಿಗಳನ್ನೂ ಈ ಕೈಯಿಂದ ನಾನು ಮುಟ್ಟಿದವನಲ್ಲ ನಿನ್ಗ್ ಗೊತ್ತು ಆದ್ರೆ..... ಆದ್ರೆ ಎಳೆಯವನಾದ ಅಭಿಮನ್ಯುವನ್ನು ನಾನು ಹೇಗೆ ಪೋಷಿಸಿದ್ದೇನೆ ಎಂಬುದು ನಿನ್ಗ್ ಗೊತ್ತು. ಅಭಿಮನ್ಯುವಿನ ಮರಣದಲ್ಲಿ ನಾನೆಷ್ಟು ಸಂಕಟ ಪಟ್ಟಿದ್ದೇನೆ ನನ್ಗ್ ಗೊತ್ತು. ಹಾಗಿರುವಾಗ ನಮ್ಮ ಅರ್ಜುನನ ಮಗ ಅಭಿಮನ್ಯು! ಜೊತೆಗೆ ನಮ್ಮ ಸೌಭದ್ರೆಯ ಮಗನೂ ಹೌದು. ಸ್ವಂತ ಮಕ್ಕಳ ಮಲಪುರೀಶಾದಿಗಳನ್ನು ಮುಟ್ಟದೇ ಇದ್ದಂತಹ ಈ ಕೃಷ್ಣ  ನಿನ್ನ ಮಗುವಾದ ಅಭಿಮನ್ಯುವನ್ನು ಮೀಯಿಸಿದ್ದೇನೆ. ಕೊಳೆ ತೊಳೆದಿದ್ದೇನೆ. ಲಾಲಿಸಿದ್ದೇನೆ, ಪ್ರೀತಿಸಿದ್ದೇನೆ, ಯೇಲ್ಲವನ್ನು ಮರೆಯಬೇಡ ಅರ್ಜುನಾ. ಕೃಷ್ಣಾರ್ಜುನರೆಂದರೆ ಯೇನು? ಪ್ರಪಂಚದಲ್ಲೊಂದು ಮಾತುಂಟು - "ವಿರೋಧಕ್ಕೆ ಕರ್ಣಾರ್ಜುನರು ಮೈತ್ರಿಗೆ ಕೃಷ್ಣಾರ್ಜುನರು" ಎಲ್ಲವನ್ನೂ ನೆನಪಿಸಿಕೊ, ಇದೋ ಇದೋ ನನ್ನ ವೊಡಲಿನ ಉರಿ, ನನ್ನ ಮನಸ್ಸಿಗೆ ದಾಹ! ತೀರಿಸಲಾರೆಯಾ.....ಅರ್ಜುನಾ

*(ಅರ್ಜುನ ನಿರುಪಾಯನಾಗಿ ನೀರು ತರುತ್ತಾನೆ)*

ತಂದೆಯಾ? ತಂದೆಯಾ! ತಂದೆಯಾ!! ಅರ್ಜುನಾ, ಯಶೋದಾ ದೇವಿಯ ಮೊಲೆ ಹಾಲಿನ ಸವಿಯಲ್ಲ. ಇದಕ್ಕೆ ಪರಮ ಭಾಗವತೋತ್ತಮನಾದಂತಹ ವಿದುರನ ಮನೆಯ ಒಕ್ಕುಡಿತೆಯ ಹಾಲಿನ ರುಚಿಯಲ್ಲ, ಇದಕ್ಕೆ ಮೂಲ ಸ್ವರೂಪದಲ್ಲಿ ಕ್ಷೀರ ಸಾಗರದಲ್ಲೇ ಪವಡಿಸಿದ ನನಗೆ, ಅಮೃತದಿಂದ ಸಿಗದೇಯಿದ್ದಂತಹ ಸುಖ ಸವಿ ಇದರಲ್ಲಿ ಉಂಟು ಅಂತ ಕನಸು ಕಂಡಿದ್ದೇನೆ ನೀಡಪ್ಪ ..... ನೀಡು.... ನೀಡು..... ಹಾ... ಹಾ.... ಶಾಂತಿಯಾಯ್ತು.

ಭಾಮಿನಿ॥ ಮಂದ ಹಾಸವ ಬೀರಿ | ಹರಸು | ತಂದವನ ಶಕ್ತಿಯನು ಸೆಳೆಯುತ |

ಮುಂದೆ ಸಾಗುವೆನೆಂದು ನಿಜ ರೂಪೈಕ್ಯ ಹೊಂದಿದನು || ೧೯೨ ||

ಓ ನನ್ನ ಅರ್ಜುನ, ಮತ್ತೊಮ್ಮೆ ನೋಡಯ್ಯ ಈ ಕೃಷ್ಣನನ್ನು ನೋಡು. ಹಾಂ ಹಾಂ ಕಂಡೆಯಾ? ಹಾಗಾದರೆ ಇದೊ, ಇದು ನನ್ನ ನಿಜವಾದಂತಹ ಸತ್ ಚಿತ್ ಆನಂದರೂಪ. ಸಾಕು ಇಲ್ಲಿಗೆ ಅರ್ಜುನಾ, ಈಗ ಹೇಳು ತೃಪ್ತಿಯಿಂದ ನಾನಿಲ್ಲದ ಈ ಜಗತ್ತನ್ನು ನೀನಾಳುವೆಯಾ? ನಿನಗೆ ಬೇಕೆ? ನಿನ್ನಲ್ಲಿದ್ದ ಶಕ್ತಿ, ನಿನ್ನ ಯುಕ್ತಿ, ಎಲ್ಲವೂ ಯಾರದ್ದು? ಇದು ಕೇಂದ್ರ ಅದು ವಿಭಾಗ, ನನ್ನ ಕೆಲಸ ಮುಗೀತು ಅರ್ಜುನಾ ಇನ್ನು ಸ್ವಲ್ಪವೇ ಇರೋದು. ಆದ ಕಾರಣ ತೃಪ್ತಿಯಾಯ್ತು ಇದೋ ನಾನು ನನ್ನ ನಿಜ ರೂಪದಲ್ಲಿ ಐಕ್ಯವಾಗೇನೆ. ನಾನು ಮುಂದೆ ಸಾಗೇನೆ. ತಿಳಿತಲ್ಲ? ನಾನು ಮುಂದೆ ಸಾಗ್ತೇನೆ ನೀವು ಹಿಂಬಾಲಿಸಿ ಅದು ನಿನ್ನ ಕರ್ತವ್ಯ. ಆದ್ದರಿಂದ ಶುಭವಾಗಲಿ, ಸುಖವಾಗಲಿ, ಮಂಗಳವಾಗಲಿ, ಇದೋ, ಶಿವೋಹಂ ಶಿವೋಹಂ ಶಿವ ಶಿವೋಹಂ ಓಂ......ಓಂ.......



ಶೇಣಿಸಂಸ್ಮರಣೆ
*ಚಿತ್ರಕೃಪೆ : ಕೆರೆಮನೆ ಶಿವಾನಂದ ಹೆಗಡೆ*

ಶೇಣಿ ಗೋಪಾಲಕೃಷ್ಣ ಭಟ್ಟ..





ಶೇಣಿಯವರು ತಮ್ಮ ಅರ್ಥಗಾರಿಕೆಯ ಮೂಲಕ ಇಲ್ಲಿ ಶೇಣಿಭಾರತವನ್ನು ಪುನಃ ನಿರೂಪಿಸಿದ್ದಾರೆ. ಈ ನಿರೂಪಣೆಯಲ್ಲಿ ಅವರ ವ್ಯಕ್ತಿ ವಿಶಿಷ್ಟ ಮುದ್ರೆ ಎದ್ದು ಕಾಣುತ್ತದೆ. ಆದರೆ ಇದು ಮೌಖಿಕ ಪರಂಪರೆಯದು. ಇವನ್ನೆಲ್ಲ ಅಕ್ಷರ ರೂಪಕ್ಕೆ ತಂದು ಒಂದು ವ್ಯವಸ್ಥೆಯಲ್ಲಿ ಜೋಡಿಸಿದ್ದು ಒಂದು ಸಾಹಸವೇ. ಆ ಕೆಲಸವನ್ನು, ಹೊಣೆಗಾರಿಕೆಯನ್ನು ನಿರ್ವಹಿಸಿದ ಡಾ. ಜಿ.ಎಲ್. ಹೆಗಡೆಯವರು ಅಭಿನಂದನಾರ್ಹರು. ಅವರಿಗೆ ಕೃತಜ್ಞತೆಗಳು.

ಕೆರೆಮನೆ ಶಂಭು ಹೆಗಡೆ

ಮಾಜಿ ಅಧ್ಯಕ್ಷರು



ಸಂಬಂಧಿಸಿದ ಕ್ಷೇತ್ರದ ತಿಳಿವನ್ನು ವಿಸ್ತರಿಸುವ ವಿದ್ವತ್ಪೂರ್ಣ ಹಾಗೂ ಸೃಜನಶೀಲ ಪ್ರತಿಭೆಯ ವಿಲಾಸವನ್ನು ತೋರುವ ಕೃತಿಗಳನ್ನು ಗುರುತಿಸಿ ಪ್ರಕಟಿಸುವುದು ಅಕಾಡೆಮಿಗಳ ಧ್ಯೆಯೋದ್ದೇಶಗಳಲ್ಲಿ ಸೇರಿದೆ. ತದನುಗುಣವಾಗಿ ಯಕ್ಷಗಾನ ಅಕಾಡೆಮಿಯೂ ಕಾರ್ಯಪ್ರವೃತ್ತವಾಗಿದೆ.

ಪ್ರಸ್ತುತ "ಶೇಣಿ ಭಾರತವು 2002ರಲ್ಲಿ ಪ್ರಥಮವಾಗಿ ಮುದ್ರಣಗೊಂಡಿತ್ತು. ಪ್ರತಿಗಳೆಲ್ಲ ಮುಗಿದುಹೋಗಿ ಅನೇಕ ವರ್ಷಗಳು ಕಳೆದು ಹೋಗಿದ್ದರೂ ಕಾರಣಾಂತರಗಳಿಂದ ಪ್ರಕಟಿಸಲು ಸಾಧ್ಯವಾಗಿರಲಿಲ್ಲ. ಈಗ ಅದು ಮರು ಮುದ್ರಣಗೊಳ್ಳುತ್ತಿರುವುದು ಸಂತಸದ ವಿಷಯ.

ಈ ಗ್ರಂಥದ ಮರು ಮುದ್ರಣಕ್ಕೆ ಸಹಕರಿಸಿದ ಡಾ. ಗೋಪಾಲ ಕೃಷ್ಣ ಹೆಗಡೆ ಅವರಿಗೂ ಅಭಿನಂದನೆಗಳು.

ಪ್ರೊ ಎಂ ಎ. ಹೆಗಡೆ

ಅಧ್ಯಕ್ಷರು

ಕರ್ನಾಟಕ ಯಕ್ಷಗಾನ ಅಕಾಡೆಮಿ

ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು